
ಪ್ರಧಾನ ವೆಂಕಪ್ಪಯ್ಯ ವಿರಚಿತ

ಶ್ರೀರಾಮಕಥಾಮೃತ

ವೆಂಕಾಮಾತ್ಯ ರಾಮಾಯಣ

ಆಧುನಿಕ ಗದ್ಯಕಥನ: ಡಾ ಪಿ ವಿ ನಾರಾಯಣ



ಸಂಪುಟ ೧

ವಸಂತ ಪ್ರಕಾಶನ

ಕನ್ನಡದ ಹಿರಿಯ ವಿದ್ವಾಂಸರೂ, ಸಂಶೋಧಕರೂ ಲೇಖಕರೂ ಆಗಿರುವ **ಡಾ. ಪಿ.ವಿ. ನಾರಾಯಣ** ಅವರು ಜನಸಿದ್ದು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಅಕ್ಕಿರಾಂಪುರದಲ್ಲಿ; ಜನನ: 1942ರ ಡಿಸೆಂಬರ್ 18ರಂದು ತಂದೆ: ಪಿ. ವೆಂಕಪ್ಪಯ್ಯ, ತಾಯಿ: ನರಸಮ್ಮ. ಎಂ.ಎ. (ಕನ್ನಡ), ಎಂ.ಎ. (ಇಂಗ್ಲಿಷ್) ಮತ್ತು ಪಿ.ಎಚ್‌ಡಿ. (ಕನ್ನಡ) ಪದವೀಧರರು.

ಅನೇಕ ವಿದ್ಯಾಸಂಸ್ಥೆಗಳಲ್ಲಿ ಅಲ್ಪಕಾಲದ ಸೇವೆ ಸಲ್ಲಿಸಿದ ನಂತರ 1968ರಿಂದ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ, ರೀಡರ್ ಮತ್ತು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಬೆಂಗಳೂರು ವಿಶ್ವವಿದ್ಯಾಲಯದ ಸಂಜೆಯ ತರಗತಿಗಳಲ್ಲಿ, ಶೇಷಾದ್ರಿಪುರಂ ಕಾಲೇಜಿನಲ್ಲಿ ಹಾಗೂ ಎಂ.ಇ.ಎಸ್. ಕಾಲೇಜುಗಳಲ್ಲಿ ಕನ್ನಡ ಎಂ.ಎ. ತರಗತಿಗಳಿಗೆ ಬೋಧನೆ ಮಾಡಿರುವಂತೆಯೇ ಒಂಬತ್ತು ಮಂದಿ ಪಿ.ಎಚ್‌ಡಿ. ವಿದ್ಯಾರ್ಥಿಗಳಿಗೆ ಯಶಶ್ವೀ ಮಾರ್ಗದರ್ಶನ ಮಾಡಿದ್ದಾರೆ. ಅನೇಕ ಸಾಹಿತ್ಯಸಂಬಂಧೀ ವಿಚಾರ ಹಾಗೂ ಗೋಷ್ಠಿಗಳಲ್ಲಿ ವಿಚಾರ ಮಂಡನೆ ಮಾಡಿರುವಂತೆಯೇ ಕೆಲವು ವಿಶ್ವವಿದ್ದಯಾಲಯಗಳಲ್ಲಿ ವಿಶೋಷೋಪನ್ಯಾಸಗಳನ್ನೂ ನೀಡಿದ್ದಾರೆ. ಸಾಹಿತಿಗಳ ಕಲಾವಿದರ ಬಳಗದ ಪ್ರಧಾನ ಸಂಚಾಲಕರಾಗಿ, ಕನ್ನಡ ಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿಗಳಾಗಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರ ಲೇಖನಿಯಿಂದ ಅನೇಕ ಮೌಲಿಕ ಕೃತಿಗಳು ರಚನೆಗೊಂಡಿವೆ. ವಿಮರ್ಶೆ ಮತ್ತು ಸಂಶೋಧನಾ ಪ್ರಕಾರದಲ್ಲಿ ಮೂಡಿಬಂದಿರುವ ಗ್ರಂಥಗಳಲ್ಲಿ ಕೆಲವೆಂದರೆ: **ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡತನ ಮತ್ತು ಭಾರತೀಯತೆ, ವಚನ ಸಮಸ್ತ, ಆದಿಪುರಾಣದ ಗದ್ಯಾನುವಾದ.** ಸಂಪಾದಿತ ಕೃತಿಗಳಲ್ಲಿ ಕೆಲವೆಂದರೆ: **ಬಸವಪುರಾಣ ಸಂಗ್ರಹ, ಕುಮದೇಂದು ರಾಮಾಯಣ, ಶತನಮನ** (ಜಿ.ವಿ. ಅಭಿನಂದನ ಸಂಪುಟ), **ಪಂಪ ಕಾವ್ಯಸಾರ, ಅಲ್ಲಮನ ವಚನಗಳು, ಸಂಕ್ಷಿಪ್ತ ಆದಿಪುರಾಣ ಕೈದೀವಿಗೆ. ಉಳಿಯ ದನಿ ಕಡಲ ಮೊರೆ** ಎಂಬ ಪ್ರವಾಸ ಸಾಹಿತ್ಯ ಕೃತಿಯನ್ನು ರಚಿಸಿದ್ದಾರೆ. ಅನುವಾದ ಕೃತಿಗಳಲ್ಲಿ ಕೆಲವೆಂದರೆ: **ಸಮಾಜದ ಮೇಲೆ ವಿಜ್ಞಾನದ ಪ್ರಭಾವ, ಹನ್ನೆರಡನೇ ರಾತ್ರಿ, ಅರಿಸ್ಟೋಫೆನೀಸ್‌ನ ಎರಡು ನಾಟಕಗಳು, ಅಶ್ವತ್ಥಾಮನ್** (ಹಳಗನ್ನಡದಿಂದ), **ಸಂಸಾರ ಸುಖ** (ಟಾಲ್‌ಸ್ಟಾಯ್ ಅವರ ಮೂರು ನೀಳ್ಗತೆಗಳು), **ಪಾಶ್ಚಾತ್ಯ ತತ್ವಜ್ಞಾನದ ಇತಿಹಾಸ** (ಬರ್ಟ್ರಂಡ್ ರಸೆಲ್). ನಿಘಂಟು ಪ್ರಕಾರದಲ್ಲಿನ ಕೆಲವು ಕೃತಿಗಳು: **ಹಳಗನ್ನಡ ಪದಸಂಪದ, ಚಂಪೂ ನುಡಿಗನ್ನಡಿ, ಪಂಪನ ನುಡಿಗಣಿ, ಪದಚರಿತೆ** (ಕೆಲವು ಪದಗಳ ಮೂಲಚೂಲಗಳ ಹುಡುಕಾಟ), **ಕನ್ನಡ ಚಂಪೂ-ಜೈನ ಪರಿಭಾಷೆ.** ಕಾದಂಬರಿ ಪ್ರಕಾರದಲ್ಲಿನ ಕೆಲವು ಕೃತಿಗಳೆಂದರೆ: **ಅಂತರ, ವಿಕಾಸ, ಶೋಧನೆ, ಪರಿಸ್ಥಿತಿ, ಧರ್ಮಕಾರಣ** (ಇದರ ಮಲಯಾಳಂ ಅನುವಾದ – ಪಯ್ಯನೂರು ಕುನ್ನಿರಾಮನ್). ಇವಲ್ಲದೆ ಅನೇಕ ಪತ್ರಿಕೆಗಳಲ್ಲಿ ಲೇಖನಗಳ ಸಣ್ಣಕತೆಗಳು, ಇಂಗ್ಲಿಷ್‌ನಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಕುರಿತಂತೆ ಬರೆದ ಲೇಖನಗಳು ಪ್ರಕಟಗೊಂಡಿವೆ. ಧರ್ಮಕಾರಣ (2000) ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ವರ್ಷದ ಶ್ರೇಷ್ಠ ಕಾದಂಬರಿಯೆಂದು ಪುರಸ್ಕಾರ ನೀಡಿತು; ಆದರೆ ಸಾಹಿತ್ಯೇತರ ಕಾರಣಕ್ಕಾಗಿ ವಿವಾದವುಂಟಾಯಿತು. ಕರ್ನಾಟಕ ಸರ್ಕಾರ ಈ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಮುಂದಾಗಿ, ಕೆಲವು ಭಾಗಗಳನ್ನು ಕೈಬಿಡಲು ಸೂಚಿಸಿತು. ಆದರೆ ಲೇಖಕರು ಒಪ್ಪಲಿಲ್ಲ. ಕೊನೆಗೆ ಕೋರ್ಟಿನಲ್ಲೂ ವಾದವಿವಾದ ನಡೆದು ಲೇಖಕರು ಒಪ್ಪದ ಕಾರಣ 'ಧರ್ಮಕಾರಣ' ಕೃತಿಗೆ ನಿಷೇಧ ಹೇರಲಾಯಿತು.

ಪ್ರಧಾನ ವೆಂಕಪ್ಪಯ್ಯ

ವಿರಚಿತ

ಶ್ರೀರಾಮಕಥಾಮೃತ

(ವೆಂಕಾಮಾತ್ಯ ರಾಮಾಯಣ)

ಸಂಪುಟ – ೧

ಆಧುನಿಕ ಗದ್ಯಕಥನ

ಡಾ. ಪಿ.ವಿ. ನಾರಾಯಣ

ವಸಂತ ಪ್ರಕಾಶನ

ನಂ. 360, 10ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್,

ಜಯನಗರ, ಬೆಂಗಳೂರು–560 011

Sriramakathamruta (Venkaamaatya Ramayana)-Volume-1(Kannada):
a prose rendering of an epic poem of the same name in middle Kannada by
Pradhana Venkappaiah, rendered into prose form by Dr. P.V. Narayana;
published by Vasantha Prakashana, No. 360,
10th 'B' Main, 3rd Block, Jayanagar, Bangalore-560 011,
India. Ph.: 080-22443996 / 40917099
email : vasantha_prakashana@yahoo.com
website : www.vasanthaprakashana.com

First edition : 2020

ಪ್ರಥಮ ಮುದ್ರಣ : 2020
ಉಪಯೋಗಿಸಿದ ಕಾಗದ : 70 ಜಿ.ಎಸ್.ಎಂ.ಮ್ಯಾಪ್‌ಲಿಥೊ
ಪುಟಗಳು : 520 ಬೆಲೆ : ರೂ. 380

ಮುಖಪುಟ ವಿನ್ಯಾಸ : ಸೌಮ್ಯ ಕಲ್ಯಾಣಕರ್
ಒಳಪುಟ ವಿನ್ಯಾಸ : ವಸಂತ ಪ್ರಕಾಶನ
ಮುಖಪುಟ ಹಾಗೂ ಒಳಪುಟಗಳ ಚಿತ್ರ ರಚನೆ : ಪುಣ್ಯಕೀರ್ತಿ. ಪಿ.
ಮುದ್ರಣ : ರೀಗಲ್ ಪ್ರಿಂಟ್ ಸರ್ವೀಸ್

ಪ್ರಧಾನ ವೆಂಕಪ್ಪಯ್ಯನ ಸಾಹಿತ್ಯಸಾಧನೆ

ಸಂಸ್ಕೃತದಲ್ಲಿ

ಪ್ರಧಾನ ವೆಂಕಪ್ಪಯನು ವೆಂಕಾಮಾತ್ಯ ಎಂಬ ಹೆಸರಿನಿಂದಲೂ ಪ್ರಖ್ಯಾತನಾದವನು; ಜೊತೆಗೆ ಮಧ್ಗಿರಿ ವೆಂಕಪ್ಪಯ್ಯ ಮತ್ತು ತುಮಕೂರು ವೆಂಕಪ್ಪಯ್ಯ ಎಂದೂ ವೆಂಕಭೂಪತಿ ಎಂದೂ ಹೆಸರಾಗಿದ್ದಾನೆ. ಈತನು ಕ್ರಿಸ್ತಶಕ ಹದಿನೆಂಟನೆಯ ಶತಮಾನದ ಮೈಸೂರು ಇತಿಹಾಸದಲ್ಲಿ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ತುಂಬ ಪ್ರಮುಖನಾಗಿದ್ದವನು; ಚಾಣಾಕ್ಷ ಮುತ್ಸದ್ದಿಯೆಂದು ಹೆಸರಾದವನು. ಅಷ್ಟೇ ಅಲ್ಲದೆ ಆ ಕಾಲದ ಅತ್ಯಂತ ಪ್ರತಿಭಾವಂತ ಸಂಸ್ಕೃತ ಲೇಖಕನೆಂದೂ ಕೀರ್ತಿವಂತನಾಗಿದ್ದಾನೆ. ಇತಿಹಾಸ ಸಂಶೋಧಕರ ಪ್ರಕಾರ ಈತನ ಜನನ ಕ್ರಿಶ ೧೭೩೮ ರಲ್ಲಿ ತುಮಕೂರು ಜಿಲ್ಲೆಯ (ಈಗಿನ) ಕೊರಟಗೆರೆ ತಾಲ್ಲೂಕಿನ (ಅಕ್ಕಿ) ರಾಂಪುರದಲ್ಲಿ ಆಯಿತು; ತಂದೆ ಹಂಪಾರ್ಯನಾದರೆ, ತಾಯಿ ವಾಮಾಂಬೆಯೆಂದೂ, ತನ್ನದು ಮೌನಿಭಾರ್ಗವಕುಲ (ಗೋತ್ರ) ಎಂದೂ; ತಾನು ಷಡ್ದರ್ಶನಗಳಲ್ಲಿ ಪರಿಣತನೆಂದೂ ಆತನೇ ತನ್ನ **'ಅಲಂಕಾರಮಣಿದರ್ಪಣ'** ಎಂಬ ಅಲಂಕಾರಶಾಸ್ತ್ರದ ಬಗೆಗಿನ ಸಂಸ್ಕೃತ ಕೃತಿಯಲ್ಲಿ ಹೇಳಿಕೊಂಡಿದ್ದಾನೆ. ಆತನು ಬದುಕಿದ್ದುದು ಕೇವಲ ೪೪ ವರ್ಷಗಳು, ಆಂದರೆ ಈತನ ಮರಣ ಸಂಭವಿಸಿದ್ದು ಕ್ರಿಶ ೧೭೮೨ರಲ್ಲಿ.

ಈತನು ಕ್ರಿಶ ಹದಿನೆಂಟನೆಯ ಶತಮಾನದ ಸಂಸ್ಕೃತ ಸಾಹಿತ್ಯದ ಇತಿಹಾಸದಲ್ಲಿ ತುಂಬ ಪ್ರಸಿದ್ಧನಾದವನು, ಪ್ರತಿಭಾವಂತ ಲೇಖಕನೆಂದು ಹೆಸರು ಪಡೆದಿದ್ದವನು. ಈತನ ವಿದ್ವತ್ತು ಅಪಾರವಾದುದು, ಶಾಸ್ತ್ರಜ್ಞಾನ ಅಗಾಧವಾದುದು, ಸಂಸ್ಕೃತ ಮತ್ತು ಕನ್ನಡ ಎರಡರಲ್ಲಿಯೂ ತುಂಬ ಗಮನಾರ್ಹ ಕೃತಿಗಳನ್ನು ಬರೆದಿದ್ದಾನೆ. ಆದರೆ ಇವನ ಬಹುತೇಕ ಸಂಸ್ಕೃತ ಕೃತಿಗಳು ಪ್ರಕಟವಾಗಿದ್ದರೆ, ಕನ್ನಡದಲ್ಲಿನ ಈತನ **'ಶ್ರೀರಾಮಕಥಾಮೃತ'** (ಕರ್ಣಾಟ ರಾಮಾಯಣ) ದ ಐದು ಕಾಂಡಗಳು ಮಾತ್ರ ಪ್ರಕಟವಾಗಿದ್ದು, ಆರನೆಯ ಮತ್ತು ಕೊನೆಯ ಕಾಂಡ– ಯುದ್ಧಕಾಂಡ– ಇನ್ನೂ ಪ್ರಕಟವಾಗಿಯೇ ಇಲ್ಲದಿರುವುದರಿಂದ ಹಾಗೂ ಈತನ ಮಿಕ್ಕಾವ ಕನ್ನಡ ಕೃತಿಯೂ ಪ್ರಕಟವಾಗದಿರುವುದರಿಂದ ಇವನ ಹೆಸರು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ವಿದ್ವಾಂಸರ ಗಮನವನ್ನು ಸೆಳೆಯಲಿಲ್ಲ. ತನ್ನ **'ಶ್ರೀರಾಮಕಥಾಮೃತ'**ದ ಪ್ರತಿ ಕಾಂಡವನ್ನು **"ಇದು ರಾಮಚಂದ್ರ ಪಾದಾರವಿಂದವಂದನ ಪವನನಂದನ ವರಪ್ರಸಾದಾಸಾದಿತ ಸರಸ ಸಾಹಿತ್ಯಸಾಮ್ರಾಜ್ಯಸರ್ವಂಕಷ ಚತುರ್ವಿಧ ಕವಿತಾಪರಿಶೀಲಿತಾತ್ಮನಿಷ್ಠಾಗರಿಷ್ಠ ಗಾಂಧರ್ವಕಳಾವಿದ ವಿದ್ವಜ್ಜನೋಪಲಾಲನೀಯ ರಾಮಪುರಿ ಹಂಪೆಯಾಮಾತ್ಯ ತನೂಭವ ವೆಂಕಾಪ್ಪಯ**

ವಿರಚಿತಮಾದ ಶ್ರೀಮದ್ರಾಮಯಣ ಮಹಾಪ್ರಬಂಧದಲ್ಲಿ .... " ಎಂದು ಮುಗಿಸುವುದರಿಂದ ಈತನು ಆಂಜನೇಯನ ಪರಮಭಕ್ತನೆಂಬುದೂ, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ವೈದುಷ್ಯ-ರಚನಾಶಕ್ತಿಗಳನ್ನು ಪಡೆದಿದ್ದವನೆಂಬುದೂ, ಸಂಗೀತಜ್ಞನೆಂಬುದೂ ತಿಳಿಯುತ್ತದೆ. **'ಅಲಂಕಾರಮಣಿದರ್ಪಣ'**ದಲ್ಲಿ ತನ್ನನ್ನು **'ಷಡ್ದರ್ಶಿನೀವಲ್ಲಭ'**, **'ಘಟಿಕಾಪ್ರಬಂಧ ರಚನಾ ವಿದಗ್ಧ'** ಎಂದು ಕರೆದುಕೊಳ್ಳುವುದರಿಂದ ಇವನಿಗೆ ಷಡ್ದರ್ಶನಗಳ ಆಳವಾದ ತಿಳಿವಳಿಕೆಯಿದ್ದಂತೆ ತೋರುತ್ತದೆ; **'ಶ್ರೀರಾಮಕಥಾಮೃತ'**ದಲ್ಲಿ ಸಾಂಖ್ಯದ ಹಿನ್ನೆಲೆಯೇ ಇದೆ, ಒಂದು ಇಡೀ ಸಂಧಿಯನ್ನು ಸಾಂಖ್ಯತತ್ವದ ವಿವರಣೆಗೇ ಮೀಸಲಿರಿಸಿದ್ದಾನೆ. ಹೀಗಾಗಿ ಈತನದು ಬಹುಮುಖ ಪಾಂಡಿತ್ಯ ಮತ್ತು ಪ್ರತಿಭೆ.

ಈಗ **'ನಾಟಕ'** ಎಂದು ಪ್ರಸಿದ್ಧವಾಗಿರುವ ಸಾಹಿತ್ಯಪ್ರಕಾರವನ್ನು ಹಿಂದೆ ಸಂಸ್ಕೃತ ಸಾಹಿತ್ಯದಲ್ಲಿ **'ರೂಪಕ'** ಎನ್ನುತ್ತಿದ್ದರು; ಅದರಲ್ಲಿ ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ - ಎಂದು ವಸ್ತು, ನಾಯಕ-ನಾಯಿಕಾಪ್ರಭೇದ ಮತ್ತು ರಸ- ಇವುಗಳ ಆಧಾರದಿಂದ ವಿಭಾಗ ಮಾಡಲಾಗುತ್ತಿತ್ತು. ಪ್ರಧಾನ ವೆಂಕಪ್ಪಯ್ಯನು ರಚಿಸಿದ **'ಕಾಮವಿಲಾಸ ಭಾಣ'**, **'ಕುಕ್ಷಿಂಭರಭೈಕ್ಷಪ್ರಹಸನ'**, **'ಮಹೇಂದ್ರವಿಜಯ ಡಿಮ'**, **'ವೀರರಾಘವ ವ್ಯಾಯೋಗ'**, **'ಲಕ್ಷ್ಮೀಸ್ವಯಂವರ ಸಮವಕಾರ'**, **'ಸೀತಾಕಲ್ಯಾಣವೀಥಿ'**, **'ರುಕ್ಮಿಣೀಮಾಧವಾಂಕ'**, **'ಊರ್ವಶೀಸಾರ್ವಭೌಮೇಹಾಮೃಗ'** ಎಂಬ ಎಂಟು ಬಗೆಯ ರೂಪಕಗಳು ದೊರಕಿದ್ದುದು, ಈಚೆಗೆ ವಿದ್ವಾಂಸರೊಬ್ಬರಿಗೆ **'ರಸಿಕ ರಂಜಿನೀ'** ಎಂಬ ನಾಟಕವೂ ದೊರೆತಿದ್ದು, ದಶರೂಪಕಗಳಲ್ಲಿ ವೆಂಕಪ್ಪಯ್ಯನು ಒಂಬತ್ತನ್ನು ಬರೆದಿರುವುದು ಖಚಿತವಾಗಿದೆ; ಉಳಿದ ಒಂದನ್ನೂ (ಪ್ರಕರಣ) ಬರೆದಿರಬಹುದಾದ ಸಾಧ್ಯತೆಯಿದೆ. ಹತ್ತರಲ್ಲಿ ಒಂಬತ್ತು ರೂಪಕಪ್ರಭೇದಗಳನ್ನು ರಚಿಸಿದ ನಾಟಕಕಾರನು ಇಡೀ ಸಂಸ್ಕೃತಸಾಹಿತ್ಯದಲ್ಲಿ ದೊರಕದಿರುವುದು ಈತನ ಒಂದು ಹೆಗ್ಗಳಿಕೆ. ಅಲ್ಲದೆ ಈತನು **'ಕುಶಲವ ಚಂಪೂ'** ಎಂಬ ಗದ್ಯಪದ್ಯಮಿಶ್ರಿತವಾದ ಕಾವ್ಯವನ್ನೂ, **'ಸುಧಾಝುರಿ'** ಎಂಬ ಗದ್ಯಕೃತಿಯನ್ನೂ, **'ಜಗನ್ನಾಥವಿಜಯಕಾವ್ಯಂ'** ಎಂಬ ಪದ್ಯಕಾವ್ಯವನ್ನೂ, 'ಹನುಮತ್‌ಶತಕ'ವನ್ನು ರಚಿಸಿದ್ದಾನೆ. ವೆಂಕಪ್ಪಯ್ಯನ **'ಅಲಂಕಾರಮಣಿದರ್ಪಣ'** ಎಂಬ ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಉದ್ಗ್ರಂಥವು ತುಂಬ ಪ್ರಸಿದ್ಧವಾಗಿದೆ. ಅದರಲ್ಲಿ ಉಪಲಬ್ಧವಿಲ್ಲದ – **'ಸೌಗಂಧಿಕಾಹರಣಕಾವ್ಯ'**, **'ಸೀತಾವಿಲಾಸಕಾವ್ಯ'**, **'ಆಂಜನೇಯವಿಜಯ ಕಾವ್ಯ'**, **'ಸ್ತವರಾಜರತ್ನಪೇಟೀ'**, **'ರಾಮನವರಸಮಂಜರೀ' 'ರಘುವೀರ ಗುಣರತ್ನಮಾಲಾ'** – ಎಂಬ ತನ್ನ ಕೃತಿಗಳನ್ನು ಹೆಸರಿಸುತ್ತಾನೆಂದೂ, ಅವುಗಳಿಂದಲೂ ಉದಾಹರಣೆಗಳನ್ನು ನೀಡುತ್ತಾನೆಂದೂ, ಪ್ರಾಯಶಃ ಅವುಗಳನ್ನು ರೂಪಕಗಳ ರಚನೆಯ ನಂತರ ಬರೆದಿರಬಹುದೆಂದೂ ವಿದ್ವಾಂಸರು ಊಹಿಸುತ್ತಾರೆ. ಇವುಗಳಲ್ಲಿ ಬಹುಪಾಲು ಪ್ರಕಟಗೊಂಡಿವೆ; ಹಾಗಾಗಿ ಸಂಸ್ಕೃತ ವಿದ್ವಾಂಸರೂ ಆತನ ಕೃತಿಗಳ ಬಗ್ಗೆ ವ್ಯಾಪಕವಾಗಿ ವಿವೇಚನೆ ಮಾಡುವುದು ಸಾಧ್ಯವಾಗಿದೆ. ನನಗೆ ತಿಳಿದಮಟ್ಟಿಗೆ ೧೯೩೭ ರಲ್ಲಿ, ಎ. ಆರ್. ಕೃಷ್ಣಶಾಸ್ತ್ರಿಗಳು ತಮ್ಮ **'ಸಂಸ್ಕೃತ ನಾಟಕ'** ಎಂಬ ಗ್ರಂಥದಲ್ಲಿ, ವೆಂಕಪ್ಪಯ್ಯನ ಯಾವುದೇ ಗ್ರಂಥವೂ ಪ್ರಕಟಗೊಳ್ಳದಿದ್ದ ಕಾಲದಲ್ಲಿ, ಹಸ್ತಪ್ರತಿಗಳನ್ನೇ ಅಭ್ಯಸಿಸಿ, ಸಂಸ್ಕೃತ ರೂಪಕಕೃತಿಗಳ ಪಟ್ಟಿಯಲ್ಲಿ (ಪ್ರಧಾನಿ ವೆಂಕಭೂಪತಿ ಎಂದು ಲೇಖಕನ ಹೆಸರನ್ನು ನಮೂದಿಸಿ) ಏಳು ನಾಟಕಗಳನ್ನು ಹೆಸರಿಸುತ್ತಾರೆ; ಹಾಗೆಯೇ ೧೯೪೮ ರಲ್ಲಿ ಎಂಪಿಎಲ್ ಶಾಸ್ತ್ರಿ ಅವರು ಮಿಥಿಕ್ ಸೊಸೈಟಿಯ

ಜರ್ನಲ್‌ನಲ್ಲಿ 'Pradhana Venkappaiah – Poet and Playwright' ಎಂಬ ಹದಿನೇಳು ಪುಟಗಳ ದೀರ್ಘ ಲೇಖನವನ್ನು ಪ್ರಕಟಿಸಿದ್ದರು; ನಾನು ಕೆಲಸ ಮಾಡಿದ ಬೆಂಗಳೂರು ವಿಜಯ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಡಾ. ಕೆ. ರಾಜಗೋಪಾಪಲಾಚಾರ್ಯರು ತಮ್ಮ 'Sanskrit Champus' ಎಂಬ ಪಿಎಚ್‌ಡಿ ಮಹಾಪ್ರಬಂಧದಲ್ಲಿ (ಅಪ್ರಕಟಿತ) ವೆಂಕಪ್ಪಯನ **'ಕುಶಲವ ಚಂಪೂ'**ವನ್ನು ಕುರಿತು ವಿಶ್ಲೇಷಿಸಿದ್ದಾರೆ; ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಡಾ. ಎಂ. ಶಿವಕುಮಾರಸ್ವಾಮಿಯವರು ತಮ್ಮ 'Post Jagannatha Literary Critisism in Sanskrit' ಎಂಬ ಪಿಎಚ್‌ಡಿ ಮಹಾಪ್ರಬಂಧದಲ್ಲಿ ವೆಂಕಪ್ಪಯ್ಯನ **'ಅಲಂಕಾರಮಣಿದರ್ಪಣ'** ವನ್ನು ಕುರಿತು ಸುಮಾರು ನೂರು ಪುಟಗಳಷ್ಟು ದೀರ್ಘವಾಗಿ ವಿವೇಚಿಸಿದ್ದಾರೆ; ಇನ್ನು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗದ ಡಾ. ಎಂ. ಎಸ್. ಭವಾನಿ ಅವರು 'A Critical Study of Dramatic Works of Venkamatya' ಎಂಬ ಪೂರ್ಣ ಪ್ರಮಾಣದ ಪಿಎಚ್‌ಡಿ ಮಹಾಪ್ರಬಂಧವನ್ನು ರಚಿಸಿದ್ದಾರೆ (ಅಪ್ರಕಟಿತ); ಇಮ್ಮಡಿ ಶಿವಬಸವ ಸ್ವಾಮಿಗಳು ತಮ್ಮ **'ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ'** ಎಂಬ ಪಿಎಚ್‌ಡಿ ಮಹಾಪ್ರಬಂಧದಲ್ಲಿ ಪ್ರಧಾನ ವೆಂಕಪ್ಪಯ್ಯನ ಸಂಸ್ಕೃತ ಕೃತಿಗಳ ಬಗ್ಗೆ ಇಪ್ಪತ್ತೈದು–ಇಪ್ಪತ್ತಾರು ಪುಟಗಳಷ್ಟು ದೀರ್ಘ ವಿವೇಚನೆ ನಡೆಸಿದ್ದಾರೆ; ಎಂ. ಎನ್. ಶ್ರೀನಿವಾಸ ಅಯ್ಯಂಗಾರ್ ಅವರು ತಮ್ಮ **'ಸಂಸ್ಕೃತ ಕವಿಚರಿತೆ'** ಎಂಬ ಕೃತಿಯಲ್ಲಿ **'ಪ್ರಧಾನ ವೆಂಕಪ್ಪಯ್ಯ'** ಎಂಬ ಹೆಸರಿನ ಪ್ರತ್ಯೇಕವಾದ ಹದಿನೈದು ಪುಟಗಳ ಅಧ್ಯಾಯವನ್ನು ಆತನ ಕೃತಿಗಳ ವಿವೇಚನೆಗಾಗಿ ಮೀಸಲಿರಿಸಿದ್ದಾರೆ. **'ರಸಿಕ ರಂಜಿನೀ'** ಎಂಬ ವೆಂಕಪ್ಪಯ್ಯನ **'ನಾಟಕ'**ದ ಹಸ್ತಪ್ರತಿಯು ತಮಗೆ ದೊರಕಿದ ಬಗ್ಗೆ ಮೈಸೂರು ನಾಗರಾಜ ಶರ್ಮ ಅವರು 'The Mysore Orientalist' ಎಂಬ ವಿದ್ವತ್ಪತ್ರಿಕೆಯಲ್ಲಿ ಸಂಶೋಧನ ಲೇಖನವೊಂದನ್ನು ಪ್ರಕಟಿಸಿದ್ದಾರೆ. ಅಲ್ಲದೆ, ಮೈಸೂರಿನ ಓರಿಯಂಟಲ್ ರೀಸರ್ಚ್ ಇನ್ಸ್ಟಿಟ್ಯೂಟ್ ಈತನ ಕೃತಿಗಳನ್ನು ಪ್ರಕಟಿಸಿದೆ; ಆಯಾ ಕೃತಿಗಳ ಸಂಪಾದಕರು ವೆಂಕಪ್ಪಯ್ಯನ ಬಗ್ಗೆಯೂ ಮತ್ತು ತಾವು ಸಂಪಾದಿಸಿದ ಕೃತಿಯ ಬಗ್ಗೆಯೂ ತಮ್ಮ ಮುನ್ನುಡಿಗಳಲ್ಲಿ ವಿಸ್ತಾರವಾಗಿ ವಿವೇಚನೆ ನಡೆಸಿದ್ದಾರೆ. ಇವುಗಳಲ್ಲದೆ ಇನ್ನೂ ಅನೇಕ ಲೇಖನಗಳು ಪ್ರಧಾನ ವೆಂಕಪ್ಪಯ್ಯನ ಸಂಸ್ಕೃತ ಕೃತಿಗಳ ಬಗ್ಗೆ ಪ್ರಕಟವಾಗಿರಬಹುದು. ಹೀಗಾಗಿ ಆತನ ಸಂಸ್ಕೃತ ಕೃತಿಗಳ ಬಗ್ಗೆ ಸಾಕಷ್ಟು ಮಾನ್ಯತೆ ದೊರೆತಿದೆ.

ಆತನ ಕೃತಿಗಳ ಸ್ಥೂಲ ಪರಿಚಯವನ್ನೀಗ ಮಾಡಿಕೊಳ್ಳಬಹುದು. **'ಕಾಮವಿಲಾಸಭಾಣ'**ವು ಏಕಪಾತ್ರಾಭಿನಯದ ಮೂಲಕ ನಾಯಕ ಪಲ್ಲವಶೇಖರನು ಹೇಳುವ ಅನೇಕರ ಪ್ರಣಯವಿಚಾರವನ್ನು ತಿಳಿಸುತ್ತದೆ. ಇದು ನಿರೂಪಿಸುವುದು ಶೃಂಗಾರರಸವನ್ನು. ಆದರೆ ಈ ನಾಟಕದ ಮೂಲಕ ಕೃತಿಕಾರನು ಸಮಾಜದ ಕಪಟವನ್ನು ಗುರುತಿಸಿ, ಜ್ಯೋತಿಷ್ಯರು, ಪುರಾಣಿಕರು, ಪತಿಪರಾಯಣೆಯರೆನ್ನಿಸಿಕೊಂಡ ಹಲವರ ಇಬ್ಬಂದಿ ನಡವಳಿಕೆಯನ್ನು ವಿಡಂಬಿಸುತ್ತದೆ. **'ಕುಕ್ಷಿಂಭರಭೈಕ್ಷಪ್ರಹಸನ'**ವು ಹೆಸರೇ ತಿಳಿಸುವಂತೆ ಹಾಸ್ಯಪ್ರಧಾನವಾದುದು. ಇದು ಕುಕ್ಷಿಂಭರನೆಂಬ ಬೌದ್ಧಸನ್ಯಾಸಿಯೊಬ್ಬನು ಕಾಮಕಲಿಕಾ ಎಂಬ ವೇಶ್ಯೆಯೊಬ್ಬಳಲ್ಲಿ ಅನುರಕ್ತನಾಗಿದ್ದು, ನಾನಾ ಅಡ್ಡಿಗಳನ್ನೆದುರಿಸಿ, ಕೊನೆಗೆ ಅವಳನ್ನು ಸೇರುವ ಕಥಾಚೌಕಟ್ಟನ್ನು ಹೊಂದಿರುವಂಥದು. ಆದರೆ ಇದರಲ್ಲಿ ಆಶ್ಲೀಲ ಭಾಗಗಳಿರುವುದಾಗಿಯೂ, ಪ್ರಹಸನದ ಸೂತ್ರವನ್ನು ಉಲ್ಲಂಘಿಸಿರುವುದಾಗಿಯೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

'ಮಹೇಂದ್ರವಿಜಯ ಡಿಮ' ಎಂಬುದು ನಾಲ್ಕು ಅಂಕಗಳನ್ನು ಹೊಂದಿದ್ದು, ಭಾಗವತ ಮೂಲದಿಂದ ತೆಗೆದುಕೊಂಡ ಅಮೃತಮಂಥನದ ಪ್ರಸಿದ್ಧ ವಸ್ತುವನ್ನು ಕುರಿತಾದುದು. ಇದರಲ್ಲಿ ರೌದ್ರ ಪ್ರಧಾನರಸವಾಗಿದ್ದರೂ, ವೀರ, ಬೀಭತ್ಸ, ಅದ್ಭುತ ಮುಂತಾದ ರಸಗಳು ಪೂರಕವಾಗಿವೆಯಂತೆ. ಭಾಗವತದಲ್ಲಿ ನಿರೂಪಿತವಾದ ಕಥೆಯನ್ನು ಕೊಂಚವೂ ಮಾರ್ಪಡಿಸದೆ ಡಿಮ ಎಂಬ ರೂಪಕಕ್ಕೆ ಅಳವಡಿಸಿರುವುದು ಇದರ ವೈಶಿಷ್ಟ್ಯ. **'ವೀರರಾಘವ ವ್ಯಾಯೋಗ'**ವು ಸಂಸ್ಕೃತ ಸಾಹಿತ್ಯದಲ್ಲಿ ವಿರಳವಾದ ವ್ಯಾಯೋಗ ಎಂಬ ಪ್ರಭೇದಕ್ಕೆ ಸೇರಿದುದು. ವ್ಯಾಯೋಗ ಎಂದರೆ ಯುದ್ಧ, ಹಾಗಾಗಿ ಇದರಲ್ಲಿ ಹಾಸ್ಯ, ಶೃಂಗಾರರಸಗಳಿಗೆ ಮತ್ತು ಸ್ತ್ರೀಪಾತ್ರಗಳಿಗೆ ಅವಕಾಶವಿಲ್ಲ. ದಂಡಕಾರಣ್ಯದಲ್ಲಿ ಶ್ರೀರಾಮನು ಮಾತಲಿಯು ಕಳಿಸಿದ ರಥವನ್ನೇರಿ ಖರದೂಷಣರನ್ನು ವಧೆಗೈಯುವುದು ಇಲ್ಲಿನ ವಸ್ತು. ಇದರ ನಾಯಕ ರಾಮ, ಪ್ರಧಾನರಸ ವೀರ, ಆದರೆ ರೌದ್ರವೇ ಮುಂತಾದವು ಪೋಷಕವಾಗಿ ಬರುತ್ತವೆ. ರೂಪಕದುದ್ದಕ್ಕೂ ಉತ್ಸಾಹ, ಕ್ರೋಧ ತುಂಬಿದ ಮಾತುಗಳೇ ತುಂಬಿಕೊಂಡಿವೆ. **'ಲಕ್ಷ್ಮೀಸ್ವಯಂವರ ಸಮವಕಾರ'** ಮೂರು ಅಂಕಗಳನ್ನುಳ್ಳುದು, ಸಮವಕಾರದ ಲಕ್ಷಣವಾದ ದೇವತೆಗಳು ಮತ್ತು ದಾನವರಿಗೆ ಸಂಬಂಧಿಸಿದ ಕತೆಯನ್ನು ಇದು ಹೊಂದಿದೆ. ಇಲ್ಲಿ ಎಲ್ಲ ರಸಗಳಿಗೂ ಅವಕಾಶವಿದ್ದು, ರಮೆಯು ತನ್ನ ಪತಿ ಮಾಧವನ ಬಗ್ಗೆ ಮುನಿಸಿಕೊಂಡು ತೌರುಮನೆಗೆ ಬರುವುದು, ಅವಳ ತಂದೆಯು ಅವಳಿಗೆ ಮತ್ತೆ ಸ್ವಯಂವರ ಏರ್ಪಡಿಸುವ ವಿಷಯವನ್ನು ತಿಳಿದು ಮಾಧವನು ಆ ಸಂದರ್ಭಕ್ಕೆ ಬರುವುದು, ಉಪಾಯದಿಂದ ಮತ್ತೆ ಮಾಧವನೇ ರಮೆಯನ್ನು ವರಿಸುವಂತೆ ಮಾಡುವುದು ಇಲ್ಲಿನ ವಸ್ತು. ಮೂರು ಅಂಕಗಳಲ್ಲಿ ಹೆಣೆದ ಈ ಕೃತಿಯು, ವೀರರಸಪ್ರಧಾನವಾಗಿದೆ. **'ಸೀತಾಕಲ್ಯಾಣವೀಥಿ'** ಎಂಬುದು ಈತನ ಮತ್ತೊಂದು ರೂಪಕ ಕೃತಿ. ವೀಥಿಯ ಲಕ್ಷಣವೆಂದರೆ, ಇದರಲ್ಲಿ ಒಂದೇ ಅಂಕವಿದ್ದು, ಶೃಂಗಾರರಸ ಮುಖ್ಯವಾಗಿರಬೇಕು. ಇದರ ವಸ್ತು ಶಿವಧನುಸ್ಸಿನ ಹೆದೆಯೇರಿಸಿ ರಾಮನು ಸೀತೆಯನ್ನು ವರಿಸುವ ಪ್ರಸಂಗ. ವೀಥಿಯ ನಿಯಮಗಳಿಗನುಗುಣವಾಗಿ ರಚಿತವಾದ ಈ ಕೃತಿಯಂತಹುದು ಬೇರೊಂದು ದೊರೆಯದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಏಕಾಂಕವನ್ನು ಹೊಂದಿರುವ ಇದರ ಪ್ರಮುಖ ಪಾತ್ರಗಳೆಂದರೆ ರಾಮ, ಲಕ್ಷ್ಮಣ, ಸೀತೆ ಮತ್ತು ವಿಶ್ವಾಮಿತ್ರ. ಈ ರೂಪಕದಲ್ಲಿ ಸೀತಾರಾಮರ ಪ್ರೀತಿಯು ವಿವಾಹಪೂರ್ವದಲ್ಲಿಯೂ ಇತ್ತು ಎಂಬುದು ವಿಶೇಷ ಚಾತುರ್ಯದ ಮೂಲಕ ಪ್ರತಿಪಾದಿತವಾಗಿದೆ. **'ರುಕ್ಮಿಣೀಮಾಧವಾಂಕ'**ವು ಒಂದೇ ಅಂಕವುಳ್ಳುದು, ಇದರಲ್ಲಿ ಕರುಣ, ಶೃಂಗಾರ ಮತ್ತು ವೀರರಸಗಳು ಪ್ರಧಾನವಾಗಿವೆ. ಭಾಗವತದಲ್ಲಿ ಬರುವ ರುಕ್ಮಿಣೀ ಅಪಹರಣದ ವಸ್ತುವನ್ನು ಹೊಂದಿದೆ; ಶಿಶುಪಾಲನು ತನ್ನನ್ನು ಮದುವೆಯಾಗಲು ಬಯಸುತ್ತಿರುವನೆಂಬ ವಿಷಯವನ್ನು, ಮತ್ತು ಅದನ್ನೊಲ್ಲದ ತನ್ನನ್ನು ಅವನು ಹೊತ್ತೊಯ್ಯುವ ಉದ್ದೇಶವುಳ್ಳವನಾಗಿದ್ದಾನೆಂದು ತಿಳಿದ ರುಕ್ಮಿಣಿಯು ತನಗೆ ಸಹಾಯ ಮಾಡಬೇಕೆಂದು ಕಾಗದದ ಮೂಲಕ ತಿಳಿಸಿದಾಗ ಬಂದ ಮಾಧವನು ಆಕೆಯನ್ನು ರಥದಲ್ಲಿ ಕೂರಿಸಿಕೊಂಡು ಹೋಗುತ್ತಾನೆ ಹಾಗೂ ದಾರಿಯಲ್ಲಿ ಅಡ್ಡಿಪಡಿಸಿದ ಶಿಶುಪಾಲನನ್ನು ಓಡಿಸಿ ರುಕ್ಮಿಣಿಯನ್ನು ಮದುವೆಯಾಗುತ್ತಾನೆ. ಇದನ್ನು **'ಉತ್ಸೃಷ್ಟಿಕಾಂಕ'** ಎಂಬ ಪ್ರಭೇದಕ್ಕೆ ಸೇರಿಸುತ್ತಾರೆ. ವೆಂಕಪ್ಪಯ್ಯನ ಈ ಕೃತಿಯು ಒಂದು ಉತ್ತಮ ಕೃತಿಯೆಂಬ ಮನ್ನಣೆಯನ್ನು ಪಡೆದಿದೆ. **'ಊರ್ವಶೀಸಾರ್ವಭೌಮೇಹಾಮೃಗ'** ಎಂಬುದು ನಾಲ್ಕು ಅಂಕಗಳನ್ನು ಹೊಂದಿದ್ದು,

ಇದರಲ್ಲಿ ಊರ್ವಶೀ-ಪುರೂರವರ ಕಥೆಯು ಚಿತ್ರಿತವಾಗಿದೆ. ನಾರದನು ಊರ್ವಶಿಯ ಚೆಲುವನ್ನು ವರ್ಣಿಸಿದಾಗ ಅದನ್ನು ಕೇಳಿ ಮತ್ತು ಅವಳ ನೃತ್ಯವನ್ನು ನೋಡಿ ಪುರೂರವನು ಊರ್ವಶಿಯಲ್ಲಿ ಅನುರಕ್ತನಾಗುತ್ತಾನೆ, ಅವಳಿಗೂ ಅವನಲ್ಲಿ ಒಲವು; ಆದರೆ ಮಹೇಂದ್ರನೂ ಅವಳಲ್ಲಿ ಅನುರಕ್ತನಾಗಿರುತ್ತಾನೆ. ಚಿತ್ರರಥನ ಸಲಹೆಯಂತೆ ಅವನು ಪುರೂರವನಂತೆ ಮನುಷ್ಯರೂಪದಲ್ಲಿ ಹೊಂದಿ ಊರ್ವಶಿಯನ್ನು ಪಡೆಯಲು ಪ್ರಯತ್ನಿಸಲು, ಆ ಹೊತ್ತಿಗೆ ಅಲ್ಲಿಗೆ ನಿಜವಾದ ಪುರೂರವನು ಬರಲು, ಇಬ್ಬರಿಗೂ ಸಂಘರ್ಷವುಂಟಾಗುತ್ತದೆ. ಊರ್ವಶಿ ಯಾರಿಗೆ ಮಾಲೆಹಾಕುವಳೋ ಅವನನ್ನು ಅವಳು ವರಿಸಲಿ ಎಂಬ ನಾರಾಯಣಮುನಿಯು ಸಲಹೆ ನೀಡಲು ಉಭಯಪಕ್ಷಗಳೂ ಅದನ್ನೊಪ್ಪುತ್ತಾರೆ. ಆದರೆ ಊರ್ವಶಿಯು ಪುರೂರವನಿಗೆ ಮಾಲೆಹಾಕಿ ಅವನನ್ನು ವರಿಸುತ್ತಾಳೆ. ವೆಂಕಪ್ಪಯ್ಯನು ಇದರಲ್ಲಿ ಪೌರಾಣಿಕ ವಸ್ತುವನ್ನು ಅಳವಡಿಸಿಕೊಂಡಿದ್ದರೂ ಸ್ವಲ್ಪ ಮಾರ್ಪಾಟನ್ನು ಮಾಡಿಕೊಳ್ಳುತ್ತಾನೆ. ಸಂಸ್ಕೃತದಲ್ಲಿನ ಈಹಾಮೃಗ ಪ್ರಕಾರಕ್ಕೆ ಇದೊಂದು ಉತ್ತಮ ಕೊಡುಗೆ ಎಂಬುದು ವಿದ್ವಾಂಸರ ಅಭಿಪ್ರಾಯ. **'ರಸಿಕರಂಜನೀ'** ಎಂಬುದು ದಶರೂಪಕಗಳಲ್ಲಿ ನಾಟಕ ಪ್ರಕಾರಕ್ಕೆ ಸೇರಿದುದು. ಸಂಸ್ಕೃತದ ಬಹುಪಾಲು ನಾಟಕಗಳು ಮಾನವ ಪಾತ್ರಗಳನ್ನು ಹೊಂದಿದ್ದರೂ ಈ ಕೃತಿಯು ಒಂದು ಅನ್ಯೋಕ್ತಿ(allegory)ಯಾಗಿದೆ. ಐದು ಅಂಕಗಳಿಂದ ಕೂಡಿರುವ ಈ ಕೃತಿಯಲ್ಲಿ ಧರ್ಮ, ಪ್ರಕೃತಿ, ಡಂಭ ಮತ್ತು ಉಪನಿಷತ್ತುಗಳು ಪಾತ್ರಗಳಾಗಿ ಬರುತ್ತವೆ. ಬಹುತೇಕ ನಾಟಕಗಳಲ್ಲಿ ಬರುವಂತೆ ಅಲ್ಲಲ್ಲಿ ಪ್ರಾಕೃತಭಾಷೆಯ ಬಳಕೆಯನ್ನು ಇದರಲ್ಲಿ ಕಾಣಬಹುದು. ಆಧ್ಯಾತ್ಮಿಕ ಔನ್ನತ್ಯದ ಈ ಕೃತಿಯು ಪ್ರಕಟಗೊಂಡಲ್ಲಿ ಒಂದು ವಿಶಿಷ್ಟ ಕೊಡುಗೆಯಾಗುತ್ತದೆಂಬುದು ವಿದ್ವಾಂಸರ ಅಭಿಪ್ರಾಯ. ಹೀಗೆ ಪ್ರಧಾನ ವೆಂಕಪ್ಪಯ್ಯನು **'ಪ್ರಕರಣ'** ಎಂಬೊಂದು ಪ್ರಭೇದವನ್ನುಳಿದು ದಶರೂಪಕಗಳಲ್ಲಿ ಉಳಿದವನ್ನೆಲ್ಲ ಬರೆದಿದ್ದಾನೆ. ಪ್ರಕರಣವನ್ನೂ ರಚಿಸಿರಬಹುದಾದರೂ ಅದು ದೊರೆತಿಲ್ಲ. ಇಲ್ಲದಿದ್ದರೂ ಹತ್ತು ಪ್ರಭೇದಗಳಲ್ಲಿ ಒಂಬತ್ತನ್ನು ಒಬ್ಬನೇ ಬರೆದಿರುವವರಾರೂ ಸಂಸ್ಕೃತದಲ್ಲಿ ಇಲ್ಲ; ಹೀಗೆ ರೂಪಕರಚನೆಯಲ್ಲಿ ವೆಂಕಾಮಾತ್ಯ ಅಥವಾ ಪ್ರಧಾನ ವೆಂಕಪ್ಪಯ್ಯನ ಸಾಧನೆಯು ಅಪೂರ್ವವಾದುದೆಂದು ಪರಿಗಣಿತವಾಗಿದೆ.

ಇನ್ನು ವೆಂಕಪ್ಪಯ್ಯನ ಇತರ ಕೃತಿಗಳ ಪರಿಚಯವನ್ನು ಮಾಡಿಕೊಳ್ಳಬಹುದು. **'ಕುಶಲವ ಚಂಪೂ'** ಗದ್ಯಪದ್ಯ ಮಿಶ್ರಿತವಾದ ಚಂಪೂ ಕಾವ್ಯವಾಗಿದೆ. ಇದರಲ್ಲಿ ಐದು ಉಲ್ಲಾಸಗಳಿವೆ; ಮೊದಲನೆಯ ಉಲ್ಲಾಸದಲ್ಲಿ ತನ್ನ ರಾಮಾಯಣ ವಸ್ತುವಿನ ಆಯ್ಕೆಯ ಬಗ್ಗೆ ಸಮರ್ಥನೆಯಲ್ಲದೆ, ಯುದ್ಧಕಾಂಡದವರೆಗಿನ ರಾಮಾಯಣ ಕಥೆಯು ಸಂಕ್ಷಿಪ್ತವಾಗಿ ನಿರೂಪಿತವಾಗಿದೆ; ಎರಡನೆಯ ಉಲ್ಲಾಸದಿಂದ ರಾಮ-ಸೀತೆಯರು ವನವಾಸದಿಂದ ಮರಳಿ ಬಂದುದು, ಸೀತೆಯು ಗರ್ಭಿಣಿಯಾದ ವಿಷಯ – ಇವುಗಳು ತಿಳಿಯುತ್ತವೆ; ಮೂರನೆಯ ಉಲ್ಲಾಸದಲ್ಲಿ ಕೌಸಲ್ಯೆ, ಸುಮಿತ್ರೆ ಮತ್ತ ಕೈಕೇಯಿಯರು ಯಜ್ಞವನ್ನು ನೋಡಲೆಂದು ಋಷ್ಯಶೃಂಗನ ಆಶ್ರಮಕ್ಕೆಂದು ಕಾಡಿಗೆ ಹೋಗುವುದು, ವಿದೂಷಕನ ಅಪವಾದವನ್ನು ಕೇಳಿ ರಾಮನು ಋಷಿಪತ್ನಿಯರನ್ನು ಕಾಣುವ ಅವಳ ಆಸೆಯನ್ನು ನೆರವೇರಿಸುವ ನೆವದಿಂದ ಸೀತೆಯನ್ನು ಮತ್ತೆ ಅರಣ್ಯಕ್ಕೆ ಕಳಿಸುವ ಉತ್ತರಕಾಂಡದ ವಿಷಯದ ನಿರೂಪಿತವಾಗಿದೆ; ನಾಲ್ಕನೆಯ ಉಲ್ಲಾಸವು ರಾಮನ ಅಶ್ವಮೇಧಯಾಗದ ಪ್ರಯತ್ನವನ್ನು ವಿವರಿಸುತ್ತದೆ; ಐದನೆಯ ಉಲ್ಲಾಸದಲ್ಲಿ, ಶತ್ರುಘ್ನನು ಯುದ್ಧಕ್ಕೆ ಬಂದ ಲವನಿಗೆ ರಾಮನ ಮಹತ್ವವನ್ನು

ವಿವರಿಸಿ ಯುದ್ಧಮಾಡದಿರುವ ಸಲಹೆ ನೀಡುವುದು, ಆದರೂ ಯುದ್ಧ ನಡೆದು ಲವನು ಮೂರ್ಛೆ ಹೋದಾಗ ಅವನನ್ನು ಶತ್ರುಘ್ನನು ತನ್ನ ರಥದಲ್ಲಿ ಕರೆದೊಯ್ಯುವುದು, ಸೀತೆಯ ಆತಂಕ ಹಾಗೂ ಕುಶನು ಯುದ್ಧಕ್ಕೆ ತೆರಳಿ ರಾಮನ ಸೇನಾಪತಿಯನ್ನು ಕೊಲ್ಲುವುದು ಹಾಗೂ ಶತ್ರುಘ್ನ ಮೂರ್ಛಿತನಾಗುವುದು, ಆನಂತರ ಬಂದ ಚಂದ್ರಕೇತು ಲಕ್ಷ್ಮಣರ ಪರಾಭವ ಮತ್ತು ಈ ವಿಷಯವನ್ನು ತಿಳಿಸಲು ಚರರು ರಾಮನ ಬಳಿ ಹೋಗುವ ವಿವರಗಳು ನಿರೂಪಿತವಾಗಿವೆ. ಈ ಕಾವ್ಯದಲ್ಲಿ ಇಷ್ಟು ಮಾತ್ರವಿದೆ. ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಆರನೆಯ ಉಲ್ಲಾಸವೂ ಇದ್ದಿರಬೇಕು: ಅದಕ್ಕೆ ಕಾರಣವೆಂದರೆ, ರಾಮ ಮತ್ತು ಕುಶಲವರು ಪರಸ್ಪರರನ್ನು ನೋಡುವ ಸಂದರ್ಭ ಇಲ್ಲಿ ಬಂದಿಲ್ಲ, ಹಾಗೂ ವೆಂಕಪ್ಪಯ್ಯನು ತನ್ನ '**ಅಲಂಕಾರಮಣಿದರ್ಪಣ**'ದಲ್ಲಿ ಈ ಕಾವ್ಯದ ಅನೇಕ ಪದ್ಯಗಳನ್ನು ನಿದರ್ಶನವಾಗಿ ಇತ್ತಿದ್ದು, ಅವುಗಳಲ್ಲಿ ಈಗ ಸಿಕ್ಕಿರುವ '**ಕುಶಲವಚಂಪೂ**'ವಿನಲ್ಲಿ ಸಿಕ್ಕದಿರುವುದು. ಈ ಕಾವ್ಯದಲ್ಲಿನ ಸಾಕೇತಪುರಿಯ ವರ್ಣನೆ, ವಸಂತಮಾಸದ ವರ್ಣನೆ, ಗಂಗಾನದಿಯ ದಡದಲ್ಲಿ ಲಕ್ಷ್ಮಣನು ಸೀತೆಯನ್ನು ಒಂಟಿಯಾಗಿ ಬಿಟ್ಟು ಹೋಗುವ ಸನ್ನಿವೇಶ, ಸೀತೆಯ ಒಡನಾಟ ಮತ್ತು ವಿಯೋಗಗಳೆರಡರಲ್ಲಿಯೂ ರಾಮನ ಭವ್ಯ ವ್ಯಕ್ತಿತ್ವ ವ್ಯಕ್ತವಾಗುವ ಪರಿಯ ಚಿತ್ರಣದಲ್ಲಿ ಹಾಗೂ – ಇಂತಹ ಕಡೆಗಳಲ್ಲಿ ಬಳಕೆಗೊಂಡ ಅಭಂಗಶ್ಲೇಷ, ಅರ್ಥಂತರನ್ಯಾಸ ಅಲಂಕಾರಗಳ ಸೌಂದರ್ಯ – ಇವುಗಳಲ್ಲಿ ಕವಿಯ ಉನ್ನತವಾದ ಕೌಶಲ ವ್ಯಕ್ತವಾಗುತ್ತದೆಂಬುದು ವಿಮರ್ಶಕರ ಅಭಿಮತ. ಈ ಕಾವ್ಯದ ಮೇಲೆ ಭವಭೂತಿಯ '**ಉತ್ತರರಾಮಚರಿತ**'ದ ಪ್ರಭಾವ ದಟ್ಟವಾಗಿದೆಯೆನ್ನುತ್ತಾರೆ.

'**ಸುಧಾಝರಿ**'ಯು ಒಂದು ಗದ್ಯಕೃತಿ. ಇದು ಬಾಣನ '**ಕಾದಂಬರಿ**'ಯ ಪ್ರೇರಣೆಯಿಂದ ಮೂಡಿರುವುದು ಆರಂಭದ ಒಂದು ಪದ್ಯದಿಂದ ತಿಳಿಯುತ್ತದೆ. ಆದರೆ ಇದರಲ್ಲಿ ಎರಡು ತರಂಗಗಳು ಮಾತ್ರ ಇರುವುದು; ದೇವಕಿಯ ಗರ್ಭದಲ್ಲಿ ಕೃಷ್ಣನು ಜನಿಸುವುದು, ಅವನ ಬಾಲಲೀಲೆ–ರಾಸಲೀಲೆಗಳು, ರಾಧಾ–ಕೃಷ್ಣರ ಪ್ರೇಮ ಇವುಗಳಿಂದ ಕೂಡಿದ ಕಥೆಯನ್ನು ಈ ಕಾವ್ಯವು ನಿರೂಪಿಸುತ್ತದೆ. ಇದರಲ್ಲಿನ ವರ್ಣನೆಗಳು ಮತ್ತು ರಾಧಾ–ಕೃಷ್ಣರ ವಿರಹದ ಮಾನಸಿಕ ತೊಳಲಾಟಗಳ ಚಿತ್ರಣವು ಮನೋಜ್ಞವಾಗಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಈ ಕೃತಿಯ ಹಸ್ತಪ್ರತಿಯು, ನಡುವಣ ಇಪ್ಪತ್ತು ಗರಿಗಳು ಇರದೆ, ಅಸಮಗ್ರವಾಗಿದೆಯಂತೆ.

'**ಅಲಂಕಾರಮಣಿದರ್ಪಣ**'ದಲ್ಲಿ ಈತನದೇ ಎರಡು ಕೃತಿಗಳ ಉಲ್ಲೇಖವಿದೆ: '**ಹನುಮತ್‌ಶತಕ**' ಅವುಗಳಲ್ಲಿ ಒಂದು, ಮತ್ತೊಂದು '**ಸೂರ್ಯಶತಕ**'. ಇವುಗಳಲ್ಲಿ ಮೊದಲನೆಯದು ಹೆಸರೇ ಸೂಚಿಸುವಂತೆ ತನ್ನ ಪರಮಾರಾಧ್ಯ ದೈವವಾದ ಹನುಮಂತನನ್ನು ಕುರಿತ ಸ್ತೋತ್ರಮಾಲಿಕೆ. ವಿವಿಧ ಅಲಂಕಾರಗಳ ಮೂಲಕ ಮನೋಜ್ಞವಾಗಿ ಕವಿ ಹನುಮಂತನನ್ನು ಸ್ತುತಿಸುತ್ತಾನೆ. '**ಸೂರ್ಯಶತಕ**' ಪ್ರಾಯಶಃ ಸಿಕ್ಕಿಲ್ಲ. ಅಲ್ಲದೆ ವೆಂಕಪ್ಪಯ್ಯನ ಹುಟ್ಟೂರಾದ ಅಕ್ಕರಾಂಪುರಕ್ಕೆ ಸಂಬಂಧಿಸಿದ '**ಕರಿಶ್ರೀ ವೆಂಕಟೇಶ್ವರ ಮಹಾತ್ಮೆ**' ಎಂಬ ಸ್ಥಳಪುರಾಣದ ಕನ್ನಡದ ಅನುವಾದ ಈಗ ದೊರಕುತ್ತದೆ. ಆದರೆ ಅದರ ಮೂಲ ಸಂಸ್ಕೃತದಲ್ಲಿದೆ. ಅದನ್ನು ನಾನೂ ನೋಡಿದ್ದೆ. ಅದನ್ನು ಟಿ.ಕೆ. ವೇಣುಗೋಪಾಲದಾಸರು ಕನ್ನಡಿಸಿದ್ದಾರೆ. ಮೂಲದಲ್ಲಿ ಇದು '**ಭವಿಷ್ಯತ್ಪುರಾಣಾಂತರ್ಗತ**'ವಾದುದೆಂಬ ಉಲ್ಲೇಖವಿದೆ; ಈ ಪುರಾಣವನ್ನು ಸೂತ ಮಹರ್ಷಿಗಳು ಶೌನಕಾದಿಗಳಿಗೆ ನಿರೂಪಿಸಿದುದಾಗಿ ಹೇಳಿದೆ. ಈ ಸಂಸ್ಕೃತ ಮೂಲವನ್ನು ವೆಂಕಪ್ಪಯ್ಯನೇ ಬರೆದಿರುವುದಾಗಿ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದರಲ್ಲಿ ಐದು

ಸಣ್ಣ ಸಣ್ಣ ಅಧ್ಯಾಯಗಳಿವೆ; ಈ ಸ್ಥಳಕ್ಕೆ ಈ ವಂಶದ ಬಹು ಹಿಂದಿನವರು (ಅಣ್ಣತಮ್ಮಂದಿರು) ಹಂಪೆಯಿಂದ ವಲಸೆ ಬಂದ ವಿಷಯ, ಈ ಜಾಗಕ್ಕೆ 'ಗಜಾರಣ್ಯಕ್ಷೇತ್ರ'ವೆಂಬ ಹೆಸರು ಬರಲು ಕಾರಣ, ಈ ವಂಶದವರನ್ನು ಮೌನಿಭಾರ್ಗವಗೋತ್ರದವರೆಂದು ಗುರುತಿಸುವ ಕಾರಣ ಹಾಗೂ ಇಲ್ಲಿನ ಲಕ್ಷ್ಮೀವೆಂಕಟರಮಣಸ್ವಾಮಿಯ ದೇವಸ್ಥಾನವನ್ನು ನಿರ್ಮಿಸಿದ ಹಿನ್ನೆಲೆ - ಇವೇ ಮುಂತಾದ ಸಂಗತಿಗಳನ್ನು ಪೌರಾಣಿಕ ಧಾಟಿಯಲ್ಲಿ ನಿರೂಪಿಸಲಾಗಿದೆ.

'ಜಗನ್ನಾಥವಿಜಯಕಾವ್ಯಂ' ಒಂದು ವ್ಯಾಕರಣಗ್ರಂಥ. ಇದು ಪಾಣಿನಿಯ ನಿಯಮಗಳನ್ನು ಅನುಸರಿಸಿ ರಚಿತವಾದ ಉದಾಹರಣೆಗಳನ್ನು ನೀಡಲೋಸುಗ ರಚಿತವಾದ ಕಾವ್ಯ; ಕೃಷ್ಣನ ಕಥೆಯನ್ನು ಹೇಳುವ ಮೂಲಕ ವ್ಯಾಕರಣಸೂತ್ರಗಳನ್ನು ನಿರೂಪಿಸುವುದು ಇದರ ವೈಶಿಷ್ಟ್ಯ. ಇದರಲ್ಲಿ ವಿವಿಧ ಛಂದಸ್ಸುಗಳಲ್ಲಿ ರಚಿತವಾದ ಇಪ್ಪತ್ತೆಂಟು ಸರ್ಗಗಳಿವೆ, ಒಟ್ಟು ೧೬೫೪ ಪದ್ಯಗಳಿವೆ. **"ಮೊದಲಿನ ಹತ್ತು ಸರ್ಗಗಳಲ್ಲಿ ಹತ್ತು ವಿಕಿರಣಪ್ರತ್ಯಯಗಳಿಗೆ ರೂಪಗಳನ್ನು, ಕೊನೆಯ ಹತ್ತು ಸರ್ಗಗಳಲ್ಲಿ ಹತ್ತು ಲಕಾರಗಳಿಗೆ ಸಂಬಂಧಿಸಿದ ರೂಪಗಳನ್ನು ಅಳವಡಿಸಿ"**ಕೊಳ್ಳಲಾಗಿದೆ. ಇದು ಕಾಲಗಳು ಮತ್ತು ಧಾತುರೂಪಗಳು (tenses and moods) ಇವುಗಳ ಬಗ್ಗೆ ಮುಖ್ಯವಾಗಿ ವಿವರಿಸುವ ಗ್ರಂಥವಾಗಿದೆ. **"ಭಟ್ಟಿಕಾವ್ಯದಂತೆ ವ್ಯಾಕರಣಾಂಶವನ್ನು ತಿಳಿಸುವುದೇ ಇದರ ಮುಖ್ಯ ಗುರಿ. ಕವಿಗೆ ವ್ಯಾಕರಣಶಾಸ್ತ್ರದಲ್ಲಿದ್ದ ಅದ್ಭುತವಾದ ಪಾಂಡಿತ್ಯದ ದ್ಯೋತಕ ಈ ಕೃತಿ."**

'ಅಲಂಕಾರಮಣಿದರ್ಪಣ'ವು ವೆಂಕಾಮಾತ್ಯನ ಮೇರುಕೃತಿ; ಅಲಂಕಾರಶಾಸ್ತ್ರಗ್ರಂಥ. ಕಾವ್ಯಮಾಮಾಂಸೆಯನ್ನು ಕುರಿತ ಸಮಗ್ರವಾದ ವಿವೇಚನೆ ಇದರಲ್ಲಿದೆ. ಕೃತಿಯಲ್ಲಿ ಆರು ಅಧ್ಯಾಯಗಳಿವೆ: (೧) ಕಾವ್ಯಸ್ವರೂಪನಿರೂಪಣ, (೨) ಧ್ವನಿಸ್ವರೂಪನಿರೂಪಣ, (೩) ಅಸಂಲಕ್ಷ್ಯಕ್ರಮವ್ಯಂಗ್ಯನಿರೂಪಣ, (೪) ಗುಣೀಭೂತವ್ಯಂಗ್ಯನಿರೂಪಣ, (೫) ಶಬ್ದಾಲಂಕಾರನಿರೂಪಣ ಮತ್ತು (೬) ಅರ್ಥಾಲಂಕಾರನಿರೂಪಣ. ಇವುಗಳ ಮೂಲಕ ಕಾವ್ಯಮೀಮಾಂಸೆಯ ಪ್ರಮುಖಾಂಶಗಳನ್ನು ಕೃತಿಯು ಸಮಗ್ರವಾಗಿ ವಿವೇಚಿಸುತ್ತದೆ. ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ ಬರುವ **"ರಸೈಃ ಶೃಂಗಾರ ಕಾರುಣ್ಯ ಹಾಸ್ಯರೌದ್ರಭಯಾನಕೈಃ। ವೀರಾದಿಭಿಶ್ಚ ಸಂಯುಕ್ತಂ ಕಾವ್ಯಮೇತದಗಾಯತ"** ಎಂಬ ಮಾತನ್ನು ಆಧರಿಸಿ ಕಾವ್ಯದಲ್ಲಿ ರಸವೇ ಪ್ರಧಾನವೆಂದೂ, ಕಥಾವಸ್ತುವಾಗಲೀ ಲಕ್ಷಣಗಳಾಗಲೀ ಅಲ್ಲವೆಂದೂ, ಅದೇ ಕಾವ್ಯದ ಸೊಬಗನ್ನು ಹೆಚ್ಚಿಸುವ ಅಂಶವೆಂದೂ ವೆಂಕಪ್ಪಯ್ಯನು ಪ್ರತಿಪಾದಿಸುತ್ತಾನೆ. ಕಾವ್ಯರಚನೆಗೆ ಆವಶ್ಯಕವಾದುದು ಶಕ್ತಿ, ನಿಪುಣತೆ ಮತ್ತು ಅಭ್ಯಾಸಗಳೆಂಬ ಹಿಂದಿನವರ ಅಭಿಮತವನ್ನು ಈತನೂ ಒಪ್ಪುತ್ತಾನೆಯಾದರೂ, **'ಅಭ್ಯಾಸ'** ಎಂಬುದಕ್ಕೆ ತನ್ನದೇ ಅರ್ಥವನ್ನು ನೀಡುತ್ತಾನೆ. ರಾಜಶೇಖರನ ಪ್ರಕಾರ ಶಕ್ತಿ ಎಂಬುದಕ್ಕೆ ಕಾವ್ಯರಚನಾಸಾಮರ್ಥ್ಯ ಎಂಬ ಅರ್ಥವಿದ್ದರೆ, ಈ ಲೇಖಕನು ಆ ಶಕ್ತಿಯನ್ನು ಜಗತ್‌ಸ್ವರೂಪ ಮತ್ತು ಕೆಲವು ಶಾಸ್ತ್ರಗಳ ತಿಳಿವಳಿಕೆಯ ಮೂಲಕ ಗಳಿಸಿಕೊಳ್ಳಬಹುದು ಎನ್ನುತ್ತಾನೆ

ಮೊದಲನೇ ಅಧ್ಯಾಯದಲ್ಲಿ ಕಾವ್ಯದ ಲಕ್ಷಣ, ಉದ್ದೇಶ ಮತ್ತು ಕಾವ್ಯಮೂಲವನ್ನು ಕುರಿತು ವಿವೇಚಿಸಲಾಗಿದೆ; ಜೊತೆಗೆ ಕಾವ್ಯಸ್ವರೂಪ, ಅಲಂಕಾರಕ್ಕೆ ಅಂಗಾಂಗಿಸಂಬಂಧ, ರಸಕ್ಕೆ ವೇದಮೂಲಕ ಪ್ರಾಮಾಣ್ಯ, ವೃತ್ತಿ, ರೀತಿಗಳ ಲಕ್ಷಣ ಹಾಗೂ ಶಬ್ದವ್ಯಾಪಾರಗಳನ್ನು ಚರ್ಚಿಸುತ್ತಾನೆ. ಕಾವ್ಯಲಕ್ಷಣವನ್ನು ಕುರಿತ ಹಿಂದಿನವರ ಅಭಿಪ್ರಾಯಗಳನ್ನು ವಿವರವಾಗಿ ಚರ್ಚಿಸುವುದಲ್ಲದೆ, ಅವುಗಳ ಕೊರತೆಯನ್ನು ನಿರೂಪಿಸಿ, ಕೊನೆಗೆ **"ಕವಿಕಲ್ಪಿತಾನುಪೂರ್ವೀ**

ವಿಶಿಷ್ಟಸರಸಶಬ್ದಾರ್ಥೋಯತ್ವಂ ಕಾವ್ಯತ್ವಂ" ಎಂಬ ತನ್ನದೇ ಲಕ್ಷಣವನ್ನು ನೀಡುತ್ತಾನೆ. ಗುಣ, ಅಲಂಕಾರ, ರೀತಿ, ವೃತ್ತಿ, ಶಯ್ಯೆ ಮತ್ತು ಪಾಕಗಳ ನಡುವಣ ವ್ಯತ್ಯಾಸಗಳನ್ನು ವಿವರಿಸಿ, ಅವುಗಳು ರಸದೊಡನೆ ಹೊಂದಿರುವ ಸಂಬಂಧದ ಸ್ವರೂಪವನ್ನು ವಿವರಿಸುತ್ತಾನೆ. ಎರಡನೇ ಅಧ್ಯಾಯವು 'ಧ್ವನಿ'ಯ ವೈವಿಧ್ಯವನ್ನು ಕುರಿತು ವಿವೇಚಿಸುತ್ತದೆ. ಹಿಂದಿನವರ ಧ್ವನಿವರ್ಗೀಕರಣವನ್ನು ಹೇಳಿ, ಶುದ್ಧಧ್ವನಿಯ ಐವತ್ತೊಂದು ಪ್ರಭೇದಗಳನ್ನು ಹೆಸರಿಸಿ, ಉಪಮಾಧ್ವನಿ, ವಸ್ತುಧ್ವನಿ, ಅಲಂಕಾರಧ್ವನಿ ಮುಂತಾದ ಎಲ್ಲ ಬಗೆಯ ಧ್ವನಿಗಳನ್ನು ಸೋದಾಹರಣವಾಗಿ ವಿವರಿಸುತ್ತದೆ. ಮೂರನೇ ಅಧ್ಯಾಯವು ರಸ, ಸ್ಥಾಯಿಭಾವ, ವಿಭಾವ, ಅನುಭಾವ, ಸಾತ್ವಿಕಭಾವ ಮತ್ತು ವ್ಯಭಿಚಾರೀಭಾವಗಳೆಂಬ ರಸಪರಿಕರಗಳ ಲಕ್ಷಣವನ್ನು ವಿವರಿಸುತ್ತದೆ. ರಸಸಂಖ್ಯೆಯ ಬಗ್ಗೆ ದೀರ್ಘ ಚರ್ಚೆಯಿದೆ; ಜೊತೆಗೆ ರಸಸ್ವರೂಪದ ಬಗ್ಗೆ ಹಿಂದಿನವರ ಅಭಿಪ್ರಾಯದ ಹಿನ್ನೆಲೆಯಲ್ಲಿ ಇಲ್ಲಿ ಲೇಖಕನು ವಿವೇಚನೆ ನಡೆಸುತ್ತಾನೆ. ಶಾಂತವೂ ಒಂದು ರಸವೆಂಬ ಅಭಿಪ್ರಾಯವನ್ನು ಈತನು ತಳೆಯುತ್ತಾನೆ. ಶೃಂಗಾರರಸಸಂಬಂಧಿಯಾಗಿ ಅನೇಕ ಬಗೆಯ ಕಾಮಾವಸ್ಥೆಗಳನ್ನು ಈ ಅಧ್ಯಾಯವು ಚರ್ಚಿಸುತ್ತದೆ. ವಿವಿಧ ನಾಯಕ–ನಾಯಿಕಾ ಪ್ರಭೇದಗಳ ಬಗೆಗಿನ ವಿವೇಚನೆಯೂ ಇಲ್ಲಿದೆ. ಗುಣೀಭೂತವ್ಯಂಗ್ಯಕ್ಕೆ ಸಂಬಂಧಿಸಿದ ನಾಲ್ಕನೆಯ ಅಧ್ಯಾಯವು ಅದರ ಎಂಟು ಪ್ರಭೇದಗಳಾದ ಅನೂಢ, ಅಪರಾಂಗ, ವಾಚ್ಯಸಿದ್ಧ್ಯಂಗ, ಅವಿವಕ್ಷಿತವಾಚ್ಯ, ವ್ಯಂಗ್ಯಪ್ರಾಧಾನ್ಯ, ಸಂದಿಗ್ಧಪ್ರಾಧಾನ್ಯ, ವ್ಯಂಗ್ಯವಾಚ್ಯಸಮಪ್ರಾಧಾನ್ಯ ಮತ್ತು ಸ್ವರಭೋಧ್ಯತ್ವಗಳನ್ನು ಉದಾಹರಣೆಗಳೊಂದಿಗೆ ವಿವರಿಸುತ್ತದೆ. ಐದನೆಯ ಅಧ್ಯಾಯವು ಶಬ್ದಾಲಂಕಾರಗಳಿಗೆ ಮೀಸಲಾದುದು; ಇದರಲ್ಲಿ ಅಲಂಕಾರ ಶಬ್ದದ ವಿಶ್ಲೇಷಣೆ, ಅದರ ಲಕ್ಷಣಗಳು ಮುಂತಾದ ಅಂಶಗಳನ್ನು ಕುರಿತು ಹೇಳುತ್ತದೆ. ಅಲಂಕಾರಗಳನ್ನು ಶಬ್ದಗತ ಮತ್ತು ಅರ್ಥಗತ ಎಂದು ವಿಭಾಗ ಮಾಡಿ ಶಬ್ದಾಲಂಕಾರಪ್ರಭೇದಗಳನ್ನು ವಿವರಿಸಲಾಗಿದೆ. ಚಿತ್ರಾಲಂಕಾರದ ವಿವಿಧ ಬಂಧಗಳ ಸ್ವರೂಪವನ್ನು ವಿವರಿಸಿದೆ. ಆರನೆಯ ಅಧ್ಯಾಯದಲ್ಲಿ ಛೇಕಾನುಪ್ರಾಸ, ವೃತ್ಯನುಪ್ರಾಸ, ಲಾಟಾನುಪ್ರಾಸ, ಯಮಕ ಮತ್ತು ಚಿತ್ರಾಲಂಕಾರಗಳನ್ನು ಮತ್ತು ನೂರೈದು ಅರ್ಥಾಲಂಕಾರಗಳನ್ನು ಲಕ್ಷಣಸಹಿತವಾಗಿ ವಿವರಿಸಲಾಗಿದೆ. ಹಿಂದಿನ ಲಾಕ್ಷಣಿಕರು ಅಲಂಕಾರಗಳ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಒರೆಗೆ ಹಚ್ಚಿ ನೋಡುವುದು ಇಲ್ಲಿನ ವೈಶಿಷ್ಟ್ಯ. ಕಾವ್ಯಮೀಮಾಂಸೆಗೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಕುರಿತಂತೆ ಆರಂಭದಿಂದ ತನ್ನವರೆಗಿನ ಅಭಿಪ್ರಾಯಗಳನ್ನು ಮಂಡಿಸುವುದರ ಜೊತೆಗೆ, ಅವುಗಳನ್ನು ತನ್ನ ವ್ಯಾಪಕ ಶಾಸ್ತ್ರಜ್ಞಾನದ ಬೆಳಕಿನಲ್ಲಿ ವಿವೇಚಿಸಿ, ವಿಶದೀಕರಿಸುವುದರಲ್ಲಿ ವೆಂಕಾಮಾತ್ಯನ ವೈಶಿಷ್ಟ್ಯವನ್ನು ಕಾಣಬಹುದು. ಅಲಂಕಾರಶಾಸ್ತ್ರದ ಸಮಗ್ರವಾಗಿ ಪರಿಚಯವನ್ನು ಹೊಂದಲು ಈ ಗ್ರಂಥವು ಅನುಕೂಲಕರವಾಗಿದೆ.

ಹೀಗೆ ಪ್ರಧಾನ ವೆಂಕಪ್ಪಯ್ಯ ಅಥವಾ ವೆಂಕಾಮಾತ್ಯನು ಗದ್ಯ, ಕಾವ್ಯ, ರೂಪಕರಚನೆ, ವ್ಯಾಕರಣ ಮತ್ತು ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳು ಮತ್ತು ಶತಕಗಳ ಮೂಲಕ ಹದಿನೆಂಟನೆಯ ಶತಮಾನದ ಸಂಸ್ಕೃತದ ಅತ್ಯಂತ ಪ್ರಮುಖ ಲೇಖಕನೆಂದು ಪ್ರಸಿದ್ಧನಾಗಿದ್ದಾನೆ. ಇಮ್ಮಡಿ ಶಿವಬಸವಸ್ವಾಮಿಗಳು ತಮ್ಮ ಕೃತಿಯಲ್ಲಿ ಈತನ ಕೃತಿಗಳನ್ನು ಸಮಗ್ರವಾಗಿ ವಿವೇಚಿಸಿ ಕೊನೆಯಲ್ಲಿ, **"ಒಟ್ಟಿನಲ್ಲಿ ವೆಂಕಾಮಾತ್ಯ ಹದಿನೆಂಟನೆಯ ಶತಮಾನದ ಬಹುಮುಖ ಪ್ರತಿಭೆಯುಳ್ಳ ಕವಿ ಮತ್ತು ಶಾಸ್ತ್ರಜ್ಞ, ಈತನು ಸಂಸ್ಕೃತ ವಾಙ್ಮಯದ ಬಹುತೇಕ ಪ್ರಕಾರಗಳ ಕೃತಿಗಳನ್ನು ರಚಿಸಿ ಅದನ್ನು ಶ್ರೀಮಂತಗೊಳಿಸಿದ್ದಾನೆ. ರಾಜಕಾರಣ ಮತ್ತು ಆಡಳಿತಗಾರನಾಗಿ ಸಾಹಿತ್ಯಕ್ಕೇ ತನ್ನನ್ನು**

ಸಂಪೂರ್ಣವಾಗಿ ಅರ್ಜಿಸಿಕೊಳ್ಳುವ ಅವಕಾಶವಿಲ್ಲದಿದ್ದಾಗ್ಯೂ ಇಷ್ಟೊಂದು ವೈವಿಧ್ಯಮಯವಾದ ಕೃತಿಗಳನ್ನು ರಚಿಸಿರುವುದು ಒಂದು ವೈಶಿಷ್ಟ್ಯವಾಗಿದೆ ಹೀಗೆ ವೆಂಕಾಮಾತ್ಯನು ಹದಿನೆಂಟನೆಯ ಶತಮಾನದಲ್ಲಿ ಅಪೂರ್ವವಾದ ಮತ್ತು ವೈವಿಧ್ಯಪೂರ್ಣವಾದ ಕೊಡುಗೆಗಳನ್ನು ಕೊಟ್ಟ ಉಭಯಭಾಷಾ ಕವಿಯಾಗಿ ಕಂಗೊಳಿಸುತ್ತಾನೆ" ಎಂದು ಹೇಳುತ್ತಾರೆ. ಬಹು ಹಿಂದೆಯೇ ಈತನ ಬಗ್ಗೆ ಸಾಕಷ್ಟು ದೀರ್ಘವಾಗಿ ಪರಿಚಯ ಮಾಡಿಕೊಟ್ಟ ಎಂಪಿಎಲ್ ಶಾಸ್ತ್ರಿಗಳು ತಮ್ಮ ಲೇಖನದ ಕೊನೆಯಲ್ಲಿ, "Venkappaiah was a man of varied parts. It is no easy distinction for a man to be at once, a successful minister, a warrior of considerable enterprise, a man of great culture and an erudite scholar. Venkappaiah had this unique combination of qualities, and, if for no other reason at least for this his works deserve our respectful attention. Indeed, his works may not represent the best in our literature, but they have the impress of quality and of dignified ease, and they are pleasant reading." ಎಂದು ಮುಕ್ತಕಂಠದಿಂದ ಶ್ಲಾಘಿಸುತ್ತಾರೆ.

ಕನ್ನಡದಲ್ಲಿ

ವೆಂಕಪ್ಪಯ್ಯನ ಸಂಸ್ಕೃತ ಕೃತಿಗಳ ಬಗ್ಗೆ ವ್ಯಾಪಕವಾಗಿ ಅಧ್ಯಯನ ನಡೆದಿದೆ, ಹಾಗಾಗಿ ಸಂಸ್ಕೃತ ಸಾಹಿತ್ಯವಲಯದಲ್ಲಿ ಆತನಿಗೆ ದೊಡ್ಡ ಹೆಸರು ಬಂದಿದೆ; ಆದರೆ ಕನ್ನಡದಲ್ಲಿ ಮಾತ್ರ ಆತನ ಬಗ್ಗೆ ಆಗಿರುವುದು ಏನೇನೂ ಅಲ್ಲ. ರಾ. ನರಸಿಂಹಾಚಾರ್ಯರು ೧೯೨೯ ರಲ್ಲಿ ಪ್ರಕಟಿಸಿದ **'ಕರ್ಣಾಟಕ ಕವಿಚರಿತೆ'**ಯ ಮೂರನೇ ಭಾಗದಲ್ಲಿ ನೀಡಿರುವ ನಾಲ್ಕು ಪುಟಗಳ ಮಾಹಿತಿಯನ್ನು, ಮತ್ತು ವಿಸೀ ಅವರು ೧೯೫೫ ರಲ್ಲಿ **'ಅಯೋಧ್ಯಾಕಾಂಡ'**ದ ಬಗ್ಗೆ ಮತ್ತು ೧೯೫೭ ರಲ್ಲಿ **'ಅಯೋಧ್ಯಾಕಾಂಡ'** ಮತ್ತು **'ಕಿಷ್ಕಿಂಧಾಕಾಂಡ'**ಗಳ ಬಗೆಗೆ **'ದ ಹಿಂದೂ'** ಪತ್ರಿಕೆಗಾಗಿ ಇಂಗ್ಲಿಷ್‌ನಲ್ಲಿ ರಚಿಸಿರುವ ಕಿರು ರಿವ್ಯೂಗಳನ್ನು ಬಿಟ್ಟರೆ, ಬೇರಾವ ಮಾಹಿತಿಯೂ ದೊರೆಯುವುದಿಲ್ಲ. ಇದಕ್ಕೆ ಕಾರಣ ಆತ ಕನ್ನಡ ಕೃತಿಗಳು ಪ್ರಕಟವಾಗದಿರುವುದು ಮತ್ತು ಆತನ ಕನ್ನಡ ಕೃತಿಗಳನ್ನು ಯಾವ ಪಂಡಿತನೂ ಹಸ್ತಪ್ರತಿಯಲ್ಲಿಯೇ ಓದುವ ಆಸಕ್ತಿಯನ್ನು ತೋರಿಸದಿದ್ದುದು. ಜೊತೆಗೆ ಆತನ ಹೆಸರು ಮೈಸೂರು ಸಂಸ್ಥಾನದ ರಾಜಕೀಯ ಇತಿಹಾಸದಲ್ಲಿ ಮಹತ್ವದ್ದಾಗಿದ್ದು, ಆತನ ಕನ್ನಡ ಸಾಹಿತ್ಯರಚನೆಯನ್ನು ಮಂಕುಗೊಳಿಸಿದ್ದರೂ ಇರಬಹುದು.

ರಾ. ನರಸಿಂಹಾಚಾರ್ಯರು ತಮ್ಮ **'ಕರ್ಣಾಟಕ ಕವಿಚರಿತೆ'**ಯ ಮೂರನೇ ಭಾಗದಲ್ಲಿ ವೆಂಕಾಮಾತ್ಯನು ಹೈದರಾಲಿಯ ಕಾಲದಲ್ಲಿ ಪ್ರಧಾನನಾಗಿದ್ದ ವಿಷಯವನ್ನು ತಿಳಿಸಿ, ಆತನ ಬಗ್ಗೆ ಸಂಸ್ಕೃತ ಕೃತಿಗಳಲ್ಲಿ ಇರುವ ಕೆಲವು ಮಾಹಿತಿಗಳನ್ನು ನೀಡಿ, ಅವನು ತನ್ನ ಕೃತಿಗಳಲ್ಲಿ ಸಂಸ್ಕೃತ ಕವಿಗಳಾದ ಭಾಸ, ಬಾಣ, ಮಯೂರ, ದಂಡಿ ಮತ್ತು ಕಾಳಿದಾಸರನ್ನು ಹಾಗೂ ಕನ್ನಡದ ಹರೀಶ್ವರ ಮತ್ತು ರುದ್ರಭಟ್ಟರನ್ನು ನೆನೆಸಿಕೊಂಡಿರುವ ವಿಷಯವನ್ನು ತಿಳಿಸಿ, ಅವನ ಮೂರು ಕನ್ನಡ ಕೃತಿಗಳನ್ನು ಹೆಸರಿಸಿ, ಎರಡರ ಪರಿಚಯ ಮಾಡುತ್ತಾರೆ: ಅವರು ಹೇಳುವ ವೆಂಕಾಮಾತ್ಯನ ಕೃತಿಗಳೆಂದರೆ **'ಹನುಮದ್ವಿಲಾಸ', 'ರಮಾಭ್ಯುದಯ'** ಮತ್ತು **'ರಾಮಾಯಣ'**. "ಹನುಮದ್ವಿಲಾಸವು ಷಟ್ಪದಿಯಲ್ಲಿ ಬರೆದಿರುವಂತೆ ತೋರುತ್ತದೆ" ಎಂದು ಹೇಳಿರುವುದರಿಂದ ಅವರು ಆ ಕಾವ್ಯವನ್ನು ನೋಡಿರಲಿಲ್ಲ; **'ರಮಾಭ್ಯುದಯ'** ಎಂಬ ಚಂಪೂ ಕಾವ್ಯದಲ್ಲಿ ಲಕ್ಷ್ಮೀದೇವಿಯ 'ಅವತಾರಾದಿ ವಿಷಯಗಳು ಹೇಳಿದೆ' ಎಂದು ಹೇಳಿದ್ದರೂ, ಅದರ ಗಾತ್ರ-ವಿಸ್ತಾರಗಳ ಬಗ್ಗೆ ಏನನ್ನೂ ಹೇಳದೆ, ಮೂರು ವೃತ್ತ ಪದ್ಯಗಳನ್ನು **'ತೆಗೆದು ಬರೆ'**ದಿದ್ದಾರೆ.

ಆದರೆ ವೆಂಕಾಮಾತ್ಯನ ಮಹತ್ವದ ಕೃತಿ ರಾಮಾಯಣದ ಬಗ್ಗೆ ಅನೇಕ ವಿವರಗಳಿವೆ. ಈ ಕೃತಿಯ ಬಗ್ಗೆ ಅವರು – ಅದು ವಾರ್ಧಕ ಷಟ್ಪದಿಯ ಕಾವ್ಯ ಮತ್ತು ೧೯೫ ಸಂಧಿಗಳನ್ನೂ ೯೮೬೫ ಪದ್ಯಗಳನ್ನೂ ಒಳಗೊಂಡಿದೆ – ಎಂಬ ವಿಷಯಗಳನ್ನು ಹೇಳಿ, ಕಾವ್ಯದ ಆರು ಪದ್ಯಗಳನ್ನು 'ತೆಗೆದು ಬರೆದಿ'ದ್ದಾರೆ; ಅಲ್ಲದೆ **"ಇವನ ಬಂಧವು ಪ್ರೌಢವಾಗಿದೆ"** ಎಂಬ ಮಾತನ್ನು ಹೇಳುತ್ತಾರೆ.

ಸಂಸ್ಕೃತ ಪಂಡಿತವಲಯದಲ್ಲಿನ ವಿದ್ವಾಂಸರ ಲೇಖನಗಳಲ್ಲಿ ವೆಂಕಾಮಾತ್ಯನ **'ಕರ್ಣಾಟ ರಾಮಾಯಣ'** ಬಗ್ಗೆ ಉಲ್ಲೇಖಗಳು ಬರುತ್ತವೆ. ಮದರಾಸು ಸರ್ಕಾರದ ಓರಿಯಂಟಲ್ ಲೈಬ್ರರಿ ಪ್ರಕಟಿಸಿರುವ ಐದು ಸಂಪುಟಗಳಲ್ಲಿಯೂ **'ಶ್ರೀಮದ್ರಾಮಾಯಣಂ'** ಎಂದೇ ಹೇಳಲಾಗಿದೆ. ಆದರೆ ಕವಿಯೇ ಆ ಕಾವ್ಯಕ್ಕೆ ನೀಡಿರುವ ಹೆಸರು 'ಶ್ರೀರಾಮಕಥಾಮೃತ' ಎಂದು ಕಾಣುತ್ತದೆ. ಮದರಾಸು ಓರಿಯಂಟಲ್ ಲೈಬ್ರರಿಯ ಓಲೆಗರಿಯ ಹಸ್ತಪ್ರತಿ ಮತ್ತು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿನ ಕಾಗದದ ಹಸ್ತಪ್ರತಿಗಳಲ್ಲಿ **'ಶ್ರೀರಾಮಕಥಾಮೃತ'** ಎಂದೇ ಇದೆ; ಹಾಗೂ ಆ ಎರಡೂ ಸಂಸ್ಥೆಗಳ ಸೂಚಿಗಳಲ್ಲಿ ಹಾಗೆಯೇ ಉಲ್ಲೇಖಗೊಂಡಿದೆ (ಆದ್ದರಿಂದ ಪ್ರಸ್ತುತ ಗ್ರಂಥದಲ್ಲಿ ಅದೇ ಹೆಸರನ್ನು ಇರಿಸಿಕೊಳ್ಳಲಾಗಿದೆ). **'ಕವಿಚರಿತೆ'**ಯಲ್ಲಿ ಇದರ ಪದ್ಯಸಂಖ್ಯೆಯನ್ನು ೯೮೬೫ ಎಂದು ಹೇಳಿದೆ; ಆದರೆ ಮೈಸೂರಿನ ಕಾಗದದ ಹಸ್ತಪ್ರತಿಯ ಕೊನೆಯಲ್ಲಿ, "ಬಾಲಕಾಂಡ ೧ ಕ್ಕಂ ಸಂಧಿ ೨೪ ಕ್ಕಂ ಪದನು ೧೪೨೮, ಅಯೋಧ್ಯಾಕಾಂಡ ೧ ಕ್ಕಂ ಸಂಧಿ ೩೬ ಕ್ಕಂ ಪದನು ೧೬೬೪, ಅರಣ್ಯಕಾಂಡ ೧ ಕ್ಕಂ ಸಂಧಿ ೨೨ ಕ್ಕಂ ಪದನು ೧೦೨೦ ಕ್ಕಂ (ಆದರೆ ಹಸ್ತಪ್ರತಿಯಲ್ಲಿರುವುದು – ಹನ್ನೊಂದನೆಯ ಸಂಧಿಯ ೩೦ ನೇ ಪದ್ಯದವರೆಗಿನ – ೪೪೭ ಪದ್ಯಗಳು ಮಾತ್ರ; ಉಳಿದ ೫೭೩ ಪದ್ಯಗಳು ಇಲ್ಲ) ಕಿಷ್ಕಿಂಧಾಕಾಂಡ ೧ ಕ್ಕಂ ಸಂಧಿ ೨೦ ಕ್ಕಂ ಪದನು ೯೭೦ ಕ್ಕಂ ಸುಂದರಕಾಂಡ ೧ ಕ್ಕಂ ಸಂಧಿ ೨೨ ಕ್ಕಂ ಪದನು ೧೦೭೦, ಯುದ್ಧಕಾಂಡ ಸಂಧಿ ೭೧ ಕ್ಕಂ ಪದನು ೩೬೧೩, ಸಂಧಿ ೧೯೫ ಕ್ಕಂ ಪದನು ೯೭೬೫ ಕ್ಕಂ ಮಂಗಳಮಹಾಶ್ರೀ" ಎಂದು ಹೇಳಿದೆ. ಒಟ್ಟು ಪದ್ಯಸಂಖ್ಯೆಯನ್ನು ಹೇಳುವಾಗ ೯೮೬೫ ಎಂದು ಬರೆದಿದ್ದು ೮ ನ್ನು ೭ ಎಂದು ತಿದ್ದಿದೆ, ೯೭೬೫ ಎಂಬುದೇ ಸರಿಯಾದ ಒಟ್ಟು ಸಂಖ್ಯೆ; ಆದರೆ ನರಸಿಂಹಾಚಾರ್ಯರು ತಿದ್ದಿದ ಅಂಕಿಯನ್ನು ೮ ಎಂದು ಗ್ರಹಿಸಿದ್ದಾರೆ. ಅಲ್ಲದೆ ಅವರು ಹೇಳಿರುವಂತೆ ಗ್ರಂಥದ ಮೊದಲ ಕೆಲವು ಪುಟಗಳು ಇಲ್ಲ. ಹಾಗಾಗಿ ನರಸಿಂಹಾಚಾರ್ಯರು ನೋಡಿದ್ದು ಇದೇ ಕಾಗದದ ಪ್ರತಿಯನ್ನು ಎಂಬುದು ಸ್ಪಷ್ಟ. ಆದರೆ ಮದರಾಸಿನ ವಿದ್ವಾಂಸರು ಮೈಸೂರಿನ ಕಾಗದದ ಪ್ರತಿಯು ಮದರಾಸಿನ ಓಲೆಪ್ರತಿಯ ಪ್ರತಿ ಎಂದು ಹೇಳುತ್ತಾರೆ. ಅಲ್ಲಿನ ಪ್ರತಿಯಲ್ಲಿಯೂ ಅರಣ್ಯಕಾಂಡದ ಹನ್ನೊಂದನೆಯ ಸಂಧಿಯ ಮೂವತ್ತನೇ ಪದ್ಯದ ಬಳಿಕ – ಆ ಸಂಧಿಯ ಉಳಿದ ಪದ್ಯಗಳು ಹಾಗೂ ಮುಂದಿನ ಹನ್ನೊಂದು ಸಂಧಿಗಳ ೫೭೩ ಪದ್ಯಗಳೇ ಇಲ್ಲ, (ಅಂದರೆ, ಅರಣ್ಯಕಾಂಡದ ಅರ್ಧಭಾಗವೇ ಇಲ್ಲ) ಅವರು ಮೈಸೂರು ಪ್ರತಿಯನ್ನು ತರಿಸಿಕೊಂಡು ನೋಡಿದಾಗ, ಅದರಲ್ಲಿಯೂ ಈ ಭಾಗ ಇರದೆ, ಕಥಾಪೂರಣಕ್ಕೆ **'ತೊರವೆ ರಾಮಾಯಣ'**ದ ಆ ಭಾಗಗಳ ಪದ್ಯಗಳನ್ನು ಸೇರಿಸಲಾಗಿದೆಯೆಂದು ಹೇಳುತ್ತಾರೆ.

(ಈ ಭಾಗವನ್ನು ಲೇಖನದ ಒಡಲಲ್ಲಿಯೇ ಉಲ್ಲೇಖಿಸಿರುವ ವಿವಿಧ ವಿದ್ವಾಂಸರ ಬರಹಗಳನ್ನು ಆಧರಿಸಿ ಬರೆದುದು; ಆ ಎಲ್ಲ ಲೇಖಕರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು).

ಶ್ರೀರಾಮಕಥಾಮೃತ

ಇದು ಕನ್ನಡದ ಅತ್ಯುತ್ತಮ ಕಾವ್ಯಗಳ ಪಂಕ್ತಿಗೆ ಸೇರದಿದ್ದರೂ ಹಲವಾರು ವೈಶಿಷ್ಟ್ಯಗಳಿಂದ ಕೂಡಿದೆ. ವಿಸೀ ಅವರು ಹೇಳುವಂತೆ, "ಆಧುನಿಕ ದೃಷ್ಟಿಯಿಂದ ಬೆಲೆಕಟ್ಟುವಾಗ ಈ ಕಾವ್ಯ ಅಂಥ ಮಹಾಕೃತಿಯಲ್ಲದಿದ್ದರೂ ಕನ್ನಡದಲ್ಲಿರುವ ರಾಮಾಯಣ ಕೃತಿಗಳ ವಿರಳ ಸಂಖ್ಯೆಯ ಗ್ರಂಥಗಳಿಗೆ ಒಂದು ಹೊಸ ಕೃತಿಯನ್ನು ಸೇರಿಸುತ್ತದೆ." ಅಲ್ಲದೆ ಗಾತ್ರದ ದೃಷ್ಟಿಯಿಂದ ಇದಕ್ಕೊಂದು ವಿಶಿಷ್ಟ ಸ್ಥಾನವಿದೆ. ಒಟ್ಟು ೯೭೬೫ ಪದ್ಯಗಳು ಮತ್ತು ಸೂಚನಾ ಪದ್ಯಗಳನ್ನು ಒಟ್ಟುಗೂಡಿಸಿದರೆ ಇದರ ಗಾತ್ರವು ಸುಮಾರು ಅರುವತ್ತು ಸಾವಿರ ಪಂಕ್ತಿಗಳ ವಿಸ್ತಾರವುಳ್ಳದ್ದು. ರತ್ನಾಕರ ವರ್ಣಿಯ **'ಭರತೇಶ ವೈಭವ'**ವು ಹತ್ತು ಸಾವಿರ ಪದ್ಯಗಳನ್ನು ಹೊಂದಿದ್ದರೂ ಪದ್ಯದ ಗಾತ್ರ ನಾಲ್ಕು ಸಾಲುಗಳು. ಚಾಟು ವಿಠಲನಾಥನದೆಂದು ಹೇಳುವ **'ಕನ್ನಡ ಭಾಗವತ'**ವು ಸುಮಾರು ಹನ್ನೆರಡು ಸಾವಿರ ಪದ್ಯಗಳನ್ನು ಒಳಗೊಂಡಿದ್ದರೂ, ಅದನ್ನು ಐದು ಮಂದಿ ರಚಿಸಿದ್ದಾರೆಂದು ಬೆಟಗೇರಿ ಕೃಷ್ಣಶರ್ಮರು ಅಭಿಪ್ರಾಯಪಡುತ್ತಾರೆ; ಇದರ ರಚನೆಯಲ್ಲಿ ಬೇರೆ ಬೇರೆ ಕವಿಗಳ ಪಾತ್ರವಿರುವ ಬಗ್ಗೆ ಆಧಾರಗಳಿವೆಯೆಂದು ರಂ.ಶ್ರೀ. ಮುಗಳಿಯವರೂ ಅಭಿಪ್ರಾಯಪಡುತ್ತಾರೆ; ಅಲ್ಲದೆ ಇದು ಅನುವಾದ ಕೃತಿ. ಹೀಗಾಗಿ ಸ್ವಂತದ ಕನ್ನಡ ಕೃತಿಗಳಲ್ಲಿ **'ಶ್ರೀರಾಮಕಥಾಮೃತ'**ದಷ್ಟು ದೀರ್ಘವಾದ ಕಾವ್ಯ ಬೇರೊಂದಿಲ್ಲ. ಗಾತ್ರವೇ ಶ್ರೇಷ್ಠತೆಯ ಮಾನದಂಡವಲ್ಲ ಎಂಬುದು ನಿಜ, ಆದರೆ ಇಷ್ಟು ದೀರ್ಘ ಕೃತಿಯನ್ನು ಬರೆಯುವಲ್ಲಿ ಕವಿ ವಹಿಸಿರಬಹುದಾದ ಶ್ರಮ, ವ್ಯಯಿಸಿರಬಹುದಾದ ಕಾಲ, ಮತ್ತು ರಚನೆಗೆ ಬೇಕಾದ ಚಿತ್ತೈಕಾಗ್ರತೆ ಹಾಗೂ ಬೌದ್ಧಿಕ ಪರಿಶ್ರಮ – ಇವುಗಳನ್ನು ಗೌರವಿಸಬೇಕು. ಪ್ರಧಾನ ವೆಂಕಪ್ಪಯ್ಯನ ಸಂಸ್ಕೃತ ಕೃತಿಗಳೆಲ್ಲವನ್ನೂ ಒಟ್ಟುಗೂಡಿಸಿದರೂ 'ಶ್ರೀರಾಮಕಥಾಮೃತ'ದ ಗಾತ್ರಕ್ಕೆ ಪ್ರಾಯಶಃ ಸಾಟಿಯಾಗಲಾರದು.

ವೆಂಕಪ್ಪಯ್ಯನು ಕಥಾಸರಣಿಯಲ್ಲಿ ವಾಲ್ಮೀಕಿಗೆ ಋಣಿಯಾಗಿದ್ದಾನೆ (ಎಲ್ಲ ರಾಮಾಯಣ ಕರ್ತೃಗಳೂ ಅವನಿಗೆ ಋಣಿಗಳು ತಾನೇ!), ಆದರೆ ಅವನದು ಅನುವಾದವಲ್ಲ, ಸ್ವತಂತ್ರ ನಿರೂಪಣೆ. ಸನ್ನಿವೇಶಗಳ ನಿರ್ವಹಣೆ, ಅಲ್ಲಿ ಕಾಣದ ಸನ್ನಿವೇಶಗಳನ್ನು ಸೇರಿಸಿರುವುದು, ವಿವಿಧೆಡೆಗಳಿಂದ ಸನ್ನಿವೇಶಗಳನ್ನು ತನ್ನ ಕಥಾಸರಣಿಯಲ್ಲಿ ಅಳವಡಿಸಿರುವುದು ಈ ಕವಿಯ ಸ್ವೋಪಜ್ಞತೆಗೆ ಸಾಕ್ಷಿಯಾಗಿದೆ. ವಾಲ್ಮೀಕಿ ರಾಮಾಯಣವೆಂದು ಹೇಳಲಾಗುವ ಕೃತಿಯಲ್ಲಿ – ತನ್ನ ವಿಷಯವೇ ಬರುವುದರಿಂದ ಬಾಲಕಾಂಡದ ಹಲವು ಭಾಗ ಹಾಗೂ ಉತ್ತರಕಾಂಡವು – ವಾಲ್ಮೀಕಿ ಕೃತವಲ್ಲವೆಂದು ಅನೇಕ ವಾಲ್ಮೀಕಿ ಪಂಡಿತರೇ ಅಭಿಪ್ರಾಯಪಡುತ್ತಾರೆ. ವೆಂಕಪ್ಪಯ್ಯನ ಈ ಕೃತಿರಚನೆಯಲ್ಲಿ **'ಅಧ್ಯಾತ್ಮ ರಾಮಾಯಣ'**, **'ಪದ್ಮಪುರಾಣ'**ಗಳಂತಹ ಕೃತಿಗಳ ಹಿನ್ನೆಲೆಯೂ ಕವಿಗೆ ಇದ್ದಿರಬೇಕೆಂದು ವಿಸೀ ಹೇಳುತ್ತಾರೆ. ಈ ಕೃತಿಯ ಬಾಲಕಾಂಡದಲ್ಲಿ, ಶ್ರೀರಾಮನ ಕತೆಯನ್ನು ಶಿವನು ಪಾರ್ವತಿಗೆ ಮೊದಲು ನಿರೂಪಿಸಿದನೆಂದೂ, ಅದನ್ನೇ ಆನಂತರ ಸೂತನು ತನ್ನ ಶೌನಕಾದಿ ಶಿಷ್ಯರಿಗೆ ಹೇಳಿದನೆಂದೂ

ಕಲ್ಪನೆಯಿದೆ; ಬೇರೆ ಬೇರೆ ಕಡೆಗಳಲ್ಲಿ ರಾಮಾವತಾರದ ಹಿನ್ನೆಲೆ-ಕಾರಣಗಳನ್ನು ಬೇರೆ ಬೇರೆಯಾಗಿ ಹೇಳಿರುವುದರಿಂದ ತಮಗಾಗಿರುವ ಗೊಂದಲವನ್ನು ಪರಿಹರಿಸಬೇಕೆಂದು **ಸೂತ** ಮುನಿಗಳನ್ನು ಶಿಷ್ಯರು ಬೇಡಿಕೊಂಡಾಗ ಶಿವನು ಪಾರ್ವತಿಗೆ ಹೇಳಿದ ರಾಮಕಥೆಯನ್ನು ತಾನು ನಿರೂಪಿಸುವುದಾಗಿ ಹೇಳಿ ಅವರು ಕಥನಕ್ಕೆ ತೊಡಗುತ್ತಾನೆ. ಇಲ್ಲಿ ಉಕ್ತವಾದ ರಚನೆಗಳೆಲ್ಲ ಕವಿಗೆ ನೇರ ಪರಿಚಯವಿದ್ದಿರಬೇಕು; ಅಲ್ಲದೆ ಈತನ ಸಂಸ್ಕೃತ ಕೃತಿಗಳನ್ನು ಗಮನಿಸಿದರೆ ಅವುಗಳಿಗೆ ಹಿನ್ನೆಲೆಯಾದ ಕೃತಿಗಳ ಪರಿಚಯದ ಜೊತೆಗೆ; ತನ್ನನ್ನು **'ಷಡ್ದರ್ಶಿನೀವಲ್ಲಭ'** ಎಂದು ಕರೆದುಕೊಳ್ಳುವುದರಿಂದಲೂ, ಈ ಕಾವ್ಯದಲ್ಲಿಯೇ **'ಸಾಂಖ್ಯ'**ದ ವಿವರಣೆಗೆ ಒಂದು ಸಂಧಿಯನ್ನೇ ವಿನಿಯೋಗಿಸಿರುವುದರಿಂದ ದರ್ಶನಗಳ ತಿಳಿವಳಿಕೆ; ಮತ್ತು ಈತನದೇ **'ಜಗನ್ನಾಥವಿಜಯ ಕಾವ್ಯ'** ಹಾಗೂ **'ಅಲಂಕಾರಮಣಿದರ್ಪಣ'**ಗಳನ್ನು ಗಮನಿಸಿದರೆ ವ್ಯಾಕರಣ ಅಲಂಕಾರಶಾಸ್ತ್ರ ಮುಂತಾದವುಗಳ ಬಗೆಗಿನ ಆತನ ಶಾಸ್ತ್ರಜ್ಞಾನ – ಇವುಗಳೆಲ್ಲದರಿಂದ ಅವನ ಓದು ತುಂಬ ಹರಹಾದುದೆಂಬುದು ಮನವರಿಕೆಯಾಗುತ್ತದೆ. ಅವೆಲ್ಲವುಗಳ ಪ್ರಭಾವದಿಂದ **'ಶ್ರೀರಾಮಕಥಾಮೃತ'**ವು ರೂಪುಗೊಂಡಿರುವುದರಲ್ಲಿ ಸಂಶಯವಿಲ್ಲ.

ಈತನದು ಮಿತವಾದ ಕಲ್ಪನಾಶಕ್ತಿಯೆಂಬುದನ್ನು ಒಪ್ಪಿಕೊಂಡರೂ, ಕೃತಿರಚನಾ ಸಾಮರ್ಥ್ಯ ಆಳವಾದುದು. ವಾರ್ಧಕ ಷಟ್ಪದಿಯನ್ನು ನಿರ್ವಹಿಸಿರುವ ರೀತಿಯು ಸಮರ್ಥವಾಗಿದೆ. ಇವನು ಮಹಾಪಂಡಿತನಾಗಿದ್ದುದರಿಂದ ವಿಸೀ ಅವರು ಹೇಳುವಂತೆ, "ವೆಂಕಾಮಾತ್ಯನಿಗೆ ರಾಮಾಯಣ ಕಥೆಯಲ್ಲಿರುವ ಎಲ್ಲ ದಾರಿಗಳೂ ಸಾಹಿತ್ಯಕವಾದ ತಿಳಿವಳಿಕೆಯೂ ತಂತ್ರವೂ ಚೆನ್ನಾಗಿ ಗೊತ್ತಿದೆ. ಸಂಸ್ಕೃತ ನಿಘಂಟು, ವ್ಯಾಕರಣಗಳ ವಿದ್ವದಂಶಗಳನ್ನೆಲ್ಲ ಬಳಸಿಕೊಂಡು ತನ್ನ ಸಮಾಸಗಳನ್ನೂ ಶಬ್ದರೂಪಗಳನ್ನೂ ಆತನು ಮಾಡಿಕೊಳ್ಳಬಲ್ಲ. ಅವನ ಶ್ಲೇಷೆಗಳೂ ಶಬ್ದಗಳ ನಾನಾರ್ಥಗಳೂ ಇವು ಆಧಾರ." ರಾಮಾಯಣವನ್ನು ರಚಿಸಿರುವ ಕವಿಗಳೆಲ್ಲ ವಾಲ್ಮೀಕಿಗೆ ಋಣಿಗಳೇ ಎಂದು ಹೇಳಿದೆವಲ್ಲ. ಆದ್ದರಿಂದಲೇ ನರಹರಿಯು ತನ್ನನ್ನು **'ಕುಮಾರ ವಾಲ್ಮೀಕಿ'** ಎಂದು ಕರೆದುಕೊಂಡಿದ್ದರೆ, ವೆಂಕಪ್ಪಯ್ಯನು ತನ್ನನ್ನು **'ಬಾಲವಾಲ್ಮೀಕಿ'** ಎಂದು ಕರೆದುಕೊಳ್ಳುತ್ತಾನೆ. ಅಲ್ಲದೆ ಕುಮಾರವ್ಯಾಸನು ತನ್ನ ಕಾವ್ಯದ ಬಗ್ಗೆ "ಅರಸುಗಳಿಗಿದು ವೀರ ದ್ವಿಜರಿಗೆ ಪರಮವೇದದ ಸಾರ .... "ಎಂದು ಮುಂತಾಗಿ ಹೇಳಿಕೊಳ್ಳುವ ರೀತಿಯಲ್ಲಿಯೇ ಈ ಕವಿಯೂ ತನ್ನ "ಈ ಕಾವ್ಯವು ಯೋಗಿಗಳ ಆಭರಣ, ವಿರಾಗಿಗಳ ಒಡವೆ, ಅದೃಷ್ಟದ ನೆಲೆವನೆ, ವೇದಾಂತದ ಆಲಯ, ಸಾಂಖ್ಯತಂತ್ರಗಳ ತವರುಮನೆ, ಅತುಲ ಭಕ್ತಿಯ ಮಂದಿರ, ಭಾಗವತರ ಮನೆ, ಕ್ರಿಯಾಮಂತ್ರಗಳ ನೆಲೆ, ಭೋಗಿಗಳ ಸಂತಸ, ಮಂತ್ರಿಗಳ ಸನ್ಮಾನ, ರಾಜ್ಯಾಧಿಪತಿಗಳಿಗೆ ಆಧಿಪತ್ಯದ ಏಳಿಗೆ ಎಂಬುದರಲ್ಲಿ ಸಂಶಯವಿಲ್ಲ" ಎಂದು ಹೇಳಿಕೊಳ್ಳುತ್ತಾನೆ.

ಷಡ್ದರ್ಶನಗಳಲ್ಲಿ ಪಾಂಡಿತ್ಯವಿದ್ದರೂ, ಇವನ ವಿಶೇಷ ಒಲವಿರುವುದು ಸಾಂಖ್ಯದ ಬಗ್ಗೆ; ಆ ತಾತ್ವಿಕ ನೆಲೆಯಲ್ಲಿಯೇ ಈ ಕಾವ್ಯವು ರಚಿತವಾಗಿರುವುದು. ಶ್ರೀರಾಮನೇ ಸಾಂಖ್ಯ ತತ್ವವನ್ನು ವಿವರಿಸುವ ಒಂದು ಸಂಧಿಯೇ ಈ ಕಾವ್ಯದಲ್ಲಿದೆ. ಇವನು ಶ್ರೀರಾಮನನ್ನು ಸಾಕ್ಷಾತ್ ಪರಬ್ರಹ್ಮನೆಂದೇ ಭಾವಿಸಿ ಉಪಾಸಿಸುವವನು. ಸೀತೆಯು ಮೂಲಪ್ರಕೃತಿ. ಪರಬ್ರಹ್ಮನು ಸೃಷ್ಟಿಕಾರ್ಯಕ್ಕೆಂದು ಬ್ರಹ್ಮನನ್ನೂ, ರಕ್ಷಣಾಕಾರ್ಯಕ್ಕಾಗಿ ವಿಷ್ಣುವನ್ನೂ, ಲಯಕಾರ್ಯಕ್ಕೆಂದು ಹರನನ್ನೂ ನಿರ್ಮಿಸುವವನು. ಅವರು ಒಬ್ಬೊಬ್ಬರೇ ಅಲ್ಲ. ಕಾಲಕಾಲಕ್ಕೆ ಈ ಮೂರೂ

ನಡೆಯುವುದರಿಂದ ಆಯಾ ಕಾಲಕ್ಕೆಂದು ಅವರನ್ನು ಪರಬ್ರಹ್ಮನು ನಿರ್ಮಿಸುತ್ತಾನೆ. ಶ್ರೀರಾಮನು ಹನುಮಂತನಿಗೆ ಬ್ರಹ್ಮಪದವಿಯನ್ನು ದಯಪಾಲಿಸುವ ಪ್ರಸಂಗ ಈ ಕಾವ್ಯದಲ್ಲಿಯೇ ಬಂದಿದೆ. ಮತ್ತೆ ಮತ್ತೆ ಹರಿಹರಬ್ರಹ್ಮರು ಬದಲಾದರೂ ಪರಬ್ರಹ್ಮ ಮತ್ತು ಮೂಲಪ್ರಕೃತಿ ಶಾಶ್ವತ ಸತ್ಯಗಳು. ಆ ದೃಷ್ಟಿಯಿಂದಲೇ ಈ ಕಾವ್ಯವು ರಚಿತವಾಗಿದೆ. ಈ ವಿಚಾರವು ರಾಮನಿಗೆ ಗೊತ್ತಿರುವುದಲ್ಲದೆ, ಕಾವ್ಯದ ಎಲ್ಲ ಪಾತ್ರಗಳೂ ಇದನ್ನು ಅರಿತಿವೆ; ಬೇರೆ ಬೇರೆ ಪಾತ್ರಗಳ ಬಾಯಲ್ಲಿ ಈ ವಿಷಯವು ಮತ್ತೆ ಮತ್ತೆ ಮಂಡಿತವಾಗುತ್ತದೆ. ರಾಮನಾಮದ ಮಹಿಮೆಯ ಅಗಾಧತೆಯು ಎಲ್ಲರಿಗೂ ತಿಳಿದಿದೆ; ಸಾಕ್ಷಾತ್ ರಾಮನೇ ರಾಮಮಂತ್ರದ ಶಕ್ತಿಯ ಬಗ್ಗೆ ಗುಹ, ಲಕ್ಷ್ಮಣ, ಹನುಮಂತ, ಸುಗ್ರೀವ ಮುಂತಾದವರಿಗೆ ವಿವರಿಸುವ ಪ್ರಸಂಗಗಳು ಈ ಕಾವ್ಯದಲ್ಲಿ ಬರುತ್ತವೆ. ಭಕ್ತಿ ಇದ್ದೆಡೆ ಆವೇಶ, ಅದರಲ್ಲಿ ತಾರ್ಕಿಕತೆಗೆ ಅವಕಾಶವಿಲ್ಲ. ಈ ಕಾವ್ಯದಲ್ಲಿಯೇ ಕವಿಯ ಶ್ರೀರಾಮನ ಬಗೆಗಿನ ಕಲ್ಪನೆಯಲ್ಲಿ ಗೊಂದಲವಿದ್ದಂತೆಯೂ ಕಾಣಿಸಬಹುದು: ಉದಾಹರಣೆಗೆ ಶ್ರೀರಾಮನು ಪರಬ್ರಹ್ಮನೇ ಎಂದು ಒಟ್ಟಾರೆ ಕಲ್ಪಿಸಿಕೊಂಡಿದ್ದರೂ, ಒಂದೆಡೆ ವಿಭೀಷಣನು ರಾಮನನ್ನು ಕುರಿತು "ಶಶಿಮೌಳಿ ಬಿಸಜಾಕ್ಷರೀರ್ವರೊಂದಾಕೃತಿಯ ಸಸಿನೆ ಧರಿಸಿದ ಮೂರ್ತಿಯಸಮತರ ಸತ್ಕೀರ್ತಿ ನೀನೆ ರಘುಚಕ್ರವರ್ತಿ" ಎಂದು ಹೇಳುತ್ತಾನೆ. ಈ ಗೊಂದಲ ರಾಮನ ಬಗ್ಗೆ ವಿವಿಧ ಪಾತ್ರಗಳು ಹೊಂದಿರುವ ನಂಬಿಕೆಯ ಕಾರಣದಿಂದಲೋ ಅಥವಾ ಕಾವ್ಯದ ಆರಂಭದಲ್ಲಿ ಶೌನಕಾದಿಗಳು ಹೆಸರಿಸುವ ರಾಮಾವತಾರದ ವಿವಿಧ ಆಕರಗಳ ಕಾರಣದಿಂದಲೋ!

ಇಂಥ ಭಕ್ತಿ ಕಾವ್ಯಗಳ ಬಹುತೇಕ ಕೇಂದ್ರವಾದ ಕೃಷ್ಣ ರಾಮರ ದೈವತ್ವದ ಕಾರಣದಿಂದ ನಡೆಯುವುದೆಲ್ಲವೂ ನೂರಕ್ಕೆ ನೂರು ಪೂರ್ವನಿಯೋಜಿತವಾಗಿಯೇ. ಇದು ಈ ಕವಿಯ ನಂಬಿಕೆ ಮಾತ್ರವಲ್ಲ, ಕುಮಾರವ್ಯಾಸನದೂ ಇದೇ ತಿಳಿವಳಿಕೆ, ತೊರವೆ ನರಹರಿಯದೂ ಇದೇ ನಂಬಿಕೆ. ಈ ಕಾವ್ಯಗಳ ಬಹುತೇಕ ಎಲ್ಲ ಪಾತ್ರಗಳಿಗೆ ಕಾವ್ಯದ ಕೇಂದ್ರವಾದ ಪಾತ್ರದ ದೇವತ್ವದ ಬಗ್ಗೆ ಖಚಿತವಾದ ಶ್ರದ್ಧೆ. ಹೀಗಾಗಿ ಇಲ್ಲಿ ರಾಮನಿಗೆ ಆಗುವ ತೊಳಲಾಟ **'ಮಾನವನಾಗಿ ನಟಿಸುವ'** ಸಂಕಲ್ಪದಿಂದ ಆದುದೇ ಹೊರತು ವಾಸ್ತವವಲ್ಲ. ಆದ್ದರಿಂದ ಈ ಕಾವ್ಯಗಳಲ್ಲಿ, ವಿಸೀ ಹೇಳುವಂತೆ "ಘಟನೆಗಳು ನಡೆದಾಗ ರಾಮನಲ್ಲಿ ಉಂಟಾಗುವ ಭಾವದ ಭರವೂ ಉಕ್ತಿ ವಿಶೇಷಗಳೂ ಅವಾಸ್ತವವಾಗುತ್ತವೆ. ಆಯಾ ಸನ್ನಿವೇಶಗಳಲ್ಲಿ ಈ ಸಂಗತಿಯನ್ನು ನೆನೆಸಿಕೊಂಡರೆ ಅವನಿಗಾಗಲಿ, ಓದುಗನಿಗಾಗಲಿ, ಆಗ ರೂಪಿತವಾಗುತ್ತಿರುವ ಸನ್ನಿವೇಶದಲ್ಲಿನ ಕಾವ್ಯತೆಯೆಲ್ಲ ಮಾನವತೆಯ ಹೃದಯವಿಲ್ಲದೆ ಮಾಯವಾಗುತ್ತವೆ" ಎಂಬ ಮಾತು ಸತ್ಯ. ಕುಮಾರವ್ಯಾಸ ಭಾರತದಲ್ಲಿ ಕೃಷ್ಣನಿಗೆ ತೊಳಲಾಟವಿಲ್ಲ, ಏಕೆಂದರೆ ಅವನು ಆಡಿಸುವವನೇ ಹೊರತು, ಆಡುವವನಲ್ಲ, ಕೇಂದ್ರ ಪಾತ್ರವಲ್ಲ. ಆದರೆ ತೊರವೆ ನರಹರಿ ಮತ್ತು ಪ್ರಧಾನ ವೆಂಕಪ್ಪಯ್ಯನ ರಾಮಾಯಣ ಕಾವ್ಯಗಳಲ್ಲಿ ರಾಮನೇ ಕೇಂದ್ರ ಪಾತ್ರ, ಆಡಿಸುವವನು ಅವನೇ, ಜೊತೆಗೆ ಆಡಬೇಕಾದವನೂ ಅವನೇ. ಹೀಗಾಗಿ ಕುಮಾರವ್ಯಾಸನ ಅನುಕೂಲ ರಾಮಾಯಣವನ್ನು ಬರೆಯುವ ಈ ಇಬ್ಬರು ಕವಿಗಳಿಗಿಲ್ಲ. ಆದರೆ ಇವರೆಲ್ಲರ ಮನೋಭಾವ ಒಂದೇ – ರಾಮ–ಕೃಷ್ಣರು ಸಾಕ್ಷಾತ್ ದೇವರು; ಜಗತ್ತಿನಲ್ಲಿ ನಡೆಯುವುದೆಲ್ಲವೂ 'ಅವನ' ಸಂಕಲ್ಪದಿಂದ, ಅವನೇ ಎಲ್ಲವನ್ನೂ ನಡೆಸುವವನು ಎಂಬುದು. ಈ ಕಾವ್ಯದ ರಾಮನು ತೊಳಲಾಟವನ್ನು ಅನುಭವಿಸುವಂತೆ ಕಂಡರೂ ಅದು ನೋಡುವವರಿಗೆ ಕಾಣಿಸುವಂಥದೇ ಹೊರತು ಅವನ ಅನುಭವವಲ್ಲ; ಏಕೆಂದರೆ ಪರಬ್ರಹ್ಮನಿಗೆ ಅನುಭವ ಎಲ್ಲಿ ಬಂತು?

ಅನುಭವ ಎಂದರೆ ವಿವಿಧ ಭಾವಗಳನ್ನು ಹೊಂದುವುದು ಎಂದು ತಾನೇ? ಅವನು ನಿರ್ಭಾವಿ. ಎಲ್ಲ ಜೀವಿಗಳಲ್ಲಿ ಸಾಕ್ಷೀಭೂತನಾಗಿರುವುದು ಅವನೇ, ಜೀವಿಗಳಲ್ಲಿನ ಅನುಭವಕ್ಕೆ ಅವನೇ ಕಾರಣನಾದರೂ ಆ ಅನುಭವಗಳು ಅವನಿಗಿಲ್ಲ; ಬತ್ತಿಯ ತುದಿಯ ಬೆಳಕಿಗೆ ಎಣ್ಣೆಯ ನೇರ ಸಂಪರ್ಕವಾಗದು. ಅವನು ಎಲ್ಲೆಡೆ ಇದ್ದೂ ಇರದವನು. ಶ್ರೀರಾಮನು ವಿರಹದಂತಹ ಭಾವವನ್ನು ಅನುಭವಿಸುವಾಗ ಇತರ ಪಾತ್ರಗಳು, ಲಕ್ಷ್ಮಣ, ಸುಗ್ರೀವ, ವಿಭೀಷಣ ಮುಂತಾದವರು ಅವನನ್ನು ಸಮಾಧಾನಪಡಿಸುವುದು ಈ ಅಂಶವನ್ನು ಹೇಳುವ ಮೂಲಕವೇ.

ರಾಮನು ಪರಬ್ರಹ್ಮ ಎಂಬ ತಿಳಿವಳಿಕೆ ರಾವಣನ ಕಡೆಯವರಲ್ಲಿಯೂ ಇದೆ; ಅದು ಹೇಗೆ ರಾಮನ ವಿಚಾರ ಇಷ್ಟು ವ್ಯಾಪಕವಾಗಿ ತಿಳಿಯಿತೋ ಹೇಳಲಾಗದಾದರೂ, ಮಂಡೋದರಿಗೆ, ಮಾಲ್ಯವಂತನಿಗೆ, ಅತಿಕಾಯ ಮುಂತಾದವರಿಗೆ ಈ ಅರಿವಿದೆ; ರಾವಣನಿಂದ ಧಿಕ್ಕೃತನಾದ ವಿಭೀಷಣನು ರಾಮನನ್ನು ಮೊರೆಹೊಗುವುದು ಈ ತಿಳಿವಳಿಕೆಯಿಂದಲೇ; ರಾವಣನ ಮಗನಾದ ಅತಿಕಾಯನಂತೂ ರಾಮನ ಪರಮ ಭಕ್ತ, ಇದನ್ನು ತಂದೆಯ ಮುಂದೆ ವ್ಯಕ್ತಪಡಿಸಿದರೂ, ಅವನ ಆಜ್ಞೆಯಂತೆ ಇತರರೊಡನೆ ರಾಮನ ಮೇಲೆ ಯುದ್ಧಕ್ಕೆ ಹೊರಡುತ್ತಾನೆ. ರಾಮನಿಂದ ಹತನಾಗಬೇಕೆಂದು ಅವನು ಹಂಬಲಿಸಿದರೂ, ಲಕ್ಷ್ಮಣ ಅವನನ್ನು ಕೊಲ್ಲುತ್ತಾನೆ (**'ತೊರವೆ ರಾಮಾಯಣ'**ದಲ್ಲಿ ಪರಮ ವೈಷ್ಣವನಾದ ಅತಿಕಾಯನು ಯುದ್ಧಕ್ಕೆ ಹೊರಡುವಾಗ ಊರಲ್ಲೆಲ್ಲ ಡಂಗುರ ಹೊಡೆಸಿ "ಭವಾಬ್ಧಿಪೋತನ ಬಹಳ ಪದವಿಯ ಬಯಸುವೊಡೆ" ತನ್ನ ಜೊತೆಗೆ ಬನ್ನಿ ಎಂದು ಎಲ್ಲರನ್ನೂ ಆಹ್ವಾನಿಸುತ್ತಾನೆ). ರಾವಣನೂ ಈ ತಿಳಿವಳಿಕೆಗೆ ಹೊರತಲ್ಲ, ತೊರವೆಯಲ್ಲಿ ರಾವಣನ ರಾಮದ್ವೇಷ ಗುಪ್ತಭಕ್ತಿಯಾಗಿ ಮಾರ್ಪಡುವಂತೆ ನಿರೂಪಿತವಾಗಿದ್ದರೆ, **'ಶ್ರೀರಾಮಕಥಾಮೃತ'**ದಲ್ಲಿ ರಾವಣನಿಗೆ ಶ್ರೀರಾಮನ ಬಗ್ಗೆ ಸ್ಪಷ್ಟವಾದ ಅರಿವಿದೆ. ಮಧ್ಯೆ ಮಧ್ಯೆ ಆ ಕುರಿತು ಸೂಕ್ಷ್ಮವಾಗಿ ಅಂದುಕೊಂಡರೂ, ಎಲ್ಲರೂ ಯುದ್ಧದಲ್ಲಿ ಸತ್ತು ತಾನು ಏಕಾಕಿಯಾಗಿ ಉಳಿದು ಶಕ್ತಿಸಂಚಯನಕ್ಕಾಗಿ ಪಾತಾಳಯಜ್ಞವನ್ನು ಮಾಡಿದಾಗ, ರಾಮನ ಕಡೆಯ ಸೈನಿಕರು ಬಂದು ಮಂಡೋದರಿಯನ್ನು ಎಳೆದಾಡುವ ಸನ್ನಿವೇಶದಲ್ಲಿ, ರಾಮನ ಜೊತೆ ಸಂಧಿ ಮಾಡಿಕೊಳ್ಳಲು ಅವಳು ನೀಡುವ ಸಲಹೆಯನ್ನು ಕೇಳಿ ರಾವಣನಾಡುವ ಮಾತುಗಳನ್ನು ಗಮನಿಸಬೇಕು: "ಮಂಡೋದರಿಯೇ, ನೀನು ಹೇಳಿದುದು ಯಾವುದೂ ಸುಳ್ಳಲ್ಲ, ಎಲ್ಲವೂ ನಿಜವೇ. ರಾಮನು ಬ್ರಹ್ಮಾದಿಗಳ ಕೋರಿಕೆಯಂತೆ ಮನುಷ್ಯರೂಪವನ್ನು ತಳೆದು ಬಂದಿರುವ ವಿಷಯವನ್ನು ನಾನು ಮುನಿಗಳಿಂದ ಕೇಳಿ ತಿಳಿದಿರುವೆ. ಅವನು ಜಗದಂತರ್ಯಾಮಿಯೇ ಸರಿ. ಆದ್ದರಿಂದಲೇ, ಅವನನ್ನು ದ್ವೇಷಿಸಿ ಹೋರಾಡಿದರೆ ಬೇಗನೇ ನನ್ನ ಅಸುರತನ ಹೋಗಿ ಅಗಣಿತ ಸುಖವುಂಟಾಗುತ್ತದೆಂಬ ಕಾರಣದಿಂದಲೇ ನಾನು ಸಂಧಿಗೆ ಒಪ್ಪದೆ ಇಷ್ಟು ದಿನ ಹೋರಾಡಿದೆ. ದ್ವೇಷಭಕ್ತಿಯಿಂದ ಅವನಿಗೆ ನನ್ನ ತನುವನ್ನು ಒಪ್ಪಿಸಿಬಿಡಬೇಕೆಂದು ನಿರ್ಧರಿಸಿದ್ದೇನೆ. ಇದು ನನ್ನಲ್ಲಿ ಅಂತಸ್ಥವಾದ ವಿಷಯ. ಕೈಯಲ್ಲಿ ಕೈದುಗಳನ್ನು ಹಿಡಿದು ರಣರಂಗದಲ್ಲಿ ರಘುವರನೊಡನೆ ಕಾದುತ್ತೇನೆ; ಗೆದ್ದರೆ ಇಡೀ ಭೂಮಿಯು ನನ್ನದಾಗುವುದು. ಸತ್ತರೆ ತತ್ವರೂಪವನ್ನು ಹೊಂದಿ ಭೇದಮೋದಗಳಿಲ್ಲದ ಶಾಶ್ವತ ಸುಖವನ್ನು ಹೊಂದುತ್ತೇನೆ. ಇಂದಿನ ಯುದ್ಧದಲ್ಲಿ ಕೋಡಗಸೇನೆಯನ್ನು ನಿರ್ನಾಮಗೊಳಿಸಿ, ನರರಿಬ್ಬರನ್ನೂ ಕೊಂದು ಜಯಲಕ್ಷ್ಮಿಯನ್ನು ಸಾಧಿಸುತ್ತೇನೆ. ನೋಡುತ್ತಿರು. ಚಿಂತಿಸಬೇಡ." ಹೀಗೆ **'ಖಳ'**ನಾಯಕನಿಗೂ

ನಾಯಕನ ದೈವಿಕತೆಯ ಬಗ್ಗೆ ನಂಬಿಕೆಯಿರುವುದು ಪ್ರಾಯಶಃ ವಿಜಯನಗರ ಮತ್ತು ಆನಂತರದ ಕಾಲಗಳಲ್ಲಿ ರೂಪು ತಳೆದಿರಬಹುದು. ಏಕೆಂದರೆ ಕುಮಾರವ್ಯಾಸ ಭಾರತದಲ್ಲಿನ ಕೃಷ್ಣದೌತ್ಯದ ಸನ್ನಿವೇಶದಲ್ಲಿ ದುರ್ಯೋಧನನು ತನ್ನ ತಂದೆಗೆ ಹೇಳುವ ಮಾತುಗಳನ್ನು – "ಇಳಿದನವನಿಗೆ ಧಾರುಣಿಯ ಹೊರೆಗೆಳೆಯಲೋಸುಗವಿಲ್ಲಿ ನಮ್ಮೊಳಗೊಳಗೆ ವೈರವ ಬಿತ್ತಿ ಬರಿಕೈವನು ಮಹಾಬಲವ .. .. ಮಣಿದು ಬದುಕುವನಲ್ಲ ಹಗೆಯಲಿ ಸೆಣಸಿ ಬಿಡುವವನಲ್ಲ ದಿಟ ಧಾರುಣಿಯ ಸಿರಿಗಳುಪುವನಲ್ಲಳುಕಿಲ್ಲ ಕಾಯದಲಿ ರಣಮಹೋತ್ಸವವೆನ್ನ ಮತ ಕೈದಣಿಯೆ ಹೊಯ್ದಾಡುವೆನು ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ" – ಗಮನಿಸಬೇಕು. ಇದನ್ನು ನೋಡಿದರೆ, ನಾವು ಚಿಕ್ಕಂದಿನಲ್ಲಿ ಕೇಳಿದ ಕತೆ ನೆಪಿಗೆ ಬರುತ್ತದೆ; ನಾರದನೋ ಮತ್ತಾರೋ ಋಷಿ ವಿಷ್ಣುವನ್ನು ಕಾಣಲು ವೈಕುಂಠಕ್ಕೆ ಬರಲು, ಜಯವಿಜಯರೆಂಬ ದ್ವಾರಪಾಲಕರು ಅವರನ್ನು ತಡೆದಾಗ ವಿಷ್ಣು ಅವರಿಗೆ ಭೂಮಿಯಲ್ಲಿ ಹುಟ್ಟುವ ಶಾಪ ಕೊಡುತ್ತಾನಂತೆ; ಆದರೆ ಅವರಿಗೆ ಎರಡು ಆಯ್ಕೆಗಳು – ಏಳುಜನ್ಮ ತನ್ನ ಭಕ್ತರಾಗಿ ಅಥವಾ ಮೂರು ಜನ್ಮಗಳು ತನ್ನ ಶತ್ರುವಾಗಿ ಬದುಕಿ – ಮರಳಿ ವೈಕುಂಠಕ್ಕೆ ಬರುವುದು. ವಿಷ್ಣುಸಾನ್ನಿಧ್ಯಕ್ಕೆ ಬೇಗ ಬರುವ ಉದ್ದೇಶದಿಂದ ವಿಷ್ಣುದ್ವೇಷವನ್ನು ಹೊಂದಿದರೂ ಪರವಾಯಿಲ್ಲ ಎಂದು ಅವರು ಮೂರು ಜನ್ಮಗಳನ್ನು ಆಯ್ಕೆಮಾಡಿಕೊಳ್ಳುತ್ತಾರೆ: ಹಿರಣ್ಯಾಕ್ಷ–ಹಿರಣ್ಯಕಶಿಪು, ರಾವಣ–ಕುಂಭಕರ್ಣ ಮತ್ತು ದುರ್ಯೋಧನ ದುಶ್ಶಾಸನರೇ ಅವರು. ಕುಮಾರವ್ಯಾಸನ ದುರ್ಯೋಧನ ಹೇಳುವ **"ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ"** ಎಂಬ ಮಾತು, ವೆಂಕಪ್ಪಯ್ಯನ ರಾವಣನು ಹೇಳುವ 'ದ್ವೇಷಭಕ್ತಿ' ಮತ್ತು "ಆ ಮಹಾಮಹಿಮನೊಡನೆ ಪಗೆಗೊಂಡಡಸುರತನು ಪೋಗಿ ತತ್ಸಾರೂಪ್ಯಮಗಣಿತಸುಖಂಗಳೊದಗುವುದೆನುತ ಚಿತ್ತದೊಳ್ಬಗೆದು ಸಂಧಿಯನುಳಿದು ಕಾದಲೆಳಸಿದೆ" ಎನ್ನುವ ಮಾತುಗಳು ಈ ಕತೆಯ ಹಿನ್ನೆಲೆಯಲ್ಲಿ ರೂಪಗುಂಡಿರಬೇಕು. ಏನೇ ಆಗಲಿ, ಕಾವ್ಯಕೃತಿಯೊಂದರಲ್ಲಿ ಕವಿಯ ನಂಬಿಕೆ, ಜೀವನದರ್ಶನ ಮತ್ತು ತಾತ್ವಿಕತೆಗಳು ನೇರವಾಗಿ ನಿರೂಪಿತವಾಗದೆ, ರೂಪಕಾತ್ಮಕವಾಗಿ ಅಭ್ಯವ್ಯಕ್ತಿಗೊಳ್ಳಬೇಕು. ಭಕ್ತಕವಿಗಳಲ್ಲಿ ಹೀಗಾಗದಿರುವುದು ವೆಂಕಪ್ಪಯ್ಯನಲ್ಲಿ ಮಾತ್ರವಲ್ಲ, ಎಲ್ಲರಲ್ಲೂ ಎಂಬುದನ್ನು ಕಾಣಬಹುದು.

ಒಟ್ಟಾರೆ ಕಥಾಸರಣಿಯಲ್ಲಿ ವೆಂಕಪ್ಪಯ್ಯನು ವಾಲ್ಮೀಕಿಗೆ ಋಣಿಯಾಗಿದ್ದರೂ, ಅವನನ್ನು ಅನುವಾದಿಸದೆ ಸ್ವತಂತ್ರ ರಚನೆಯನ್ನು ಕೈಗೊಂಡಿರುವುದಲ್ಲದೆ, ವಾಲ್ಮೀಕಿಯಲ್ಲಿಲ್ಲದ ಹಲವಾರು ಪ್ರಸಂಗಗಳನ್ನು ತನ್ನ ಕಾವ್ಯದಲ್ಲಿ ಸೇರಿಸಿದ್ದಾನೆ: ಸರಸ್ವತಿಯೇ ಮಂಥರೆಯ ನಾಲಗೆಯಲ್ಲೆ ನೆಲಸಿ ಅವಳಿಗೆ ಚಾಕಚಕ್ಯತೆಯನ್ನು ಕಲಿಸಿ ಕೈಕೇಯಿಯ ಮನಸ್ಸನ್ನು ರಾಮವಿರುದ್ಧವಾಗಿಸುವುದು, ಋಷಿಗಳು ಬೇಡನಿಗೆ **'ಮರ'** ಎಂದು ಹೇಳಿಕೊಟ್ಟು ಅವನು ಅದನ್ನು ಬೇಗ ಬೇಗ ಉಚ್ಚರಿಸಿದಾಗ **'ರಾಮ' ರಾಮ'** ಎಂದಾಗಿ ಅವನ ಈ ರಾಮಜಪದಿಂದ ವಾಲ್ಮೀಕಿತನ ಪ್ರಾಪ್ತವಾಗುವುದು (ಈ ಕತೆಯೂ ನಾನು ಚಿಕ್ಕಂದಿನಲ್ಲಿ ಕೇಳಿದುದು), ಅನಸೂಯೆಯು ಸೀತೆಗೆ ಹೇಳಿದ ಪ್ರತಿವ್ರತೆಯೊಬ್ಬಳ ಕತೆ, ರಾಮನನ್ನು ಪತಿಯಾಗಿ ಪಡೆಯಬೇಕೆಂಬ ಹಂಬಲಿಸಿ ರಾಮನ ಏಕಪತ್ನೀವ್ರತದ ಕಾರಣದಿಂದ ಒಂಟಿಯಾಗಿಯೇ ಉಳಿಯುವ (ಅವಳು ಶಿವನೊಡನೆ ಮದುವೆಯಾಗ ಬಯಸಿ ವಿಫಲಗೊಳ್ಳುವಳೆಂಬ ಕತೆಯೂ ಇದೆ) ಕನ್ಯಾಕುಮಾರಿಯ ಕತೆ, ಮೈರಾವಣನ ಕತೆ, ರಾವಣನು ಮಾಡಿದ ಪಾತಾಳಯಜ್ಞ, ಹನುಮಂತನು ಮೂಲಿಕೆಗಳನ್ನು ತರುವುದನ್ನು ತಡೆಯಲು ರಾವಣನಿಂದ ಪ್ರೇರಿತನಾಗಿ ಪ್ರಯತ್ನಿಸುವ ಕಾಲನೇಮಿಯ ಕತೆ,

ಧನುಷ್ಕೋಟಿಯಲ್ಲಿ ಲಿಂಗಪೂಜೆ ಮಾಡಿ ಶಿವನ ಮಹಿಮೆಯನ್ನು ಜಗತ್ತಿಗೆ ಸಾರುವುದು – ಮುಂತಾದ ಅನೇಕ ಪ್ರಸಂಗಗಳನ್ನು ವೆಂಕಪ್ಪಯ್ಯ ತನ್ನ ಕಥಾನಕದಲ್ಲಿ ಸೇರಿಸುತ್ತಾನೆ. ಅಲ್ಲದೆ ಹಲವಾರು ಕಡೆಗಳಲ್ಲಿ ರಾಮಮಂತ್ರದ ಮಹಿಮೆ, ನಾಮಸಂಕೀರ್ತನೆಯ ವಿಧಾನ ಮುಂತಾದ ಬೋಧನೆಗಳೂ ನಡೆಯುತ್ತವೆ. ಇವುಗಳಲ್ಲಿ ರಾಮನ ಬಗೆಗಿನ ಜನಜನಿತ ಕತೆಗಳು, ವಿವಿಧ ಪುರಾಣಗಳು ಮತ್ತು ಇತರ ರಾಮಾಯಣಕೃತಿಗಳು ಕವಿಯ ನೆರವಿಗೆ ಬಂದಿರುವುದರಲ್ಲಿ ಸಂಶಯವಿಲ್ಲ; ಆದರೆ ಅವೆಲ್ಲವುಗಳ ನಿರೂಪಣೆ ಮಾತ್ರ ಸ್ವಂತದ್ದು.

ಪ್ರಧಾನ ವೆಂಕಪ್ಪಯ್ಯ ಪಂಡಿತ ಕವಿ, ಹೀಗಾಗಿ ರಾ. ನರಸಿಂಹಾಚಾರ್ಯರು ಹೇಳುವ ಹಾಗೆ ಅವನ ಕಾವ್ಯದ **'ಬಂಧವು ಪ್ರೌಢ'**ವಾಗಿದೆ. ಜೊತೆಗೆ ಆತನು ಗಾತ್ರವ್ಯಾಮೋಹಿಯೂ ಹೌದು; ಹಲವಾರು ಕಡೆಗಳಲ್ಲಿ ವರ್ಣನೆ, ನಿರೂಪಣೆಗಳು ಅನವಶ್ಯಕವಾಗಿ ದೀರ್ಘವಾಗಿವೆ. ಯುದ್ಧಕಾಂಡದಲ್ಲಿಯೇ ೩೬೦೦ ಕ್ಕಿಂತ ಹೆಚ್ಚಿನ ಪದ್ಯಗಳಿವೆ. ಅಲ್ಲೆಲ್ಲ ಕ್ಲೀಷೆಗಳು ಅನಿವಾರ್ಯವೇ ಆಗಿಬಿಡುತ್ತವೆ. ರಾವಣನ ಕಡೆಯ ಯಾವುದೇ ಮುಖ್ಯ ವೀರ ಯುದ್ಧಕ್ಕೆ ಹೊರಟಾಗ ಆಗುವ ಅಪಶಕುನಗಳು, ಯುದ್ಧದ ರೀತಿ, ವೀರನ ವರ್ಣನೆ – ಇಂಥ ಕಡೆಗಳೆಲ್ಲಲ್ಲ ನಿರೂಪಣೆಯ ಧಾಟಿ ಪುನರಾವರ್ತನೆಯಾಗುತ್ತವೆ; ಒಂದೇ ಬಗೆಯ ಸನ್ನಿವೇಶಗಳನ್ನು ಹೊಸ ಹೊಸ ಬಗೆಯಲ್ಲಿ ನಿರ್ವಹಿಸಬಲ್ಲ ಕಲ್ಪನಾಶಕ್ತಿ ಕವಿಯಲ್ಲಿ ಕಡಿಮೆ; ಹೀಗಾಗಿ ಅವು **'ಅತಿ'** ಎನ್ನಿಸುವುದು ಸಹಜ. ರಾಮನು ಸೀತೆಗಾಗಿ ಮಾಡುವ ಚಿತ್ರಕೂಟದ ವರ್ಣನೆಗೆ ಒಂದು ಸಂಧಿಯೇ ಮೀಸಲಾಗಿದೆ, ಮಳೆ ಬಾರದಾದಾಗ ರೋಮಪಾದನ ಅಂಗರಾಜ್ಯಕ್ಕೆ ಋಷ್ಯಶೃಂಗನನ್ನು ಕರೆತರಲು ಊರಿನ ಗಣಿಕಾಜನರು ಮಾಡುವ ಪ್ರಯತ್ನಗಳು ಇವೆಲ್ಲ ಅನವಶ್ಯಕವಾಗಿ ದೀರ್ಘ ಅನ್ನಿಸುತ್ತವೆ. ಅಲ್ಲದೆ ವರ್ಣನೆಗಳಲ್ಲಿ ಶ್ಲೇಷೆ ಕವಿಸಮಯಗಳು ವಿಪುಲವಾಗಿವೆ; ಬೇರೆ ಕಾವ್ಯಗಳನ್ನು ಓದಿದವರಿಗೆ ಇವು ಅಲ್ಲಿಂದಲೇ ಬಂದಿರಬಹುದೇ ಎಂಬ ಸಂದೇಹವನ್ನೂ ಹುಟ್ಟಿಸುತ್ತವೆ.

ವೆಂಕಪ್ಪಯ್ಯನ ಶಬ್ದಕೋಶ ಅದ್ವಿತೀಯವಾದುದು, ಆತನು ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಮೇಲೆ ವ್ಯಾಪಕ ಪ್ರಭುತ್ವ ಹೊಂದಿದ್ದವನು; ಜೊತೆಗೆ ಆತನ ಶಾಸ್ತ್ರಜ್ಞಾನ, ಪುರಾಣ ಮತ್ತಿತರ ಧಾರ್ಮಿಕಸಾಹಿತ್ಯದ ಪರಿಚಯ ವ್ಯಾಪಕವಾದುದು, ಅಲ್ಲದೆ ಆತನು ಷಡ್ದರ್ಶನಗಳ ಆಳವಾದ ತಿಳಿವಳಿಕೆಯಿದ್ದವನು, ಜೊತೆಗೆ ವ್ಯಾಕರಣ, ಅಲಂಕಾರ ಮುಂತಾದ ಶಾಸ್ತ್ರಗಳ ಆಳವಾದ ಜ್ಞಾನ ಹೊಂದಿದ್ದವನು. ಹೀಗಾಗಿ ಅವನು ಸುಲಭವಾಗಿ ಪರ್ಯಾಯ ಶಬ್ದಗಳನ್ನು ಬಳಸಬಲ್ಲ, ಹೊಸ ಸಮಾಸಗಳನ್ನು ಸೃಷ್ಟಿಸಿಕೊಳ್ಳಬಲ್ಲ, ಶ್ಲೇಷೆಗಳನ್ನು ಹೆಣೆಯಬಲ್ಲ. ಕವಿಸಮಯಗಳನ್ನು ಬಳಸಬಲ್ಲ, ಕತೆಗಳನ್ನು ಎಲ್ಲೆಲ್ಲಿಂದಲೋ ತಂದು ರಾಮನ ಕತೆಯ ಮಧ್ಯೆ ಸೇರಿಸಬಲ್ಲ. ಮುಲ್ಲೋಕ, ಮುಜ್ಜಗ, ಮೂಲೋಕ, ಪಂಕ್ತಿರಥ–ದಶರಥ, ಪಂಕ್ತಿಕಂಧರ–ದಶಕಂಠ–ದಶಗಳ–ದಶಶಿರ–ದಶಾನನ, ಶಿವೆ–ನಗಜೆ–ನಗತನಯೆ–ಹಿಮಗಿರಿತನಯೆ–ಭವಾನೀ–ನಗರಾತನೂಜೆ ಮುಂತಾದ ಪರ್ಯಾಯಗಳನ್ನು ಗಮನಿಸಬಹುದು. ಅಲ್ಲದೆ ದ್ವೇಷಭಕ್ತಿ, ಶಿಶ್ನೋದರ ಮುಂತಾದ ಶಬ್ದಗಳನ್ನು ಸೃಷ್ಟಿಸಿಕೊಳ್ಳಬಲ್ಲ.

ಕವಿಯು ಭಾವುಕ; ಅವನ ಹನುಮ ಮತ್ತು ರಾಮನ ಬಗೆಗಿನ ಭಕ್ತಿಯು ಆಳವಾದುದು. ರಾಮನಾಮಸ್ಮರಣೆ, ಮಂತ್ರಮಹಿಮೆ, ವ್ರತಾನುಷ್ಠಾನಗಳ ಪರಿಣಾಮಕಾರಿಕತೆ, ಪೂಜಾವಿಧಾನ, ಸಂಕೀರ್ತನರೀತಿ – ಇಂಥವುಗಳನ್ನೆಲ್ಲ ಅವಕಾಶವಿದ್ದೆಡೆಯಲ್ಲಿ ದೀರ್ಘವಾಗಿಯೇ

ಆತನು ವಿವರಿಸುತ್ತಾನೆ. ಆತನಿಗೆ ಸಾಂಪ್ರದಾಯಿಕ ನಂಬಿಕೆಗಳಾದ **'ಪಾತ್ರವ್ರತ್ಯದ ಹಿರಿಮೆ'**, **'ಗೋಬ್ರಾಹ್ಮಣ ಹಿತ'**, ಯಜ್ಞ-ಯಾಗಾದಿಗಳು, ವರ್ಣಪದ್ಧತಿ ಮುಂತಾದವುಗಳಲ್ಲಿ ಅವನಿಗೆ ಗಾಢವಾದ ನಂಬಿಕೆ. ಹೀಗಾಗಿ ಈ ನಂಬಿಕೆಗಳಿಗೆ ಹೊರತಾದ ಆಧುನಿಕ ದೃಷ್ಟಿಕೋನಕ್ಕೆ ಇಲ್ಲಿನ ಧೋರಣೆಯು ಸರಿಕಾಣಲಾರದು. ಅಲ್ಲದೆ ಅಂಥವುಗಳನ್ನು ನಗಣ್ಯವಾಗಿಸಬಲ್ಲ ಕಲ್ಪಕತೆಯಾಗಲೀ, ವರ್ಣನಾಕೌಶಲವಾಗಲಿ ಈ ಕವಿಯಲ್ಲಿ ವಿಪುಲವಾಗಿಲ್ಲ. ಇಷ್ಟಾದರೂ ಈ ಕವಿಯ ತಾಳ್ಮೆ, ಚಿತ್ತೈಕಾಗ್ರತೆ, ವೈದುಷ್ಯ, ಉತ್ಸಾಹ, ಮತ್ತು ಪರಿಶ್ರಮಗಳು ಪ್ರಶಂಸಾರ್ಹವಾದವೇ ಸರಿ. ತನ್ನ ದಕ್ಷತೆ-ಪ್ರಾಮಾಣಿಕತೆಗಳಿಂದ ಕೂಡಿದ ಆಡಳಿತ-ಮುತ್ಸದ್ದಿತನ ಇವುಗಳ ಕಾರಣದಿಂದಲೂ, ತನ್ನ ಅಪಾರ ಬರವಣಿಗೆಯಿಂದಲೂ, ತನ್ನ ಕಾರ್ಯವೈಖರಿಯಿಂದ ಮುಂದಿನ ತಲೆಮಾರುಗಳ ಆಕರ್ಷಕವಾದ ವಂಶದ ಹೆಸರಿಗೆ ಕಾರಣವಾಗಿರುವುದರಿಂದಲೂ ನನಗೆ ಈತನ ಕಾರ್ಯವನ್ನು ಕನ್ನಡಿಗರಿಗೆ – ಅದರಲ್ಲೂ ಆತನ ವಂಶಕ್ಕೆ ಸೇರಿದ ನನ್ನಂತಹ ಅಕ್ಕಿರಾಂಪುರ ಮೂಲದ ಪ್ರಧಾನವಂಶಸ್ಥರಿಗೆ ಈ ಲೇಖನ ಮತ್ತು ಗದ್ಯಕಥನಗಳಿಂದ ಪರಿಚಯ ಮಾಡಿಸುವ ಮೂಲಕ ನನ್ನ ಕೃತಜ್ಞತೆ-ಗೌರವಗಳನ್ನು ಸಮರ್ಪಿಸುವ ಉದ್ದೇಶ ನನ್ನದು. ನನ್ನ ಈ ಗದ್ಯಕಥನದಲ್ಲಿ ನಾನೇನೂ ಸೇರಿಸಿಲ್ಲವಾದರೂ, ನಾನು ಲೇಖನದಲ್ಲಿಯೇ ತೋರಿಸಿರುವಂತೆ ವರ್ಣನೆ, ನಿರೂಪಣೆಗಳ ದೀರ್ಘವಾಯಿತು ಎಂಬ ಕಡೆಗಳಲ್ಲಿ ಸಂಕ್ಷೇಪಿಸಿ, ಒಟ್ಟಾರೆ ಅವನ ಕಾವ್ಯವನ್ನು ಗದ್ಯದಲ್ಲಿ ಸಂಕಥಿಸಿದ್ದೇನೆ.

ಕೃತಜ್ಞತೆಗಳು:

ಈ ಮೊದಲೇ ಹೇಳಿದ ಹಾಗೆ, **'ಶ್ರೀರಾಮಕಥಾಮೃತ'** ಕಾವ್ಯವು ಪೂರ್ಣವಾಗಿ ಪ್ರಕಟವಾಗಿಲ್ಲ. ಇದರ ಓಲೆಯ ಪ್ರತಿಯು ಮದರಾಸಿನ ಸರ್ಕಾರಿ ಹಸ್ತಪ್ರತಿ ಭಂಡಾರದಲ್ಲಿದ್ದು, ಅದರ ಮೂಲಕವೇ ೧೯೫೨ ರಿಂದ ೧೯೫೭ ರ ನಡುವಣ ಅವಧಿಯಲ್ಲಿ ಈ ಕಾವ್ಯದ ಒಟ್ಟು ಆರು ಕಾಂಡಗಳಲ್ಲಿ ಐದು ಕಾಂಡಗಳು-ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂದಾಕಾಂಡ ಮತ್ತು ಸುಂದರಕಾಂಡ-ಪ್ರಕಟಗೊಂಡವು. ಆರನೆಯದಾದ ಯುದ್ಧಕಾಂಡವನ್ನು ಆ ಸಂಸ್ಥೆ ಪ್ರಕಟಿಸಲಿಲ್ಲ. ಅದಕ್ಕೆ ಪ್ರಾಯಶಃ ಕಾರಣ, ರಾಜ್ಯಪುನರ್ವಿಂಗಡೆಯಾಗಿ, ಕನ್ನಡ ತೆಲುಗು ಮುಂತಾದ **'ಅನ್ಯ'** ಭಾಷೆಗಳ ಪ್ರಕಟಣೆಯನ್ನು ಮದರಾಸು ಸರ್ಕಾರ ಕೈಬಿಟ್ಟುದಲ್ಲದೆ, ಆ ಭಾಷೆಗಳ ಹಸ್ತಪ್ರತಿಗಳನ್ನು ಆಯಾ ರಾಜ್ಯಗಳಿಗೆ ಕಳಿಸಿದುದು. ಮುದ್ರಣಗೊಂಡಿದ್ದ ಐದು ಕಾಂಡಗಳನ್ನು ಗದ್ಯಕ್ಕೆ ಪರಿವರ್ತಿಸಿದ ಬಳಿಕ ಆರನೆಯದಾದ ಯುದ್ಧಕಾಂಡಕ್ಕಾಗಿ ಹುಡುಕಾಟ ನಡೆಸಿದ ದೀರ್ಘಕಾಲದ ಬಳಿಕ ಅದು ಪ್ರಕಟವೇ ಆಗಿದಿದ್ದ ವಿಷಯ ನನಗೆ ತಿಳಿಯಿತು. ಈ ಕಾವ್ಯದ ಕಾಗದದ ಪ್ರತಿಯೊಂದು ಮೈಸೂರಿನಲ್ಲಿರುವುದು ತಿಳಿದಿದ್ದುದರಿಂದ ಅದನ್ನು ಬಳಸಿಕೊಂಡು ಕಥನವನ್ನು ಮುಗಿಸಲು ಆಲೋಚಿಸಿದೆ. ಆದರೆ ಕೊರೊನಾ ಕಾರಣದಿಂದ ನಾನೆಲ್ಲಿಗೂ ಹೋಗುವ ಹಾಗಿರಲಿಲ್ಲ. ಆಗ ಮೈಸೂರಿನಲ್ಲಿರುವ ನನ್ನ ತರುಣ ಮಿತ್ರ ಪ್ರೇಮಕುಮಾರನನ್ನು ನನಗಾಗಿ ಆ ಹಸ್ತಪ್ರತಿಯ ಯುದ್ಧಕಾಂಡದ ಭಾಗವನ್ನು ಸ್ಕ್ಯಾನ್ ಮಾಡಿ ಕಳಿಸಲು ಕೇಳಿಕೊಂಡೆ. ಆತನು ಬೇಸರವಿಲ್ಲದೆ ಯುದ್ಧಕಾಂಡದ ನಾನ್ನೂರು ಪುಟಗಳನ್ನೂ ಅಚ್ಚುಕಟ್ಟಾಗಿ ಸ್ಕ್ಯಾನ್ ಮಾಡಿ ಕಳಿಸಿಕೊಟ್ಟ. ಅದನ್ನು ಬಳಸಿಕೊಂಡು ಕಥನವನ್ನು ಪೂರೈಸಲು

ಸಾಧ್ಯವಾಯಿತು (ಮತ್ತು ಯುದ್ಧಕಾಂಡವನ್ನೂ ಪರಿಷ್ಕರಿಸಿ ಉದ್ದೇಶವೂ ಇದೆ). ಇದಕ್ಕಾಗಿ ಪ್ರೇಮಕುಮಾರನಿಗೆ ನಾನೆಷ್ಟು ಕೃತಜ್ಞತೆಗಳನ್ನು ಹೇಳಿದರೂ ಸಾಲದು.

ಕೃತಿಯ ಲಭ್ಯ ಸಂಪುಟಗಳನ್ನು ನನಗೆ ನೀಡಿ ಗದ್ಯಕಥನಕ್ಕೆ ನೆರವಾದ ವಿಜಯ ಕಾಲೇಜು ಗ್ರಂಥಪಾಲಕಿ ಶ್ರೀಮತಿ ಶೀಲಾ ಅವರಿಗೂ, ಸುಂದರಕಾಂಡವನ್ನು ನೀಡಿದ ಶ್ರೀ ಚಂದ್ರಶೇಖರ್ ಅವರಿಗೂ, ವೆಂಕಪ್ಪಯ್ಯನಿಗೆ ಸಂಬಂಧಿಸಿದ ನನಗೆ ಬೇಕಾದ ಮಾಹಿತಿಗಳನ್ನು ಕಲೆಹಾಕಲು ಬಹಳವಾಗಿ ಶ್ರಮಿಸಿ ನೆರವಾದ ಡಾ. ಎಸ್. ಎಲ್. ಶ್ರೀನಿವಾಸಮೂರ್ತಿಯವರಿಗೂ, ಅನೇಕ ವಿಧಗಳಲ್ಲಿ ಸಹಾಯ ಮಾಡಿದ ಶ್ರೀ ಬಿಳಿಕೆರೆ ಗುರುಪ್ರಸಾದ್ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಕಥನವು ಸಿದ್ಧವಾದ ಕೂಡಲೇ 'ಇದನ್ನು ಪ್ರಕಟಿಸಲು ಸಾಧ್ಯವೇ?' ಎಂದು ವಿಚಾರಿಸಿದಾಗ ವಸಂತ ಪ್ರಕಾಶನದ ಒಡೆಯರಾದ ಶ್ರೀ ಮುರಳಿಯವರು, ಪ್ರಕಟಿಸಲು ಒಪ್ಪಿದುದು ಮಾತ್ರವಲ್ಲದೆ, ದೊಡ್ಡದಾದ ಈ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಲು ತಕ್ಷಣವೇ ಕಾರ್ಯಪ್ರವೃತ್ತರಾದರು. ಅವರ ತಂದೆ ಶ್ರೀ ಶ್ರೀವಾಸನ್ ಅವರೂ ನನ್ನ ಬಗ್ಗೆ ವಿಶ್ವಾಸವಿಟ್ಟಿದ್ದವರು; ಮುರಳಿಯವರು ನನ್ನ ಇತರ ಅನೇಕ ಕೃತಿಗಳನ್ನು ಈ ಹಿಂದೆ ಪ್ರಕಟಿಸಿದಂತೆ ಇದನ್ನೂ ಹೊರತರುತ್ತಿದ್ದಾರೆ. ಪುಸ್ತಕವು ಸುಂದರವಾಗಿ ಪ್ರಕಟವಾಗಿದೆಯೆಂದು ಹೇಳುವುದೇ ಬೇಡ; ಎಲ್ಲ ಕೃತಿಗಳನ್ನೂ ಅವರು ಒಂದೇ ಬಗೆಯ ಶ್ರದ್ಧೆಯಿಂದ ಪ್ರಕಟಿಸುವವರು. ಅವರಿಗೆ ಕೃತಜ್ಞತೆಯನ್ನು ಹೇಳುವುದು ಔಪಚಾರಿಕವಾದುದು. ಶ್ರೀ ಮುರಳಿಯವರ ತಾಯಿಯವರಿಗೂ, ವಸಂತ ಪ್ರಕಾಶನದ ಸಿಬ್ಬಂದಿ ವರ್ಗಕ್ಕೂ ನನ್ನ ನೆನಕೆಗಳು ಸಲ್ಲುತ್ತವೆ.

– ಪಿ. ವಿ. ನಾರಾಯಣ

ಪ್ರಕಾಶಕರ ಮಾತು

ಕನ್ನಡದ ಹಿರಿಯ ಲೇಖಕರೂ ಹೆಸರಾಂತ ವಿದ್ವಾಂಸರೂ ಆದ ಡಾ. ಪಿ.ವಿ. ನಾರಾಯಣ ಅವರು ಪ್ರಧಾನ ವೆಂಕಪ್ಪಯ್ಯ ವಿರಚಿತ ಮಹತ್ವದ ಕಾವ್ಯಕೃತಿ 'ಶ್ರೀರಾಮಕಥಾಮೃತ' (ವೆಂಕಾಮಾತ್ಯ ರಾಮಾಯಣ)ವನ್ನು ಆಧುನಿಕ ಗದ್ಯಕಥನ ರೂಪಕ್ಕೆ ತಂದಿದ್ದು ಅದನ್ನು ಓದುಗರಿಗೆ ಈ ಮೂಲಕ ಪ್ರಸ್ತುತ ಪಡಿಸುವಲ್ಲಿ ಬಹಳ ಸಂತೋಷಪಡುತ್ತಿದ್ದೇವೆ.

ಈ ಬೃಹತ್ ಹೊತ್ತಿಗೆಯನ್ನು ಎರಡು ಸಂಪುಟಗಳಲ್ಲಿ ಪ್ರಸ್ತುತ ಪಡಿಸಲಾಗುತ್ತಿದ್ದು, ಮೊದಲನೆಯ ಸಂಪುಟದಲ್ಲಿ ಬಾಲಕಾಂಡ, ಅಯೋಧ್ಯಾಕಾಂಡ ಮತ್ತು ಅರಣ್ಯಕಾಂಡ ನಿರೂಪಿತಗೊಂಡಿದ್ದರೆ, ಎರಡನೆಯ ಸಂಪುಟದಲ್ಲಿ ಕಿಷ್ಕಿಂಧಾಕಾಂಡ, ಸುಂದರಕಾಂಡ ಮತ್ತು ಯುದ್ಧಕಾಂಡ ಮೂಡಿಬಂದಿವೆ.

ಈ ಮಹತ್ವದ ಕೃತಿಯನ್ನು ಗದ್ಯರೂಪದಲ್ಲಿ ತಂದುಕೊಟ್ಟಿರುವ ಡಾ. ಪಿ.ವಿ. ನಾರಾಯಣ ಅವರಿಗೆ ನಮ್ಮ ಹೃದಯಪೂರ್ವಕ ಧನ್ಯವಾದಗಳು. ಅಂತೆಯೇ, ಕೃತಿಯ ಮುಖಪುಟ ಹಾಗೂ ಒಳಪುಟಗಳಿಗೆ ಸಾಂದರ್ಭಿಕ ಚಿತ್ರಗಳನ್ನು ಮನೋಜ್ಞವಾಗಿ ರಚಿಸಿಕೊಟ್ಟಿರುವ ಕಲಾವಿದ ಶ್ರೀ ಪಿ. ಪುಣ್ಯಕೀರ್ತಿಯವರಿಗೂ ಮನದಾಳದ ಧನ್ಯವಾದಗಳು.

– **ಪ್ರಕಾಶಕರು**

ಪರಿವಿಡಿ

ಅಯೋಧ್ಯಾಕಾಂಡ ೧೩೯--೩೪೨

ಅರಣ್ಯಕಾಂಡ ೩೪೩–೪೯೦

ಬಾಲಕಾಂಡ

೧. ಪೀಠಿಕೆ

ಹಿತಕರವಾದ ಭೃಂಗನಾದದಂತೆ, ಚೆಲುವಾದ ಕೋಗಿಲೆಯ ಕಾಕಲೀರವದಂತೆ, ವೀಣಾವಾದನದ ಸಂಗೀತದಂತೆ, ಈ ನನ್ನ ಕೃತಿಯು ಎಲ್ಲ ಬಲ್ಲವರಿಗೂ ಸತ್ಕವಿಗಳಿಗೂ ಆನಂದಕರವೆನಿಸುವುದರಲ್ಲಿ ಸಂಶಯವಿಲ್ಲ. ಸವಿನುಡಿಯ ಮಾಧುರ್ಯದಿಂದ ಕೂಡಿದ ಅನವದ್ಯ ಕವಿತೆಯು ಸರಸ ಜನಗಳಿಗೆ ಹೃದ್ಯವಾಗಿರುವಂಥದು; ಅರಳಿದ ಸಂಪಿಗೆ ಹೂವಿನ ಹಿತಕರವಾದ ಪರಿಮಳವು ದುಂಬಿಗಳಿಗೆ ಸರಿಹೋಗದಿದ್ದರೂ ಅತಿಶಯವಾದ ಕಾವ್ಯವು ಸಹೃದಯರಿಗೆ ಆನಂದಕಾರಕವಾಗಿರುವುದಲ್ಲವೇ? ಶ್ರೀರಾಮ ಎಂಬ ಬೀಜಾಕ್ಷರವನ್ನು ನೆನೆಸಿಕೊಂಡರೆ ಸಾಕು, ಅಮೃತೋಪಮವಾಗಿ ಇಷ್ಟಾರ್ಥಗಳೆಲ್ಲ ನೆರವೇರುವುದಲ್ಲದೆ, ಆರೋಗ್ಯ ಸಂತಾನಭಾಗ್ಯಗಳು ಉಂಟಾಗುತ್ತವೆ; ಹೀಗಾಗಿ ಅನವರತವೂ ರಾಮನನ್ನು ಎಲ್ಲರೂ ಧ್ಯಾನಿಸುವಂತಾಗಲಿ. ದುಷ್ಕೃತಿಯು ಉತ್ತಮರಾದವರಿಗೆ ಆನಂದಕರವಾಗಬಲ್ಲುದೇ, ಸಾಮಾನ್ಯ ಮಣಿಯೊಂದು ನಾಗಮಣಿಗೆ ಎಣೆಯಾಗಬಲ್ಲುದೇ? ಈ ಕಾವ್ಯವು ಯೋಗಿಗಳ ಆಭರಣ, ವಿರಾಗಿಗಳ ಒಡವೆ, ಅದೃಷ್ಟದ ನೆಲೆವನೆ, ವೇದಾಂತದ ಆಲಯ, ಸಾಂಖ್ಯತಂತ್ರಗಳ ತವರುಮನೆ, ಅತುಲ ಭಕ್ತಿಯ ಮಂದಿರ, ಭಾಗವತರ ಮನೆ, ಕ್ರಿಯಾಮಂತ್ರಗಳ ನೆಲೆ, ಭೋಗಿಗಳ ಸಂತಸ, ಮಂತ್ರಿಗಳ ಸನ್ಮಾನ, ರಾಜ್ಯಾಧಿಪತಿಗಳಿಗೆ ಆಧಿಪತ್ಯದ ಏಳಿಗೆ ಎಂಬುದರಲ್ಲಿ ಸಂಶಯವಿಲ್ಲ. ಮುನಿತಿಲಕ ವಾಲ್ಮೀಕಿಯ ಅಮೃತದಂತಹ ಮಾತಿನ ಸರೋವರವೂ, ಶುಭಕರವಾದ ಸರಸ ಮೃದುವಚನರಚನೆಯಿಂದ ಕೂಡಿದುದೂ ಆದ ಈ ಮಹಾಕಾವ್ಯವನ್ನು ಭಕ್ತಿಯಿಂದ ಸೂರ್ಯಕುಲವಂಶಜನೂ ಸರ್ವಜ್ಞನೂ ಆದ ಶ್ರೀರಾಮನ ಆಜ್ಞೆಯಿಂದ ಸಮುದ್ರಪರ್ಯಂತವಾದ ಜಗತ್ತಿನಲ್ಲಿ ಪಂಡಿತರಿಗೆ ಆಹ್ಲಾದಕಾರಿಯೆನಿಸಲೆಂದು ಹಾರೈಸಿ ಶ್ರೀರಾಮನ ಸಚ್ಚರಿತೆಯನ್ನು **ಬಾಲವಾಲ್ಮೀಕಿಯು** ವಿನಯದಿಂದ ರಚಿಸಿರುವನು. ಇಚ್ಛೆಸಿದುದನ್ನು ದಯಪಾಲಿಸುವ ಕಮಲನಾಭ, ಕಲ್ಯಾಣಗುಣಗಳ ತವನಿಧಿ, ಚಂದ್ರನಂತಹ ಕಾಂತಿಯಿಂದ ಕೂಡಿದ ಕಣ್ಣುಳ್ಳವನು, ಸಾಮಗಾನಪ್ರಿಯ, ಸರ್ವಲೋಕೇಶ, ಸೀತಾರಮಣ, ವಿದ್ವಜ್ಜನಸೇವಿತ ಪಾದಪಂಕಜ,

ರಾಮಪುರದರಸ, ರಘುವಂಶಚೂಡಾರತ್ನನೇ, ಸಹಜಾನಂದಮಯರೂಪನೇ, ಭಜಿಸುವವರ ಹೃದಯದೀಪವೇ, ನಮ್ಮನ್ನು ಪ್ರೇಮದಿಂದ ಸಲಹು.

೨. ಶಿವನು ಪಾರ್ವತಿಗೆ ಹೇಳಿದ ರಾಮಕತೆಯನ್ನು ಸೂತ ಶೌನಕಾದಿಗಳಿಗೆ ಹೇಳಿದುದು

ಭೋಗಿಭೂಷಣನ ಮಣಿಮಕುಟಮಾಲೆ ಎನ್ನಿಸಿದ ಭಾಗೀರಥೀ ನದೀತೀರದ ಆಶ್ರಮದಲ್ಲಿ ವಾಸವಾಗಿದ್ದ ಯೋಗಿವರರು ಒಂದು ದಿನ ಬಹಳ ಭಕ್ತಿಯಿಂದ ಸತ್ರಯಾಗವನ್ನು ಮಾಡಿದರು. ಆಗ ಅಲ್ಲಿಗೆ ಆಗಮಗಳ ಅಂತರಾರ್ಥವನ್ನು ಬಲ್ಲವರೂ ಯೋಗಾನುಸಂಧಾನ ಮಾಡುವವರೂ ಆದ ಸೂತಮುನಿಗಳು ಚಂದ್ರನು ಉದಯಿಸುವ ರೀತಿಯಲ್ಲಿ ಆಶ್ರಮಕ್ಕೆ ಬಂದರು. ಅವರ ಬರವನ್ನು ಕಾಣುತ್ತಲೇ ಅಲ್ಲಿದ್ದ ವಿದ್ವಜ್ಜನರು ಆನಂದಭರಿತರಾಗಿ ಎದ್ದು ಇದಿರಾಗಿ ಅರ್ಘ್ಯಪಾದ್ಯಾದಿಗಳನ್ನಿತ್ತು ಅವರನ್ನು ಆದರದಿಂದ ಬರಮಾಡಿಕೊಂಡರು. ತಮ್ಮ ಸುತ್ತಲೂ ಕುಳಿತ ಮುನಿಜನರು ಸರಸವಾದ ಮಾತುಗಳಿಂದ ಸೂತರ ಕುಶಲವನ್ನು ವಿಚಾರಿಸಿ, ಅವರನ್ನು ನಾನಾ ಬಗೆಯಲ್ಲಿ ಸಂಭ್ರಮದಿಂದ ನುತಿಗೈದರು. ಆ ಹೊತ್ತಿಗೆ ಸರಿಯಾಗಿ ರಾಮನೇ ಸರ್ವಾತ್ಮನೆಂದು ಸದಾ ತಮ್ಮ ಚಿತ್ತದಲ್ಲಿ ರಾಮ ಎಂಬ ಎರಡು ಅಕ್ಷರಗಳನ್ನು ಜಪಿಸುತ್ತ ಈ ಜಗತ್ತನ್ನು ರಕ್ಷಿಸಲೆಂದು ಯತಿಕುಲಕ್ಕೆ ಚಂದ್ರನಂತಿದ್ದ ವಾಲ್ಮೀಕಿ ಮುನಿಗಳು ಆ ತಪಸ್ವಿಗಳ ಸಭೆಗೆ ತಮ್ಮ ಶಿಷ್ಯಸಮೂಹದೊಡನೆ ಆಗಮಿಸಿದರು. ಅವರನ್ನು ಕಾಣುತ್ತಲೇ ಅಲ್ಲಿದ್ದ ಯತಿಸಮೂಹವು ಹರ್ಷದಿಂದ ಕೂಡಿತು. ಅವರನ್ನು ಕಂಡಾಕ್ಷಣವೇ ಪಾತಕಗಳೆಲ್ಲ ಓಡಿಹೋದವು, ನಾಲಗೆಗಳು ರಾಮನಾಮವನ್ನು ಜಪಿಸಿದವು.

ಸಾಧುಸಂಸರ್ಗದ ಮಹಿಮೆಯನ್ನು ಏನೆಂದು ಹೇಳುವುದು! ಅನೇಕ ಜನ್ಮಗಳ ಪುಣ್ಯ ಪರಿಪಾಕದಿಂದ ಸಾಧುಜನರ ಪ್ರೀತಿ ದೊರಕುತ್ತದೆ, ಅದರ ಕಾರಣದಿಂದಾಗಿ ಪಾಪಗಳೆಲ್ಲ ಹಾರಿಹೋಗುತ್ತವೆ, ಆಗ ಶ್ರೀರಾಮಭಕ್ತಿಯು ಮೂಡುತ್ತದೆ, ಸುಲಭಸಾಧ್ಯವಲ್ಲದ ವಿದ್ಯೆಯೂ ಕೈಸಾರುತ್ತದೆ, ಅದರಿಂದೊದಗುವ ಸುಜ್ಞಾನದ ಬಲದಿಂದಾಗಿ ವೈರಾಗ್ಯವೂ ಉಂಟಾಗುವುದು. ಹೀಗಾಗಿ ಮೋಕ್ಷಕ್ಕೆ ಸಜ್ಜನರ ಸಂಗವೇ ಕಾರಣ ಎಂದು ಹೇಳುವುದರಲ್ಲಿ ಅತಿಶಯವೇನಿದೆ! ಹೀಗೆ ಶ್ರುತಿಪುರಾಣಸ್ಮೃತಿಗಳ ಅರ್ಥವನ್ನು ಮರೆಯದೆ ಅದನ್ನು ಅನುಸರಿಸುತ್ತ ಪರಲೋಕಚಿಂತೆಯನ್ನು ಪಡೆದು ಶತ್ರುಮಿತ್ರರು, ಸ್ತುತಿನಿಂದೆಗಳು ಭಯಹರ್ಷಗಳು ಇವುಗಳ ಭೇದ ಅಳಿದು, ಹರಿಕಥಾಶ್ರವಣದಿಂದ ಹಗಲಿರುಳು ಸಂತೋಷದಿಂದ ಕೂಡಿ ರಾಗವಿರಾಗಗಳನ್ನು ಮೀರಿದ ದ್ವಂದ್ವಾತೀತತೆಯು ಉಂಟಾಗಿ ಭೂಮಿಯಲ್ಲಿ ಸಂತರು ಎನ್ನಿಸಿಕೊಂಡು ಬಾಳಬಹುದು. ವಾಲ್ಮೀಕಿ ಮುನಿಯ ದರ್ಶನಮಾತ್ರದಿಂದಲೇ ಉಂಟಾದ ಶ್ರೀರಾಮನ ನೆನಹಿನಿಂದ ಜನನಮರಣಗಳ ಬಂಧನಕ್ಕೆ ಹೆದರುವ ವ್ಯಕ್ತಿಯು ಸತ್ಸಂಗವನ್ನು ಬಯಸಿ ಸುಖದಿಂದಿರುತ್ತಾನೆ. ಆದ್ದರಿಂದ ಋಷಿಗಳೆಲ್ಲರೂ ಸಂತಸವನ್ನು ಹೊಂದಿ ಸೂತರೊಡನೆ, "ಮುನಿವರ್ಯರೇ, ಸರ್ವಜ್ಞರೂ ಸತ್ಯಬೋಧರೂ ಆದ ತಮಗೆ ನಿಗಮ

ಆಗಮಗಳ ಅಂತರಾರ್ಥಗಳೆಲ್ಲ ಅಂಗೈ ನೆಲ್ಲಿಕಾಯಿ. ಭಾರತವೇ ಮುಖ್ಯವಾದ ಸತ್ಕಥೆಗಳಲ್ಲಿ ಶ್ರೀರಾಮನ ಪರಮತತ್ವಗಳನ್ನು ನಾನಾ ಬಗೆಯಲ್ಲಿ ಹೇಳಿರುವಿರಿ. ಅವನೇ ಹರಿ ಹರ ಬ್ರಹ್ಮ ಎಂದೂ, ಹರಿಹರಾತ್ಮಕನೆಂದೂ, ಮುಮ್ಮೂರ್ತಿಯೆಂದೂ, ನಿರ್ಗುಣಬ್ರಹ್ಮನೆಂದೂ ಪರಿಪರಿಯಾಗಿ ವರ್ಣಿಸಿರುವಿರಿ. ತತ್ವವು ನಾನಾ ವಿಧಗಳಾಗಿರುವುದರಿಂದ ಅದರ ಅರ್ಥ ನಮಗೆ ತಿಳಿಯುವುದು ಕಷ್ಟ. ವಿವಿಧ ಬಗೆಯ ವರ್ಣನೆಗಳಿಂದಾಗಿ ಭಾರತವೇ ಮುಂತಾದ ಗ್ರಂಥಗಳಲ್ಲಿಯೂ ನಮಗೆ ಪರಸ್ಪರ ವಿರೋಧವು ಗೋಚರಿಸಿ ಮನಸ್ಸಿನಲ್ಲಿ ಅನುಮಾನವು ಉಂಟಾಗುತ್ತದೆ. ತಪೋಧನರೇ, ಹೀಗಾಗಿ ನಿಜದ ನೆಲೆಯನ್ನು ಸರಿಯಾಗಿ ತಿಳಿಯದೆ ಜನರು ವೈಷಮ್ಯದಿಂದ ತೊಳಲುತ್ತಿದ್ದಾರೆ.

"ಸುರರೆಲ್ಲರೂ ಸೇರಿ ಶ್ರೀಹರಿಯನ್ನು ಪ್ರಾರ್ಥಿಸಿ 'ಲೋಕವನ್ನು ಪೊರೆಯಲು ಮನುಷ್ಯರೂಪದಲ್ಲಿ ನೀನು ಜನಿಸಬೇಕು, ಅಯೋಧ್ಯೆಯ ರಾಜನಾದ ದಶರಥನ ಮೂವರು ಅರಸಿಯರಲ್ಲಿ ಹ್ರೀಶ್ರೀಸುಕೀರ್ತಿಗಳು ಸೇರಿ ಒಟ್ಟಾರೆ ನಾಲ್ಕು ದೇಹಗಳೆನ್ನಿಸಿಕೊಂಡು ಲೋಕಕಂಟಕನಾಗಿರುವ ದುರುಳ ದಶಕಂಧರನನ್ನು ಸಂಹರಿಸಬೇಕೆಂದು' ದೇವತೆಗಳು ಬೇಡಿಕೊಂಡಾಗ ಶ್ರೀಹರಿಯು ದಶರಥನ ಮಗನಾಗಿ ಹುಟ್ಟಿದನೆಂದು ಬಾಲಕಾಂಡದಲ್ಲಿ ಉಕ್ತವಾಗಿದೆ. ರಕ್ಕಸನಾದ ರಾವಣನನ್ನು ವಧಿಸಬೇಕೆಂದು ದೇವತೆಗಳ ವೃಂದವು ಬಿನ್ನವಿಸಲು ಶ್ರೀ ಹರಿಯು ರಘುವಂಶಸಂಭೂತನಾಗಿ ರಾರಾಜಿಸಿದನೆಂದು ಅಯೋಧ್ಯಾಕಾಂಡದಲ್ಲಿ ವರ್ಣಿತವಾಗಿದೆ. ಸಾಕ್ಷಾತ್ ಲಕ್ಷ್ಮೀದೇವಿಯೇ ಸೀತೆಯಾಗಿಯೂ, ಹರಿಯು ರಾಮನಾಗಿಯೂ ಮನುಷ್ಯರಾಗಿ ಜನ್ಮ ತಾಳಿ ರಾವಣನನ್ನು ಕೊಂದರೆಂದು ಯುದ್ಧಕಾಂಡದಲ್ಲಿ ಹೇಳಿದೆ. ಬ್ರಹ್ಮನ ಪ್ರಾರ್ಥನೆಯನ್ನು ಮನ್ನಿಸಿ ವಿಷ್ಣುವು ಕರುಣೆಯಿಂದ ಮನುಜಾವತಾರವನ್ನು ಧರಿಸಿ ತ್ರಿಜಗವನ್ನೂ ಪೊರೆದ ಎಂದು ಉತ್ತರಕಾಂಡದಲ್ಲಿ ತಿಳಿಯಪಡಿಸಿದೆ. ದೇವತೆಗಳಿಗೆ ಹೆದರದಿರುವಂತೆ ಹೇಳಿ ಮಧುವೈರಿ ತಾನೇ ದಶರಥ ಮಹಾರಾಜನ ಮಗನಾಗಿ ಹುಟ್ಟಿ ರಕ್ಷಿಸುವೆನೆಂದು ಅಭಯವನ್ನಿತ್ತುದಾಗಿ ಪದ್ಮಪುರಾಣದಲ್ಲಿ ಉಕ್ತವಾಗಿದೆ. ಶಿವನ ಸ್ತುತಿ ಮಾಡಿದ ರಾಮನನ್ನು ಸೀತೆಯು 'ನೀನೇ ನಾರಾಯಣ, ಇದು ಸತ್ಯ' ಎಂದು ಹೇಳಿದುದಾಗಿ ಭಾಗವತದಲ್ಲಿ ಸೂಚಿತವಾಗಿದೆ. ಶ್ರೀಹರಿಯ ನಾಲ್ಕು ಅಂಶಗಳಲ್ಲಿ ಲಕ್ಷ್ಮಣ, ಭರತ, ಶತ್ರುಘ್ನ ಎಂಬ ಹೆಸರುಗಳನ್ನು ಹೊತ್ತು ಅಗಾಧ ಸಾಗರವನ್ನು ದಾಟಿ ದಶಗಳನನ್ನು ಸಂಹರಿಸಿ ಭೂಮಿಯನ್ನು ಪೊರೆಯಬೇಕೆಂದು ಕೇಳಿಕೊಂಡ ದೇವತೆಗಳ ಮಾತನ್ನು ಪುರಸ್ಕರಿಸಿ ಸೂರ್ಯವಂಶದ ದಶರಥನ ಮಕ್ಕಳಾಗಿ ಹುಟ್ಟಿದರೆಂದು ಭಾಗವತದಲ್ಲಿ ಕೂರ್ಮಪುರಾಣದ ಅರ್ಥವನ್ನು ಹೇಳಲಾಗಿದೆ. ಶ್ರೀರಾಮನೆಂದರೆ ಸಾಕ್ಷಾತ್ ವಿಷ್ಣುವೇ, ದಿವ್ಯನಾಮರಾದ ಲಕ್ಷ್ಮಣ ಭರತ ಶತ್ರುಘ್ನರು ಮಹಾ ಬಲಿಷ್ಠರು, ಭೀಮಬಲರು, ಸಂಗ್ರಾಮಕೋವಿದರು, ವಿಷ್ಣುಭಕ್ತಿಯಿಂದ ಕೂಡಿದವರು. 'ಮನುಷ್ಯರಿಂದ ರಾವಣನಿಗೆ ಮೃತಿಯಿಲ್ಲದ ಕಾರಣದಿಂದಾಗಿ ನೀನು ನರನಂತೆ ಅವತರಿಸಿ ಅವನನ್ನು ಕೊಲ್ಲು' ಎಂದು ಬ್ರಹ್ಮನು ಬಿನ್ನವಿಸಿಕೊಳ್ಳಲು, ಭೂಸುರರನ್ನು ಸಲಹುವ ಉದ್ದೇಶದಿಂದ ಮನುಷ್ಯನಾಗಿ ಜನ್ಮ ತಾಳುವೆನೆಂದು ಆಶ್ವಾಸನೆಯಿತ್ತು ಹೋದನೆಂದು ವಿಷ್ಣುಪುರಾಣದಲ್ಲಿ ಹೇಳಲಾಗಿದೆ. ಇದರಿಂದ ಶ್ರೀಹರಿಯ ಅಂಶವೇ ದಶರಥನಿಗೆ ಮಕ್ಕಳಾಗಿ ಹುಟ್ಟಿದರೆಂಬುದು ತಿಳಿಯುತ್ತದೆ.

ಶ್ರೀಪತಿ ಸಹಸ್ರಾಕ್ಷ ಶಾರ್ಙ್ಗಧರ ಚಿನ್ಮಯ ಪಾಪಹರ ವಾಗೀಶ ಕಲಿ ಶೈಲಚಾಪನ ಅರಸಿಯ ಪೊರೆದ ದಶರಥಾತ್ಮಜನಾದ ಈತನು ಮೂಲದಲ್ಲಿ ರೂಪರಹಿತನಾದ ಶ್ರೀಮನ್ನಾರಾಯಣ ಎಂದು ಸಾಂದೀಪಸಂಹಿತೆಯೊಳಗೆ ಹೇಳಿದೆ; ಚಿನ್ಮಯನೂ ಉಪಾಧಿರಹಿತನೂ ಆದ ಹರಿಯು ದಶರಥನ ಮಗನಾಗಿ ಹುಟ್ಟಿದನೆಂದು ರಾಮಕಾಶಿನಿಯಲ್ಲಿ ಉಕ್ತವಾಗಿದೆ. ಭೂಭಾರವನ್ನಿಳುಹಬೇಕೆಂದು ದೇವಸಂತತಿಯು ಪ್ರಾರ್ಥಿಸಲು ಲಕ್ಷ್ಮೀಸಹಾಯಕನು ರಾಮನೆಂಬ ಹೆಸರಿನಿಂದ ರಘುಕುಲದಲ್ಲಿ ಜನಿಸಿ ದುರ್ಜನಸಮೂಹವನ್ನು ನಾಶಪಡಿಸಿ ಸುಗ್ರೀವಮುಖ್ಯರಾದ ಕಪಿವರರಿಂದ ಕೂಡಿ ಅಯೋಧ್ಯೆಗೆ ಮರಳಿದನೆಂದು ಈ ಗ್ರಂಥಗಳೆಲ್ಲ ವಿಸ್ತಾರವಾಗಿ ಹೇಳುತ್ತಿವೆ; ಆದರೆ ಮತ್ತೊಂದು ಕಡೆ ಅವನನ್ನು ಶಿವನೆಂದೂ ಹೇಳುತ್ತಿವೆ. ಒಮ್ಮೆ ಶಿವನು ಸುರನಿಚಯಕ್ಕೆ, 'ಹೆದರದಿರಿ, ನಾನು ರಘುಕುಲದಲ್ಲಿ ಮನುಷ್ಯರೂಪಿನಿಂದ ಹುಟ್ಟಿ ರಾಮನೆಂಬ ಹೆಸರಿನಿಂದ ದಶವದನನನ್ನು ಸಂಹರಿಸುತ್ತೇನೆ; ಮಾನುಷಾಕೃತಿಯಲ್ಲಿ ನಾನು ರಾಮನಾಗಲು, ವನಮಾಲಿಯು ಲಕ್ಷ್ಮಣನಾಗಿಯೂ ಶಂಖಚಕ್ರಗಳು ಭರತಶತ್ರುಘ್ನರಾಗಿಯೂ, ಗಿರಿಜಾತೆಯೇ ಸೀತಾದೇವಿಯಾಗಿಯೂ ಹುಟ್ಟುತ್ತಾರೆ' ಎಂದು ಹೇಳಿದುದಾಗಿ ತಿಳಿದವರು ಧರ್ಮಕಾಂಡದಲ್ಲಿ ಉಕ್ತವಾಗಿದೆ ಎನ್ನುತ್ತಾರೆ. 'ವ್ಯಥೆಪಡಬೇಡಿ, ನಾನು ಕೆಲವು ದಿನಗಳಲ್ಲಿಯೇ ದಶರಥನ ಮಗನಾಗಿ ಹುಟ್ಟಿ ರಾವಣನನ್ನು ವಧಿಸಿ ದಂಡಕಾರಣ್ಯದಲ್ಲಿ ಮೋಕ್ಷವನ್ನೀಯುತ್ತೇನೆ; ವಿಷ್ವಕ್ಸೇನನೊಡನೆ ನಾನು ಜೊತೆಯಾಗಿ ಮನುಷ್ಯಾಕೃತಿಯನ್ನು ತಳೆದು ರಾಮಲಕ್ಷ್ಮಣ ಎಂಬ ಹೆಸರಿನಿಂದ ಜನ್ಮ ತಾಳಿ ದಶಾನನನೇ ಮುಖ್ಯರಾದ ರಕ್ಕಸರನ್ನು ಸಂಹರಿಸುತ್ತೇನೆ, ನೀವೆಲ್ಲ ಕರಡಿಗಳಾಗಿ ಹುಟ್ಟಿ ತುಂಗ ಭದ್ರಾ ನದಿಗಳ ದಡದಲ್ಲಿ ಮುನಿಸೇವೆಮಾಡುತ್ತಿರಿ' ಎಂದು ಹೇಳಲು ಅದನ್ನು ಕೇಳಿದ ಸುರನಿಚಯವು ಹಿಗ್ಗುತ್ತ ತಮ್ಮ ಮನೆಗಳಿಗೆ ಹೋದರು. 'ರಾಮನೇ, ನೀನೇ ಶಂಕರನಲ್ಲವೇ? ರಾವಣಕುಲವನ್ನು ನಾಶಗೈಯಲು ರಾಮನಾಗಿ ಜನ್ಮವೆತ್ತಿದೆ' ಎಂದು ಮತಂಗನು ಸ್ತುತಿ ಮಾಡಿದುದಾಗಿ ಶೇಷಧರ್ಮ, ಬ್ರಹ್ಮಾಂಡ, ಮತ್ಸ್ಯ, ಸ್ಕಾಂದ ಮುಂತಾದ ಮುಖ್ಯ ಪುರಾಣಗಳಲ್ಲಿ ಹೇಳಿದೆ. ಆದರೆ ವಾಲ್ಮೀಕೀಯದಲ್ಲಿ ರಾಮನು ಬ್ರಹ್ಮ ಎಂದು ಹೇಳುತ್ತಿದೆ; ಯಜ್ಞಕಾಲದಲ್ಲಿ ಅಗ್ನಿಯಿಂದ ಹುಟ್ಟಿದ ಪುರುಷನು ತಾನು ಪ್ರಾಜಾಪತ್ಯ ಎಂದು ಉಸುರಿ, ನೂರಾರು ಅಶ್ವಮೇಧಗಳನ್ನು ಮಾಡಿ ಸಾವಿರಾರು ಚಿನ್ನದ ಗೋವುಗಳನ್ನು ದಾನವಾಗಿತ್ತು ರಘುವೀರನು ಬ್ರಹ್ಮಲೋಕವನ್ನು ಸೇರುತ್ತಾನೆ ಎಂದಿದೆ. ಹತ್ತು ಸಾವಿರ ವರ್ಷಗಳ ಕಾಲ ದಶರಥಾತ್ಮಜನು ರಾಜ್ಯಪ್ರತಿಪಾಲನೆಯನ್ನು ಮಾಡಿ ಸತ್ಯಲೋಕವನ್ನು ಸೇರಿದನೆಂಬ ವಿಷಯವು ಸಂಗ್ರಹ ರಾಮಾಯಣದಲ್ಲಿ ಉಕ್ತವಾಗಿದೆ. ದೇವತೆಗಳಿಂದಾಗಿ ಚತುರ್ಮುಖ ಬ್ರಹ್ಮನೇ ಭೂಮಿಯಲ್ಲಿ ಹುಟ್ಟಿ ರಾವಣನನ್ನು ಯಮವಶನನ್ನಾಗಿಸಿದನೆಂದು ಬ್ರಹ್ಮಾಂಡಪುರಾಣವು ನಿರೂಪಿಸುತ್ತದೆ. ಬ್ರಹ್ಮವಿಷ್ಣುಮಹೇಶ್ವರರು ಹತ್ತುತಲೆಯವನನ್ನು ಕೊಲ್ಲುವ ರೀತಿಯನ್ನು ಕುರಿತು ಆಲೋಚಿಸುತ್ತಿರುವಾಗ, ಅವನಿಗೆ ಹರಿಹರರಿಂದಲೇ ಮೃತಿಯುಂಟಾಗುವುದೆಂದು ಅಶರೀರವಾಣಿಯು ಹೇಳಿತೆಂದೂ ಅದಕ್ಕನುಗುಣವಾಗಿ ರಾಮನನ್ನು ಹರಿಹರಾತ್ಮಕನಾದ ದುರಿತಹರ ಎಂದು ಸ್ಕಾಂದಪುರಾಣವು ಹೇಳುತ್ತವೆ. ರಾಮನು ಕೇವಲ ಮನುಷ್ಯನಲ್ಲ, ಅವನು ಪರಬ್ರಹ್ಮ; ಹರನ ರೂಪದಿಂದ ಸಂಹಾರ ಮಾಡುವವನೂ, ಹರಿ ರೂಪಿನಿಂದ ಪರಿಪಾಲನೆ ಮಾಡುವವನೂ ಅವನೇ; ಹೀಗಾಗಿ

ಅವನು ಶಿವವಿಷ್ಣುರೂಪನಾದ ಪರಮಪುರುಷ; ಇದನ್ನು ಅರಿತವನು ಮುಕ್ತನಾಗುತ್ತಾನೆ, ಅದನ್ನು ತಿಳಿಯದವನು ಅಜ್ಞಾನಿ ಎಂಬುದು ಸಿದ್ಧಾಂತ. ಹತ್ತುತಲೆಯವನನ್ನು ಸಂಹರಿಸಬೇಕೆಂದು ದೇವತೆಗಳೆಲ್ಲ ಹರಿಯ ಬಳಿ ಪ್ರಾರ್ಥಿಸಿಕೊಂಡಾಗ, ಚಕ್ರಾಯುಧವೇ ಪರಮೇಶ್ವರನ ಅಂಶದಿಂದ ದಶರಥಪುತ್ರನಾಗಿ ಹುಟ್ಟಿದ ಎಂಬ ಅರ್ಥವು ಗರುಡಪುರಾಣದ ಆರಂಭದಲ್ಲಿ ಉಕ್ತವಾಗಿದೆ. ಬ್ರಹ್ಮನಾಗಿ ನಿರ್ಮಿಸುವವನೂ, ಹರಿಯಾಗಿ ಲೋಕವನ್ನು ಪಾಲಿಸುವವನೂ, ಹರನಾಗಿ ಸಂಹರಿಸುವವನೂ ರಘುನಾಥನೇ, ಇದನ್ನು ನಾನಾ ಶಾಸ್ತ್ರಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಹೇಳಲಾಗಿದೆ. ಇದರಿಂದಾಗಿ ನಮಗೆ ಸಂಶಯವು ತಲೆದೋರುತ್ತದೆ. ಆದ ಕಾರಣ, ಸೂತಮುನಿಗಳೇ, ತತ್ತ್ವಗಳನ್ನು ಬಲ್ಲವರಾದ ತಾವು ಈ ಗೊಂದಲವನ್ನು ಪರಿಹರಿಸಿ" ಎಂದು ಮುನಿವರರೆಲ್ಲ ಬೇಡಿಕೊಂಡಾಗ, ಅವರು ಮಂದಸ್ಮಿತರಾಗಿ ಹೀಗೆಂದರು: "ಪ್ರಶ್ನೆ ಚೆನ್ನಾಗಿದೆ, ಇಂತಹ ಪ್ರಶ್ನೆಯು ಬ್ರಹ್ಮನಿಷ್ಠರಿಗೆ ಮಾತ್ರ ಹೊಳೆಯುತ್ತದೆಯೇ ಹೊರತು ಮಂದಭಾಗ್ಯರಿಗಲ್ಲ" ಎಂದು ಶ್ರೀರಾಮನ ಮಹಿಮೆಗಳನ್ನು ನಾನಾ ಪರಿಯಾಗಿ ಬಣ್ಣಿಸಿ, "ನನ್ನ ಅನುಭವಕ್ಕೆ ತಿಳಿದಷ್ಟು ಮಟ್ಟಿಗೆ ಪರಮೇಶ್ವರನು ಗಿರಿಜಾತೆಗೆ ಹೇಳಿದ ಶ್ರೀರಾಮಚರಿತೆಯನ್ನು ನಿಮಗೆ ಹೇಳುತ್ತೇನೆ" ಎಂದು ಹೇಳಲುಪಕ್ರಮಿಸಿದರು.

ಪರಕ್ಕೆ ಪರತರವೆನಿಸುವ, ಪಾವನವಾದುದಕ್ಕಿಂತಲೂ ಹೆಚ್ಚು ಪಾವನವಾದ, ಶ್ರೇಷ್ಠವಾದ ಕೈವಲ್ಯಪದವೇ ಎನ್ನಿಸುವ ಕೈಲಾಸಪರ್ವತದಲ್ಲಿ ಗಿರಿಜೇಶನಾದ ಶಿವನ ಮಣಿಸಭಾಮಂಟಪ. ಪರಶಿವನು ಆಸನದಲ್ಲಿದ್ದಾನೆ. ಒಡ್ಡೋಲಗದಲ್ಲಿ ಬ್ರಹ್ಮ ಇಂದ್ರ ದಿಕ್ಪಾಲಕರೂ, ಸೂರ್ಯ ಚಂದ್ರ ನಕ್ಷತ್ರಗಳೂ, ನವಗ್ರಹಗಳೂ, ಶಿವನ ಪ್ರಮಥಗಣಗಳೂ ನೆರೆದಿದ್ದಾರೆ. ಅಲ್ಲಿ ಭೃಂಗೀಶನು ಮನೋಲ್ಲಾಸಕರವಾದ ನೃತ್ಯದಲ್ಲಿ ತೊಡಗಿದ್ದಾನೆ. ಶಿವನ ಎಡತೊಡೆಯಲ್ಲಿ ಮಂಡಿತಳಾದ ಪಾರ್ವತೀದೇವಿಯು, "ಮೃಡನೇ, ತತ್ತ್ವನಿಧಿಯೇ, ನಿರಂಜನನೇ, ಚೈತನ್ಯಯುಕ್ತವೂ ಚೈತನ್ಯರಹಿತವೂ ಆದುದೆಲ್ಲಕ್ಕೂ ಚೇತನವಾಗಿ ಅಡಗಿರುವವನೇ, ಸರ್ವಜ್ಞನೇ, ಸರ್ವಸಾಕ್ಷಿಯಾದವನೇ, ಆಪತ್ತು ಅಡರಿದಾಗ ನಿನ್ನ ಹೆಸರನ್ನು ನೆನೆದರೆ ಸಾಕು ಸರ್ವ ಅಭೀಷ್ಟಗಳನ್ನೂ ನೆರವೇರಿಸುವ ಕರುಣಾಮಯಿಯಾದವನು ನೀನು. ಅಂತಹ ನಿನ್ನ ಅಡಿಗಳಿಗೆರಗಿ ಬಿನ್ನವಿಸುವ ನನ್ನ ಮಾತುಗಳನ್ನು ಕೃಪೆಯಿಟ್ಟು ಕೇಳು. ಯೋಗಿಗಳು, ಭೋಗಿಗಳು, ಸತ್ಕರ್ಮದಲ್ಲಿ ನಿರತರಾದವರು, ತ್ಯಾಗಿಗಳು, ಆತ್ಮನೈಷ್ಠಿಕರು, ಶ್ವಪಚಿಗಳು, ಪ್ರೀತಿ-ಭಕ್ತಿಗಳಿಂದ ಮರೆವಿನಲ್ಲಾದರೂ ಒಮ್ಮೆ ನಿನ್ನನ್ನು ನೆನಪಿಸಿಕೊಂಡರೆ ಸಾಕು, ನೀನು ಭವರೋಗವನ್ನು ನೀಗಿಸಿ ನಿತ್ಯಾನಂದ ಸುಖವನ್ನು ದಯಪಾಲಿಸುತ್ತೀಯೆ. ಅದು ಸಾಧ್ಯವಾಗುವುದು ಹೇಗೆ ಎಂಬುದನ್ನು ಕೃಪೆಯಿಂದ ನಮಗೆ ತಿಳಿಸಿಕೊಡು, ಸ್ವಾಮಿ" ಎಂದು ಬೇಡಿಕೊಂಡಳು. ಆಗ ಅತ್ಯಂತ ಹರ್ಷಿತನಾದ ಸ್ವಾಮಿಯು ಹೀಗೆ ನುಡಿದ: "ನೀತಿ ತಪ್ಪಿದ ಮಹಾಪಾತಕಿಗಳಾದವರು ಕೂಡ ಪ್ರೀತಿಭೀತಿಗಳಿಂದ ಶ್ರೀರಾಮನ ನಾಮಸ್ಮರಣೆ ಮಾಡಿದರೆ ಸಾಕು, ಪಾಪ ಪರಿಹಾರವಾಗಿ ಹುಟ್ಟುಸಾವುಗಳನ್ನು ಗೆದ್ದು ಪರಮಶ್ರೇಯಸ್ಕರವಾದ ಪದವಿಯನ್ನು ಪಡೆಯುತ್ತಾರೆ, ಇದು ಖಂಡಿತ" ಎಂದು ನುಡಿದ ಪರಶಿವನ ಮಾತನ್ನು ಕೇಳಿದ ಅಗಜಾತೆಯು ಭೂತೇಂದ್ರನ ಪಾದಯುಗಳಕ್ಕೆ

ನಮಿಸಿ, "ಮುಮ್ಮೂರ್ತಿಗಳಿಗಿಂತಲೂ ಮಿಗಿಲಾದವನು ಎಂದು ಜ್ಞಾನಿಗಳೂ ನಿಗಮಗಳೂ ಬಣ್ಣಿಸುವ ಶ್ರೀಹರಿಯ ಸನ್ಮಹಿಮೆಯನ್ನು ಸರ್ವಜ್ಞಮೂರ್ತಿಯಾದ ನೀನು ನಮಗೆ ತಿಳಿಸಿಕೊಟ್ಟು ನಮ್ಮ ಸಂಶಯಗಳನ್ನು ಪರಿಹರಿಸಬೇಕು" ಎಂದು ಬೇಡಿಕೊಂಡಳು.

"ಹರಿಣಾಕ್ಷಿಯೇ, ನೀನೇ ಧನ್ಯೆ, ಮಾನ್ಯೆ, ಮೂರು ಲೋಕಗಳಲ್ಲಿಯೂ ಪವಿತ್ರತಮವಾದ ಶ್ರೀಹರಿಯ ಚಾರಿತ್ರವನ್ನು ಕೇಳಬೇಕೆಂದು ಅಪೇಕ್ಷಿಸಿದ್ದೀಯೆ. ಬ್ರಹ್ಮನೇ ಮುಂತಾದವರೂ ತಿಳಿಯದ ಅತ್ಯಂತ ರಹಸ್ಯಮಯವಾದ ನಿರುಪಮನೂ ನಿರಾಮಯನೂ ನಿತ್ಯನೂ ನಿರ್ಮಲನೂ ಪರಿಪೂರ್ಣನೂ ಪರತತ್ತ್ವಪಾವನನೂ ಪರಾತ್ಪರನೂ ಆದ ಸಾಸಿರನಾಮದೊಡೆಯನಾದ ಶ್ರೀರಾಮನ ಮಹಿಮೆಯನ್ನು ನಿನಗಾಗಿ ನಾನು ವಿಸ್ತಾರವಾಗಿ ನಿರೂಪಿಸುತ್ತೇನೆ. ಅವನೇ ಶ್ರೀಕರವಾದ ಗಾಯಿತ್ರಿಯು ಬೋಧಿಸುವ ಪರಬ್ರಹ್ಮ ಎಂದು ತಿಳಿದು ಸುಖಿಯಾಗು, ಗಿರಿಜೆ" ಎಂದು ಗಿರಿಜಾಪತಿಯು ಹೇಳಿದ. "ಮೃಡಮಹಾದೇವನೇ, ರಾಮನೇ ಪರಬ್ರಹ್ಮನೆಂದು ಹೇಗೆ ತಿಳಿಯುವುದು, ಗಾಯಿತ್ರಿಯಲ್ಲಿ ಬೋಧಿತವಾದುದು ಯಾವುದು ಎಂಬುದನ್ನು ವಿಸ್ತಾರವಾಗಿ ನಿರೂಪಿಸುವ ಕೃಪೆಮಾಡು" ಎಂದು ಬೇಡಿಕೊಂಡಳು.

ಆಗ ಪರಶಿವನು, "ಪೊಡವಿಧರನ ಅಣುಗಿಯೇ, ಗುಣಾಢ್ಯತ್ವದಿಂದ ಕಾರ್ಯಾದಿತ್ವ, ಅದರಿಂದ ಶರಣಸಂರಕ್ಷಕತೆ, ಬೆಳಕಿಗೆ ಬೆಳಗುವ ಶಕ್ತಿ, ಈ ಎಲ್ಲದರಿಂದ ಧೇಯತ್ತ್ವನಿಯಂತ್ರಿಕತೆ ಎನ್ನಿಸುವುದೇ ಪರಬ್ರಹ್ಮನ ಗುಣಗಣ. ಇವನ್ನು ನಿತ್ಯವೂ ಅನುಸರಿಸಿ ಎಂದು ಗಾಯಿತ್ರಿಯು ಬೋಧಿಸುತ್ತದೆ, ಮೊದಲನೆಯದಾಗಿ ಗುಣಾಢ್ಯತ್ವ, ಎರಡನೆಯದಾಗಿ ಲಕ್ಷಣ, ಮೂರನೆಯದಾಗಿ ಶರಣ್ಯತ್ವ, ನಾಲ್ಕನೆಯದಾಗಿ ಘನಭಾಸಕತ್ವ, ಹೊಳೆಯುವ ಗುಣ ಐದನೆಯದು, ಇದರಿಂದಾದ ಧೇಯತ್ವದ ಸನ್ಮತದಿಂದಾಗುವ ನಿಯಂತ್ರತ್ವ ಆರನೆಯದು, ಇವುಗಳಿಂದ ಅಖಿಲ ಮಂತ್ರಾರ್ಥಗಳು ಉಂಟಾಗುತ್ತವೆ" ಎಂದು ವಿವರಿಸಿದ. "ಪರಬ್ರಹ್ಮನೇ ಆದ ಶ್ರೀರಾಮನು ನರರೂಪವನ್ನು ತಾಳಿ ಈ ಲೋಕದಲ್ಲಿನ ಮನುಷ್ಯನಂತೆಯೇ ಅನುದಿನದ ಸುಖದುಃಖಗಳನ್ನು ಅನುಭವಿಸಿದನಲ್ಲ, ಶ್ರೀರಾಮನ ಚಾರಿತ್ರವನ್ನು ಜ್ಞಾನಿಗಳು ಸಾಕ್ಷಾತ್ ವೇದವೆಂದೇ ಹೇಳುವರಲ್ಲ, ಶ್ರೀರಾಮನು ನೆರವೇರಿಸಿದ ಕಾರ್ಯಗಳೇನು ಎಂಬುದನ್ನು ಕರುಣೆಯಿಟ್ಟು ವಿವರಿಸಬೇಕು" ಎಂದು ಅಗಜೆಯು ಕೇಳಿಕೊಂಡಳು. ಆಗ ಹರನು, "ದಶಕಂಠನಾದ ರಾವಣನ ಕಾಟವನ್ನು ತಾಳಲಾರದೆ ದೇವತೆಗಳು ಪ್ರಾರ್ಥಿಸಿಕೊಳ್ಳಲು ಈ ಭೂಮಿಯಲ್ಲಿ ಮನುಷ್ಯಾಕೃತಿಯನ್ನು ತಾಳಿದ ವಿಷ್ಣುವು ವಿಶ್ವಾಮಿತ್ರನ ಯಜ್ಞಗಳನ್ನು ರಕ್ಷಿಸಿದ, ಶಿವಧನಸ್ಸನ್ನು ಮುರಿದು ಜಾನಕಿಯನ್ನು ವರಿಸಿದ, ತನ್ನ ಮೇಲೆ ಮುನಿಸಿಕೊಂಡ ಪರಶುರಾಮನನ್ನು ವಶಪಡಿಸಿಕೊಂಡು, ತಂದೆಯ ಅನುಜ್ಞೆಯಂತೆ ಕಾಡಿಗೆ ತೆರಳಿ ಮಾಂಸಾಹಾರಿಗಳಾದ ಕಲಿಕಬಂಧರೇ ಮುಂತಾದ ರಾಕ್ಷಸರನ್ನು ಸಂಹರಿಸಿದ, ಶಬರಿಗೆ ಕರುಣೆ ತೋರಿದ, ಅಂಜನಾಸುತನ ಮಾತನ್ನು ಪ್ರೀತಿಯಿಂದ ಒಪ್ಪಿ ಸುಗ್ರೀವನನ್ನು ರಕ್ಷಿಸುವುದಕ್ಕಾಗಿ ವಾಲಿಯನ್ನು ಸಂಹರಿಸಿದ, ಕಪಿಸೈನ್ಯದ ಸಹಾಯದಿಂದ ಸೇತುವೆ ಕಟ್ಟಿದ, ವಿಭೀಷಣನನ್ನು ಕೃಪೆಯಿಂದ ಸಲಹಿದ, ಮರುಳ ದಶಕಂಧರನನ್ನು ಕೆಡಹಿದ, ಸೀತೆಯೊಡನೆ ಪುಷ್ಪಕವೇರಿ ಅಯೋಧ್ಯಾನಗರವನ್ನು ಸೇರಿ

ಪಟ್ಟಾಭಿಷಿಕ್ತನಾದ, ಭೂಲೋಕದಲ್ಲಿ ಧರ್ಮಸ್ಥಾಪನೆ ಮಾಡಿ, ಸುಗ್ರೀವ ಮುಂತಾದವರಿಗೆ ಶುಭಫಲಗಳನ್ನುಂಟುಮಾಡಿ, ಸೂರ್ಯಚಂದ್ರರಿರುವ ತನಕ ಧರ್ಮದಿಂದ ರಾಜ್ಯವಾಳಲು ವಿಭೀಷಣನಿಗೆ ರಾಮಪುರದರಸನು ಕರುಣೆಗೈದು ಮತ್ತೆ ವೈಕುಂಠಕ್ಕೆ ವಾಪಸಾಗಿ ಲಕ್ಷ್ಮೀದೇವಿಯೊಡನೆ ಸುಖದಿಂದಿದ್ದ" ಎಂದು ಸಂಗ್ರಹವಾಗಿ ಹೇಳಿದ.

೩. ಬ್ರಹ್ಮನು ವಾಲ್ಮೀಕಿಗೆ ಹೇಳಿದ ರಾಮಾಯಣ

ಹೀಗೆ ಸಕಲಾರ್ಥಸಾರವನ್ನು ಕೇಳಿ ಸಂತಸಗೊಂಡ ಹಿಮಾದ್ರಿತನಯೆಯು, "ದಯಾವಂತನೇ, ನೀನು ಹೇಳಿದ ಅಮಲವಾದ ರಾಮಚರಿತೆಯು ವಾಲ್ಮೀಕಿಯಲ್ಲಿ ಹೇಗೆ ಉದಯಿಸಿತು, ಅದನ್ನು ದಯೆಯಿಟ್ಟು ಹೇಳು" ಎಂದಳು. ಪರಶಿವನು ಆ ಪ್ರಸಂಗವನ್ನು ಹೀಗೆ ಹೇಳಲು ತೊಡಗಿದ: ದೇವಮುನಿಯಾದ ನಾರದ ಒಂದು ದಿನ ಜಗತ್ತನ್ನು ಈಕ್ಷಿಸುವ ಉದ್ದೇಶದಿಂದ ಬಂದಾಗ ಅವನನ್ನು ಕಂಡು ವಾಲ್ಮೀಕಿಯು ಕೈಮುಗಿದು, ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿ ಕುಶಲವನ್ನು ವಿಚಾರಿಸಿ, "ಪರಮಪಾವನವಾದ ವಿಷ್ಣುಚರಿತೆಯ ಸಮುದ್ರದಂತಹವನೇ, ಬ್ರಹ್ಮಪುತ್ರನೇ, ಸಕಲ ಆಗಮಗಳನ್ನು ಬಲ್ಲ ಜ್ಞಾನನಿಧಿಯೆ, ನೀನು ಲೋಕಗುರುವಾಗಿದ್ದೀಯೆ, ಭೂಲೋಕದ ತಿಳಿದ ಹಾಗೂ ತಿಳಿಯದ ಜನರನ್ನು ಪೊರೆಯುವ ಪರಮೋದ್ದೇಶವನ್ನು ಹೊಂದಿದ ಯಾವಾತನು ತನ್ನ ಗುಣ ವೀರ್ಯ ಮತ್ತು ಧರ್ಮಜ್ಞತೆಗಳನ್ನು ಪಡೆದವನೂ, ದೃಢಚಿತ್ತನೂ, ಪಾವನಚರಿತ್ರನೂ, ನೀತಿವಿದನೂ, ವಿದ್ವಾಂಸನೂ ಆಗಿರುವನೋ ಮತ್ತು ಯಾವಾತನನ್ನು ಕಂಡು ಯುದ್ಧದಲ್ಲಿ ಅಸುರರು ಭಯಗೊಳ್ಳುವರೋ ಅಂತಹವನ ರೀತಿಯನ್ನರಿಯಲು ನನ್ನ ಮನಸ್ಸು ತವಕಗೊಂಡಿದೆ; ಅಂತಹವನ ಪಾವನ ಚರಿತ್ರೆಯನ್ನು ದಯವಿಟ್ಟು ವಿಸ್ತಾರವಾಗಿ ಹೇಳು" ಎನ್ನಲು, ಯಾರ ಕತೆಯನ್ನು ಪಠಿಸುವ ಬ್ರಾಹ್ಮಣರಿಗೆ ವಾಗ್ವೈಖರಿಯನ್ನೂ, ಭಜಿಸುವ ಕ್ಷತ್ರಿಯರಿಗೆ ಭಾಗ್ಯಭೋಗಗಳನ್ನೂ, ವೈಶ್ಯರಿಗೆ ರತ್ನರಾಜಿಗಳನ್ನೂ, ಶೂದ್ರರಿಗೆ ಪುಣ್ಯವನ್ನೂ ಕೊಡುವನೋ ಆ ಶ್ರೀರಾಮನ ಕತೆಯನ್ನು ನಾರದ ಮಹಾಮುನಿಯು ಕೃಪೆಯಿಂದ ಹೇಳಿದ.

ಆ ಮುನಿಯು ವಿಷ್ಣುವನ್ನು ಭಜಿಸುತ್ತ ಬೀಳ್ಕೊಂಡ ಬಳಿಕ ವಾಲ್ಮೀಕಿಯು ತನ್ನಂತರಂಗದಲ್ಲಿಯೇ ಶ್ರೀರಾಮ ಕತೆಯನ್ನು ಮನನ ಮಾಡುತ್ತಿರಲಾಗಿ, ಮಧ್ಯಾಹ್ನವು ಸಮೀಪಿಸಲು ಮಾಧ್ಯಾಹ್ನಿಕ ಕೃತ್ಯಗಳನ್ನು ಗೈಯಲು ಯೋಚಿಸಿ ತನ್ನ ಶಿಷ್ಯನಾದ ಭರದ್ವಾಜನನ್ನು ಕರೆದು 'ಪವಿತ್ರವಾದ ನಾರುಮಡಿಯನ್ನು ತಾ' ಎಂದು ಹೇಳಿ ಅವನೊಡನೆ ತಮಸಾನದಿಯತ್ತ ತೆರಳಿದ. ಮೂಲೋಕಸಂಜೀವಿನಿಯಾದ ಆ ಪವಿತ್ರ ನದಿಯಾದರೋ ಅಲೆಗಳಿಂದ ಕೂಡಿ ಜುಳುಜುಳು ನಾದಮಾಡುತ್ತ ಹರಿಯುತ್ತಿತ್ತು, ಸುತ್ತಲೂ ಪಕ್ಷಿಗಳ ಕೂಜನವನ್ನು ಹೊತ್ತು ಗಾಳಿ ಸುಳಿಯುತ್ತಿತ್ತು, ಭೃಂಗಗಳ ಝೇಂಕಾರ ಕಿವಿಗಳಿಗೆ ಹಿತಕಾರಿಯಾಗಿತ್ತು. ಆ ನದಿಯನ್ನು ಕಂಡ ವಾಲ್ಮೀಕಿಯು ತನ್ನ ಶಿಷ್ಯನಿಗೆ, "ಈ ನದಿಯನ್ನು ನೋಡು, ಅದರ ತಿಳಿನೀರು ಸನ್ಮನುಷ್ಯನ ಮನಸ್ಸಿನಂತಿದೆ, ಇದರಲ್ಲಿ

ಸ್ನಾನ ಮಾಡಬೇಕು" ಎನ್ನುತ್ತ ನದಿಯಲ್ಲಿಳಿದು ಮಿಂದು ಆ ಬಳಿಕ ದಡದಲ್ಲಿ ಕುಳಿತು ಸೂರ್ಯನಿಗೆ ಅರ್ಘ್ಯವನ್ನರ್ಪಿಸಿ ಧ್ಯಾನಾಸಕ್ತನಾದ.

ಆ ಹೊತ್ತಿಗೆ ಕ್ರೌಂಚಪಕ್ಷಿ ಜೋಡಿಯು ಕೂಡುವ ಪ್ರಯತ್ನ ಮಾಡುತ್ತಿರಲು, ಒಬ್ಬ ಬೇಡನು ತನ್ನ ಹರಿತವಾದ ಬಾಣವನ್ನು ಆ ಕಡೆಗೆ ಬೀಸಿದ. ಅದರ ಪೆಟ್ಟಿನಿಂದ ಗಂಡು ಹಕ್ಕಿಯು ನದಿಯ ದಡದ ಮೇಲೆ ಬಿದ್ದು ಕಂಪಿಸತೊಡಗಿತು; ಅದನ್ನು ಕಂಡು ಹೆಣ್ಣು ಕ್ರೌಂಚವು ದುಃಖಭರದಿಂದ ಅಳತೊಡಗಿತು. ಅದನ್ನು ಕಂಡು ಮುನಿಕುಲೋತ್ತಮನಾದ ವಾಲ್ಮೀಕಿಯು ಹಕ್ಕಿಗಳ ಬಗೆಗಿನ ಅನುಕಂಪದಿಂದ, "ಎಲೌ ಬೇಡನೇ, ಜೋಡಿ ಹಕ್ಕಿಗಳು ಮನ್ಮಥಾಪೇಕ್ಷೆಯಿಂದ ಕೂಡಿರುವಾಗ ಅಕಾರಣದಿಂದ ಅದರ ಮೇಲೆ ಕೈಮಾಡಿದೆಯಾದ್ದರಿಂದ ನಿನಗೆ ಬೇಗ ಆಯುಷ್ಯ ಮುಗಿಯುತ್ತದೆ" ಎಂದು ಆ ಬೇಡನಿಗೆ ಶಾಪವಿತ್ತ. ಆ ಬಳಿಕ ತನ್ನ ಶಿಷ್ಯನನ್ನು ಕುರಿತು, "ಆ ಬೇಡನನ್ನು ಕಾಣುತ್ತಲೇ ದೋಷರಹಿತವಾದ ಛಂದೋಬದ್ಧವೂ ಗಾನಯೋಗ್ಯವೂ ಆದ ಶುಭವಾಣಿಯು ನನ್ನ ನಾಲಗೆಯಲ್ಲಿ 'ಮಾನಿಷಾದ ಪ್ರತಿಷ್ಠಾಂತ್ವಮಗಮಃ' ಎಂಬ ಸರ್ವಲಕ್ಷಣವಾದ ಪದ್ಯಧ್ಯಾನವುಂಟಾಗಿದೆ" ಎಂದು ಹೇಳಿ ಆ ತಾಪಸಮೌಳಿಯು ಮಾಧ್ಯಾಹ್ನಿಕಕ್ರಿಯೆಗಳನ್ನು ಮುಗಿಸಿ ತನ್ನ ತಪೋವನಕ್ಕೈದಿ ಮನಸ್ಸಿನಲ್ಲಿ ನಿರಘನೂ ನಿರ್ದ್ವಂದ್ವನೂ ನಿತ್ಯಾನಂದನೂ ರಘುಕುಲದೀಪನೂ ಆದ ಶ್ರೀರಾಮಚಂದ್ರನ ಪಾದಾರವಿಂದಗಳನ್ನು ಧ್ಯಾನಿಸುತ್ತಿದ್ದ.

ವಾಣಿಯ ಪರತ್ರ ಸಂಬಂಧವನ್ನು ಕಾಣುತ್ತ ಬ್ರಹ್ಮನು ಕಥನಗೈಯಲೆಂದು ಇಳೆಗೆ ಇಳಿದಂತೆ ವಾಲ್ಮೀಕಿಯ ಆಶ್ರಮಕ್ಕೆ ಬಂದ. ಆಗ ಆ ಮುನಿಯು ಬ್ರಹ್ಮದೇವನನ್ನು ನೋಡಿ ಸಡಗರದಿಂದ ಮೇಲೆದ್ದು ಸೂಕ್ತ ಉಪಚಾರಗಳನ್ನು ಮಾಡಿ ಭಕ್ತಿಯಿಂದ ನಿಂತ. ವಾಲ್ಮೀಕಿಯ ಆತಿಥ್ಯದಿಂದ ಸುಪ್ರೀತನಾದ ವಾಣೀಪತಿಯು ತನ್ನ ಅಮೃತದಂತಹ ಮಧುರವಾಕ್ಕುಗಳನ್ನು ತುಳುಕಿಸುತ್ತ ನಸುನಗೆಯಿಂದ ಕೂಡಿದವನಾಗಿ, "ವಾಲ್ಮೀಕಿಮುನಿಯೇ, ಚಾಟುವಚನಕ್ಕೆ ಆಲಯವೆನಿಸುವ ನಾರದಮುನಿಯು ನಿನಗೆ ಹೇಳಿದ ರೀತಿಯಲ್ಲಿಯೇ ಶ್ರೀರಾಮನ ಕತೆಯನ್ನು ನಿರೂಪಿಸು. ಮೃದುಶಬ್ದಗಳು, ರಸಭಾವ, ಸೂಕ್ತ ಅಲಂಕಾರಗಳು, ವಿದ್ವಜ್ಜನರು ಸೇವಿಸುವಂತಹ ಅರ್ಥಭರಿತ ಮಾತುಗಳಿಂದ ಕಾವ್ಯವನ್ನು ರಚಿಸು. ಒಂಬತ್ತೂ ರಸಗಳು ನಿನಗೆ ಪ್ರತ್ಯಕ್ಷವಾಗುತ್ತವೆ, ಹಾಗಾಗಿ ಪ್ರೀತಿಯಿಂದ ಬರೆದ ಈ ನಿನ್ನ ಕಾವ್ಯವನ್ನು ಬರೆದು ಓದಿ ಕೇಳಿದವರಿಗೆ ಇಷ್ಟಾರ್ಥಗಳು ಕೈಗೂಡಿಸುತ್ತ ಸೂರ್ಯಚಂದ್ರತಾರೆಗಳು ಇರುವತನಕವೂ ಬುವಿಯಲ್ಲಿ ಶಾಶ್ವತವಾಗಿ ಉಳಿಯಲಿ; ನಿನ್ನ ಕೃತಿಯು ನನ್ನ ಬಾಯಿಂದ ಬಂದ ವೇದದಂತೆಯೇ ಮಾನ್ಯವಾಗಲಿ" ಎಂದು ಆಶೀರ್ವದಿಸಿ ತನ್ನ ಮನಸ್ಸಿನಲ್ಲಿ ಸಂತಸವನ್ನು ತುಂಬಿಕೊಂಡು ಅದೃಶ್ಯನಾದ.

"ವಾಲ್ಮೀಕಿಯು ಮಜ್ಜನ ಮಾಡಿ ನಿರ್ಮಲತೆಯಿಂದ ಕೂಡಿ ಪೂರ್ವಾಭಿಮುಖವಾಗಿ ದರ್ಭಾಸನದಲ್ಲಿ ಕುಳಿತು ಧ್ಯಾನಗೈಯಲು ಆತನ ಮನಸ್ಸಿನಲ್ಲಿ ಮನುವಂಶದ ಚರಿತೆಯೆಲ್ಲವೂ ಅಂಗೈಯ ನೆಲ್ಲಿಯಂತೆ ಪ್ರತ್ಯಕ್ಷವಾಗುತ್ತ ಹೋಗಲು ಮುನಿವರನು ಶ್ರೀರಾಮನ ಸತ್ಕಥೆಯನ್ನು ವಿರಚಿಸಿದ. ತಾಪಸೋತ್ತಮರು ಕೇಳುವಂತೆ ಲಲಿತಪದಯುಕ್ತವೂ ಮನೋಹರಾರ್ಥಭರಿತವೂ ಮೂಲೋಕಸಂಸೇವ್ಯವೂ ಆಗಿರುವಂತೆ ರಚಿತವಾದ

ನೀಲಮೇಘಶ್ಯಾಮನ ಅಂಕಿತದ ಈ ಆದಿಕಾವ್ಯವು ವೇದಸಮಾನವೇ ಆಗಿರುವಂಥದು. ಹೀಗಾಗಿ ಲಕ್ಷ್ಮೀರಮಣನಾದ ರಾಮಪುರಿವಲ್ಲಭನ ಈ ಪಾವನಚರಿತೆಯನ್ನು ಕೇಳಿ, ಗಿರಿಜಾತೆಯೇ, ನಿತ್ಯಾನಂದದಿಂದ ಸುಖಿಸುವಂತಹವಳಾಗು" ಎಂದು ಗಿರಿಜಾರಮಣನು ಹಾರೈಸಿದ.

೪. ಅಯೋಧ್ಯೆಯಲ್ಲಿ ದಶರಥನ ರಾಜ್ಯಭಾರ

ಈ ಧರೆಗೆ ನಾಭಿರೂಪದಂತೆ ಜಂಬೂದ್ವೀಪವು ರಾರಾಜಿಸುವುದು. ಅಲ್ಲಿನ ಮಂದರಗಿರಿಯ ತೆಂಕಣ ದಿಕ್ಕಿನಲ್ಲಿ ಸೂರ್ಯವಂಶಜರಾದ ರಾಜರ ಸಂಪತ್ತಿನ ಆಲಯವೆನಿಸುವ ಅಯೋಧ್ಯಾನಗರವು ಒಪ್ಪುತ್ತದೆ. ಸೂರ್ಯರಾಜರ ಆವಾಸವಾಗಿ ಸಕಲ ನದಿಗಳಿಗೆ ಸಮುದ್ರದಂತೆ ಎಸೆಯುವ ಹಾಗೂ ಕುಬೇರನ ಕೋಶದಂತೆ ಸಂಪದ್ಭರಿತನಾದ ಭಂಡಾರದಿಂದಲೂ, ಮೋಡಗಳಿಂದ ಸುರಿಯುವ ಮಳೆಯಂತೆ ಸಕಲಜೀವಾಧಾರವೂ ಆಗಿ ಆ ಸಾಕೇತನಗರವು ಶೋಭಿಸುತ್ತಿರುವುದು. ಮೋಡದಲ್ಲಿ ಕ್ಷಣಿಕವಾಗಿ ನೆಲೆಸಿರುವ ಮಿಂಚಿನ ಗೊಂಚಲೆಲ್ಲವೂ ಶಾಶ್ವತವಾಗಿ ಇಲ್ಲಿ ನೆಲಸಿರುವುದೋ ಎಂಬಂತೆ ದಶರಥನ ರಾಜಧಾನಿಯ ಹೊನ್ನಕೋಟೆ ಹೊಳೆಯುತ್ತಿದೆ. ಭೋಗಿಜನಗಳಿಗೆ ಈ ಭೂಮಿಯು ಆಭೋಗ್ಯವೆಂದು ಸಾಕ್ಷಾತ್ ವಾಸುಕಿಯೇ ನಾಗಲೋಕದಿಂದ ಇಲ್ಲಿಗೈತಂದು ತನ್ನ ಸಾಸಿರ ಹೆಡೆಗಳನ್ನು ಎತ್ತಿದನೋ ಎನ್ನುವಂತೆ ಆ ಕೋಟೆಯ ತೆನೆಗಳು ಎಸೆಯುತ್ತಿವೆ. ಸುರರಾಜನಿಗೆ ದೇಹದಲ್ಲಿ ಸಾಸಿರ ನೇತ್ರಗಳಿದ್ದರೆ, ಸಾಕೇತಪುರಲಕ್ಷ್ಮಿಯು ಅಸಂಖ್ಯ ಕಣ್ಣುಗಳನ್ನು ಪಡೆದು ಪಿಳುಕಿಸುತ್ತಿರುವಳೋ ಎಂಬಂತೆ ಆ ಕೋಟೆಯ ಅಂಬುಗಂಡಿಗಳಲ್ಲಿ ತೋಪುಗಳು ಶಿವನ ಮೂರನೆಯ ಕಣ್ಣಿನಂತೆ ಹೊಳೆದು ಬೆಳಗುತ್ತಿವೆ. ಕೋಟೆಯ ಕೊತ್ತಳಗಳು ದಿಗ್ಗಜಗಳಂತೆ, ಸುತ್ತಲಿನ ಅಗಳು ಹೆಗ್ಗಡಲಿನಂತೆ, ಇದು ಸಾಮಾನ್ಯ ನಗರವಲ್ಲ ಸಾಕ್ಷಾತ್ ಸ್ವರ್ಗ ಎಂಬ ಭಾವನೆಯುಂಟುಮಾಡುತ್ತ ಶೋಭಿಸುತ್ತಿವೆ.

ಅಯೋಧ್ಯಾ ನಗರದ ವಿವಿಧ ವರ್ಗಗಳ ಜನರು ತಮ್ಮ ತಮ್ಮ ಕಾರ್ಯಗಳಲ್ಲಿ ಆಸಕ್ತರಾಗಿ ನಿರ್ವಂಚನೆಯಿಂದ ಜೀವಿಸತಕ್ಕ ಸಜ್ಜನರು; ಶ್ರುತಿವಿಚಾರಗಳಲ್ಲಿ ಆಸಕ್ತರಾದ ದ್ವಿಜಗಣದಿಂದಲೂ, ದಾನಗುಣವನ್ನು ಹೊಂದಿದ ಕ್ಷತ್ರಿಯರಿಂದಲೂ, ಅತುಲವಾದ ಸ್ವರ್ಣರತ್ನಗಳನ್ನು ಹೊಂದಿದ ವಣಿಕ್‌ಜನರಿಂದಲೂ, ಸತತವಾಗಿ ಪರಿಚರ್ಯೆಯಲ್ಲಿ ನಿರತರಾದ ಶೂದ್ರವರ್ಗದವರಿಂದಲೂ – ಒಟ್ಟಾರೆ ಹರಿಗುರುಭಕ್ತಿಯುತರಾದ ಜನರಿಂದ ಆ ನಗರವು ಅಮರಾವತಿಯನ್ನೂ ಅಣಕಿಸುವ ವೈಭವದಿಂದ ಕೂಡಿ ಮೆರೆಯುತ್ತದೆ. ಜನರು ಒಟ್ಟಾರೆ ಶೂರರು, ಭವವಿದೂರರು, ನಿಗಮಸಾರದ ಅರ್ಥವರಿತ ಸಂಸ್ಕಾರಯುತರು, ಚಾರು ಸುಕುಮಾರರು, ಉದಾರರು. ಅಲ್ಲಿನ ಭಟರು ಶತ್ರುಭಯರಹಿತರು, ಶಿಕ್ಷಾಸುಭಗವಾದ ಧೀರರು, ಶಸ್ತ್ರಾಸ್ತ್ರವಿಚಾರಪರರು. ಹೀಗೆ ವೈಭವದಿಂದಲೂ ಅನಂತಭೋಗಗಳಿಂದಲೂ ಕೂಡಿದ ಆ ನಗರವು ಸಂತಸಭರಿತವಾಗಿತ್ತು. ಶ್ರೀಹರಿಯ ಪಾದಪದ್ಮಗಳನ್ನು ಪೂಜಿಸುತ್ತ ಹರಿಕಥಾಶ್ರವಣದಲ್ಲಿ ಸಂಭ್ರಮಿಸುತ್ತ, ಹರಿಪ್ರಿಯವಾದ ಕಾರ್ಯಗಳನ್ನು

ಮಾಡುತ್ತ, ಭವಭಯದಿಂದ ಕೂಡಿದ ಶರಣಜನರಿಂದ ಆ ನಗರವು ಶೋಭಿಸುತ್ತಿತ್ತು. ಗಿಳಿಗಳ ಬಳಗದ ಸವಿನುಡಿ, ವೀಣೆ ಮೃದಂಗಗಳಂತಹ ಸಂಗೀತವಾದ್ಯಗಳ ಇನಿರವ, ಶ್ರುತಿಮಧುರವಾದುದೂ ಯತಿಲಯಾನ್ವಿತವಾದ ಗಾನಲೀಲೆಯ ವೈಭವದಿಂದ ಕೂಡಿದ ಪಾರಿವಾಳಗಳ ಇಂಚರ, ಸುನಾದ ಕೇಳಿ, ಕಣ್ಮನ ತಣಿಸುವ ಲಾಸ್ಯಗಳಿಂದ ಕೂಡಿದ ಆ ನಗರವು ಅಪ್ರತಿಮವಾದುದು.

ತಿರುಕನಿಗೆ ಉದಾರವಾಗಿ ಅರೆಕಾಸನ್ನಾದರೂ ನೀಡದೆ ಯಾವಾಗಲೂ ಕಾಳಿಂಗಸರ್ಪದಂತೆ ಹಣದ ರಾಶಿಯನ್ನು ಕಾಯ್ದುಕೊಂಡಿರುವ ಯಕ್ಷರಾಜನನ್ನು ಕುಬೇರ ಎಂದು ಸುಖಾಸುಮ್ಮನೆ ಕರೆಯುತ್ತಾರೆ ಎಂದು ಪರಿಹಾಸ್ಯ ಮಾಡುವ ಆ ನಗರದ ವ್ಯಾಪಾರಿಗಳು ನಿರಂತರವಾಗಿ ಧನಧಾನ್ಯಗಳನ್ನು ಕೊಡುಗೈಯಿಂದ ದಾನ ನೀಡುವಲ್ಲಿ ನಿರತರಾಗಿರುವಂತಹವರು. ಕೋಸಲ ರಾಜ್ಯವೇ ತನಗೆ ಸತತ ಸುಖಕರವಾದ ಆಶ್ರಯತಾಣವೆಂಬ ರೀತಿಯಲ್ಲಿ ಸಿರಿಲಕುಮಿಯು ನೆಲಸಿರುವಂತೆ ಕಾಣುವ ರತ್ನಪಡಿ ಅಂಗಡಿಗಳು ಅಲ್ಲಿ ರಾರಾಜಿಸುತ್ತವೆ. ಕಾಡಿನ ಸರೋವರಗಳಲ್ಲಿ ಹಗಲಿರುಳುಗಳು ಒಂದೇ ಸಮನೆ ನಮಗೆ ಇರಲಾಗದು ಎಂದು ತಾವರೆಗಳ ಸಮೂಹವು ಈ ನಗರದಲ್ಲಿ ಸೂರ್ಯನು ಹಗಲಿರುಳು ಬೆಳಗುತ್ತಾನೆ ಎಂಬಂತೆ ಸೊಗಸನ್ನು ಬೀರುತ್ತ ಕಂಚುಗಾರರ ಅಂಗಡಿಗಳು ಮೆರೆಯುತ್ತಿವೆ. ಹೊಸತನ್ನು ನೀಡುವ ಅಭ್ಯಾಸವನ್ನುಳ್ಳ ಕಲ್ಪತರುವು ಶಿವನಿಗೆ ದಿಗಂಬರತ್ವವನ್ನೂ ಹುಲಿದೊವಲನ್ನೂ ಗಜಚರ್ಮವನ್ನೂ ನೀಡಿದೆ; ಆದರೆ ಅಯೋಧ್ಯೆಯ ಜವಳಿ ವ್ಯಾಪಾರಿಗಳು ನಾನಾ ಜನರಿಗೆ ಹೊಸ ಹೊಸ ವಸ್ತ್ರಗಳನ್ನು ನೀಡಲು ತವಕದಿಂದಿರುತ್ತಾರೆ. ಮುಖದಲ್ಲಿ ಕೆಂದಾವರೆಯ, ಕಣ್ಣುಗಳಲ್ಲಿ ನೈದಿಲೆಯ, ಉಗುರುಗಳಲ್ಲಿ ಹೊಂಗೇದಗೆಯ, ಮೂಗಿನಲ್ಲಿ ಅರಳಿದ ಸಂಪಿಗೆಯ ಹೂಗಳ, ಹಲ್ಲುಗಳಲ್ಲಿ ಬಿರುಮಲ್ಲಿಗೆಗಳ ಸೊಬಗನ್ನು ಅಳವಡಿಸಿಕೊಂಡಿರಲು, ಉಳಿದ ಹೂಗಳ ಮಾಲೆಗಳನ್ನು ಮಾಲೆಗಾರ್ತಿಯರು ಆ ಊರಿನ ಚಂದ್ರವೀಧಿಯಲ್ಲಿ ಮಾರಾಟ ಮಾಡುತ್ತಾರೆ. ಮುಡಿದ ಬಿರಿಮುಗುಳ ಮಧುವನ್ನು ಉಂಡು ಹಾರಲಾರದೆ ಮತ್ತವಾದ ದುಂಬಿಗಳ ಪಕ್ಕಗಳಿಂದ ಉದುರುವ ಜೇನಿನಂತೆ ಇನಿದಾದ ಕಡಗದ ಧ್ವನಿಯನ್ನುಂಟುಮಾಡುತ್ತ ಮಂದಗಾಮಿನಿಯರಾದ ಆ ನಗರದ ಗಟ್ಟಿವಳ್ತಿಯರು ಗಂಧವನ್ನು ತೇಯುತ್ತಿರುತ್ತಾರೆ.

ಅಲ್ಲಿನ ರಾಜವೀಧಿಗಳು ದೇವಲೋಕದ ಸರಸ್ಸಿನಂತೆ ಪದ್ಮರಾಗದಿಂದ ಕೂಡಿರುವಂಥವು; ಪುಷ್ಯರಾಗದಿಂದ ಕೂಡಿದ ಪ್ರಾಸಾದಗಳು ಆ ಬೀದಿಗಳಲ್ಲಿ ಮೆರೆಯುತ್ತವೆ. ಆ ರಾಜಮಾರ್ಗದ ಇಕ್ಕೆಲಗಳಲ್ಲಿ ವಜ್ರಸಂಕಲಿತವಾಗಿ ದೇವನಿಲಯದಂತೆ ರಂಜಿಸುವ, ಉಪೇಂದ್ರನಂತೆ ಭೋಗಿಶಯನಾಸಕ್ತಿಯಿಂದ ಕೂಡಿದ ಚಂದ್ರಶಾಲೆಗಳು ಶೋಭಿಸುತ್ತವೆ. ಆ ದೇಶದ ವನಗಳು ಪಾರಿಜಾತ, ಹರಿಚಂದನಗಳ ಸುವಾಸನೆಯಿಂದ ಕೂಡಿ ವಸಂತಕಾಲದ ನಂದನಗಳಂತೆ ಪರಿಮಳಿಸುತ್ತವೆ. ಆಗಸದಂತೆ ಶುಭ್ರವಾಗಿ ಹೊಳೆಯುವ ಕರುಮಾಡಗಳು ರಾಜವೀಧಿಯಲ್ಲಿ ರಾಜಿಸುತ್ತವೆ. ಆ ಸೌಧಗಳಲ್ಲಿ ಹೊಂಬಳ್ಳಿ ಮೈ, ಹೂಮೊಗ್ಗಿನಂತಹ ಮೊಲೆ, ಕಮಲದಂತಹ ಮುಖ, ಮರಿದುಂಬಿಯ ಬಣ್ಣದ ಕುರುಳು, ತೊಂಡೆಹಣ್ಣಿನ ತುಟಿಗಳ ಸುಂದರಿಯರು ಓಡಾಡುವುದು ಜಾಲಂಧ್ರಗಳ

ಮೂಲಕ ಕಾಣಿಸುತ್ತದೆ. ಬೆಳಗಿನ ಹೊತ್ತು ಆ ವಾರಿಜಾಕ್ಷಿಯರು ಗೆಲವಿನಿಂದ ಕೂಡಿ ಪುರದ ಬೀದಿಗಳಲ್ಲಿ ದೇವಾಲಯಕ್ಕೆ ಹೋಗುತ್ತಿರಲು, ಅವರು ದೇಹಕ್ಕೆ ಪೂಸಿದ ಪರಿಮಳಕ್ಕೆ ಮನಸೋತು ಮಂಜುಳಗಾನಗೈಯುತ್ತ ದುಂಬಿಗಳು ಅವರನ್ನು ಹಿಂಬಾಲಿಸುತ್ತವೆ.

ತರುಣಿಯರ ಲಾವಣ್ಯರಸದಿಂದ ಕೂಡಿದ ಮುಖಕಮಲದ ಸುಯ್ಗಂಪಿನಿಂದ ಆಕರ್ಷಿತವಾದ ಪರಮೆಗಳ ಸಾಲಿನ ಇಂಚರದಿಂದ ಕೂಡಿದ ಸರೋವರದಂತೆ ಆ ನಗರದ ಮಧ್ಯಭಾಗದಲ್ಲಿ ಅರಮನೆಯು ಶೋಭಿಸುತ್ತದೆ; ಅದು ನಿರಂತರ ವೈಭವದಿಂದ ಕೂಡಿದ ರಾಜಹಂಸಾಶ್ರಯತಾಣವಾಗಿ ದೇವಸಂದೋಹಕ್ಕೆ ಹರುಷವನ್ನು ನೀಡುವಂತಿತ್ತು. ಬಿಸಿಲು ಬಿದ್ದ ಅಂಗಳದ ಸರಸಿಯಲ್ಲಿ ಕ್ರೀಡಿಸುವ ಮರಾಳಗಳಿಗೆ ಮುಗಿಲಭೀತಿಯನ್ನು ತೋರುವ ಕತ್ತಲೆಯ ಮೊತ್ತವು ಮಣಿಖಚಿತಗೃಹದ ಕಾಂತಿಯನ್ನು ಕಂಡು ಅಲ್ಲಿರಲಾರದೆ ಹಾರಿ ಹೋಗುತ್ತದೆ; ಅಲ್ಲಿನ ಸುಪ್ರಭೆಯು ನೈದಿಲೆ ಚಕೋರಿಗಳನ್ನು ಬೆಳುದಿಂಗಳಿನಂತೆ ನಲಿಸುತ್ತದೆ. ಅರಮನೆವೆಣ್ಣುಗಳ ಕುಡಿನೋಟವನ್ನು ಕಂಡು ಕನ್ನೈದಿಲೆ ಎಂಬ ಭ್ರಾಂತಿಯಿಂದ ಹತ್ತಿರ ಸುಳಿಯುವ ದುಂಬಿಗಳು, ಹರವಾದ ಕೂದಲನ್ನು ಕಂಡು ಆಗಸದಲ್ಲಿ ಮೋಡಗಟ್ಟಿದೆಯೇನೋ ಎಂದು ನಲಿಯುವ ನವಿಲುಗಳು, ಅವರ ದಂತಪಂಕ್ತಿಯನ್ನು ನೋಡಿ ಕಾಡಿನಲ್ಲಿ ಬಿರಿದ ದಾಳಿಂಬೆಹಣ್ಣು ಎಂದು ಭ್ರಮಿಸಿ ಸಮೀಪಿಸುವ ಗಿಳಿಗಳು, ಅವುಗಳಿಗೆ ಭಯವುಂಟುಮಾಡುವ ಗೋಮೇಧಿಕದ ಕಂಕಣಗಳ ಝಣಝಣತ್ಕಾರವು ಕಂಗೊಳಿಸುತ್ತದೆ; ನಡೆದಾಡುವ ಅಲ್ಲಿನ ಲಲನೆಯರ ಹೆಜ್ಜೆಗಳನ್ನು ಹೊಸ ಮಾವಿನ ಚಿಗುರು ಎಂದು ಭಾವಿಸಿ ಕೋಗಿಲೆಗಳು ಗಾನಾಸಕ್ತವಾಗುತ್ತವೆ.

ನಳನಳಿಸುತ್ತ ಆಗಸದೆತ್ತರಕ್ಕೆ ಬೆಳೆದು ನಿಂತ ಗೋಪುರದಲ್ಲಿನ ತಳತಳಿಸುವ ಹಾಲುಗಲ್ಲುಗಳಲ್ಲಿ ಬಿಸಿಲು ಪ್ರತಿಫಲಿಸಿ ಅರಮನೆಯು ಅದರ ಉಪಟಳದಿಂದ ದೂರಾಗುವ ವಿಶ್ರಾಮಧಾಮವಾದರೆ, ಗ್ರೀಷ್ಮದಲ್ಲಿ ಇನನು ಅಲ್ಲಿ ದೀರ್ಘವಾದ ನೆರಳುಗಳನ್ನು ಉಂಟುಮಾಡುತ್ತಾನೆ. ಅರಮನೆಯ ಅಗ್ರಭಾಗದಲ್ಲಿ ಚಂದ್ರಮುಖಿಯರ ಮುಖಗಳ ಬೆಳುದಿಂಗಳು ಗಗನವನ್ನೆಲ್ಲ ಹರಡಿಕೊಳ್ಳಲು ಸ್ವರ್ಗದ ಸುಂದರಿಯರು ಸಂಭ್ರಮಿಸುತ್ತಾರೆ! ಆ ಲಲನೆಯರು ತಮ್ಮ ದಟ್ಟ ಕೂದಲನ್ನು ಎಳೆಬಿಸಿಲಿನಲ್ಲಿ ಹರವಿಕೊಂಡು ನಗೆಯಾಡುತ್ತಿರಲು ಅದನ್ನು ಮಲ್ಲಿಗೆಯರಳೆಂದು ಭ್ರಮಿಸುವ ದುಂಬಿಗಳು ಅವರ ಬಳಿ ಹಾರಾಡುತ್ತವೆ! ಅಲ್ಲಿನ ಜಿಂಕೆಗಣ್ ಬೆಡಗಿಯರು ವಿಲಾಸದಿಂದ ವೀಣಾವಾದನವನ್ನು ಮಾಡಲು ವಜ್ರಮಾಣಿಕ್ಯಗಳೆಲ್ಲ ಕರಗಿ ಹರಿಯಲು, ಆಕಾಶದಲ್ಲಿ ಸಂಚರಿಸುವ ಮುನಿನಿವಹವು ಅದನ್ನು ಕಂಡು ಕಪ್ಪುಬಿಳಿ ನದಿಯೆಂದು ಭಾವಿಸಿ ಬಿಡುಗಣ್ಣರಾಗಿ ನೋಡುತ್ತಾರೆ! ಹೀಗೆ ಅಮರಾವತಿಯ ವೈಭವವನ್ನೂ, ಅಳಕಾವತಿಯ ಅನಂತಭೋಗಗಳನ್ನೂ, ಇಲ್ಲಿಗೈದು ದಿಗಂತವ್ಯಾಪಿಯಾದ ಸಿರಿಯನ್ನೂ ಪಡೆದ ಆ ಸಾಕೇತನಗರವು ಸಂತಸದಲ್ಲಿ ಮುಳುಗಿ ಮೆರೆಯುತ್ತದೆ. ಅಲ್ಲಿನ ರಾಜ ದಶರಥ, ನಗರದ ವಸಂತದಂತೆ ಮೆರೆಯುತ್ತಿದ್ದವನು. ಅವನ ಗುಣಶೀಲಗಳನ್ನು ಏನೆಂದು ವರ್ಣಿಸುವುದು; ಮಾತಿಗೆ ಸಿಲುಕದ ಮಹಿಮೆಯುಳ್ಳವನು, ಸತ್ಯವಂತಿಕೆಯಲ್ಲಿ ಹರಿಶ್ಚಂದ್ರನನ್ನು ಮೀರಿಸಿದವನು, ಧರ್ಮಕಾರ್ಯದಲ್ಲಿ ನಳ ಚಕ್ರವರ್ತಿಯನ್ನು ಮರೆಸುವಂತಹವನು, ಸಾಹಸದಲ್ಲಿ

ಕ್ರತುಪುತ್ರನಂತೆ ದೃಢತೆಯುಳ್ಳವನು. ಅಂತಹ ದಶರಥನು ರಾಮಪುರಿಯ ಶ್ರೀಹರಿಯನ್ನು ಸದಾ ಕಾಲ ಸ್ಮರಿಸುತ್ತ ಸಾಕೇತನಗರಿಯನ್ನು ಪಾಲಿಸುತ್ತಿದ್ದನು.

೫. ಪುತ್ರಕಾಮೇಷ್ಟಿಯಾಗ ಮಾಡಲು ದಶರಥನ ನಿರ್ಧಾರ

ಎಣೆಯಿಲ್ಲದ ವಿಭವಾಸ್ಪದವಾದ ಆ ನಗರದ ಹೊರವಲಯದಲ್ಲಿ ನದೀನಾಯಿಕಾಮಣಿಯೆನಿಸಿದ ಸರಯೂ ರಮಣೀಯತೆಯಿಂದ ಹರಿಯುತ್ತದೆ; ಅದು ವಿಪುಲಪುಣ್ಯದಿಂದ ಕೂಡಿದ ಮಂದಿರದಂತಿದ್ದು, ಮಾನಸ ಸರೋವರದಲ್ಲಿ ಜನಿಸುವ ಗಂಗೆಯಂತಿದ್ದು ದೇವತೆಗಳು ಮತ್ತು ಸಜ್ಜನರುಗಳಿಗೆ ಆಶ್ರಯವಿತ್ತಿತ್ತು; ಅಸಂಖ್ಯಾತ ಜನರ ಅಂಧಕಾರವನ್ನು ಹೋಗಲಾಡಿಸಿ ದೇವತಾಸಮಾನರನ್ನಾಗಿಸುವ ಚೈತನ್ಯವುಳ್ಳದಾಗಿತ್ತು. ಸರಸಪ್ರಗಲ್ಭೆಯಂತೆ ಅಮಿತವಾದ ನೀರಿನಿಂದ ಕೂಡಿ ಶಿವಯೋಗಿನಿಯಂತೆ ಶಿವಧ್ಯಾನ ಮಾಡುವ ರೀತಿಯಲ್ಲಿ ಪ್ರಶಾಂತವಾಗಿ ಹರಿಯುತ್ತಿತ್ತು. ಬಸಲೆಯ ಗಿಡವೆಂಬ ಕಡೆಗಣ್ಣೋಟದಿಂದ, ಉನ್ನತವಾದ ಮರಳರಾಶಿಯೆಂಬ ಜಘನಗಳಿಂದ, ಚಕ್ರವಾಕಪಕ್ಷಿಗಳೆಂಬ ಸ್ತನಗಳಿಂದ, ಹೊಸತಾದ ಸುಳಿಯೆಂಬ ಹೊಕ್ಕುಳಿನಿಂದ, ತಾವರೆಯ ಮೊಗದಿಂದ, ಮೀನುಗಳೆಂಬ ಕಣ್ಣುಗಳಿಂದ, ಹಸನಾದ ಹಂಸಯಾನ ಮಾಡುವ ದಿವ್ಯನಾರಿಯಂತೆ ಸರಯೂನದಿಯು ಶೋಭೆವಡೆದು ಹರಿಯುತ್ತಿತ್ತು. ಊರ ನಾರೀಮಣಿಯರು ಆ ನದಿಗೆ ಬಂದು ಸ್ವೇಚ್ಛೆಯಿಂದ ಜಳಕ ಮಾಡುತ್ತಿದ್ದರು; ತನ್ನ ಲಾವಣ್ಯದಿಂದಲೂ ಗಂಗೆಯ ಉದಾರತೆಯಿಂದಲೂ ಕೂಡಿದ ಸರಯೂ ಚಾರಣಸಿದ್ಧಮುನಿಗಳ ಮಮತೆಯನ್ನು ಸಂಪಾದಿಸಿತ್ತು.

ಅಯೋಧ್ಯಾ ಪಟ್ಟಣದ ಸಮೀಪದ ವಿಪುಲವಾದ ಉದ್ಯಾನವನವು ಅರಗಿಳಿಗಳ ಆಲಾಪದ ಇಂಪು, ತಂಗಾಳಿಯ ಹಿತಕರವಾದ ಪರಿಮಳದ ಸೊಂಪು, ಮರಿದುಂಬಿಗಳ ನೈಪುಣ್ಯಭರಿತ ಹಾಡಿನ ಪೆಂಪು, ಸಂತಸದಿಂದ ಕ್ರೀಡಿಸುವ ಜಕ್ಕವಕ್ಕಿಗಳ ನುಣ್ಪು, ಅಸಂಖ್ಯಾತ ನವಿಲುಗಳ ನರ್ತನದಿಂದ ತೆರೆದ ಗರಿಗಳ ಗುಂಪುಗಳಿಂದ ಕೂಡಿ ಸುಖಕರವಾಗಿ ಮೆರೆಯುತ್ತಿತ್ತು. ಅದು ವಸಂತನ ನಿಲಯ, ಮನ್ಮಥನ ಆಲಯ, ಮರುತನ ಮನೆ, ಹೊಸತಾದ ಹೂಗುಚ್ಛಗಳ ಆಗರ, ಕೋಗಿಲೆಗಳ ಸದ್ಮ, ಕಾಮನ ಕುದುರೆಗಳ ಲಾಯದಂತಿದ್ದು ರತಿಕಾಮರಿಗೆ ಕಾಮಿತಗಳನ್ನು ನೀಡುತ್ತ ಶೋಭಿಸುತ್ತಿತ್ತು. ಆ ಉದ್ಯಾನದ ನಡುವೆ ತಾವರೆಗಳಿಂದ ತುಂಬಿದ ಶುಭ್ರವಾದ ಒಂದು ಕಾಸಾರವು ಮೆರೆಯುತ್ತಿತ್ತು. ಅದರಲ್ಲಿ ಹಂಸಪಕ್ಷಿಗಳು ಆಡುತ್ತವೆ, ಕ್ರೌಂಚಪಕ್ಷಿಗಳು ಕೂಜನಗೈಯುತ್ತವೆ, ಬಗೆ ಬಗೆಯ ಪಕ್ಷಿಗಳು ಮರಿಗಳಿಗೆ ಗುಟುಕು ನೀಡುತ್ತವೆ, ಗಿಳಿಗಳು ಸವಿನುಡಿಗಳಾಡುತ್ತವೆ. ಕ್ರೀಡಿಸುವವರಿಗೆ ಸಂತಸವನ್ನು ಹೆಚ್ಚಿಸುವ ತಂಗೊಳ ಅದು. ಮುತ್ತುಗದ ಮರಗಳ ಎಲೆಗಳನ್ನು ಅಲುಗಾಡಿಸುತ್ತ ಬಾಣವೇಗದಲ್ಲಿ ಬೀಸುವ ತಂಗಾಳಿಯೆಂಬ ಬಾಲಕನು ಆ ನಂದನದಲ್ಲಿ ವಿಹರಿಸುವವರ ಮನಸ್ಸನ್ನು ಮುದಗೊಳಿಸುತ್ತಾನೆ. ಅತ್ತ ಇತ್ತ ಕಂಗೊಳಿಸುವ ಬತ್ತದ ಗದ್ದೆಗಳ ಮುಂದೆ ಮಾಮರವೆಂಬ ಕಾಂತೆಯ ಸಿಂಗರಿಸಿದ ಸೀಮಂತದಂತೆ

ಕಂಗೊಳಿಸುವ ದಾರಿಯಲ್ಲಿ, ಸೇವಂತಿಗೆ ಹೂಗಳು ಮತ್ತು ಬಾಳೆಯ ಮರಗಳಿಂದ ಕೂಡಿದ ಅರವಟ್ಟಿಗೆಗಳು ಮನ್ಮಥನ ಆಡುಂಬೊಲದಂತೆ ಮೆರೆಯುತ್ತವೆ. ದಶರಥನ ನಾಡಿನಲ್ಲಿ ಕೋಗಿಲೆಯ ಇನಿದನಿಯಿಲ್ಲದ ಬನಗಳೇ ಇಲ್ಲ, ಹಂಸಗಳಾಡದ ಕೊಳಗಳೇ ಇಲ್ಲ, ಹೂಗಳಿಂದ ಹಾಗೂ ದುಂಬಿಗಳ ನುಣ್ದನಿಗಳಿಂದ ಕೂಡಿರದ ಬಳ್ಳಿಗಳೇ ಇಲ್ಲ, ನವಿಲುಗಳ ನರ್ತನವಿಲ್ಲದ ಗುಡ್ಡಗಳೇ ಇಲ್ಲ, ಮುದವೀಯುವ ಹಣ್ಣುಗಳನ್ನು ನೀಡದ ಮರಗಳೇ ಇಲ್ಲ, ಮನ್ಮಥಸಮಾನರಾಗಿ ಓಡಾಡದ ಜನಗಳೇ ಇಲ್ಲ. ಹೀಗೆ ಆ ನಾಡು ನಾಕಲೋಕದಂತೆ ರಾರಾಜಿಸುತ್ತದೆ.

ಆ ನಾಡಿನಲ್ಲಿ ನೀತಿಜ್ಞರೂ ನಿಪುಣರೂ ಅಕಳಂಕರೂ ಪಾಪರಹಿತರೂ ಚತುರರೂ ಪತಿಕಾರ್ಯ ಧುರಂಧರರೂ ಭಾಷಾವಿಶಾರದರೂ ಅಖಿಳ ಶಾಸ್ತ್ರಾಗಮಜ್ಞರೂ ಎನಿಸಿ ಖ್ಯಾತರಾಗಿದ್ದ ದೃಷ್ಟಿ ಜಯಂತ ವಿಜಯ ಸಿದ್ಧಾರ್ಥ ಅರ್ಥಸಾಧಕ ಅಶೋಕ ಮಂತ್ರಪಾಲ ಮತ್ತು ಸುಮಂತ ಎಂಬ ಎಂಟು ಜನ ಮಂತ್ರಿಗಳು ದಶರಥನ ರಾಜಕಾರ್ಯದಲ್ಲಿ ನೆರವಾಗುತ್ತಿದ್ದರು. ಅಲ್ಲದೆ ವಸಿಷ್ಠ ವಾಮದೇವರೆಂಬ ಋತ್ವಿಜಮುಖ್ಯರು ರಾಜನನ್ನು ಸದಾ ಪೋಷಿಸುತ್ತ ಸಕಲ ಸಂಪತ್ತಿಗೂ ಬೀಜವೆನಿಸಿದ್ದರು. ಹೀಗಾಗಿ ಆ ನಗರದ ಅಧಿನಾಥನು ಇಂದ್ರಸಮಾನನಾಗಿ ದೇವತೆಗಳನ್ನೂ ಜನರನ್ನೂ ಪೊರೆಯುತ್ತ ಕೃತಯುಗದ ರಾಜರಿಗೆ ಇಮ್ಮಡಿ ವೈಭವದಿಂದ ಆಳುತ್ತಿದ್ದ. ರಘುಮಹಾರಾಜನಿಂದ ಮೊಳಕೆಯೊಡೆದು, ಸಗರನಿಂದ ಒಗುಮಿಗೆಯಾದ ಔಜ್ವಲ್ಯದಿಂದ ದಳಗಳಾಗಿ ಚಿಗುರಿ, ಬೆಳೆದು ರೆಂಬೆಗಳಾಗಿ ಒಡೆದು, ದಿಲೀಪನಿಂದ ಅಜಮಹಾರಾಜನಿಂದ ಹೂಬಿಟ್ಟು ಪರಿಮಳದಿಂದ ಕೂಡಿ, ದಶರಥನ ಆಳ್ವಿಕೆಯಲ್ಲಿ ಹಣ್ಣು ಬಿಟ್ಟು ಕಂಪು-ಇಂಪು-ಸೊಗಸುಗಳನ್ನು ಬೀರುತ್ತ ಸತ್ಕೀರ್ತಿಯೆಂಬ ವನವು ಭೂತಳದಲ್ಲಿ ರಾರಾಜಿಸುತ್ತಿತ್ತು. ದೇವಾನುದೇವತೆಗಳೇ ಹೊಗಳುವ ನಡೆಯಿಂದಲೂ ಗೆಲವುಗಳಿಂದಲೂ, ಸುರನಗರಿಯನ್ನೂ ಮೀರಿಸುವ ಹೇತಿಖ್ಯಾತಿಗಳಿಂದಲೂ, ಶ್ರೇಷ್ಠ ಋಷಿಗಳನ್ನು ಹೋಲುವ ರೀತಿನೀತಿಗಳಿಂದಲೂ ಕೂಡಿ, ಸಾಗರಪರ್ಯಂತವಾದ ಭೂಮಿಯನ್ನು ಸಂರಕ್ಷಿಸುತ್ತ ಶಿಕ್ಷಿಸುತ್ತ, ಪಾಪಕೃತ್ಯಗಳನ್ನು ಗೆದ್ದು ನಲಿವನ್ನು ತಂದು ದಶರಥನು ಜಗತ್ತಿನಲ್ಲಿ ದೇವೇಂದ್ರನಂತೆ ಒಪ್ಪಿದ್ದ. ಹಾಸ್ಯಕ್ಕಾಗಿಯೂ ಅವನು ಸುಳ್ಳನ್ನು ಹೇಳುವವನಲ್ಲ, ಕನಸಿನಲ್ಲಿಯೂ ಪರಸ್ತ್ರೀಯನ್ನು ಹಿಡಿಯುವವನಲ್ಲ, ವೈರಿಸಮೂಹದಲ್ಲಿಯೂ ದುರ್ಗುಣಗಳನ್ನು ಹುಡುಕುವವನಲ್ಲ, ಮದನಾರಿಯೇ ಎದುರಾಗಿ ಬಂದರೂ ಶರಣಾಗತರನ್ನು ಕೈಬಿಡುವವನಲ್ಲ. ದಶರಥನಿಗೆ ಪ್ರತಿಭೂಪನಾಗಿ ನಿಲ್ಲಲು ಹದಿನಾಲ್ಕು ಲೋಕಗಳಲ್ಲಿಯೇ ಯಾರೂ ಇಲ್ಲ ಎಂದ ಮೇಲೆ ಅವನ ಅತಿಶಯವನ್ನು ಬಣ್ಣಿಸಲು ವಾಸುಕಿಗೂ ಸಾಧ್ಯವಿಲ್ಲ. ಇಂದ್ರನ ಕೋಶವನ್ನೂ ಮೀರಿ ಪ್ರಕಾಶಿಸುವ ಐಸಿರಿಯಿಂದ ಕೂಡಿ, ತನ್ನನ್ನು ಧಿಕ್ಕರಿಸುವ ರಾಜರನ್ನು ದಂಡಿಸುತ್ತ ದಶರಥ ಮಹಾರಾಜನು ಅಮಿತ ವೈಭವದಿಂದ ರಾರಾಜಿಸುತ್ತಿದ್ದ. ಅವನ ರಾಣಿಯರಾದ ಕೌಸಲ್ಯೆ ಸುಮಿತ್ರೆ ಕೈಕೇಯಿಯರು ಲಕ್ಷ್ಮೀ ಸರಸ್ವತಿ ಮತ್ತು ಗೌರಿಯರಂತೆ ಬೆಡಗು ಮತ್ತು ತೇಜಸ್ಸುಗಳಿಂದ ಕೂಡಿ ಎಣೆಯಿಲ್ಲದ ಸೌಂದರ್ಯ ಗಾಂಭೀರ್ಯ ಧೈರ್ಯಗಳಿಂದ ಕೂಡಿದ್ದರು.

ಈ ಪರಿಯ ಸಿರಿವಂತನೆನಿಸಿದ ನರನಾಥನು ಧರೆಯನ್ನು ಪಾಲಿಸುತ್ತಿರಲು, ಒಂದು ದಿನ ಅವನು ತನ್ನ ಮಂದಿರಕ್ಕೆ ಬಂದಾಗ ಅಲ್ಲಿನ ಹೊಳೆಯುವ ಮಣಿಖಚಿತವಾದ ಕನ್ನಡಿಯಲ್ಲಿ ಅವನ ಮುಖವು ಪ್ರತಿಬಿಂಬಿಸಿತು. ಅದರಲ್ಲಿ ಚಂದ್ರನ ಕಿರಣಗಳ ಸ್ಪರ್ಶದಿಂದ ಹೊಳೆಯುವ ಕಮಲದಂತೆ ತನ್ನ ಕೂದಲಲ್ಲಿ ನರೆಯು ಕಾಣಿಸಿತು. ತನಗಾದ ವಯಸ್ಸಿನಿಂದಾಗಿ ಮೇಲೆದ್ದಿರುವ ನರೆಯನ್ನು ಕಂಡು ಅವನ ಮನಸ್ಸೆಂಬ ಚಕೋರಪಕ್ಷಿಯು ಕುಗ್ಗಿಹೋಯಿತು. 'ಅರುವತ್ತು ಸಾವಿರ ವರ್ಷಗಳ ಕಾಲ ಈ ರಾಜ್ಯವನ್ನು ಪರಿಪಾಲನೆ ಮಾಡಿ ಕಷ್ಟದಿಂದ ಗಳಿಸಿದ ಐಶ್ವರ್ಯಕ್ಕೆ ಉತ್ತರಾಧಿಕಾರಿಗಳಾಗುವ ಮಕ್ಕಳ ಮುಖಗಳನ್ನು ನೋಡಿ ಸುಖಪಡೆಯದೆ ಬಯಲಾಸೆಯಿಂದ ಪರಕ್ಕೆ ಬಾಹಿರನಾಗಿ ಈ ದೇಹವನ್ನು ಪೊರೆದೆನಲ್ಲಾ, ಅಯ್ಯೋ, ಈ ರೀತಿ ಪಿತೃಋಣವನ್ನು ಕೂಡಿಟ್ಟುಕೊಂಡೆ. ಮಗನಿಲ್ಲದವನಿಗೆ ಸದ್ಗತಿಯುಂಟೇ, ನನ್ನ ದುರ್ವಿಧಿಗೆ ಏನೆನ್ನಬೇಕು!' ಎಂದು ಹಲುಬಿದ. 'ಗಿಳಿಗಳಾಡದ ಪಂಜರವು ಬಂಜರು, ಹಂಸಗಳಿಲ್ಲದ ಕಾಸಾರ ನಿಸ್ಸಾರ, ಕೋಗಿಲೆಯು ಕೂಜಿಸದ ಉದ್ಯಾನವು ಕಾನನ, ಬೆಳುದಿಂಗಳಿಲ್ಲದ ಇರುಳು ಮರುಳು, ಹೆಂಡತಿಯಿಲ್ಲದ ಭೋಗ ರೋಗ, ನಾಲಗೆಗೆ ರುಚಿಸದ ಊಟ ಕಾಲಕೂಟ, ಮಕ್ಕಳು ಆಡದ ಮನೆಯ ಅಂಗಳ ಅಮಂಗಳವೇ ಸರಿ. ಹಂಸವು ಮುತ್ತಿಡದ ತಾವರೆ, ಕೋಗಿಲೆಯು ಸವಿಯದ ಮಾವಿನ ಚಿಗುರಿನ ಚೆಲುವು, ದುಂಬಿಗಳು ಸವಿಯಲಾರದ ಮಲ್ಲಿಗೆಯ ಸೊಬಗು, ಗಂಡನು ಮೆಚ್ಚದ ಹೆಂಡತಿಯ ಬೆಡಗು, ಸಂತಸವೀವ ಚಂದ್ರನನ್ನು ಕಾಣಲಾರದ ನೈದಿಲೆಯ ಸಾಲು, ಮಕ್ಕಳಿಲ್ಲದವನ ಸಾಮ್ರಾಜ್ಯಗಳು ಈ ಲೋಕದಲ್ಲಿ ಭೂಷಣವಾಗಿರದೆ ಶೋಷಣಾದ ಕಾರಣವಲ್ಲವೇ!' ಎಂದು ಕೊರಗಿದ.

ಆ ಹೊತ್ತಿಗೆ ಅಲ್ಲಿಗೆ ಬಂದ ಕೌಸಲ್ಯೆಯು ಪತಿಯ ನಿಟ್ಟುಸಿರುಗಳನ್ನು ಕಂಡು ನಾನಾ ಬಗೆಯ ಸಮಾಧಾನದ ಮಾತುಗಳನ್ನಾಡಿ ಉಪಚರಿಸಿ ಅವನ ಕೊರಗಿನ ಕಾರಣವೇನೆಂದು ವಿಚಾರಿಸಿದಳು. ಮಂಕಾದ ಮುಖವುಳ್ಳವನಾಗಿದ್ದ ಮಹಾರಾಜನು ತನ್ನ ಕಾಂತೆಗೆ ಹೀಗೆಂದ: "ಕಂದರನ್ನು ಪಡೆಯದೆ ನಾನು ಇಂದಿರಾವರನ ಅನುಗ್ರಹದಿಂದ ದೂರವಾಗಿಬಿಟ್ಟೆ, ನನ್ನ ಪೂರ್ವಜನ್ಮದ ಕರ್ಮದ ಬಗ್ಗೆ ಏನು ಹೇಳಲಿ? ಮಕ್ಕಳನ್ನು ಎತ್ತಿಕೊಳ್ಳದ ತೋಳುಗಳು ಮರದ ಕೀಲುಗಳು, ಅವರನ್ನು ಮುದ್ದಾಡದ ಬಾಯಿ ಬಂಧನ, ತನ್ನ ಮಕ್ಕಳನ್ನು ನೋಡದ ಕಣ್ಣುಗಳು ನವಿಲಗರಿಯ ಕಣ್ಣುಗಳು ತಾನೇ! ಮಕ್ಕಳ ಮುದ್ದು ಮಾತುಗಳನ್ನು ಕೇಳದ ಕರ್ಣಕುಹರಗಳು ಗಹ್ವರಗಳು, ಬಾಳುವ ಮನುಷ್ಯರಿಗೆ ಮಕ್ಕಳೇ ರತ್ನಗಳು ಎಂದು ಹಿರಿಯರು ಹೇಳುತ್ತಾರಲ್ಲವೇ? ಅರಳಿದ ತಾವರೆಗಳನ್ನು ಕಾಣದ ಸೂರ್ಯನ ಸಂಭ್ರಮ, ನವಿಲುಗಳ ಕೇಕೆಯನ್ನು ಕೇಳದ ಮೋಡಗಳ ಸಾಲು, ಮಕ್ಕಳನ್ನು ಹಡೆಯದ ಹೆಣ್ಣಿನ ಬಸಿರು ಇದ್ದರೇನು ಶೋಭಿಸಬಲ್ಲುದೇ? ಅದರಿಂದಾಗಿ ನನಗೆ ಚಿಂತೆಯು ಎಡೆಗೊಂಡಿತು" ಎಂದು ರಾಜನು ಹಲುಬಿದ. ಆನಂತರ ಮುಂದುವರಿದು ಹೀಗೆಂದ: "ಷೋಡಶ ಮಹಾದಾನಗಳನ್ನು ಮಾಡಿ ಯಜ್ಞಗಳನ್ನು ಗೈದು ಋಜುಬುದ್ಧಿಯಿಂದ ಈಗ ಸುತಾಪೇಕ್ಷೆಯಿಂದ ಅಶ್ವಮೇಧ ಯಾಗವನ್ನು ಮಾಡದಿದ್ದರೆ ನನ್ನ ಮನೋರಥ ಈಡೇರಲಾರದು" ಎಂದು ನಾಡೊಡೆಯನು ತೊಳಲಿದ.

ಅಷ್ಟರಲ್ಲಿ ಅಲ್ಲಿಗೆ ತಾನು ಹೇಳಿ ಕಳಿಸಿದ್ದ ಸುಮಂತನೆಂಬ ಧೀಮಂತ ಮಂತ್ರಿಯು ಬಂದು ಮನಸ್ಸಿನಲ್ಲಿ ಧೈರ್ಯವನ್ನು ತುಂಬಿಕೊಂಡು ರಾಜನ ಪಾದಗಳಿಗೆರಗಿ, "ಮಹಾಪ್ರಭುವಿಗೆ ಜಯವಾಗಲಿ, ಪಾದಸೇವಕನಾದ ನನಗೆ ಹೇಳಿ ಕಳಿಸಿದ ಕಾರಣವನ್ನು ಅಪ್ಪಣೆ ಮಾಡಿದರೆ, ಅದನ್ನು ತಲೆಯಲ್ಲಿಟ್ಟುಕೊಂಡು ನನ್ನ ಶಕ್ತಿಗನುಗುಣವಾಗಿ ಮಾಡುತ್ತೇನೆ" ಎಂದು ಕೈಗಳನ್ನು ಮುಗಿದು ಬಿನ್ನವಿಸಿಕೊಂಡ, ಅದರಿಂದ ಸಂತಸಗೊಂಡ ದಶರಥನು, "ಕೋವಿದನೆ, ನನ್ನ ಮನೋರಥವನ್ನು ನಿನಗೆ ಹೇಳುತ್ತೇನೆ. ಆದರೆ ಇದು ಅತ್ಯಂತ ಗುಟ್ಟಾಗಿರಬೇಕಾದ ವಿಷಯ. ನಮ್ಮ ಸೂರ್ಯವಂಶವು ಮುಂದೆಯೂ ರಾಜಿಸಬೇಕಾದರೆ ನಾನು ಮಗನೊಬ್ಬನನ್ನು ಪಡೆಯಬೇಕು. ಅದಕ್ಕಾಗಿ ಅಶ್ವಮೇಧ ಯಾಗವನ್ನು ಮಾಡಲು ಆಲೋಚಿಸಿದ್ದೇನೆ. ಈ ಕುರಿತು ಸಲಹೆ ಪಡೆಯಲು ಗುರು ವಸಿಷ್ಠರೇ ಮುಂತಾದ ದ್ವಿಜನಿಕರವನ್ನು ಬೇಗನೇ ಕರೆದು ತಾ" ಎನ್ನಲು, ಸುಮಂತ್ರನು ರಾಜನಿಗೆ ನಮಸ್ಕರಿಸಿ ಬೀಳ್ಕೊಂಡು ಮೈತ್ರಾವರುಣಿಯ ತಪೋವನಕ್ಕೆ ಐತಂದ.

ಒಡೆಯನ ಅನುಜ್ಞೆಯಂತೆ ತಪೋವನಕ್ಕೆ ಬಂದು ಭಕ್ತಿಯಿಂದ ಅರುಂಧತೀಪತಿಗೆ ಕಾಣಿಕೆಯಿತ್ತು ನಮಿಸಿದ ಸುಮಂತನು ಭೂನಾಥನು ಹೇಳಿದ ವಿಷಯವನ್ನು ಬಿನ್ನವಿಸಿಕೊಂಡ. ಆ ಮಾತುಗಳನ್ನು ಕೇಳಿದ ಋಷಿವರ್ಯರು ಅತ್ಯಂತ ಹರುಷದಿಂದ ಕೂಡಿ ಮನೋಗತಿಯಿಂದಲೇ ಅರಮನೆಯತ್ತ ನಡೆತಂದರು. ಮುನಿಗಳ ಬರವನ್ನು ತಿಳಿದ ದಶರಥ ಮಹಾರಾಜನು ಹರುಷಭಕ್ತಿಗಳಿಂದ ಕೂಡಿ ಕೌಸಲ್ಯೆಯೊಡನೆ ಬಂದು ಸಾಷ್ಟಾಂಗವೆರಗಿ ಅರ್ಘ್ಯಪಾದ್ಯಾದಿಗಳನ್ನಿತ್ತು ಪೂಜೆಗೈದು ಉನ್ನತಾಸನವನ್ನಿತ್ತ. ಮುನಿಗಳ ಮುಗುಳುನಗೆಯನ್ನು ಕಂಡು ಅವರ ಬರುವಿಕೆಯ ಕೃಪೆಯಿಂದ ತನಗೆ ಕೃತಕೃತ್ಯತೆಯು ದೊರಕಿತೆಂದು ವಿನಯದಿಂದ ನುಡಿದ. ಅಷ್ಟರಲ್ಲಿ ಜಾಬಾಲಿ ಕಾಶ್ಯಪ ಕಣ್ವ ಭೃಗು ವಾಮದೇವ ಮುಂತಾದ ಮುನಿವರ್ಯರು ದಶರಥನ ಬಗೆಗಿನ ವಾತ್ಸಲ್ಯದಿಂದ ಅಲ್ಲಿಗೆ ಬಂದರು. ಅವರಿಗೆಲ್ಲ ಅರ್ಘ್ಯಪಾದ್ಯಾದಿ ಉಚಿತೋಪಚಾರಗಳನ್ನು ಮಾಡಿದ ಬಳಿಕ ಮಹಾರಾಜನು ಅವರ ಹರಕೆಯನ್ನು ತಲೆಯಲ್ಲಿ ಧರಿಸಿ, ಆನಂತರ ತನ್ನ ಮನೋಗತವನ್ನು ಅವರೆಲ್ಲರ ಮುಂದೆ ಅರುಹಿದ: "ಯತಿವರ್ಯರೇ, ಅತಿಶಯವಾದ ಈ ನನ್ನ ಸಾಮ್ರಾಜ್ಯವು ನನಗೆ ಮಕ್ಕಳಿಲ್ಲದ ಕಾರಣದಿಂದ ಖಿನ್ನವಾಗಿದೆ. ಅದರಿಂದಾಗಿ ನಾನು ಅಶ್ವಮೇಧಯಾಗವನ್ನು ಮಾಡಿ ಸಂತತಿಯನ್ನು ಪಡೆಯಬೇಕೆಂದು ನಿರ್ಧರಿಸಿದ್ದೇನೆ; ಈ ಲೋಕದಲ್ಲಿ ತಾವೇ ನನಗೆ ಗತಿ, ಬೇರಿಲ್ಲ. ತಾವು ನನಗೆ ಸುತಲಾಭವಾಗಲೆಂದು ಆಶೀರ್ವದಿಸುವ ಕೃಪೆಮಾಡಬೇಕು." ಆ ಮುನಿವರೇಣ್ಯರು ರಾಜನ ಮಾತನ್ನು ಕೇಳಿ ಹರುಷದಿಂದ ತುಳುಕಾಡುತ್ತ, "ಅಶ್ವಮೇಧ ಯಾಗವನ್ನು ಮಾಡಿದರೆ ನಿನ್ನ ಇಷ್ಟಾರ್ಥ ನೆರವೇರುತ್ತದೆ. ಸರಯೂ ನದಿಯ ಉತ್ತರದಲ್ಲಿ ಯಜ್ಞಭೂಮಿಯನ್ನು ಸಿದ್ಧಪಡಿಸಿ, ಬೇಕಾದ ಪಡಿಪದಾರ್ಥಗಳನ್ನು ತರಿಸಿ, ಸಂಭ್ರಮದಿಂದ ಕುದುರೆಯನ್ನು ಬಿಡು" ಎಂದು ಅನುಜ್ಞೆಯೀಯಲು ನೃಪತಿಯು ಹೀಗೆಂದು ನುಡಿದ: "ಯಾಗವನ್ನು ಮಾಡಲು ಬೇಕಾದ ಪದಾರ್ಥಗಳು ಸಾಕಾಗದಿದ್ದರೆ ಯಜ್ಞಕರ್ತನು ನಾಶವಾಗುತ್ತಾನೆ. ಹಾಗಾಗಿ, ಯೋಗಿಜನಮಸ್ತಕಮಣಿಗಳೇ, ಶ್ರುತಿಮತಕ್ಕನುಗುಣವಾಗಿ ಯಜ್ಞವನ್ನು ಮಾಡಲು

ಸಾಮರ್ಥ್ಯವನ್ನು ಪಡೆಯುವಂತೆ ಆಶೀರ್ವದಿಸಲು ತಾವು ಬಲ್ಲಿದರಾಗಿದ್ದೀರಿ, ನಾನು ಇನ್ನೇನು ತಾನೇ ಹೇಳಬಲ್ಲೆ?" ಎಂದುಸುರಿದ. ಅವನ ಮಾತುಗಳನ್ನು ಕೇಳಿದ ಮಹರ್ಷಿಗಳು ಹರುಷದಿಂದ ಕೂಡಿ, "ಎಲೆ ಭೂಪಾಲ, ಸದ್ಧರ್ಮಮೂರ್ತಿಯೇ ಹುಟ್ಟಿ ಬಂದಂತೆ ನೀನು ಈ ಸಾಮ್ರಾಜ್ಯದ ದೊರೆಯಾಗಿದ್ದೀಯೆ. ನೀನು ಮಾಡುವ ಯಜ್ಞಕ್ಕೆ ಎಂದಾದರೂ ಕುಂದು ಬಂದೀತೇ? ನಿನ್ನ ಮಹಾಬಯಕೆಗೆ ಊನವುಂಟಾದೀತೇ? ಸುರಗುರುವಾದ ವಸಿಷ್ಠರ ಸೂಚನೆಗನುಗುಣವಾಗಿ ನೀನು ಈ ಕಾರ್ಯವನ್ನೆಸಗು, ಸುಖಿಯಾಗುವೆ" ಎಂದು ಆಶೀರ್ವದಿಸಿದರು. ಹೀಗೆ ಹೇಳಿ ಮುನಿತತಿಯೆಲ್ಲವೂ ರಾಜನ ಅನುಮತಿಯಿಂದ ತಮ್ಮ ತಮ್ಮ ಕುಟೀರಗಳಿಗೆ ಮರಳಿದರು. ಭೂಸುರಮೌಳಿಗಳೆನಿಸಿದ ವಸಿಷ್ಠ ವಾಮದೇವರು ಯಜ್ಞಕ್ಕೆ ಬೇಕಾದ ವಸ್ತುಗಳಾವುವೆಂದು ಮಂತ್ರಿವರ್ಯರಿಗೆ ವಿಶದವಾಗಿ ವಿವರಿಸಿ, ಸರಯೂನದಿಯ ದಡದ ಮೇಲೆ ಯಜ್ಞಶಾಳಯವನ್ನು ಬಿಡಿಸು ಎಂದು ರಾಜನಿಗೆ ತಿಳಿಸಿ, ಅವನ ಅನುಜ್ಞೆಯಿಂದ ತಾವೂ ತಮ್ಮ ನಿಲಯಗಳಿಗೆ ತೆರಳಿದರು.

ಈ ರೀತಿ ಮುನಿನಾಥರೆಲ್ಲ ಮರಳಿದ ಮೇಲೆ ಜನನಾಥನು, "ಋತ್ವಿಜರು ಸೂಚಿಸಿದ ಹಾಗೆ ಬೇಕಾದ ವಸ್ತುಗಳನ್ನೆಲ್ಲ ಸಂಪಾದಿಸಿ ತನ್ನಿರಿ" ಎಂದು ಮಂತ್ರಿವೃಂದಕ್ಕೆ ಸೂಚನೆಯಿತ್ತು ಅವರನ್ನೂ ಕಳಿಸಿಕೊಟ್ಟ. ಆನಂತರ ತನ್ನರಮನೆಗೆ ಬಂದು ತನ್ನ ಮಡದಿಯರನ್ನು ಕಂಡು ಮನಸ್ಸಿನಲ್ಲಿ ಹರುಷವನ್ನು ತುಂಬಿಕೊಂಡು, "ನೀವು ಸುತಲಾಭಕ್ಕಾಗಿ ಈ ದಿನವೇ ಯಜ್ಞದೀಕ್ಷೆಯನ್ನು ತಳೆಯಿರಿ, ನಾನು ಅಶ್ವಮೇಧವನ್ನು ಮಾಡುವ ಸಂಕಲ್ಪ ಮಾಡಿದ್ದೇನೆ" ಎಂದು ಸೂಚಿಸಿದ. ಪತಿಯ ಮಾತುಗಳನ್ನು ಕೇಳಿದ ಆ ಸತಿಯರು ಗುಡುಗಿನ ಶಬ್ದವನ್ನು ಕೇಳಿದ ನವಿಲುಗಳಂತೆ ಸಂತಸಗೊಂಡರು. ಆನಂತರ ಕೌಸಲ್ಯೆ ಸುಮಿತ್ರೆ ಕೈಕೇಯಿಯರು ಶ್ರದ್ಧಾಪೂರ್ವಕವಾಗಿ ಸ್ನಾನಗೈದು ರಾಮಪುರದರಸನಾದ ವನಜಾಜಕ್ಷನನ್ನು ಧ್ಯಾನಮಾಡುತ್ತ ಮನಸ್ಸಿನಲ್ಲಿ ಸಂತಸವನ್ನು ತುಂಬಿಕೊಂಡು ರಾಜನೊಡನೆ ಯಜ್ಞವನ್ನೆದುರುನೋಡುತ್ತ ಸುಖದಿಂದಿದ್ದರು.

೬. ದಶರಥನಿಗೆ ಸುಮಂತ ಹೇಳಿದ ಋಷ್ಯಶೃಂಗನ ವೃತ್ತಾಂತ

ಹಿಮವಂತನ ಅಣುಗಿಯೇ, ಮುಂದಿನ ವಿಮಲ ಚರಿತೆಯನ್ನು ಕೇಳು: ದಶರಥ ಮಹಾರಾಜನು ತನ್ನ ಮಡದಿಯರೊಡನೆ ಯಜ್ಞದ ವಿಷಯವನ್ನು ಹೇಳಿ ಮನಸ್ಸಿನಲ್ಲಿ ಮುದವನ್ನು ತಾಳಿದ್ದನು. ಹೀಗಿರಲು ಒಮ್ಮೆ ಸುಮಂತನು ಮಹಾರಾಜನಿಗೆ ಏಕಾಂತದಲ್ಲಿ ಬ್ರಹ್ಮನ ಮಗನಾದ ಸನತ್ಕುಮಾರನು ಋಷಿಸಮೂಹದಲ್ಲಿ ಮಕ್ಕಳಾಗುವ ಬಗ್ಗೆ ಅತಿ ಮಮತೆಯಿಂದ ಹೇಳಿದ ವಿಷಯವೆಂದರೆ, ಲೋಕವಿಖ್ಯಾತನಾದ ಕಶ್ಯಪನ ಮಗ ವಿಭಾಂಡಕಮುನಿ, ಆ ಕರುಣಾನಿಧಿಯ ಮಗ ಋಷ್ಯಶೃಂಗನ ವಿಷಯ. ಅವನೋ ಸೂರ್ಯನ ತೇಜಸ್ಸಿನಿಂದ ಕಂಗೊಳಿಸುವವನು, ಲೋಕದ ಆಗುಹೋಗುಗಳನ್ನು ಗಮನಿಸದವನು, ಇಂದ್ರಿಯಗಳ ಉಪಟಳದಿಂದ ದೂರನಾದವನು, ಶಮೆದಮೆಗಳುಳ್ಳ ಆತನು ಯಜ್ಞಕಾರ್ಯವನ್ನು ಹೊರತುಪಡಿಸಿ ಬೇರಾವುದರಲ್ಲೂ ಆಸಕ್ತನಾಗದಿದ್ದವನು.

ಅಂಗರಾಜ್ಯದ ಅಧಿನಾಯಕ ರೋಮಪಾದ, ಅವನ ರಾಷ್ಟ್ರದಲ್ಲಿ ಒಮ್ಮೆ ಮಳೆ ಬಾರದೆ ಅತೀವ ಬರ ಕಾಣಿಸಿಕೊಂಡಿತು. ಹೀಗೆ ದಾರುಣವಾದ ದುರ್ಭಿಕ್ಷ ತಲೆದೋರಲು ಅವನು ದೇಶದ ಭೂಸುರರನ್ನು ಕರೆಸಿ ಧರ್ಮಶಾಸ್ತ್ರಗಳಿಗನುಸಾರವಾದ ಶಾಂತಿಕ್ರಿಯೆಗಳನ್ನು ನೆರವೇರಿಸಿ ಇದಕ್ಕೆ ಪರಿಹಾರವನ್ನೊದಗಿಸಲು ಬೇಡಿಕೊಂಡ. ಆಗ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡ ಆ ದ್ವಿಜೋತ್ತಮರು ಮಹಾರಾಜನಿಗೆ ಈ ರೀತಿ ಹೇಳಿದರು: "ಕೊನೆಯಿಲ್ಲದ ಈ ದುರ್ಭಿಕ್ಷವನ್ನು ಕೊನೆಗಾಣಿಸಲು ಒಂದು ಪರಿಹಾರೋಪಾಯವಿದೆ, ಅದೆಂದರೆ ಮುನಿವಿಭಾಂಡಕನ ಮಗನಾದ ಋಷ್ಯಶೃಂಗನನ್ನು ಯಾವುದಾದರೊಂದು ಉಪಾಯದಿಂದ ನಿನ್ನರಮನೆಗೆ ಕರೆತಂದು ನಿನ್ನ ಮಗಳನ್ನಿತ್ತು ಪೂಜೆಗೈದರೆ ಯಥೇಚ್ಛವಾಗಿ ಮಳೆ ಸುರಿಯುತ್ತದೆ." ಹೀಗೆ ಹೇಳಲು ಆ ಮಹಾರಾಜನು ಇದನ್ನು ಆಗಮಾಡಲು ತನ್ನ ಸಚಿವರಿಗೆ ಸೂಚಿಸಿದ. ಆಗ ಅವರು ಅವನನ್ನು ಕರೆತರಲು ಅಸಾಧ್ಯ ಎಂದು ತಲೆ ಕೆಳಗೆ ಹಾಕಿ ನಿಂತರು.

ರಾಜನ ಚಿಂತೆ ಹೆಚ್ಚಿತು. ಆಗ ಊರ ಗಣಿಕಾಜನರು ಬಂದು, ತಾವು ಆ ಋಷಿಯನ್ನು ನಗರಕ್ಕೆ ಕರೆತರುತ್ತೇವೆ, ತಮಗೆ ಅಪ್ಪಣೆ ಕೊಡಬೇಕು ಎಂದು ಬಿನ್ನವಿಸಿಕೊಂಡರು. ಆನಂತರ ಅರಸನ ಒಪ್ಪಿಗೆಯಂತೆ ತಮ್ಮ ಹಾವಭಾವ ಬೆಡಗುಬಿನ್ನಾಣ ಮುಂತಾದ ನಾನಾ ಬಗೆಯ ಉಪಾಯಗಳಿಂದ ಆ ಗಂಧೇಭಗಮನೆಯರು ಆ ಋಷಿಕುಮಾರನನ್ನು ನಗರಕ್ಕೆ ಕರೆತರಲು, ಅವನಿಗೆ ರಾಜನು ತನ್ನ ಸುತೆಯನ್ನಿತ್ತು ಪೂಜಿಸಿ ಇಷ್ಟಾರ್ಥಗಳನ್ನು ಸಲ್ಲಿಸಿದ ಬಳಿಕ ಮಳೆಯಾಯಿತು. "ಇಂತಹ ಋಷ್ಯಶೃಂಗನನ್ನು ಅಯೋಧ್ಯೆಗೆ ಕರೆತಂದರೆ ನಿಮಗೆ ಶ್ರೇಷ್ಠರಾದ ಕುವರರು ಜನಿಸುತ್ತಾರೆ" ಎಂದಾಗ ದಶರಥನನಿಗೆ ಮಹಾ ಸಂತಸವಾಯಿತು. ಆನಂತರ ಆ ಮಹಾಮುನಿಯ ದಿವ್ಯಚರಿತೆಯನ್ನು ವಿಸ್ತಾರವಾಗಿ ಹೇಳಬೇಕೆಂದು ಕೇಳಲು ಸುಮಂತನು ಅವನ ಚರಿತೆಯನ್ನು ಈ ರೀತಿ ನಿರೂಪಿಸಿದ:

ವಿಭಾಂಡಕಮುನಿಯು ದಿವ್ಯಪ್ರಭಾವದಿಂದ ಕೂಡಿದ ಮಹಿಮಾವಂತ. ಅವನ ತಪೋವನದಲ್ಲಿ ಸಿಂಹ ಮತ್ತು ಆನೆಗಳು ಸ್ನೇಹದಿಂದ ಒಡನಾಡುತ್ತಿದ್ದವು, ಹಾವುಮುಂಗುಸಿಗಳೂ, ಜಿಂಕೆ ಹುಲಿಗಳೂ ತಮ್ಮ ವೈರವನ್ನು ಮರೆತು ಜೊತೆಯಲ್ಲಿರುತ್ತಿದ್ದವು. ಆ ವನದಲ್ಲಿ ಹಣ್ಣುಗಳಿಂದ ಕೂಡಿದ ನಾನಾ ಬಗೆಯ ಮರಗಳಿದ್ದುವು, ಕಂಪು ಬೀರುವ ಕುಸುಮಗಳಿಂದ ತುಂಬಿದ ಗಿಡಬಳ್ಳಿಗಳಿದ್ದುವು, ಆರು ಋತುಗಳೂ ಏಕಕಾಲದಲ್ಲಿ ಆ ವನದಲ್ಲಿ ನೆಲಸಿ ಸದಾ ಚೈತ್ರಮಾಸದ ವೈಭವದಿಂದ ಆ ತಪೋವನವು ರಾರಾಜಿಸುತ್ತಿತ್ತು. ಹೀಗಿರಲು ಒಂದು ದಿನ ವಿಭಾಂಡಕ ಋಷಿಯು ಜಪಸಮಾಧಿಗೆ ಎಂದು ಗಂಗಾನದಿಯೆಡೆಗೆ ತೆರಳಿ ಶುಚಿರ್ಭೂತನಾಗುತ್ತಿದ್ದ. ಆ ಸಮಯಕ್ಕೆ ಸರಿಯಾಗಿ ಗಗನಮಾರ್ಗದಲ್ಲಿ ಅಪರಿಮಿತವಾದ ಮೋಡದ ರಾಶಿಯಲ್ಲಿ ಮಿಂಚು ಕಣ್ಸೆಳೆಯುವ ಹಾಗೆ ಚಪಲಾಯತಾಕ್ಷಿಯಾದ ಊರ್ವಶಿಯು ಕಾಣಿಸಿಕೊಂಡಳು. ಮದನಮೋಹನಕಣಿಯಾದ ಅವಳನ್ನು ನೋಡಿದೊಡನೆ ಅ ಮುನಿಯುಟ್ಟಿದ್ದ ನಾರುಬಟ್ಟೆಗಳೂ ಸಡಿಲಗೊಂಡವು, ಮುನಿಜನಗಳು ಹೆದರಿಕೆಯಿಂದ ಒಬ್ಬರ ಹಿಂದೆ ಒಬ್ಬರು ಓಡುತ್ತಿರುವ ಸಮಯದಲ್ಲಿ ಗಂಗೆಯ ಒಡಲಲ್ಲಿಯೇ ನಿಂತಿದ್ದ ವಿಭಾಂಡಕನು ಆ ಅಪ್ಸರಾಂಗನೆಯನ್ನು ನೋಡಿದ.

ಅವನ ಅಂತಃಕರಣ ಚೆದುರಿತು, ತನ್ಮಯಾವಸ್ಥೆಯಿಂದ ಪರವಶನಾಗಿ ನಿಂತುಬಿಟ್ಟ. ಈ ಕ್ಷಣವನ್ನೇ ಎದುರು ನೋಡುತ್ತಿದ್ದಂತೆ ಮನ್ಮಥನು ಆ ಅಪ್ಸರೆಯ ನೀಳ ಹುಬ್ಬುಗಳನ್ನೇ ಬಿಲ್ಲನ್ನಾಗಿ ಮಾಡಿಕೊಂಡು ಅವಳ ಕುಡಿನೋಟವನ್ನೇ ಬಾಣವಾಗಿಸಿ ಆ ಮುನಿಯ ಮೇಲೆ ಬಲವಾಗಿ ಬಿಟ್ಟ. ಆ ಬಾಣದ ತೀವ್ರತೆಯಿಂದ ನಲುಗಿಹೋದ ವಿಭಾಂಡಕನ ಮನಸ್ಸು ಜಾರಿತು, ಆ ಕ್ಷಣದಲ್ಲಿ ಅವನಿಗೆ ರೇತಃಸ್ಖಲನೆಯಾಯಿತು. ಅಷ್ಟರಲ್ಲಿ ಸಾವರಿಸಿಕೊಂಡು ತೊಳಲಾಡುತ್ತಿದ್ದ ಆ ಮುನಿತಿಲಕನು ನದಿಯ ದಡಕ್ಕೆ ಬಂದು ತಲೆತಗ್ಗಿಸಿ ಕುಳಿತ. ಅಷ್ಟರಲ್ಲಿ ಆ ಜಾಗಕ್ಕೆ ನೀರನ್ನರಸಿ ಹೆಣ್ಣು ಜಿಂಕೆಯೊಂದು ಬಂತು. ಆ ಜಾಗದಲ್ಲಿಯೇ ಕಾಲಮಹಿಮೆಯಿಂದ ಬಿದ್ದಿದ್ದ ಮುನಿಯ ತೇಜಸ್ಸನ್ನೊಳಗೊಂಡ ನೀರನ್ನು ಆ ಜಿಂಕೆ ಕುಡಿದಾಗ ಅದರಲ್ಲಿ ಗರ್ಭಪ್ರವೇಶವಾಯಿತು. ಜಿಂಕೆಯನ್ನು ನೋಡುತ್ತಿದ್ದ ಮುನಿಯು ಎಂದಿನಂತೆ ತನ್ನ ಆಲಯಕ್ಕೆ ವಾಪಸಾಗಿ 'ಶ್ರೀಹರಿಯ ಕಟ್ಟಳೆಯನ್ನು ಯಾರು ತಾನೇ ಅರಿತಾರು!' ಎಂದು ವಿಸ್ಮಯಗೊಂಡ. ಊರ್ವಶಿ ಎಲ್ಲಿಂದಲೋ ಬಂದಳು, ಅವಳನ್ನು ನೋಡಿದಾಕ್ಷಣ ತಪಸ್ಸಿನಿಂದ ಕಲ್ಲಿನಂತಾಗಿದ್ದ ತನ್ನ ಮನಸ್ಸು ಚಂಚಲಗೊಂಡಿತು, ಆ ಸಮಯಕ್ಕೆ ಸರಿಯಾಗಿ ಹೆಣ್ಣು ಜಿಂಕೆ ಅಲ್ಲಿಗೆ ಬಂದು ರೇತೋಭರಿತ ನೀರನ್ನು ಕುಡಿದುಬಿಟ್ಟಿತು; ಏನೀ ಆಕಸ್ಮಿಕ ಘಟನೆ! ದೈವದ ಮಾಯೆಯನ್ನು ಬಲ್ಲವರಾರು? 'ಕಾಲಸ್ಯ ಕುಟಿಲಾಗತಿಃ' ಎಂಬ ಮಾತು ಹುಸಿಯಾಗುವುದುಂಟೆ ಎಂಬ ಅಚ್ಚರಿ ಅವನ ಮನಸ್ಸನ್ನಾವರಿಸಿತು.

ಇದಾದ ಬಳಿಕ ಒಂಬತ್ತು ತಿಂಗಳು ಕಳೆಯಿತು. ಆ ಜಿಂಕೆಯ ಗರ್ಭದಲ್ಲಿ ಕೋಡುಗಳಿಂದ ಕೂಡಿದ ಸುವರ್ಣ ತೇಜಸ್ಸಿನ ಕಂದನೊಬ್ಬ ಅಖಂಡವಾದ ಆನಂದದ ಸಾಕಾರದಂತೆ ಶುಭದಿನದಂದು ಜನಿಸಿದ. ಆ ತನ್ನ ತನಯನನ್ನು ಮುನಿತಿಲಕನಾದ ವಿಭಾಂಡಕನು ಮಮತೆಯಿಂದ ಸಲಹಿದ; ಆ ಮಗುವಿಗೆ ಎಂಟು ವರ್ಷಗಳಾದ ಬಳಿಕ ಅವನಿಗೆ ಉಪನಯನವನ್ನು ಮಾಡಿದ, ವೇದವೇದಾಂತಗಳನ್ನು ಕಲಿಸಿದ; ಸಾಂಖ್ಯಯೋಗಗಳನ್ನು ಮನನ ಮಾಡಿಸಿದ. ಆ ಬಾಲಕನಾದರೋ ಅನುದಿನವು ಪಿತೃಸೇವೆಯನ್ನು ಮಾಡುತ್ತ ಶ್ರೀಹರಿಯ ಧ್ಯಾನದಲ್ಲಿಯೇ ಪರವಶನಾಗಿ ಬೇರೇನನ್ನೂ ಬಯಸದೆ ಬೆಳೆಯುತ್ತಿದ್ದ. ಆರು ರುಚಿಗಳ ನಡುವಣ ವ್ಯತ್ಯಾಸವೇ ತಿಳಿಯದಷ್ಟು ಆ ಬಾಲಕನು ಮುಗ್ಧ, ಹಣ್ಣು ಬೇರುಗಳನ್ನಲ್ಲದೆ ಬೇರೆ ಆಹಾರವನ್ನರಿಯ, ವ್ಯತ್ಯಾಸವನ್ನೇ ಮಾಡದೆ ಕಾಡಿನಲ್ಲಿದ್ದ ಬಗೆಬಗೆಯ ಪ್ರಾಣಿಗಳೊಡನೆ ಒಡನಾಡುತ್ತಿದ್ದ. ಬಾಲ್ಯದಿಂದಲೂ ನೀರಿನಲ್ಲಿ ಮುಳುಗುವುದು, ಅಗ್ನಿಪೂಜೆ, ಅಷ್ಟಾಂಗಯೋಗಗಳ ಸ್ವಾಧ್ಯಾಯಗೈಯುತ್ತಲಿದ್ದ ಅವನಿಗೆ ತನ್ನ ತಂದೆಯಲ್ಲದೆ ಬೇರೆಯವರಾರ ಪರಿಚಯವೂ ಆಗಿರಲಿಲ್ಲ.

ಅಂಗದೇಶವನ್ನು ಹನ್ನೆರಡು ವರ್ಷಗಳ ಕಾಲ ಅನಾವೃಷ್ಟಿ ಪೀಡಿಸಲು ಜನರೆಲ್ಲ ಕಂಗೆಟ್ಟರು, ಕೆಲವರು ಹಸಿವಿನಿಂದಾಗಿ ಸಾವಿಗೀಡಾದರು. ಹೀಗೆ ಪರಿಸ್ಥಿತಿ ಘೋರವಾಗಲು ರಾಜನಿಗೆ ಚಿಂತೆ ಆವರಿಸಿತು. ಏನು ಮಾಡಲೂ ದಿಕ್ಕು ತೋಚದೆ ಮಾರ್ಗದರ್ಶನವನ್ನು ಪಡೆಯಲೆಂದು ದೇಶದ ಜ್ಞಾನಿಗಳನ್ನು ಕರೆಸಿ ಈ ರೀತಿ ಬಿನ್ನವಿಸಿಕೊಂಡ: "ಮಹಾಮಹಿಮರೇ, ಯಾವುದಾದರೊಂದು ಬಗೆಯಿಂದ ಈ

ಬರವನ್ನು ತಡೆಗಟ್ಟದಿದ್ದರೆ ಪ್ರಳಯಕಾಲದಲ್ಲಿನಂತೆ ಎಲ್ಲವೂ ನಾಶವಾಗುವುದು ಖಂಡಿತ. ಇದಕ್ಕೆ ಏನಾದರೊಂದು ಪರಿಹಾರವನ್ನು ದಯವಿಟ್ಟು ತಿಳಿಸಿರಿ" ಎಂದು ಕೈಮುಗಿದು ಬೇಡಿಕೊಂಡ. ಆಗ ಆ ಜ್ಞಾನಿವೃಂದದವರೆಲ್ಲರೂ ಒಕ್ಕೊರಲಿನಿಂದ ಹೀಗೆಂದರು: "ರಾಜನೇ ಕೇಳು, ಮೃಗೋಪಮನಾದ ಪರಮಜ್ಞಾನಿಯಾದ ಋಷ್ಯಶೃಂಗನು ಇತರ ಮನುಷ್ಯರ ವಿಷಯವನ್ನು ಅರಿಯ. ಯಾರನ್ನಾದರೂ ಕಂಡರೆ ಭಯದಿಂದ ಹಿಂದೆ ಸರಿದುಬಿಡುವುದರ ಜೊತೆಗೆ ಶಾಪವನ್ನೂ ಕೊಡುತ್ತಾನೆ, ಹೀಗಾಗಿ ಅವನ ಬಳಿ ಹೋಗಲು ನಮಗೆ ಹೆದರಿಕೆ" ಎಂದು ಹೇಳಿದರು. ಈ ಬಗೆಯಲ್ಲಿ ಅವರು ಹೇಳಲು, ರಾಜನು ವಿನಮಿತನಾಗಿ ತಾನು ಪ್ರಜೆಗಳನ್ನು ಕಾಪಾಡಲಾರದ ಕಾಪುರುಷನಾಗಿಬಿಟ್ಟೆನಲ್ಲ, ಶರಣು ಎಂದು ಬಂದವರನ್ನು ಕಾಪಾಡಲಾರದ ರಾಜನು ಎಷ್ಟು ದಿನ ರಾಜ್ಯವಾಳಿದರೆ ತಾನೇ ಪ್ರಯೋಜನವೇನು ಎಂದು ಯೋಚನೆಯಲ್ಲಿ ಮುಳುಗಿದ.

ಆ ಸಮಯದಲ್ಲಿ ರಾಜ್ಯದ ವಿವಿಧೆಡೆಯ ವಾರನಾರಿನಿವಹವು ರಾಜನ ಆಸ್ಥಾನಕ್ಕೆ ಬಂದಿತು. ಅವರಾದರೋ ಕಮನೀಯನೇತ್ರೆಯರು, ಕನಕನಿಭ ಗಾತ್ರೆಯರು, ಕಾಮನ ಬಾಣಗಳನ್ನು ಹರಿತಗೊಳಿಸುವಂತಹವರು, ವೈಯಾರಿಗಳು, ವಿಟರೆಂಬ ದುಂಬಿಗಳನ್ನು ಪರವಶಗೈಯುವವರು, ತಮ್ಮ ಮಾತಿನಿಂದಲೇ ಮರುಳುಗೊಳಿಸುವಂತಹವರು. ಅವರು ಒಟ್ಟಾಗಿ ಬಂದು ರಾಜನಿಗೆ ಹೀಗೆ ಬಿನ್ನವಿಸಿಕೊಂಡರು: "ಮಹಾಪ್ರಭುಗಳೇ, ದೇವಾನುದೇವತೆಗಳು ಅಷ್ಟದಿಕ್ಪಾಲಕರು ಮುನಿವರರು ಮುಂತಾದವರೆಲ್ಲರೂ ನಮ್ಮ ಕಣ್ಣಲೆಗೆ ಸಿಲುಕಿದವರೇ ತಾನೇ? ತಾವು ನಮಗೆ ಅನುಜ್ಞೆಯಿತ್ತರೆ ಋಷ್ಯಶೃಂಗಮುನಿಯನ್ನು ರಾಜ್ಯಕ್ಕೆ ಕರೆತರುತ್ತೇವೆ" ಎಂದು ಬಿನ್ನವಿಸಿಕೊಂಡರು. ಅವರ ನುಡಿಗಳನ್ನು ಕೇಳಿ ನರನಾಥನು ಸಂಭ್ರಮಿಸಿದ, ತನ್ನ ನಸುನಗೆಯಿಂದಲೇ ಅವರಿಗೆ ಅಪ್ಪಣೆಯಿತ್ತ. ಆಗ ವಾರನಾರೀಸಂಕುಲವು ವಸುಮತೀಶನಿಗೆ ನಮಸ್ಕರಿಸಿ, ಮಂಕುಬೂದಿ, ನರಕಪಾಲಗಳು, ಕೈಕಾಲುಗಳಿಗೆ ಲೇಪಿಸುವ ಹಸುರಾದ ಮೋಹನದ್ರಾವಣ, ವಶೀಕರಣದ ಔಷಧಿಗಳ ಜೊತೆಗೆ ಋಷ್ಯಶೃಂಗಮುನಿಯಿದ್ದ ಕಾನನದ ಕಡೆಗೆ ಹೊರಟಿತು.

ಮುನಿಯ ಮಂದಿರಕ್ಕೆ ಹತ್ತಿರದಲ್ಲಿಯೇ ಅವರು ತಮ್ಮ ಎಲೆವನೆಗಳನ್ನು ರಚಿಸಿಕೊಂಡರು, ಅದರಲ್ಲಿಯೇ ಆವಶ್ಯಕ ವಸ್ತುಗಳನ್ನೆಲ್ಲ ಸಂಗ್ರಹಿಸಿ ಇಟ್ಟುಕೊಂಡರು; ಸುತ್ತುಮುತ್ತಲೂ ಮೋಹನಕ್ರಿಯೆಗಳನ್ನು ನೆರವೇರಿಸಲು ಬೇಕಾದ ಸಾಮಗ್ರಿಗಳನ್ನು ಇಟ್ಟರು, ಮುನಿಯ ಮಂದಿರದ ಸನಿಹದಲ್ಲಿಯೇ ನಾನಾ ಬಗೆಯ ತಿನಿಸುಗಳನ್ನು ಹರವಿ, ಏನಾಗುವುದೋ ಎಂಬ ಕುತೂಹಲದಿಂದ ಕಾದು ಕುಳಿತರು. ಅವರಲ್ಲೊಬ್ಬಳು ತಂಬೂರಿವಿಡಿದು ಶ್ರುತಿಸಹಿತವಾಗಿ ನಾನಾ ರಾಗಗಳನ್ನು ಹಾಡಿದಳು; ಮತ್ತೊಬ್ಬಳು ತನ್ನ ವಾಕ್ಚಾತುರ್ಯದಿಂದ ಮುನಿವಟುವನ್ನು ಕರೆತರುವೆನೆಂದು ನಟನೆಗೆ ತೊಡಗಿದಳು, ಮತ್ತೊಬ್ಬಳು ತನ್ನ ಬಳಿಯಿರುವ ಪಟುತರವಾದ ಮೂಲಿಕೆಯ ಸಾಮರ್ಥ್ಯದಿಂದ ನಿಟಿಲಾಕ್ಷನಾದರೂ ಬಳಿ ಬರುವನೆಂದಳು. ಹೀಗೆ ಆ ರೂಪಿಣಿಯರು ನಾನಾ ದಿನಗಳ ಕಾಲ ಬಹಳ ಕಪಟೋಪಾಯದಿಂದ ಆ ಆಶ್ರಮಪ್ರದೇಶದಲ್ಲಿ ಆಕರ್ಷಣೆಗಳನ್ನೊಡ್ಡಿ ಮುನಿಯು ಬಳಿ ಬರುವನೆಂದು ಕಾದು ಕುಳಿತರು. ಈ ಮಧ್ಯೆ ತಾಪಸೋತ್ತಮನು

ಹುಲ್ಲು ಹೂವು ಬೇರುಗಳ ಆಹಾರವನ್ನರಸುತ್ತ ಬಂದಾಗ ಅವನ ದಿವ್ಯರೂಪವನ್ನು ಕಂಡು ಚಕಿತರಾದರು. ಅವನು ಹೂಗಳನ್ನು ಕಿತ್ತು, ಹಣ್ಣುಗಳನ್ನು ಸಂಗ್ರಹಿಸಿಕೊಂಡು ಗುಂಡಿಗೆಯಲ್ಲಿ ನೀರನ್ನು ತುಂಬಿಕೊಂಡು ಹೋಗುತ್ತಿರಲು ಆ ಬಿಸಜಾಕ್ಷಿಯರು ಬೇರೆಯ ಮಾತುಗಳನ್ನಾಡಲು ಹೆದರಿ ಮರಗಳ ಹಿಂದೆ ನಿಂತು ಅವನು ಹೋಗುವುದನ್ನೇ ನೋಡುತ್ತಿದ್ದರು.

ಹೀಗೇ ಹಲವು ದಿನಗಳು ಕಳೆದ ಬಳಿಕ ಒಂದು ದಿನ ಆ ಮುನಿಪನು ಎಂದಿನಂತೆಯೇ ವನಕ್ಕೆ ಬಂದು ಹೂಹಣ್ಣುಗಳನ್ನು ತಿರಿದು, ದರ್ಭೆಸಮಿಧೆಗಳನ್ನು ಸಂಗ್ರಹಿಸಿಕೊಂಡು ಮುಂದೆ ಸಾಗುವ ಸಮಯದಲ್ಲಿ ಈ ಗಣಿಕೆಯರು ಧೈರ್ಯವಹಿಸಿ ಅವನ ಮುಂದೆ ಬಂದು ಬಿನ್ನಾಣಗೈಯುತ್ತ, ಮೋಹಕವಾಗಿ ನರ್ತಿಸುತ್ತ, ಕಲ್ಲುಮರಗಳೂ ಪಲ್ಲವಿಸುವ ಹಾಗೆ ಹಾಡಲು ತೊಡಗಿದರು; ಗೀತವಾದ್ಯಗಳಿಂದ ಶ್ರುತಿತಾಡಿತಗಳಿಂದ ವನದಲ್ಲಿ ಅಚೇತನ ವಸ್ತುಗಳೆಲ್ಲಕ್ಕೂ ಚೇತನವು ಬಂದಿತೆಂಬಂತೆ, ಚೇತನಗಳೆಲ್ಲವೂ ಬೆಕ್ಕಸಬೆರಗಾಗಿ ನೋಡುತ್ತಿರಲು ಆ ತಪೋನಿಧಿಯು ಅವರತ್ತ ಕುತೂಹಲದಿಂದ ಕಣ್ಣು ಪಿಳುಕಿಸುತ್ತ, ದೇವತೆಗಳನ್ನು ನೋಡುವಂತೆ ನೋಡಿ, ಬೊಂಬೆಯಂತೆ ನಿಂತುಬಿಟ್ಟ. ತಾನು ಯಾವತ್ತೂ ನೋಡದ ಕೇಳದ ಪಾವನತರವಾದ ಆಕೃತಿಯನ್ನು ಹೊಂದಿದ ಯತಿಗಳೇ ಇವರು ಎಂದುಕೊಂಡು ಸಾಷ್ಟಾಂಗವೆರಗಿ, ಅರ್ಘ್ಯಪಾದ್ಯಾದಿಗಳನ್ನಿತ್ತು., ಅವರಿಗೆ ದರ್ಭಾಸನಗಳನ್ನು ನೀಡಿ ಕುಳ್ಳಿರಿಸಿ ಅರ್ಚನೆಗೈದು ರುಚಿಕರವಾದ ಮಾಗಿದ ಹಣ್ಣುಗಳನ್ನು ಅತ್ಯಂತ ಸಂಭ್ರಮದಿಂದ ಅರ್ಪಣೆ ಮಾಡಿದ. ಇವನ ರೀತಿಯನ್ನು ಕಂಡು ಆ ಕಾಮಿನಿಯರು ದಿಗ್ಭ್ರಮಿತರಾದರು, 'ಪಾಪ, ಈ ಮಹಾಪುರುಷನಿಗೆ ಗಂಡುಹೆಣ್ಣುಗಳ ವ್ಯತ್ಯಾಸವೇ ತಿಳಿಯದು; ಹೀಗಾದರೆ ಈ ಜನ್ಮದಲ್ಲಿ ನಮ್ಮ ಉದ್ದೇಶವು ಸಫಲವಾಗುವುದೆಂತು, ಸಾರ್ವಭೌಮನ ಮನೋರಥ ಸಿದ್ಧಿಸುವುದು ಹೇಗೆ' ಎಂದು ಮನಸ್ಸಿನಲ್ಲಿಯೇ ಚಿಂತಿಸುತ್ತ, ವಿಭಾಂಡಕಮುನಿಯ ಭಯದಿಂದ ತಾವೂ ಮರಳಿ ನಮಸ್ಕರಿಸಿ, ಅವನಿಗೆ ಇಷ್ಟವಾಗುವಂತಹ ಭಕ್ಷ್ಯಗಳನ್ನು ಹಣ್ಣುಗಳೆಂಬಂತೆ ಅವನಿಗೆ ಅರ್ಪಿಸಿ, "ಇವುಗಳನ್ನು ಸೇವಿಸುವುದು ದೇಹಕ್ಕೆ ಸುಖಕರ" ಎಂದು ಹೇಳಿ, ಅವನ ಅಪ್ಪಣೆ ಪಡೆದು ತಮ್ಮ ಆಲಯಗಳಿಗೆ ವಾಪಸಾದರು.

ಇತ್ತ ಋಷ್ಯಶೃಂಗನು 'ಹುಟ್ಟಿದಾರಭ್ಯ ಸವಿಯದಿದ್ದ ರುಚಿಕರ ಹಣ್ಣುಗಳನ್ನು ಈ ದಿನ ಮೆಲ್ಲುವಂತಾದುದು ಭಾಗ್ಯವೇ ಸರಿ, ಅನುದಿನವೂ ಮುನಿಜನರು ನೀಡುವ ಹಣ್ಣುಗಳು ಇವಕ್ಕೆ ಸಾಟಿಯೇ! ಇವು ಈ ಲೋಕದಲ್ಲಿ ಬೆಳೆದವಲ್ಲ, ಸಾಕ್ಷಾತ್ ವೈಕುಂಠದಲ್ಲಿಯೇ ಬಿಟ್ಟಂತಹವು; ಅಲ್ಲದೆ, ಅವರು ನನಗೆ ದರ್ಶನವಿತ್ತುದರಿಂದ ಇಂದು ನಾನು ಧನ್ಯನಾದೆ' ಎಂದುಕೊಳ್ಳುತ್ತ ತನ್ನ ಪರ್ಣಕುಟಿಗೆ ವಾಪಸಾಗಿ, ಕೈಯಲ್ಲಿ ಸಮಿತ್ತು ದರ್ಭೆಗಳನ್ನಿರಿಸಿಕೊಂಡು ಶ್ರೀಮನ್ನಾರಾಯಣನನ್ನು ಅರ್ಚಿಸಿದ. ಅಷ್ಟರಲ್ಲಿ ಮಜ್ಜನಕ್ಕೆಂದು ಹೋಗಿದ್ದ ತಂದೆಯು ವಾಪಸಾದ. ಆತನ ಕಾಲುಗಳನ್ನು ತೊಳೆದು ಪೂಜಿಸಿ ಕಂದಮೂಲಗಳನ್ನು ಅರ್ಪಿಸಿದ: ತಂದೆಯು ಮಗನನ್ನು ಆಶೀರ್ವದಿಸಿ ಕಳಿಸಿ ತಾನು ಸಂತಸದಿಂದ ಇದ್ದ.

ಆದರೆ ಆ ರಾತ್ರಿ ಋಷ್ಯಶೃಂಗಮುನಿಗೆ ನಿದ್ದೆ ಬಾರದಾಯಿತು; ತಾನು ಕಂಡ

ಬೆಡಗುಬಿನ್ನಾಣಗಳು, ಉಂಡ ಫಲರುಚಿಗಳು ನೆನಪಿಗೆ ಬಂದು ಬೆಳಗಾಗುವವರೆಗೂ ತೊಳಲಾಡುತ್ತಲೇ ಹಾಸಿಗೆಯಲ್ಲಿ ಕಾಲಕಳೆದ. ಸೂರ್ಯನು ಹುಟ್ಟಿದ ಮೇಲೆದ್ದು ಮಜ್ಜನ ಮಾಡಿ ಆತುರದಿಂದಲೇ ಪಿತೃಸೇವೆಗೈದು ಅಗ್ನಿಕಾರ್ಯವನ್ನು ನೆರವೇರಿಸಿ ಹಣ್ಣುಬೇರುಗಳನ್ನು ತರಲು ಕಾನನಕ್ಕೆ ಬಂದ. ಇವನ ಬರವನ್ನೇ ನಿರೀಕ್ಷಿಸುತ್ತಿದ್ದ ಆ ಗಣಿಕಾಮಣಿಗಳು ಬಳಿ ಬಂದು ನಾನಾ ತರದಿಂದ ಅವನನ್ನು ಉಪಚಾರಗೈದು ರುಚಿಕರವಾದ ದಿವ್ಯಭಕ್ಷ್ಯಗಳನ್ನು ಉಣಲಿತ್ತು, ತಮ್ಮ ಹಾಡುಗಳಿಂದಲೂ ನರ್ತನದಿಂದಲೂ ಅವನಿಗೆ ಸಂತೋಷವನ್ನು ನೀಡಿ ತಮ್ಮ ಪರ್ಣಶಾಲೆಗಳಿಗೆ ವಾಪಸಾದರು. ಹೀಗೆಯೇ ಉಪಚರಿಸುತ್ತ ಅವನನ್ನು ಮರುಳುಗೊಳಿಸಿ, ಕೆಲವಾರು ದಿನಗಳಲ್ಲಿಯೇ ಆ ಮುಮುಕ್ಷುವಿಗೆ ಕಾಮಕೇಳಿಯಲ್ಲಿ ಆಸಕ್ತಿಯುಂಟಾಗುವಂತೆ ಮಾಡಿ, ತಮ್ಮ ವೈಯಾರದಿಂದ ಅವನನ್ನು ಮೆಚ್ಚಿಸಿ ಅವನ ಮನಸ್ಸನ್ನು ತಮ್ಮ ವಶವರ್ತಿಯನ್ನಾಗಿ ಮಾಡಿಕೊಂಡರು.

ಕಾಲಾಂತರದಲ್ಲಿ ಅವನ ಮನಸ್ಸಿನಲ್ಲಿ ಕೋಟಲೆಯು ಆರಂಭವಾಯಿತು. ಒಮ್ಮೆ ವಿವೇಕ ಉಂಟಾಗುತ್ತದೆ, ವೇದಾಂತಾಭ್ಯಾಸದಿಂದ ಹುಟ್ಟಿದ ಜ್ಞಾನ ಮೇಲುಗೈಯಾಗುತ್ತದೆ; ಮತ್ತೊಮ್ಮೆ ಆ ವನಿತಾಜನರ ಕುಡಿನೋಟ ಮನಸ್ಸನ್ನು ಸೆಳೆಯುತ್ತದೆ. ಹೀಗೆ ಮಾನಿನಿಯರಿಗೆ ಮರುಳಾಗದ ಮುನಿಯು ಯಾವನಿದ್ದಾನೆ ಎಂಬ ಗಾದೆಗೆ ಲಕ್ಷ್ಯವೆಂಬಂತೆ ಈ ಮುನಿತಿಲಕನೂ ಮಾರ್ಪಾಟು ಹೊಂದಿದ. ಆ ತರುಣಿಯರು ಅನುದಿನವೂ ಮುದದಿಂದ ಅವನಲ್ಲಿ ಕಾಮವಾಂಛೆಯನ್ನು ಕೆರಳಿಸಿ, ಅವನೊಡನೆ ಬೆರೆಯುತ್ತ ಅವನನ್ನು ಸ್ವಾಧೀನಪಡಿಸಿಕೊಂಡರು. ಹೀಗೇ ಇರಲು, ಒಂದು ದಿನ ಅವರು ನಯವಾಗಿ, "ಕರುಣಾನಿಧಿಯೇ, ಎರಡಿಲ್ಲದೆ ನಿನ್ನ ಚರಣಸೇವೆಯಲ್ಲಿಯೇ ಆಸಕ್ತರಾಗಿ ನಾವು ಇಲ್ಲಿ ಕಾಲ ಕಳೆದೆವು. ಇನ್ನಾದರೂ ನೀನು ನಮ್ಮ ಮನೆಗಳಿಗೆ ಒಮ್ಮೆ ಭೇಟಿ ಕೊಡಬೇಕು" ಎಂದು ಬೇಡಿಕೊಂಡರು. ಹೀಗೆ ಬಿನ್ನವಿಸಿಕೊಳ್ಳಲು ನಿರ್ಮಲಾಂತಃಕರಣವುಳ್ಳ ಮುನಿಯು ಅವರ ಮೋಡಿಗೆ ಮರುಳಾಗಿ ಅವರ ಮಾತಿಗೆ ಒಪ್ಪಿ ಅವರೊಡನೆ ರೋಮಪಾದ ಆಳುತ್ತಿದ್ದ ದೇಶದ ರಾಜಧಾನಿಗೆ ಬಂದ. ತನ್ನ ದೇಶಕ್ಕೆ ಋಷ್ಯಶೃಂಗ ಮುನಿಯು ಕಾಲಿಟ್ಟಿದ್ದನ್ನು ಅರಿತ ರೋಮಪಾದ ಭಕ್ತಿಹರುಷಗಳಿಂದ ಮುನಿಯನ್ನು ಎದುರುಗೊಂಡು ಸಾಷ್ಟಾಂಗವೆರಗಿ, ಮುನಿಪೋತ್ತಮನಿಗೆ ಅರ್ಘ್ಯಪಾದ್ಯಾದಿಗಳನ್ನಿತ್ತು ತನ್ನ ಅರಮನೆಗೆ ಕರೆದೊಯ್ದು ಸುವರ್ಣಸಿಂಹಾಸನದಲ್ಲಿ ಕೂರಿಸಿದ. ಧೂಪದೀಪನೈವೇದ್ಯಗಳನ್ನು ಆ ತೇಜೋರಾಶಿಗೆ ಅರ್ಪಿಸಿ ಕೃತಕೃತ್ಯತೆಯನ್ನು ಅನುಭವಿಸಿದ. ಆಗಲೇ ದೇವತೆಗಳು ಸಂಭ್ರಮದಿಂದ ಮಳೆಗರೆದರು, ದೇಶದ ಕೊಳಕಾಸಾರಗಳಲ್ಲಿ ನೀರು ತುಂಬಿಕೊಂಡಿತು, ನದಿನದಗಳಲ್ಲಿ ರಭಸವಾಗಿ ನೀರು ಹರಿಯತೊಡಗಿತು; ದೇಶದ ದುರ್ಭಿಕ್ಷ ಹೀಗೆ ಕಳೆದು ಸಮೃದ್ಧಿಯುಂಟಾಯಿತು. ಆನಂತರ ತನ್ನ ಮುದ್ದಿನ ಮಗಳಾದ ಶಾಂತೆಯನ್ನು ಆ ಋಷಿಕುವರನಿಗೆ ಒಲವಿನಿಂದ ಮದುವೆ ಮಾಡಿಕೊಟ್ಟು ಸುಖದಿಂದಿದ್ದ.

ಈ ಕತೆಯನ್ನು ಸನತ್ಕುಮಾರನು ದೇವೇಂದ್ರನ ಸಭೆಯಲ್ಲಿ ಹೇಳಿದ ಎಂದು ಸುಮಂತನು ರಾಜನಿಗೆ ಹೇಳಿ, ಮಹಾಶಿವಸಮಾನನಾದ ಆ ಋಷ್ಯಶೃಂಗನನ್ನು ಕರೆತಂದು ಅವನ ಮೂಲಕ ಪುತ್ರಕಾಮೇಷ್ಟಿಯನ್ನು ಮಾಡಿಸಲು ಶ್ರೇಷ್ಠ ಕುಮಾರರು ಜನಿಸುತ್ತಾರೆ

ಎಂದು ರಾಜನಿಗೆ ಅರುಹಿ ಸುಮಂತನು ತನ್ನ ಮನೆಗೈದಿದ. "ಈ ಮುನಿಪೋತ್ತಮನ ಕತೆಯನ್ನು ಪ್ರೇಮದಿಂದ ಕೇಳಿದವರಿಗೆ **ರಾಮಪುರೀವಲ್ಲಭನು** ಕಾಮಿತಾರ್ಥವನ್ನು ನೆರವೇರಿಸಿ ಸಲಹುತ್ತಾನೆ" ಎಂದು ಈಶ್ವರನು ಪಾರ್ವತಿಗೆ ಹೇಳಿದ ಶ್ರೀರಾಮನ ಕತೆಯನ್ನು ಸೂತಮುನಿಯು ಶುಕಶೌನಕಾದಿಗಳಿದ್ದ ಭೂಸುರಸಭೆಗೆ ನಿರೂಪಿಸಿದ.

೭. ಗುರು ವಸಿಷ್ಠರ ಸೂಚನೆಯಂತೆ ಋಷ್ಯಶೃಂಗನನ್ನು ಕರೆಸುವುದು

ಗಿರಿರಾಜಸುತೆಯೇ ಕೇಳುವಂಥವಳಾಗು, ಸುಮಂತನ ಮಾತುಗಳನ್ನು ಕೇಳಿ ಸಂತಸಗೊಂಡ ದಶರಥ ಮಹಾರಾಜನು ಮರುದಿವಸ ರವಿಕುಲಗುರುವಾದ ಬ್ರಹ್ಮನಿಷ್ಠರಾದ ವಸಿಷ್ಠರನ್ನು ಬರಮಾಡಿಕೊಂಡು, "ಋಷಿವರ್ಯರೇ, ಋಷ್ಯಶೃಂಗ ಮುನಿಗಳನ್ನು ನನ್ನ ನಗರಕ್ಕೆ ಕರೆತರಬೇಕೆಂದು ತೀರ್ಮಾನಿಸಿದ್ದೇನೆ" ಎಂದಾಗ ವಸಿಷ್ಠರು ಸಂತಸಗೊಂಡು ಅದಕ್ಕೆ ಅಪ್ಪಣೆಯಿತ್ತರು. ಆ ಬಳಿಕ ಚತುರಂಗಸೈನ್ಯಸಮೇತನಾಗಿ ಹೋಗಿ ಮುನಿಯನ್ನು ಆಹ್ವಾನಿಸಲು ರೋಮಪಾದನ ರಾಜಧಾನಿಗೆ ಹೊರಡಲು ಸರ್ವಸಿದ್ಧತೆಗಳನ್ನು ನಡೆಸಬೇಕೆಂದು ಸಂಬಂಧಿಸಿದವರಿಗೆ ಆಜ್ಞೆ ಮಾಡಿದ. ದೊರೆಯು ನೀಡಿದ ಆಜ್ಞೆಗನುಗುಣವಾಗಿ ದಂಡನಾಥರು ವಿಧೇಯತೆಯಿಂದ ದುಂದುಭಿಯನ್ನು ಮೊಳಗಿಸಿದರು; ಸಾಮಂತರೆಲ್ಲ ಒಗ್ಗೂಡಿ ರಾಜನ ಪರವಾದ ಘೋಷಣೆಗಳನ್ನು ಕೂಗಿದರು. ಊರಿನ ಮುಂಭಾಗದಲ್ಲಿ ತರತರದ ಧ್ವಜಗಳು ಹಾರಾಡಿದವು. ಈ ವಿಷಯವನ್ನು ತ್ವರಿತವಾಗಿ ದೇವತೆಗಳಿಗೆ ಅರುಹುವೆನೆಂಬ ರೀತಿಯಲ್ಲಿ ಇನನು ಸಮುದ್ರಕ್ಕಿಳಿದ; ಎಲ್ಲೆಡೆ ಕೇಳಿ ಬಂದ ಮಹಾ ಶಬ್ದದಿಂದ ಅಸುರರು ಗಾಬರಿಗೊಂಡರು, ಅಮರಿಯರ ಸಮೂಹವು ನಡುಗಿತು.

ಸರಿ, ಎಲ್ಲವೂ ಸಿದ್ಧವಾಯಿತು: ಚಲ್ಲಣವುಟ್ಟು ಕಾಸೆ ಬಿಗಿದು ಹಣೆಯ ಮೇಲೆ ಕುಂಕುಮ ಭಸಿತಗಳನ್ನು ಧರಿಸಿ ತಲೆಗಳಲ್ಲಿ ಓರೆಯಾಗಿ ಶಿಖೆಗಳನ್ನು ಇರಿಸಿಕೊಂಡು ಪಾಗುಗಳನ್ನು ಧರಿಸಿ ವೀರಭಟರು ನೆರೆದರು. ನಾನಾ ವಿಧವಾದ ವಾದ್ಯಗಳು ಮೊರೆದುವು. ಘೀಳಿಡುವ ಆನೆಗಳು, ಕುಪ್ಪಳಿಸುವ ಕುದುರೆಗಳು, ಪದಾತಿಸೈನ್ಯದ ಪದಗತಿಗಳ ಸದ್ದು. ದುಂದುಭಿಗಳ ಝೇಂಕಾರಗಳು ಎಂಟು ದಿಕ್ಕುಗಳಲ್ಲೂ ತುಂಬಿದವು. ಎಲ್ಲ ಸೇರಿದ ಮೇಲೆ ಬಲವು ಸಮುದ್ರದ ಬಳಗದಂತೆ ಪದಘಾತದಿಂದ ಶಬ್ದಗೈಯುತ್ತ ಚಲಿಸತೊಡಗಿತು. ಇದರಿಂದ ಮೇಲೆ ಅಡರುವ ಧೂಳು ತುಂಬಿ ದಿಕ್ತಟಗಳೆಲ್ಲ ಪೀತಾಂಬರವನ್ನುಟ್ಟಂತೆ ಕಂಗೊಳಿಸಿದವು, ಆಗಸಕ್ಕೆ ಸೇತುವೆಯನ್ನು ಕಟ್ಟಿದ ಹಾಗೆ ಕಾಣಿಸಿತು. ಬತ್ತೀಸ ಶಸ್ತ್ರಗಳನ್ನೆತ್ತಿ ಹಿಡಿದು ಉದ್ರೇಕಕ್ರೋಧಗಳಿಂದ ಹೊಮ್ಮಿದ ಗಡಸು ವಾದ್ಯಗಳ ಶಬ್ದವು ಹರಡಲು. ಸುತ್ತಲೂ ಎಂಟು ದಿಕ್ಕುಗಳಿಂದ ಮುತ್ತಿ ಬರುವ ಭಟರ ಮೊತ್ತವು ಕೈಯಲ್ಲಿ ಹಿಡಿದ ಆಯುಧಗಳ ಸಾಲು ಥಾಳಾಗಿ ಕಾಣಿಸಿತು. ಅಲಂಕಾರಗೊಂಡ ಕುದುರೆಗಳನ್ನೇರಿದ್ದ ರಾವುತದಳವು ಬಿರುಗಾಳಿಯ ಸಂಭ್ರಮದಿಂದ ವೇಗವಾಗಿ ಸಮುದ್ರದೋಪಾದಿಯಲ್ಲಿ ಬಂದು ಸೇರಿತು. ನಾನಾ ಬಗೆಯ ಬಿರುಸದ್ದಿನಿಂದಾಗಿ ಭೂಮಿಯೇ ನಡುಗುತ್ತಿರಲು, ರಥಕ್ಕೆ

ಕಟ್ಟಿದ್ದ ಕುದುರೆಗಳು ಆಗಸವನ್ನು ಮುಟ್ಟಲು ತವಕಿಸುತ್ತಿರುವ ರೀತಿಯಲ್ಲಿ ಕುಪ್ಪಳಿಸುತ್ತಿದ್ದವು. ಅವುಗಳ ಕಿಸುವಾಯಿಗಳಿಂದ ಉದುರುತ್ತಿದ್ದ ಬೆಳ್ನೊರೆಯ ಬಿಂದುಗಳು ಆಗಸದಲ್ಲಿನ ತಾರಗೆಗಳು ಭಯದಿಂದ ನೆಲಕ್ಕೆ ಉದುರುತ್ತಿರುವಂತೆ ಕಾಣಿಸಿದವು. ಎಡಬಲಗಳಲ್ಲಿ ನಿಯಂತ್ರಣಗೈಯುತ್ತ ಸಾಗಿದ ಅನುಚರರ ನಡುವೆ ಪದಾತಿಸೈನ್ಯವು ನಡೆಯುತ್ತ ಬರಲು ಕಾಲತುಳಿತದಿಂದ ಎದ್ದ ಧೂಳು ಶತ್ರು ಸಾರ್ವಭೌಮರ ಮುಖಕಮಲಗಳನ್ನು ಮ್ಲಾನಗೊಳಿಸುವಂತಿತ್ತು. ಎಂಟು ದಿಕ್ಕುಗಳಿಂದಲೂ ಧಾವಿಸಿ ಬಂದ ದಿಕ್ಕರಿಗಳನ್ನೂ ಧಿಕ್ಕರಿಸುವ ಮದಗಜಗಳ ಮದಧಾರೆಯಿಂದ ಆಕರ್ಷಿತಗೊಂಡ ದುಂಬಿವಿಂಡುಗಳು ಹಾರಿ ಬರಲು, ಐರಾವತಗಳಂತಿದ್ದ ಆನೆಗಳ ಸಾಲು ಅರಮನೆಯೆಡೆ ಬಂದು ಸೇರಿದವು. ತಲೆಯಲ್ಲಿ ಚಂದ್ರರುಗಳನ್ನು ಧರಿಸಿದ ಹರನಂತೆ, ಭಾರಿಯಾದ ಚಕ್ರಗಳನ್ನು ಹೊಂದಿದ ಹರಿಯಂತೆ, ಹಂಸವನ್ನಾಶ್ರಯಿಸಿದ ಬ್ರಹ್ಮನಂತೆ, ಸಾವಿರ ಕಣ್ಣುಗಳುಳ್ಳ ಇಂದ್ರನಂತೆ, ಗಂಧರ್ವರಿಂದ ಸೇವಿತನಾದ ಕುಬೇರನಂತೆ, ಸಾಲುಗಟ್ಟಿ ಬರುವ ರಥಗಳ ಮೊತ್ತವು ಶತ್ರುಸಮೂಹದಲ್ಲಿ ನಡುಕವನ್ನುಂಟುಮಾಡುತ್ತಿತ್ತು.

ಹೀಗೆ ಬಂದು ಸೇರಿದ ಚತುರಂಗಬಲದ ಚತುರತೆಯನ್ನು ಬಣ್ಣಿಸಲು ಚತುರಾಸ್ಯನಿಗಾದರೂ ಸಾಧ್ಯವೇ? ಚತುರಬ್ಧಿಪರ್ಯಂತವಾದ ಚತುರ ದಿಕ್ಪತಿಗಳೂ ಚಕಿತರಾಗುವಂತೆ ದಳಪತಿಗಳು ಹುಮ್ಮಸ್ಸಿನಿಂದ ಬಂದು ಮಹಾರಾಜನಿಗೆ ಬಿನ್ನಹಗೈದು ಸ್ತುತಿಸಿದರು. ಎಲ್ಲರೂ ಬಂದ ಮೇಲೆ ಶ್ರೀಪತಿಯ ಪಾದಗಳನ್ನು ನೆನೆದ ಮಹಾರಾಜನು ಈ ಎಲ್ಲವುಗಳನ್ನೂ ಒಳಗೊಂಡು ಗುಹೆಯಿಂದ ಹೊರಬರುವ ಸಿಂಹಗಳ ಹಿಂಡಿನಂತೆ ಹೊರಟ. ನಾನಾವಿಧವಾದ ವಾದ್ಯಗಳು ಮೊಳಗುತ್ತಿರಲು, ಘೀಳಿಡುವ ಆನೆಗಳ ಶಬ್ದ ಮತ್ತು ಕುದುರೆಗಳ ಹೇಷಾರವ ಹಾಗೂ ಸೈನಿಕರ ಪದಹತಿಯ ಸದ್ದು ಎಂಟು ದಿಕ್ಕುಗಳನ್ನೂ ತುಂಬಿಕೊಂಡಿತು. ರಾಜನ ಪರಿವಾರ ಹೊರಟ ಸುದ್ದಿಯನ್ನು ಕೇಳಿ ನಗರದ ಜನಸಮೂಹವು ಪುಳಕಗೊಂಡು ಕರುಮಾಡಗಳನ್ನೇರಿ ಪುತ್ಥಳಿಗಳಂತೆ ನಿಂತು ನೋಡುತ್ತಿತ್ತು. ಕಂಠಾಭರಣ-ಕುಂಡಲಗಳು, ಮಣಿಮಕುಟ-ಭುಜಕೀರ್ತಿ-ಕಡಗಗಳು, ಉಂಗುರ-ಪೀತಾಂಬರಗಳಿಂದ ಭೂಷಿತನಾದ ದಶರಥ ಮಹಾರಾಜನು ಬರುತ್ತಿರಲು ಆತನ ಮೇಲೆ ಹಿಡಿದಿದ್ದ ಬೆಳ್ಗೊಡೆಯು ಠೀವಿಯಿಂದ ತನಗೆ ಎಣೆಯೆನಿಸಿ ಬರುತ್ತಿರುವ ರಾಜನನ್ನು ಕಂಡು ಕೋಪದಿಂದ ಭೂಮಿಯನ್ನು ಆಗಸಕ್ಕೆ ಎಸೆದಂತೆ ಕಾಣುತ್ತಿತ್ತು. ಹೊಗಳುಭಟರು ನರನಾಥನಿಗೆ ಅನ್ವಯಿಸುವಂತೆ ದೇವೇಂದ್ರನನ್ನು ಕಾಪಾಡಿದ ವಿಮಲ ಚರಿತೆಯನ್ನು ಹಾಡುತ್ತಿರಲು, ವಂದಿಗಳು 'ಸಮದರಿಪುಗಜಸಿಂಹ ಜೀಯ ಅವಧಾರು' ಎಂದು ಉಗ್ಗಡಿಸುತ್ತಿರಲು, ಕಂಚುಕಿಗಳು 'ಪರಾಕು ಪರಾಕು' ಎಂದು ಉದ್ಘೋಷಿಸುತ್ತಿರಲು, ಭೂಸುರರು ಬಂದು ಮಂತ್ರಾಕ್ಷತೆಯನ್ನು ತಳಿದು 'ಜಯ ವಿಜಯೀಭವ' ಎಂದು ಆಶೀರ್ವದಿಸುತ್ತಿದ್ದರು. ಹೀಗೆ ಅಂಬುಧಿಯ ಬಳಗದಂತೆ ಸಾಗುತ್ತಿದ್ದ ಸೈನ್ಯದ ಪದಾಘಾತದಿಂದ ಭೂತಳವೇ ನಡುಗಿತು, ಮೇಲೆದ್ದ ದೂಳಿಯು ಪೀತಾಂಬರವನುಟ್ಟಂತೆ ದಿಕ್ಪಟಲಗಳನ್ನು ಕೆಂಪು ಮಾಡಿತು, ಆಕಾಶಗಂಗೆಗೆ ಸೇತುವೆಯನ್ನು ಕಟ್ಟಿದ ಹಾಗೆ ಮಣಿಗಳು ಅಂಬರವನ್ನು ಸೇರಿದುವು ಎಂಬಂತಿದ್ದ ವಾಹಿನೀವೈಭವವನ್ನು ಏನೆಂದು ಬಣ್ಣಿಸುವುದು!

ಅಜಕುಮಾರನಾದ ದಶರಥನು ಅಂಗನೃಪತಿಯನ್ನು ಕಾಣಲೆಂದು ಬರುವ ಸುದ್ದಿಯು ನದಿನದಗಳನ್ನೂ ಗಿರಿಕಂದರಗಳನ್ನೂ ನಗರಪಟ್ಟಣಗಳನ್ನೂ ದಾಟಿ ರೋಮಪಾದ ಮಹಾರಾಜನ ಕಿವಿಗೆ ಬಿದ್ದಿತು. ಆಗ ಆತನು ಹರುಷಭರಿತನಾಗಿ ತನ್ನ ಸೈನ್ಯದೊಡನೆ ಕೂಡಿಕೊಂಡು ಸೂರ್ಯವಂಶೋತ್ತಮನನ್ನು ವೈಭವದಿಂಧ ಇದಿರುಗೊಳ್ಳಲು ಭೂಸುರರ ಜೊತೆಗೂಡಿ ನಡೆದ. ದಶರಥನನ್ನು ಕಂಡು ಕುಶಲವನ್ನು ವಿಚಾರಿಸಿ ಬಳಿಕ, "ತಾತ, ನೀನು ನಮ್ಮ ನಗರಕ್ಕೆ ಬಂದುದು ಇಂದು ನಮಗೆ ಭಾಗ್ಯದ ಬೆಳೆಯೇ ಬೆಳೆದಂತಾಗಿದೆ, ಮಿತ್ರವಾಂಛಲ್ಯಯುತನಾದ ನೀನು ಸೌಖ್ಯದಾತನೇ ಸರಿ" ಎಂದು ಮೃದುಮಾತುಗಳಿಂದ ಉಪಚರಿಸಿ ಬರಮಾಡಿಕೊಂಡು ದೊರೆಯನ್ನು ಸಂಭ್ರಮದಿಂದ ತನ್ನರಮನೆಗೆ ಕರೆತಂದ. ವೀರಾಗ್ರೇಸರನಾದ ದಶರಥನು ಅರಮನೆಯಲ್ಲಿ ಕಶ್ಯಪಸುತಕುಮಾರನನ್ನು ಕಂಡು ಲಲಿತವಾದ ನುಡಿಗಳಿಂದ ಹೊಗಳುತ್ತ ಸಾಷ್ಟಾಂಗವೆರಗಿ, "ವಿಪ್ರಶಿರೋಮಣಿಯಾದ ನಿನ್ನ ಪಾದಗಳನ್ನು ಕಂಡು ನನ್ನ ಪಾಪಸಮೂಹವೆಲ್ಲವೂ ಹಾರಿಹೋಯಿತು, ಈ ಸನ್ನಿವೇಶದ ಇಂದಿನ ದಿನವೇ ಶುಭದಿನ, ಸೊಂಪಾದ ಪುಣ್ಯದ ಬೆಳಸಿನ ಮೊಳಕೆ" ಎಂದು ನುಡಿದ. ಆತನ ನುಡಿಗಳ್ನು ಕೇಳಿದ ಋಷ್ಯಶೃಂಗ ಮುನಿಯು ಪರಮ ಹರುಷದಿಂದ ಅವನನ್ನು ಆಶೀರ್ವದಿಸಿ, "ಇಡೀ ಲೋಕಕ್ಕೇ ಶುಭವನ್ನುಂಟುಮಾಡುವ ಧಾರ್ಮಿಕರ ಮಕುಟಮಣಿ ನೀನು, ಸುರಪತಿಯನ್ನೇ ಕಾಪಾಡಿದ ಮಹಾವೀರ ನೀನು" ಎಂದು ಅನುಗ್ರಹಗೈದು ದಶರಥ ಮಹಾರಾಜನ ಜೊತೆಯಲ್ಲಿ ಗದ್ದುಗೆಯಲ್ಲಿ ಮಂಡಿಸಿದ.

ನಾನಾ ವಿಧವಾಗಿ ರೋಮಪಾದ ಮಹಾರಾಜನು ಅತ್ಯಂತ ವಿನಯಭರಿತ ಉಪಚಾರಗಳಿಂದ ಸಂತಸಗೊಳಿಸಿ ಎಂಟು ದಿನಗಳ ಕಾಲ ದಶರಥ ಮಹಾರಾಜನನ್ನು ತನ್ನ ಅರಮನೆಯಲ್ಲಿ ಇರಿಸಿಕೊಂಡ. ಒಂದು ದಿನ ಏಕಾಂತದಲ್ಲಿ ಮುಂದೆ ಆಗಬೇಕಾದ ಕಾರ್ಯದ ಬಗ್ಗೆ ರಘುವಂಶಜಲಲಾಮನು ಪ್ರಸ್ತಾಪಿಸಿದ. "ತಾತ, ಪ್ರೀತಿಯಿಂದ ಸಲಹುವ ಮಕ್ಕಳಿಲ್ಲದ ಕಳವಳದಿಂದಾಗಿ ನನ್ನ ಸುಖವೆಲ್ಲ ಹಾಳಾಗಿದೆ, ಆ ಕಾರಣದಿಂದಲೇ ನಿನ್ನ ಸಂದರ್ಶನಕ್ಕಾಗಿ ಬಂದೆ. ಯಜ್ಞಕಾರ್ಯಕ್ಕಾಗಿ ನಿನ್ನ ಅಳಿಯನನ್ನು ದಯವಿಟ್ಟು ನನ್ನ ನಗರಕ್ಕೆ ಕಳಿಸಿಕೊಡಬೇಕು" ಎಂದು ಬೇಡಿಕೊಂಡ. ಈ ಮಾತುಗಳನ್ನು ಕೇಳಿದ ರೋಮಪಾದ ಸಂತಸ ತಾಳಿ ರಘುಕುಲೋತ್ತಮನನ್ನು ಸತ್ಕರಿಸಿ ವಿಪ್ರಕುಲವರ್ಯನಾದ ತನ್ನ ಅಳಿಯ ಋಷ್ಯಶೃಂಗನನ್ನೂ ಮಗಳಾದ ಶಾಂತೆಯನ್ನೂ ಅವನೊಡನೆ ಕಳಿಸಿಕೊಟ್ಟ. ತನ್ನ ಆಕಾಂಕ್ಷೆಯು ಕೈಸಾರುವ ಕಾಲ ಸನ್ನಿಹಿತವಾಯಿತೆಂಬ ಸಂತಸದಿಂದ ದಶರಥನು ಮುನಿಯನ್ನು ಮಣಿರಥದಲ್ಲಿ ಕುಳ್ಳಿರಿಸಿ ಅಯೋಧ್ಯೆಯ ಕಡೆಗೆ ಪಯಣ ಬೆಳೆಸಿದ. ಈ ನಡುವೆ ಈ ವಿಚಾರವನ್ನು ರಾಜಧಾನಿಗೆ ತ್ವರಿತವಾಗಿ ತಿಳಿಸಿ, ಊರನ್ನು ನಾನಾ ವಿಧವಾಗಿ ಅಲಂಕರಿಸಿ ಮುನಿಶ್ರೇಷ್ಠನನ್ನು ಸ್ವಾಗತಿಸುವ ಏರ್ಪಾಟು ಮಾಡಬೇಕೆಂದು ಮಹಾರಾಜನು ಚಾರರಿಗೆ ಅಪ್ಪಣೆಗೈದ.

ಅವರು ಅಯೋಧ್ಯೆಯನ್ನು ತಲುಪಿದಾಗ ಊರು ಸಂಭ್ರಮದಿಂದ ಮುನಿಯನ್ನು ಸ್ವಾಗತಿಸಿತು. ಹಾಡುವ ಮುತ್ತೈದೆಯರು, ಗಾನನಾಟ್ಯಗಳಿಂದ ರಂಜಿಸುವ ಹಂಸಗಾಮಿನಿಯರಾದ ಕಾಂತೆಯರು, ಮನಸ್ಸಿಗೆ ಮುದ ನೀಡುವ ರೀತಿಯಲ್ಲಿ

ಹೊಗಳುವ ಹೊಗಳುಭಟರು, ಮನೆಮನೆಗಳ ಮುಂದೆ ನಿಂತು ಮೆರವಣಿಗೆಯನ್ನು ನೋಡುವ ಜನಸಂದಣಿಯಿಂದ ಕೂಡಿ ನಗರ ಕಲರವದಿಂದ ತುಂಬಿಹೋಯಿತು. ಸಡಗರದಿಂದ ಕೂಡಿ ಅಯೋಧ್ಯಾಪತಿಯು ಮುನಿಪತಿಯೊಡನೆ ಅರಮನೆಯನ್ನು ಸೇರುವಾಗ ಇಕ್ಕೆಲಗಳಲ್ಲಿ ಬೆಡಗಿಯರು ನಿಂತು ಆರತಿಯನ್ನು ಬೆಳಗಿ ಬರಮಾಡಿಕೊಂಡರು. ಸೂರ್ಯವಂಶೋತ್ತಮನು ಮುನಿಯನ್ನೂ ಅವನ ವನಿತೆಯನ್ನೂ ಸಿಂಹಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿ, ಭಕ್ತಿಯಿಂದ ಪೂಜೆಗೈದ. ಶಿವಸಮಾನನಾದ ಮುನಿಯ ಬರವಿನಿಂದ ಮಂಗಳಕರವಾದುದು ಸಂಭವಿಸಿ ತನ್ನ ಇಷ್ಟಸಿದ್ಧಿಯಾಗುವುದು ಖಚಿತವೆಂದು ಲವಲವಿಕೆಯನ್ನು ತಾಳಿದ. ಆತನ ಅಂತಃಪುರದ ವನಿತೆಯರೂ ಬಂದು ಶಾಂತಾಪತಿಗೆ ನಮಸ್ಕರಿಸಿ ಸಂತೋಷವಾಗಿ ಆ ದಂಪತಿಯನ್ನು ಪೂಜಿಸಿದರು. ಅವರ ಇಷ್ಟವು ನೇರವೇರುವ ಸೂಚನೆಯಾಗಿ ಸಂತಸದಿಂದ ಹಿಂತಿರುಗಿದರು.

ಆ ಹೊತ್ತಿಗೆ ಸರಿಯಾಗಿ ಕಂತುವಿಗೆ ಸೀಮಂತನೂ, ಋತುಗಳಿಗೆ ಸಾಮಂತನೂ, ಕಾಂತಾಮನೋಕಾಂತನೂ ಆದ ವಸಂತನೃಪತಿಯು ಆಗಮಿಸಿ ಲೋಕವನ್ನೆಲ್ಲ ಬೆಳಗಿದ. ಇದರಿಂದಾಗಿ ಮಾವಿನ ಪರಿಮಳದ ನಿದ್ದೆ ಕಳೆಯಿತು, ಅಶೋಕತರುಸಮೂಹಕ್ಕೆ ರಾಗರಸವು ತುಂಬಿತು, ಕೋಕಿಲಾಂಗನೆಯರ ಬಾಯಿಬೀಗಗಳನ್ನು ತೆಗಿಸಿ ನಗಿಸಿತು, ಮಲ್ಲಿಗೆಗಳನ್ನು ಅರಳಿಸಿತು, ತಂಬೆಲರು ಮತ್ತು ತುಂಬಿವಿಂಡಿಗೆ ಬೇಕಾದ ಸಂಪತ್ತನ್ನು ನೀಡಿತು, ಕಾದಲರನ್ನು ಕರೆದು ಅವರಿಗೆ ಬೇಕಾದ ಹೂಗಳನ್ನು ನೀಡುತ್ತ ಮಾಧವನು ಮೈದೋರಿದ. ಯಾಮಿನೀಪತಿಯಾದ ಚಂದ್ರನಿಗೆ ಕುಸುಮಮುದ್ರೆಯನ್ನಿತ್ತು, ಪಿಕನಾಯಕರಿಗೆ ಚಿಗುರೆಲೆ ತೆತ್ತು ನೇಮಿಸಿ, ಮಲಯಪವಮಾನಮಂತ್ರಿಯನ್ನು ಮನ್ನಿಸಿ, ಪರಾಗತತಿಯನ್ನು ಕೊಂಡೊಯ್ಯುವ ಭೃಂಗಭಟರಿಗೆ ಮಕರಂದಪಾನಮಾಡಲು ಅಪ್ಪಣೆಯಿತ್ತು, ಉಪಾಯದಿಂದ ವಸಂತನೃಪತಿಯು ಕಾಮನಿಗಾಗಿ ಬರಲು ಗಿಳಿದೇರನ್ನು ಕಳಿಸಿಕೊಟ್ಟ. ಇಂತಹ ವಸಂತಾಗಮನವನ್ನು ಗಮನಿಸಿದ ಮಹಾರಾಜನು ಸುಮಂತನನ್ನು ಬರಮಾಡಿಕೊಂಡು, ಗುರು ವಸಿಷ್ಠರನ್ನೂ ವಾಮದೇವರನ್ನೂ ಜಾಬಾಲಿಗಳನ್ನೂ ಕಾಶ್ಯಪರನ್ನೂ ಇತರ ದ್ವಿಜಮುಖ್ಯರನ್ನೂ ಕರೆದುತರಲು ಆಜ್ಞೆಮಾಡಿದ. ಮಹಾರಾಜನಿಗೆ ನಮಿಸಿ ಭರದಿಂದ ಬಂದು ಮುನಿಶ್ರೇಷ್ಠರೆಲ್ಲರಿಗೂ ಬಿನ್ನವಿಸಿಕೊಂಡು ಸುಮಂತನು ಅವರೊಡನೆ ವಾಪಸಾದ.

ಮುನಿಗಳಿಗೆ ಸಾಷ್ಟಾಂಗವೆರಗಿ ಮಹೀಪತಿಯು ಮಹಾಯಜ್ಞವನ್ನು ಮಾಡಬೇಕೆಂಬ ತನ್ನ ಮನೋಭೀಷ್ಟವನ್ನು ಅವರಲ್ಲಿ ವಿಜ್ಞಾಪಿಸಿಕೊಂಡು, ತಾವೆಲ್ಲರೂ ತನ್ನನ್ನು ಆಶೀರ್ವದಿಸಿ ಕೃತಕೃತ್ಯನನ್ನಾಗಿಸಬೇಕೆಂದು ಬೇಡಿಕೊಂಡ. ಆ ಮುನಿವರ್ಯರೆಲ್ಲರೂ ರಾಜನ ನಿರ್ಧಾರವನ್ನು ಕೇಳಿ ಸಂತಸಗೊಂಡು, "ಮಧುಮಾಸ ಬಂದಿದೆ, ಯಾಗವನ್ನು ಮಾಡಲು ಇದು ಸೂಕ್ತವಾದ ಕಾಲ, ವೇದವಿದಿತವಾಗಿ ಹಾಗೆಂದು ಉಕ್ತವಾಗಿಯೂ ಇದೆ. ಹೀಗಾಗಿ, ಸದಯನೇ ಕೇಳು, ಯಜ್ಞವು ಸಾಂಗವಾಗಿ ನೆರವೇರಲು ಬೇಕಾದ ಸಕಲ ವಸ್ತುಗಳನ್ನೂ ಸಂಗ್ರಹಿಸಿಕೊಂಡು ಆನಂತರ ಸಂತೋಷವಾಗಿ ಯಾಗಶಾಲೆಗೆ ಹೊರಡಬೇಕು" ಎನ್ನಲು ಅವರ ಸಿರಿಪದಗಳಿಗೆ ವಂದಿಸಿದ ರಾಜನು ಆಗಬೇಕಾದ

ಕೆಲಸವನ್ನು ಮಾಡಲು ಸುಮಂತ್ರಾದಿಗಳಿಗೆ ಆದೇಶಿಸಿದ. ಆನಂತರ ಕಿವಿಗಳು ಮಾತ್ರ ಕಪ್ಪಗಿದ್ದು ಉಳಿದ ಶರೀರವೆಲ್ಲ ಬೆಳ್ಳಗಿರುವ ಹಾಗೂ ಮನೋಹರವಾದ ಹಳದಿ ಬಾಲವನ್ನುಳ್ಳ ಕುದುರೆಯನ್ನು ಯಜ್ಞದ ಉದ್ದೇಶಕ್ಕಾಗಿ ತರಿಸಿ, ಅಮಿತ ಬಿರುದಾವಳಿಗಳನ್ನು ಬರೆಯಿಸಿ ಸುವರ್ಣಪೀಠವನ್ನು ಅಲಂಕಾರಗೈದು, ಅದರ ರಕ್ಷಣೆಗೆಂದು ಚತುರಂಗಸೈನ್ಯವನ್ನು ನೇಮಿಸಿದ. ಒಂದು ವರ್ಷಕಾಲ ಮಹಿಯನ್ನೆಲ್ಲ ಸುತ್ತಿ ಎಲ್ಲ ರಾಜರುಗಳನ್ನೂ ಜಯಿಸಿ ವಸಂತಮಾಸದ ಯಜ್ಞಕಾರ್ಯಕ್ಕೆ ಅಪಾರ ಧನರತ್ನರಾಶಿಯನ್ನು ಸಂಗ್ರಹಿಸಿ ವಾಪಸಾಗಬೇಕೆಂದು ಅಪ್ಪಣೆಯಿತ್ತ. ಆನಂತರ ಮುನಿವೃಂದವನ್ನು ವಿಧ್ಯುಕ್ತವಾಗಿ ಪೂಜಿಸಿ ದೇವೇಂದ್ರನ ಗೆಳೆಯನು ಪರಿವಾರಸಮೇತನಾಗಿ ದೀಕ್ಷಿತನೆನಿಸಿದ. ಯಾರ ಮನದಿಷ್ಟವು ಯಾವುದೋ ಅದನ್ನು ಪೂರಣಗೈಯುತ್ತ, ಭೂಸುರರ ಅನುಜ್ಞೆಯಂತೆ ದಶರಥನು ರಾಜಋಷಿ ತೇಜಸ್ಸಿನಿಂದ ಅಗ್ನಿಶುಶ್ರೂಷೆಯನ್ನು ಮಾಡುತ್ತ, **ಶ್ರೀರಾಮಪುರದರಸನ** ಪಾದಪಂಕಜಗಳನ್ನು ಮನೋಹರ ಕುಸುಮಗಳಿಂದ ಅರ್ಚಿಸುತ್ತ ಇಂದ್ರವೈಭವದಿಂದ ಕಂಗೊಳಿಸಿದ.

೮. ದಶರಥನ ಅಶ್ವಮೇಧಯಾಗ ಮತ್ತು ಪುತ್ರಕಾಮೇಷ್ಟಿ

ತುಹಿನಾದ್ರಿಜಾತೆಯೇ ಆಲಿಸು, ಅಧ್ವರವಾಜಿಯು ಚತುಸ್ಸಮುದ್ರಪರ್ಯಂತವೂ ಭರದಿಂದ ಸಂಚರಿಸಿ ಭೂಮಿಯನ್ನೆಲ್ಲ ಸುತ್ತಿ ವರ್ಷವು ಪೂರ್ತಿಯಾಗುವ ಹೊತ್ತಿಗೆ ಅಯೋಧ್ಯೆಗೆ ಮರಳಿತು. ಶತ್ರುಗಳನ್ನು ಗೆದ್ದು ನಾನಾ ಬಗೆಯ ರತ್ನರಾಶಿಯನ್ನೂ ಗಜನಿವಹ ಆಭರಣಗಳು ಹಾಗೂ ಹಣವನ್ನೂ ಸಂಗ್ರಹಿಸಿಕೊಂಡು ಸುಮಂತನು ಬಂದು ರಾಜನಿಗೆ ಕಾಣಿಕೆಯಿತ್ತು ಕೈಮುಗಿದ. ಅವನ ಜೊತೆಗೆ ಸಾಮಂತರಾಜರುಗಳು ಬಂದರು. ಅವರನ್ನೆಲ್ಲ ನೋಡಿದ ದಶರಥ ಮಹಾರಾಜನು ಹರುಷವನ್ನು ತಾಳಿ ವಸಿಷ್ಠರಿಗೆ ಹೀಗೆಂದು ಬಿನ್ನವಿಸಿಕೊಂಡ: "ಮಹಾಯಜ್ಞಕ್ಕೆ ಆವಶ್ಯಕವಾದ ವಸ್ತುಗಳೆಲ್ಲ ಸಂಗ್ರಹವಾಗಿದೆ. ಹಾಗಾಗಿ ತಡಮಾಡುವುದು ಬೇಡ, ಯಾಗವನ್ನು ಮಾಡಿ ನನ್ನನ್ನು ಕೃತಕೃತ್ಯನನ್ನಾಗಿಸಬೇಕು." ಅರಸನ ಮಾತುಗಳನ್ನು ಕೇಳಿ ವಸಿಷ್ಠರು ಋಷ್ಯಶೃಂಗನಿಗೆ ಬ್ರಹ್ಮತ್ವವನ್ನೂ, ವಾಮದೇವ ಮತ್ತು ಕಾಶ್ಯಪರಿಗೆ ಹೋತೃತ್ವವನ್ನೂ, ಜಾಬಾಲಿಮಹರ್ಷಿಗೆ ಅಗ್ನೀಧ್ರವವನ್ನೂ, ಉದ್ಗಾತೃ ಅಚ್ಛಾವಾಕ ಪ್ರತಿಸ್ತೋತ್ರ ಮುಂತಾದ ಸ್ಥಾನಗಳಿಗೆ ವಿಪ್ರರನ್ನು ನಿಯೋಜಿಸಿದರು. ಆನಂತರ ಅತಿಶಯವಾದ ಯಜ್ಞಕಾರ್ಯಕ್ಕೆ ಮುನಿಶ್ರೇಷ್ಠನು ರಾಜನೊಡನೆ ಕೂರ್ಚ ಕೃಷ್ಣಾಜಿನ ಶಮ್ಯವನ್ನೂ, ಕೆಲವು ಕಪಾಲಗಳು ಒನಕೆ ಉಪಭೃತ್ತು ಸ್ರುವ ಜುಹುಧ್ರುವ ಮುಂತಾದ ಹೋಮಪಾತ್ರೆಗಳನ್ನೂ, ವೇದಾಗ್ರಗಳನ್ನೂ, ವೇದಪೂಜೆಯ ಪಾತ್ರೆಗಳನ್ನೂ, ಪಥಿತಪಾತ್ರೆ, ಇಡಾಪಾತ್ರೆ, ಮುಂತಾದ ಹೋಮವಸ್ತುಗಳನ್ನು ತರಿಸಿದರು.

ಆನಂತರ ಮುನಿವರ್ಯನು ಋತ್ವಿಜರನ್ನು ಅವರವರ ಸ್ಥಾನಗಳಲ್ಲಿ ಕುಳ್ಳಿರಿಸಿ ರಾಜನಿಗೆ, "ಈ ಯಜ್ಞವನ್ನು ಯಥಾವಿಧಿಯಾಗಿ ನೆರವೇರಿಸಿದರೆ ಅತುಲವಾದ ಕೀರ್ತಿ ಬರುವುದರ ಜೊತೆಗೆ ಸರ್ವದೇವಾತ್ಮನು ಕರುಣೆಯಿಂದ ನಿನ್ನ ಅಭೀಷ್ಟಗಳನ್ನು ನೆರವೇರಿಸುತ್ತಾನೆ" ಎಂದು ಹಿತವಚನವನ್ನು ನುಡಿದು ಶಾಸ್ತ್ರೋಕ್ತವಾಗಿ ಯಜ್ಞಕಾರ್ಯವನ್ನು

ನಿರ್ವಹಿಸಲು ಸೂಚಿಸಿದರು. ಅದಕ್ಕನುಗುಣವಾಗಿ ಮಾಡಬೇಕಾದುದೆಲ್ಲವನ್ನೂ ಯಥಾಕ್ರಮದಿಂದ ನ್ಯೂನತೆಯಿಲ್ಲದ ಹಾಗೆ ಮಾಡಿ ಮುಗಿಸಲು, ಸೇರಿದ್ದ ಭೂಸುರರು ಕಾಲವಿಧಿಯಂತೆ ಪ್ರಾತಃಸವನ ಮಾಧ್ಯಂದಿನಸವನ ಮತ್ತು ತೃತೀಯಸವನಗಳನ್ನು ಮಾಡಿದರು. ಪರಮಋಷಿವರರೆಲ್ಲರೂ ಬೇಕಾದ ಪರಿಕರವನ್ನು ಸಂಗ್ರಹಿಸಿ ಮಂತ್ರ ತಂತ್ರ ಕ್ರಿಯಾಲೋಪಗಳಾಗದಂತೆ ರಾಜನಿಗೆ ಕ್ಷೇಮಂಕರವಾದ ಯಾಗವನ್ನು ಮಾಡಿ ಮುಗಿಸಿದರು. ಆ ಯಾಗಕಾಲದಲ್ಲಿ ಹಸಿದವರು ಯಾರೂ ಇರಲಿಲ್ಲ, ಬೇಡುವ ವಿಪ್ರರಿರಲಿಲ್ಲ ಎಂಬಂತೆ ಎಲ್ಲರೂ ಸಂತುಷ್ಟಿ ಹೊಂದಿದರು. ಯಾಗಸಮಯದಲ್ಲಿ ಎಲ್ಲಿ ನೋಡಿದರೂ ಮೃಷ್ಟಾನ್ನವನ್ನು ನೀಡುವ, ಬಟ್ಟೆಬರೆಗಳನ್ನು ಕೊಡುವ, ಆಭರಣಗಳನ್ನು ದಾನಮಾಡುವ, ಗಂಧಮಾಲ್ಯಗಳನ್ನು ನೀಡುವ ದೃಶ್ಯಗಳೇ! ಎಲ್ಲಿ ನೋಡಿದರೂ ಕೊಡುವವರೇ ಹೊರತು ಕೇಳುವವರೇ ಇಲ್ಲ ಎಂಬಂತಿತ್ತು. ಯತಿಗಳು, ಯಾಜ್ಞಿಕರು, ವಾಜಪೇಯರು, ಬಾಲಕರು, ಯುವಕರು, ವೃದ್ಧರು, ಮುತ್ತೈದೆಯರು, ರೋಗಿಗಳು, ಭೋಗಿಗಳು, ಅನಾಥರು ಮುಂತಾದವರೆಲ್ಲರನ್ನೂ ಅವರವರ ಮನಸ್ಸಿನ ಇಚ್ಛೆಗನುಗುಣವಾಗಿ ಬೇಕಾದ ವಸ್ತುಗಳನ್ನಿತ್ತು ಯೋಗಕ್ಷೇಮ ವಿಚಾರಿಸುತ್ತ ಸುಪ್ರೀತಗೊಳಸಲಾಯಿತು.

ಬೇರೆ ರಾಷ್ಟ್ರಗಳಿಂದ ಬಂದಿದ್ದ ದೊರೆಗಳ ಮನೋಭಾವವನ್ನರಿತು ಯಾವುದೇ ಅರೆಕೊರೆಯುಂಟಾಗದಂತೆ ಉಪಚರಿಸಲಾಯಿತು. ಹೊಗಳುಭಟರು ಕವೀಂದ್ರರು ಪಾಠಕರು ಮುಂತಾದವರಿಗೆ ಕೇಳಿದುದನ್ನು ಸಂತಸದಿಂದ ನೀಡಿ ತೃಪ್ತಿಪಡಿಸಲಾಯಿತು. ಎಲ್ಲರನ್ನೂ ಕರೆದು ಅನ್ನಪಾನ ವಸ್ತ್ರ ಉಡುಗೊರೆ ತಾಂಬೂಲಗಳನ್ನು ಸತ್ಕಾರಸಹಿತವಾಗಿ ಇತ್ತುದಲ್ಲದೆ, ಕುದುರೆ ಆನೆ ಮುಂತಾದ ಪ್ರಾಣಿಗಳಿಗೂ ತೃಪ್ತಿಕರವಾಗುವಂತೆ ನೀಡಲಾಯಿತು. ಮಾಗಿಯ ಕಾಲದ ಆಗಸದಂತೆ ಅನ್ನದ ರಾಶಿಗಳು, ಮಂದರಗಳಂತೆ ಕಾಣುವ ದೊಡ್ಡ ದೊಡ್ಡ ಧನರಾಸಿಗಳು, ಮೇರುಗಳೆನ್ನಿಸುವ ಆನೆಕುದುರೆಗೋವುಗಳ ಸಮೂಹಗಳು ಸಮುದ್ರದೋಪಾದಿಯಲ್ಲಿ ನೆರೆದಿದ್ದವು. ಈ ಬಗೆಯಲ್ಲಿ ಯಜ್ಞವನ್ನು ನೆರವೇರಿಸಿದ ದಶರಥನು ಸಗರ ರಘುರಾಯನಿಗಿಂತಲೂ ಮಿಗಿಲು ಎನ್ನಿಸುವಂತೆ ರಾಜಿಸಿದ. ರುಚಿಕಟ್ಟಾದ ಊಟದಿಂದ ಸಂತುಷ್ಟರಾದ ಬ್ರಾಹ್ಮಣರು ರಾಜನನ್ನು ಎಣೆಯಿಲ್ಲದವನೆಂದೂ ಜಗತ್ತಿನ ಕ್ಷತ್ರಿಯರಲ್ಲೆಲ್ಲ ಇಂದ್ರನಂತೆ ಕಂಗೊಳಿಸುವವನೆಂದೂ ಹೊಗಳಿದರು. ಎಲ್ಲರ ಬಡತನವೂ ನಿವಾರಣೆಯಾಗಿ ಸೌಖ್ಯವುಂಟಾಯಿತು; ಹಿಂದೆಯೂ ಅನೇಕ ರಾಜರುಗಳು ಅಶ್ವಮೇಧವನ್ನು ಮಾಡಿದವರಾದರೂ ಈ ಯಾಗಕ್ಕೆ ಸಾಟಿಯಾದುದನ್ನು ಕಾಣೆವು ಎಂದು ಮನದುಂಬಿ ವಿಪ್ರರೆಲ್ಲರೂ ಕೊಂಡಾಡಿದರು.

ಯಾಗಕ್ಕೆ ಸೇರಿದ ಭೂಸುರರೆಲ್ಲರೂ ಆರು ಶಾಸ್ತ್ರಗಳಲ್ಲಿಯೂ ಪಾರಂಗತರು, ಪುರಾಣವೇತ್ತರು, ವೇದವೇದಾಂತಗಳಲ್ಲಿ ಪರಿಣತರು, ಸಲ್ಲಲಿತ ವಾಗ್ಮಿಗಳು, ಸತ್ಕಲಾಕೌಶಲರು, ಶಾಂತಿಯುತರು, ಸರ್ವಜ್ಞರು ಎನ್ನಿಸುವವರೇ ಹೊರತು ಅಲ್ಪಜ್ಞರೆನ್ನಿಸುವವರಿರಲಿಲ್ಲ, ಕಿಂಚಿಜ್ಞರಾಗಲೀ ಜಡರಾಗಲೀ ಅಲ್ಪಮತಿಗಳಾಗಲೀ ಆ ಸಭೆಯಲ್ಲಿರಲಿಲ್ಲ. ಪುಸ್ತಕಗಳನ್ನು ಕೊಡಹಿ, ಚಪ್ಪಾಳೆಯಿಕ್ಕಿ, ಹೆಬ್ಬೆರಳನ್ನು ಕಿರುಬೆರಳು ನಡುಬೆರಳು ತರ್ಜನಿಗಳ ಮೇಲೆ ಹೊಡೆದು 'ಏಕಮೇವಮೇವಾಸ್ತೆ' ಎನ್ನುತ್ತ ಒಬ್ಬರೊಬ್ಬರು

ಕಟುಮಾತಿನಿಂದ ಎದುರಾಳಿಗಳನ್ನು ಟೀಕಿಸುತ್ತ ಗೆಲ್ಲುವ ಉತ್ಸಾಹದಿಂದ ವಾದಗಳನ್ನು ಮಾಡುವ ತಾರ್ಕಿಕಶಿಖಾಮಣಿಗಳು ಅಲ್ಲಿ ನೆರೆದಿದ್ದರು. ಹೀಗೆ ಅಶ್ವಮೇಧ ಅಧ್ವರವು ವಿರಾಜಿಸಲು, ವಿದ್ವನ್ಮಣಿಗಳಾದ ಭೂಸುರಸಮೂಹವು ಒಡವೆ ವಸ್ತ್ರ ರತ್ನಗಳ ಕೊಡುಗೆಯಿಂದ ಸಂಪೂರ್ಣ ತೃಪ್ತರಾಗಿ, "ರಾಜನ್ಯವರನೇ, ಈ ಮೂರು ಲೋಕಗಳಲ್ಲಿಯೂ ನೀನೇ ಧನ್ಯ, ಮಾನ್ಯ, ಸೂರ್ಯನಂತೆಯೇ ನಿಷ್ಕಲ್ಮಷನಾದೆ" ಎಂದು ಹರ್ಷದಿಂದ ರಾಜನನ್ನು ಮಂತ್ರಾಕ್ಷತೆಯಿತ್ತು ಸನ್ನುತಿಗೈದಿತು.

ಅಲ್ಲಿ ಸೇರಿದ್ದ ವಿಪ್ರಸಂಕುಲದ ನಡುವೆ ಋಷ್ಯಶೃಂಗನು ಶೋಭಿಸುತ್ತಿರಲು ರಾಜನು ಆತನನ್ನು ಕುರಿತು, "ಎಲೈ ತಪೋಧನನೇ, ನಿನ್ನ ಚರಣಸೇವೆಗಾಗಿ ನನಗೆ ಕುಮಾರರು ಜನಿಸುವಂತೆ ದಯೆಗೈಯಬೇಕು" ಎಂದು ನಮಸ್ಕರಿಸಿದ. ಅದಕ್ಕೆ ಮುನಿವರನು, "ಎಲೈ ರಾಜನೇ, ಪರಮಪುರುಷರೂ ಲೋಕಪಾಲಸಮವಿಕ್ರಮರೂ, ಭೂಮಿಯಲ್ಲಿನ ಗೋಬ್ರಾಹ್ಮಣರನ್ನು ಪೊರೆಯುವವರೂ ಆದ ನಾಲ್ವರು ಪುತ್ರರು ನಿನಗೆ ಜನಿಸುತ್ತಾರೆ" ಎಂದು ಅಭಯವಿತ್ತ. ಹೀಗೆ ಹೇಳಿದ ವೈಭಾಂಡಕನು ವಸಿಷ್ಠಾದಿಗಳ ಸನ್ನಿಧಿಯಲ್ಲಿ ಈ ರೀತಿ ನುಡಿದ: "ದಶರಥ ಮಹಾರಾಜನಿಗೆ ಪುತ್ರರತ್ನರು ಜನಿಸಲೋಸುಗ ನಾನು ಸೂಕ್ತ ಮಂತ್ರಗಳಿಗನುಗುಣವಾಗಿ ಪುತ್ರಕಾಮೇಷ್ಟಿಯಜ್ಞವನ್ನು ನೆರವೇರಿಸುತ್ತೇನೆ, ದಯವಿಟ್ಟು ಅದಕ್ಕೆ ಅನುಮತಿಯನ್ನು ನೀಡಬೇಕು" ಎಂದಾಗ ವಿಪ್ರವರ್ಯರೆಲ್ಲರೂ ಅದಕ್ಕೆ ತಮ್ಮ ಒಕ್ಕೊರಲ ಸಮ್ಮತಿಯಿತ್ತರು. ವಿಪ್ರವರ್ಯರ ಅನುಮತಿಯನ್ನು ಪಡೆದ ಋಷ್ಯಶೃಂಗನು ಸೂರ್ಯವಂಶೋದ್ಧಾರಕ್ಕಾಗಿ ಪುತ್ರಕಾಮೇಷ್ಟಿಯನ್ನು ನೆರವೇರಿಸಲು, ಹವಿಸ್ಸನ್ನು ಸ್ವೀಕರಿಸಲು ಸುರರೆಲ್ಲರೂ ಸಂತೋಷದಿಂದ ದೇವೇಂದ್ರನ ನೇತೃತ್ವದಲ್ಲಿ ಬಂದರು. ಯಜ್ಞಶಾಲೆಯಲ್ಲಿ ಆಸೀನನಾಗಿದ್ದ ಬ್ರಹ್ಮದೇವನನ್ನು ಕಂಡು ಇಂದ್ರನೇ ಮುಂತಾದವರು ವಂದನೆಗೈದು ಸ್ತುತಿಸಿ, "ದೇವದೇವನೇ, ದುರುಳನಾದ ದಶಶಿರನು ನಿನ್ನನ್ನು ಸ್ತುತಿಸಿ ನಾನಾ ಬಗೆಯ ತಪಸ್ಸನ್ನು ಮಾಡಲು ನೀನು ಅವನಿಗೆ ಕರುಣೆಯಿಂದ 'ರಾಕ್ಷಸರು ದೇವತೆಗಳು ಯಕ್ಷರು ಹಾಗೂ ನಾಗರುಗಳಿಂದ ನಿನಗೆ ಮರಣವು ಬಾರದಿರಲಿ' ಎಂದು ವರವನ್ನಿತ್ತಿರುವೆ. ತನಗೆ ಮರಣವೇ ಬಾರದೆಂಬ ರೀತಿಯಲ್ಲಿ ಅವನು ಪಿತೃದೇವತೆಗಳನ್ನೂ ಗೋಬ್ರಾಹ್ಮಣರನ್ನೂ ನಾನಾವಿಧವಾಗಿ ಹಿಂಸಿಸಿ ವಿಪ್ರಕಾರ್ಯಗಳಗೆ ವಿಘ್ನವನ್ನೊಡ್ಡುತ್ತಿದ್ದಾನೆ. ಆದರೂ ಯಾರೂ ಅವನ ಮುಂದೆ ಸುಳಿಯಲೂ ಹೆದರುತ್ತಾರೆ. ಅವನ ಉಪಟಳವನ್ನು ನಿವಾರಿಸಲು ನೀನಲ್ಲದೆ ಬೇರಾರು ಸಮರ್ಥರಿದ್ದಾರೆ, ನಮ್ಮನ್ನು ಕಾಪಾಡು" ಎಂದು ಬಿನ್ನವಿಸಿಕೊಂಡರು. ಆಗ ಬ್ರಹ್ಮದೇವನು, "ದೇವೇಂದ್ರನೇ, ಈ ಕಷ್ಟವನ್ನು ನಿವಾರಿಸಲು ಒಂದು ಉಪಾಯವಿದೆ. ನೀವು ಹೇಳಿದವರಿಂದ ಅವನಿಗೆ ಸಾವು ಘಟಿಸದಾದರೂ ನರವಾನರರಿಂದ ಮರಣ ಬಾರದೆಂದೇನೂ ಇಲ್ಲ. ಹಾಗಾಗಿ ಶ್ರೀಮನ್ನಾರಾಯಣನ ಕೃಪೆಯಿಂದ ನಿಮ್ಮ ಚಿಂತೆಯನ್ನು ಪರಿಹರಿಸಲು ಸಾಧ್ಯ" ಎಂದು ಆಶ್ವಾಸನೆಯಿತ್ತ.

ಆಗ ಚತುರಾನನನೂ ಸೇರಿದಂತೆ ಎಲ್ಲರೂ ಪ್ರಾರ್ಥಿಸಲು ಗಗನದಲ್ಲಿ ಕೋಟಿಸೂರ್ಯರು ಉದಯಿಸಿದಂತೆ ದೇದೀಪ್ಯಮಾನವಾಗಿ ಶ್ರೀರಮಣನು ಚತುರ್ಭುಜ. ಕೌಸ್ತುಭರತ್ನ ಕಸ್ತೂರಿತಿಲಕಗಳಿಂದ ಕೂಡಿ ಪ್ರತ್ಯಕ್ಷನಾದ. ಆಗ ಸುರರೂ ಭೂಸುರರೂ ಕೂಡಿ.

"ರಕ್ಕಸನು ಮನುಷ್ಯರಿಂದ ತನಗೆ ಮರಣವು ಬರಬಹುದೆಂದು ಯೋಚಿಸಲೇ ಇಲ್ಲದ ಕಾರಣದಿಂದ, ನೀನು ದಶರಥನ ಮಗನಾಗಿ ಅವತರಿಸಿ ರಾವಣನನ್ನು ಕೊಂದು ನಮ್ಮನ್ನು ರಕ್ಷಿಸಬೇಕು" ಎಂದು ಬೇಡಿಕೊಂಡರು. ಅವರ ಬಿನ್ನಹವನ್ನು ಕೇಳಿದ ಶೇಷಶಯನನು ಮೃದುಮಧುರ ವಾಕ್ಕುಗಳಿಂದ ಅವರಿಗೆ ಅಭಯವನ್ನಿತ್ತು, "ನೀವು ಪ್ರಾರ್ಥಿಸಿದಂತೆ ದಶರಥನ ಮಗನಾಗಿ ಜನಿಸಿ ದಶಕಂಧರನನ್ನು ಸಂಹರಿಸುತ್ತೇನೆ, ಗೋಬ್ರಾಹ್ಮಣರನ್ನು ರಕ್ಷಿಸುತ್ತೇನೆ, ಹತ್ತು ಸಾವಿರ ವರುಷಗಳ ಕಾಲ ಧರೆಯನ್ನು ಪಾಲಿಸುತ್ತೇನೆ" ಎಂದು ಅಭಯವನ್ನು ನೀಡಿ ಅಂತರ್ಧಾನನಾದ. ಲಕ್ಷ್ಮೀಪತಿಯ ಮಾತಿನಿಂದ ಆನಂದಭರಿತರಾದ ದೇವತೆಗಳೆಲ್ಲರೂ ತಮ್ಮ ಆಲಯಗಳಿಗೆ ವಾಪಸಾದರು.

ಅಷ್ಟರಲ್ಲಿ ಋಷ್ಯಶೃಂಗನು ರಾಜನಿಗೆ ಪುತ್ರಲಾಭವಾಗುವಂತೆ ಯಥೋಚಿತವಾಗಿ ಪುತ್ರಕಾಮೇಷ್ಟಿಯನ್ನು ನೆರವೇರಿಸಲು, ಕೆಂಪು ಮುಖ, ಕೆಂಪು ಉಡುಗೆ, ದುಂದುಭಿಸ್ವನ, ದಟ್ಟವಾದ ಮೀಸೆಗಳನ್ನುಳ್ಳ, ಸೂರ್ಯೋಪಮ ತೇಜಸ್ಸಿನಿಂದ ಕೂಡಿದ ಶುಭಲಕ್ಷಣಸಂಪನ್ನನೂ ದಿವ್ಯಾಭರಣಭೂಷಿತನೂ ಆದ ಪುರುಷನೊಬ್ಬನು ಅಗ್ನಿಕುಂಡದಿಂದ ಉದ್ಭವಿಸಿ, ತನ್ನ ಕೈಯಾರೆ ಪರಮಾನ್ನಭರಿತವಾದ ಚಿನ್ನದ ಪಾತ್ರೆಯೊಂದನ್ನು ಹಿಡಿದು ದಶರಥ ಮಹೀಪಾಲನಿಗೆ ಹೀಗೆ ನುಡಿದ: "ನಾನು ಪ್ರಾಜಾಪತ್ಯನಾದ ಸೂರ್ಯವಂಶಸಂತಾನತಿಲಕ, ನಿನಗಾಗಿ ಇಳೆಗೆ ಇಳಿದಿದ್ದೇನೆ" ಎಂದು ನುಡಿಯಲು ದಶರಥನು ಆನಂದಾಶ್ರುಗಳನ್ನು ಸುರಿಸುತ್ತ, "ನಾನು ಮಾಡಬೇಕಾದ ಕರ್ತವ್ಯವೇನೆಂದು ದಯೆಯಿಟ್ಟು ಹೇಳುವ ಕೃಪೆ ಮಾಡಬೇಕು" ಎಂದು ಕೇಳಿಕೊಂಡ. ಆಗ ಪ್ರಾಜಾಪತ್ಯನು, "ನೃಪಕುಲಲಾಮನೇ, ನೀನು ಮಾಡಿದ ಅಧ್ವರದಿಂದ ದೇವಾನುದೇವತೆಗಳೆಲ್ಲ ಸಂತಸಗೊಂಡು ಈ ದಿವ್ಯಪಾಯಸವನ್ನು ಮಾಡಿದ್ದಾರೆ. ಅಮೃತಸಮಾನವಾದ ಈ ಪರಮಾನ್ನವು ಆರೋಗ್ಯಕರವಾದುದು, ಇದನ್ನು ನಿನ್ನ ರಾಣಿಯರಿಗೆ ನೀಡಿದರೆ ಅದನ್ನು ಸೇವಿಸಿದ ಅವರು ಗರ್ಭಧಾರಣೆ ಮಾಡುತ್ತಾರೆ" ಎಂದು ಅಮೃತಸಮ ವಾಕ್ಕುಗಳಿಂದ ನುಡಿಯಲು ಸಂತೋಷಯುಕ್ತನಾದ ರಾಜನು ಅವನಿಗೆ ಭಕ್ತಿಯಿಂದ ನಮಸ್ಕರಿಸಿ ಅವನಿಂದ ಪಾಯಸಪಾತ್ರೆಯನ್ನು ತೆಗೆದುಕೊಂಡು ನಿಧಿಯ ಕಂಡ ಬಡವನಂತೆ ಹಿಗ್ಗುತ್ತಿರಲು, ಬಿಡುಗಣ್ಣರೆಲ್ಲರೂ ಬೆರಗಾಗಿ ನೋಡುತ್ತಿರಲು, ಪ್ರಾಜಾಪತ್ಯಪುರುಷನು ಅಂತರ್ಧಾನನಾದ. ನೆರೆದಿದ್ದ ಭೂಸುರರೆಲ್ಲ ಜಯಕಾರ ಮಾಡಿದರು.

ಬಳಿಕ ದಶರಥ ಮಹಾರಾಜನು ತನ್ನ ಅಂತಃಪುರಕ್ಕೆ ಬಂದು ಹಿರಿಯ ಮಹಾರಾಣಿ ಕೌಸಲ್ಯೆಗೆ ಈ ವೃತ್ತಾಂತವನ್ನು ತಿಳಿಸಿ ಪಾತ್ರೆಯಲ್ಲಿದ್ದ ಪಾಯಸದ ಅರ್ಧ ಭಾಗವನ್ನು ಆಕೆಗೆ ಇತ್ತ. ಉಳಿದ ಅರ್ಧವನ್ನು ಕೊನೆಯ ಹೆಂಡತಿ ಕೈಕೇಯಿಗಿತ್ತ. ಆನಂತರ ಅವನಿಗೆ ಸುಮಿತ್ರೆಯ ನೆನಪು ಬಂದು ಚಿಂತೆಗೊಳಗಾದ. ಅವನ ಪರಿಯನ್ನು ಕಂಡ ಆ ಈರ್ವರೂ ರಾಣಿಯರು ತಮ್ಮ ಭಾಗದ ಅರ್ಧರ್ಧ ಭಾಗದ ಪಾಯಸವನ್ನು ಮಗಧಸುತೆಗೆ ನೀಡಿದರು. ಮೂವರೂ ಮಹಾರಾಣಿಯರು ಅಮೃತವನ್ನು ಕುಡಿದ ತಾರಾದೇವಿ ಶಚಿ ಸರಸ್ವತಿಯರಂತೆ ಆ ದೇವನಿರ್ಮಿತ ಪಾಯಸವನ್ನು ಮುದದಿಂದ ಪ್ರಾಶನಮಾಡಿದರು. ತಾವರೆಗಣ್ಣನು ದಶರಥನಿಗೆ ಮಗನಾಗುತ್ತಾನೆಂದು ತಿಳಿದು ಬ್ರಹ್ಮದೇವನು ಮನೋಹರವಾದ ನುಡಿಗಳಿಂದ, "ಕಾಯುವ ತಂದೆಯಾದ ವಿಷ್ಣುವು ಭೂಮಿಯಲ್ಲಿ ಅವತರಿಸುತ್ತಾನೆ, ನೀವೆಲ್ಲರೂ

ಅಚ್ಯುತನ ಸಹಾಯಕ್ಕಾಗಿ ನಾನಾ ಪ್ರಾಣಿಗಳಾಗಿ ಜನಿಸಿರಿ" ಎಂದು ಆಣತಿಯಿತ್ತ. ಅದರಂತೆ ಹರಿಗೆ ಬೆಂಬಲವಾಗಿ ಇಂದ್ರನಿಂದ ವಾಲಿಯೂ, ಸೂರ್ಯನಿಂದ ಸುಗ್ರೀವನೂ, ಬೃಹಸ್ಪತಿಯಿಂದ ತಾರೆಯೂ, ಕುಬೇರನಿಂದ ಗಂಧಮಾದನನೂ, ವಿಶ್ವಕರ್ಮನಿಂದ ನಳ, ಅಗ್ನಿಯಿಂದ ನೀಲ, ವರುಣನಿಂದ ಸುಷೇಣ, ಅಶ್ವಿನಿದೇವತೆಗಳಿಂದ ಮೈಂದ ಮತ್ತು ದ್ವಿವಿದರೂ, ಮನೋಜವನಾದ ಹನುಮಂತನು ಮರುತನಿಂದಲೂ ಜನಿಸಿದರು. ಸುರರೆಲ್ಲರೂ ಕಪಿರೂಪ ಧರಿಸಿ ಭೂಮಿಯಲ್ಲಿ ಉದಿಸಿದರು. ಎಲ್ಲರೂ ಕಾಮರೂಪಿಗಳೂ ಸ್ವೇಚ್ಛಾಗಮನರೂ ಸಿಂಹಶಾರ್ದೂಲವಿಕ್ರಮರೂ ಸರ್ವಶಾಸ್ತ್ರಾರ್ಥಕೋವಿದರೂ ಧೈರ್ಯಗಾಂಭೀರ್ಯ ಸ್ಥೈರ್ಯವೇ ಮುಂತಾದ ಗುಣವುಳ್ಳವರೂ ಆದವರು.

ಈ ರೀತಿ ಯಶಸ್ವಿಯಾಗಿ ಯಾಗವು ಮುಗಿಯಲು ತಮ್ಮ ತಮ್ಮ ಹವಿಸ್ಸನ್ನು ಪಡೆದು ದೇವತೆಗಳು ದೇವಲೋಕಕ್ಕೆ ಹೋದರು. ಇತ್ತ ದಶರಥನು ವಿದ್ವನ್ಮಣಿಗಳಿಗೆ ಭೂಷಣಾಂಬರಗಳನ್ನಿತ್ತು ಸನ್ಮಾನಿಸಲು ಅವರೆಲ್ಲರೂ, 'ಸಮೃದ್ಧಿಯಿಂದ ಸಾಗರಾಂತವಾದ ಭೂಮಿಯನ್ನು ಪಾಲಿಸು' ಎಂದು ಆಶೀರ್ವದಿಸಿ ಹೋದರು. ರಾಜನು ತನ್ನ ಹೆಂಡತಿಯರೊಡನೆ ರಥವನ್ನೇರಿ ಚತುರಂಗಬಲಸಮೇತನಾಗಿ, ಪಾಠಕರು ಮಂಗಳಗೀತೆಗಳನ್ನು ಹಾಡುತ್ತಿರಲು, ವಾರನಾರಿಯರು ನರ್ತಿಸುತ್ತಿರಲು, ನಟರು ಗಾಯಕರು ಕವಿಗಳು ಸ್ತುತಿಸುತ್ತಿರಲು, ವಂದಿಮಾಗಧರು ರಾಜನ ನಾನಾ ಬಿರುದುಗಳನ್ನು ಉಗ್ಗಡಿಸುತ್ತಿರಲು, ನಗರಕ್ಕೆ ವಾಪಸಾದ. ರಾಜರುಗಳ ಸನ್ಮಾನದಿಂದಾಗಿ ರಾಜಶೇಖರನಂತೆಯೂ, ವಿದ್ಯಾಧರರ ಹೊಗಳಿಕೆಯಿಂದ ರಾಜರಾಜನಂತೆಯೂ, ಗಂಧರ್ವರಿಂದ ಸುತ್ತುವರಿದ ಇಂದ್ರನಂತೆಯೂ ವೈಭವದಿಂದ ಕೂಡಿ ಬಂದು ಪರಿವಾರದವರನ್ನೆಲ್ಲ ಮನ್ನಿಸಿ, ನೃಪಸಮೂಹವು ಓಲೈಸುತ್ತಿರಲು ಅರಮನೆಗೆ ಮರಳಿ, ಮಜ್ಜನ ಭೋಜನಾದಿಗಳನ್ನು ಪೂರೈಸಿ **ಶ್ರೀರಾಮಪುರದ ಹರಿಯ** ಅಂಘ್ರಿಯನ್ನು ನೆನೆಯುತ್ತ ದಶರಥನು ದೇವೇಂದ್ರನಂತೆ ಸುಖದಿಂದಿದ್ದ.

೯. ಶ್ರೀರಾಮಲಕ್ಷ್ಮಣಾದಿಗಳ ಜನನ

ಮಡದಿಯರ ಮಾಣಿಕ್ಯವೇ, ನನ್ನ ಮನದನ್ನೆಯೇ, ಮುಂದಿನ ಕತೆಯನ್ನು ಕೇಳು: ದಶರಥನು ಪುತ್ರಕಾಮೇಷ್ಟಿಯನ್ನು ಮಾಡಿ ತನ್ನ ಮಡದಿಯರೊಡನೆ ಸುಖದಿಂದಿರುತ್ತ, ಕಾಲಕ್ರಮೇಣ ಕೌಸಲ್ಯೆಯ ಮುಖಪಂಕಜವು ಶರತ್ಕಾಲದ ಚಂದ್ರಕಳೆಯಂತೆ ಕಾಂತಿಯುಕ್ತವಾಯಿತು; ರಾವಣ ಕುಂಭಕರ್ಣ ಹೆಸರಿನ ಹಾವುಗಳಲ್ಲಿ ಉತ್ಪನ್ನವಾಗುವ ವಿಷವು ಮೂಜಗಗಳನ್ನೂ ಬಾಧೆಗೊಳಿಸುವಂತಾದಾಗ ಜೀವನೌಷಧಿಯನ್ನು ಹೊತ್ತ ಪರಮಪುರುಷನನ್ನು ತನ್ನಲ್ಲಿ ಇಂಬಿಟ್ಟುಕೊಳ್ಳುವ ನೆಪದಿಂದ ಅವಳ ಬಡನಡುವು ಬರಬರುತ್ತ ಹಿರಿದಾಗುತ್ತ ಸಾಗಿತು. ಪದ್ಮಾಕ್ಷನು ಆ ಮಾನಿನಿಯಲ್ಲಿ ನೆಲೆಸಲು ಹೃದಯಸ್ಥವಾದ ಕತ್ತಲೆಯಿಂದ ಸುರರಿಪುಗಳು ಕಂಗೆಟ್ಟು ಕಪ್ಪಾದಂತೆ ಅವಳ ಮೊಲೆತೊಟ್ಟುಗಳು ನೀಲಿಮವಾದವು. ದೇವತೆಗಳು ನಲಿಯುವಂತೆ ಅವಳ

ಕಂಗಳು ವಿಕಾಸಗೊಂಡವು. ಮೂರುಲೋಕಗಳನ್ನು ತನ್ನ ಹೊಟ್ಟೆಯಲ್ಲಿರಿಸಿಕೊಂಡ ಶ್ರೀ ವಿಷ್ಣುವನ್ನು ತನ್ನಲ್ಲಿ ಬಯ್ತಿಟ್ಟಕೊಡ ಕಾರಣದಿಂದ ಹಿರಿದಾಗುತ್ತ ಬರಲು ತ್ರಿಮೂರ್ತಿಗಳು ಐಕ್ಯಗೊಂಡುವೋ ಎಂಬಂತೆ ಅವಳ ತ್ರಿವಳಿಗಳು ಗರ್ಭದಲ್ಲಿಯೇ ಅಡಗಿಹೋದುವು, ತನ್ನಲ್ಲಿರುವ ಪರಬ್ರಹ್ಮನನ್ನು ಜಗತ್ತಿಗೆ ತೋರಿಸುವ ರೀತಿಯಲ್ಲಿ ಅವಳ ಹೊಕ್ಕುಳು ಆಳವಾಯಿತು. ಕಮಲದ ಮೊಗ್ಗಿನಂತಹ ಅವಳ ಮೊಲೆಗಳ ತುದಿಯು ನೀಲಮಣಿಯಂತೆ ಹೊಳೆಯತೊಡಗಿತು. ಒಡೆಯನನ್ನು ತನ್ನ ಗರ್ಭದಲ್ಲಿ ಹೊತ್ತು ನಡೆಯುವಾಗಿನ ಆಯಾಸದಿಂದ ಅವಳ ಗಲ್ಲಗಳಲ್ಲಿ ಬೆವರ ಹನಿಗಳು ಎಳೆಮುತ್ತುಗಳಂತೆ ಕಾಣಿಸಿತು. ಬಡನಡು ಹೊಟ್ಟೆ ಮೊಲೆಗಳು ಹಿರಿದಾಗುತ್ತಿರಲು, ಮೊಲೆತೊಟ್ಟುಗಳೂ ಕೂದಲೂ ಕಪ್ಪೇರಿದವು, ಬಳಲಿಕೆಯಂತೆಯೇ ಬಯಕೆಗಳೂ ಹೆಚ್ಚಾಗತೊಡಗಿದವು. ದಿನಗಳೆದಂತೆ ಅವಳಲ್ಲಿ ಮಲ್ಲಿಗೆಯ ಜೊಂಪೆ, ಮೊಲ್ಲೆಯ ಮೊಗ್ಗು, ಸಂಪಿಗೆಯ ಎಸಳು, ಹಂಸಗಳ ದನಿ, ಮಾಗಿದ ಹಣ್ಣುಗಳ ಆಕಾಂಕ್ಷೆಯು ಹೆಚ್ಚಾಗುತ್ತಲಿರಲು, ಚಲ್ಲಗಂಗಳ ಅವಳ ಸಖಿಯರು ಅವಳಿಗೆ ಚಂದನದ ಬೊಟ್ಟನ್ನಿಟ್ಟು, ಉಲ್ಲಾಸದಿಂದ ದಿವ್ಯಾಭರಣಗಳನ್ನು ತೊಡಿಸಿ ಹಿಗ್ಗಿನಿಂದ ನಲಿಯುತ್ತಿದ್ದರು. ಆಖ್ಯಾಯನಗಳಲ್ಲಿನ ಗರ್ಭದ ಹೊಗಳಿಕೆಯ ಹಾಗೆ, ಹೋಮದ ಗರ್ಭ ಸ್ವಾಹವು ನಿಜವೆಂಬ ಹಾಗೆ, ಫಣಿಶಾಯಿಯ ಜಾಯೆಯ ಹಾಗೆ, ಅಗ್ನಿಗರ್ಭೆಯಾದ ಧರಣಿಯಂತೆ, ಬಣ್ಣಿಸಲು ಅಸಾಧ್ಯವಾದ ಗರ್ಭಶಕ್ತಿಯ ಕಾರಣದಿಂದ ಉಂಟಾಗುವ ಆನಂದದ ಹಾಗೆ ನಾಡೊಡೆಯನ ಅರಸಿಯಾದ ಕೌಸಲ್ಯೆಯು ರತಿಯೆಂಬಂತೆ ವಿರಾಜಿಸಿದಳು. ನಿತಂಬಗಳು, ಸ್ತನಗಳು, ಕೇಶಪಾಶ, ತೊಡೆಗಳು ಇವುಗಳ ಭಾರದಿಂದಾಗಿಯೂ, ಹದಿನಾಲ್ಕೂ ಲೋಕಗಳ ಅರಸನನ್ನು ತನ್ನ ಗರ್ಭದಲ್ಲಿ ಹೊತ್ತ ಗರ್ಭನಿರ್ಭರದ ಕಾರಣದಿಂದಾಗಿಯೂ ಅವಳ ಗಮನವು ನಿಧಾನವಾಯಿತು. ಹೀಗೆ ಕೌಸಲ್ಯೆಯು ಗರ್ಭಚಿಹ್ನೆಗಳಿಂದ ರಾರಾಜಿಸಿದಳು, ಅಂತೆಯೇ ಕೈಕೇಯಿ ಸುಮಿತ್ರೆಯರೂ ಸಲ್ಲಕ್ಷಣಗಳಿಂದ ಕೂಡಿ ಶೋಭಿಸುತ್ತಿರಲು ದಶರಥನ ಕಣ್ಣುಗಳೆಂಬ ಚಕೋರಿಗಳು ಅವರನ್ನು ನೋಡಿ ಅಮೃತವನ್ನು ಕಂಡ ದೇವತೆಗಳಂತೆಯೂ ನಿಧಿಯು ಕೈಸಾರಿದ ಬಡವನಂತೆಯೂ ಸಂತಸದಿಂದ ಹಿಗ್ಗಿದವು.

ಕೌಸಲ್ಯೆಯು ಗರ್ಭ ಧರಿಸಿ ಆರು ತಿಂಗಳಾಗುವಷ್ಟರಲ್ಲಿ ಸಚಿವರ ಮಡದಿಯರು ಬಂದು ಅವಳಿಗೆ ದಿವ್ಯಾಂಬರಗಳನ್ನುಡಿಸಿ, ಆಭರಣಗಳಿಂದ ಅಲಂಕರಿಸಿ, ತುರುಬಿಗೆ ಕುಸುಮಮಾಲೆಯನ್ನು ಮುಡಿಸಿ, ಹಣೆಗೆ ಚಂದನದ ಬೊಟ್ಟಿಟ್ಟು ಹಾಡುತ್ತ ಆರತಿಯೆತ್ತಿ ನಲಿದರು. ಶರತ್ಕಾಲದ ತಾವರೆಯಂತೆ ಅವಳ ಮೊಲೆಗಳು ಅರಳಿದರೆ, ತಾವರೆಯ ಮಕರಂದಕ್ಕಾಗಿ ಸಂಭ್ರಮದಿಂದ ಸುತ್ತಾಡುವ ದುಂಬಿಗಳಂತೆ ಮೊಲೆತೊಟ್ಟುಗಳು ಶೋಭಿಸಿದವು, ಅವಳ ನಡಿಗೆಯು ಮರಾಳಗಮನದಂತಾಯಿತು, ಮಾತುಗಳು ಸವಿಯೂ ಮೃದುವೂ ಆದವು, ದೇಹದಲ್ಲಿ ಆಲಸ್ಯ ನೆಲೆಗೊಂಡಿತು. ಈ ಬಗೆಯ ಶುಭವಿಭವಗಳಿಂದ ಕೌಸಲ್ಯೆಗೆ ನವಮಾಸ ತುಂಬಿತು. ಪರಮಪುರುಷನು ಜಗತೀತಳದಲ್ಲಿ ಅವತರಿಸಲು ಇಚ್ಛೈಸಿದ. ಹತ್ತನೆಯ ತಿಂಗಳಲ್ಲಿ ಚೈತ್ರಮಾಸದ ಶುಕ್ಲಪಕ್ಷದ ಒಂಬತ್ತನೆಯ ದಿನ ಸೋಮವಾರದಂದು ಸೂರ್ಯ ಮತ್ತು ಅಂಗಾರಕರು ತುಂಗದಲ್ಲಿರಲು, ಶುಕ್ರನು

ಸೇರಿರಲು, ಗುರು ಚಂದ್ರಸೂರ್ಯರು ಮೇಷರಾಶಿಯಲ್ಲಿರಲು, ಪುನರ್ವಸು ನಕ್ಷತ್ರ ಕರ್ಕಾಟಕ ಲಗ್ನದಲ್ಲಿ ಮಧ್ಯಾಹ್ನದ ಅತ್ಯಂತ ಶುಭಮುಹೂರ್ತದಲ್ಲಿ – ದೇವತೆಗಳು ಹೂಮಳೆಯನ್ನು ಸುರಿಸುತ್ತಿರಲು – ದೇವದೇವನು ಜನಿಸಿದ.

ಅಖಂಡ ಆನಂದವೆನಿಸಿದ ತೇಜೋರಾಶಿಯಾದ ದೇವನು ನಾಲ್ಕು ಕೈಗಳಿಂದಲೂ ಕಂಕಣಕಿರೀಟಗಳಿಂದಲೂ ಹಾರ ಕೇಯೂರ ಮುಂತಾದ ಭೂಷಣಗಳಿಂದಲೂ, ಪೀತಾಂಬರಧಾರಿಯಾಗಿಯೂ ಆಗಿ, ನೀಲಕಾಯನೂ ಮುನಿಮಾನಸನಿಕಾಯದ ಇಷ್ಟಗಳನ್ನು ನೆರವೇರಿಸುವವನೂ ಆಗಿ, ಮುಗುಳ್ನಗೆಯಿಂದ ಕೂಡಿ ಕೈಯಲ್ಲಿ ಶಂಖವನ್ನು ಹಿಡಿದು, ಸುರರು ಸುತ್ತಲೂ ನಿಂತು ಹೂಮಳೆಗರೆಯುತ್ತಿರಲು, ದೇವದುಂದುಭಿಗಳು ಮೊಳಗುತ್ತಿರಲು ಗಾಂಧರ್ವರು ಗಾನಮಾಡುತ್ತಿರಲು, ಹರಿ ಶೋಭಿಸಿದ. ಕಣ್ಣುಗಳಲ್ಲಿ ಚಂದ್ರಸೂರ್ಯರನ್ನೂ, ಉಸಿರಿನಲ್ಲಿ ಮರುತನನ್ನೂ, ನಾಭಿಯಲ್ಲಿ ಬ್ರಹ್ಮನನ್ನೂ, ಕಿವಿಗಳಲ್ಲಿ ಮೊರೆಯುವ ವೇದಗಳನ್ನೂ, ರೋಮತತಿಗಳಲ್ಲಿ ಬ್ರಹ್ಮಾಂಡಗಳನ್ನೂ ತಳೆದ ತನ್ನ ಮಗನ ವೈಭವವನ್ನು ನೋಡಿದ ಕೌಸಲ್ಯೆಯು ವಿಸ್ಮಿತಳಾಗಿ, "ದೇವನೇ, ಈ ನಿನ್ನ ಮಹಾರೂಪವನ್ನು ಯಾವ ಲೌಕಿಕನು ತಾನೇ ನೋಡಲಾದೀತು? ದಯವಿಟ್ಟು ನೀನು ಬಾಲಭಾವವನ್ನು ತಾಳಿದರೆ ನಾನು ನಿನ್ನ ಲಾಲನೆಪಾಲನೆಗಳನ್ನು ಮಾಡಿ ಸಂಸಾರಸಾಗರದ ದಡವನ್ನು ಕಾಣುತ್ತೇನೆ" ಎಂದು ಪ್ರಾರ್ಥಿಸಿದಳು. ಆಗ ಹರಿಯು ದಯೆಯಿಂದ, "ತಾಯಿ, ಭೂಭಾರವನ್ನು ಹೋಗಲಾಡಿಸಲು ಅವತರಿಸಬೇಕೆಂದು ಬ್ರಹ್ಮನು ಪ್ರಾರ್ಥಿಸಿಕೊಳ್ಳಲು ಅದರಂತೆ ದಶಕಂಧರನನ್ನು ಹತ್ಯೆಗೈಯಲೋಸುಗ ನರರೂಪ ಧರಿಸಿ ಬಂದಿದ್ದೇನೆ, ದಶರಥ ಮಹಾರಾಜನೂ ನೀನೂ ನಾನಾ ಬಗೆಯ ತಪಗಳನ್ನೆಸಗಿ ಪುತ್ರನನ್ನು ಬಯಸಿದಿರಿ, ನಿಮ್ಮ ಇಷ್ಟವನ್ನು ಪೂರ್ತಿಗೈಯಲು ಬಂದಿದ್ದೇನೆ" ಎನ್ನುತ್ತ ತನ್ನ ಸ್ವಸ್ವರೂಪವನ್ನು ಬಿಟ್ಟು ಬಾಲಭಾವವನ್ನು ತಾಳಿ ಪ್ರಸನ್ನನಾದ. ಆ ಮಗುವನ್ನೆತ್ತಿಕೊಂಡು ಕೌಸಲ್ಯೆಯು ಸಂಭ್ರಮದಿಂದ ಮೊಲೆಯೂಡಿ ಮಗನ ಮುಖವನ್ನು ನೋಡುತ್ತ ನಲಿದಳು.

ತನಗೆ ಪುತ್ರೋತ್ಸವವಾಯಿತೆಂಬ ವಾರ್ತೆಯನ್ನು ಕೇಳಿದ ಅರಸನು ಸಡಗರವನ್ನು ಹೊಂದಿದ. ಮಾರನೆಯ ದಿವಸ ಶ್ರೇಷ್ಠವಾದ ಪುಷ್ಯ ನಕ್ಷತ್ರದ ಮೀನರಾಶಿಯಲ್ಲಿ ವಿಷ್ಣುಚಕ್ರಾತ್ಮಕನು ಶಿಶುರೂಪದಿಂದ ಕೈಕಾದೇವಿಯ ಉದರದಲ್ಲಿ ಜನಿಸಿದ; ರಾಮ ಹುಟ್ಟಿದ ಮೂರನೆಯ ದಿನ ಆಶ್ಲೇಷಾನಕ್ಷತ್ರದ ಕಡೆಯ ಪಾದದ ಕರ್ಕಾಟಕ ಲಗ್ನದಲ್ಲಿಯೇ ಉರಗರಾಜ ಮತ್ತು ಶಂಖವೆರಡೂ ಸುಮಿತ್ರೆಯಲ್ಲಿ ಅವಳಿಮಕ್ಕಳ ರೂಪದಲ್ಲಿ ಜನಿಸಿದರು. ಮೂವರೂ ಹೆಂಡಂದಿರು ಮಕ್ಕಳನ್ನು ಹಡೆದ ವಾರ್ತೆಯನ್ನು ಕೇಳಿದ ರಾಜನು ಅಗ್ನಿಯಂತಿದ್ದ ವಸಿಷ್ಠನ ಹಿತನುಡಿಗನುಸಾರವಾಗಿ ಸಕಲವಸ್ತುಗಳನ್ನೂ ಠೀವಿಯಿಂದ ತರಿಸಿ ಕೈದಣಿಯುವಂತೆ ಭೂಸುರತತಿಗೆ ದಾನವನ್ನಿತ್ತು ಪೂಜಿಸಿ ಆನಂದಗೊಂಡ.

ಮಕ್ಕಳಿಗೆ ಹತ್ತು ದಿನಗಳು ತುಂಬಿದಾಗ ದಶರಥನು ಗುರು ವಸಿಷ್ಠರೇ ಮುಂತಾದ ಹಿರಿಯರನ್ನು ಕರೆಸಿ ಉತ್ತರೋತ್ತರದ ಏಳಿಗೆಗಾಗಿ ನಾಮಕರ್ಮಗಳನ್ನು ಮಾಡಿ ಉಥೇಚ್ಛವಾಗಿ ಗೋಭೂಹಿರಣ್ಯಗಳನ್ನೂ ಹಯಗಜರತ್ನಗಳನ್ನೂ ಹಣವನ್ನೂ ವಿಪ್ರತತಿಗಿತ್ತು ಅವರ ಹರಕೆಯನ್ನು ಹೊಂದಿ ಸೂರ್ಯನಂತೆ ರಾರಾಜಿಸಿದ. ವರವಸಿಷ್ಠಮುನಿಯು



ಶ್ರೀರಾಮಲಕ್ಷ್ಮಣಾದಿಗಳ ನಾಮಕರಣ ಮಹೋತ್ಸವ

ಮಕ್ಕಳಿಗೆ ಹೆಸರುಗಳನ್ನಿಡಲೋಸುಗ ಮುನಿಪೋತ್ತಮತತಿಗೆ ಈ ರೀತಿ ಹೇಳಿದರು: "ಸ್ಮರಣೆಮಾತ್ರದಿಂದಲೇ ಸಕಲಜನರ ಭವತಾಪಗಳನ್ನು ಪರಿಹರಿಸಿ ಮುಕ್ತಿಯನ್ನು ಕರುಣಿಸುವವನಾದ ಸಾವಿರ ನಾಮಗಳೊಡೆಯನೆನಿಸಿದ, ಮನಸ್ಸಿನ ಚಂಚಲತೆಯನ್ನು ತೊರೆದು ಭಕ್ತಿಯಿಂದ ಭಜಿಸುವವರ ಪಾಪಗಳನ್ನು ದೂರೀಕರಿಸುವ ಶ್ರೀರಾಮ ಎಂದು ಮೊದಲ ಕೂಸಿಗೆ ಹೆಸರಿಡುವುದು ಸೂಕ್ತ" ಎಂದು ಸೂಚಿಸಿದ. ಮಾರನೆಯ ದಿನ ಎರಡನೆಯ ಮಗುವಿಗೆ ಶ್ರೀಹರಿಯ ಕೈಯಲ್ಲಿನ ಆಭರಣವಾದುದರಿಂದ ಭರತ ಎಂಬ ಹೆಸರನ್ನೂ, ಮೂರನೆಯವನಿಗೆ ತತ್ಪಾದ ಲಕ್ಷಣವನ್ನು ಪಡೆದವನಾದ್ದರಿಂದ ಲಕ್ಷ್ಮಣನೆಂದೂ, ನಾಲ್ಕನೆಯ ಮಗುವಿಗೆ ಶತ್ರುಗಳನ್ನು ಸಂಹರಿಸುವ ಸಾಮರ್ಥ್ಯವುಳ್ಳವನಾದ ಶತ್ರುಘ್ನನೆಂದೂ ಹೆಸರಿಡಲಾಯಿತು. ಮುನಿನಾಥನು ಈ ಪರಿಯಲ್ಲಿ ಎಲ್ಲರೂ ಮೆಚ್ಚುವಂತೆ ಜನನಕರ್ಮಗಳನ್ನು ನೆರವೇರಿಸಲು ದಶರಥನು ಆನಂದತುಂದಿಲನಾದ; ಮಾನಿನಿಯರು ಮಣಿತೊಟ್ಟಿಲಲ್ಲಿ ರಾಮನನ್ನು ಮಲಗಿಸಿ ಶುಭಗೀತಗಳಿಂದ ಸ್ತುತಿಸಿ, ಬಜೆಬೆಣ್ಣೆಯನ್ನಿಟ್ಟು, ಲೌಕಿಕದ ರೀತಿಯಂತೆ ದೃಷ್ಟಿ ತೆಗೆದು, "ಜೋಜೋ ಜನಾರ್ದನ, ಜಗನ್ಮಯ ಪರಾತ್ಪರನೆ ಜೋಜೋ, ಪರೇಶ ಪಾವನ ಪರಮಪುರುಷನೆ ಜೋಜೋ, ಪಲಾಲಕುಲದಾಹಕಬೃಹದ್ಭಾನು ಶಶಿಸೂರ್ಯಸನ್ನೇತ್ರನೇ ಜೋಜೋ, ಸದಾನಂದ ಮೀನ ಕಮಠಾಕಾರ ಜೋಜೋ, ವರಾಹಿ ಶ್ರೀನೃಹರಿ ವಾಮನರೂಪ ಜೋಜೋ, ವಸುಂಧರಾಧಿಪ ಗರ್ವಗಿರಿಕುಲಿಶಪರಶುಧರ ರಘುನಾಥನೇ ಜೋಜೋ॥ ರಘುಕುಲವ ಪೊರೆಯೆ ಧರಣಿಯೊಳಗವತರಿಸಿ ಸಿರಿಕರದಯೋಧ್ಯಾಭಿದಾನ ಪಟ್ಟದರಸ ಗುರುತರಳನೆಂದೆನಿಸಿ ಹದಿನಾಲ್ಕು ಲೋಕಗಳ ಸಲಹುವ ಕರುಣಾವನಧಿಯೆ, ದೊರೆಗಳ ಶಿರೋರತ್ನ ನೀನೆನಿಸಿ ಬಾಳು" ಎಂದು ಮುಂತಾಗಿ ಹಾಡುತ್ತ ಹರಸಿ ರಕ್ಷೆಯನ್ನಿಟ್ಟು ಆರತಿಯೆತ್ತಿ ತೊಟ್ಟಿಲು ತೂಗಿದರು.

ಬೆಳುದಿಂಗಳಂತೆ ಹೊಳೆಯುವ ನಗೆಮೊಗ, ಬಟ್ಟಗಣ್ಣುಗಳು, ಅರೆದೆರೆದ ಕಿರುನೋಟ, ಗುಂಗುರು ಕೂದಲು, ನುಣುಪಾದ ಹಣೆ, ಕೊರಳ ಮೂರು ಗೆರೆಗಳುಳ್ಳ ಕೋಮಲವಾದ ಬಳ್ಳಿಯಂತಹ ದೇಹ, ನಳನಳಿಸುವ ತೋಳುಗಳುಳ್ಳ ಪುಟ್ಟ ಕೈಗಳು, ಹೊಳೆಯುವ ಉಗುರುಗಳುಳ್ಳ ಮುಷ್ಟಿಗಳು, ನವಿರಾದ ತಾವರೆಯಂತಹ ಕಾಲುಗಳಿಂದ ಕೂಡಿ ಹರಿಯು ಶೋಭಿಸುತ್ತಿದ್ದ. ಚಿಗುರಿನಂತಹ ಹೆಜ್ಜೆಗಳಿಂದ ತೊಟ್ಟಲನ್ನು ಮತ್ತೆ ಮತ್ತೆ ಒದೆಯುತ್ತ ತಾಯಿಯನ್ನು ನೋಡುತ್ತ, ದೇವತೆಗಳಿಗೆ ಅಭಯವನ್ನು ತೋರಿಸುವಂತೆ ಕೈಗಳನ್ನಾಡಿಸುತ್ತ ಮೂಲೋಕಗಳನ್ನೂ ತನ್ನಲ್ಲಿ ಅಡಗಿಸಿಕೊಂಡ ಜಗದೀಶನು ಮಗುವಿನ ಹಾಗೆ ಆಟವಾಡುತ್ತಿದ್ದ. ದೇವತೆಗಳಿಗೆ ಅಮೃತವನ್ನು ಸುರಿಯುವ ತೋಳುಗಳು, ಹರುಷದಿಂದ ಚಪ್ಪರಿಸಲು ಸುರಿಯುವ ಜೊಲ್ಲುಸೂಸಿ ಕಂಗೊಳಿಸುತ್ತ ಚತುರ್ದಶಭುವನಪತಿಯು 'ಮಾಯೆಯಲ್ಲಿ ಸಿಲುಕಿದ ಅರಿಗಳನ್ನು ಕುರಿದರಿಯದಿರೆನು' ಎನ್ನುವಂತೆ ಎಳನಗೆಯನ್ನು ಹೊಮ್ಮಿಸುತ್ತ 'ಉಬುಬು' ಎಂದು ಶಬ್ದಗೈಯುತ್ತ ನಾನಾವಿಧದಿಂದ ತಾಯಿಯನ್ನು ಸಂತಸಗೊಳಿಸುತ್ತಿದ್ದ. ಮಗುವನ್ನು ನೋಡುತ್ತ ತಾಯಿ ಹಿಗ್ಗಿ, ಮುಂಡಾಡಿ ನೆಟಿಕೆ ಮುರಿದು ಮೊಲೆಯೂಡುವಳು, ಕಣ್ಣುಗಳಿಗೆ ಕಾಡಿಗೆಯನ್ನೂ ಹಣೆಯಲ್ಲಿ ಕಸ್ತೂರಿ ತಿಲಕವನ್ನೂ ಇಟ್ಟು ಚಪ್ಪಾಳೆ ತಟ್ಟಿ ಆಡಿಸುವಳು, 'ಎನ್ನಯ್ಯ ಚೆನ್ನಯ್ಯ ಬಾ' ಎಂದು ಆನಂದದಿಂದ ಮಗುವನ್ನಪ್ಪಿ ಗಲ್ಲವನಲುಗಿಸಿ ವಿಶ್ವಸೂತ್ರಧರನನ್ನು ಕುರಿತು ನಾನಾ ಬಗೆಯ ಉಪಚಾರವ

ಮಾತುಗಳನ್ನಾಡಿ ನಲಿಯುವಳು. ಕಿರುಗೆಜ್ಜೆ ಕಟಕಗಳನ್ನು, ಅಂದುಗೆ ಪಾಡಗಗಳನ್ನು ಕಂದನ ಪುಟ್ಟ ಕಾಲುಗಳಿಗೆ ಅಳವಡಿಸಿ, ಚಿನ್ನದ ಉಡುದಾರವನ್ನೂ ಸದ್ದುಗೈವ ಕಿಂಕಿಣಿಗಳನ್ನೂ ರತ್ನದ ಮಣಿಗಳನ್ನೂ ತೊಡಿಸಿ, ಹಾಲುಮಣಿ ಎಣ್ಣೆವಣಿಗಳಿಂದ ಕೂಡಿದ ಸರದಿಂದ ಕೊರಳನ್ನು ಅಲಂಕರಿಸಿ, ಸುಂದರವಾದ ಸುಪ್ಪಾಣಿಮುತ್ತುಗಳ ಓಲೆಯನ್ನು ಎರಡೂ ಕಿವಿಗಳಿಗೆ ಅಳವಡಿಸುವಳು. ಮುದದಿಂದ ಮೊಲೆಯೂಡಿ, ಅಪ್ಪಿಕೊಂಡು ದೃಷ್ಟಿ ತೆಗೆದು ರಕ್ಷೆಯಿರಿಸಿ ಸಂತಸದಿಂದ ಕೆನ್ನೆಗಳನ್ನು ಮುದ್ದುಗೈದು ಹಾಡಿ ಮಗುವನ್ನು ಮಲಗಿಸುವಳು. ಕ್ಷೀರಸಾಗರವೆಂಬ ತೊಟ್ಟಿಲಲ್ಲಿ ಮಲಗಿ ಮೂರು ಲೋಕಗಳನ್ನೂ ತನ್ನಲ್ಲಿಯೇ ಇರಿಸಿಕೊಂಡು ಜೀವಿಗಳನ್ನು ಪ್ರೀತಿಯಿಂದ ಸಲಹುವ ಸ್ವಾಮಿಯು ಹೀಗೆ ಮಗುವಿನ ರೂಪದಲ್ಲಿ ಶೋಭಿಸುತ್ತಿದ್ದ. ತೂಗಿ ತೊನೆಯುವ ವಿಮಲತರವಾದ ದೀಪದ ಕುಡಿಗಳನ್ನು ಹಿಡಿಯಲು ಮಗನು ಮುಂದಾಗಲು ತಾಯಿ ಕೌಸಲ್ಯೆ ಬಂದು ಮಗುವಿನ ಕೈಗಳನ್ನು ಹಿಡಿದು 'ಮಾಮಿಗೆ ಜೋತ ಮಾಡು' ಎಂದು ಹೇಳಿಕೊಡುವಳು. ಮನಸ್ಸಿನಲ್ಲಿ ತನ್ನ ನಿಜಸ್ವರೂಪ ಹೊಳೆದು ಆತುರದಿಂದ ಹಿಡಿದುಕೊಂಡ ತಾಯಿಯ ಕೈಯನ್ನು ತನ್ನ ಇನ್ನೊಂದು ಕೈಯ ಉಗುರುಗಳಿಂದ ನೂಕಿ ಬಿಡಿಸಿಕೊಳ್ಳಲೆಳಸುವ ಕಂದನನ್ನು ಕಂಡು ನಗುನಗುತ್ತ ಮೃದುಮಾತುಗಳನ್ನಾಡುತ್ತ ಮಗನನ್ನು ತೆಗೆದಪ್ಪಿಕೊಂಡು ಮುದ್ದಿಕ್ಕುವ ಆ ತಾಯಿಯ ಪುಣ್ಯವನ್ನು ಏನೆಂದು ಹೊಗಳಲಿ!

ಈ ರೀತಿ ಬೆಳೆದ ಮಗುವಿಗೆ ಮೂರು ವರ್ಷಗಳು ತುಂಬಿದವು. ಆಗ ತಂದೆಯು ಮಗುವಿಗೆ ಶಾಸ್ತ್ರೋಕ್ತವಾಗಿ ಚೌಲಕರ್ಮವನ್ನು ನೆರವೇರಿಸಿ, ತನ್ನ ದೊಡ್ಡ ದೇಶದ ಜವಾಬ್ದಾರಿಯ ಭಾರವನ್ನು ಹಗುರವಾಗಿಸಿಕೊಂಡ. ರಾಜೀವಲೋಚನನನ್ನು ತಮ್ಮ ಮಗನೆಂದು ನಂಬಿ ಆ ದಂಪತಿಯರು ಮಗುವಿನ ಬಾಲಲೀಲೆಗಳನ್ನು ಕಣ್ತುಂಬಿಕೊಂಡು ಆನಂದಭರಿತರಾಗಿದ್ದರು. ಹರಿಯು ಮಾತಿಗೆ ಮೀರಿದವನೆಂದು ಅಮರರು ಹೇಳುವರು, ಅಡವಿಯಲ್ಲಿ ತಪಗೈವ ಮುನಿವರರು ಪ್ರೇಮಬಸಿರನೆಂದು ಹೊಗಳುತ್ತಾರೆ, ಅವರ ಅಪವಾದವನ್ನು ಹೋಗಲಾಡಿಸುವೆನೆಂಬಂತೆ ತೊದಲು ಮಾತುಗಳನ್ನಾಡುತ್ತ ಜನನಿಯನ್ನು ತಬ್ಬಿಕೊಳ್ಳುತ್ತ, 'ಕ ಕ ಕ' ಎನ್ನುತ್ತ ಮಾನವಶಿಶುಗಳಂತೆಯೇ ಪರಾತ್ಪರನು ರಾಜಿಸಿದ. ಪುಣ್ಯದ ಬೆಳಸು ಅಖಂಡವಾಗಿ ಭೂಮಿಯಲ್ಲಿ ಅವತರಿಸಿ ತಾಯ್ತಂದೆಯರಿಗೆ ಅತಿಶಯ ಸಂತಸವನ್ನು ನೀಡುತ್ತ, ಮಗುವಿನ ರೂಪದಲ್ಲಿ ಕಾಮಜನಕನಾದ ಶ್ರೀಹರಿಯು ಇಕ್ಷ್ವಾಕುವಂಶಾಧಿಪನ ಮಗನಾಗಿ ತಾನೂ ನಲಿಯುತಿದ್ದ; ಈ ರೀತಿ ಮತಿವಂತರ ಮಾನಸೋನ್ನತಿಯನ್ನೆಸಗುತ್ತ ಶ್ರೀರಾಮಪುರಿಯಧೀಶನು ಸೊಗಸುತ್ತಿದ್ದ.

೧೦. ಯಾಗರಕ್ಷಣೆಗಾಗಿ ರಾಮಲಕ್ಷ್ಮಣರನ್ನು ಕಳಿಸಲು ದಶರಥನಲ್ಲಿ ವಿಶ್ವಾಮಿತ್ರನ ಬೇಡಿಕೆ

ಹಿಮಶೈಲಜಾತೆಯೇ ಕೇಳು, ನೀರಜಾಕ್ಷ ಶ್ರೀರಾಮನು ದಿನದಿನವೂ ತನ್ನ ಹೊಸ ಬಗೆಯ ಆಟಪಾಟಗಳಿಂದ ತಾಯ್ತಂದೆಯರನ್ನು ಹರುಷಗೊಳಿಸುತ್ತಿದ್ದ. ಸಾಮಾನ್ಯ ಬಾಲಕನ ರೀತಿಯಲ್ಲಿಯೇ ದಟ್ಟಡಿಗಳನ್ನಿರಿಸುತ್ತ ನಡೆಯತೊಡಗಿದ. ಮೂರುಲೋಕದಲ್ಲಿರುವ ಜೀವಿಗಳನ್ನು ಕರ್ಮಗಳೆಂಬ ತೋರನೇಣುಗಳಿಂದ ಬಂಧಿಸಿ ಸುಖದುಃಖ ಕಾರಣಗಳನ್ನುಂಟುಮಾಡಿ ಲೀಲೆಯಂತೆ ಕಾಣುವ ರಾಜೀವಾಕ್ಷನು ಆನೆ ಸಿಂಹಗಳನ್ನು ದಾರದಿಂದ ಬಿಗಿದು ತನ್ನದೆನ್ನುತ್ತ ತಾಯ್ತಂದೆಯರ ಮುಂದೆ ಬಂದು ವಿಹರಿಸುತ್ತಿದ್ದ. ಎಳನಗೆ ಮೊಳೆಕೆಹಲ್ಲು ಸುರುಳಿಗುರುಳು ಚೆಂದುಟಿ ಕನ್ನಡಿಯಂತೆ ಹೊಳೆಯುವ ಕೆನ್ನೆಗಳು ಕಮಲದಳದಂತಹ ಕಣ್ಣುಗಳು ನಳಿತೋಳು ದಟ್ಟವಾದ ಹುಬ್ಬುಗಳು ಹಣೆಯಲ್ಲಿ ಒಲೆದಾಡುವ ಅರಳೆಲೆಗಳ ಬೆಡಗನ್ನುಳ್ಳ ಮೋಡದಂತಹ ತನುಚ್ಛಾಯೆಯ ಬಾಲಕ ರಾಮನು ಅಂಗಳದಲ್ಲಿ ಸುಳಿದಾಡುತ್ತಿರಲು, ಗಿಳಿಮರಿಯಂತೆ ಮಾತನಾಡುತ್ತ ಎಲ್ಲರನ್ನೂ ಮೋಹಿಸುತ್ತ ಸಾಮಾನ್ಯ ಬಾಲಕನಂತೆ ತೋರಿಸಿಕೊಳ್ಳುತ್ತ ಎಲ್ಲರ ಮನಸ್ಸನ್ನೂ ಸೆಳೆಯುತ್ತಿದ್ದ. ಮುನಿಶ್ರೇಷ್ಠರು ಪ್ರತಿಕ್ಷಣವೂ ಅರಸುತ್ತಿದ್ದರೂ ಕಾಣಿಸಿಕೊಳ್ಳದ ಅನಂತಮಹಿಮನನ್ನು ಮಗನೆಂದು ಬಗೆದು ದಶರಥ ಮಹಾರಾಜನು ಮಗನ ಕೈ ಹಿಡಿದು ಮುಂಡಾಡುತ್ತ ಊಟದ ಕಾಲದಲ್ಲಿ ಶ್ರೇಷ್ಠ ಪೀಠದಲ್ಲಿ ಕುಳ್ಳಿರಿಸಿ ರುಚಿರುಚಿಯಾದ ಪರಮಾನ್ನ ಚಿಲಿಪಾಲುಗಳನ್ನು ಕುಡಿಸಲು ಅದನ್ನು ಉಣ್ಣುತ್ತ, ತನ್ನ ಸಿರಿಕರದಿಂದ ಅನ್ನವನ್ನು ಹಿಡಿದು ಅಂಗಳಕ್ಕೆ ಓಡಿ ಹೋದರೆ ತಾಯ್ತಂದೆಯರಿಗೆ ಸಂತಸವೋ ಸಂತಸ! "ಬಾರೆನ್ನ ಗರ್ಭಾಬ್ಧಿ ಬಾಲೇಂದುವೇ, ರಘುವಂಶದಾರಾಮ ಗಿಳಿರಾಮನೇ, ಸಾಕೇತ ಪುರಲಕ್ಷ್ಮಿಸಂರಕ್ಷಣಾರ್ಥದುರು ಹಮ್ಮೀರನೇ, ಬಾ ಶುಭದ ಭವದೂರ ಮಾರಪಿತನೇ, ಬಾ ಕಂದ ಮಾಕಂದ ದೋರವಣ್ಣನು ಕೊಡುವೆ, ಗುಮ್ಮನನು ಅಂಜಿಸು ಓಡಿಸು" ಎಂದು ಓಲೈಸುತ್ತ ತಾಯಿ ಕೌಸಲ್ಯೆ ಮಗನನ್ನು ಮುದ್ದುಗರೆಯುವಳು. ಉಡಿದಾರದ ಉಲಿಯುವ ಕಿರುಗಜ್ಜೆಗಳ ನಿನದವನ್ನುಂಟುಮಾಡುತ್ತ, ತನ್ನ ಕೈಯ ಕಂಕಣದ ನಿಸ್ವನವನ್ನು ತೋರುತ್ತ, ತನ್ನ ಚಿಗುರಂತಿರುವ ಒಂದು ಅಡಿಯನ್ನು ನಿಧಾನವಾಗಿ ಭೂಮಿಯಲ್ಲಿರಿಸಿ ಮತ್ತೊಂದನ್ನು ಮೇಲೆತ್ತುತ್ತ ಕಿಂಕಿಣಿಗಳ ಸದ್ದು ಮಾಡುತ್ತ ನಡೆದು ಬರುತ್ತಿದ್ದರೆ ಬಲಿ ಚಕ್ರವರ್ತಿಯನ್ನು ಬಂಧಿಸಿ ನೆಲವನ್ನು ಅಳೆಯುವ ರೀತಿಯನ್ನು ಕೌಸಲ್ಯೆಗೆ ತೋರಿಸುವಂತೆ ಕಾಣುವುದು. ವೇದತತಿಗಳು ಹುಡುಕಿಯೂ ಕಾಣಿಸದ ದಿವ್ಯದೇಹವನ್ನು ಆ ತಾಯಿಯು ಕುಳಿತಿರುವಾಗ ಊಟಮಾಡುವಾಗ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅಕ್ಕರೆಯಿಂದ ಮುದ್ದಿಸುವಳು. ಹೀಗೆ ಜಗದೀಶನನ್ನು ಲಾಲನೆಗೈವ ಕೌಸಲ್ಯೆದಶರಥರು ಅದೇನು ಪುಣ್ಯವಂತರೋ ಮಾನ್ಯರೋ ಎಂಬುದನ್ನು ವರ್ಣಿಸುವುದಕ್ಕೆ ಬಾರದ ಬಗೆಯಲ್ಲಿ ಅರಮನೆಯಲ್ಲಿ ಬೆಳೆಯುತ್ತಿದ್ದ ಲಕ್ಷ್ಮೀರಮಣನ ಪರಿಯನ್ನು ಬಣ್ಣಿಸಲು ಯಾರಿಗೆ ತಾನೇ ಶಕ್ಯ! ಶ್ರೀರಾಮನು ಹೇಗೆ ಬಾಲಕೇಳಿಗಳಿಂದ ವಿರಾಜಿಸುವನೋ ಅದೇ ಬಗೆಯಲ್ಲಿ ಲಕ್ಷ್ಮಣನೂ ಅವನ ನೆರಳಿನಂತೆ ಒಟ್ಟಿಗೇ ಆಡುವನು; ಅವನನ್ನು ಅನುಸರಿಸಿ

ಭರತಶತ್ರುಘ್ನರೂ ಮನಸೆಳೆಯುವರು. ಚಂದ್ರನನ್ನು ಕಂಡು ಸಮುದ್ರರಾಜನು ಹಿಗ್ಗುವ ರೀತಿಯಲ್ಲಿ ಮಕ್ಕಳ ಆಟವನ್ನು ಕಂಡು ತಾಯ್ತಂದೆಯರು ಹರ್ಷಿಸುವರು.

ತಾಯ್ತಂದೆಯರಿಗೆ ತರಳತನದ ಆಟಪಾಟಗಳನ್ನು ತೋರಿಸುತ್ತ ಬೆಳೆಯುತ್ತಿದ್ದ ತಾವರೆಗಣ್ಣನಿಗೆ ಕಾಕುತ್ಸ್ಥತಿಲಕನು ಆನೆ ಕುದುರೆಗಳ ಸವಾರಿ, ಶಸ್ತ್ರಾಭ್ಯಾಸ, ಮಲ್ಲಗಾಳಗ ಮೊದಲಾದ ವಿದ್ಯೆಗಳನ್ನು ಅಭ್ಯಾಸ ಮಾಡಿಸುತ್ತ ಅದರಲ್ಲಿ ಪರಿಣತನನ್ನಾಗಿಸಿದ. ನಾಲ್ಕು ಮಕ್ಕಳು ಈ ರೀತಿ ಬೆಳೆಯಲು ಸೂರ್ಯವಂಶೋತ್ತಮನು ಅವರಿಗೆ ಉಪನಯನ ಸಂಸ್ಕಾರವನ್ನು ಮಾಡಿ, ಚತುರ್ವೇದಗಳನ್ನೂ ವೇದಾಂಗಗಳನ್ನೂ ನಾನಾ ಬಗೆಯ ಶಾಸ್ತ್ರಗಳನ್ನೂ ಧನುರ್ವೇದವನ್ನೂ ಕಲಿಸಿ ನಿಪುಣರನ್ನಾಗಿಸಿದ. ಅಪರಿಮಿತ ಮಹಿಮನಾದ ರಾಮಚಂದ್ರನು ತನ್ನ ತಮ್ಮಂದಿರೊಡನೆ ಸೇರಿ ತಂದೆಯ ಆಜ್ಞೆಯಂತೆ ಎಲ್ಲವನ್ನೂ ಆಶ್ಚರ್ಯಜನಕವೆಂಬಂತೆ ತ್ವರಿತದಿಂದ ಕಲಿತ. ಊಟ ಉಡುಪು ತೊಡುಗೆ ಆಟ ಶಸ್ತ್ರಾಭ್ಯಾಸ ಆನೆಕುದುರೆಗಳ ಸವಾರಿ – ಎಲ್ಲದರಲ್ಲಿಯೂ ಸುಮಿತ್ರಾತ್ಮಜನಾದ ಲಕ್ಷ್ಮಣನು ರಾಮಚಂದ್ರನ ಜೊತೆಗಲ್ಲದೆ ಒಬ್ಬನೇ ಇರನು; ನೋಡಿದವರಿಗೆ ಅವನು ರಾಮಚಂದ್ರನ ಬಹಿಃಪ್ರಾಣವೋ ಎಂಬಂತೆ ತೋರುತ್ತಿದ್ದ. ಗಿರಿಜೆಯೇ, ರಾಮನ ಸದ್ಗುಣಗಳನ್ನು ಏನೆಂದು ಬಣ್ಣಿಸುವುದು! ಹದಿನಾಲ್ಕು ಲೋಕಗಳಲ್ಲಿನ ಯಾರೂ ಅವನಿಗೆ ಅಣುಮಾತ್ರವಾದರೂ ಸಾಟಿಯೆನಿಸಲಾರರೆಂಬಂತೆ ತೋರಲು, ಆ ಪ್ರಣವಗೋಚರನನ್ನು ಅಪ್ಪಿ ಚುಂಬಿಸಿ, ಕಣ್ತುಂಬ ನೋಡಿ ಸುಖದ ಪರವಶತೆಯಿಂದ ಇರುವ ದಶರಥನ ಸುಕೃತವನ್ನು ಏನೆಂದು ಹೇಳುವುದು!

ಮಕ್ಕಳ ಏಳಿಗೆಯನ್ನು ಇಂದ್ರಸಖನಾದ ದಶರಥನು ಈ ಪರಿಯಿಂದ ನೋಡುತ್ತ ಕಾಲ ಸರಿಯುತ್ತಿರಲು, ಒಂದು ದಿವಸ ಮಹಾಮುನಿಯಾದ ವಿಶ್ವಾಮಿತ್ರನು ರಾಜಧಾನಿ ಅಯೋಧ್ಯೆಯ ಕಡೆಗೆ ಐತರುವುದನ್ನು ಕಂಡ ಚರರು ಅರಸನ ಬಳಿ ಬಂದು ಈ ವಿಷಯವನ್ನು ಬಿನ್ನವಿಸಿದರು. ಆಗ ಆತನು ನಾನಾ ಬಗೆಯ ಉಪಚಾರ ಪರಿಕರಗಳಿಂದೊಡಗೂಡಿ ಸಂತಸದಿಂದ ಗುರು ವಸಿಷ್ಠ ವಾಮದೇವ ಮುಂತಾದ ಭೂಸುರೋತ್ತಮತತಿಯ ಸಮೇತ ಸಂಭ್ರಮದಿಂದ ಎದುರುಗೊಳ್ಳಲು ಹೊರಟ. ಎದುರಾದ ವಿಶ್ವಾಮಿತ್ರ ತಪೋಧನನನ್ನು ಭಕ್ತಿಯಿಂದ ಎದುರುಗೊಂಡು ಅರ್ಘ್ಯಪಾದ್ಯಾದಿಗಳನ್ನಿತ್ತು ನಮಿಸಿ ಕುಶಲವನ್ನು ವಿಚಾರಿಸಿದಾಗ, ಮುನಿಯು ದಶರಥನ ಸದ್ವಿನಯವನ್ನು ಕಂಡು, 'ನೀನು ರಾಜರ ರತ್ನ' ಎಂದು ಅವನನ್ನು ಹೊಗಳಿದರು. "ತಮ್ಮ ದರ್ಶನದಿಂದ ನಾನು ಕೃತಾರ್ಥನಾದೆ, ತಮ್ಮ ಅಡಿದಾವರೆಗಳನ್ನು ಕಂಡ ಮಾತ್ರದಿಂದ ನಾನು ಪುನೀತನಾದೆ, ತಮ್ಮನ್ನು ಕಂಡು ನನ್ನ ಪಾಪಗಳೆಲ್ಲ ಹಾರಿಹೋದುವು, ನನ್ನನ್ನು ಧನ್ಯತೆ ಆವರಿಸಿತು. ನನ್ನ ಭಾಗ್ಯವನ್ನು ಏನೆಂದು ಹೇಳಲಿ, ಆರ್ದ್ರಹೃದಯದಿಂದ ಕಾಪಾಡಲೆಂದು ತಾವು ಕೃಪೆಯಿಟ್ಟು ನನ್ನ ರಾಜಧಾನಿಗೆ ಬಿಜಯಂಗೈಯಬೇಕು" ಎಂದು ವಿನಮಿತನಾಗಿ ಇಕ್ಷ್ವಾಕುಕುಲತಿಲಕನು ಸಾಷ್ಟಾಂಗವೆರಗಿದ.

ಹಾಗೆ ತನ್ನರಮನೆಗೆ ತಾಪಸವರ್ಯನನ್ನು ಕರೆತಂದು ಮಣಿರಾಜಿಯಿಂದ ಹೊಳೆಯುತ್ತಿದ್ದ ಚಿನ್ನದ ಪೀಠದಲ್ಲಿ ಕುಳ್ಳಿರಿಸಿ ಅಮಿತ ಭಕ್ತಿಯಿಂದ ಸ್ತುತಿಗೈದು,

"ತಾಪಸವರ್ಯರೇ, ನನ್ನ ಮೇಲೆ ಮಮತೆಯಿಟ್ಟು ತಾವು ಇಲ್ಲಿಗೆ ಐತಂದ ಕಜ್ಜವನ್ನು ಅಪ್ಪಣೆ ಮಾಡಬೇಕು. ತಾವು ಹೇಳಿದುದನ್ನು ತಲೆಯ ಮೇಲಿಟ್ಟುಕೊಂಡು ನಾನದನ್ನು ನೆರವೇರಿಸುತ್ತೇನೆ" ಎಂದು ಬಿನ್ನಹಗೈದ. ಅದಕ್ಕೆ ಮುನಿಪೋತ್ತಮನು, ಅಮೃತವು ತನ್ನ ತುಟಿಗಳ ಮಧ್ಯದಿಂದ ಸೂಸುತ್ತಿದೆಯೋ ಎಂಬಂತೆ, ರಾಜನಿಗೆ ಈ ರೀತಿ ನುಡಿದ: "ನೀನು ದ್ಯುಮಣಿಕುಲಸಂಭವ, ದೀನಜನರ ಕಲ್ಪವೃಕ್ಷ, ಮಹಾ ಪರಾಕ್ರಮಿ, ರಾಜಸಿಂಹ, ಅತುಲಗುಣಸಂಪನ್ನನಾದ ನಿನಗೆ ಸಮನಾಗಿರುವವರು ಈ ಜಗತ್ತಿನಲ್ಲಿ ಯಾರಿದ್ದಾರೆ? ಸಗರನ ಮಕ್ಕಳು ತಂದೆ ಮಾಡಿದ ಅಶ್ವಮೇಧಯಾಗ ಕಾಲದಲ್ಲಿ ಕುದುರೆಯ ಹಿಂದೆ ಹೋಗಿ ಸಮುದ್ರಗಳನ್ನೇ ನಿರ್ಮಿಸಲಿಲ್ಲವೇ? ದೇವಗಂಗೆಯನ್ನು ಸುರಲೋಕದಿಂದ ತಂದ ಭಗೀರಥನು ಹಿರಿಯರಿಗೆ ಸದ್ಗತಿಯನ್ನು ತರಲಿಲ್ಲವೇ? ದೇವೇಂದ್ರನಿಗೆ ಸಹಾಯ ಮಾಡಲು ರಕ್ಕಸರನ್ನು ಕೊಂದು ಅವನ ಅರ್ಧಾಸನದಲ್ಲಿ ಕುಳಿತ ಯೋಧನಾದ ನಿನ್ನ ಪೌರುಷವೆಲ್ಲವೂ ಸಾಧುಗಳನ್ನು ರಕ್ಷಿಸಲು ತಾನೇ ಇರುವುದು? ಸೂರ್ಯವಂಶಸಂಭೂತನಾದ ನಿನಗೆ ಪಾಸಟಿಯಾದವರು ಯಾರಿದ್ದಾರೆ? ಅನುದಿನವೂ ವಸಿಷ್ಠಮುನಿಪನ ಸೇವೆಯನ್ನು ಮಾಡಿ ಎಲ್ಲ ಧರ್ಮವನ್ನೂ ಬಲ್ಲ ಕಾರಣಿಕಹೃದಯನಾಗಿದ್ದೀಯೆ. ನಿನ್ನ ಅಖಂಡಪೌರುಷವು ನನಗೆ ಒಳಿತನ್ನೇ ಮಾಡಿದೆ. ನಿನ್ನ ವಿನಯವಾಕ್ಕುಗಳನ್ನು ಕೇಳಿ ಸಂತಸವಾಯಿತು. ನನ್ನ ಮನಸ್ಸಿನಲ್ಲಿ ಒಂದು ಆಸೆಯಿದೆ, ಕಾರುಣ್ಯನಿಧಿಯೇ, ಅದನ್ನು ನೀನು ನೆರವೇರಿಸಿಕೊಡಬೇಕು. ನನ್ನ ಸಿದ್ಧಾಶ್ರಮದಲ್ಲಿ ಒಂದು ಸಿದ್ಧಿಗಾಗಿ ವ್ರತಾಚರಣೆಯಲ್ಲಿರುವಾಗ ಇಬ್ಬರು ಕಾಮರೂಪಿಗಳು ಬದ್ಧದ್ವೇಷದಿಂದ ಬಂದು ಮಾಂಸರಕ್ತಗಳ ಮಳೆಯನ್ನು ಸುರಿಸಿ, ಉಗುಳಿ, ಮಲಮೂತ್ರಗಳಿಂದ ಯಜ್ಞಶಾಲೆಯನ್ನು ಅಪವಿತ್ರಗೊಳಿಸುತ್ತಾರೆ. ಈ ಪರಿ ಉಪಟಳವನ್ನು ಹೆಚ್ಚು ಕಾಲ ಸಹಿಸಲು ಸಾಧ್ಯವಿಲ್ಲ. ಕೆಲವು ದಿನ ನಾನು ಅತ್ಯಂತ ಕಷ್ಟದಿಂದ ಯಜ್ಞಸಾಧನಗಳನ್ನು ಸಂಗ್ರಹಿಸಿ ಮಾಡಿದ ಕೆಲಸವನ್ನು ನಾಶಪಡಿಸಿದುದನ್ನು ನಾಚಿಕೆಯಿಂದ ಬೇರಾರಿಗೂ ಹೇಳದೆ ಇಲ್ಲಿಯವರೆಗೆ ಸಹಿಸಿಕೊಂಡಿದ್ದೆ. ರಾಜನೇ, ಆ ರಕ್ಕಸರನ್ನು ಶಪಿಸಿ ಕೆಡವಲು ನನಗೆ ಮನಸ್ಸು ಬಾರದು. ಆ ದುಷ್ಕೃತ್ಯಗಳನ್ನು ಕೋಪಹಿತವೆನ್ನಿಸಿದ ರೀತಿಯಲ್ಲಿ ಕೊನೆಗೊಳಿಸಿದರೆ ಯಜ್ಞಫಲವು ದೊರಕುವುದಿಲ್ಲ. ಹೀಗಾಗಿ ಪರಿಪೂರ್ಣ ಕಾಮ, ಸಂಗ್ರಾಮ ಭೀಮ, ಸತ್ಯಸಂಕಲ್ಪ, ಪರಾಕ್ರಮಿಯಾದ ನಿನ್ನ ಹಿರಿಯ ಮಗನಾದ ರಾಮನನ್ನು ಪ್ರೇಮದಿಂದ ನನ್ನೊಡನೆ ಕಳಿಸಿಕೊಡು. ರಾಮನು ನನ್ನೊಡನೆ ಬಂದಷ್ಟೂ ಬೇಗ ನನ್ನ ಯಾಗ ಸಾಂಗವಾಗಿ ನೆರವೇರುತ್ತದೆ. ಈತನ ಶರಘಾತದಿಂದ ಆ ಮಹಾ ಅಸುರರು ಹತರಾಗಿ ಬೀಳುತ್ತಾರೆ. ಭೂಮಿ ಸುಖದಿಂದ ಇರುತ್ತದೆ. ಕಾಕುತ್ಸ್ಥರತ್ನನಾದ ಈತನನ್ನು ಕಳಿಸಿದರೆ ಕರೆದೊಯ್ಯುತ್ತೇನೆ. ರಾಕ್ಷಸರ ಬಾಧೆಯು ಈತನಿಗೆ ಸೋಂಕದ ರೀತಿಯಲ್ಲಿ ಕಾಪಾಡಿಕೊಳ್ಳುವ ಸಾಮರ್ಥ್ಯ ನನಗೆ ತಪೋಬಲದಿಂದಾಗಿ ಇದೆ. ನೆವ ಹೇಳದೆ ಈತನನ್ನು ಕಳಿಸಿದರೆ ನಿನಗೆ ಸಕಲ ಶ್ರೇಯಸ್ಸುಗಳೂ ಲಭಿಸುತ್ತವೆ. ಕಾರ್ಯವಾದ ಬಳಿಕ ಜೋಕೆಯಿಂದ ಈತನು ಮರಳಿ ಬರುತ್ತಾನೆ. ಯಾವುದೇ ಚಿಂತೆ ಮಾಡದೆ ನನ್ನೊಡನೆ ಸಮಾಧಾನಚಿತ್ತದಿಂದ ಕಳಿಸಿಕೊಡು. ಕ್ರೂರ ದಾನವರ ಭಯ ನಿನ್ನ ಮಗನನ್ನು ತಾಕಲಾರದು. ಯಾಗವು ಸಾಂಗವಾಗಿ ನಡೆದು ಅದರ ಫಲ ಕೈಸೇರುತ್ತದೆ. ಹೀಗಾಗಿ ರಘುಕುಲಾಗ್ರಣಿಯೇ, ಸಾಧುಗಳನ್ನು ರಕ್ಷಿಸಲೆಂದು



ವಿಶ್ವಾಮಿತ್ರರು ಬೇಡಿಕೆ ಇಡುತ್ತಿರುವುದು

ಶ್ರೀಮನ್ನಾರಾಯಣನೇ ನಿನ್ನ ಮಗನಾಗಿ ಜನಿಸಿರುವನು, ಇದನ್ನು ಅರುಂಧತೀವಲ್ಲಭನಾದ ವಸಿಷ್ಠ ಮಹರ್ಷಿಯು ತನ್ನ ತಪೋದೃಷ್ಟಿಯಿಂದ ಅರಿತಿದ್ದಾನೆ. ತರಣಿಕುಲಸಂಜಾತ ದಶರಥನೇ, ನಿನ್ನ ಚಿತ್ತದಲ್ಲಿ ಯಾವುದೇ ಅನುತಾಪಕ್ಕೆ ಅವಕಾಶವೀಯದೆ, ಈತನನ್ನು ನನ್ನೊಡನೆ ಕಳಿಸಿಕೊಟ್ಟರೆ ದೊರೆಗಳು ಗಳಿಸುವ ಕೀರ್ತಿ ಧರ್ಮ ಸತ್ಯ ಪ್ರತಾಪಗಳು ಸ್ಥಿರವಾಗಿ ನಿನ್ನನ್ನು ಆಶ್ರಯಿಸುತ್ತವೆ. ಗುರು ವಸಿಷ್ಠನೇ ಮುಂತಾದವರೂ ಮಂತ್ರಿಗಳೂ ನನ್ನ ನುಡಿಗೆ ಒಪ್ಪುತ್ತಾರೆ, ಹೀಗಾಗಿ ತಡಮಾಡದೆ ನಿನ್ನ ಆತ್ಮಭವನಾದ ಶ್ರೀರಾಮನನ್ನು ನನ್ನೊಡನೆ ಕಳಿಸಿಕೊಡು. ಹತ್ತು ದಿನಗಳ ಕಾಲ ನನ್ನ ಆಶ್ರಮದಲ್ಲಿದ್ದು ಸಾಟಿಯಿಲ್ಲದ ಅಮಿತ ಶ್ರೇಯಸ್ಸನ್ನು ಗಳಿಸಿ, ಲೋಕವಿಶ್ರುತನಾಗಿ ವಾಪಸ್ಸಾಗುತ್ತಾನೆ. ತಳುವದೆ ಅವನನ್ನು ಕಳಿಸಿಕೊಟ್ಟು ಅತುಲಕೀರ್ತಿಗೆ ಭಾಜನನಾಗು. ರತಿಪತಿಯ ಪಿತನಾದ ಶ್ರೀ ರಾಮಪುರವಾಸನಾದ ಆತನು ನನ್ನ ಮಗನೆಂಬ ಮೋಹದಿಂದ ಕೂಡಿರದೆ ಕಳಿಸಿ ಧರ್ಮವು ನೆಲೆಗೊಳ್ಳುವ ಹಾಗೆ ಮಾಡು" ಎಂದು ಬಹುವಿಧವಾಗಿ ವಿಶ್ವಾಮಿತ್ರನು ದಶರಥನಲ್ಲಿ ತನ್ನ ಮನವಿಯನ್ನು ಸಲ್ಲಿಸಿದ.

೧೧. ವಸಿಷ್ಠರ ಅಪ್ಪಣೆಯಂತೆ ವಿಶ್ವಾಮಿತ್ರರೊಡನೆ ದಶರಥನು ಮಕ್ಕಳನ್ನು ಕಳಿಸಿದುದು

ಪಾರ್ವತಿಯೇ ಕೇಳು, ವಿಶ್ವಾಮಿತ್ರನ ಆ ನಿಷ್ಠುರವಾಕ್ಯಗಳನ್ನು ಕೇಳಿ ನೃಪವರ್ಯನ ಮುಖವು ಹಿಮ ಸುರಿದ ನೀರಜದಂತಾಯಿತು. 'ಮಾಧವ ಅಚ್ಯುತ ಕೃಷ್ಣ' ಎಂದು ಹಲುಬುತ್ತ ಕೆಲ ಕಾಲ ಮಾತುಗಳನ್ನಾಡದೇ ಕುಳಿತನು; ಆನಂತರ ಸಾವರಿಸಿಕೊಂಡು ಮೃದುಸ್ವರದಿಂದ ಕೂಡಿ ಭಕ್ತಿಭಾವದಿಂದ ಆ ಋಷಿವರ್ಯನಿಗೆ, "ಇನ್ನೂ ಹಸುಳೆಯಾದ ರಾಮನು ದಾನವರನ್ನು ಹೇಗೆ ತಾನೇ ಗೆಲ್ಲಬಲ್ಲ? ನನ್ನ ಬಳಿ ಅಪರಿಮಿತವಾದ ಶೂರಸೈನ್ಯವಿದೆ, ಚತುರಂಗ ಬಲವಿದೆ, ಅವರೆಲ್ಲರೂ ತಮ್ಮ ಜೊತೆಗೆ ಬರುತ್ತಾರೆ, ದುರ್ಮಾರ್ಗಿಗಳನ್ನು ನಾಶಮಾಡುತ್ತಾರೆ, ತಾವು ಯಾಗವನ್ನು ಸಾಂಗವಾಗಿ ನೆರವೇರಿಸಬಹುದು. ಇದು ತಮಗೆ ಇಷ್ಟವಿಲ್ಲದಿದ್ದರೆ ಸ್ವತಃ ನಾನೇ ಬಿಲ್ಲುಬಾಣಗಳನ್ನು ಹಿಡಿದು ತಮ್ಮೊಡನೆ ಬರುತ್ತೇನೆ, ರಾಕ್ಷಸರನ್ನು ಸಮರಮುಖದಲ್ಲಿ ಎದುರಿಸಿ ತಮಗೆ ಒಪ್ಪಿಸುತ್ತೇನೆ, ಕಷ್ಟ ನಿವಾರಣೆಯಾಗಿ ತಾವು ಯಜ್ಞವನ್ನು ಮುಗಿಸಬಹುದು. ದಯವಿಟ್ಟು ತಾವು ಇದಕ್ಕೆ ಒಪ್ಪಬೇಕು. ಶ್ರೀರಾಮನು ಮಕ್ಕಳಲ್ಲಿ ನನ್ನ ಪ್ರಾಣವಾಗಿದ್ದಾನೆ, ಕೃಪಾಕಟಾಕ್ಷದಿಂದ ಇದನ್ನೊಪ್ಪಿ ನನ್ನ ಸೇವೆಯನ್ನು ಸ್ವೀಕರಿಸಬೇಕು. ರಾಕ್ಷಸರು ಕಪಟಯೋಧರು, ತಾಟೋಟುಗಾರರು, ಅವರ ಕಪಟವನ್ನು ಮುಗ್ಧನಾದ ರಾಮ ಎಂತು ಅರಿತಾನು, ಅವನಿಗೆ ಗಾಢವಾದ ಈ ಶಸ್ತ್ರಾಸ್ತ್ರಗಳ ಪರಿಚಯ ಇನ್ನೂ ಆಗಿಲ್ಲ. ಆದ್ದರಿಂದ ನಾನು ಅಸಂಖ್ಯವಾದ ಬೆಟ್ಟದಂತಹ ಆನೆಗಳು ಕುದುರೆ ರಥ ಪದಾತಿಗಳ ಸಂದೋಹವನ್ನು ತಮ್ಮೊಡನೆ ಕಳಿಸುತ್ತೇನೆ, ರಾಮನನ್ನು ಮಾತ್ರ ಕಳಿಸಲಾರೆ. ರಾಮನನ್ನು ಬಿಟ್ಟು ನಾನು ಬದುಕಿರಲಾರೆ. ರಾಮನು ಬರಲೇಬೇಕೆಂದರೆ ನಾನೂ ಜೊತೆಗೆ ಬರುತ್ತೇನೆ, ಬೇಗನೇ ರಕ್ಕಸರನ್ನು ತರಿದು ತಮ್ಮ ಯಾಗರಕ್ಷಣೆ ಮಾಡಿ ನಮ್ಮ ನಗರಿಗೆ

ವಾಪಸಾಗುತ್ತೇನೆ. ನನಗೆ ಅರುವತ್ತುಸಾವಿರ ವರ್ಷಗಳಾದ ಬಳಿಕ ಮಕ್ಕಳು ಜನ್ಮಿಸಿದ್ದಾರೆ, ನಾಲ್ಕೂ ಮಕ್ಕಳಲ್ಲಿ ನನಗೆ ಶ್ರೀರಾಮನು ಅತ್ಯಂತ ಪ್ರೀತಿಪಾತ್ರ, ನನ್ನ ಜೀವಾಧಾರ, ನಾನು ಇವನನ್ನು ಬಿಟ್ಟಿರಲಾರೆ. ತಮ್ಮ ಮಾತನ್ನು ನೆರವೇರಿಸಲಾರೆ. ನನ್ನ ಮೇಲೆ ಕೃಪೆಯಿಟ್ಟು ಕಾಪಾಡಿ" ಎಂದು ಪರಿಪರಿಯಾಗಿ ಬಿನ್ನಪಗೈದು ಮತ್ತೆ ಹೀಗೆಂದ: "ದಾನವಸಮೂಹವನ್ನು ಯುದ್ಧದಲ್ಲಿ ತರಿದು ನಾನು ಇಂದ್ರನಿಗೆ ಆಧಿಪತ್ಯವನ್ನು ಸಂರಕ್ಷಿಸಿಕೊಟ್ಟ ಪರಿಯು ತಮ್ಮ ಪಾದಕ್ಕೆ ತಿಳಿದಿಲ್ಲವೇ? ಅದರಿಂದ ನಾನೇ ಬಂದು ದಾನವರನ್ನು ಹನನಗೈದು ಸಾಧುಸಮಾಜವನ್ನು ರಕ್ಷಿಸುವ ಹೊಣೆ ನನ್ನದು" ಎಂದು ಸೂರ್ಯವಂಶಜಲಲಾಮನು ಬಿನ್ನಹ ಮಾಡಿದ. ಆಗ ವಿಶ್ವಾಮಿತ್ರನು ಈ ರೀತಿ ನುಡಿದ: "ಬ್ರಹ್ಮಮಾನಸಪುತ್ರನಾದ ಪುಲಸ್ತ್ಯಮುನಿಯ ಮೊಮ್ಮಗ ವಿಶ್ರವಸನ ಮಗನಾದ ರಾವಣನು ತನ್ನ ತಪಸ್ಸಿನಿಂದ ನಾಲ್ಮೊಗನನ್ನು ಮೆಚ್ಚಿಸಿ ಅಮಿತಬಲವನ್ನು ಸಂಪಾದಿಸಿದ್ದಾನೆ, ತನಗೆ ಹಿತಕರರಾದ ಸುಬಾಹು ಮಾರೀಚರನ್ನು ಮುನಿಗಳಿಗೆ ತೊಂದರೆ ಕೊಡಲು ಅಟ್ಟಿದ್ದಾನೆ, ಅವರು ಸತ್ಕರ್ಮನಿರತರನ್ನು ಬಾಧಿಸುತ್ತಿದ್ದಾರೆ, ಅದರಿಂದಾಗುತ್ತಿರುವ ದಾರುಣವನ್ನು ಏನೆಂದು ಹೇಳುವುದು! ಅವರು ಸುಂದೋಪಸುಂದರರ ಮಕ್ಕಳು, ಇವರು ಕೆರಳಿದರೆ ಇಂದ್ರನೇ ಮುಂತಾದ ಅಖಿಲ ದಿಕ್ಪಾಲಕರನ್ನೂ ಮೀರಿಸುತ್ತಾರೆ. ಇಂಥವರು ಗೋವಿಪ್ರಸದ್ಧರ್ಮಗಳನ್ನು ನೆಮ್ಮದಿಯಿಂದ ಇರಗೊಡದೆ ಓಡಾಡುತ್ತಿದ್ದಾರೆ. ಇವರಿಗೆ ಮೂರು ಲೋಕಗಳು ಬೆದರುತ್ತಿವೆ. ಅವರ ಗರ್ಜನೆಗಳನ್ನು ಏನೆಂದು ಹೇಳುವುದು? ನೀನು ಬಂದು ಅವರ ಮುಂದೆ ಏನು ತಾನೇ ಮಾಡೀಯೇ? ದೇವತೆಗಳೂ ಯಕ್ಷರೂ ಅವರೊಡನೆ ಯುದ್ಧರಂಗದಲ್ಲಿ ನಿಲ್ಲಲಾರದೆ ಓಡಿ ಹತಾಶರಾಗಿದ್ದಾರೆ" ಎಂದು ಕೌಶಿಕ ಮುನಿಯು ಹೇಳಲು, ಅವರ ಮಾತನ್ನು ಕೇಳಿ ಕಕುತ್ಸ್ಥವಂಶಜನು ಚಿಂತೆಯನ್ನು ತಾಳಿ ಮುನಿಪನೊಡನೆ, "ಬ್ರಹ್ಮನಿತ್ತ ವರದಿಂದ ಆ ದೈತ್ಯರು ಈ ಪರಿಯಲ್ಲಿ ಅಭ್ಯುದಯವನ್ನು ಹೊಂದುತ್ತಿರಬೇಕಾದರೆ ಅವರನ್ನು ಸದೆಬಡಿಯಲು ಯಾರು ತಾನೇ ಸಮರ್ಥರು? ನನ್ನಿಂದಾಗಲೀ ಸೈನ್ಯದಿಂದಾಗಲೀ ಏನು ಪ್ರಯೋಜನವಾದೀತು? ನಿಶಾಚರರೊಡನೆ ಮಾಡುವ ಯುದ್ಧದಲ್ಲಿ ಗೆದ್ದು ಬಾಳುವವರು ಮೂರು ಲೋಕಗಳಲ್ಲಿ ಯಾರಿದ್ದಾರೆ? ಅಂತಹುದರಲ್ಲಿ ಬಾಲಕನಾದ ರಾಮನು ಅವರನ್ನು ಹೇಗೆ ತಾನೇ ಗೆಲ್ಲಬಲ್ಲ? ತಾಪಸವರೇಣ್ಯರಾದ ತಾವಲ್ಲದೆ ಗತಿಹೀನರಿಗೆ ಬೇರೆ ಗತಿ ಯಾವುದುಂಟು? ಅರವತ್ತು ಸಾವಿರ ವರ್ಷದ ನಾನು ಅನೇಕ ವ್ರತಗಳನ್ನು ಮಾಡಿ ಕುಲವರ್ಧನರಾದ ಮಕ್ಕಳನ್ನು ಪಡೆದಿದ್ದೇನೆ. ತಾಪಸಕುಲತಿಲಕರೇ, ತಾವು ನನ್ನ ವಂಶವನ್ನು ಕಾಪಾಡಬೇಕು, ನಾನು ತಮ್ಮ ಕರುಣಭಿಕ್ಷೆಯನ್ನು ಬೇಡುತ್ತಿದ್ದೇನೆ, ಜಲಜಾಪ್ತನ ಸಂತಾನವು ಈ ಲೋಕದಲ್ಲಿ ಉಳಿದು ಬಾಳುವ ಹಾಗೆ ಆಶೀರ್ವದಿಸಬೇಕು" ಎಂದು ನೃಪಮೌಳಿಯು ಮನಕಲಕುವ ದೈನ್ಯಾತಿಶಯದಿಂದ ಕೇಳಿಕೊಳ್ಳಲು ಆ ತಾಪಸವರ್ಯನ ಕೋಪಶಿಖಿಯು ಭುಗಿಲೆದ್ದಿತು.

ವಿಶ್ವಾಮಿತ್ರನ ಕೋಪ ತಾರಕಕ್ಕೇರಲು ಕಣ್ಣುಗಳು ಕೆಂದಾವರೆಯ ಜೋಡಿಯಂತೆ ಕೆಂಪೇರಿದವು, ಮೀಸೆಗಳು ಕುಣಿದವು, ರಾಜನ ಮುಖವನ್ನು ದಿಟ್ಟಿಸುತ್ತ ಶಮಧನನಾದ ಋಷಿಯು, "ಈ ರೀತಿ ನೀನು ದೈನ್ಯವನ್ನೇಕೆ ತೋರಿಸುವೆ. ರಾಮನನ್ನು ನನ್ನೊಡನೆ ಕಳಿಸಲು

ಸಾಧ್ಯವಾದರೆ ಕಳಿಸಿಕೊಡು, ಇಲ್ಲದಿದ್ದರೆ ಬಿಡು, ನಾನು ಬಂದ ದಾರಿಗೆ ಸುಂಕವಿಲ್ಲದಂತೆ ವಾಪಸಾಗುತ್ತೇನೆ, ನೀನು ನಿನ್ನ ಕುಲಧರ್ಮವನ್ನು ಮರೆತು ಹಾಯಾಗಿರು" ಎಂದು ಕ್ರೂರ ವ್ಯಂಗ್ಯದಿಂದ ಹೇಳಿದ್ದನ್ನು ಕೇಳಿ ಸಮುದ್ರಪರ್ಯಂತವಾದ ಬೆಟ್ಟಗಳು ಅದುರಿದವು, ಜಲರಾಶಿಯು ಭೀತವಾಯಿತು, ಮೂಲೋಕವು ತಳ್ಳಂಕಗೊಂಡಿತು. ಪ್ರಸಂಗವು ಈ ಪರಿಯಾದುದನ್ನು ಕಂಡು ವಸಿಷ್ಠಮುನಿಯು ರಾಜನನ್ನು ಸಮಾಧಾನಪಡಿಸುತ್ತ, "ಈ ವಸುಧೆಯಲ್ಲಿ ಕಮಲಸಖವಂಶಜರು ಧರ್ಮಮೂರ್ಧನ್ಯರಲ್ಲವೇ? ಧರ್ಮೋದ್ಧಾರಕ್ಕೆಂದು ಯಜ್ಞದಲ್ಲಿ ತೊಡಗಿರುವ ಮುನಿವರ್ಯರನ್ನು ಸಂತುಷ್ಟಿಗೊಳಿಸದೆ ಸ್ವಧರ್ಮವನ್ನು ಮರೆತಿರುತ್ತಾರೆಯೇ? ಅವರನ್ನು ಅನುಸರಿಸಿ ಸೂರ್ಯವಂಶಜ ರಾಜರು ಈ ಪಟ್ಟಣದಲ್ಲಿ ಬಾಳಿದರು. ನೀನೂ ಇದುವರೆಗೆ ವಿಪ್ರಸಂತತಿಯನ್ನು ಪಾಲನೆಗೈದು ಯಶಸ್‌ಚಂದ್ರಿಕೆಗೆ ಪಾತ್ರನಾಗಿದ್ದೀಯೆ. ದೀರ್ಘಕಾಲ ಸಂಪಾದನೆ ಮಾಡಿದ ಸತ್ಕೀರ್ತಿಯನ್ನು ಉಳಿಸಿಕೊಳ್ಳುವಂತೆ ಬಾಳುವುದು ಉಚಿತವಲ್ಲವೇ? ನೀನೇನಾದರೂ ಈ ಮುನಿವರ್ಯನೊಡನೆ ರಾಮನನ್ನು ಕಳಿಸದಿದ್ದರೆ ನಿನ್ನನ್ನು ಅಪಕೀರ್ತಿ ಆವರಿಸುತ್ತದೆ, ಋಷಿಯ ಕೋಪದ ಉಷ್ಣದಿಂದ ನಿನ್ನ ಸಿರಿಬಲಗಳಿಗೆ ಊನವಾಗುತ್ತದೆ, ಇದು ನಿಶ್ಚಯ. ತನ್ನ ಅಕ್ಷಯ ತಪೋಬಲದಿಂದ ಇಡೀ ರಕ್ಕಸಕುಲವನ್ನು ಶಿಕ್ಷಿಸಿ ತಾನು ಮಾಡುವ ಮಹಾಧ್ವರವನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನು ಈ ಋಷಿ ಪಡೆದಿದ್ದಾರೆ. ಆದರೆ ಆತನು ನಿನ್ನ ಬಗ್ಗೆ ಅತ್ಯಂತ ಪ್ರೀತಿಯನ್ನಿಟ್ಟು ನಿನ್ನನ್ನು ರಾಜರ ಸಮೂಹದಲ್ಲಿ ಮೆರೆಸುವ ಉದ್ದೇಶದಿಂದ ನಿನ್ನ ಮೇಲೆ ಕೃಪಾಕಟಾಕ್ಷವನ್ನು ಬೀರಿ ಬಂದಿದ್ದಾರೆ. ಇದನ್ನು ಅರ್ಥಮಾಡಿಕೊಂಡು ನಿನ್ನ ಮಗನನ್ನು ಇವರ ಜೊತೆ ಕಳಿಸಿ ಕೃತಕೃತ್ಯನಾಗು. ಈ ಸನ್ನಿವೇಶದಲ್ಲಿ ನಿನಗೆ ಒಂದು ಪರಮ ಗೋಪ್ಯವನ್ನುಸುರುತ್ತೇನೆ, ಕೇಳು" ಎಂದು ಅರುಂಧತಿಯರಸ ವಸಿಷ್ಠನು ದಶರಥನಿಗೆ ಏಕಾಂತದಲ್ಲಿ, "ಈ ಮೊದಲು ಭೂಮಿಯ ಭಾರವನ್ನಿಳಿಸಬೇಕೆಂದು ದೇವೇಂದ್ರ ಬ್ರಹ್ಮ ಮುಂತಾದವರು ಪ್ರಾರ್ಥನೆ ಮಾಡಿಕೊಳ್ಳಲು ಶ್ರೀ ಮಹಾವಿಷ್ಣುವು ಅವರ ಮೇಲೆ ಕರುಣಾಕಟಾಕ್ಷವನ್ನು ಬೀರಿ ಮುದದಿಂದ ನಿನ್ನುದರದಲ್ಲಿ ಮಗನಾಗಿ ಅವತಾರ ಮಾಡಿದ್ದಾನೆ. ಹೀಗಾಗಿ ರಾಮನನ್ನು ಕೇವಲ ನಿನ್ನ ಮಗನೆಂದು ಭಾವಿಸಬೇಡ. ನೀನು ಮತ್ತು ಕೌಸಲ್ಯೆಯು ಹಿರಿಯ ತಪಸ್ಸನ್ನು ಆಚರಿಸುವ ಮೊದಲೇ ಅದಿತಿಕಶ್ಯಪರು ಮಾಡಿದ ತಪಸ್ಸಿಗೆ ಮೆಚ್ಚಿದ ಶರಧಿಶಯನನು ಬೇಕಾದ ವರವ ಕೇಳಿ ಎನ್ನಲು, 'ಸರ್ವದನೇ, ನೀನು ಮನುಜರೂಪಿನಿಂದ ನಮ್ಮ ಗರ್ಭದಲ್ಲಿ ಜನಿಸುವ ಕೃಪೆ ತೋರಬೇಕು' ಎಂದು ಕೇಳಿದರು, ಅದಕ್ಕೆ ಒಪ್ಪಿಗೆಯಿತ್ತ, ಮತ್ತು ಈ ವಿಷಯವನ್ನು ಯಾರಲ್ಲಿಯೂ ಹೇಳಬಾರದೆಂದು ಸೂಚಿಸಿದ. ಆ ಕಾರಣದಿಂದಾಗಿ ವಿಷ್ಣು ಮತ್ತವನ ಶೇಷ ಶಂಖ ಚಕ್ರಗಳು ನಿನ್ನ ಮಕ್ಕಳಾಗಿ ಉದಿಸಲು ಕಾರಣವಾಯಿತು; ಈ ರೀತಿ ತನ್ನ ಮಾತನ್ನು ಅಬ್ಜಾಕ್ಷನು ಪಾಲಿಸಿದ. ಹೀಗಾಗಿ ರಾಮನನ್ನು ನಿನ್ನ ಮಗ ಮಾತ್ರ ಎಂದು ಭಾವಿಸದೆ ಮುನಿಯೊಡನೆ ಕಳಿಸಿಕೊಡು" ಎಂದು ಹೇಳಿದರು.

ವಸಿಷ್ಠ ಮಹರ್ಷಿಗಳ ಮಾತನ್ನು ಕೇಳಿದ ದಶರಥನ ಮನಸ್ಸಿನಲ್ಲಿನ ಚಿಂತೆಯು – ತಾವರೆಗೆಳೆಯನು ಉದಿಸಿದಾಗ ಚಳಿಯು ಮಸುಳಿಸುವಂತೆ – ಇಲ್ಲವಾಗಿ ಉಲ್ಲಾಸ ನೆಲಸಿತು. ತನ್ನ ಸಕಲಾರ್ಥವೂ ಸಿದ್ಧಿಸಿದಂತೆ ಮುನಿವರ್ಯರೊಡನೆ ತನ್ನ ಮಗನನ್ನು

ಕಳಿಸಿಕೊಡಲು ನಿರ್ಧರಿಸಿದ. ತನ್ನ ನಿರ್ಣಯವನ್ನು ತಿಳಿಸಿದಾಗ ನೆರೆದ ಪ್ರಾಜ್ಞರೆಲ್ಲರೂ ಸಂತಸಗೊಂಡರು. ಮೂರುಲೋಕಗಳನ್ನೂ ಪೊರೆಯುವ ಮಹಾ ವಿಷ್ಣುವೇ ತನ್ನ ಮಗನೆಂಬ ಮೋಹದಿಂದ, "ಬಾರೆನ್ನ ತಂದೆ, ಬಾ" ಎನ್ನುತ್ತ ಮಗನನ್ನು ಸನಿಹಕ್ಕೆ ಕರೆದು ಮುಂಡಾಡಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, "ಮುನಿವರನು ಕೈಗೊಂಡಿರುವ ಉದಾರಯಾಗವನ್ನು ಸಂರಕ್ಷಿಸಿ ಬಾ" ಎಂದು ಮೃದುವಚನಗಳಿಂದ ತಿಳಿಸಿದಾಗ ಶ್ರೀರಾಮನು ತಂದೆಯ ಅನುಜ್ಞೆಯನ್ನು ತನ್ನ ತಲೆಯಲ್ಲಿ ಧರಿಸಿದ. ಅಂಬುಜಾಪ್ತನ ವಂಶಶಿಖಾಮಣಿಯು ಕೌಶಿಕನ ಪದಾಂಬುಜಗಳಿಗೆ ಭಕ್ತಿಯಿಂದ ನಮಿಸಿ ತನ್ನ ಮಗನ ಕೈಗಳನ್ನು ಆತನ ಕೈಗಳಲ್ಲಿರಿಸಿ, ವಂದಿಸಲು ಮುನೀಶನು ಹರುಷವನ್ನು ತಳೆದ. ಆ ಹೊತ್ತಿಗೆ ತಂಬೆಲರನ್ನು ಸೂಸುತ್ತ ಕತ್ತಲೆಯನ್ನು ಹೋಗಲಾಡಿಸುತ್ತ ಮೇಲೇಳುವ ಚಂದ್ರನ ಬಿಂಬವು ಪ್ರಸನ್ನತೆಯನ್ನು ಹರಡಲು, ನೆರೆದ ಸಜ್ಜನ ಪರಿವಾರವೆಲ್ಲ ಸಂತಸ ತಾಳಿ ಹೊಗಳತೊಡಗಿದಾಗ ಆ ಮುನಿವರ್ಯನು ವಿನಯದಿಂದ ಈ ರೀತಿ ನುಡಿದರು: "ಸೂರ್ಯವಂಶಲಲಾಮನೇ ನೀನು ಸಕಲಾಗಮಜ್ಞನಲ್ಲವೇ? ತನ್ನ ಮನೆಗೆ ಬಂದ ದ್ವಿಜೋತ್ತಮರನ್ನು ಸಂಪೂರ್ಣವಾಗಿ ತೃಪ್ತಿಗೊಳಿಸಿ ಕಳುಹಿಸಿದರೆ ದೇವತೆಗಳೂ ಪಿತೃಪಿತಾಮಹಾದಿಗಳೂ ಸಂತುಷ್ಟರಾಗುತ್ತಾರೆ ಎಂಬುದು ಆಗಮಪ್ರಣೀತವಾದುದು. ಕುಲಶೀಲಗಳನ್ನು ಹೊಂದಿರುವ ಎಲ್ಲ ರಾಜರುಗಳಿಂದ ಗೌರವಕ್ಕೊಳಗಾದ ಜಲಜಾಪ್ತಮಿತ್ರಗೋತ್ರಪವಿತ್ರನಾದ ಸಚ್ಚಾರಿತ್ರನಾದ ದಶರಥನೇ, ಹೀಗೆ ನಡೆದುಕೊಳ್ಳುವುದು ಎಲ್ಲ ರಾಜರುಗಳಿಗೂ ಸುಲಭಸಾಧ್ಯವಲ್ಲ."

ಹೀಗೆ ಗಾಧಿನಂದನನ ವಶಕ್ಕೆ ಒಪ್ಪಿಸಿ ತನ್ನ ಕುವರ ರಾಮನನ್ನು ನಿಟ್ಟಿಸಲು ಮುಕ್ಕಣ್ಣನಿಗೇ ಅಸದಳವೆನ್ನಲು ಇನ್ನು ದೈತ್ಯರು ಏನು ತಾನೇ ಮಾಡಬಲ್ಲರು, ಪ್ರಖರವಾದ ಸೂರ್ಯಕಿರಣಗಳನ್ನು ಮಿಣುಕುಹುಳುಗಳು ಏನು ಮಾಡಬಲ್ಲವು? ಮಗನೆಂಬ ಮಮತೆಯನ್ನು ಬಿಟ್ಟು ಯತಿವರ್ಯನ ಸಂಗಡಿಗನೆಂದು ಭಾವಿಸಿ ನೋಡಿದಾಗ ದಶರಥನಿಗೆ ಚಿತ್ತ ಪರಿತಾಪವೆಲ್ಲವೂ ಶಾಂತಗೊಂಡು ಅತುಲಾನಂದದಿಂದ ಮಗನ ಸಹಿತ ಹೊರಡಲು ಮುನಿಗೆ ಅಪ್ಪಣೆಯಿತ್ತನು. ಪರಮಋಷಿಗಳೂ ಮಂತ್ರಿವರ್ಯರೂ ಪಯಣ ಸುಖಕರವಾಗಲೆಂದು ಹಾರೈಸಲು ಬಾಲಕರನ್ನೊಳಗೊಂಡು ವಿಶ್ವಾಮಿತ್ರನು ಅಯೋಧ್ಯಾನಗರದಿಂದ ಹೊರಟ. ಬಿಲ್ಲುಬಾಣಗಳನ್ನು ಹಿಡಿದ ಮೂಲೋಕಪ್ರಿಯನು ಮುನಿವರ್ಯನೊಡನೆ ನಡೆದು ಬರಲು ಪೌರಸಮುದಾಯವು ಅವರ ಎಡಬಲಗಳಲ್ಲಿ ನಡೆಯುತ್ತ ಸ್ತುತಿಸಲು ದೇವತಾಸಂತತಿಯು ಹೂಮಳೆಗರೆಯಿತು. ರಾಜೀವಾಕ್ಷ ರಾಮನ ಜೊತೆಗೆ ಅವನ ಬಗೆಗಿನ ಭಕ್ತಿಯಿಂದ ಕಂಗೊಳಿಸುವ ಲಕ್ಷ್ಮಣನೂ ಬರಲು ಹಟಹಿಡಿಯಲು ವಿಶ್ವಾಮಿತ್ರನು ಮತ್ತಷ್ಟು ಹಿಗ್ಗಿದ. ಬಿಲ್ಲುಬಾಣಗಳನ್ನು ಕೈಯಲ್ಲಿ ಹಿಡಿದವರೂ, ಮಿರುಗುವ ಕತ್ತಿಧಾರಿಗಳೂ, ಬಾಲಸೂರ್ಯನಂತೆ ಪರಾಕ್ರಮಿಗಳೂ ಸೂರ್ಯವಂಶೋದ್ಧಾರಕರೂ ಆದ ರಾಮಲಕ್ಷ್ಮಣರಿಂದ ಒಡಗೂಡಿ ಪರಮ ಋಷಿಯು ಮೂರು ಹೆಡೆಗಳ ಹಾವಿನಂತೆಯೂ, ಬ್ರಹ್ಮನೊಡನೆ ಬರುವ ಅಶ್ವಿನೀದೇವತೆಗಳಂತೆಯೂ ಮುನ್ನಡೆದ. ಮದಗಜಗಳಂತೆ ಎತ್ತರವಾಗಿ ಹರಿದು ಬರುವ ತೆರೆಗಳ ಜೊತೆಯಲ್ಲಿ

ಆಟವಾಡುವ ಕಾರಂಡ ಹಂಸೆಗಳ ನಿಃಸ್ವನವನ್ನೂ, ಅರಳಿದ ಕಮಲಷಂಡಗಳ ಚೆಲುವನ್ನು ಅರಳುಗಣ್ಣುಗಳಿಂದ ನೋಡಿ ಮಂದಹಾಸ ಬೀರುವ ಚೆಲುವೆಯರಿಂದ ವಿರಾಜಿಸುವ ಸರಯೂನದಿಯನ್ನು ಹುಡುಗರ ಜೊತೆಗೆ ವಿಶ್ವಾಮಿತ್ರನು ದಾಟಿದ. ಮರೆತಾದರೂ ಸರಿಯೆ ಸ್ಮರಿಸಿಕೊಂಡರೆ ಸಾಕು ಭವಸಾಗರವನ್ನು ದಾಟಿಸಿ ಅನುಪಮ ಸುಖವನ್ನು ದಯಪಾಲಿಸುವ ಸತ್ಯಾನಂದ ಸುರಮೂರ್ತಿಯಾದ ರಾಮನು ತನ್ನೊಡನೆ ಬರುತ್ತಿರಬೇಕಾದರೆ ನದಿಯನ್ನು ದಾಟುವುದೇನು ಕೌಶಿಕ ಮಹಾಋಷಿಗೆ ಕಷ್ಟವಾದೀತೇ? ಕಲ್ಪವೃಕ್ಷವೇ ತನ್ನ ಅಧೀನದಲ್ಲಿರಬೇಕಾದರೆ ಬಯಸಿದ ಐಸಿರಿ ಕೈಸೇರದಿರುತ್ತದೆಯೇ? ಅಂತೆಯೇ ತನ್ನ ವಶದಲ್ಲಿರುವಂತೆ ಕಾಣುವ ಶ್ರೀ ರಾಮಚಂದ್ರಮೂರ್ತಿಯು ತನ್ನ ಸಂಗಡವಿರಬೇಕಾದರೆ ಶ್ರೇಯಸ್ಸು ಸುಖಗಳಿಗೆ ಬರವೇ? ಎಂದು ದೇವತಾವೃಂದವು ಆನಂದದಿಂದ ಸ್ತುತಿಗೈಯುತ್ತಿತ್ತು.

ಕೌಶಿಕನು ಸರಯೂನದಿಯನ್ನು ದಾಟಿದ ಬಳಿಕ ಅರ್ಧ ಯೋಜನದಲ್ಲಿ ಬಾಲಕರನ್ನು ಉಪಚರಿಸುತ್ತ ನಿಂತು ಎಡಬಲಗಳತ್ತ ಕಣ್ಣು ಹಾಯಿಸುತ್ತಿರಲು ದೇವೇಂದ್ರನು ಮುನಿಪನೊಡನೆ, "ತಂದೆಯೇ, ರಾಜಕುಮಾರನನ್ನು ಯಾಗರಕ್ಷಣೆಗೆ ಕರೆತರುವ ನಿನ್ನ ಅಭಿಲಾಷೆ ಸಂದಿತು. ಆದರೆ ಮೊದಲಲ್ಲಿ ಭೃಶಾಶ್ವನಿಂದ ನೀನು ಕಲಿತ ಅದ್ಭುತವಾದ ಶಸ್ತ್ರಾಸ್ತ್ರವಿದ್ಯೆಯನ್ನು ರಾಮನ ಅಭ್ಯುದಯಕ್ಕಾಗಿ ಬೇಗನೆ ಕಲಿಸಬೇಕು" ಎಂದು ಹೇಳಲು ಮುನಿಯು ಹಾಗೆ ಮಾಡಲು ಇದೇ ಸರಿಯಾದ ಸಮಯವೆಂದು ಬಗೆದು ತನ್ನ ಮೃದುವಾಣಿಯಿಂದ 'ಬ್ರಹ್ಮನ ತಂದೆಯೇ, ರಘುವಂಶಸಂಜಾತನೇ, ಸತ್ಕೌಶಲಿಯೇ' ಎಂದು ಕರೆದು ಪ್ರೀತಿಯಿಂದ ತನ್ನಲ್ಲಿರುವ ಉಭಯವಿದ್ಯೆಗಳನ್ನು ರಾಮನಿಗೆ ಉಪದೇಶಿಸತೊಡಗಿದ. ಅವಕ್ಕೆ ಬಲ ಮತ್ತು ಅತಿಬಲ ಎಂಬುದು ಹೆಸರುಗಳು; ಮೊದಲನೆಯದು ಪರಾಕ್ರಮಿಯಾದ ಶತ್ರುವನ್ನು ನಿಗ್ರಹಿಸುವ ದಿವ್ಯಕಾಂತಿ, ಎರಡನೆಯದು ಹಸಿವು ನೀರಡಿಕೆಗಳನ್ನು ಪರಿಹರಿಸುವಂಥದು. ಇವನ್ನು ಜಪಿಸಿದರೆ ಅತುಲಬಲವೂ ವೈಭವ ಸತ್ಕೀರ್ತಿಗಳೂ ಲಭಿಸುತ್ತವೆ ಎಂದು ಅವುಗಳ ಮಹಿಮೆಯನ್ನು ತಿಳಿಯಪಡಿಸಿ, ಕೈಕಾಲುಗಳನ್ನು ತೊಳೆದುಕೊಂಡು ಕಲುಷಹರವಾದ ಹಾಗೂ ಸತ್ಕೀರ್ತಿಕರವಾದ ಉಭಯಮಂತ್ರಗಳನ್ನೂ ಕಲಿತರೆ ನೀನು ಮೂರು ಲೋಕಗಳಿಗೂ ಒಡೆಯನಾಗುತ್ತೀಯೆ ಎಂದು ಮುನಿವರ್ಯನು ಹೇಳಲು ಆ ಮಾತುಗಳನ್ನು ಕೇಳಿದ ದಾಶರಥಿಯು ಹರುಷದಿಂದ ಮುನಿಯು ಹೇಳಿದಂತೆ ಮಂತ್ರಗಳನ್ನು ಬೇಗ ಕಲಿತು ಆ ತಪೋಧನನಿಗೆ ತಮ್ಮ ಲಕ್ಷ್ಮಣನೊಡನೆ ಗುರುಪೂಜೆಯನ್ನು ಮಾಡಿ ಆರತಿಯನ್ನು ಬೆಳಗಿದ. "ವಿಶ್ವಾಮಿತ್ರನಿಂದ ವಿದ್ಯೆಯನ್ನು ಹರುಷದಿಂದ ಕಲಿತು ಶ್ರೀರಾಮನು ಶುಶ್ರೂಷೆಯನ್ನು ಮಾಡಿದನೆಂಬುದು ಸರಿಯೇ? ಏಕೆಂದರೆ ಲಕ್ಷ್ಮಿಯ ಒಡೆಯನಾದ ವಿಷ್ಣುವೆಲ್ಲಿ, ಈ ವಿಪ್ರ ಎಲ್ಲಿ, ಆದರೆ ಈ ಭೂತಲದಲ್ಲಿ ಇಂತಹ ಚೋದ್ಯವು ನಡೆಯಿತಲ್ಲ!" ಎಂದು ಗಿರಿರಾಜತನುಜೆಗೆ ಆ ಫಾಲಲೋಚನನು ತಿಳಿಸಿ ಮುಂದಿನ ಕತೆಯನ್ನು ನಿರೂಪಿಸತೊಡಗಿದ.

ಮುನಿಚಂದ್ರನಾದ ವಿಶ್ವಾಮಿತ್ರನು ಶಶಿಸೂರ್ಯನೇತ್ರನನ್ನು ಕುರಿತು ನೈಮಿಷಾರಣ್ಯದಲ್ಲಿ ಹತ್ತು ಸಾವಿರ ವರ್ಷಗಳ ನಿಡುಗಾಲ ತಪಸ್ಸು ಮಾಡಿದ; ತಾಮರಸಲೋಚನನು ಅವನ

ತಪಸ್ಸಿಗೆ ಮೆಚ್ಚಿ ತನ್ನ ಪರಿವಾರಸಮೇತ ಪ್ರತ್ಯಕ್ಷನಾಗಿ ಕರುಣೆಯಿಂದ ಅವನನ್ನು ಸಾಂತ್ವನಗೈದು ಅವರ ಆಸೆಯೇನೆಂದು ಕೇಳಿದರೆ ಅದನ್ನು ಈವೆನೆಂದು ನುಡಿದ. ಆಗ ಆ ಮೌನಿಯು, "ನನ್ನ ತಪಸ್ಸಿನಿಂದ ನೀನು ಸುಪ್ರೀತನಾದರೂ, ನನ್ನ ಆಸೆಯನ್ನು ತೀರಿಸುತ್ತೇನೆ ಎಂದು ಆಶ್ವಾಸನೆಯಿತ್ತರೂ, ನೀನು ಕಪಟನಾಟಕಸೂತ್ರಧಾರಿಯಲ್ಲವೇ! ನೀನು ನನ್ನ ತನುಜಾತನಾಗಿ ಉದಯಿಸಬೇಕು" ಎಂದು ಕೇಳಲಾಗಿ, "ವಿಪ್ರಕುಲತಿಲಕನೇ ನನ್ನ ಮಾತನ್ನು ಕಪಟವೆಂದು ಭಾವಿಸದಿರು, ಅದು ಸತ್ಯ, ಭೂಭಾರಹರಣದ ಉದ್ದೇಶದಿಂದಲೂ ತಾಪಸಿಗಳನ್ನು ಪೊರೆಯುವ ಉದ್ದೇಶದಿಂದಲೂ ಮನುಷ್ಯಾವತಾರವನ್ನು ತಾಳು ಎಂದು ಹಿಂದೆ ಬ್ರಹ್ಮನೇ ಮುಂತಾದ ದೇವತೆಗಳೆಲ್ಲರೂ ನನ್ನನ್ನು ಪ್ರಾರ್ಥಿಸಿದಾಗ, ರಘೂತ್ತಮವಂಶಸಂಭವನಾಗಿ ನಿನ್ನಲ್ಲಿ ಬಿಲ್ವಿದ್ಯೆಯ ಸಾರವನ್ನೆಲ್ಲ ಕಲಿತು ನಿನ್ನ ಶಿಷ್ಯನಾಗಿದ್ದೆನಲ್ಲ. ಈ ಜಗತ್ತಿನಲ್ಲಿ ಮಗ ಮತ್ತು ಶಿಷ್ಯ ಇಬ್ಬರೂ ಸಮಾನವೆಂದು ಭಾವಿಸಲ್ಪಡುತ್ತಾರಲ್ಲವೇ" ಎಂದು ಕರುಣೆಯಿಂದ ನುಡಿದ. ಅದರಂತೆ, ಶರಣಜನತಾದಯಾಪರತೆಯಿಂದ ಮನುಷ್ಯಾಕೃತಿಯನ್ನು ಧರಿಸಿ ಹರಿಸುರರ ಸಖನಾದ ದಶರಥನ ಮಗನಾಗಿ ಹುಟ್ಟಿ, ಅವನು ಕರುಣೆಯಿಂದ ಸಲಹಲು ನಾನಾ ರೀತಿಯಿಂದ ಬಾಲಲೀಲೆಗಳನ್ನು ತೋರಿಸಿ ಸಂತಸಗೊಳಿಸಿ, ಮುನಿಗೂ ಪೂರ್ವದತ್ತ ವರವನ್ನು ಸಲ್ಲಿಸಿ ಆತನಿಂದ ಬಿಲ್ವಿದ್ಯೆಯ ಉಪದೇಶವನ್ನು ಕಲಿತು ಆತನ ಮನಸ್ಸಿನಲ್ಲಿಯೂ ಇವನು ತನ್ನ ಮಗನೇ ಎಂಬ ವಾತ್ಸಲ್ಯವನ್ನು ಹುಟ್ಟಿಸಿದ.

ಹೀಗೆ ಬಲ ಮತ್ತು ಅತಿಬಲ ಎಂಬ ವಿದ್ಯೆಗಳನ್ನು ಕಲಿತು ಸಹಸ್ರರಶ್ಮಿಯಂತೆ ವಿರಾಜಿಸುವ ರಾಮನು ಗಾಧಿನಂದನನ ಪಾದಕಮಲಗಳನ್ನು ಪೂಜಿಸಿ, ನಾನಾ ಪರಿಯಲ್ಲಿ ಮುನೀಂದ್ರನನ್ನು ಸ್ತುತಿಸುತ್ತ ಗುರುಕೃತ್ಯಗಳನ್ನೆಸಗಿ ಮತ್ತೆ ನಮಸ್ಕರಿಸಿದ. ಆಗ "ಕಮಲಸಂಕುಲವು ಕಣ್ಣುಗಳಂತೆ ಮುಚ್ಚಿಕೊಳ್ಳುತ್ತಿವೆ, ಕೈರವಗಳು ಕಣ್ದೆರೆದು ಹೊರಳುತ್ತಿವೆ, ಚಕ್ರವಾಕ ಪಕ್ಷಿಗಳು ವಿರಹದಿಂದ ತೊಳಲಾಡಲು ತೊಡಗಿವೆ, ಸೂರ್ಯಕಿರಣಗಳು ಕೆಂಪಾಗಿ ಪಶ್ಚಿಮದ ವಿಸ್ತಾರ ಮಾರ್ಗವನ್ನು ಸೇರಿ ನಲಿಯುತ್ತಿವೆ, ಹೀಗಾಗಿ ಇದು ನಿತ್ಯಕರ್ಮ ಗೈಯಲು ಸಕಾಲವಾಗಿದೆ" ಎಂದು ಮುನಿಶ್ರೇಷ್ಠನು ಸೂಚಿಸಿದಾಗ, ರಘುನಂದನನು ಹರ್ಷದಿಂದ ಸರಯೂನದಿಗೆ ಬಂದು ಕೈಕಾಲುಗಳನ್ನು ತೊಳೆದು, ಇಂದಿರಾವರನ ಪಾದಕಮಲಗಳನ್ನು ಧ್ಯಾನಿಸುತ್ತ ಬೊಗಸೆಯ ನೀರನ್ನು ನದಿಗೆ ಅರ್ಪಿಸಿ, ತನ್ನ ತಮ್ಮನೊಡನೆ ಗುರುವಾದ ಕೌಶಿಕನಿಗೆ ವಂದನೆಗೈದು ಸಂತಸದಿಂದಿದ್ದ. ರಾತ್ರಿ ಮಲಗುವಾಗ ವಿಶ್ವಾಮಿತ್ರರು ತನ್ನ ಶಿಷ್ಯರಿಗೆ ಮೃದುಮಾತುಗಳಿಂದ ವಿವಿಧ ಪ್ರಸಂಗಗಳನ್ನು ನಿರೂಪಿಸುತ್ತಿರಲು ಹುಲ್ಲುಹಾಸಿನ ಮೇಲೆ ಶ್ರೀ ರಾಮಪುರದರಸನು ತಮ್ಮನೊಡನೆ ಮಲಗಿದಾಗ, ರಾಮನೊಡನೆ ಮುನಿಯು ಸಂಭ್ರಮದೊಳಿರುವ ಸನ್ನಿವೇಶವನ್ನು ನೋಡುವೆನೆಂಬ ಉತ್ಸಾಹದಿಂದ ಸೋಮನು ಪ್ರೀತಿಯಿಂದ ಬಂದು ರಾಮನ ಮುಖಕೈರವವನ್ನು ಚುಂಬಿಸಿದ.

೧೨. ತಾಟಕೆಯ ಸಂಹಾರ – ಸಿದ್ಧಾಶ್ರಮ ಪ್ರವೇಶ

ಉಡುಪತಿಯು ಓಡಿಹೋಗಿ ತಂಗಾಳಿಯು ತೀಡುತ್ತಿರಲು, ದುಂಬಿಪಿಂಡುಗಳು ಭರದಿಂದ ಝೇಂಕರಿಸುತ್ತ ಸುತ್ತಾಡಲುತ್ತಿರಲು, ಚಕ್ರವಾಕಗಳು ನಲಿಯತೊಡಗಿದವು, ಮುದ್ದಾದ ಹಂಸಗಳು ಸಡಗರದಿಂದ ಕುಣಿದಾಡಿದವು, ಪಕ್ಷಿಗಣವು ಚಿಲಪಿಲ ಉಲಿಯುತ್ತಿರಲು, ಇಂದ್ರದೇವನ ಮೂಡಣ ದಿಕ್ಕಿನಲ್ಲಿ ಶಚೀದೇವಿಯ ಕುಚಾಗ್ರದಂತೆ ಕಾಣುತ್ತಿದ್ದ ಉತ್ತುಂಗ ಶೈಲದಲ್ಲಿ ನಿಧಾನವಾಗಿ ಮೈದೋರುತ್ತ ಪತಂಗನು ಮೇಲೇರಲು ಕುಶಿಕಾತ್ಮಜನಿಗೆ ನಿದ್ದೆ ತಿಳಿದು ಎಚ್ಚರಿಕೆಯಾಯಿತು. "ರವಿವಂಶಚಂದ್ರ ರಾಜೇಂದ್ರನೇ, ರಾಕ್ಷಸವಂಶಸಿಂಹನೇ, ವಿಪ್ರೇಂದ್ರನತ ಅಮರೇಂದ್ರವಂದಿತ, ಮೇಘಶ್ಯಾಮ ಶಿವಕರಸುನಾಮ ಶ್ರೀರಾಮನೇ, ಪೂರ್ವಸಂಧ್ಯೆಗೆ ಅನುವರ್ತಿಯಾಗಿ ಆಹ್ನಿಕ ತರ್ಪಣಗಳನ್ನು ಅರ್ಪಿಸಲು ಬೇಗ ಉಪ್ಪವಡಿಸು" ಎಂದು ಎಬ್ಬಿಸಿದಾಗ ಶ್ರೀರಾಮನು ನಿದ್ದೆ ತಿಳಿದು ಎದ್ದ. ಭೂಸುರೋತ್ತಮ ವಿಶ್ವಾಮಿತ್ರನ ಸೂಚನೆಯನ್ನನುಸರಿಸಿ ದಾಶರಥಿಗಳಾದ ರಾಮಲಕ್ಷ್ಮಣರು ಸ್ನಾನ ಮಾಡಿ ಬೇಗನೆ ಭಾಸಾಧಿಪನಿಗೆ ಅರ್ಘ್ಯವಿತ್ತು ಆಹ್ನಿಕಕ್ರಿಯೆಯನ್ನು ಪೂರೈಸಿ ಮನಸ್ಸಿನಲ್ಲಿ ಆನಂದವನ್ನು ತುಂಬಿಕೊಂಡು ಶ್ರೀಶನನ್ನು ನೆನೆಯುತ್ತ ಮುನಿಪತಿಯ ಚರಣಾರವಿಂದಗಳಿಗೆ ನಮಿಸಲು, ವಿಶ್ವಾಮಿತ್ರ ಋಷಿಯು ಮುಂದೆ ನಿಂತ ಅವರನ್ನು ಕಂಡು ಮುಂದೆ ಸಾಗಬೇಕಾದ ಹಾದಿಯ ಕುರಿತು ಯೋಚಿಸಿದರು.

ಮುನಿಪುಂಗವನು ನೃಪಕುಮಾರಕರ ಜೊತೆಗೂಡಿ ಸಾಗಬೇಕಾದ ದಾರಿಯಲ್ಲಿ ಸಾಗುತ್ತಿರಲು, ಸೂರ್ಯನ ಕಿರಣಗಳು ಬಿದ್ದು ಹೊಳೆಯುತ್ತಿದ್ದ ನೀರಿನಿಂದ ಕೂಡಿದ ಗಂಗೆ ಮತ್ತು ಸರಯೂನದಿಗಳ ಸಂಗಮವು ಕಣ್ಗೆಸೆಯಿತು. ಮುಂದೆ ಸಾಗಲು ಕಾಣಿಸಿದ ತಾಪಸಾಶ್ರಮವನ್ನು ಕಂಡು ಅಪರಿಮಿತಮಹಿಮನಾದ ರಘುವೀರನು, ಈ ಆಶ್ರಮವು ಯಾರದು, ಈ ನೆಲದಲ್ಲಿ ಯಾವ ಸಂಯಮಿಯು ತಪಗೈಯುತ್ತಿದ್ದನು, ಆ ಕತೆಯನ್ನು ವಿಸ್ತಾರವಾಗಿ ಹೇಳಬೇಕೆಂದು ಗುರುವನ್ನು ಕೇಳಿಕೊಂಡನು. ಅವನ ಮಾತನ್ನು ಕೇಳಿ ಎಳನಗೆ ನಗುತ್ತ, "ನೀಲಕಾಯ, ಮುನಿಜನಗೇಯ, ಜನನಾಥವರ್ಯ ಈ ಜಾಗದ ಪೂರ್ವಕತೆಯ ವ್ಯಥೆಯನ್ನು ಕೇಳು" ಎಂದು ಮುನಿಯು ಹೇಳತೊಡಗಿದರು. ಶುಕಶೌನಕಾದಿ ಮುನಿನಿಕರದಿಂದ ಸೇವಿತನಾದವನೂ ದೇವೇಂದ್ರಾದಿ ತ್ರಿದಶವಂದಿತನೂ ಆದ ಭಕ್ತವತ್ಸಲ ಮಹಾದೇವನು ಪ್ರಮಥಗಣಸೇವ್ಯನೆನಿಸಿ ತಪೋನಿಷ್ಠೆಯಿಂದಿರಬೇಕಾದರೆ, ಕೆಲಕಾಲದ ಬಳಿಕ ಮನ್ಮಥನು ದೇವತೆಗಳಿಂದ ಚಿತಾವಣೆಗೊಳಗಾಗಿ ಬಂದು ದುರ್ವಾರಗರ್ವದಿಂದ ತನಗಾಗಬಹುದಾದ ಹಾನಿಯನ್ನೂ ಲೆಕ್ಕಿಸದೆ, ಗಿಳಿನವಿಲುಹಂಸಕ್ರೌಂಚಗಳ ಗುಂಪಿನಿಂದ ಆವೃತನಾಗಿ, ಕೋಗಿಲೆ ಮಲಯಮಾರುತ ಚಂದ್ರ ದುಂಬಿ ಕಮಲಗಳನ್ನು ಹಿಡಿದು ಮೂಲೋಕವನ್ನೂ ತಲ್ಲಣಗೊಳಿಸುವಂತೆ ಚತುರೋಪಾಯಗಳಿಂದ ಹರನ ತಪಸ್ಸನ್ನು ಅಡ್ಡಿಪಡಿಸಲು ಮುಕ್ಕಣ್ಣನ ಕೋಪ ಭುಗಿಲೆಂದು ಕಿಡಿಗಳು ಮುನ್ನುಗ್ಗಿ ಹಬ್ಬಿತು. ಆಗ ಅಲ್ಲಿಯೇ ಆ ಕ್ಷಣದಲ್ಲಿಯೇ ಮನ್ಮಥನ ದೇಹವು ಮಿಡತೆಯ ಹುಳುವಿನಂತೆ ಸುಟ್ಟು ಕರಿಕಲಾಗಿ ಅನಂಗ ಎನ್ನಿಸಿಕೊಂಡ. "ಆ ಕಾರಣದಿಂದ ಈ ಜಾಗವು ಅಂಗ ರಾಜ್ಯವೆಂಬ ಹೆಸರಿನಿಂದ ಖ್ಯಾತಿಯನ್ನು ಪಡೆದಿದೆ. ಅಲ್ಲದೆ ಈ ನೆಲದಲ್ಲಿ ಹರಿಯನ್ನು

ಆರಾಧಿಸುವ ಭಕ್ತರಿಗೆ ಕೂಡ ಯಾವ ಭವಭಯವೂ ಉಂಟಾಗದು, ಹೀಗಾಗಿ ನಾವು ಆ ಋಷಿಗಳೊಡನೆ ಈ ಪುಣ್ಯಾಶ್ರಮದಲ್ಲಿಯೇ ಇಂದಿನ ಇರುಳನ್ನು ಕಳೆಯೋಣ. ನಾಳೆ ಸೂರ್ಯೋದಯದಲ್ಲಿ ಸ್ನಾನಸಂಧ್ಯಾದಿ ಕರ್ಮಗಳನ್ನು ನೆರವೇರಿಸಿ ಮುಂದೆ ಹೋಗೋಣ" ಎಂದು ಹೇಳುತ್ತಿರಲು, ಆ ಹೊತ್ತಿಗೆ ತಮ್ಮ ದಿವ್ಯದೃಷ್ಟಿಯಿಂದ ಇವರ ಬರವನ್ನು ತಿಳಿದ ಮುನೀಶ್ವರರು ಹರ್ಷದಿಂದ ಬಂದು, ಸೂರ್ಯಸಮತೇಜನಾದ ವಿಶ್ವಾಮಿತ್ರರನ್ನು ಅರ್ಘ್ಯಪಾದ್ಯಾದಿಗಳನ್ನಿತ್ತು ಪೂಜಿಸಿ, ರಾಜಕುವರರನ್ನು ನಾನಾವಿಧವಾದ ಉಪಚಾರಗಳಿಂದ ಸಂತಸಗೊಳಿಸಿದರು. ಈ ಆತಿಥ್ಯದಿಂದ ಸಂತುಷ್ಟನಾದ ಕೌಶಿಕ ಮುನಿಪನು ನೃಪಕುಮಾರರೊಡನೆ ಬರಲು ಆ ಕಾಮಾಶ್ರಮದ ವನರಾಜಿಯು ದಿವ್ಯತೇಜಸ್ಸಿನಿಂದ ಕಂಗೊಳಿಸಿತು. ಅಲ್ಲಿ ಸ್ನಾನವನ್ನು ಮಾಡಿ ಸಂಧ್ಯಾಕೃತ್ಯಗಳನ್ನು ಪೂರೈಸಿ ಮುನಿವರನು ಅಗ್ನಿಕಾರ್ಯವನ್ನು ನೆರವೇರಿಸಲು ನೃಪಸೂನುಗಳೂ ಪ್ರಾತಃಕಾಲದ ಸತ್ಕೃತ್ಯಗಳನ್ನು ಮಾಡಿದರು. ಸೂರ್ಯದೇವನು ಪಶ್ಚಿಮಾಂಬುಧಿಗಿಳಿಯಲು ಕಮಲಗಳು ಮುಚ್ಚಿಕೊಂಡವು, ಆಗ ಜ್ಞಾನನಿಧಿ ವಿಶ್ವಾಮಿತ್ರನು ಬಾಲಕರೊಡನೆ ಕಾಮಾಶ್ರಮಕ್ಕೆ ಬಂದು ಅಲ್ಲಿ ಮಲಗಿದ.

ಪವಿತ್ರವಾದ ಮಾತುಗಳು ಮತ್ತು ಆಲೋಚನೆಗಳಿಂದ ಕೂಡಿ ಆ ರಾತ್ರಿಯನ್ನು ಕಳೆದು, ಮಾರನೆಯ ಮುಂಜಾನೆ ಸೂರ್ಯನೊಡನೆ ಮೇಲೆದ್ದು ಗುರುಗಳೊಡನೆ ಸ್ನಾನಸಂಧ್ಯಾವಂದನೆಗಳನ್ನು ಮುಗಿಸಿ, ಪವಿತ್ರವಾದ ಮಂತ್ರಗಳನ್ನುಚ್ಚರಿಸುತ್ತ ಅಲ್ಲಿಂದ ಹೊರಡಲು ಸಿದ್ಧನಾಗಿದ್ದ ಮುನಿಯನ್ನು ಕಂಡು ಆಶ್ರಮದ ತಾಪಸರು ಹರುಷದಿಂದ ಹರಿಗೋಲೊಂದನ್ನು ತಂದಿಟ್ಟರು. ಉಚಿತ ಮಾತುಗಳಿಂದ ಅಲ್ಲಿನ ಯತಿಸಮೂಹವನ್ನು ಉಪಚರಿಸಿ ವ್ರತಿಶಿಖಾಮಣಿಯು ರಾಜಕುಮಾರರೊಡನೆ ನಾವೆಯನ್ನು ಏರಿ ವೇಗವಾಗಿ ಸಾಗಿ ನದಿಯನ್ನು ದಾಟಿದ. ಆಚಿನ ದಡವನ್ನು ಸೇರಿದ ಬಳಿಕ ಹರಿಗೋಲಿನಿಂದ ಇಳಿದು ಬಿಸಿಲನ್ನು ಲೆಕ್ಕಿಸದೆ ನಿಧಾನಗತಿಯಿಂದ ಕೆಲವು ಹೆಜ್ಜೆಗಳನ್ನಿಡುವಷ್ಟರಲ್ಲಿ ಅವರಿಗೆ ವಿಚಿತ್ರವಾದ ಶಬ್ದವೊಂದು ಕೇಳಿಸಿತು. ಅತ್ಯಂತ ಮಧುರವಾಗಿ ಕೇಳುತ್ತಿರುವ ಈ ಧ್ವನಿಯು ಯಾವುದು, ಅದರ ವಿಷಯವನ್ನು ಅರುಹಬೇಕೆಂದು ಕೇಳಿದ ಬಾಲಕರಿಗೆ ಮುನಿವರ್ಯನು ಆ ವಿಚಾರವನ್ನು ಹೇಳಿದ: ಬ್ರಹ್ಮನು ಮೊದಲಿಗೆ ಕೈಲಾಸಪರ್ವತದಲ್ಲಿ ಅತ್ಯಂತ ಆಹ್ಲಾದಕರವಾದ ಕೊಳವೊಂದನ್ನು ಮನಸ್ಸಂಕಲ್ಪದಿಂದಲೇ ನಿರ್ಮಿಸಿದ; ಅದಕ್ಕೇ ಅದನ್ನು ಮಾನಸ ಸರೋವರವೆಂದು ಕರೆಯುತ್ತಾರೆ. ದೇವತಾಮುಖ್ಯನಿಂದ ನಿರ್ಮಿತವಾದ ಕೊಳವಾದುದರಿಂದ ಅದರಲ್ಲಿ ಜನಿಸಿ ಇಳಿದು ಬಂದ ನದಿಯು ಈ ಊರನ್ನು ಸರಯೂ ಎಂಬ ಹೆಸರಿನಿಂದ ಬಳಸಿ ಹರಿಯುತ್ತ ಗಂಗಾನದಿಯ ಒಡಲನ್ನು ಸೇರಲು ಸಾಗುತ್ತದೆ. ಆ ಪವಿತ್ರವಾದ ನದಿಯ ಅಲೆಗಳ ಬಡಿತದಲ್ಲಿ ಈ ನಾದವು ಹುಟ್ಟಿ ಅತ್ಯಂತ ಕುತೂಹಲವನ್ನು ಉಂಟುಮಾಡುತ್ತದೆ, ಅದು ಅತ್ಯಂತ ಪುಣ್ಯದಾಯಿ ಎಂದು ಭಕ್ತಿಯಿಂದ ಅದಕ್ಕೆ ವಂದಿಸಲು ಹೇಳಲು ರಾಮಲಕ್ಷ್ಮಣರು ಗುರುವಚನದಂತೆಯೇ ಅದಕ್ಕೆ ಪ್ರಣಾಮಗೈದರು. ಆನಂತರ ಸಡಗರದಿಂದ ನಡೆಯುತ್ತ ಅದರ ದಕ್ಷಿಣ ತೀರದತ್ತ ಸಾಗಲು, ಮುಂದೆ ಒಂದು ಕಾನನವು ಗೋಚರಿಸಿತು. ಅಡಕೆ ತೆಂಗು

ದಾಳಿಂಬೆ ಬಾಳೆ ನೇರಿಳೆ ಮರಗಳ ಜೊತೆಗೆ, ಕೇಸರ ಪಾರಿಜಾತ ಚಂದನಗಳ ಲತೆಗಳೂ, ಪಾರಿಯಾತ್ರ, ಪಾದರಿ, ಬಿಳಲುಗಳನ್ನೊಳಗೊಂಡ ಆಲ ಮುಂತಾದ ಹೆಮ್ಮರಗಳೂ ಅಲ್ಲಿ ಇಡಿಕಿರಿದು ಬೆಳೆದಿದ್ದವು. ಕಾಡುಕುದುರೆ ಕಾಡುಹಂದಿ ಆನೆ ಸಿಂಹ ಹುಲಿ ಕಾಡುಕೋಣ ನರಿ ಮುಂತಾದ ಮೃಗಗಳು ಭೀಕರವಾಗಿ ಶಬ್ದಮಾಡುತ್ತ ಓಡಾಡುತ್ತಿರಲು, ನಾನಾ ಬಗೆಯ ಪಕ್ಷಿಗಳು ದಾರುಣಧ್ವನಿಗೈಯುತ್ತಿರಲು, ಈ ಅರಣ್ಯವು ಯಾವುದು ಎಂದು ರಾಘವನು ಸಹಜ ಕುತೂಹಲದಿಂದ ಕೇಳಲು ಅದರ ವೃತ್ತಾಂತವನ್ನು ಮುನಿವರನು ಹೇಳಲುತೊಡಗಿದ.

ಆಶ್ಚರ್ಯಕರವಾದ ವಿಷಯವೊಂದನ್ನು ಹೇಳುತ್ತೇನೆ, ಕೇಳಿರಿ. ಹಿಂದೆ ನಿತ್ಯ ಲಕ್ಷ್ಮೀನಿಲಯವೆನ್ನಿಸಿ ರಾಜಿಸುತ್ತ ನಿರ್ಮಲವಾಗಿ ಮಲದ ಮತ್ತು ಕರೂಶಗಳೆಂಬ ದೇವನಿರ್ಮಿತ ಪ್ರದೇಶಗಳಿದ್ದವು. ವೃತ್ರಾಸುರನ ತಲೆಯನ್ನು ತರಿದ ಕಾರಣದಿಂದ ದೇವೇಂದ್ರನನ್ನು ಪಾಪ ಮತ್ತು ಸಂತಾಪಗಳೆರಡೂ ಆವರಿಸಿದವು; ಬ್ರಹ್ಮಹತ್ಯಾದೋಷವು ಸಾಮಾನ್ಯವೇ? ಬಿಡುಗಣ್ಣರಾದ ದೇವತೆಗಳೂ ಜಟಾಮಂಡಿತರಾದ ಋಷಿಗಳೂ ಇಂದ್ರನನ್ನು ಹಿಡಿದೆತ್ತಿಕೊಂಡು ತಂದು ಸಾವಿರ ಕಲಶಗಳಲ್ಲಿ ಅಭಿಷೇಕ ಮಾಡಲು ಅವನಿಗೆ ಅಂಟಿದ್ದ ಕಲ್ಮಷ ಮತ್ತು ಹಸಿವುಗಳು ಹೋಗಿ ಉಡುಗಣದ ನಡುವಣ ಚಂದ್ರನಂತೆ ನಿರ್ಮಲನಾಗಿ ಕಂಗೊಳಿಸಿದ. ತನ್ನನ್ನು ದೋಷದಿಂದ ಬಿಡುಗಡೆಗೊಳಿಸಿದ ಆ ದೇಶಗಳಿಗೆ ಕೃತಜ್ಞತೆಯನ್ನರ್ಪಿಸಲು ಇಂದ್ರನು ಪರಮ ಸಂಪ್ರೀತಿಯಿಂದ, "ನನ್ನನ್ನು ಆವರಿಸಿದ್ದ ಕಲ್ಮಷ ಮತ್ತು ಹಸಿವುಗಳನ್ನು ಹೋಗಲಾಡಿಸಿದ್ದರಿಂದ ಈ ದೇಶಗಳು ಸುಖಸಮೃದ್ಧಿಗಳಿಂದ ಕೂಡಿ ಮಲದ ಮತ್ತು ಕರೂಶ ಎಂಬ ಹೆಸರಿನಿಂದ ಉರುತರವಾದ ಖ್ಯಾತಿಯನ್ನು ಹೊಂದಲಿ" ಎಂದು ವರದಾನ ಮಾಡಿದ; ಇದನ್ನು ಕಂಡು ಅಖಿಲ ದೇವತತಿಯು ಹಿಗ್ಗಿತು, ಇಂದ್ರನನ್ನು ಕೊಂಡಾಡಿ ಹೂಮಳೆಯನ್ನು ಕರೆಯಿತು. ಹೀಗೆ ಚಿರಕಾಲ ಈ ದೇಶಗಳು ಅತಿಶಯದ ನಾಡುಗಳೆನಿಸಿ ಇದ್ದವು. ಆದರೆ ಏನು ಹೇಳಲಿ, ಮುಂದೆ ಕೆಲಕಾಲದಲ್ಲಿಯೇ ಘೋರರೂಪಿಣಿಯಾದ ಸಾಸಿರ ಆನೆಗಳ ಬಲದಿಂದ ಕೂಡಿದ ಯಕ್ಷತನುಜೆಯೊಬ್ಬಳು ಜನಿಸಿದಳು. ಅವಳು ಸುಂದ ಎಂಬ ಯಕ್ಷನ ಮಡದಿ, ಅವಳ ಹೆಸರು ತಾಟಕಿ ಅವಳ ಮಗನೇ ಮಾರೀಚ ಎಂಬ ಹೆಸರಿನ ರಕ್ಕಸ. ಅವನೇನೂ ಸಾಮಾನ್ಯನಲ್ಲ, ಇಂದ್ರಸಮ ಶೌರ್ಯವುಳ್ಳವನು, ದುಂಡಾದ ತೋಳುಗಳು, ಮಹಾಮೂರ್ತಿ, ದೊಡ್ಡ ಹೊಟ್ಟೆಯುಳ್ಳವನು, ಭಯಂಕರ ರೂಪವುಳ್ಳವನು. ಅವನು ಈ ನೆಲದಲ್ಲಿದ್ದ ಮನುಷ್ಯರನ್ನೆಲ್ಲ ಕೊಂದು ತಿಂದ. ತನ್ನ ತಾಯಿಯೊಡನೆ ಸೇರಿದರೆ ಅವರೆದುರಿಗೆ ನಿಲ್ಲಬಲ್ಲವರಾರೂ ಇಲ್ಲ. ಆ ಭೀಕರಾಕಾರೆ ತಾಟಕಿಯು ಹರದಾರಿ ದೂರದ ದಾರಿಯಲ್ಲಿ ಅಡ್ಡಲಾಗಿ ನಿಂತಿದ್ದಾಳೆ, ಹೀಗಾಗಿ ಈ ದೇಶಗಳಲ್ಲಿ ನಿರ್ಜನತ್ವವು ಕಾಡುತ್ತಿದೆ. 'ರಾಮ, ನಿಸ್ಸೀಮ. ನೀನು ಇವಳ ತೋರ ತಲೆಯನ್ನು ತರಿದು ನಿನ್ನ ಬಲವನ್ನು ತೋರಿಸು, ಜನಗಳಿಗೆ ಸುಖವನ್ನು ನೀಡು. ಜನರಿಗೆ ಕ್ರೂರ ದಾನವರ ಭಯವನ್ನು ಹೋಗಲಾಡಿಸು, ಅವರು ಈ ದಾರಿಯಲ್ಲಿ ಸಂಚರಿಸಲು ಭಯಗ್ರಸ್ತರಾಗಿದ್ದಾರೆ' ಎಂದು ಹೇಳಿದ. ಹೀಗೆಂದ ಋಷಿವರ್ಯರ ಗಂಭೀರವಾಣಿಯನ್ನು ಕೇಳಿ ಜನನಾಥತನಯನು, "ಯಮಿಶಾರ್ದೂಲರೇ, ಅಲ್ಪಬಲದ ಈ ಯಕ್ಷಸಂತತಿಯು ನನಗೆ ವಿಸ್ಮಯಕರವಾಗಿ

ತೋರುತ್ತಿದೆ. ಆದರೆ ಅದು ಹೇಗೆ ಈ ಯಕ್ಷಿಗೆ ಸಾವಿರ ಆನೆಯ ಬಲ ಪ್ರಾಪ್ತವಾಯಿತು?" ಎಂದು ಕೇಳಿದ. ಅದಕ್ಕೆ ಉತ್ತರವಾಗಿ ಮುನಿಯು ತಾಟಕಿಯ ಪೂರ್ವವೃತ್ತಾಂತವನ್ನು ಹೇಳತೊಡಗಿದ.

ಸುಕೇತು ಎಂಬ ಹೆಸರಿನ ಯಕ್ಷನೊಬ್ಬನು ಮಗನನ್ನು ಪಡೆಯುವ ಅಪೇಕ್ಷೆಯಿಂದ ನಾಲ್ಮೊಗನನ್ನು ಕುರಿತು ತಪಸ್ಸು ಮಾಡಿದ. ಅವನ ತಪಸ್ಸಿಗೆ ಮೆಚ್ಚಿದ ಬ್ರಹ್ಮದೇವನು ಅವನಿಗೆ ಸಾವಿರ ಆನೆಬಲವಿರುವ ಮಗಳೊಬ್ಬಳು ಜನಿಸುವ ವರವನ್ನು ನೀಡಿದ. ಆ ಕ್ಷಣದಲ್ಲಿಯೇ ತಾಟಕಿಯು ಉದಿಸಿದಳು. ಅವಳದು ದೇವತಾಸ್ತ್ರೀಯರ ಚೆಲುವು. ದಿನದಿನಕ್ಕೆ ಅವಳ ಯೌವನವು ವೃದ್ಧಿಸಿ ಐರಾವತದಂತೆ ಮೋಹನವನ್ನು ಪಡೆದಳು. ದೀರ್ಘಕಾಲದ ತಪಸ್ಸಿನ ಫಲವಾದ ತನ್ನ ಮಗಳು ತಾಟಕಿಯನ್ನು ಸುಕೇತುವು ಮತ್ತೊಬ್ಬ ಯಕ್ಷನಾದ ಜಝರ್ಝ ಎಂಬುವವನ ಮಗ ಸುಂದನಿಗೆ ಮದುವೆ ಮಾಡಿ ಕೊಟ್ಟ. ಕೆಲ ಕಾಲದಲ್ಲಿಯೇ ಆ ದಂಪತಿಗೆ ಮಾರೀಚ ಎಂಬ ಕುವರನೊಬ್ಬನು ಜನಿಸಿದ. ಅವನೋ ಬಲಶೌರ್ಯಸಂಪನ್ನ, ಧೂಮಕೇತುವಿನ ರೀತಿಯಲ್ಲಿ ಬೆಳೆದು ಯುದ್ಧದಲ್ಲಿ ತನ್ನನ್ನು ಗೆಲ್ಲುವವರು ಮೂರು ಲೋಕಗಳಲ್ಲಿ ಯಾರೂ ಇಲ್ಲವೆಂಬ ರೀತಿಯಲ್ಲಿ ಬಲವನ್ನಾರ್ಜಿಸಿದ. ಕಾಲಕ್ರಮೇಣ ಸುಂದ ತೀರಿಕೊಳ್ಳಲು, ಮಾರೀಚ ತನ್ನ ತಾಯಿಯ ಜೊತೆ ಸೇರಿ, ಒಂದು ದಿನ ಅಗಸ್ತ್ಯನ ಪುಣ್ಯಾಶ್ರಮಕ್ಕೆ ಬಂದ. ಕೋಲಾಹಲಕಾರಕವಾಗಿ ಗರ್ಜಿಸುತ್ತ ತನ್ನನ್ನು ಭಕ್ಷಿಸಲು ಬರುತ್ತಿರುವ ಈ ಮೂಲೋಕ ತಲ್ಲಣನನ್ನು ನೋಡಿ ಆ ಮುನಿಪನ ಕೋಪಶಿಖಿಯು ಮುಕ್ಕಣ್ಣನ ಹಣೆಗಣ್ಣಿನಂತೆ ಪ್ರಜ್ವಲಿಸಿತು. 'ನೀನು ದುರುಳನಾದ ರಾಕ್ಷಸನಾಗು' ಎಂದು ಶಪಿಸಿ, ಬಳಿಕ ತಾಟಕಿಯು ಬರುತ್ತಿರುವ ರೀತಿಯನ್ನು ಗಮನಿಸಿ, 'ದುಷ್ಟಚಾರಿ ತಾಟಕಿಯೇ, ನೀನು ಈಗಿನಿಂದಲೇ ಮಹಾ ಘೋರರೂಪವನ್ನು ತಾಳು, ಕರ್ಕಶ ಶಬ್ದ ಮಾಡುತ್ತ ದಾರುಣಾಕೃತಿಯನ್ನು ಹೊತ್ತು ಬದುಕು' ಎಂದು ಉರುಶಾಪವನ್ನಿತ್ತ. ಆ ಹೊತ್ತಿನಿಂದ ಆ ಯಕ್ಷಿಯು ತನ್ನ ಚೆಲುವನ್ನು ಕಳೆದುಕೊಂಡು ಭಯಂಕರಾಕಾರೆಯಾಗಿ ನರಭಕ್ಷಣೆ ಮಾಡುತ್ತಿರುವಳು. "ರಾಮಚಂದ್ರನೇ, ಗೋವಿಪ್ರಹಿತಕ್ಕಾಗಿ ನೀನು ತಾಟಕಿಯನ್ನು ಸಂಹರಿಸುವುದು ಉಚಿತವಾದುದು. ಅವಳನ್ನು ಕೊಲ್ಲದೆ ಬಿಟ್ಟರೆ ಆ ದುಷ್ಟೆಯು ಮೂರು ಲೋಕವನ್ನೂ ತಿಂದಲ್ಲದೆ ಇರಳು. ನೀನು ಈ ಕಾರ್ಯಮಾಡದಿದ್ದರೆ ಅದು ಹರಬೊಮ್ಮರಿಂದಲೂ ಸಾಧ್ಯವಾಗಲಾರದು. ಸ್ತ್ರೀಹತ್ಯೆಯು ಪಾಪಕರವೆಂದು ಭಾವಿಸಬೇಡ. ಚಾತುರ್ವರ್ಣರಕ್ಷಣೆಗಾಗಿ ಕ್ಷತ್ರಿಯರು ಕರುಣಾಹೀನರಾಗುವುದು ಸಮರ್ಥನೀಯವೇ ಸರಿ, ದಾರುಣರಾಗಿರುವವರು ಯಾರಾದರೂ ಸರಿಯೆ ಅವರನ್ನು ಹತ್ಯೆಗೈವುದು ಸಮಂಜಸವಾದುದು, ಲೋಕೋದ್ಧಾರಕ್ಕಾಗಿ ಹೀಗೆ ನಡೆದುಕೊಳ್ಳುವುದು ಋಷಿಸಮ್ಮತವಾದುದು. ಘೋರಪಾತಕವನ್ನು ಮಾಡಿದಾಗ ದೇವೇಂದ್ರನು ಕೋಪಗೊಂಡು ವಿರೋಚನನ ಮಗಳು ಮಂದರೆಯ ಕತ್ತನ್ನು ಕತ್ತರಿಸಲಿಲ್ಲವೇ? ಇನ್ನಿಲ್ಲದಂತೆ ಇಂದ್ರನು ಪ್ರಾರ್ಥನೆಗೈಯಲು ಮಹಾವಿಷ್ಣುವು ಭೃಗುಪತ್ನಿಯನ್ನು ಕೊಂದನಲ್ಲವೇ? ಈ ರೀತಿಯಲ್ಲಿ ಹಿಂದೆಯೂ ಲೋಕಸಂರಕ್ಷಣಾರ್ಥವಾಗಿ ಅನೇಕ ದುರ್ಮಾರ್ಗಿಗಳನ್ನು ತರಿದೊಟ್ಟಿದ ಅನೇಕ ಸಂದರ್ಭಗಳುಂಟು. ದುಷ್ಟಮಾರ್ಗವನ್ನನುಸರಿಸುತ್ತಿದ್ದ ಪಾಂಸುಲೆಯರನ್ನು ತರಿದು

ಲೋಕವನ್ನು ಪಾಲಿಸಿದ ಅರಸುಗಳು ಸದ್ಧರ್ಮಕೀರ್ತಿಗಳನ್ನು ಪಡೆದರು. ಆದ್ದರಿಂದ ಈ ದೈತ್ಯೆಯನ್ನು ಸಂಹರಿಸಲು ಸ್ತ್ರೀಹತ್ಯೆಯ ದೋಷವು ನಿನ್ನನ್ನು ಹೊದ್ದುವುದಿಲ್ಲ. ಅದರ ಬದಲು ಹದಿನಾಲ್ಕು ಲೋಕಗಳನ್ನು ಪರಿಪಾಲನೆ ಮಾಡಿದ ಯಶಸ್ಸು ನಿನ್ನದಾಗುತ್ತದೆ" ಎಂದು ಗಾಧಿತನಯನು ಹೇಳಿದ.

ಆ ಮಾತಿಗೆ ಶ್ರೀರಾಮನು ಹೀಗೆಂದ: "ಶೂಲಹಸ್ತೋಪಮ ವಿದ್ಯಾನಿಧಿಯೇ, ನನ್ನನ್ನು ನಿಮಗೆ ಒಪ್ಪಿಸುವಾಗ ತಂದೆ ದಶರಥ ಮಹಾರಾಜನು ಮೃದುವಾಕ್ಕುಗಳಿಂದ ನನಗೆ ಹೀಗೆ ಹೇಳಿದ: 'ಮುನಿವರರ ಮಾತನ್ನು ನನ್ನ ಮಾತಿಗಿಂತ ಶ್ರೇಷ್ಠವೆಂದು ಪಾಲಿಸಿ ಯಜ್ಞಮಾರಕರನ್ನು ಸಂಹರಿಸಿ ಸಾಧುಜನಜಾಲವನ್ನು ಸಂರಕ್ಷಿಸು.' ಆ ಮಾತನ್ನು ನಾನು ನನ್ನ ತಲೆಯಲ್ಲಿ ಹೊತ್ತು ನಿಮ್ಮೊಡನೆ ಬಂದಿದ್ದೇನೆ. ಪಿತೃವಚನಕ್ಕಿಂತ ಬಂಧುರವಾದದ್ದು ಯಾವುದಿದೆ? ತಮ್ಮ ಮಾತಿಗೆ ಚ್ಯುತಿಯಿಲ್ಲ, ಅದನ್ನು ಅನುಸರಿಸಿ, ಗೋದಿವಿಜಭೂಮಿಸುರರನ್ನು ಸಂರಕ್ಷಿಸಲು ಹಾಗೂ ದೇಶದ ಸ್ವಾಸ್ಥ್ಯಕ್ಕೋಸುಗ ಸುಂದನಂದನೆಯನ್ನು ನಾನು ಕೊಲ್ಲುತ್ತೇನೆ. ನನ್ನ ಮಾತನ್ನು ನಿಜವೆಂದು ನಂಬಿರಿ, ಕಾಕುತ್ಸ್ಥವಂಶಭವನಾದ ತಂದೆಯ ಸಮರ್ಥನೀಯ ಪ್ರತಿಜ್ಞೆಗೆ ಎಂದೂ ಭಂಗ ಬಾರದು." ಈ ಮಾತುಗಳನ್ನು ಕೇಳಿ ಮುನಿ ಕುಶಿಕತನಯನು ಸಂತಸಗೊಂಡು, ಆ ರಕ್ಕಸಿಯ ದುಷ್ಟಕೃತ್ಯಗಳನ್ನು ಸವಿಸ್ತಾರವಾಗಿ ನಿರೂಪಿಸಲು ಅದನ್ನೆಲ್ಲ ಕೇಳಿದ ಲಲಿತಮೂರ್ತಿಯಾದ ರಾಮಚಂದ್ರನು ಕೋಪದಿಂದ ಕೋದಂಡವನ್ನು ಜೇವಡೆಗೈದಾಗ ಅದರ ಧ್ವನಿಯು ಅವನ ಕೋಪವನ್ನು ಧ್ವನಿಸಿತೋ ಎಂಬಂತೆ ತೋರಿ, ಭೂವ್ಯೋಮಗಳು ತಲ್ಲಣಿಸಿದವು.

ತಾಟಕಿಯ ದುರ್ವೃತ್ತವನ್ನು ಕೇಳಿ ಕೋಪಗೊಂಡು ಅವಳನ್ನು ಖಂಡಿತ ಸಂಹರಿಸುವೆನೆಂದು ಹೇಳಿ ಕಟ್ಟಾಳು ರಘುಪತಿಯು ತನ್ನ ಕೈಯಲ್ಲಿ ಕೋದಂಡವನ್ನು ಹಿಡಿದು ಠೇಂಕಾರಮಾಡುತ್ತ ಮುನ್ನಡೆಯಲು ಆ ಶಬ್ದವು ಆ ರಕ್ಕಸಿಯ ವಧೆಯನ್ನು ಮಾಡುವ ತನ್ನ ಪ್ರತಿಜ್ಞೆಯನ್ನು ದಶದಿಕ್ಕುಗಳಿಗೂ ಹೇಳುವಂತೆ ಅನುರಣಿಸಿತು. ಆ ಶಬ್ದವನ್ನು ಕೇಳಿದ ರಕ್ಕಸಿಯ ಕೋಪ ವೆಗ್ಗಳಿಸಿತು, ಕಟಕಟನೆ ಹಲ್ಲುಗಳನ್ನು ಕಡಿಯುತ್ತ ಖಣಿಕಟಿಲುಕಟಿಲೆಂದು ಸದ್ದು ಮಾಡುತ್ತ ನಾಲ್ಕೂ ದಿಕ್ಕುಗಳನ್ನು ನೋಡಿ ಬೈದಾಡುತ್ತ, ಮೂರು ಲೋಕಗಳನ್ನೂ ಹುಲ್ಲುಕಡ್ಡಿಗೆ ಸಮವೆಂದು ಭಾವಿಸುತ್ತ, ಭಟಶಿಖಾಮಣಿಯಾದ ರಾಮನಿದ್ದ ತಾಣಕ್ಕೆ ಬಂದಳು. ಘುಡುಘುಡುಸುತ್ತ, ಕೋಪದಿಂದ ಕಣ್ಣುಗಳಲ್ಲಿ ಕಿಡಿಗಳನ್ನು ಕೆದರುತ್ತ, ಸಿಡಿಲಿನ ಹಾಗೆ ಬರುವ ತಾಟಕಿಯನ್ನು ಕಂಡು ಶ್ರೀರಾಮನು ಒಡಹುಟ್ಟಿದವನೊಡನೆ, "ಲಕ್ಷ್ಮಣನೇ, ನೋಡಿದೆಯಾ ಈ ಮಾಯಾವಿಯನ್ನು. ಅಡಿಗಡಿಗೆ ಹೂಂಕಾರ ಮಾಡುತ್ತ ಭೀಕರ ಸ್ವರೂಪವನ್ನು ತಾಳುತ್ತ ಬರುವ ಈ ಕಿರಾತಕಿಯ ಕಿವಿಮೂಗುಗಳನ್ನು ಕತ್ತರಿಸಿದರೆ ಅದೇ ಇವಳನ್ನು ವಧಿಸಿದಂತಲ್ಲವೇ?" ಅಣ್ಣತಮ್ಮಂದಿರು ಈ ರೀತಿ ಮಾತಾಡಿಕೊಳ್ಳುತ್ತಿರಲು ಅವರ ಧ್ವನಿಯನ್ನು ಕೇಳಿ ಆ ಯಕ್ಷಿಣಿಯು ಕೋಪದಿಂದ ಆರ್ಭಟಿಸುತ್ತ ಅವರನ್ನು ಕೊಲ್ಲಲೆಳಸಿ ಮುಂದುವರಿಯಲು ಅದನ್ನು ಕಂಡು ವಿಶ್ವಾಮಿತ್ರನು ತನ್ನ ಹುಂಕಾರದಿಂದ ಅವಳ ಸ್ಥೈರ್ಯವನ್ನು ಕುಗ್ಗಿಸಿ. ರಘುವೀರನಿಗೆ ಶುಭವಾಗಲೆಂದು ಹರಸಲು ಸಿಂಹಸಂಹನನಭಟರಾದ ಅಣ್ಣತಮ್ಮಂದಿರು

ಪ್ರಳಯಕಾಲದ ಮೋಡಗಳಂತೆ ಗುಡುಗಿದರು. ಆ ವೀರರನ್ನು ನೋಡಿದ ಅವಳು ಕಠೋರವಾಗಿ ಸಿಡಿಲಿನಂತೆ ಗರ್ಜಿಸಿ ಎಂಟುದಿಕ್ಕುಗಳೂ ಕಾಣದಂತೆ ದೂಳನ್ನೆಬ್ಬಿಸಿದಳು. ಓಡಾಡುವ ಅವಳನ್ನು ಕಂಡು ರಾಮನು ಕೋಪವನ್ನು ತುಂಬಿಕೊಂಡು, ಮೂಲೋಕವೂ ತತ್ತರಿಸುವಂತೆ ಬಿಲ್ಲನಾರಿಯನ್ನು ಜೇವಡೆಗೈದು ಬಿಲ್ಲಿಗೆ ಬಾಣವನ್ನು ಹೂಡಿ ಬಲವಾಗಿ ಸೆಳೆದು ಬಿಡಲು ಬಾಣವು ಮೂರು ಲೋಕಗಳ ತವಕವು ಹಿಂಗುವ ಹಾಗೆ ಅವಳ ತೋಳುಗಳನ್ನು ಕತ್ತರಿಸಿತು.

ತನ್ನ ಎರಡೂ ಬಾಹುಗಳನ್ನು ರಘುವರನು ತರಿದು ಹಾಕಲು ಆ ದುರುಳ ರಕ್ಕಸಿಯು ಕೋಪಗೊಂಡು ಭಯಂಕರಳಾಗಿ ಧಿಕ್ಕರಿಸುತ್ತ ವೇಗವಾಗಿ ಆಗಸಕ್ಕೆ ಹಾರಿ ಮಾಯೆಯನ್ನು ಹರಡಿ ಕಣ್ಣಿಗೆ ಕಾಣದಂತೆ ಮರೆಯಾಗಿ, ಕಲ್ಲುಗಳ ಮಳೆ ಸುರಿಸಲು ತೊಡಗಿದಳು, ನಾನಾ ಬಗೆಯ ಮರಗಿಡಗಳಿಂದ ನಾನಾ ಬಗೆಯಲ್ಲಿ ಹೊಡೆಯಲು ಆರಂಭಿಸಿದಳು. ಇದರಿಂದ ಇಡೀ ಭೂಮಿಯೇ ತಲ್ಲಣಗೊಂಡಿತು, ದೇವತೆಗಳು ಚಕಿತರಾದರು, ಮುನಿಸಂತತಿಯು ಭಯಭರಿತವಾಯಿತು. ಯಾವ ದಿಕ್ಕಿನ ಕಡೆಗೆ ಅವಳು ಚಲಿಸುತ್ತಾಳೆಯೋ, ಯಾವ ಯಾವ ಪರಿಯಿಂದ ತಮ್ಮ ಮೇಲೆ ಆಕ್ರಮಣ ಮಾಡುವಳೋ, ಯಾವಾಗ ಕಲ್ಲು ಮರಗಿಡಗಳ ಮಳೆಗರೆವಳೋ ಎಂದು ಎಂಟು ದಿಕ್ಕುಗಳನ್ನು ನೋಡಿದರೂ ರವಿವಂಶಕುಮಾರರಿಗೆ ರಾಕ್ಷಸಿಯು ಕಾಣಿಸದಾದಳು. ಅದರಿಂದ ರಾಮನ ಕೋಪ ಮತ್ತಷ್ಟು ತೀವ್ರವಾಗಿ ಬತ್ತಳಿಕೆಯಿಂದ ಸಿಡಿಲಿನಂತಹ ಶಬ್ದವೇಧಿಶರವನ್ನು ತೆಗೆದು ಅವಳ ಶಬ್ದ ಯಾವೆಡೆಯಿಂದ ಬರುತ್ತಿದೆಯೆಂಬುದನ್ನು ಸೂಕ್ಷ್ಮವಾಗಿ ಗಮನಿಸಿ ಪ್ರಯೋಗಿಸಲು ಯೋಚಿಸಿದ. ಇದರ ಸುಳಿವರಿತ ಆ ಮಾಯಾವಿಯು ವೇಗವಾಗಿ ಮುನ್ನಡೆದು ರಾಮಲಕ್ಷ್ಮಣರನ್ನು ತಿಂದುಬಿಡುವೆನೆಂದು ಕ್ರೋಧದಿಂದ ಬರಲು ಸೌಮಿತ್ರಿಯು ಮಿಂಚಿನ ವೇಗದಲ್ಲಿ ತನ್ನ ನಿಶಿತಾಂಬಿನಿಂದ ಅವಳ ಕಿವಿಮೂಗುಗಳನ್ನು ತರಿದು ಹಾಕಿದ. ಆಗ ಅವಳು ಅಂತರಿಕ್ಷಕ್ಕೆ ಹಾರಿ ಅಂತರ್ಧಾನವಾಗಿ, ಕ್ಷಣಮಾತ್ರದಲ್ಲಿ ಶಂಕರನು ತನ್ನ ಹಣೆಗಣ್ಣಿನಿಂದ ಬೆಂಕಿಯನ್ನು ಸುರಿಯುವಂತೆ ರಕ್ತಸಿಕ್ತವಾದ ಕಲ್ಲುಗಳ ಮಳೆಗರೆದಳು. ಅದರಿಂದ ಎಂಟು ದಿಕ್ಕುಗಳಲ್ಲಿಯೂ ಕತ್ತಲೆಯ ಮೊತ್ತ ಆವರಿಸಿತು; ಇದರಿಂದ ದೇವತೆಗಳು ಭ್ರಾಂತಗೊಂಡು ಬೊಂಬೆಗಳಂತೆ ಚಲಿಸತೊಡಗಿದರು. ರಕ್ಕಸಿಯ ಗರ್ಜನೆಯಿಂದ ನೆಲವೇ ಅದುರಿತು. ಸೋದರರು ಅತ್ತಿತ್ತ ನೋಡಿ ಬಾಣ ಬಿಡಲು ಕೈಯೆತ್ತಲು ಅಲ್ಲೆಲ್ಲ ಅವಳ ಕಲ್ಲುಮಳೆಗರೆಯಿತು. ಇದನ್ನೆಲ್ಲ ನೋಡುತ್ತಿದ್ದ ಮುನಿಪೋತ್ತಮ ವಿಶ್ವಾಮಿತ್ರನು, "ಅಸಮಾನವಿಕ್ರಮ ದಶರಥಕುಮಾರನೇ, ಸೂರ್ಯನು ಅಸ್ತಮಿಸಲು ಅವಳಿಗೆ ಅತಿಬಲವು ಉಂಟಾಗುತ್ತದೆ, ಆಗ ಆ ಕತ್ತಲಲ್ಲಿ ಆ ದಾನವಿಯನ್ನು ಸಂಹರಿಸಲು ಅಸಮಾಕ್ಷನಿಗೂ ಅಸಂಭವವಾಗಿಬಿಡುತ್ತದೆ. ಹೀಗಾಗಿ ಈಗಲೇ ನಿನ್ನ ಅಸಾಧಾರಣ ಶರಗಳನ್ನು ಪ್ರಯೋಗಿಸಿ ಆ ಯಕ್ಷಿಣಿಯನ್ನು ನೆಲಕ್ಕೆ ಬೀಳಿಸಿ ಜಯಲಕ್ಷ್ಮಿಯ ಒಡೆಯನಾಗು" ಎಂದು ಉತ್ತೇಜಿಸಲು ರಾಮನು ಹೊಸಮಸೆಯ ಬಾಣವನ್ನು ತೆಗೆದು ಬಿಲ್ಲಿಗೆ ಹೂಡಿ ಕಿವಿಯವರೆಗೂ ಸೆಳೆದು ಆ ಯಕ್ಷಿಣಿಯ ಪ್ರಾಣವನ್ನು ಕತ್ತರಿಸಿ ಬೀಳಿಸಲೆಂದು ಚಳಕ್ಕನೆ ಬಿಟ್ಟ. ಆ ಕೆಂಗರಿಬಾಣವು ಕಾಲಾಗ್ನಿಯ ಹಾಗೆ ಬುಸುಗುಡುತ್ತ ಕೆಂಗಿಡಿಗಳನ್ನು ಸುರಿಸುತ್ತ ಮುಂದರಿಯಿತು. ಆಗ ಆ ರಕ್ಕಸಿಯು

ರಾಮಲಕ್ಷ್ಮಣರ ಕಡೆಗೆ ತನ್ನ ವಿಶಾಲವಾದ ಎದೆಯನ್ನು ಚಾಚಿ ಧಾವಿಸಿದಳು. ಆದರೆ ರಾಮನು ಬಿಟ್ಟ ಕೆಂಗರಿಗೋಲು ಅವಳ ಎದೆಗೆ ತಾಕಿತು, ಆಗ ಅವಳ ಆತ್ಮಜ್ಯೋತಿಯು ಅವಳಿಂದ ಹೊರಬಿದ್ದು ಸೊಡರಿನಂತೆ ಹೊಳೆಯುತ್ತ ಹರಿಯಿರುವ ಎಡೆಗೆ ಆಗಸದ ಮಾರ್ಗದಲ್ಲಿ ಸಾಗಿ ಕಣ್ಮರೆಯಾಯಿತು.

ಕದನಕರ್ಕಶ ರಾಮನು ತನ್ನೆದುರಿಗೆ ಧಾವಿಸುವ ಯಕ್ಷಿಣಿಯ ಎದೆಯನ್ನು ಸೀಳಿ ಕೆಡವಲು ಆಗಸದಲ್ಲಿ ಕಿಕ್ಕಿರಿದಿದ್ದ ದೇವತೆಗಳು ಸಂತಸಭರಿತರಾಗಿ ಹೂಮಳೆಗರೆದರು, ಸಂತಸದಿಂದ ದುಂದುಭಿಯನ್ನು ಮೊಳಗಿದರು, 'ರಘುರಾಮನಿಗೆ ಜಯವಾಗಲಿ' ಎಂದು ಸ್ತುತಿಗೈದರು. ಈ ಅದ್ಭುತಕಾರ್ಯವನ್ನು ನೋಡಿದ ಮುನಿವರರೆಲ್ಲ ನಿಗಮೋಕ್ತ ರೀತಿಯಲ್ಲಿ ರಾಮಲಕ್ಷ್ಮಣರನ್ನು ಹೊಗಳಿದರು. ಗಂಧರ್ವರು ಅತ್ಯಂತ ಮಧುರವಾಗಿ ಗಾನಮಾಡಿದರು, ದೇವಕನ್ನಿಕೆಯರು ಮುದದಿಂದ ನಾನಾ ವಿಧವಾದ ರೀತಿಗಳಲ್ಲಿ ಮನೋಹರವಾಗಿ ಕುಣಿದರು, ದೇವತೆಗಳು ಬೇಡಿದವರ ಇಷ್ಟಾರ್ಥಗಳನ್ನು ಸಲ್ಲಿಸಿದರು. ಗಾಧಿಸುತ ಮುನಿವರ್ಯನು ಅಪರಿಮಿತ ಸಾಹಸದ ಹುಡುಗರನ್ನು ಮುದ್ದಿಸಿ ಮುಂಡಾಡಿ ಸುಖದಲ್ಲಿ ಓಲಾಡಿದರು, ಮತ್ತೆ ಮತ್ತೆ ಉಪಚಾರದ ಮಾತುಗಳನ್ನಾಡುತ್ತ ತನ್ನ ಮನದ ಹಿಗ್ಗನ್ನು ಹೊರಗೆಡವಿದರು. ಎಲ್ಲರಗೂ ಬಾಧೆಯೀಯುತ್ತಿದ್ದ ಸುಂದನ ಹೆಂಡತಿ ಮಡಿದದ್ದರಿಂದ ಚತುರ್ದಶಲೋಕಗಳಿಗೂ ಸಂತಸವಾಯಿತು. ದೇವೇಂದ್ರನು ಸಮ್ಮೋದದಿಂದ ಬಂದು ವಿಶ್ವಾಮಿತ್ರನೊಡನೆ ಹೀಗೆಂದ: "ಈ ದಯಾಂಬುನಿಧಿಯಾದ ರಾಘವನಿಗೆ ನೀನು ಭೃಶಾಶ್ವನಿಂದ ಪಡೆದ ಎಲ್ಲ ಅಸ್ತ್ರಸಂತತಿಯನ್ನೂ ಆದರದಿಂದ ಹೇಳಿಕೊಡು, ಹಾಗೆ ಮಾಡಲು ಇದು ಸುಸಮಯ." ಸಂಕ್ರಂದನನು ಹೀಗೆ ನುಡಿಯಲು ಮುನಿವರ್ಯನು ಆನಂದದಿಂದ, "ಕಾಕುತ್ಸ್ಥಕುಲತಿಲಕ, ಕರುಣಾವನಧಿ, ನೀನು ನನ್ನೊಡನೆ ಆನಂದದಿಂದ ಬಂದು ರಕ್ಷಣೆಗೈದೆ. ಬಳಿಗೆ ಬಾ" ಎಂದು ಆದರದಿಂದ ಕರೆದು, "ರಘುನಂದನನೆ, ನೀನು ಮಾಡಿದ ಈ ಕಾರ್ಯದಿಂದಾಗಿ ಲೋಕವೇ ಸುಖವನ್ನು ಹೊಂದಿತು, ನನಗೆ ನಿನ್ನ ಸಾಮೀಪ್ಯದಿಂದ ಸಂತುಷ್ಟಿಯಾಗಿದೆ. ಇವತ್ತಿನ ರಾತ್ರಿಯನ್ನು ಈ ಮಹಾವನದಲ್ಲಿ ಕಳೆದು, ನಾಳೆ ಸೂರ್ಯೋದಯದ ಬಳಿಕ ಮುಂದೆ ಸಾಗೋಣ" ಎಂದು ಹೇಳಿದ. ಮುನಿಪೋತ್ತಮನ ಸಾದರದ ಮಾತುಗಳನ್ನು ಕೇಳಿ ಶ್ರೀರಾಮನು ಅತ್ಯಂತ ಪ್ರೀತಿಗೌರವಗಳಿಂದ ಕೂಡಿ, "ಹಿರಿಯರೇ, ನೀವು ಹೇಳಿದಂತೆ ಮಾಡಿದ ಮಾತ್ರದಿಂದ ನಾನು ಸಂತಸದಾಯಕವಾದ ಫಲವನ್ನು ಪಡೆದಿದ್ದೇನೆಯೇ ಹೊರತು ನನ್ನದೆಂಬುದು ಯಾವುದೂ ಇಲ್ಲ" ಎಂದು ನುಡಿಯಲು, ಮುನಿಯು ಪೂರ್ಣಚಂದ್ರನ ಕಿರಣಗಳಂತೆ ನಗೆಯನ್ನು ಸೂಸುತ್ತ ನಲಿದ.

ನನ್ನ ಮನೆಯ ಕಡೆಗೆ ವಸುಕರನು ಬರುತ್ತಾನೆ, ವಸುಮತೀಜನರು ಹೊಸ ಬಗೆ ಎಂದು ಅಚ್ಚರಿಪಡುವಂತೆ, ಅವನಿಗೆ ಆತಿಥ್ಯವನ್ನು ಮಾಡಿ ಪೂಜಿಸಬೇಕು ಎಂಬ ಸಡಗರದಿಂದ ಪಶ್ಚಿಮಾಧಿಪತಿಯು ಕಾಯುತ್ತಿರಲು, ಆ ಹೊತ್ತಿಗೆ ರಜನೀ ಲಲನೆಯು ಕೆಂಪಾದ ವಸ್ತ್ರವನ್ನುಟ್ಟು ಹೊಳೆಯುವ ಮುತ್ತಿನ ಹಾರವನ್ನು ಧರಿಸಿ ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿಕೊಂಡಂತೆ ನಕ್ಷತ್ರಗಳೂ ಕತ್ತಲೆಯೂ ಎಲ್ಲ ಕಡೆಯಲ್ಲಿ

ಪಸರಿಸಿತು. ಸೂರ್ಯನು ಅಸ್ತಪರ್ವತದ ತುದಿಗೈಯಲು ಕೌಶಿಕಮುನಿಯು ಭರದಿಂದ ಸಂಧ್ಯಾಕೃತ್ಯಗಳನ್ನು ನೆರವೇರಿಸಿ ಬಾಲಕರ ಜೊತೆಯಲ್ಲಿ ಬಂದು ಆ ಅರಣ್ಯದ ಮಧ್ಯದಲ್ಲಿ ಹುಲ್ಲುಹಾಸಿಗೆಯ ಮೇಲೆ ಪವಡಿಸಿದ. ಸುಖನಿದ್ರೆ ಬರುವವರೆಗೂ ಮಕ್ಕಳಿಗೆ ನಾನಾ ಬಗೆಯ ಪುಣ್ಯಕತೆಗಳನ್ನು ಸಾರವತ್ತಾಗಿ ನಿರೂಪಿಸುತ್ತ, ನಿರ್ವಾಣಪರನಂತೆ ಎಚ್ಚರದಿಂದ ತಾನೂ ನಿದ್ರೆಗೈದ. ಶಚೀದೇವಿಯು ತನ್ನ ದಟ್ಟವಾದ ಮುತ್ತಿನ ಹಾರವನ್ನು ಕಿತ್ತಿಟ್ಟಾಗ ದಿಡೀರನೆ ನೆಲಕ್ಕುರುಳಿದ ಮುತ್ತುಗಳಂತೆ ಅಲ್ಲಲ್ಲಿ ತಾರಕೆಗಳು ಹೊಸ ಪರಿಯಲ್ಲಿ ಚೆಲ್ಲವರಿದವು; ರಜನೀಶನೊಡನೆ ಬೆರೆತು ಮೈಮರೆತ ಮುಗ್ಧೆಯ ತಲೆಗೂದಲಿನಂತೆ ಅಲ್ಲಲ್ಲಿ ಕತ್ತಲು ಹರಡಿಕೊಂಡಿತು.

ದಯಾಪರನಾದ ರಘುವೀರನನ್ನು ನೋಡಲು ಬರುತ್ತೇನೆಂಬ ಸಂತಸದಿಂದ ಮೂಡಲಗಿರಿಯು ತನ್ನ ತಲೆಯಲ್ಲಿ ದಿವ್ಯಮಾಣಿಕ್ಯವನ್ನು ಚೆಂದದಿಂದ ಧರಿಸಿದನೋ ಎಂಬಂತೆ ಭಾಸ್ಕರಬಿಂಬವು ತೋರಿಬರಲು, "ಪದ್ಮಾಕ್ಷ ರಾಮನೇ, ಸೂರ್ಯನು ಉದಯಿಸಿದ್ದಾನೆ, ಬೇಗ ಎಚ್ಚರಗೊಳ್ಳು" ಎಂದು ಮುನಿಪತಿಯು ಕೂಗಲು ನಿದ್ರೆತಿಳಿದು ಶ್ರೀ ರಾಮನು 'ಮಧುಸೂದನ ಅಚ್ಯುತ ಅನಂತ' ಎಂದು ನಾಮಸ್ಮರಣೆ ಮಾಡುತ್ತ ಮೇಲೆದ್ದ. ಆಗ ಶಮಧನನು "ರಾಜಕುಮಾರ, ಬೇಗ ಪೂರ್ವಸಂಧ್ಯಾವಿಧಿಗಳನ್ನು ಮುಗಿಸಿ ಬಂದರೆ ಅಸ್ತ್ರಗಳ ಬೀಡನ್ನೂ ಅಸುರರಿಗೆ ಅಸದಳವಾದ ವೀರಲಕ್ಷ್ಮಿಯ ನಾಡನ್ನೂ ನಿನಗೆ ಬೋಧಿಸುತ್ತೇನೆ" ಎನ್ನಲು ಸಂಭ್ರಮದಿಂದ ರಾಮಚಂದ್ರಲಕ್ಷ್ಮಣರು ಸ್ನಾನ ಮಾಡಿ ಸಂಧ್ಯಾವಂದನೆಗೈದು ಕೌಶಿಕಮುನಿಯ ಚರಣಾರವಿಂದಗಳಿಗೆ ನಮಸ್ಕಾರ ಮಾಡಿ ಸಿದ್ಧರಾದರು. ಆಗ ಆ ತಪೋಧನನು ಅವರಿಗೆ ಅಸ್ತ್ರಗ್ರಾಮವನ್ನು ತ್ವರಿತವಾಗಿ ಉಪದೇಶ ಮಾಡಿದ. ದಂಡ ಧರ್ಮ ಕಾಲ ವಿಷ್ಣು ಚಕ್ರಗಳನ್ನೂ, ಉದ್ದಂಡವೆನಿಸಿದ ಐಂದ್ರ, ಶೈವಶೂಲ, ಬ್ರಹ್ಮಾಸ್ತ್ರ, ಬ್ರಹ್ಮಶಿರ, ಬ್ರಹ್ಮದಂಡಗಳನ್ನು ಉಪದೇಶಿಸಿದ. ಗದಾಯುಗ್ಮವನ್ನೂ, ಧರ್ಮಪಾಶ ಕಾಲಪಾಶ ವರುಣಪಾಶಗಳನ್ನೂ, ಮೋದಕಿಗಳನ್ನೂ, ಶತ್ರುಖಂಡನಗೈವ ಮೈನಾಕ ಎಂಬ ಅಶನಿಯುಗ್ಮವನ್ನೂ, ಮರುತ ಕುಬೇರಾಸ್ತ್ರಗಳನ್ನೂ, ನಾರಾಯಣಾಸ್ತ್ರ ಆಗ್ನೇಯಾಸ್ತ್ರಗಳನ್ನೂ, ಶಿಖರವೆಂಬ ವಾಯವ್ಯಾಸ್ತ್ರ, ಪ್ರಮದಾಸ್ತ್ರ ಕ್ರೌಂಚ ಎಂಬ ಶಕ್ತಿದ್ವಯವನ್ನೂ, ಅಧಿಕವಾದ ಮುಸಲ ಕಂಕಾಳ ಕಾಪಾಲ ಕಂಕಣ ಎಂಬ ಹೆಸರಿನ ಅಸ್ತ್ರಗಳನ್ನೂ, ಅಸಿರತ್ನ ಗಾಂಧರ್ವ ಪ್ರಸ್ವಾಪನ ಉದಾರಮೋಹನ ಸೌರದರ್ಪಣ ಶೋಷಣ ಸಂತಾಪನ ವಿಲಾಪನ ನಂದನ ವಿದ್ಯಾಧರ ಅಸ್ತ್ರಗಳನ್ನೂ, ಪೈಶಾಚಮೋಹನ, ಸೌಮನ, ತಾಮಸ, ನೈಶಾಟಹರವಾದ ಮೌಸಲ, ಸತ್ಯದುರ್ಧಕ್ಷ, ಈಶಾನ, ಸಂವರ್ತ, ಮಾಯಾಧರ, ಘೋರವಾದ ಸೋಮ ಸಿಸಿರಗಳನ್ನೂ, ಮಾತಿಗೆ ನಿಲುಕದ ಮಾನವಾಸ್ತ್ರ ಶತ್ರೈರ ಆಶೀಹತ ಉತ್ಕರಿಷ ಮುಂತಾದ ದಿವ್ಯಾಸ್ತ್ರಗಳನ್ನು, ರಮೇಶನೇ, ತೆಗೆದುಕೋ" ಎಂದು ಪೂರ್ವಮುಖನಾಗಿ ನಿಂತು ಆ ಮನಿವರನು ರಾಮಲಕ್ಷ್ಮಣರಿಗೆ ಉಪದೇಶ ಮಾಡಿದ.

"ದೇವಾಸುರರಿಗೂ ಸಾಧ್ಯವಲ್ಲದ ಅಮಿತ ಪ್ರಭಾವದಿಂದ ಕೂಡಿದ ಶಸ್ತ್ರಸಮೂಹವನ್ನೆಲ್ಲ, ಉತ್ತಮೋತ್ತಮ ರಾಜನೇ, ತೆಗೆದುಕೋ" ಎನ್ನುತ್ತ ಕೌಶಿಕನು ಸಂಪ್ರೀತಿಯಿಂದ

ಕಾಕುತ್ಸ್ಥಮಣಿಗೆ ಸಾವಧಾನದಿಂದ ಶಸ್ತ್ರಸಂತತಿಯನ್ನು ನೀಡಲು ಬ್ರಹ್ಮಚಾರಿ ರಾಮನು ಗುರು ಹೇಳಿದ ಮಂತ್ರಗಳನ್ನು ಪುನರಾವೃತ್ತಿ ಮಾಡಿ ಒಪ್ಪಿಸಿದ. ಮಂತ್ರಗಳನ್ನು ಜಪಿಸಲು ಆ ಕ್ಷಣವೇ ಎಲ್ಲ ಮಂತ್ರಾಧಿದೇವತೆಗಳೂ ಅಪರಿಮಿತ ತೇಜಸ್ಸಿನಿಂದ ಕೂಡಿ ಪ್ರತ್ಯಕ್ಷರಾಗಿ, "ನೃಪವರ್ಯನೇ, ನಾವು ನಿನ್ನ ಸೇವಕರು, ಏನು ಅಪ್ಪಣೆ?" ಎಂದು ಕೈಮುಗಿದು ನಿಂತುಕೊಂಡರು. ಆಗ ತಾಪಸಿಯು ರಾಮನಿಗೆ, "ಮಗು, ನಿನ್ನ ನುಡಿಗಳನ್ನು ಪಾಲಿಸಲು ಎಲ್ಲ ಅಸ್ತ್ರಗಳೂ ಬಂದು ನಿನ್ನ ಕೃಪೆಗೆ ಪಾತ್ರೀಭೂತರಾಗಿ ನಿಂತಿವೆ, ನೀನು ಮನಸ್ಸಿನಲ್ಲಿ ಅಂದುಕೊಂಡದ್ದು ನೆರವೇರುತ್ತದೆ" ಎಂದು ಹೇಳಿ ಸರ್ವಾಸ್ತ್ರಗಳನ್ನೂ ಉಪಚರಿಸಿ ಅಭಯವನ್ನೀಯಲು ಆ ದೇವತೆಗಳು ಮುನಿಯ ಪಾದಗಳಿಗೆ ನಮಿಸಿ ಮರಳಿದರು. "ತಾಪಸೋತ್ತಮರೇ, ತಾವು ಪ್ರೀತಿಯಿಂದ ನಮಗೆ ಬೋಧಿಸಿದ ಅಸ್ತ್ರಗಳನ್ನು ಉಪಸಂಹರಿಸುವ ಬಗೆಯನ್ನು ತಿಳಿಸುವ ಕೃಪೆಮಾಡಬೇಕು" ಎಂದು ರಾಮನು ಬೇಡಿಕೊಳ್ಳಲು, ಅವುಗಳನ್ನು ಕೊನೆಗೊಳಿಸುವ ಬಗೆಯನ್ನೂ ಉಪದೇಶಿಸಿದ. ವ್ಯಾಜಹಾರ, ಪ್ರತೀಹಾರ, ಧೃತಿಮಾನ್, ಶುಚಿ, ಸುವ್ರತ, ಸತ್ಯಕೀರ್ತಿ, ರಭಸ, ಅಪ್ರತಿಸವ್ಯ ನಾಮಧೃಷ್ಟ ಪರಾಙ್ಮುಖ ವಾಙ್ಮುಖ, ಲಕ್ಷ್ಯಾಲಕ್ಷ್ಯ, ಸಮವಿಷಮ, ಸುಮನಾಭ, ಅಷ್ಟಾಕ್ಷ, ಶತವಕ್ತ್ರ ದಶಶೀರ್ಷ ಸಮಾಜ, ಶತೋದರ, ಪದ್ಮನಾಭ, ಮಹಾನಾಭ ಹೆಸರಿನ ಅಸ್ತ್ರಗಳನ್ನೂ; ದುಂದುನಾಥ, ಸುನಾಥ, ಜ್ಯೋಯಿಷ, ಕೃಶನ, ಮರುವಿಮಲ, ನೈರಾಶ್ಯ, ಯೋಗಂಧರ, ಹರೀಂದ್ರ, ಸಾರ್ಚಿಮಾಲಿ, ಧೃತಿಮಾಲಿ, ಕರವೀರಕರ, ಪಿತೃಸೌಮನಸ, ಧನ ಧನ್ಯ ದುರುಮಕರ, ವೈಧೂತ, ಕಾಮರುಚಿ, ಮೋಹನ, ಪರಮಾರಣ, ಕಾಮರೂಪ, ಜೃಂಭಕ, ಸರ್ವನಾಭ ಮುಂತಾದ ಹೆಸರುಗಳ ಶರಗಳನ್ನು ಮುನಿವರ್ಯನು ಕೊಡಮಾಡಲು ಕಕುತ್ಸ್ಥಾಗ್ರಣಿಯು ಅವುಗಳನ್ನು ಕೈವಶಮಾಡಿಕೊಂಡು ಅವುಗಳನ್ನು ಜಪಿಸಲು ಕ್ಷಣಾರ್ಧದಲ್ಲಿ ಅಸ್ತ್ರದೇವತೆಗಳು ಮುಂದೆ ಬಂದು, ಹೊಗೆ ಬೆಂಕಿ ಚಂದ್ರಸೂರ್ಯರ ತೇಜಸ್ಸಿನಿಂದ ಕೂಡಿ ಕೈಮುಗಿದು, "ನಾವು ನಿನ್ನ ಸೇವಕರು, ನಮಗೆ ಅಪ್ಪಣೆಯನ್ನು ನೀಡು" ಎಂದು ವಿನಮ್ರತೆಯಿಂದ ನಿಂತವು. ಈ ಪರಿಯಲ್ಲಿ ಇಷುಸಮೂಹವು ಬೆಸಗೊಳ್ಳಲು ನಸುನಗುತ್ತ ಶ್ರೀರಾಮನು, "ಒಳ್ಳೆಯದು, ನೀವು ನನ್ನ ಚಿತ್ತದಲ್ಲಿ ನೆಲೆಗೊಂಡಿದ್ದೀರಿ. ನಾನು ಯಾವಾಗ ನೆನೆಸಿಕೊಳ್ಳುವೆನೋ ಆಗ ಬರಬೇಕು" ಎನ್ನಲು, ಅಸ್ತ್ರಗಳೆಲ್ಲ ಪ್ರೀತಿಯಿಂದ ನಮಸ್ಕರಿಸಿ ಒಪ್ಪಿಗೆಯನ್ನು ಪಡೆದು ಹಿಂದಿರುಗಿದುವು.

ಆನಂತರ ಆ ತೇಜೋವಂತ ಮುನಿರಾಯನು ಸಂತಸದಿಂದ ಬಾಲಕರನ್ನೊಳಗೊಂಡು ವೇಗವಾಗಿ ಮುಂದಿನ ಗುರಿಯತ್ತ ನಡೆದ. ಎಲ್ಲೆಲ್ಲಿ ನೋಡಿದರೂ ಚಿಗುರುಗಳಿಂದ ಕೂಡಿದ ಮರಗಳ ಸಾಲು, ಬಳ್ಳಿಗಳು, ಹೊಳೆಯುವ ದಂತಗಳಿಂದ ಕೂಡಿದ ಆನೆಗಳು. ಬೆಳ್ಳಗೆ ಶೋಭಿಸುವ ಹಾಲಕ್ಕಿಗಳ ಚಿಲಿಪಿಲಿಗಳ ಇಂಚರದಿಂದ ತುಂಬಿ ಅರಣ್ಯವು ಶೋಭಾಯಮಾನವಾಗಿತ್ತು. ಮಹಾವಿದ್ಯೆಯನ್ನು ಪಡೆದ ಹಾಗೂ ನೋಡಲು ವಾಮನಮೂರ್ತಿಯಾದ ಶ್ರೀರಾಮನ ಮುಂದೆ ಆಗಸವನ್ನೇ ಅಳೆಯುವ ರೀತಿಯಲ್ಲಿ ಮಹಾವೃಕ್ಷಗಳು ಎಲ್ಲೆಡೆಯೂ ಬೆಳೆದು ನಿಂತಿದ್ದವು. ತಂಡತಂಡವಲ್ಲಿ ಕುಣಿಯುವ ನವಿಲುಗಳು, ಸವಿನುಡಿಯನ್ನಾಡುವ ಗಿಳಿಗಳ ಬಳಗಗಳು. ಹಿಂಡು ಹಿಂಡಾಗಿ ನಲಿಯುವ

ಕಲಹಂಸಗಳು – ಇವುಗಳಿಂದ ಕೂಡಿ ರಮಣೀಯ ನಂದನದಂತೆ ಆಹ್ಲಾದಕಾರಿಯಾದ ಆ ಮಹಾರಣ್ಯವನ್ನು ಕಂಡು ಅಚ್ಚರಿಗೊಂಡು ಕುತೂಹಲದಿಂದ ಕೂಡಿದ ಪುಂಡರೀಕಾಕ್ಷ ಕೋದಂಡರಾಮನು, "ನೋಡಲು ಸುಂದರವಾಗಿ ಪರಿಮಳವನ್ನು ಸೂಸುವ ಹೂಗಳಿಂದ ಕೂಡಿದ ಗಿಡಬಳ್ಳಿಗಳಿಂದಲೂ, ಫಲಭರಿತವಾದ ಮರಗಳಿಂದಲೂ, ತಿಳಿನೀರಿನ ಕೊಳಗಳಿಂದಲೂ, ಸುವಾಸನೆಯನ್ನು ಹೊತ್ತು ಬೀಸುವ ಗಾಳಿಯಿಂದಲೂ ಕೂಡಿ ಅತ್ಯಂತ ಮನೋಹರವನ್ನುಂಟುಮಾಡುವ ಈ ಆಶ್ರಮವು ಯಾರದ್ದು? ದಯವಿಟ್ಟು ಹೇಳಿ" ಎಂದು ಮುನಿಶೌಂಡನನ್ನು ವಿಚಾರಿಸಿದ. ಯಜ್ಞವಿನಾಶಕರಾದ ಘೋರ ರಕ್ಕಸರು ದಾರುಣಕಾರ್ಯವನ್ನೆಸಗುವುದು ಯಾವಾಗ, ಎಲ್ಲಿ, ತಮ್ಮ ಆಶ್ರಮ ಇನ್ನೂ ಎಷ್ಟು ದೂರವಿದೆ ಎಂದೂ ಕೇಳಿದಾಗ, ವಿಶ್ವಾಮಿತ್ರ ಮುನಿಯು, "ರಾಮ, ಮಂಗಳನಾಮ, ಭಜಕರಘನಿರ್ನಾಮ, ತಾಮರಸಮಿತ್ರಗೋತ್ರಸಂಭವಸೋಮ, ರಾಮಪುರೀಧಾಮನಾದ ಮಂಗಳಮೂರ್ತಿಯೇ, ಈ ಮಹಾಪುಣ್ಯಕರವಾದ ಈ ಜಾಗದಲ್ಲಿ ಕಾಮಹರಮಿತ್ರನು ಯತಿರೂಪವನ್ನು ಧರಿಸಿ ಯಜ್ಞಮಾಡುವ ಬಗೆಯನ್ನೂ ಹಾಗೂ ಭೀಮಬಲರಾದ ರಕ್ಕಸರು ಬರುವ ರೀತಿಯನ್ನೂ ಹೇಳುತ್ತೇನೆ, ಕೇಳು" ಎಂದು ನಿರೂಪಿಸತೊಡಗಿದ.

೧೩. ರಾಮಲಕ್ಷ್ಮಣರಿಂದ ಯಾಗರಕ್ಷಣೆ

ಮೇನಕಾತ್ಮಜೆಯೆ ಕೇಳು, ದೀನರಕ್ಷಣ ದಯಾಪರ ರಾಮನಿಗೆ ಆ ಮುನಿಯು ಆ ಕಾನನದ ವೃತ್ತಾಂತವನ್ನು ಈ ರೀತಿ ಕಥನಿಸಿದ: ಹಿಂದಿನ ಯುಗದಲ್ಲಿ ಸುರನಾಯಕನು ಜ್ಞಾನನಿಧಿಯಾದ ಭೂಸುರೋತ್ತಮ ವಾಮನನು ಅನೇಕ ಸಾವಿರ ವರ್ಷಗಳ ಕಾಲ ತಪಸ್ಸನ್ನು ಆಚರಿಸಿದ ಈ ನೆಲವನ್ನು ಸಿದ್ಧಾಶ್ರಮ ಎಂಬ ಹೆಸರಿನಿಂದ ಕರೆಯುತ್ತಾರೆ. ಇಲ್ಲಿ ವಿರೋಚನನ ಮಗ ಬಲಿಯು ದೇವಾದಿಗಳನ್ನೆಲ್ಲ ಗೆದ್ದು ಎಲ್ಲರೂ ಸಂತಸದಿಂದಿರುವ ರೀತಿಯಲ್ಲಿ ಲೋಕತ್ರಯಗಳನ್ನೂ ಆಳಿದ. ಹಾಗಿರಲು, ಯಾಗ ಮಾಡಬೇಕೆಂದು ಆಸೆಪಟ್ಟು ಹಾಗೆ ಮಾಡತೊಡಗಿದಾಗ ಇಲ್ಲಿ ನಿಲ್ಲಲು ದೇವತೆಗಳಿಗೆ ಅಶಕ್ಯವಾದಾಗ ದೇವೇಂದ್ರನ ಬಳಿಗೆ ಬಂದು ಲಕ್ಷ್ಮೀಪತಿಯಾದ ಶ್ರೀವಿಷ್ಣುವನ್ನು ವೇದೋಕ್ತ ರೀತಿಯಲ್ಲಿ ಮನೋಹರವಾದ ವಾಣಿಯಿಂದ ಸ್ತುತಿಸಿ, "ಬಲಿ ಚಕ್ರವರ್ತಿಯು ಮೂರು ಲೋಕಗಳನ್ನೂ ವ್ಯಾಪಿಸುವ ಮಹಾಧ್ವರವನ್ನು ನೆರವೇರಿಸಿ, ಮೂರು ಲೋಕಗಳಲ್ಲಿಯೂ ತನಗೆ ಸಮಾನರು ಇಲ್ಲದಂತೆ ಮೆರೆಯಲು ಹೊರಟಿದ್ದಾನೆ. ಅದರಿಂದಾಗಿ ಇಂದ್ರನಿಗೆ ಗೆಲುವು ಸಿಗುವುದು ಸಾಧ್ಯವಿಲ್ಲ. ನೀನು ವಾಮನ ರೂಪವನ್ನು ತಾಳಿ ಮೃದೂಕ್ತಿಗಳಿಂದ ಆತನಲ್ಲಿ ಭಿಕ್ಷೆ ಕೇಳಿ ಜಯವನ್ನು ಗಳಿಸಿ ಅವನನ್ನು ವಶಮಾಡಿಕೊಂಡು ನಮ್ಮನ್ನು ಕಾಪಾಡಬೇಕು" ಎಂದು ಬೇಡಿಕೊಂಡರು.

ಅಷ್ಟರಲ್ಲಿ ಕಶ್ಯಪನು ತನ್ನ ಪತ್ನಿಯಾದ ಅದಿತಿಯೊಡನೆ ವನಜಾಕ್ಷನನ್ನು ಕುರಿತು ಸಾವಿರ ವರ್ಷಗಳ ಕಾಲ ದಿವ್ಯವಾದ ತಪಸ್ಸನ್ನಾಚರಿಸಿ ವಿಷ್ಣುವನ್ನು ಮೆಚ್ಚಿಸಿದ; ಆಗ ನಿಖಿಲಾತ್ಮನು ಪ್ರೀತಿಯಿಂದ ಪ್ರತ್ಯಕ್ಷನಾಗಿ, ಅವನು ತಪಸ್ಸು ಮಾಡಿದ ಕಾರಣವೇನೆಂದು

ವಿಚಾರಿಸಿ, ಅವನು ಬೇಡಿದುದನ್ನು ನೀಡುವ ಆಶ್ವಾಸನೆಯಿತ್ತ. ಆಗ ಆ ಮುನಿಯು, "ತಪೋಮಯನೇ, ತಪೋರಾಶಿಯೇ, ತಾಪಸವರ್ಯನೇ, ತಪೋರೂಪನೇ, ತಾಪಸಲೋಕಸಂತಾಪಹರನೇ, ಬ್ರಹ್ಮನಾದಿಯಾದ ದೇವತೆಗಳಿಂದ ನುತನಾದ ದೇವದೇವನೇ, ಶರಣರನ್ನು ಕಾಪಾಡುವ ಕಾರಣದಿಂದ ನೀನು ನನ್ನ ಹೊಟ್ಟೆಯಲ್ಲಿ ಮಗನಾಗಿ ಹುಟ್ಟಬೇಕು, ಶೋಕಾತುರರಾದ ಸುರರನ್ನು ರಕ್ಷಿಸಬೇಕು" ಎಂದು ಬೇಡಿಕೊಂಡ. ಸುಪ್ರೀತನಾದ ದೇವನು ಆತನ ಇಷ್ಟವನ್ನು ನೆರವೇರಿಸುತ್ತೇನೆಂದು ಭರವಸೆಯಿತ್ತು ಮುನಿವೃಂದಾರಕರ ಕಡೆಗೆ ಕೃಪಾಕಟಾಕ್ಷವನ್ನು ಬೀರಿದ. ಅದರಂತೆ ಕಶ್ಯಪ–ಅದಿತಿಗಳಿಗೆ ಮಗನಾಗಿ ಈ ವನದಲ್ಲಿ ಅವತಾರ ಮಾಡಿ, ಬಲಿಯನ್ನು ಬಂಧಿಸಿ ಇಂದ್ರಾದಿಗಳನ್ನು ಪೊರೆಯುವೆನೆಂದು ಹೇಳಿದ. ಅದರಿಂದ ದೇವತೆಗಳೆಲ್ಲ ಸಂತಸಗೊಂಡು ತೆರಳಿದರು. ಇತ್ತ ಶ್ರೀಹರಿಯು ಕೃಪಾದೃಷ್ಟಿಯಿಂದ ವಾಮನಾಕೃತಿಯನ್ನು ತಳೆದು ಕಶ್ಯಪನ ಮಗನಾಗಿ ಹುಟ್ಟಿದ. ಬಲಿ ಮಾಡುತ್ತಿದ್ದ ಯಜ್ಞಶಾಲೆಗೆ ಬಂದು ಮೂರಡಿ ಭೂಮಿಯನ್ನು ಬೇಡಿ, ಅದನ್ನವನು ನೀಡಿದಾಗ ಮೂರು ಲೋಕಗಳನ್ನೂ ಎರಡು ಅಡಿಗಳಲ್ಲಿ ಅಳೆದು, ಮೂರನೆಯ ಅಡಿಯನ್ನು ಪಡೆಯಲು ಬಲಿಯನ್ನು ತುಳಿದು ಸಿರಿಯನ್ನೆಲ್ಲ ಇಂದ್ರನಿಗೆ ದಯಪಾಲಿಸಿದ. ಅಂದಿನಿಂದ ವಾಮನನು ಈ ಭೂಮಿಯಲ್ಲಿ ದಿವ್ಯತಪಸ್ಸನ್ನೆಸಗುತ್ತ, ಮುನಿಗಳಿಗೆ ಉಪದೇಶಗೈಯುತ್ತ ಪರಮಪುರುಷನ ವರದಿಂದಾಗಿ ಈ ಅರಣ್ಯದಲ್ಲಿ ನೆಲಸಿದ್ದಾನೆ. ಅವನು ಸಿದ್ಧಿಯನ್ನು ಪಡೆದ ಈ ವನವನ್ನು ಸಿದ್ಧಾಶ್ರಮ ಎಂಬ ಹೆಸರಿನಿಂದ ಕರೆಯುತ್ತಾರೆ. ನಾನಾ ಮುನಿವರ್ಯರು ಇಲ್ಲಿ ನೆಲಸಿ ತಮ್ಮ ತಪಃಕೈಂಕರ್ಯವನ್ನು ನೆರವೇರಿಸುತ್ತಿದ್ದಾರೆ. ಇದು ಎಲ್ಲ ಸಿದ್ಧಿಗಳ ತಾಣವಾದುದರಿಂದ ಇದು ಮಹಾಯಜ್ಞಗಳ ನೆಲೆಯಾಗಿದೆ; ಮಾರೀಚ ಮೊದಲಾದ ರಕ್ಕಸರು ಇಲ್ಲಿಗೆ ಬಂದು ಯಜ್ಞವಿಘ್ನವನ್ನು ಮಾಡುತ್ತಿದ್ದಾರೆ ಎಂದು ಹೇಳಿ ಪದ್ಮಾಕ್ಷರಾದ ರಾಮಲಕ್ಷ್ಮಣರೊಡನೆ ಆ ವನವನ್ನು ಪುನರ್ವಸುವಿನೊಡನಿರುವ ಚಂದ್ರನಂತೆ ಹೊಳೆಯುತ್ತ ಪ್ರವೇಶಿಸಿದ.

ಹೀಗೆ ಯತಿರಾಯನು ದಶರಥನ ಮಕ್ಕಳೊಡನೆ ಬರುವ ಅತಿಶಯವನ್ನು ನೋಡುತ್ತ ಆಶ್ರಮವಾಸಿ ಮುನಿಗಳೆಲ್ಲ ಧಾವಿಸಿ ಬಂದು ಅರ್ಘ್ಯಪಾದ್ಯಾದಿಗಳನ್ನಿತ್ತು ಹಣ್ಣುಬೇರುಗಳನ್ನು ಸಮರ್ಪಣೆಗೈದು, ಗಾಧಿಸಂಭವನನ್ನು ಭಕ್ತಿಯಿಂದ ಪೂಜಿಸಿ, ಆನಂತರ ಬಾಲಕರನ್ನು ಉಪಚರಿಸಿ ತಪೋಮಂದಿರಕ್ಕೆ ಕರೆದುಕೊಂಡು ಹೋದರು. ಅಷ್ಟರಲ್ಲಿ, ರಾಮಲಕ್ಷ್ಮಣರು ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಬೇಗನೇ ಬಂದರು. ವಿನಯದಿಂದ ಕೈಗಳನ್ನು ಮುಗಿಯುತ್ತ ಸಂತೋಷದಿಂದ, "ಮುನಿನಾಥ, ಇವತ್ತೇ ಯಜ್ಞದೀಕ್ಷಿತರಾಗಿರಿ, ಈ ವನಕ್ಕೆ ಸಿದ್ಧಾಶ್ರಮ ಎಂಬ ಹೆಸರು, ಇದು ಸತ್ಯಶೌಚವಾದ ಸ್ಥಳ ಎಂಬ ಶಾಶ್ವತ ಕೀರ್ತಿಗೆ ಒಳಗಾಗುವ ಹಾಗೆ ಮಾಡಿ" ಎಂದು ಬಿನ್ನವಿಸಿಕೊಂಡರು. ರಘುನಂದನರ ಆ ವಾಣಿಯನ್ನು ಕೇಳಿದ ವಿಶ್ವಾಮಿತ್ರಮುನಿಯು ಯಾಗದೀಕ್ಷೆಯನ್ನು ಸ್ವೀಕರಿಸಿದ. ರಾಜಕುವರರು ಆ ರಾತ್ರಿಯನ್ನು ಪೂರ್ತಿ ಎಚ್ಚರಾಗಿಯೇ ಕಳೆದರು. ಸೂರ್ಯನು ಮೂಡಲಾಚಲದಲ್ಲಿ ಉದಯಿಸಲು ಶ್ರದ್ಧೆಯಿಂದ ತ್ವರಿತವಾಗಿ ಸಂಧ್ಯಾಕೃತ್ಯಗಳನ್ನು ನೆರವೇರಿಸಿ ಕೌಶಿಕಮುನಿಯ ಬಳಿಗೆ ಬಂದು ನಮಸ್ಕರಿಸಿ ಮುಗುಳುನಗುತ್ತ, "ಧೀರ ಮುನಿಶಾರ್ದೂಲ, ಕ್ರೂರರಾದ ರಕ್ಕಸಸಂಕುಲವು

ಯಜ್ಞವಿಘ್ನವನ್ನು ಮಾಡುವ ಸಮಯ ಯಾವುದೆಂದು ಹೇಳಿರಿ" ಎಂದು ಕೇಳಿದರು.; ಆಗ ವಿಶ್ವಾಮಿತ್ರನ ಎಡಬಲಗಳಲ್ಲಿ ಆವೃತರಾಗಿದ್ದ ತಾಪಸವೃಂದವು, "ಮುನಿಪೋತ್ತಮನು ಇವತ್ತಿನಿಂದ ಆರು ದಿನಗಳ ಕಾಲ ಹಗಲಿರುಳುಗಳಲ್ಲಿ ಮೌನದಿಂದ ಇರುತ್ತಾರೆ. ಹೀಗಾಗಿ ನೀವು ದಾನವರ ಉಪಟಳಕ್ಕೆ ಆಸ್ಪದವಾಗದಂತೆ ಎಚ್ಚರಿಕೆಯಿಂದ ಕಾಯುತ್ತ ಈ ಮಹಾಧ್ವರವನ್ನು ಸಾಂಗ ಮಾಡಿಸಬೇಕು" ಎಂಬು ಹೇಳಿತು. ಪರಮಋಷಿಗಳು ಅಪ್ಪಣೆಯಿತ್ತ ರೀತಿಯಲ್ಲಿಯೇ ಬಿಲ್ಲುಬಾಣಗಳನ್ನು ಧರಿಸಿ, ಮುನಿಪುಂಗವನು ಮಾಡುವ ಸಪ್ತತಂತುವನ್ನು ಪರಿಪಾಲಿಸುವುದಾಗಿ ಆ ಬಾಲಕರು ಆಶ್ವಾಸನೆಯಿತ್ತರು. ತಡಮಾಡದೆ ದರ್ಭೆಯನ್ನು ನೆಲದ ಮೇಲೆ ಹರವಿ, ಹೋಮಕುಂಡದಲ್ಲಿ ಸುರಿಯಲು ಬಳಸುವ ತುಪ್ಪವನ್ನಿರಿಸುವ ಸ್ರುಕ್, ಸೋಮರಸ ತುಂಬಿದ ಚಮಸ, ಬಗೆಬಗೆಯ ಹೂವುಗಳನ್ನು ಇರಿಸಿ, ವೇದಿಯಲ್ಲಿ ಅಗ್ನಿಯನ್ನಿಟ್ಟು ಹವಿಸ್ಸನ್ನರ್ಪಿಸಿ ಗಾಧಿಸುತನ ಜೊತೆಗೂಡಿ ಆ ಮುನಿಗಳು ಸೂಕ್ತರೀತಿಯಲ್ಲಿ ಯಜ್ಞಕಾರ್ಯವನ್ನು ಆರಂಭಿಸಿದರು.

ಹೀಗೆ ತಾಪಸೋತ್ತಮನು ಯಾಗದೀಕ್ಷೆಯನ್ನು ಹೊಂದಲು, ಪರಮಪುರುಷರಾದ ಆ ಬಾಲಕರು ಬಿಲ್ಲುಬಾಣಗಳನ್ನು ಹಿಡಿದು ಆರು ದಿನಗಳ ಕಾಲ ನಿದ್ದೆಯನ್ನು ಬಿಟ್ಟು ಹಗಲುರಾತ್ರಿಗಳು ಯಜ್ಞರಕ್ಷಕರಾಗಿ ನಿಂತರು. ಪಾಪಿ ಜನರಾರೂ ಹತ್ತಿರ ಸುಳಿಯದ ರೀತಿಯಲ್ಲಿ ರಾಜಕುವರರು ಹೀಗೆ ಕಾಯುತ್ತಿರಲು, ನಿಪುಣರಾದ ಋತ್ವಿಕ್ಕುಗಳನ್ನೊಡಗೂಡಿ ವಿಶ್ವಾಮಿತ್ರಮುನಿಯು ಯಥಾಶಾಸ್ತ್ರದಂತೆ ಯಜ್ಞವಿಧಿಯನ್ನು ನೆರವೇರಿಸಲು ಸನ್ನದ್ಧನಾದ. ನಾನಾ ಬಗೆಯಲ್ಲಿ ಸ್ವಾಹಾ ಸ್ವಧಾ ಎನ್ನುತ್ತ ಮಹಾಮಂತ್ರಗಳನ್ನು ಉಚ್ಚರಿಸುತ್ತ ಆಹುತಿಗಳನ್ನು ನೀಡುತ್ತಿರಲು ಕುಂಡದಲ್ಲಿ ಭುಗಿಲೆದ್ದ ಅಗ್ನಿಯು ತನ್ನ ನೀಳ ಕೆಂಜೆಡೆಗಳನ್ನು ನಾಲ್ಕೂ ದಿಕ್ಕುಗಳಿಗೆ ಹರಡಿದ. ಆ ಬೆಂಕಿಯು ಹೊಗೆಯೊಡನೆ ಕೂಡಿ ಆಕಾಶಮಂಡಲವನ್ನೆಲ್ಲ ವ್ಯಾಪಿಸಿತು. ಇದನ್ನು ನೋಡಿದ ರಕ್ಕಸಸಂಕುಲವು, ಇದು ಹೋಮದಿಂದ ಉತ್ಪನ್ನವಾದ ಪರಿಮಳ ಎಂದು ತಿಳಿದು ಕೋಪಗೊಂಡ ಹಾವು ಹೆಡೆಯನ್ನೆತ್ತಿ ಬುಸುಗುಡುವಂತೆ, ಕಪ್ಪು ಮೋಡದ ರಾಶಿಯು ಆಗಸವನ್ನೆಲ್ಲ ಅಪಹರಿಸುವ ಬಗೆಯಲ್ಲಿ, ಬರುತ್ತಿರಲು ಆಕಾಶದಲ್ಲಿ ಅಲ್ಲೋಲಕಲ್ಲೋಲವುಂಟಾಯಿತು. ಅತ್ಯಂತ ತ್ವರಿತದಿಂದ ದಾನವನಿಚಯವು ಚಪ್ಪಾಳೆ ತಟ್ಟಿ ಅಟ್ಟಹಾಸ ಮಾಡುತ್ತ ರಕ್ತಮಾಂಸಗಳನ್ನು ಯಜ್ಞವೇದಿಯೆಡೆ ಸುರಿಯಲಾರಂಭಿಸಿತು. ಹೀಗೆ ಬಿದ್ದ ರಕ್ತವರ್ಷದಿಂದ ಅಗ್ನಿಕುಂಡವು ತುಂಬಿಹೋಗಲು ರಾಘವನ ಕೋಪ ವೆಗ್ಗಳಿಸಿತು, ಬಾಣವನ್ನು ತಿರುಗಿಸುತ್ತ ನಾಲ್ಕೂ ದಿಕ್ಕುಗಳನ್ನು ನೋಡುತ್ತಿರಲು, ಗುಂಪುಗುಂಪಾಗಿ ಬರುತ್ತಿರುವ ರಕ್ಕಸರನ್ನು, ಅವರ ನಾಯಕ ಮಾರೀಚಸುಬಾಹುಗಳನ್ನು ಕಂಡು ಲಕ್ಷ್ಮಣನಿಗೆ, "ಸೌಮಿತ್ರಿಯೇ ಕೇಳು, ಮಹಾಧ್ವರವನ್ನು ನಾಶಮಾಡಲು ಕಾಮಚರರಾದ ದಾನವರು ಬರುತ್ತಿದ್ದಾರೆ, ಆಲಸ್ಯವನ್ನು ಬಿಟ್ಟು ಈ ಕ್ಷಣದಲ್ಲಿಯೇ ಅವರ ಬಲವನ್ನು ಭಂಗಗೊಳಿಸೋಣ" ಎಂದ. ಹೀಗೆಂದು ದಿವ್ಯಧನುಸ್ಸನ್ನು ತನ್ನ ಕರಕಮಲಗಳಲ್ಲಿ ಹಿಡಿದು ಭ್ರಮೆಯುಂಟುಮಾಡುವಂತೆ ಬಾಣಪ್ರಯೋಗ ಮಾಡಲು ಅದು ಸುತ್ತುತ್ತ ಬಂದು ಮಾರೀಚನನ್ನು ನೂರು ಯೋಜನ ದೂರಕ್ಕೆ ಎಳೆದೊಯ್ದು ಅದ್ಭುತವನ್ನು ಏನೆಂದು ಬಣ್ಣಿಸುವುದು! ತನ್ನ ಶೈತ್ಯದಿಂದ ಆ ಪಾತಕನನ್ನು ಮೂರ್ಛೆಗೊಳಿಸಿ ಪಶ್ಚಿಮದ ಕಡಲೆಡೆಗೆ

ಕೊಂಡೊಯ್ದು ಆಗಸದಲ್ಲಿ ಎಸೆಯಿತು; ಈ ಮಧ್ಯೆ ರಘುಜಾತನು ರಕ್ಕಸನು ಭಯಗೊಳ್ಳುವ ರೀತಿಯಲ್ಲಿ ಆಗ್ನೇಯಾಸ್ತ್ರವನ್ನು ತೊಟ್ಟು ಸುಬಾಹುವನ್ನು ತಟಕ್ಕನೆ ಹೊಡೆದು ಉರುಳಿಸಿದ. ಇದೇ ರೀತಿ ಅಣ್ಣತಮ್ಮಂದಿರು ನೂರಾರು ಬಾಣಗಳ ಮಳೆಗರೆದು ರಕ್ಕಸರ ಕುಲವನ್ನು ನಿಮಿಷಾರ್ಧದಲ್ಲಿ ತರಿದು ಕೆಡವಿದರು.

ಈ ಪರಿಯಲ್ಲಿ ಯಜ್ಞವಿನಾಶಕರನ್ನು ನಾಶ ಮಾಡಿದ ರಘುವೀರನು ಮುನಿಜನರ ಮಧ್ಯದಲ್ಲಿ ಇಂದ್ರನ ರೀತಿಯಲ್ಲಿ ಪ್ರಕಾಶಮಾನವಾಗಿರಲು ಆಕಾಶದಲ್ಲಿ ದೇವತೆಗಳು 'ಭಾಪು' ಎನ್ನುತ್ತ ಕುಸುಮವೃಷ್ಟಿಯನ್ನು ಕರೆದು, ಅಡಿಗಡಿಗೂ 'ಶ್ರೀ ಹರಿಯೇ ನಮೋ' ಎಂದು ನುತಿಗೈಯುತ್ತ ಸರ್ವೋಪಚಾರಗಳಿಂದ ಪೂಜಿಸಿದರು. ಶ್ರೀ ರಾಮಚಂದ್ರನು ದಾನವರನ್ನು ನಾಶಮಾಡಿದ ಮೇಲೆ ಮುನಿಸಮಾಜವು ಯಜ್ಞಕಾರ್ಯವನ್ನು ಸಾಂಗವಾಗಿ ನೆರವೇರಿಸಿ ಅವಭೃತಸ್ನಾನ ಮಾಡಿ ಕೃತಕೃತ್ಯರಾದರು. ಆ ಬಳಿಕ ವಿಶ್ವಾಮಿತ್ರನು, "ಭಾನುತಾಪಾಗ್ರಣಿಯೆ, ಭಕ್ತತಾಪಾಪಹಾರ ಶ್ರೀ ನಿಕೇತನ ಪುರುಷಶಾರ್ದೂಲ ಸಾಧುಸನ್ಮಾನಿತನೆ ಬಾ" ಎನ್ನುತ್ತ ರಾಮನನ್ನು ಬಿಗಿದಪ್ಪಿ, "ಗುರುವಚನವನ್ನು ಸಫಲವನ್ನಾಗಿಸಿ ಸಿದ್ಧಾಶ್ರಮದ ಸಿರಿಯನ್ನು ಅನ್ವರ್ಥಗೊಳಿಸಿ ಯಜ್ಞವನ್ನು ರಕ್ಷಣೆಗೈದು ನನ್ನ ಮನದಿಷ್ಟವನ್ನು ನೆರವೇರಿಸಿ ಕೃತಕೃತ್ಯನನ್ನಾಗಿಸಿದೆ. ಭಕ್ತಸುರಧೇನುವೇ, ದಿವ್ಯಸುಂದರಮೂರ್ತಿ, ಲೋಕವನ್ನು ಪೊರೆಯಲು ಮನುಷ್ಯರೂಪದಲ್ಲಿ ಧರಿಸಿ ಅವತರಿಸಿದ ಮಹಾವಿಷ್ಣುವೇ ಕಾಪಾಡು" ಎಂದು ನಾನಾ ವಿಧದಲ್ಲಿ ಸ್ತುತಿಸಿದ. ಕುಶಿಕತನಯನ ಮಹಾಧ್ವರವನ್ನು ನೋಡಲೆಂದು ಬಂದಿದ್ದ ಪಶುಪತಿಸಮಾನರಾದ ತಾಪಸೋತ್ತಮರು ಪಕ್ಕದಲ್ಲಿಯೇ ನಿಂತಿದ್ದ ನಿಶಾಚರರನ್ನು ಮರ್ದಿಸಿದ ರಾಮಚಂದ್ರನನ್ನು ಹೊಗಳಿ, "ನಿನ್ನ ತಪಸ್ಸಿನ ಫಲದಿಂದ ಶ್ರೀವಶನಾದ ವೈಕುಂಠಪತಿಯು ನಿನ್ನ ವಶವಾದ" ಎಂದು ವಿಶ್ವಾಮಿತ್ರನನ್ನು ಸನ್ನುತಿಗೈದು, "ರಕ್ಕಸಕುಲದ ಬೇರನ್ನು ಕಿತ್ತು ಲೋಕಗಳನ್ನು ಪಾಲಿಸಲು ಪೊಡವಿಯಲ್ಲಿ ಮನುಷ್ಯರೂಪಿನಿಂದ ತಾಟಕಿ ಸುಬಾಹು ಮುಖ್ಯರನ್ನೆಲ್ಲ ಕೆಡವಿದನಲ್ಲ, ಇದು ಬೇರೆಯವರಿಂದ ಸಾಧ್ಯವಾದೀತೇ! ಮುನಿಮಿತ್ರನೇ, ಮೃಡಮಿತ್ರನಾದ ಈತನ ಮಾನಸಪೂಜೆಯ ವಿಧಾನವನ್ನು ಉಪದೇಶಿಸಿ ಸಲಹಬೇಕೆಂ"ದು ಕೇಳಿಕೊಂಡರು.

ಆಗ ಗಾಧಿಸುತನು, "ಸಾಸಿರ ಸುನಾಮಗಳ ರಾಮಚಂದ್ರನ ದಿವ್ಯಮೂರ್ತಿಯನ್ನು ಧ್ಯಾನಿಸುವವರು ಎಷ್ಟು ಕೃತಕೃತ್ಯರು! ದಶರಥಾತ್ಮಜನು ಯೋಗಿಗಳ ಹೃದಯವಾಸ ಎಂದು ಶ್ರುತಿಗಳು ಹೇಳುತ್ತವೆ. ಆ ದೇವನ ಸುಗುಣೋಪಾಸನೆಯ ಮಾಡುವವರು ಎಲ್ಲ ಪಾತಕಗಳನ್ನೂ ನೀಗಿಕೊಂಡು ಸಂತತ ಆನಂದವನ್ನು ಹೊಂದುತ್ತಾರೆ. ಎಲ್ಲವನ್ನೂ ಆ ಜ್ಞಾನನಿಧಿಗರ್ಪಿಸಿ ಕಣ್ಣು ಮುಚ್ಚಿ ತನ್ಮಯಾವಸ್ಥೆಯನ್ನು ಹೊಂದಿ ಏನೊಂದನ್ನೂ ಅರಿಯದೆ, ಎಚ್ಚರವಾಗದೆ ಸಾನಂದದಿಂದ ಸಾಕ್ಷಾತ್ಕರಿಸಿಕೊಂಡು ತಮ್ಮ ಚಿತ್ತನಿಳಯದಲ್ಲಿ ಶ್ರೀರಾಮನನ್ನು ತಾಪಸೋತ್ತಮರು ಧ್ಯಾನಿಸುತ್ತಾರೆ. ಅಂತಹವರು ನಿಂತ ಭೂಮಿಯೆ ವಾರಣಾಸಿ, ವೇದವನ್ನು ಪಠಿಸದೆಯೇ ಪಾವನ ಎನ್ನಿಸುವ ಈ ಪರಿಯಲ್ಲಿ ಸಾಕಾರವನ್ನು ನೆನೆದು ನಿರ್ಗುಣವನ್ನು ಭಾವಿಸಬೇಕು. ಇಂತಹ ಮಾನಸಪೂಜೆಯನ್ನು ಅನುದಿನವೂ ಮಾಡುವ ಸಜ್ಜನರ ಮಹಿಮೆಗಳನ್ನು ಏನೆಂದು ಬಣ್ಣಿಸುವುದು! ಹಾಗೆ ಮಾಡಲು

ಚತುರ್ಮುಖ ಬ್ರಹ್ಮನಿಗೂ ಅಸಾಧ್ಯ. ಯಾವುದೇ ಕೆಲಸವನ್ನು ಮಾಡದವನೂ, ಅಜ್ಞಾನಿಯಾದವನೂ ಭಕ್ತಿಯಿಂದ ಸಾಲಿಗ್ರಾಮಮೂರ್ತಿಯನ್ನು ಪೂಜಿಸಬೇಕು. ಹಾಗೆ ಮಾಡುತ್ತ ಅವನನ್ನು ಸ್ತುತಿಗೈದು ಹಾಡಿ ಹೊಗಳುತ್ತ, ಕುಣಿದು ಕೈವಾರಿಸುತ್ತ, ಕೀರ್ತಿಸಿ ನಲಿಯುತ್ತ, ಪುಳಕಭರಿತನಾಗಿ ವಂದಿಸುತ್ತ ಮೆರೆಯುವವನೇ ಕೃತಾರ್ಥ. ಅದರಿಂದಾಗಿ ರಾಮಪುರಿಯ ಹರಿಯನ್ನು ಅಂತರಂಗದಲ್ಲಿಟ್ಟುಕೊಂಡು ನಿತ್ಯಸುಖಿಯಾಗಿರಿ" ಎಂದು ವಿಶ್ವಾಮಿತ್ರ ಮುನಿಪತಿಯು ಮುನಿಗಳಿಗೆ ಬೋಧಿಸಿದ.

೧೪. ವಿಶ್ವಾಮಿತ್ರ ಹೇಳಿದ ಕೌಶಿಕಿ ಹಾಗೂ ಭಾಗೀರಥಿಯ ಚರಿತ್ರೆ

ತುಹಿನಾದ್ರಿಜಾತೆಯೇ ಮುಂದೇನಾಯಿತೆಂಬುದನ್ನು ಹೇಳುತ್ತೇನೆ, ಕೇಳು. ಹೀಗೆ ಕೌಶಿಕನು ರಘೂತ್ತಮನ ಸಚ್ಚರಿತ್ರೆಯನ್ನು ನಾನಾ ಬಗೆಯಲ್ಲಿ ಯೋಗನಿವಹಕ್ಕೆ ವಿವರಿಸಿದ. ಅಷ್ಟರಲ್ಲಿ ದಿವಸ್ಪತಿಗೆ ಪಶ್ಚಿಮಾಂಗನೆಯಲ್ಲಿ ಅನುರಾಗವುಂಟಾಗಿ ಅವನು ಮಾರ್ಗದಲ್ಲಿ ಜಾರಿ ಬೀಳಲು, ಅವನೊಡನೆ ದೀಧಿತಿಯೂ ಸಹಜಾರೆಯಾಗಿ ದಿಗಂಬರೆಯಾಗಲು, ಬಂಧುಗಳು ನೋಡುತ್ತಿರುವಂತೆಯೇ ಚರಮಾಚಲವನ್ನು ಸೇರಿದ. ಆನಂತರ ಪ್ರಳಯಕಾಲದ ಮೇಘಗಳಂತಹ ಮರಗಳಲ್ಲಿ ಕತ್ತಲೆಯು ಹರಡಿತು. ಪಶ್ಚಿಮಾಂಗನೆಯು ತನ್ನ ಮುಡಿಯಲ್ಲಿ ಬಿಡಿ ಮಲ್ಲಿಗೆ ಹೂಗಳನ್ನು ಮುಡಿದುಕೊಂಡಿರುವಂತೆ ತಾರೆಗಳು ಆಕಾಶದಲ್ಲಿ ಚೆಲ್ಲಾಡಿದವು. ತಾವರೆಗಳು ಮುದುರಿಕೊಳ್ಳಲು ಚಕ್ರವಾಕಗಳು ವಿರಹದಿಂದ ಕೊರಗಲು ತೊಡಗಿದವು. ಆಗ ವಿಶ್ವಾಮಿತ್ರಮುನಿಯು ಸಂಧ್ಯಾಕರ್ಮಗಳನ್ನು ಮುಗಿಸಿ ಬಾಲಕರ ಜೊತೆಗೂಡಿ ನಿದ್ರಿಸಿದ. ಕತ್ತಲೆ ಎಂಬ ನಂಜು ಹರಡಿಕೊಂಡು ಲೋಕವನ್ನೆಲ್ಲ ಅಂಟಲು ಭೂಮಿಯ ಮೇಲಣ ಜೀವಿಗಳು ನಿಶ್ಚೇಷ್ಟಿತವಾದವು.

ಪಾಕಾರಿಯು ಮನ್ಮಥನನ್ನು ಭಜಿಸಿ ದಿವ್ಯರತ್ನಗಳನ್ನು ಸಂಪಾದಿಸಿಕೊಂಡು ಪೂರ್ವಪರ್ವತದ ಮೇಲೆ ಒಟ್ಟಿದ್ದಾನೆಯೋ ಎಂಬಂತೆ ಕತ್ತಲೆಯನ್ನು ಸೀಳಿಕೊಂಡು ದಿನಕರಬಿಂಬವು ಮೇಲೆದ್ದಿತು, ಜಗತ್ತಿನ ಜಂತುಗಳೆಲ್ಲ ಜೀವವನ್ನು ಪಡೆದಂತೆ ಎಚ್ಚರಗೊಂಡವು. ಅರವಿಂದಮಿತ್ರನು ಉದಯಿಸಲು ತಪೋಧನನೂ ಎಚ್ಚರಗೊಂಡು ಸ್ನಾನ ಸಂಧ್ಯಾವಂದನೆಗಳನ್ನು ಪೂರೈಸಿ ಮುನಿಜನರೊಡನೆ ಕುಳಿತಿರಲು, ರಘುವೀರನು ಪೂರ್ವಾಹ್ನಿಕಕ್ರಿಯೆಗಳನ್ನು ಮಾಡಿ ಬೇಗನೆ ಬಂದು ವಿಶ್ವಾಮಿತ್ರನ ಅಡಿದಾವರೆಗೆ ನಮಿಸಿ, "ನಿಮ್ಮ ಚರಣಸೇವಕರಾದ ನಾವು ಬಂದಿದ್ದೇವೆ. ಮುಂದಿನ ಕಜ್ಜವನ್ನು ಬೆಸಸಬೇಕು" ಎಂದು ನಸುನಗುತ್ತ ಕೇಳಿದ. ಆಗ ಅಲ್ಲಿದ್ದ ಮುನಿವರ್ಯನು, "ವಿದೇಹ ರಾಜನು ಹರಶರವನ್ನು ಪೂಜಿಸಿ ತನ್ನ ಮಗಳನ್ನು ಮದುವೆ ಮಾಡಿ ಕೊಡಲು ಬಯಸಿ ಸಿದ್ಧಮಾಡಿಕೊಂಡಿದ್ದಾನೆ, ನಾವು ನಿಮ್ಮ ನೆರವಿನಿಂದ ಅಲ್ಲಿಗೆ ಹೋಗಿ ಸತ್ಯವ್ರತನಾದ ನೃಪೋತ್ತಮನು ಮಾಡುತ್ತಿರುವ ಯಾಗವನ್ನು ವೀಕ್ಷಿಸಲು ಕಾತರರಾಗಿದ್ದೇವೆ" ಎಂದರು. ಆಗ ವಿಶ್ವಾಮಿತ್ರನು ಅವರ ಮಾತಿಗೆ ದನಿಗೂಡಿಸಿ, "ಅವನ ಘೋರವಾದ ಬಿಲ್ಲು ಈ ಹಿಂದೆ ಮಾಡಿದ ಯಜ್ಞಕಾಲದಲ್ಲಿ ದಿವಿಜರಿಂದ ಕೊಡಮಾಡಿದುದು, ಅದರ ಹೆದೆಯೇರಿಸಲು

ಸುರಾಸುರರಿಗೂ ಅಳವಲ್ಲ, ಅದು ನೋಡಲೂ ಅದ್ಭುತವಾದುದು. ಎಷ್ಟೋ ಜನ ರಾಜರು ತಮ್ಮ ನಡವಳಿಕೆ ಶಕ್ತಿಗಳಿಂದ ಆ ಚಾಪವನ್ನು ಹೆದೆಯೇರಿಸಲು ಪ್ರಯತ್ನಿಸಿದರೂ ಅದನ್ನು ಮಿಸುಕಾಡಿಸಲೂ ಸಾಧ್ಯವಾಗಲಿಲ್ಲ, ಪ್ರಯತ್ನಪಟ್ಟವರೆಲ್ಲರ ಮುಖ ಕಂದಿ ಅವರೆಲ್ಲ ಶಕ್ತಿಗುಂದಿದರು. ಅಂತಹ ಅಪ್ರಮೇಯಬಲದಿಂದ ಕೂಡಿದ ಕೋದಂಡವನ್ನು ನೋಡುವ ಕುತೂಹಲದಿಂದ ಅಲ್ಲಿಗೆ ಹೋಗೋಣ" ಎಂದು ಯುಕ್ತಿಯಿಂದ ಹೇಳಲು ನೃಪಾತ್ಮಜರು ಅದಕ್ಕೊಪ್ಪಿದರು.

ಆಗ ವಿಶ್ವಾಮಿತ್ರನು ವನದೇವತೆಗಳನ್ನೆಲ್ಲ ಕರೆದು, "ನಿಮಗೆಲ್ಲ ಮಂಗಳವಾಗಲಿ, ನಾವು ಹೋಗಿ ಬರುತ್ತೇವೆ" ಎಂದು ಸಿದ್ಧಾಶ್ರಮವನ್ನು ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ ಮುನಿಮುಖ್ಯರ ಜೊತೆಯಲ್ಲಿ ಅಲ್ಲಿಂದ ಹೊರಟು ಹಿಮಾದ್ರಿಯಿರುವ ಬಡಗು ದಿಕ್ಕಿಗೆ ಮುಖಮಾಡಿ ನಡೆದಾಗ ದಶರಥತನಯರು ಅವರನ್ನು ಅನುಸರಿಸಿದರು. ವನದಲ್ಲಿನ ಮೃಗಾಳಿಯೆಲ್ಲವೂ ಕೌಶಿಕನನ್ನು ಅರ್ಧ ಕ್ರೋಶ ದೂರ ಹಿಂಬಾಲಿಸಿ ಬಂದವು; ಮುನೀಶ್ವರನು ಅವುಗಳ ಕಡೆ ನೋಡಿ ಅವುಗಳನ್ನು ಸಂತಯಿಸಿ ವಾಪಸ್ಸು ಕಳಿಸಿದ. ಆ ಮುಂದೆ ನೂರಾರು ಬಂಡಿಗಳಲ್ಲಿ ಬಂದ ಬ್ರಹ್ಮವಾದಿಗಳೊಡನೆ ಮುನಿನಿವಹವು ರಘುನಂದನರ ಸಮೇತ ಶೋಣಾನದಿ ತೀರಕ್ಕೆ ಬರುವಷ್ಟರಲ್ಲಿ ಸಂಜೆಯಾಯಿತು. ಸೂರ್ಯಾಸ್ತವಾದ ಬಳಿಕ ಮುನಿನಿಕರವು ಭಕ್ತಿಯಿಂದ ಸ್ನಾನಸಂಧ್ಯಾದಿಗಳನ್ನು ಮಾಡಿ ಅನುನಯದಿಂದ ವೈದಿಕವಿಧಾನದಲ್ಲಿ ಅಗ್ನಿಹೋತ್ರಗಳನ್ನು ರಚಿಸಿ ವಿಶ್ವಾಮಿತ್ರನೊಡನೆ ನದಿ ತಟದಲ್ಲಿ ಕುಳಿತಿದ್ದರು. ರಾಮಲಕ್ಷ್ಮಣರು ಅವರೆಲ್ಲರಿಗೆ ನಮಸ್ಕರಿಸಿ ವಿನಯಪೂರ್ವಕವಾಗಿ, ಅದು ಯಾವ ದೇಶ ಎಂದು ಕುತೂಹಲಭರಿತರಾಗಿ ವಿಚಾರಿಸಿದರು.

ಆಗ ಗಾಧಿಸುತನು ಎಲ್ಲವನ್ನೂ ವಿವರಿಸಿದ: ಹಿಂದೆ ಕುಶ ಎಂಬ ಹೆಸರಿನ ಬ್ರಹ್ಮನ ಮಗನಾದ ರಾಜನಿದ್ದ; ಅವನು ಮಹಾ ತಪೋನಿಷ್ಠೆಯುಳ್ಳವನು; ಅವನು ವೈದರ್ಭೀ ಎಂಬ ಹೆಣ್ಣನ್ನು ಮದುವೆಯಾಗಿ ಕುಶಾಂಬ, ಕುಶನಾಭ, ಅಧೂರ್ತರಜಸ್ಸು ಮತ್ತು ವಸು ಎಂಬ ನಾಲ್ಕು ಗಂಡುಮಕ್ಕಳನ್ನು ಪಡೆದು ಸಂತೋಷದಿಂದ ಇದ್ದ. ತನ್ನ ಮಕ್ಕಳನ್ನುದ್ದೇಶಿಸಿ ಕುಶನು ಲೋಕರಕ್ಷಕರಾಗಿ ಧರ್ಮಸಂತತಿಯನ್ನು ಹೆಚ್ಚಿಸಿ ಎಂದು ಉಪದೇಶಿಸಲು, ಅವರು ಕ್ರಮವಾಗಿ ಕೌಶಾಂಬೀ ಮಹೋದಯ ಧರ್ಮಾರಣ್ಯ ಮತ್ತು ಗಿರಿವ್ರಜ ಎಂಬ ನಾಲ್ಕು ಸುಂದರವಾದ ಪಟ್ಟಣಗಳನ್ನು ನಿರ್ಮಿಸಿದರು. ಇಲ್ಲಿರುವ ಪ್ರದೇಶವು ಐದು ಪರ್ವತಗಳಿಂದ ಸುತ್ತುವರಿದಿದೆ, ಅವುಗಳ ಮಧ್ಯದಲ್ಲಿ ಹಾರದ ರೀತಿಯಲ್ಲಿ ಶೋಭಿಸುವ ಸುಮಾಗಧಿ ಎಂಬ ಹೆಸರಿನ ನದಿಯು ಹರಿಯುತ್ತ ಈ ರಾಷ್ಟ್ರವನ್ನು ಪೊರೆಯುತ್ತಿದೆ. ಇದು ವಸುರಾಯನು ನಿರ್ಮಿಸಿದ ಗಿರಿವ್ರಜ ಎಂಬ ನಗರ.

ರಾಜರ್ಷಿಯಾದ ಕುಶನಾಭನು ಘೃತಾಚಿಯನ್ನು ವರಿಸಿ ಬ್ರಹ್ಮನ ಆಶೀರ್ವಾದದಿಂದ ನೂರು ಮಂದಿ ಹೆಣ್ಣುಮಕ್ಕಳನ್ನು ಪಡೆದ. ಆ ಹೆಣ್ಣುಮಕ್ಕಳು ಪ್ರಾಪ್ತವಯಸ್ಕರಾಗಿ ಚೆಲುವಿನಿಂದ ಕಂಗೊಳಿಸುತ್ತಿದ್ದರು. ಅವರೆಲ್ಲ ವನವಿಹಾರ ಮಾಡುತ್ತ ನಾನಾ ವಿಧವಾಗಿ ಸಂತೋಷಿಸುತ್ತಿರಲು, ಸರ್ವಾತ್ಮನಾದವನೂ ಸತತಗತಿಯೂ ಆದ ವಾಯುದೇವನು ಅವರ ನವವಿಲಾಸವನ್ನು ಮೆಚ್ಚಿ ಕಾಮಶರತವಕದಿಂದ ಅವರಿಗೆ ಹೀಗೆಂದು

ನುಡಿದ: "ಕುವಲಯಾಂಬಕಿಯರೇ, ನನಗೆ ನಿಮ್ಮಲ್ಲಿ ಕೂರ್ಮೆ ಹುಟ್ಟಿದೆ, ನಿಮ್ಮೊಡನೆ ಕ್ರೀಡಿಸಬೇಕೆಂಬ ಬಯಕೆಯುಂಟಾಗಿದೆ. ಅದರಿಂದ ನೀವೆಲ್ಲ ನನ್ನ ಹೆಂಡತಿಯರಾದರೆ ನಿಮಗೆ ದೀರ್ಘಾಯುಸ್ಸು, ದಿವ್ಯರೂಪು ಚಾತುರ್ಯಗಳು ಪ್ರಾಪ್ತವಾಗಿ ನೀವೆಲ್ಲರೂ ದೇವತೆಯರಾಗುತ್ತೀರಿ, ಮನುಷ್ಯಸಹಜ ಕ್ಲೇಶಗಳೆಲ್ಲ ನಿಮ್ಮಿಂದ ದೂರವಾಗುತ್ತವೆ, ಇದು ಸತ್ಯ, ನನ್ನ ಮಾತನ್ನು ನಂಬಿರಿ." ಆಗ ಆ ಕನ್ನಿಕೆಯರು, "ಸರ್ವಾತ್ಮನೇ, ಹೆಣ್ಣುಮಕ್ಕಳಿಗೆ ತಂದೆಯ ಅನುಜ್ಞೆಯಿಲ್ಲದೆ ಸ್ವಾತಂತ್ರ್ಯವು ಲಭಿಸುವುದಿಲ್ಲ ಎಂಬುದು ನಿನಗೆ ತಿಳಿಯದ ವಿಷಯವೇ? ಅದರಿಂದ ನೀನು ನಮ್ಮ ತಂದೆಯ ಆಜ್ಞೆಯನ್ನು ಪಡೆ; ತಂದೆಯು ನಮ್ಮನ್ನು ಯಾರಿಗೆ ಕೊಟ್ಟರೂ ನಾವು ಅವನನ್ನು ಪತಿಯೆಂದು ಸ್ವೀಕರಿಸುತ್ತೇವೆ" ಎಂದು ಉತ್ತರಿಸಿದರು. ಈ ಮಾತುಗಳನ್ನು ಕೇಳಿದ ವಾಯುದೇವನು ಕೋಪಭರದಿಂದ ರತಿಯ ಆಕಾರವನ್ನು ಹೋಲುವ ಸುಂದರಿಯರಾದ ಆ ಯುವತಿಯರ ದೇಹಗಳನ್ನು ಹೊಕ್ಕು ನಿಮಿಷಾರ್ಧದಲ್ಲಿ ಅಂಗವೈಕಲ್ಯವನ್ನು ಮಾಡಿಬಿಟ್ಟ, ಆಗ ಅತ್ಯಂತ ಲಜ್ಜಿತರಾದ ಅವರು ರೋದಿಸುತ್ತ ಹೋಗಿ ಅರಮನೆಯನ್ನು ಸೇರಿದರು. ತನ್ನ ಮಕ್ಕಳ ಆಕಾರವನ್ನು ನೋಡಿದ ಕುಶನಾಭ ಮಹಾರಾಜನು ಅವರ ಈಗಿನ ಸ್ಥಿತಿಗೆ ಕಾರಣವೇನೆಂದು ಬೆಸಗೊಂಡ; ಆಗ ಕುಮಾರಿಯರು ಭಯದಿಂದ ತಂದೆಗೆ ನಮಿಸಿ, "ಕಾಮಭರದಿಂದ ಮಾರುತನು ನಮ್ಮ ಪ್ರೇಮವನ್ನು ಯಾಚಿಸಿದ, ಅದನ್ನು ನಿರಾಕರಿಸಲು ನಮ್ಮ ದೇಹದಲ್ಲಿ ಸೇರಿ ಈ ಪರಿಯ ವೈಕಲ್ಯವನ್ನುಂಟುಮಾಡಿದ್ದಾನೆ" ಎಂದು ಗೋಳಿಡುತ್ತ ಉತ್ತರಿಸಿದರು. ಮಕ್ಕಳ ಮಾತುಗಳನ್ನು ಕೇಳಿದ ಮಹಾರಾಜನು, "ಮಕ್ಕಳೇ, ನೀವು ನಮ್ಮ ಕುಲದ ಗೌರವವನ್ನು ಕಾಪಾಡಿದಿರಿ. ಹೆಣ್ಣುಮಕ್ಕಳಿಗೆ ಚೆಲುವು ಮತ್ತು ತಾಳ್ಮೆಗಳು ಅಲಂಕಾರಪ್ರಾಯವಾದವು, ಹಾಗೆಯೇ ಪುರುಷನಿಗೆ ಬಲ. ಜಗತ್ತಿನಲ್ಲಿ ಕ್ಷಮಾಗುಣವು ದುರ್ಲಭವಾದುದು, ದಾನ ಯಜ್ಞ ವ್ರತ ಸತ್ಯ ಕೀರ್ತಿ ಧರ್ಮ ಇವುಗಳಿಗಿಂತಲೂ ಕ್ಷಮೆಯು ಶ್ರೇಷ್ಠವಾದುದು, ಕ್ಷಮೆಗಿಂತ ಮಿಗಿಲಾದುದು ಜಗತ್ತಿನಲ್ಲಿ ಯಾವುದೂ ಇಲ್ಲ" ಎಂದು ಅವರನ್ನು ಸಮಾಧಾನಪಡಿಸಿ ಕಳಿಸಿದ. ಆನಂತರ ತನ್ನ ಕರಣಿಕ ಮಂತ್ರಿಗಳೊಡನೆ ಮಕ್ಕಳ ಮದುವೆಯ ವಿಷಯವನ್ನು ಕುರಿತು ಪರ್ಯಾಲೋಚಿಸಿದ.

ಆ ಹೊತ್ತಿಗೆ ಚೂಳಿ ಎಂಬ ಹೆಸರಿನ ಮುನಿಯೊಬ್ಬನು ಬ್ರಹ್ಮವಿದ್ಯೆಗಾಗಿ ಆಶಿಸಿ ತಪಸ್ಸು ಮಾಡುತ್ತಿದ್ದ, ಆಗ ಊರ್ಮಿಳೆಯ ಮಗಳಾದ ಗುಣಾಢ್ಯಳೂ ಗಾಂಧರ್ವಿಯೂ ಆದ ಸೊಂದೆ ಎಂಬ ಹೆಸರುವಾಸಿಯಾದ ಸುದತಿಯೊಬ್ಬಳು ಬಂದು ತಪೋಧನನಾದ ಚೂಳಿಯನ್ನಾಶ್ರಯಿಸಿ ನಾನಾ ಪರಿಯಲ್ಲಿ ಅವನ ಶುಶ್ರೂಷೆಗೈದು ಅವನ ಕೃಪೆಯನ್ನು ಸಂಪಾದಿಸಿದಳು. ಅದನ್ನು ಕಂಡ ಮುನಿಯು ತನ್ನನ್ನು ಅವಳು ಯಾವ ಕಾರಣದಿಂದ ಆಶ್ರಯಿಸಿದ್ದಾಳೆ ಎಂದು ವಿಚಾರಿಸಿದ. ಆಗ ಅವಳು ಹೇಳಿದಳು: "ಬ್ರಹ್ಮರ್ಷಿಯೇ, ನಾನು ಪತಿಯಿಲ್ಲದವಳು, ಆದರೆ ಪುರುಷಸಂಬಂಧವನ್ನು ನಾನು ಒಲ್ಲೆ, ಆದ್ದರಿಂದ ನೀನು ನನಗೆ ಬ್ರಹ್ಮವರ್ಣಪೂತನಾದ ಒಳ್ಳೆಯ ಮಗನನ್ನು ದಯಪಾಲಿಸಬೇಕು" ಎಂದು ಕೇಳಿಕೊಂಡಳು. ಆಗ ಚೂಳಿಯು ತನ್ನ ಮಾನಸೋದ್ಭೂತನಾದ ಪುತ್ರನೊಬ್ಬನನ್ನು ಅನುಗ್ರಹಿಸಿದ. ಅದರಿಂದ ಸಂತುಷ್ಟಳಾದ ಸೊಂದೆಯು ಆ ಕ್ಷಣವೇ ತನ್ನ ಮಗುವನ್ನು

ಜೊತೆಯಲ್ಲಿರಿಸಿಕೊಂಡು ಶ್ರೇಷ್ಠವಾದ ಕಾಂಪಿಲ್ಯಪಟ್ಟಣದಲ್ಲಿ ನೆಲಸಿದಳು. ಬ್ರಹ್ಮದತ್ತನು ಆ ಊರಿನ ದೊರೆಯಾಗಿ ಮೆರೆಯುತ್ತಿದ್ದ.

ಈ ಕತೆಯನ್ನು ಮಂತ್ರಿಗಳು ಹೇಳಲು ಕುಶನಾಭನು ಬ್ರಹ್ಮದತ್ತನನ್ನು ಕರೆತಂದು ತನ್ನ ಮಕ್ಕಳನ್ನು ಅವನಿಗಿತ್ತು ಯಥಾವಿಧಿಯಾಗಿ ಮದುವೆ ಮಾಡಿಕೊಟ್ಟನು. ಸಾಕ್ಷಾತ್ ಶಿವಸಮಾನನಾದ ಆ ಮುನಿಯು ನೂರು ಮಂದಿಯನ್ನೂ ಮದುವೆಯಾದ ತಕ್ಷಣವೇ ಅವರ ಮುಖಗಳು ಚಂದ್ರನಂತೆ ಬೆಳಗಿದವು, ಅವರ ವಾಯುಕೃತ ದೋಷವು ನಿವಾರಣೆಯಾಗಿ ಅವರೆಲ್ಲ ಹಿಂದಿನಂತೆಯೇ ಪರಮ ಸುಂದರಿಯರಾದರು. ತನ್ನ ಮಕ್ಕಳ ದಿವ್ಯಸೌಂದರ್ಯವನ್ನು ನೋಡಿದ ಕುಶನಾಭನು ಅವರಿಗೆಲ್ಲ ಪರಿಪರಿಯ ವಸ್ತ್ರಾಭರಣಗಳನ್ನು ಉಡುಗೊರೆಯಾಗಿ ನೀಡಿ ಅಳಿಯನೊಡನೆ ಕಳುಹಿಸಿ ಕೊಟ್ಟ. ಬ್ರಹ್ಮದತ್ತನು ತನ್ನ ಊರಿಗೆ ಬಂದು ತನ್ನ ತಾಯಿಗೆ ಅವರನ್ನೆಲ್ಲ ಪರಿಚಯ ಮಾಡಿಸಿದ; ಅವಳು ತನ್ನ ಸೊಸೆಯರನ್ನು ನೋಡಿ ಪರಮ ಸಂತೋಷದಿಂದ ರಾಜನನ್ನು ಹೊಗಳಿದಳು.

ಇತ್ತ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟ ಕುಶನಾಭನು ಗಂಡುಮಗುವನ್ನು ಪಡೆಯುವ ಉದ್ದೇಶದಿಂದ ಪುತ್ರಕಾಮೇಷ್ಟಿ ಯಾಗವನ್ನು ಮಾಡಲು ಭೂಸುರರನ್ನು ಆಹ್ವಾನಿಸಿದ. ಯಾಗಸಮಯದಲ್ಲಿ ತಂದೆಯಾದ ಕುಶನು ಮಗನಿಗೆ ಸುಂದರವಾದ ಗಂಡು ಮಗು ಆಗುವುದೆಂದು ಆಶ್ವಾಸನೆಯಿತ್ತ. ಅವನನ್ನು ಗಾಧಿ ಎಂಬ ಹೆಸರಿನಿಂದ ಕರೆ, ಅವನು ಲೋಕದಲ್ಲಿ ಅಗಾಧಕೀರ್ತಿಯನ್ನು ಪಡೆಯುತ್ತಾನೆ ಎಂದು ಹಿತವಚನಗಳನ್ನಾಡಿ ಹೋದ. ಕೆಲ ಕಾಲಾನಂತರ ಆ ಮೇದಿನೀಧವನಿಗೆ ಹೆಂಡತಿ ಘೃತಾಚಿಯಲ್ಲಿ ಗಂಡುಮಗುವೊಂದು ಜನಿಸಿತು. ಅವನೇ ಧರ್ಮಿಷ್ಠನಾದ ಗಾಧಿ, ಅವನೇ ನನ್ನ ತಂದೆ. ರಾಮನೇ, ಕುಶವಂಶಸಂಭವನಾದುದರಿಂದ ಕೌಶಿಕನೆಂಬ ಹೆಸರೂ ನನಗೆ ಉಂಟಾಯಿತು. ತನಗಿಂತ ಮುಂಚೆಯೇ ತಂದೆಗೆ ಸದ್ಗುಣಿಯೂ ಸುವ್ರತೆಯೂ ಪತಿವ್ರತೆಯೂ ಆದ ಸತ್ಯವತಿಯೆಂಬ ಮಗಳಿದ್ದಳು. ಆ ನನ್ನ ಅಕ್ಕನನ್ನು ರುಚಿಕನಿಗೆ ಮದುವೆ ಮಾಡಿ ಕೊಟ್ಟಿದ್ದರು. ರುಚಿಕನು ಸ್ವರ್ಗಸ್ಥನಾಗಲು ಪತಿವ್ರತೆಯಾದ ಸತ್ಯವತಿಯು ಗಂಡನೊಡನೆ ಚಿತೆಯನ್ನೇರಿ ಸಹಗಮನ ಮಾಡಿದಳು. ಆ ಮಹಾಪುಣ್ಯಚಾರಿತ್ರೆಯಾದ ನನ್ನ ಅಕ್ಕನು ಲೋಕವನ್ನು ಪೊರೆಯುವ ಕಾರಣಕ್ಕಾಗಿ ಹಿಮವಂತಪರ್ವತದ ತಪ್ಪಲಲ್ಲಿ ಕೌಶಿಕಿ ಎಂಬ ಹೆಸರಿನ ಪುಣ್ಯನದಿಯಾಗಿ ರಾರಾಜಿಸಿ ಹರಿಯುತ್ತಿದ್ದಾಳೆ. "ಆ ಮಹಿಮಾವಂತಳ ಪ್ರೀತಿಕರುಣೆಗಳಿಂದ ನಾನು ಆ ನದೀ ತೀರದಲ್ಲಿ ಜಂಜಾಟಗಳನ್ನು ಕಳೆದುಕೊಂಡು ಋಷಿಸಮುದಾಯದೊಡನೆ ಸುಖದಿಂದ ಇದ್ದೇನೆ. ಪರಮ ಮಂಗಳನಾಮನಾದ ರಾಮನೇ, ನಿನ್ನ ಶೌರ್ಯದ ಕಾರಣದಿಂದ ಸಿದ್ಧಾಶ್ರಮವನ್ನು ಸೇರಿ ನಾನು ಸಿದ್ಧನೆನಿಸಿದೆ" ಎಂದು ನಿರೂಪಿಸಿದ.

ರಾತ್ರಿ ಪೂರ್ತಿ ಮರಗಳ ಸಮೂಹದ ಕಾಡು ಗದ್ದಲವಿಲ್ಲದೆ ಪ್ರಶಾಂತವಾಯಿತು, ಶಕುಂತ ಪಕ್ಷಿಗಳು ಶಾಂತಿಯನ್ನು ಹೊಂದಿದವು, ಹಕ್ಕಿಗಳೆಲ್ಲ ಸದ್ದಿಲ್ಲದ ಹಾಗೆ ತಮ್ಮ ತಮ್ಮ ಗೂಡುಗಳನ್ನು ಸೇರುವಂತಾಯಿತು. "ರಾತ್ರಿಯ ಹೊತ್ತು ತಾರಗೆಗಳ ಗುಂಪು ಮುದ್ದಾಗಿ ತೋರುತ್ತಿವೆ, ಚಂದ್ರಬಿಂಬವು ದಿಕ್ಕುಗಳನ್ನು ಪ್ರೇಮದಿಂದ ಚುಂಬಿಸುತ್ತಿದೆ. ಇಂತಹ ಕಗ್ಗತ್ತಲೆಯಲ್ಲೂ ರಾಕ್ಷಸರು ಯಕ್ಷರು ಪಿಶಾಚರು ಸಂಭಾಷಣೆ ಮಾಡುತ್ತ

ಓಡಾಡುತ್ತಿದ್ದಾರೆ. ಶ್ರೀರಾಮನೇ, ಈಗಾಗಲೇ ರಾತ್ರಿಯ ಒಂದು ಜಾವ ಕಳೆದಿದೆ. ಇನ್ನು ತಡಮಾಡದೆ, ನಿನ್ನ ಕೆಂದಳಿರ ಹಾಸಿನಲ್ಲಿ ಮಲಗಿ ನಿದ್ದೆ ಮಾಡು" ಎಂದು ಮುನಿವರ್ಯನು ಹೇಳಲು ಸಕಲಮುನಿಜನರು ಸಂತಸಗೊಂಡರು. ಅಲ್ಲದೆ, ಕೌಶಿಕ ಸುಗೋತ್ರದ ಧರ್ಮವಿಗ್ರಹಿಯಾದ ನೀನು ಸಕಲ ಲೋಕಗಳನ್ನೂ ಸಂರಕ್ಷಿಸಲು ಅವತರಿಸಿ ಲಕ್ಷ್ಮೀರಮಣನಾದ ಶ್ರೀರಾಮನನ್ನು ಒಡಗೊಂಡು ಬಂದು ಕೌಶಿಕಿಯ ಅತುಳ ಚರಿತೆಯನ್ನು ಹೇಳಿ ನಮ್ಮನ್ನು ಭವಪಾಶಹರರನ್ನಾಗಿಸಿದೆ ಎಂದು ಹೊಗಳಿದರು.

ರಾಮಚಂದ್ರನು ತಮ್ಮ ಸೌಮಿತ್ರಿಯೊಡನೆ ಸಂತಸದಿಂದ ಸುಖನಿದ್ದೆ ಮಾಡಿದ. ಮಾರನೆಯ ಬೆಳಿಗ್ಗೆ ವಿಶ್ವಾಮಿತ್ರನು ಬಾಲಕರ ಬಳಿ ಬಂದು, "ಚಂದ್ರನು ಅಸ್ತಮಿಸಿದ, ಪೂರ್ವಶೈಲದ ತುದಿಯಲ್ಲಿ ಭಾಸ್ಕರನು ಎಂದಿನಂತೆ ಮೇಲೆದ್ದಿದ್ದಾನೆ, ಪೂರ್ವಾದ್ರಿಯು ಮನೋಹರವಾದ ಕೆಂಬೆಳಕಿನಿಂದ ರಂಜಿಸುತ್ತಿದೆ. ನೀವು ಬೇಗ ಎಚ್ಚರಗೊಳ್ಳಿರಿ, ನಾವು ಮುಂದೆ ಪಯಣ ಕೈಗೊಳ್ಳಬೇಕಾಗಿದೆ" ಎಂದು ಮೃದೂಕ್ತಿಗಳಿಂದ ಎಚ್ಚರಿಸಿದ. ಮುನಿಯ ಮಾತುಗಳನ್ನು ಕೇಳಿ ರಾಮಲಕ್ಷ್ಮಣರು ಸಡಗರದಿಂದ ಮೇಲೆದ್ದರು. ಆ ಬಳಿಕ ಲಗುಬಗೆಯಿಂದ ಬೆಳಗಿನ ಸಂಧ್ಯಾಕ್ರಿಯೆಗಳನ್ನು ಪೂರೈಸಲು ಮುನಿಪತಿಯು ನದಿಯನ್ನು ದಾಟಿ ಮುಂದೆ ಸಾಗಬೇಕಾದ ತಮ್ಮ ಕೆಲಸವನ್ನು ನೆನಪಿಸಿ, "ಶುಚಿರೂಪರಾದ ಮುನಿಗಳು ಪ್ರತಿನಿತ್ಯ ಓಡಾಡುವ ಮಾರ್ಗವು ಎಷ್ಟು ಸಲೀಸಾಗಿದೆ, ನೋಡಿರಿ" ಎಂದು ಹೇಳಲು, ಎಲ್ಲರೂ ನದಿಯನ್ನು ದಾಟಿ ಆ ಕಡೆಯ ದಡವನ್ನು ಸೇರಿದರು; ಆ ಹೊತ್ತಿಗೆ ಮಧ್ಯಾಹ್ನವಾಯಿತು. ಮುಂದೆ ಸಾಗಿ ಬರಲು, ಜುಳುಜುಳು ಸದ್ದು ಮಾಡುವ ಹಿರಿಯಲೆಗಳಿಂದಲೂ, ನೊರೆಗಳಿಂದಲೂ, ತಳತಳನೆ ಹೊಳೆಯುವ ಕೆಮ್ಮೀನುಗಳಿಂದಲೂ, ಸುಳಿಸುಳಿದು ತೇಲುವ ಅರಸಂಚೆಗಳಿಂದಲೂ, ಕೊಂಚೆಗಳಿಂದಲೂ, ಹಸುರಾದ ಪಾಚಿಯಿಂದಲೂ, ಮೊಸಳೆಗಳಿಂದಲೂ, ಹೊಳೆಯುವ ಸಾರಸಪಕ್ಷಿಗಳಿಂದಲೂ, ಫಳಫಳನೆ ಮಿಂಚುವ ತುಂತುರ್ವನಿಗಳಿಂದಲೂ ಕೂಡಿ ಸಾಗುವ ಸುರನದಿ ಗಂಗೆಯನ್ನು ಕಂಡರು. ಆ ಪರಮಪಾವನ ನದಿಯನ್ನು ಕಂಡು ಹರ್ಷಿತರಾದ ಮುನಿಗಳೆಲ್ಲರೂ ಸ್ನಾನ ಮಾಡಿ ಪಿತೃಗಳಿಗೆ ತರ್ಪಣವನ್ನಿತ್ತು, ಎಂದಿನಂತೆ ಅಗ್ನಿಕಾರ್ಯವನ್ನೆಸಗಿ ದಿವ್ಯಹವಿಯನ್ನುಂಡು ವೃತ್ತಾಕಾರವಾಗಿ ಕುಳಿತುಕೊಂಡರು, ನಡುವೆ ಮುನಿಪತಿಯು ಕುಳಿತಿದ್ದ, ಅವರೊಡನೆ ಕೋದಂಡಧರನಾದ ಶ್ರೀರಾಮನೂ ಲಕ್ಷ್ಮಣನೂ ಕುಳಿತಿದ್ದರು.

ಆಗ ಶ್ರೀರಾಮಚಂದ್ರನು ತನ್ನ ಕೋಮಲಕಂಠದಿಂದ, "ಗುರುಗಳೇ, ಈ ಮಹಾನದಿಯು ಹೇಗೆ ತ್ರಿಪಥಗೆ ಎನಿಸಿತು? ಇದನ್ನು ಭೂಮಿಗೆ ಕರೆತಂದ ಮಹಾತ್ಮನಾವನು? ಪ್ರೇಮದಿಂದ ಕೂಡಿ ಜನರ ಪಾಪವನ್ನು ನಾಶಗೈಯುತ್ತ ಈಕೆಯು ಸಮುದ್ರವನ್ನು ಸೇರುವ ಪರಿಯಾವುದು? ದಯವಿಟ್ಟು ವಿಸ್ತಾರವಾಗಿ ಹೇಳಬೇಕು" ಎಂದು ಗಾಧಿಸುತನನ್ನು ಕೇಳಿಕೊಂಡ. ಆಗ ಆ ಮುನಿಯು ಆ ವಿಚಾರಗಳನ್ನು ಹೇಳಲು ಉಪಕ್ರಮಿಸಿದ: "ಹಿಮನಗೇಂದ್ರನ ಧರ್ಮಪತ್ನಿ ಮೇನೆ, ಅವಳ ಬಸಿರಲ್ಲಿ ಹುಟ್ಟಿದವರು ಇಬ್ಬರು ನದಿಗಳು, ಅವರಲ್ಲಿ ಹಿರಿಯಳೇ ಗಂಗೆ, ಕಿರಿಯಳು ಉಮೆ. ಬ್ರಹ್ಮನೇ ಮುಂತಾದ ಮುನಿಗಳು ಬಂದು ಗಿರಿರಾಜನನ್ನು ನಾನಾ ಪ್ರಕಾರದಿಂದ ಸ್ತುತಿಮಾಡಿ ಪಾಪಸಂಹಾರಿಯಾದ ಗಂಗೆಯನ್ನು ದೇವಲೋಕಕ್ಕೆ

ಕರೆದೊಯ್ದರು; ಉಮೆಯು ಶಿವನನ್ನು ಪ್ರಾರ್ಥನೆಗೈದು ದೃಢವಾದ ತಪಸ್ಸನ್ನು ಆಚರಿಸಿ ಕಾಮಹರನ ಚಿತ್ತವನ್ನು ರಂಜಿಸಿದಳು, ಆಗ ಮೇನೆಯರಸನು ಅವಳನ್ನು ಮುಕ್ಕಣ್ಣನಿಗಿತ್ತು ಮದುವೆ ಮಾಡಿಕೊಟ್ಟನು. ಭವಾನಿಯನ್ನು ಕಾಣುತ್ತ ಕಾಮಭರದಿಂದ ಭವನು ಅವಳನ್ನು ಕೂಡಲು, ದೇವತೆಗಳು ಅದನ್ನು ನೋಡಿ ಭಯಗೊಂಡು ಬ್ರಹ್ಮಾದಿಗಳು ಐತಂದು ನಮಸ್ಕಾರಮಾಡಿ ಜಾಣತನದಿಂದ ದೀನವದನರಾಗಿ ಈ ರೀತಿ ಬಿನ್ನವಿಸಿದರು: "ನಿನ್ನ ತೇಜಸ್ಸನ್ನು ಧರಿಸುವವರು ಮೂಲೋಕಗಳಲ್ಲಿ ಯಾರಿದ್ದಾರೆ? ಹೀಗಾಗಿ ನೀನು ಈ ಸುರತಸಂತೋಷವನ್ನು ಬಿಟ್ಟು ಬ್ರಹ್ಮತಪಸ್ಸಿನಲ್ಲಿ ತೊಡಗಬೇಕು. ಶರಣಾಗತತ್ರಾಣ, ಕರುಣಾಕರ, ಮಹೇಶ ಲೋಕಗಳನ್ನು ಕಾಪಾಡಲು ನೀನು ನಿನ್ನ ತೇಜಸ್ಸನ್ನು ನಿನ್ನಲ್ಲಿಯೇ ಧರಿಸಿಕೋ."

ದೇವತೆಗಳ ಮಾತನ್ನು ಕೇಳಿ ನಿಟಿಲಾಕ್ಷನು, "ಹಾಗೆಯೇ ಆಗಲಿ, ನಾನು ನನ್ನ ತೇಜಸ್ಸನ್ನು ನನ್ನಲ್ಲಿಯೇ ಧರಿಸುತ್ತೇನೆ, ಲೋಕಗಳೆಲ್ಲ ಸುಖವಾಗಿರಲಿ, ಆದರೆ ಕ್ಷುಭಿತಗೊಂಡ ನನ್ನ ತೇಜಸ್ಸನ್ನು ಯಾರು ಧರಿಸುತ್ತಾರೆ?" ಎಂದು ಕೇಳಿದ. ಆಗ ದೇವತೆಗಳು, "ಶಿವಮಹಾದೇವ, ಶಂಕರ ನಿನ್ನ ತೇಜಸ್ಸನ್ನು ಭೂದೇವಿ ಧರಿಸುತ್ತಾಳೆ" ಎಂದು ಬಿನ್ನೈಸಲು ಚಂದ್ರಶೇಖರನು ಸುರರ ನುಡಿಯನ್ನು ಕೇಳಿ ತೇಜಸ್ಸನ್ನು ಬಿಟ್ಟಾಗ ಅದು ಭೂಮಿಯನ್ನೆಲ್ಲ ವ್ಯಾಪಿಸಿ ನುಂಗುತ್ತ ಬಂದಿತು. ಆಗ ದೇವತೆಗಳೆಲ್ಲ ತವಕದಿಂದ ಅಗ್ನಿಯನ್ನು ಕುರಿತು, "ವಾಯುವಿನೊಡನೆ ಸೇರಿ ನೀನು ಶಿವನ ವೀರ್ಯವನ್ನು ಉಪಶಾಂತಿಗೊಳಿಸು" ಎಂದು ಪ್ರಾರ್ಥಿಸಿದರು. ಆಗ ವಾಯುವಿನೊಡನೆ ಬಂದ ಅಗ್ನಿಯು ವ್ಯಾಪಿಸಲು ಶಿವವೀರ್ಯವು ಬಿಳಿಯಾದ ಬೆಟ್ಟವಾಗಿ ಪರಿವರ್ತಿತವಾಯಿತು. ಶಿವನನ್ನೂ ಉಮೆಯನ್ನೂ ಪೂಜಿಸಿ ಸಂತಸದಿಂದ ಸ್ತುತಿಗೈದ ದೇವತೆಗಳನ್ನು ನೋಡುತ್ತ ಕಡುಕೋಪದಿಂದ ಕೂಡಿದ ಹಿಮವತ್ಪುತ್ರಿಯು, "ಮಗನನ್ನು ಪಡೆಯುವ ಅಭಿಲಾಷೆಯಿಂದ ನಾನು ಪತಿಯೊಡನೆ ರಮಿಸುತ್ತಿರಲು ನೀವೆಲ್ಲ ಮತಿವಿಕಲರಾಗಿ ಬಂದು ನನ್ನ ಅಭೀಷ್ಟವನ್ನು ಹಾಳುಮಾಡಿದ ಕ್ರೂರಿಗಳು; ಇಂದಿನಿಂದ ನೀವೆಲ್ಲರೂ ನಿಮ್ಮ ನಿಮ್ಮ ಹೆಂಡತಿಯರಲ್ಲಿ ಮಕ್ಕಳನ್ನು ಪಡೆಯದೆ ಹತಾಶರಾಗಿರಿ, ನಿಮ್ಮ ಹೆಂಡತಿಯರು ಬಂಜೆತನದಿಂದ ಬಳಲಲಿ, ಭೂದೇವಿಗೆ ಅನೇಕ ಪತಿಗಳಾಗಲಿ" ಎಂದು ಕ್ರೋಧದಿಂದ ಕೆಂಪಾದ ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ ಶಾಪವಿತ್ತಳು. ಈ ಶಾಪದಿಂದ ಕಂಗಾಲಾದ ದೇವತೆಗಳೆಲ್ಲರೂ ನಾಚಿಕೆಯಿಂದಲೂ ಭಯದಿಂದಲೂ ತಲೆತಗ್ಗಿಸಿ ನಿಂತರು. ಆಗ ಈಶಾನನು ವರುಣನು ಪಾಲಕನಾಗಿರುವ ಪಶ್ಚಿಮದಿಕ್ಕಿನೆಡೆಗೆ ಗಿರಿರಾಜತನಯೆಯ ಜೊತೆಗೆ ತಪಸ್ಸಿಗೆಂದು ತೆರಳಿದ. ಆಗ ದೇವತೆಗಳೆಲ್ಲರೂ ಬ್ರಹ್ಮನ ಬಳಿ ಬಂದು ಅವನಿಗೆ ವಂದಿಸಿ, "ದೇವ ಈಗ ನೀನೇ ನಮಗೆ ದಿಕ್ಕು, ನಮ್ಮನ್ನು ರಕ್ಷಿಸು, ನೀನಲ್ಲದೆ ಬೇರಾರು ಕಾಪಾಡಲು ಸಮರ್ಥರು? ಮೊದಲು ನೀನಿತ್ತ ಸೇನಾಪತಿಯಾದ ಪರಮೇಶ್ವರನು ಸತಿಸಹಿತ ತಪಸ್ಸನ್ನಾಚರಿಸುತ್ತಿರುವನು. ಹೀಗಾಗಿ ನಮ್ಮನ್ನು ಪ್ರೀತಿಯಿಂದ ಪೊರೆಯಬಲ್ಲ ಬೇರೊಬ್ಬ ಚಮೂಪತಿಯನ್ನು ದಯಪಾಲಿಸು" ಎಂದು ಪ್ರಾರ್ಥಿಸಿಕೊಂಡರು. ಆಗ ಬ್ರಹ್ಮನು, "ಉಮೆಯು ಮಕ್ಕಳಾಗದಿರುವಂತೆ ಸುರಸತಿಯರಿಗೆಲ್ಲ ಶಾಪವಿತ್ತಿದ್ದಾಳೆ, ಇದು ಸುಳ್ಳಾಗದು. ಆದರೆ ಚದುರನಾದ ಅಗ್ನಿಯು ಆಕಾಶಗಂಗೆಯಲ್ಲಿ ಒಬ್ಬ ಮಗನನ್ನು

ಪಡೆಯುತ್ತಾನೆ, ಮುಂದೆ ಅವನೇ ನಿಮ್ಮ ಸೇನಾಪತಿಯಾಗುತ್ತಾನೆ. ಅವನಿಂದ ನಿಮಗೆ ಮತ್ತೆ ಸುಖವೊದಗುತ್ತದೆ" ಎಂದು ಸಮಾಧಾನ ಹೇಳಿದ.

"ಕಮಲಭವನ ಆಜ್ಞೆಯಂತೆ ದೇವತೆಗಳೆಲ್ಲ ಸಮಾಧಾನ ಸಂತಸಗಳಿಂದ ಅಗ್ನಿಯ ಬಳಿಗೆ ಹೋಗಿ ತಮ್ಮನ್ನು ಕಾಪಾಡುವುದಕ್ಕಾಗಿ ತಡಮಾಡದೆ ತನ್ನ ತೇಜಸ್ಸನ್ನು ಗಂಗೆಯಲ್ಲಿ ಬಿಟ್ಟು ಮಗನನ್ನು ಪಡೆದು ರಕ್ಷಿಸುವಂತೆ ಬೇಡಿಕೊಂಡರು. ಆಗ ಹುತಾಶನನು ಮೃದುಮಾತುಗಳನ್ನಾಡುತ್ತ ಗಂಗಾದೇವಿಯ ಬಳಿಗೆ ಬಂದು, "ದೇವಿ ದೇವತೆಗಳು ಬೇಡುತ್ತಿರುವ ಈ ಕಾರ್ಯವನ್ನು ನೆರವೇರಿಸಲು ನೀನು ಗರ್ಭವನ್ನು ಧರಿಸಬೇಕು" ಎಂದಾಗ ಅದಕ್ಕೆ ಆಕೆಯು ಅನುಮತಿಯಿತ್ತಳು. ಅಗ್ನಿಯು ಶಿವರೇತಸ್ಸನ್ನು ಧರಿಸಿ ಗಂಗೆಯಲ್ಲಿ ಬಿಡಲು ಅದು ಸುತ್ತಲೂ ಹರಡಿಕೊಂಡಿತು. ಆದರೆ ಗರ್ಭವನ್ನು ಧರಿಸಲಾರದೆ ಗಂಗೆಯು ಅಗ್ನಿಯನ್ನು ಕರೆದು, ಆ ರೇತೋತೇಜಸ್ಸನ್ನು ಸಹಿಸಲಾರೆನೆಂದು ಮ್ಲಾನವದನಳಾದಳು, ಈ ಜ್ವಾಲೆಯಿಂದ ಪಾರಾಗುವ ಉಪಾಯವೇನೆಂದು ಪ್ರಾರ್ಥಿಸಿದಳು. ಆಗ ಅಗ್ನಿದೇವನು ಗರ್ಭವನ್ನು ಹಿಮಶೈಲದೆಡೆಯಲ್ಲಿಟ್ಟು ಬರಲು ಸೂಚಿಸಿದ. ಅದರಂತೆಯೇ ಗಂಗಾದೇವಿಯು ಗರ್ಭವನ್ನು ತುಹಿನಗಿರಿಯ ಪಾರ್ಶ್ವದಲ್ಲಿರಿಸಿದಾಗ ಅದು ಕರಗಿ ಹರಡಿಕೊಳ್ಳಲು ಆ ಭೂಭಾಗವೆಲ್ಲ ಚಿನ್ನದಂತೆ ಹೊಳೆಯತೊಡಗಿತು. ಅದರ ಮಲದಿಂದಾಗಿ ಆ ಭೂಮಿಯೊಳಗೆ ಚಿನ್ನ ಬೆಳ್ಳಿ ತಾಮ್ರ ತವರ ಸೀಸಗಳು ಉದಿಸಿದವು. ಸ್ವರ್ಣವು ಜಾತರೂಪ ಎಂಬ ಹೆಸರಿನಿಂದ ಪ್ರಖ್ಯಾತವಾಯಿತು. ಅದಕ್ಕನುಗುಣವಾಗಿ ಆಗಿನಿಂದ ಆ ಭೂಭಾಗದಲ್ಲೆಲ್ಲ ಹುಲ್ಲು ಪೊದೆ ಗಿಡ ಬಳ್ಳಿಗಳು ಹುಟ್ಟಿಕೊಂಡವು. ಗಂಗಾದೇವಿಯು ಇರಿಸಿದ್ದ ಗರ್ಭದಿಂದ ಆ ಸಸ್ಯಸಮೂಹದ ನಡುವಿನಿಂದ ಹಿರಣ್ಮಯವಾದ ಒಂದು ಶಿಶುವಿನ ಉದಯವಾಯಿತು. ಅದನ್ನು ಕಂಡು ದೇವತೆಗಳೆಲ್ಲರೂ ಆನಂದದಿಂದ ಆ ಕೂಸಿಗೆ ಮೊಲೆಯೂಡಲು ಕೃತ್ತಿಕಾದೇವಿಯರನ್ನು ಪ್ರಾರ್ಥಿಸಿಕೊಂಡರು. ಅದರಂತೆಯೇ ಅವರು ಆ ಮಗುವಿಗೆ ಹಾಲನ್ನೂಡಿ ಸಲಹಿದರು, ದೇವತೆಗಳೆಲ್ಲ ಶಿಶುವಿಗೆ ಕಾರ್ತಿಕೇಯ ಎಂಬ ಹೆಸರನ್ನಿಟ್ಟರು. ಆ ಮಗುವು ಗರ್ಭದಿಂದ ಕೆಳಗೆ ಬಿದ್ದುದರಿಂದ ಮಗುವಿಗೆ ಸ್ಕಂದ ಎಂಬ ಹೆಸರೂ ಉಂಟಾಯಿತು. ಕೃತ್ತಿಕಾನಕ್ಷತ್ರ ಸಮೂಹದ ಆರು ಮಂದಿ ದೇವಿಯರು ಮೊಲೆಯೂಡಿ ಅದನ್ನು ಸೇವಿಸಿದ್ದರಿಂದ ಅಗ್ನಿ ತೇಜಸ್ಸಿನ ಆ ಮಗುವು ಆರು ಮುಖಗಳನ್ನು ಪಡೆಯಿತು. ಕೃತ್ತಿಕಾದೇವಿಯರ ಸ್ತನ್ಯಪಾನ ಮಾಡಿ ಸುಕುಮಾರತೆ ಲಾಲಿತ್ಯಗಳನ್ನು ಪಡೆದರೂ ಅವನು ತನ್ನ ಪರಾಕ್ರಮದಿಂದ ದೈತ್ಯಗಣವನ್ನು ಗೆದ್ದನು. ಆಗ ಅಗ್ನಿಯೇ ಮೊದಲಾದ ದೇವತೆಗಳೆಲ್ಲರೂ ಅವನನ್ನು ದೇವತೆಗಳ ಸೇನಾಪತಿಯನ್ನಾಗಿ ನಿಯೋಜಿಸಿದರು.

ಈ ಕತೆಯನ್ನು ಹೇಳಿ ಮುಗಿಸಿದ ವಿಶ್ವಾಮಿತ್ರನು ರಾಮನಿಗೆ ಮುಂದೆ ಗಂಗಾವತರಣದ ಕತೆಯನ್ನು ವಿಸ್ತಾರವಾಗಿ ಹೇಳಲು ತೊಡಗಿದ: ಸೂರ್ಯಕುಲದ ತವರಾದ ಅಯೋಧ್ಯಾನಗರದ ಅರಸು ಸಗರ; ಅವನಿಗೆ ಗುಣಾಢ್ಯರೂ ಮಹಾಪತಿವ್ರತೆಯರೂ ಆದ ಇಬ್ಬರು ಪತ್ನಿಯರು – ಮೊದಲನೆಯವಳು, ವಿದರ್ಭದಲ್ಲಿ ಹುಟ್ಟಿದ ಕೇಶಿನಿ, ಕಿರಿಯವಳು ಅರಿಷ್ಟನೇಮಿಯ ಮಗಳಾದ ಸುಮತಿ. ಅವರ ಸಂಸಾರವು ಇನ್ನುಳಿದಂತೆ ಸಂತಸದಿಂದ

ಕೂಡಿದ್ದರೂ ಇಬ್ಬರೂ ಹೆಂಡತಿಯರಲ್ಲಿ ಮಕ್ಕಳಾಗಿರಲಿಲ್ಲ. ಇದರಿಂದ ದುಃಖಿತನಾದ ಸಗರ ಚಕ್ರವರ್ತಿಯು ತನ್ನ ಹೆಂಡತಿಯರನ್ನೊಳಗೊಂಡು ಹಿಮವತ್ಪರ್ವತದಲ್ಲಿ ತಪಗೈಯುತ್ತಿದ್ದ. ಮಹಾಮುನಿ ಭೃಗುವನ್ನು ಕುರಿತು ನೂರು ವರ್ಷಗಳಷ್ಟು ದೀರ್ಘಕಾಲ ಉಪವಾಸಗೈಯುತ್ತ ಕಠಿಣವಾದ ತಪಸ್ಸು ಮಾಡಲು, ಅದರಿಂದ ಸಂತುಷ್ಟನಾದ ಮುನಿಯು ಈ ಬಗೆಯ ವರವನ್ನಿತ್ತನು: "ವೈದರ್ಭಿ ರಾಣಿಯಲ್ಲಿ ವಂಶಕರನಾದ ಮಗನೊಬ್ಬನು ಹುಟ್ಟಿದರೆ, ಸುಮತಿಯಲ್ಲಿ ಅರುವತ್ತು ಸಾವಿರ ಕುಮಾರರು ಜನಿಸುತ್ತಾರೆ." ಈ ಮಾತುಗಳನ್ನು ಕೇಳಿ ಅವರೆಲ್ಲರೂ ಮುದಗೊಂಡು ಮುನಿಗೆ ನಮಸ್ಕರಿಸಿ ತಮ್ಮ ನಗರಕ್ಕೆ ಹೊರಟರು.

ಸಗರನು ತನ್ನ ಮಡದಿಯರೊಡನೆ ಸಂತಸದಿಂದ ತನ್ನ ನಗರಕ್ಕೆ ಬಂದು ಸುಖವಾಗಿದ್ದ. ಕೆಲ ಕಾಲದ ಬಳಿಕ ಕೇಶಿನಿಯಲ್ಲಿ ವಂಶಕರನಾದ ಅಸಮಂಜ ಎಂಬ ಮಗ ಹುಟ್ಟಿದ; ಸುಮತಿಗೆ ಅರುವತ್ತು ಸಾವಿರ ಮಕ್ಕಳು ಜನಿಸಿದರು. ಅಂತಃಪುರದ ದಾದಿಯರು ಎಲ್ಲ ಮಕ್ಕಳನ್ನೂ ಪ್ರತ್ಯೇಕ ಎಣ್ಣೆಗೊಪ್ಪರಿಗೆಯಲ್ಲಿರಿಸಿ ಗಮನವಿಟ್ಟು ಬೆಳಸಿದರು. ದಿನದಿನಕ್ಕೆ ಶೀಲಬಲವಿಕ್ರಮಗುಣಗಳಿಂದ ಕೂಡಿ ಮಕ್ಕಳು ಪ್ರವರ್ಧಮಾನರಾಗಿ ಬೆಳೆದರು. ಆದರೆ ಅಸಮಂಜನು ಊರಿನ ಹುಡುಗರನ್ನು ಹಿಡಿದು ತಂದು ಸರಯೂನದಿಯಲ್ಲಿ ಬೀಳಿಸಿ, ದಡದ ಮೇಲೆ ನಗುತ್ತ ಕುಳಿತುಕೊಳ್ಳುವ ಕ್ರೂರ ಆಟದಲ್ಲಿ ತೊಡಗಿದ. ನೊಂದ ಪ್ರಜೆಗಳೆಲ್ಲರೂ ರಾಜನಲ್ಲಿಗೆ ಬಂದು ರಾಜಕುಮಾರನ ಉಪಟಳವನ್ನು ತಡೆಯಬೇಕೆಂದು ಮೊರೆಯಿಟ್ಟರು. ಮಗನ ಉದ್ಧಟತನವನ್ನು ಕೇಳಿ ಕೋಪಗೊಂಡ ಸಗರನು ಅಸಮಂಜನನ್ನು ಗಡೀಪಾರು ಮಾಡಿದ. ಆದರೆ ಮುಂದೆ ಅಸಮಂಜನಿಗೆ ಹುಟ್ಟಿದ ಅಂಶುಮಂತ ಎಂಬ ಹೆಸರಿನ ಅವನ ಮಗನು ಧೀರಕಾರ್ಯಗಳಿಂದ ಜನಪ್ರೀತಿಯನ್ನು ಗಳಿಸಿಕೊಂಡು ಎಲ್ಲರನ್ನೂ ಪಾಲಿಸುತ್ತಿದ್ದ.

ಮುಂದೆ ಸಗರ ಚಕ್ರವರ್ತಿಯು ಅಶ್ವಮೇಧ ಯಾಗವನ್ನು ಮಾಡಲು ನಿಶ್ಚಯಿಸಿದ. ಅದರಂತೆ ವಿಂಧ್ಯ ಮತ್ತು ಹಿಮವತ್ ಪರ್ವತಗಳ ಮಧ್ಯಪ್ರದೇಶವೊಂದರಲ್ಲಿ ಯಾಗ ಮಾಡಲು ಭಯಭಕ್ತಿಯಿಂದ ಸಿದ್ಧತೆಗಳನ್ನು ನಡೆಸುತ್ತ ಯಜ್ಞತುರಗರಕ್ಷಣೆಗೆ ಅಂಶುಮಂತನನ್ನು ನೇಮಿಸಿ ತಾನು ದೀಕ್ಷೆಯನ್ನು ತಾಳಿದ. ಆದರೆ ಉಪಾಯಾಂತರದಿಂದ ದೈತ್ಯವೇಷದಿಂದ ಬಂದವನು ಇಂದ್ರನ ಯಜ್ಞಾಶ್ವವನ್ನು ಅಪಹರಿಸಿದ. ಈ ವಿಷಯವನ್ನು ತಿಳಿದ ಉಪಾಧ್ಯಾಯ ಮುಂತಾದ ಭೂಸುರರೆಲ್ಲ ಬಂದು ಕುದುರೆಯನ್ನು ಕದ್ದೊಯ್ದಿರುವವನು ಯಾರು ಎಂದು ಪತ್ತೆ ಹಚ್ಚಿ ಅದನ್ನು ವಾಪಸು ತಂದು ಯಾಗವನ್ನು ನಡೆಸುವಂತೆ ಸಗರನಿಗೆ ಸೂಚಿಸಿದರು. ಅವರ ಮಾತುಗಳನ್ನು ಕೇಳಿದ ಪಾವನಚರಿತ್ರನಾದ ಸಗರನು ತನ್ನ ಮಕ್ಕಳನ್ನೆಲ್ಲ ಕರೆದು, "ಕುದುರೆಯು ಕಳ್ಳತನವಾದ ರೀತಿಯು ತಿಳಿಯದ್ದರಿಂದ ಯಜ್ಞಕ್ಕೆ ವಿಘ್ನವೊದಗಿದೆ. ಕುದುರೆಗಾಗಿ ಇಡೀ ಭೂಮಿಯಲ್ಲೆಲ್ಲ ಹುಡುಕಿರಿ; ಕುದುರೆಯು ಕಾಣುವವರೆಗೂ ಒಬ್ಬೊಬ್ಬರೂ ಒಂದೊಂದು ಯೋಜನದಂತೆ ಭೂಮಿಯನ್ನು ಅಗೆಯಿರಿ. ಕದ್ದೊಯ್ದ ರಕ್ಕಸರನ್ನು ತರಿದು ನೀವು ಕುದುರೆಯನ್ನು ಮರಳಿ ತರುವವರೆಗೂ ನಾನು ಮೊಮ್ಮಗನಾದ ಅಂಶುಮಂತ ಹಾಗೂ ವಿಪ್ರಜನರೊಡನೆ ದೀಕ್ಷೆಯಲ್ಲಿರುತ್ತೇನೆ" ಎಂದು ಅಪ್ಪಣೆಯಿತ್ತ.

ತಂದೆಯ ಆಜ್ಞೆಯಂತೆ ಸಗರನ ಅರುವತ್ತು ಸಾವಿರ ಮಕ್ಕಳು ಹೊರಟು ತಮ್ಮ

ವಜ್ರಾಯುಧದಂತಹ ತೋಳುಗಳಲ್ಲಿ ನೇಗಿಲು ಶೂಲ ಮುಂತಾದ ಹರಿತವಾದ ಆಯುಧಗನ್ನು ಹಿಡಿದು ಭೂಮಿಯನ್ನು ಅಗೆಯುತ್ತ ಸಾಗಿದರು; ತೋಡಿದ ಜಾಗಗಳಲ್ಲಿ ಕಂಡ ಕಂಡವರನ್ನು ತಮ್ಮ ಸಾಟಿಯಿಲ್ಲದ ಪರಾಕ್ರಮದಿಂದ ಹನನಗೈಯುತ್ತ ಮುನ್ನಡೆದರು. ಈ ಅಗೆಯುವಿಕೆಯು ಜಂಬೂದ್ವೀಪವನ್ನೆಲ್ಲ ಬಳಸುತ್ತಿರಲು ದೇವತಾಸಮೂಹವು ಭಯದಿಂದ ಓಡಿ ಬಂದು ಬ್ರಹ್ಮನ ಪಾದಗಳಲ್ಲಿ ಬಿದ್ದು ನಡೆಯುತ್ತಿರುವ ಅರುವತ್ತು ಸಾವಿರ ಯೋಜನದ ಘೋರ ಖನನವನ್ನೂ, ಅದರಿಂದಾಗುವ ಭೂಮಿಯ ವಿಕೃತಿಯನ್ನೂ, ಕಂಡಕಂಡವರನ್ನೆಲ್ಲ ನಜ್ಜುಗುಜ್ಜು ಮಾಡುತ್ತಿರುವ ಪರಿಯನ್ನೂ ಅರಿಕೆಮಾಡಿದರು. ಆಗ ಚತುರಾನನನು ಆ ವೃಂದಾರಕಸಂದೋಹಕ್ಕೆ ಕಕ್ಕುಲತೆಯಿಂದ ಸಮಾಧಾನ ಮಾಡಿ, "ಈ ವಿಗಡಬಲರು ತೋಡತೋಡುತ್ತ ಪಾತಾಳಲೋಕವನ್ನು ಸಾರಿದಾಗ ಮಹಾಮಹಿಮರಾದ ವಿಷ್ಣು ಕಪಿಲ ಮುನಿಗಳು ಉರುಕೋಪದಿಂದ ಅವರನ್ನು ಅಗ್ನಿಯಲ್ಲಿ ಕೆಡವಿ ಬೂದಿ ಮಾಡುತ್ತಾರೆ, ಭಯಪಡಬೇಡಿ" ಎಂದು ಹೇಳಿ ಬೀಳ್ಕೊಟ್ಟ.

ಸಗರ ಕುಮಾರರು ನಾಲ್ಕೂ ದಿಕ್ಕುಗಳಲ್ಲಿಯೂ ಭೂಮಿಯನ್ನು ತೋಡಿದರು, ಆದರೆ ಕುದುರೆಯ ಕಳ್ಳ ಎಲ್ಲಿಯೂ ಕಾಣಲಿಲ್ಲ. ಅವರೆಲ್ಲ ನಿಸ್ಸಹಾಯಕರಾಗಿ ತಂದೆಯ ಬಳಿ ಬಂದು ಅವನ ಅಡಿಗಳಿಗೆ ಎರಗಿ ನಡೆದ ವೃತ್ತಾಂತವನ್ನೆಲ್ಲ ಬಿನ್ನಪ ಮಾಡಿದರು, ಕುದುರೆಯನ್ನು ಕಾಣಲಾಗಲಿಲ್ಲವೆಂಬ ಸಂಗತಿಯನ್ನು ವ್ಯಾಕುಲದಿಂದ ಹೇಳಿದರು. ಆಗ ಸಗರ ಚಕ್ರವರ್ತಿಯು ಉಕ್ಕುತ್ತಿರುವ ರೋಷದಿಂದ ಕೂಡಿ ಕಾರ್ಯವು ಸಫಲವಾಗುವವರೆಗೂ ಪ್ರಯತ್ನಪಡುತ್ತಲೇ ಇರಬೇಕೆಂದು ಮಕ್ಕಳಿಗೆ ಆಜ್ಞಾಪಿಸಲು, ಅವರೆಲ್ಲ ಹಸಾದ ಎಂದು ತಂದೆಯ ಆದೇಶವನ್ನು ಹೊತ್ತು ಪ್ರಯತ್ನವನ್ನು ಮುಂದುವರಿಸಿದರು. ನಡೆನಡೆದು ಮಕ್ಕಳೆಲ್ಲ ರೋಷಾವೇಶದಿಂದ ಅಗೆದಗೆದು ತ್ವರಿತವಾಗಿ ರಸಾತಳವನ್ನೈದಿದರು. ಇಂದ್ರದಿಕ್ಕಿನಲ್ಲಿ ಮಹಾಗಜವಾದ ವಿರೂಪಾಕ್ಷವು ಭೂಮಿಯನ್ನು ಹೊತ್ತಿರುವುದನ್ನು ಕಂಡು ಅದಕ್ಕೆ ವಂದಿಸಿ, ದಕ್ಷಿಣ ದಿಕ್ಕಿನಲ್ಲಿ ಭೂಮಿಯನ್ನು ಖನನಗೈಯುತ್ತ ಕುದುರೆಯನ್ನು ಹುಡುಕುತ್ತ ಸಾಗಿದರು. ಹೀಗೆ ನೆಲವನ್ನು ಸೀಳುತ್ತ ನಡೆದಿರಲು ಮಹಾಪದ್ಮ ಎಂಬ ಹೆಸರಿನ ದಿಕ್ಕರಿಯು ಭೂಮಿಯನ್ನು ಹೊತ್ತಿರುವುದನ್ನು ನೋಡಿ ಅದಕ್ಕೆ ವಂದನೆಗೈದು, ಮತ್ತೆ ಪಶ್ಚಿಮಕ್ಕೆ ಹೊರಳಿ, ರಸಾತಳವನ್ನು ಭೇದಿಸುತ್ತ ನಡೆದಿರಲು ಚೆಲುವಾದ ಸೌಮನಸವೆಂಬ ದಿಗ್ಗಜವು ಕಣ್ಗೆಸೆಯಲು, ಅದನ್ನು ಭಕ್ತಿಯಿಂದ ಪ್ರಾರ್ಥಿಸಿ ಬಡಗಮುಖವಾಗಿ ಮುನ್ನಡೆದರು. ಆ ದಿಕ್ಕಿನಲ್ಲಿ ಭೂಮಿಯನ್ನಗೆಯುತ್ತ ಸಾಗಿದಾಗ ಮುಂದೆ ಭದ್ರ ಎಂಬ ಹೆಸರಿನ ದಿಗ್ಗಜವು ಶೋಭಯಮಾನವಾಗಿ ಎದುರಾಯಿತು. ಸಗರಕುವರರೆಲ್ಲ ಅದಕ್ಕೆ ನಮಸ್ಕಾರ ಮಾಡಿ ಎಲ್ಲ ದಿಕ್ಕುಗಳಲ್ಲೂ ಕುದುರೆಗಾಗಿ ಹಂಬಲಿಸಿ ಹುಡುಕುತ್ತ ಮುನ್ನಡೆದರು. ಆದರೆ ಎಲ್ಲಿಯೂ ಕುದುರೆಯ ಸುಳಿವೇ ಇಲ್ಲ, ಅದರ ವಿಚಾರ ಹೇಳುವವರಾರೂ ಇಲ್ಲ.

ಅವರ ಕೋಪವು ವೆಗ್ಗಳಿಸಿ ಬದ್ಧರೋಷದಿಂದ ರಸಾತಳವನ್ನು ಸೀಳಿಕೊಂಡು ಬಂದಾಗ ಅಲ್ಲಿ ಅರಗುವರರಿಗೆ ಕಪಿಲಮುನಿಯು ಕಾಣಿಸಿದ. ಅಲ್ಲದೆ, ಅವನ ಹಿಂದೆ ಅನತಿ ದೂರದಲ್ಲಿಯೇ ತಮ್ಮ ಯಜ್ಞಾಶ್ವವು ಸ್ವೇಚ್ಛೆಯಿಂದ ಸಂಚರಿಸುತ್ತಿದ್ದುದನ್ನು ಕಂಡರು. ಅದನ್ನು ನೋಡಿ ಸಂತೋಷದಿಂದ ಮುಂದೆ ಬಂದು, ಮುನಿಯನ್ನು

ಕುದುರೆಕಳ್ಳನೆಂದು ಭಾವಿಸಿ ಸಿಡಿಲಿನಂತೆ ಘುಡುಘುಡಿಸುತ್ತ ಮುನಿಯೆಡೆಗೆ ಸಾಗಿ, "ಏ ಹುಚ್ಚ, ನಮ್ಮ ಯಜ್ಞಾಶ್ವವನ್ನು ನೀನು ಕದ್ದು ತಂದೆಯೇ ಹೊರತು, ನಿನ್ನ ಪ್ರಾಣವನ್ನು ತೆಗೆಯುವ ಸಗರಕುಮಾರರನ್ನು ಕಾಣದಾದೆ" ಎಂದು ಕಠೋರವಾದ ನುಡಿಗಳನ್ನಾಡುತ್ತ ಗರ್ಜಿಸಿದರು. ತನ್ನ ಸುತ್ತಲೂ ಸಗರಾತ್ಮಜರು ಆವರಿಸಿಕೊಂಡು ಬರುವುದನ್ನು ಕಂಡ ಕಪಿಲಮುನಿಯು ಕುಡುಗೋಪದಿಂದ ಹೂಂಕರಿಸಿದ; ಆ ಕ್ಷಣದಲ್ಲಿಯೇ ಅರುವತ್ತು ಸಾವಿರ ನೃಪಾಲತನಯರು ಸುಟ್ಟು ಬೂದಿಯಾಗಿ ನೆಲಕ್ಕೆ ಬಿದ್ದರು.

ಇತ್ತ ತನ್ನ ಮಕ್ಕಳು ಬಹುಕಾಲ ಬಾರದಿದ್ದುದರಿಂದ ಸಗರನು ಚಿಂತಾಕ್ರಾಂತನಾದ. ಆಗ ತನ್ನ ಮೊಮ್ಮಗನಾದ ಅಂಶುಮಂತನನ್ನು ಕರೆದು, "ತರಳನೇ, ನೀನು ಮೃಡವಿಕ್ರಮ ಹಾಗೂ ಹಿಂದಿನ ರಾಜರಂತೆ ಸಕಲಾರ್ಥವೇತ್ತ. ನೀನು ಚತುರಂಗಬಲ ಸಮೇತ ಹೋಗಿ ನಿನ್ನ ಚಿಕ್ಕಪ್ಪಂದಿರ ಪರಿಯನ್ನು ಕಂಡು ಹಯಚೋರನನ್ನು ಹಿಡಿದು ಬಾ, ನಿನಗೆ ಒಳ್ಳೆಯದಾಗಲಿ" ಎಂದು ಸೂಚಿಸಲು ಅಂಶುಮಂತನು ತಾತನಿಗೆ ನಮಸ್ಕರಿಸಿ ಹೊರಟ. ಎಲ್ಲೆಡೆಯೂ ಅಲೆದು ಸುತ್ತಿ ತನ್ನ ಚಿಕ್ಕಪ್ಪಂದಿರಿಗಾಗಿ ಹುಡುಕಾಡಿದ, ಭೂಮಿಯಲ್ಲೆಲ್ಲೂ ಅವರು ಕಾಣಲಿಲ್ಲ; ಹೀಗಾಗಿ ಅವನು ರಸಾತಳವನ್ನು ಹೊಕ್ಕ. ಆನಂತರ ಸಗರಕುಮಾರರು ಅಗೆದ ಮಾರ್ಗವನ್ನೇ ಹಿಡಿದು ಹೋಗಿ ಮಧ್ಯದಲ್ಲಿ ವಿರೂಪಾಕ್ಷ ದಿಗ್ಗಜವನ್ನು ಕಂಡು ವಂದಿಸಿ ವಿಚಾರಿಸಿದಾಗ ಅದು, "ತರಳನೇ, ಸ್ವಲ್ಪ ಕಷ್ಟ ಪಟ್ಟು ಹೋದರೆ ನಿನಗೆ ನಿನ್ನ ಚಿಕ್ಕಪ್ಪಂದಿರ ಹಾಗೂ ಅಶ್ವದ ಇರವು ತಿಳಿಯುತ್ತದೆ" ಎಂದಿತು. ಹಾಗೆಯೇ ಮುಂದೆ ಸಾಗಿ ಎಲ್ಲ ದಿಗ್ಗಜಗಳನ್ನೂ ಕಂಡು ವಿಚಾರಿಸಲು ಅದೇ ಉತ್ತರ ದೊರೆಯಿತು.

ಚಿಕ್ಕಪ್ಪಂದಿರು ಹಾಗೂ ಕುದುರೆಯ ಸುಳಿವು ಸಿಕ್ಕದೆ ತನ್ನ ಮನೋರಥವೆಲ್ಲಿ ಸಿದ್ಧಿಸುವುದಿಲ್ಲವೋ ಎಂಬ ಚಿಂತೆಯೊಡನೆ ಧರಣಿತಳವನ್ನೆಲ್ಲ ತಿರುತಿರುಗುತ್ತ ಹೋಗಲು ಕೊನೆಗೆ ಅಮಿತ ತೇಜೋರಾಶಿಯೊಂದು ಅವನ ಕಣ್ಗೆಸೆಯಿತು. ಪೂರ್ಣಚಂದ್ರಸನ್ನಿಭನಾಗಿ ಮಿರುಗುತ್ತ, ಚಿನ್ನದ ರೆಕ್ಕೆಗಳಿಂದ ಕೂಡಿ, ದೇಹಕಾಂತಿಯು ಕೇಸರಿಯಂತೆ ಹೊಳೆಯುತ್ತಿದ್ದ ಸಕಲ ವಿಷಹರನಾದ ಗರುಡನು ಅಮೃತರಸವು ತುಂಬಿದ ಕಲಶದೊಡನೆ ಕಾಣಿಸಿದ. ಅವನನ್ನು ಕುರಿತು, "ನಿಖಿಲ ಮುನಿವಂದ್ಯನೇ, ನಿನಗೆ ನಮಸ್ಕಾರ" ಎಂದು ಎರಗಿ ಅಂಶುಮಂತನು ತನ್ನ ವಿಚಾರವನ್ನೆಲ್ಲ ಬಿನ್ನವಿಸಲು ತಾರ್ಕ್ಷ್ಯನು, "ಕುವರನೇ, ನಿನ್ನ ಪಿತರುಗಳೆಲ್ಲ ಕಪಿಲ ಮುನಿಯ ಕೋಪದಿಂದಾಗಿ ಅವನ ತಪೋಬೆಂಕಿಗೆ ಸಿಲುಕಿ ಸುಟ್ಟು ಬೂದಿಯಾಗಿದ್ದಾರೆ, ಆ ಕುರಿತು ಅಳಲುತ್ತಿದ್ದರೆ ಪ್ರಯೋಜನವೇನು, ನೀನು ಬೇಗ ಕುದುರೆಯನ್ನು ಹುಡುಕು; ನಿನ್ನ ತಾತನು ಕೈಗೊಂಡ ಯಜ್ಞವನ್ನು ನೆರವೇರುವಂತೆ ಮಾಡು. ತುಹಿನಾದ್ರಿಜಾತೆಯಾದ ಗಂಗೆಯು ದೇವಲೋಕದಲ್ಲಿದ್ದಾಳೆ, ಅವಳನ್ನು ಕರೆದು ತಂದು ಸೂರ್ಯಕುಲಜಾತರಿಗೆ ಸದ್ಗತಿಯನ್ನು ದೊರಕಿಸಿ ಕೊಡು" ಎಂದು ತಿಳಿವಳಿಕೆ ನೀಡಿ ಅವನನ್ನು ಬೀಳ್ಕೊಟ್ಟನು. ಗರುಡನ ನುಡಿಗಳನ್ನು ಕೇಳಿ ಸತ್ಯವೆಂದು ಬಗೆದು ಮುಂದೆ ನಡೆದು ಕಪಿಲ ಮುನಿಯನ್ನು ಕಂಡು ವಿನೀತಭಾವದಿಂದ ನಮಿಸಿ, ಅವನನ್ನು ಒಲಿಸಿ ಸಂಕಟದೊಂದಿಗೆ ಕುದುರೆಯೊಡನೆ ತಾತನ ಬಳಿಗೆ ಹೋದ.

ಸಗರನ ಬಳಿ ಬಂದ ಅವನ ಮೊಮ್ಮಗನು ಎಲ್ಲ ವೃತ್ತಾಂತವನ್ನೂ ಅವನಿಗೆ

ವಿಶದವಾಗಿ ನಿರೂಪಿಸಿದ. ಆತನೂ ಹೊಟ್ಟೆಯಲ್ಲಿ ಸಂಕಟವನ್ನಿಟ್ಟುಕೊಂಡೇ ಕೈಗೊಂಡ ಯಾಗವನ್ನು ಸಾಂಗವಾಗಿ ನೆರವೇರಿಸಿ ತನ್ನ ನಗರಕ್ಕೆ ವಾಪಸಾದ. ತನ್ನ ಪುತ್ರರ ಸದ್ಗತಿಗೆ ಗಂಗೆಯನ್ನು ತರುವ ಆಲೋಚನೆ ಮಾಡುತ್ತಲೇ ಕೆಲವು ಕಾಲ ಸಗರನು ರಾಜ್ಯಭಾರ ಮಾಡಿ ಲಕ್ಷ್ಮೀರಮಣನ ಪಾದಾರವಿಂದಗಳನ್ನು ಸೇರಿದ. ಆಗ ರಾಜಬಂಧುಗಳು ಅಂಶುಮಂತನಿಗೆ ಪಟ್ಟವನ್ನು ಕಟ್ಟಿದರು; ಆತನು ಸದ್ಧರ್ಮದಿಂದ ಪ್ರಜಾಪಾಲನೆ ಮಾಡುತ್ತಿದ್ದನು. ಅವನಿಗೆ ಸೂರ್ಯನಂತೆ ತೇಜಸ್ವಿಯಾದ ಮಗನಿದ್ದ, ಅವನ ಹೆಸರು ದಿಲೀಪ. ಅವನು ಪ್ರಾಪ್ತ ವಯಸ್ಕನಾಗಲು ಅಂಶುಮಂತನು ಅವನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ತಾನು ಪಿತೃಗಳಿಗೆ ಸದ್ಗತಿಯನ್ನೊದಗಿಸಲು ದೇವಗಂಗೆಯನ್ನು ಭೂಲೋಕಕ್ಕೆ ತರಲೆಂದು ತಪಸ್ಸಿಗೆ ತೆರಳಿ, ಹಿಮವತ್ಪರ್ವತವನ್ನು ಸೇರಿ ಘೋರ ತಪಸ್ಸಿನಲ್ಲಿ ತೊಡಗಿದ. ಆದರೆ ತಪೋಯುತನಾಗಿರುವಾಗಲೇ ಕೆಲವು ವರ್ಷಗಳಲ್ಲಿ ಅವನೂ ಕಾಲವಶನಾದ. ಆಗ ಸ್ವರ್ಗಸ್ಥನಾದ ತಂದೆಗಾಗಿ ಮರುಗುತ್ತ, ತೀರಿಹೋದ ಪಿತೃಗಳಿಗೆ ಸದ್ಗತಿಯನ್ನು ಒದಗಿಸುವೆನೆಂದು ಆಲೋಚಿಸಿ ಮೂವತ್ತು ಸಾವಿರ ವರ್ಷಗಳ ಕಾಲ ಧರೆಯನ್ನು ಪಾಲಿಸಿ ದಿಲೀಪನೂ ರೋಗಬಾಧೆಯಿಂದಾಗಿ ಕೆಲ ಕಾಲದಲ್ಲಿಯೇ ಮೃತ್ಯುವಶನಾದ.

ರಾಮನೇ, ಮುಂದಾದುದನ್ನು ಕೇಳು: ದಿಲೀಪನ ಮಗನೇ ಭಗೀರಥ, ಅವನೋ ಅಪರಿಮಿತ ಪರಾಕ್ರಮಿ, ಅವನು ರಾಜ್ಯರಕ್ಷಣೆಯನ್ನು ಮಂತ್ರಿಗಳಿಗೆ ಒಪ್ಪಿಸಿ ಗೋಕರ್ಣ ಪುಣ್ಯಾಶ್ರಮವನ್ನು ಸೇರಿದ. ತನ್ನ ತಪಸ್ಸಿನಿಂದ ದೇವನದಿಯನ್ನು ಸ್ವರ್ಗದಿಂದ ನೆಲಕ್ಕೆ ಹರಿಸಿ ಪ್ರಪಿತಾಮಹರುಗಳಿಗೆ ಸದ್ಗತಿಯನ್ನೊದಗಿಸುವೆನೆಂದು ದೃಢವಾಗಿ ನಿರ್ಧರಿಸಿದ. ಮಾಸೋಪವಾಸ, ಗಾಳಿಯ ಆಹಾರ, ಪಂಚಾಗ್ನಿಗಳ ನಡುವೆ ಕುಳಿತು ಮಧ್ಯಾಹ್ನದ ಸೂರ್ಯನನ್ನು ನಿಟ್ಟಿಸುತ್ತ ಊರ್ಧ್ವಬಾಹುಗಳಿಂದ ಕೂಡಿ ಪಟ್ಟು ಹಿಡಿದು ತಪಸ್ಸನ್ನೆಸಗಿದ. ಹೀಗೆ ಸಾವಿರ ವರ್ಷಗಳಷ್ಟು ಕಾಲ ಕಳೆದ ಮೇಲೆ, ದೇವದೇವನಾದ ಬ್ರಹ್ಮನು ಅವನ ಮೇಲೆ ಕರುಣೆಯ ದೃಷ್ಟಿ ಬೀರಿ ನೃಪಮೌಳಿಯಿದ್ದ ಪುಣ್ಯಾಶ್ರಮಕ್ಕೆ ದೇವೇಂದ್ರಾದಿಗಳೊಡನೆ ಬಂದ; "ನೃಪಮಕುಟಮಾಣಿಕ್ಯನೇ, ಇಕ್ಷ್ವಾಕುವಂಶಜನೇ, ನಿನ್ನ ತಪಸ್ಸಿನಿಂದ ಸುಪ್ರೀತನಾಗಿ ಬಂದಿದ್ದೇನೆ, ನಿನ್ನ ಘೋರ ತಪಸ್ಸನ್ನು ನಿಲ್ಲಿಸು, ನಿನ್ನ ಮನಸ್ಸಿನ ಅಭೀಷ್ಟವನ್ನು ನೆರವೇರಿಸುತ್ತೇನೆ" ಎಂದು ಆಶ್ವಾಸನೆಯಿತ್ತ. ಆಗ ಭಗೀರಥನು, "ದೇವನೇ, ನನ್ನ ಮೇಲೆ ನಿನಗೆ ಕರುಣೆಯಿದ್ದರೆ ದೇವನದಿಯನ್ನು ಕಳಿಸಿಕೊಡು, ನನ್ನ ಪ್ರಪಿತಾಮಹರ ಆತ್ಮಗಳು ಸದ್ಗತಿಯನ್ನು ಪಡೆದು ಹದುಳದಿಂದಿರಲಿ, ಈ ನನ್ನ ಮನದಿಚ್ಛೆಯನ್ನು ಪಾಲಿಸು" ಎಂದು ಭಕ್ತಿಭರಿತನಾಗಿ ಬೇಡಿಕೊಂಡ. "ಅಯ್ಯಾ ಭಗೀರಥನೇ, ನೀನು ಸಾಧ್ಯವಲ್ಲದ ವರವನ್ನು ಅಪೇಕ್ಷಿಸುತ್ತಿದ್ದೀಯೆ, ಆದರೂ ನಿನ್ನ ಮನಸ್ಸಿನ ಅಪೇಕ್ಷೆಯು ನೆರವೇರುತ್ತದೆ. ಅದು ಸಾಂಗವಾಗಲು ನಿನಗೆ ಒಂದು ಉಪಾಯವನ್ನು ಸೂಚಿಸುತ್ತೇನೆ: ದೇವಗಂಗೆ ಇಳಿದು ಬರುವ ರಭಸವನ್ನು ಈ ಭೂಮಿ ತಾಳಲಾರದು, ಅದರಿಂದಾಗಿ ನೀನು ಹರನನ್ನು ಪ್ರಾರ್ಥಿಸಿ ಅವನನ್ನು ಒಪ್ಪಿಸು, ನಿನ್ನ ಮನೋಕಾಮನೆಯು ನೆರವೇರುತ್ತದೆ" ಎಂದು ಭರವಸೆಯಿತ್ತು ಚತುರ್ಮುಖ ಬ್ರಹ್ಮನು ಸುರಸಮಿತಿಯೊಡನೆ ಹೊರಟು ಹೋದ.

ಅವರೆಲ್ಲ ಹೋದ ಬಳಿಕ ಭಗೀರಥನು ಒಂಟಿಕಾಲ ಹೆಬ್ಬೆರಳಿನ ಮೇಲೆ ನಿಂತು

ಗಾಳಿಯನ್ನೇ ಸೇವಿಸುತ್ತ ನಿರಾಹಾರನಾಗಿ ಊರ್ಧ್ವಬಾಹುವಾಗಿ ಕೈಗಳನ್ನು ಜೋಡಿಸಿ ಒಂದು ವರ್ಷ ಕಾಲ ಮಹಾತಪಸ್ಸನ್ನೆಸಗಿದ. ಆಗ ಪಶುಪತಿಯಾದ ಉಮಾಪತಿಯು ಪ್ರತ್ಯಕ್ಷನಾಗಿ ನೃಪವರ್ಯನ ಮುಂದೆ ನಿಂತು, "ಮಗನೆ, ನೀನು ಬಯಸಿದ ಹಾಗೇ ಆಗಲಿ; ದೇವಲೋಕದಿಂದ ಇಳಿದು ಬರುವ ಗಂಗೆಯನ್ನು ನಾನು ನನ್ನ ಕೇಶಪಾಶದಿಂದ ತಡೆಯುತ್ತೇನೆ" ಎಂದು ಕರುಣಿಸಿದ. ಆ ಮಾತುಗಳನ್ನು ಕೇಳಿ ಭಗೀರಥನ ಹರ್ಷ ಮೇರೆ ಮೀರಿತು. ಅಷ್ಟರಲ್ಲಿಯೇ ಹಿಮವದ್ಗಿರಿಯ ಹಿರಿ ಮಗಳು ಗಂಗೆಯು ಘನಘೋಷದಿಂದ ಭೋರ್ಗರೆಯುತ್ತ, ಕಾಮಾರಿಯೊಡನೆಯೇ ನಾನು ಪಾತಾಳಕ್ಕೆ ಇಳಿದುಬಿಡುತ್ತೇನೆ ಎಂದು ಆಲೋಚಿಸುತ್ತ ಧುಮ್ಮಿಕ್ಕಲು, ಅವಳ ದುರಾಲೋಚನೆಯಿಂದ ಕ್ರುದ್ಧನಾದ ಪರಶಿವನು ಒಂದು ಹನಿಯೂ ನೆಲಕ್ಕೆ ಬೀಳದಂತೆ ತನ್ನ ಜಟಾಜೂಟದಲ್ಲಿ ಅವಳನ್ನು ತಡೆಗಟ್ಟಿದ. ಹೀಗೆ ಹಿಮವತ್ಪರ್ವತದ ಗುಹೆಯಂತಿದ್ದ ಹರನ ಜಟಾಜೂಟದಲ್ಲಿಯೇ ಪಾವನಚರಿತ್ರೆಯಾದ ಗಂಗಾದೇವಿಯು ಅನೇಕ ವರ್ಷಗಳ ಕಾಲ ಸುತ್ತಾಡುತ್ತಿದ್ದಳು, ಭೂಮಿಗೆ ಇಳಿಯಲು ಅವಳಿಗೆ ಸಾಧ್ಯವಾಗಲೇ ಇಲ್ಲ. ಇದನ್ನು ಕಂಡ ಭಗೀರಥ ನೃಪಾಲನು ಬೆಟ್ಟುವಿಲ್ಲನಾದ ಹಾಗೂ ಭಜಕರ ಪಾಪಹರನಾದ ಪರಶಿವನನ್ನು ಕುರಿತು ಮತ್ತೆಯೂ ತಪಸ್ಸು ಮಾಡಿದ. ಏಕಾಗ್ರಚಿತ್ತದಿಂದ ಮಾಡಿದ ಅವನ ತಪಸ್ಸನ್ನು ಕಂಡ ಹರನು ಸುಪ್ರೀತನಾಗಿ ತನ್ನ ಜಡೆಯ ಮಧ್ಯಭಾಗದಿಂದ ಬಿಡಲು ಗಂಗಾದೇವಿಯು ಏಳು ರೂಪಗಳನ್ನು ಧರಿಸಿ ಮೇದಿನಿಯಲ್ಲಿ ಹರಿಯತೊಡಗಿದ ಪರಿಯನ್ನು ಏನೆಂದು ವರ್ಣಿಸುವುದು! ಹ್ಲಾದಿನಿ ಪಾವನಿ ಮತ್ತು ನಳಿನಿ ಎಂಬ ಹೆಸರುಗಳಿಂದ ಮೂರು ಧಾರೆಗಳು ಮೂಡು ದಿಕ್ಕಿನಲ್ಲಿ ಹರಿಯತೊಡಗಿದವು; ಚಕ್ಷು ಸೀತಾಸಿಂಧು ಮತ್ತು ಹ್ರಾದಿನಿ ಎಂಬ ಮೂರು ಧಾರೆಗಳು ಪಡುದಿಕ್ಕಿನಲ್ಲಿ ಹರಿಯತೊಡಗಿದವು. ಉಳಿದ ಒಂದು ಧಾರೆಯು ಭಗೀರಥನ ಹಿಂದೆಯೇ ಬರುತ್ತಿತ್ತು; ಮುಂದೆ ಮುಂದೆ ದಿವ್ಯರಥದಲ್ಲಿ ಸಾಗುವ ಭಗೀರಥ, ಅವನ ಹಿಂದೆಯೇ ಗಂಗೆಯ ಈ ಧಾರೆ ಅನುಸರಿಸಿ ಬಂದ ಕೌತುಕವನ್ನು ಏನು ಹೇಳಲಿ! ನಾನಾ ಬಗೆಯ ಮೊಸಳೆ ಮೀನು ಆಮೆ ಮೀನುಗಳಿಂದ ಕೂಡಿ ಚಿಟಿ ಚಿಟಿ ಚಿಟಿಲ್ ಚಿಟಿಲ್ ಕಣಿ ಕಣಿಲ್ ಖಟಿಲ್ ಎನ್ನುತ್ತ ಸುಂದರವಾದ ಬೆಟ್ಟ ಕಾಡುಗಳನ್ನು ಸೀಳಿಕೊಂಡು ಆ ಧಾರೆಯು ಹರಿದು ಬಂತು.

ಗಗನದಿಂದ ಹರನ ಮಕುಟಗಹನಕ್ಕಿಳಿದು, ಅಲ್ಲಿಂದ ಶಿವನ ಗಂಟುಕಟ್ಟಿದ ಜಡೆಯನ್ನು ಬಿಟ್ಟು ಸ್ರೋತವು ಸರಿದು ಒಗುಮಿಗೆಯಿಂದ ಇಳಿದು ಧರಣಿಯನ್ನೆಲ್ಲ ವ್ಯಾಪಿಸಿ ಶೈವಲಿನಿಯು ಹರಿದು ಬರುತ್ತಿರಲು ಸುರರೂ ಮುನಿಗಳೂ ಸಗರವಂಶಜನಾದ ಭಗೀರಥನ ಮಹಿಮೆಯನ್ನು ಪ್ರೀತಿಯಿಂದ ಹೊಗಳುತ್ತ ಭೂಮಿಯಲ್ಲಿ ಪಾವನವಾದ ಗಂಗಾ ಮಹಾನದಿಯ ಸಮೀಪಕ್ಕೆ ಗುಂಪುಗುಂಪಾಗಿ ಬಂದರು. ಅದರಲ್ಲಿಯೇ ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಬಹು ಸುಮ್ಮಾನದಿಂದ ಪಿತೃದೇವತೆಗಳನ್ನು ತುಷ್ಟಿಗೊಳಿಸಿ ಆನಂದದಿಂದ ಕೃತಕೃತ್ಯರಾಗಿ ದೇವನದಿಯ ಮಹಿಮೆಯನ್ನು ಮನದುಂಬಿ ಹೊಗಳಿದರು. 'ಜ್ಞಾನನಿಧಿಯೇ ತಾಪಹಾರಿಯೇ ಜಯಜಯ' ಎಂದು ಸಿದ್ಧರು ಭಜಿಸುತ್ತಿರಲು ತಟನಿಯು ಭಗೀರಥನ ರಥದೊಡನೆ ಲೋಕವನ್ನೆಲ್ಲ ಸಂತಸಗೊಳಿಸುತ್ತ ಹರಿದು

ಬಂದಳು. ತೇರಿನ ಮೇಲೆ ಕುಳಿತು ಭೂಭುಜಲಲಾಮನು ಬರುತ್ತಿರಲು, ಅವನ ಹಿಂದೆ ಚಾರುತರಳಾದ ಗಂಗೆಯು ಭರದಿಂದ ಹರಿದು ಬರುತ್ತಿದ್ದಳು; ಸುರನಿಕರವೆಲ್ಲ ನೃತ್ಯವಾದ್ಯಘೋಷಗಳಿಂದ ಕೂಡಿ ಸಂಭ್ರಮದಿಂದ ಅವಳನ್ನು ಹಿಂಬಾಲಿಸಿತು. ತನ್ನ ಆಶ್ರಮದ ಪತ್ತಿನಲ್ಲಿಯೇ ಘೋರಶಬ್ದದಿಂದಲೂ ರಭಸದಿಂದಲೂ ಹರಿದು ಬರುತ್ತಿದ್ದ ಸುರನದಿಯನ್ನು ಜಹ್ನುಮುನಿಯು ಕಡುಕೋಪದಿಂದ ಬಡಬಾಗ್ನಿಯಂತೆ ಹೀರಿಬಿಟ್ಟನು; ಈ ಅದ್ಭುತವನ್ನು ಕಂಡು ದಿವಿಜತತಿಯು ತಳ್ಳಂಕದಿಂದ ನಡಗಿಬಿಟ್ಟಿತು. ತಪೋಧನನ ಮಹಿಮೆಯನ್ನು ಕಣ್ಣಾರೆ ಕಂಡ ಭಗೀರಥನು ತಕ್ಷಣವೇ ತನ್ನ ವಿನೀತಭಾವದ ಪ್ರಾರ್ಥನೆಯಿಂದ ಸಮಾಧಾನಪಡಿಸಿ ಸಂತುಷ್ಟಿಗೊಳಿಸಲು, ಜಹ್ನುವು ಗಂಗೆಯನ್ನು ತನ್ನ ಕಿವಿಯ ಮೂಲಕ ಹೊರಬಿಟ್ಟ; ಸುರರೆಲ್ಲರೂ ಮುನಿಯನ್ನು ಭಕ್ತಿಯಿಂದ ಸ್ತುತಿಸಿದರು, ಗಂಗೆಗೆ ಜಹ್ನುಸಂಭವೆ ಎಂದು ಹೆಸರನ್ನಿತ್ತರು. ಆನಂತರ ಜಾಹ್ನವಿಯು ನೃಪತಿಸಮೇತ ರಭಸದಿಂದ ಸಂತೋಷವಾಗಿ ಹರಿಯುತ್ತ ಸಾಗರವನ್ನು ಸೇರಿದಳು.

ಇಕ್ಷ್ವಾಕುಭೂಭುಜನು ಅಲ್ಲಿಯೇ ರಸಾತಳಕ್ಕಿಳಿದು ಮುಂದೆ ರಾಶಿಯಾಗಿ ಬಿದ್ದಿದ್ದ ಭಸ್ಮವನ್ನು ಕಂಡು ಖೇದಗೊಂಡ; ಅವನನ್ನು ಹಿಂಬಾಲಿಸುತ್ತಿದ್ದ ದೇವಗಂಗೆಯು ಅಷ್ಟರಲ್ಲಿ ಬಂದು ಹರಡಿಕೊಂಡಿದ್ದ ಬೂದಿಯ ಒಟ್ಟಿಲುಗಳನ್ನು ಬೇಗಬೇಗನೆ ತನ್ನಲ್ಲಿ ಅಡಗಿಸಿಕೊಂಡಳು; ಭಗೀರಥನ ಪಿತೃಗಳ ಪಾತಕಗಳೆಲ್ಲ ನಾಶವಾಗಿ ಅವರೆಲ್ಲರೂ ದಿವ್ಯರಥವನ್ನೇರಿ ಅತುಲಪ್ರಭಾಮಯರಾಗಿ ಸುರಲೋಕವನ್ನು ಸೇರಿದರು. ಆ ಹೊತ್ತಿಗೆ ಸುರನಿಕರರೊಡಗೂಡಿ ಬ್ರಹ್ಮದೇವನು ಭಗೀರಥನಿದ್ದ ಎಡೆಗೆ ಬಂದು – ಜಾಹ್ನವಿಯಿಂದ ಪೂತರಾಗಿದ್ದ ಸಗರಪುತ್ರರು ಕಾಂತಿಯಿಂದ ರಥಗಳನ್ನೇರಿರಲು – ಅವರನ್ನು ನೋಡಿ ಎಳೆನಗುವನ್ನು ಮಿನುಗಿಸುತ್ತ ಭಗೀರಥನನ್ನು ಕುರಿತು, "ಭಗೀರಥನೇ, ಎಂತಹ ಮಾನ್ಯನಪ್ಪಾ ನೀನು! ಧನ್ಯನಾದೆ, ರಾಜರ್ಷಿಯೆನಿಸಿದೆ; ಸತ್ಯನಿಧಿಯೇ, ಹದಿನಾಲ್ಕು ಜಗತ್ತಿನಲ್ಲಿ ಧೈರ್ಯ ಸತ್ಕೀರ್ತಿಗಳಲ್ಲಿ ನಿನಗೆಣೆಯಾದವರು ಯಾರಿದ್ದಾರೆ? ಪರಮಪಾವನೆಯಾದ ಗಂಗೆಯು ಹರನ ಜಡೆಯಿಂದ ಭೂಮಿಗಿಳಿದು ನಿನ್ನ ವಂಶಜರು ಬೂದಿಯಾಗಿ ಬಿದ್ದಿದ್ದ ನೆಲದಲ್ಲಿ ಹರಿದ ಮಾತ್ರದಿಂದಲೇ ಅವರು ದಿವ್ಯಸೌಂದರ್ಯವನ್ನು ಪಡೆದು ಪೀತಾಂಬರವನ್ನುಟ್ಟು ಲಕ್ಷ್ಮೀವರನ ಸಗ್ಗವನ್ನು ಸೇರಿಕೊಂಡರು. ದೇವಗಂಗೆಯು ಭೂಮಿಯಲ್ಲಿ ಹರಿಯುತ್ತಿರುವವರೆಗೂ ಅವರು ಸಕಲವೈಭವದಿಂದ ಇರುತ್ತಾರೆ. ಪಾಪಹರಳಾದ ಸ್ರವಂತಿಯನ್ನು ತರುವ ಪ್ರಯತ್ನಪಡುತ್ತಿದ್ದು ಸಗರನು ತೀರಿಹೋಗಲು, ಅವನ ಮಗನೂ ತಪವನ್ನೆಸಗಿ ತೀರಿಕೊಳ್ಳಲು, ಅವನ ಮಗನಾದ ನೀನು ಛಲದಿಂದ ಬಿಡದೆ ಗಗನಧುನಿಯನ್ನು ಭೂಮಿಗೆ ತಂದು ಸಗರಕುಮಾರನನ್ನು ಪೊರೆದು ಲೋಕದಲ್ಲಿ ಸತ್ಕೀರ್ತಿಯನ್ನು ಪಡೆದೆ. ಸೂರ್ಯವಂಶೋದ್ಭವನೆ, ತಪಸ್ಸು ಮಾಡುವುದರಲ್ಲಿ ಹದಿನಾಲ್ಕು ಲೋಕಗಳಲ್ಲಿಯೂ ನಿನಗೆ ಸಮನಾದವರಿಲ್ಲ. ನೀನು ಹುಟ್ಟಿ ಮೂರು ಲೋಕಗಳನ್ನೂ ರಕ್ಷಿಸಿದ್ದೀಯೆ, ನಿನ್ನ ಜನ್ಮವು ಸಾರ್ಥಕವಾಯಿತು. ಬಹುಬೇಗ ನೀನು ಭೂಮಿಗೆ ತಂದ ಆಕಾಶಧುನಿಯು ನಿನ್ನ ಹೆಸರನ್ನು ಹೊತ್ತು ಬೆಳಗಲಿ. ನಿನ್ನ ಪ್ರಪಿತಾಮಹರಿಗೆ ಸದ್ಗತಿಯೊದಗಿತು, ನೀನು ಕೀರ್ತಿವಂತನಾದೆ. ನೀನಿನ್ನು ಮಜ್ಜನಗೈದು ಪಿತೃತರ್ಪಣವನ್ನಿತ್ತು

ಹೋಗಬಹುದು" ಎಂದು ಬ್ರಹ್ಮನು ಮನದುಂಬಿ ಹೊಗಳಿ ನಿರ್ಗಮಿಸಿದ. ಅದರಂತೆ ಭಗೀರಥನು ಗಂಗೆಯಲ್ಲಿ ಮಿಂದು ಪಿತೃಸಂತತಿಗೆ ಮೋದವನ್ನಿತ್ತು ಸತ್ಕ್ರಿಯೆಗಳನ್ನು ಮಾಡಿ ತನ್ನ ನಗರಕ್ಕೆ ವಾಪಸಾದ. "ರಾಮಚಂದ್ರನೇ, ಅಲ್ಲಿನ ಜನರೆಲ್ಲರೂ ಅವನನ್ನು ಕಂಡು ನಮಿಸಿ ಸಂತಸದಿಂದ ನಾನಾ ಬಗೆಯ ಕಾಣಿಕೆಗಳನ್ನಿತ್ತು ಹೋದರು. ಮುಂದೆ ಭಗೀರಥನು ಧರ್ಮದಿಂದ ರಾಜ್ಯಭಾರ ಮಾಡಲು, ಸುರನದಿಯು ಕಾಲಕ್ರಮದಲ್ಲಿ ಭಾಗೀರಥಿ ಎಂಬ ಹೆಸರಿನಿಂದ ಸೊಗಯಿಸಲು ತೊಡಗಿತು. ಭಾಗೀರಥಿಯ ಚರಿತ್ರೆಯನ್ನು ಭಕ್ತಿಯಿಂದ ಬರೆದು ಓದಿ ಕೇಳಿದವರಿಗೆ ಶ್ರೀರಾಮಪುರದರಸನಾದ ಕೈವಲ್ಯಪತಿಯು ಭೋಗ ಭಾಗ್ಯ ಆಯುಷ್ಯ ಮುಂತಾದವುಗಳನ್ನು ವೃದ್ಧಿಸಿ ಸಂತಾನವನ್ನು ಕರುಣಿಸಿ ರಕ್ಷಿಸುತ್ತಾನೆ" ಎಂದು ವಿಶ್ವಾಮಿತ್ರಮುನಿಯು ಕತೆಯನ್ನು ಮುಗಿಸಿದ.

೧೫. ಅಹಲ್ಯಾಶಾಪ ವೃತ್ತಾಂತ

ಶಿವೆಯೇ ಕೇಳು, ಕೌಶಿಕಮುನೀಂದ್ರನು ಹೇಳಿದ ದಿವ್ಯವಾದ ಕತೆಯನ್ನು ಕೇಳಿದ ರಾಮನು ಸಂತೋಷಲವಲವಿಕೆಗಳಿಂದ ಕೂಡಿ ಮುನಿಯೊಡನೆ, "ರಾತ್ರಿ ತಾವು ಹೇಳಿದ ಕತೆಯನ್ನು ಕೇಳಿ ನನಗೆ ಶ್ರೇಯಸ್ಸುಂಟಾಯಿತು. ಈಗಾಗಲೇ ಸೂರ್ಯೋದಯವಾಗಿದೆ. ಬೇಗ ಬೇಗ ಆಹ್ನಿಕವನ್ನು ಮಾಡಿ ನಾವು ಮುಂದೆ ಸಾಗಬೇಕಲ್ಲವೇ?" ಎಂದು ಕೇಳಿದ. ಅದರಂತೆಯೇ ವಿಶ್ವಾಮಿತ್ರನು ಸಂಯಮಿಜನರು ಹಾಗೂ ಬಾಲಕರೊಡನೆ ಜಾಹ್ನವಿಯನ್ನು ದಾಟಿ ಕುಳಿತಿರುವಾಗ ರಘೂದ್ವಹನು ಮುನಿತಿಲಕನನ್ನು ಕುರಿತು, "ಪ್ರಕಾಶಮಾನವಾದ ಸೂರ್ಯ ಚಂದ್ರ ಬೀದಿಗಳಿಂದಲೂ ಅಪರಿಮಿತ ವೈಭವದಿಂದಲೂ ಕೂಡಿ ಬೆಳಗುತ್ತಿರುವ ಈ ನಗರವು ಯಾರ ಆಡಳಿತಕ್ಕೆ ಸೇರಿದುದು?" ಎಂದು ಕುತೂಹಲದಿಂದ ಪ್ರಶ್ನಿಸಿದ. ಆಗ ಆ ಕತೆಯನ್ನು ಮುನಿಯು ಒರೆಯಲುಪಕ್ರಮಿಸಿದ.

ಕೃತಯುಗದಲ್ಲಿ ಸುರರೂ ಅಸುರರೂ ವಿನೋದದಿಂದ ಬಾಳುತ್ತಿದ್ದರು. ತಮ್ಮ ಕುಲಕ್ಕೆ ರೋಗ ಸಾವುಗಳು ಉಂಟಾಗದ ಉಪಾಯವನ್ನು ಕುರಿತು ಸುಮನಸರು ಆಲೋಚಿಸುತ್ತಿರುವಾಗ ಅವರಿಗೆ ಒಂದು ದಾರಿ ಹೊಳೆಯಿತು; ಅದೆಂದರೆ ಕ್ಷೀರಸಮುದ್ರವನ್ನು ಕಡೆದು ದಿವ್ಯರಸವನ್ನು ಪಡೆಯಬೇಕೆಂಬ ಮಹದಾಸೆ. ಈ ಮಹತ್ಕಾರ್ಯದಲ್ಲಿ ಅವರೊಡನೆ ರಕ್ಕಸರೂ ಕೈಜೋಡಿಸಿದರು. ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿಕೊಂಡು ವಾಸುಕಿಯನ್ನು ಹಗ್ಗದಂತೆ ಬಿಗಿದು ಸುರಾಸುರರು ಕ್ಷೀರಸಾಗರವನ್ನು ಒಂದು ಸಾವಿರ ವರುಷ ಕಡೆದಾಗ ಧನ್ವಂತ್ರಿಯು ಹುಟ್ಟಿದ, ಆನಂತರ ಪೂರ್ಣಚಂದ್ರೋಪಮ ಸುಂದರಿಯರಾದ ಅರುವತ್ತು ಸಾವಿರ ಕೋಟಿ ಅಪ್ಸರೆಯರು ಸಂಭವಿಸಿದರು, ಅವರೊಡನೆಯೇ ಅಸಂಖ್ಯಾತ ಚೇಟಿಯರೂ ಹುಟ್ಟಿದರು. ಒಯ್ಯಾರದಿಂದ ಬಂದ ಅಪ್ಸರಾಂಗನೆಯರನ್ನು ಸುರಾಸುರರು ಒಪ್ಪಿಕೊಳ್ಳದೆ ನೋಡುತ್ತಿರಬೇಕಾದರೆ, ವರುಣನ ಮಗಳು ವಾರುಣಿಯು ತನ್ನ ಪತಿಗಾಗಿ ಹುಡುಕುತ್ತ ಬಂದಾಗಲೂ ದೈತ್ಯರು ಅವಳನ್ನು ಒಪ್ಪಿಕೊಳ್ಳಲಿಲ್ಲ; ಆದರೆ ಅದಿತಿಯ ಮಕ್ಕಳಾದ ದೇವತೆಗಳು ಸುರಾಧಿದೇವತೆಯಾದ ವಾರುಣಿಯನ್ನು ಪರಿಗ್ರಹಿಸಿ ಸುರರು

ಎನ್ನಿಸಿಕೊಂಡರು. ಸುರಾದೇವಿಯಾದ ವಾರುಣಿಯನ್ನು ಒಪ್ಪಿಕೊಳ್ಳದಿದ್ದುದರಿಂದ ದಿತಿಯ ಮಕ್ಕಳು ಅಸುರರಾದರು. ಅನಂತರ ಉಚ್ಚೈಶ್ರವಸ್ಸು, ಕೌಸ್ತುಭ ಎಂಬ ಮಣಿರತ್ನ, ಅನಂತರ ಅಮೃತವೂ ಹುಟ್ಟಿತು. ಇದರಿಂದಾದಿ ಸುರಾಸುರರಲ್ಲಿ ಯುದ್ಧ ಆರಂಭವಾಯಿತು, ಅದರಲ್ಲಿ ಅಸುರರು ದೇವತೆಗಳಿಂದ ಅದ್ಭುತ ರೀತಿಯಲ್ಲಿ ಮಡಿದರು. ಜಲಜಾಕ್ಷನಾದ ಹರಿಯು ಮೋಹಿನಿಯ ವೇಷದಿಂದ ಶೋಭಿಸುತ್ತ ಬಂದು ಸುಧೆಯನ್ನು ಒಯ್ಯಲು ರಕ್ಕಸರು ಅವಳ ಬೆನ್ನಟ್ಟಿದರು, ಆಗ ಮೋಹಿನೀ ವೇಷದ ಹರಿಯು ಒಬ್ಬನೂ ಇಲ್ಲದಂತೆ ಅಸುರರನ್ನು ಕೊಂದ.

ಮಕ್ಕಳು ಅಳಿದ ಪರಿಯನ್ನು ನೋಡಿ ದಿತಿಯು ಕೋಪದಿಂದ ಇಳೆಯೆಲ್ಲ ಕೆಸರಾಗುವಂತೆ ಕಣ್ಣೀರು ಸುರಿಸುತ್ತ ತನ್ನ ಪತಿಯಾದ ಕಶ್ಯಪನ ಬಳಿ ಬಂದು ದೇವೇಂದ್ರನಿಂದಾದ ಕೆಟ್ಟ ಕೆಲಸವನ್ನು ಬಣ್ಣಿಸಿದಳು. ಕೊನೆಗೆ ತನ್ನ ವಂಶವರ್ಧನೆಗಾಗಿ ಇಂದ್ರನನ್ನು ಕೊಲ್ಲಬಲ್ಲ ಒಬ್ಬ ಮಗನನ್ನು ಕರುಣಿಸು ಎಂದು ಕೇಳಲು ಯತಿಯು ಅವಳಿಗೆ ವ್ರತಬದ್ಧಳಾಗಿರಲು ಸೂಚಿಸಿ ಅದರಿಂದಾಗಿ ಒಬ್ಬ ಮಗನಾಗುವನೆಂದು ವರವನ್ನಿತ್ತನು. ಆ ತಪೋಧನನು ಹೇಳಿದ ರೀತಿಯಲ್ಲಿಯೇ ನೆಲದ ಮೇಲೆ ಹರವಿದ ಹುಲ್ಲುಹಾಸಿನ ಮೇಲೆ ದಿತಿಯು ಶುಚಿರ್ಭೂತಳಾಗಿ ಕುಳಿತು ಧ್ಯಾನಿಸುತ್ತಿರಲು, ದೇವೇಂದ್ರನು ಅವಳ ಮನದಿಚ್ಛೆಯನ್ನು ಅರಿತು ಅಗ್ನಿಕಾರ್ಯಕ್ಕೆ ಬೇಕಾದ ಕುಶ ಕಾಷ್ಠ ಫಲ ಮೂಲಗಳನ್ನು ತಂದು ತನ್ನ ಮೇಲೆ ಅವಳಿಗೆ ಕರುಣೆಯುಂಟಾಗುವ ರೀತಿಯಲ್ಲಿ ಅರೆಕ್ಷಣವೂ ಬಿಡದಂತೆ ಭಕ್ತಿಯಿಂದ ಶುಶ್ರೂಷೆ ಮಾಡುತ್ತ ಹೊಂಚು ಹಾಕುತ್ತ ಕಾಯುತ್ತಿದ್ದ. ಇದರಿಂದ ಸಂತುಷ್ಟಳಾದ ದಿತಿಯು ಮೈಗಣ್ಣನಿಗೆ, "ಮರೀಚಪುತ್ರ ಕಶ್ಯಪನು ಸಾವಿರ ವರ್ಷಗಳ ಕಾಲ ಶುಚಿರ್ಭೂತಳಾಗಿ ತಪಸ್ಸನ್ನು ಮಾಡಿದರೆ ಮೂಲೋಕವಂದಿತನಾದ ಮಗನೊಬ್ಬನು ಹುಟ್ಟುವ ವರವನ್ನಿತ್ತಿದ್ದಾನೆ. ಆ ಕಾರಣದಿಂದಲೇ ನಾನು ಈ ತಪವನ್ನು ಮಾಡುತ್ತಿದ್ದೇನೆ. ಈಗಾಗಲೇ ಒಂಬೈನೂರ ತೊಂಬತ್ತು ವರ್ಷಗಳು ತಪಸ್ಸಿನಲ್ಲಿ ಪೂರೈಸಿರುವೆ, ಉಳಿದಿರುವುದು ಹತ್ತು ವರ್ಷಗಳು ಮಾತ್ರ. ಅನಂತರ ನಿನಗೆ ತಮ್ಮನೊಬ್ಬನು ಹುಟ್ಟುತ್ತಾನೆ. ನಿನ್ನ ವಿನಾಶಕ್ಕಾಗಿಯೇ ನಾನು ಈ ಕ್ರೂರತಪವನ್ನು ಮಾಡುತ್ತಿದ್ದೇನೆ, ಆದರೆ ಇದರಿಂದ ನಿನಗೆ ಒಳಿತೇ ಆಗುತ್ತದೆ" ಎಂದು ಹೇಳಿದಳು.

ಹೀಗೇ ಇರಲು ಒಂದು ಮಧ್ಯಾಹ್ನ ದಿತಿಯು ದರ್ಭೆಯ ಹಾಸಿನ ಮೇಲೆ ಮಲಗಿ ಪಾದಗಳನ್ನು ತಲೆಯ ಜಾಗದ (ದಿಂಬಿನ) ಮೇಲಿರಿಸಿ ನಿದ್ರಿಸತೊಡಗಿದಳು. ಇದನ್ನು ಇಂದ್ರನು ನೋಡಿ ತನ್ನ ವಜ್ರಾಯುಧದಿಂದ ಅವಳ ಗರ್ಭವನ್ನು ಹೊಕ್ಕು ಏಳು ತುಂಡುಗಳಾಗಿ ಕತ್ತರಿಸಿಬಿಟ್ಟ. ಆ ತುಂಡುಗಳು ಅಳತೊಡಗಿದವು, ಇದರಿಂದ ದಿತಿಯು ಎಚ್ಚರಗೊಂಡಳು. ಇಂದ್ರನ ಬಗೆಯನ್ನು ಅರಿತ ಅವಳು 'ಕೊಲ್ಲಬೇಡ' ಎಂದು ಗೋಗರೆದಳು. ಆಗ ಅವನು ಅವಳ ಗರ್ಭದಿಂದ ಹೊರಬಂದು ತಾಯಿಯ ಪಾದಗಳಿಗೆರಗಿ ಹೀಗೆಂದ: "ದಿಂಬಿನ ಮೇಲೆ ಕಾಲುಗಳನ್ನಿಟ್ಟುಕೊಂಡು ನಿದ್ರಿಸುತ್ತಿದ್ದುದರಿಂದ ನಿನ್ನ ತಪಸ್ಸು ಅಶುಚಿಗೊಂಡಿತು, ಅದನ್ನು ಕಂಡ ನಾನು ನಿನ್ನ ಗರ್ಭವನ್ನು ಹೊಕ್ಕು ತುಂಡುಮಾಡಿದೆ, ಈ ನನ್ನ ತಪ್ಪನ್ನು ಕ್ಷಮಿಸು" ಎಂದು ಬೇಡಿಕೊಂಡ. "ಇದು ನನ್ನಿಂದಲೇ ಆದ ಅಪರಾಧ,

ಇದಕ್ಕೆ ನೀನೇಕೆ ಚಿಂತಿಸುವೆ. ನನ್ನ ಮಾತೊಂದನ್ನು ನಡೆಸಿಕೊಡುವೆಯಾ?" ಎಂದು ದಿತಿಯು ಕೇಳಲು ಇಂದ್ರನು ಅದಕ್ಕೆ ಸಮ್ಮತಿಯಿತ್ತ. "ಮಗನೇ ಕೇಳು, ದೇವತೆಗಳಂತೆಯೇ ಇವರಲ್ಲಿ ಒಬ್ಬನು ಬ್ರಹ್ಮಲೋಕದಲ್ಲಿಯೂ, ಮತ್ತೊಬ್ಬನು ಇಂದ್ರಲೋಕದಲ್ಲಿಯೂ, ಮೂರನೆಯವನು ಆಗಸದಲ್ಲಿಯೂ ಸಂಚರಿಸಲಿ, ಉಳಿದ ನಾಲ್ವರು ಮಕ್ಕಳು ನಿನಗೆ ಅಧೀನರಾಗಿ ನಾಲ್ಕು ದಿಕ್ಕುಗಳಲ್ಲಿಯೂ ಅನುಗಾಲವೂ ಸಂಚರಿಸಲಿ. ಈ ಪರಿಯಾಗಿ ಇವರು ಏಳು ಮಂದಿಯೂ ಮರುತ್ತುಗಳೆಂಬ ಹೆಸರನ್ನು ಪಡೆದು ದೇವತೆಗಳಿಗೆ ಸಮಾನರೆನಿಸಲಿ" ಎಂದು ಕೇಳಿಕೊಳ್ಳಲು, ತಾಯಿಯ ಅಡಿದಾವರೆಗೆ ತನ್ನ ಹಣೆಯನ್ನಿಟ್ಟು, "ತಾಯಿ, ನಿನ್ನ ಮನಸ್ಸಿನಲ್ಲಿ ಏನಿದೆಯೋ ಹಾಗೆಯೇ ಆಗಲಿ" ಎಂದು ಹೇಳಲು ದಿತಿಯು ಹರ್ಷವನ್ನು ತಾಳಿದಳು.

"ಶ್ರೀರಾಮಚಂದ್ರನೇ, ಈ ನೆಲದ ಕತೆಯನ್ನು ಇನ್ನೂ ಹೇಳಬೇಕಾದದ್ದಿದೆ. ಇಕ್ಷ್ವಾಕುರಾಜನ ಮಗ ಪಾವನಮೂರ್ತಿಯಾದ ವಿಶಾಲ ಎಂಬ ಹೆಸರಿನ ದೇವಪೂಜಿತನಿಂದ ನಿರ್ಮಿತವಾದ ಈ ನಗರಕ್ಕೆ ವಿಶಾಲಾ ಎಂಬ ಹೆಸರಾಗಿದೆ. ವಿಶಾಲರಾಜನ ಮಗ ಹೇಮಚಂದ್ರ, ಅವನ ಮಗ ಸುಚಂದ್ರ, ಅವನಿಗೆ ಮಗನಾಗಿ ಹುಟ್ಟಿದವನು ಧೂಮ್ರಾಶ್ವ, ಅವನ ತನಯ ಸೃಂಜಯ, ಆತನಿಂದಾದವನು ಸಹದೇವ, ಅವನ ಕುಮಾರ ಕುಶಾಶ್ವ, ಆ ರಾಜನ ಕುವರ ಸೋಮದತ್ತ, ಆ ಭೂಪತಿಯ ತನೂಜ ಕಾಕುತ್ಸ್ಥ, ಅವನ ಆತ್ಮಜನಾದ ಸುಮತಿಯೇ ಈಗ ಈ ಪಟ್ಟಣವನ್ನಾಳುತ್ತಿರುವವನು. ಅವನು ರಾಜರ್ಷಿ ಎಂಬ ಹೆಸರುಳ್ಳ ಮಹಾಧಾರ್ಮಿಕ, ಅಲ್ಲದೆ ಸೂರ್ಯಸಮನಾದ ಪರಾಕ್ರಮಿ. ಸೂರ್ಯೋದಯವಾದ ಬಳಿಕ ಮುನಿಜನರೊಡನೆ ಆ ಮಹಾನಗರಕ್ಕೆ ಹೋಗೋಣ" ಎಂದು ವಿಶ್ವಾಮಿತ್ರನು ಹೇಳಲು ರಾಮ ಸಂತೋಷದಿಂದ ಒಪ್ಪಿದ. ಆ ಮಹಾತ್ಮರೆಲ್ಲರೂ ಬರುತ್ತಿರಲು, ಇತ್ತ ಸುಮತಿ ಮಹಾರಾಜನು ಅವರ ಬರವನ್ನೇ ನಿರೀಕ್ಷಿಸುತ್ತಲಿದ್ದು ಅವರನ್ನೆಲ್ಲ ಭಕ್ತಿಯಿಂದ ಪೂಜಿಸಿ ತನ್ನರಮನೆಗೆ ಗೌರವದಿಂದ ಕರೆದೊಯ್ದ. ಅವನು ನೀಡಿದ ಸತ್ಕಾರವನ್ನು ಸ್ವೀಕರಿಸಿ ಕುಳಿತಿರುವಾಗ ಸುಮತಿ ಮಹಾರಾಜನು ವಿಶ್ವಾಮಿತ್ರನ ಪಕ್ಕದಲ್ಲಿ ಸೂರ್ಯಚಂದ್ರರಂತೆ ಶೋಭಿಸುತ್ತಿದ್ದ ಬಾಲಕರನ್ನು ಕಂಡು, ಹುಲಿ ಮತ್ತು ವೃಷಭಗಳಂತೆ ಶೌರ್ಯಗಿರಿಗಳಂತೆ ಸಮುದ್ರದ ಗಾಂಭೀರ್ಯವನ್ನು ತಳೆದು ಬಿಲ್ಲುಬಾಣಗಳನ್ನು ಧರಿಸಿರುವ ಅವರ ಬಗೆಗಿನ ವಿವರವನ್ನು ತಿಳಿಯಬಯಸಿದ.

ಅದಕ್ಕೆ ಉತ್ತರರೂಪವಾಗಿ ಕೌಶಿಕ ಮುನಿಪೋತ್ತಮನು ಈ ರೀತಿ ವಿವರಿಸಿದ: "ಕಮಲಾಸನನಾದ ಬ್ರಹ್ಮ ಮತ್ತಿತರ ಮುಖ್ಯ ದೇವತೆಗಳೆಲ್ಲರೂ ಭೂಭಾರವನ್ನು ಇಳಿಸಲೋಸುಗ ಮನುಷ್ಯರೂಪವನ್ನು ಧರಿಸಿ ಜನಿಸಬೇಕೆಂದು ಪ್ರಾರ್ಥಿಸಲು, ಶ್ರೀಹರಿಯು ಕಾರುಣ್ಯದಿಂದ ದಶರಥ ಮಹಾರಾಜನಿಗೆ ಕುಮಾರನಾಗಿ ರಾಮನು ಜನಿಸಿದ. ನಾನು ಸಿದ್ಧಾಶ್ರಮದಲ್ಲಿ ಕೈಗೊಂಡಿದ್ದ ಯಜ್ಞದ ರಕ್ಷಣೆಗಾಗಿ ಈ ಬಾಲಕರನ್ನು ನನ್ನೊಡನೆ ಕಳಿಸಬೇಕೆಂದು ರಾಜನಲ್ಲಿ ಬೇಡಿಕೊಂಡೆ. ಪರಮಾತ್ಮಸ್ವರೂಪನಾದ ರಾಮಚಂದ್ರನು ಕೃಪೆಯಿಂದ ನನ್ನೊಡನೆ ಬಂದು ತಾಟಕಿಸುಬಾಹುಗಳನ್ನು ಸಂಹರಿಸಿ ಯಾಗಪರಿಪಾಲನೆ ಮಾಡಿ ಮುನಿಜನಗಳನ್ನುದ್ಧರಿಸಿದ. ಆನಂತರ ಶಿವನ ಬಿಲ್ಲಿನ ವಿಚಾರವನ್ನು ಕೇಳಿ ಅದನ್ನು

ನೋಡಲೆಂದು ಈ ಮುನಿಗಳ ಜೊತೆಯಲ್ಲಿ ಬಂದಿದ್ದಾನೆ. ಇವನ ದಿವ್ಯಚರಿತೆಯನ್ನು ಪೂರ್ಣವಾಗಿ ಅರಿಯಲು ಈ ಹದಿನಾಲ್ಕು ಲೋಕಗಳಲ್ಲಿ ಯಾರು ತಾನೇ ಸಮರ್ಥರಿದ್ದಾರು! ಶ್ರೀರಾಮನ ಶುಭನಾಮವನ್ನು ಉಚ್ಚರಿಸಿದರೆ ಸಾಕು ಮಾತಿನಲ್ಲಿ ಹೇಳಬಾರದ ಮಹಾಪಾತಕಗಳೂ ನಾಶವಾಗುತ್ತವೆ, ಇದು ಸತ್ಯ" ಎಂದು ವಿಶ್ವಾಮಿತ್ರನು ನುಡಿದ. ಆಗ ಸುಮತಿಯು, ಕಡುಪಾತಕಕ್ಕೆ ಪ್ರಾಯಶ್ಚಿತ್ತವಲ್ಲದೆ ಬೇರೆ ಬಿಡುಗಡೆಯ ಮಾರ್ಗವಾವುದಿದೆ ಎಂದು ಮುನಿಯನ್ನು ಬೆಸಗೊಳ್ಳಲು ಆತನು, "ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ, ರಾಮಕಥೆಯನ್ನು ಕೇಳುವವನೇ ಧನ್ಯ, ನೀನು ಸದ್ಭಕ್ತಿಯಿಂದ ಅದನ್ನು ತಿಳಿಯಲು ಕೇಳಿರುವೆ. ಶ್ರುತಿಸಾರವನ್ನೆಲ್ಲ ಒಗ್ಗೂಡಿಸಿ ನಾನು ಹೇಳುತ್ತೇನೆ ಕೇಳು: ಹಿಂದೆ ಕಾಶಿಯಲ್ಲಿ ಭೂಸುರರೆಲ್ಲರೂ ಸೇರಿದ್ದರು, ಆಗ ಅವರೆಲ್ಲರೂ ಶಿವ ಇಂದ್ರ ಮತ್ತಿತರ ದೇವತೆಗಳೂ ಮೆಚ್ಚುವ ರಾಮನಾಮಸ್ಮರಣೆಯ ಮಹತ್ವವನ್ನು ಕುರಿತು ಆಲೋಚಿಸಿದರು. ಅದರ ಅತಿಗೋಪ್ಯದ ಸಾರವನ್ನು ವಿವರವಾಗಿ ನಿನಗೆ ಹೇಳುತ್ತೇನೆ. ಕರಣತ್ರಯಗಳ ಸೇರುವಿಕೆಯ ಕಷ್ಟ, ಗುರುತರವಾದ ಆಯಾಸ, ದೇಹದಂಡನೆ ನಿರಾಹಾರ ಮಂತ್ರೋಚ್ಚಾರ ಇವುಗಳಲ್ಲಿ ಲೋಪದೋಷಗಳು ಉಂಟಾದಾಗ ಮೋಕ್ಷಲಕ್ಷ್ಮಿಯು ತಾನಾಗಿ ಒಲಿಯುವ ಪ್ರಾಯಶ್ಚಿತ್ತದ ಉಪಾಯವೆಂದರೆ ಭಕ್ತಿಯಿಂದ ರಾಮನಾಮವನ್ನು ಭಜಿಸುವುದು" ಎಂದು ರಾಮನಾಮಸ್ಮರಣೆಯ ಮಹತ್ವವನ್ನು ತಿಳಿಸಿದ. ಆನಂತರ ಅವರು ಸಂತೋಷದಿಂದ ಆ ರಾತ್ರಿಯನ್ನು ವಿಶಾಲಾ ನಗರದಲ್ಲಿ ಕಳೆದು ಮಾರನೆಯ ಬೆಳಿಗ್ಗೆ ಮುನಿಕಾಂತನೊಡನೆ ಮಿಥಿಲಾನಗರದ ಉಪವನದತ್ತ ನಡೆದರು. ಎಂದಿನಂತೆಯೇ ಕೌಶಿಕನು ಮಕ್ಕಳಿಗೆ ಶುಭಕರವಾದ ಹಲವು ಚರಿತೆಗಳನ್ನು ಹೇಳಿದ.

ನಾನಾ ಬಗೆಯ ಮರಗಿಡಬಳ್ಳಿಗಳಿಂದಲೂ, ಹಾರಾಡುವ ದುಂಬಿಗಳಿಂದಲೂ, ಚಕ್ರವಾಕಪಕ್ಷಿಗಳಿಂದಲೂ, ಕೋಗಿಲೆಗಳ ಕೂಜನದಿಂದಲೂ, ಹಂಸಯಾನದ ಸರೋವರಗಳಿಂದಲೂ ಕೂಡಿ ಕಣ್ಣಿಗೆ ಹಿತಕರವೆನಿಸುವ ಪ್ರದೇಶವನ್ನು ಕಂಡು ಶ್ರೀರಾಮನು ಅದರ ಹಿನ್ನೆಲೆ ಏನೆಂದು ಪ್ರಶ್ನಿಸಿದ. ಅದಕ್ಕೆ ಕೌಶಿಕನು ಹೀಗೆ ಹೇಳಿದ: "ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳ ಸೌಂದರ್ಯದಲ್ಲಿ ಒಂದೊಂದಷ್ಟನ್ನು ಪಡೆದು ಒಂದಿನಿತೂ ಕುರೂಪವಿಲ್ಲದ ಅಹಲ್ಯೆ ಎಂಬ ಹೆಸರಿನ ಸುಂದರ ಹೆಣ್ಣೊಂದನ್ನು ಬ್ರಹ್ಮನು ನಿರ್ಮಿಸಿ ಆ ಸುಗುಣೆಯನ್ನು ಯಾರಿಗೆ ಮದುವೆ ಮಾಡಿ ಕೊಡಬೇಕೆಂದು ಚಿಂತಿಸಿದ. ಆಗ ದೇವೇಂದ್ರನು ಬಂದು ವಿಧಿಗೆ ನಮಸ್ಕರಿಸಿ, "ಬಿಡುಗಣ್ಣರೊಡೆಯನಾದ ನನಗೆ ಈ ಹೆಣ್ಣನ್ನಿತ್ತರೆ ಕಡುಚೆಲುವೆಯಾದ ಈ ಕಾಮಿನಿಯೊಂದಿಗೆ ನಾನು ಸುಖದಿಂದಿರುತ್ತೇನೆ; ನಿನ್ನ ಪಾದಗಳನ್ನು ಎಡೆಬಿಡದೆ ಪೂಜಿಸಿ ಕೃತಾರ್ಥನಾಗುತ್ತೇನೆ" ಎಂದು ಬಿನ್ನವಿಸಿಕೊಂಡ. ಆಗ ಬ್ರಹ್ಮದೇವನು, "ಜಡಮತಿಯೇ, ಈಕೆಯನ್ನು ರಕ್ಕಸರಿಂದ ರಕ್ಷಿಸಲು ನಿನಗೆ ಆಗದು. ಖೂಳರಾದ ಅವರು ಮಾಯಾವಿಗಳು, ಕುಹಕರು. ಹೆಣ್ಣಿನಿಂದ ಅನರ್ಥವುಂಟಾಗುತ್ತದೆ, ಈ ಆಸೆಯನ್ನು ಬಿಟ್ಟು ಹೋಗು" ಎಂದು ಛೇಡಿಸಿದ. ಇಂದ್ರನು ನಿರಾಶನಾಗಿ ತನ್ನ ಮನೆಗೇನ್ನೋ ಹೋದ, ಆದರೆ ಅವನು ಮಾತ್ರ ಮನಸ್ಸಿನಲ್ಲಿ ಆ ಲಲನೆಯ ಕಾಂಕ್ಷೆಯನ್ನು ಮಾತ್ರ ಬಿಡಲಿಲ್ಲ.

ಇತ್ತ ಜಲಜಾಸನನು ತನ್ನಲ್ಲೇ ಆಲೋಚಿಸಿ ಗೌತಮನನ್ನು ಕರೆಸಿ, ಅವನನ್ನು ಅನೇಕ ಬಗೆಯಿಂದ ಉಪಚರಿಸಿ ಅಹಲ್ಯೆಯನ್ನು ಆತನಿಗೆ ಕೊಟ್ಟು ಇಬ್ಬರನ್ನೂ ಪ್ರೀತಿಯಿಂದ ಕಳಿಸಿಕೊಟ್ಟ. ಗೌತಮನೋ ವಿರಕ್ತ, ಆ ವಿರತಿಯಿಂದಲೇ ಮಾನಿನಿಯನ್ನು ತನ್ನ ಆಶ್ರಮಕ್ಕೆ ಕರೆತಂದು ನೆಲೆಗೊಳಿಸಿದ. ಅವನಲ್ಲಿ ತಪೋಕಾಂಕ್ಷೆಯೇ ತುಂಬಿದ್ದ ಕಾರಣದಿಂದಾಗಿ ಅವಳನ್ನು ಮುದಗೊಳಿಸುವ ಪ್ರಯತ್ನವನ್ನೇ ಮಾಡಲಿಲ್ಲ. ಆದರೆ ಗಂಡನ ಮನಸ್ಸನ್ನು ಸೆಳೆಯುವ ಉದ್ದೇಶದಿಂದ ಆ ಕಾಂತೆಯು ಅವನ ಪರಿಚರ್ಯೆಗೈಯುತ್ತ ಕೆಲಕಾಲ ಕಳೆದಳು. ಅಷ್ಟರಲ್ಲಿ ಬ್ರಹ್ಮನೇ ಬಂದು ತನ್ನ ಮಗಳನ್ನು ಅಕ್ಷಪಾದನೆನಿಸಿದ ಗೌತಮನಿಗೆ ಕೊಟ್ಟು ಮದುವೆ ಮಾಡಿದ. ಪರಿಣಯಕ್ಕೆ ಹೋಗಿದ್ದ ದೇವೇಂದ್ರನು ಬ್ರಹ್ಮಲೋಕದಲ್ಲಿ ಅಹಲ್ಯೆಯನ್ನು ಕಂಡು ಹಿಂದಿರುಗಿದ. ಅಂದಿನಿಂದ ಅವನನ್ನು ಕಾಮಬಾಧೆಯು ಆಳವಾಗಿ ತಿವಿಯತೊಡಗಿತು. ಅವಳನ್ನು ಪಡೆಯಲು ಏನು ಮಾಡಬೇಕೆಂದು ಪರಿಪರಿಯಾಗಿ ಚಿಂತಿಸಿದರೂ ಯಾವ ಉಪಾಯವೂ ಹೊಳೆಯಲಿಲ್ಲ. ಕೊನೆಗೆ ಗೌತಮಾಶ್ರಮದ ಹತ್ತಿರ ಬಂದು ಕಾದು ಕುಳಿತ. ಆದರೆ ಅನೇಕ ದಿನಗಳಾದರೂ ಗೌತಮನು ಆಶ್ರಮದಿಂದ ಹೊರಬೀಳಲಿಲ್ಲ, ಹೀಗಾಗಿ ಇಂದ್ರನು ಕಾತರದಿಂದ ಕಾಲಕಳೆಯಬೇಕಾಯಿತು. ಅಹಲ್ಯೆಯ ಯೋಚನೆಯಲ್ಲಿಯೇ ಇರಬೇಕಾದರೆ ಕೊನೆಗೆ ಅವನಿಗೊಂದು ಉಪಾಯ ಹೊಳೆಯಿತು.

ಒಂದು ದಿನ ಮಧ್ಯರಾತ್ರಿಯಲ್ಲಿ ಇಂದ್ರನು ಹುಂಜದ ಧ್ವನಿಯಿಂದ ಒದರಿದ. ಬೆಳಕು ಹರಿಯುವ ಸಮಯ ಸನ್ನಿಹಿತವಾಯಿತೆಂದು ತಿಳಿದ ಗೌತಮನು ಮೇಲೆದ್ದು ಸ್ನಾನಕ್ಕೆಂದು ಹೊರಟ. ಆಗ ಸುರರಾಜನು ಕಾಮಪರಿತಾಪದಿಂದಾದ ಸಡಗರದಿಂದ ಗೌತಮಾಶ್ರಮವನ್ನು ಹೊಕ್ಕು ಅಹಲ್ಯೆಯ ಬಳಿ ಬಂದು, "ಸುಗುಣಿಯೇ, ನೀನು ನನ್ನ ಪ್ರಾಣರಕ್ಷಣೆ ಮಾಡು, ಅಮರೇಂದ್ರನಾದ ನನ್ನ ಮೇಲೆ ದಯೆಗೆಯ್ದು ಕರುಣಿಸು. ನಿನ್ನೊಡನೆ ರತಿಕೇಳಿಯನ್ನು ಬಯಸಿ ಬಂದಿದ್ದೇನೆ. ನಾನು ಇತರ ಸಾಮಾನ್ಯ ಜನರಂತಲ್ಲದ ಇಂದ್ರ, ನನ್ನ ಕಡೆ ಕರುಣಾಕಟಾಕ್ಷವನ್ನು ಬೀರು" ಎಂದು ಕೇಳಿಕೊಳ್ಳಲು ಸತಿಯು ಅದಕ್ಕೆ ಒಪ್ಪಿಕೊಂಡಳು. ದೇವೇಂದ್ರನೇ ತನಗಾಗಿ ಆಸೆಪಟ್ಟು ಬಂದಿರುವನೆಂದು ಅವಳು ಸಂಭ್ರಮಿಸಿದಳು, ಅವನೊಡನೆ ಕೂಡಿ ಸುಖಿಸಿದಳು. ಗೌತಮನು ಸ್ನಾನ ಮಾಡಿ ಮರಳುವನೆಂಬ ಆತಂಕದಿಂದ ಇಂದ್ರನು ಲಗುಬಗೆಯಿಂದ ಆಶ್ರಮದಿಂದ ಹೊರಬಿದ್ದ. ಗಂಗೆಯ ಬಳಿ ಸ್ನಾನಕ್ಕೆಂದು ಹೋಗಿದ್ದ ಗೌತಮನು ನೋಡಲು ನದಿ ನಿದ್ದೆಗೈಯುತ್ತಿತ್ತು, ಹೀಗಾಗಿ ಇನ್ನೂ ಹೊತ್ತಾಗಿಲ್ಲವೆಂದು ಆಶ್ರಮದೆಡೆ ಮರಳಿದ. ಮಾರ್ಗಮಧ್ಯದಲ್ಲಿ ಯತಿವೇಷವನ್ನು ಧರಿಸಿ ಸುರತಸುಖವನ್ನು ಹೊಂದಿ ಬರುತ್ತಿರುವ ಪಾಕಾರಿಯನ್ನು ಕಂಡ; ನಡೆದಿರಬಹುದಾದುದನ್ನು ಊಹಿಸಿ ಅವನ ಕಣ್ಣುಗಳು ಕೋಪದ ಕೆಂಡಗಳನ್ನು ತುಂಬಿಕೊಂಡವು. ಇದನ್ನು ಕಂಡು ಏನಾಗುವುದೋ ಎಂದು ಮೂಲೋಕಗಳೂ ಭಯದಿಂದ ತಲ್ಲಣಿಸಿದವು. ಆಖಂಡಲನನ್ನು ಕುರಿತು ಅಕ್ಷಪಾದ, "ಎಲೋ ದುರಾತ್ಮಾ, ನೀಚ, ನನ್ನ ವೇಷವನ್ನು ತಾಳಿ ನೀನು ಈ ಕ್ಷುಲ್ಲಕ ಕಾರ್ಯವನ್ನು ಮಾಡಿದ್ದೀಯೆ, ಕೆಂಡವನ್ನು ಕುಸುಮವೆಂದು ಮಂಡೆಯಲ್ಲಿ ಧರಿಸಿದ್ದೀಯೆ. ಕಪಟದಿಂದ ನನ್ನ ಹೆಂಡತಿಯನ್ನು ಕೂಡಿದ್ದೀಯೆ. ವಿಪ್ರಾಂಗನಾಸಂಗ ಆಯುರ್ಭಂಗ ಎಂದು ನೀನು ತಿಳಿಯದೆ ಹೋದೆ. ಯೋನಿಯನ್ನು ಬಯಸಿ ಬಂದ

ಕಾರಣದಿಂದಾಗಿ ನೀನು ಯೋನಿಸಹಸ್ರನಾಗಿ ವೃಷಣಗಳೆರಡನ್ನೂ ಕಳೆದುಕೊಂಡು ಹೀನನಾಗಿ ಸಂಚರಿಸುವಂತಾಗಲಿ" ಎಂದು ಶಪಿಸಿದ. ಆನಂತರ ಅಹಲ್ಯೆಯ ಕಡೆ ತಿರುಗಿ ಕೋಪದಿಂದ ಉರಿಯುತ್ತ, "ಸದ್ಧರ್ಮಪಥವನ್ನು ಬಿಟ್ಟು ಪರಪುರುಷನೊಡನೆ ಸುಮನಾಸ್ತ್ರಕೇಳಿಯಲ್ಲಿ ತೊಡಗಿದ್ದರಿಂದ ಹತ್ತು ಸಾವಿರ ವರುಷ ಬಂಡೆಯ ರೂಪವನ್ನು ಧರಿಸಿ ಆಹಾರವಿಲ್ಲದೆ ಚಳಿಬಿಸಿಲುಗಳಲ್ಲಿ ಬೇಯುತ್ತ ಮಲಗಿರು; ಸೂರ್ಯವಂಶೋದ್ಧಾರಕ ಶ್ರೀರಾಮನು ಬಂದಾಗ ಅವನ ಅಡಿಹುಡಿಯು ನಿನ್ನನ್ನು ತಾಕಲು ನಿನ್ನ ಪಾಪರಾಶಿಯನ್ನು ಕಳೆದುಕೊಂಡು ಮತ್ತೆ ಪೂತಾಂಗಳಾಗುತ್ತೀಯೆ" ಎಂದು ಶಾಪವನ್ನಿತ್ತು ತಾನು ತಪಸ್ಸಿನಲ್ಲಿ ತೊಡಗಲು ಹಿಮಗಿರಿಯ ತಪ್ಪಲನ್ನು ಸಾರಿದ. ಮುನಿ ಹೇಳಿದ್ದಂತೆಯೇ ಈಗ ರಾಮದೂಳಿ ಸ್ಪರ್ಶವಾಗಲು ಮನುಷ್ಯಾಕೃತಿಯನ್ನು ಪಡೆದು ರಾಮನಿಗೆ ವಂದಿಸಿ ತನ್ನನ್ನು ಸಲಹಬೇಕೆಂದು ಪ್ರಾರ್ಥಿಸಿದಳು. ಹೀಗೆ **ಶ್ರೀರಾಮಪುರದ ಶ್ರೀಪತಿಯು** ತನ್ನ ಪಾದಸೋಂಕಿನಿಂದಲೇ ಅಹಲ್ಯೆಯ ಶಾಪವಿಮೋಚನೆಗೈದ ಶತಮನ್ಯುಕೃತವಾದ ಅಹಲ್ಯಾಚರಿತ್ರೆಯನ್ನು ಸೂತ ಮಹರ್ಷಿಯು ತನ್ನ ಶಿಷ್ಯನಿವಹಕ್ಕೆ ನಿರೂಪಿಸಿದ.

೧೬. ಅಹಲ್ಯೆಯ ಶಾಪವಿಮೋಚನೆ – ಮಿಥಿಲಾನಗರ ಪ್ರವೇಶ

ಹೈಮವತಿಯೇ ಕೇಳು, ರಾಮನು ಹಿಂದಿನ ಕತೆಯನ್ನು ಕೇಳಿ ವಿಶ್ವಾಮಿತ್ರನನ್ನು ಕುರಿತು, "ಗೌತಮನ ಮಹಾಶಾಪದಿಂದ ವೃಷಣರಹಿತನಾದ ದೇವೇಂದ್ರನು ಆನಂತರ ಏನು ಮಾಡಿದ?" ಎಂದು ಕೇಳಿದ. ಹೀಗಾಗಿ ಆತನು ಆ ಮುಂದಿನ ಕತೆಯನ್ನು ಹೇಳತೊಡಗಿದ: ತಾನು ಹೀಗಾಗಲು ದೇವೇಂದ್ರನು ಯಾರಿಗೂ ಮುಖ ತೋರಿಸಲಾರದೆ ವಿಷಾದದಿಂದ ಮರೆಮಾಚಿಕೊಂಡಿದ್ದ. ಅಗ್ನಿ ಮುಂತಾದ ದೇವತೆಗಳು ಅವನಿಗಾಗಿ ಹುಡುಕಾಡಿ ಅವನನ್ನು ಪತ್ತೆ ಮಾಡಿದರು. ಅವರೆಲ್ಲ ಬಲವಂತೆ ಮಾಡಲು ದಿವಿಜಪತಿಯು ನಡೆದುಹೋದ ವಿಷಯವನ್ನೆಲ್ಲ ವಿವರವಾಗಿ ತಿಳಿಸಿ ಉಶ್ಶಾಪಕ್ಕಾಗಿ ಏನು ಮಾಡಬೇಕೆಂಬುದನ್ನು ವಿಚಾರಿಸಿದ. ಅದಕ್ಕೆ ಅವರು ಒಕ್ಕೊರಲಿನಿಂದ, "ಸುರರಾಜನೇ, ಇದಕ್ಕಾಗಿ ನೀನು ಪರಿತಾಪಪಡಲೇಕೆ? ನಿನಗೆ ಮತ್ತೆ ಪುರುಷತ್ವಪ್ರಾಪ್ತವಾಗುವ ಉಪಾಯವೊಂದನ್ನು ನಾವು ಕೈಗೊಳ್ಳುತ್ತೇವೆ" ಎಂದು ಆಶ್ವಾಸನೆಯಿತ್ತು ಪಿತೃದೇವತೆಗಳಿದ್ದೆಡೆಗೆ ಒಟ್ಟಾಗಿ ತೆರಳಿದರು. ಗೌತಮನ ರೋಷಕ್ಕೊಳಗಾಗಿ ಕಳೆದುಕೊಂಡ ಇಂದ್ರನ ವೃಷಣಗಳನ್ನು ಅವನು ಮರಳಿ ಪಡೆಯುವಂತೆ ಮಾಡಬೇಕೆಂದು ದೇವತೆಗಳ ಪರವಾಗಿ ಅಗ್ನಿಯು ಬೇಡಿಕೊಂಡನು. ಯಜ್ಞಗಳನ್ನು ಮಾಡಿದವರು ನಿಮಗೆ ಮೇಷಗಳನ್ನಿತ್ತಿರುತ್ತಾರೆ, ಅವುಗಳ ವೃಷಣಗಳನ್ನು ಬೇರ್ಪಡಿಸಿದರೂ ನಿಮ್ಮ ಸಂತುಷ್ಟಿಗೆ ಕೊರತೆಯಾಗುವುದಿಲ್ಲ; ಹೀಗಾಗಿ ಮೇಷಾಂಡಗಳನ್ನು ಅಳವಡಿಸಿ ತಮ್ಮ ಒಡೆಯನನ್ನು ಸಲಹಬೇಕೆಂದು ಕೇಳಿಕೊಂಡರು. ಅಗ್ನಿದೇವನು ಹೇಳಿದ ಮಾತನ್ನು ಪಿತೃದೇವತೆಗಳು ಒಪ್ಪಿ ಮೇಷವೃಷಣಗಳನ್ನು ಬಿಡೌಜನಿಗೆ ಸೇರಿಸಿದಾಗ ದೇವತಾಸಮೂಹವು ಸಂತಸಗೊಂಡಿತು.

ಆನಂತರ "ಶುಭನಾಮ, ಜಲಜಾಕ್ಷರಾಮ, ನಿನ್ನ ಚರಣದ ಒಲುಮೆಯನ್ನು

ಬಯಸುವ ಗೌತಮಲಲನೆಯನ್ನು ಪಾವನಳನ್ನಾಗಿಸು" ಎಂದು ಕೌಶಿಕನು ಕೇಳಿಕೊಳ್ಳಲು, ಸುದತಿಯನ್ನು ಸಲಹಲು ಶ್ರೀರಾಮನು ಮುನಿಜನರೊಡನೆ ಕೂಡಿ ಗೌತಮಾಶ್ರಮಕ್ಕೆ ತೆರಳಿದ. ಅವನ ಪಾದಗಳ ಹುಡಿಯು ಸೋಂಕಿದಾಕ್ಷಣವೇ ಸೂರ್ಯಕಿರಣಗಳು ತಾಕಿದಾಗ ಕತ್ತಲು ಹರಿಯುವಂತೆ ಶಾಪವು ಸರಿದು ಅಹಲ್ಯೆಯು ಪಾವನೆಯಾದಳು. 'ಶ್ರೀರಾಮ ಜಯರಾಮ ರಾಮರಾಮ' ಎಂದು ಜಪಿಸುತ್ತ ಆಹಾರಾದಿಗಳನ್ನು ತೊರೆದು ಚಳಿಸೆಕೆಗಳನ್ನು ಸಹಿಸಿಕೊಂಡು ಅತಿಘೋರವಾದ ಪ್ರಕೃತಿವಿಕೋಪಗಳನ್ನು ಎದುರಿಸಿ ಕಲ್ಲಿನ ರೂಪದಲ್ಲಿ ಬಿದ್ದಿದ್ದ ಅಹಲ್ಯೆಯು ರಾಮನ ಶುಭಚರಣವು ತಾಕಲು ಪಾಪದೂರಳಾಗಿ ಮರಳಿ ಮನುಷ್ಯಾಕೃತಿಯನ್ನು ಪಡೆದು ನಿಂತಳು. ನೆರೆದಿದ್ದ ಮುನಿಸಮೂಹವೆಲ್ಲ ಈ ಪವಾಡವನ್ನು ಬೆರಗಿನಿಂದ ಕಣ್ಣರಳಿಸಿ ನೋಡಿತು. ಮಿಂಚು ಮುಗಿಲನ್ನು ಬಿಟ್ಟು ಭೂಮಿಯ ಮೇಗಡೆ ಆಕಾರವನ್ನು ತಳೆದು ಬಂದಂತೆ, ಹೂವನ್ನು ಬಿಟ್ಟು ಕೇವಲ ಪರಿಮಳವು ಹೊರಸೂಸುವಂತೆ, ಹೊಳೆಯುವ ರಮಣೀಯತೆಯಿಂದ ಕೂಡಿ ಬಂದ ಆ ರಮಣಿಯ ರೂಪವನ್ನು ಯಾರು ಬಣ್ಣಿಸಲಾಪರು ಎಂಬಂತಹ ಸುಗುಣೆಯ ಅತಿಶಯಕ್ಕೆ ಮೂರು ಲೋಕಗಳಲ್ಲಿ ಸಾಟಿಯುಂಟೆ? ಅವಳ ಮುಖವು ಚಂದ್ರನ ಕೆಳೆತನವನ್ನು ಬಯಸುವಂಥದು, ಸುಲಿಪಲ್ಗಳ ಶುಭ್ರ ದಂತಿಪಂಕ್ತಿಯ ಮುಂದೆ ಕುಂದವು ಮಂದವೆನ್ನಿಸುವಂಥದು, ಬಾಯ್ದೆರೆಗಳು ಬಂದುಗೆಯ ಬಂಧುತ್ವವನ್ನು ಪಡೆದವು, ಕದಪು ಕನ್ನಡಿಯ ಹೊಳಪು ಪಡೆದಂಥದು, ಮಂದಹಾಸವು ಬೆಳುದಿಂಗಳನ್ನು ಸೆರೆಹಿಡಿದಂತಹುದು, ಕುಡಿನೋಟವು ಬಾಣದಂತೆ ಹರಿತವಾದವು ಎಂಬಂತಹ ಆ ಹೆಣ್ಣ ಚೆಲುವನ್ನು ಕಂಡು ಮುನಿವೃಂದವು ಆನಂದವನ್ನು ಹೊಂದಿತು. ಹೂಹಾರದ ರೂಪ ತಳೆದ ಬಳ್ಳಿಗಳಂತಹ ತೋಳುಗಳು, ಬಡನಡು, ಹರಿಣಾಕ್ಷಿಗಳು, ಬಳ್ಳಿಹುಬ್ಬು, ಕಮನೀಯವಾದ ತಿಲಕಪುಷ್ಪದಂತಹ ಮೂಗು, ಹೊಂಬಳ್ಳಿಯ ಮೈ, ಕೊಳದಂತಹ ನಾಭಿ, ಮದ್ದಾನೆಯ ಸೊಂಡಿಲಿನಂತಹ ತೊಡೆಗಳು, ಹಂಸದ ಗತಿ, ಗಿಳಿಯ ಮಾತುಗಾರಿಕೆಗಳು ಶೋಭಿಸುತ್ತಿರಲು ಆ ಯುವತಿಯನ್ನು ಮುನಿತಿಲಕ ವಿಶ್ವಾಮಿತ್ರನು ನೋಡಿ ಸಂಭ್ರಮಿಸಿದ. ಕಾಂತೆಯ ಸೊಬಗನ್ನು ಕಂಡು ರಾಮನೂ ವಿಸ್ಮಯಗೊಂಡ.

ಬಲಭಾಗದಲ್ಲಿ ಮುಗುಳ್ನಗೆಯಿಂದ ಕೂಡಿ ಬಿಲ್ಲುಬಾಣಗಳನ್ನು ಹಿಡಿದ ಲಕ್ಷ್ಮಣನೂ, ಎಡವಂಕದಲ್ಲಿ ಯತಿರಾಯನೂ ನಿಂತಿರಲು ನಡುವೆ ನೀಲವರ್ಣದ ಶ್ರೀರಾಮನು ರಾರಾಜಿಸಲು ಮುನಿಪತ್ನಿಯು ಅವನನ್ನು ಕಂಡಳು. ಬ್ರಹ್ಮನೇ ಆದಿಯಾದ ದೇವಾನುದೇವತೆಗಳೂ ಋಷಿನಿವಹವೂ ನಿರಂತರ ಆಚರಿಸುವ ಜಪತಪಸಮಾಧಿಗಳಿಗೆ ದೊರಕದ ಪರಬ್ರಹ್ಮವೇ ತನ್ನ ಕಣ್ಣುಗಳ ಮುಂದೆ ನಿಂತಿರಲು, ಆ ಕಾಂತೆಯು ಗಂಡನ ಮಾತುಗಳನ್ನು ನೆನಪಿಸಿಕೊಂಡು ಅವನೇ ಶ್ರೀರಾಮನೆಂದರಿತು ಹರ್ಷಾನಂದದಿಂದ ಮಂದಸ್ಮೇರಸಹಿತವಾಗಿ ಸದ್ಭಕ್ತಿಯಿಂದ ಪರಮಪುರುಷನ ದಿವ್ಯಚರಣಗಳಿಗೆ ನಮಿಸಿ, 'ಸರಸಿಜದಳಾಕ್ಷ, ಸುರವರಾಧ್ಯಕ್ಷ, ದುರಿತಾಧಿಶಿಕ್ಷ, ಕರಿರಾಜರಕ್ಷ, ಕರುಣಾಕಟಾಕ್ಷ, ತರಣಿಕುಲಸೋಮ, ತಾರಕಸುನಾಮ, ಪರಿಪೂರ್ಣಕಾಮ, ನಿರುಪಮಾನಂದಾಭಿರಾಮ ಶ್ರೀರಾಮ' 'ರವಿಕೋಟಿಸಂಕಾಶ, ಲಕ್ಷ್ಮೀಶ, ಪುರುಷೇಶ; ನವನೀರದಶ್ಯಾಮ, ಭವವಿರೋಚನನಾಮ:



ಅಹಲ್ಯೆಯ ಶಾಪವಿಮೋಚನೆ

ಕುವಲಯಾಧಿಪಚಂದ್ರ, ಸತತನುತದಿವಿಜೇಂದ್ರ, ಸದ್ಗುಣಾನಂದಸಾಂದ್ರ; ರವಿವಂಶಸಂಭೂತ, ರಾಜೀವಸುತತಾತ; ಪ್ರವಿಮಲಸಂಭೂತ ಸವನಸತ್ಫಲದಾತ; ಭುವನೇಶಪೂಜಿತಪದಾಬ್ಜ ಕಾಮಪಿತನೇ, ಕಾಯುವುದೆನ್ನ ಕರುಣದಿಂದ' ಎಂದು ಭಕ್ತಿಯುಕ್ತಳಾಗಿ ಸ್ತುತಿಸಿದಳು. ಹೀಗೆ ಅನಂತಾನಂತ ರೀತಿಯಲ್ಲಿ ಸಂಸ್ತವನ ಮಾಡುತ್ತ ರಾಮಚಂದ್ರಪ್ರಭುವಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಮುಂದನ್ನರಿಯದೆ ಮೈಮರೆದಿರುವುದನ್ನು ಕಂಡ ರಘುಕುಲವರ್ಯನು ಸಂತಸದಿಂದ ಹಿಗ್ಗುತ್ತ, "ಮುನಿಶ್ರೇಷ್ಠನರಸಿಯೆ, ನೀನು ಬಯಸುವ ಮನೋರಥವನ್ನು ನೆರವೇರಿಸುತ್ತೇನೆ, ಕೇಳು" ಎನ್ನಲು ಪ್ರಭುವಿನ ಪಾದಗಳಿಗೆರಗಿ ಆಕೆಯು, "ದೇವದೇವೇಶನೇ, ಸೌಮಿತ್ರಿಸೇವಿತವಾದ ನಿನ್ನ ಪಾವನಮೂರ್ತಿಯು ನನ್ನ ಮನಸ್ಸಿನಲ್ಲಿ ಅಗಲದೆ ನೆಲಸಿರಬೇಕು" ಎಂದು ಬೇಡಿಕೊಂಡಳು.

ಅಷ್ಟರಲ್ಲಿ ರಾಮನ ಪದವನಜಗಳನ್ನು ಕಾಣುವ ಅಭಿಲಾಷೆಯಿಂದ ಅಲ್ಲಿಗೆ ಬಂದ ಗೌತಮಮುನಿಯು ತಪೋನಿಧಿಗಳ ನಡುವಿನಲ್ಲಿ ಶೋಭಿಸುವ ರಾಮನನ್ನು ಕಂಡು ಸಂಭ್ರಮದಿಂದ 'ಇನಕುಲೋದ್ಭವ, ಲೋಕಸಾಕ್ಷಿ, ಸಜ್ಜನಚಿತ್ತಪದ್ಮಸದ್ಮಾಯತ, ನಮೋ' ಎಂದು ಆನತವದನನಾಗಿ ನುತಿಸಿದ. ಅವನ ಸ್ತುತಿಯಿಂದ ಸಂತುಷ್ಟನಾದ ರಾಮಭದ್ರನು ಆತನಿಗೂ ಬೇಡಿದ ವರವನ್ನು ನೀಡುವ ಆಶ್ವಾಸನೆಯಿತ್ತ. ಕ್ಷಿತಿಯಲ್ಲಿನ ಯಾವುದನ್ನೂ ತಾನು ಬಯಸೆ, ತಾನು ಅಪೇಕ್ಷಿಸುವುದೆಂದರೆ ಶ್ರೀರಾಮನ ಸನ್ಮೂರ್ತಿಯು ಸದಾ ತನ್ನ ಮಾನಸವನ್ನಗಲದಿರಲಿ ಎಂಬುದನ್ನಷ್ಟೇ ಎಂದು ಆತನೂ ಅಹಲ್ಯೆಯಂತೆಯೇ ಬಯಸಿದ. ಆನಂತರ ಮಧುಸೂದನ ಮತ್ತವನ ಜೊತೆಯಲ್ಲಿದ್ದವರಿಗೆ ಅರ್ಘ್ಯಪಾದ್ಯಾದಿ ಹದಿನಾರು ಉಪಚಾರಗಳನ್ನು ಮಾಡಿ, ಕಂದಮೂಲಗಳ ಉಪಹಾರಗಳನ್ನು ಮುದದಿಂದ ಅರ್ಪಿಸಿ, ತನ್ನ ಸುದತಿಯೊಡನೆ ಮತ್ತೆ ಪ್ರಾರ್ಥಿಸಿ ಅವರನ್ನು ತನ್ನ ಆಶ್ರಮದಿಂದ ಬೀಳ್ಕೊಟ್ಟ.

ಅಲ್ಲಿಂದ ಹೊರಟ ರಾಮಲಕ್ಷ್ಮಣರು ಮುನಿಜನರೊಡನೆ ಉತ್ತರ ದಿಕ್ಕಿನ ಕಡೆಗೆ ಪ್ರಯಾಣ ಬೆಳೆಸಿದರು. ಸುತ್ತಮುತ್ತಲ ಪ್ರಕೃತಿಯ ಚೆಲುವನ್ನು ಹೀರುತ್ತ, ಹಲವಾರು ವಿಸ್ಮಯಕರ ತಾಣಗಳನ್ನು ಕಂಡು ಬೆರಗಾಗುತ್ತ, ಅಲ್ಲಲ್ಲಿ ಹರಿಯುವ ನದಿಗಳನ್ನೂ ಕೊಳಗಳನ್ನೂ ಕಾಡುಮೇಡುಗಳನ್ನೂ, ಜನವಸತಿಗಳೆಡೆಯಲ್ಲಿನ ಪೈರುಪಚ್ಚೆಗಳನ್ನೂ ಕಾಣುತ್ತ ಮುಂದುವರಿದರು. ಹೂಬಿಲ್ಲನು ಆಡುವ ಆಡುಂಬೊಲ, ದುಂಬಿಗಳ ಜೀವನಸ್ಥಳ, ಗಿಳಿಬಳಗಗಳ ನಿಲಯ, ಕೋಗಿಲೆಗಳ ಹಾಡುದಾಣ, ತಂಗಾಳಿಯ ನಿವಾಸ, ತಾವರೆಗಳಿಂದ ನಿಬಿಡವಾದ ಸರೋವರಗಳು, ಸುಗಂಧದ ಗಾಳಿ ಬೀಸುವ ಉದ್ಯಾನಗಳು ಇವುಗಳಿಂದ ಕೂಡಿ ಆ ಜಾಗವು ಅಮರೇಂದ್ರನ ಉಪವನಕ್ಕೆ ಪಾಸಟಿಯಾದುದೆಂಬಂತೆ ರಾಜಿಸುತ್ತಿತ್ತು. ವನರಮೆಯ ನಿಟ್ಟುಸಿರೆಂಬಂತೆ ತಂಬೆಲರು ಬೀಸಲು ಹೊಲವನ್ನು ಕಾಯುವ ಯುವತಿಯರು ಮನದಾಳದಿಂದ ಹಾಡಲು ಆ ದನಿಯನ್ನು ಕೇಳಿ ತಮ್ಮ ಮನದನ್ನೆಯರನ್ನು ನೆನೆದು ವಿರಹದಿಂದ ಚಲಿಸುವ ಹಾದಿಹೋಕರು ಬಾಯಾರಿ ಬಳಲುವುದನ್ನು ಕಾಣಬಹುದಿತ್ತು. ಮನಸಿಜವೀರನು ಎಸೆಯುವ ಬಾಣದ ಝೇಂಕಾರವು ಯುವತಿಯರನ್ನು ತಾಕಿ ಪ್ರಣಯಾತುರವನ್ನು ಕೆರಳಿಸುತ್ತಿತ್ತು; ಹೂಗೊಂಚಲುಗಳು, ಪಾರಿವಾಳಗಳ ಕಿರಿಚಲು ಹಾಗೂ ದುಂಬಿಗಳ ಝೇಂಕಾರಗಳು ಕಂಗೊಳಿಸುವ ತಾಣವಾಗಿ

ಆ ನಾಡು ಸುಖಸಂತತಿಯ ಬೀಡಾಗಿ ಮೆರೆಯುತ್ತಿದ್ದುದನ್ನು ಏನೆಂದು ಬಣ್ಣಿಸುವುದು!

ಇಂತಹ ವಿಲಾಸದಿಂದ ಕೂಡಿದ ಭೂಸುದತಿಯ ಮುಖಬಿಂಬದಂತೆ ಕಂಗೊಳಿಸುತ್ತಿದ್ದ ಆ ನಾಡಿನ ರಾಜಧಾನಿ ಮಿಥಿಲೆಯು ಅನತಿ ದೂರದಲ್ಲಿ ಕಾಣಿಸಿತು. ಆ ರಾಜಧಾನಿಯ ಹೊರವಲಯದಲ್ಲಿ ಯಜ್ಞವಾಟಿಯು ರಾರಾಜಿಸುತ್ತಿತ್ತು; ರಾಜಕುಮಾರರೂ ಮುನಿನಿಕರವೂ ಅಲ್ಲಿಗೆ ನಡೆತಂದರು. ಯಜ್ಞಭೂಮಿಯ ಸನಿಹಕ್ಕೆ ಬಂದು ಅಲ್ಲಿನ ಮುಖ್ಯಸ್ಥನಾದ ಮುನಿಯನ್ನು ಕಂಡು ತಾವು ವಿಶ್ರಮಿಸಬಹುದಾದ ತಾಣವಾವುದೆಂದು ವಿಶ್ವಾಮಿತ್ರನು ತನ್ನ ಮೃದುಮಧುರವಾಣಿಯಿಂದ ವಿಚಾರಿಸಿದ. ಸನಿಹದಲ್ಲಿಯೇ ವಿಶಾಲವಾದ ಪ್ರದೇಶದಲ್ಲಿ ಬೀಡುಬಿಟ್ಟಿದ್ದ ವಿವಿಧ ದೇಶಗಳ ರಾಜರುಗಳ ರಥಗಳಿದ್ದವು, ಅವುಗಳ ಬಳಿಯ ಬಿಡಾರಗಳಲ್ಲಿಯೇ ರಾಜರುಗಳು ಸಂತಸದಿಂದ ಬೀಡುಬಿಟ್ಟಿದ್ದರು. "ಪರಮಪವಿತ್ರವಾದ ಈ ನೆಲದಲ್ಲಿ ಎಲ್ಲಿ ಬಿಡಾರ ಮಾಡಿದರೆ ಸಂತಸದಾಯಕವಾಗಿರುತ್ತದೆ" ಎಂದು ಮುನಿಯು ವಿಚಾರಿಸಿದಾಗ, ಅಲ್ಲಿನ ವಿಪ್ರೋತ್ತಮನು ಒಂದು ಏಕಾಂತ ಮಂಟಪವಿದ್ದ ಸ್ಥಳಕ್ಕೆ ಅವರನ್ನು ಕರೆದೊಯ್ದ. ಅಲ್ಲಿಯ ವಾತಾವರಣವನ್ನು ಕಂಡು ಹರ್ಷ ತಾಳಿದ ವಿಶ್ವಾಮಿತ್ರನು ಪ್ರೀತಿಯಿಂದ ಕಾಕುತ್ಸ್ಥ ರಾಜಕುವರರೊಡನೆ ಲೋಕಾಭಿರಾಮದ ಮಾತುಗಳನ್ನಾಡುತ್ತ ಕುಳಿತಿದ್ದ. ಅಷ್ಟು ಹೊತ್ತಿಗೆ ಮುನಿವರನ ಬರವನ್ನು ತಿಳಿದ ಜನಕ ಮಹಾರಾಜನು ಆನಂದತುಂದಿಲನಾಗಿ ಪೂಜಾವಸ್ತುಗಳೊಡನೆ ಅನೇಕ ಭೂಸುರರೊಡನೆ ಪರಮ ಶ್ರದ್ಧೆಯಿಂದ ಕೂಡಿ ಮುನಿಪನಿದ್ದೆಡೆಗೆ ಧಾವಿಸಿದ.

ಹುಣ್ಣಿಮೆಯ ಚಂದ್ರನನ್ನು ಕಂಡ ಸಮುದ್ರದಂತೆಯೂ, ಪರಶಿವನನ್ನು ಕಂಡ ಬ್ರಹ್ಮನಂತೆಯೂ, ಮುನಿವೃಂದಾರಕರೊಡನೆ ಕುಳಿತಿದ್ದ ಕೌಶಿಕನನ್ನು ಕಂಡು ಹರ್ಷಗೊಂಡ ಜನಕನೃಪತಿಯು ಭಕ್ತಿಯಿಂದ ಸಾಷ್ಟಾಂಗವೆರಗಿ ಪೂಜಿಸಿ, "ನಾನು ಮಾಡುವ ಯಜ್ಞಕ್ಕೆ ತಮ್ಮ ಬರವಿನಿಂದ ಸಾರ್ಥಕ್ಯವುಂಟಾಯಿತು, ನಾನು ಧನ್ಯನಾದೆ" ಎಂದು ನುಡಿದ. ಮಿಥಿಲೇಶನನ್ನು ಕಂಡು ಸಂತೋಷದಿಂದ ಆತನ ಕ್ಷೇಮಸಮಾಚಾರಗಳನ್ನು ವಿಚಾರಿಸಿ ಮಂತ್ರಾಕ್ಷತೆಯನ್ನಿತ್ತು, "ಸೂರ್ಯನಿಂದ ಅಖಿಲ ವೇದಗಳನ್ನೂ, ಮಹಾ ತಪೋರಾಶಿಯಿಂದ ಸುಜ್ಞಾನವನ್ನೂ ಪಡೆದ ರಾಜರ್ಷಿ ನೀನು, ಕುಳಿತುಕೊ" ಎಂದ. ಸಂತಸದಿಂದ ಕುಳಿತ ಜನಪತಿಯು ವಿಶ್ವಾಮಿತ್ರ ಮುನಿಪತಿಯ ಹತ್ತಿರದಲ್ಲಿಯೇ ಶತಕೋಟಿಸೂರ್ಯತೇಜಸ್ಸಿನಿಂದ ಕೂಡಿ ಕೆಂಗರಿಗೋಲು ಬಿಲ್ಲುಗಳನ್ನು ಹಿಡಿದು ಕುಳಿತಿದ್ದ ಅಪ್ರತಿಮ ರೂಪಿನ ದಿವ್ಯಘನನೀಲಶ್ಯಾಮ ಹಾಗೂ ಪಕ್ಕದಲ್ಲಿದ್ದ ಲಕ್ಷ್ಮಣನ ಮುಗ್ಧಭಾವವನ್ನು ನೋಡಿ ವಿಸ್ಮಿತನಾದ. "ಈ ಹುಡುಗರು ಯಾರು, ತಮ್ಮೊಡನೆ ಇವರು ಬರಲು ಕಾರಣವೇನು, ದಯವಿಟ್ಟು ಹೇಳಬೇಕು" ಎಂದು ಹಿಗ್ಗಿನಿಂದ ರಾಜನು ಬೇಡಿಕೊಂಡ. "ಇವನು ಸಾಮಾನ್ಯ ಬಾಲಕನಲ್ಲ. ಶರಣಜನಸುರಧೇನುವಾದ **ರಾಮಪುರಿವಲ್ಲಭನೇ** ಮಾನವರೂಪದಿಂದ ದಶರಥ ಮಹಾರಾಜನ ಮಗನಾಗಿ ಹುಟ್ಟಿರುವ ರಾಮಚಂದ್ರ, ಅವನು ಅವನ ತಮ್ಮ ಲಕ್ಷ್ಮಣ. ಅವರು ನನ್ನೊಡನೆ ಬಂದ ಕಾರಣವನ್ನು ಹೇಳುತ್ತೇನೆ" ಎಂದು ಆ ಪ್ರಸಂಗವನ್ನು ವಿಸ್ತರಿಸಿದ.

೧೭. ಶತಾನಂದ ನಿರೂಪಿಸಿದ ವಿಶ್ವಾಮಿತ್ರ ಚರಿತ್ರೆ

ಪಾರ್ವತಿಯೆ, ಮುಂದಿನ ಕತೆಯನ್ನು ಕೇಳು: ಜನಕರಾಜನು ಕೇಳಿದಾಗ, "ಭೂಭುಜೋತ್ತಮನೆ, ಬ್ರಹ್ಮನ ಪ್ರಾರ್ಥನೆಯಂತೆ ವೈಕುಂಠಪತಿಯು ಮನುಜಾವತಾರವನ್ನು ತಾಳಿ ದಶರಥಕುಮಾರನಾಗಿ ಹುಟ್ಟಿದ ರೀತಿಯನ್ನು ಕೇಳಿ ನಾನು ಯಜ್ಞರಕ್ಷಣೆಗಾಗಿ ಕಳಿಸಿಕೊಡಲು ಕೇಳಿಕೊಂಡದ್ದರಿಂದ ತನ್ನ ಈ ಇಬ್ಬರೂ ಮಕ್ಕಳನ್ನೂ ದಶರಥನು ಕಳಿಸಿದ್ದಾನೆ. ಅವರ ಜೊತೆಯಲ್ಲಿ ಬರುತ್ತಿರುವಾಗ ಭಯಂಕರಿಯಾದ ತಾಟಕಿಯು ಎದುರಾಗಲು ಈ ಮಹಾಮಹಿಮನು ತನ್ನ ಹರಿತವಾದ ಬಾಣದಿಂದ ಅವಳನ್ನು ಸಂಹಾರಮಾಡಿದ; ಆನಂತರ ಸಿದ್ಧಾಶ್ರಮವನ್ನು ಸೇರಿ ನಾನು ಯಾಗ ಮಾಡುತ್ತಿರಲು ಅದನ್ನು ವಿಘ್ನ ಮಾಡುವ ಉದ್ದೇಶದಿಂದ ಬಂದ ಸುಬಾಹು ಮುಂತಾದ ರಕ್ಕಸರನ್ನು ಕೊಂದು ಯಜ್ಞರಕ್ಷಣೆ ಮಾಡಿದ. ಆ ನಂತರ ಕೆಲವು ದಿನ ಹಾಗೇ ಇರಲು ನಿನ್ನ ಪಟ್ಟಣದಲ್ಲಿನ ಬಿಲ್ಲುಗಳಲ್ಲಿ ಅಗ್ರೇಸರವೆನಿಸಿದ ಶಿವಧನುಸ್ಸನ್ನು ಕಾಣುವ ಅಭಿಲಾಷೆಯಿಂದ ರಾಮನು ಮುನಿಗಣದೊಡನೆ ಇಲ್ಲಿಗೆ ಬರಲು ಇಚ್ಛಿಸಿದ. ಅದರಂತೆಯೇ ಬರುತ್ತಿರಲು ದಾರಿಯಲ್ಲಿ ಗೌತಮಾಶ್ರಮವು ಕಣ್ಣಿಗೆ ಬಿದ್ದು ಶಾಪಗ್ರಸ್ತಳಾದ ಅಹಲ್ಯೆಯ ವಿಷಯವನ್ನು ತಿಳಿಸಿದಾಗ, ಕರುಣೆಯಿಂದ ಆ ಆಶ್ರಮವನ್ನು ಹೊಕ್ಕು ತನ್ನ ಪಾದಪಲ್ಲವದ ಸೋಂಕಿನಿಂದ ಕಲ್ಲಾಗಿದ್ದ ಅವಳನ್ನು ಹಿಂದಿನಂತೆಯೇ ದಿವ್ಯಸುಂದರಿಯನ್ನಾಗಿ ಪರಿವರ್ತಿಸಿದ; ಅಷ್ಟರಲ್ಲಿ ಅಲ್ಲಿಗೆ ಬಂದ ಗೌತಮ ಮುನಿಯು ತನ್ನ ಸತಿಯೊಡನೆ ಅರ್ಘ್ಯಪಾದ್ಯಾದಿಗಳಿಂದ ರಾಮನನ್ನು ಪೂಜಿಸಿದಾಗ ಸಂತಸದಿಂದ ರಾಮನು ಅವರಿಗೆ ವರವಿತ್ತು ನಿನ್ನ ಪಟ್ಟಣವನ್ನು ನೋಡುವ ಸಂಭ್ರಮದಿಂದ ಬಂದಿದ್ದಾನೆ" ಎಂದಾಗ ಮಿಥಿಲಾಧಿಪನು ಆನಂದದಿಂದ ಉಬ್ಬಿಹೋದ.

'ಜಗತ್ತಿನಲ್ಲಿಯೇ ಉತ್ತಮವಾದ ವಂಶವೆಂದರೆ ರಘುವಂಶ; ಅದರಲ್ಲಿ ಜಗದೀಶನೇ ಉದಿಸಿ, ನನ್ನ ಭಾಗ್ಯದ ಏಳಿಗೆಯೇ ಬಂದಂತೆ ನನ್ನ ನಗರಕ್ಕೆ ಬಂದಿದ್ದಾನೆ; ಶಿವಧನುಸ್ಸನ್ನು ಎತ್ತಿದರೆ ಈತನಿಗೆ ನನ್ನ ಮಗಳನ್ನಿತ್ತು ಕೃತಾರ್ಥನಾಗುತ್ತೇನೆ; ಎತ್ತದಿದ್ದರೂ, ಲೋಕದ ಜನರು ನಕ್ಕರೂ ಪರವಾಗಿಲ್ಲ, ನನ್ನ ಮಗಳಿಗೆ ಶ್ರೀರಾಮನೇ ಒಡೆಯ' ಎಂದು ಜನಕಮಹಾರಾಜನು ತನ್ನ ಮನಸ್ಸಿನಲ್ಲಿಯೇ ನಿರ್ಧರಿಸಿದ. ಆನಂತರ 'ಇಂದ್ರಪೂಜಿತನಾದ ದೇವನನ್ನು ಕಾಣುವುದೆಂದರೆ ಎಷ್ಟು ಜನ್ಮಗಳ ನನ್ನ ಪುಣ್ಯವೋ' ಎಂಬ ಧನ್ಯತಾಭಾವದಿಂದ ಶ್ರೀರಾಮನನ್ನು ಉಪಚರಿಸಿದ. ಮುನಿಯ ಶಾಪದಿಂದಾಗಿ ಹತ್ತು ಸಾವಿರ ವರ್ಷಗಳ ಕಾಲ ಕಲ್ಲಾಗಿ ಆಹಾರವನ್ನೇ ಸೇವಿಸದೆ ಬಿಸಿಲುಶೀತಗಳನ್ನು ಸಹಿಸಿಕೊಂಡಿದ್ದ ತನ್ನ ತಾಯಿಯನ್ನು ತನ್ನ ಪಾದಸೋಂಕಿನಿಂದಲೇ ಉದ್ಧರಿಸಿದ ಪುಣ್ಯಮೂರ್ತಿಯನ್ನು ಕಾಣಲೆಂದು ಬಂದ ಗೌತಮಪುತ್ರನಾದ ಶತಾನಂದ, "ತನ್ನ ಮನಸ್ಸಿನಲ್ಲಿ ಶ್ರೀಮೂರ್ತಿಯನ್ನಿಟ್ಟುಕೊಂಡು ಧ್ಯಾನಿಸುತ್ತಿದ್ದ ಕಲ್ಲಿಗೆ ಮನುಷ್ಯರೂಪವನ್ನು ನೀಡಿ ತಂದೆಯನ್ನು ಸೇರಿ ಅವನ ಸೇವೆ ಮಾಡುವ ಸೌಭಾಗ್ಯವು ನಿಮ್ಮ ಆಶೀರ್ವಾದದಿಂದಲೂ ಕರುಣೆಯಿಂದಲೂ ತಾಯಿಗೆ ದೊರಕಿತು. ಅಲ್ಲದೆ ಸುರಮೌಳಿವಂದಿತಪಾದನಾದ ಶ್ರೀರಾಮನನ್ನು ಕಾಣುವ ಪರಮ ಪುಣ್ಯವು ನನ್ನದಾಯಿತು" ಎಂದು ಕೌಶಿಕನಿಗೆ ವಂದಿಸಲು ಮುನಿಯು ಅವನನ್ನು ಮನದುಂಬಿ

ಆಶೀರ್ವದಿಸಿದ. ಅನಂತರ ಶತಾನಂದನು ರಾಮನಿಗೆ ವಂದಿಸಿ, "ಪಾವನಚರಿತ್ರನೇ, ನಿನ್ನ ದರ್ಶನವೇ ನನ್ನ ಪುಣ್ಯಫಲದಿಂದಾದುದು" ಎಂದು ಪರಿಪರಿಯಿಂದ ನುತಿಸಿ, "ಸಕಲಲೋಕಾನಂದಕರವಾದ ಮುನಿಶ್ರೇಷ್ಠರು ನಿನ್ನ ಪಾದಾರವಿಂದಗಳನ್ನು ಆಶ್ರಯಿಸಿ ಲೋಕವನ್ನೆಲ್ಲ ಪಾವನಗೊಳಿಸುವ ಸಂಕಲ್ಪ ಹೊತ್ತಿದ್ದಾರೆ. ಅವರ ಮಹಿಮೆಗಳನ್ನು ಬಣ್ಣಿಸಲು ಯಾರಿಗೆ ತಾನೇ ಸಾಧ್ಯ? ಈ ಮಹಾಮುನಿಯ ಚರಿತೆಯನ್ನು ಈ ಮುನಿಪೋತ್ತಮರ ಸನ್ನಿಧಿಯಲ್ಲಿ ನನಗೆ ಅಳವಿರುವ ಮಟ್ಟಿಗೆ ವಿವರಿಸುತ್ತೇನೆ, ಕೇಳು" ಎಂದು ವಿಶ್ವಾಮಿತ್ರನ ಮಹಿಮೆಯನ್ನು ಬಣ್ಣಿಸತೊಡಗಿದ.

ಬ್ರಹ್ಮಮಾನಸಪುತ್ರನಾದ ಕುಶನು ಪರಮಧರ್ಮಜ್ಞನೂ ವಿದ್ಯಾನಿಧಿಯೂ ಜನಹಿತಕಾರಿಯೂ ಆಗಿದ್ದು ರಾಜನಾಗಿ ದೀರ್ಘ ಕಾಲ ರಾಜ್ಯವನ್ನಾಳಿದ. ಆತನಿಗೆ ಮಗನಾದವನು ಕುಶನಾಭ, ಅವನೋ ದೇವೇಂದ್ರಸಮಾನನಾಗಿದ್ದವನು: ಅವನ ಮಗ ಶುಭಚರಿತನೂ ಸತ್ಕೀರ್ತಿಯುತನೂ ಆದ ಗಾಧಿ; ಅವನ ತನಯನಾದವನು ಶರತ್ಕಾಲದ ಚಂದ್ರನಂತೆ ಪರಿಶುಭ್ರನೂ ಮಹಾತ್ಮನೂ ಆದ ವಿಶ್ವಾಮಿತ್ರ. ಆತನು ಅನೇಕ ಸಹಸ್ರ ವರ್ಷಗಳ ಕಾಲ ಭೂಮಿಯನ್ನು ಪಾಲಿಸಿ, ಹಲವಾರು ಬಗೆಯಲ್ಲಿ ಸದ್ಧರ್ಮವನ್ನು ಪಾಲಿಸುತ್ತ ಸುಖದಿಂದಿದ್ದನು. ಅಂತಹ ರಾಜನು ಒಂದು ದಿವಸ ಲೋಕಯಾತ್ರೆಯನ್ನು ಮಾಡುವ ಉದ್ದೇಶದಿಂದ ನೆಲವು ಬೆಸಲಾಯಿತೋ ಎಂಬಂತೆ ಆನೆಕುದುರೆರಥಪದಾತಿಗಳಿಂದ ಕೂಡಿದ ಅಕ್ಷೋಹಿಣಿಗಣದೊಡನೆ ದೇವೇಂದ್ರನಂತೆ ವೈಭವದಿಂದ ಪಯಣವನ್ನು ಕೈಗೊಂಡ. ನಗರ ಪಟ್ಟಣ ಖೇಟ ಖರ್ವಡ ಪುಣ್ಯನದಿ ಪರ್ವತಪಂಕ್ತಿಗಳನ್ನೆಲ್ಲ ನೋಡುತ್ತ ಮುನ್ನಡೆದು ಬರುತ್ತಿರಲು ಮೃಗಪಕ್ಷಿಗಣವೆಲ್ಲವೂ ಕುತೂಹಲದಿಂದ ಕೂಡಿ ಬಳ್ಳಿಪೊದೆಗಿಡಮರಗಳಲ್ಲಿ ಹೂಹಣ್ಣುಗಳನ್ನು ಬಿಟ್ಟ ಚೈತ್ರರಥದಂತೆ ಕಂಗೊಳಿಸುತ್ತಿದ್ದ ಶ್ರೇಷ್ಠತಮ ಆಶ್ರಮವೊಂದನ್ನು ಕಂಡ. ಅದು ಸಗರವಂಶದ ಗುರುವೂ ತಪೋನಿಲಯನೂ ಮೃಗಧರನಂತಹವನೂ ಆದ ವಸಿಷ್ಠಮಹರ್ಷಿಯದಾಗಿತ್ತು. ಆ ಆಶ್ರಮದಲ್ಲಿ ಒಂದೆಡೆ ಯೋಗಸಾಧನೆ ನಡೆಯುತ್ತಿದ್ದರೆ, ಮತ್ತೊಂದೆಡೆ ತಪೋನಿರತರಾದ ಮುನಿಗಣಗಳು ಧ್ಯಾನಶೀಲರಾಗಿದ್ದರು; ಇನ್ನೊಂದೆಡೆ ಕೆಲವರು ಯಾಗಾನುಸಂಧಾನದಲ್ಲಿ ತೊಡಗಿದ್ದರೆ, ಮಗುದೊಂದೆಡೆ ಜಪಸ್ವಾಧ್ಯಾಯಗಳಲ್ಲಿ ತೊಡಗಿದ ಮುನಿಜನರಿದ್ದರು. ಒಂದು ಕಡೆ ನಿಗಮಾಗಮಗಳ ಅನುಸಂಧಾನ ನಡೆಯುತ್ತಿದ್ದರೆ, ಮತ್ತೊಂದೆಡೆ ವಿಚಾರವಿನಿಮಯವು ಜರುಗುತ್ತಿತ್ತು; ಇನ್ನೊಂದೆಡೆ ಪುರಾಣಪ್ರವಚನವು ಸಾಗುತ್ತಿದ್ದ ದೃಶ್ಯವು ಕಾಣಿಸಿದರೆ, ಮಗುದೊಂದೆಡೆ ಉಪನಿಷತ್ತುಗಳ ಪಾರಾಯಣವು ಸಾಂಗವಾಗಿ ಮುಂದುವರೆದಿತ್ತು. ಎಲ್ಲೆಡೆಯೂ ಮಾಸೋಪವಾಸಿಗಳೂ ಮುಮ್ಮಾಸೋಪವಾಸಿಗಳೂ ಷಣ್ಮಾಸೋಪವಾಸಿಗಳೂ, ತಂಗಾಳಿಯನ್ನೇ ಆಹಾರವಾಗುಳ್ಳ ನಿತ್ಯೋಪವಾಸಿಗಳೂ, ಪಂಚಾಗ್ನಿಯ ನಡುವೆ ಒಂದೇ ಅಂಗುಟವನ್ನೂರಿಕೊಂಡು ಇಂದ್ರಪದವಿಗೆ ಬಾಹುಗಳನ್ನು ಚಾಚಿದ್ದಾರೆಯೋ ಎಂಬಂತೆ ತೋರುತ್ತಿದ್ದ ರೀತಿಯಲ್ಲಿ ತೋಳುಗಳನ್ನು ಆಗಸದೆಡೆಗೆ ಚಾಚಿ ಕೈಮುಗಿದುಕೊಂಡು ನಿಂತಿದ್ದ ತಪಸ್ವಿಗಳ ಸಮೂಹವೇ ಶೋಭಿಸುತ್ತಿತ್ತು.

ಯಾವುದನ್ನೂ ನೋಡದೆ ತಮ್ಮ ನೋಟಗಳನ್ನು ಸ್ಥಿರವಾಗಿರಿಸಿ, ಯಾವ

ಅಡ್ಡಿಯನ್ನೂ ಉಂಟುಮಾಡದೆ ಉಸಿರಾಟವನ್ನು ನಿಯಂತ್ರಿಸಿ, ಚಿತ್ತಚಾಂಚಲ್ಯವನ್ನು ನೀಗಿಕೊಂಡು, ನಿಧಾನವಾಗಿ ಭಾವ ಅಭಾವಗಳೆರಡನ್ನೂ ಕಳೆದುಕೊಂಡು ಪ್ರಪಂಚವು ಸ್ವಪ್ನಸದೃಶವೆಂಬ ನಂಬಿಕೆಯಿಂದ ಸದಾನಂದ ಬ್ರಹ್ಮತ್ವದೆಡೆಗೆಂಬಂತೆ ಆಕಾಶದತ್ತ ನೋಡುವವರು. ದೃಷ್ಟಿಗಳನ್ನು ಹೊರಗಿಟ್ಟು ರೆಪ್ಪೆಗಳನ್ನು ಮಿಟುಕಿಸದೆ, ಗಾಳಿಯ ಸಂಚಾರವನ್ನು ಅನಾಯಾಸದಿಂದ ಸಮಗೊಳಿಸಿಕೊಂಡು, ವಿಷಯಗಳನ್ನೆಲ್ಲ ಮರೆತು, ತಮ್ಮ ಅಂತರಂಗದಲ್ಲಿಯೇ ಸುಷ್ಪ್ತಿಜಾಗರಗಳೆರಡನ್ನೂ ಕಾಣುತ್ತ, ಹಿತಾಹಿತಗಳನ್ನು ಜಾಗೃದವಸ್ಥೆಯಲ್ಲಿ ಚಿಂತಿಸುತ್ತ ನಾನಾ ಬಗೆಯ ಸುಖವನ್ನನುಭವಿಸುತ್ತ ಶಾಂತತೆಯನ್ನು ಪಡೆದಿರುವ ದಿವ್ಯತಾಪಸರು ಅಲ್ಲಲ್ಲಿ ಕಾಣುತ್ತಿದ್ದರು. ಸ್ಥಿರವಾದ ಸಿದ್ಧಾಸನದಲ್ಲಿ ಕುಳಿತು ತಮ್ಮ ನೋಟಗಳನ್ನು ತದೇಕವಾಗಿ ತಮ್ಮ ಮೂಗಿನ ತುದಿಯಲ್ಲಿರಿಸಿಕೊಂಡು ನಾಲ್ಕು ಆರು ಎಂಟು ಹತ್ತು ಅಂಗುಲಗಳಲ್ಲಿ ತಾವು ಕಲಿತ ಶುದ್ಧೋಪಾಸನಾ, ವಿಮಲಜ್ಞಾನ, ವೀತರಾಗ, ಬ್ರಾಹ್ಮಣ್ಯರಕ್ಷಣಾ ಮತ್ತು ಶುದ್ಧಕರ್ಮಾಚರಣ ಎಂಬ ತತ್ವಪಂಚಕವನ್ನು ಆಚರಿಸುವ ಮುಮುಕ್ಷುಗಳ ಸಮೂಹವು ಅಲ್ಲಲ್ಲಿ ಕಾಣುತ್ತಿದ್ದವು. ಸೂರ್ಯಚಂದ್ರರನ್ನು ಮೀರಿದಂತಹ ಅಗ್ನಿಯಲ್ಲಿ ತಮ್ಮ ಮನೋಮಾರುತವನ್ನು ನೆಲೆಗೊಳಿಸಿಕೊಂಡು, ದಶವಿಧನಾದಗಳ (ಜಲ, ಭೇರೀ, ಮೃದಂಗ, ಘಂಟಾ, ಕಾಹಳ, ಕಿಂಕಿಣೀ, ವೇಣು, ಭ್ರಮರ, ಓಂಕಾರ, ಶಂಖ ಎಂಬ ಹತ್ತು ಬಗೆಯ ನಾದಗಳು) ಕೇಳುತ್ತ ಮೈಮರೆತು ಪುಳಕಗೊಳ್ಳುತ್ತ, ಲಕ್ಷ್ಮೀದೇವಿಯಿಂದಾಗಿ ಹೊಳೆಯುವ ತೇಜಸ್ಸಿನಲ್ಲಿ ಲೀನವಾಗಿ ಅಲ್ಲಾಡದೆಯೇ ಕುಳಿತಿದ್ದ ಅನುಭಾವಿಗಳು ಅಲ್ಲಲ್ಲಿ ಕಾಣುತ್ತಿದ್ದರು. ಮೂಡಲ ರತ್ನಪರ್ವತವನ್ನೇರಿ ಮೂಡಿದ ಚಂದ್ರನನ್ನು ಹಿಡಿದು ಚುಂಬಿಸಿ ತನ್ನನ್ನೇ ಮರೆಯುತ್ತ ಊಹಾಪೋಹಗಳ ಸಿಕ್ಕನ್ನು ಬಿಡಿಸಿಕೊಂಡು ನಿತ್ಯಾನಂದದಿಂದ ಕೂಡಿ ಯೋಗಮುದ್ರೆಗಳನ್ನು ತಾಳಿ, ಜಟಾಜೂಟಧಾರಿಯಂತೆ ಜಡೆಗಳುಳ್ಳ ಹಾಗೂ ಮೈಗೆಲ್ಲ ವಿಭೂತಿ ಬಳಿದುಕೊಂಡ ಮುನಿಗಳು ಅಲ್ಲಲ್ಲಿ ರಾಜಿಸಿದರು. ಆ ಆಶ್ರಮದಲ್ಲಿ ಒಂದೆಡೆ ಆನೆಸಿಂಹಗಳು, ಹುಲಿಜಿಂಕೆಗಳು ತಮ್ಮ ವೈರವನ್ನು ಮರೆತು ಸರಸಸಲ್ಲಾಪದಲ್ಲಿ ತೊಡಗಿದ್ದರೆ, ಮತ್ತೊಂದೆಡೆ ಹಾವುಮುಂಗುಸಿಗಳೂ ಗಿಳಿಗಿಡುಗಗಳೂ ಸರಸ ಸಂಭಾಷಣೆಯಲ್ಲಿ ಮೈಮರೆತಿದ್ದವು. ಹಗಲುರಾತ್ರಿಗಳೆರಡರಲ್ಲಿಯೂ ಕಮಲ ಕೈರವಗಳೆರಡೂ ಅರಳಿ ಪರಿಮಳವನ್ನು ಬೀರುತ್ತಿದ್ದವು, ಅಲ್ಲಿನ ವಾತಾವರಣವು ಸಮಶೀತೋಷ್ಣಗಳಿಂದ ಕೂಡಿರುತ್ತಿತ್ತು. ಎಲೆವನಗಳಲ್ಲಿ ಚಮರೀಮೃಗಗಳು ತಮ್ಮ ಹಾಲಿನಿಂದ ಅಭಿಷೇಕಗೈವ, ಕಾಡಾನೆಗಳು ತಮ್ಮ ಸೊಂಡಿಲಿನಿಂದ ನೀರನ್ನು ತಂದು ಘೂತ್ಕರಿಸಿ ಎರಚುವ, ಹಿಂಡಾಗಿ ಸಾಲಾಗಿ ದುಂಬಿಗಳೂ ಇರುವೆಗಳೂ ಚಲಿಸುತ್ತಿರುವ ಹಾಗೂ ಆಯಾಸವನ್ನು ನೀಗುವ ಮಲಯಮಾರುತವು ಬೀಸುವ ಆಹ್ಲಾದಕರ ಪರಿಸರ ಅಲ್ಲಿನದು. ಇದ್ದ ಕಡೆಗೇ ವಿನಯದಿಂದ ಬಂದು ತಲೆಬಗ್ಗಿಸಿ ದರ್ಭೆಸಮಿತ್ತು ಹೂಹಣ್ಣುಗಳನ್ನು ನೀಡಿ ಪೂಜೋಪಕರಣಗಳನ್ನು ಒದಗಿಸುತ್ತ, ಹೋಮಕುಂಡವನ್ನು ಪಟುಗೊಳಿಸುವ ಋಷಿಪತ್ನಿಯರ ಮಾತುಗಳಲ್ಲಿ ಸರಸ್ವತಿ ಕುಳಿತಿರುವಳೋ ಎಂಬಂತೆ ಕೇಳುವವರಿಗೆ ಆ ಧ್ವನಿಯು ಆನಂದಕರವಾಗಿತ್ತು. ಓಡಾಡುವ ಋಷಿಪತ್ನಿಯರಿಗೆ ಬಿಸಿಲಿನ ಬೇಗೆಯು ಉಂಟಾಗದ ಹಾಗೆ ಹಂಸಗಳು ತಮ್ಮ ರೆಕ್ಕೆಗಳನ್ನು ಹರಡಿಕೊಂಡು ಮೇಲೆ

ಹಾರಿಬರುತ್ತಿದ್ದವು, ಅವುಗಳೊಡನೆಯೇ ಹೋಮಧೂಮವೂ ಮೇಲಕ್ಕಡರಿ ಅದರ ಪರಿಮಳವನ್ನು ಹೀರಲು ಬಂದ ದುಂಬಿವಿಂಡುಗಳಿಂದ ಕೂಡಿ ಆಗಸವು ಮರೆಯುತ್ತಿತ್ತು.

ದ್ವಿಜಗಣದಿಂದಲೂ, ಬ್ರಹ್ಮರ್ಷಿಗಳಿಂದಲೂ, ಅಕ್ಷದೇವನೇ ಮುಂತಾದ ದೇವರ್ಷಿಗಳಿಂದಲೂ, ತಮ್ಮ ತಪಸ್ಸಿನಲ್ಲಿ ನಿರತರಾಗಿದ್ದ ವೈಖಾನಸ ಮುಂತಾದ ಪ್ರಮುಖ ಮುನಿಗಳಿಂದಲೂ, ಬ್ರಹ್ಮಲೋಕದಂತೆ ವಾಲಖಿಲ್ಯ ಮೊದಲಾದ ಅಸಂಖ್ಯಾತರಿಂದ ಪರಿವೃತವಾಗಿ ರವಿಮಂಡಲದಂತೆ ವಿರಾಜಮಾನವಾಗಿದ್ದ ವಸಿಷ್ಠಋಷಿಯ ಆ ಆಶ್ರಮವನ್ನು ನೃಪವರ್ಯನು ಕಂಡ. ಸತತವಾಗಿ ಸಜ್ಜನಸೇವಿತವಾದ ಸಿದ್ಧಾಶ್ರಮವನ್ನು ಕಂಡ ಗಾಧಿತನುಜನು ಒಳನಡೆದು ಚತುರಾಸ್ಯನಂದನನನ್ನು ನೋಡಿ ಅವನಿಗೆ ನಮಿಸಿದ. ಮುನಿಯ ಅವನನ್ನು ಆಶೀರ್ವದಿಸಿ ಕುಶಲವನ್ನು ವಿಚಾರಿಸಿ ಮಹಾರಾಜನನ್ನು ದಿವ್ಯಪೀಠದಲ್ಲಿ ಕುಳ್ಳಿರಿಸಿದ; ತನ್ನ ಎಂದಿನ ಅಭ್ಯಾಸದಂತೆ ಆತನಿಗೆ ಹಣ್ಣುಹಾಲುಗಳನ್ನಿತ್ತು ಮನಮೆಚ್ಚುವ ಬಗೆಯಲ್ಲಿ ಉಪಚರಿಸಿದ. ಪರಮಶ್ರೇಷ್ಠ ಮುನಿಯಿಂದ ಸತ್ಕಾರವನ್ನು ಸ್ವೀಕರಿಸಿ ದೊರೆಗಳ ಅರಸ ಕೌಶಿಕನು ವಸಿಷ್ಠನ ಯೋಗಕ್ಷೇಮ ತಪಸ್ಸು ಮುಂತಾದವುಗಳ ಬಗ್ಗೆ ವಿಚಾರಿಸಿ ಸಂತಸದಿಂದ ಸ್ವಲ್ಪ ಹೊತ್ತು ಕಾಲಕಳೆದ. ಆಗ ವಸಿಷ್ಠಋಷಿಯು, "ರಾಜರ ರಾಜನೇ, ನಿನ್ನ ರಾಜ್ಯ ಕೋಶ ಮಿತ್ರರು ಮಕ್ಕಳು ಪರಿವಾರದವರು ಸೇವಕರು – ಎಲ್ಲರೂ ಸದ್ಧರ್ಮವನ್ನು ಮೀರದೆ ಕುಶಲರಾಗಿದ್ದಾರೆಯೇ?" ಎಂದು ಪ್ರಶ್ನಿಸಿ, "ನೀನು ನಿನ್ನ ಸಾಮ್ರಾಜ್ಯವನ್ನು ತಂದೆಯ ಹಾಗೆ ಕಾಪಾಡಿ ಸಜ್ಜನರ ಪ್ರೀತಿಗೆ ಪಾತ್ರನಾಗಿದ್ದೀಯೆ; ಶತ್ರುಗಳನ್ನು ಸದೆಬಡಿದು ವಿಶ್ವಾಮಿತ್ರ ಎಂಬ ಹೆಸರನ್ನು ಪಡೆದಿದ್ದೀಯೆ" ಎಂದು ಹೇಳಿದ. ಅದಕ್ಕೆ ವಿಶ್ವಾಮಿತ್ರನು, "ತಮ್ಮ ಆಶೀರ್ವಾದಬಲದಿಂದ ಎಲ್ಲ ಬಗೆಯ ಸುಖಗಳನ್ನೂ ಪಡೆದು ಸಂತಸದಿದ್ದೇನೆ" ಎನ್ನಲು, ಋಷಿವರ್ಯನು ನಸುನಗುತ್ತ ಭೂಕಾಂತನೊಡನೆ, "ರಾಜನ್ಯವರ್ಯ, ನೀನು ಮೂರ್ಲೋಕಬಾಂಧವ, ವಿದ್ವಾಂಸರ ಕಾಮಧೇನು, ಪೂಜಾರ್ಹರಿಗೆ ಪ್ರಿಯನಾಗಿರುವವನು. ನೀನು ಮುನಿವೃಂದವನ್ನು ನೋಡಿ ಅಭಿವಾದಿಸಲೆಂದು ಈ ದಿನ ನಮ್ಮ ಆಶ್ರಮಕ್ಕೆ ಬಂದಿರುವುದು ನನಗೆ ಆನಂದವುಂಟುಮಾಡಿದೆ. ಇವತ್ತು ನೀನು ನಿನ್ನ ನಿಖಿಲ ಪರಿವಾರ ಸಮೇತನಾಗಿ ನಮ್ಮ ಆಶ್ರಮದಲ್ಲಿಯೇ ಊಟವನ್ನು ಪೂರೈಸಿ ಮುಂದಕ್ಕೆ ತೆರಳಬೇಕು" ಎಂದು ಒತ್ತಾಯಮಾಡಿದ. ಅದನ್ನು ಕೇಳಿದ ಅರಸನು ಯತಿಯ ಪಾದರಾಜೀವಕ್ಕೆ ಅತ್ಯಂತ ಭಕ್ತಿಯಿಂದ ನಮಿಸಿ, "ದೇವರ್ಷಿಯೇ, ದೇವತತ್ವದ ನೋಟ ಮತ್ತು ನಿಮ್ಮ ಮಹದುಪಚಾರಗಲ್ಲಿಂದಲೂ ಪಾವನ ಕಥಾಶ್ರವಣದಿಂದಲೂ ನಾನು ಸಂತಸಭರಿತನಾಗಿದ್ದೇನೆ. ಅಷ್ಟು ಸಾಕು, ಇನ್ನು ಊಟೋಪಚಾರವೇನೂ ಬೇಕಿಲ್ಲ, ನಾನು ಮುಂದೆ ತಮ್ಮ ಪಾದಗಳನ್ನು ನೆನೆಯುತ್ತ ನನ್ನ ಊರಿನ ಕಡೆಗೆ ಪಯಣ ಬೆಳೆಸಲು ಅಪ್ಪಣೆ ಕೊಡಬೇಕು" ಎಂದು ಬೇಡಿಕೊಂಡ. ಆಗ ವಸಿಷ್ಠಋಷಿಯು, "ಭೂವಲ್ಲಭನೇ, ನಾನು ನೀಡುವ ಆತಿಥ್ಯವನ್ನು ಸ್ವೀಕರಿಸಿಯೇ ಹೋಗಬೇಕು" ಎಂದು ಒತ್ತಾಯಿಸಲು, "ತಮ್ಮ ಅಪೇಕ್ಷೆಯಂತೆಯೇ ಆಗಲಿ. ತಮ್ಮ ಅಪ್ಪಣೆಯಂತೆ ಊಟಮಾಡಿಯೇ ಮುಂದೆ ನಡೆಯುತ್ತೇನೆ" ಎಂದು ವಿನಯದಿಂದ ವಿನಮಿತನಾಗಿ ಉತ್ತರಿಸಿದ. ಆ ಮಾತಿನಿಂದ ವಸಿಷ್ಠಮುನಿಯು ಸಂತಸಗೊಂಡ.

ಆಗ ವಸಿಷ್ಠನು ಪ್ರೀತಿ ಅಕ್ಕರೆಗಳಿಂದ ಕೂಡಿದ ಮೃದುವಾಣಿಯಿಂದ ನಾನಾ ಬಗೆಯಲ್ಲಿ ಕರೆಯಲು ಮೈಮೇಲೆಲ್ಲ ಕಪ್ಪು ಚುಕ್ಕೆಗಳಿದ್ದ ಕಾಮಧೇನುವಿನ ಮಗಳು ನಂದಿನೀಧೇನುವು ಆ ಕ್ಷಣವೇ ಮುನಿಯ ಬಳಿ ಬಂದು ನಿಂತಿತು. ಆದನ್ನು ನೋಡಿ ಪರಮಋಷಿಯು, "ದೇವೇಂದ್ರಪೂಜಿತ ಮಹನೀಯಳೇ, ಧರಣಿಪತಿ ಹಾಗೂ ಅವನ ಚತುರಂಗಬಲವು ಬಯಸಿದ ಮೃಷ್ಟಾನ್ನಗಳನ್ನೆಲ್ಲ ಬೇಗ ಸಿದ್ಧಪಡಿಸಿ ಆತಿಥ್ಯವನ್ನು ನೆರವೇರಿಸಬೇಕು. ಪಾನಕ ಪಾಯಸ ಪರಮಾನ್ನಗಳನ್ನೂ ನಾನಾ ಬಗೆಯ ಖಾದ್ಯಗಳನ್ನೂ ತಯಾರಿಸಿ ಉಪಚರಿಸಬೇಕು" ಎಂದು ಆಣತಿಯಿತ್ತ. ಋಷಿಯು ಆದೇಶವಿತ್ತ ಕ್ಷಣಾರ್ಧದಲ್ಲಿಯೇ ನಂದಿನಿಯು ಚತುರಂಗಸೈನ್ಯ ಸಮೇತವಾದ ರಾಜಪರಿವಾರದ ಔತಣಕ್ಕಾಗಿ ಬೇಕಾದ ಪರಿಪರಿಯಾದ ಭಕ್ಷ್ಯಗಳನ್ನೊಳಗೊಂಡ ಅಡುಗೆಯೆಲ್ಲವನ್ನೂ ಸಿದ್ಧಪಡಿಸಿಬಿಟ್ಟಳು. ಜೇನು, ಕಬ್ಬಿನ ಹಾಲು, ಅರಳು, ರಾಮರಸ ಮುಂತಾದ ಪೇಯಗಳು, ಇತರ ಅನೇಕ ವಿಧವಾದ ಪಾನಕಗಳು, ರುಚಿಕರವಾದ ರಾಶಿರಾಶಿ ಕಡುಬುಗಳು, ಮೃಷ್ಟಾನ್ನ, ವಿವಿಧ ಬಗೆಯ ಸಾರು ತೊವ್ವೆಗಳು, ಮೊಸರು-ತುಪ್ಪ, ಹೋಳಿಗೆ ಒಬ್ಬಟ್ಟು ಮುಂತಾದ ಹಲವಾರು ಬಗೆಯ ರುಚಿಕರವಾದ ಷಡ್ರಸಸಹಿತ ಅಡುಗೆಯು ಕಣ್ಣು ಮುಚ್ಚಿ ತೆಗೆಯುವಷ್ಟರಲ್ಲಿ ಸಿದ್ಧವಾಗಿಬಿಟ್ಟಿತು. ಯಾರು ಯಾರ ಮನಸ್ಸಿನಲ್ಲಿ ಯಾವ ಯಾವ ಬಗೆಯ ತಿಂಡಿತೀರ್ಥಗಳ ಬಯಕೆಯಿತ್ತೋ ಎಲ್ಲವನ್ನೂ ತೃಪ್ತಿಗೊಳಿಸುವ ರೀತಿಯಲ್ಲಿ ಎದುರಲ್ಲೇ ಸಿದ್ಧಗೊಳ್ಳಲು ವಿಶ್ವಾಮಿತ್ರನ ಚತುರಂಗಬಲ ಹಾಗೂ ಮಂತ್ರಿಪರಿವಾರವೆಲ್ಲ ಸಂತೋಷದಿಂದ ರಾಜನನ್ನು ಹೊಗಳಿತು. ಮುನಿಪುಂಗವನು ತಮಗೆ ನೀಡಿದ ಸಂಭ್ರಮಭರಿತ ಆತಿಥ್ಯವನ್ನು ನೋಡಿದ ಕೌಶಿಕನು ಅಚ್ಚರಿಯಿಂದ ತಲೆಯಾಡಿಸಿದ.

ಅನಂತರ ವಸಿಷ್ಠರ ಮುಂದೆ ತಲೆಬಾಗಿಸಿ ವಿಶ್ವಾಮಿತ್ರನು, "ಪರಮರ್ಷಿಗಳೇ, ತಮ್ಮ ಪಾದಪಂಕೇಜಗಳನ್ನು ಕಂಡು ಪಾವನಗಾತ್ರನಾದೆ; ಪರಿಪರಿಯ ಭಕ್ಷ್ಯಭೋಜ್ಯಗಳಿಂದ ಕೂಡಿದ ತಮ್ಮ ಆತಿಥ್ಯದಿಂದಾಗಿ ಪರಮಹರ್ಷಿತನಾದೆ. ಈಗ ನನ್ನ ಮನಸ್ಸಿನಲ್ಲಿನ ಅಪೇಕ್ಷೆಯೊಂದನ್ನು ತಮ್ಮಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಅಪಾರವಾದ ನವರತ್ನಗಳನ್ನೂ, ಗೋಶತಸಹಸ್ರಗಳನ್ನೂ ನಿಮಗೆ ಅರ್ಪಿಸಿಬಿಡುತ್ತೇನೆ, ದಯವಿಟ್ಟು ಈ ಧೇನುವನ್ನು ಕರುಣೆಯಿಂದ ನನ್ನೊಡನೆ ಕಳಿಸಿಕೊಡಿರಿ" ಎಂದು ಬೇಡಿಕೊಂಡ. "ಮಹಾರಾಜನೇ, ನೀನು ಎಷ್ಟೇ ರತ್ನಗಳನ್ನು ಗೋಸಮೂಹವನ್ನು ಇತ್ತರೂ ಸರಿಯೆ, ನಾನು ಮಾತ್ರ ನಂದಿನಿಯನ್ನು ಕಳಿಸಲಾರೆ; ಏಕೆಂದರೆ ನನ್ನ ತಪಸ್ಸಿನ ಕಾರಣದಿಂದ ದೇವೇಂದ್ರನು ನನಗೆ ದಯಪಾಲಿಸಿದ ಧೇನು ಇದು; ಇದೇ ನನ್ನ ದ್ರವ್ಯಭಂಡಾರ, ಹವ್ಯಕವ್ಯಗಳಲ್ಲಿಯೂ, ಬಲಿಹೋಮ ಅಗ್ನಿಹೋತ್ರಗಳಿಗೂ ಸ್ವಾಹಾಕಾರ ಮುಂತಾದ ಕಾರ್ಯಗಳಿಗೂ ನನಗೆ ಸಹಾಯಕವಾದುದು" ಎಂದು ವಸಿಷ್ಠನೆನ್ನಲು, ವಿಶ್ವಾಮಿತ್ರನು, "ಚಿನ್ನದ ಕಟಕ ಹಾಗೂ ಸರಪಳಿಗಳಿಂದ ಅಲಂಕೃತವಾದ ಒಂದು ಲಕ್ಷ ಆನೆಗಳನ್ನೂ, ಕಮನೀಯವಾದ ಬಿಳಿಯ ಕುದುರೆಗಳು ಕಟ್ಟಿರುವ ಹದಿನಾರು ಸಾವಿರ ಯುದ್ಧಬಂಡಿಗಳನ್ನೂ, ಗಾಂಧಾರದಲ್ಲಿ ಹುಟ್ಟಿದ ಸುಲಲಿತವಾಗಿ ಓಡುವ ಹತ್ತುಸಾವಿರ ಕುದುರೆಗಳನ್ನೂ ನಿಮಗೆ ಕೊಡುತ್ತೇನೆ. ನಂದಿನಿಯನ್ನು ನನಗೆ ಕೊಟ್ಟುಬಿಡಿರಿ" ಎಂದು ಕೇಳಿಕೊಂಡ. ಅದಕ್ಕೆ ವಸಿಷ್ಠರು ಉತ್ತರಿಸುತ್ತ,

"ಹಣ ಚಿನ್ನಗಳಾಗಲೀ, ರಥ ಆನೆ ಕುದುರೆಗಳಾಗಲೀ, ಚಿನಿಚೀನಾಂಬರವಾಗಲೀ, ರತ್ನದ ರಾಶಿ ಅಥವಾ ಯಜ್ಞಕಾಲದ ದಕ್ಷಿಣೆಯಾಗಲೀ ನನಗೆ ಬೇಡ; ಈ ಸುರಧೇನುವೇ ನನಗೆ ಸರ್ವಸ್ವ, ಅಮಾವಾಸ್ಯೆ-ಹುಣ್ಣಿಮೆಗಳು, ನನ್ನ ಜೀವನಾಧಾರವೇ ಆದ ಇದನ್ನು ನಿನಗೆ ಹೇಗೆ ತಾನೇ ಕೊಡಲು ಶಕ್ಯ; ನೀನೆಷ್ಟೇ ಕೇಳಿಕೊಂಡರೂ ನಾನು ಈ ಕಾಮಧೇನುವನ್ನು ಮಾತ್ರ ಕೊಡಲಾರೆ" ಎಂದು ದೃಢವಾಗಿ ಹೇಳಿದ.

ವಿಶ್ವಾಮಿತ್ರ ಕೇಳುವುದು, ವಸಿಷ್ಠ ನಿರಾಕರಿಸುವುದು – ಈ ಮಾತುಗಳು ದೀರ್ಘ ಕಾಲ ಮುಂದುವರಿದುವು. ವಸಿಷ್ಠ ಮಾತ್ರ ತಮ್ಮ ಪಟ್ಟನ್ನು ಬಿಡಲಿಲ್ಲ. ಆಗ ವಾಸವೋಪಮ ಶೌರ್ಯದಿಂದ ಕೂಡಿದ್ದ ವಿಶ್ವಾಮಿತ್ರನು ಕಡುಕೋಪದಿಂದ ಆ ಹಸುವನ್ನು ಹಿಡಿದು ಎಳೆದಾಗ ಅದು ಮನನೊಂದು ಕಂಬನಿಯನ್ನು ಸೂಸುತ್ತ ಈ ಪರಿಯಲ್ಲಿ ಆಲೋಚಿಸಿ ದುಃಖಿಸಿತು: 'ಮಹಾ ದಯಾರ್ದ್ರಹೃದಯನಾದ ಮುನಿಯು ನನ್ನನ್ನು ಪರಿತ್ಯಜಿಸಿಬಿಟ್ಟನೇ? ನನ್ನನ್ನು ತೊರೆಯಲು ನಾನು ಆ ಭೂಸುರೋತ್ತಮನಿಗೆ ಏನು ಅಪಕಾರವನ್ನು ಮಾಡಿದೆ?' ಎಳೆಯುತ್ತಿದ್ದವರಿಂದ ಬಲವಾಗಿ ಕೊಡವಿಕೊಂಡ ಧೇನುವು ವಸಿಷ್ಠ ಮಹರ್ಷಿಗಳ ಬಳಿ ಮರಳಿ ಬಂದು ನಮಸ್ಕರಿಸಿ ಕಣ್ಣೀರು ಸುರಿಸುತ್ತ, 'ನನ್ನಿಂದ ಆಗಿರುವ ಅಪಚಾರವಾದರೂ ಏನು? ಈ ಚರರು ನನ್ನನ್ನು ಈ ರೀತಿ ಸೆಳೆದೊಯ್ಯುತ್ತಿದ್ದರೂ ನೀವು ಸುಮ್ಮನಿರುವಿರಲ್ಲ, ಇದಕ್ಕೆ ನೀವು ಅನುಮಿತಿಯಿತ್ತಿರುವಿರೇನು? ನನ್ನ ಮೇಲೆ ದಯವಿಟ್ಟು ಕರುಣೆ ತೋರಿ' ಎಂದು ಗೋಳಿಟ್ಟಿತು. ಅದಕ್ಕೆ ಮುನಿಶ್ರೇಷ್ಠನು, 'ಕಾಮಧೇನು ಕುಮಾರಿಯೇ, ನಿನ್ನಿಂದ ಎಂದಾದರೂ ಅಪಚಾರವಾಗುವುದುಂಟೆ? ಇಂಥ ಮಾತನ್ನೇಕೆ ಆಡುತ್ತಿದ್ದೀಯೆ? ಈ ರಾಜನು ತುಂಬ ಬಲಿಷ್ಠ, ಅವನ ಬಳಿ ಆನೆ ಕುದುರೆ ಪದಾತಿಸೈನ್ಯವಿದೆ, ಅವನು ಬಲಿಷ್ಠನಾಗಿ ನಿನ್ನನ್ನು ಎಳೆದೊಯ್ಯುತ್ತಿರಲು ನಾನೇನು ಮಾಡಬಲ್ಲೆ? ಒಳ್ಳೆಯ ಮಾತಿನಲ್ಲಿ ಹೇಳಿದರೂ ಕೇಳದ ಅವನನ್ನು ತಡೆಯುವ ಬಲ ನನಗಿಲ್ಲ, ಜೊತೆಗೆ ಆಶ್ರಮದ ತವಸಿಗಳೂ ಯುದ್ಧವೆಂದರೆ ಹಿಂಜರಿಯುವವರು ತಾನೇ? ಈಗ ನೀನು ಅತ್ತಾದರೂ ಏನು ಪ್ರಯೋಜನ?' ಎನ್ನಲು ಸುರಭಿಯು, 'ಬ್ರಹ್ಮ ಮಾನಸಪುತ್ರರಾದ ಪ್ರೇಮಮಂದಿರರೇ, ಪರಮಪುರುಷರೇ, ಬ್ರಹ್ಮ ತೇಜಸ್ಸಿನ ಬಲದಿಂದ ಕೂಡಿದವರೇ, ಕರುಣೆಯಿಂದ ನನಗೆ ಅಪ್ಪಣೆ ಕೊಡಿರಿ, ನಾನು ಈ ಕ್ಷತ್ರಿಯ ಕುಲಘಾತಕನ ಅಹಂಕಾರವನ್ನು ಮುರಿದಿಕ್ಕುವ ಬಲವನ್ನು ಸೃಷ್ಟಿಸುತ್ತೇನೆ' ಎಂದು ಆಶ್ವಾಸನೆಯಿತ್ತಿತು. ಅದಕ್ಕೆ ವಸಿಷ್ಠ ಮಹರ್ಷಿಯು ಒಪ್ಪಿಗೆ ನೀಡಲು ಕಾಮಧೇನು ಕುಮಾರಿಯು ಕೋಪದಿಂದ ಒಮ್ಮೆ ಹುಂಕರಿಸಿತು; ತಕ್ಷಣವೇ ಶತಕೋಟಿ ಪಪ್ಲವ ಸೈನ್ಯವು ಸೃಷ್ಟಿಯಾಯಿತು. ಅವರೆಲ್ಲ ಹೂಂಕಾರ ಮಾಡುತ್ತ ಬಿಲ್ಲು ಹಿಡಿದು ಬಂದು ವಿಶ್ವಾಮಿತ್ರನ ಸೈನ್ಯದ ಅಧಿಕ ಬಲವನ್ನು ಸದೆ ಬಡಿಯುತ್ತ ಇರುವುದನ್ನು ಕಂಡ ರಾಜನು ಕೋಪದಿಂದ ಕೆಂಡಗಳನ್ನುಗುಳುತ್ತ ಅಸಂಖ್ಯಾತ ಬಾಣಗಳನ್ನು ಬಿಟ್ಟು ಅರೆಕ್ಷಣದಲ್ಲಿ ಅವರನ್ನು ಬೀಳಿಸಿದ. ಆಗ ಶಬಲೆಯು ಎಣಿಸಲಾಗದಷ್ಟು ಸಂಖ್ಯೆಯಲ್ಲಿ ಕುದುರೆಗಳನ್ನೇರಿದ ರಾವುತರನ್ನು ಸೃಷ್ಟಿಸಿತು. ಅವರೋ ಕೆಂಗಣ್ಣು, ಕೆದರಿದ ಕೂದಲು, ದಟ್ಟವಾದ ಮೀಸೆ, ನೀಳ ನಾಸಿಕ, ದಪ್ಪ ದಪ್ಪನಾದ ಕೋರೆಹಲ್ಲುಗಳು, ಭೀಕರವಾದುದೂ ಬಲಿಷ್ಠವಾದುದೂ ಆದ ನಿಡುದೋಳುಗಳಿಂದ ಕೂಡಿ ಒಂದು ಕೈಯ್ಯಲ್ಲಿ ಹರಿತವಾದ ಈಟಿಗಳನ್ನೂ,

ಮತ್ತೊಂದರಲ್ಲಿ ಗುರಾಣಿಗಳನ್ನೂ ಹಿಡಿದುಕೊಂಡು ಮಹಾ ಘೀಂಕಾರದಿಂದಲೂ ಕೆಂಡಗಳಂತೆ ಸುಡುವ ಉಸುರಿನಿಂದಲೂ ಕೂಡಿ ಯಮದೂತರಂತೆ ಕಾಣುತ್ತಿದ್ದರು. ಆ ಯವನ ಶಕರೆಲ್ಲ ಈಟಗಳನ್ನು ಹಿಡಿದುಕೊಂಡು ವಿಶ್ವಾಮಿತ್ರನ ಸೈನ್ಯವನ್ನೆಲ್ಲ ನಾಶಮಾಡಲು ತೊಡಗಿದರು. ಆಗ ರಾಜನು ಕೋಪಾವಿಷ್ಟನಾಗಿ ಮಹಾಸ್ತ್ರಗಳನ್ನು ಪ್ರಯೋಗಿಸಿದಾಗ ಶಕಜನಸ್ತೋಮವು ಅಳಿಯತೊಡಗಲು ತಪೋಧನನಾದ ವಸಿಷ್ಠನು ನಂದಿನಿಯನ್ನು ಕುರಿತು, "ಯೋಗಬಲದಿಂದ ಮಹಾಬಲವನ್ನು ನಿರ್ಮಿಸಿ ಬೇಗ ಶತ್ರುಗಳನ್ನು ಕೆಡಹು" ಎಂದು ಆದೇಶವೀಯಲು ಅವಳು ಮತ್ತೆ ಹುಂಕಾರ ಮಾಡಲು ಕಾಂಬೋಜಸಮೂಹವು ಸೃಷ್ಟಿತವಾಯಿತು. ಆಗ ನೆಲವು ಬೆಸಲಾಯಿತೋ ಎಂಬಂತೆ ಕಡುರೋಷಯುತರಾದ ಯುವನ ಮ್ಲೇಚ್ಛ ಶಕ ಮುಂತಾದ ಸೈನ್ಯವು ಮೂಡಿ ಬಂದು ಕೈಗಳಲ್ಲಿ ಕತ್ತಿಗಳನ್ನು ಹಿಡಿದುಕೊಂಡು ಘುಡುಘುಡಿಸುತ್ತ ವಿಶ್ವಾಮಿತ್ರ ಸೈನ್ಯದೆಡೆಗೆ ನುಗ್ಗಿತು. ಧೇನುವಿನ ಕೆಚ್ಚಲಿನಿಂದ ಬಿಲ್ಲುಬಾಣಗಳನ್ನು ಹಿಡಿದ ಪಪ್ಲವರು, ಸದಾ ಯುದ್ಧೋತ್ಸಾಹದಿಂದ ಕೂಡಿದ ಯವನರು ಯೋನಿಯಿಂದ, ಉಚ್ಚರಾದ ಶಕರು ಸಗಣಿಯಿಂದ, ರೋಮಕೂಪಗಳಿಂದ ಮ್ಲೇಚ್ಛರು ಕಿರಾತರು ಕಾಂಭೋಜರು ಕಣ್ಣಲ್ಲಿ ಕಿಚ್ಚನುಗುಳುತ್ತ ಘೋರಾಕಾರರಾಗಿ ಶತ್ರು ಸೈನ್ಯದ ಮೇಲೇರಿದುದನ್ನು ಬಣ್ಣಿಸಲು ಸಾಧ್ಯವೇ! ಇದರಿಂದಾಗಿ ಗಾಧಿಸುತನ ಸೈನ್ಯವು ಅಳಿಯುತ್ತಿರುವುದನ್ನು ಕಂಡ ಅವನ ಮಕ್ಕಳು ವಸಿಷ್ಠ ಮುನಿಪನಿಗೆ ಗಾಸಿ ಮಾಡುವ ಉದ್ದೇಶದಿಂದ ಮೇಲೇರಿ ಬಂದಾಗ ಅವರು ಒಮ್ಮೆ ಹುಂಕರಿಸಿ ಅವರನ್ನು ಸುಟ್ಟು ಬಿಡಲು ಅದನ್ನು ಕಂಡ ಶತ್ರು ಸೈನಿಕರು ಬೆವರಿದರು.

ಆಗ ಮಹಾರಾಜನೂ ಚಿಂತಾಕ್ರಾಂತನಾದ. ಉಬ್ಬರವಿಳಿದ ಕಡಲಿನಂತೆ, ಹಲ್ಲುಗಳು ಮುರಿದ ಹಾವಿನಂತೆ, ಗ್ರಹಣಪೀಡಿತನಾದ ಸೂರ್ಯನಂತೆ, ರೆಕ್ಕೆ ಕಿತ್ತ ಹಕ್ಕಿಯಂತೆ ಕೌಶಿಕನ ದರ್ಪವು ಜರ್‍ರನೆ ಇಳಿಯಿತು. ಲಗುಬಗೆಯಿಂದ ಒಬ್ಬ ಮಗನನ್ನು ನಿಯೋಜಿಸಿ ತಾನು ವೈರಾಗ್ಯವನ್ನು ಹೊಂದಿ ಹಿಮವತ್ಪರ್ವತಕ್ಕೆ ಹೋಗಿ ಪರಮೇಶ್ವರನನ್ನು ಕುರಿತು ಘೋರತಪಸ್ಸು ಮಾಡತೊಡಗಿದ. ಸಾಕಷ್ಟು ದೀರ್ಘ ಕಾಲ ಈ ರೀತಿ ತಪಸ್ಸನ್ನು ಮಾಡಿದ ಬಳಿಕ ಅವನ ಗಾಢ ಭಕ್ತಿಗೆ ಮೆಚ್ಚಿದ ಪರಶಿವನು ಪ್ರತ್ಯಕ್ಷನಾಗಿ, "ಮಹಾರಾಜನೇ, ನಿನ್ನ ಅಭೀಷ್ಟವನ್ನು ನೆರವೇರಿಸುತ್ತೇನೆ, ಅದೇನು ಬೇಕೋ ಬೇಡಿಕೋ" ಎಂದ. "ದೇವದೇವನೇ. ನೀನು ನನಗೆ ವರವನ್ನೀಯುವುದು ಸತ್ಯವೇ ಆದರೆ ಉಪನಿಷತದ ಧನುರ್ವೇದವು ಸಾಂಗೋಪಾಂಗವಾಗಿ ನನಗೆ ಬರುವಂತೆಯೂ, ಸುರ ನರ ಉರಗ ಯಕ್ಷ ಕಿನ್ನರ ಗಾಂಧರ್ವ ಪರಮ ಋಷಿಗಳು ಹಾಗೂ ರಕ್ಕಸರ ಬಳಿಯಲ್ಲಿರುವ ಅಸ್ತ್ರಗಳೆಲ್ಲ ನನ್ನಲ್ಲಿ ಬಂದು ನೆಲಸಿರುವಂತೆಯೂ ಕೃಪೆ ಮಾಡು" ಎಂದು ಬೇಡಿಕೊಂಡ. ಶಿವನು ಅವನ ಮೇಲೆ ಕರುಣೆಯಿಟ್ಟು ಅವೆಲ್ಲವೂ ಅವನಿಗೆ ಸಿದ್ಧಿಸಲೆಂದು ವರವನ್ನಿತ್ತು ಅಂತರ್ಧಾನನಾದ.

ಇದರಿಂದ ಪರಮ ಹರ್ಷಿತನಾದ ವಿಶ್ವಾಮಿತ್ರನು ಹುಣ್ಣಿಮೆಯಂದು ಸಮುದ್ರವು ಉಕ್ಕೇರುವಂತೆ ಉಬ್ಬಿದ. ವಸಿಷ್ಠನು ಇನ್ನು ಅಳಿದ ಹಾಗೆಯೇ ಸರಿ ಎಂದು ಭಾವಿಸಿ ಕಡುಗೋಪದಿಂದ ಆಶ್ರಮಕ್ಕೆ ಬಂದು ತಳತಳಿಸುವ ಹೊಸ ಬಾಣಗಳ ಮಳೆ ಸುರಿಸಿದ. ಅದು ಎಷ್ಟು ತೀವ್ರವಾಗಿತ್ತೆಂದರೆ ಭೂಮಂಡಲವೇ ಕಾಣದಾಯಿತು. ಅದರಿಂದ ಉಂಟಾದ

ಕತ್ತಲೆಯಿಂದ ಯತಿತತಿಗಳು ದಿಕ್ಕು ದಿಕ್ಕುಗಳಿಗೆ ಓಡಿಹೋದರು; ಅರೆನಿಮಿಷದಲ್ಲಿ ಇಡೀ ಆಶ್ರಮವು ನಿರ್ಜನವಾಗಿಬಿಟ್ಟಿತು. ಹಾಗೆ ಓಡುವಾಗ ಭಯದಿಂದ ದಿಕ್ಕೆಟ್ಟ ಅವರು ಕೂಗತೊಡಗಲು ವಸಿಷ್ಠಮುನಿಪತಿಯು, "ಹೆದರಬೇಡಿರಿ, ಇನ್ನು ಒಂದು ಕ್ಷಣದಲ್ಲಿಯೇ ಸೂರ್ಯನ ಉದಯವು ಇಬ್ಬನಿಯನ್ನೆಲ್ಲ ಕಣ್ಮರೆ ಮಾಡಿಬಿಡುವಂತೆ ಈ ಗಾಧಿಸುತನನ್ನು ಸದೆಬಡಿಯುತ್ತೇನೆ, ದುಃಖ ಪಡಬೇಡಿರಿ" ಎಂದು ಅಭಯವನ್ನಿತ್ತ. ಕುಶಿಕನ ಮಗನನ್ನು ನೋಡಿ ವಸಿಷ್ಠ ಮುನಿಯು ಉಕ್ಕಿ ಬರುತ್ತಿರುವ ಕೋಪದಿಂದ, "ಎಲೈ ದುರಾಚಾರಿಯೇ, ನೀನೊಬ್ಬ ಮೂಢಾಗ್ರಗಣ್ಯ, ಅದರಿಂದಾಗಿ ತಪೋವನವನ್ನೇ ಹಾಳುಗೆಡವಿದ್ದೀಯೆ. ನನ್ನ ಬ್ರಹ್ಮತೇಜಸ್ಸಿನ ಬಲ ಎಂತಹುದು, ಅದರಿಂದ ನಿನ್ನ ಚತುರ ಚತುರಂಗಬಲವನ್ನೆಲ್ಲ ನಿಮಿಷಾರ್ಧದಲ್ಲಿ ಹೇಗೆ ಕುಟ್ಟಿ ಹುಡಿಮಾಡುತ್ತೇನೆ ಎಂಬುದನ್ನು ಈಗ ನೋಡು" ಎಂದು ತನ್ನ ಬ್ರಹ್ಮದಂಡವನ್ನು ಹಿಡಿದುಕೊಂಡ. ಆಗ ವಿಶ್ವಾಮಿತ್ರನು ಕೋಪದಿಂದ ತಟ್ಟನೆ ಆಗ್ನೇಯಾಸ್ತ್ರವನ್ನು ಹಿಡಿದು ಮುನಿಶ್ರೇಷ್ಠನ ಮೇಲೆ ಪ್ರಯೋಗಿಸಿಬಿಟ್ಟ; ಆದರೆ ಅದನ್ನು ವಸಿಷ್ಠನು ತಮ್ಮ ಬ್ರಹ್ಮದಂಡದಿಂದ ಮರುಕ್ಷಣವೇ ನಿವಾರಿಸಿಬಿಟ್ಟ. ಅದರಿಂದ ವಿಶ್ವಾಮಿತ್ರನ ಕೋಪ ನೆತ್ತಿಗೇರಿತು, ಆ ಬಳಿಕ ವಾರುಣ ಇಂದ್ರ ಪಾಶುಪತಾಸ್ತ್ರಗಳನ್ನು ಬಿಟ್ಟು ಹೊಡೆದ. ಜೊತೆಗೆ ಮಾನವ, ಮೋಹನ, ಗಾಂಧರ್ವ, ಸ್ವಾಪನ, ಜೃಂಭಣ, ವಿಲಾಪನ, ತಾಪನಗಳನ್ನೂ, ಪೈನಾಕ, ಶೋಷಣ, ದಾರುಣ, ವಜ್ರ, ಯಮಪಾಶಗಳನ್ನೂ, ಅವುಗಳೊಡನೆ ಯಮಪಾಶ, ಬ್ರಹ್ಮಪಾಶ, ವರುಣಪಾಶ, ಕೀನಾಶದಂಡ, ಪೈಶಾಚ, ಕ್ರೌಂಚ, ದಂಡಾಸ್ತ್ರಗಳನ್ನೂ ಚಕ್ರವನ್ನೂ ಎಡೆಬಿಡದೆ ವಸಿಷ್ಠರ ಮೇಲೆ ಪ್ರಯೋಗಿಸಿದ. ಜೊತೆಗೆ ಮರುತಾಸ್ತ್ರ, ಧನದಾಸ್ತ್ರ, ಹಯಶೀರ್ಷಶಕ್ತಿ, ಕಂಕಾಳ, ಮುಸಲ, ವೈದ್ಯಾಧರ, ತರಣಿತನಯಾಸ್ತ್ರ, ಶೂಲಕಾಪಾಲ, ಕಂಕಣಾಸ್ತ್ರಗಳಿಂದ ಮುನಿಗಳನ್ನು ಹೊಡೆದಾಗ ವಸಿಷ್ಠ ಮಹರ್ಷಿಯು ಅದಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಅವನ್ನೆಲ್ಲ ಕಣ್ಣು ಮುಚ್ಚಿಬಿಚ್ಚುವಷ್ಟರಲ್ಲಿ ಪರಿಹರಿಸಿಬಿಟ್ಟ. ಆಗ ಅವನ ಬ್ರಹ್ಮದಂಡವನ್ನು ನಾಶಪಡಿಸಲೋಸುಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ವಿಶ್ವಾಮಿತ್ರನು ಉದ್ದೇಶಿಸಿದಾಗ, ಮೂಲೋಕಗಳೆಲ್ಲ ನಡುಗಿಹೋದವು, ದೇವರ್ಷಿಗಳೂ ಗಂಧರ್ವರೂ ಅಡಿಗಡಿಗೆ ತಳ್ಳಂಕಗೊಂಡರು, ಕೌಶಿಕನು ಬಿಟ್ಟ ಬ್ರಹ್ಮಾಸ್ತ್ರವು ಮಹಾರೋಷದಿಂದ ಮುನ್ನಡೆಯಲು ಸಮುದ್ರಗಳೆಲ್ಲ ಕುದಿಯಲಾರಂಭಿಸಿದವು. ಆ ಶರವು ಬೊಬ್ಬಿರಿಯುತ್ತ ಕಿಡಿಗಳನ್ನು ಚೆಲ್ಲುತ್ತ ಎದುರು ಬಂದಾಗ ವಸಿಷ್ಠ ಮುನಿಯು ಅದನ್ನು ತನ್ನ ಕೈಯಲ್ಲಿನ ಬ್ರಹ್ಮದಂಡದಿಂದ ಹಿಡಿದು ನುಂಗಿಬಿಟ್ಟ, ಬ್ರಹ್ಮಾಸ್ತ್ರವನ್ನೇ ನುಂಗಿಬಿಟ್ಟಾಗ ವಸಿಷ್ಠನ ರೋಮಕೂಪಗಳಲ್ಲಿ ಕೆಂಗಿಡಿಗಳು ಸೂರ್ಯನ ಅಸಂಖ್ಯ ಕಿರಣಗಳಂತೆ ಅರಳಿದವು; ಅವನ ಕೈಯಲ್ಲಿನ ಬ್ರಹ್ಮದಂಡವು ಹೊಗೆಯಿಲ್ಲದ ಕಾಲಾಗ್ನಿಯಂತೆಯೂ ಯಮದಂಡದಂತೆಯೂ ಕಾಣಿಸಲು ಋಷಿಗಳೆಲ್ಲ ಭಯದಿಂದ ಮಹಾಮುನಿಗಳನ್ನು ಕುರಿತು ಸ್ತುತಿಗೈಯಲುಪಕ್ರಮಿಸಿದರು: "ದೇವರ್ಷಿಗಳೇ, ತಮ್ಮ ಬಲವು ಅಪ್ರಮೇಯವಾದುದು, ಇದನ್ನು ಯಾರು ತಾನೇ ನೋಡಲು ಶಕ್ಯ? ಜಗತ್ತೆಲ್ಲ ಗಾಬರಿಗೊಂಡಿದೆ, ಕರುಣಾಕಟಾಕ್ಷವನ್ನು ಬೀರಿ ಈ ಮಹಾತೇಜಸ್ಸನ್ನು ಶಾಂತಗೊಳಿಸಿರಿ. ಈ ಮಹೀಪತಿಯ ಗರ್ವದ ಸ್ವರೂಪವು ಈಗ ಬಯಲಾಯಿತು. ತಾವು ದೇವರ್ಷಿಸಮೂಹವನ್ನು ಕೃಪೆಯಿಂದ ನೋಡಿರಿ." ಆಗ ವಸಿಷ್ಠಮುನಿಯು

ಶಾಂತರಾಗಿ ಮುಖದಲ್ಲಿ ಮುಗುಳ್ನಗೆಯನ್ನು ಧರಿಸಿದ.

ಸಾಕ್ಷಾತ್ ಶಿವನ ವರದಿಂದ ತನಗೆ ದಕ್ಕಿದ ಅಸ್ತ್ರಶಸ್ತ್ರಗಳೆಲ್ಲವೂ ನಿಷ್ಫಲವಾದುದನ್ನು ಕಂಡು ಗಾಧಿಸುತನು ಅವಮಾನದಿಂದ ಕುದಿದು ಲಜ್ಜೆಗೊಂಡು ಬಿಸುಸುಯ್ಯುತ್ತ, 'ಈ ಕ್ಷಾತ್ರಬಲ ಅದೇನು ಮಹಾ, ಅದನ್ನು ಸುಡಬೇಕು, ಅದನ್ನೂ ಮೀರಿಸಿದುದಲ್ಲವೇ ಬ್ರಹ್ಮಬಲ, ಅದುವೇ ನಿಜವಾದ ಬಲವಲ್ಲವೇ? ಬ್ರಹ್ಮದಂಡವು ಅಸ್ತ್ರತತಿಗಳನ್ನೆಲ್ಲ ನುಂಗಿಬಿಟ್ಟಿತಲ್ಲ! ಹೀಗಾಗಿ ನಾನು ಯಾವ ವಿಧದಿಂದಲಾದರೂ ಬ್ರಾಹ್ಮಣನಾಗುತ್ತೇನೆ, ಪಾವನತರವಾದ ತಪವನ್ನಾಚರಿಸುತ್ತೇನೆ' ಎಂದು ನಿರ್ಧರಿಸಿ ಮಹಾರಾಜನು ತನ್ನ ಪತ್ನಿಯೊಡನೆ ದಕ್ಷಿಣ ದಿಕ್ಕಿನೆಡೆಗೆ ಪಯಣ ಬೆಳೆಸಿದ. ಸಾವಿರ ವರ್ಷಗಳ ಕಾಲ ಘೋರ ತಪಸ್ಸನ್ನಾಚರಿಸಿದ; ಆಗ ಬ್ರಹ್ಮದೇವನು ದೇವರ್ಷಿಸಮೂಹದೊಡನೆ ಅವರೆಡೆಗೆ ಬಂದು ಅತ್ಯಂತ ಪ್ರೇಮಭರಿತನಾಗಿ, "ನಿನ್ನ ತಪಸ್ಸಿನಿಂದಾಗಿ ಹದಿನಾಲ್ಕು ಲೋಕದ ಜನರೂ ಬನ್ನಪಡುವಂತಾಗಿದೆ; ನಿನ್ನ ಈ ಕಾರ್ಯದಿಂದಾಗಿ ನಿನ್ನನ್ನು ರಾಜರ್ಷಿಸಮಾನನೆಂದು ಹೊಗಳುತ್ತಿದೆ" ಎಂದು ಹೇಳಿ ಹೊರಟು ಹೋದ. ಇದರಿಂದ ಕುಶಿಕಸುತನು ಖಿನ್ನನಾಗಿ ದುಃಖದಿಂದ, ತನ್ನ ಬಗ್ಗೆಯೇ ರೋಷ ತಾಳಿ, 'ತನ್ನ ತಪಸ್ಸಿಗೆ ಫಲವು ದೊರೆಯದಾಯಿತಲ್ಲ' ಎಂದು ತಳ್ಳಂಕಗೊಂಡ. ತನ್ನ ನಾಲ್ವರು ಕುವರರಾದ ಹವಿಷ್ಯಂದ ದೃಢನೇತ್ರ ಮಧುಚ್ಛಂದ ಮಹಾರಥ ಎಂಬುವವರನ್ನು ಹೆಂಡತಿಯೊಡನೆ ಕಳಿಸಿಕೊಟ್ಟು, ಬ್ರಹ್ಮರ್ಷಿಯಾಗುವವರೆಗೂ ತನ್ನ ದಾರುಣ ತಪಸ್ಸನ್ನು ಮುಂದುವರಿಸಲು ವಿಶ್ವಾಮಿತ್ರನು ಲವಲವಿಕೆಯಿಂದ ಬಂದ ರೀತಿಯನ್ನು **ಶ್ರೀರಾಮಪುರದರಸನೇ**, ನಿರೂಪಿಸುತ್ತೇನೆ, ಕೇಳು.

೧೮. ತ್ರಿಶಂಕು ವೃತ್ತಾಂತ ಹಾಗೂ ವಿಶ್ವಾಮಿತ್ರನು ಬ್ರಹರ್ಷಿ ಪದವಿಯನ್ನು ಪಡೆದುದು

ಮೇನಕಾತ್ಮಜೆಯೇ ಕೇಳು, ಆ ಮುನಿಪನು ಅಧಿಕವಾದ ದುಮ್ಮಾನದಿಂದ ಹದಿನಾಲ್ಕು ಲೋಕಗಳೂ ನಡುಗುವಂತೆಯೂ, ಸೂರ್ಯ ಮತ್ತು (ಕಾಳಿ, ಕರಾಳಿ, ಮನೋಜವೆ, ಸುಲೋಹಿತೆ, ಸುಧೂಮ್ರವರ್ಣೆ, ಉಗ್ರೆ, ಪ್ರದೀಪ್ತೆ ಎಂಬ ಏಳು ನಾಲಗೆಗಳ) ಅಗ್ನಿಯು ಮಂಕಾಗುವಂತೆಯೂ ಕ್ರೂರತಮವಾದ ತಪಸ್ಸನ್ನು ಕೈಗೊಂಡ. ಅದೇ ಹೊತ್ತಿಗೆ ಸಂಭವಿಸಿದ ಮತ್ತೊಂದು ವೃತ್ತಾಂತವನ್ನು ಹೇಳುತ್ತೇನೆ, ಕೇಳು: ಜಗತ್ತಿನ ಅತ್ಯಂತ ಉತ್ತಮ ನಗರವಾದ ಅಯೋಧ್ಯೆಯಲ್ಲಿ ಸೂರ್ಯವಂಶೋತ್ಪನ್ನನಾದ ತ್ರಿಶಂಕು ಎಂಬ ನೃಪತಿಯು ದೇಹಸಮೇತವಾಗಿ ಸಗ್ಗವನ್ನು ನೋಡಬೇಕೆಂಬ ಆಸೆಯಿಂದ ಗುರು ವಸಿಷ್ಠರ ಬಳಿಗೆ ಹೋಗಿ ತನ್ನ ಆಸೆಯನ್ನು ನಿವೇದಿಸಿಕೊಂಡ. ರಾಜನು ಆಡಿದ ನುಡಿಗಳನ್ನು ಕೇಳಿದ ಗುರುವರ್ಯನು, "ಬದುಕಿರುವಾಗಲೇ ಸ್ವರ್ಗವನ್ನು ನೋಡುವವರು ಜಗತ್ತಿನಲ್ಲಿ ಇದ್ದಾರೆಯೇ? ನೀನು ಸಲ್ಲದ್ದನ್ನು ಬಯಸುತ್ತಿದ್ದೀಯೆ, ಬ್ರಹ್ಮನ ಪೀಠವು ನಿನಗೆ ಲಭ್ಯವಾಗುವುದೇ? ಸುಮ್ಮನೆ ಊರಿಗೆ ಹೋಗಿ ರಾಜ್ಯವನ್ನು ಪರಿಪಾಲನೆ ಮಾಡು" ಎಂದು ಹಿತವಚನವನ್ನು ಹೇಳಿದ. ಇದರಿಂದ ಖಿನ್ನಮನಸ್ಕನಾಗಿ ಹಿಂದಿರುಗುತ್ತಿರುವಾಗ

ಗುರು ವಸಿಷ್ಠನ ಮಕ್ಕಳ ಆಶ್ರಮವು ಗೋಚರಿಸಿತು. ಅವರ ಬಳಿ ಬಂದು ವಿನಯದಿಂದ ನಮಸ್ಕರಿಸಿ ತನ್ನ ಬಯಕೆಯನ್ನು ನಿವೇದಿಸಿಕೊಂಡು, "ಸಶರೀರಿಯಾದ ನನಗೆ ಸ್ವರ್ಗವು ಲಭ್ಯವಾಗುವಂತೆ ಯಾಗವನ್ನು ಮಾಡಿಸಿರೆಂದು ಬೇಡಿಕೊಳ್ಳಲು ನಿಮ್ಮ ಬಳಿ ಬಂದಿದ್ದೇನೆ. ನಮ್ಮ ಕುಲಕ್ಕೆ ರಾಜಪುರೋಹಿತರೇ ಗತಿ, ದಯವಿಟ್ಟು ನನ್ನ ಅಭಿಮತವನ್ನು ಸಲ್ಲಿಸಿರಿ. ಶ್ರೀಗುರುವಿಗಿಂತಲೂ ನೀವೇ ಅಧಿಕರು" ಎಂದು ಯಾಚಿಸಿದ. ಆಗ ಅವರುಗಳು, "ನರನಾಥನೇ, ನೀನು ಅಸಾಧ್ಯವಾದ ಆಲೋಚನೆಯಿಂದ ಕೂಡಿರುವೆ. ಗುರುವಿಗೆ ಸಾಧ್ಯವಾಗದ ಕಾರ್ಯವನ್ನು ನಾವು ಮಾಡಲಾಪೆವೇ? ಬೇರನ್ನು ಬಿಟ್ಟು ಕೊಂಬೆಯನ್ನು ಆಧರಿಸುವಂತಾಯಿತು ನಿನ್ನ ಪರಿ. ಹುಡುಗುತನದ ನಿನ್ನ ಆಸೆಯನ್ನು ಬಿಟ್ಟು ನಿನ್ನ ಪಟ್ಟಣಕ್ಕೆ ಮರಳಿ ಹೋಗಿ ನಿನ್ನ ಕೆಲಸಕಾರ್ಯಗಳ ಕಡೆ ಗಮನ ಕೊಡು" ಎಂದರು. ಆಗ ಕೋಪಾವಿಷ್ಟನಾದ ತ್ರಿಶಂಕುವು, "ಇಕ್ಷ್ವಾಕುವಂಶವನ್ನು ಸಲಹುವವರು ವಸಿಷ್ಠರು ಎಂಬುದು ನಮ್ಮ ಕುಲಪರಂಪರೆಯ ನಂಬಿಕೆ. ಅವರು ನನ್ನ ಆಸೆಯನ್ನು ನೆರವೇರಿಸಲು ನಿರಾಕರಿಸಿದರು, ಅದರಿಂದ ನಿಮ್ಮನ್ನು ನಂಬಿ ಪರಿಪರಿಯಾಗಿ ಬೇಡಿಕೊಂಡರೂ ನನ್ನೊಡನೆ ನೀವೂ ಸಹಕರಿಸದೆ ಹೋದಿರಿ. ನಿಮಗಿಂತಲೂ ಅಧಿಕರು ಯಾರಾದರೂ ಇದ್ದರೆ ನಾನು ಅವರ ಮರೆಹೊಗುತ್ತೇನೆ, ನಿಮ್ಮ ಮುಂದೆ ಹಲುಬಿ ಏನು ಪ್ರಯೋಜನ?" ಎಂದ. "ಛಡ, ನೃಪಾಧಮ, ವಂಶದ ಹಿರಿಯರು ಪೂಜಿಸಿದ ದೈವವನ್ನು ಬಿಟ್ಟು ಮತ್ತೊಬ್ಬನನ್ನು ಆಶ್ರಯಿಸುತ್ತೇನೆಂದು ಕೆಟ್ಟ ಭಾವನೆಯಿಂದ ಹೇಳುತ್ತಿರುವೆಯಲ್ಲ. ಇದರಿಂದಾಗಿ ನೀನು ಕಡು ಕ್ರೂರ ಚಾಂಡಾಲನಾಗು" ಎಂದು ಶಾಪವಿತ್ತರು.

ಹೀಗೆ ಅವಮಾನಿತನಾದ ತ್ರಿಶಂಕುವು ತೊಟ್ಟ ರತ್ನಾಭರಣಗಳು ಕ್ಷಣಮಾತ್ರದಲ್ಲಿ ಕಬ್ಬಿಣದವಾದವು, ಉಟ್ಟ ಪೀತಾಂಬರವು ಕೊಳಕು ಬಟ್ಟೆಗಳಾದವು, ನೋಡಲು ಅಸಾಧ್ಯವಾದ ರೀತಿಯಲ್ಲಿ ಅವನ ಸುರೂಪದ ದೇಹವು ವಿಕೃತವಾಯಿತು. ಹೀಗೆ ಚಾಂಡಾಲರೂಪವನ್ನು ತಾಳಿದ್ದನ್ನು ಕಂಡ ಪರಿವಾರದವರೂ ಮಂತ್ರಿಗಳೂ ಅವನನ್ನು ಬಿಟ್ಟು ಹೊರಟು ಹೋದರು. ಹೀಗೆ ತಾನು ಒಬ್ಬಂಟಿಯಾಗಿ ಉಳಿಯಲು ತ್ರಿಶಂಕುವು ಅತ್ಯಂತ ದುಃಖದಿಂದ ಹಲುಬುತ್ತ ಬಿಸುಸುಯ್ಯುತ್ತ ಮುಂದೇನು ಎಂದು ಯೋಚಿಸುತ್ತ ತನ್ನ ನಗರದ ದಕ್ಷಿಣದಿಕ್ಕಿಗೆ ನಡೆತಂದ. ಹಾಗೆ ಬರುತ್ತ ದಾರಿಯಲ್ಲಿ ಪರಮಋಷಿಯೂ ಕುಶಿಕವಂಶೋದ್ಭವನೂ ಆದ ಕೌಶಿಕನು ಘೋರ ತಪಸ್ಸಿನಲ್ಲಿ ತೊಡಗಿರುವುದನ್ನು ಕಂಡು ಅವನ ಬಳಿ ಹೋಗಿ ವಿನಯದಿಂದ ನಮಸ್ಕರಿಸಿ, ಕೈಮುಗಿದು ದೂರದಲ್ಲಿ ನಿಂತುಕೊಂಡ. ಸಿಂಗಾರದ ಭೂಷಣ ಅಂಬರಗಳನ್ನು ಕಳೆದುಕೊಂಡು ನೋಡಲು ವಿಕಾರವಾದ ಚಾಂಡಾಲನ ಆಕಾರದಲ್ಲಿದ್ದ ಮಹಾರಾಜನಾದ ಅವನನ್ನು ಕಂಡ ಮುನಿರಾಯನು ಕರುಣೆಯಿಂದ, "ಎಲೈ ನೃಪೋತ್ತುಂಗನೇ, ರವಿಕುಲತಿಲಕನೇ, ನಿನಗೆ ಈ ದುರವಸ್ಥೆ ಏಕೆ ಉಂಟಾಯಿತು? ಇದು ಯಾರಿಂದಾದುದು?" ಎಂದು ವಿಚಾರಿಸಿದ. ಆಗ ತ್ರಿಶಂಕುವು ಸಶರೀರಿಯಾಗಿ ಸ್ವರ್ಗವನ್ನು ನೋಡುವ ಆಸೆಯಿಂದ ನೂರು ಯಜ್ಞಗಳನ್ನು ಮಾಡಿದರೂ ಪ್ರಯೋಜನವಾಗದೆ ಗುರು ವಸಿಷ್ಠರನ್ನು ತಾನು ಮೊರೆವೊಕ್ಕುದು, ಅವರು ಆಸೆಯು ನೆರವೇರುವುದು ಅಸಾಧ್ಯ ಎಂದುದು, ಆನಂತರ ತಾನು ಅವರ ಮಕ್ಕಳ

ಬಳ ಹೋಗಿ ಬೇಡಿಕೊಳ್ಳಲು ಅವರು ತನ್ನ ಆಸೆಯನ್ನು ನೆರವೇರಿಸಲು ಸಹಕರಿಸದೆ ಹೋದುದಲ್ಲದೆ ಈ ಅವಸ್ಥೆಯುಂಟಾಗುವಂತೆ ಶಾಪವಿತ್ತ ಸಂಗತಿಯನ್ನೆಲ್ಲ ವಿಶದವಾಗಿ ನಿರೂಪಿಸಿದ. ಆನಂತರ, "ನಾನು ಎಂದಿಗೂ ಸುಳ್ಳು ಹೇಳುವವನಲ್ಲ, ಕ್ಷತ್ರಿಯಧರ್ಮವನ್ನು ಮೀರುವವನಲ್ಲ, ಹಿರಿಯರ ಅಡಿಗಳಿಗೆ ಎರಗದೆ ಎಂದಿಗೂ ಇರೆ, ಪ್ರಜೆಗಳ ಜೊತೆಗೆ ನಾನೂ ಸದ್ಧರ್ಮವನ್ನು ಪಾಲಿಸುತ್ತೇನೆ, ಎಂದಿಗೂ ಸಾಧುಸಜ್ಜನರನ್ನು ಪೀಡಿಸೆ, ಇಷ್ಟಾದರೂ ನನಗೆ ಈ ಅವಸ್ಥೆಯುಂಟಾದುದು ದೈವಯೋಗವೇ ಸರಿ. ಗುರುವರ್ಯರೇ, ಗತಿಹೀನರಿಗೆ ನೀವೇ ಗತಿ ಎಂದು ಭಾವಿಸಿ ನಿಮ್ಮ ಆಶ್ರಯಕ್ಕೆ ಬಂದಿದ್ದೇನೆ. ನನ್ನ ಆಸೆಯು ನೆರವೇರುವ ಯಾವ ಉಪಾಯವೂ ಹೊಳೆಯುತ್ತಿಲ್ಲ; ಯಾವ ರೀತಿಯಿಂದ ಆಲೋಚಿಸಿದರೂ ದೈವಾನುಗತಿಯನ್ನು ಮೀರಲು ನರರಿಗೆ ಸಾಧ್ಯವಿಲ್ಲ ಎಂಬುದು ತಮಗೂ ತಿಳಿಯದ ವಿಷಯವೇನಲ್ಲ. ತಮ್ಮನ್ನುಳಿದು ನನ್ನನ್ನು ಕಾಯುವವರು ಈ ಧರೆಯಲ್ಲಿ ಬೇರಾರೂ ಇಲ್ಲ. ಪಾವನಚರಿತ್ರರೇ, ನನ್ನ ವೃತ್ತಾಂತವನ್ನೆಲ್ಲ ತಮ್ಮಲ್ಲಿ ನಿವೇದಿಸಿಕೊಂಡಿದ್ದೇನೆ. ನನ್ನನ್ನು ಸಲಹಿರಿ" ಎಂದು ಬೇಡಿಕೊಂಡ.

ಸೂರ್ಯವಂಶೋತ್ಪನ್ನನು ಆಡಿದ ನುಡಿಗಳನ್ನು ಕೇಳಿದ ಪರಮಧಾರ್ಮಿಕ ಶಿಖಾಮಣಿಯಾದ ಕೌಶಿಕನ ಮನಸ್ಸು ಕರಗಿಹೋಯಿತು. ತ್ರಿಶಂಕು ಮಹಾರಾಜನನ್ನು ಸಮಾಧಾನಪಡಿಸಿ, "ಮರುಗಬೇಡ, ಸಶರೀರವಾಗಿ ನೀನು ಸ್ವರ್ಗವನ್ನು ನೋಡುವ ಅವಕಾಶವನ್ನು ನಾನು ಒದಗಿಸುತ್ತೇನೆ, ಭಯಪಡದಿರು, ಗಾಧಿಸುತನನ್ನು ಆಶ್ರಯಿಸಿದವರ ಮನೋಸಿದ್ಧಿ ಖಚಿತವಲ್ಲವೇ? ಜಗತ್ತಿನಲ್ಲಿರುವ ಎಲ್ಲ ರಾಜರುಗಳನ್ನೂ ಒಂದೆಡೆ ಸೇರಿಸಿ ಯಜ್ಞವನ್ನು ಮಾಡಿಸುತ್ತೇನೆ, ಗುರುಶಾಪದ ಕಾರಣದಿಂದ ಚಾಂಡಾಲನಾಗಿರುವ ರೂಪದಲ್ಲಿಯೇ ನೀನು ಮೂರು ಲೋಕಗಳಲ್ಲಿ ಮೆರೆಯುವಂತೆಯೂ, ಸಾಧುಜನಗಳ ಸಮ್ಮತದಂತೆ ಎಲ್ಲರಿಗೂ ತಿಳಿಯುವ ಹಾಗೆ ನಿನಗೆ ಸಂತಸವನ್ನುಂಟುಮಾಡುತ್ತೇನೆ, ಹೆದರಬೇಡ" ಎಂದು ಹೇಳಿದ ಆ ದಯಾನಿಧಿಯು, ತನ್ನ ಮಕ್ಕಳು ಹಾಗೂ ಶಿಷ್ಯರುಗಳನ್ನು ಕರೆದು ಮುಂದೆ ನಡೆಯಬೇಕಾದ ಕಾರ್ಯಗಳ ಕುರಿತು ವಿವರಿಸಿದ: "ದ್ಯುಮಣಿವಂಶದ ತ್ರಿಶಂಕು ಮಹಾರಾಜನಿಗೆ ಗುರುಶಾಪವುಂಟಾಗಲು ನನ್ನನ್ನು ಮೊರೆವೊಕ್ಕು ಬಂದಿರುವ ಕಾರಣದಿಂದ ಅವನು ಶರೀರಸಮೇತನಾಗಿ ಸ್ವರ್ಗವನ್ನು ಹೊಗುವ ಯಜ್ಞವನ್ನು ಮಾಡೋಣ. ಮಹರ್ಷಿಗಳೆಲ್ಲ ದಯವಿಟ್ಟು ನಮ್ಮೊಡನೆ ಸಹಕರಿಸಬೇಕು ಎಂದು ನಾನು ಹೇಳಿದಂತೆ ಭೂಸುರರಿಗೆಲ್ಲ ತಿಳಿಸಿ, ಅದಕ್ಕೆ ಯಾರು ಏನು ಉತ್ತರ ಹೇಳುತ್ತಾರೆಂಬುದನ್ನು ಬಂದು ನನಗೆ ತಿಳಿಸಬೇಕು" ಎಂದು ಅಪ್ಪಣೆ ಕೊಟ್ಟ. ಅದರಂತೆಯೇ ಅವನ ಮಕ್ಕಳೂ ಶಿಷ್ಯರುಗಳೂ ಮಹೋದಯರಾದ ವಸಿಷ್ಠರ ಮಕ್ಕಳನ್ನು ಬಿಟ್ಟು ಪ್ರಪಂಚದಲ್ಲಿರುವ ಮುನಿಗಳಿಗೆಲ್ಲರಿಗೂ ವಿಶ್ವಾಮಿತ್ರನ ಮಾತನ್ನು ಹೇಳಿ ವಾಪಸಾದರು. "ಪ್ರಪಂಚದ ಮುನಿವರರೆಲ್ಲ ನಿಮ್ಮ ಅಪ್ಪಣೆಗೆ ಒಪ್ಪಿಗೆಯಿತ್ತು ಬಂದಿದ್ದಾರೆ, ಆದರೆ ವಸಿಷ್ಠರು ಮತ್ತವರ ಮಕ್ಕಳು ಮಾತ್ರ 'ಕ್ಷತ್ರಿಯನೊಬ್ಬನು ಮಾಡಿಸುವ ಮತ್ತು ಚಾಂಡಾಲನು ಮಾಡುವ ಯಾಗದಲ್ಲಿ ನೀಡುವ ಹವಿಸ್ಸನ್ನು ಯಾವ ದೇವತೆಗಳು ಮತ್ತು ಮುನಿಗಳು ಯಜ್ಞಶೇಷವನ್ನು ಉಣ್ಣುತ್ತಾರೆ' ಎಂದು ಧಿಕ್ಕರಿಸಿದರು" ಎಂದು ವರದಿಯಿತ್ತರು.

ಈ ಮಾತುಗಳನ್ನು ಕೇಳಿದ ವಿಶ್ವಾಮಿತ್ರನು ಕನಲಿ ಕಿಡಿವೋಗಿ ಋಷಿನಿವಹವನ್ನು ಕುರಿತು, "ಪಾಪರಹಿತನಾಗಿ ಮಹಾತಪಸ್ಸಿನಲ್ಲಿ ತೊಡಗಿದ್ದವನನ್ನು ಗರ್ವದಿಂದ ಅವರು ಹೀಗೆ ಧಿಕ್ಕರಿಸಿದ್ದಾರೆ; ಅವರೆಲ್ಲರೂ ಈ ಕ್ಷಣದಲ್ಲಿಯೇ ಸುಟ್ಟು ಬೂದಿಯಾಗಿ ಯಮಲೋಕವನ್ನು ಸೇರಿ ಏಳು ನೂರು ಜನ್ಮಗಳ ಕಾಲ ಸತ್ತ ನಾಯಿಗಳನ್ನು ಭುಜಿಸುತ್ತ ಮುಷ್ಟಿಕರೆಂಬ ಹೆಸರಿನಿಂದ ಅಖಿಲ ಲೋಕಗಳಲ್ಲಿ ಸಂಚರಿಸಲಿ, ಮತ್ತು ತನ್ನ ತೋರ ಕೋಪದಲ್ಲಿ ದುರ್ಬುದ್ಧಿಯಿಂದ ತ್ರಿಶಂಕುವಿಗೆ ಘೋರಶಾಪವನ್ನಿತ್ತುದಲ್ಲದೆ ನಿಷ್ಕಾರಣದಿಂದ ನನ್ನನ್ನು ದೂಷಿಸಿದನಲ್ಲವೇ? ಅವನು ಲೋಕದೂಷಿತನಾಗಿ ವಿಕೃತರೂಪು ಪಡೆದು ನಿಷಾದತ್ವವವನ್ನು ಹೊಂದಿ ದುರ್ಗತಿಗಿಳಿಯಲಿ" ಎಂದು ವಿಶ್ವಾಮಿತ್ರನು ಶಪಿಸಿದ. ಆ ಬಳಿಕ ಸಶರೀರನಾಗಿ ಸ್ವರ್ಗವನ್ನು ನೋಡುವ ಆಕಾಂಕ್ಷೆಯಿಂದ ತನ್ನನ್ನು ಮೊರೆವೋದ ಶರಣರಕ್ಷಕನೂ ದಾನಿಯೂ ವಿಶ್ರುತನೂ ಆದ ತ್ರಿಶಂಕುವು ದೇಹಸಮೇತ ಸ್ವರ್ಗವನ್ನೈದುವಂತೆ ಯಾಗವನ್ನು ನೆರವೇರಿಸಲು ಸೇರಿದ್ದ ಭೂಸುರೋತ್ತಮರಿಗೆ ಆಣತಿಯಿತ್ತ. ಆಗ ಅಲ್ಲಿ ಸೇರಿದ್ದ ಮುಮುಕ್ಷುಗಳೆಲ್ಲ ಮೌನದಿಂದ ತಮ್ಮಲ್ಲಿಯೇ ಈ ಬಗೆಯಾಗಿ ಆಲೋಚಿಸಿದರು: 'ಕಡುಕೋಪಿಯಾದ ಕುಶಿಕತನಯನು ಆಡಿದ ಮಾತುಗಳು ತಪ್ಪುವುದಿಲ್ಲ, ನಾವೇನಾದರೂ ವಿನಯದಿಂದ ಬೇರೆಯದನ್ನು ಹೇಳಿದರೆ ಆತನು ಕೋಪಿಸಿಕೊಳ್ಳುವುದು ಖಚಿತ, ಆತನು ಅಗ್ನಿಸಮಾನನಾದವನು, ಹಾಗಾಗಿ ತ್ರಿಶಂಕುವು ದೇಹಸಮೇತ ಸ್ವರ್ಗವನ್ನು ಸೇರುವ ರೀತಿಯಲ್ಲಿ ಯಜ್ಞವನ್ನು ಮಾಡಬೇಕು.' ಅದರಂತೆಯೇ ಭೂಸುರರೆಲ್ಲರೂ ಸೇರಿ ಶಾಸ್ತ್ರೋಕ್ತವಾಗಿ ಯಾಗ ಮಾಡಲು ವಿಶ್ವಾಮಿತ್ರನು ಹರ್ಷದಿಂದ ಹವಿಸ್ಸನ್ನು ಅರ್ಪಿಸಲು ವಿವಿಧ ದೇವತೆಗಳನ್ನು ಆಹ್ವಾನಿಸಿದಾಗ ಅವರಾರೂ ಬರಲಿಲ್ಲ. ಇದರಿಂದ ಅವನ ಕೋಪಶಿಖಿಯು ಭುಗಿಲೆದ್ದಿತು. ತನ್ನ ಕೈಲಿದ್ದ ಸ್ರುವ(ಯಜ್ಞದ ಸೌಟು)ವನ್ನೆತ್ತಿ, ಲೋಕವೇ ಕಂಪಿಸುತ್ತಿರಲು, "ಈಗ ನನ್ನ ತಪಸ್ಸಿನ ಫಲವನ್ನು ನೋಡಿರಿ: ಜಗತ್ತಿನಲ್ಲಿ ದೇಹಸಮೇತ ಇದುವರೆಗೆ ಯಾರೂ ಸ್ವರ್ಗವನ್ನು ನೋಡಿಲ್ಲ. ಇಗೋ, ನೀನು ಗಳಿಸಿದ ತಪೋಬಲದ ತೇಜಸ್ಸಿನಿಂದ ಸಶರೀರಿಯಾಗಿ ಸ್ವರ್ಗವನ್ನು ಸೇರು" ಎಂದು ತ್ರಿಶಂಕುವಿಗೆ ಹೇಳಲು ಆತನು ಎಲ್ಲ ಮುನೀಂದ್ರರ ಸಮ್ಮುಖದಲ್ಲಿ ಸ್ವರ್ಗದತ್ತ ಜಿಗಿದ. ಅದನ್ನು ಕಂಡು ಎಲ್ಲರೂ ಬಗೆಬಗೆಯಾಗಿ ವಿಶ್ವಾಮಿತ್ರನನ್ನು ಸ್ತುತಿಸಿದರು.

ಹೀಗೆ ಮೇಲಡರಿ ತಮ್ಮ ಲೋಕದ ಕಡೆಗೆ ಬಂದ ನೃಪತಿಯನ್ನು ಕಂಡು ಇಂದ್ರನು ಕಡುಗೋಪದಿಂದ, "ಜಡನೇ, ಗುರುಶಾಪಹತನಾದ ನಿನಗೆ ಸ್ವರ್ಗವು ಯೋಗ್ಯವಲ್ಲ, ನೀನು ಮತ್ತೆ ಭೂತಳಕ್ಕೆ ಬೀಳು" ಎಂದು ನುಡಿಯಲು ತ್ರಿಶಂಕುವು ಮುಗ್ಗರಿಸಿ, "ಪಾವನ ಚರಿತ್ರ ವಿಶ್ವಾಮಿತ್ರ, ನನ್ನ ಕೈಬಿಡದೆ ದಯವಿಟ್ಟು ರಕ್ಷಿಸಿ" ಎಂದು ಒರಲುತ್ತ ಕೆಳಕ್ಕೆ ಬೀಳುವವನನ್ನು ವಿಶ್ವಾಮಿತ್ರನು ನೋಡಿ, "ತ್ರಿಶಂಕುವೇ, ನಿಲ್ಲು ನಿಲ್ಲು, ಭಯಪಡಬೇಡ" ಎಂದು ಹೇಳಿ ಉಕ್ಕಿ ಬರುತ್ತಿರುವ ಕೋಪದಿಂದ ಋಷಿನಿವಹದಲ್ಲಿದ್ದ ಎರಡನೆಯ ಬ್ರಹ್ಮನೋಪಾದಿಯಲ್ಲಿ "ದಕ್ಷಿಣ ದಿಸೆಯಲ್ಲಿ ಸಪ್ತರ್ಷಿಸಮೂಹವನ್ನು ಸೃಷ್ಟಿಸಿ, ಈ ಕ್ಷಣದಲ್ಲಿಯೇ ಇಂದ್ರನೂ ಒಳಗೊಂಡ ದೇವತಾಸಮೂಹವನ್ನೆಲ್ಲ ಸೃಷ್ಟಿಸುತ್ತೇನೆ" ಎಂದು ಹೇಳಿದ ಕ್ಷಣವೇ ಬೃಹಸ್ಪತಿ ಯಕ್ಷರು ಕಿನ್ನರರು ನಡುಗುತ್ತ ಬ್ರಹ್ಮನ ಬಳಿ ಹೋಗಿ ಹೇಳಿಕೊಂಡು

ಅವನೊಡನೆಯೇ ವಿಶ್ವಾಮಿತ್ರನಿದ್ದೆಡೆಗೆ ಬಂದು ಪರಿಪರಿಯಾಗಿ ಸ್ತುತಿಗೈದರು. ಆದರೂ ಋಷಿಯ ಕೋಪ ತಗ್ಗದಿರಲು ಬ್ರಹ್ಮನು, "ತಾಪಸವರ್ಯನೇ, ಆರ್ತಜನರೊಡೆಯನೇ, ಲಾಲಿಸು, ನಿನಗೆ ಒಂದು ಉಪಾಯವನ್ನು ಸೂಚಿಸುತ್ತೇನೆ, ಶಾಂತನಾಗಿ ಕೇಳು: ಈ ರಾಜನು ಗುರುವಿನ ಶಾಪಕ್ಕೊಳಗಾದವನು, ಹೀಗಾಗಿ ಅವನು ಸಶರೀರಿಯಾಗಿ ಸ್ವರ್ಗಕ್ಕೆ ಬರುವುದು ಸಾಧ್ಯವಿಲ್ಲ, ಎಲೈ ತಪೋಧನನೇ, ಇದು ನಿನಗೆ ತಿಳಿಯದುದೇ?" ಎಂದು ಕೇಳಿದ. ಆಗ ವಿಶ್ವಾಮಿತ್ರನು, "ಈ ರಾಜನಿಗೆ ನಾನು ಮಾತು ಕೊಟ್ಟಿದ್ದೇನೆ, ನಾನು ಸುಳ್ಳು ಹೇಳಲಾರೆ, ಆದ್ದರಿಂದ ಬೇರೊಂದು ಸ್ವರ್ಗವನ್ನು ನಿರ್ಮಿಸುವುದನ್ನು ನಾನು ನಿಲ್ಲಿಸಲಾರೆ" ಎನ್ನಲು, ಸರಸಿಜೋದ್ಭವನು ಮತ್ತಷ್ಟು ಮೃದುಮಾತುಗಳಿಂದ, "ಕೃತಕೃತ್ಯನೇ, ಸತ್ಕೀರ್ತಿವಂತನೇ, ನೀನು ಸೃಷ್ಟಿಸಿರುವ ನಕ್ಷತ್ರತತಿಗಳೂ ಸಪ್ತಋಷಿಗಳೂ ಸ್ವರ್ಗವನ್ನು ಸೇರಿ ಅಮಿತ ಸುಖದಿಂದಿರುವ ರೀತಿಯಲ್ಲಿ ಈ ರಾಜನೊಡನೆ ನಿಯತಗತಿಯಲ್ಲಿ ಅಗ್ನಿಪಥದ ಹೊರವಲಯದಲ್ಲಿ ಈ ಲೋಕವಿರುವವರೆಗೂ ಶಾಶ್ವತವಾಗಿ ಸಂಚರಿಸಲಿ. ನಿನ್ನ ಈ ಚರಿತವು ಮೂರು ಲೋಕಗಳಲ್ಲಿಯೂ ಕೀರ್ತಿಯನ್ನು ಪಡೆಯಲಿ" ಎಂಬ ವರವನ್ನಿತ್ತ. ಆ ಮಾತಿಗೆ ವಿಶ್ವಾಮಿತ್ರನು ಶಾಂತಚಿತ್ತದಿಂದ ಒಡಂಬಟ್ಟು ಬ್ರಹ್ಮನನ್ನು ಕಳಿಸಿಕೊಟ್ಟ; ದೇವತೆಗಳು ತಮ್ಮ ನಿಲಯಗಳಿಗೆ ತೆರಳಿದರು. ಆಗ ಮುನಿಯು ಋಷಿಗಳನ್ನುದ್ದೇಶಿಸಿ, "ತಪಸ್ಸನ್ನು ಮಾಡುವ ಉದ್ದೇಶದಿಂದ ನಾನು ಈ ದಿಕ್ಕಿಗೆ ಬಂದೆ, ಆದರೆ ಇಲ್ಲಿ ನಾನಾ ಬಗೆಯ ವಿಘ್ನಗಳು ಒದಗಿವೆ; ಅದರಿಂದಾಗಿ ನಾನು ಪಶ್ಚಿಮದಿಕ್ಕಿಗೆ ತೆರಳುತ್ತೇನೆ" ಎಂದು ವೇಗವಾಗಿ ಸಾಗಿ ವಿಶಾಲವಾದ ಪುಷ್ಕರಿಣಿಯೊಂದರ ಬಳಿ ತಪಸ್ಸಿನಲ್ಲಿ ತೊಡಗಿದ.

ಆ ಹೊತ್ತಿಗೆ ಅಯೋಧ್ಯಾನಾಥನಾದ ಅಂಬರೀಷ ಮಹೀಪತಿಯು ಒಂದು ಯಾಗವನ್ನು ಮಾಡಲುಜ್ಜುಗಿಸಿದ. ಹಾಗೆ ಯಾಗವನ್ನು ಮಾಡುತ್ತಿರಲು ಯಮಿಗಳೊಡನೆ ಸೇರಿ ಇಂದ್ರನು ಯಜ್ಞಪಶುವನ್ನು ಕದ್ದುಕೊಂಡು ಹೋದ. ಪಶುವು ಇಲ್ಲದಿರುವುದನ್ನು ಕಂಡ ಭೂಸುರರು, "ಯಜ್ಞಪಶುವು ಕಾಣದಾಗಿದೆ. ಇದರಿಂದ ನಿನಗೆ ಹಾನಿಯಾಗದೆ ಇರದು, ಆದಕಾರಣ ಅ ಮನುಷ್ಯನೊಬ್ಬನನ್ನು ಕರೆತಂದು ಪ್ರಾಯಶ್ಚಿತ್ತವನ್ನೆಸಗಬೇಕು" ಎಂದರು. ಆ ಮಾತನ್ನು ಕೇಳಿದ ರಾಜನು ಚಿಂತಾಕ್ರಾಂತನಾಗಿ, "ಭೂಮಿಯಲ್ಲಿ ಯಾರು ತಾನೆ ಯಜ್ಞಪಶುವಾಗಲು ಮಗನನ್ನು ಬಿಟ್ಟುಕೊಡುತ್ತಾರೆ, ಶಿವ ಶಿವಾ, ಏನು ಮಾಡಲಿ" ಎಂದುಕೊಳ್ಳುತ್ತ ರಥವನ್ನೇರಿ ನರಪಶುವನ್ನು ಅರಸುತ್ತ ಹೊರಟ. ನಾನಾ ದೇಶಗಳ ಗ್ರಾಮ ನಗರಗಳನ್ನೆಲ್ಲ ಸಂಚರಿಸಿದ. ಕೊನೆಗೆ ಭೃಗುವಿನ ಮಗ ರುಚಿಕನ ಆಶ್ರಮಕ್ಕೆ ಬಂದು ಆ ಮುನೀಶ್ವರನಿಗೆ ವಂದಿಸಿ, "ಯಾಗದ ಪಶು ಕಳ್ಳತನವಾಗಲು ಸಾವಿರ ಗೋವುಗಳನ್ನಿತ್ತು ನರಪಶುವೊಂದನ್ನು ಕರೆತರಲು ಋಷಿಸಮೂಹವು ಆದೇಶಿಸಿತು. ಅದಕ್ಕಾಗಿ ಹುಡುಕಿಕೊಂಡು ತಮ್ಮ ಪಾದದರ್ಶನಕ್ಕೆಂದು ಬಂದಿದ್ದೇನೆ. ಆದರೆ ಯಾರು ತಾನೇ ತಮ್ಮ ಮಕ್ಕಳನ್ನು ಯಾಗಕ್ಕೆಂದು ಕೊಡುತ್ತಾರೆ, ಅದಕ್ಕೆ ನನಗೆ ಚಿಂತೆಯಾಗಿದೆ. ತಾವು ಬಲ್ಲವರು, ಸಹಸ್ರ ಗೋವುಗಳನ್ನು ಸ್ವೀಕರಿಸಿ ತಮ್ಮ ಮಕ್ಕಳಲ್ಲಿ ಒಬ್ಬನನ್ನು ಕೃಪೆಯಿಟ್ಟು ಕೊಟ್ಟರೆ ಸಂತೋಷದಿಂದ ಹಿಂದಿರುಗುತ್ತೇನೆ" ಎಂದು ಬಿನ್ನವಿಸಿಕೊಂಡ. ಆಗ ರುಚಿಕನು, ತಾನು ಹಿರಿಯ ಮಗನನ್ನು ಹಣದಾಸೆಗಾಗಿ ಬಿಟ್ಟುಕೊಡಲು ಸಿದ್ಧನಿಲ್ಲವೆಂದು ನುಡಿದರೆ,

ಅವನ ಪತ್ನಿಯು ಕೊನೆಯ ಮಗನಾದ ಶುನಕನು ತನಗೆ ಪ್ರಿಯನಾದವನಾದ ಕಾರಣ ತಾನು ಕೊಡಲಾರೆನೆಂದು ಹೇಳಿದಳು. ತಂದೆತಾಯಿಗಳ ಮಾತನ್ನು ಕೇಳಿಸಿಕೊಂಡ ಮಧ್ಯಮಪುತ್ರನಾದ ಶುನಶ್ಶೇಪನು ನಿಟ್ಟುಸಿರು ಬಿಡುತ್ತ, ಮಹಾರಾಜನು ತನ್ನನ್ನು ಕೊಳ್ಳಲು ಸಿದ್ಧನಿದ್ದರೆ ತಾನು ಬರಲು ಸಿದ್ಧವೆಂದು ನುಡಿದ. ಆ ಮಾತುಗಳನ್ನು ಕೇಳಿದ ಮಹಾರಾಜನು ತನ್ನ ಇಷ್ಟಾರ್ಥವು ಸಿದ್ಧಿಸಿದ ಕಾರಣದಿಂದ ಸಂತೋಷಗೊಂಡು ಸಹಸ್ರ ಗೋವುಗಳನ್ನು ಬುಧಶಿರೋಮಣಿಯಾದ ರುಚೀಕನಿಗೆ ನೀಡಿ ಶುನಶ್ಶೇಪನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಯಜ್ಞಶಾಲೆಯತ್ತ ಪಯಣ ಬೆಳೆಸಿದ.

ಹೀಗೆ ಬರುತ್ತಿರಲು ಶಿವನ ಮೂರನೆಯ ಕಣ್ಣಿನ ಹಾಗೆ ಸೂರ್ಯನು ಬಿರುಬಿಸಲನ್ನುಗುಳುತ್ತಿರಲು ಮಹಾರಾಜನು ನೀರಡಿಕೆಯಿಂದ ಒಂದು ಕೊಳದ ಬಳಿ ಬಂದು ನೆರಳಿನಲ್ಲಿ ವಿಶ್ರಮಿಸಿದ. ಶುನಶ್ಶೇಪನೂ ರಥದಿಂದ ಇಳಿದು ನೀರು ಕುಡಿದು ಬರುತ್ತಿರುವಾಗ ಸನಿಹದಲ್ಲಿಯೇ ಕೌಶಿಕನು ತಪಸ್ಸು ಮಾಡುತ್ತಿರುವ ವಿಷಯವನ್ನು ತಿಳಿದು ಹರ್ಷಗೊಂಡ. ವಿಶ್ವಾಮಿತ್ರನ ಬಳಿ ಬಂದು ಅವರ ಅಡಿಗಳಿಗೆರಗಿ ತನ್ನ ವೃತ್ತಾಂತವನ್ನೆಲ್ಲ ಸಂಕ್ಷಿಪ್ತವಾಗಿ ನಿರೂಪಿಸಿ, ಅಂಬರೀಷ ನೃಪಾಲನು ಯಜ್ಞೀಯ ಪಶುವಿಗೆಂದು ಹುಡುಕಿಕೊಂಡು ಬಂದಾಗ ತಂದೆಯು ಹಿರಿಯ ಮಗನನ್ನೂ, ತಾಯಿಯು ಕಿರಿಯ ಮಗನನ್ನೂ ಬಿಟ್ಟು ಕೊಡುವುದಿಲ್ಲವೆಂದು ಹೇಳಿದರು, ಅದರಿಂದಾಗಿ ಮಧ್ಯದ ಮಗನಾದ ತಾನು ಸಾವಿರ ಗೋವುಗಳಿಗೆ ವಿಕ್ರಯಗೊಂಡ ವಿಷಯವನ್ನು ಅರುಹಿದ. "ಯತಿವರ್ಯರೇ, ನನಗೆ ತಂದೆ ತಾಯಿ ದಾಯಾದಿಗಳಾರೂ ಇಲ್ಲದಂತಾಗಿದ್ದಾರೆ, ಸೋದರ ಮಾವನಾದ ತಾವೇ ಈಗ ನನಗೆ ಗತಿ. ರಾಜನ ಯಾಗವು ಪೂರ್ಣವಾಗುವಂತೆ ಮಾಡಿ, ನನಗೆ ದೀರ್ಘಾಯುಸ್ಸು ಉಂಟಾಗುವಂತೆ ಅನುಗ್ರಹಿಸಬೇಕು" ಎಂದು ರುಚೀಕನ ಮಗ ಬೇಡಿಕೊಂಡ. ಆ ಮಾತುಗಳನ್ನು ಕೇಳಿದ ದಯಾಭಾಗನಾದ ವಿಶ್ವಾಮಿತ್ರ ಮುನಿಯು, "ಮಗುವೇ ಹೆದರಬೇಡ, ನಿನಗೆ ಬೇಗನೇ ಇದರಿಂದ ಬಿಡುಗಡೆ ದೊರೆಯುತ್ತದೆ" ಎಂದು ಅಭಯವನ್ನಿತ್ತ. ಆನಂತರ ತನ್ನ ಮಕ್ಕಳನ್ನು ಕರೆದು, "ಧರ್ಮಶೀಲರಿರಾ, ಮೂರೂ ಲೋಕಗಳಲ್ಲಿ ತಾಯ್ತಂದೆಯರು ಮಕ್ಕಳ ಅಭ್ಯುದಯವನ್ನು ಬಯಸುವುದು ಮಾತ್ರವಲ್ಲ, ಅವರಿಗೆ ಬೇಕಾದುದನ್ನು ಒದಗಿಸುತ್ತಾರೆ. ಪಿತೃಗಳು ಪರಲೋಕದ ಹಿತದಿಂದ ಮಕ್ಕಳನ್ನು ಬಯಸುತ್ತಾರೆ; ಈ ಮುನಿಪುತ್ರನು ನನ್ನ ಮೊರೆವೋಗಿದ್ದಾನೆ, ಅವನ ಜೀವವನ್ನು ಕಾಯ್ದು ಪುಣ್ಯ ಸಂಪಾದಿಸಬೇಕು. ರಾಜನು ಮಾಡುವ ಯಾಗಕ್ಕೆ ಹೋಗಿ ದೇವತೆಗಳನ್ನು ತೃಪ್ತಿಪಡಿಸಿರಿ" ಎಂದು ಆದೇಶಿಸಿದ.

ತಂದೆಯ ಈ ಮಾತುಗಳನ್ನು ಕೇಳಿ ಮಕ್ಕಳು ಕೋಪಾವಿಷ್ಟರಾದರು; ಬೇರೆಯವರನ್ನು ವಂಚಿಸಿ ಕಷ್ಟದಲ್ಲಿರುವವರನ್ನು ಕಾಯಬೇಕಾದುದು ಸರಿಯೇ. ಆದರೆ ತನ್ನ ಮಕ್ಕಳನ್ನೇ ಬಲಿಯಿತ್ತು ಬೇರೆಯವರ ಮಕ್ಕಳನ್ನು ಕಾಪಾಡುವ ಪರಿಯನ್ನು ನಾವು ಕೇಳಿಲ್ಲ. ಇಂತಹ ಕೆಲಸವನ್ನು ಜ್ಞಾನಿಗಳು ಮೆಚ್ಚುತ್ತಾರೆಯೇ? ನಾಯಿಮಾಂಸವನ್ನು ತಿನ್ನುವುದು ಯೋಗ್ಯವೇ? ಎಂದು ವಾದಿಸಿದರು. ಇದರಿಂದ ವಿಶ್ವಾಮಿತ್ರನು ಕೆರಳಿದ; ಮಕ್ಕಳಿಗೆ ಶಾಪವಿತ್ತ: "ಎಲೈ ಧರ್ಮವರ್ಜಿತ ದುರಾತ್ಮರೇ, ನನ್ನ ಮಾತು ಘನವಾದುದು. ಅದನ್ನು ಹಗುರವಾಗಿ

ಭಾವಿಸಿ ಮಾರುತ್ತರವಿತ್ತಿರಿ. ವಸಿಷ್ಠರ ಮಕ್ಕಳಂತೆ ಸದಾ ನಾಯಿಮಾಂಸವನ್ನು ತಿನ್ನುತ್ತ ಹತ್ತು ಸಾವಿರ ವರ್ಷಗಳ ಕಾಲ ಬಿದ್ದಿರಿ." ಅನಂತರ ಶುನಃಶೇಪನಿಗೆ ಪ್ರೀತಿಯಿಂದ ರಕ್ಷೆಯನ್ನು ಕಟ್ಟಿ, ರಹಸ್ಯವಾಗಿ ಅವನಿಗೆ ಎರಡು ಮಂತ್ರಗಳನ್ನು ಉಪದೇಶಿಸಿ, ರಾಜನು ಮಾಡುವ ಯಜ್ಞಕ್ಕೆ ಹೋಗಿ ಈ ಮಂತ್ರಗಳನ್ನು ಪಠಿಸಿದರೆ ಎಲ್ಲ ಇಷ್ಟಾರ್ಥಗಳು ನೆರವೇರುತ್ತವೆ ಎಂದು ತಿಳಿಯ ಹೇಳಿ ಕಳಿಸಿಕೊಟ್ಟ. ಗುರುವಿನ ಆಜ್ಞೆಯನ್ನು ತಲೆಯಲ್ಲಿ ಹೊತ್ತು ಶುನಃಶ್ಯೇಪನು ಅಂಬರೀಷನ ಬಳಿ ಬಂದು ಅವನೊಡನೆ ರಥವೇರಿ ಯಜ್ಞಶಾಲೆಗೆ ಬಂದ. ತಾನು ಬಲಿಪಶುವಾಗಲು ಸಿದ್ಧನಿರುವೆನೆಂದು ಶುನಃಶ್ಯೇಪನು ಋತ್ವಿಕ್ಕುಗಳೊಡನೆ ತನ್ನ ನಿರ್ಧಾರವನ್ನು ಹೇಳಿದ. ಆಗ ದ್ವಿಜನು ಶಾಸ್ತ್ರೋಕ್ತವಾಗಿ ಪಶುಪೂಜೆಯನ್ನು ನೆರವೇರಿಸಿ, ಅವನಿಗೆ ಕೆಂಪು ಬಟ್ಟೆಗಳನ್ನುಡಿಸಿ ಅವನನ್ನು ಬಲಿಗಂಬದ ಬಳಿ ಕರೆತಂದ. ತನ್ನ ಸುತ್ತ ರಾಜರು ನಿಂತಿರಲಾಗಿ, ಬಾಲಕನು ಗುರು ಹೇಳಿಕೊಟ್ಟಿದ್ದ ಎರಡೂ ಮಂತ್ರಗಳನ್ನು ರಹಸ್ಯದಲ್ಲಿ ಮನಃಪೂರ್ವಕವಾಗಿ ಭಕ್ತಿಯಿಂದ ಜಪಿಸಿದ; ಆಗ ಇಂದ್ರನು ಲಗುಬಗೆಯಿಂದ ಬಂದು ಶುನಃಶ್ಯೇಪನಿಗೆ ದೀರ್ಘಾಯುವನ್ನು ಅನುಗ್ರಹಿಸಿದ. ಅನಂತರ ಅಂಬರೀಷನ ಕಡೆ ತಿರುಗಿ, "ಈ ಯಜ್ಞವನ್ನು ಮಾಡಿ ನೀನು ಧನ್ಯನಾಗಿದ್ದೀಯೆ, ನಮಗೆ ತೃಪ್ತಿಯಾಗಿದೆ, ಈ ಭಾರ್ಗವನ ಮಗನಾದ ಈ ಹುಡುಗನನ್ನು ಹಿಂದಕ್ಕೆ ಕಳಿಸು" ಎಂದು ಹೇಳಿ ಹೋದ.

ಇತ್ತ ವಿಶ್ವಾಮಿತ್ರನು ಸಾವಿರ ವರ್ಷಗಳ ಕಾಲ ಅತ್ಯಂತ ಘೋರ ತಪಸ್ಸನ್ನು ಮಾಡಿದ, ಅದರಿಂದ ಪ್ರೀತನಾದ ಬ್ರಹ್ಮನು ಇಂದ್ರಾದಿಗಳೊಡನೆ ಅವನ ಬಳಿ ಬಂದು, "ನೀನು ಈ ತಪಸ್ಸಿನಿಂದ ಋಷಿಯಾಗಿದ್ದೀಯೆ" ಎಂದು ಅನುಗ್ರಹಿಸಿ ತಮ್ಮ ನಿಲಯಗಳಿಗೆ ಹಿಂದಿರುಗಿದರು. ಇದರಿಂದ ತೃಪ್ತನಾಗದೆ ವಿಶ್ವಾಮಿತ್ರನು ಬೇಸರದಿಂದ ಪುಷ್ಕರದ ತೀರದಲ್ಲಿ ಮತ್ತೆ ತಪಸ್ಸಿನಲ್ಲಿ ತೊಡಗಿದ. ಈ ಮಧ್ಯೆ ಮೇನಕೆಯು ಸ್ನಾನ ಮಾಡುವ ಬಯಕೆಯಿಂದ ಆ ನದಿಗೆ ಬಂದಳು. ಅವಳ ಕುಡಿನೋಟವು ಆಕಾಶದಲ್ಲಿ ಮಿಂಚಿನಂತೆ ಸಂಚರಿಸಿತು; ಅವಳ ಚೆಲುವು ದಿಕ್ತಟಗಳಿಗೆ ಹಬ್ಬಿತು; ಅವಳ ಕೋಮಲ ಹೆಜ್ಜೆಗಳನ್ನು ಕಂಡು ಹಂಸೆಗಳು ನಾಚಿದವು; ಅವಳ ತುಟಿಗಳ ಕೆಂಪಿನಿಂದಾಗಿ ಕಾಡಿಗೆ ಕಾಡೇ ಚಿಗುರಿದಂತೆ ಗೋಚರಿಸಿತು. ಇಂತಹ ಜಗನ್ಮೋಹನಾಸ್ಪದಳಾದ ತರುಣಿಯು ಬರಲು ಮುನಿವರನು ಕಾಮಬಾಣಗಳ ಹೊಡೆತಕ್ಕೆ ಪಕ್ಕಾದ. ಮಧುರವಾದ ಮಾತುಗಳಿಂದ ಕೂಡಿ, "ನೀನು ಅಂಗಜನ ಆನೆ, ಸಂಜೀವಿನಿ, ಕಾಮನ ಚಿಂತಾಮಣಿ, ಮಧುರಭಾಷಿಣಿ, ನನ್ನ ಮೇಲೆ ದಯೆ ತೋರಿಸಿ ನನ್ನೊಡನೆ ಕಾಮಕೇಳಿಯಲ್ಲಿ ಸಹಕರಿಸು" ಎಂದು ಕೇಳಿಕೊಂಡ. ಆಗ ಮೇನಕೆಯು ನಗುತ್ತ, "ಇಂದ್ರ ಕುಬೇರ ಚಂದ್ರ ಮುಂತಾದ ದೇವತೆಗಳ ತೋಳತೆಕ್ಕೆಯಲ್ಲಿ ರತಿಸುಖವನ್ನು ಅನುಭವಿಸುವ ನನಗೆ ಮಳೆಯಲ್ಲಿ ನೆನೆದು ಬಿಸಿಲಲ್ಲಿ ಒಣಗಿ ಸಣಕಲು ದೇಹವನ್ನು ಹೊಂದಿರುವ ಮುನಿಯ ಬಗ್ಗೆ ಆಕರ್ಷಣೆ ಎಂತು ಉಂಟಾಗಬಲ್ಲುದು? ಕಲ್ಲುಸಕ್ಕರೆಯನ್ನು ಸವಿದವರು ಯಾರು ತಾನೆ ಹಿಂಡಿಯನ್ನು ಬಯಸುತ್ತಾರೆ? ಮಲ್ಲಿಗೆಯ ಪರಿಮಳವನ್ನುಂಬ ದುಂಬಿಯು ಹೊಂಗೆಯಲ್ಲಿ ಅನುರಕ್ತಗೊಳ್ಳುವುದು ಸಾಧ್ಯವೇ? ಲೋಲಲೋಚನೆಯರ ಅತಿಶಯವನ್ನು ಉಪವಾಸವ್ರತಿಗಳು ತಿಳಿಯಬಲ್ಲರೇ? ನಾನು ನಿನ್ನ ಪಾದಸೇವೆಗೆ ಹೇಗೆ ತಾನೇ ಸಿದ್ಧಳಾಗಲಿ?" ಎಂದಳು. ಆ ಮಾತುಗಳನ್ನು ಕೇಳಿ

ಮುನಿಪತಿಯು ನಗುತ್ತ, "ನೀರಸ ಆಕಾರವನ್ನುಳ್ಳ ಕಸ್ತೂರಿಯು ಜಗತ್ತಿನ ರಸಿಕರನ್ನು ಸೊಗಸುಗೊಳಿಸುವುದಿಲ್ಲವೇ? ಹೆಣ್ಣುಗಳ ಬಯಕೆಯನ್ನು ಸಲ್ಲಿಸಲು ದೇಹಸೌಂದರ್ಯ ಮುಖ್ಯವೇ, ಕಲಾಕೌಶಲವನ್ನು ಬಲ್ಲ ಯಾರಾದರೂ ಚೆಲುವೆಯನ್ನು ಮೆಚ್ಚಿಸಬಲ್ಲ. ಇದೇನೂ ನಿನಗೆ ತಿಳಿಯದುದೇ?" ಎಂದು ವಾದಿಸಿದ. ಇದರಿಂದ ಸಂತಸಗೊಂಡ ಮೇನಕೆಯು ವಿಶ್ವಾಮಿತ್ರನೊಡನೆ ಒಲವಿನಾಟದಲ್ಲಿ ಸೇರಿದಳು.

ಮತ್ತಕಾಶಿನಿಯ ಜೊತೆಯಲ್ಲಿ ಮುನಿರನ್ನನು ಸುಖದ ಆಳವನ್ನನುಭವಿಸಿದ; ಒಬ್ಬರನ್ನೊಬ್ಬರು ಬಿಟ್ಟಿರದೆ ಹತ್ತು ವರ್ಷಗಳ ಕಾಲವನ್ನು ಒಂದು ದಿನದಂತೆ ಭೋಗದಲ್ಲಿ ಕಳೆದರು. ಹೀಗಿರಲು, ಒಮ್ಮೆ ಒಬ್ಬನೇ ಇರುವಾಗ ಮುನಿಯು ಚಿತ್ತದ ಅನುತಾಪದಿಂದ ಕುದ್ದುಹೋದ; ಈಗ ನಡೆದುದು ಇಂದ್ರನ ಕುಚೋದ್ಯದಿಂದ ಎಂದು ತಿಳಿದು ಕೋಪದಿಂದ ಕುಳಿತಿದ್ದ. ಅವನ ಭಂಗಿಯನ್ನು ನೋಡಿದ ಮೇನಕೆ ಭೀತಿಗೊಂಡಳು; ಕೈಮುಗಿದುಕೊಂಡು ಕಾತರದಲ್ಲಿದ್ದಳು. ಅವಳ ದೈನ್ಯತೆಯನ್ನು ಕಂಡ ಋಷಿಯು ಮೃದೂಕ್ತಿಗಳಿಂದ ಅವಳನ್ನು ಸಮಾಧಾನ ಮಾಡಿ ಕಳಿಸಿಕೊಟ್ಟ. ಅನಂತರ ರೋಷದಿಂದ ಮೇಲೆದ್ದು ಉತ್ತರ ದಿಕ್ಕಿಗೆ ನಡೆದ; ಕೌಶಿಕೀ ನದಿಯ ತೀರದಲ್ಲಿ ನಿಂತು ಭೂತನಾಥನ ರೀತಿಯಲ್ಲಿ ಕಠಿಣ ತಪಸ್ಸಿನಲ್ಲಿ ತೊಡಗಿದ. ಇದನ್ನು ಕಂಡ ದೇವತತಿಗೆ ಭಯವುಂಟಾಯಿತು. ಬೇಗನೇ ಅವರೆಲ್ಲ ಇಂದ್ರನ ನೃತೃತ್ವದಲ್ಲಿ ಒಟ್ಟಾಗಿ ಬ್ರಹ್ಮನ ಬಳಿ ಬಂದು ಪೊಡಮಟ್ಟು ಬಿನ್ನಪಗೈದರು. ಆಗ ಅವನು ದೇವತೆಗಳೊಡನೆ ಕೌಶಿಕನ ಬಳಿ ಬಂದು ಈ ರೀತಿ ಹೇಳಿದ: "ನಿನ್ನ ಕಟ್ಟುಗ್ರ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ, ವತ್ಸ, ನೀನು ಬೇಡಿದರೆ ಮಹರ್ಷಿತ್ವವನ್ನು ನಿನಗೆ ಕೊಡುತ್ತೇನೆ" ಎಂದು ಆಶ್ವಾಸನೆಯಿತ್ತ. ಆಗ ವಿಶ್ವಾಮಿತ್ರನು, "ತಂದೆಯೇ, ನೀನು ನನ್ನ ತಪಸ್ಸಿನಿಂದ ತೃಪ್ತನಾಗಿದ್ದರೆ ಜಗತ್ತು ಮೆಚ್ಚುವ ಹಾಗೆ ನನ್ನನ್ನು ಬ್ರಹ್ಮರ್ಷಿಗಳಲ್ಲಿ ಖ್ಯಾತನನ್ನಾಗಿ ಮಾಡು" ಎಂದು ಬಿನ್ನವಿಸಿಕೊಂಡ. ಆಗ ಬ್ರಹ್ಮದೇವನು, "ಬಿಸಿಲುಚಳಿಗಳನ್ನು ಸಹಿಸಿಕೊಂಡು ನೀನು ಎಲ್ಲ ಭೀತಿಯನ್ನೂ ತೊರೆದು ಕೆಲವು ಕಾಲ ಅಕ್ಷಜಯವನ್ನು ಆಚರಿಸು" ಎಂದು ಸಲಹೆಯಿತ್ತು ಹೋದ. ಅದರಂತೆ ವಿಶ್ವಾಮಿತ್ರನು ಮತ್ತೆ ಉಗ್ರ ತಪಸ್ಸಿನಲ್ಲಿ ತೊಡಗಿದ.

ಚಳಿಗಾಲದಲ್ಲಿ ನೀರಲ್ಲಿ ನಿಂತು, ಮಳೆಗಾಲದಲ್ಲಿ ಆಗಸವನ್ನೇ ಆಶ್ರಯಿಸಿ, ಬೇಸಗೆಯಲ್ಲಿ ಪಂಚಾಗ್ನಿಗಳ ನಡುವೆ ನಿಂತುಕೊಂಡು, ಕೇವಲ ಗಾಳಿಯನ್ನೇ ಆಹಾರವಾಗಿ ಸೇವಿಸುತ್ತ, ಕೈಗಳನ್ನು ಮೇಲಕ್ಕೆತ್ತಿಕೊಂಡು, ತನ್ನ ಬಗ್ಗೆ ಅಭಿಮಾನವನ್ನು ನೀಗಿಕೊಂಡು ದಾರುಣ ತಪಸ್ಸಿನಲ್ಲಿ ಮಗ್ನನಾದ ವಿಶ್ವಾಮಿತ್ರನನ್ನು ಕಂಡು ದೇವೇಂದ್ರನು ದೇವತೆಗಳ ಜೊತೆ ಸಮಾಲೋಚಿಸಿ, ಕೊನೆಗೆ ಮದಗಜಗಮನೆಯಾದ ರಂಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ, "ಹಿಮಶೈಲದ ತಪ್ಪಲಿನ ಕೌಶಿನೀ ನದಿಯ ತೀರದಲ್ಲಿ ಕಠಿಣ ತಪಸ್ಸಿನಲ್ಲಿ ತೊಡಗಿರುವ ಗಾಧಿಸುತನನನ್ನು ನಿನ್ನ ಚೆಲುವಿನಿಂದಲೂ ಬೆಡಗುಬಿನ್ನಾಣಗಳಿಂದಲೂ ಮೋಹಪರವಶನನ್ನಾಗಿಸು, ಇದು ದೇವತೆಗಳ ಕೆಲಸ; ನಿನ್ನ ಸಹಾಯಕ್ಕಾಗಿ ಮನ್ಮಥ ಚಂದ್ರ, ಗಿಳಿ, ಕೋಗಿಲೆ ಹಾಗೂ ತಂಗಾಳಿಗಳಿರುತ್ತಾರೆ" ಎಂದು ಸೂಚಿಸಿದ. ಆಗ ರಂಭೆಯು, "ದೇವ, ಶಿವನ ಹಣೆಗಣ್ಣಿನಂತೆ ಕ್ರೋಧಿಯಾದ ಆ ಮುನಿಯು ಹೆಣ್ಣನ್ನು ಕಂಡಾಕ್ಷಣ ಶಪಿಸದೆ ಇರನು, ನಾವು ಪಡುವ ಶ್ರಮವೆಲ್ಲ ವ್ಯರ್ಥ, ನಮಗೆ ದೊರೆಯುವುದು

ಬರಿಯ ಆಯಾಸವೇ ಹೊರತು ಬೇರೆಯಲ್ಲ" ಎಂದು ಅರುಹಿದಳು. ಆಗ ಇಂದ್ರನು, "ರಂಭೆಯೇ, ನೀನು ಭಯಪಡಬೇಡ, ನನ್ನ ಆಜ್ಞೆಗೆ ಅನುಗುಣವಾಗಿ ನಡೆದುಕೊಂಡರೆ ನಿನಗೆ ಯಾವ ತೊಂದರೆಯುಂಟಾದರೂ ನಾನದನ್ನು ಪರಿಹರಿಸುತ್ತೇನೆ" ಎಂದು ಅಭಯವನ್ನಿತ್ತ. ಇದರಿಂದ ಉತ್ತೇಜಿತಳಾಗಿ ರಂಭೆಯು ಅಮರಪತಿಯ ಆಜ್ಞೆಯನ್ನು ಪರಿಪಾಲಿಸಲು ಸಿದ್ಧಳಾದಳು.

ನಲಿಯುವ ನವಿಲುಗಳು, ಅಂಚೆಕೊಂಚೆಗಳು, ದುಂಬಿವಿಂಡು, ಗಿಳಿಗಳು ಇವುಗಳೊಡನೆ ಸುಳಿಯುವ ಮಂದಾನಿಲ, ಹೊಳೆಯುವ ಚಂದ್ರ ಮುಂತಾದ ಕಾಮನ ಪಡೆಯೊಡನೆ ರಂಭೆಯು ವಿಶ್ವಾಮಿತ್ರ ಮುನಿಯು ತಪಸ್ಸಿನಲ್ಲಿ ನಿಂತಿದ್ದ ತಾಣಕ್ಕೆ ಬಂದಳು. ತನ್ನ ಮಧುರ ಗಾಯನ, ಬೆಡಗುಬಿನ್ನಾಣಗಳಿಂದ ಕಲ್ಲುಮರಗಳೂ ಮೋಹವಶವಾಗುವಂತೆ ನಾನಾ ವಿಧವಾಗಿ ಆಕರ್ಷಣೆಗಳನ್ನೊಡ್ಡಿ ಸುಳಿದಾಡಿದಳು. ಇದರಿಂದಾಗಿ ಎಂಟು ದಿಕ್ಕುಗಳೂ ಪರಿಮಳಭರಿತವಾಯಿತು, ನಾನಾ ಪರಿಯ ಗೀತಮಾಧುರ್ಯದಿಂದ ವಿಶ್ವಾಮಿತ್ರ ಹೃದಯಕಮಲವು ಅರಳಿತು. ಆದರೆ ಅವುಗಳೊಡನೆ ಬರುತ್ತಿರುವ ದೇವವನಿತೆಯನ್ನು ಕಂಡು ಇದೆಲ್ಲವೂ ಇಂದ್ರನ ಕುತ್ಸಿತ ಎಂದು ಅರಿತು ಉರಿಯುಗುಳುವ ತನ್ನ ಕಣ್ಣುಗಳಿಂದ ಬಿಡುಗಣ್ಣ ಅಬಲೆಯನ್ನು ನೋಡುತ್ತ, "ಇಂದ್ರಿಯಗಳನ್ನು ನಿಗ್ರಹಿಸಿ, ಹಸಿವು ನೀರಡಿಕೆಗಳನ್ನು ಅಡಗಿಸಿಕೊಂಡು, ನಿರಾಹಾರನಾಗಿ ತಪಸ್ಸಿನಲ್ಲಿ ತೊಡಗಿರುವ ಮುನಿಯನ್ನು ಸೆಳೆಯಲು ಬಂದಿರುವ ದುರ್ಭಗೆ, ದುರಾಚಾರಯುತಳಾದ ರಂಭೆಯೇ, ನೀನು ಹತ್ತುಸಾವಿರ ವರ್ಷಗಳ ಕಾಲ ಕಲ್ಲುಬಂಡೆಯಾಗಿ ಬಿದ್ದಿರು, ಆನಂತರ ಒಬ್ಬ ಬ್ರಾಹಣನು ನಿನ್ನನ್ನು ಉದ್ಧರಿಸುವಂತಾಗಲಿ" ಎಂದು ಶಾಪವನ್ನಿತ್ತ.

ನನ್ನ ಮನದನ್ನೆಯೇ ಮುಂದಿನ ಕತೆಯನ್ನು ಕೇಳು. ಈ ಪರಿಯಲ್ಲಿ ವಿಶ್ವಾಮಿತ್ರನು ಕೋಪಗರಿಷ್ಠನಾಗಿ ರಂಭೆಯನ್ನು ಶಪಿಸಲು ಕಾಮನೇ ಮುಂತಾದ ಇತರರೆಲ್ಲರೂ ಹೆದರಿಕೆಯಿಂದ ಕೂಡಿ ಮುನಿಯ ಕಣ್ಣಿಗೆ ಬೀಳದಂತೆ ಮರೆಯಾದರು. ಅಷ್ಟರಲ್ಲಿ, 'ಕೋಪಗೊಂಡು ತಾನೇ ತಪೋವಿಘ್ನವನ್ನು ಮಾಡಿಕೊಂಡೆನಲ್ಲವೇ, ರೋಷವು ಬಂಧನಕಾರಿಯೇ ಹೊರತು ಯಾರಿಗೂ ಒಳಿತನ್ನು ಮಾಡಲಾರದು ಶಿವ ಶಿವಾ' ಎಂದು ಮುನಿಯು ತನ್ನಲ್ಲಿ ತಾನು ಸಮಾಧಾನಗೊಂಡ. 'ಕೋಪವೆಂಬುದು ಎಲ್ಲ ಪಾಪಗಳ ತವರುಮನೆ, ತಾಪಗಳ ಆವಾಸಸ್ಥಾನ, ಎಲ್ಲ ಹಿಂಸೆಗಳ ಆಗರ, ಅದರಿಂದಾಗಿ ಅನರ್ಥಗಳುಂಟಾಗುವುದು ನಿಶ್ಚಿತ. ಹೀಗಾಗಿ ನಾನು ಕೋಪಸಿಕೊಳ್ಳದೆ ನನ್ನ ಶ್ವಾಸವನ್ನು ಬಂಧಿಸುತ್ತೇನೆ, ಶ್ರೀಮನ್ನಾರಾಯಣನ ಪಾದದಾಣೆ, ನನಗೆ ಬ್ರಾಹ್ಮಣ್ಯ ದೊರಕುವವರೆಗೂ ನೂರು ವರ್ಷಗಳಿಗೊಮ್ಮೆ ಉಸಿರುಬಿಡುತ್ತೇನೆ' ಎಂದು ದೃಢನಿಶ್ಚಯ ಮಾಡಿಕೊಂಡ. ಉಸಿರು ಬಿಡದೆ, ಮಾತನಾಡದೆ, ಊಟ ಮಾಡದೆ, ನಿದ್ರಿಸದೆ, ಹಸಿವು ಬಾಯಾರಿಕೆಗಳನ್ನು ಗಮನಿಸದೆ ಹತ್ತು ಸಾವಿರ ವರುಷಗಳ ಕಾಲ ತಪಸ್ಸನ್ನೆಸಗುತ್ತೇನೆ ಎಂದು ವಿಶ್ವಾಮಿತ್ರ ಮುನಿಯು ತನ್ನಲ್ಲಿಯೇ ಶಪಥ ಮಾಡಿ ಮೂಡಣ ದಿಕ್ಕಿನಲ್ಲಿ ಘೋರತರವಾದ ತಪಸ್ಸನ್ನಾಚರಿಸಿ ನಿರಂತರವಾಗಿ ನಡೆಸಿದ ಪ್ರಯತ್ನ ಅದ್ಭುತ! ಬರುವ ಎಲ್ಲ ಬಗೆಯ ವಿಘ್ನಗಳನ್ನೂ ಲೆಕ್ಕಿಸದೆ, ಹತ್ತು ಸಾವಿರ ವರ್ಷಗಳಷ್ಟು ದೀರ್ಘಾವಧಿ ತಪಸ್ಸನ್ನು ಮಾಡಿ

ತನ್ನ ಪ್ರತಿಜ್ಞೆಯನ್ನು ವಿಶ್ವಾಮಿತ್ರ ಪೂರೈಸಿದ. ಆನಂತರ ಪಾರಣೆಗೆಂದು ಒಂದು ಹಿಡಿ ಅಕ್ಕಿಯ ಅನ್ನವನ್ನು ಮಾಡಿ ಊಟಮಾಡಬೇಕೆಂದು ಯೋಚಿಸುತ್ತಿರುವಷ್ಟರಲ್ಲಿಯೇ ಇಂದ್ರನು ಬ್ರಾಹ್ಮಣನ ವೇಷದಲ್ಲಿ ಬಂದು ಭಿಕ್ಷೆ ಯಾಚಿಸಿದ; ವಿಶ್ವಾಮಿತ್ರನು ಒಂದಿನಿತೂ ಹಿಂದೆ ಮುಂದೆ ನೋಡದೆ ಮಾಡಿಕೊಂಡಿದ್ದ ಅನ್ನವನ್ನು ಆ ಬ್ರಾಹ್ಮಣನಿಗೆ ಬಡಿಸಿ ಕೃತಾರ್ಥನಾಗಿ ತಾನು ಉಪವಾಸವಿದ್ದ.

ಆ ಬಳಿಕ ಸುಮ್ಮನಾಗಲಿಲ್ಲ, ಉಚ್ಛ್ವಾಸನಿಶ್ವಾಸಗಳನ್ನು ನಿರೋಧಿಸುತ್ತ ಜ್ಞಾನನಿಧಿಯಾಗಿ ತಪಸ್ಸನ್ನು ಮುಂದುವರಿಸಿದ. ಆಗ ಅವನ ತಲೆಯಲ್ಲಿ ಹೊಗೆಯೊಡನೆ ಬೆಂಕಿಯು ಕಾಣಿಸಿಕೊಂಡು ಹದಿನಾಲ್ಕು ಲೋಕಗಳನ್ನೂ ನಡುಗಿಸಿಬಿಟ್ಟಿತು. ಉರಿಯ ಬಗೆಯನ್ನು ನೋಡಿ ದೇವತತಿಯು ತಲ್ಲಣಿಸಿತು. ವಿಶ್ವಾಮಿತ್ರನ ಉರುತರ ತಪಸ್ಸಿನ ತೇಜಸ್ಸಿನಿಂದಾಗಿ ಸೂರ್ಯ ದೇವತೆಗಳು ಕಿನ್ನರರು ಉರಗರು ರಾಕ್ಷಸರು ಭಯದಿಂದ ತತ್ತರಿಸಿಬಿಟ್ಟರು; ಎಲ್ಲರೂ ಖಿನ್ನರಾಗಿ ಬ್ರಹ್ಮನೆಡಗೆ ಧಾವಿಸಿ ಭಕ್ತಿಭರಿತರಾಗಿ ನಮಸ್ಕರಿಸಿದರು. “ದೇವ, ನಾವು ಮಾಡುವ ಯಾವುದೇ ಅಂತರಾಯಗಳನ್ನೂ ಗಣಿಸದೆ ಕೌಶಿಕನು ಮಾಡುತ್ತಿರುವ ಕ್ರೂರ ತಪಸ್ಸು ಅತ್ಯಂತ ಪರಿಪೂರ್ಣವಾಗಿ ಸಾಗಿದೆ. ಆತನ ಮನೋಭೀಷ್ಟವನ್ನು ನೀನು ಸಲ್ಲಿಸದಿದ್ದರೆ ಸೃಷ್ಟಿಸಮಸ್ತವೂ ನಾಶವಾಗಿ ಬಿಡುವುದರಲ್ಲಿ ಸಂಶಯವಿಲ್ಲ. ಅವನ ತಪೋಗ್ನಿಯಿಂದ ಎಂಟು ದಿಕ್ಕುಗಳೂ ವ್ಯಾಕುಲಗೊಂಡಿವೆ, ಸಾಗರಗಳು ಕುದಿಯತೊಡಗಿವೆ, ಸ್ವರ್ಗವು ನಡುಗುತ್ತಿದೆ, ಬೆಟ್ಟಗಳು ಸಿಡಿಯುತ್ತಿವೆ, ಭೂಮಿ ಕಂಪಿಸುತ್ತಿದೆ, ಲೋಕವು ಬೊಂಬೆಯಂತೆ ನಿಶ್ಚೇಷ್ಟಿತವಾಗಿದೆ, ನಕ್ಷತ್ರಗಳು ತಮ್ಮ ಪ್ರಭೆಯನ್ನು ಕಳೆದುಕೊಂಡಿವೆ, ವಾಯುವು ಭಯದಿಂದ ಅಡಗಿಕೊಂಡು ಬಿಟ್ಟಿದ್ದಾನೆ. ಮೂರು ಲೋಕಗಳನ್ನೂ ಕಾಪಾಡುವ ಸಲುವಾಗಿ, ಹೇ ಬ್ರಹ್ಮ, ನೀನು ಕೌಶಿಕನ ತಾಣವನ್ನು ಸೇರಿ ಅವನ ಮನದಿಷ್ಟವನ್ನು ಸಲ್ಲಿಸು” ಎಂದು ಅಮರಗಣವು ಒಕ್ಕೊರಲಿನಿಂದ ಗೋಗರೆಯಿತು. ಅಂಚೆದೇರನು ದೇವಗಣದೊಡನೆ ವಿಶ್ವಾಮಿತ್ರನ ಬಳಿ ಸಾರಿ, “ಎಲೆ ಮುನಿಪ, ನಿನ್ನ ಘೋರ ತಪಸ್ಸಿನಿಂದ ನಾನು ಹರ್ಷಿತನಾಗಿ ದೇವತೆಗಳೊಡನೆ ಬಂದಿದ್ದೇನೆ. ಮೂರು ಲೋಕದಲ್ಲಿ ಸಾಟಿಯಿಲ್ಲದ ಈ ನಿನ್ನ ತಪಸ್ಸಿನಿಂದಾಗಿ ನೀನು ಲೋಕಪೂಜ್ಯವಾದ ಬ್ರಾಹ್ಮಣ್ಯವನ್ನು ಪಡೆದಿದ್ದೀಯೆ. ಶೀಲಸದ್ಗುಣನಿಲಯನಾದ ನಿನಗೆ ದೀರ್ಘಾಯುಸ್ಸನ್ನು ದಯಪಾಲಿಸುತ್ತೇನೆ. ತಡಮಾಡದೆ ನೀನು ನಿನ್ನ ತಪಸ್ಸನ್ನು ಕೊನೆಗೊಳಿಸಿ ನಿನ್ನ ಕರ್ತವ್ಯವನ್ನು ನೆರವೇರಿಸು” ಎಂದು ಆದೇಶಿಸಿದ. ಆ ಮಾತನ್ನು ಕೇಳಿ ಬ್ರಹ್ಮದೇವನಿಗೆ ವಂದಿಸಿದ ಮುನಿಯು, “ದೇವದೇವ, ನನ್ನಲ್ಲಿ ಬ್ರಾಹ್ಮಣ್ಯ-ದೀರ್ಘಾಯುಗಳು ಬಂದಿರುವುದಾದರೆ ಓಂಕಾರವೂ ವಷಟ್ಕಾರವೂ ವೇದವೇದಾಂಗಗಳೂ ನನಗೆ ಸ್ವಾಧೀನವಾಗಲಿ, ಎಲ್ಲ ದೇವತೆಗಳೂ ನನ್ನನ್ನು ಬ್ರಹ್ಮರ್ಷಿ ಎಂದು ಒಪ್ಪಿಕೊಳ್ಳುವಂತಾಗಲಿ” ಎಂದು ಪ್ರಾರ್ಥಿಸಿಕೊಂಡ. ಆಗ ಬ್ರಹ್ಮನು, “ಮುನಿಶ್ರೇಷ್ಠನೇ, ಇದರಲ್ಲಿ ಸಂದೇಹವೇಕೆ? ವಸಿಷ್ಠ ಮಹರ್ಷಿಯೂ ನಿನ್ನನ್ನು ಸ್ನೇಹದಿಂದ ಬ್ರಾಹ್ಮಣಮೌಳಿ ಎಂದು ಆದರಿಸುತ್ತಾನೆ” ಎಂದು ಆಶ್ವಾಸನೆಯಿತ್ತು ತನ್ನ ನಿಲಯಕ್ಕೆ ಮರಳಿದ. ಎಲ್ಲ ಸುರರೂ ಬಂದು ಕೌಶಿಕನಿಗೆ ವಂದಿಸಿ ಸನ್ಮಾನಗೈದು ಆತನನ್ನು ಭೂದೇವರಗ್ರಭವ ಎಂದು ಕೊಂಡಾಡಿದರು. ಹೀಗೆ ಗಾಧಿಸುತನು ಬ್ರಹ್ಮರ್ಷಿ ಪದವನ್ನು ಪಡೆದು ಈ ಧರೆಯು

ಮೆಚ್ಚುವ ರೀತಿಯಲ್ಲಿ ಸದ್ಧರ್ಮಪರಾಯಣನಾಗಿ ಸಕಲ ಸಾಧುಜನರ ಹಿತೈಷಿಯಾಗಿ ಸಂಚರಿಸುತ್ತ ಮೆರೆದ.

ಈ ಬಗೆಯಲ್ಲಿ ಶತಾನಂದ ರಾಮಲಕ್ಷ್ಮಣರ ಸನ್ನಿಧಿಯಲ್ಲಿ ಆ ಮಹಾಮುನಿಯ ಚರಿತ್ರೆಯನ್ನು ವಿಸ್ತಾರವಾಗಿ ನಿರೂಪಿಸಲು ಅದನ್ನು ಕೇಳಿದ ಜನಕ ಮಹಾರಾಜನು, "ಸ್ವಾಮಿ, ತಾವು ಕಾಕುತ್ಸ್ಥರ ಸಮೇತ ಕೃಪೆಯಿಂದ ಆಗಮಿಸಿ ನನ್ನನ್ನು ಕೃತಾರ್ಥರನ್ನಾಗಿಸಿರುವಿರಿ. ಇದು ನನ್ನ ಅನೇಕ ಜನ್ಮಗಳ ಪುಣ್ಯಫಲವೇ ಸರಿ. ತಮ್ಮ ಅಪರಿಮಿತ ಗುಣಗಳಿಂದ ಕೂಡಿದ ಚರಿತ್ರೆಯನ್ನು ಎಷ್ಟು ಕೇಳಿದರೂ ಸಾಕಾಗದು. ಈಗಾಗಲೇ ಸೂರ್ಯನು ಅಸ್ತಾಚಲವನ್ನು ಸೇರುತ್ತಿದ್ದಾನೆ. ತಾವು ನನಗೆ ಅಪ್ಪಣೆಯೀಯಬೇಕು. ನಾಳೆ ತರಣಿಯುದಯದ ವೇಳೆಗೆ ಬಂದು ತಮ್ಮ ದರ್ಶನ ಮಾಡಿ ಹರ್ಷಸಾಗರದಲ್ಲಿ ಓಲಾಡುತ್ತೇನೆ" ಎಂದು ಹೇಳಿ ಮುನಿಯ ಚರಣಗಳಿಗೆರಗಿ ಅವರಿಂದ ಬೀಳ್ಕೊಂಡ. ಕರುಣಾನಿಧಿಯಾದ ರಾಮಪುರದರಸ ಮತ್ತು ಲಕ್ಷ್ಮಣರ ಸಮೇತನಾಗಿ ಎಲ್ಲರಿಂದಲೂ ಸ್ತುತನಾಗುತ್ತ ವಿಶ್ವಾಮಿತ್ರನು ತಮ್ಮ ಬಿಡಾರಕ್ಕೆ ಬಂದ.

೧೯. ಶ್ರೀರಾಮನು ಶಿವಧನುಸ್ಸನ್ನು ಮುರಿದುದು

ಅಗಜೆಯೇ, ಆ ರಾತ್ರಿ ಕಳೆಯಿತು. ದ್ವಿಜರು ಸನ್ಮಾರ್ಗದ ನಡವಳಿಕೆಯನ್ನು ಅನುಸರಿಸಲು, ಹಂಸರುಗಳು ಪದ್ಮಾಸನದ ಅಭ್ಯಾಸವನ್ನು ನಡೆಸಲು, ಬ್ರಹ್ಮಾಂಡವು ಸ್ವರ್ಗಲಕ್ಷ್ಮಿಯಿಂದ ಸಮೃದ್ಧವಾಗಲು, ಕತ್ತಲೆಂಬ ರಕ್ಕಸರು ತಮ್ಮ ಗೌರವವನ್ನು ಬಿಟ್ಟು ದಿಕ್ಕುಗಳಿಗೆ ಚೆದುರಿಹೋಗಲು, ರಘುವೀರನ ಅಪ್ರತಿಮ ಪ್ರತಾಪವು ಉದಯಿಸುವಂತೆ ಸೂರ್ಯನು ಉದಿಸಿದ. ಪೂರ್ವದಿಕ್ಕಿನ ಅಧಿನಾಥನು ಕೆಂಪಾಗಲು, ಮೇರುಚಾಪನಾದ ಶಿವನ ಧನುಸ್ಸನ್ನು ಮುರಿಯುವವರ ಮದುವೆಯು ನಡೆಯುವುದನ್ನು ನೋಡುವ ಬಯಕೆಯಿಂದ ಮಿಥಿಲಾನಗರಿಗೆ ಹೋಗಲು ತೇರನ್ನು ಸಿದ್ಧಪಡಿಸಲು ಮಹೇಂದ್ರನು ಸಾರಥಿಗೆ ಸೂಚಿಸಿದ. ದೇವೇಂದ್ರನು ಮಿಥಿಲಾಪುರಕ್ಕೆ ಬರುವ ಈ ಸುದ್ದಿಯನ್ನು ಕೇಳಿ ಯಕ್ಷ ಗಂಧರ್ವ ಕಿನ್ನರ ಸಿದ್ಧ ಉರಗ ಮರುತ ಮುಂತಾದವರು ಸಂಭ್ರಮಿಸುತ್ತ ತ್ವರಿತ ಗತಿಯಿಂದ ಬಂದರು. ಪರಮ ಋಷಿಗಳೂ ದಿಕ್ಪಾಲಕರೂ ಬ್ರಹ್ಮನೇ ಮುಖ್ಯರಾದ ದೇವತೆಗಳು ಆನಂದಸಂದೋಹದಿಂದ ಅರಿನಿಕೃಂತನನೂ ಶರಣದುರಿತೋಪಶಾಂತನೂ ಆದ ಶ್ರೀಕಾಂತನನ್ನು ಕಾಣಲೆಂದು ಐತಂದರು. ಇಂದ್ರಮುಖ್ಯರಾದ ದೇವತೆಗಳೂ ಲೋಕಪಾಲಕರೂ ಸಿದ್ಧರೂ ಚಾರಣರೂ ಮುನಿಗಳೂ ಸಡಗರದಿಂದ ಕೂಡಿ ತನ್ನ ಅರಮನೆಗೆ ಬರಲು ಜನಕ ಮಹಾರಾಜನು ಅವರನ್ನು ಸ್ವಾಗತಿಸಿ ಸೂಕ್ತ ಉಡುಗೊರೆಗಳಿಂದ ಸನ್ಮಾನಿಸಿದ.

ಜನಕನು ಮಗಳಾದ ಸೀತಾದೇವಿಯ ಮದುವೆಯನ್ನು ಮಾಡುವನೆಂಬ ವಾರ್ತೆಯನ್ನು ಕೇಳಿದ ಮಾತ್ರದಿಂದಲೇ ಕದನಕರ್ಕಶರೂ ಘಟಕರ್ಣ ಮುಂತಾದ ದಾನವರೂ ಪರ್ವತಗಳು ಬರುವಂತೆ ಬರುವುದನ್ನು ಕಂಡು ಅನಿಮಿಷರು ಬೆದರಿದರು:

ಆದರೆ ಜನಕಮಹಾರಾಜನು ಬೆದರಲಿಲ್ಲ. ಅಂಗ ನೇಪಾಳ, ಪಾಂಚಾಳ, ಕರ್ಣಾಟಕ, ವಂಗ, ಬರ್ಬರ, ಘೋಟ, ಲಾಟ, ಕಾಶ್ಮೀರ, ಕಳಿಂಗ, ದ್ರಾವಿಡ, ಕೇರಳ, ಸೌರಾಷ್ಟ್ರ, ಆಂಧ್ರ, ಗುರ್ಜ್ಜರ, ಮಗಧ, ಬಂಗಾಲ, ಕೊಂಕಣ, ವರಾಟ, ಮಲೆಯಾಳ ಮುಂತಾದ ರಾಜ್ಯಗಳ ಅವನಿಪಾಲರು ವೈದೇಹಿಯನ್ನು ಮದುವೆಯಾಗುವ ಹಂಬಲದಿಂದ ಮಿಥಿಲಾನಗರಿಗೆ ಬಂದು ಸೇರಿದರು. ಮನುಮುನಿಗಳನ್ನು ಪೊರೆಯಲೆಂದು ಭೂಮಿಯಲ್ಲಿ ಅವತರಿಸಿದ ಅಚ್ಯುತನಿಗೆ ಮಹಾ ಸಂತೋಷದ ಸಂಗತಿ ಸಂಭವಿಸಲಿದೆ, ಅದನ್ನು ನೋಡಿ ಕೃತಾರ್ಥರಾಗಬೇಕೆಂದು ಹದಿನಾಲ್ಕು ಲೋಕದ ಜನರೂ ಬರಲು ಜನಕನು ಸಂತಸದಿಂದ ಅವರೆಲ್ಲರಿಗೂ ಸೂಕ್ತ ರೀತಿಯಲ್ಲಿ ಸ್ವಾಗತ–ಸನ್ಮಾನಗಳನ್ನು ಮಾಡಿ ಕುಶಲವನ್ನು ಬೆಸಗೊಂಡ.

ಆ ಬಳಿಕ ಕುಲಗುರು ಶತಾನಂದರ ಜೊತೆಯಲ್ಲಿ ಬಂದ ವಿಶ್ವಾಮಿತ್ರನ ಪದಯುಗಕ್ಕೆ ಪೂಜೆಗೈದು, ರಾಮಲಕ್ಷ್ಮಣ ಮುಂತಾದವರನ್ನು ಆದರಿಸಿ, ಬ್ರಹ್ಮ ಮುಂತಾದ ದೇವತೆಗಳು ಮತ್ತು ಮುನೀಶರು, ಭೂತಳದ ರಾಜರುಗಳೆಲ್ಲ ಸೀತೆಯ ಸ್ವಯಂವರಕ್ಕೆ ಆಗಮಿಸಿದರು. ಮಹಾರಾಜನು ಮುಂದಿನ ಕಾರ್ಯವನ್ನು ನಿರೂಪಿಸಿರೆಂದು ಬಿನ್ನವಿಸಿಕೊಂಡು ಯತಿವರ್ಯನನ್ನು ರಾಜಕುವರರನ್ನೊಳಗೊಂಡು ಯಜ್ಞಭವನಕ್ಕೆ ಕರೆತಂದು ಚಿನ್ನದ ಶಿವಪೀಠದಲ್ಲಿ ಕುಳ್ಳಿರಿಸಿದ. ಆಗ ಮುನಿಪನು ಮೃದುನುಡಿಗಳಿಂದ, "ದೇಶದೇಶಗಳ ರಾಜರುಗಳೂ ಮುನಿಗಂಧರ್ವರೂ ಯಕ್ಷಸಿದ್ಧರೂ ಉರಗರೂ ದಾನವರೂ ಬಂದಿದ್ದಾರೆ. ಇನ್ನು ಅಲಂಕೃತವಾದ ಶಿವಧನುಸ್ಸನ್ನು ಎಲ್ಲರಿಗೂ ಕಾಣುವಂತೆ ಇರಿಸು" ಎಂದು ಸೂಚಿಸಿದ. ಆಗ ನೃಪತಿಯು ಆ ಧನುಸ್ಸಿನ ವೃತ್ತಾಂತವನ್ನು ಈ ರೀತಿ ನಿರೂಪಿಸಿದ: "ಬ್ರಹ್ಮನ ಮಗ ದಕ್ಷನು ಅತ್ಯಂತ ಶ್ರದ್ಧೆಯಿಂದ ಯಜ್ಞವನ್ನು ನೆರವೇರಿಸಿ ಎಲ್ಲ ದೇವತೆಗಳಿಗೂ ಹವಿರ್ಭಾಗಗಳನ್ನು ಅರ್ಪಿಸಿ ಶಿವನನ್ನು ಕಡೆಗಣಿಸಿದ. ಆಗ ಅಮಿತವಾದ ಕೋಪದಿಂದ ಕೂಡಿದ ಶಿವನು ತನ್ನ ಧನುಸ್ಸನ್ನು ಹಿಡಿದು, 'ಎಲೌ ದೇವತೆಗಳೇ, ದಕ್ಷನು ದುರ್ವಾರ ಗರ್ವದಿಂದ ಇತ್ತ ಹವಿಸ್ಸನ್ನು ನೀವು ಗೆಲವಿನಿಂದ ಸ್ವೀಕರಿಸಿದ್ದೀರಿ, ಅದರಿಂದ ಈಗಲೇ ನಿಮ್ಮೆಲ್ಲರನ್ನೂ ವಧಿಸುತ್ತೇನೆ' ಎಂದಾಗ ಇಂದ್ರನು ಭಯದಿಂದ ಶಿವನ ಸ್ತುತಿ ಮಾಡಲು, ಅವನಿಗೆ ಒಲಿದು ತನ್ನ ಧನುಸ್ಸನ್ನು ದೇವತೆಗಳಿಗಿತ್ತ; ಅವರು 'ಇದನ್ನು ಸಲಹು' ಎಂದು ತುಂಬ ಹಿಂದೆ ನನ್ನ ವಂಶಭವನಾದ ದೇವರಾತನಿಗೆ ನೀಡಿದರು. ಅಂದಿನಿಂದಲೂ ಈ ಪವಿತ್ರ ಧನುಸ್ಸನ್ನು ಸೂಕ್ತ ರೀತಿಯಲ್ಲಿ ಅರಮನೆಯಲ್ಲಿರಿಸಿ ಪೂಜಿಸುತ್ತಿದ್ದಾರೆ. ಮೂರು ಲೋಕದಲ್ಲಿರುವವರಾರಿಗೂ ಇದನ್ನು ಎತ್ತಲೂ ಅಲುಗಿಸಲೂ ಸಾಧ್ಯವಿಲ್ಲ.

"ಒಮ್ಮೆ ಯಾಗವನ್ನು ಮಾಡುವ ಉದ್ದೇಶದಿಂದ ನಾನು ನೇಗಿಲು ಹಿಡಿದು ಭೂಶೋಧನೆಯನ್ನು ಮಾಡುವಾಗ ನೇಗಿಲಿನ ತುದಿಯಿಂದ ಅಪೂರ್ವ ಸೊಬಗಿಯಾದ ಮಗಳು ಹುಟ್ಟಿದಳು. ಭೂಮಿಯಿಂದ ಹುಟ್ಟಿದವಳಾದ ಕಾರಣ ಆ ಮಗುವಿಗೆ ಸೀತೆ ಎಂಬ ಹೆಸರನ್ನೇ ಇರಿಸಿ ನನ್ನ ಮನೆಯಲ್ಲಿ ಸ್ವಂತ ಮಗಳಂತೆಯೇ ಸಾಕಿದೆ. ಬಾಲಚಂದ್ರನಂತೆ ದಿನೇ ದಿನೇ ಬೆಳೆದು ನಿಂತ ಈ ತರುಣಿಯು ವೀರ್ಯಶುಲ್ಕಳು ಎಂದು ನಿಶ್ಚೈಸಿ ಈ ವಿಷಯವನ್ನು ಎಲ್ಲರಿಗೂ ತಿಳಿಸಿದ್ದೇನೆ. ಶಿವನ ಈ ಕೋದಂಡವನ್ನು ತನ್ನ ಕೈಯಿಂದ

ಹಿಡಿದೆತ್ತಿ ಯಾರು ಹಗ್ಗವನ್ನು ತಿರುವಿಗೆ ಏರಿಸುತ್ತಾನೆಯೋ ಆತನು ತನ್ನ ಮಗಳಿಗೆ ಅಧಿನಾಥನಾಗುತ್ತಾನೆ ಎಂದು ಸಾರಿದಾಗ ಅವನಿಪಾಲಕರೆಲ್ಲ ಆಗಮಿಸಿದರು. ಧನುಸ್ಸನ್ನು ನಿಟ್ಟಿಸಿ ನೋಡಿ ತಮ್ಮ ಬಲವನ್ನೆಲ್ಲ ಬಿಟ್ಟು ಅದನ್ನೆತ್ತಲು ಪ್ರಯತ್ನಿಸಿದರೂ ಕೋದಂಡವು ಮಾತ್ರ ಕದಲಲಿಲ್ಲ. ಆಗ ರೋಷಾವಿಷ್ಟರಾಗಿ ಕುಲ ಚೆಲುವು ಸಂಪತ್ತುಗಳನ್ನು ಬಿಟ್ಟು ಈ ರಾಜನು ನಮ್ಮ ಬಲಪರೀಕ್ಷೆಗೆ ಈ ಧನುಸ್ಸನ್ನು ತೋರಿಸಿ ರಾಜರುಗಳಿಗೆ ಅವಮಾನಿಸಿದ್ದಾನೆ. ಈ ಮಿಥಿಲೇಶನ ತಲೆಯನ್ನು ಕತ್ತರಿಸಿ ಬಿಸುಡಬೇಕು ಎಂಬ ಆಲೋಚನೆಯಿಂದ ಚತುರಂಗಸೈನ್ಯಸಮೇತರಾಗಿ ಮೇಲೆತ್ತಿ ಬಂದು ನನ್ನ ನಾಡನ್ನು ಮುತ್ತಿದರು. ಅವರೊಡನೆ ನಾನು ಹನ್ನೆರಡು ವರುಷಗಳ ಕಾಲ ನನಗೆ ಶಕ್ತಿಯಿರುವಷ್ಟು ಹೋರಾಡಿದೆ. ಈ ಉಪದ್ರವದಿಂದ ಪಾರಾಗುವ ಉಪಾಯವಾವುದೆಂದು ಚಿಂತಿಸಿ ದೇವತೆಗಳನ್ನು ಕುರಿತು ಮೊರೆಯಿಟ್ಟೆ. ಆಗ ಅವರು ಕರುಣೆಯಿಂದ ನನಗೆ ಚತುರಂಗಬಲವನ್ನು ದಯಪಾಲಿಸಿದರು. ಆದರ ಸಹಾಯದಿಂದ ಶತ್ರುಗಳನ್ನೆಲ್ಲ ಬಡಿದೋಡಿಸಿ ಬಂದ ತೊಂದರೆಯಿಂದ ಪಾರಾದೆ" ಎಂದು ಹೇಳಿ ಕೊನೆಯಲ್ಲಿ, "ತಮ್ಮ ಗಮನಕ್ಕೆ ತರುವ ಸಲುವಾಗಿ ಈ ಹಿಂದಿನ ವೃತ್ತಾಂತವನ್ನೆಲ್ಲ ನಿವೇದಿಸಿಕೊಂಡೆ; ಆದರೆ ಮುಂದೆ ನಾನು ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ ತಿಳಿವಳಿಕೆ ಹೇಳಿದರೆ ನಾನು ಅದರಂತೆಯೇ ನಡೆದುಕೊಳ್ಳುತ್ತೇನೆ" ಎಂದು ವಿನಂತಿಸಿಕೊಂಡ. ಅದಕ್ಕೆ ವಿಶ್ವಾಮಿತ್ರ ಮುನಿಯು, "ರಾಜನೇ. ಈಗ ದೇವತೆಗಳೂ ರಾಕ್ಷಸರೂ ರಾಜರೂ ನೆರೆದಿದ್ದಾರೆ. ದಾಶರಥಿಗೆ ನೀನೀಗ ಶಿವಧನುಸ್ಸನ್ನು ತೋರಿಸು" ಎಂದು ಸೂಚಿಸಿದ. ಅದರಂತೆಯೇ ಜನಕನು ಧರಣೀಶರಿಗೆಲ್ಲ ಶಿವನ ಕೋದಂಡವನ್ನು ತೋರಿಸುವ ಏರ್ಪಾಟು ಮಾಡಲು ಮಂತ್ರಿಗೆ ಆದೇಶಿಸಿದ. ಅದಕ್ಕನುಗುಣವಾಗಿ ಮಂತ್ರಿಯು ಎಂಟು ಸಾವಿರ ಮಂದಿ ಭಟರುಗಳೊಡನೆ ಚಾಪವಿದ್ದೆಡೆಗೆ ಬಂದು ಅದಕ್ಕೆ ಸಾಷ್ಟಾಂಗವೆರಗಿದ. ಆನಂತರ ಎಂಟು ಗಾಲಿಗಳ ಬಂಡಿಯೊಂದನ್ನು ತರಿಸಿ ಅದರಲ್ಲಿ ಶಿವಧನುಸ್ಸನ್ನಿರಿಸಿಕೊಂಡು ಭಟರುಗಳೊಡನೆ ರಾಜಸಭೆಗೆ ಬಂದ. ಅದನ್ನು ಕಂಡವರೆಲ್ಲ ಬೆಬ್ಬೆರಗಾದರು, ಅದರಿಂದುಂಟಾದ ಕೋಲಾಹಲವು ಎಂಟು ದಿಕ್ಕುಗಳಲ್ಲಿಯೂ ತುಂಬಿಕೊಂಡಿತು.

ಗೊರವನ ಬಿಲ್ಲು ಬರಲು ಅದನ್ನು ಕಂಡ ಜನಕ ಮಹಾರಾಜನು ನಮಸ್ಕರಿಸಿ ಪೂಜೆಗೈದು ಅಲ್ಲಿ ಸೇರಿದ್ದ ರಾಜರಿಗೂ ಇತರರಿಗೂ ಕೇಳಿಸುವ ಹಾಗೆ ಸಭಾಮಧ್ಯದಲ್ಲಿ ನಿಂತುಕೊಂಡು, "ಈ ಧನುಸ್ಸಿನ ತಿರುವಿಗೆ ಹಗ್ಗವನ್ನೇರಿಸಿದಾತನಿಗೆ ನನ್ನ ಮಗಳನ್ನು ಮದುವೆ ಮಾಡಿಕೊಡುತ್ತೇನೆ, ಇದು ಸತ್ಯ" ಎಂದು ಹೇಳಿ ವಿಶ್ವಾಮಿತ್ರನ ಬಳಿ ಬಂದು ಪಕ್ಕದಲ್ಲಿ ಕುಳಿತ. ರಾಜಮೌಳಿಯ ಆ ಧನುಸ್ಸನ್ನು ಕಂಡವರೆಲ್ಲ ಸಂಭ್ರಮಗೊಂಡರೂ ಅನೇಕ ರಾಜರು ತಾವು ಹಿಂದೆ ಅದನ್ನೆತ್ತಲು ಹೋಗಿ ಭಂಗಪಟ್ಟುದನ್ನು ನೆನೆದು ಸುಮ್ಮನಿದ್ದರು. ಇತ್ತ ರಕ್ಕಸರಾಜ ಪ್ರಮುಖರಾದ ರಾವಣ ಕುಂಭಕರ್ಣ ಪ್ರಹಸ್ತ ಮುಂತಾದವರೆಲ್ಲ ಬಿಲ್ಲನ್ನೆತ್ತಲು ಸಡಗರದಿಂದ ಮೇಲೆದ್ದರು. 'ಮದನಹರನ ಈ ಕೋದಂಡವನ್ನು ಹೆದೆಯೇರಿಸಿ ಜನಕಾತ್ಮಜೆಯನ್ನು ಮದುವೆಯಾಗದೆ ಇರೆನು' ಎಂದು ರಾವಣನು ತನ್ನ ಹತ್ತು ತಲೆಗಳನ್ನಲ್ಲಾಡಿಸುತ್ತ ಮೇಲೆದ್ದು ಇಪ್ಪತ್ತು ಭುಜಗಳನ್ನೂ ಒದರಿ ತನ್ನ ಕಟಕ ಹಾರ

ಮುಂತಾದವುಗಳನ್ನೆಲ್ಲ ತೆಗೆದಿಟ್ಟು, ನೆರೆದ ಜನರೆಲ್ಲ ಬೆದರಲು ನಿಧಾನವಾಗಿ ಧನುಸ್ಸಿನೆಡೆಗೆ ಸಾಗಿ ಬಂದ. ತನ್ನ ಹತ್ತು ತಲೆಗಳು ಮಂದರದ ಹತ್ತು ಶಿಖರಗಳಂತೆ ಕಾಣುತ್ತಿರಲು ರಾವಣನು ಮುಗುಳ್ನಗುತ್ತ ಧನುಸ್ಸಿನ ಕಡೆ ನೋಡಿದ. "ಕಾಲಿಲ್ಲದವನು ಕೈಲಾಸಯಾತ್ರೆ ಮಾಡಲು ಹೊರಟವನಂತೆ ಚಂದ್ರಶೇಖರನಿಂದ ಪಾಲಿತವಾದ ಕೋದಂಡವನ್ನೆತ್ತಲು ಬಯಸಿ ಆಯಾಸಗೊಂಡು ಮರಳುತ್ತೀಯೆ, ಮೂರೂ ಲೋಕಗಳ ಸುರಾಸುರರು ನೋಡಲೂ ಹಿಂಜರಿಯುತ್ತ ಮಕ್ಕಳಂತೆ ಇರಬೇಕಾದರೆ ನೀನು ಹೇಗೆ ಅದನ್ನೆತ್ತುವೆ? ಕೈಗೆಟುಕದ ನೀರನ್ನು ಕುಡಿಯಲು ಬಯಸಿ ಬಾಳುವವರಂತೆ ಇಪ್ಪತ್ತು ಭುಜಗಳನ್ನೂ ಹತ್ತು ತಲೆಗಳನ್ನೂ ಹೊತ್ತಿದ್ದೇನೆ ಎಂಬ ಗರ್ವದಿಂದ ಈ ಚಾಪವನ್ನು ಹೆದೆಯೇರಿಸಲು ಬಯಸುತ್ತಿದ್ದೀಯೆ. ಹಿಂದೆ ಅನೇಕರಿಂದ ಆದ ಮಾನ ಹಾನಿಗಳನ್ನು ಮರೆತೆಯಾ?" ಎಂದು ಬಾಣಾಸುರನು ಅವನನ್ನು ಗೇಲಿಮಾಡಿದ. ಇದನ್ನು ಕೇಳಿ ಕನಲಿದ ರಾವಣನು, "ಎಲೌ ಮೂಢ, ಮೂರು ಲೋಕಗಳನ್ನೂ ತನ್ನ ಬಸಿರಿನಲ್ಲಿಟ್ಟುಕೊಂಡಿರುವ ಶಿವನಿರುವ ಬೆಳ್ಳಿಬೆಟ್ಟವನ್ನೇ ಎತ್ತಿ ದಿಕ್ಪಾಲಕರನ್ನೇ ಸದೆಬಡಿದ ನನ್ನ ಬಾಹುಗಳನ್ನು ಆಲದ ಮರದ ಬಿಳಲುಗಳೆಂಬಂತೆ ಹಾಸ್ಯಮಾಡುತ್ತಿದ್ದೀಯೆ. ಸಾವಿರ ಕೈಗಳನ್ನು ಹೊಂದಿದ್ದರೂ ನೀನು ಯುದ್ಧದಲ್ಲಿ ಯಾರನ್ನಾದರೂ ಗೆದ್ದಿರುವುದುಂಟೇ?" ಎಂದು ಜಬರಿಸಿದ. ಆಗ ಬಾಣನು, "ಶಿವನನ್ನು ಕಾಣಲು ಹೋಗುವ ದಾರಿಯಲ್ಲಿ ಶೇಷನೊಬ್ಬನೇ ಹೊತ್ತ ಭೂಭಾರವನ್ನು ಕಡಿಮೆ ಮಾಡಲು ನನ್ನ ಕೈಗಳನು ಆಸರೆಯಾಗಿತ್ತು ಅವನ ಗೆಳೆತನವನ್ನು ಗಳಿಸಿದ ಧೀರನ ಬಗ್ಗೆ, ಅಯ್ಯೋ ಬೆಪ್ಪೆ, ನಿನಗೇನು ತಿಳಿದಿದೆ? ನೀನು ನಿನ್ನ ಬಲವನ್ನು ತೋರಿಸಿದರೆ ಆಗ ನಿನ್ನ ಮಾತಿಗೆ ಬೆಲೆ" ಎಂದು ಉತ್ತರಿಸಿದ. ಆಗ ದಶಮೌಳಿಯು ತನ್ನ ಭುಜಗಳನ್ನೊದರಿ, ಮುಂಗೈ ಕಡಗಗಳನ್ನು ತಿರುವಿ, ತನ್ನ ಕಾಸೆಯ ತುದಿಯನ್ನು ಸಂವರಿಸುತ್ತ, ತನ್ನ ಮಣಿಕುಂಡಲಗಳನ್ನು ಕಿವಿಗಳಿಗೆ ಸೆಕ್ಕಿಸಿಕೊಂಡು, ಕುಲಪರ್ವತದಂತೆ ತನ್ನ ತಲೆಯನ್ನು ಬಾಗಿಸಿ ಶಿವಧನುಸ್ಸಿನ ಕಡೆಗೆ ಧಾವಿಸಿ, ತನ್ನ ಮೊಣಕಾಲನ್ನು ನೆಲದ ಮೇಲೆ ಊರಿಕೊಂಡು, ತನ್ನ ಸಾಲುಭುಜಗಳಿಂದ ಬಲವನ್ನೆಲ್ಲ ಬಿಟ್ಟು ಬಿಲ್ಲನ್ನೆತ್ತಿದ. ಹೆಡೆಯ ಮೇಲಿನ ಮಣಿಯ ಆಸೆಗಾಗಿ ಹಾವನ್ನು ಎತ್ತುವಂತೆ ದೈತ್ಯನಾಥನು ಇಪ್ಪತ್ತು ಮುಷ್ಟಿಗಳಿಂದ ಬಲವಾಗಿ ಹಿಡಿದು, ಮತ್ತೆ ನೆಲಕ್ಕೂರಿ, ಔಡು ಕಚ್ಚಿ ಪ್ರಯತ್ನಪಟ್ಟರೂ ಆ ಬಿಲ್ಲು ಮಾತ್ರ ಅಲ್ಲಾಡಲೇ ಇಲ್ಲ. ಅವನ ರೋಷ ಭುಗಿಲೆದ್ದಿತು; ಹಲ್ಲು ಕಡಿಯುತ್ತ, ಭುಜಗಳನ್ನಪ್ಪಳಿಸಿ, ಹೂಂಕರಿಸುತ್ತ ನೆಲವನ್ನೊದೆದು ರಾವಣನು ಮತ್ತೆ ತನ್ನ ಶಕ್ತಿಯನ್ನೆಲ್ಲ ಬಿಟ್ಟು ಮಂಡಿಯನ್ನೂರಿ ನೆಲದ ಮೇಲಿನಿಂದ ಬಿಲ್ಲನ್ನೆತ್ತಲು, ಆದರೆ ಮಹಾದೇವ, ಅದು ಅಲುಗಲೇ ಇಲ್ಲ; ಅದರ ಬದಲು ಅವನ ತೊಡೆ ನಡುಗಿತು, ಕೈಗಳು ಜೋತುಬಿದ್ದವು, ಬಲಗುಂದಿ ನೆಲದ ಮೇಲೆ ದೊಪ್ಪನೆ ಬಿದ್ದ; ಬಡಿಗೋಲಿಗೆ ಸಿಕ್ಕಿದ ಇಲಿಯ ಹಾಗೆ ಆ ಬಿಲ್ಲಿನ ಮಧ್ಯದಲ್ಲಿ ಅವನ ಮೂಗು ಸಿಕ್ಕಿ ಮೂಳೆ ಮುರಿದು ರಕ್ತ ಸುರಿಯಿತು. ಈ ರೀತಿ ಒದ್ದಾಡತೊಡಗಿದುದನ್ನು ಕಂಡು ಮಗನೂ ಘಟಕರ್ಣ ಮತ್ತಿತರ ಅಸುರರೂ ಮಿಡುಕುತ್ತಿರಲು, ನೆರೆದಿದ್ದ ರಾಜರೂ ದೇವತೆಗಳೂ ಗೊಳ್ಳೆಂದು ನಕ್ಕುಬಿಟ್ಟರು. ರಾವಣನಿಗೇ ಈ ಗತಿಯಾದರೆ ತಮ್ಮ ಪಾಡೇನು ಎಂದು ರಾಜರುಗಳು ಖಿನ್ನರಾದರು. ಕೋದಂಡದಡಿಯಲ್ಲಿ ಸಿಲುಕಿ ನರಳಿ ಬನ್ನಪಡುತ್ತ ಬ್ರಹ್ಮನಿತ್ತ ವರದಿಂದ ಬದುಕುಳಿದು, ಧನುಸ್ಸಿನ ಪಕ್ಕಕ್ಕೆ ಸರಿದು ಅದಕ್ಕೆ ವಂದಿಸಿ ತೆಪ್ಪಗೆ


ತನ್ನ ಊರಿಗೆ ವಾಪಸಾದ.

ವಿಶ್ವಾಮಿತ್ರನು ಮಿಥಿಲೇಶನನ್ನು ಸಂಭ್ರಮದಿಂದ ನೋಡಿದ. ಆಗ ಸಚರಾಚರವಾದ ಚೈತನ್ಯಪೂರ್ಣ ದೇವತತಿಯನ್ನು ಆದರಿಸುವ ಕಲ್ಪತರುವಿನಂತಹ ದಿವ್ಯಜ್ಯೋತಿಯೊಂದು ಆಗಸದಲ್ಲಿ ಕಾಣಿಸಿಕೊಂಡಿತು. ಹೊಳೆಯುವ ಶುಭ್ರ ತೇಜಸ್ಸು ಭೂಮಿಗೆ ಇಳಿದು ಬರಲು ಅದರ ಮಧ್ಯದಲ್ಲಿ – ಅತಿ ಲಾವಣ್ಯಪೂರ್ಣವಾದ ಚಟುಲ ಕುದುರೆಯ ಮೇಲಿದ್ದ ಹತ್ತು ಭುಜಗಳಿಂದ ಕೂಡಿ ನಡುವಿನಲ್ಲಿ ಹರಿನೀಲ ರತ್ನದ ನಾರಿಯಿಂದಲೂ ಐದು ಮುಖಗಳಿಂದಲೂ ಕೂಡಿದ ಪ್ರಮಥವರರಿಂದ ಸುತ್ತುವರಿಯಲ್ಪಟ್ಟ – ಶಿವನ ಮೂರ್ತಿಯು ವಿಶ್ವಾಮಿತ್ರ ಮುನಿಗೆ ಕಾಣಿಸಿತು. ಕೊರಳಿನಲ್ಲಿ ರುಂಡಮಾಲೆ, ಶಿರದಲ್ಲಿ ಮಿನುಗುವ ಚಂದ್ರರೇಖೆ, ಧರಿಸಿದ್ದ ಚರ್ಮಾಂಬರದಿಂದ ಕೂಡಿದ ಆ ಪುಣ್ಯರಾಶಿಯು ಇಳಿದು ಬಂತು. ಅದನ್ನು ಕಂಡ ಮುನಿಯು ಭಕ್ತಿಯಿಂದಲೂ ಹರ್ಷದಿಂದಲೂ ಎದ್ದು ಬಂದು ಕರುಣಾನಿಧಿಯ ಚರಣಗಳಿಗೆ ಅಮಿತಾನಂದದಿಂದ ನಮಿಸಿದ. "ಸಕಲ ಆಗಮಾರ್ಥಗೋಚರನೇ, ಪ್ರಣವಗೋಚರನೇ, ಮುನಿಗಳ ಹೃದಯನಿಲಯಗಳಲ್ಲಿ ಸಂಚರಿಸುವ ಸೂರ್ಯನೇ, ನೇತ್ರತ್ರಯನೇ, ಸುರೇಶನೇ, ವ್ಯೋಮಕೇಶಿಯೇ, ಮುಕುತಿಭಾಗ್ಯವೇ, ಕಾಣುವ ಸುಕರಮೂರ್ತಿಯ ರೂಪವನ್ನು ಹೊತ್ತು ಇಷ್ಟು ಸನಿಹದಲ್ಲಿ ತೋರಿ ಬಂದ ನಿನಗೆ ನಾನೆಷ್ಟು ಕರುಣಪಾತ್ರನೋ!" ಎಂದು ವಿಶ್ವಾಮಿತ್ರನು ಆನಂದದಿಂದ ಮುಂದೆ ಬಂದಾಗ, ಯೋಗಿವೃಂದವೆಲ್ಲವೂ ನಾನಾ ವಿಧದಿಂದ ಸ್ತುತಿಸುತ್ತ ಜಯಕಾರ ಮಾಡುತ್ತ ಕೈಮುಗಿದರು. ಆಗ ಸನ್ಮೂರ್ತಿಯು ಮಿಥಿಲೇಶನನ್ನು ಕರುಣಾದೃಷ್ಟಿಯಿಂದ ನೋಡಿ ಮಂದಹಾಸ ಬೀರಿ ಹೊಗಳಿದ. ಜನಕನೆಡೆಗೆ ತಿರುಗಿ, "ಭೂಮಿಯ ಜನರು ಮರೆತಾದರೂ ಒಮ್ಮೆ ಸ್ತುತಿ ಮಾಡಿದರೆ ಪಾಪರಾಶಿಗಳೆಲ್ಲ ನಾಶವಾಗಿ ಮುಕ್ತಿಭಾಜನರಾಗುತ್ತಾರೆ ಎಂದು ಶ್ರುತಿತತಿಗಳೆಲ್ಲ ಹೇಳುವ ಪರಬ್ರಹ್ಮನೇ ರಘುವಂಶದಲ್ಲಿ ಮನುಷ್ಯಾಕಾರದಲ್ಲಿ ಜನಿಸಿ ಈ ಮಹಾಸಭೆಗೆ ಬಂದು ಕುಳಿತಿರುವುದನ್ನು ನೋಡುವುದೆಂದರೆ ಎಂತಹ ಮಹದ್ಭಾಗ್ಯ! ನಿನ್ನ ಪುಣ್ಯಫಲವನ್ನು ಏನೆಂದು ಹೊಗಳಲಿ; ನೀನೇ ಕೃತಕೃತ್ಯ, ನೃಪಮಕುಟಮಣಿ ನೀನು ರಾಜರ್ಷಿ, ನನ್ನ ಪ್ರೀತಿಗೆ ಪಾತ್ರನಾದವನು" ಎಂದು ಆನಂದವನ್ನು ಹೊಂದಿದ.

ಆ ಬಳಿಕ ಆ ಜ್ಞಾನನಿಧಿಯು ಸುಕುಮಾರತೆಯ ಸಾಕಾರದಂತೆ ಕುಳಿತಿದ್ದ ಕುಮಾರನನ್ನು ನೋಡಿ ಸಂತೋಷದಿಂದ ಅಪ್ಪಿಕೊಂಡು ಹೊಗಳಲು ರಘುವೀರನು ಆನಂದದಿಂದ ಕೂಡಿ ತಮ್ಮನ ಜೊತೆಯಲ್ಲಿ ಆ ಮೂರ್ತಿಗೆ ಸಾಷ್ಟಾಂಗ ಪ್ರಣಾಮ ಮಾಡಿದ. ನಮಸ್ಕರಿಸಿದ ಆ ಕುಮಾರಕರನ್ನು ಮೇಲೆತ್ತಿ ಮತ್ತೆ ತಕ್ಕೈಸಿಕೊಂಡು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೃದುಮಧುರ ಮಾತುಗಳಿಂದ ಸ್ತುತಿಗೈದು ಚಂದ್ರಶೇಖರನು ಹೀಗೆಂದ: "ರಕ್ಕಸರನ್ನು ನಿಗ್ರಹಿಸಿ ಪರಮ ಋಷಿಗಳನ್ನು ಸಂರಕ್ಷಿಸಿ ದೇವತಾನಿವಹವನ್ನು ಕಾಪಾಡಿದ ಪರಮಪುರುಷನೇ, ನಿನ್ನ ಸದ್ಗುಣಗಳನ್ನು ಹೊಗಳಲು ನಿಗಮಾಗಮಗಳಿಗಾದರೂ ಸಾಧ್ಯವೇ? ದೇವನೇ, ನೀನು ಕೋದಂಡವನ್ನು ಹೆದೆಯೇರಿಸಿ ಕೋಮಲ ಸುಗಾತ್ರೆಯಾದ ಭೂಜಾತೆಯೂ ಅಯೋನಿಜೆಯೂ ಆದ ಸೀತೆಯನ್ನು

ವಿವಾಹವಾಗು. ಇನ್ನೇಕೆ ತಡ? ಹರ ನಾನು ಹರಿ ನೀನು ಎಂಬ ಎರಡು ಶಬ್ದಗಳಲ್ಲದೆ ವಸ್ತುವು ಒಂದೇ. ಇಬ್ಬರಲ್ಲಿ ಭೇದವೆಣಿಸುವವರು ನರಕಭಾಜನರಾಗುತ್ತಾರೆ ಎಂಬುದು ನಿಶ್ಚಿತ. ಭೇದದಿಂದ ಈ ಭೂತಲದಲ್ಲಿ ಅತಿ ರೋಷವೂ ಖೇದವೂ ಉಂಟಾಗುತ್ತದೆ; ಅಭೇದವು ಆನಂದಕರವಾದುದು ಎಂಬುದು ಸತ್ಯ ಎಂಬುದು ನನ್ನ ಅಭಿಮತ." ಹೀಗೆ ಹೇಳಿದ ಶಿವನ ಮಾತುಗಳನ್ನು ಕೇಳಿದ ಮೌನಿಗಣವು ಹರ್ಷ ತಾಳಿತು. ಅಷ್ಟರಲ್ಲಿ ಕೌಶಿಕ ತಪೋಧನನು ನಿಮಿವಂಶದರಸ ಜನಕನನ್ನು ನೋಡಿ ಹೀಗೆಂದು ಹೇಳಿದ: "ಜನಪನೇ, ಮೂರು ಲೋಕದ ಮಹಾ ಜನತೆಯೆಲ್ಲ ಇಲ್ಲಿ ಈ ಮಹೋತ್ಸವವನ್ನು ನೋಡುವ ಆಸೆಯಿಂದ ನೆರೆದಿದೆ. ಆಕಾಶಕೇಶಿಯ ಸನ್ನಿಧಿಯಲ್ಲಿಯೇ ಈ ದಶರಥಾತ್ಮಜನಿಗೆ ಮಹಾಚಾಪವನ್ನು ತೋರಿಸುವುದು ಸೂಕ್ತ." ಅದರಿಂದ ಉತ್ತೇಜಿತನಾದ ಜನಕನು ಹರುಷದಿಂದ ಮೇಲೆದ್ದು ಶಿವಬಿಲ್ಲು ಇದ್ದ ಕಡೆ ಹೋಗಿ ಅದಕ್ಕೆ ಪೂಜೆಗೈದು ನಮಿಸಿ ಗಾಧಿತನಯನಿಗೆ ಆ ವಿಷಯವನ್ನು ಅರುಹಿದ. ಆಗ ಆತನು ಮಂದಹಾಸದಿಂದ ದಾಶರಥಿಯ ಕಡೆ ನೋಡಿ, "ರವಿಕುಲಸಿಂಹನೇ, ಈ ಹರಧನುಸ್ಸನ್ನು ಭಕ್ತಿಯಿಂದ ನೋಡು" ಎನ್ನಲು, ರಘುಕುಲತಿಲಕನು ಮುನಿಪುಂಗವನಿಗೆ ನಮಸ್ಕರಿಸಿ ಅಲ್ಲಿದ್ದ ರಾಜರ ಸಾಲು ನೋಡುತ್ತಿರಲು ತನ್ನ ನಾಳೀಕಕರಗಳಲ್ಲಿ ಆ ಧನುಸ್ಸನ್ನು ಹಿಡಿದೆತ್ತಿ ಸುತ್ತಲೂ ಮಂದಸ್ಮಿತನಾಗಿ ನೋಡಿದ. ಹೀಗೆ ತನ್ನ ಕಮನೀಯ ಕಟಾಕ್ಷದಿಂದ ಕೂಡಿ ಶ್ರೀರಾಮನು ನಿಂತಿರಲು ಅಲ್ಲಿನ ಮುನಿಸಮಾಜವು ನಿಶ್ಚಿತವಾಗಿ ರಮೆಗೆ ಈತನೇ ಒಡೆಯ ಎಂದು ಸುಮ್ಮಾನಗೊಂಡರು. ಮೇರುಪರ್ವತವೆಲ್ಲಿ, ಅಣುವೆಲ್ಲಿ? ಶಿವಧನುಸ್ಸನ್ನು ಹೆದೆಯೇರಿಸುವುದೆಲ್ಲಿ, ದಶರಥಕುಮಾರರು ಎಲ್ಲಿ? ಲೋಕೋತ್ತರ ಬಲಾಢ್ಯರಿಗೂ ಸಾಧ್ಯವಾಗದಿದ್ದ ಕಾರ್ಯವನ್ನು ಈ ಬಾಲಕನು ಹೇಗೆ ಮಾಡಿಯಾನು, ಪಾಪ, ಏನಾಗುತ್ತದೋ ಎಂದು ಚಾರಣಸಿದ್ಧರು ಗಂಧರ್ವರು ಪನ್ನಗರು ಯಕ್ಷರು ಉರಗರು ತಮ್ಮತಮ್ಮಲ್ಲಿ ಸಂಶಯ ಆತಂಕಗಳನ್ನು ಅನುಭವಿಸುತ್ತ ನೆಟ್ಟ ನೋಟದಿಂದ ನೋಡಿದರು.

ಅಷ್ಟರಲ್ಲಿ ರಘುಕುಲಲಲಾಮನು ಸಭೆಯಲ್ಲಿದ್ದ ವಿಶ್ವಾಮಿತ್ರನ ಬಳಿಗೆ ಹೋಗಿ ಅಪ್ಪಣೆ ಪಡೆದು ನಮಸ್ಕರಿಸಿ ವಿನಯದಿಂದ ಧನುಸ್ಸಿನೆಡೆಗೆ ಬಂದು ಅದನ್ನು ನೋಡಿ, ದಿಕ್ಪಾಲಕರಿಗೂ ಮುನಿಸರ್ವರಿಗೂ ಅಭಿವಂದಿಸಿ ತನ್ನ ಕುಲದ ಅಧಿದೇವತೆಯಾದ ಸೂರ್ಯನನ್ನು ಸ್ಮರಿಸಿ ಕೈಮುಗಿದು ಬ್ರಹ್ಮನನ್ನು ಧ್ಯಾನಿಸಿ ಧನೂರತ್ನವನ್ನು ಅರೆನಿಮಿಷ ನೋಡಿ, ನೆರೆದ ಜನರೆಲ್ಲರೂ ಕುತೂಹಲದ ನೋಡುತ್ತಿರಲು ತನ್ನ ಎಡಗೈಯಿಂದ ಆ ಧನುಸ್ಸನ್ನು ಮೇಲೆತ್ತಿ, ಹೂವಿನ ಹಾರವನ್ನು ಮುಡಿಯಲ್ಲಿರಿಸಿದಂತೆ ಬಾಗಿಸಿ ತುದಿಗೆ ಹೆದೆಯೇರಿಸಲು ಪ್ರಯತ್ನಿಸಲು ಅದು ನಡುವೆಯೇ – ಮದ್ದಾನೆಯು ತಾವರೆಯ ದಂಟನ್ನು ಹಿಡಿದು ಬಾಗಿಸಲು ಅದು ಮುರಿಯುವಂತೆ, ಸಿಡಿಲ ಹೊಡೆತದಿಂದ ಬೆಟ್ಟವು ಸೀಳುವಂತೆ – ಮಹಾ ಶಬ್ದವನ್ನುಂಟುಮಾಡುತ್ತ ಎರಡು ಭಾಗವಾಗಿ ಮುರಿದು ಬಿತ್ತು. ಆಗ ಉಂಟಾದ ಸದ್ದಿನಿಂದ ಕೋಟಿ ಸಿಡಿಲು ಒಮ್ಮೆಗೇ ಹೊಡೆದಂತಾಯಿತು, ಒಂದೇ ಬಾರಿಗೆ ಬೆಟ್ಟಗಳು ಉರುಳಿಬಿದ್ದಂತಾಯಿತು, ವಿಶ್ವಾಮಿತ್ರ ಮಿಥಿಲೇಶರ ಹೊರತಾಗಿ ಉಳಿದ ಹದಿನಾಲ್ಕೂ ಲೋಕದ ಜನರು ಮೂರ್ಛೆ ಹೋಗುವಂತೆಯೂ, ಸಮುದ್ರಗಳೆಲ್ಲ ಅಲ್ಲೋಲಕಲ್ಲೋಲ



ಶ್ರೀರಾಮನು ಶಿವಧನುಸ್ಸನ್ನು ಎತ್ತಿ ಹಿಡಿದುದು

ಗೊಳ್ಳುವಂತೆಯೂ, ಭೂಮಿಯು ನಡುಗುವಂತೆಯೂ, ದೇವತಾಸ್ತ್ರೀಯರು ತಮ್ಮ ನಾಥರನ್ನು ಸ್ವರ್ಗಲೋಕದಲ್ಲಿ ಹುಡುಕಾಡುವಂತೆಯೂ ಆಯಿತು.

ಹಿಡಿದು ಅಲುಗಾಡಿಸಲು ಅಸಾಧ್ಯ ಎನ್ನಿಸುವ ಬಿಲ್ಲು ಈ ರೀತಿಯಲ್ಲಿ ಎರಡು ತುಂಡುಗಳಾಗಲು ಸಾಕ್ಷಾತ್ ಶಿವನು ಹರ್ಷದಿಂದ ಮೇಲೆದ್ದು ದಶರಥತನಯನನ್ನು ಅಪ್ಪಿಕೊಂಡು ನಸುನಗುತ್ತ ಗಲ್ಲಗಳನ್ನಲುಗಿಸಿ ಮುದ್ದಿಟ್ಟು ಸ್ನೇಹದಿಂದ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ವಿಶ್ವಾಮಿತ್ರನನ್ನು ನೋಡಿ, "ಲೋಕಗಳ ಜನಕನಾದ ಈತನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡಲು ಜನಕ ಮಹಾರಾಜನು ಅದೆಷ್ಟು ಪುಣ್ಯವಂತನೋ!" ಎಂದು ಉದ್ಗರಿಸಿದ. ಆಗ ರಾಜಮೌಳಿಯಾದ ಮಿಥಿಲಾಧೀಶನು ಶಿವನಿಗೆ ಅಭಿನಮಿಸಿ

ವಿನಯದಿಂದ ಆ ಬಿಲ್ಲಿನ ಪೂರ್ವವೃತ್ತಾಂತವನ್ನು ವಿಜ್ಞಾಪಿಸಿಕೊಂಡ: "ದೇವ, ನಾನು ಯಜ್ಞವನ್ನು ಮಾಡಲೋಸುಗ ಭೂಶೋಧನೆಗೆಂದು ಉಳುತ್ತಿರಲು ಹೊಳೆಯುವ ಒಂದು ಚಿನ್ನದ ಪೆಟ್ಟಿಗೆಯು ಕಾಣಿಸಿತು; ಅದನ್ನು ಮೇಲಕ್ಕೆತ್ತಿ ನಿಟ್ಟಿಸಿದಾಗ ಮನ್ಮಥನ ಹೆತ್ತ ಪದ್ಮೆಗೂ ಇಮ್ಮಡಿ ಶೋಭಯಮಾನವಾದ ಅಣುಗಿಯಿರುವುದು ಕಾಣಿಸಿತು. ಶುಭಕರವಾದ ಮಗು ಕಾಣಿಸಲು ಅವಳನ್ನು ಮಗಳನ್ನಾಗಿ ಸ್ವೀಕರಿಸುವ ಆಸೆ ಮನಸ್ಸಿನಲ್ಲಿ ಮೂಡಿತು. ಹಾಗಾಗಿ ಅವಳನ್ನು ಇಷ್ಟು ದಿನ ಸಾಕಿದೆ. ಆದರೆ ಈ ನನ್ನ ಮಗಳಿಗೆ ತಕ್ಕನಾದ ವರ ಎಲ್ಲಿದ್ದಾನು ಎಂಬ ಚಿಂತೆಯೂ ಮೂಡಿತು. ಅಲ್ಲದೆ ಈ ಮಗುವು ಭೂಮಿಯಲ್ಲಿ ಸಿಕ್ಕಿದುದು ಒಳ್ಳೆಯದೋ ಕೆಟ್ಟುದ್ದೋ ಎಂಬ ವ್ಯಾಕುಲತೆಯೂ ಮನಸ್ಸನ್ನಾವರಿಸಿತು. ಆದುದಾಗಲಿ ಎಂದು ಸಮಾಧಾನ ಪಡೆಯುವಷ್ಟರಲ್ಲಿ ಚಂದ್ರಪ್ರಭೆಯು ಭೂಮಿಗೆ ಇಳಿದು ಬಂದಂತೆ ಬಿಳಿಮೋಡಗಳ ನಡುವಿನಿಂದ ಜಗದಾನಂದ ರೂಪವೊಂದು ಕಾಣಿಸಿಕೊಂಡಿತು. ಅಂತಹ ಪುಣ್ಯಕರ ಪುರುಷಾಕೃತಿಯನ್ನು ಕಂಡು ವಿಸ್ಮಿತನಾಗಿ ಗಾಳಿಯಂತೆ ಭೂಮಿಗೆ ಇಳಿದು ಬರುವ ಆ ದಿವ್ಯಜ್ಯೋತಿಯನ್ನು ಕಂಡು ಅಚ್ಚರಿಗೊಂಡೆ. ಎಡದ ಭುಜದಲ್ಲಿ ವಲ್ಲಕಿಯನ್ನು ಧರಿಸಿ ಹರಿನಾಮವನ್ನು ಧ್ಯಾನಿಸುತ್ತ ಉಲ್ಲಾಸ ಆನಂದಗಳ ಸಾಗರದಲ್ಲಿ ಮುಳುಗೇಳುತ್ತ ಜಟಾಧಾರಿಯಾದ ಯತಿವರ ನಾರದ ನೆಲಕ್ಕೆ ಇಳಿದ. ನಾನು ಆದರದಿಂದ ಆತನಿಗೆ ನಮಸ್ಕರಿಸಿ ವಿಧಿಪೂರ್ವಕವಾಗಿ ಸತ್ಕರಿಸಿದೆ. ಆ ಬಳಿಕ 'ತಪೋರಾಶಿಯಾದ ತಮ್ಮ ಆಗಮನದಿಂದ ನನಗೆ ಮುಂದೆ ಒದಗಲಿರುವ ಶುಭಗಳ ಸೂಚನೆಯು ದೊರೆತಂತಾಯಿತು, ತಮ್ಮ ಚರಣಯುಗ ಸಂದರ್ಶನದಿಂದ ನಾನು ಧನ್ಯನಾದೆ' ಎಂದು ವಂದಿಸಿ ಸ್ತುತಿಗೈದೆ. ಅದರಿಂದ ಸಂತಸಗೊಂಡ ಯತಿವರನು ತನ್ನ ಯೋಗಬಲದಿಂದ ಅರಿತು 'ನೆಲವನ್ನಾಳುವ ಮಹಾರಾಜನಾದ ಮಹಾಮತಿ ನೀನು, ನಿನ್ನ ಪುಣ್ಯಫಲವನ್ನು ಏನೆಂದು ಬಣ್ಣಿಸಲಿ? ಸಾಕ್ಷಾತ್ ಇಂದಿರೆಯೇ ಭರಣಿಯಿಂದ ಉದಿಸಿ ನಿನಗೆ ಮಗಳೆನಿಸಿಕೊಂಡಿದ್ದಾಳೆ. ಈ ಕನ್ನಿಕಾಮಣಿಯನ್ನು ಜೋಪಾನವಾಗಿ ಕಾಪಾಡು, ನಿನಗೆ ಎಲ್ಲ ಶುಭಗಳೂ ಉಂಟಾಗುವುದು. ರಮಾನಾಥನು ರವಿವಂಶಸಂಭವನಾಗಿ ರಾಮ ಎಂದ ಹೆಸರಿನಿಂದ ಕೌಶಿಕನ ಯಜ್ಞಗಳನ್ನು ರಕ್ಷಿಸಿ, ಶಾಪದಿಂದ ಕಲ್ಲಾಗಿ ಬಿದ್ದಿರುವ ಅಹಲ್ಯೆಯನ್ನು ಉದ್ಧರಿಸಿ ಮಿಥಿಲೆಗೆ ಬರುತ್ತಾನೆ. ಈ ನಿನ್ನ ಕುವರಿಯನ್ನು ಅವಿರಳಭಕ್ತಿಯಿಂದ ನೀನವನಿಗೆ ಒಪ್ಪಿಸಿ ಕೃತಾರ್ಥನಾಗು' ಎಂದರು. ಆಗ ನಾನು, 'ಜಗದೀಶನು ಯಾವ ಕಾರಣದಿಂದ ಈ ಜಗತ್ತಿನಲ್ಲಿ ಮಾನುಷಾಕೃತಿವೆತ್ತಿ ಹುಟ್ಟುತ್ತಾನೆ? ಅದನ್ನು ನಾನು ಹೇಗೆ ತಿಳಿಯುವುದು ಎಂಬುದನ್ನು ಅರ್ಥವಾಗುವಂತೆ ತಿಳಿಸಿರಿ' ಎಂದೆನು. ಆಗ ಆ ಮುನಿವರ್ಯರು ಆ ವಿಷಯವನ್ನು ಪರತತ್ವವೆಂಬಂತೆ ಈ ರೀತಿ ವಿವರಿಸಿದರು: 'ವಿಶ್ರವಸು–ಕೇಕಸಿಯರ ಮಗನಾಗಿ ಹುಲಿಯಂತೆ ಕ್ರೂರನಾದ ದಶಮೌಳಿಯು ಹುಟ್ಟಿದ್ದಾನೆ. ಅವನು ಬ್ರಹ್ಮನ ವರದಿಂದ ಬಲಿಷ್ಠನಾಗಿರಲು ಇಂದ್ರಮುಖ್ಯ ದೇವತೆಗಳೆಲ್ಲ ವಿಷ್ಣುವಿನ ಬಳಿ ಹೋಗಿ ಬಿನ್ನವಿಸಿಕೊಳ್ಳಲು ಅವರಿಗೆ ದೇವದೇವನು ಅಭಯವನ್ನಿತ್ತ. ಸೂರ್ಯವಂಶಲಲಾಮನಾದ ದಶರಥನ ಯಜ್ಞಫಲದಿಂದ ಕೌಸಲ್ಯೆಯ ಗರ್ಭದಲ್ಲಿ ಜಗದ್ರಕ್ಷಕನು ಹುಟ್ಟಿ, ಕೌಶಿಕನ ಯಜ್ಞವನ್ನು ಸಂರಕ್ಷಿಸಿ, ಅಕ್ಷಪಾದನ ರಾಣಿಯನ್ನು ಕಾಯ್ದು, ಶಿವಧನುಸ್ಸನ್ನು ಭಂಗಿಸುತ್ತಾನೆ. ಅವನೇ ಶ್ರೀರಾಮನೆಂದು ತಿಳಿ' ಎಂದು ಹೇಳಿ ಸುರಮುನಿಯು ತೆರಳಿದರು.

"ಅಂದಿನಿಂದ ನನ್ನ ಮಗಳು ಇಂದಿರೆ ಎಂಬ ತಿಳಿವಳಿಕೆಯಿಂದ ವಿಶೇಷ ಆಸ್ಥೆಯಿಂದ ಸಲಹುತ್ತ ಬಂದಿದ್ದೇನೆ; ಪ್ರತಿದಿನವೂ ರಘುವೀರನನ್ನು ನೋಡುವ ಹಂಬಲದಿಂದ ನಾನು ಕಾಯುತ್ತಿದ್ದೇನೆ. ಅಲ್ಲದೆ ಶಿವಶರಾಸನವನ್ನೆತ್ತಿದವನಿಗೆ ನನ್ನ ಮಗಳನ್ನಿತ್ತು ಮದುವೆ ಮಾಡಿಕೊಡುವುದಾಗಿ ಸುದ್ದಿಯನ್ನು ಸಾರಿಸಿದೆ. ಹೀಗಾಗಿ ಜಗತ್ತಿನ ಭೂಪಾಲಕರು, ಮಹಾ ಪ್ರಾಜ್ಞರು ಎಲ್ಲ ಇಲ್ಲಿ ನೆರೆಯುವಂತಾಯಿತು. ತಮ್ಮ ಕೃಪೆಯಿಂದ ಪದ್ಮಾಕ್ಷನನ್ನು ನೋಡಿ ಸಂತಸಪಡುವಂತಾಯಿತು, ನನ್ನ ಇಚ್ಛೆ ಪೂರ್ಣವಾಯಿತು. ತಮ್ಮ ಪಾದದರ್ಶನದಿಂದ ನನ್ನೆಲ್ಲ ಆಸೆಗಳೂ ನೆರವೇರುವಂತಾಯಿತು" ಎಂದು ಜನನಾಥನು ಬಿನ್ನವಿಸಿದಾಗ, ಮಹರ್ಷಿಯು "ಹರ್ಷದಿಂದ ರಘುಕುಮಾರನಿಗೆ ನಿನ್ನ ಅಣುಗಿಯನ್ನಿತ್ತು ವಿವಾಹವನ್ನು ಘೋಷಿಸು" ಎಂದು ಸೂಚಿಸಿ, "ಪಶುಪತಿಯ ಸಾನ್ನಿಧ್ಯದಲ್ಲಿ ಈ ವಿವಾಹವನ್ನು ನೆರವೇರಿಸು. ದಶರಥ ಮಹೀಪಾಲ ಮುಂತಾದ ಬಂಧುಗಳೆಲ್ಲರಿಗೂ ಈ ವಿಷಯವನ್ನು ತಿಳಿಸಿ ಪ್ರೀತಿಯಿಂದ ಆಹ್ವಾನವನ್ನು ಕಳಿಸು; ಎಲ್ಲ ಕೆಲಸಗಳಿಗೂ ಸಿದ್ಧತೆಯನ್ನು ಮಾಡಲು ಅಮಾತ್ಯರುಗಳಿಗೆ ಆಜ್ಞಾಪಿಸು" ಎಂದು ತಿಳಿಸಿದ. ಆಗ ನಿಮಿಕುಲದರಸನು ಅವರಿಗೆ ನಮಿಸಿ ಅವರೆಂದಂತೆಯೇ ಮಾಡಲು ಸಜ್ಜಾಗಿ ಮಂತ್ರಿಗಣದೊಡನೆ ಅರಮನೆಗೆ ಮರಳಿದ. ಶ್ರೀರಾಮಪುರೀವಲ್ಲಭನು ತನ್ನ ಮಗಳಿಗೆ ವರನಾಗುತ್ತಾನೆಂಬ ಸಂಭ್ರಮೋತ್ಸಾಹಗಳು ಅವನ ಮನಸ್ಸನ್ನು ಆವರಿಸಿದವು.

೨೦. ಜನಕನು ಮಗಳ ವಿವಾಹವನ್ನು ನಿಶ್ಚೈಸಿ ದಶರಥನಿಗೆ ಓಲೆಯನ್ನು ಕಳಿಸಿದುದು

ಲಲಿತಾಬ್ಜನೇತ್ರೆಯೇ ಕೇಳು, ಉತ್ತರದ ಜನರಿಗೆ ಶುಭವಾರ್ತೆಯನ್ನು ಹೇಳಿ ಬರುವೆನೆಂದು ನಿಶ್ಚಯಿಸಿದ ಸೂರ್ಯನು ಪಶ್ಚಿಮಸಮುದ್ರವನ್ನು ಸೇರಿ ಕನಕಾಚಲವನ್ನು ಬಳಸಿಕೊಂಡು ಸಂತೋಷದಿಂದ ಪೂರ್ವಶಿಖರವನ್ನೇರಿದ. ದ್ವಿಜರೆಲ್ಲರೂ ಲಗುಬಗೆಯಿಂದ ಎಚ್ಚೆತ್ತು ತಮ್ಮ ಕಲಾಪಗಳಲ್ಲಿ ತೊಡಗಿದರು, ಮಿಥಿಲಾಧೀಶನೂ ಸಂಧ್ಯಾಕರ್ಮಗಳನ್ನು ಮಾಡಿ ಮುಗಿಸಿದ. ಆನಂತರ ದೂತರನ್ನು ಕರೆದು ವಿವಾಹದ ಪ್ರಸ್ತಾಪವಿರುವ ಶುಭಲೇಖವನ್ನು ಅವರ ಕೈಗಿತ್ತು ದಶರಥನೆಡೆಗೆ ಕಳಿಸಿದ. ಅವರು ಮೂರು ದಿವಸಗಳ ಕಾಲ ವೇಗವಾಗಿ ಪ್ರಯಾಣ ಮಾಡಿ ಪ್ರಖ್ಯಾತ ನಗರಿಯಾದ ಅಯೋಧ್ಯೆಯ ದ್ವಾರಕ್ಕೆ ಬಂದು, ತಾವು ಬಂದಿರುವ ವಿಷಯವನ್ನು ಮಹಾರಾಜರಿಗೆ ಅರುಹಲು ದ್ವಾರಸ್ಥರಿಗೆ ಬಿನ್ನವಿಸಿಕೊಂಡರು. ಅವನು ಬೇಗನೇ ರಾಜನ ಬಳಿ ಬಂದು ಮಿಥಿಲೇಶನ ದೂತರು ಕಾಯುತ್ತಿರುವ ವಿಷಯವನ್ನು ಭಯದಿಂದಲೇ ಹೇಳಿದ. ಸೀರಕೇತನನಾದ ಜನಕ ಮಹಾರಾಜನ ಚರರು ಬಂದಿರುವ ವಿಷಯ ತಿಳಿದು ಅವರನ್ನು ಕರೆತರಲು ದಶರಥನು ಅಪ್ಪಣೆಯಿತ್ತ. ಅದರಂತೆ ಮಿಥಿಲಾಧಿಪತಿಯ ಚರರು ಬಂದು ಹಜಾರದ ಮಧ್ಯದ ಸಿಂಹಪೀಠದಲ್ಲಿ ಮಂಡಿಸಿದ್ದ ರಘುಕುಲ ಚಕ್ರವರ್ತಿಯ ಪಾದಗಳಿಗೆ ಭಯಭಕ್ತಿಗಳಿಂದ ಎರಗಿ, ತಮ್ಮ ಮಹಾಪ್ರಭುಗಳು ಇತ್ತಿದ್ದ ಲೇಖದ ವಿಷಯವನ್ನು

ವಿವರಿಸಿ, ಅದನ್ನು ರಾಜನ ನಿಯೋಗಿಗಿತ್ತು ಕೈಮುಗಿದು, ತ್ವರಿತವಾಗಿ ಆ ಪತ್ರಕ್ಕೆ ಉತ್ತರವನ್ನು ಕಳಿಸುವ ಕೃಪೆ ಮಾಡಲು ತಮ್ಮ ಪ್ರಭುಗಳು ಬಿನ್ನವಿಸಿಕೊಂಡಿದ್ದಾರೆಂದು ಅರುಹಿದರು. ತನ್ನ ಮಗ ರಾಮ ಹಾಗೂ ಜನಕನ ಮಗಳು ಸೀತೆಯರ ವಿವಾಹಮಂಗಳದ ವಿಷಯವನ್ನು ಕೇಳಿ ದಶರಥನ ಹರ್ಷಾಬ್ಧಿಯು ಉಕ್ಕೇರಿತು. ಮಹಾರಾಜನು ತಕ್ಷಣವೇ ಸುಮಂತನಿಗಾಗಿ ಕರೆ ಕಳಿಸಿ ಬರಮಾಡಿಕೊಂಡು ಆತನ ಕೈಗೆ ಜನಕ ಮಹಾರಾಜ ಕಳಿಸಿದ್ದ ಲೇಖವನ್ನಿತ್ತ. ಅದನ್ನು ನಿಟ್ಟಿಸಿ ನೋಡಿದ ಮಂತ್ರಿಯು ಅದರ ಮುದ್ರೆಯೊಡೆದು, ರಾಜನ ಅಪ್ಪಣೆ ಪಡೆದು ಅದನ್ನು ಓದಲು ತೊಡಗಿದ.

ಅದರ ಒಕ್ಕಣೆ ಹೀಗಿತ್ತು: 'ಶ್ರೀಸಮಸ್ತಸದ್ಗುಣರತ್ನ ರತ್ನಖನಿ ತಾಮರಸಮಿತ್ರ ಮೈತ್ರೀಕೃತಪರಾಕ್ರಮ ಸುನಾಮ ಸುತ್ರಾಮಾರಿಖಂಡನಾಪ್ಸರನಿಚಯಸ್ತುತಿಮು- ಖರಿತಾ ಶಾಂತರಸೋಮ ಕರ್ಪೂರಹಾರಪಟೀರ ಸಾಮಜತುಷಾರಡಿಂಡೀರ ಹಾರಾದಿಸ್ತೋಮ ಸತ್ಕೀರ್ತಿಧವಳೀಕೃತ ಜಗತ್ರಿತಯನಾರ್ತಜನಪಾರಿಜಾತ ಸಾಮಂತಸೀಮಂತಿನೀಚಿಕುರನಿಚಯ ಸುರಭಿಕಳಿತಸಖರೋಪಲಾಲಿತೋ- ದ್ದಾಮ ಪದಯುಗರಾಜರಾಜಮಕುಟೀತಟವಿರಾಜಿತಸುಮೌಕ್ತಿಕಾಭ ಭೀಮಬಲ ದಶರಥ ಮಹೀಪಾಲಚಂದ್ರನಿಗೆ ಪ್ರೇಮದಿಂದ ಜನಕಾಖ್ಯನು ನೇಹಪೂರ್ವಕದಿಂದ ಅಭಿರಾಮಸಂಪ್ರೀತಿಯಿಂದ ರಚಿಸಿ ಕಳುಹಿದ ಪತ್ರ; ತಮ್ಮ ಕರುಣದಿಂದ ನಾನಿಲ್ಲಿ ತಮ್ಮಂದಿರು ಪುರೋಹಿತರು ಅಮಾತ್ಯರು ಪರಿಜನ ಸಹಿತ ಕುಶಲದಿಂದಿದ್ದೇನೆ. ತಮ್ಮ ಪುರನಿವಾಸಿಗಳೆನಿಸುವ ಇಷ್ಟ ಬಂಧುಪ್ರಕರದ ಯೋಗಕ್ಷೇಮಕ್ಕೆ ಬರೆಸುವುದು. ಆನಂತರ ನನ್ನ ಲಕ್ಷ್ಮೀಸಮಾನಳಾದ ಮಗಳು ವೀರ್ಯಶುಲ್ಕಳು; ಶಿವಧನುಸ್ಸನ್ನು ಎತ್ತಿದವನಿಗೆ ಪರಿಣಯ ಮಾಡಿಕೊಡುವೆನೆಂದು ಸಕಲ ಮುನಿಜನರ ಅನುಮತಿಯಿದ ನಿಶ್ಚಯಿಸಿದ್ದೆ. ಸಕಲ ದೇಶದ ಅಧಿಪತಿಗಳು ಕೌತುಕವನ್ನು ನೋಡುವ ಉದ್ದೇಶದಿಂದ ಬಂದರು; ಇತ್ತ ತಮ್ಮ ಕುಮಾರರಾದ ರಾಮಭದ್ರ ಮತ್ತು ಲಕ್ಷ್ಮಣರೊಡನೆ ಗುರು ವಿಶ್ವಾಮಿತ್ರರು ಬಂದು ನನ್ನ ನಗರದಲ್ಲಿ ನಿಂತರು. ತಮ್ಮ ಅದೃಷ್ಟ ಪರೀಕ್ಷಿಸಲು ಬಂದಿದ್ದ ಇತರ ರಾಜರಿಂದ ಕೋದಂಡವನ್ನು ಅಲುಗಿಸಲೂ ಸಾಧ್ಯವಾಗದಾಗ ಅವರೆಲ್ಲ ಖಿನ್ನರಾಗಿ ಮರಳಿದರು. ಧನುಸ್ಸನ್ನೆತ್ತುವಂತೆ ಮುನಿವರ್ಯರು ಶ್ರೀರಾಮನಿಗೆ ಸೂಚಿಸಲು ಒಂದೇ ಕ್ಷಣದಲ್ಲಿ ಕುಮಾರನು ಬಿಲ್ಲನ್ನು ಹೆದೆಯೇರಿಸಿಬಿಟ್ಟ. ಸಭೆಯಲ್ಲಿದ್ದ ಮುನಿಪುಂಗವರೂ ರಾಜಾಧಿರಾಜರೂ ಸಂತಸಗೊಂಡರು. ಹೀಗಾಗಿ ನನ್ನ ಮಗಳನ್ನು ತಮ್ಮ ಕುಮಾರನಿಗೆ ಸಂತೋಷದಿಂದ ಮದುವೆ ಮಾಡಿ ಕೊಡುತ್ತೇನೆ. ಇದಕ್ಕೆ ಶಿವನ ಅನುಮತಿಯೂ ಇದೆ. ತಾವು ಈ ಶುಭಕಾರ್ಯಕ್ಕೆ ಸಕಲಜನಗಳ ಜೊತೆಗೆ ಬುಧಶಿರೋಮಣೀ ವಸಿಷ್ಠರೇ ಆದಿಯಾದ ಮುನಿಶ್ರೇಷ್ಠರೊಡನೆ ಆಗಮಿಸಬೇಕು' ಎಂದಿದ್ದ ಪತ್ರವನ್ನು ಸುಮಂತನು ಚದುರಿನಿಂದ ವಾಚಿಸಿದ.

ಪತ್ರದ ವಿಷಯವನ್ನು ತಿಳಿದ ದಶರಥನು ಹದಿನಾಲ್ಕು ಲೋಕಗಳು ತನ್ನ ಕೈವಶವಾದಂತೆ ಹರ್ಷಾಬ್ಧಿಯನ್ನು ಹೊರಸೂಸಿದ. ಕತ್ತಲಲ್ಲಿ ಬೇಯುವ ಎಣೆವಕ್ಕಿಗಳ ಸಮೂಹಕ್ಕೆ ಕತ್ತಲನ್ನು ಭೇದಿಸಿಕೊಂಡು ಅಖಂಡತೇಜದಿಂದ ಸೂರ್ಯನು ಮೂಡಿಬಂದರೆ

ಹೇಗೋ ಹಾಗೆ ಆಯಿತು. ಹರ್ಷಾಂಬುಧಿಯಲ್ಲಿ ಮುಳುಗಿದ ಮನೋವೃತ್ತಿಯಿಂದ ಹೊರಬಂದ ದಶರಥನು ಎರಡೂ ಕಡೆಗಳನ್ನು ನಿಟ್ಟಿಸುತ್ತ ಗುರು ವಾಮದೇವರಿಗೆ, "ತಮ್ಮ ಕಟಾಕ್ಷದಿಂದ ಶ್ರೀರಾಮನು ಕೀರ್ತಿಯನ್ನು ಪಡೆದು, ಕೌಶಿಕ ಮಹರ್ಷಿಗಳ ಅಪ್ಪಣೆಯಂತೆ ಹರಚಾಪವನ್ನು ಮುರಿದು ಋಷಿಸದೃಶ ಜನಕ ಮಹಾರಾಜನ ನಗರದಲ್ಲಿರುವುದನ್ನು ಕೇಳಿ ಹೋದ ಜೀವ ಮತ್ತೆ ಬಂದಂತೆ ಸಂತಸವಾಗಿದೆ. ತಮ್ಮ ಕೃಪೆಯಿಂದ ನನಗೆ ಸುತಲಾಭವಾಯಿತು; ಕೌಶಿಕ ತಪೋಧನರ ದೆಸೆಯಿಂದ ನನ್ನ ಮಕ್ಕಳು ಕ್ಷೇಮದಿಂದಿರುವಂತಾಯಿತು. ಮಗನ ಶೌರ್ಯವನ್ನು ಕಂಡು ತನ್ನ ಮಗಳನ್ನಿತ್ತು ಮದುವೆ ಮಾಡಲು ಅನುಮತಿಸಬೇಕೆಂದು ಸೀರಧ್ವಜನು ಈ ಪತ್ರವನ್ನು ಕಳಿಸಿದ್ದಾನೆ. ಈ ವಿಷಯದಲ್ಲಿ ತಡಮಾಡುವುದು ಸಲ್ಲದು" ಎಂದು ಬಿನ್ನವಿಸಿಕೊಂಡ. ಅಲ್ಲಿದ್ದ ಋಷಿಸಮೂಹವೆಲ್ಲ ಅದಕ್ಕೆ ಸಮ್ಮತಿಯಿತ್ತಿತು, ಅಮಾತ್ಯಾವಲ್ಲಿಯೂ ಅದನ್ನೊಪ್ಪಿತು. ವಸಿಷ್ಠ ಮಹರ್ಷಿಯೂ ಅನುಮತಿಯೀಯಲು ಮತ್ತಷ್ಟು ಸಂತಸವೆನಿಸಿತು. ಸಕಲ ಬಂಧುಜನರೊಡನೆ ವಿವಾಹಮಂಗಳಕ್ಕೆ ತೆರಳಬೇಕೆಂದು ಸೂಚಿಸಿ ಮುನಿಪೋತ್ತಮರು ಸಂಧ್ಯಾಕೃತ್ಯಗಳಿಗಾಗಿ ತೆರಳಿದರು. ಇತ್ತ ದಶರಥ ಮಹಾರಾಜನು ಅಮಾತ್ಯರುಗಳನ್ನು ಬರಮಾಡಿಕೊಂಡು ತುರಗರಥಗಜಪದಾತಿಗಳನ್ನು ಪಯಣಕ್ಕೆ ಸಜ್ಜುಗೊಳಿಸಲೂ, ಧನ ಕನಕವಸ್ತುವಾಹನಗಳನ್ನೂ, ಮಿತ್ರಬಾಂಧವರನ್ನೂ ಮುನಿಮುಖ್ಯರುಗಳನ್ನೂ ಇಷ್ಟರನ್ನೂ ಕರೆದೊಯ್ಯಲು ಬೆಳಗಾಗುವಷ್ಟರಲ್ಲಿ ಸಿದ್ಧರಾಗಲು ಏರ್ಪಾಟು ಮಾಡಬೇಕೆಂದೂ ನೇಮಿಸಿದ. ಆನಂತರ ಅರಮನೆಗೆ ಬಂದು ನಡೆದ ವೃತ್ತಾಂತವನ್ನೆಲ್ಲ ತನ್ನ ಸತಿಯರಿಗೆ ಹೇಳಿ ಆ ರಾತ್ರಿಯನ್ನು ಹರುಷದಿಂದ ಕಳೆದ.

ಕಮಲಗಳ ಜೀವನೌಷಧವೂ ಚಕ್ರವಾಕಗಳ ಪ್ರಾಣಾಧಾರವೂ ಅಖಿಲ ತಾಪಸವರ್ಯರಾಜಿಯ ಶುಭೋದಯಬೀಜವೂ ನಿಶಾಟಗಳ ಬಾಡಬವೂ ರಾಕ್ಷಸರ ತೇಜೋಹಾರಕವೂ ಆದ ನಭೋಮಣಿಯು ಸೌಧಮಕುಟದಲ್ಲಿ ಲೋಕಕ್ಕೆ ಅಚ್ಚರಿಯುಂಟುಮಾಡುತ್ತ ಬೆಳಗಿದ. ಹೀಗೆ ತರಣಿಯುದಯಿಸಲು ಇಂದ್ರಮಿತ್ರನೂ ಸೂರ್ಯಕುಲಶ್ರೇಷ್ಠನೂ ಆದ ದಶರಥನು ಹರಿಯನ್ನು ನೆನೆಯುತ್ತ ಎಚ್ಚೆತ್ತು ಬೇಗ ಕೈಕಾಲುಮುಖಮೈಗಳನ್ನು ತೊಳೆದುಕೊಂಡು ಆಭರಣಗಳಿಂದ ಅಲಂಕೃತಗೊಂಡು ಓಲಗಶಾಲೆಗೆ ಬಂದು ಮಂತ್ರಿಗಳು ಪರಿಜನರು ಪುರಜನರು ಮುಂತಾದವರೊಂದಿಗೆ ಸಮಾಲೋಚಿಸಿ, ಗುರು ವಸಿಷ್ಠಾದಿಗಳ ಸೂಚನೆಯಂತೆ ಮದುವೆಯ ದಿಬ್ಬಣ ಹೊರಡಲು ಉತ್ಸಾಹದಿಂದ ಸಿದ್ಧನಾದ. ಚಿನ್ನದ ರಥವನ್ನೇರಿ ತನ್ನನ್ನು ಅಭಿನಂದಿಸುವ ರಾಜರುಗಳೊಡನೆ ಸಂಭಾಷಿಸುತ್ತ ಉಪಚರಿಸಿ, ವಂದಿಮಾಗಧರ ಉಗ್ಗಡಣೆಯನ್ನು ಕೇಳಿ ಮನಸ್ಸಿನಲ್ಲಿ ಸಂತಸ ತಾಳಿ, ಶೌರ್ಯಸುಭಾಟಾವಳಿ ಗಜಾಶ್ವಗಳ ಅಧಿಪರನ್ನು ಮನ್ನಿಸಿ, ಭೂಮಿಯ ಮೇಲಣ ಇಂದ್ರನಂತೆ ಕಂಗೊಳಿಸುತ್ತಿದ್ದ ದಶಸ್ಯಂದನನು ಅಯೋಧ್ಯೆಯಿದ ಹೊರಟ. ಧ್ವಜ ಚಾಮರಗಳ ಗುಂಪುಗಳು ಆಗಸವನ್ನೆಲ್ಲ ವ್ಯಾಪಿಸಲು, ಭೂಭುಜೋತ್ತಮರ ಕಿರೀಟರತ್ನಗಳ ದೀಧಿತಿಯು ದಿಕ್ಕುಗಳಲ್ಲೆಲ್ಲ ಹರಡಲು, ಆನೆಕುದುರೆಗಳ ಪದಾಘಾತದಿಂದೆದ್ದ ಧೂಳು ಆಕಾಶಗಂಗೆಗೆ ಸೇತುವೆಗಟ್ಟಿದಂತೆ

ಕಾಣುತ್ತಿರಲು ಸಾಗಿದ ಮದುವೆ ದಿಬ್ಬಣದ ಆ ದಾರಿಯ ಪರಿಯನ್ನೆಂತು ವರ್ಣಿಸುವುದು! ಭೂಮಿ ಬೆಸಲಾದಂತೆ ಪಡೆಯು ನಡೆಯುತ್ತಿರಲು ಅಡಿಗಡಿಗೆ ವೀರಘೋಷಮಾಡುವ ಭಟರಿಂದ ಕೂಡಿ, ಕತ್ತಿನಾದ, ಕುದುರೆಗಳ ಹೇಷಾರವ, ಆನೆಗಳ ಘೀಂಕಾರ, ಬಂಡಿಗಳ ದಡಬಡ ಸದ್ದು – ಇವುಗಳಿಂದ ಕೂಡಿ ಭಟರ ಕೊಂಬು ಕಹಳೆಗಳ ರವದಿಂದ ಎಂಟು ದಿಕ್ಕುಗಳು ಶಬ್ದಬ್ರಹ್ಮಮಯವಾಗಿ ಕಂಗೊಳಿಸುತ್ತಿತ್ತು! ಹೀಗೆ ಸಿಂಗರದ ಸೇನಾಸಮುದ್ರವು ಸಡಗರದಿಂದ ಮಿಥಿಲೇಶನು ಆಳುವ ನಗರದ ಉಪವನದೆಡೆಗೆ ಸಾಗಿತು.

ದಶರಥನ ದಿಬ್ಬಣವು ನಗರವನ್ನು ಸಮೀಪಿಸುತ್ತಿರುವ ಸುದ್ದಿಯನ್ನು ಚರರು ಜನಕಮಹಾರಾಜನಿಗೆ ಮುಂಚಿತವಾಗಿ ತಿಳಿಸಲು ಆತನು ಸಂಭ್ರಮದಿಂದ ಬಂದು ನೃಪಪುಂಗವನನ್ನು ಸಕಲವೈಭವದಿಂದ ಇದಿರುಗೊಂಡು ಉಪಚರಿಸಿದ. "ನಿನ್ನ ದರ್ಶನದಿಂದಾಗಿ ಕಣ್ಣುಗಳ ಆಲಸ್ಯ ಹರಿಯಿತು, ದೀರ್ಘಕಾಲದ ಬಳಿಕ ನಿನ್ನನ್ನು ಕಂಡ ನನ್ನ ಭಾಗ್ಯ ಹೆಚ್ಚಿತು, ದೇವರ ಕರುಣೆ ನನ್ನ ಮೇಲೆ ಬೀಳುವಂತಾಯಿತು" ಎಂದು ಪ್ರೀತಿಯಿಂದ ಅಪ್ಪಿಕೊಂಡು, ಮಾಡಬೇಕಾದ ಉಪಚಾರಗಳನ್ನೆಸಗಿ, ಮುನಿ ವಸಿಷ್ಠರೇ ಮುಂತಾದವರನ್ನು ಗೌರವದಿಂದ ಕಂಡು ಕಾಣಿಕೆಯಿತ್ತು ನಮಸ್ಕರಿಸಿ ಮಿಥಿಲಾಧೀಶನು ಕುಳಿತುಕೊಂಡ. "ತಮ್ಮ ಭುಜಬಲ ಪರಾಕ್ರಮದಿಂದ ರಾಜನ್ಯಕುಲವನ್ನೆಲ್ಲ ಗೆಲ್ಲಬಲ್ಲ ನಿನ್ನ ಮಕ್ಕಳ ದರ್ಶನವು ನನ್ನ ಪುಣ್ಯಪರಿಪಾಕದಿಂದ ಸಂಭವಿಸಿತು. ನಾನು ಮಾಡುವ ಯಜ್ಞದ ಕೊನೆಯಲ್ಲಿ ನನ್ನ ಕುವರಿಯು ಭೂಸುರರ ಆಶೀರ್ವಾದದಿಂದ ಹಾಗೂ ನನ್ನ ಭಾಗ್ಯದಿಂದ ನಿಮ್ಮ ಮಗನ ಮಡದಿಯಾಗುತ್ತಾಳೆ. ನಾಳಿನ ಬೆಳಿಗ್ಗೆ ಮೂಡುದಿಕ್ಕಿನಲ್ಲಿ ವಿವಾಹ ಮಹೋತ್ಸವವು ನೆರವೇರುವುದು" ಎಂದು ಮಿಥಿಲೇಶನು ಶುಭವಾಣಿಯಿಂದ ಉಸುರಲು ದಶರಥನು, "ಜಗತ್ತಿನಲ್ಲಿ ದಾನ ಎಂಬುದು ದಾತೃವಿನ ಇಚ್ಛೆಯಲ್ಲಿಯೇ ಇರುತ್ತದೆ. ನಿನ್ನ ಚಿತ್ತದಲ್ಲಿ ಹೇಗಿದೆಯೋ ಅದನ್ನು ನೀನು ಮಾಡು, ನಾನು ನಿಮ್ಮ ಜೊತೆಗಿರುತ್ತೇನೆ" ಎಂದು ಮಧುರತರವಾದ ಮಾತುಗಳಿಂದಲೂ ನಮ್ರಭಾವದಿಂದಲೂ ಹೇಳಿದ. ಈ ಮಾತುಗಳಿಂದ ಮುದಗೊಂಡ ಜನಕನು ಅವನನ್ನು ತನ್ನ ಅರಮನೆಗೆ ಕರೆದೊಯ್ದು ಸಕಲ ಉಪಚಾರಗಳಿಂದ ಸಂತುಷ್ಟಿಗೊಳಿಸಿದ. ಅಷ್ಟರಲ್ಲಿ ರಾಮಲಕ್ಷ್ಮಣರ ಜೊತೆಗೂಡಿ ವಿಶ್ವಾಮಿತ್ರ ಮುನಿಯು ಬಂದಾಗ ಈರ್ವರೂ ಜನಪತಿಗಳು ಬಂದು ವಂದಿಸಿ ಮೃದೂಕ್ತಿಯಿಂದ ನುತಿಸಿ ಕರೆದೊಯ್ದು ಕನಕಪೀಠದಲ್ಲಿ ಕುಳ್ಳಿರಿಸಿದರು. ತಂದೆಯನ್ನು ಕಂಡ ರಾಮಲಕ್ಷ್ಮಣರು ಆತನ ಪಾದಗಳಿಗೆರಗಿದರು. ದಶರಥನು ಅವರನ್ನು ಅಪ್ಪಿಕೊಂಡು ಆನಂದಾಶ್ರುಗಳನ್ನು ಸುರಿಸುತ್ತ, ಮುನಿತಿಲಕನನ್ನು ಹಾಡಿಹೊಗಳಿದ. ಮಕ್ಕಳ ಗಲ್ಲವನ್ನಲುಗಿಸಿ ಮುಂಡಾಡಿ ಕಡುಪ್ರೇಮದಿಂದ ಮಹಾರಾಜನು ಆನಂದಸಲ್ಲಾಪ ಮಾಡುತ್ತ, ಮೃಡಸನ್ನಿಭರಾದ ಮುನಿಗಳ ಮಾತಿನ ಬೆಡಗಿನಿಂದ ಆ ರಾತ್ರಿಯನ್ನು ಬಹು ಸಂತಸದಿಂದ ಕಳೆದ.

ಪಾವನವಾದ ಐರಾವತದ ತವರುಮನೆಯಾದ ದಿಕ್ಕಿನಲ್ಲಿ ಅನುರಾಗದಿಂದ ಸೂರ್ಯನುದಿಸಲು ಬ್ರಹ್ಮಸಮಾನರಾದ ಋಷಿಗಣದೊಡನೆ ಸಮುಚಿತವಾಗಿ ಸಂಧ್ಯಾದಿಗಳನ್ನು ಪೂರೈಸಿದ ಜನಕ ಮಹಾರಾಜನು ಬಿಡಾರಕ್ಕೆ ಬಂದು ಪುರೋಧಸ

ಶತಾನಂದ ಭೃಗು ಮುಂತಾದವರೊಡನೆ ಮುಂದೆ ಆಗಬೇಕಾದ ಕಾರ್ಯದ ಬಗ್ಗೆ, "ಪರಮಪಾವನವಾದ ಇಕ್ಷುಮತಿಯ ತೀರದಲ್ಲಿ ಮಹಾಪುಣ್ಯಕರವಾದ ಸಾಂಕಾಶ್ಯಪುರವು ಶೋಭಿಸುತ್ತದೆ. ಅಲ್ಲಿ ನನ್ನ ತಮ್ಮನಾದ ಕುಶಧ್ವಜನಿದ್ದಾನೆ. ಕ್ರತುಸಂರಕ್ಷಣೆಯನ್ನು ಮಾಡಲು ಇಂದ್ರೋಪಮಶೌರ್ಯಯುತನಾದ ಆತನನ್ನು ಈ ಸಮಯದಲ್ಲಿ ಕರೆಸಬೇಕು" ಎಂದು ಸ್ನೇಹಪೂರ್ವಕವಾಗಿ ನುಡಿಯಲು, ಶತಾನಂದರು ಚರರಿಗೆ ಹಾಗೆ ಮಾಡಲು ಅಪ್ಪಣೆಯಿತ್ತರು. ಆ ಭಟರು ಕುದುರೆಗಳನ್ನೇರಿ ವೇಗದಿಂದ ಸಾಂಕಾಶ್ಯನಗರಿಗೆ ಬಂದು ಕುಶಧ್ವಜನಿಗೆ ನಮಸ್ಕರಿಸಿ ಜನಕ ಮಹಾರಾಜನು ಹೇಳಿಕಳಿಸಿದ ವಿಷಯವನ್ನು ಬಿನ್ನವಿಸಿದರು. ಆತನು ಅಣ್ಣನ ಆಜ್ಞೆಯನ್ನು ಮೀರದೆ ತಡಮಾಡದೆ ತನ್ನ ಪರಿಜನಸಹಿತವಾಗಿ ಮಿಥಿಲೆಗೆ ಬಂದ. ಅಷ್ಟರಲ್ಲಿ ವಿಷ್ಣುವಿನ ನೇಮದಂತೆ ಇಂದ್ರನು ಬಂದ. ಕುಶಧ್ವಜನು ಜನಕನ ಬಳಿ ಬಂದು ಶತಾನಂದರಿಗೆ ನಮಿಸಿ ಶುಭಪೀಠವನ್ನಲಂಕರಿಸಿದ. ಮುಂದೆ ನಡೆಯಬೇಕಾದ ಕಾರ್ಯಗಳ ಬಗ್ಗೆ ಆಲೋಚಿಸಿ ಮಂತ್ರಿಶ್ರೇಷ್ಠ ಸುಧಾಮನನ್ನು ಕರೆಸಿ, ರಘೂತ್ತಮನನ್ನೂ, ಶ್ರೀರಾಮ ಲಕ್ಷ್ಮಣರನ್ನೂ, ಅವರ ಬಂಧುಬಾಂಧವರನ್ನೂ, ಋಷಿಗಳನ್ನೂ ತ್ವರೆಯಿಂದ ಕರೆತರುವಂತೆ ಸೂಚಿಸಲು, ಅವನು ಅದರಂತೆಯೇ ಅವರೆಲ್ಲರನ್ನೂ ಮಿಥಿಲೇಶನ ಪರವಾಗಿ ಆಹ್ವಾನಿಸಿ ಕರೆತಂದ.

ನಿಮಿಕುಲೋತ್ಪನ್ನನಿಗೆ ತಮ್ಮ ವಂಶಸಂಗತಿಯನ್ನು ತಿಳಿಸಿಕೊಡಬೇಕೆಂದು ದಶರಥನು ರಘುವಂಶದ ಅತಿಶಯಕ್ಕೆ ದೇವತೆಯೆನಿಸಿದ ವಸಿಷ್ಠರನ್ನು ಕೇಳಿಕೊಳ್ಳಲು ಅವರು ಈ ರೀತಿ ಹೇಳತೊಡಗಿದರು: "ಬ್ರಹ್ಮನು ಶ್ರೀಹರಿಯ ನಾಭಿಯಲ್ಲಿ ಜನಿಸಿದ, ಆತನಿಗೆ ಮಗ ಮರೀಚಿ, ಅವನ ಮಗ ಕಶ್ಯಪ, ಅವನಿಗೆ ಮಗನಾಗಿ ಹುಟ್ಟಿದವನು ಮನು, ಮನುವಿನಿಂದ ಇಕ್ಷ್ವಾಕು, ಅವನ ಮಗ ಕುಕ್ಷಿ, ಅವನಿಗೆ ಸುತನಾದವನು ವಿಕುಕ್ಷಿ, ಆತನಿಗೆ ಮಗ ಬಾಣ, ಬಾಣನಾದ ಮೇಲೆ ಅರಸನಾದವನು ಅನರಣ್ಯ, ಅವನಿಂದ ಪೃಥ್ವಿ ಹುಟ್ಟಿದ, ಅವನ ಮಗ ಲೋಕವಿಶ್ರುತನಾದ ತ್ರಿಶಂಕು, ಅವನ ಮಗ ದುಂದುಮಾರ, ಯವನಾಶ್ವ ಎಂಬುವವನು ಅವನ ಮಗ, ಅವನ ಪುತ್ರ ಮಾಂಧಾತ, ಅವನಿಂದ ಜನಿಸಿದವನು ಸಂಧಿ, ಸಂಧಿಯ ಕುವರ ಧ್ರುವಸಂಧಿ, ಅವನ ಕಂದ ಭರತ, ಭರತನ ಮಗ ಮಹಾತೇಜಸ್ವಿಯಾದ ಅಸಿತ. ಅವನಿಗೆ ಹೈಹಯ ತಾಳಜಂಘ ಶಶಿಬಿಂದುಗಳು ಶತ್ರುಗಳು; ಅವರೆಲ್ಲ ರಣದಲ್ಲಿ ಅಸಿತನನ್ನು ಸೋಲಿಸಿ ದೇಶದಿಂದ ಹೊರಗಟ್ಟಿದರು. ಅಸಿತನಿಗೆ ಇಬ್ಬರು ಮಡದಿಯರು, ಅವರೊಡನೆ ಆತನು ಹಿಮಾಚಲದ ವನಕ್ಕೆ ಹೋದ. ಅವನ ಮಡದಿಯರಲ್ಲಿ ಒಬ್ಬಳು ಗರ್ಭವತಿಯಾದಳು, ಅದನ್ನು ಕಂಡು ಮತ್ತೊಬ್ಬ ಹೆಂಡತಿಯು ಅವಳಿಗೆ ವಿಷವನ್ನುಣಿಸಿದಳು. ಗರ್ಭವತಿ ಪತ್ನಿಯು ನೋವನ್ನು ತಡೆಯಲಾರದೆ ಹಿಮಾಚಲಕ್ಕೆ ಹೋದಾಗ ಅದರ ತುದಿಯಲ್ಲಿ ಭೃಗುವಿನ ಮಗನಾದ ಚ್ಯವನ ಎಂಬ ಮಹಾಮುನಿಯಿದ್ದ. ತನಗೆ ಸುತಲಾಭವಾಗುವಂತೆ ಹರಸಬೇಕೆಂದು ಆಕೆ ಚ್ಯವನನನ್ನು ಬೇಡಿಕೊಳ್ಳಲು, ಆಕೆಯ ಗರ್ಭದಲ್ಲಿ ಮಹಾಬಲಶಾಲಿಯಾದ ಮಗುವು ವಿಷಸಹಿತವಾಗಿಯೇ ಜನಿಸುವನೆಂದು ಅಭಯವನ್ನಿತ್ತ. ಅವಳು ಸಮಾಧಾನಗೊಂಡಳು; ಆದರೆ ಕೆಲಕಾಲದಲ್ಲಿಯೇ ರಾಜನು

ಅಸ್ವಸ್ಥನಾದ. ಮತ್ತೆ ಆ ಕಾಮಿನಿಯು ಮುನಿಯ ಬಳಿ ಹೋಗಿ ಪ್ರಲಾಪಿಸಲು ಅವನು ಅವಳನ್ನು ನಾನಾ ವಿಧದಿಂದ ಸಮಾಧಾನಪಡಿಸಿದ; ಅನತಿ ಕಾಲದಲ್ಲಿ ರಾಜನು ಸ್ವರ್ಗಸ್ಥನಾದ. ಕೆಲವು ದಿನಗಳು ಕಳೆಯಲು ಅವಳ ಹೊಟ್ಟೆಯಲ್ಲಿ ವಿಷಸಹಿತವಾಗಿಯೇ ಪುತ್ರನೊಬ್ಬನು ಜನಿಸಿದ. ಗರಸಮೇತವಾಗಿ ಹುಟ್ಟಿದುದರಿಂದ ಮುನಿಯು ಮಗುವಿಗೆ ಸಗರನೆಂದೇ ಹೆಸರನ್ನಿರಿಸಿದ. ಆ ಸಗರನ ಮಗನೇ ಅಸಮಂಜನೆಂಬುವವನು, ಅವನ ಮಗ ಅಂಶುಮಾನ್, ಅವನ ಪ್ರೀತಿಯಪುತ್ರ ದಿಲೀಪ, ಅವನಿಗೆ ಮಗನಾಗಿ ಜನಿಸಿದವನು ಭಗೀರಥ, ಅವನಿಗೆ ಕಕುತ್ಸ್ಥ ಮಗ, ಕಕುಸ್ಥನ ಮಗನೇ ರಘು, ಅವನ ಪುತ್ರ ಕಲ್ಮಾಷಪಾದ, ಅವನ ಅಣುಗ ಶಂಖಣ, ಆತನಿಗೆ ಭೀಮಬಲನಾದ ಸುದರ್ಶನ ಮಗನಾಗಿ ಹುಟ್ಟಿದ, ಅವನ ಮಗನೇ ಅಗ್ನಿವರ್ಣ, ಅವನ ಕುಮಾರ ಮರು, ಮರುವಿನ ಸುತ ಪ್ರಶುಶ್ರುಕ, ಚಂದ್ರಸಮಾನ ತೇಜಸ್ವಿಯಾದ ಅವನಿಗೆ ಮಗನಾಗಿ ಹುಟ್ಟಿದವನು ಅಂಬರೀಷ. ಅವನಿಗೆ ಮಗನಾದವನು ನಹುಷ, ಅವನ ಮಗ ಯಯಾತಿ, ಅವನ ಮಗ ನಾಭಾಗ, ಅವನ ಮಗನೇ ಅಜ, ಅಜನ ಮಗನೇ ಈ ದಶರಥ, ಈ ಪ್ರಚಂಡನ ಮಕ್ಕಳೇ ಶ್ರೀರಾಮ ಲಕ್ಷ್ಮಣರು; ಅವರೋ ಸೂರ್ಯತೇಜಸ್ವಿಗಳು, ಅಮಿತವಿಖ್ಯಾತರು. ಇವರ ವಂಶವು ಬ್ರಹ್ಮನಿಂದಲೇ ಮೊದಲಾದುದು; ಈ ಸೂರ್ಯವಂಶಜರಾದ ರಾಮಲಕ್ಷ್ಮಣರಿಗೆ ನಿನ್ನ ಮಗಳಂದಿರನ್ನು ಮದುವೆಮಾಡಿಕೊಡಬೇಕೆಂದೂ, ಈ ಮೂಲಕ ಪರಿಶುದ್ಧವಾದ ಸೂರ್ಯವಂಶದ ಸಂಬಂಧವನ್ನು ಮಾಡುವುದೆಂದೂ ಯಾಚಿಸುತ್ತೇವೆ."

ಆಗ ವಸಿಷ್ಠರ ಪಾದಗಳಿಗೆ ನಮಿಸಿದ ಜನಕ ಮಹಾರಾಜನು ತನ್ನ ಕುಲದ ವೃತ್ತಾಂತವನ್ನು ವಿಸ್ತಾರವಾಗಿ ಹೇಳಲುಪಕ್ರಮಿಸಿದ. "ನಿಮಿಮಹೀಭುಜನು ಪರಮಧಾರ್ಮಿಕನಾಗಿದ್ದವನು, ಅವನಿಗೆ ಮಿಥಿ ಎಂಬ ಹೆಸರಿನ ಮಗನು ಹುಟ್ಟಿದ, ಅವನಿಗೆ ಉದಾವಸು ಎಂಬ ಮಗನಾದ, ಅವನ ಮಗನಾಗಿ ನಂದಿವರ್ಧನ ಎಂಬ ಹೆಸರಿನ ಮಗನಾದ, ನಂದಿವರ್ಧನನ ಮಗನೇ ಸುಕೇತು, ಆ ಧರ್ಮಾತ್ಮನಿಗೆ ಮಗನಾಗಿ ಜನಿಸಿದವನು ದೇವರಾತ, ದೇವರಾತನ ಪುತ್ರ ಸುಂದರಾಂಗನಾದ ಬೃಹದ್ರಥ, ಅವನಿಗೆ ಮಗನಾಗಿ ಹುಟ್ಟಿದವನು ಮಹಾವೀರ, ಆ ನೃಪೋತ್ತಮನಿಗೆ ಮಗನಾಗಿ ಹುಟ್ಟಿದವನು ಸುಧೃತಿ, ಅವನ ಆತ್ಮಜನೆಂದರೆ ಧರ್ಮಾತ್ಮನಾದ ಧೃಷ್ಟಕೇತು, ಅವನ ಮಗ ಹರ್ಯಶ್ವ, ಅವನ ಸುಪುತ್ರ ಮರು, ಮರುವಿನ ಅಣುಗ ಪ್ರತೀಂಧಕ, ಅವನ ಮಗ ದೇವೇಂದ್ರಸಮಾನ ಶೂರನಾದ ಕೀರ್ತಿರಥ, ಅವನಿಗೆ ಮಗನಾಗಿ ಹುಟ್ಟಿದವನು ದೇವಮೀಢ, ಆ ಮಹಾರಾಜನಿಗೆ ಮಗನಾದವನು ವಿಬುಧ, ಅವನ ಮಗ ಮಹೇಂದ್ರಕ, ಮಹೇಂದ್ರಕನ ಪುತ್ರ ಕೀರ್ತಿರಾತ, ಅವನ ಮಗ ಮಹಾರೋಮ, ಅವನ ಸುತ ಸ್ವರ್ಣರೋಮ, ಅವನಿಗೆ ಮಗನಾದವನು ಹ್ರಸ್ವರೋಮ, ಆ ಮಹಾತ್ಮನಿಗೆ ಇಬ್ಬರು ಮಕ್ಕಳು – ನಾನು ಮತ್ತು ಕುಶಧ್ವಜ. ಕೆಲಕಾಲವಾದ ಬಳಿಕ ತಮ್ಮನ ಯೋಗಕ್ಷೇಮವನ್ನು ನನಗೆ ಒಪ್ಪಿಸಿ ತನ್ನ ಪತ್ನಿಯೊಡನೆ ಮಹಾರಾಜನು ತಪೋವನಕ್ಕೆ ತೆರಳಿದ. ಅಲ್ಲಿಂದ ನಾನು ತಮ್ಮನೊಡನೆ ಸೇರಿ ರಾಜ್ಯವನ್ನಾಳುತ್ತಿದ್ದೇನೆ. ಹೀಗೆಯೇ

ಇರಲು ಒಮ್ಮೆ ಸಾಂಕಾಶ್ಯಾಧಿಪನಾದ ಸುಧನ್ವನು ಚತುರಂಗಬಲಸಮೇತನಾಗಿ ನನ್ನ ನಗರವನ್ನು ಸುತ್ತುವರಿದು ಶಿವಧನುಸ್ಸನ್ನೂ ಜಾನಕಿಯನ್ನೂ ತನಗೆ ಒಪ್ಪಿಸಬೇಕೆಂದು ಹೇಳಿಕಳಿಸಿದ. ನನಗೆ ಮೈ ಉರಿದುಹೋಗಿ ಅವನೊಡನೆ ಭೀಕರ ಯುದ್ಧದಲ್ಲಿ ತೊಡಗಿದೆ. ಆ ಯುದ್ಧದಲ್ಲಿ ಸುಧನ್ವನನ್ನು ಬೀಳುಗೆಡವಿ ಅವನ ರಾಜ್ಯವನ್ನು ನನ್ನ ಸ್ವಾಧೀನಪಡಿಸಿಕೊಂಡು ತಮ್ಮನನ್ನು ಅದರ ಅಧಿಪತಿಯನ್ನಾಗಿ ಮಾಡಿದೆ. ಆಗಿನಿಂದ ಕುಶಧ್ವಜನು ಅಲ್ಲಿಯೇ ನೆಲಸಿದ್ದಾನೆ. ಇದು ನನ್ನ ವಂಶದ ಚರಿತ್ರೆ. ನಾನು ಶ್ರೀರಾಮನಿಗೆ ಸೀತೆಯನ್ನೂ ಅವನ ಸೋದರ ಲಕ್ಷ್ಮಣನಿಗೆ ಊರ್ಮಿಳೆಯನ್ನೂ ಆದರಪೂರ್ವಕವಾಗಿ ಇತ್ತು ವಿವಾಹ ಮಾಡುತ್ತೇನೆ. ಭೂಸುರೋತ್ತಮರ ಅನುಜ್ಞೆಯಂತೆ ಈ ವಿವಾಹವನ್ನು ನೆರವೇರಿಸಲು, ಯಜ್ಞವನ್ನು ಮೂರು ದಿನಗಳೊಳಗೆ ಮಾಡಿ ಪೂರೈಸಲು ದಯವಿಟ್ಟು ಅಪ್ಪಣೆಯನ್ನು ನೀಡಬೇಕು" ಎಂದು ಬೇಡಿಕೊಂಡನು. ಅವನ ಮಾತನ್ನು ಕೇಳಿದ ವಿಶ್ವಾಮಿತ್ರನು ನಸುನಗುತ್ತ ಯಜ್ಞವನ್ನು ಮಾಡಲೂ ವಿವಾಹಮಂಗಳವನ್ನು ನೆರವೇರಿಸಲೂ ಪ್ರೀತಿಯಿಂದ ಹೇಳಿದ.

ಆಗ ಜನಕ ಮಹಾರಾಜನು ಮನಃಪೂರ್ವಕವಾಗಿ ಪರಮಋಷಿವರನ ಪಾದಯುಗಳಕ್ಕೆ ನಮಸ್ಕರಿಸಿ ಕೈಗಳನ್ನು ಮುಗಿದು ಭಯಭಕ್ತಿಯಿಂದ, "ರಘುವಂಶವು ಅಸದೃಶವಾದುದು, ಅದಕ್ಕೆ ಸರಿಸಮಾನವಾದುದು ಹೆಸರುವಡೆದ ನಮಿಕುಲ. ರಾಮನಿಗೆ ಸೀತೆಯನ್ನೂ, ಲಕ್ಷ್ಮಣನಿಗೆ ಊರ್ಮಿಳೆಯನ್ನೂ ಇತ್ತು ಮದುವೆ ಮಾಡುವುದು ನಿಜವಾಗಿಯೂ ಸಂತೋಷದಾಯಕವೇ ಸರಿ. ಇದರಿಂದ ನಮ್ಮ ಕುಲ ಪಾವನವಾಗುವುದರಲ್ಲಿ ಸಂಶಯವಿಲ್ಲ. ಕುಶಧ್ವಜನ ಮಗಳಂದಿರನ್ನು ದಶರಥಪುತ್ರರಾದ ಭರತ ಶತ್ರುಘ್ನರಿಗೆ ಮದುವೆ ಮಾಡಿಕೊಡಲು ನಿಶ್ಚೈಸಿದ್ದೇನೆ. ನಾಲ್ವರೂ ರಾಜಪುತ್ರಿಯರ ಮದುವೆ ಒಂದೇ ದಿನದಲ್ಲಿ ನಡೆಯುವುದಕ್ಕೆ ತಾವು ಅನುಜ್ಞೆಯನ್ನು ನೀಡಬೇಕು" ಎಂದು ಬೇಡಿಕೊಂಡ. ಆಗ ದಶರಥನು, "ನಿಮ್ಮ ಮಾತು ಸಮಂಜಸವಾಗಿಯೇ ಇದೆ. ಅದರಂತೆಯೇ ನಡೆಯಲು ಏರ್ಪಾಟು ಮಾಡುವುದು" ಎಂದು ಒಪ್ಪಿಗೆಯಿತ್ತ. ಆನಂತರ ದಶರಥನು ವಸಿಷ್ಠವಿಶ್ವಾಮಿತ್ರರೊಡನೆ ಮಂದಿರಕ್ಕೆ ಹೋಗಿ ವಿಧ್ಯುಕ್ತವಾಗಿ ಶ್ರಾದ್ಧಾದಿಕರ್ಮಗಳನ್ನು ನೆರವೇರಿಸಿದ. ಮಾರನೆಯ ದಿನ ಸೂರ್ಯೋದಯವಾಗಲು ಸಹಸ್ರ ಗೋವುಗಳನ್ನು ಭೂಸುರೋತ್ತಮರಿಗೆ ಕರೆಕರೆದು ಭಕ್ತಿಪೂರ್ವಕವಾಗಿ ಅರ್ಪಿಸಿದ. ಹೀಗೆ ಮೂರು ಲೋಕವೂ ತನ್ನ ಕೈವಶವಾದ ರೀತಿಯಲ್ಲಿ ದಶರಥ ಮಹಾರಾಜನು ತನ್ನ ದೇವತಾಸಮಾನರಾದ ನಾಲ್ವರು ಮಕ್ಕಳನ್ನು ನೋಡಿ ಹರುಷಸಮುದ್ರದಲ್ಲಿ ಓಲಾಡಿದ. ಈ ರೀತಿಯಲ್ಲಿ ಸರ್ವಮುನಿಮುಖ್ಯಸ್ತುತನಾದ ರಮಾಲೋಲ **ಶ್ರೀ ರಾಮಪುರನಾಥನು** ಮನುಷ್ಯರೂಪವನ್ನು ತಾಳಿ ತಪಃಫಲರೂಪದಲ್ಲಿ ದಶರಥನ ಆಶ್ರಯದಲ್ಲಿದ್ದ.

೨೧. ಜನಕನು ವಿವಾಹಮಂಗಳವನ್ನು ನೆರವೇರಿಸಿದುದು

ಮೇನಕಾತ್ಮಜೆಯೇ, ಮುಂದಿನ ಕತೆಯನ್ನು ಕೇಳು: ದಶರಥನ ಅನುಮತಿಯನ್ನು ಪಡೆದು ಜನಕನು ತನ್ನರಮನೆಗೆ ಬಂದು ಹರುಷದಿಂದ ಶುಭಕರ್ಮಗಳನ್ನು ನೆರವೇರಿಸಿ ಅಮಾತ್ಯರನ್ನು ಕರೆಸಿ ಆಕರ್ಷಕವಾದ ರೀತಿಯಲ್ಲಿ ನಗರವನ್ನು ಸಿಂಗರಿಸಲು ಆದೇಶಿಸಿದ. ಅದರಂತೆ ಅವರು ಮುಖ್ಯರಾದ ಶಿಲ್ಪಿ ಬಡಗಿ ಮುಂತಾದವರನ್ನು ಕರೆಸಿ ವೇದಿಕೆಯನ್ನು ರಚಿಸಲು ಆಜ್ಞೆಯಿತ್ತರು. ಶ್ರೀರಾಮನ ವಿವಾಹವಾರ್ತೆಯನ್ನು ಕೇಳಿ ಭಕ್ತಿಯಿಂದ ಮಯನು ತನ್ನ ಸಾಮರ್ಥ್ಯಕ್ಕನುಗುಣವಾಗಿ ಅಲಂಕರಿಸುವೆನೆಂದು ಜನಕನಾಸ್ಥಾನಕ್ಕೆ ಬಂದು ಅವನ ಅನುಮತಿ ಪಡೆದು ಜಗತ್ತಿನಲ್ಲಿಯೇ ಅತ್ಯಂತ ಅತಿಶಯವೆನ್ನಿಸುವ ಬಗೆಯಲ್ಲಿ ವಿವಾಹಮಂಟಪವನ್ನು ರಚಿಸಿದ. ಅದರ ಚೆಲುವನ್ನು ಏನೆಂದು ಬಣ್ಣಿಸುವುದು! ಜನರು ಅವನ ಚಿತ್ರರಚನಾಕ್ರಮವನ್ನು ನಿಟ್ಟಿಸಿ ಅಚ್ಚರಿಗೊಂಡು ಬೊಂಬೆಗಳಂತೆ ನಿಂತರು. ಮಾಣಿಕ್ಯವನ್ನು ಜೋಡಿಸಿದ ರತ್ನಮಯವಾದ ಗೋಡೆಗಳು, ಕಟ್ಟಾಣಿ ವಜ್ರದ ಕಂಬಗಳು, ಹವಳದ ಬೋದಿಗೆ, ಸುಪ್ಪಾಣಿ ಮುತ್ತಿನ ಲೋವೆ, ಮರಕತದ ಹೊದಿಕೆ, ವೈಡೂರ್ಯದ ವಲಯಗಳಿಂದ ಸಾಣೆಹಿಡಿದ ಗೋಮೇಧಿಕದ ಕಿಗ್ಗಟ್ಟು, ಮೂಲೆಗಳಲ್ಲಿ ಚಂದ್ರಕಾಂತದ ಅರಳೆಲೆಗಳಿಂದ ಆ ಮದುವೆ ಮಂಟಪವು ಶೋಭಾಯಮಾನವಾಗಿತ್ತು. ಅಲ್ಲಲ್ಲಿ ಕಟ್ಟಿದ ಕುಂದ ಮಂದಾರ ಹೂಗುಚ್ಛಗಳಲ್ಲಿನ ಮಧುವಿನ ಆಸೆಯಿಂದ ದುಂಬಿಗಳು ಬರುತ್ತಿದ್ದವು, ಮುತ್ತಿನ ಝಲ್ಲಿಗಳ ನಡುವೆ ಹೊಳೆಯುವ ಮಣಿಗಳನ್ನು ಅಳವಡಿಸಿ ಚಿತ್ರಿಸಿದ ಹೊಳಪಿನಿಂದ ಕೂಡಿ ಮೋಹಕವಾಗಿದ್ದ ಕಾಂತಿಯು ಬೆಡಗಿನಿಂದ ಕೂಡಿದ್ದಿತು. ರತ್ನಮಯವಾದ ಗೋಡೆಯಲ್ಲಿ ಒಬ್ಬಳು ಯುವತಿಯು ಸಿಂಧೂರದಿಂದ ರೇಖೆಗಳನ್ನೆಳೆಯಲು ಅವು ಮುಂಗಾರಿನ ಮೋಡಗಳ ನಡುವಣ ಮಿಂಚುಗಳಂತೆ ಕಂಗೊಳಿಸಿದವು, ಅಲ್ಲದೆ ಅವಳ ನಿರಿಗುರುಳ ಕಾಂತಿಯನ್ನು ಯಾಚಿಸಬಂದ ರೀತಿಯಲ್ಲಿ ಕಾಣಿಸಿದವು. ಕತ್ತಲೆಯು ಒಂದು ಕಡೆ ನಕ್ಷತ್ರಪುಂಜವನ್ನು ಮೂಡಿಸಿದಂತೆಯೂ, ತಾವರೆಗಳ ಮಕರಂದಸಾರವನ್ನು ಹರಡುವ ರೀತಿಯಲ್ಲಿಯೂ, ಮುತ್ತಿನ ಚಿಪ್ಪುಗಳನ್ನು ನೀಡುವ ರೀತಿಯಲ್ಲಿಯೂ ಕಾಣಿಸುತ್ತಿತ್ತು. ಕಾಮಿನಿಯೊಬ್ಬಳು ಮರಕತದ ನೆಲಗಟ್ಟಿನಲ್ಲಿ ಸುಪ್ಪಾಣಿಯ ಮುತ್ತುಗಳಿಂದ ರಚಿಸಿದ ರಂಗವಲ್ಲಿಗಳು ನೋಡುವವರನ್ನು ಮೋಹನಗೊಳಿಸುತ್ತಿದ್ದವು.

ಸಹಸ್ರಾರು ಕಂಬಗಳ ತುದಿಯಲ್ಲಿ ಚಿನ್ನದ ರೇಖೆಗಳ ಪಟ್ಟಿಗಳಿಂದ ಹಳದಿ ಹೊಂಬಣ್ಣ ಬಿಳಿ ನೀಲಿ ವಸ್ತುಗಳಿಂದ ಮೇಲ್ಕಟ್ಟನ್ನು ರಚಿಸಿ ತನ್ನ ಪ್ರೀತಿಯ ತಂಗಿಯ ಮದುವೆಯನ್ನು ನೋಡಿ ಕಣ್ತುಂಬಿಕೊಳ್ಳಲು ವಿವಿಧ ರೂಪಗಳಲ್ಲಿ ಧರಾಜಾತನಾದ ಮಂಗಳನು ಬಂದನೋ ಎಂಬಂತೆ ಹವಳದ ಗೊಂಚಲುಗಳು ಶೋಭಿಸಿದವು. ಸಾಲುಸಾಲಾಗಿ ಕಟ್ಟಿದ ಮುತ್ತಿನ ಝಲ್ಲಿಗಳ ಮೇಲೆ ಕಂಗೊಳಿಸುವ ಮಾಣಿಕ್ಯದದಂಡೆಗಳಲ್ಲಿ ಜೋಡಿಸಿದ ಮರಕತದ ಕುಚ್ಚುಗಳ ಗುಂಪು ಹಾಗೂ ಹೂಗುಚ್ಛಗಳಿಂದ ರಂಜಿಸುವ ಬೊಂಬೆಗಳಿಂದ ಪಕ್ಕದಲ್ಲಿಯೇ ಎರಡೂ ಕಡೆಗಳಲ್ಲಿನ ಮಣಿಮಯ ಕನ್ನಡಿಗಳು ಅಲ್ಲಾಡುತ್ತ ಧ್ವಜಪಟಗಳು ಶೋಭಿಸುತ್ತಿದ್ದವು. ಸಿಂಗಾರಮಯವಾದ ಮಕರತೋರಣಗಳಿಂದಲೂ, ಮುಂಗಡೆಯಲ್ಲಿನ ಮೊಗ್ಗುಗಳ ಸೂಸಕದ ವೈಭವದಿಂದಲೂ, ಕುಬೇರನ ನವನಿಧಿಗಳ ಮಕ್ಕಳೆಂಬಂತಹ ರತ್ನಗಳಿಂದ

ಕೂಡಿದ ನೆಲಗಟ್ಟನಿಂದಲೂ, ಬಂಗಾರದ ಗೋಡೆಗಳಿಂದಲೂ, ಹವಳಗಳಿಂದ ಕೂಡಿದ ದ್ವಾರಗಳಿಂದಲೂ, ವಜ್ರಗಳಿಂದ ರಚಿತವಾದ ವೇದಿಕೆಗಳಿಂದಲೂ ವಿವಾಹಮಂಟಪವು ರಾರಾಜಿಸುತ್ತಿತ್ತು.

ಹೀಗೆ ತೊಳಗುತ್ತಿದ್ದ ಮದುವೆಯ ಮಂಟಪದಲ್ಲಿ ಪ್ರಾಜ್ಞರೂ, ತೊಟ್ಟ ಆಭರಣಗಳ ಹೊಳಪಿನಿಂದ ಕೂಡಿದ ರಾಜಪುತ್ರರೂ, ಮಂತ್ರಿವರ್ಯರುಗಳೂ, ಸತ್ಕವಿಗಳೂ ಕುಳಿತು ಅದನ್ನು ಕೌತುಕಮಯವಾಗಿಸಿದ್ದರು. ಸಡಗರದಿಂದ ಓಡಾಡುವ ಹೆಣ್ಣುಮಕ್ಕಳೂ, ತಮ್ಮ ನೋಟದಿಂದಲೇ ಆಕರ್ಷಿಸುವ ಕಲಾವಿದರೂ, ಗುಂಪುಗುಂಪಾಗಿ ನೆರೆದಿರುವ ಪುರಜನರೂ, ಗಳಿಗೆವಟ್ಟಲನ್ನು ಹಿಡಿದು ಆಗಾಗ ಅದನ್ನು ನೋಡುವ ದೈವಜ್ಞರೂ, ತಮ್ಮ ಕುಡಿನೋಟವೆಂಬ ಬೆಳುದಿಂಗಳನ್ನು ಪಸರಿಸುವ ಮಂಗಳದ್ರವ್ಯಗಳನ್ನು ಹಿಡಿದಿರುವ ಪ್ರೌಢಮಹಿಳೆಯರೂ ಸೇರಿ ಆ ಭವನವು ಸೊಗಸಿತು. ಒಂದು ಕಡೆ ಸರಸಗೀತಗಳನ್ನು ಹಾಡುವವರು ಹಾಗೂ ಅದನ್ನು ಕೇಳುತ್ತ ಕುಳಿತ ಜವ್ವನೆಯರಿದ್ದರೆ, ಮತ್ತೊಂದೆಡೆಯಲ್ಲಿ ನಾನಾ ಬಗೆಯ ಮಂಗಳವಾದ್ಯಗಳನ್ನು ನುಡಿಸುವವರು, ಒಂದು ಕಡೆ ಮಿರುಗುವ ಜರತಾರಿಯ ಕಾಂಡಪಟವನ್ನು ಹಿಡಿದು ಕಾಮನ ಬಾಣಗಳಂತೆ ಕಂಗೊಳಿಸುವ ಮಾನಿನಿಯರಿದ್ದರೆ, ಮತ್ತೊಂದು ಕಡೆ ನಾನಾ ಚಟುವಟಿಕೆಯಿಂದ ಓಡಾಡುವ ಮಕ್ಕಳು ಪರಿಶೋಭಿಸಿದರು. ಕಸ್ತೂರಿ ದೂಳಿನ ಪರಿಮಳದಿಂದ ಆಕರ್ಷಿತವಾಗಿ ಮುತ್ತಿಕೊಳ್ಳುವ ದುಂಬಿವಿಂಡುಗಳ ಝೇಂಕಾರವು ಮಂಟಪವನ್ನೆಲ್ಲ ವ್ಯಾಪಿಸಿತ್ತು, ಸುತ್ತಲೂ ಕುಂದ ಮಂದಾರಪುಷ್ಪಗಳ ಪನ್ನೀರಿನ ಕೊಡಗಳು ಸುವಾಸನೆಯನ್ನು ಬೀರುತ್ತಿದ್ದವು, ನಾನಾ ಬಗೆಯ ರಂಗವಲ್ಲಿಗಳನ್ನು ರಚಿಸುತ್ತ ಶೃಂಗಾರಚೇಷ್ಟೆಗಳನ್ನು ಮಾಡುವ ಕಾಂತೆಯರ ವೈಯಾರವು ಮಂಟಪವನ್ನು ತುಂಬಿತ್ತು.

ಮಂಟಪದ ಹೊರಗೆ ರಚಿಸಿರುವ ಉಯ್ಯಾಲೆಗಳು, ಪಕ್ಕದಲ್ಲಿ ರಾಟಾಳಗಳ ನೀರೆತ್ತುವ ಯಂತ್ರಗಳಿಂದ ಮೆರೆಯುವ ಚಪ್ಪರಗಳಿಂದ ರಾಜಿಸುವ ವಿಶ್ರಾಮಸ್ಥಾನಗಳಿಂದ ಕೂಡಿ ಮನ್ಮಥನ ಆಟದ ಬಯಲೋ, ಚಂದ್ರನ ಮಂದಿರವೋ, ಸದಾ ವಸಂತನು ನೆಲೆಸಿರುವ ಮನೆಯೋ, ಪರಿಮಳದ ಉಗ್ರಾಣವೋ ಎಂಬಂತೆ ವೈಭವದಿಂದ ಕೂಡಿ ಬಂದವರಿಗೆ ಮುದನೀಡುತ್ತಿದ್ದವು. ಹೂಗಳನ್ನು ಹಾರವಾಗಿ ಕಟ್ಟುವ, ಅರಳನ್ನು ಶುದ್ಧಗೊಳಿಸುವ, ಮೃಣಾಳಗಳನ್ನು ಒಪ್ಪಗೊಳಿಸುತ್ತ ಚಿಗುರುಗಳನ್ನು ಹೊಸತಾಗಿಸುವ, ಕಸ್ತೂರಿ ಸಾರಣೆಗಳಿಂದ ಚಿತ್ರಗಳನ್ನು ರಚಿಸುವ, ಹೂಗಳ ಪಕಳೆಗಳಿಂದ ಅಲಂಕಾರಗೈಯುವ, ಕರ್ಪೂರದ ಬೊಂಬೆಗಳನ್ನು ಸಾಲಾಗಿ ನಿಲ್ಲಿಸುವ ಶಶಿಮುಖಿಯರು ಮಂಟಪದ ಮೊದಲಲ್ಲಿಯೇ ಅಂಗಜನ ಬಾಣಗಳಂತೆ ಒಪ್ಪಿದರು. ಮಣಿಗಣದ ಕಿರಣಗಳು ಸೂರ್ಯನ ಬೆಳಕನ್ನೂ ಮೀರಿಸುವಂತಿದ್ದರೆ, ನಕ್ಷತ್ರಮಣಿಗಳಿಂದ ಚಂದ್ರಕಾಂತಿಯು ಮಂಕೆನಿಸಲು, ಭಿತ್ತಿಯ ನೀಲಮಣಿಗಳು ಮರಕತವನ್ನೇ ಮಣಿಸುವಂತಿದ್ದವು, ಅಲ್ಲಿನ ವಜ್ರಾಲಂಕಾರವು ತರುಣಿಯರ ಕೊರಳುಗಳ ಹರಳುಗಳನ್ನು ಬಿಮ್ಮೆನಿಸಿ, ನಾಗರುಗಳ ಶಿರೋಮಣಿಗಳು ಇವಾವುದಕ್ಕೂ ಎಣೆಯಲ್ಲವೆನ್ನಿಸುವಂತಿದ್ದವು. ಇಂದ್ರನ ಅಮರಾವತಿಯಂತೆ ಕಾಣುತ್ತಿದ್ದ ಮಂಟಪವು ಬಾಳೆಯ ಕಂದುಗಳಿಂದ ಕೂಡಿ ಚೈತ್ರಮಾಸದ ನಗರದ ಬಹಿರುದ್ಯಾನದಂತೆ

ಅಲಂಕೃತಗೊಂಡು ಮನೋಹರವಾಗಿತ್ತು. ಸಂಧ್ಯಾಸಮಯದಲ್ಲಿ ರಂಜಿಸುವ ಲಕ್ಷ್ಮೀನಿಲಯದಂತೆ ಮೆರೆಯುವ ಉದ್ವಾಹಮಂಟಪವು ಜನಮನೋಲ್ಲಾಸಕರವಾಗಿತ್ತು.

ಅದರಲ್ಲಿ ಮುನಿನಿಚಯ ಗುಂಪಾಗಿರಲು, ಮಧ್ಯದಲ್ಲಿ ಬಿಳಿಮುಗಿಲು ಹೊಳೆಯುವ ಮಣಿಸಮೂಹದೆಡೆಯಲ್ಲಿ ಥಳಥಳಿಸುವ ಸಿಂಹಪೀಠ, ಅದಕ್ಕೆ ಅಂಟಿಕೊಂಡಿರುವ ಪಚ್ಚೆಯ ಸಿಂಹಗಳು, ಇಕ್ಕೆಡೆಯಲ್ಲಿಯೂ ಗಾಳಿ ಹಾಕುವ ಪರಿಚಾರಕರ ಚಾಮರಗಳ ಹಿಡಿಕೆಗಳ ಬೊಂಬೆಗಳು ಅಡಿಗಡಿಗೆ ಬಿಡುಗಣ್ಣರೊಡೆಯನ ಸಭಾಭವನವನ್ನು ನೆನಪಿಸುತ್ತಿದ್ದವು. ಯವೆ ಅರಳು ಗರಿಕೆ ಮೊಸರು ಸಿಂದೂರಗಳ ಸಂಕುಲ, ಹೊಸತಾದ ತಾವರೆದಂಟಿನ ನಾರು, ಮಣಿಪಾತ್ರೆಗಳು, ನಾನಾ ಧಾನ್ಯಗಳ ಮೊಳಕೆಗಳು, ರುಚಿಕರವಾದ ಮಾದಳ, ಕಬ್ಬಿನ ಜಲ್ಲೆ, ಶ್ರೀಗಂಧದ ಕೊರಡು, ರನ್ನಗನ್ನಡಿ, ಬಾಸಿಗ, ಅಮೃತೋಪಮ ಜಲದಿಂದ ತುಂಬಿದ ಕನಕಕಳಶಗಳು – ಇವುಗಳನ್ನು ಹಿಡಿದು ಯುವತಿಯರು ವಿವಾಹಮಂಟಪದ ವೇದಿಕೆಯನ್ನು ಅಲಂಕರಿಸಿದರು. ಹೊಸ ಚಿಗುರಿನ ಮಾಲೆ, ರನ್ನಗನ್ನಡಿ ಅರಳು ತಾವರೆದಂಟಿನ ನಾರು, ಬಿಳಿಯ ಗರಿಕೆ, ಅಕ್ಷತೆಕಾಳು, ನಾನಾ ಬಗೆಯ ಸಸ್ಯಗಳು, ಶುಭಕರವಾದ ಪಂಚರತ್ನಗಳು, ಶಿವನ ಶಿರೋಭೂಷಣವೆನಿಸುವ ಆಕಾಶಗಂಗೆಯು ತುಂಬಿದ ಹೊಂಗಳಸಗಳ ಕಾಂತಿಯು ವೇದಿಕೆಯಲ್ಲಿ ಮಂಗಳಮನೋಹರವನ್ನು ನೋಡಲು ಕುತೂಹಲದಿಂದಿರುವ ಬಗೆಯಲ್ಲಿ ಕಂಗೊಳಿಸುತ್ತಿದ್ದವು. ನವರತ್ನಗಳಿಂದ ಕೂಡಿದ ವೇದಿಕೆಯು ರೇಸಿಮೆವಸ್ತ್ರಗಳ ಮೇಲ್ಕಟ್ಟುಗಳಿಂದಲೂ ಬಂಗಾರದ ಕಳಶಗಳಿಂದಲೂ, ಪವಿತ್ರವಾದ ನೀರು ತಂಬಿದ ನಾನಾ ಕೊಡಗಳು, ಮಣಿದೀಪಗಳು, ನೈದಿಲೆಚಿಗುರುಗಳ ತೋರಣಗಳಿಂದ ಕೂಡಿ ಆ ವಿವಾಹವೇದಿಕೆಯು ಮಂಗಳಲಕ್ಷ್ಮಿಯು ಹರ್ಷದಿಂದ ಸಂಚರಿಸುತ್ತಿರುವಂತೆ ಲಕಲಕಿಸುತ್ತಿತ್ತು. ಪಾರಿಜಾತದ ಹೂಗಳು, ದಿವ್ಯೌಷಧಗಳು, ಅಕ್ಷತೆಯ ಕಾಳು, ಬಿಳಿಯ ತಾವರೆ, ಗರಿಕೆಗಳು, ರಸಭರಿತವಾದ ಇನಿವಣ್ಣುಗಳು, ಕಸ್ತೂರಿ ಕೇಸರಿ ಗೋರೋಚನಗಳು, ಸಾರತರವಾದ ನಾನಾ ಸಂಭಾರಗಳನ್ನು ವೇದಿಕೆಯಲ್ಲಿ ಅಳವಡಿಸಿ ಅಮಾತ್ಯನು ಈ ವಾರ್ತೆಯನ್ನು ಮಹಾರಾಜನಿಗೆ ಮೃದುಭಾಷಿತದಿಂದ ತಿಳಿಸಿದ.

ಈ ಮಹೋತ್ಸವದ ಭಾಗವಾಗಿ ಅರವಿಂದಾಕ್ಷನಾದ ರಾಮನಿಗೆ ಮಜ್ಜನ ಮಾಡಿಸುವ ಸಡಗರದಿಂದ ಚಂಚಲಾಕ್ಷಿಯರು ಬಂದು ಒಸಗೆಯನ್ನು ಹಾಡುತ್ತ ರತ್ನಮಯವಾದ ಹಸೆಯನ್ನು ರಚಿಸಿ, ಅದರ ಮೇಲೆ ಚಂದ್ರಕಾಂತದ ಪೀಠವನ್ನಿಟ್ಟು, ಅದರ ಮೇಲೆ ಜರತಾರಿಯ ವಸ್ತ್ರವನ್ನು ಹರವಿ, ಕೋಮಲವಾದ ಕಂಠದಿಂದ ಲೋಕೇಶನನ್ನು ಹೊಗಳುವ ಮಾತುಗಳನ್ನಾಡುತ್ತ ಪ್ರೀತಿಯಿಂದ ಕರೆದರು: 'ಮೂರು ಲೋಕಗಳ ಸುದತಿಯರ ಸೀಮಂತಮಣಿಗಳೂ, ದೇವತಾಸ್ತ್ರೀಯರ ಬೈತಲೆಗಳೂ ಬಾಗುವಂತೆ ಮಹಾಧನುಸ್ಸನ್ನು ಬೆರಳುಗಳಿಂದ ಹಿಡಿದು ನಾಗರು ನರರು ನೋಡುತ್ತಿರಲಾಗಿ. ಆಟವೆಂಬಂತೆ ಬಾಗಿಸಿ ಹೆದೆಯೇರಿಸುವಾಗ ಇಕ್ಕಡಿಗೈದ ನೃಪಕುಲೋತ್ತಮನೇ, ಮುನಿಯ ಯಾಗರಕ್ಷಕನೇ, ದಯಾಕಲಿತನೇ ಬಿಜಮಾಡಿಸು' ಎಂದು ಹಾಡಿದರು. ಶ್ಯಾಮಲಗಾತ್ರನಾದ ರಾಮನು ಬರಲು ಮೌಹೂರ್ತಿಕ ದ್ವಿಜಸ್ತೋಮವು ಜಯಜಯಕಾರ ಮಾಡುತ್ತ ಹರಸಿದರು. ಆಗ ರಾಮನು ಸುತ್ತಲೂ ಹರ್ಷದಿಂದ ನೋಡುತ್ತ ಪೀಠದಲ್ಲಿ ಕುಳಿತ; ಮುತ್ತೈದೆಯರು

ಬಂದು ಅಕ್ಕರೆಯಿಂದ ರತ್ನದ ಆರತಿಗಳನ್ನೆತ್ತಿ, ತಮ್ಮ ಕೋಮಲ ಬೆರಳುಗಳಿಂದ ಹಣೆಯಲ್ಲಿ ಅಕ್ಷತೆಯನ್ನಿಟ್ಟು, ಕಸ್ತೂರಿಯ ಪರಿಮಳ ಬೆರೆತ ಎಣ್ಣೆಯನ್ನು ಹಿಡಿದುಕೊಂಡು, 'ರಾಜನಾಗಿ, ಮೂರೂ ಲೋಕಗಳ ಮುನಿಗಳನ್ನು ರಕ್ಷಿಸಿ, ಸದ್ಧರ್ಮವನ್ನು ನಿರಂತರವಾಗಿ ಹೆಚ್ಚಿಸುತ್ತ, ಸಿರಿಯರಸನಂತೆ ಎಲ್ಲರಿಂದಲೂ ಪೂಜನೀಯನಾಗಿ, ಶತ್ರುಸಮೂಹವನ್ನೆಲ್ಲ ತರಿದು ಹಾಕಿ ಧುರವಿಜಯನಾಗಿ, ಶರಣಾಗತರು ಈ ಭೂಮಿಯಲ್ಲಿ ಪಾರಿಜಾತದಂತೆ ಶಾಶ್ವತವಾಗಿ ನೆಲೆನಿಲ್ಲುವಂತೆ ದೇವೇಂದ್ರನಂತೆ ಚಿರಂಜೀವಿಯಾಗಿ ಬಾಳು' ಎಂದು ಹರಸಿ ಕಮ್ಮೆಣ್ಣೆಯನ್ನು ಹಚ್ಚಿದರು. ತಲೆಯನ್ನಾಡಿಸುತ್ತ, ಮುಂಗುರುಳುಗಳು ಹಾರಾಡುತ್ತಿರಲು, ಮೈ ಬೆವರುತ್ತಿರಲು, ಕೊಡಮೊಲೆ ಅಲುಗಾಡುತ್ತಿರಲು, ಜಘನಗಳು ಅದುರಲು, ತೊಡೆಗಳು ನಡುಗಲು, ಉಸಿರಾಟವು ವೇಗಗೊಳ್ಳಲು, ಬಳೆ ಕಡಗ ಗೆಜ್ಜೆಗಳ ಮಂಜುಳ ಶಬ್ದ – ಇವುಗಳು ಮತ್ತೆ ಮತ್ತೆ ಸ್ಮರನ ಜೇವಡೆದ ಸದ್ದಿನಂತೆ ಶೋಭಿಸಲು ಆ ಬೆಡಗಿಯರು ಚಳಕದಿಂದ ರಾಮನಿಗೆ ಎಣ್ಣೆಯನ್ನು ಹಚ್ಚಿದರು. ಆನಂತರ ಪರಿಮಳಭರಿತ ನೀರಿನಿಂದ ಮಜ್ಜನಗೈಸಿ, ಮೈಯನ್ನೊರೆಸಿ, ತಲೆಗೂದಲಿಗೆ ನವತಿಗುರನ್ನಿಕ್ಕಿ, ನಾನಾ ಬಗೆಯ ಧೂಪವಾಸನೆಗಳನ್ನು ಹಾಕಿ, ದಿವ್ಯಾಂಬರವನ್ನುಡಿಸಿ, ಕಾಂತಿಯುಕ್ತ ಆಭರಣಗಳಿಂದ ಅಲಂಕರಿಸಿ, ಹಾಡುತ್ತ ಮುತ್ತಿನ ಆರತಿಯನ್ನೆತ್ತಿದ ತರುಣಿಯರು ರಾಮನನ್ನು ಕರೆತಂದು ಮಣಿಮಯವಾದ ಪೀಠದ ಮೇಲೆ ನವಿರಾಗಿ ಕುಳ್ಳಿರಿಸಿದರು.

ಅನುಪಮಾನಂದನೂ ನಿರೀಹನಿರ್ಲೇಪಕನೂ ಆದ ಶ್ರೀರಾಮನು ಮನುಷ್ಯರಂತೆ ಎಲ್ಲ ಶುಭವಿಧಿಗಳಿಗೆ ಒಳಗಾದ. ಅಷ್ಟರಲ್ಲಿ ಜನಕನ ಆಜ್ಞೆಯನ್ನು ಹೊತ್ತು ಬಂದ ಚಿನ್ನದ ಬಳ್ಳಿಗಳಂತಿದ್ದ ಸುದತಿಯರು ಸೀತೆಗೆ ವಿನಯದಿಂದ ಸಿಂಗಾರ ಮಾಡಲು ಬಯಸಿದರು. ಒಬ್ಬ ಚಂದ್ರಮುಖಿಯು ಸೀತೆಯನ್ನು ಚಿನ್ನದ ಪೀಠದಲ್ಲಿ ಕುಳ್ಳಿರಿಸಿ ಮುತ್ತಿನ ಅಕ್ಷತೆಯನ್ನಿಟ್ಟು ಚದುರಿನಿಂದ ಆರತಿಯನ್ನೆತ್ತಿ ಕಮ್ಮೆಣ್ಣೆಯನ್ನೊತ್ತಿದರೆ, ಮದನನ ಆಜ್ಞೆಯಂತೆ ಮುತ್ತೈದೆಯರೆಲ್ಲ ಹಾಡುತ್ತ ಯೌವನರಾಜ್ಯಾಭಿಷೇಕವನ್ನು ಮಾಡುವಂತೆ ಪನ್ನೀರಿನಿಂದ ಮಜ್ಜನ ಮಾಡಿಸಿ ಪರಿಮಳವನ್ನು ಪೂಸಿ ಅಲಂಕರಿಸಲು ತೊಡಗಿದರು. ಆಗ ಒಬ್ಬಳು, 'ಸಹಜಸೌಂದರ್ಯನಿಧಿಯಾಗಿ ನೈದಿಲೆಯನ್ನು ಸೆಳೆಯುವ ಸೊಬಗನ್ನು ತಳೆದ ಈ ಶಶಿಲೇಖೆಗೆ ಅಲಂಕಾರ ಮಾಡುವುದು ಹೇಗೆ! ಯಾವ ವಸ್ತುಗಳಿಂದ ಅಲಂಕರಿಸುವುದು! ರತ್ನಸಮೂಹದಲ್ಲಿ ಹುಟ್ಟಿದಂತಹ ಸಹಜ ಸುಂದರ ದೇಹಕ್ಕೆ ಮಾಂಗಲ್ಯವೇ ನವನವೋನ್ಮೇಷವಾದ ಪರಿಮಳವನ್ನು ಬೆರಸುವ ಪೋಷಣಬೀಜವಲ್ಲವೇ? ಈ ಮದಗಜಗಮನೆಯ ಮಸ್ತಕಕ್ಕೆ ಇತರ ಆಭರಣಗಳು ಶೋಭೆಯನ್ನು ನೀಡುತ್ತವೆಯೇ ಎಂಬುದು ಹಾಗಿರಲಿ, ಕಸ್ತೂರಿಪರಿಮಳದ ದೇಹವುಳ್ಳವಳ ಅಂಗಾಂಗಗಳನ್ನು ಸೇರಿ ಈ ಭೂಷಣಗಳೇ ದಿವ್ಯಕಾಂತಿಯನ್ನು ಪಡೆದುವು' ಎಂದು ಚತುರತೆಯಿಂದ ನುಡಿದಳು. ಮೇಘಸಂಕುಲದ ಕಾಂತಿ ಕಾಡಿಗೆಯ ಹೊಳಪುಗಳಿಂದ ಕೂಡಿದ ಈಕೆಯ ಲೋಲಕುಂತಳಕ್ಕೆ ಯಾವುದು ತಾನೇ ಸಮವಾದೀತು ಎಂದು ಒಬ್ಬ ಸುಂದರಿಯು ಮದನಲೀಲೆಯಿಂದ ಮಲ್ಲಿಗೆಯ ಮಳೆಗರೆದಂತೆ ಕಸ್ತೂರಿಯ ಪರಿಮಳವನ್ನು ತಳಿದಳು; ಮತ್ತೊಬ್ಬಳು ಸೀತೆಯ ದೇಹದ ಕೋಮಲತೆಗೆ ಸ್ವಪ್ನಬಂಧವಾಗುವಂತೆ

ಕುಂಕುಮಕೇಸರಿಯ ಪರಿಮಳವನ್ನು ತೀಡಿದಳು. ಪಶ್ಚಿಮದಿಕ್ಕಿನ ಸಂಜೆಯ ಕೆಂಪಿನಿಂದ ಚಂದ್ರನು ಸೊಬಗನ್ನು ಪಡೆದಂತೆ ಇಂದೀವರಾಕ್ಷಿ ಅಲಂಕಾರಗೊಂಡು ಕಣ್ಗೆಸೆದಳು. ಅಶೋಕೆಯ ಶೋಭೆಯಿಂದ ಭವವಿರೋಧಿಯ ಬಾಣದಂತೆ ಕೆಂಪಾದ ಜಾನಕಿಗೆ ಹೊಂಬಟ್ಟೆಯನ್ನುಡಿಸಲು ಹಗಲಿಗೆ ಪೂರ್ವದಿಕ್ಕಿನ ಹೊಂಬಿಸಿಲನ್ನು ತೊಡಿಸಿದಂತೆ ಕಾಣಿಸಿತು. ಇವಳ ನಡಿಗೆಯು ಗಜಗಮನವನ್ನು ನಿರಾಕರಿಸುವಂತಹುದು ಎಂದು ಹಂಸಗಳು ನಡಿಗೆಯನ್ನು ಪ್ರದರ್ಶಿಸಲು, ಮದನನು ಮೆಚ್ಚಿ ಬಿರುದಿನ ಅಂದುಗೆಗಳನ್ನು ಅರ್ಪಿಸಿದಂತೆ ನೂಪುರಗಳನ್ನು ತೊಡಿಸಲು, ಅವಳ ಚರಣಕಮಲಗಳ ಮಕರಂದಸಿರಿಗೆ ಆಸೆಯಿಂದ ಬಂದ ದುಂಬಿವಿಂಡು ಓಯೆಂದು ಝೇಂಕರಿಸುತ್ತಿರುವಂತೆ ಕಾಲುಕಡಗಗಳ ಸದ್ದು ತೋರಿತು. ಕಾಮನ ಮತ್ತಗಜದ ಚೆಲುವನ್ನೆಲ್ಲ ಸೆಳೆದುದೆಂಬಂತಿದ್ದ ಅವಳ ಜಘನಗಳಿಗೆ ಚಿನ್ನದ ಡಾಬನ್ನು ತೊಡಿಸಲು ಅದು ಬೆಡಗುವಡೆಯಿತು. ಸೀತೆಯ ದೇಹಸೌಂದರ್ಯವಾಹಿನಿಯ ತೀರದಲ್ಲಿ ಅನುದಿನವೂ ನೀರ್ವಕ್ಕಿಗಳು ಕಲಕಲರವಗೈವಂತೆ ಕಿಂಕಿಣೀಗಣದ ಸ್ವನವು ಶೋಭಾಯಮಾನವಾಗಿತ್ತು.

ಶಚೀದೇವಿ ಸಾವಿತ್ರಿ ದಿಕ್ಪಾಲಕರ ಸತಿಯರು ಸೇರಿ ಅಲಂಕರಿಸಲು ಮೂರು ಲೋಕಗಳ ಇಷ್ಟಾರ್ಥಗಳನ್ನೂ ಕರೆದು ಪೂರೈಸುವ ಅಭಿನವ ಲಕ್ಷ್ಮೀದೇವಿಯಂತೆ ಸೀತೆಯು ಶೋಭಿಸಲು, ಬ್ರಹ್ಮವಿಷ್ಣು ಮುಂತಾದ ಪ್ರಮುಖ ದೇವತೆಗಳು ಜನಕ ಮಹಾರಾಜನನ್ನು ಕರೆದು, ಸಿಂಗರಗೊಂಡ ರಘುವೀರನನ್ನು ಮುನಿಜನರು ಮಂತ್ರಿಗಳೊಡನೆ ಮಂಟಪಕ್ಕೆ ಕರೆತರಲು ಹೇಳಬೇಕೆಂದು ಸೂಚಿಸಿದರು. ಆಗ ಮಹಾರಾಜನು ವರನನ್ನು ಕರೆತಲು ತನ್ನ ತಮ್ಮ ಕುಶಧ್ವಜನಿಗೆ ಹೇಳಿದಾಗ ಆತನು ಮುನಿಜನರು ಹಾಗೂ ಮಂತ್ರಿಗಳ ಜೊತೆಗೆ ಹೋಗಿ ಜನಕನು ಆಜ್ಞಾಪಿಸಿದಂತೆ ಘನಶ್ಯಾಮನಾದ **ಶ್ರೀರಾಮಪುರದರಸನು** ಇರುವೆಡೆಗೆ ತೆರಳಿದ.

೨೨. ಸೀತಾಕಲ್ಯಾಣ

ಅಖಿಲಮುನಿವರ್ಯರೇ ಕೇಳಿ, ಮಿಥಿಲೇಶನ ಸಹಭವನಾದ ಕುಶಧ್ವಜನು ಗೌತಮಾತ್ಮಜ ಶತಾನಂದನನೊಡನೆ ಸಂತಸದಿಂದ ಬಂದು ದಶರಥ ಮಹಾರಾಜನಿಗೆ ತನ್ನ ಅಣ್ಣ ಹೇಳಿದಂತೆಯೇ ಬಿನ್ನವಿಸಿಕೊಳ್ಳಲು, ಕುವರನನ್ನು ಅಲಂಕರಿಸಿ ಅವನ ಕೈಹಿಡಿದುಕೊಂಡು ವಸಿಷ್ಠರ ಅನುಮತಿಯಿಂದ ಸಡಗರದಿಂದ ಮದುವೆಯ ಮಂಟಪದ ಕಡೆ ಹೊರಟರು. ಶ್ರೀರಾಮನು ಸುತ್ರಾಮನ ಐರಾವತವನ್ನೇರಿ ಬರುವ ಮಹಾ ಸಂಭ್ರಮವನ್ನು ನೋಡಿ ಕಣ್ತುಂಬಿಕೊಳ್ಳಲು ಬ್ರಹ್ಮ ಇಂದ್ರ ದಿಕ್ಪಾಲಕರು ಹಾಗೂ ಮುನಿಧನರು ಎರಡೂ ಪಕ್ಕಗಳಲ್ಲಿ ನಿಂತು ನೋಡಲು ಶಚೀರಮಣನು ವಿನಯದಿಂದ ಹಸ್ತಲಾಘವವನ್ನಿತ್ತಾಗ ಮಹಾಸಭೆಯು ಸ್ತುತಿಸಲು ಸಾಗರವೇ ವೇದಘೋಷವನ್ನು ಮಾಡಿದಂತೆ ಕೇಳಿಸಿತು. ಗುರುಗಳಾದ ವಸಿಷ್ಠರ ಅನುಮತಿಯಿಂದ ಇಂದ್ರಗಜದ ಮೇಲೆ ರಘುಕುಲತಿಲಕ ಕುಳಿತುಕೊಳ್ಳಲು ದೇವತೆಗಳು ಜಯಕಾರ ಮಾಡುತ್ತ ಕುಸುಮವೃಷ್ಟಿಯನ್ನು ಕರೆದರು.

ವಾದ್ಯಗಳು ಭೋರ್ಗರೆದುವು. ಭರತ ಶತ್ರುಘ್ನರು ಚಾಮರಪಿಡಿದು ಛತ್ರದ ಪಕ್ಕದಲ್ಲಿ ಬರಲು ಲಕ್ಷ್ಮಣನು ಬಿಲ್ಲುಬಾಣಗಳನ್ನು ಹಿಡಿದು ಪಕ್ಕದಲ್ಲಿ ಆನಂದದಿಂದ ನಡೆತಂದ. ಜೊತೆಯಲ್ಲಿ ಬರುವ ರಾಜರ ಕಿರೀಟರತ್ನಗಳ ದೀಧಿತಿಯು ಸೂರ್ಯಕಿರಣಗಳೊಡನೆ ಸೇರಿ ನಗುವ ನೈದಿಲೆಗಳಂತೆ ಬೆಳ್ಗೊಡೆಯ ಸಮೂಹವು ಕಂಗೊಳಿಸಿತು; ಪಕ್ಕಗಳಲ್ಲಿ ಚಾಮರವನ್ನು ಬೀಸುತ್ತ ನಡೆದು ಬರುವ ಬೆಡಗಿಯರ ಕಣ್ಣಿನೋಟದ ಕಾಂತಿಯ ಬೆಳ್ಪು ಆಕಾಶಗಂಗೆಯು ಇಬ್ಭಾಗವಾಗಿ ಎರಡೂ ಪಕ್ಕಗಳಲ್ಲಿ ಹರಿದು ಬರುತ್ತಿರುವಳೋ ಎಂಬಂತೆ ಶೋಭಿಸಿತು.

ಒಂದೆಡೆ ಪಟ ಹಡಿಂಡಿಮ ಮೃದಂಗ ಮುಂತಾದ ವಾದ್ಯಗಳ ಮೊರೆತ, ಮತ್ತೊಂದೆಡೆ ಢಕ್ಕೆ ಮುಂತಾದ ವಾದ್ಯಗಳ ರವ, ಮಗುದೊಂದೆಡೆ ಕೊಳಲು ಝಲ್ಲರಿಗಳ ದನಿ, ಮತ್ತೂ ಒಂದೆಡೆ ಭೇರೀಕಹಳೆಗಳ ಭೋರ್ಗರೆತಗಳು ಒಂದಾಗಿ ಸಿಂಧುವು ಭೋರ್ಗರೆವಂತೆ ಹತ್ತುದಿಕ್ಕುಗಳಲ್ಲಿಯೂ ವ್ಯಾಪಿಸಲು, ನೆರೆದ ಜನರು ಕೈಯೆತ್ತಿ ಜಯಕಾರ ಮಾಡುತ್ತ ಸ್ತುತಿಸುವ ಸದ್ದು ಮೂರು ಲೋಕಗಳಲ್ಲಿಯೂ ಶಬ್ದಾದ್ವೈತವನ್ನು ಉಂಟುಮಾಡಿದವು. ಚಿನ್ನದ ಭರಣಿಗಳನ್ನು ಹಿಡಿದು ಚಿನ್ನದ ಬಳ್ಳಿಗಳಂತಹ ಬೆಡಗಿಯರು ಇಕ್ಕೆಲಗಳಲ್ಲಿ ಮನ್ಮಥನಿಗೆ ಕಬ್ಬುಬಿಲ್ಲನ್ನು ಉಡುಗೊರೆಯಾಗಿ ನೀಡುವ ರೀತಿಯಲ್ಲಿ ಬರುತ್ತಿದ್ದರೆ, ಮತ್ತೆ ಕೆಲವರು ಮಣಿಭೂಷಣಗಳನ್ನು ಧರಿಸಿ ಹೊಸಮೊಳಕೆ ತುಂಬಿದ ಕರಂಡಗಳನ್ನೂ, ತಾವರೆಹೂಗಳು ತುಂಬಿದ ಭಾಜನಗಳನ್ನೂ ಹಿಡಿದುಕೊಂಡು ಮತ್ತೇಭದ ಎಡಬಲಗಳಲ್ಲಿ ನಡೆದು ಬರುತ್ತಿದ್ದರು. ಕೈಯಲ್ಲಿ ಚಿನ್ನದ ದಂಡಗಳನ್ನೂ ಚಾಟಿಗಳನ್ನೂ ಹಿಡಿದು ಧೈರ್ಯವಂತ ರಾಜಾಗ್ರಣಿಗಳು ಕುದುರೆಗಳನ್ನೇರಿ ಮೆರವಣಿಗೆಯ ಮುಂದೆ ಬರುತ್ತಿದ್ದರು. ಸಾಹಸ ಕ್ರೀಡೆಗಳನ್ನು ಪ್ರದರ್ಶಿಸುವವರ, ಪತಾಕೆಗಳನ್ನು ಹಿಡಿದು ಬರುವ ರಾವುತರ ಕಲಕಲರವವು ದಿಗಂತವನ್ನೇ ತಲುಪುವಂತಿತ್ತು. ರತ್ನದ ನಡೆತೋರಣಗಳ ವಿಲಾಸ, ಸತಿಯರ ಕಟಾಕ್ಷಶರಜಾಲ, ಹೊಗಳುಭಟರ ಸ್ತುತಿಯ ವಿಡಾಯ, ಗುಂಪುಗುಂಪಾಗಿ ಬರುವ ಜನರ ಪೆಂಪು, ಕೇಳಲಿಂಪಾದ ವಾದ್ಯಗಳ ರವ, ಯತಿಜನದ ಸ್ವಸ್ತಿವಾಚನದ ನಲವು ಇವುಗಳ ನಡುವೆ ರಘುವೀರನು ಗಂಭಿರವಾಗಿ ಬಂದ. ಅಕ್ಕಪಕ್ಕದ ಸೌಧಾಗ್ರಗಳಲ್ಲಿ ನಿಂತು ನೋಡುವ ನಿತಂಬಿನಿಯರು ಒಲವಿನಿಂದ ನಿಟ್ಟಿಸಲು ಅವರ ಕುಡಿನೋಟವು ಹಾಲ್ಗಡಲ ಅಲೆಗಳು ಮೇಲೇರಿದಂತೆ ಕಂಗೊಳಿಸಿದರೆ, ಅವರ ಚೆಲುವಾದ ಕಂಗಳ ಕಾಂತಿಯು ನೈದಿಲೆಯ ಮಳೆ ಸುರಿದಂತೆ ತೋರುತ್ತಿತ್ತು. ಇವುಗಳ ನಡುವೆ ರಘುರಾಮನು ಮಂದಹಾಸ ಬೀರುತ್ತ ಮುಂದುವರಿಯಲು ಬೆಳುದಿಂಗಳೇ ಸಾಗಿಬಂದಂತೆ ನೋಟಕರಲ್ಲಿ ಅಚ್ಚರಿಯನ್ನು ಮೂಡಿಸುತ್ತಿತ್ತು.

ಸಕಲ ವೈಭವದಿಂದ ರಾಜಕುಮಾರರು ಐತಂದಾಗ ಶುಕ ವಾಮದೇವ ಮುಂತಾದ ಯತಿನಿವಹವು ನಲಿಯುತ್ತಿರಲು, ಶ್ರೀರಾಮನು ಭದ್ರಗಜದಿಂದ ಕೆಳಗಿಳಿಯುವಾಗ ಸಕಲಜನರೊಡನೆ ಬಂದ ಬ್ರಹ್ಮನು ಹಸ್ತಲಾಘವವಿತ್ತು ಸ್ವಾಗತಿಸಿದ; ಆಗ ಅಲ್ಲಿ ಸೇರಿದ್ದ ಸುರಚಾರಣರು ಜಯಘೋಷ ಮಾಡಿದರು; ರಘುರಾಮನು ಹೀಗೆ ಮದುವೆಯ ಮಂಟಪವನ್ನು ಪ್ರವೇಶಿಸಿದ. ಪರಶಿವನ ಅನುಮತಿಯಿಂದ ಜನಕ ಮಹಾರಾಜನು

ವಿಪ್ರವರ್ಯರ ಆಜ್ಞೆಯನ್ನು ಹೊತ್ತು ಹಿರಿಯ ಪುರೋಹಿತರು ಶುಭವಿಧಿಯಿಂದ ಮಧುಪರ್ಕವನ್ನು ಅರ್ಪಿಸಿ, ರತ್ನಮಯ ವೇದಿಕೆಯ ಮಧ್ಯದಲ್ಲಿ ಮೆರೆಯುತ್ತಿದ್ದ ಹೊನ್ನ ಪೀಠದಲ್ಲಿ ಸಾಕೇತಪುರನಾಥನನ್ನು ಕುಳ್ಳಿರಿಸಿ ಸ್ವಸ್ತಿವಾಚನ ಮಾಡಿದರು. ಆಗ ಜನಕ ಮಹಾರಾಜನು ಮಂದಾರಮಾಲೆಯನ್ನು ರಾಮನ ಕೊರಳಿಗೆ ಹಾಕಿ ಅಲಂಕರಿಸಿ, ಮುಂದೆ ಚಿನ್ನದ ಹರಿವಾಣವನ್ನಿಟ್ಟು ಚಂದ್ರಕಾಂತದ ಕಳಶವನ್ನು ಹಿಡಿದು ನೀರೆರೆಯಲು ಹರ್ಷವದನೆಯಾದ ಅವನ ಸತಿಯು ಅವನ ಚರಣಕಮಲಗಳನ್ನು ತೊಳೆದು ಪೂಜಿಸಿದಳು. ಪದ್ಮಶಂಖಚಕ್ರರೇಖೆಗಳಿಂದ ಕೂಡಿದ ರಾಮನ ಪದಯುಗಳವನ್ನು ತೊಳೆದು ಪೂಜಿಸಿ ಶಾಸ್ತ್ರವಿಧಿಯಿಂದ ಮಧುಪರ್ಕಗಳನ್ನರ್ಪಿಸಿ, ಜನಕ ನರೇಶನು ಅಮಾತ್ಯನನ್ನು ಕರೆದು ಬ್ರಹ್ಮ ಶಂಕರರ ಆಜ್ಞೆಯಂತೆ ಸೀತೆಯನ್ನು ಮಂಟಪಕ್ಕೆ ಕರೆತರುವಂತೆ ಸೂಚಿಸಲು ನೆರೆದವರೆಲ್ಲ ಸಂತಸಗೊಂಡರು.

ಜನಕನ ಆಜ್ಞೆಯಂತೆ ಸಚಿವನು ಸಕಲವಿಭವದಿಂದ ಸೀತಾದೇವಿಯನ್ನು ಕರೆತರಲೆಂದು ವಿನಯದಿಂದ ಅರಮನೆಯ ಬಾಗಿಲ ಬಳಿ ನಿಂತುಕೊಂಡು ಬಾಗಿಲಗಾಹಿಗೆ ಹೇಳಿದ; ಅವಳು ವಿನಯದಿಂದ ಬಂದು ತಂದೆಯ ಆಜ್ಞೆಯ ವಿಷಯವನ್ನು ಜಾನಕಿಗೆ ಅರುಹಲು, ಹಿರಿಯ ಮುತ್ತೈದೆಯರು ಆ ಕಾಮನಧಿದೇವತೆಯನ್ನು ಕರೆದೊಯ್ಯಲು ಸಜ್ಜಾದರು. ಮುಖಕಮಲದ ವೈಭವವನ್ನು ನೋಡಿ ಸಂತಸಗೊಂಡ ಓರ್ವ ಕಾಂತೆಯು ಹೇಗೆ ಕಾಣುವೆಯೋ ನೋಡೆಂದು ರನ್ನಗನ್ನಡಿಯನ್ನು ಸೀತೆಯ ಮುಖದೆದುರು ಹಿಡಿಯಲು, ಕೆನ್ನೆಗಳ ಮೇಲಿನ ಕಸ್ತೂರಿಯ ಪತ್ರಲೇಖೆಯನ್ನು ಸರಿಪಡಿಸಿಕೊಂಡು, ಮುಂಗುರಳನ್ನು ಕಿರುಬೆರಳಿನಿಂದ ತೀಡಿ ಭೂಸುತೆಯು ಸಂತಸವನ್ನು ಹೊಂದಿದಳು. ಸವಿನುಡಿಯ ತರಂಗಗಳ ವಿಲಾಸದಿಂದ ಕೂಡಿದ ಸಖೀಜನರು ಧರಣಿಜಾತೆಯ ಸುತ್ತ ಸೇರಿದರು. ಸುಕುಮಾರಿಯರಾದ ಓರಗೆಯ ಹೆಣ್ಣುಮಕ್ಕಳು ನಗುನಗುತ್ತ ಮೆಲುವಾಗಿ ಹೊಗಳುತ್ತ ವಿವಾಹಮಂಟಪದ ಬಳಿ ಕರೆದೊಯ್ಯಲು ಸಕಲಾಂಗಸೌಂದರ್ಯದ ಭೂಜಾತೆಯ ಕೈಹಿಡಿದುಕೊಳ್ಳಲು ಕಾಮದೇವತೆಗೆ ಹೊಸಚಿಗುರನ್ನು ನೀಡುವಂತೆ ತೋರಿತು. ಹೀಗೆ ರಾಜೀವವದನೆ ಸೌಂದರ್ಯಸದ್ರಸಸದನೆಯು ಅರಮನೆಯ ನಾನಾ ಬಾಗಿಲುಗಳನ್ನು ದಾಟಿಕೊಂಡು ಲಲನಾಜನರೊಡನೆ ಬರಲು ಕಾಮಿನಿಯರ ಕಾಲ್ಗೆಜ್ಜೆಗಳ ಇನಿದನಿ ಮೊಳಗಿತು. ಮೂಜಗವನ್ನು ಗೆಲ್ಲಲು ಮನ್ಮಥವೀರನಿಗೆ ಜಯಲಕ್ಷ್ಮಿಯು ಮಂಗಳಕರ ಆಶೀರ್ವಾದವನ್ನು ಮಾಡುವಳೋ ಎಂಬಂತೆ ಅದು ಗೋಚರಿಸಿತು. ಲಲನಾಶಿರೋಮಣಿಯು ಬರುತ್ತಿರುವ ಕಲಕಲರವವನ್ನು ಕೇಳಿದ ಬಾಗಿಲಗಾಹಿಗಳು ಸಡಗರದಿಂದ ಸಚಿವನಿಗೆ ತಿಳಿಸಲು ಆ ವಾರ್ತೆ ನಗರದಲ್ಲೆಲ್ಲ ಹಬ್ಬಿತು. ಒಸಗೆವಾತುಗಳು, ನಾನಾವಾದ್ಯಗಳ ರವ, ಮಂಗಳಗಾಯಕರ ಹಾಡು, ಪಾಠಕರ ವಂದಿಸಂದೋಹ ಮುಂತಾದವು ಹೊಗಳುತ್ತಿರಲು, ನಿಸ್ಸಾಳದುಂದುಭಿಗಳು ಮೊಳಗಿದವು.

ಸಿರಿಯು ಬರುತ್ತಿರುವುದನ್ನು ನೋಡಲು ಬಯಸದವರಾರು, ಮೂರು ಲೋಕಗಳ ಜೀವರುಗಳೂ ಸಿರಿಯನ್ನು ಬಯಸುವವರೇ. ತನ್ನ ಕುಡಿನೋಟದಿಂದಲೇ ಅಪಾರವಾದ ಐಶ್ವರ್ಯವನ್ನು ಬ್ರಹ್ಮ ದೇವೇಂದ್ರ ಮುಂತಾದವರಿಗೆ ಕರುಣಿಸುವ ಲೋಕಮಾತೆಯು

ತಮ್ಮ ಕಣ್ಣ ಮುಂದೆಯೇ ನಡೆದು ಬರುವುದನ್ನು ಕಾಣುವ ಔತ್ಸುಕ್ಯದಿಂದ ನಗರದ ಮನುಜರು ದೇವತೆಗಳು ಐತಂದರು. ನಗರದ ರಾಜಬೀದಿಗಳ ಇಬ್ಬದಿಗಳ ಸೌಧಾಗ್ರದಲ್ಲಿ ನಗೆಮೊಗದ ಯುವತಿಯರ ಸೊಗಸಿನಿಂದ ಹಾಲ್ಗಡಲ ಬೆಳುದಿಂಗಳು ನೋಟಕರಿಗೆ ಅತಿಶಯವೆನ್ನಿಸುವಂತೆ ಹರವಿಕೊಂಡಿತು. ಬಗೆಬಗೆಯ ವಾಹನಗಳನ್ನೇರಿ ದೇವತತಿಯು ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ಕಾಯ್ದು ನಿಂತರು. ದಿಕ್ಕುದಿಕ್ಕುಗಳ ದೇಶಗಳ ಜಗತೀಪತಿಗಳು ಜನಕಜಾತೆಯ ಬರವನ್ನು ಕೌತುಕದಿಂದ ನಿರೀಕ್ಷಿಸಿದರು. ಅಷ್ಟರಲ್ಲಿ ಅರಮನೆಯಿಂದ ಹೊರಟ ಭೂಮಿಸುತೆಯು ಕನಕಲತಾಂಗಿಯಾದ ಕಾಮಿನಿಯ ಕೈಯಾಸರೆಯಿಂದಲೂ, ವಿನಯದಿಂದ ಉಪಚರಿಸುವ ಯುವತಿಯರ ಗಡಣವನ್ನು ನೋಡಿ ಸಂತಸಗೊಂಡು, ಭಕ್ತಿಯಿಂದ ಸನ್ನುತಿಗೈವ ಜನರ ಅಭಿಮಾನದ ನೋಟದಿಂದ ಪುಲಕಗೊಂಡು ಹೆಜ್ಜೆಯಿಡತೊಡಗಿದಳು. ತಮಗೆ ನಡಿಗೆಯನ್ನು ಕಲಿಸಲು ಬೇಡಿಕೊಳ್ಳುವ ಹಂಸೆಗಳ ಪ್ರಾರ್ಥನೆಯ ಬೆಡಗಿನಂತೆ ಅವಳ ಹೊಂಗೆಜ್ಜೆಗಳ ಉಲಿಯುವಿಕೆಯು ಚಿನ್ನದ ದುಂಬಿವಿಂಡನ್ನು ನಾಚಿಸುವಂತಿತ್ತು. ಹೀಗೆ ತನ್ನ ಪದಪಯೋಜಗಳನ್ನು ನಿಧಾನವಾಗಿ ಇಡುತ್ತ ಗಜಗಮನದಿಂದ ಸೀತೆ ನಡೆದು ಬಂದಳು. ಆಗ ತಾವರೆಗಳು ಅರಳಿದವು, ಬಿಸಿಲಿನ ತಾಪವು ಹರಿಯಿತು, ತಂಗಾಳಿಯು ತೀಡಿತು, ಚಕೋರಗಳು ಸಂಭ್ರಮಿಸಿದುವು, ಹಗಲಿನಲ್ಲಿಯೇ ಇರುಳು ಹರಡಿ ಬೆಳುದಿಂಗಳು ಮೆರೆಯಿತು, ಆ ಸಮಯದಲ್ಲಿ ಎಲ್ಲರೂ ದೇವತೆಗಳಂತಾದರು. ಕುಸುಮಾಸ್ತ್ರಮಾತೆಯಾದ ಭೂಜಾತೆಯು ಬೆಳಗಿನಂತೆ ಬರಲು ಹಂಸಗತಿಯು ಪಸರಿಸಿತು, ಹೊಂಬಿಸಿಲು ಎಲ್ಲೆಡೆ ಆಕ್ರಮಿಸಿತು, ಗೂಗೆಗಳ ನಿಚಯವು ಮಸುಳಿಸುವಂತೆ ನಕ್ಷತ್ರಗಳ ಬೆಳಕು ದಟ್ಟವಾಯಿತು, ದ್ವಿಜರ ಮಂತ್ರಘೋಷದಿಂದ ಸಜ್ಜನರ ಚಿತ್ತದ ಚಿಂತೆಯು ಅಳಿಯಿತು. ನಿಧಿಯ ಹಾಗೆ, ಮಹಾರಾಜಸನ್ನಿಧಿಯ ಹಾಗೆ, ಪದ್ಮಾನುಮೋದವಿಮಲವಿಧಿಯ ಹಾಗೆ, ವೇದಸಮಾಗತವಾದ ದೇವತೆಗಳಿಂದ ಸೇವ್ಯನಾದ ಸುರೇಂದ್ರನ ಹಾಗೆ, ಸತ್ಕಲಾಕೌತುಕದಿಂದ ಕೂಡಿದ ಅಮೃತದ ಹಾಗೆ, ನವರಸಗಳಿಂದ ಕೂಡಿದ ನದಿಯ ಹಾಗೆ ಆ ಸುದತಿಯ ಕಂಗಳ ನೋಟವು ಶೋಭಿಸಿತು. ಕಾಮಬಾಣಗಳ ಸಮೂಹವು ವಿಜೃಂಭಿಸಿತೋ, ಅಥವಾ ಸ್ಮರನ ಅಧಿಕ ಕೀರ್ತಿ ಎಂಬ ಬೆಳುದಿಂಗಳು ಹರಡಿತೋ, ರತಿಪತಿಯ ರಸಸುಧಾವಾಹಿನಿಯು ಹರಿಯುತ್ತಿದೆಯೋ ಎಂಬಂತೆ ಕುಡಿನೋಟದ ಕಾಂತಿಯು ದೆಸೆದೆಸೆಗೆ ಹಬ್ಬಲು ನೆರೆದ ಜನರು ಮುದದಿಂದ ಕಣ್ಣೆವೆಗಳನ್ನಿಕ್ಕದೆ ಅವಳನ್ನೇ ನೋಡುತ್ತಿದ್ದರು. ಮೂರು ಲೋಕಗಳ ನಾರಿಯರ ಸೌಂದರ್ಯ ಚೆಲುವುಗಳ ಅತಿಶಯಗಳೆಲ್ಲವನ್ನೂ ಸಂಗ್ರಹಿಸಿ ಬ್ರಹ್ಮನು ಈ ಮನೋಹರಮೂರ್ತಿಯನ್ನು ಸಂತಸದಿಂದ ಸೃಷ್ಟಿಸಿ ಭೂಮಿಯ ಬಸಿರಲ್ಲಿರಿಸಲು ನಿಮಿಕುಲಕುಮಾರನ ತಪಃಫಲದ ಕಾರಣದಿಂದಾಗಿ ಅವನ ಕೈಸಾರಿತೇ ಹೊರತು ಉಳಿದ ಮಾನವರಿಗೆ ಈ ಚೆಲುವು ದೊರೆಯಲು ಸಾಧ್ಯವೇ? ಬ್ರಹ್ಮನ ರಾಣಿಯ ತಾವರೆಯಂತೆ ಕಂಗೊಳಿಸುವ ಕಾಂತಿ, ಆಕಾಶಗಂಗೆಯ ಅಲೆಗಳ ವಿಲಾಸ, ಹಾಲ್ಗಡಲ ಕುವರಿಯ ಸೌಂದರ್ಯದ ಅತಿಶಯಗಳನ್ನು ಪಡೆದು ವಾಸವನ ಸತಿಯಂತಹ ಸುದತಿಯರನ್ನೂ ಪರಿಹಾಸಗೈಯುವಂತಿರುವ ಈ ಸುವಾಸಿನಿಯು ಜಗನ್ಮೋಹನದ ಖನಿ ಎಂದು ಜನರು ಅಚ್ಚರಿಯಿಂದ ಸೀತಾದೇವಿಯನ್ನು ಈಕ್ಷಿಸಿದರು.

ಹೀಗೆ ವಿಲಾಸವಿಭ್ರಮಗಳಿಂದಲೂ ಗಂಧೇಭಗಮನೆಯರ ಉಪಚಾರಗಳಿಂದಲೂ ಕೂಡಿ ಜನಕಸುತೆಯು ಬರುತ್ತಿರಲು ಇಕ್ಕೆಲಗಳಲ್ಲಿನ ಕರುಮಾಡಗಳ ಮೇಲೆ ನಿಂತು ನೋಡುವ ಜನರು ನಸುನಗೆಯ ಹೂಗಳನ್ನು ಸೂಸುತ್ತಿದ್ದರು. ಹೊಂದೊರೆಯ ಹರಿವಿನಂತೆ ನಡೆತರುವ ಅವಳ ಕೂದಲ ಅಂದವನ್ನು ಕಂಡು ದುಂಬಿಗಳು ಹಿಂಜರಿಯುತ್ತಿರಲು, ಅವಳ ನಡಿಗೆಯಂತೆ ಹೆಜ್ಜೆಯಿಡಲಾರದೆ ಹಂಸಗಳು ಅವಳನ್ನು ಅನುಸರಿಸಿ ಬರಲು, ಬಂಧುರವಾದ ತುರುಬಿಗೆ ನವಿಲುಗಳು, ಇನಿನುಡಿಗೆ ಗಿಳಿಗಳು, ಕಂಠಕ್ಕೆ ಕೋಗಿಲೆಗಳು ಬೆಂಬತ್ತಿ ಬರುವುವೆಂದ ಮೇಲೆ ಜನರು ಭೂತನೂಜೆಯ ಚೆಲುವನ್ನು ಕಂಡು ಕೌತುಕ ಪಡುವುದರಲ್ಲಿ ಅಚ್ಚರಿಯೇನಿದೆ! ಮತ್ತಕಾಶಿನಿಯರು ಉಪಚರಿಸಿ ಕರೆತರುತ್ತಿದ್ದರೆ ಸುರಸಂತತಿಯು ನೋಡುತ್ತಿರಲು ನಾನಾವಿಧಧ ಶುಭವಾದ್ಯಘೋಷಗಳು ಎಂಟು ದಿಕ್ಕುಗಳನ್ನೂ ಪಸರಿಸಿರಲು, ಜನಕಜೆಯು ಕರುಣೆವೆತ್ತು ಲೋಕವನ್ನು ನಿಟ್ಟಿಸುತ್ತ ವಿವಾಹ ಮಂಟಪದೆಡೆಗೆ ನಡೆತಂದಳು. ಅವಳು ತೊಟ್ಟ ಮಣಿಭೂಷಣದ ಶೋಭೆಯು ಅರುಣರಾಗವನ್ನು ಹೆಚ್ಚಿಸಿತು, ಕಟಾಕ್ಷಗಳ ಶುಭ್ರ ಕಾಂತಿಯು ಸೂಸಲು ಚಂದ್ರಕಾಂತವು ಅದರ ಗೆಳೆತನಕ್ಕೆ ಹಾರೈಸಿತು. ಹೀಗೆ ಹೆಣ್ಣುಗಳ ಶಿರೋಮಣಿಯು ವೇದಿಕೆಯ ಬಳಿ ಬರಲು ನಿಸ್ಸಾಳಗಳು ಮೊಳಗಿದವು, ವಿವಿಧವಾದ್ಯಗಳೂ ದನಿಗೂಡಿಸಿದವು, ಭೂಸುರರ ಆಶೀರ್ವಚನ ಎಲ್ಲೆಡೆ ತುಂಬಿತು, ಅಮರತತಿಯ ಸ್ತುತಿಘೋಷವು ಮಂಟಪದಲ್ಲಿ ಹಬ್ಬಿತು. ನಳಿನಾಕ್ಷನು ಭೂಮಿಗೆ ಬರಲು ಸಮುದ್ರದಿಂದ ಥಟ್ಟನೆ ಹೊರಬಂದ ರಮೆಯು ತನ್ನ ಕೈಯ ಚಿನ್ನದ ಕಮಲವನ್ನು ತಿರುಹಲು ಅದರ ಪರಾಗಗಳು ಹರಡಿದವೋ ಎಂಬಂತೆ ಕಾಂಡಪಟ ರಾಜಿಸಿತು.

ಆ ಸಮಯದಲ್ಲಿ ಶಿವ-ಬ್ರಹ್ಮರು ಕನಕ ತೆರೆಯ ಮರೆಯಲ್ಲಿ ವಿರಾಜಿಸುತ್ತಿದ್ದ ವಧೂವರರನ್ನು ನೋಡಿ ಮೆಟ್ಟಕ್ಕಿಗಳ ಗೂಡೆಗಳನ್ನು ತರಿಸಿ ಮಧ್ಯದಲ್ಲಿ ಇರಿಸಲು, ದೇವಪುರೋಹಿತರು ಮುಹೂರ್ತವನ್ನು ಸೂಚಿಸಲು, ಭರ್ಗನು ವಿಜಯವಿಕ್ರಮಮೂರ್ತಿಯನ್ನು ಮೆಟ್ಟಕ್ಕಿಯಲ್ಲಿ ನಿಲ್ಲಿಸಲು, ಹಿರಣ್ಯಗರ್ಭನು ಧರಣಿಸುತೆಯನ್ನು ಅಷ್ಟಮೂರ್ತಿಯ ನೆರವಿನಿಂದ ಹೇಳುವ ಮಂಗಳಾಷ್ಟಕಗಳು ಕಂಗೊಳಿಸುತ್ತಿರಲು, ಅಷ್ಟಾಂಗಯೋಗನಿಧಿಯಾದ ಬ್ರಹ್ಮಕುವರನು ಅವರ ಗೋತ್ರನಾಮಗಳನ್ನು ಉಚ್ಚರಿಸಲು, ಶತಾನಂದ ವಿಪ್ರೋದಿತ ಇಷ್ಟವಚನಗಳನ್ನು ಹೇಳಲು, ನಿಗಮಾನುಸಾರವಾಗಿ ಜೀರಿಗೆಬೆಲ್ಲಗಳನ್ನು ವಧೂವರರು ಪರಸ್ಪರರ ತಲೆಯ ಮೇಲೆ ತಳಿಯುವಂತೆ ಹೇಳಿದರು. ಆನಂತರ ರೇಸಿಮೆಯ ಕಾಂಡಪಟವನ್ನು ಸಡಿಲಿಸಿ ನಿಗಮೋಕ್ತ ರೀತಿಯಲ್ಲಿ ವಿವಿಧ ಮಂತ್ರಗಳನ್ನು ಉಚ್ಚರಿಸಿ ಮದುವೆಯ ಗಂಡುಹೆಣ್ಣುಗಳು ಒಬ್ಬರೊಬ್ಬರ ಮುಖಗಳನ್ನು ನೋಡಲು ಸೂಚಿಸಲು ಶೃಂಗಾರರಸದಿಂದ ಕೂಡಿದ ಮುಖವೆಂಬ ಸರೋವರದಲ್ಲಿ ಮುಂಗಾರ ಮಿಂಚು ಹೊಳೆಯುವ ರೀತಿಯಲ್ಲಿ ಕುಡಿನೋಟದ ಬೆಡಗು ತುಂಬಿದ ರಾಮನು ಧರಣಿಜೆಯ ಕಣ್ಣುಗಳೆಂಬ ನೈದಿಲೆಗಳು ನಲಿಯುವ ರೀತಿಯಲ್ಲಿ ನೋಡಿದ, ಪತಿಯ ಕಟಾಕ್ಷದ ಸುಧಾಲಹರಿಯು ಹರಿದು ಬರುವುದನ್ನು ಕಂಡು ನಾಚಿದ ಸೀತೆಯ ಕಣ್ಣುಗಳು ಮುಚ್ಚಿಕೊಂಡವು, ಆದರೆ ಆಕೆಯ ಚಿತ್ತದಲ್ಲಿ ಶ್ರೀರಾಮನ ರಮಣೀಯಮೂರ್ತಿ ತೋರಿತು. ಇದನ್ನು ಕಂಡ

ಮುನಿತತಿಯು ಆನಂದದಿಂದ ಓಗ್ಗಿದರು, ಹರಿವಿರಿಂಚಿ ಮುಂತಾದವರು ನಲಿದರು. ಮನಸ್ಸಿನಲ್ಲಿ ಅನುರಾಗವು ಹೆಚ್ಚಿ ಹೊರಸೂಸಿದಂತೆ ರಾಮನ ಅಪಾಂಗಚಂದ್ರಿಕೆಯು ಬೆಳಗಲು, ಮಮತೆಯಿಂದ ಕೂಡಿ ನೀಲೋತ್ಪಲಗಳಿಂದ ಪೂಜಿಸುತ್ತಿರುವಳೋ ಎಂಬಂತೆ ಧರಣಿಸುತೆಯ ಮುಖಚಂದ್ರವು ಅರಳಿ ಹರುಷವಡೆಯಿತು. ಆ ಸಮಯದಲ್ಲಿ ಮುನಿಗಳು ಮಾತಿಲ್ಲದೆ ಆನಂದಸಾಗರದಲ್ಲಿ ಮುಳುಗಾಡಿದರು.

ಆನಂತರ ಅಕ್ಷತಾರೋಪಣ ನಡೆಸಲು ಮುತ್ತೈದೆಯರು ಹೊಂದಳಿಗೆಯಲ್ಲಿ ಆಣಿಮುತ್ತುಗಳನ್ನು ತುಂಬಿ ತಂದಿತ್ತರು; ಆಗ ಶ್ರೀರಾಮನು ಧರಣಿಸುತೆಯ ಕೈಗಳನ್ನು ಬೊಗಸೆಯಾಗಿಸಿ ತುಪ್ಪ ಮೊಸರು ಜೇನುಗಳಿಂದ ಅದನ್ನು ಶುಚಿಗೊಳಿಸಿದಾಗ, ಮುಕ್ತಾಕ್ಷತೆಯನ್ನು ವರನ ತಲೆಯ ಮೇಲೆ ಸುರಿಯಲು ಸೂಚಿಸಿದರು. ತನ್ನ ಬಳಿಯಿರುವ ಪರವಸ್ತುವು ಈ ಭೂಮಿಗಿಳಿಯಲು ಪೂಜಿಸಬೇಕೆಂಬ ರೀತಿಯಿಂದ ಆಕೆಯು ತನ್ನ ತೋಳುಗಳನ್ನು ನೀಡಿ ಹರಿಚಂದನ ಮತ್ತು ಹೂಗಳನ್ನು ಎರಡೂ ಕೈಗಳಲ್ಲಿ ಹಿಡಿದು ಸಡಗರದಿಂದ ರಾಮನ ತಲೆಯ ಮೇಲೆರೆಚಿ ಪೂಜೆಗೈಯುತ್ತಿರುವಳೋ ಎಂಬಂತೆ ಮುತ್ತುಗಳನ್ನು ವಲ್ಲಭನ ಮಸ್ತಕದ ಮೇಲೆ ಸುರಿದಳು. ಹಾಗೆಯೇ ಟಂಕಾರದ ಸದ್ದಿನಿಂದ ಮರ್ತ್ಯರೂ ಅಮರ್ತ್ಯರೂ ತಮ್ಮ ಅಹಂಕೃತಿಯನ್ನು ನೀಗಿಕೊಂಡು ತನ್ನ ವಶಕ್ಕೊಪ್ಪಿಸಿದ ಬಿಲ್ಲ ಝೇಂಕೃತಿಯಂತೆಯೇ ಈ ತಲೆಗೂದಲುಗಳೆಂದು ಮನ್ಮಥನು ತಾನೇ ಕುಂದಪುಷ್ಪಗಳಿಂದ ಅಲಂಕಾರ ಮಾಡಿದನೋ ಎಂಬ ರೀತಿಯಲ್ಲಿ ರಘುಕುಲೋತ್ತಂಸನು ಪಂಕಜಮುಖಿಯ ತಲೆಯ ಮೇಲೆ ಮುತ್ತಿನ ಅಕ್ಷತೆಗಳನ್ನು ಸುರಿದ. ಹೀಗೆ ಪರಸ್ಪರರ ತಲೆಗಳ ಮೇಲೆ ಸ್ಪರ್ಧೆಯಿಂದೆಂಬಂತೆ ಬೇಗ ಬೇಗ ರಾಮಸೀತೆಯರು ಮುತ್ತಿನ ಅಕ್ಷತಾರೋಪಣ ಮಾಡುವುದನ್ನು ಅಕ್ಷಯಾತ್ಮಕನಾದ ಮುಕ್ಕಣ್ಣ ಮುಂತಾದವರೆಲ್ಲರೂ ಈಕ್ಷಿಸಿದರು.

ಆ ಸಮಯದಲ್ಲಿ ಎಣ್ಮೆಯ್ಯನಾದ ಪರಮೇಶ್ವರನ ಆಜ್ಞೆಯಂತೆ ಜನಕ ಮಹಾರಾಜನು ಇಂದ್ರಪೂಜಿತವಾದ ಶ್ರೀರಾಮಚಂದ್ರನಿಗೆ ಭೂಸುತೆಯನ್ನು ಧಾರೆಯೆರೆದು ಕೊಡುವ ಉದ್ದೇಶದಿಂದ ಮಗಳ ಕೈಹಿಡಿದುಕೊಂಡು, ಭೂಸುರರು ಮಂತ್ರಪಠಣ ಮಾಡುತ್ತಿರಲು, ಧರ್ಮಾರ್ಥಕಾಮದಿಂದ ಈ ಸುವಾಸಿನಿಯನ್ನು ಸಹಚರಿಯಾಗಿ ಸ್ವೀಕರಿಸು ಎಂದು ರಘುವರನ ಕೈಗಳಿಗೆ ಮೀಸಲೋದಕವನ್ನು ಸುರಿದು, "ವೀರನೇ ಕೇಳು, ಸತ್ಕುಲವತಿಯೂ ಮಾನವತಿಯೂ ಆದ ನನ್ನ ಮಗಳನ್ನು 'ಸದ್ಧರ್ಮಸಹಚರಿ, ಉದಾರಕೀರ್ತಿಯಲ್ಲಿ ನನ್ನ ನೆರಳಿನಂತಿರುವವಳು' ಎಂದು ಕಕ್ಕುಲತೆಯಿಂದ ಕಾಪಾಡು" ಎಂದು ನುಡಿದ. ಈ ರೀತಿ ಧಾರಾಮುಹೂರ್ತವು ಸುಮುಹೂರ್ತವಾಗಲು ಅಪ್ಸರೆಯರು ಕುಸುಮಮಂತ್ರಾಕ್ಷತೆಗಳನ್ನು ಅವರ ಮೇಲೆ ಸುರಿದರು, ಗಂಧರ್ವರು ಹಾಡಿದರು. ಭೇರಿಗಳು ನಿನದಿಸಿದವು. ಋಷಿನಿವಹದ ಆಶೀರ್ವಾದನಾದವು ದಿಕ್ತಟಗಳಲ್ಲಿ ಮಾರ್ದನಿಸಿತು, ದಿಕ್ಪಾಲಕರು ಹರಸಿದರು.

ಮೃಡನು ರಘುವರನನ್ನು ತೊಡೆಯ ಮೇಲಿರಿಸಿ ಕುಳಿತುಕೊಳ್ಳಲು, ಬ್ರಹ್ಮನು ಮಮತೆಯಿಂದ ಅವನ ತೊಡೆಯಲ್ಲಿ ಪೊಡವಿಜಾತೆಯನ್ನಿರಿಸಿದ; ಜಾಬಾಲಿ ಕಣ್ವ ಕಶ್ಯಪ ಅತ್ರಿ ಅಗಸ್ತ್ಯ ಗೌತಮ ಭಾರದ್ವಾಜ ವಿಶ್ವಾಮಿತ್ರರ ಜೊತೆಯಲ್ಲಿ ಕೌತುಕಬಂಧನವನ್ನು



ಶ್ರೀರಾಮಸೀತಾ ಕಲ್ಯಾಣ

ಮಾಡಿಸಬೇಕೆಂದು ಹೇಳಿ ಹೊನ್ನ ಬಟ್ಟಲಿನಲ್ಲಿ ಉಂಗುರವೊಂದನ್ನಿಟ್ಟು ಕುಳಿತುಕೊಂಡರು. ಈತನಿಂದ ಹುಟ್ಟಿದ ಮಾಯೆಯು ಈ ರೀತಿ ಮೂರು ಲೋಕಗಳನ್ನೂ ಆವರಿಸಿದ್ದಾಳೆ, ಈ ಜೀವರಾಶಿಗಳಲ್ಲಿ ಈತನು ಈ ರೀತಿಯಲ್ಲಿ ಅಡಕವಾಗಿದ್ದಾನೆ ಎಂದು ಮೂರೂ ಲೋಕಗಳಿಗೆ ತಿಳಿಸುವಂತೆ ಆ ಹೊಂಬಟ್ಟಲನ್ನು ಹಿಡಿದುಕೊಂಡು ಒಬ್ಬರೊಬ್ಬರಿಗೆ ಕೊಡುತ್ತ ವೇದಮಂತ್ರಗಳನ್ನು ಉಚ್ಚರಿಸುತ್ತ ಶಾಸ್ತ್ರವಿಧಿಯಂತೆ ಕಂಕಣವನ್ನು ರಚಿಸಿದರು. ಅತಿಶಯವೆನಿಸುವಂತೆ ವೇದಮಂತ್ರಪೂರ್ವಕವಾಗಿ ಹೊಳೆಯುವ ತಲೆಗಳನ್ನು ಕಟ್ಟಿ ಹೊಳೆಯುವ ಮಣಿಪೀಠದ ಮೇಲೆ ಕುಳ್ಳಿರಿಸಿ ಆಶೀರ್ವಾದ ಮಾಡಿ, ಮುಖ್ಯ ಹೋಮವನ್ನು ಮಾಡಿಸಲೆಂದು ದರ್ಭೆ ಅರಳು ಮುಂತಾದ ಮುಖ್ಯ ದ್ರವ್ಯಗಳನ್ನು ತರಿಸಿದರು. ಆ ಬಳಿಕ ಮುಹೂರ್ತವನ್ನು ಮೀರದ ರೀತಿಯಲ್ಲಿ ಗುರುವಸಿಷ್ಠರು ಮಂತ್ರಪೂರ್ವಕವಾಗಿ ಹೋಮವನ್ನು ಮಾಡಿಸಿ ಮದುಮಕ್ಕಳ ಸೆರಗುಗಳನ್ನು ಗಂಟು ಹಾಕಿದರು. ಆನಂತರ ಅವರಿಬ್ಬರಿಂದ ಅಗ್ನಿಯ ಪ್ರದಕ್ಷಿಣೆ ಮಾಡಿಸಿ ನಿಗಮೋಕ್ತಕ್ರಮದಿಂದ ರಘುವರನ ಕೈಯಿಂದ ಧರಣಿಜೆಯ ಕಾಲ ಹೆಬ್ಬೆರಳನ್ನು ಹಿಡಿಸಿ ಮಂತ್ರಪಠಣ ಮಾಡುತ್ತ ಸಪ್ತಪದಿಯನ್ನು ತುಳಿಸಿದರು. ಹೀಗೆ ಶಾಸ್ತ್ರಕ್ಕನುಗುಣವಾಗಿ ವಿಧಿಗಳು ನಡೆಯಲು ಮದುಮಕ್ಕಳನ್ನು ಸ್ವರ್ಣಪೀಠದಲ್ಲಿ ಕುಳ್ಳಿರಿಸಿದಾಗ ಮುತ್ತೈದೆಯರು ಮುತ್ತಿನಾರತಿಗಳನ್ನು ಬೆಳಗಿದರು. ಆಗ ಕೆಲವರು ಕೋಗಿಲೆಯ ಸ್ವರದಂತೆ ಇಂಪಾದ ಕಂಠದಿಂದ ಶೋಭಾನೆಗಳನ್ನು ಹಾಡಿದರು, ದ್ವಿಜರು ಆಶೀರ್ವಾದ ಮಾಡಿದರು, ನಾನಾ ವಾದ್ಯಗಳು ಭೋರೆಂದು ಮೊಳಗಿದವು.

ಈ ಬಗೆಯಲ್ಲಿ ಶ್ರೀರಾಮ–ಸೀತೆಯರ ಮದುವೆಯು ಸಾಂಗೋಪಾಂಗವಾಗಿ ನೆರವೇರಲು, ಅದೇ ಬಗೆಯಲ್ಲಿ ಜನಕ ಮಹಾರಾಜನು ಸೋಮನಾಜ್ಞೆಯಂತೆ ನಿಗಮೋಕ್ತಕ್ರಮದಿಂದ ಊರ್ಮಿಳೆಯನ್ನು ಲಕ್ಷ್ಮಣನಿಗೆ ಧಾರೆಯೆರೆದಿತ್ತು, ಮಾಂಡವಿ ಶ್ರುತಕೀರ್ತಿಯರನ್ನು ಭರತಶತ್ರುಘ್ನರಿಗೆ ಧಾರೆಯನ್ನೆರೆದು ಕೊಡುವಂತೆ ತನ್ನ ತಮ್ಮನಾದ ಕುಶಧ್ವಜನಿಗೆ ಸೂಚಿಸಿದ. ಅದರಂತೆ ಕುಶಧ್ವಜನು ಅಣ್ಣನ ಆಜ್ಞೆಯಂತೆ ಕೈಕೇಯಿಯ ಮಗನಾದ ಭರತನಿಗೆ ಮಾಂಡವಿಯನ್ನು ಧಾರೆಯೆರೆದಿತ್ತ, ಶತ್ರುಘ್ನನಿಗೆ ಶ್ರುತಕೀರ್ತಿಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ಮದುವೆ ಮಾಡಿಕೊಟ್ಟ. ದೇವತೆಗಳೆಲ್ಲ ಹರುಷದಲ್ಲಿ ಓಲಾಡಿದರು. ಚೆಲುವು ತುಂಬಿದ ಮದುವಣಿಗರನ್ನು ಸಡಗರದಿಂದ ಮಣಿಪೀಠಗಳಲ್ಲಿ ಕುಳ್ಳಿರಿಸಿ, ಕಲಿಗಳ ಅಗ್ರೇಸರನಾದ ಮಿಥಿಲೇಶ್ವರನು ಭೂಸುರರಿಗೆ ಗೋ ಭೂ ಹಿರಣ್ಯ ಮಣಿಕನಕ ಗಜ ಹಯ ಮುಖ್ಯವಾದ ದಾನಗಳನ್ನು ಧಾರಾಪೂರ್ವಕವಾಗಿ ಮಾಡಲು ಅವರೆಲ್ಲ ಸಂತುಷ್ಟರಾದರು. ಮೂರು ಲೋಕಗಳನ್ನು ಕರುಣೆಯಿಂದ ಸಲಹಲೆಂದು ಭೂತಳದಲ್ಲಿ ಮನುಷ್ಯರೂಪದಿಂದ ಜನಿಸಿದ ಶ್ರೀರಾಮಪುರದರಸನು ಸತಿಸಮೇತನಾಗಿ ಹಸೆಮಣೆಯ ಮೇಲೆ ಕುಳ್ಳಿರಲು ದೇವತೆಗಳೂ ಋಷಿಗಳೂ ಸಿದ್ಧರೂ ಚಾರಣರೂ ಹರ್ಷಭರಿತರಾಗಿ ಅವರನ್ನು ನೋಡಿ ನಲಿಯುತ್ತಿದ್ದರು.

೨೩. ಶ್ರೀರಾಮನು ಪರಶುರಾಮನನ್ನು ಗೆದ್ದುದು

ಮುನಿಗಳೇ ಕೇಳಿ, ಈ ರೀತಿ ಮನುವಂಶಾಧಿನಾಥನು ತನ್ನ ಮನದನ್ನೆಯ ಜೊತೆಯಲ್ಲಿ ರತ್ನಪೀಠದಲ್ಲಿ ಕುಳಿತಿರಲು ಬ್ರಹ್ಮನು ಅವರನ್ನು ನೋಡಿ ಪರಮ ಸಂತೃಪ್ತಿಯಿಂದ "ಜನನಮರಣವಿದೂರ, ಯೋಗಾಂತರಂಗ, ದುರ್ಜನವಿದಾರಣ, ಸಾಂಖ್ಯರೂಪ, ವಿದ್ಯಾನೇತ, ಚಿನ್ಮಯಾತ್ಮಕರಾಮ, ನೀಲಮೇಘಶ್ಯಾಮ, ಜಯತು ಗಿರಿಜೇಶಪ್ರೇಮ, ವೇದಾಂತವೇದ್ಯ ತ್ರೈಗುಣ್ಯಮೂರ್ತಿಗಳಾದ್ಯ, ಬೋಧಸ್ವರೂಪ ಭವನಾಶ, ನಿರ್ಗುಣರೂಪ ಸಾಧುಭಕ್ತಿಗೆ ಸಾಧ್ಯ, ಸಕಲಲೋಕಾರಾಧ್ಯ, ಸುಜ್ಞಾನಬೋಧ್ಯ; ಭೇದವಿರಹಿತ ಗೋಪ್ಯ ಭಜಕಕರುಣಾಕಲಿತ, ನಾದಾನುಸಂವಳಿತ, ನತಶಾಂತರಸಭರಿತ, ಕ್ರೋಧೀಯನಿರ್ಜರಾಹಿತ ನೀರದವ್ರಾತ ಮಾರುತಾತ್ಮಕನೇ, ಯಾಗಮಂತ್ರಾತ್ಮಕ ಸುಯಾಗಸಂವಿದಿತ ಶತಯಾಗಸಂಪತ್ಪ್ರದ ವಿರಾಗಭೂಷಣರಾಮ ಕಾಮಪಿತ ಕಾಯ್ವುದೆನ್ನ, ಸರ್ವಚೇತನರೂಪ ಸರ್ವಭೂತಾಂತಸ್ಥ, ಶರಣು ಜಯಕಾಕುತ್ಸ್ಥ ಮಸ್ತಕೋಟೀರರತ್ನ ಸರ್ವಲೋಕಾಧೀಶ ದುರಿತತಮದಿನೇಶ ಸರ್ವಜ್ಞಮುನಿರಕ್ಷ ಸತತನಿಶಿಚರಶಿಕ್ಷ ಸರ್ವಾತ್ಮಕನೆ, ರಾಮಚಂದ್ರನೆ ಶರಣು" ಎಂದು ಸ್ತುತಿಗೈದ. ಆ ಸ್ತುತಿಯನ್ನು ಕೇಳಿ ಅಂಬುಜಾಕ್ಷನು ಕರುಣೆಯಿಂದ, "ನಿನ್ನ ಸ್ತೋತ್ರದಿಂದ ನನಗೆ ಆನಂದ ತುಂಬಿ ಬಂದಿದೆ, ಇದಕ್ಕಾಗಿ ನಿನ್ನ ಆಸೆಯನ್ನು ಪೂರೈಸಲು ನಾನು ಸಿದ್ಧನಿರುವೆ, ಕೇಳು" ಎನ್ನಲು "ವಿದ್ಯುಲ್ಲತಾಮೂರುತಿಯೇ, ರತ್ನಮಯವಾದ ವಿವಾಹಮಂಟಪದಲ್ಲಿ ಮೆರೆಯುವ ಸಿಂಹಾಸನದ ಮೇಲೆ ಸೀತಾಮಾತೆಯೊಡನೆ ಕುಳಿತಿರುವ ಸನ್ಮೂರ್ತಿಯು ನನ್ನ ಮನಸ್ಸಿನಲ್ಲಿ ಸದಾ ರಾರಾಜಿಸುತ್ತಿರಲಿ ಎಂದೇ ನನ್ನ ಪೇರಾಸೆ" ಎನ್ನಲು ಅದಕ್ಕೆ ಶ್ರೀರಾಮನು ಒಪ್ಪಿದ. ಆ ಬಳಿಕ ರಾಮಚಂದ್ರಮೂರ್ತಿಗೆ ನಮಸ್ಕರಿಸಿ ತನ್ನ ನಿಲಯಕ್ಕೈದಿದ.

ಆಗ ಹರನು ಸಿರಿಯರಸನನ್ನು ನೋಡಿ ಪರಿಪರಿಯಾಗಿ ಹೊಗಳಿದ: "ಮೂರು ಗುಣಗಳಿಂದ ತ್ರಿಮೂರ್ತಿಗಳನ್ನು ಸೃಷ್ಟಿಸಿ, ಮೂರು ಅಧಿಕಾರಗಳನ್ನು ಪಾಲಿಸುತ್ತ, ತ್ರಿಗುಣನಾಗಿದ್ದರೂ ಗುಣರಹಿತನಾಗಿ ಸದ್ಯೋಗಿಗಳಿಗೆ ಮೂರು ರೂಪಗಳಲ್ಲಿ ಚಿಜ್ಜ್ಯೋತಿಯ ರೀತಿಯಲ್ಲಿ ತೋರುತ್ತ, ತ್ರಿಚಕ್ರಗಳನ್ನೂ ಮೀರಿ ಮೂರು ಅವಸ್ಥೆಗಳನ್ನು ಹೊಂದಿಯೂ ಹೊಂದದಂತಿರುವ ಪರಬ್ರಹ್ಮನೇ ನೀನು. ನಾಲ್ಕು ಮುಖಗಳಲ್ಲಿ ಆಧಾರವನ್ನು ಬೆಳಗುತ್ತ, ನಾಲ್ಕು ಶೃಂಗದ ಪೀಠದಲ್ಲಿ ಜ್ಯೋತಿಯಂತೆ ನಾಲ್ಕಾರು ದಳಗಳಲ್ಲಿ ಸದಾಶಿವತೆಯಿಂದ ಕೂಡಿ ರಾರಾಜಿಸುತ್ತ, ನಾಲ್ಕು ಅವಸ್ಥೆಗಳನ್ನು ಮೀರದೆ ಆಕಾಶದಂತೆ ಹದಿನಾಲ್ಕು ಲೋಕಗಳ ಚರಾಚರಗಳಲ್ಲಿನ ಜೀವರ ರೂಪಗಳನ್ನು ತಳೆದು ನಾಲ್ಕು ವೇದಗಳ ಇರುಕಿನಲ್ಲಿ ಸಿಕ್ಕದ ಅದ್ವೈತನಿಧಿಯೇ ನಿನಗೆ ನಮೋ. ಕೌಮಾರಮುದ್ರೆಯನ್ನು ಧರಿಸಿ ಸಿದ್ಧಾಸನದಲ್ಲಿ ಉಸಿರುಮನಸ್ಸುದೃಷ್ಟಿಗಳನ್ನು ಒಂದುಗೂಡಿಸಿ ಅಗ್ನಿಯ ಕ್ರಮವನ್ನೂ ಮೀರಿ ಬತ್ತದ ಮೊನೆಯ ಪರಿಮಿತವಾದ ಪಥದಲ್ಲಿ ಮುಂಬರಿದು, ತಲೆಯ ಮಧ್ಯದ ಶರಚ್ಚಂದ್ರನಿಂದ ಸುರಿಯುವ ಸುಧಾರಸವನ್ನು ಹೀರಿ ಎಲ್ಲವನ್ನೂ ಮರೆತು ತನ್ನ ಸುಖದಲ್ಲಿಯೇ ತಲ್ಲೀನನಾಗಿರುತ್ತ ಸತತಾನಂದ ರೂಪನಾದ ರವಿಕುಲೋತ್ತಮನೇ,

ನಿನಗೆ ಜಯವಾಗಲಿ. ಮಿಟುಕಿಸದ ರೆಪ್ಪೆಗಳ ಅಂಚಿನಲ್ಲಿ ನಿಟ್ಟಿಸಿರುವ ದೃಷ್ಟಿಯನ್ನು ಬಳಸದೆ ಅನ್ನವನ್ನು ಒಂದೇ ಸಮನೆ ತನ್ನ ನಿಜ ಬೆಳಗನ್ನು ಲಕ್ಷೀಕರಿಸುತ್ತ ನಿಶ್ಚಲತೆಯಿಂದ ಒಪ್ಪುತ್ತಿರುವ ಕಳೆಯ ಭೇದವನ್ನು ತಾಳಿ ಯೋಗಿಗಳನ್ನು ಅನುದಿನವೂ ಹೊಳೆಯುವ ಸ್ಫಟಿಕದ ಪಾತ್ರೆಯಲ್ಲಿ ಇಟ್ಟ ದೀಪದ ಹಾಗೆ ಒಳಹೊರಗೆ ಅಖಂಡವಾಗಿ ತೊಳಗುವ ತೇಜೋರಾಶಿ ರಘುವೀರನೇ, ಜಯತುಜಯತು. ಬ್ರಹ್ಮಾಂಡದ ಎಲ್ಲ ಜೀವಿಗಳಲ್ಲೂ ಸರಮುತ್ತಿನೊಳಗಿರುವ ಸರಿಗೆಯ ಹಾಗೆ, ಆಕಾಶದ ರೀತಿಯಲ್ಲಿ ಎಲ್ಲದಕ್ಕೂ ಸಾಕ್ಷಿಯಾಗಿ ವಿಷಯೋಪಭೋಗಗಳನ್ನು ಅನುಭವಿಸುತ್ತ, ಕೊಡದ ನೀರಿನಲ್ಲಿ ಹೊಳೆಯುವ ಸೂರ್ಯನ ಹಾಗೆ, ಕೆಸರಿನಲ್ಲಿರುವ ಕಮಲದ ಹಾಗೆ, ಬತ್ತಿಯ ಮೂಲಕ ಎಣ್ಣೆಯನ್ನು ಹೀರುವ ದೀಪದ ಹಾಗೆ ಅಂಟಿಯೂ ಅಂಟದ ರೀತಿಯಲ್ಲಿ ಚಿನ್ಮಾತ್ರನಾಗಿರುವ ಶ್ರೀರಾಮಚಂದ್ರನೇ ಶರಣು ಶರಣು." ಹೀಗೆ ಕಾತ್ಯಾಯಿನೀಪತಿಯು ನಾನಾ ಬಗೆಯಲ್ಲಿ ನುತಿಗೈಯಲು ಅಂತರಾತ್ಮಕನಾದ ಶ್ರೀರಾಮನು ಅತಿ ಪ್ರೀತಿಯಿಂದ, "ಕಂತುಹರನೇ, ನಿನ್ನ ಮನಸ್ಸಿನಲ್ಲಿರುವ ಬಯಕೆಯನ್ನು ಸಲ್ಲಿಸುತ್ತೇನೆ ಎಂದ ಮೇಲೆ ನಿನ್ನ ಚಿತ್ತದಲ್ಲಿ ಮೈಥಿಲೀಸಹಿತನಾದ ರಾಮನಿಂದಾಗುವ ಮಂಗಳವೆಲ್ಲ ನೆಲಸಿರಲಿ" ಎಂದು ಹೇಳಿ ರಘುವೀರನು ಶಿವನನ್ನು ಬೀಳ್ಕೊಟ್ಟ.

ಸಿರಿಯರಸನ ಆಜ್ಞೆಯಂತೆ ಹರಬ್ರಹ್ಮರು ಹೋದ ಮೇಲೆ ನೆರೆದಿದ್ದ ದಿಕ್ಪಾಲಕರೂ ಋಷಿಗಳೂ ಗಂಧರ್ವರೂ ಕಿನ್ನರರೂ ಪರಿಪರಿಯಾಗಿ ಆ ಮಹಾತ್ಮನನ್ನು ಸ್ತುತಿಸುತ್ತ ನಮಿಸಿ ಅವನ ಅನುಜ್ಞೆಯನ್ನು ಪಡೆದು ಹರುಷದಿಂದ ಹಾಡುತ್ತ ತಮ್ಮ ತಮ್ಮ ನಿಲಯಗಳಿಗೆ ವಾಪಸಾದರು. ಜನಕ ಮಹಾರಾಜನು ದೇವತಾಸಮೂಹವನ್ನು ಪ್ರೀತಿಯಿಂದ ಉಪಚರಿಸಿ ಕಳುಹಿಸಿಕೊಟ್ಟ. ಹಾಗೆಯೇ ಅನುದಿನವೂ ಷಡ್ರಸೋಪೇತ ಮೃಷ್ಟಾನ್ನವನ್ನು ಭೂಸುರರಿಗೆ ಅರ್ಪಿಸುತ್ತ, ಬೇಡಿದವರಿಗೆ ಧನಕನಕವಸ್ತುವಾಹನಗಳನ್ನು ನಲವಿನಿಂದಿತ್ತು ಸಂತಸಗೊಳಿಸುತ್ತ, ವಂದಿಮಾಗಧರು ಮತ್ತು ಮಂಗಳಪಾಠಕರಿಗೆ ಅವರವರ ಇಷ್ಟಾರ್ಥಗಳನ್ನಿತ್ತು, ನಾನಾ ದೇಶಗಳಿಂದ ಬಂದಿದ್ದ ಜನರಿಗೆ ಮಣಿಕನಕಗಳ ಮಹಾದಾನಾದಿಗಳನ್ನಿತ್ತು ಸಂತಸಗೊಳಿಸಿದ. ಹೀಗೆ ವೈಭವದಿಂದ ಮೂರು ದಿನಗಳನ್ನು ಕಳೆದ ಬಳಿಕ ನಾಕಬಲಿಯನ್ನು ನೆರವೇರಿಸಿ ವಿಪ್ರರಿಗೆ ನಾನಾ ಬಗೆಯ ವಸ್ತುಗಳನ್ನಿತ್ತು ಸತ್ಕರಿಸಿ ಮೃದುನುಡಿಗಳಿಂದ ಸಂತಸಗೊಳಿಸುತ್ತಿರಲು, ವಿಶ್ವಾಮಿತ್ರರು ಮುಂದೆ ನಡೆಯಬೇಕಾದ ಕಾರ್ಯಗಳನ್ನು ಮಹಾರಾಜನಿಗೆ ಸೂಚಿಸಿ, ರಾಮನ ಗುಣಗಳನ್ನು ಹೊಗಳುತ್ತ ಹಿಮಾಲಯದತ್ತ ಪಯಣ ಬೆಳೆಸಿದರು. ಹೀಗೆ ನಾಲ್ಕು ದಿನಗಳಾಗಲು ದಶರಥನು ತನ್ನ ಊರಿಗೆ ಹೋಗಲು ಅನುಮತಿ ನೀಡಬೇಕೆಂದು ನಿಮಿಕುಲೋತ್ತಮನನ್ನು ಮೃದುಮಧುರ ನುಡಿಗಳಿಂದ ಕೇಳಿಕೊಂಡ. ಆಗ ಜನಕನೃಪತಿಯು ತನ್ನ ಸಚಿವರನ್ನು ಕರೆದು ತನ್ನ ಹಿರಿಯ ಮಗಳಿಗೆ ಬಳುವಳಿಯಾಗಿ ಕಾಂತಿಯುಕ್ತವಾದ ಆಭರಣಗಳನ್ನೂ, ಹಸು ಕುದುರೆ ರಥ ಆನೆ ಪಲ್ಲಕ್ಕಿಗಳನ್ನೂ, ರತಿಯನ್ನು ಹೋಲುವ ದಾಸಿಯರನ್ನೂ, ಚಿನ್ನದ ಬಂಡಿ ಮುಂತಾದ ವಸ್ತುನಿಚಯವನ್ನೂ ತರಲು ಆಜ್ಞಾಪಿಸಿದ. ಅದರಂತೆಯೇ ಎಲ್ಲ ವಸ್ತುಗಳೂ ಸಿದ್ಧವಾದವು. ಇವೆಲ್ಲವನ್ನೂ ಮಗಳಂದಿರಿಗೆ ಅಕ್ಕರೆಯಿಂದಿತ್ತು

ಅಳಿಯಂದಿರಿಗೂ ಬಂಧುಗಳಿಗೂ ಅತಿಶಯವೆನಿಸುವ ಆಭರಣಗಳನ್ನೂ ವಾಹನಗಳನ್ನೂ ಕೊಟ್ಟು ಉಪಚರಿಸಿ, ಅವರ ಪರಿವಾರವನ್ನು ಬಟ್ಟೆ ಹಣ ಮುಂತಾದವುಗಳಿಂದ ಸಂತುಷ್ಟಿಗೊಳಿಸಿ, ಸಕಲ ವಿದ್ವಜ್ಜನರನ್ನೂ ಸತ್ಕರಿಸಿ, ರಾಜರುಗಳಿಗೆ ಮಾಲ್ಯವಸ್ತ್ರಗಳನ್ನು ಉಡುಗೊರೆಯಾಗಿತ್ತು ಮನ್ನಿಸಿದ.

ಮಾರನೆಯ ದಿನ ಶುಭ ಮುಹೂರ್ತದಲ್ಲಿ ಮಹಾರಾಜನು ಸೂರ್ಯವಂಶಸಂಭವರನ್ನು ಉಚಿತ ವಾಕ್ಕುಗಳಿಂದ ಹರ್ಷವು ಉಕ್ಕುವ ರೀತಿಯಲ್ಲಿ ಉಪಚಾರ ಮಾಡಿ ಪ್ರಯಾಣಕ್ಕೆ ಅನುವು ಮಾಡಿಕೊಟ್ಟ. ತನ್ನ ಮಗಳನ್ನು ನೋಡಿ ಕಕ್ಕುಲತೆಯಿಂದ ಗದ್ಗದವುಂಟಾಗುತ್ತಿರಲು, ಕಂಗಳಲ್ಲಿ ನೀರು ಕೋಡಿವರಿಯುತ್ತಿರಲು, ಮಾತನಾಡಲಾರದೆ ಮಗಳನ್ನು ಕರೆದು ಅಪ್ಪಿಕೊಂಡ. ಮಗಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಅವಳ ಗಲ್ಲಗಳನ್ನು ಅಲುಗಿಸುತ್ತ, ಮಸ್ತಕವನ್ನಾಘ್ರಾಣಿಸುತ್ತ, ವಾತ್ಸಲ್ಯವು ಉಕ್ಕುತ್ತಿರಲು ಅವಳ ಪೂರ್ಣೇಂದುವದನವನ್ನು ನೋಡುತ್ತ ಮೃದುವಾಣಿಯಿಂದ, "ಉಡುವ ಉಂಬುವ ಸನ್ನಿವೇಶಗಳಲ್ಲಿ, ಪ್ರೀತಿಯ ಮಾತುಗಳನ್ನಾಡುವ ಸಂದರ್ಭಗಳಲ್ಲಿ, ಮಲಗುವ ಕಾಲದಲ್ಲಿ ಇದುವರೆಗೂ ನಿನ್ನನ್ನು ಬಿಟ್ಟೇ ಇರದಿದ್ದ ನಾನು ಇನ್ನು ಮುಂದೆ ನಿನ್ನನ್ನು ಕಾಣದೆ ಹೇಗೆ ಇರಲಿ? ನಿನ್ನನ್ನು ಅರೆನಿಮಿಷ ಬಿಟ್ಟಿರಬೇಕೆಂದರೆ ನಿದ್ದೆ ಹಾರಿಹೋಗುತ್ತದೆ ಎನ್ನಬೇಕಾದರೆ, ಬೆಳಗಾಗೆದ್ದು ನಿನ್ನ ಕಾಣದಿರಲು ನಾಲಗೆಯ ರುಚಿಯೇ ಕಣ್ಮರೆಯಾಗುತ್ತದೆ ಎನ್ನಬೇಕಾದರೆ, ಇನ್ನು ಮುಂದೆ ಶಾಶ್ವತವಾಗಿ ನಿನ್ನನ್ನು ಬಿಟ್ಟು ನಾನು ಹೇಗಿರಲಿ? ನಿನ್ನ ಮಂಗಳ ಮೂರ್ತಿ ಕಣ್ಣಿಗೆ ಬೀಳದಿದ್ದರೆ ನನ್ನ ಮನಸ್ಸು ಹೇಗೆ ತಾಳಿಕೊಂಡೀತು? ಕನ್ಯಾಪಿತೃತ್ವವು ದುಃಖದ ಬೀಜ ಎಂಬ ಮಾತು ಸತ್ಯ" ಎಂದು ಮಮ್ಮಲ ಮರುಗಿದ. ಹೀಗೆ ದುಃಖಿಸುವ ರಾಜನನ್ನು ಕಂಡು ಶತಾನಂದ, "ಎಲೈ ರಾಜನೇ, ಸದ್ಗುಣವುಳ್ಳ ವ್ಯಕ್ತಿಗೆ ರಾಜ್ಯಸುಖವೆಂಬುದು ಬ್ರಹ್ಮಾನಂದವೇ ಸರಿ. ಕನ್ಯಾದಾನವನ್ನು ಮಾಡಿದವನಿಗೆ ವೈಭವಕ್ಕೆ ಎಣೆಯೇ ಇಲ್ಲ ಎಂದು ಗಾದೆಯೇ ಇರಬೇಕಾದರೆ ಏಕೆ ಕಣ್ಣೀರು ಸುರಿಸುತ್ತೀಯೆ?" ಎಂದಾಗ ಮಿಥಿಲೇಶನು ಸಮಾಧಾನ ತಂದುಕೊಂಡು ನಸುನಗುತ್ತ ಮಗಳನ್ನು ನೋಡಿ, "ಸಮಾಲೋಚನೆಯಲ್ಲಿ ಮಂತ್ರಿಗೆಣೆಯಾಗಿ, ಕರುಣೆಯಲ್ಲಿ ದಾಸ್ಯಭಾವವನ್ನು ತೋರಿಸಿ, ಮೃಷ್ಟಾನ್ನವನ್ನು ಉಣಿಸುವಲ್ಲಿ ತಾಯಿ ಎನಿಸಿ, ಮನಃಪೂರ್ವಕವಾಗಿ ಪತಿಯೊಡನೆ ಕೂಡುವೆಡೆಯಲ್ಲಿ ರತಿಯಂತೆ ಶೋಭಿಸಿ, ಕ್ಷಮೆಯಲ್ಲಿ ಭೂಮಿತಾಯಿ ಎನ್ನಿಸಿಕೊಂಡು ಗಂಡನೊಡನೆ ಧರ್ಮಾನುಕೂಲೆಯಾಗಿ ಬಾಳು" ಎಂದು ಸಾಮಾನ್ಯ ಮನುಷ್ಯರು ತಮ್ಮ ಮಗಳಂದಿರಿಗೆ ಹೇಳುವಂತೆಯೇ ನುಡಿದು ಮನಃಪೂರ್ವಕವಾಗಿ ಹಾರೈಸಿದ. ಆನಂತರ ಸಾಗರನು ಬಾಲಚಂದ್ರನನ್ನು ಮಹೇಂದ್ರನಿಗೆ ಒಪ್ಪಿಸಿದ ಹಾಗೆ ಮಗಳನ್ನು ದಶರಥನಿಗೆ ಒಪ್ಪಿಸಿ ತನ್ನ ಪರಿಜನರೊಡನೆ ಬೀಳ್ಕೊಂಡ.

ಬೀಗರಿಂದ ಬೀಳ್ಕೊಂಡ ದಶರಥನು ಹಾಲ್ಗಡಲೇ ಉಕ್ಕಿ ಹರಿದಂತೆ ವಾದ್ಯಗಳು ಭೋರ್ಗರೆಯುತ್ತಿರಲು ಚತುರಂಗಸೈನ್ಯಸಮೇತ ಅಯೋಧ್ಯಾನಗರದ ಕಡೆಗೆ ಪಯಣ ಬೆಳೆಸಿದ. ದಾರಿಯಲ್ಲಿ ನಾನಾ ಹಕ್ಕಿಗಳು ಚೀರಾಡುವ, ಮೃಗಗಳು ಭಯಗೊಂಡು

ಓಡುವ ದೃಶ್ಯವನ್ನು ಕಂಡು ದಶರಥನು ವಸಿಷ್ಠರೊಡನೆ, "ಪೂಜ್ಯರೇ, ಇದೇನು ಗರುಡನ ಧ್ವನಿ ಜೋರಾಗಿ ಕೇಳಿಸುತ್ತಿದೆಯಲ್ಲಾ! ನನಗೆ ಯಾಕೋ ಭಯವುಂಟಾಗುತ್ತಿದೆ" ಎಂದ. ಅದಕ್ಕೆ ಮುನೀಶನು ನಸುನಗುತ್ತ, "ರಾಜನೇ ಕೇಳು, ಹಕ್ಕಿಗಳ ಚೀರಾಟಕ್ಕೆ ಕಾರಣವನ್ನು ಹೇಳುತ್ತೇನೆ" ಎನ್ನುವಷ್ಟರಲ್ಲಿಯೇ ಬೆಟ್ಟಗಳ ಮೇಲೆ ವಜ್ರಾಯುಧವು ಬಿದ್ದಂತೆ, ಭೂಮಿಯನ್ನು ನಡುಗಿಸುತ್ತ, ಮರಗಳೆಲ್ಲ ಬುಡಮೇಲಾಗಿ ಬೀಳುವಂತೆ ಜಂಝಾವಾತ ಬೀಸಲು ಆಕಾಶದಲ್ಲೆಲ್ಲ ಕೆಂಧೂಳು ಆವರಿಸಿತು, ನಕ್ಷತ್ರಗಳೂ ಗ್ರಹಗಳೂ ಭೂಮಿಯೊಳಗಿರುವ ರತ್ನಗಳಂತೆ ಕಾಣಿಸಿದ ದೃಶ್ಯವನ್ನು ಏನೆಂದು ಬಣ್ಣಿಸಲಿ! ದಿಕ್ಕುಗಳನ್ನು ಕತ್ತಲೆ ಆವರಿಸಿತು, ಸೂರ್ಯಚಂದ್ರರು ಎಲ್ಲಿ ಹೋದರೋ ಎಂಬ ಕಳವಳವುಂಟಾಯಿತು, ಒಬ್ಬರನ್ನೊಬ್ಬರು ಕಾಣದ ಹಾಗೆ ಧೂಳು ದಟ್ಟವಾಯಿತು. ರಾಜನೂ ಮುನಿಗಳೂ ಭಯದಿಂದ ತತ್ತರಿಸಿಹೋದರು. ಸಾಗರದಲ್ಲಿ ಬಡಬಾಗ್ನಿ ಮೂಡಿದ ಹಾಗೆ, ಮೋಡದಿಂದ ಸಿಡಿಲು ಹೊಮ್ಮಿದ ಹಾಗೆ ಪ್ರಕೃತಿಯು ಭೀಷಣವಾಯಿತು. ಅದರ ನಡುವೆ ಕಾಲಭೈರವನಂತೆ ಭೀಷಣವಾದ ಬಿಲ್ಲನ್ನೂ ದಿವ್ಯಾಸ್ತ್ರಗಳಿಂದ ಕೂಡಿದ ಬತ್ತಳಿಕೆಯನ್ನೂ ಹೊಂದಿ, ಹೆಗಲ ಮೇಲೆ ಗಂಡುಗೊಡಲಿಯನ್ನೇರಿಸಿಕೊಂಡು ರಣಭೀಮನಾದ ಪರಶುರಾಮನು ಕಲ್ಪಾಂತರುದ್ರನಂತೆ ಕಾಣಿಸಿಕೊಂಡ. ಕಣ್ಣುಗಳ ಕೆಂಪು ದಿಕ್ತಟಗಳನ್ನು ತಾಕಿ ಅರುಣೋದಯದ ರೀತಿಯಲ್ಲಿ ಕಾಣಿಸುತ್ತಿರಲು, ಅವನ ಉಸಿರಾಟದ ಶಬ್ದಕ್ಕೆ ಬ್ರಹ್ಮಾಂಡವೇ ಹೊಡೆಹುಲ್ಲಾಯಿತು, ಭಾರ್ಗವನ ತೀವ್ರ ನಡಿಗೆಗೆ ಸೈನಿಕರು ತಳ್ಳಂಕಗೊಂಡರು, ಎದೆಯ ದ್ರವವು ಆರಿಹೋದಂತಾಯಿತು.

ಮಹಾಭೂಭುಜರ ವಂಶದ ಕಾಡಿನ ಮರಗಳನ್ನು ಕತ್ತರಿಸಿ ಒಟ್ಟಿದ ಉನ್ನತಶೌರ್ಯನೂ ರುದ್ರಸನ್ನಿಭನೂ ಆದ ಪರಶುರಾಮನು ಬರುತ್ತಿರುವನು ಎಂದು ತಿಳಿದು ಗ್ರಹವು ಬೀಳುವ ಹಾಗೆ ದಶರಥ ಮಹಾರಾಜನು ಚಿಂತೆಯಿಂದ ಬಸವಳಿದು ಬೆಪ್ಪಾಗಿಬಿಟ್ಟ. ಒಂದೆಡೆ ಜಟಾಮಂಡಲ ಮತ್ತೊಂದೆಡೆ ಬಿಲ್ಲುಬಾಣಗಳು ಹೊಳೆಯುತ್ತಿರಲು, ಒಂದೆಡೆ ಜಿಂಕೆಯ ಚರ್ಮ ಮತ್ತೊಂದೆಡೆ ಕಮಂಡಲು, ಒಂದೆಡೆ ಕಟಿಸೂತ್ರ ಮತ್ತೊಂದೆಡೆ ಯಜ್ಞೋಪವೀತಗಳು ಕಾಣಿಸುತ್ತಿದ್ದವು; ಹಿಂದುಗಡೆ ಕ್ರೂರವಾಗಿ ಹರಿತವಾದ ಕೊಡಲಿ, ಇವುಗಳಿಂದ ಶಾಂತವೂ ವೀರವೂ ಸೇರಿದಂತಿರುವ ಈ ಅದ್ಭುತವಾವುದು ಎಂದು ಗುರುವರ್ಯನನ್ನು ಶ್ರೀರಾಮನು ಬೆಸಗೊಂಡ. ಆಗ ಮುನಿಯು, "ಅಸಮ ಸಮರಾಟೋಪನಾದ ಕಾರ್ತವೀರ್ಯನ ಸಾವಿರ ತೋಳುಗಳನ್ನು ಕತ್ತರಿಸಿದ ಭೃಗುವಂಶಸಂಜಾತನಾದ ಕ್ಷತ್ರಿಯಕುಲವನ್ನೆಲ್ಲ ನಾಶಗೈದ ಪರಶುರಾಮನೇ ಇವನು. ಇವನ ವದನವು ನಿಗಮಗಳ ಮಂದಿರ, ಸಾಹಸದ ಹೊಗರಿಗೆ ಇವನ ತೋಳುಗಳೇ ತವರುಮನೆ, ಇವನ ಕಣ್ಣುಗಳು ರೌದ್ರಕ್ಕೆ ಮಾತೃಸ್ಥಾನ. ಇವನು ಧೈರ್ಯದ ನಿಲಯ. ಇಂತಹ ಭೃಗುಕುಲೋದ್ಭವರಿಗೆ ಮಿಗಿಲಾದವರು ಯಾರಿದ್ದಾರೆ? ಅವನಿಗೆ ಅರ್ಘ್ಯಪಾದ್ಯಗಳನ್ನಿತ್ತು ಸತ್ಕರಿಸಿರಿ" ಎಂದು ಸೂಚಿಸಿದರು.

ಆಗ ಪರಶುರಾಮನು ಮುನಿಯನ್ನು ಕುರಿತು, "ಇಲ್ಲಿ ಪಕ್ಕದಲ್ಲಿ ನಿಂತಿರುವವನು ಶಿವಧನುಸ್ಸನ್ನು ಮುರಿದವನೇನು? ನಾನು ಕ್ಷತ್ರಿಯಕುಲವನ್ನು ನಾಶಮಾಡುವಾಗ ಇವನು

ಮುತ್ತಯ್ಯನ ಮಡದಿಯರ ಬಸಿರಲ್ಲಿ ಅಡಗಿದ್ದು ತನ್ನ ದೇಹವನ್ನು ಸಲಹಿಕೊಂಡ. ಆನಂತರ ಮಣ್ಣು ಕಲ್ಲಾದ ಹಾಗೆ ಜನಿಸಿದ. ಎಲೈ ರಾಮನೇ, ನನ್ನೊಡನೆ ಈಗ ಕಲಹದಲ್ಲಿ ಎದುರಾಗು, ಹಿಡಿ ನಾನು ವೈಷ್ಣವಚಾಪವನ್ನು ಕೊಡುತ್ತೇನೆ" ಎಂದ. ಆಗ ದಶರಥ ಮಹಾರಾಜನು, "ಈತನಿನ್ನೂ ಎಳೆಯ ಕಂದನಾದ ರಘುರಾಮ, ಇವನಿಗೆ ಭೂಭೂಜವೃಂದವನ್ನು ಕೊಂದ ಭೃಗುರಾಮನೊಡನೆ ಹೋರಾಡಲು ಸಾಧ್ಯವೇ? ಸ್ವಾಮಿ, ಈ ಹುಡುಗನನ್ನು ಸಲಹಿರಿ, ನಿಮಗೆ ಇದಿರಾಗಿ ನಿಲ್ಲಲು ವಿಷಕಂಠನಿಗಾಗಲೀ ಇಂದ್ರನಿಗಾಗಲೀ ದಿಕ್ಪಾಲಕರಿಗಾಗಲೀ ಅಳವೇ? ಈ ನನ್ನ ಚತುರಂಗಸೈನ್ಯಸಮೇತ ನಾನು ನಿಮಗೆ ಶರಣಾಗುತ್ತೇನೆ" ಎಂದು ಕೈಮುಗಿದು ಬೇಡಿಕೊಂಡ. ಈ ಮಾತುಗಳಿಗೆ ಬೆಲೆ ಕೊಡದೆ ಮತ್ತೆಯೂ ಮಹಾಕೋಪದಿಂದ ಶ್ರೀರಾಮನನ್ನು ನೋಡಿ ತನ್ನ ಭುಜಗಳನ್ನು ಕುಣಿಸಿ, "ಎಲೈ ರಾಮ, ಕೇಳು, ಹಿಂದೆ ಮಯನು ಎರಡು ಮಹಾ ಬಿಲ್ಲುಗಳನ್ನು ನಿರ್ಮಿಸಿ ಒಂದನ್ನು ಗೊರವನಿಗೆ ಕೊಟ್ಟ. ಆ ಬಿಲ್ಲನ್ನೇ ನೀನು ಮುರಿದದ್ದು, ಎರಡನೆಯ ವೈಷ್ಣವಕೋದಂಡವನ್ನು ದೇವತೆಗಳು ವಿಷ್ಣುವಿಗೆ ಅರ್ಪಿಸಿದರು. ಅದೇ ಈಗ ನಾನು ಧರಿಸಿರುವ ಬಿಲ್ಲು. ದೇವತೆಗಳು ಹರಿಹರರಲ್ಲಿ ಹೆಚ್ಚು ಬಲಿಷ್ಠರಾರೆಂಬುದನ್ನು ತಿಳಿಯುವ ಕುತೂಹಲದಿಂದ ಬ್ರಹ್ಮದೇವನ ಬಳಿ ಹೋಗಿ ಈ ಕುರಿತು ವಿಚಾರಿಸಿದರು. ಆಗ ಬ್ರಹ್ಮನು ಗರುಡವಾಹನ ಮತ್ತು ನಂದಿವಾಹನರ ನಡುವೆ ವೈರಭಾವವನ್ನುಂಟುಮಾಡಿದ. ಅವರಿಬ್ಬರ ನಡುವೆ ಘೋರವಾದ ಯುದ್ಧ ಆರಂಭವಾಯಿತು. ಒಬ್ಬನು ಇನ್ನೊಬ್ಬನಿಗೆ ಬಗ್ಗದೆ ಗೆಲ್ಲುವ ಉತ್ಸಾಹದಿಂದ ಭರ್ಗನಾರಾಯಣರು ಹೋರಾಡುತ್ತಿರಲು, ವಿಷ್ಣುಚಾಪದ ಬಲವು ಮಿಗಿಲಾಗತೊಡಗಿದಾಗ ಶಿತಿಕಂಠನು ಬೆರಗಾದ. ಇಬ್ಬರ ಭಾವವನ್ನು ದೇವತೆಗಳು ಗಮನಿಸಿ ಇಂದುಶೇಖರನಿಗೂ ವಾಸುದೇವನಿಗೂ ನಮಸ್ಕರಿಸಿ ಇಬ್ಬರೂ ಯುದ್ಧವನ್ನು ನಿಲ್ಲಿಸಿ ತಮ್ಮನ್ನು ಕಾಪಾಡಬೇಕೆಂದು ದೀನರಾಗಿ ಪ್ರಾರ್ಥಿಸಿಕೊಂಡರು. ದೇವತೆಗಳು ಮತ್ತು ಋಷಿಗಳ ಮಾತುಗಳಿಂದ ಸಂತುಷ್ಟರಾಗಿ ಇಬ್ಬರೂ ಯುದ್ಧವನ್ನು ನಿಲ್ಲಿಸಲು, ವಿಷ್ಣುಚಾಪವೇ ಶ್ರೇಷ್ಠವಾದುದೆಂದು ಭಾವಿಸಿದ ಎಲ್ಲರೂ ತಮ್ಮ ತಮ್ಮ ಸ್ವಸ್ಥಾನಗಳಿಗೆ ಮರಳಿದರು. ಆಗ ಶಶಿಶೇಖರನು ತನ್ನ ಧನುಸ್ಸನ್ನು ಕೋಪದಿಂದ ದೇವರಾತನಿಗೆ ನೀಡಿದ; ವಿಷ್ಣುವು ತನ್ನ ಬಿಲ್ಲನ್ನು ಭೃಗುವಿನ ಮಗನಾದ ರುಚಿಕನಿಗೆ ಕೊಟ್ಟ, ಅವನು ಅದನ್ನು ಜಮದಗ್ನಿಗೆ ನೀಡಲು ನನ್ನ ಕೈಸೇರುವಂತಾಯಿತು. ನಾನು ವಿಷ್ಣುವಿನ ಅಪ್ಪಣೆ ಪಡೆದು ನನ್ನ ತಂದೆಯನ್ನು ಕೊಂದಿದ್ದ ಕಾರ್ತವೀರ್ಯನನ್ನು ಸಂಹರಿಸಿ ಕ್ಷತ್ರಿಯರ ಕುಲವನ್ನೇ ಹೊಸಕಿ ಹಾಕಿ ಭೂಮಿಯನ್ನೆಲ್ಲ ಯಾಗದಕ್ಷಿಣೆಯಾಗಿ ಕಾಶ್ಯಪನಿಗೆ ಕೊಟ್ಟೆ. ಆನಂತರ ಶಾಂತಿಯನ್ನು ತಾಳಿ ತಪಸ್ಸಿಗೆ ಹೋಗಲು, ನೀನು ಶಿವಧನುಸ್ಸನ್ನು ಮುರಿದ ಸುದ್ದಿಯನ್ನು ಸುರಚಾರಣರು ಹೇಳಲು ಅದನ್ನು ಕೇಳಿದ ನಾನು ಕಡುಗೋಪದಿಂದ ನಿನ್ನೊಡನೆ ಯುದ್ಧಮಾಡಲು ಉತ್ಸುಕನಾಗಿ ಬಂದಿದ್ದೇನೆ. ಕ್ಷತ್ರಿಯಕುಲದಲ್ಲಿ ಹುಟ್ಟಿರುವ ನೀನು ಅತಿಶಯ ಬಲವುಳ್ಳವನೇ ಆದರೆ ಈ ವಿಷ್ಣುಬಿಲ್ಲನ್ನು ತೆಗೆದುಕೊಂಡು ಕ್ಷಾತ್ರಧರ್ಮಕ್ಕನುಗುಣವಾಗಿ ನಿನ್ನ ಸಾಮರ್ಥ್ಯವನ್ನು ತೋರಿಸು. ಶಿವಚಾಪವನ್ನು ಬಗ್ಗಿಸಿದ ನೀನು ಅದರಂತೆಯೇ ಇರುವ ಈ ಬಿಲ್ಲಿಗೆ ಹೆದೆಯೇರಿಸಿದರೆ ನೀನು ಬಲಿಷ್ಠನೆಂದು ಒಪ್ಪಿಕೊಂಡು ಮಲ್ಲಯುದ್ಧ ಮಾಡುತ್ತೇನೆ. ಮುಷ್ಟಿಯುದ್ಧದಲ್ಲಿ ಇಬ್ಬರೂ ಸೆಣಸಾಡಿ

ಯಾರು ಬಲಿಷ್ಠರೆಂಬುದನ್ನು ರುಜುವಾತು ಪಡಿಸೋಣ. ಕ್ಷತ್ರಿಯರನ್ನೆಲ್ಲ ಸದೆಬಡಿದು ಅವರ ಕೊಬ್ಬನ್ನಿಳಿಸಿ ಷಾಣ್ಮಾತುರ (ಕಾರ್ತಿಕೇಯ)ನ ಯಜ್ಞಕ್ಕೆ ದಕ್ಷಿಣೆಯಾಗಿ ಇಡೀ ಭೂಮಿಯನ್ನು ಧಾರೆಯೆರೆದು ಕೊಟ್ಟ ಬಲ್ಲಿದನಾದ ನನಗೆ ನೀನು ಸಮಸಾಟಿಯೇ? ಈ ಧನುಸ್ಸನ್ನು ತೆಗೆದುಕೋ, ಹಿಡಿ" ಎಂದು ಮೂದಲಿಸಿದ.

ಆಗ ತನ್ನ ತಂದೆಯು ವಿನೀತಭಾವದಿಂದ ಭಾರ್ಗವಗೆ ನಮಸ್ಕರಿಸುವುದನ್ನು ಕಂಡು ಶ್ರೀರಾಮನು ಮಾತಿಲ್ಲದೆಯೇ ಪರಶುರಾಮನು ನೀಡಿದ ಧನುಸ್ಸನ್ನು ತೆಗೆದುಕೊಂಡ. ಅತಿ ಸುಲಭವಾಗಿ ವೈಷ್ಣವಚಾಪದ ತಿರುವನ್ನೇರಿಸಿ ಟಂಕಾರ ಮಾಡಿದ ಶ್ರೀರಾಮನು ನಸುನಗುತ್ತ, "ನೀನು ಪ್ರಾಜ್ಞಶ್ರೇಷ್ಠ, ನಿನ್ನನ್ನು ಕೊಲ್ಲುವುದು ಧರ್ಮಸಮ್ಮತವಲ್ಲ" ಎಂದು ಹೇಳಿ ಬಿಲ್ಲನ್ನು ಕೆಳಗಿಟ್ಟ. ಅದನ್ನು ಕಂಡು ಭಾರ್ಗವ ನಿಬ್ಬೆರಗಾದ; ಹಿಂದಿನದನ್ನೆಲ್ಲ ನೆನಪಿಸಿಕೊಂಡು ದಾಶರಥಿಯು ಮಹಾವಿಷ್ಣುವಿನ ಅವತಾರವೇ ಎಂಬುದನ್ನು ಮನಸ್ಸಿನಲ್ಲಿಯೇ ಅಂದುಕೊಂಡು, "ದೇವನೇ, ನೀನು ಹದಿನಾಲ್ಕು ಲೋಕಗಳನ್ನೂ ಹುಟ್ಟಿಸುವ, ಕರುಣೆಯಿಂದ ಸಲಹುವ, ಕೊನೆಗೆ ಎಲ್ಲವನ್ನೂ ಅಂತ್ಯಗೈವ ಮುಮ್ಮೂರ್ತಿಗಳನ್ನೂ ಒಳಗೊಂಡು ಮುನಿಗಣವನ್ನು ಸಲಹುವ ಉದ್ದೇಶದಿಂದ ಭೂಮಿಯಲ್ಲಿ ದಶರಥನ ಮಗನಾಗಿ ಅವತಾರ ಮಾಡಿ ಮುನಿಜನರನ್ನು ಪಾವನಗೊಳಿಸಿದ ಪರಮಾನಂದಮಯನೆಂದು ತಿಳಿದು ವಿಜ್ಞಾಪಿಸಿಕೊಳ್ಳುತ್ತೇನೆ. ನಾನು ಭೃಗುವಂಶದಲ್ಲಿ ಹುಟ್ಟಿ ಆ ಬಳಿಕ ಪರವನ್ನು ಸಾಧಿಸುವ ಪ್ರಯತ್ನದಲ್ಲಿ ತಪಸ್ಸು ಮಾಡುತ್ತಲಿರಲು ಒಂದು ದಿನ ನಾನಾ ವಸ್ತುಗಳೊಡನೆ ಚಕ್ರತೀರ್ಥದ ಬಳಿಗೆ ಹೋದೆ. ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಮನಸ್ಸನ್ನು ಯೋಗದಲ್ಲಿ ನೆಲೆಗೊಳಿಸಿ ಬಹುಕಾಲ ನಿಗಮಗೋಚರನಾದ ನಾರಾಯಣನನ್ನು ಕುರಿತು ಧ್ಯಾನಿಸಿದೆ. ನನ್ನ ಕಠಿಣ ತಪಸ್ಸಿಗೆ ಮೆಚ್ಚಿ ಕರುಣಾಮಯಿಯಾದ ಜಗದೀಶನು ಪ್ರೀತಿಯಿಂದ ಬಂದು ಗಂಭೀರವಾಣಿಯಿಂದ, 'ವಿಪ್ರನೇ, ನಿನ್ನ ತಪೋನುಷ್ಠಾನವನ್ನು ಮೆಚ್ಚಿದ್ದೇನೆ. ಬಯಸಿದ್ದನ್ನು ಬೇಡು' ಎಂದಾಗ ನಾನು, 'ದುರಿತಾರಿಯಾದ ಚಿನ್ಮಯಮೂರ್ತಿಯೇ, ನನ್ನನ್ನು ಸುಜ್ಞಾನಮಯಮಯನನ್ನಾಗಿ ಮಾಡು' ಎಂದು ಕೇಳಿಕೊಂಡೆನು. ಆಗ ಪರಮಾತ್ಮನು, 'ವಜ್ರಕ್ಕಿಂತಲೂ ಕಠಿಣವಾದ ಹೃದಯದಿಂದ ಕೂಡಿ ಗರ್ವೋದ್ರೇಕವು ಹೆಚ್ಚಲು ನೀನು ನಿನ್ನ ತಂದೆಯನ್ನು ಕೊಂದ ಕಾರ್ತವೀರ್ಯನ ತಲೆಯನ್ನು ಕತ್ತರಿಸಿ ಇಪ್ಪತ್ತೊಂದು ಬಾರಿ ದಂಡಯಾತ್ರೆ ಮಾಡಿ ರಾಜನ್ಯಕುಲವನ್ನು ನಾಶಮಾಡಿ ನನ್ನ ಅಂಶವನ್ನು ಹೊಂದಿ ಅವರ ರಕ್ತವಾಹಿನಿಯಲ್ಲಿಯೇ ನೀನು ತಂದೆಗೆ ರಕ್ತತರ್ಪಣವನ್ನು ಅರ್ಪಿಸು' ಎಂದು ಅನುಗ್ರಹಿಸಲು ನಾನು ಬೆದರಿ ಬಿನ್ನವಿಸಿಕೊಂಡೆ: 'ಹಾರುವವಂಶಕ್ಕೆ ಅನುಗುಣವಲ್ಲದ ಈ ಕಾರ್ಯಕ್ಕೆ ನಾನು ಹೇಗೆ ತಾನೇ ಅಧಿಕಾರಿಯಾಗಬಲ್ಲೆ? ಮೂರು ಲೋಕಗಳ ಕ್ಷತ್ರಿಯರೆಲ್ಲ ನನ್ನ ಕೈಲಿ ತೃಣಸಮಾನರಾಗಿ ಮಡಿಯುತ್ತಾರೆಯೇ? ಈ ಕಾರ್ಯವನ್ನು ಯಾರು ತಾನೇ ಮೆಚ್ಚುತ್ತಾರೆ' ಎಂದು ಪ್ರಾರ್ಥಿಸಿಕೊಂಡಾಗ ಜಗದೀಶನು, 'ಕ್ಷತ್ರಿಯರನ್ನು ಕಡಿದುಹಾಕಲು ನನ್ನ ಚಕ್ರಕ್ಕೆ ಸಮಾನವಾದ ಕಳೆಯೊಂದನ್ನು ನಿನ್ನ ಕೊಡಲಿಗೆ ನೀಡುತ್ತೇನೆ. ಈ ದುಷ್ಟರಾಜರನ್ನೆಲ್ಲ ಸಂಹರಿಸು.

ನಾನು ಆನಂತರ ಬ್ರಹ್ಮನ ಪ್ರಾರ್ಥನೆಯಂತೆ ತ್ರೇತಾಯುಗದಲ್ಲಿ ಭೂಮಿಯ ಮೇಲೆ ದಶರಥನ ಮಗನಾಗಿ ಅವತರಿಸುತ್ತೇನೆ. ಆಗ ನನ್ನ ಕಳೆಯನ್ನು ಮರಳಿ ನಿನ್ನಿಂದ ಸ್ವೀಕರಿಸಿ ನಿನಗೆ ಶಾಂತಮನೋಭಾವವನ್ನು ಅನುಗ್ರಹಿಸುತ್ತೇನೆ' ಎಂದು ಹೇಳಿದ. ಅದಕ್ಕನುಗುಣವಾಗಿ ಜಗನ್ಮಯನಾದ ನೀನು ನನಗೆ ಇಂದು ಕಾಣಿಸಿಕೊಂಡಿದ್ದೀಯೆ. ನನ್ನ ಸಂದೇಹವೆಲ್ಲವೂ ಪರಿಹಾರವಾಯಿತು. ನೀನು ಸರ್ವಾಂತರ್ಯಾಮಿಯೆಂದು ನನಗೆ ಖಚಿತವಾಯಿತು. ನೀನಿತ್ತ ಕಳೆಯು ನಿನ್ನಲ್ಲಿಗೆ ಮರಳಿತೇ? ನನ್ನ ದಿವ್ಯಾಸ್ತ್ರಶಸ್ತ್ರಗಳೆಲ್ಲ ನಿನಗೆ ಸಲ್ಲಲಿ" ಎಂದು ಹೇಳಿ ಪರಶುರಾಮನು ಶಾಂತಮುದ್ರೆಯನ್ನು ತಾಳಿದ. ತನ್ನ ಮನಸ್ಸಿನ ಅಹಂಕಾರಪರ್ವತವನ್ನು ಬಿಸುಟು ವಿನಯಕವಚವನ್ನು ತೊಟ್ಟು ಭಕ್ತಿರಸಪೀಯೂಷಸಾಗರದಲ್ಲಿ ಓಲಾಡಿ ತನ್ನ ರೌದ್ರದ ಕತ್ತಲೆಯನ್ನು ಕಳೆದುಕೊಂಡು ಸುಜ್ಞಾನದ ಸೊಡರನ್ನು ಬೆಳಗುತ್ತ ಚಿನ್ಮಯಚೇತನನೂ ನಿರ್ಗುಣನೂ ನಿರಾಮಯನೂ ಆದ ವೈಕುಂಠವಾಸನಾದ ರಾಮಪುರಿಯ ಜಾನಕೀವಲ್ಲಭನನ್ನು ಮತ್ತೆ ಮತ್ತೆ ನೋಡುತ್ತ ಭಾರ್ಗವನು ನಿಂತ.

೨೪. ಪರಶುರಾಮ ತಪಸ್ಸಿಗೆ ಹೋದುದು; ದಶರಥಾದಿಗಳು ಅಯೋಧ್ಯೆಗೆ ಮರಳಿದುದು

ಮಡದಿಯರ ಮಾಣಿಕ್ಯವೇ, ಮುಂದಾದುದನ್ನು ಕೇಳು. ಪರಶುರಾಮನು ರಘುರಾಮನನ್ನು ಮುಂದೆ ನಿಲ್ಲಿಸಿಕೊಂಡು ವೇದೋಕ್ತಿಗಳಿಂದ ಕೂಡಿದ ಶುಭವಾಣಿಯಿಂದ ಆನಂದಮಯನಾಗಿ ಸ್ತುತಿಸಿದ: 'ಹರಬ್ರಹ್ಮರೇ ಮೊದಲಾದ ದೇವತೆಗಳು ಯಾರನ್ನು ತಮ್ಮ ಹೃದಯಕಮಲದ ಮಧ್ಯದಲ್ಲಿರಿಸಿಕೊಂಡು ಧ್ಯಾನ ಮಾಡಿ ಸೌಖ್ಯವನ್ನು ಹೊಂದುತ್ತಾರೆಯೋ ಆತನನ್ನು ಅತಿ ಭಕ್ತಿಯಿಂದ ಹೊಗಳುತ್ತೇನೆ. ದೇವಾಧಿದೇವತೆಗಳ ಈಪ್ಸಿತವನ್ನು ಸಲಿಸುತ್ತಲೂ ದೇವತೆಗಳ ಶತ್ರುಗಳನ್ನು ಶಿಕ್ಷಿಸುತ್ತಲೂ ಸೇವಿಸುವ ಜನರ ನಾಮಸಂಕೀರ್ತನೆಯಲ್ಲಿ ನಾದರೂಪನೆನ್ನಿಸಿಕೊಂಡು, ಪಾವನವಾದುದರಲ್ಲಿ ಪಾವನನಾಗಿ, ಕಪ್ಪು ಮೋಡದಲ್ಲಿ ಹೊಳೆಯುವ ಮಿಂಚಿನಂತೆ ಕಾಣಿಸಿಕೊಳ್ಳುತ್ತ ಕಣ್ಮರೆಯಾಗುತ್ತ ನಿಗಮಗಳಿಗೆ ಗೂಢನಾಗಿಯೂ ಚಿದ್ರೂಪನಾಗಿಯೂ ಇರುವಾತನಿಗೆ ನಾನು ವಂದಿಸುತ್ತೇನೆ. ಜಗದಧೀಶನನ್ನು, ಜನ್ಮನಾಶಕನನ್ನು, ನಿಗಮಪ್ರಕಾಶನನ್ನು, ಸೂರ್ಯನನ್ನೇ ಕಣ್ಣಾಗಿ ಉಳ್ಳವನನ್ನು, ಸುಗುಣರ ಕೋಶನಾದವನನ್ನು, ದೇವತೆಗಳಿಗೂ ಮುನೀಂದ್ರರಿಗೂ ಒಡೆಯನಾಗಿರುವವನ್ನು, ಸುಜನರನ್ನು ದಯೆಯಿಂದ ಪೊರೆಯುವವನನ್ನು, ಮನಸ್ಸಿನಲ್ಲಿ ಕಾಣಲು ಶಕ್ತನಾದವನ ಬಗೆಯಲ್ಲಿ ಹೊಳೆಯುವವನ್ನು, ಸ್ತುತಿಸಲು ನಲಿಯುವವನ್ನು, ಮೆಚ್ಚಿದವರಿಗೆ ಒಲಿಯುವವನ್ನು, ಅಗಣಿತ ಮಹಾಮಹಿಮನೂ ಮಮತಾಯುತನೂ ಆದ ರಘುಕುಲಲಾಮನನ್ನು ನಾನು ಶರಣುವೊಗುತ್ತೇನೆ. ಶರಣು ಜಗದಭಿರಾಮ, ರಾಮಮಂಗಳನಾಮ, ಶರಣು ಅಗಜಾಪ್ರೇಮ, ಸೋಮನುತಸುತ್ರಾಮ, ಶರಣು

ನವನೀರದಶ್ಯಾಮ, ಕೃತಕಲಿರಾಮ, ತಾಮರಸಪೀಠಜನಕ, ಶರಣು ಕರುಣಾಸಾಂದ್ರ, ರಘುಕುಲಾಂಬುಧಿಚಂದ್ರ, ಶರಣು ರಣನಿಸ್ತಂದ್ರ, ಸನ್ನುತಪ್ರಮಥೇಂದ್ರ, ಶರಣು, ನಿಗಮಗೋಚರನೆ, ಗಮನ ಆಗಮನಗಳಿಲ್ಲದವನೆ, ಮಹಿಮಾಸ್ಪದವಾದ ಅಣಿಮಾದಿ ಗುಣಗಳನ್ನೀಯುವವನೆ, ಜಗತ್ತಿನಲ್ಲಿ ತುಂಬಿರುವವನೆ, ಜಗನ್ಮಯನೆ, ಜನಾರ್ದನನೆ, ಸಗರವಂಶಾಂಬುಧಿಚಂದ್ರನೆ, ಕೃಪಾನಿಧಿಯೆ, ಸುಗುಣಸಿಧಿಯೆ, ಅಣುವಿನಲ್ಲಿ ಅಣುವಾಗಿಯೂ ಘನದಲ್ಲಿ ಘನವಾಗಿಯೂ ಇರುವ ರಾಮ ಲೋಕಾಭಿರಾಮನೇ ಶರಣು ಶರಣು. ಪರಿಪೂರ್ಣ ಕಳೆಯನ್ನು ಹೊಂದಿ ತ್ರೇತಾಯುಗದಲ್ಲಿ ಭೂಮಿಯಲ್ಲಿ ಜನ್ಮವೆತ್ತಿರುವಾಗ ನೀನು ನನ್ನನ್ನು ನೋಡಲು ಬರುತ್ತೀಯೆ, ವೈಷ್ಣವ ತೇಜಸ್ಸನ್ನು ಅರ್ಪಿಸಿ ಆನಂತರ ಶಾಂತಿಯಿಂದ ಹೋಗುತ್ತೀಯೆ ಎಂದು ಹೇಳಿದ ನಿನ್ನ ನುಡಿಯು ಈಗ ನಿಜವಾಯಿತು, ನಿನ್ನ ಕಳೆಯು ನಿನ್ನ ಪಾದಾರವಿಂದಗಳನ್ನೇ ಸೇರಿತು, ನೀನು ವಿಷ್ಣುವೆಂಬ ಸಂಗತಿಯು ನಿಶ್ಚಿತವಾಯಿತು. ನಿನ್ನ ಲೀಲೆಯಿಂದ ಉಂಟಾದ ಮಾಯೆಯಿಂದ ಅಜ್ಞಾನವೆಂಬ ಕತ್ತಲೆಯು ನನ್ನಲ್ಲಿ ರಕ್ಕಸಭಾವವನ್ನು ಉಂಟುಮಾಡಿ ಕ್ರೂರನುಡಿಗಳಿಂದ ನಿನ್ನನ್ನು ಧಿಕ್ಕರಿಸಿದ ಬೇಸರಕ್ಕೆ ಮೂಢನಾದ ನನಗೆ ಪರಿಹಾರವು ಕಾಣಿಸದು. ನೀನು ದಯಾರಾಶಿಯಾಗಿದ್ದೀಯೆ, ನಿನ್ನನ್ನು ಹೊಗಳಲು ನನ್ನ ನಾಲಗೆಯ ಕೈಲಾಗದು. ನೀನು ಸೂರ್ಯನಂತೆ ನೋಟಕ್ಕಾಗಲೀ ಮಾತುಗಳಿಗಾಗಲೀ ಸಿಲುಕದ ಅನಾದಿಯೂ ಅದ್ವಯನೂ ಆಗಿದ್ದೀಯೆ. ನೂರು ಪಾತಕಗಳನ್ನು ಮಾಡಿದವನಾಗಲೀ, ಕ್ರೂರಿಯಾಗಲೀ ನಿನ್ನ ಹೆಸರನ್ನು ಹೇಳಿದವನು ಕಲ್ಮಷರಹಿತನಾಗುತ್ತಾನೆ, ಭೂಸುರತಿಲಕನೆನ್ನಿಸಿಕೊಳ್ಳುತ್ತಾನೆ. ಸೀತಾಮನೋಹರನೆ, ನಿನ್ನನ್ನು ನಾನು ಮೊರೆವೊಕ್ಕಿದ್ದೇನೆ. ಸತ್ಕೃಪಾಸೂತನಾದ ನೀನು ಕರುಣಾಕಟಾಕ್ಷದಿಂದ ನನ್ನನ್ನು ಕಂಡು ಕೃತಾರ್ಥನನ್ನಾಗಿಸು" ಎನ್ನುತ್ತ ಮತ್ತೆ ಮತ್ತೆ ಅಬ್ಜನೇತ್ರನಾದ, ಸುಚರಿತ್ರನಾದ, ಕಾಂತಿಯುಕ್ಕುವ ನೀಲನಿಭಗಾತ್ರನಾದ, ಬುದ್ಧಿಗೆ ಗೋಚರಿಸದ ಭಾನುನೇತ್ರನಾದ, ಪವಿತ್ರನಾದ ಭರ್ಗನ ಸನ್ನುತಿಪಾತ್ರನಾದ, ನಿಗಮಾಂತಸಂವೇದ್ಯನಾದ, ನಿಖಿಲಜನಹೃದ್ಯನಾದ, ಸಾಧುಜನಬೋಧ್ಯನಾದ, ಸದ್ಭಕ್ತಿಗೆ ಸುಸಾಧ್ಯನಾದ ರಘುರಾಮನನ್ನು ಧ್ಯಾನಿಸಿದ. 'ಗತಿಹೀನರಿಗೆ ನೀನೆ ಗತಿ, ಅನಾಥರ ನಾಥ, ಅತಿಶಯಕ್ಕೆ ಅತಿಶಯನಾದವನು, ನಿರ್ಲೇಪ, ದೇವಸಂತತಿಗಳಲ್ಲಿ ಎಚ್ಚರವಾಗಿಯೂ, ಪಶುಗಳಲ್ಲಿ ಕನಸಿನಂತೆಯೂ, ಜಡಜೀವರಲ್ಲಿ ನಿದ್ರಾಸ್ವರೂಪನಾಗಿಯೂ, ಮನುಷ್ಯರಲ್ಲಿ ನಿದ್ರೆಎಚ್ಚರಗಳಲ್ಲಿ ತದ್ರೂಪನಾಗಿಯೂ ಇರುವ, ಹದಿನಾಲ್ಕು ಲೋಕಗಳಲ್ಲಿ ಚಿತ್‌ಸ್ವರೂಪನಾಗಿಯೂ ನಿತ್ಯಾನಂದನಾಗಿಯೂ ಇರುವ ರಘವೀರನೇ ಜಯತು ಜಯತು. ಧರಣಿಜಾವರಲೋಲ, ದಜಹೃದ್ಗತಶೂಲ, ತರುಣತುಳಸೀಮಾಲ, ತಾರಕಾಹ್ವಯಶೀಲ, ನರಚರಿತ್ರವಿಶಾಲ, ನತಜನೌಘರಸಾಲ, ಕರುಣಾಲವಾಲಖೇಲ; ಹರಶರಾಸನಭಂಗ, ಹರ್ಷವಾರ್ಧಿತರಂಗ, ದುರಿತತಿಮಿರಪತಂಗ, ಧ್ರುವಮೌನಿಹೃದ್ರಂಗ, ಶರಣರಕ್ಷಾಪಾಂಗ, ಶಾಶ್ವತಶುಭಾಂಗ, ರಘುವೀರ, ಹರಿ ಜಯತು ಜಯತು"

ಜಮದಗ್ನಿಕುಮಾರನು ಈ ಪರಿಯಲ್ಲಿ ಭಕ್ತಿಯಿಂದ ನುತಿಗೈಯಲು ಎಣೆಯಿಲ್ಲದ ಹರ್ಷೋದ್ರೇಕದಿಂದ ರಾಮನು, "ಮಗುವೇ ಕೇಳು, ಈ ವಿಶ್ವವೆಲ್ಲ ನನ್ನಿಂದ

ಕೂಡಿದೆಯಲ್ಲದೆ ಬೇರಲ್ಲ, ಅದಕ್ಕೆ ಭಿನ್ನವಾಗಿ ಭಾವಿಸುವುದೂ ಸಲ್ಲ. ಬ್ರಹ್ಮ ಹರಿ ಹರರು, ಅಷ್ಟದಿಕ್ಪಾಲಕರು, ಅಪ್ಸರರು, ಗಂಧರ್ವಚಾರಣರು, ರುದ್ರ ಅದಿತೇಯ ಮನುಮುನಿಗಳೆಲ್ಲ ಎಲ್ಲವೂ ನಾನೇ ಎಂದು ತಿಳಿಯುತ್ತದೆ. ಎಲ್ಲ ಜೀವಗಳಲ್ಲಿಯೂ ಪ್ರವರ್ತಿಸುವವನು ನಾನು, ಸಕಲದೇಹಿಗಳ ಆದಿ ಮಧ್ಯ ಅಂತವು ನಾನೇ, ಸ್ವರ್ಗಗಳು ವಾಯು ಅಗ್ನಿ ಆಕಾಶ ಭೂಮಿ ಜಲಗಳಲ್ಲಿರುವವನು ನಾನೇ, ಅಕಳಂಕಗುಣಗಳಲ್ಲಿಯೂ ಗುಣನಿಧಿಗಳಲ್ಲಿಯೂ ಪ್ರತಿಭೆ ಬಲಗಳಲ್ಲಿಯೂ ಬೆಳಗಿನಲ್ಲಿ ಬೆಳಗಾಗಿಯೂ ಇರುವ, ಧರ್ಮಶಾಸಕರ ಅಧಿನಾಯಕನೂ ಪ್ರಕೃತಿಪುರುಷಾಕಾರಗಳಲ್ಲಿಯೂ ಓಂಕಾರದಲ್ಲಿಯೂ ನಿರ್ಲಿಪ್ತನಾಗಿರುವ ಚಿನ್ಮಾತ್ರನೇ ನಾನು ಎಂದು ತಿಳಿ. ತ್ರಿಕಾಲಗಳಿಗೆ ಅತೀತವಾದ, ಯಾವುದಕ್ಕೂ ಅಂಟದ, ಸೌಖ್ಯಜಾತವಾದ ಸದ್ವಸ್ತುವು ನಾನೆಂದು ತಿಳಿಯುವುದು. ನನ್ನ ಸ್ವರೂಪವು ಹರಬ್ರಹ್ಮಾದಿಗಳಿಗೂ ಸಾಧ್ಯವಲ್ಲ, ಸಕಲ ಅವಸ್ಥೆಗಳನ್ನೆಲ್ಲ ನಾ ಬಲ್ಲೆ, ಎಲ್ಲವೂ ಮಾಯೆಯಿಂದ ಆವೃತವಾಗಿರುವ ಕಾರಣ ಪ್ರಾಣಿಗಳ ನಿಚಯವು ನನ್ನನ್ನು ಅರಿಯದು" ಎಂದು ತನ್ನ ಮಹಿಮೆಯ ಸ್ವರೂಪವನ್ನು ಬೋಧಿಸಿ, "ಮುನಿತಿಲಕನೇ, ನಿನ್ನ ಸ್ತುತಿಯಿಂದ ನನಗೆ ಹರ್ಷವೆನಿಸಿದೆ. ನೀನು ಬಯಸಿದ್ದನ್ನು ನೀಡುತ್ತೇನೆ, ಕೇಳಿಕೋ" ಎನ್ನಲು ಪರಶುರಾಮನು ಆ ಪರಮಪುರುಷನ ಅಡಿಗಳಿಗೆ ಎರಗಿ ಮುದದಿಂದ, "ಕಂತುಪಿತನೇ, ಕಮಲೇಶನೇ, ಭಕ್ತಿ ತುಂಬಿದ ಮುನಿಗಳ ಹೃದಯವನ್ನೇ ನಿನ್ನ ನೆಲೆಯಾಗಿ ಹೊಂದಿದವನೇ, ಜಗತ್‌ಕಾರಣನೇ, ಸಾಗರದಲ್ಲಿ ಅನಂತಶಾಯಿಯಾದವನೇ, ಓಂಕಾರಸ್ವರೂಪನೇ, ಪರತತ್ವವೇ, ಪರಮಗುರುವೇ ಕಾಪಾಡು. ನಿನ್ನಲ್ಲಿ ಬ್ರಹ್ಮಾಂಡಕೋಟಿಯೆಲ್ಲವೂ ಅಡಗಿದೆ, ನಿನ್ನಲ್ಲಿಯೇ ಅಮರೇಂದ್ರಕುಲವೆಲ್ಲವೂ ನೆಲೆಸಿದೆ, ಮುಮ್ಮೂರ್ತಿಗಳೂ ಸಕಲ ಲೋಕಗಳೂ ಚರಾಚರಗಳೂ ಭಿನ್ನವೆನ್ನಿಸದೆ ಓತಪ್ರೋತವಾಗಿ ದಾರಬಟ್ಟೆಗಳಂತೆ ತೋರುತ್ತಿರುವವು. ಭಾಜ್ಯಭಾಜನಗಳೆಂಬ ಎರಡು ರೂಪಗಳಲ್ಲಿ ತೋರಿ ಸುಜ್ಞಾನಭಾವಗಳು ತಿಳಿಯದಂತೆ ಜೀವರುಗಳನ್ನು ಮರುಳುಗೊಳಿಸುತ್ತ, ಸುಖದುಃಖಗಳನ್ನುಣಿಸುತ್ತ ಕುಣಿಸುತ್ತ ಮೆರೆಸುತ್ತ, ಹಾವು ನುಂಗಿದ ಕಪ್ಪೆಯು ತನ್ನತನಕ್ಕೆ ಹಾತೊರೆಯುವಂತೆ ಮಾಡುತ್ತಲಿರುವೆ. ಇದೆ ಅಥವಾ ಇಲ್ಲ ಎನ್ನಿಸದೆ ಮಾಯೆಯಿಂದ ಆವೃತರಾದ ಜೀವರುಗಳನ್ನು ಕಷ್ಟತತಿಗಳನ್ನನುಭವಿಸಿ, ಕರ್ತೃತ್ವಭೋಕ್ತೃತ್ವಗಳ ಹಮ್ಮಿನಿಂದ ಕಷ್ಟದಲ್ಲಿ ಸಿಲುಕಿ ತನ್ನ ಸ್ವರೂಪವನ್ನು ಮರೆತು ಬಂಟನಿಗೆ ಪ್ರತಿಬಂಟನಾಗುವ ರೀತಿಯಲ್ಲಿ ಅಮೃತವನ್ನು ಸೇವಿಸದೆ ಈ ರೀತಿಯಲ್ಲಿ ತೊಳಲುವ ರೀತಿಯಲ್ಲಿ ನಿನ್ನ ಅನಿರ್ವಾಚ್ಯಪ್ರಕೃತಿಯು ಮಾಡುತ್ತಿದೆ. ನಾನು ಗರ್ವಪರ್ವತದ ಕಾರಣದಿಂದ ನುಡಿದ ನಿಷ್ಠುರನುಡಿಗಳನ್ನು ಪರಿಗಣಿಸದೆ ದಯಾರ್ದ್ರತೆಯಿಂದ ಅಪ್ಪಣೆಯನ್ನು ನೀಡಿದರೆ ಮಹೇಂದ್ರಪರ್ವತಕ್ಕೆ ತಪಸ್ಸಿಗಾಗಿ ತೆರಳುತ್ತೇನೆ. ಬಿಲ್ಲುಬಾಣಗಳನ್ನು ಧರಿಸಿ, ಕಿರೀಟಕುಂಡಲಗಳಿಂದ ಅಲಂಕೃತನಾಗಿ, ಎಡಪಕ್ಕದಲ್ಲಿ ಧರಣಿಜಾತೆಯನ್ನು ಕುಳ್ಳಿರಿಸಿಕೊಂಡು, ಬಲ ಪಕ್ಕದಲ್ಲಿ ಲಕ್ಷ್ಮಣನು ನಿಂತಿರಲು ಪರಮ ಋಷಿಗಣಸಹಿತ ಶೋಭಿಸುವ ಶುಭಮೂರ್ತಿಯು ನನ್ನ ಮನಸ್ಸಿನಲ್ಲಿ ಸದಾ ಇರುವಂತೆ ಕರುಣಿಸು" ಎನ್ನುತ್ತ ಬಿನ್ನವಿಸಿಕೊಂಡ. ಆಗ

ಅಪರಾಧಸಹಸ್ರಗಳನ್ನು ಮಾಡಿದ ಜಮದಗ್ನಿಪುತ್ರನನ್ನು ಕ್ಷಮಿಸಿ ಅಭಯವನ್ನಿತ್ತ ಶ್ರೀರಾಮನನ್ನು ನೆರೆದಿದ್ದ ದೇವಗಂಧರ್ವಾದಿಗಳೂ ಮುನಿಗಣವೂ ಉಪಮಾತೀತನೆಂದು ಸ್ತುತಿಸಿದವು. ಪರಶುರಾಮನು ರಾಮನ ಅಪ್ಪಣೆ ಪಡೆದು ಮಹೇಂದ್ರಪರ್ವತದ ಕಡೆಗೆ ಸಾಗಿದ.

ಜಾಮದಗ್ನ್ಯನು ಹೋದ ಮೇಲೆ ಇತ್ತ ದಶರಥತನಯನು ವರುಣನನ್ನು ಕರೆದು ತನ್ನ ಕೈಯಲ್ಲಿದ್ದ ಮಹಚ್ಚಾಪವನ್ನು ಕೊಟ್ಟು ಬೇಕಾದಾಗ ಕೊಡು ಎಂದು ನಿಯಮಿಸಿದ. ಆ ಕ್ಷಣವೇ ಕವಿದಿದ್ದ ಅಂಧಕಾರವು ಸರಿಯಿತು, ತಾಮರಸಮಿತ್ರನು ಬೆಳಗಿದ, ಚಂದ್ರ ಮುಂತಾದ ಗ್ರಹಗಳು ನಲಿದವು, ಜಗತ್ತಿನ ಭೀತಿ ಹರಿಯಿತು. ಮಳೆಗಾಲದ ಮೋಡಗಳು ಗುಡುಗಿದ ಹಾಗೆ ನಿಸ್ಸಾಳಭೇರಿಗಳು ಮೊಳಗಿದವು, ಎಲ್ಲರೂ ಸಂತೋಷಸಾಗರದಲ್ಲಿ ಮುಳುಗೆದ್ದರು. ಎಲ್ಲರೂ ರಘುರಾಮನನ್ನು ಸರಸ ಮೃದು ನುಡಿಗಳಿಂದ ಹೊಗಳುತ್ತಿರಲು ದಶರಥ ಮಹಾರಾಜನು ತನ್ನ ಮಗನ ಮುಖವನ್ನು ನಲಿವಿನಿಂದ ನೋಡಿ ಮುಗುಳುನಗುತ್ತ ಪ್ರೀತಿಯಿಂದ ಮುಂಡಾಡಿದ. "ಬಾಲಚಂದ್ರನು ಪ್ರಚಂಡ ಮಾರ್ತಾಂಡನಿಗೆ ಸರಿಸಮವೇ, ಕ್ಷತ್ರಿಯಕುಲವನ್ನೇ ತರಿದುಹಾಕಿದ ಪರಶುಧರನಿಗೆ ಯುದ್ಧದಲ್ಲಿ ನೀನು ಈಡೆ, ಆದರೂ ನೀನು ಅವನನ್ನು ಗೆದ್ದೆ, ಇದು ಗುರುಕಟಾಕ್ಷದ ಮಹಿಮೆಯೇ ಸರಿ" ಎನ್ನುತ್ತ ವಸಿಷ್ಠರ ಕಡೆಗೆ ನೋಡಿ ವಿಷ್ಣುವನ್ನು ತನ್ನ ಮಗನೆಂಬ ಭ್ರಮೆಯಿಂದ ಆನಂದಬಾಷ್ಪಗಳನ್ನು ಸುರಿಸುತ್ತ ಸಂತಸಗೊಂಡ. ಅಂತೆಯೇ ಹರ್ಷದಿಂದ 'ಆದುದೆಲ್ಲವೂ ಸೀತೆಯ ಕಾಲ್ಗುಣದಿಂದ' ಎಂದು ಸೊಸೆಯನ್ನು ಹೊಗಳಿದ. ಆನಂತರ ತನ್ನ ಸ್ವರ್ಣರಥವನ್ನೇರಿ ದುಂದುಭಿರವವು ಮೊಳಗುತ್ತಿರಲು ಸಾಗರಸ್ವರೂಪವಾದ ತನ್ನ ಚತುರಂಗಬಲ ಸಮೇತ ಸಾಕೇತಪುರದ ಕಡೆ ಪಯಣ ಬೆಳೆಸಿದ.

ಮಹಾರಾಜರು ಬರುವ ವಿಷಯವು ಅಯೋಧ್ಯೆಯನ್ನು ತಲುಪಿತು. ರಾಜಪರಿವಾರವನ್ನು ಸ್ವಾಗತಿಸಲು ಸುಮಂತ್ರನ ಕೌಶಲದಿಂದ ಇಡೀ ನಗರವು ತಕ್ಕುದಾದ ರೀತಿಯಲ್ಲಿ ಅಲಂಕಾರಗೊಂಡು ಅಮರಾವತಿಯಂತೆ ಶೋಭಿಸುತ್ತಿತ್ತು. ಚಪಲಾಕ್ಷಿಯರು ಅಸಂಖ್ಯ ಕಳಶಕನ್ನಡಿಗಳನ್ನು ಹಿಡಿದು ಗಾಯನ ನಾಟ್ಯ ನಾನಾ ವಾದ್ಯತಾಳಮೇಳಗಳ ಸಮೇತ ಇದಿರುಗೊಂಡರು. ಊರನ್ನು ಪ್ರವೇಶಿಸಿ ಸೋಮವೀಧಿಯಲ್ಲಿ ಮೆರವಣಿಗೆ ಸಾಗಲು ಊರಜನರು ಎರಡೂ ಬದಿಗಳಲ್ಲಿ ನಿಂತು ನಿಟ್ಟಿಸಿದರು. ಲಕ್ಷ್ಮಣಭರತಶತ್ರುಘ್ನಕೌಸಲ್ಯೆ ಶ್ರೀರಾಮರನ್ನು ಕಾಮಿನಿಯರು ಚಿನ್ನಬೆಳ್ಳಿಗಳಿಂದ ಮಾಡಿದ ಕೃತಕಾಚಲಗಳಂತೆ ಓಡಾಡುತ್ತ, ಮನ್ಮಥನ ಮಾಸಾಳುಗಳಂತೆ ಸಡಗರದಿಂದ ಬರಮಾಡಿಕೊಂಡರು. ಇಡೀ ವಾತಾವರಣವು ಚೈತ್ರನ ಆಡುಂಬೊಲದಂತೆ ಕಂಗೊಳಿಸಿತು. ಪಡಿಹಾರಿಗಳು ಮುಂಗಡೆಯಲ್ಲಿ ಉಗ್ಗಡಿಸುತ್ತಿರಲು, ಗಾಯಕರು ಹಾಡುತ್ತಿರಲು, ದ್ವಿಜರು ವೇದಘೋಷ ಮಾಡುತ್ತಿರಲು, ಗಂಧರ್ವರಂತೆ ಕಾಣುತ್ತಿದ್ದ ನೀರೆಯರು ಹಾಡುವ ಶುಭಗೀತೆಗಳ ಕವಿಗಮಕಿಗಳ ಕಳಕಳರವದ ನಡುವೆ ಅಮರೇಂದ್ರಭೋಗವನ್ನು ಇಳಿಕೆಗೈಯುವ ರೀತಿಯಲ್ಲಿ ಮೆರವಣಿಗೆ ಸಾಗಿ, ಕೊನೆಗೆ ದಶರಥ ಮಹೀಪತಿಯು ತನ್ನ ನವರತ್ನಮಂದಿರವನ್ನು ಹೊಕ್ಕನು. ಗುರು

ವಸಿಷ್ಠ ಮುಂತಾದ ಅಖಿಲ ಮುನಿತತಿಯನ್ನು ಸತ್ಕರಿಸಿ, ಮಿಕ್ಕೆಲ್ಲರನ್ನೂ ಸಮುಚಿತ ರೀತಿಯಲ್ಲಿ ಉಪಚರಿಸಿ, ಕುಬೇರನನ್ನೂ ಮೀರಿಸುವ ರೀತಿಯಲ್ಲಿ ವಿಪ್ರರನ್ನು ಗೋದಾನಭೂದಾನಹಿರಣ್ಯದಾನಗಳಿಂದ ಸಂತುಷ್ಟಗೊಳಿಸಿ, ಸಕಲ ವಿದ್ವಜ್ಜನರನ್ನು ವಸ್ತ್ರ ಉಡುಗೊರೆಗಳಿಂದ ತೃಪ್ತಿಪಡಿಸಿ ಸೂರ್ಯವಂಶತಿಲಕನು ಎಲ್ಲರನ್ನೂ ಬೀಳ್ಕೊಟ್ಟ. ದಶರಥನ ಉಪಚಾರಗಳಿಂದ ಸಂತೃಪ್ತನಾದ ಕೇಕಯ ರಾಜ ಯುಧಾಜಿತುವು ಕೆಲವು ಕಾಲ ಅಯೋಧ್ಯೆಯಲ್ಲಿದ್ದು, ಆ ಬಳಿಕ ತನ್ನ ಸೋದರಳಿಯಂದಿರಾದ ಭರತಶತ್ರುಘ್ನರನ್ನು ತನ್ನೊಡನೆ ಕರೆದುಕೊಂಡು ತನ್ನ ರಾಜ್ಯದೆಡೆಗೆ ಹೋದರೆ, ಇತ್ತ ಶ್ರೀರಾಮನು ಸೌಮಿತ್ರಿಯ ಜೊತೆಯಲ್ಲಿ ತನ್ನ ತಂದೆಯನ್ನು ಸಂತೋಷದಲ್ಲಿರಿಸಿದ.

ಇದುವರೆಗಿನ ಕತೆಯನ್ನು ಕೇಳಿದ ಗಿರಿಜೆಯು, "ಹಿಂದೆ ಎಲ್ಲಿಯೂ ತಾನು ನೀಡಿದ್ದ ಅವತಾರಾಂಶವನ್ನು ಮರಳಿ ಪಡೆದನೆಂಬ ರೀತಿಯಲ್ಲಿ ನಿರೂಪಿಸಿದುದಿಲ್ಲ; ಇದನ್ನು ಕೇಳಿ ನನ್ನ ಮನಸ್ಸು ನಿಶ್ಚಿತವಿಲ್ಲದೆ ಆ ಕಡೆ ಈ ಕಡೆ ಓಲಾಡುತ್ತಿದೆ. ಅದು ನಿಶ್ಚಲಗೊಳ್ಳುವಂತೆ ಉದಧಿಶಯನನ ಕಥಾಮೃತವನ್ನು ಹೇಳು" ಎಂದು ಕಂದುಗೊರಲನನ್ನು ಕೇಳಿಕೊಂಡಳು. ಆಗ ಶಿವನು ಹೈಮವತಿಗೆ ಹೀಗೆಂದ: "ದಾನಬಲದಿಂದಾಗಿ ಶರನಿಚಯವು ಗೋಬ್ರಾಹ್ಮಣರನ್ನು ಬಾಧಿಸಲು ಬ್ರಹ್ಮದೇವನ ಹಾಲ್ಗಡಲಿಗೆ ಹೋಗಿ ನಾರಾಯಣನಿಗೆ ಮೊರೆಯಿಟ್ಟ, ಆಗ ವಿಷ್ಣುವು ಕರುಣೆಯಿಂದ ಅಂಶಮಾತ್ರವನ್ನಷ್ಟೇ ಹೊಂದಿ ಭೂಮಿಯಲ್ಲಿ ಅವತರಿಸಿ ಎಲ್ಲರನ್ನೂ ಸಂರಕ್ಷಿಸಿ ವೈಕುಂಠಕ್ಕೆ ಮರಳುತ್ತಿರುವನು. ಈ ಧರೆಯಲ್ಲಿ ಇದು ಸತತವಾಗಿ ಸಂಭವಿಸುವ ಸಂಗತಿ. ಬ್ರಹ್ಮಮುಖ್ಯ ಮುನಿಗಣವೆಲ್ಲವೂ ರಾವಣನ ಉಪಟಳದಿಂದ ಬೇಸತ್ತು ಪ್ರಾರ್ಥನೆ ಮಾಡಿಕೊಳ್ಳಲು ಸೂರ್ಯಚಂದ್ರರನ್ನೇ ಕಣ್ಣಾಗಿ ಉಳ್ಳ ಪರಮಾತ್ಮನು ತಾನೇ ದಶರಥನ ಮಗನಾಗಿ ಹುಟ್ಟಿ, ಕೌಶಿಕನ ಯಾಗವನ್ನು ಸಂರಕ್ಷಿಸಿ, ನನ್ನ ಬಿಲ್ಲನ್ನು ಮುರಿದು, ಧರಣಿತನೂಜೆಯನ್ನು ಮದುವೆಯಾಗಿ ಬರುತ್ತಿರಲು ದಾರಿಯಲ್ಲಿ ವಿಷ್ಣುಧನುಸ್ಸನ್ನು ಹೊತ್ತು ಭಾರ್ಗವನ ತೇಜಸ್ಸನ್ನೆಲ್ಲ ಸೆಳೆದುಕೊಂಡು ಅಯೋಧ್ಯಾನಗರಿಗೆ ಮರಳಿದನೆಂದು ಹೇಳುವುದು ಸರಿಯೇ, ಅನುಮಾನವಿಲ್ಲ. ಶ್ರೀ ಮಹಾವಿಷ್ಣುವು ಜಗತ್ತಿನಲ್ಲಿ ಹಿಂದೆ ಧರಿಸಿದ್ದ ಬಗೆಬಗೆಯ ರೂಪಗಳನ್ನು ಹೊಂದಿದ್ದವನು ಕೇವಲ ಅಂಶಸಂಭವ; ಆದರೆ ಶ್ರೀರಾಮನು ವಿಷ್ಣುವಿನ ಪೂರ್ಣಾಂಶವನ್ನು ತಳೆದ ಸಾಕ್ಷಾತ್ ಮೂರ್ತಿ. ಅದರಿಂದಾಗಿ ಪರಶುಧರನಲ್ಲಿರಿಸಿದ್ದ ತನ್ನ ತೇಜಸ್ಸನ್ನು ಮತ್ತೆ ಸೆಳೆದುಕೊಂಡ. ಇದು ನಿಗಮಪ್ರಸಿದ್ಧವಾದುದು. ಆದ್ದರಿಂದಲೇ ಶ್ರೀರಾಮನಾಮವು ಮಿಕ್ಕೆಲ್ಲವುಗಳಿಗಿಂತ ಮಹಾಶ್ರೇಷ್ಠವಾದುದು. ಅದನ್ನು ಈ ಹಿಂದೆಯೇ ಹೇಳಿದೆನಲ್ಲವೇ? ನಿರತಿಶಯ, ನಿರ್ಲೇಪ, ನಿರಘ, ನಿತ್ಯಾದ್ವೈತ, ಪರಿಪೂರ್ಣ, ಸಚ್ಚಿದಾನಂದ, ತೇಜೋರಾಶಿ, ಪರಮಮುನಿಹೃತ್ಪಂಕಜಾಲಯನಾದ ಪರಂಜ್ಯೋತಿರೂಪನನ್ನು ಸ್ಮರಿಸಿದರೆ ಸಾಕು, ಪಾಪಸಮೂಹವೆಲ್ಲವನ್ನೂ ನಾಶಪಡಿಸಿ ದಯಾನಿಧಿಯೂ ಶರಣರ ಕಲ್ಪತರುವೂ ಆದ ಶ್ರೀರಾಮನು ಮೋಕ್ಷವನ್ನೀಯುತ್ತಾನೆ ಎಂದು ತಿಳಿದು ನಿರತವೂ ಭಜಿಸಬೇಕು" ಎಂದು ನುಡಿದ. ಹೀಗೆ ಶ್ರೀರಾಮಚರಿತಾಮೃತವನ್ನು ತನ್ನ ಮಡದಿಗೆ ಕಂತುಹರನು ಕೈಲಾಸದ

ಸಭಾಮಧ್ಯದಲ್ಲಿ ವಿವರಿಸಿದ. ಇದನ್ನು ತಿಳಿದ ನಾನು ನಿಮಗೋಸುಗ ಅನಂತನೂ ಅವ್ಯಯನೂ ಆದ ಶ್ರೀರಾಮಪುರದರಸನಾದ ರಮಾಕಾಂತನ ಚರಿತೆಯನ್ನು ಹೇಳಿದೆನೆಂದು ಸೂತಮುನಿಯು ಶೌನಕಾದಿಮುನಿಗಣಕ್ಕೆ ನಿರೂಪಿಸಿದ.

ಮಂಗಳ ಮಹಾಶ್ರೀ

**ಇದು ಶ್ರೀರಾಮಚಂದ್ರನ ಪಾದಾರವಿಂದಗಳಿಗೆ ನಮಸ್ಕರಿಸುತ್ತಿರುವ
ಪವನನಂದನನಾದ ಹನುಮಂತನ ವರಪ್ರಸಾದವನ್ನು ಹೊಂದಿದವನೂ,
ಸರಸ್ವತಿಯ ಸಾಹಿತ್ಯ ಸಾಮ್ರಾಜ್ಯವನ್ನೆಲ್ಲ ಪಡೆದವನೂ,
ಚತುರ್ವಿಧ ಕವಿತಾವಿಶಾರದನೂ, ಆತ್ಮನಿಷ್ಠಾಗರಿಷ್ಠನೂ, ಸಂಗೀತಕಲಾವಿದನೂ,
ವಿವಿಧ ವಿದ್ವಜ್ಜನರ ಪ್ರೀತಿಪಾತ್ರನೂ ಆದ ಹಂಪೆಯಾಮಾತ್ಯನ ಮಗ ವೆಂಕ ಎಂಬ
ಹೆಸರಿನವನಿಂದ ರಚಿತವಾದ ಶ್ರೀಮದ್ರಾಮಾಯಣ ಮಹಾಪ್ರಬಂಧದಲ್ಲಿ
ಬಾಲಕಾಂಡವು ಮುಗಿಯಿತು.**

ಅಯೋಧ್ಯಾಕಾಂಡ

೧. ಶ್ರೀರಾಮನಿಗೆ ಯೌವರಾಜ್ಯಾಭಿಷೇಕ ಮಾಡಲು ದಶರಥನ ಆಲೋಚನೆ

ಭೂತಪತಿಯು ತನ್ನ ಅರ್ಧಾಂಗಿಗೆ ಹೇಳಿದ ಶ್ರೀಮದ್ರಾಮಾಯಣದ ಬಾಲಕಾಂಡದ ಕತೆಯನ್ನು ಗುರುಗಳಾದ ಸೂತಮುನಿಗಳು ತಮಗೆ ನಿರೂಪಿಸಿದುದನ್ನು ಶ್ರದ್ಧೆಯಿಂದ ಕೇಳಿದ ಶೌನಕಾದಿಗಳು, ಶಂಕರನು ಪಾರ್ವತಿಗೆ ಹೇಳಿದ ಮುಂದಿನ ಕತೆಯನ್ನು ನಿರೂಪಿಸಬೇಕೆಂದು ಸೂತರನ್ನು ವಿನಯದಿಂದ ಕೇಳಿಕೊಂಡರು. ಆಗ ಗುರುಗಳು ಮುಂದಿನ ಕತೆಯನ್ನು ವಿಸ್ತರಿಸಿ ಹೇಳತೊಡಗಿದರು: ನಿಗಮಾಗಮಜ್ಞ ನಾರಾಯಣನ ಕತೆಯನ್ನು ಸಂತುಷ್ಟಿಯಿಂದ ಕೇಳಿದ ಪಾರ್ವತಿಯು ಮುಂದಿನ ಕತೆಯನ್ನು ಕೇಳುವ ಉತ್ಸಾಹವನ್ನು ನೋಡಿ ಶಿವನು ಹರ್ಷದಿಂದ ಶ್ರೀರಾಮಚರಿತೆಯ ಮುಂದಿನ ಭಾಗವನ್ನು ನಿರೂಪಿಸಿದ. ಭರತಶತ್ರುಘ್ನರ ಜೊತೆಗೂಡಿ ದಶರಥನ ಅಪ್ಪಣೆ ಪಡೆದು ಅಶ್ವಪತಿಯು ತನ್ನ ನಗರಕ್ಕೆ ಬಂದು ಅವರನ್ನು ಆದರದಿಂದ ಸಲಹುತ್ತಲಿದ್ದ. ಅವರು ಸೋದರಮಾವನ ಆರೈಕೆಯಲ್ಲಿ ಸೂರ್ಯಚಂದ್ರರಂತೆ ಬೆಳಗುತ್ತ ಆ ಪಟ್ಟಣದಲ್ಲಿದ್ದರು. ಆದರೆ ಆಗಾಗ ಅವರ ಮನಸ್ಸಿನಲ್ಲಿ ತಂದೆಯ ನೆನಪು ಕಾಡುತ್ತಲಿತ್ತು. ದಶರಥನ ಪಾಲಿಗೆ ಇಂದ್ರ ವರುಣ ಹರಿ ಹರರಂತೆ ಗುಣಪ್ರಥಿತರು, ಅವರಲ್ಲಿ ಸದ್ಗುಣದ ಕಣಿಯೆನಿಸಿದ ಶ್ರೀರಾಮನು ಅವರ ನಡುವೆ ಶೋಭಿಸುತ್ತಿದ್ದನು. ಎಷ್ಟಾದರೂ ಅವನು ದಶಶಿರನ ಬಾಧೆಯಿಂದ ದೇವಸಂತತಿಯನ್ನು ಪಾರುಮಾಡಲೆಂದು ಕೌಸಲ್ಯೆಯ ಉದರದಲ್ಲಿ ಜನಿಸಿದವನಲ್ಲವೇ? ಅವನದು ಹುಸಿದೂರವಾದ ಮಾತು, ಸದ್ಧರ್ಮದ ನಡತೆ, ಚಂದ್ರನ ಶೀತಕಿರಣಗಳಂತೆ ಸದಾ ಪ್ರಶಾಂತಿ, ಸಜ್ಜನರಲ್ಲಿ ಗೌರವಭಾವ, ಮರೆವೊಕ್ಕವರನ್ನು ಪ್ರೀತಿಯಿಂದ ಸಲಹುವ ಮನೋಭಾವ, ನೀತಿ ವಾಚಸ್ಪತಿ, ಶ್ರೀಮನ್ನಾರಾಯಣನಂತಹ ವಿಕ್ರಮಿ, ಭದ್ರಗಜದಂತೆ ನಡೆ, ಮನ್ಮಥರೂಪ, ಕೌಶಲಕಲಾಲಾಪ, ಸಕಲಜನ ಪ್ರೀತಿಪಾತ್ರ, ಬುಧಸ್ತುತ್ಯ, ಯುದ್ಧದಲ್ಲಿ ಯಾರನ್ನೂ ಲೆಕ್ಕಿಸದ ಪರಾಕ್ರಮಿ, ಕುಲಾದ್ರಿಗಳಂತಹ ಧೈರ್ಯ, ವಿನಯಭರಿತ ಮಾತು, ಸಕಲಾಸ್ತ್ರನಿಪುಣತೆ, ವೇದವೇದಾಂಗಗಳ ಮನೆ, ಪ್ರಾಜ್ಞಜನಮನೋಹರತೆ – ಹೀಗೆ ಸಕಲ

ಕಲ್ಯಾಣಗುಣಭರಿತನಾದವನು. ಅವನ ಸದ್ಗುಣಗಳನ್ನು ಬಣ್ಣಿಸಲು ಲೋಕದಲ್ಲಿರುವ ವಾಚಸ್ಪತಿಗಳಿಗೆ ಅಸಾಧ್ಯ. ಇಂತಹ ಮಗನನ್ನು ಅನುದಿನವೂ ನೋಡುತ್ತ ದಶರಥನು ಪರಮಾನಂದದಿಂದ ಕೂಡಿದ್ದನು.

'ಸಕಲ ಸದ್ಗುಣಶಿಖಾಮಣಿಯಾದ ರಾಮನಿಗೆ ಶಕ್ತಿಯುಕ್ತಿಗಳಲ್ಲಿ ಎಣೆಯೇ ಇಲ್ಲ; ಇದು ನನ್ನ ಭಾಗ್ಯವೇ ಸರಿ, ಇವನು ರಾಜನಾಗುವುದನ್ನು ಕಣ್ಣಾರೆ ಕಂಡು ನಾನು ಆನಂದದಿಂದ ಕೂಡಬೇಕು' ಎಂಬ ಭಾವನೆಯಿಂದ ದಶರಥನು ಮುನಿನಿಕರವನ್ನೂ ರಾಜರನ್ನೂ ಹಿರಿಯರನ್ನೂ ಅಮಾತ್ಯರನ್ನೂ ಕರೆಸಿ ಅವರ ಸಮ್ಮತಿಯನ್ನು ಪಡೆಯಬೇಕೆಂದು ಆಲೋಚಿಸಿದ. ಅದರಂತೆಯೇ ಕೇಕಯ ವಿದೇಹಗಳ ರಾಜರನ್ನು ಹೊರತುಪಡಿಸಿ ಮಿಕ್ಕೆಲ್ಲ ರಾಜರನ್ನೂ ಕರೆಸಿದ; ಅಂತೆಯೇ ಗುರುಮುಖ್ಯರನ್ನೂ, ಶಿವಸಮಾನರಾದ ಮುನಿಮುಖ್ಯರನ್ನೂ ಆಪ್ತಜನರನ್ನೂ ಬಾಂಧವರನ್ನೂ ಪ್ರೀತಿಯಿಂದ ಆಹ್ವಾನಿಸಿದ. ದಶರಥನ ಸ್ವಭಾವವರಿತ ಅವರೆಲ್ಲರೂ ಮಮತೆಯಿಂದ ಅವನ ಕರೆಗೆ ಓಗೊಟ್ಟು ಬಂದರು. ಆತನ ಆಳ್ವಿಕೆಯಲ್ಲಿ ಅವರೆಲ್ಲರೂ ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ನಿರ್ವಿಘ್ನವಾಗಿ ತೊಡಗಿಕೊಂಡಿದ್ದರು. ಮುನಿಗಳ ಜಪತಪಸ್ವಾಧ್ಯಾಯಗಳು ಭಂಗವಿಲ್ಲದೆ ಸಾಗಿದ್ದವು. ಅವರೆಲ್ಲ ಆಗಮಿಸಿದಾಗ ಆದರ ಸತ್ಕಾರ, ಉಭಯ ಕುಶಲೋಪರಿಗಳಾದ ಬಳಿಕ ದಶರಥನು ಅವರನ್ನುದ್ದೇಶಿಸಿ, "ಇನಕುಲ ಪರಂಪರೆಯಲ್ಲಿ ಬಂದ ಇಕ್ಷ್ವಾಕುವಂಶದ ರಾಜರುಗಳೆಲ್ಲ ಋಷಿಮುನಿಗಳ ಮಾರ್ಗದರ್ಶನದಲ್ಲಿ ಭೂಮಂಡಲವನ್ನು ಅತಿಶಯ ದಕ್ಷತೆಯಿಂದ ಪರಿಪಾಲಿಸಿಕೊಂಡು ಬಂದರು. ಕುಲಪರಂಪರೆಯಲ್ಲಿ ನನ್ನ ಪಾಲಿಗೆ ಬಂದ ಈ ನಗರಾಧಿಪತ್ಯವನ್ನು ವಹಿಸಿಕೊಂಡು ನಾನು ಪೂರ್ವ ಪರಂಪರೆಗೆ ಅನುಸಾರವಾಗಿ ಧರ್ಮಪಥದಲ್ಲಿ ದೀರ್ಘಕಾಲ ಮೆರೆದಿದ್ದೇನೆ. ನಾನಾ ಬಗೆಯ ಭೋಗಭಾಗ್ಯಗಳನ್ನು ನಾನು ಅನುಭವಿಸಿದೆ. ಆದರೆ ನನ್ನನ್ನು ವೃದ್ಧಾಪ್ಯವು ಆವರಿಸಿದೆ, ಬಹು ಕಾಲದಿಂದ ನನಗೆ ವಿಶ್ರಾಂತಿಯು ದೊರಕದೆ ಬಳಲಿದ್ದೇನೆ. ಹಿಂದಿನಿಂದಲೂ ನಾನು ದೇವೇಂದ್ರನ ಸಖನಾಗಿ ಖೂಳ ರಕ್ಕಸಗಣವನ್ನು ಹತ್ತಿಕ್ಕಿ ಸದ್ಧರ್ಮವನ್ನು ಹೆಚ್ಚಿಸಿದೆ, ಎಲ್ಲ ಬಗೆಯ ಯಾಗಗಳನ್ನೂ ಕೈಗೊಂಡೆ. ಆದರೆ ಈಗ ವಯೋಧರ್ಮದ ಕಾರಣ ದೇಹವು ಜೀರ್ಣವಾಗಿ ವಿಶ್ರಾಂತಿಯನ್ನು ಬಯಸುತ್ತಿದೆ. ಹಾಗಾಗಿ ದೇವೇಂದ್ರಸಮಾನ ಪರಾಕ್ರಮಿಯೂ, ಸಕಲಕಲ್ಯಾಣಗುಣಸಂಪನ್ನನೂ, ಕರುಣಾಶರಧಿಯೂ, ತರಣಿಕುಲಭೂಷಣನೂ ಆದ ನನ್ನ ಹಿರಿಯ ಮಗನಾದ ರಾಘವನಿಗೆ ಈ ರಾಜ್ಯಭಾರವನ್ನು ಹೊರಿಸಿ ನಾನು ಹಾಯಾಗಿರಲು ಬಯಸಿದ್ದೇನೆ. ಈ ಕುರಿತು ಆಲೋಚಿಸಲೆಂದು ನಾನು ತಮ್ಮನ್ನು ಆಹ್ವಾನಿಸಿದೆ. ನನಗೆ ತಮ್ಮ ಸಲಹೆ ಆಶೀರ್ವಾದಗಳನ್ನು ದಯವಿಟ್ಟು ನೀಡಿರಿ" ಎಂದು ಬಿನ್ನವಿಸಿಕೊಂಡ.

ಆಗ ಅಲ್ಲಿ ನೆರೆದವರೆಲ್ಲರೂ ಏಕಕಂಠದಿಂದ, "ಮನೆಯ ಆಧಾರದಂತಿರುವ ಮಹಾಮೇರುವನ್ನು ಈ ಭೂಭಾರವನ್ನು ಹೊರಲು ನಿಯೋಜಿಸುವ ಆಲೋಚನೆಯನ್ನು ಮಾಡಿದ್ದೀಯೆ. ಎಲೈ ನೃಪಕುಲತಿಲಕನೇ. ಮೂರು ಲೋಕಗಳನ್ನೂ ಸೃಷ್ಟಿಸುವ ಪಾಲಿಸುವ ಮಹತ್ಕಾರಣನನ್ನು ನಿನ್ನ ರಾಜ್ಯದ ಅಧಿನಾಥನನ್ನಾಗಿ ಮಾಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದೀಯೆ. ನಿನ್ನ ಮಾತುಗಳನ್ನು ಕೇಳಿ ಎಲ್ಲರಿಗೂ ಆನಂದವಾಗಿದೆ.

ಉತ್ತಮೋತ್ತಮ ಗುಣಗಳ ನಿಲಯನೂ, ಅಖಿಲ ಭೂಪೋತ್ತಮರ ಮಸ್ತಕಮಣಿಯೂ, ಸತ್ಕಳಾನಿವಹಮಣಿಯೂ, ಮನೋವಸಂತನೂ, ನಳಕೂಬರ ಜಯಂತರನ್ನು ಗೆಲ್ಲುವ ಚೆಲುವಿನ ಕಣಿಯೂ, ಉತ್ತಮರ ಮನದಿಷ್ಟವನ್ನು ನೆರವೇರಿಸುವ ಚಿಂತಾಮಣಿಯೂ ಆದ ರಘೂತ್ತಮನು ಬೆಳ್ಗೊಡೆಯ ನೆರಳಿನಲ್ಲಿ ಆನೆಯ ಮೇಲೆ ಕುಳಿತು ಬರುವುದನ್ನು ನೋಡುವ ಅಪೇಕ್ಷೆ ಈ ಸಭಾಸದರೆಲ್ಲರದ್ದೂ ಆಗಿದೆ. ಮಳೆ ಸುರಿಸುವ ಮೋಡಗಳನ್ನು ಬಯಸುವ ನವಿಲುಗಳಂತೆ, ಸೂರ್ಯನು ಬೆಳಗಲೆಂದು ಕೋರುವ ಕಮಲಗಳಂತೆ, ಚಂದ್ರನ ಏಳಿಗೆಯನ್ನು ಹಾರೈಸುವ ಸಾಗರದಂತೆ, ಸರೋವರದ ನೀರು ಹೆಚ್ಚಲೆಂದು ನಿರೀಕ್ಷಿಸುವ ಹಂಸಗಳಂತೆ ಈ ಸಭಾಸದರ ಮನಸ್ಸುಗಳು ಶ್ರೀರಾಮನು ರಾಜನಾಗುವುದನ್ನು ನೋಡಬಯಸುತ್ತಿವೆ. ಋತುರಾಜನ ಬರವನ್ನು ಸ್ವಾಗತಿಸದ ಮರಗಳಿಗೆ ಶ್ರೇಯಸ್ಸು ಉಂಟಾಗಲು ಸಾಧ್ಯವೇ? ಇಂದ್ರನ ಅಪ್ಪಣೆಯನ್ನು ಪಡೆಯದ ಜೀವನವಿದೆಯೇ? ರಘುಪತಿಯು ರಾಜನಾಗಿರದ ರಾಷ್ಟ್ರದಲ್ಲಿ ವಾಸಿಸುವ ಪ್ರಜೆಗಳಿಗೆ ಶುಭಕರವಾದುದುಂಟೇ? ಆದ್ದರಿಂದ, ಜನನಾಥನೇ ಶ್ರೀರಾಮನನ್ನು ಈ ನಗರದ ಅಧಿಪತಿಯನ್ನಾಗಿ ಮಾಡು, ಅದರಲ್ಲಿ ಆಲೋಚಿಸುವುದೇನಿದೆ?" ಎಂದರು. ಆಗ ದಶರಥನು, "ದೀರ್ಘಕಾಲ ಸದ್ಧರ್ಮಪಥದಲ್ಲಿ ನಡೆಯುತ್ತ ಈ ಲೋಕವನ್ನು ಪರಿಪಾಲನೆ ಮಾಡಿ ಪರಿಜನರ ಮತ್ತು ಪುರಜನರ ಇಷ್ಟಾರ್ಥಗಳನ್ನು ನೆರವೇರಿಸಿ ಹಿತಕಾರಿಯಾಗಿ ರಾಜ್ಯಭಾರ ಮಾಡಿದ ನಾನು ಇನ್ನೂ ಇದ್ದೇನೆ. ಆದರೆ ಇನ್ನೂ ಹುಡುಗನಾಗಿರುವ, ಅವನುಭವಿಯಾದ, ರಾಜ್ಯಭಾರದ ಸ್ವರೂಪವನ್ನರಿಯದ, ರಾಮನನ್ನು ಬೇಗನೇ ರಾಜನನ್ನಾಗಿಸು ಎನ್ನುತ್ತಿರುವಿರಲ್ಲ!" ಎಂದು ನಗೆಯಾಡಿದ. ಆಗ ಋಷಿವರ್ಯರು, "ಸರಿಯಾಗಿ ಹೇಳಿದೆ! ಇಂದ್ರನಿಭವಿಕ್ರಮನ ಮಗನೆಂದು ಶ್ರೀರಾಮನ ಸದ್ಗುಣಗಳನ್ನು ಇಷ್ಟು ಎಂದು ವಾಸುಕಿಗಾದರೂ ಹೇಳಲಾದೀತೇ? ಸತ್ಕಳೆಗಳ ಸಮೂಹದಲ್ಲಿ ಈಸುವ ಆತನ ಗುಣಗಳನ್ನು ನಾವು ತಿಳಿದ ಮಟ್ಟಿಗೆ ವರ್ಣಿಸಿ ಹೇಳುತ್ತೇವೆ, ಕೇಳು: ಶ್ರೀರಾಮನು ಬಲದಲ್ಲಿ ಇಂದ್ರ, ಬುದ್ಧಿಯಲ್ಲಿ ಬೃಹಸ್ಪತಿ, ಸತ್ವದಲ್ಲಿ ಮಹಾಬಲ, ಶಾಂತಿಯಲ್ಲಿ ಚಂದ್ರ, ಧೈರ್ಯದಲ್ಲಿ ತುಹಿನಾಚಲ, ಕ್ಷಮೆಯಲ್ಲಿ ಭೂಮಿ, ಕೋಪದಲ್ಲಿ ಕಾಲಾಗ್ನಿಸಮಾನ, ಶೌರ್ಯದಲ್ಲಿ ಗಾಳಿ, ಸತ್ಯವಂತಿಕೆಯಲ್ಲಿ ಎರಡನೆಯ ಧರ್ಮ, ಚೆಲುವಿನಲ್ಲಿ ಆಶ್ವಿನೀದೇವತೆ, ಕಲಿತನದಲ್ಲಿ ವಿಷ್ಣು, ಕರುಣೆಯಲ್ಲಿ ಶಿವ, ನಿಗಮದಲ್ಲಿ ಬ್ರಹ್ಮ, ದಾನದಲ್ಲಿ ಕಲ್ಪವೃಕ್ಷ; ಆನೆಕುದುರೆಗಳ ಏರಾಟ, ಬಿಲ್ಲುಬಾಣಗಳ ಕೂಟ, ಸರಿದೊರೆಗಳ ಒಡನಾಟ, ಸಕಲಕಲೆಗಳ ಆಟ, ಸಂಗೀತವಾದ್ಯಕಲಾಪ – ಇವುಗಳನ್ನು ಅರಿತ ಭಾವಜ್ಞ; ಅರುವತ್ತನಾಲ್ಕು ಕಲೆಗಳನ್ನು ಬಲ್ಲವನು, ಪರಮತೇಜಸ್ಸನ್ನು ಹೊಂದಿದವನು, ನಿರ್ಮಲವಾದ ಪಾವನ ನಡತೆಯುಳ್ಳವನು, ಕರುಣಾಮಯ ನೋಟವುಳ್ಳವನು, ಸಕಲಮನುಜೋತ್ತುಂಗ, ಇಷ್ಟಾರ್ಥಗಳನ್ನು ಸಲ್ಲಿಸಬಲ್ಲ ದಾತನೀತ. ಇವನ ಬಾಯಿಂದ ಎಂದೂ ಕ್ರೂರ ಮಾತುಗಳು ಬರಲಾರವು, ಈತನ ಧರ್ಮಾಚರಣೆಯಲ್ಲಿ ನ್ಯೂನತೆಯಿಲ್ಲ, ಬಳಿ ಸಾರಿದವರಲ್ಲಿ ಭೇದವೆಣಿಸದವನು, ಕೊಟ್ಟ ಭಾಷೆಯಲ್ಲಿ ಎರಡಿಲ್ಲ, ಈತನನ್ನು ಮೊರೆವೊಕ್ಕವರಿಗೆ ಭಯವಿಲ್ಲ, ಈತನಲ್ಲಿ ದೈನ್ಯಕ್ಕೆ ಎಡೆಯೇ ಇಲ್ಲ, ಈತನು ವಿದ್ವಜ್ಜನರಕ್ಷಣೆಗಾಗಿ ಹುಟ್ಟಿದ ನಾರಾಯಣಾಂಶದಿಂದ ಒಡಗೂಡಿದವನು, ಹೀಗಾಗಿ ಶ್ರೀರಾಮನು ಕೇವಲ ಮನುಷ್ಯನಲ್ಲ, ಕೇವಲ ಲೋಕವ್ಯಕ್ತಿಯಲ್ಲ. ಈತನು ಸದಾ

ಮಂದಹಾಸಿ, ದೀನರಕ್ಷಕ, ಕರುಣಾರಾಶಿ, ಮೋಸತಟವಟಗಳನ್ನರಿಯದವನು, ಅಲ್ಪ ಸಹಾಯವನ್ನೇ ಮತ್ತೆ ಮತ್ತೆ ಸ್ಮರಿಸುವವನು, ಹಿರಿಯರ ಬಗ್ಗೆ ಗೌರವಭಾವನೆಯುಳ್ಳವನು, ದೇವತಾರಾಧಕ, ಮಹಾ ತಿಳಿವಳಿಕಸ್ಥ, ಸ್ಥಿರಬುದ್ಧಿಯುಳ್ಳವನು, ಕಲಿಗಳ ಕಲಿ, ಈತನದು ನಿಷ್ಫಲವಾಗದ ಕೋಪ, ಪ್ರಜೆಗಳನ್ನು ತನ್ನ ಮಕ್ಕಳಂತೆ ಪ್ರೀತಿಸುವವನು. ಯಾರೇ ಭಜಿಸಲಿ ಅವರ ಈಪ್ಸಿತಗಳನ್ನು ನೆರವೇರಿಸುವ ಉದಾರಿ, ಕಂಡಾಕ್ಷಣವೇ ಇತರರ ಅಂತರಂಗವನ್ನು ಅರಿಯುವ ಸೂಕ್ಷ್ಮಜ್ಞ, ಸತ್ಯವಲ್ಲದೆ ಅನ್ಯವನ್ನವನು ಮಾತಾಡಲಾರ, ಪರನಿಂದೆಯನ್ನು ಕೇಳದವನು, ಕನಸಿನಲ್ಲಿಯೂ ಮೂಕರು ಕಿವುಡರು ಕುರುಡರ ಬಗ್ಗೆ ಕಟು ಮಾತುಗಳನ್ನಾಡಲಾರ, ಅವರ ಮೇಲೆ ಕೋಪಿಸಿಕೊಳ್ಳಲಾರ. ಸಮಾನರಾದವರಲ್ಲಿ ಕನ್ನಡಿಯ ನ್ಯಾಯದಂತೆ ಪರಿಶೋಭಿಸುತ್ತಾನೆ, ಪಾಪಪುಣ್ಯಗಳನ್ನು ಹಂಸನ್ಯಾಯದಂತೆ ವಿಂಗಡಿಸುವವನು, ಕಾಲಕ್ಕನುಗುಣವಾಗಿ ಕೋಗಿಲೆಯಂತೆ ಧ್ವನಿಯೆತ್ತುತ್ತಾನೆ, ದುಂಬಿಯಂತೆ ಪರಿಮಳವನ್ನು ಕಾಣುವವನು, ಹಾವಿನಂತೆ ಅತ್ಯಂತ ಜಾಗೃತ, ಸಾಗರದಂತೆ ಗಂಭೀರನೂ ಆಳವ್ಯಕ್ತಿತ್ವದವನೂ ತಂಪನ್ನೀಯುವವನೂ ಆಗಿದ್ದಾನೆ. ತಾಟಕಿಯನ್ನು ಸಂಹರಿಸಿದವನೂ, ಮಾರೀಚಸುಬಾಹುಗಳ ಯಜ್ಞವಿಘ್ನವನ್ನು ನಿವಾರಿಸಿದವನು, ಅಹಲ್ಯೆಯನ್ನು ನೋಟಮಾತ್ರದಿಂದ ಉದ್ಧರಿಸಿದವನೂ, ಶಿವಧನುಸ್ಸನ್ನು ನೆಗ್ಗೊತ್ತಿ ಸೀತೆಯನ್ನು ಗೆದ್ದು, ಸಕಲ ರಾಜನ್ಯರನ್ನು ಕೊಂದ ಪರಶುಧರನ ಗರ್ವವನ್ನು ಇಂಗಿಸಿದವನೂ, ಲೋಕೋದ್ಧಾರಕ್ಕಾಗಿ ನರಜನ್ಮವನ್ನು ಹೊತ್ತು ಬಂದ ಸಾಕ್ಷಾತ್ ಮಹಾವಿಷ್ಣುವೇ ಆದ ಶ್ರೀರಾಮನ ಮಹಿಮೆಯನ್ನು ಹೊಗಳಲು ನಮ್ಮಿಂದ ಸಾಧ್ಯವೇ? ಈತನು ರಾಜನಾದರೆ ತಾವೆಲ್ಲ ಸುಖವಾಗಿರುವುದಾಗಿ ಜನರು ಆಶಿಸಿದ್ದಾರೆ, ಮುನಿಗಳೂ ಬಿಡುಗಣ್ಣರೂ ಆತನ ಏಳಿಗೆಯನ್ನೇ ಬಯಸುತ್ತಾರೆ. ಹೀಗಾಗಿ ಆತನಿಗೆ ಯುವರಾಜಪಟ್ಟವನ್ನು ಪ್ರೀತಿಯಿಂದ ಕಟ್ಟಿದರೆ ನಿನ್ನ ಕೀರ್ತಿಯು ಮತ್ತಷ್ಟು ಹೆಚ್ಚುತ್ತದೆ" ಎಂದು ಬುಧತತಿಯು ನುಡಿಯಿತು. ಈ ಮಾತುಗಳನ್ನು ಕೇಳಿ ಗುಡುಗಿನ ಶಬ್ದವನ್ನು ಕೇಳಿದ ಸೋಗೆಯಂತೆ, ಸೂರ್ಯಕಿರಣಗಳನ್ನು ಕಂಡು ಅರಳುವ ತಾವರೆಯಂತೆ, ಚಂದ್ರಕಿರಣಗಳ ಶೈತ್ಯದಿಂದ ಹೊಳೆಯುವ ನೈದಿಲೆಯಂತೆ ದಶರಥನ ಮನಸ್ಸು ಉಬ್ಬಿ ರಾಮಾಭಿಷೇಕದ ಬೆಳಗನ್ನು ನೋಡಿ ತೊಳಗುವಂತೆ ಕಣ್ಣುಗಳೆರಡರಲ್ಲೂ ಕಂಬನಿಗಳು ಉಕ್ಕಿದವು, ಮೈ ರೋಮಾಂಚನದಿಂದ ಕೂಡಿ ಮುತ್ತುಗಳಂತೆ ಸುರಿವ ಆನಂದಬಾಷ್ಪದಿಂದ ಕೂಡಿ ಯೋಗಿಯ ಹಾಗೆ ಅತ್ತಿತ್ತ ಚಲಿಸದೆ ಹರುಷಸಾಗರದಲ್ಲಿ ಮುಳುಗಿ ಕಂಗೊಳಿಸಿದ. ಸುಖದ ಸುಗ್ಗಿಯಲ್ಲಿದ್ದ ಜೀವನು ಉನ್ಮುಖನಾಗಿ ಎಚ್ಚರಗೊಂಡು ಪ್ರಾರಬ್ಧವಶನಾದ ಆತನ ಅಂತಃಕರಣವು ಬಾಹ್ಯವಾದುದನ್ನು ಗ್ರಹಿಸುವಂತೆ ರಾಜತಿಲಕನು ಶ್ರೀರಾಮನನ್ನು ನೆನೆಸಿಕೊಂಡು ವಸಿಷ್ಠರ ಮುಖವನ್ನು ನೋಡುತ್ತ, "ರಘುಕುಲತಿಲಕನಿಗೆ ಯೌವರಾಜ್ಯಾಭಿಷೇಕವನ್ನು ಮಾಡುವ ಬಗ್ಗೆ ದ್ವಿಜರನ್ನೂ ಬಾಂಧವರನ್ನೂ ಕೇಳಿದಾಗ ಎಲ್ಲರೂ ಹರುಷಪಟ್ಟು ಒಪ್ಪಿಗೆಯಿತ್ತ ಪರಿಯು ನನಗೆ ವಿದಿತವಾಗಿದೆ. ಮುಂದಿನ ಕಾರ್ಯಗಳಲ್ಲಿಯೂ ಕರುಣೆಯಿಂದ ಮಾರ್ಗದರ್ಶನ ಮಾಡಿ ಹರಸಿರಿ" ಎಂದ. ಆಗ ವಸಿಷ್ಠ ಮಹರ್ಷಿಯು, "ಲೋಕಾಧಿನಾಥನೇ ಕೇಳು, ಶ್ರೀರಾಮಚಂದ್ರನು ಏಕಾಧಿಪತ್ಯದ ಕಿರೀಟವನ್ನು ಧರಿಸಬೇಕೆಂಬುದು ನನ್ನ ಮನದಿಷ್ಟವೂ ಹೌದು" ಎಂದರು. ಆಗ ದಶರಥನು ಸುಮಂತ್ರನನ್ನು ಏಕಾಂತದಲ್ಲಿ ಕರೆದು ರಘುವರನನ್ನು ಕರೆತರಲು ಆಜ್ಞಾಪಿಸಿದ. ಅದರಂತೆ

ಆ ಮಂತ್ರಿಕುಲಮಾಣಿಕ್ಯನು ರಥವನ್ನೇರಿ ಹರುಷದಿಂದ ಸೋಮವೀಥಿಯನ್ನು ಸೇರಿ ತ್ವರಿತವಾಗಿ ಬಂದು ರಘುಕುಲಲಲಾಮನ ಮಂದಿರದ ಮುಂದೆ ನವಮಣಿರಥವನ್ನು ನಿಲ್ಲಿಸಿ ಅರಮನೆಯನ್ನು ಹೊಕ್ಕು ವಿವಿಧ ಭಾಗಗಳನ್ನು ದಾಟಿ ಭಾಗ್ಯೋದಯದ ಸುವಾರ್ತೆಯನ್ನು ಆತನಿಗೆ ಅರುಹಲು **ರಾಮಪುರದಧಿನಾಥ**ನ ಸಾನ್ನಿಧ್ಯವನ್ನು ಸೇರಿದ.

೨. ಗುರು ವಸಿಷ್ಠರ ಸೂಚನೆಯಂತೆ ಶ್ರೀರಾಮನು ದೀಕ್ಷೆಯನ್ನು ತಾಳಿದುದು

ವಸಂತದ ಬರುವಿಕೆಯಿಂದ ಸಂತಸಗೊಳ್ಳುವ ಕೋಗಿಲೆಯಂತೆ ಸುಮಂತ್ರನು ರಘುಪತಿಯನ್ನು ಕಂಡು ಕೈಮುಗಿದು ಅವನ ಪ್ರೀತಿಯ ಮಾತುಗಳನ್ನು ಕೇಳಿ ಸಂತೋಷಿಸಿದ. ಆನಂತರ ತನಗೆ ತೋರಿಸಿದ ಪೀಠದ ತುದಿಯಲ್ಲಿ ಕುಳಿತು ಹರುಷವನ್ನು ಸೂಸುತ್ತ ಮೆಲುವಾದ ಮಾತುಗಳಿಂದ ದಶರಥನು ಹೇಳಿ ಕಳಿಸಿರುವ ಶುಭವಾರ್ತೆಯನ್ನು ಅರುಹಿದ. ಭೂಸುರರು, ಭೂಭುಜರು ಇವರ ಒಡ್ಡೋಲಗದಲ್ಲಿ ಮಹಾರಾಜನು ಮಂತ್ರಾಲೋಚಿಸಿ ರಾಮನಿಗೆ ಸಾಮ್ರಾಜ್ಯಾಧಿಪತ್ಯಾಭಿಷೇಕವನ್ನು ನೆರವೇರಿಸಲು ನಿಶ್ಚೈಸಿರುವುದನ್ನು ತಿಳಿಸಲು ತನ್ನನ್ನು ಕಳಿಸಿರುವುದಾಗಿ ಹೇಳಿದ. ತಂದೆಯ ಇಚ್ಛೆಯನ್ನು ಮಂತ್ರಿಯಿಂದ ಕೇಳಿದ ಶ್ರೀರಾಮನು ಸಂತೋಷಚಿತ್ತನಾದ; ಆನಂತರ ತನ್ನ ಮನೆಯನ್ನು ಬಿಟ್ಟು ಮಂಗಳವಾದ್ಯಗಳು ಮೊರೆಯುತ್ತಿರಲು ಮಣಿರಥವನ್ನೇರಿ ಸೂತಮಾಗಧರಿಂದ ಪರಿವೇಷ್ಟಿತನಾಗಿ ತಂದೆಯನ್ನು ಕಾಣಲು ತೆರಳಿದ. ಸಿಂಗಾರಗೊಂಡ ರಾಜಮಾರ್ಗವನ್ನು ಬೆಳಗುತ್ತ ರಘುಪುಂಗವನು ಹೊಂದೇರಿನಲ್ಲಿ ಕುಳಿತು ಬರುವುದನ್ನು ಪುರಜನರು ನಲವಿನಿಂದ ಎರಡೂ ಬದಿಗಳಲ್ಲಿ ನಿಂತು ಗೌರವದಿಂದ ನೋಡಿದರು. ಚಿಗುರಿನ ಅಡಿಗಳು, ತೊಂಡೆವಣ್ಣಿನಂತಹ ತುಟಿಗಳು, ಗುಂಗುರು ಕೂದಲು, ಹೊಳೆಯುವ ಬೆಳುದಿಂಗಳನ್ನು ಚೆಲ್ಲುವ ನೋಟ, ಮದನೋತ್ಕಂಠವನ್ನು ಹೆಚ್ಚಿಸುವ ಬಾಹುಗಳು, ಕಮಲದಂತಹ ಕೈಗಳು, ಹೂಪಕಳೆಯಂತಹ ಬೆರಳುಗಳು, ಹೊಳೆಯುವ ಹಲ್ಲುಗಳು, ಸುಳಿನಾಭಿ – ಇವುಗಳಿಂದ ಶೋಭಿಸುವ ಚೆಲುವ ಯುವತಿಯರು ಶ್ರೀರಾಮನನ್ನು ಬೆಡಗಿನಿಂದ ವೀಕ್ಷಿಸಿದರು. ಬೀದಿಯ ಎರಡೂ ಕಡೆಗಳ ಸೌಧಾಗ್ರದಲ್ಲಿ ನಿಂತು ನೋಡುತ್ತಿದ್ದ ಯುವತಿಯರು ಮನಸ್ಸಂತೋಷದಿಂದ ತುಂಬಿ ರಘುರಾಮನ ತಲೆಯ ಮೇಲೆ ಹೂಮಳೆಯನ್ನು ಸುರಿಸಿದರು. ದೇವತೆಗಳು ಸಿರಿಯರಸನನ್ನು ಕರೆಯುವ ಹಾಗೆ ಹಿರಿಯರು ನಾನಾ ಬಗೆಯ ಆಶೀರ್ವಚನಗಳಿಂದಲೂ ಸ್ತುತಿಗಳಿಂದಲೂ ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸುತ್ತಿದ್ದರು. ನಾನಾ ದೇಶಗಳ ರಾಜರುಗಳು ಅವರವರ ಅಂತಸ್ತಿಗನುಗುಣವಾಗಿ ಸೌಜನ್ಯದ ಮಾತುಗಳ ಮೂಲಕ ಉಪಚರಿಸಿದರು, ತನ್ನನ್ನು ಹಿಂಬಾಲಿಸಿ ಬಂದ ಭೂಸುರರನ್ನು ಗೌರವಭಾವನೆಯಿಂದ ಆನಂದಗೊಳಿಸಿ, ಜನಸಂದಣಿಯ ಪ್ರೀತಿಯನ್ನು ಸ್ವೀಕರಿಸುತ್ತ, ಸುಮಂತ್ರನು ಕೈಯಿತ್ತು ರಥದಿಂದ ಇಳಿಸಿಕೊಳ್ಳಲು, ಶ್ರೀರಾಮನು ರಾಜಠೀವಿಯಿಂದ ಅರಮನೆಯನ್ನು ಹೊಕ್ಕ.

ಹರಿಪೀಠದಲ್ಲಿ ಕುಳಿತಿದ್ದ ತಂದೆಯನ್ನು ಕಂಡಾಕ್ಷಣವೇ ಆತನ ಚರಣಕಮಲಗಳನ್ನು ಹಿಡಿದು ವಂದಿಸಿದ. ದಶರಥನು ಮಗನನ್ನು ಪ್ರೀತಿಯಿಂದ ಅಪ್ಪಿಕೊಂಡು ಶಿರವನ್ನಾಘ್ರಾಣಿಸಿ ಉಕ್ಕುವ ಸಂತಸಸಮೇತ ಸಿರಿಯರಸನನ್ನು ತನ್ನ ಮಗನೆಂದು ಭಾವಿಸಿ ಪಕ್ಕದಲ್ಲಿ ಕುಳ್ಳಿರಿಸಿಕೊಂಡ. ಆನಂತರ ನೆರೆದ ಪ್ರಾಜ್ಞಸಮೂಹದ ಅಪ್ಪಣೆ ಪಡೆದು ರಘುಕುಲಲಲಾಮನನ್ನು ಉದ್ದೇಶಿಸಿ, "ಇದುವರೆಗೂ ನಾನು ಇಂದ್ರನೇ ಮೊದಲಾದ ದೇವತೆಗಳಿಗೆ ನಾನಾ ಬಗೆಯಲ್ಲಿ ಸಹಾಯ ಮಾಡುತ್ತ ಜೋಕೆಯಿಂದ ಸಾಕಷ್ಟು ದೀರ್ಘ ಕಾಲ ಭಗವಂತನ ಆಜ್ಞೆಯಂತೆ ಭೂಭಾರವನ್ನು ನಿರ್ವಹಿಸಿ ಒಳ್ಳೆಯ ಹೆಸರು ಗಳಿಸಿದ್ದೇನೆ. ನಾನೂ ಭೋಗವನ್ನನುಭವಿಸಿ, ನನ್ನ ಸತ್ಕೃತಿಗಳಿಂದ ಪ್ರಜೆಗಳನ್ನೂ ಸಂತಸದಿಂದ ಇರಿಸಿದ್ದೇನೆ. ಆದರೆ ಮುಪ್ಪಿನ ಕಾರಣದಿಂದ ನನ್ನ ಭುಜಗಳು ಈಗ ಈ ಹೊರೆಯನ್ನು ತಾಳಲಾರವು. ಈಗ ಭೂಕಾಂತೆಯು ನಿನ್ನ ಬಾಹುಗಳನ್ನು ಆಶ್ರಯಿಸಲು ಬಯಸಿದ್ದಾಳೆ. ಮಗನೇ, ಎಲ್ಲ ಭೂಸುರರೂ ಪ್ರಜೆಗಳೂ ನೀನು ಈ ಭೂತಳಕ್ಕೆ ಅಧಿಪತಿಯಾಗಬೇಕೆಂದು ಮನಃಪೂರ್ವಕವಾಗಿ ಬಯಸುತ್ತಿದ್ದಾರೆ. ಕಾಮಮೋಹಗಳನ್ನು ತೊರೆದು ಸದ್ಧರ್ಮದಿಂದ ಸದಾ ಕಾಲ ದೇಶಕೋಶಗಳನ್ನು ಅಭಿವೃದ್ಧಿಗೊಳಿಸಿ, ಪ್ರಜೆಗಳನ್ನು ನಿನ್ನ ಮಕ್ಕಳಂತೆಯೇ ಸಂರಕ್ಷಿಸುತ್ತ ಆಳಬೇಕೆಂದು ಭೂಮಿಪಾಲಕರೆಲ್ಲ ಆಶಿಸುತ್ತಿದ್ದಾರೆ. ಹಾಗಾಗಿ ಸದ್ಗುಣನಿಲಯನೂ, ನನ್ನ ಮಕ್ಕಳಲ್ಲಿ ಹಿರಿಯನೂ, ಸಕಲಾಗಮಜ್ಞನೂ, ಮಹಾಪ್ರಾಜ್ಞನೂ, ಸರ್ವಪ್ರಕೃತಿರಂಜಕನೂ, ಅಮೃತವಾಕ್‌ಶ್ರೀಯುತನೂ ಆದ ನೀನು, ನಾಳಿನ ಪುಷ್ಯಯೋಗದಲ್ಲಿ ಯುವರಾಜನಾಗಿ ಲೋಕವನ್ನು ಮುದಗೊಳಿಸು" ಎಂದು ನುಡಿದ. ಈ ರೀತಿ ಮಹಾರಾಜನು ಆಡಿದ ಶುಭನುಡಿಯನ್ನು ಕೇಳಿ ಯವನ ಕಾಂಭೋಜ ಕರ್ಣಾಟ ಆಂಧ್ರ ಮುಂತಾದ ದೇಶಗಳ ರಾಜರುಗಳೆಲ್ಲ ಪುಳಕಗೊಂಡು ಜೈಕಾರ ಮಾಡಿದರು, ಬುಧಗಣವು ಸಂತಸಗೊಂಡಿತು. ಒಬ್ಬ ವಿವೇಕಿಯು ತವಕದಿಂದ ಓಡಿಹೋಗಿ ಕೌಸಲ್ಯೆಗೆ ಈ ಸುದ್ದಿಯನ್ನು ಅರುಹಿದ; ಆಕೆಯು ಸುದ್ದಿ ತಂದವನಿಗೆ ನವರತ್ನಭೂಷಣಗಳನ್ನಿತ್ತು ಸಂಭ್ರಮಿಸಿದಳು.

ಇತ್ತ ಅರಸನು ಮಗನಿಗೆ ತೆರಳಲು ಸೂಚಿಸಿದಾಗ ರಾಮಚಂದ್ರನು ಅದರಂತೆ ತನ್ನ ಅರಮನೆಯ ಕಡೆ ಹೊರಟ. ಆನಂತರ ದಶರಥನು ಅಮಾತ್ಯರು ಭೂಭುಜರು ಮತ್ತು ಋಷಿವರ್ಯರ ಸಮೂಹಕ್ಕೆ, "ಅಪರೂಪದ ಪುಷ್ಯಯೋಗವು ನಾಳೆ ಸಂಭವಿಸಲಿದೆ; ಆದ್ದರಿಂದ ನಾಳೆಯೇ ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ನೆರವೇರಿಸುವ ಆಸೆ ನನ್ನದು" ಎಂದು ಬಿನ್ನವಿಸಿಕೊಂಡ; ಅದಕ್ಕೆ ಎಲ್ಲರೂ ಸಮ್ಮತಿಸಿದರು. ಬಳಿಕ ಮಹಾರಾಜನು ಅವರೆಲ್ಲರನ್ನೂ ಯಥೋಚಿತವಾಗಿ ಸತ್ಕರಿಸಿ ಬೀಳ್ಕೊಟ್ಟ. ಎದೆಯಲ್ಲಿ ಸಂತಸವನ್ನೂ ಮೈಯಲ್ಲಿ ಪುಲಕವನ್ನೂ ತುಂಬಿಕೊಂಡ ಮಹಾರಾಜನು ಆನಂತರ ತನ್ನ ಅಂತಃಪುರದೆಡೆಗ ಹೆಜ್ಜೆಹಾಕಿದ. ಅರಮನೆಗೆ ಬಂದವನೇ. ಶ್ರೀರಾಮನನ್ನು ಮತ್ತೆ ಬರಹೇಳುವಂತೆ ಮಂತ್ರಿಗಳಿಗೆ ಸೂಚಿಸಿದ; ಅದರಂತೆಯೇ ಮಂತ್ರಿಯು ತಕ್ಷಣವೇ ಶ್ರೀರಾಮನ ಅರಮನೆಗೆ ತೆರಳಿ ಮಹಾಪ್ರಭುಗಳ ಅಪ್ಪಣೆಯನ್ನು ರಾಮಚಂದ್ರನ ಬಳಿ ಬಿನ್ನವಿಸಿಕೊಂಡ. ಆಗ ರಘುವೀರನು ಸಂತಸ ತಾಳಿ ತಂದೆಯ ದರ್ಶನಲಾಭಕ್ಕೆಂದು ರಥವನ್ನೇರಿ ಸುಮಂತ್ರನೊಡನೆ ಅರಮನೆಯತ್ತ ಸಾರಿದ.

ಶ್ರೀರಾಮನು ಅನೇಕ ದ್ವಾರಗಳನ್ನು ದಾಟಿ ದೂರದಿಂದ ತಂದೆಯನ್ನು ಕಂಡು ಭಯಭಕ್ತಿಗಳಿಂದಲೂ ರೋಮಾಂಚನದಿಂದಲೂ ಕೂಡಿ ಒಳಗೆ ಬಂದು ನಮಸ್ಕರಿಸಿದ. ಆಗ ದಶರಥನು ತನ್ನ ಪ್ರಿಯಪುತ್ರನನ್ನು ಅಪ್ಪಿಕೊಂಡು ತನ್ನ ಪೀಠದಲ್ಲಿಯೇ ಕುಳ್ಳಿರಿಸಿಕೊಂಡ. ಚಂದ್ರನನ್ನು ಕಂಡು ಉಕ್ಕೇರುವ ಸಾಗರದಂತೆ ವಸುಮತೀರಮಣನು ಮಗನನ್ನು ಕಂಡು ಮೃದುಹಾಸದಿಂದ ಕೂಡಿ ಮಧುರವಾಕ್ಕುಗಳಿಂದ, "ಮಗು, ನಾನು ನನ್ನ ಪೌರುಷದಿಂದ ಇದುವರೆಗೆ ಧರೆಯನ್ನು ಪಾಲಿಸಿದೆ, ನಾನಾ ಸತ್ಕಾರ್ಯಗಳನ್ನು ಮಾಡಿದೆ, ಯಜ್ಞಯಾಗಗಳನ್ನು ನೆರವೇರಿಸಿ ನಿನ್ನಂತಹ ನಾಲ್ವರು ಪುತ್ರರನ್ನು ಪಡೆದೆ. ಹೀಗೆ ನಾನು ದೇವಋಣ ಪಿತೃಋಣಗಳನ್ನು ತೀರಿಸಿದ್ದೇನೆ. ನನ್ನ ಮನದಿಷ್ಟವನ್ನೆಲ್ಲ ಅನುಭವಿಸಿದ್ದೇನೆ. ಈಗ ನನಗಿರುವ ಒಂದೇ ಆಸೆಯೆಂದರೆ ನಿನಗೆ ಅಭಿಷೇಕವನ್ನು ಮಾಡಿ ಮುಗಿಸುವುದು, ಅದರ ಹೊರತು ಬೇರೆ ಯಾವುದೂ ಇಲ್ಲ. ದೇವತೆಗಳೂ ಅಂತಃಪುರದಲ್ಲಿರುವ ನಿನ್ನ ತಾಯಂದಿರೂ ನಿನ್ನ ಅಭ್ಯುದಯವನ್ನೇ ನಿರೀಕ್ಷಿಸುತ್ತಿದ್ದಾರೆ. ಲೋಕಹಿತಕ್ಕಾಗಿ ನಾಳೆ ನೀನು ರಾಜ್ಯಾಭಿಷೇಕವನ್ನು ಸ್ವೀಕರಿಸಿ ಲಕ್ಷ್ಮೀರಮಣನ ಹಾಗೆ ಪೊಡವಿಯನ್ನು ಪಾಲಿಸಲು ಸಿದ್ಧನಾಗು. ಆಕಾಶದಿಂದ ಒಂದು ಉಲ್ಕೆಯು ಭೀಕರವಾಗಿ ಕೆಳಗೆ ಬೀಳುವ, ಭಯಂಕರ ಸಿಡಿಲು ಹೊಡೆಯುವ ಹಾಗೂ ಚಂದ್ರನು ಕುಸಿಯುವ ಕನಸೊಂದನ್ನು ನಾನು ನಿನ್ನೆಯ ರಾತ್ರಿ ಕಂಡೆ. ಈ ಕುರಿತು ನಾನು ದೈವಜ್ಞರನ್ನು ವಿಚಾರಿಸಿದಾಗ ಅವರು ಇದು ಮುಂದೆ ಸಂಭವಿಸಲಿರುವುದನ್ನು ಸೂಚಿಸುತ್ತಿದೆ ಎಂದು ಹೇಳಿದರು. ಇದು ಗ್ರಹಗಳ ವಕ್ರಗತಿಯ ಸೂಚಕ, ಅದರಿಂದಾಗಿ ರಾಜನಿಗೆ ದೊಡ್ಡ ಕೇಡು ಸಂಭವಿಸಬಹುದು ಎಂದು ಮಹಾ ಜ್ಯೋತಿಷಿಗಳು ನುಡಿದಿರುವರು. ಮನುಷ್ಯರ ಸ್ಥಿತಿಯು ಸ್ಥಿರವಲ್ಲ, ಮನಸ್ಸು ಚಾಂಚಲ್ಯಕ್ಕೊಳಗಾಗಬಹುದು, ಆದ್ದರಿಂದ ಆದಷ್ಟು ಬೇಗ ನಿನಗೆ ಪಟ್ಟ ಕಟ್ಟುವ ಅಭಿಲಾಷೆ ನನ್ನದು. ಭರತನು ತನ್ನ ಸೋದರಮಾವನ ಮನೆಯಲ್ಲಿದ್ದಾನೆ. ಅವನು ಸತ್ಯವ್ರತ, ವಿನೀತ, ಸದ್ಗುಣನಿಲಯ, ಸಕಲಾಗಮಜ್ಞ, ನಿನ್ನ ವಿಷಯದಲ್ಲಿ ಅವನಿಗೆ ಅತಿಶಯವಾದ ಪ್ರೀತಿ ಮತ್ತು ಭಕ್ತಿ. ಆದರೂ ಯಾವನ ಮನಸ್ಸೇ ಆಗಲಿ ಚಂಚಲವಾಗಬಹುದು, ಭ್ರಾಂತಿ ಎಂಬುದು ಪುರುಷಸಹಜ. ಆದ್ದರಿಂದ ನಾಳೆ ಪುಷ್ಯಯೋಗದಲ್ಲಿ ಋಷಿಸಮೂಹವು ಮೆಚ್ಚುವ ರೀತಿಯಲ್ಲಿ ನೀನು ಯುವರಾಜ್ಯಾಧಿಪತ್ಯವನ್ನು ಧರಿಸು. ಇದು ನನ್ನ ಮನದಿಚ್ಛೆ. ಅರಸನ ಶ್ರೇಯಸ್ಸಿಗೆ ನಾನಾ ವಿಘ್ನಗಳು ಎಂದು ಬಲ್ಲವರು ಹೇಳುತ್ತಾರೆ, ಅದು ಸತ್ಯವೂ ಹೌದು. ಶುಭಕಾರ್ಯವನ್ನು ಬೇಗನೇ ಕೈಗೊಳ್ಳಲು ನನಗೆ ಸಹಾಯಕನಾಗು. ಈ ರಾತ್ರಿಯನ್ನು ನಿನ್ನ ಹೆಂಡತಿಯ ಜೊತೆ ನೇಮದಿಂದ ಕಳೆದು, ನಾಳೆ ಸೂರ್ಯೋದಯವಾಗಲು ಭೂಸುರರ ಅಭಿಪ್ರಾಯದಂತೆ ನನ್ನ ಅಭೀಷ್ಟವನ್ನು ಪೂರೈಸು" ಎಂದು ತನಗೆ ಪ್ರೀತಿಯಿಂದ ಹೇಳಿದ ತಂದೆಗೆ ಶ್ರೀರಾಮನು ವಿನಯದಿಂದ ನಮಸ್ಕರಿಸಿ ಬೀಳ್ಕೊಂಡು, ತನ್ನ ತಾಯಿ ಕೌಸಲ್ಯೆಯ ಮನೆಗೆ ಹೋದ.

ತಾಯಿಗೆ ನಮಿಸಿ ತಂದೆ ಹೇಳಿದ ಮಾತುಗಳನ್ನು ಒಂದಿನಿತೂ ಬಿಡದೆ ವಿವರವಾಗಿ ಹೇಳಲು ಸಾಮ್ರಾಜ್ಯಸಿರಿಯು ತನಗೇ ಸಿಕ್ಕಿತೆಂಬಷ್ಟರ ಮಟ್ಟಿಗೆ ಸಂತಸದಿಂದ ಹಿಗ್ಗಿ ಕೌಸಲ್ಯೆಯು ಮಗನನ್ನು ಅಪ್ಪಿಕೊಂಡಳು. ಆನಂತರ, "ನಾನು ನಿಡುಗಾಲದಿಂದ ಬಯಸಿ ದೇವರನ್ನು ಪೂಜಿಸಿದ ಫಲವು ಇಂದು ಕೈಗೂಡುತ್ತಿದೆ. ಗೆಲವು ಪಡೆದು

ಸಾಮ್ರಾಜ್ಯದೊಲವನ್ನು ಅನುಭವಿಸಿ, ಭಗೀರಥನಂತೆ ಅಲಘುಮತಿಯೆನಿಸಿ ಚಿರಕಾಲ ಸುಖಿಯಾಗಿ ಬಾಳಿ ವಿಜಯವಂತನಾಗು, ಕಂದ. ನಿನ್ನ ಅಭ್ಯುದಯವನ್ನೇ ಸದಾ ಹಾರೈಸುವ ಲಕ್ಷ್ಮಣನನ್ನು ಸಂತಸಗೊಳಿಸು" ಎಂದಳು. ಆಗ ಸನಿಹದಲ್ಲಿಯೇ ಕೈಮುಗಿದುಕೊಂಡು ನಿಂತಿದ್ದ ಲಕ್ಷ್ಮಣನನ್ನು ನೋಡಿ ರಘುವರನು, "ನನ್ನ ಸಿರಿಸಂಪದಕ್ಕೆ ಕಾರಣವೇ ನೀನು. ನೀನೂ ಬೇಕಾದಂತೆ ಈ ರಾಜ್ಯಸುಖವನ್ನು ಅನುಭವಿಸು. ನನ್ನ ದೇಹ ಮತ್ತು ರಾಜ್ಯದ ಭೋಗಗಳು ನಿನಗೂ ಸೇರುತ್ತವೆ" ಎಂದು ಎದೆದುಂಬಿ ನುಡಿದ. ಆನಂತರ ತಾಯಿಯನ್ನು ಕುರಿತು ವಿನಯದಿಂದ, "ಈ ರಾತ್ರಿ ನಾನು ಮತ್ತು ಜಾನಕಿ ಇಬ್ಬರೂ ನೇಮದಿಂದಿದ್ದು ಉಪವಾಸದಿಂದ ದರ್ಭಾಸನದ ಮೇಲೆ ಇರಬೇಕೆಂದು ಋತ್ವಿಜರೂ ತಂದೆಯೂ ಆಜ್ಞಾಪಿಸಿದ್ದಾರೆ. ನಾಳೆಯ ಮಂಗಳಾಚರಣೆಗಳ ಶಾಸ್ತ್ರವಿಧಿಗಳೆಲ್ಲವೂ ನಿರ್ವಿಘ್ನವಾಗಿ ನೆರವೇರುವಂತೆ ಆಶೀರ್ವದಿಸು" ಎಂದು ಕೇಳಿಕೊಂಡು ತನ್ನ ಮನಗೈತಂದ.

ಇತ್ತ ದಶರಥನು ಬ್ರಹ್ಮಮಾನಸಪುತ್ರರಾದ ವಸಿಷ್ಠರಿಗೆ ರಾಮನ ಮನೆಗೆ ಹೋಗಿ ರಾಜ್ಯಸಂಪತ್ತಿನ ಮತ್ತು ಕೀರ್ತಿಯ ಏಳಿಗೆಗಾಗಿ ಸೀತೆಯೂ ಶ್ರೀರಾಮನ ಜೊತೆಯಲ್ಲಿ ಉಪವಾಸ ತಾಳಿ ನೇಮದಿಂದಿರಲು ಆಜ್ಞಾಪಿಸಬೇಕೆಂದು ಕೇಳಿಕೊಳ್ಳಲು, ಋಷಿವರ್ಯರು ಅದೇ ರೀತಿಯಲ್ಲಿ ಮಾಡಲು ಸಂತಸದಿಂದ ರಥವನ್ನೇರಿ ಹೊರಟರು. ಆನಂತರ ಮಹಾರಾಜನು ಊರನ್ನು ಸಿಂಗರಿಸಲು ಸಚಿವರಿಗೆ ಅಪ್ಪಣೆಯಿತ್ತ. ಗುರು ವಸಿಷ್ಠರು ತನ್ನ ಮನೆಯತ್ತ ಆಗಮಿಸುತ್ತಿರುವುದನ್ನು ಚರರಿಂದ ತಿಳಿದ ರಾಮನು ಭಯಭಕ್ತಿಗಳಿಂದ ಮೇಲೆದ್ದು ಇದಿರು ಬಂದು ಅವರ ಅಡಿಗಳಿಗೆರಗಿ, ತೇರಿನಿಂದ ಅವರನ್ನು ಕೈಹಿಡಿದು ಇಳಿಸಿಕೊಂಡು ಮಣಿಗದ್ದುಗೆಯತ್ತ ಕರೆದೊಯ್ದ. ಕನಕಪಾತ್ರೆಯಲ್ಲಿ ವೈದೇಹಿಯು ನೀರನ್ನು ನೀಡಲು ರಾಮನ ಮುನಿವರ್ಯರ ಪಾದಪಯೋಜಗಳನ್ನು ತೊಳೆದು ಪೂಜಿಸಿ, ಆ ತೀರ್ಥವನ್ನು ತನ್ನ ತಲೆಯ ಮೇಲೆ ಸಿಂಪಡಿಸಿಕೊಂಡು ಪತ್ನೀಸಮೇತನಾಗಿ ನಮಸ್ಕರಿಸಿದ. ಮುನಿತಿಲಕರ ಪಾದತೀರ್ಥವು ತನಗೆ ಧನ್ಯತೆಯನ್ನುಂಟುಮಾಡಿದೆ ಎಂದು ಬಿನ್ನವಿಸಿಕೊಂಡ. ಆಗ ಮಂದಹಾಸದಿಂದ ಕೂಡಿದ ಮುನಿಗಳು, 'ನಿನ್ನ ಪಾದೋದಕವ ತಳೆದು ಹರನು ಪಾವನನಾದ, ಹಾಗೆಯೇ ನನ್ನ ಪಿತನಾದ ಬ್ರಹ್ಮನು ನಿನ್ನ ಚರಣತೀರ್ಥವನ್ನು ತಲೆಯಲ್ಲಿ ಧರಿಸಿ ಧನ್ಯನಾಗಿ ರಾಜಿಸಿದ. ನೀನು ಪರಕ್ಕೆ ಪರತತ್ವನಾದವನು, ಪರಮಾನಂದ ಮೂರ್ತಿ, ಸರ್ವಾತ್ಮಗತವ್ಯೋಮ ಎಂಬುದನ್ನು ನಾನು ಬಲ್ಲೆ. ನೀನು ದೇವಕಾರ್ಯವನ್ನು ನೆರವೇರಿಸುವುದಕ್ಕೆಂದು ಸದಾ ಯೋಚಿಸುತ್ತೀಯೆ, ಭಕ್ತಜನರ ಇಷ್ಟಾರ್ಥವನ್ನು ಪೂರೈಸಲು ಹಾವಿನ ಹಾಗೆ ಸುತ್ತಾಡುವೆ. ದಶಕಂಧರನ ಸಂತತಿಯನ್ನು ನಿರ್ನಾಮಮಾಡಲೆಂದು ಮನುಷ್ಯ ಜನ್ಮವನ್ನು ತಳೆದು ಈ ಜಗತ್ತಿಗೆ ಬಂದಿರುವೆ ಎಂಬುದನ್ನು ನಾನು ಬಲ್ಲೆ. ಆದರೆ ನಾನಿದನ್ನು ಬಹಿರಂಗವಾಗಿ ಹೇಳಬಾರದು; ಏಕೆಂದರೆ ಇದು ದೇವತೆಗಳ ರಹಸ್ಯ. ಹೀಗಾಗಿ ಲೋಕದ ನಡೆಗೆ ಅನುಸಾರವಾಗಿ ನೀನು ನನ್ನನ್ನು ಗುರುವೆಂದರೆ ನಾನು ಗುರುವಿನಂತೆ ತೋರ್ಪಡಿಸಿಕೊಳ್ಳುತ್ತೇನೆ. ವಾಣಿಯೊಡೆಯನ ಆಜ್ಞೆಯಂತೆ ನಾನು ಇಕ್ಷ್ವಾಕುವಂಶದ ಪೌರೋಹಿತ್ಯವನ್ನು ಪಡೆದಿದ್ದೇನೆ. ಆರಂಭದ ಕಾಲದಿಂದಲೂ ಎದುರು ನೋಡುತ್ತಿದ್ದ ಗಳಿಗೆ ನಿನ್ನ ದಿವ್ಯಸಂದರ್ಶನದಿಂದ ನನಗೆ ಈಗ ಒದಗಿ ಬಂದಿವೆ. ನಿನ್ನ ಚಿನ್ಮೂರ್ತಿಯು ನನ್ನ ಚಿತ್ತವನ್ನು ಅಗಲದಂತೆ ಅನುಗ್ರಹಿಸು' ಎಂದು ಮನಸ್ಸಿನಲ್ಲಿಯೇ

ಪ್ರಾರ್ಥಿಸಿಕೊಂಡರು. ಆನಂತರ ಬಹಿರಂಗವಾಗಿ, "ಹಿಂದೆ ನಹುಷ ಚಕ್ರವರ್ತಿಯು ತನ್ನ ಮಗ ಯಯಾತಿಗೆ ರಾಜ್ಯಭಾರವನ್ನು ವಹಿಸಿಕೊಟ್ಟ ರೀತಿಯಲ್ಲಿ ದಶರಥ ಮಹೀಪಾಲನು ನಾಳಿನ ಪುಷ್ಯಯೋಗದಲ್ಲಿ ನಿನ್ನನ್ನು ಅಯೋಧ್ಯೆಯ ಅಧಿಕಾಂತನೆನಿಸಲು ಇಚ್ಛಿಸಿದ್ದಾನೆ. ನೀನು ಹೆಂಡತಿಯೊಡನೆ ಇಂದು ಉಪವಾಸವಿರಬೇಕೆಂದು ಮಹಾರಾಜನು ಆಜ್ಞಾಪಿಸಿದ್ದಾನೆ" ಎಂದು ಹೇಳಿ, ಮಂತ್ರಾರ್ಥಕ್ಕನುಗುಣವಾಗಿ ಉಪವಾಸವ್ರತದ ವಿವರಗಳನ್ನು ಪ್ರೀತಿಯಿಂದ ಉಪದೇಶಗೈದು, ರಾಮನಿತ್ತ ಅತಿಶಯ ಉಪಚಾರಗಳನ್ನು ಸ್ವೀಕರಿಸಿ, ಅವನನ್ನು ಬೀಳ್ಕೊಂಡು ರಥವೇರಿ ಅತ್ಯಂತ ಸಂತೋಷಚಿತ್ತನಾಗಿ ದಶರಥನ ಅರಮನೆಯ ಕಡೆಗೆ ಪಯಣ ಬೆಳೆಸಿದರು. ಗುರು ವಸಿಷ್ಠರು ಹೋದ ಬಳಿಕ ರಘುಕುಲತಿಲಕನು ತನ್ನ ಬಾಂಧವರನ್ನೂ ಆಪ್ತಜನರನ್ನೂ ಪರಿಜನರನ್ನೂ ಕರೆಸಿ, ನಾಳೆ ಬರಲಿರುವ ರಾಜ್ಯಸಿರಿಯನ್ನೂ ದಶರಥನು ತನ್ನನ್ನು ಮನ್ನಿಸಿದ ಪರಿಯನ್ನೂ ಮಿದುವಾಣಿಯಿಂದ ಹೇಳಿ, ಮಂಗಳವಸ್ತುಗಳನ್ನೂ ಆಭರಣಗಳನ್ನೂ ಇತ್ತು ಗುರುಗಳು ಹೇಳಿದ ರೀತಿಯಲ್ಲಿ ನೇಮದಿಂದ ಇದ್ದ.

ರಾಮನಿಗೆ ಯೌವರಾಜ್ಯಾಭಿಷೇಕ ನಡೆಯುವ ವಾರ್ತೆಯು ಎಲ್ಲೆಡೆಗೆ ಹಬ್ಬಿತು. ತಮಗೆ ಇನ್ನು ಬಯಸಿದ್ದು ದೊರೆಯುತ್ತದೆ ಎಂಬ ಸಂತೋಷದಲ್ಲಿ ಭೂಸುರರಿದ್ದರೆ, ಭೂಮಿಪತಿಗಳು ಈ ಸುದ್ದಿಯನ್ನು ಕೇಳಿ ಉತ್ಸಾಹಗೊಂಡು ತಮಗೆ ಇನ್ನು ಶತ್ರುಗಳ ಭಯವೇ ಇರುವುದಿಲ್ಲ ಎಂದು ಹರ್ಷಿಸಿದರು. ಊರಿನ ಮೂಲೆಮುಡುಕುಗಳಲ್ಲಿಯೂ ಈ ಶುಭ ಸುದ್ದಿ ಹರಿದಾಡಲು ಜನಗಳೆಲ್ಲ ಸಡಗರಗೊಂಡು ಹೊಸ ಬಟ್ಟೆಗಳನ್ನುಟ್ಟು ಒಡವೆಗಳನ್ನು ತೊಟ್ಟು ಸ್ವಯಮೇಚ್ಛೆಯಿಂದ ಊರನ್ನೆಲ್ಲ ಯಥೋಚಿತವಾಗಿ ಸಿಂಗರಿಸಿದರು, ನಾನಾ ಬಗೆಯ ಧೂಪದೀಪಗಳನ್ನು ಬೆಳಗಿದರು. ನಾಲ್ಕೂ ಬಗೆಯ ವರ್ಣದ ಜನರು ಶ್ರೀಪತಿಯನ್ನು ಪೂಜಿಸಿ ಶ್ರೀರಾಮನೇ ಈ ಭೂಮಿಯ ಒಡೆಯನಾಗುವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡರು; ದೇವಾಲಯಗಳಲ್ಲಿ ದೀಪೋತ್ಸವಗಳಿಂದ ಪೂಜೆ ಸಲ್ಲಿಸಿದರು, ನಿರಂತರವಾಗಿ ಶ್ರೀರಾಮನ ಗುಣಾತಿಶಯಗಳನ್ನು ಹೊಗಳಿದರು, ರಾಮಕಥನವನ್ನು ಹಾಡಿದರು. ಅವರ ಆನಂದಕ್ಕೆ ಮೇರೆಯೇ ಇಲ್ಲವಾಯಿತು. ಸರ್ವಭೂತಾಂತರಾತ್ಮನೂ ಗುಣಮಣಿಯೂ ವಿಶ್ವಸೂತ್ರಧಾರಕನೂ ಜಗನ್ಮಯನೂ ಸರ್ವಸಾಕ್ಷಿಮಯನೂ ಪ್ರಣವಗೋಚರನೂ ಆದ **ರಾಮಪುರದಧೀಶ್ವರನು** ಜನರ ಕಣ್ಣುಗಳಿಗೆ ಮನುಷ್ಯಲೀಲೆಯನ್ನು ತೋರಿಸಿ ಗುರುವಿನ ಆಜ್ಞೆಯಂತೆ ನೇಮದಿಂದ ಇದ್ದು ಮರುದಿನದ ಅಭಿಷೇಕಕ್ಕೆ ಸಿದ್ಧನಾದ.

೩. ನಾರದನ ಆಗಮನ; ದೇವತೆಗಳ ಪ್ರಾರ್ಥನೆಯಂತೆ ಅಭಿಷೇಕಕ್ಕೆ ವಿಘ್ನಸನ್ನಾಹ

ನನ್ನ ಮನದೊಡತಿಯೇ ಕೇಳು, ರಾಮಚಂದ್ರನ ಅಭಿಷೇಕ ವಾರ್ತೆಯು ಕಸ್ತೂರಿ ಡಬ್ಬಿಯ ಮುಚ್ಚಳವನ್ನು ತೆಗೆದಂತೆ ಎಲ್ಲೆಡೆ ಹರಡಿ ಜನ ಸಂಭ್ರಮಗೊಂಡು ಬರತೊಡಗಿದರು. ಈ ಸುದ್ದಿಯು ಸ್ವರ್ಗಕ್ಕೆ ಬಂದಾಗ ದೇವೇಂದ್ರನು ಖಿನ್ನನಾಗಿ ಎಲ್ಲ ಮುನಿಗಳೊಡನೆ ಆಲೋಚಿಸಲು ಬಯಸಿದ. ದೇವೇಂದ್ರನು ಮುನಿಗಣದೊಡನೆ ಬ್ರಹ್ಮನ

ಬಳಿ ಹೋಗಿ ನಮಸ್ಕರಿಸಿ ತನ್ನ ಬೇಸರದ ಕಾರಣವನ್ನು ಬಿಚ್ಚಿಟ್ಟ. "ಎಲೆ ದೇವ, ತಾನು ಮನುಷ್ಯರೂಪವನ್ನು ತಳೆದು ದೇವತೆಗಳೆಲ್ಲರ ಎಡರನ್ನು ಪರಿಹರಿಸುವೆನೆಂದು ಈ ಹಿಂದೆ ಲಕ್ಷ್ಮೀರಮಣನು ಆಶ್ವಾಸನೆಯಿತ್ತಿದ್ದನಲ್ಲವೇ? ಆದರೆ ಈಗ ಅದನ್ನು ಮರೆತು ಐಹಿಕ ಭೋಗೇಚ್ಛೆಯಿಂದ ರಾಜನಾಗಲು ಬಯಸಿದ್ದಾನೆ. ನಾಳೆಯೇ ಅವನಿಗೆ ಅರಸುತನದ ಅಭಿಷೇಕ ನಡೆಯುತ್ತದೆ. ಹೀಗಾದರೆ ನಮ್ಮ ಕೆಲಸವು ಕೆಡುತ್ತದೆ. ಇದರಿಂದ ನಮ್ಮನ್ನು ಬಾಧಿಸುತ್ತಿರುವ ರಾವಣನ ದುಷ್ಟತನ ಕೊನೆಗೊಳ್ಳುವುದೆಂತು? ನಮಗೆ ನೆಮ್ಮದಿ ದೊರಕುವುದು ಯಾವಾಗ? ಇದಕ್ಕೇನು ಪರಿಹಾರ ಎಂಬುದನ್ನು ದಯವಿಟ್ಟು ಆಲೋಚಿಸಿ ಹೇಳು" ಎಂದು ದೇವತೆಗಳೆಲ್ಲ ಪರವಾಗಿ ಕಮಲಪೀಠನನ್ನು ಬೇಡಿಕೊಂಡ. ಅದನ್ನು ಕೇಳಿ ಬ್ರಹ್ಮನು ನಸುನಗುತ್ತ, "ಇದಕ್ಕೇಕೆ ಇಷ್ಟೊಂದು ಹೆದರುತ್ತಿರುವಿರಿ, ಸದಯನಾದ ಸಿರಿಯರಸನು ಕರುಣಾಮಯಿ, ಆತನ ಭಾಷೆ ಸುಳ್ಳಾಗಲು ಸಾಧ್ಯವೇ? ನಿಮಗೆ ಅಭಯವಿತ್ತಂತೆಯೇ ಆತನು ದಶಶಿರನ ಸಂತತಿಯನ್ನು ನಿರ್ಮೂಲಗೊಳಿಸಿ ಗೋಬ್ರಾಹ್ಮಣಸಮೂಹವನ್ನು ಸಲಹುತ್ತಾನೆ. ಇದಕ್ಕೆ ಸಂಶಯವಿಲ್ಲ, ಭಯಪಡದಿರಿ, ನಿಮ್ಮ ಮನದಿಷ್ಟವು ನೆರವೇರುತ್ತದೆ" ಎಂದು ಆಭಯವನ್ನಿತ್ತ. ಬ್ರಹ್ಮದೇವನ ಅಭಯದ ಮಾತುಗಳನ್ನು ಕೇಳಿದ ಅಸುರಸಭೆ ಸಂತೋಷದಿಂದ ತಮ್ಮ ನಿವಾಸಗಳಿಗೆ ಮರಳಿತು.

ಆನಂತರ ಕಮಲಭವನು ತನ್ನ ಅಭಿಮತವನ್ನು ನಾರದನಲ್ಲಿ ವಿನಯದಿಂದ ಬೆಸಸಿದ: "ಮುನಿವರ್ಯನೇ, ನೀನು ಭೂಲೋಕಕ್ಕೆ ತೆರಳಿ ಸಾಕೇತಪುರಿಯಲ್ಲಿ ರಘುವೀರನನ್ನು ಕಂಡು ಯಾರಿಗೂ ತಿಳಿಯದಂತೆ ಮನವಿಯನ್ನು ಮಾಡಿಕೋ. 'ದುರುಳ ರಾವಣನನ್ನು ಸಂಹರಿಸಿ ಲೋಕವನ್ನು ಕಂಟಕರಹಿತನನ್ನಾಗಿ ಮಾಡುವೆನೆಂದು ಅಭಯವನ್ನಿತ್ತು ಭೂಲೋಕದಲ್ಲಿ ಜನಿಸಿ, ಈಗ ರಾಜ್ಯಾಭಿಷೇಕಕ್ಕೆ ಒಪ್ಪಿರುವೆಯಲ್ಲ, ಹಾಗಾದರೆ ನಿನ್ನ ಮಾತು ನೆರವೇರುವುದೆಂತು? ದೇವತೆಗಳೆಲ್ಲರೂ ಮುಂದಾಗುವುದನ್ನು ಆಲೋಚಿಸಿ ಬೆದರಿದ್ದಾರೆ. ಮುಂದಿನ ಹಾದಿ ಏನು?' ಎಂದು ಬಿನ್ನವಿಸಿಕೋ." ಹೀಗೆಂದು ನಳಿನಪೀಠನು ಹೇಳಲು ನಾರದ ಮಹರ್ಷಿಯು ಆತನ ಪಾದಗಳಿಗೆರಗಿ ಬೀಳ್ಕೊಂಡು ಮೂಲೋಕದಧಿಪತಿಯನ್ನು ಕಾಣಲು ಭೂಲೋಕಕ್ಕೆ ತೆರಳಿದ. ಲಲಿತಮಧುರ ನಾದದಿಂದ ದಿವ್ಯಾನಂದವನ್ನುಂಟುಮಾಡುವ ವೀಣೆಯನ್ನು ಮೀಟುತ್ತ ಹರಿಯ ಚರಣಗಳನ್ನು ಹಾಡುತ್ತ ಕೆಳಕ್ಕಿಳಿದ. ಮಹರ್ಷಿಯು ಅಯೋಧ್ಯೆಗೆ ಬಂದಾಗ ನಗರವೆಲ್ಲ ತೋರಣಗಳು, ಪರ್ವತೋಪಮವಾದ ವಾರಣಗಳು, ಇಕ್ಕೆಡೆಯ ಶೃಂಗಾರ ಘಂಟಿಕಾ ಘಣಘಣತ್ಕಾರ ಇವುಗಳಿಂದ ಕೂಡಿದ ಬೀದಿಗಳಿಂದ, ಸಂಗೀತ ನರ್ತನಗಳಿಂದ ಗಂಧರ್ವಲೋಕದಂತೆ ಹೃದ್ಯವಾಗಿ ಕಂಗೊಳಿಸುತ್ತಿತ್ತು. ಊರಿನಲ್ಲಿ ಎಲ್ಲೆಲ್ಲಿಯೂ ನಾನಾ ಬಗೆಯ ರಚನೆಗಳ ನಿಲಯಗಳು ಕಾಣುತ್ತಿದ್ದವು. ಅವನ್ನೆಲ್ಲ ನೋಡಿ ನಸುನಗೆಯಿಂದ ಕೂಡಿ ನಾರದ ರಘುವೀರನ ಸೊಗಸಿನ ಅರಮನೆಯನ್ನು ಒಳಹೊಕ್ಕಾಗ ಬಾಗಿಲು ಕಾಯುವವರು ಹಿಂದೆ ಸರಿದು ಗೌರವದಿಂದ ದಾರಿ ಬಿಡಲು ಮುಂದೆ ಸಾಗಿ ರಘುವೀರನ ಸಂದರ್ಶನವನ್ನು ಪಡೆದ. ದಿವ್ಯಮಾಲೆಗಳನ್ನು ಧರಿಸಿ, ಪಕ್ಕಗಳಲ್ಲಿ ಸೇವಕರು ಚಾಮರವನ್ನು ಬೀಸುತ್ತಿರಲು, ಮುಂದೆ ಲಕ್ಷ್ಮಣನು ಅಮಿತ ಭಕ್ತಿಯಿಂದ ಸ್ತುತಿಸುತಿರಲು, ಹೊಸ ದರ್ಭಾಸನದಲ್ಲಿ

ಗುರುಗಳ ಅಪ್ಪಣೆಯಂತೆ ಮೌನದಿಂದ ಕುಳಿತ ಪರಬ್ರಹ್ಮನೇ ಆದ ಶ್ರೀರಾಮನನ್ನು ಕಂಡು ಸುರಮುನಿ ಸಂತೋಷಗೊಂಡ.

ಕೈಯಲ್ಲಿ ವೀಣೆಯನ್ನು ಹಿಡಿದು, ಅದರ ತಂತಿಗಳನ್ನು ಬೆರಳಿಂದ ಮೀಟುತ್ತ, ನರಲೋಕವೇ ಮೋಹಿಸುವ ಹಾಗೆ ನವರಸಗಾನದಿಂದ ಕೂಡಿದ ದೇವಮುನಿಯನ್ನು ಕಂಡು ರಘುನಾಥನು ಹರ್ಷದಿಂದ ಮೇಲೆದ್ದು ವಂದಿಸಿ ಪೂಜಿಸಿ, ಸಿರಿಚರಣಗಳನ್ನು ಸ್ತುತಿಸಿ ಕರೆದೊಯ್ದು ಮಣಿಪೀಠದ ಮೇಲೆ ಕುಳ್ಳಿರಿಸಿ ಮಧುರವಾಕ್ಕುಗಳಿಂದ ಉಪಚರಿಸಿದ. "ಸಂಸಾರವಿದೂರರೂ ನಿರ್ಮಲಹೃದಯರೂ ಹಂಸವಾಹನಪುತ್ರರೂ ಆದ ತಮ್ಮ ದರ್ಶನವು ಸಾಮಾನ್ಯರಿಗೆ ದುರ್ಲಭವಾದದ್ದು; ನರರಿಗೆ ಪೂರ್ವಕೃತ ಪುಣ್ಯದಿಂದ ಹಂಸಸಲ್ಲಾಪ ಸಂದರ್ಶನಾದಿಗಳು ದೊರಕುತ್ತವೆ; ತಮ್ಮನ್ನು ಕಂಡು ನಾನು ಕೃತಕೃತ್ಯನಾದೆ" ಎಂದು ವಿನಯವನ್ನಾಡಿದ. ಆತನನ್ನು ಕಂಡ ನಾರದ ಮೋಹದಿಂದ, "ಭಕ್ತವತ್ಸಲದೇವ, ಚಿನ್ಮಯಾತ್ಮಕ ರಾಮ, ಒಬ್ಬ ಸಂಸಾರಿಯಾಗಿ ನೀನು ಹೇಳಿದ ಮಾತುಗಳು ಸತ್ಯವೇ. ಆದರೆ ನಿನ್ನ ಅಧೀನದ ಮಾಯೆಯು ಮೂರು ಗುಣಗಳನ್ನು ಹೊದ್ದಿ ನಿನ್ನ ಬಲದಿಂದ ಬಿಳಿ ಕೆಂಪು ಕಪ್ಪಿನ ವರ್ಣಗಳನ್ನು ಪಡೆದ ಪ್ರಜೆಗಳು ಜನಿಸುತ್ತಾರೆ. ಮೂರುಲೋಕಗಳೇ ನಿನ್ನ ಮನೆ, ಹೀಗಾಗಿ ನೀನು ಗೃಹಸ್ಥ ಎನ್ನುವುದೇನೋ ದಿಟವೇ. ನೀನು ಹರಿ, ಸೀತೆಯು ಸಿರಿ; ನೀನೇ ಹರ, ಧರಣಿಸುತೆಯೇ ಗಿರಿಜಾತೆ; ನೀನೆ ಬ್ರಹ್ಮ, ವೈದೇಹಿಯು ಸರಸತಿ; ದೇವೇಂದ್ರ ನೀನು, ಪೌಲೋಮಿ ಜಗತೀತನೂಭವೆ; ನೀನೇ ಅಗ್ನಿ, ಸ್ವಾಹೆಯು ಜನಕಜೆ; ನೀನೇ ಕಾಲರೂಪ, ತಿರೆಯಣುಗಿಯು ಸಂಯಮಿ; ನೀನೇ ನೈಋತ, ಸೀತೆಯೇ ಕಾಮಿನೀ; ನೀನೇ ವರುಣ, ಭೂಜಾತೆಯೇ ಭಾರ್ಗವಿ; ನೀನೇ ಮರುತ, ಸೀತೆ ಸದಾಗತಿ. ನೀನು ಕುಬೇರ, ಸಂಪತ್ಪ್ರದಾಯಕಿ ಸೀತೆ; ನೀನು ಘನರುದ್ರ, ಜಾನಕಿ ರುದ್ರಾಣಿ; ನೀನು ಸೂರ್ಯ, ಉರ್ವೀಜಾತೆ ಪ್ರಭೆ; ನೀನು ಚಂದ್ರ, ಜಗತಿಯಣುಗಿ ರೋಹಿಣಿ. ಸ್ತ್ರೀಪರವಾದ ವಾಚಕಗಳೆಷ್ಟಿವೆಯೋ ಅವೆಲ್ಲ ಸೀತಾಪರವಾದವು, ಪುರುಷವಾಚಕಗಳೆಷ್ಟಿವೆಯೋ ಎಲ್ಲವೂ ನೀನೇ ಆಗಿದ್ದೀಯೆ. ನಿಮ್ಮಿಬ್ಬರನ್ನುಳಿದು ಬೇರೊಂದು ಇದೆಯೇ? ಚಿತ್ತದ ಆಭಾಸವು ವಿವರಿಸಲಾಗದ್ದು, ಅದರ ಬೀಜದಿಂದಲೇ ಮಹಾತತ್ವವು ಉದಿಸುತ್ತದೆ, ಹಾಗೆ ಉದ್ಭವಿಸಿದವು ಮೂರು ಪ್ರತ್ಯೇಕ ತತ್ವಗಳು, ಅವುಗಳ ಕಾಣುವ ರೂಪಗಳೆ ದೇಹತ್ರಯಗಳು, ಸತ್ತು ಹುಟ್ಟು ಕೋಟಲೆಗಳಿಂದ ಕೂಡಿದ ದೇಹಗಳನ್ನು ಧರಿಸುವ ಜೀವನು ಅಜ್ಞಾನವಶನಾಗಿ ಅದರಂತಹ ಮೂರು ಅವಸ್ಥೆಗಳನ್ನು ಅನುಭವಿಸುತ್ತಾನೆ. ದೇಹವು ಮಡಕೆಯಾದರೆ ಅಹಂ ಎಂಬುದು ಅದರಲ್ಲಿನ ನೀರು, ಅದು ಮಿನುಗಲು ಜೀವವು ಪ್ರಕೃತಿಬಲದಿಂದ ಅಜ್ಞತೆಯಿಂದ ಕೂಡಿ ತನ್ನ ಸ್ವಭಾವವನ್ನು ಮರೆತು ಸುಖದುಃಖಾದಿಗಳಲ್ಲಿ ತೊಳಲುತ್ತದೆ. ವನಜಾಕ್ಷನೇ, ನಿನ್ನ ಪಾದವು ಭಕ್ತಜನಸಂಸರ್ಗಕ್ಕೆ ಬಂದರೆ ಮಾಯೆಯೆಂಬ ಹಗ್ಗವು ಹರಿದು ಮೋಹವು ನೀಗಿ ನಿತ್ಯಸುಖಿಯಾಗುತ್ತಾನೆ. ಆದ್ದರಿಂದ ಭಕ್ತಿಯೇ ಮುಕ್ತಿಕಾರಣ. ಮಹಾಮಹಿಮನೇ, ಮೂರು ತನುಗಳು, ಮೂರು ಅವಸ್ಥೆಗಳು, ಮೂರು ಗುಣಗಳು, ಆರು ಭಾವವಿಕಾರಗಳನ್ನು ಹೊಂದದಿರುವ ನಭನಾದ, ನಿರ್ಮಲ ಜಗತ್ಸಾಕ್ಷಿಯಾದ ಆಪೋಜ್ಯೋತಿರೂಪನೇ ನೀನಲ್ಲವೇ? ನಿನ್ನ ಚಾರುತರ

ಪಾದಪದ್ಮಗಳನ್ನು ನೆನೆಯುವವರ ಪಾದಗಳ ಬಳಿಯಾದರೂ ಮಾಯೆ ಸುಳಿಯಲು ಸಾಧ್ಯವೇ? ಜಗದೀಶ, ಕೃಪೆಯಿಂದ ನನ್ನನ್ನು ಸಲಹು. ಲೋಕಗಳನ್ನು ನಿರ್ಮಿಸುವ ಬ್ರಹ್ಮ ನಿನ್ನ ಮಗ, ಆ ಕಮಲಸಂಭವನೇ ನನ್ನ ತಂದೆ, ಹೀಗಾಗಿ ನಾನು ನಿನ್ನ ಮೊಮ್ಮಗ. ನಿನ್ನ ಪಾದಗಳಿಗೆರಗಿ ನಾನು ಕಿಂಕರನಾಗಿದ್ದೇನೆ. ಶ್ರೀಕರನೇ, ನನ್ನ ಕಡೆ ಕೃಪಾಕಟಾಕ್ಷವನ್ನು ಬೀರು, ನಿನ್ನವನೆಂದು ತಿಳಿದು ನನ್ನನ್ನು ಮಾಯೆ ಸೋಕದ ಹಾಗೆ ಕಾಪಾಡು. ರಘುಕುಲೋತ್ತಂಸನೇ ನನ್ನ ಬಿನ್ನಹವೊಂದಿದೆ, ಕೃಪೆಯಿಟ್ಟು ಲಾಲಿಸು: ದಶರಥ ಮಹಾರಾಜನು ಈ ರಾಷ್ಟ್ರದ ಆಧಿಪತ್ಯವನ್ನು ನಿನಗೆ ಒಪ್ಪಿಸುವನೆಂಬ ವಾರ್ತೆ ಸ್ವರ್ಗವನ್ನೂ ತಲುಪಿದೆ. ದೇವತೆಗಳೆಲ್ಲ ಇದನ್ನು ಕೇಳಿ ಮಿಗಿಲಾದ ಭಯಕ್ಕೊಳಗಾಗಿದ್ದಾರೆ. ದೇವೇಂದ್ರನು ನನ್ನ ಬಳಿ ಬಂದು ನಿನಗೆ ಬಿನ್ನವಿಸಿಕೊಳ್ಳಲು ಕೇಳಿಕೊಂಡಿದ್ದಾನೆ; ನೀನು ವಸುಮತೀಭಾರವನ್ನಿಳುಹಲು ಅಸುರಸಂಹಾರಕ್ಕಾಗಿ ಭೂತಳದಲ್ಲಿ ಜನಿಸಿದ್ದೀಯೆ; ನೀನೇನಾದರೂ ರಾಜ್ಯಾಧಿಪತ್ಯವನ್ನು ವಹಿಸಿಕೊಂಡರೆ ಮುಂದಿನ ಗತಿಯೇನು? ನಿನ್ನಿಂದ ಅಭಯವನ್ನು ಪಡೆಯಲು ನಾನು ನಿನ್ನ ಚರಣಗಳೆಡೆಗೆ ಬಂದಿದ್ದೇನೆ. ನೀನು ಏನು ಉತ್ತರವನ್ನು ಕೊಡುವೆಯೋ ಅದನ್ನು ತಂದೆ ಬ್ರಹ್ಮನಲ್ಲಿಗೆ ಹೋಗಿ ಹೇಳುತ್ತೇನೆ. ನಿನ್ನ ಮಾತು ಎಂದಿಗೂ ಸುಳ್ಳಾಗದು ಎಂಬ ಭರವಸೆಯಿದ್ದರೂ ದೇವವೃಂದವೆಲ್ಲ ಬಂದು ವಿಜ್ಞಾಪಿಸಿಕೊಳ್ಳಲು ತಂದೆಯು ನಿನ್ನ ಚರಣಗಳಲ್ಲಿ ಅರುಹಲು ನನ್ನನ್ನು ಕಳಿಸಿದ್ದಾನೆ. ಮುಂದೇನು ಮಾಡಬೇಕೆಂಬುದು ನಿನಗೇ ತಿಳಿದಿದೆಯಲ್ಲವೇ?" ಎಂದು ತನ್ನ ಮಾತುಗಳನ್ನು ನಿಲ್ಲಿಸಿದ.

ನಾರದನ ಮಾತುಗಳನ್ನು ಕೇಳಿದ ರಘುಕುಲಲಲಾಮನು ನಸುನಗುತ್ತ, "ಈಗ ಆಗಿ ಹೋಗಿರುವುದು ಮುಖ್ಯವಲ್ಲ, ಮುಂದೆ ಆಗಬೇಕಾಗಿರುವುದೇನು ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ಅದಕ್ಕಾಗಿ ಚಿಂತಿಸಬೇಕೇಕೆ? ಖಂಡಿತ ನಾನು ದಶಶಿರನ ಸಂತತಿಯನ್ನು ಈ ಕ್ಷಣವೇ ತರಿದಿಕ್ಕಬಲ್ಲೆನಾದರೂ, ಕಾಲಪ್ರಾರಬ್ಧವು ಕಳೆದ ಮೇಲೆ ಹಾಗೆ ಮಾಡುತ್ತೇನೆ. ಬಿದಿಯಣುಗನೇ, ರಾಜ್ಯದ ಆಸೆ ನನಗೆಲ್ಲಿದೆ? ನಾಳೆ ಬೆಳಗಾದರೆ ನಾನು ಪೂಜ್ಯ ತಂದೆಯ ಆಣತಿಯನ್ನು ಹೊತ್ತು ಸೀತೆ ಲಕ್ಷ್ಮಣರೊಡನೆ ಕಾನನಕ್ಕೆ ಹೋಗುತ್ತೇನೆ. ಹದಿನಾಲ್ಕು ವರ್ಷ ಅಲ್ಲಿರುತ್ತೇನೆ. ಬಳಿಕ ಸೀತೆಯ ಮೇಲಣ ಆಸೆಯಿಡುವ ಕಾರಣದಿಂದ ದಶಕಂಠನನ್ನು ಕೆಡಹಿ, ಅಯೋಧ್ಯೆಗೆ ಬಂದು ಋಷಿಸಂತತಿಗೂ ದೇವಸಮೂಹಕ್ಕೂ ಸಂತಸವನ್ನುಂಟುಮಾಡುತ್ತೇನೆ. ಇದು ನನ್ನ ಮನೋರಥ. ಲೋಕಾನುಸಾರವಾಗಿ ನಾನು ಮನುಷ್ಯನಂತೆ ನಟಿಸುತ್ತ, ಸರ್ವಜನಸಮ್ಮತದಿಂದಲೇ ಕಾಡಿಗೆ ಹೋಗಿ. ಋಷಿಗಣದೊಡನೆ ಸಂಚರಿಸುತ್ತ, ಏಕಾಂತ ಭಕ್ತರನ್ನು ಪೊರೆಯುತ್ತ, ದುಷ್ಟರನ್ನು ತರಿದುಹಾಕುತ್ತ, ದೇವೇಂದ್ರನ ಅಭೀಷ್ಟವನ್ನು ನೆರವೇರಿಸುತ್ತೇನೆ, ಇದು ಖಂಡಿತ" ಎಂದು ಮಾರುತ್ತರವಿತ್ತ. ಈ ಮಾತುಗಳನ್ನು ಕೇಳಿದ ನಾರದ ಸಂತಸಗೊಂಡು ಶ್ರೀರಾಮನ ಅಡಿಗಳಿಗೆರಗಿ ನುತಿಸಿ ಬೀಳ್ಕೊಂಡು, ವೀಣೆಯನ್ನು ಮೀಟಿ ಮಧುರನಾದವನ್ನು ಹೊಮ್ಮಿಸುತ್ತ, ಕಮಲಭವನ ಬಳಿ ಹೋಗಿ ಜಗದೀಶನು ಹೇಳಿದಷ್ಟನ್ನೂ ಆತನಿಗೆ ತಿಳಿಸಿ, ಆತನು ಆಜ್ಞೆಯನ್ನಿತ್ತಂತೆ ದೇವೇಂದ್ರನೆಡೆಗೆ ಹೋಗಿ ಈ ವಿಷಯವನ್ನು ವಿವರವಾಗಿ ನಿರೂಪಿಸಿದ.

ಆನಂತರದಲ್ಲಿ ದೇವಋಷಿಗಳು ಸೇರಿ ಬಹುವಿಧವಾಗಿ ಮಂತ್ರಾಲೋಚನೆಯನ್ನು

ಮಾಡಿ ಸರಸ್ವತಿಯ ಸದನಕ್ಕೆ ಬಂದು ವಂದನೆಗೈದು ಸಂಪ್ರಾರ್ಥನೆಯನ್ನು ಮಾಡಿ ಸದಯೆಯಾದ ಪ್ರಜ್ಞಾನಿಲಯವಾದ ವಾಗ್ದೇವಿಯನ್ನು ಕುರಿತು, "ಸೂರ್ಯೋದಯವಾದರೆ ಶ್ರೀರಾಮನಿಗೆ ಪಟ್ಟಾಭಿಷೇಕವಾಗುತ್ತದೆ; ಇದಕ್ಕೆ ಅಡ್ಡಿಯನ್ನುಂಟುಮಾಡಿ ನಮ್ಮನ್ನು ಸಲಹಬೇಕು" ಎಂದು ಬೇಡಿಕೊಂಡರು. "ಮಂಥರೆಯ ನಾಲಗೆಯ ಮೇಲೆ ನೆಲಸಿ ಮನೋಹರವಾದ ನಾನಾ ನುಡಿಗಳಿಂದ ಅಶ್ವಪತಿಯ ಮಗಳಾದ ಕೈಕೇಯಿಗೆ ಅಜ್ಞಾನವನ್ನು ಬೋಧಿಸಿ ಅವಳ ಮನಸ್ಸಿನಲ್ಲಿ ವಿಕಾರವನ್ನು ಹುಟ್ಟಿಸಿ, ಅವಳಿಂದ ದಶರಥನಿಗೆ ಅಪ್ರಬುದ್ಧತೆಯುಂಟಾಗುವಂತೆ ಮಾಡಿ, ಅವನಲ್ಲಿ ಮೋಹಾಂಧತೆಯನ್ನು ಕವಿಸಿ ರಾಮಾಭಿಷೇಕವನ್ನು ತಪ್ಪಿಸಿ ನಮ್ಮನ್ನು ಸಲಹಬೇಕು" ಎಂದು ಅಂಗಲಾಚಿ ಬೇಡಿಕೊಂಡರು. ಬಿಡುಗಣ್ಣರೊಡೆಯನೇ ಮುಂತಾದ ದೇವತೆಗಳು ಪೊಡಮಟ್ಟು ಈ ಪರಿಯಲ್ಲಿ ಬಿನ್ನವಿಸಲು ವಾಣಿಯು ಅವರ ಮೇಲಿನ ವಾತ್ಸಲ್ಯದಿಂದ ಅದಕ್ಕೊಪ್ಪಿ ಪತಿಯ ಆಜ್ಞೆಯನ್ನು ಪಡೆದು ಅಯೋಧ್ಯಾನಗರಿಗೆ ಧಾವಿಸಿದಳು.

ಸುದತಿಯರ ಮಾಣಿಕ್ಯವೇ, ಇದು ದೇವತತಿಯ ಅಂತರಂಗವಾದರೆ, ಅತ್ತ ಅಯೋಧ್ಯೆಯಲ್ಲಿ ದಶರಥ ಮಹಾರಾಜನು ಏನು ಮಾಡಿದ ಎಂಬುದನ್ನು ಈಗ ವಿವರಿಸುತ್ತೇನೆ, ಕೇಳು. ದಯಾವಂತನಾದ ವಸಿಷ್ಠ ಮಹರ್ಷಿಯು ರಾಮನ ಅರಮನೆಯಿಂದ ಸಂತಸದಿಂದ ಹೊರಟು ದಶರಥ ಮಹೀಪಾಲನ ಅರಮನೆಯನ್ನು ಸೇರಿ ಅವನನ್ನು ಭೇಟಿಮಾಡಿ, ರಾಮನನ್ನು ತಾವು ಕಂಡು ಬಂದ ವೃತ್ತಾಂತವನ್ನು ತಿಳಿಸಿದರು. ಅದರಿಂದ ದಶರಥನ ಹರ್ಷ ಗರಿಗೆದರಿತು. ತಕ್ಷಣವೇ ಮಂತ್ರಿಸಂಕುಲವನ್ನು ಕರೆಸಿ ಮಾರನೆಯ ದಿನ ನಡೆಯಲಿರುವ ಅಭಿಷೇಕೋತ್ಸವಕ್ಕೆ ವಸಿಷ್ಠರು ಹೇಳಿದ ಹಾಗೆ ಎಲ್ಲ ವಸ್ತುಗಳನ್ನೂ, ಆನೆ ಕುದುರೆ ಹಸುಗಳನ್ನೂ ತರಿಸಿ, ಓಲಗಶಾಲೆಯನ್ನು ಸಿಂಗರಿಸಿ ವಿವಿಧ ದೇಶಗಳಿಂದ ನರಪತಿಗಳು ಭೂಸುರರೂ ನೆರೆಯುವಂತೆ ಅಯೋಧ್ಯಾನಗರಿಯ ಬೀದಿಬೀದಿಗಳಲ್ಲಿ ಡಂಗುರವನ್ನು ಹೊಯ್ಸಬೇಕೆಂದು ಆಜ್ಞಾಪಿಸಿದ. ಆನಂತರ ಮಹಾರಾಜನು ಗುರುವಿನ ಅಪ್ಪಣೆ ಪಡೆದು ಆತನು ಹೇಳಿದಂತೆ ಈ ವಿಷಯವನ್ನು ರಾಣಿವಾಸದವರಿಗೆ ತಿಳಿಸಿದ.

ಶ್ರೀರಾಮನು ಮುನಿಯು ಹೇಳಿದಂತೆ ಪರಿಮಳಭರಿತ ನೀರಿನಲ್ಲಿ ಮಜ್ಜನಗೈದು ಸೀತಾಸಮೇತನಾಗಿ ದರ್ಭೆಯ ಹಾಸಿನ ಮೇಲೆ ವೀರಾಸನದಲ್ಲಿ ಕುಳಿತು ಮನಸ್ಸಿನಲ್ಲಿಯೇ ಹಿರಿಯರ ಪಾದಕಮಲಗಳ ಧ್ಯಾನಮಾಡಿದ. ಆ ಬಳಿಕ ಸತಿಸಹಿತವಾಗಿ ಅಗ್ನಿಹೋತ್ರವನ್ನು ಪೂಜೆಗೈದು, ಸುಮಂತ್ರನೇ ಮೊದಲಾದ ಕೆಲವರ ಸಲಹೆಯಂತೆ ಅಗ್ನಿಪುರುಷನಿಗೆ ಹವಿಸ್ಸನ್ನರ್ಪಿಸಿ ಮಿಕ್ಕುದನ್ನು ಮನದನ್ನೆ ಸಹಿತ ಭುಂಜಿಸಿದ. ಹೆಜ್ಜೆಹೆಜ್ಜೆಗೂ ನಾರಾಯಣನ ಪಾದಪಂಕಜಗಳನ್ನು ಸ್ತುತಿಸುತ್ತ, ಆತನ ಮೂರ್ತಿಯನ್ನು ತನ್ನ ಮನಸ್ಸಿನ ತುದಿಯಲ್ಲಿ ನಿಲ್ಲಿಸಿಕೊಂಡು ಚಂಚಲತೆಯನ್ನು ಬಿಟ್ಟು ಚಿತ್ತೈಕಾಗ್ರತೆಯಿಂದ ಭಕ್ತಿಭರಿತನಾಗಿ ಕುಳಿತ. ಬ್ರಹ್ಮನು ಹೇಳಿದ ರೀತಿಯಲ್ಲಿಯೇ ನೇಮದಿಂದಿದ್ದು ಮೊದಲ ಜಾವದ ಬಳಿಕ ಎದ್ದು ಮನೆಯನ್ನು ಸಿಂಗಾರಗೊಳಿಸಲು ಆಗಸದಲ್ಲಿ ಮೇಲ್ಕಟ್ಟುಗಳನ್ನು ಕಟ್ಟಿಸಿ, ನಾನಾ ಪರಿಯಿಂದ ಸದನವನ್ನು ಅಲಂಕರಿಸಿದ. ಮೂಡಲಲ್ಲಿ ನೇಸರು ಕಣ್ತೆರೆಯುವ ಹೊತ್ತಿಗೆ ಮಾಗಧರು ಮಾಡುವ ವಂಶಾವಳಿಯ ಕೀರ್ತನೆಯ ಶಬ್ದದೊಂದಿಗೆ ಪೂರ್ವದಿಕ್ಕಿಗೆ

ಯಥಾವಿಧಿಯಾಗಿ ಸತ್ಕ್ರಿಯೆಗಳನ್ನು ನೆರವೇರಿಸಿದ. ಬೆಳಗಾಗಲು ಅಗ್ನಿಯನ್ನು ಪಟುಗೊಳಿಸಿ, ಭೂಸುರಸಂತತಿಯನ್ನು ಬರಿಸಿ ಪುಣ್ಯಾಹವನ್ನು ಮಾಡಿದ; ಸದನದಲ್ಲಿ ಆಗುತ್ತಿರುವ ಈ ಸ್ವಸ್ತಿವಾಚನ ಮಂತ್ರಘೋಷಗಳು ದಿಕ್ತಟಗಳಲ್ಲಿ ತುಂಬಿಕೊಳ್ಳಲು ಅದನ್ನು ಕೇಳಿದ ಜನರು ತಮ್ಮ ಮನದಿಷ್ಟವು ನಿಜವಾಗುವುದೆಂದು ಸಂಭ್ರಮಗೊಂಡರು. ನಗರದೆಲ್ಲೆಡೆ ಶುಭವಾರ್ತೆಯು ದಟ್ಟವಾಯಿತು; ಜನರು ತಮ್ಮಲ್ಲಿ ತಾವು ಶ್ರೀರಾಮನ ಸದ್ಗುಣಗಳನ್ನು ಹಾಡಿ ಹೊಗಳತೊಡಗಿದರು. ಸಂತಸದಿಂದ ತಮ್ಮ ತಮ್ಮ ಮನೆಗಳ ಮುಂದೆ ಸಾರಣೆ ಕಾರಣೆಗಳನ್ನು ಮಾಡಿ ರಂಗೋಲಿಯಿಟ್ಟು ಶೃಂಗಾರಮಾಡಿ ನಲಿದರು; ಹೊಸ ಬಟ್ಟೆಗಳನ್ನೂ ಒಡವೆಗಳನ್ನೂ ತೊಟ್ಟು ಶೋಭಾಯಮಾನವಾದರು. ಹಿಂದಿನ ಯಾವುದೇ ರಾಜರು ಜಗದ್ವಂದ್ಯನಾದ ದಶರಥನ ಸಮಕ್ಕೆ ಬಂದಾರೆಯೇ? ನಿಡುಗಾಲ ಪೊಡವಿಯನ್ನು ಪರಿಪಾಲಿಸಿ ಮುಪ್ಪು ಬಂದಡರಿರಲು ಮಂದರಸದೃಶನಾದ ರಾಘವನಿಗೆ ಅಭಿಷೇಕವನ್ನು ಮಾಡಿ ಕೃತಕೃತ್ಯನಾಗುತ್ತಾನೆ ಎಂದು ಪುರಜನರು ಹರ್ಷಿಸಿದರು.

ಬುರುಜುಗಳು ಮೇಲ್ಕಟ್ಟುಗಳಿಂದ ಬೆಳಗಿದವು, ಹೊಂದಳಿಗೆಯಲ್ಲಿ ಆರತಿಗಳು ದೇದೀಪ್ಯಮಾನವಾಗಿ ಬೆಳಗಿದವು, ಸೂರ್ಯಚಂದ್ರ ವೀಥಿಗಳಲ್ಲಿ ಸಾಂಬ್ರಾಣಿ ಧೂಪಗಳ ಪರಿಮಳವು ಹಬ್ಬಿತು, ಆ ನಗರವು ಶ್ರೀಹರಿಯ ವೈಕುಂಠದಂತೆ ಪ್ರಕಾಶಮಾನವಾಗಿ ತೊಳಗಿತು. ಆನೆ ಕುದುರೆಗಳ ನೆರವಿ, ರಥಗಳು ಅಂದಣಗಳ ಗುಂಪು, ಪರಿಪರಿಯ ನವರತ್ನಗಳಿಂದ ಅಲಂಕೃತಗೊಂಡ ಮಿರುಮಿರುಗುತ್ತ ಕೇರಿ ಕೇರಿಗಳಲ್ಲಿ ಕುಟುಂಬಸಹಿತ ಸೇರಿದ ಜನಸಂದಣಿಯು ಇಕ್ಕೆಲಗಳಲ್ಲಿ ಸಡಗರದಿಂದ ಒಪ್ಪುತ್ತಿದ್ದರೆ, ಅರಮನೆಯ ಮುಂದುಗಡೆ ಕವಿಗಮಕಿವಾಗ್ಮಿಗಳು, ಪಂಡಿತರು ತಾರ್ಕಿಕರು, ಮರಿದುಂಬಿಗುರುಳಿನ ವಾರಾಂಗನೆಯರು ಸೇರಿದರು. ಉತ್ಸವದ ವಾರ್ತೆಯು ಎಲ್ಲ ದಿಕ್ಕುಗಳಲ್ಲಿ ಹರಡಲು ಬಗೆಬಗೆಯ ರಾಜರುಗಳೂ ಸಾಧುಸಂತರುಗಳೂ ಭೂಸುರರೂ ಸೇರಿದ ಆ ನಗರವು ದೇವತಾಸಮೂಹವು ದೇವೇಂದ್ರನರಸಿಯನ್ನು ನೋಡುವಂತಹ ಕಾತರದಿಂದ ಅರವಿಂದಸಖಗೋತ್ರನಾದ ಶ್ರೀರಾಮನನ್ನು ನೋಡಲು ಕಾಯುತ್ತಿದ್ದರು. ಆವರಲ್ಲಿ ಕೆಲವರು ದಶರಥ ಮಹಾರಾಜನನ್ನು ಹೊಗಳುತ್ತಿದ್ದರೆ, ಮತ್ತೆ ಕೆಲವರು ರಘುವರನ ಗುಣಾತಿಶಯವನ್ನು ಹಾಡುತ್ತಿದ್ದರು, ಮತ್ತೂ ಕೆಲವರು ತಮ್ಮ ಪಾಪಗಳೆಲ್ಲ ನಾಶವಾಗುವುದೆಂದು ಆನಂದಜಲಧಿಯಲ್ಲಿ ಮುಳುಗಾಡುತ್ತಿದ್ದರು. ಹುಡುಗರು ಮಕ್ಕಳು ಹಿರಿಯರು ಕಿರಿಯರು ಹೆಂಗಸರು ಗಂಡಸರು – ಎಲ್ಲ ತಮ್ಮ ಅಭೀಪ್ಸೆಯು ಕೈಗೂಡುವುದೆಂಬ ಹೆಬ್ಬಯಕೆಯಿಂದ ಶ್ರೀರಾಮಪುರನಿಲಯನ ಏಳಿಗೆಯನ್ನು ಹಾರೈಸುತ್ತ ನಿರೀಕ್ಷಿಸುತ್ತಿದ್ದರು.

೪. ಕೈಕೇಯಿಗೆ ಮಂಥರೆಯು ಮಾಡಿದ ಕುಟಿಲ ಬೋಧನೆ

ಭವಾನಿ, ಮುಂದಿನ ಕತೆಯನ್ನು ಕೇಳು: ಮೂರು ಲೋಕಗಳ ಜನರೂ ಅಯೋಧ್ಯಾನಗರಕ್ಕೆ ಬಂದರು; ಎಲ್ಲರೂ ರಾಮನ ಅಭ್ಯುದಯವನ್ನು ಬಯಸುವವರೇ. ಶ್ರೀರಾಮನನ್ನು ಚೆನ್ನಾಗಿ ನಿಟ್ಟಿಸಿ ಕೃತಾರ್ಥರಾಗುವೆವೆಂಬ ಅಭಿಲಾಷೆಯಿಂದಲೇ ಮನ್ನೆಯರೂ ಮುನಿಜನರೂ ಇತರರೂ ತಮ್ಮ ಪತ್ನೀಪುತ್ರ ಸಮೇತವಾಗಿ ಬಂದರು.

ಸಾಗರವು ಹುಣ್ಣಿಮೆಯಂದು ಭೋರ್ಗರೆಯುತ್ತ ಉಕ್ಕೇರುವಂತೆ ನೆರೆದ ಜನಸಂದೋಹದ ನಡುವೆ ಕೊಂಬು ಕಹಳೆಗಳ ನಿರ್ಘೋಷ, ಆನೆಕುದುರೆಗಳ ಘೀಂಕಾರ ಹೇಷಾರವ, ರಥಗಳ ಚೀತ್ಕೃತಿಗಳು ಮಿಳಿತಗೊಂಡಿದ್ದವು. ಮಂಥರೆ ಎಂಬ ಒಬ್ಬಳು ಅರಮನೆಯ ಗೋಪುರವನ್ನೇರಿ ಸುತ್ತಲೂ ನೋಡಿ ಜನರ ಹರ್ಷೋತ್ಸಾಹವನ್ನು ನೋಡಿ ಬೆರಗಾದಳು. ಪನ್ನೀರನ್ನು ಸಿಂಪಡಿಸಿ ದೂಳಡಗಿಸಿದ ರಾಜಪಥಗಳು, ಎತ್ತರದಲ್ಲಿ ಧ್ವಜಗಳು ತೋರಣಗಳನ್ನು ಕಟ್ಟಿ ಶೋಭಿಸುವ ಸೌಧಗಳು, ಕೈಯಲ್ಲಿ ಹೂಮಾಲೆಗಳು ಅರಳುಗಳನ್ನು ಸಂತೋಷದಿಂದ ಹಿಡಿದ ವಿಪ್ರಕುಟುಂಬಗಳು, ಜೋರುದನಿಯಲ್ಲಿ ಆದಿತ್ಯನಾಮವನ್ನು ಸ್ತುತಿಸುವ ಬ್ರಹ್ಮಘೋಷ, ಆನೆಕುದುರೆ ರಥಗಳ ಗುಂಪು – ಇವುಗಳನ್ನು ಕಂಡು ಮಂಥರೆ ಅಚ್ಚರಿವೆತ್ತಳು. ನಗರದಲ್ಲಿ ಹರಡಿರುವ ಶೃಂಗಾರಾತಿಶಯಗಳನ್ನು ನೋಡುತ್ತ ನಗುತ್ತ ನಿಂತಿದ್ದ ಮತ್ತೊಬ್ಬ ದಾದಿಯನ್ನು ಕಂಡು ಸಂತಸಗೊಂಡವಳ ರೀತಿಯಲ್ಲಿ ಮಂಥರೆಯು, "ಇದೇನಮ್ಮ, ಊರೆಲ್ಲ ಇಷ್ಟು ವಿಜೃಂಭಿಸುತ್ತಿದೆ! ನಗರದಲ್ಲಿ ಎಷ್ಟು ಬಗೆಯ ಜನ ಎಷ್ಟು ಬಗೆಯಲ್ಲಿ ಸಂತಸವನ್ನು ಸೂಸುತ್ತಿದ್ದಾರೆ! ಪಟ್ಟದ ರಾಣಿ ಕೌಸಲ್ಯಾದೇವಿಯು ಈ ಬ್ರಾಹ್ಮಣಕುಲಕ್ಕೇನು ಹಣವಿತ್ತು ಈ ಕೆಲಸ ಮಾಡಿಸುತ್ತಿದ್ದಾಳೋ ಹೇಗೆ? ಅಥವಾ ರಾಜರೇ ಈ ಉತ್ಸವವನ್ನು ಏರ್ಪಾಟು ಮಾಡಿದ್ದಾರೆಯೋ, ಇಲ್ಲ ಯಾವುದಾದರೂ ವ್ರತಾಚರಣೆಯಲ್ಲಿ ತೊಡಗಿದ್ದಾರೆಯೋ? ದೇಶದೇಶಗಳ ಜನರೆಲ್ಲ ಇಲ್ಲಿ ನೆರೆದ ಹಾಗಿದೆಯಲ್ಲ, ಇದಕ್ಕೆ ಕಾರಣವೇನು, ಹೇಳು" ಎಂದಳು. ಆಗ ಆ ದಾದಿಯು ನಸುನಗುತ್ತ, "ಅದೇನೂ ಅಲ್ಲ, ಪುಷ್ಯಯೋಗದಲ್ಲಿ ದಶರಥ ಮಹಾರಾಜನು ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ಮಾಡುವ ನೋಟವನ್ನು ಕಣ್ತುಂಬಿಕೊಳ್ಳಲು ಈ ಜನಸಂದಣಿ ಸೇರಿದೆ" ಎಂದುತ್ತರಿಸಿದಳು.

ಈ ಶುಭವಾರ್ತೆಯನ್ನು ಕೇಳಿದಾಕ್ಷಣವೆ ಕಿರಿಯ ಮಹಾರಾಣಿಯ ಸೇವಕಿಯಾದ ಮಂಥರೆಯು ಮ್ಲಾನಳಾಗಿ ಕೋಪದಿಂದ ಕೈಲಾಸದಂತಹ ಆ ಸೌಧದಿಂದ ಸರಸರನೆ ಕೆಳಗಿಳಿದು ತನ್ನ ಒಡತಿಯ ಬಳಿಗೆ ಬಂದಳು. ಆದರೆ ಏನೂ ಮಾತನಾಡಲಾಗದಷ್ಟು ಉಮ್ಮಳ ಮನವನ್ನು ತುಂಬಿಕೊಂಡಿತ್ತು, ಹಾಗಾಗಿ ಒಂದು ಕ್ಷಣ ಸುಮ್ಮನೆ ನಿಂತಳು. ಆನಂತರ ಸಾವರಿಸಿಕೊಂಡು ಗದ್ಗದ ಕಂಠದಿಂದ ತನ್ನ ಮ್ಲಾನತೆಯ ಕಾರಣವನ್ನು ಹೇಳಲುದ್ಯುಕ್ತಳಾದಳು: "ಸಾಮ್ರಾಜ್ಯಸುಖವನ್ನೆಲ್ಲ ಸೂರೆಗೊಂಡವಳ ಹಾಗೆ ಕಿಂಚಿತ್ತೂ ಚಿಂತೆಯಿಲ್ಲದೆ ಸುಮ್ಮನೆ ಮಲಗಿಕೊಂಡಿರುವೆಯಲ್ಲ! ಅಯ್ಯೋ ಮೂಢೆ, ಬೇಗ ಎಚ್ಚರಗೊಳ್ಳು. ನೀನೀಗ ಮಹಾ ದುಃಖಸಾಗರದಲ್ಲಿ ಮುಳುಗಿದ್ದರೂ ಸುಖದಲ್ಲಿ ಮುಳುಗಿದ್ದೇನೆಂಬ ಭ್ರಮೆಯಲ್ಲಿ ಅದರಿಂದ ಪಾರಾಗುವ ಯೋಚನೆಯನ್ನೇ ಮಾಡುತ್ತಿಲ್ಲವಲ್ಲ. ಗ್ರೀಷ್ಮ ಋತುವಿನಲ್ಲಿ ಪ್ರವಾಹ ಬಂದಂತೆ ನಿನ್ನ ಸಂಪತ್ತೆಲ್ಲವೂ ಕೊಚ್ಚಿಕೊಂಡು ಹೋಗುತ್ತಿದೆ" ಎಂದಳು. ಈ ಮಾತುಗಳನ್ನು ಕೇಳಿದ ಕೈಕೇಯಿಯು ಮಂಥರೆಯನ್ನು ಓರೆಗಣ್ಣಿನಿಂದ ನೋಡುತ್ತ, "ಲೋಲಲೋಚನೆಯೇ, ನಗರದಲ್ಲಿ ಮಹಾರಾಜರೂ ಮಹಾಜನರೂ ಸಂತೋಷದಿಂದರುವುದನ್ನು ನೋಡಿ ನನಗೆ ಸಂತಸಪಡುವುದಲ್ಲದೆ ಇನ್ನೇನು!" ಎಂದುಸುರಿದಳು. ಆಗ ಮಂಥರೆಯ ಕೋಪಾಗ್ನಿಯು ಭುಗಿಲೆಂದಿತು, ತನ್ನ ಕಡುಪ್ರೀತಿಯ ಕೈಕೇಯಿಯಲ್ಲಿ ದುರ್ಬೋಧನೆಯನ್ನು ತುಂಬಲು ಉಜ್ಜುಗಿಸಿ ಈ ರೀತಿ


ಉತ್ತರವಿತ್ತಳು: "ಮಹಾರಾಜರು ಕೌಸಲ್ಯೆಯ ಮಗ ರಾಮನಿಗೆ ಯುವರಾಜ್ಯಪಟ್ಟವನ್ನು ಕಟ್ಟಲು ಉದ್ಯುಕ್ತರಾಗಿರುವ ಕೆಟ್ಟ ಸುದ್ದಿ ಕೇಳಿ ಸಂತಾಪಗೊಂಡು ನಿನ್ನ ಹಿತ ಕಾಪಾಡಲೆಂದು ಓಡಿ ಬಂದೆ. ಮಹಾರಾಜರು ಮೃದುವಾದ ಮಾತುಗಳಿಂದ ಹಿತವನ್ನೇ ನುಡಿಯುವವರಂತೆ ನಿನ್ನನ್ನು ಮರುಳುಗೊಳಿಸಿಬಿಟ್ಟಿದ್ದಾರೆ, ಅವರ ಮನಸಸ್ಸಿನಲ್ಲಿರುವುದನ್ನು ಬಿಟ್ಟುಕೊಡುವುದೇ ಇಲ್ಲ. ನಿನ್ನ ಮಕ್ಕಳನ್ನು ನಂತರ ಮನೆಗೆ ಕಳಿಸಿ ನಿಷ್ಕಂಟಕವಾಗಿ ಕೌಸಲ್ಯಾತನಯನಿಗೆ ಪಟ್ಟಗಟ್ಟುವ ಅವರ ವಂಚನೆ ನಿನಗೆ ಅರ್ಥವೇ ಆಗಿಲ್ಲವಲ್ಲ! ಮಹಾರಾಜರು ಕಲುಷಹೃದಯರು, ಕಪಟಗಳ ತವರುಮನೆ, ಭೇದೋಪಾಯಗಳ ನೆಲೆ, ಮಾಯಾನಿಲಯ, ಅವರು ವಂಚಿಸುವುದನ್ನು ತಿಳಿಯುವುದೇ ಕಷ್ಟ. ಅವರು ಆಡಿದುದೆಲ್ಲ ಸತ್ಯವೆಂದು ಭಾವಿಸುತ್ತ, ಅವರು ಹೇಳಿದ್ದಕ್ಕೆಲ್ಲ ಹೂಗುಟ್ಟುತ್ತ ನೀನು ಒಳ್ಳೆ ದಾಸಿಯ ಹಾಗೆ ಇದ್ದುಬಿಟ್ಟಿದ್ದೀಯಲ್ಲ, ಮರುಳೆ. ನೀನು ರಾಜಕುಮಾರಿ, ಈ ನಾಡಿನ ಒಳಿತಿನ ಅಧಿಕಾರಿ, ಆದರೆ ಈಗ ಈ ಮಹಾನಗರದ ಸಿರಿಯು ಅನ್ಯರ ಪಾಲಾಗುತ್ತಿದೆ. ರಾಮನಿಗೆ ರಾಜತ್ವ ದೊರೆತರೆ ಕೌಸಲ್ಯೆಯು ಗುರುತರವಾದ ಸಂಪತ್ತಿನೊಡತಿಯಾಗುತ್ತಾಳೆ, ಇದು ನಿನ್ನ ಮತ್ತು ಭರತರ ಪರಿಹರಿಸಲಸಾಧ್ಯವೆನಿಸುವ ವಿನಾಶದ ಬೀಜವಾಗುತ್ತದೆ. ಇದು ಸ್ಪಷ್ಟವಾಗಿದ್ದರೂ ನೀನೋ ಏನೂ ತಿಳಿಯದವಳ ಹಾಗಿರುವೆಯಲ್ಲ! ನಿನಗೆ ಕಷ್ಟ ಬಂದರೆ ನನಗೂ ಕಷ್ಟವೇ, ನಿನಗೆ ಏಳಿಗೆಯಾದರೆ ಅದು ನನ್ನ ಏಳಿಗೆಯೂ ಹೌದು, ಅದರಿಂದಲೇ ಈ ವಿಷಯವನ್ನು ನಿನಗೆ ತಿಳಿಸಲೆಂದು ಓಡಿಬಂದೆ. ಸ್ವಲ್ಪ ದೂರದೃಷ್ಟಿಯಿಂದ ನಿನ್ನ ಮಗನ ಹಾಗೂ ನಿನ್ನ ಯೋಗಕ್ಷೇಮದ ಬಗೆಯನ್ನು ಕುರಿತು ಆಲೋಚಿಸುವ ಜವಾಬ್ದಾರಿಯನ್ನು ಹೊರು. ರಾಮನಿಗೆ ಪಟ್ಟ ಕಟ್ಟಿಬಿಟ್ಟ ಮೇಲೆ ನಿನ್ನ ಈ ಆಸೆ ನೆರವೇರಲಾರದು" ಎಂದು ಪಟಪಟನೆ ಹೇಳಿದಳು.

ರಾಮನಿಗೆ ಪಟ್ಟವೆಂಬ ಶುಭ ಸುದ್ದಿಯನ್ನು ಕೇಳಿದ ಕೈಕೇಯಿಯು ಮುಖವು ಹುಣ್ಣಿಮೆಯ ಚಂದ್ರನಂತೆ ಅರಳಿತು; ಮನದುಂಬಿ ನಗುತ್ತ, ಈ ಮಹಾ ಸುದ್ದಿಯನ್ನು ಹೇಳಿದುದಕ್ಕೆ ಗೂನಿಗೆ ಸುವರ್ಣದ ವರಹಗಳನ್ನಿತ್ತು ನಲಿದಳು. "ಸೂರ್ಯವಂಶಭೂಷಣನೂ, ಮಹಾಪ್ರಾಜ್ಞನೂ, ದೇವತೆಗಳಿಂದಲೂ ಮುನಿಗಳಿಂದಲೂ ಸ್ತುತನಾದವನೂ, ಸಾಧುಜನರಕ್ಷಕನೂ, ಶರಣಾಗತತ್ರಾಣನೂ, ಸಕಲಭೂಸುರಭರಣನೂ ಆದ ರಾಮನು ದೊರೆಯಾಗುವನೆಂಬ ಮಹಾಶುಭ ನುಡಿಯನ್ನು ಕೇಳಿ ನನಗೆ ಭರತನಿಗೆ ಪಟ್ಟವಾಗುವುದಕ್ಕಿಂತಲೂ ಹೆಚ್ಚು ಸಂತೋಷವಾಗಿದೆ, ಅವನು ನನ್ನ ಪ್ರಾಣಪದಕ" ಎಂದು ಗುಡುಗಿನ ಶಬ್ದವನ್ನು ಕೇಳಿದ ನವಿಲಿನಂತೆ ಕುಣಿದಾಡಿದಳು. ಕೈಕೇಯಿಯ ಈ ಮಾತುಗಳನ್ನು ಕೇಳಿದ ಮಂಥರೆ ಸಿಟ್ಟಿನಿಂದಲೂ ದುಃಖದಿಂದಲೂ ಹಣೆ ಹಣೆ ಚಚ್ಚಿಕೊಂಡಳು. ಆನಂತರ ದೀನಸ್ವರದಿಂದ, "ನಿನ್ನ ಬುದ್ಧಿಗೆ ಕೊಂಚವಾದರೂ ಸೂಕ್ಷ್ಮವು ಅರ್ಥವಾಗುತ್ತಿಲ್ಲವಲ್ಲ. ನೀನು ಕಪಟವರಿಯದ ಮುಗ್ಧೆ, ಮಹಾ ಮೊಸಳೆಯಿರುವ ಆಳವಾದ ಬಾವಿಯಲ್ಲಿ ನೀನು ಇಳಿದಿದ್ದೀಯೆ. ಮಹಾರಾಜರು ನಿನ್ನನ್ನು ಮಾತಿನಿಂದ ಮರುಳುಗೊಳಿಸಿ, ನಿನಗೆ ಸೋತಂತೆ ಕೇಳಿದ್ದನ್ನಿತ್ತು ಹತ್ತಿರದವರೆನ್ನಿಸಿಕೊಂಡು, ಕಪಟದಿಂದ ಸಕಲ ಸಂಪತ್ತನ್ನೂ ಕೌಸಲ್ಯೆಗೆ ನೀಡಿಬಿಡುವವರು. ಅವರ ಮನವಾಳವನ್ನು

ಅರಿಯದ ನೀನು ಅವರನ್ನು ನೀತಿಯುತರೆಂದು ನಂಬಿಕೊಂಡಿರುವೆಯಲ್ಲ! ಇದರಿಂದ ನಿನಗೆ ಕಷ್ಟವುಂಟಾಗುವುದಿಲ್ಲವೇ, ನಿನ್ನ ಮಗನಿಗೆ ಮೋಸವಾಗುವುದಿಲ್ಲವೇ? ತನ್ನ ಮಗನಿಗೆ ಈ ರಾಜ್ಯದ ಅಧಿಕಾರವು ದೊರೆತ ಮೇಲೆ ಆ ಕೌಸಲ್ಯೆಯು ನಿನ್ನನ್ನು ಹೇಗೆ ನಡೆಸಿಕೊಳ್ಳಬಹುದೆಂದು ಯೋಚಿಸು. ಯಾವತ್ತಾದರೂ ಸವತಿಯರು ಹಿತಕರರಾಗುವುದು ಶಕ್ಯವೇ? ಅವರು ಹರಿತವಾದ ಕತ್ತಿಯ ಅಲಗಿನ ಹಾಗೆ. ಹಗೆಗಳೇನು ಬೇರೆಲ್ಲೋ ಇರುತ್ತಾರೆಯೇ? ಬಾಲ್ಯದ ಅಣ್ಣತಮ್ಮಂದಿರೇ ಯೌವನಿಗರಾಗಲು ಟಗರುಗಳಂತೆ ಹೋರಾಡುತ್ತಾರೆ; ಈ ಸತ್ಯ ನಿನಗೆ ತಿಳಿಯದು. ಅಮ್ಮಯ್ಯ, ನಿನ್ನನ್ನು ಮಂಕು ಆವರಿಸಿದೆ, ಅದಕ್ಕೇ ಸವತಿಯ ಮಗನ ಏಳಿಗೆಯನ್ನು ಬಯಸುತ್ತಿದ್ದೀಯೆ, ನಿನ್ನ ಮಗನ ಬೆನ್ನಿಗಿರುವ ಆಪತ್ತನ್ನರಿಯೆ. ಆದ್ದರಿಂದ ನಿನ್ನ ಪಾಲಾಗಬೇಕಾದ ಸಿರಿಯು ಕೊಚ್ಚಿಕೊಂಡು ಹೋಗದ ಹಾಗೆ ತಡೆಯಬೇಕು" ಎಂದು ಉಪದೇಶಿಸಿದಳು. ದುಷ್ಕರ್ಮದ ಫಲವು ಎಂದಿಗಾದರೂ ತಿಳಿಯಾದೀತೇ? ಮತ್ತೂ ತನ್ನ ಬೋಧೆಯನ್ನು ಈ ರೀತಿ ಮುಂದುವರಿಸಿದಳು: "ಲಕ್ಷ್ಮಣ ತುಂಬ ಬುದ್ಧಿವಂತ; ರಾಜನಾಗುವ ರಾಮನನ್ನು ಆಶ್ರಯಿಸಿಕೊಂಡಿದ್ದಾನೆ. ಆದರೆ ನಿನ್ನ ಮಗ ಭರತನಿಗೆ ಶತ್ರುಘ್ನ ಹೊಂದಿಕೊಂಡಿದ್ದಾನೆ. ಅವರಿಬ್ಬರಿಗೆ ಸಿರಿಯು ಕೈಸಾರುತ್ತದೆ, ರಾಜನ ಕರುಣೆ ದೊರಕುತ್ತದೆ. ಹಾಗೆಯೇ ನಗರದ ಪ್ರಜೆಗಳೂ ಪರಿಜನರೂ ಅವರ ವಶದಲ್ಲಿರುತ್ತಾರೆ. ರಾಮ ಶೌರ್ಯವಂತ, ಅವನನ್ನು ಎದುರಿಸುವವರು ಜಗತ್ತಿನಲ್ಲಿ ಯಾರೂ ಇಲ್ಲ, ಅವನಿಗೆ ತಕ್ಕವನು ಲಕ್ಷ್ಮಣ; ಅವರಿಬ್ಬರೂ ಸೇರಿದರೆ ಬೆಂಕಿಯ ಜೊತೆ ಗಾಳಿ ಸೇರಿದಂತಾಗುತ್ತದೆ. ಅಯ್ಯೋ ಮುಗ್ಧೆಯೇ, ನಿನ್ನ ಮಗನಿಗೆ ಭೂಕಾಂತೆಯ ಗಣನೆ ತೃಣಮಾತ್ರವೂ ಸಿಕ್ಕುವುದಿಲ್ಲ, ಭುಜಬಲವಿಲ್ಲದವರಿಗೆ ಅದೆಂದಾದರೂ ದೊರಕುವುದೇ? ಅಂಥವರಿಗೆ ಕರುಣೆ ಶೂನ್ಯ, ಪ್ರೀತಿ ಸೊನ್ನೆ, ದಾಕ್ಷಿಣ್ಯವೂ ದೊರೆಯುವುದಿಲ್ಲ. ಎಲ್ಲರನ್ನೂ ಬರಸೆಳೆದುಕೊಳ್ಳುವುದು ರಾಜಧರ್ಮ ತಾನೇ? ಜಗತ್ತಿನಲ್ಲಿ ರಾಜಕುಲದಲ್ಲಿ ಹುಟ್ಟಿದವರ ನಡವಳಿಕೆಯು ಮಾತ್ಸ್ಯನ್ಯಾಯ ತಾನೇ, ಇದನ್ನರಿಯದೆ ಹೋದೆಯಲ್ಲ, ಮರುಳೆ, ಕುಲಗೆಡುಕಿ ದುರುಳೆ! ರಾಜರು ಜನರ ಮೇಲೆ ತಂಪಾದ ಕೆಂಡವನ್ನು ಕರೆಯುವ ಪಕ್ಷಿಗಳಿದ್ದಂತೆ, ಕೊರಳಲ್ಲಿ ಆತಂಕವನ್ನು ತುಂಬಿಕೊಂಡಿದ್ದರೂ ಮೃದುವಾಗಿ ಮಾತಾಡುವವರು, ಹೃದಯದಲ್ಲಿ ಕತ್ತರಿಯನ್ನಿಟ್ಟುಕೊಂಡು ಕರುಣೆಯನ್ನು ಉಪದೇಶಿಸುವವರು, ಹೀಗೆ ಭೀತಿ ಪ್ರೀತಿಗಳಿಂದ ಅವರನ್ನು ಹುರಿದು ಮುಕ್ಕುತ್ತಾರೆ. ನಿನಗೆ ರಾಜತತ್ವ ತಿಳಿಯದು, ಅವರ ಮಿದು ಮಾತುಗಳಿಗೆ ಮರುಳಾಗಿ ಸಾಧುತನದಿಂದ ಕೂಡಿದ್ದೀಯೆ. ಕೋಪವು ಒಂದು ಬಗೆಯ ಕಾರ್ಯಗಳನ್ನು ಕೈಗೂಡುವಂತೆ ಮಾಡಿದರೆ, ಉಪಚಾರದ ಮಾತುಗಳು ಮತ್ತೊಂದು ಬಗೆಯ ಕೆಲಸಗಳನ್ನು ಆಗುಮಾಡಿಸುತ್ತವೆ, ಮಾಯಾವೇಷ ಕೆಲ ಬಗೆಯ ಕಾರ್ಯಗಳನ್ನು ಸಾಧಿಸಿದರೆ, ಕೃತಕತೆ ಮತ್ತೂ ಕೆಲವನ್ನು ಕೈಗೂಡಿಸುತ್ತದೆ. ಇದನ್ನು ಅನುಸರಿಸುವವರೆಲ್ಲ ವಂಚನೆಯ ತವರು. ಈ ರೀತಿಗಳಿಂದ ಮರುಳುಗೊಳಿಸಿ ಸರ್ವಸ್ವವನ್ನೂ ಸೆಳೆದುಕೊಂಡು ಲೋಕದ ಜನರನ್ನವರು ಕಾಕಭಾಜನರನ್ನಾಗಿಸುತ್ತಾರೆ. ದೊರೆತನದ ದುಷ್ಟಗ್ರಹವು ಆವರಿಸಿದವನು ಮಗ-ಒಡಹುಟ್ಟಿದವನು, ಗೆಳೆಯ-ಬಂಧು, ಒಳ್ಳೆಯವನು-ಗುರು, ತಾಯಿತಂದೆಯರು ಅಲ್ಲಿಯ ಧರ್ಮನೀತಿಗಳನ್ನು ಅರಿತವನೇ? ಅಂಥವನಿಗೆ ಹಿತವರೇ ಇರುವಂತೆನಿಸುವುದಿಲ್ಲ, ತನ್ನನ್ನು ಬಿಟ್ಟರೆ ಪ್ರಾಜ್ಞರಿಲ್ಲ, ತನ್ನ

ನಡತೆಯೇ ಅತ್ಯಂತ ಶ್ರೇಷ್ಠ ಎಂದು ಭಾಷಿಸುತ್ತಾನವನು. ಸಿರಿಗರ ಹೊಡೆದವರು ಅಷ್ಟು ಉನ್ಮತ್ತರು. ಹೆಣ್ಣುಮಕ್ಕಳಿಗೆ ಶತ್ರುಗಳೆಂದರೆ ಸವತಿಯರು ತಾನೇ? ಗಂಡಸರಿಗೆ ಯಮನೆಂದರೆ ದಾಯಾದಿಯಲ್ಲವೇ? ಅದನ್ನು ತಿಳಿಯದ ನೀನು ಮತಿಹೀನೆಯೇ ಸರಿ. 'ಸಮ್ಮಕ್ಕ' ಎನ್ನುತ್ತ ಸವತಿಯ ಜೊತೆ ಇರುತ್ತೀ, ರಾಮನನ್ನು ಅಣುಗ ಎಂದು ಕೊಂಡಾಡುತ್ತೀ, ಕೌಸಲ್ಯೆಯು ಗಂಡನನ್ನು ವಶೀಕರಣ ಮಾಡಿಕೊಂಡು ಮಗನಿಗೆ ದೊರೆತನ ಸಿಕ್ಕುವಂತೆ ಮಾಡಿಕೊಂಡಿದ್ದಾಳೆ. ಗರುಡ ನಾಗೇಂದ್ರರು ಕಶ್ಯಪ ಮುನಿಯ ಮಕ್ಕಳೇ ಅಲ್ಲವೇ, ಆದರೆ ಅವರಲ್ಲಿ ಮಿತ್ರತ್ವವಿದೆಯೇ? ವಿನತೆಯು ಕದ್ರುವಿಗೆ ದಾಸಿಯಾಗಿ ಅನವರತ ಅವಳ ಸೇವೆ ಮಾಡಿದ ಕತೆ ನಿನಗೆ ತಿಳಿಯದೇ? ರಾಜ್ಯಸಿರಿ ರಾಮನಿಗೆ ದೊರೆತ ಮೇಲೆ ಕೌಸಲ್ಯೆ ಕೃತಕೃತ್ಯಳಾಗುತ್ತಾಳೆ" ಎಂದು ಮುಂತಾಗಿ ತೀವ್ರವಾದ ಕೋಪದಿಂದ ಕುಲಿಶಕಠಿಣ ನುಡಿಗಳಿಂದ ಮಂಥರೆಯು ತಿವಿದಳು.

ಈ ಮಾತುಗಳನ್ನು ಕೇಳಿದ ಕೈಕೇಯಿಯು ನಸುನಗುತ್ತ ಅವಳ ಮುಖವನ್ನು ನೋಡಿ, "ಎಲೆ ಪಾಪಾಚಾರಿಯೇ, ರಾಮಚಂದ್ರನಿಗೆ ಒಲಿದ ಸಿರಿಗೆ ಅಸೂಯೆಪಡುತ್ತಿದ್ದೀಯಲ್ಲ. ಅವನಂತಹ ಪರಮಪುರುಷನು ಸಮುದ್ರಪರ್ಯಂತವಾದ ಭೂಮಿಯಲ್ಲಿ ಬೇರಾವನಾದರೂ ಇದ್ದಾನೆಯೇ? ಅವನು ಗುರುಸೇವಾಪರ, ಕೃತಜ್ಞ, ಧರ್ಮಜ್ಞ, ಸಂಯಮಿ, ಸತ್ಯಭಾಷಿ, ಸುಖವಿಕ್ರಮ; ರಾಜನ ಹಿರಿಯ ಮಗ ಅವನು, ಸಕಲಗುಣಭರಿತ, ಭ್ರಾತೃವತ್ಸಲ, ಶಾಂತ; ಅವನು ನಿಜವಾಗಿಯೂ ದೊರೆತನಕ್ಕೆ ಯೋಗ್ಯ, ನೆಲದವರಿಗೆ ಸಮ್ಮತವ್ಯಕ್ತಿ, ಅಂತಹವನಿಗೆ ಸಿರಿ ದೊರೆತರೆ ನೀನೇಕೆ ಸಂತಾಪದಿಂದ ಕರುಬುತ್ತಿದ್ದೀಯೆ. ಇವನು ನನಗೆ ಭರತನಿಗೂ ಇಮ್ಮಡಿ ಪ್ರಿಯನಾದವನು, ಅವರಿಬ್ಬರಲ್ಲಿ ನನಗೆ ಭೇದವೇ ಕಾಣಿಸದು. ಆ ಹುಡುಗ ತನ್ನ ತಾಯಿಗಿಂತಲೂ ಹೆಚ್ಚು ನನ್ನ ಸೇವೆ ಮಾಡುತ್ತಾನೆ; ಭರತನನ್ನು ತನ್ನ ಪ್ರಾಣದಂತೆ ನೋಡಿಕೊಳ್ಳುತ್ತಾನೆ, ಅಂಥವನಿಗೆ ಈ ರಾಜ್ಯ ದೊರೆತರೆ ನನಗೇ ಸೌಭಾಗ್ಯ ದೊರೆತಂತೆ. ನನ್ನ ಹೃದಯದಲ್ಲಿರುವುದನ್ನು ನೀನರಿಯದೆ ರಾಮಚಂದ್ರನನ್ನು ಕುರಿತು ನೀನೇಕೆ ಈ ರೀತಿ ಪರಿತಾಪಪಡುತ್ತಿದ್ದೀಯೆ? ರಾಜನಿಗೆ ನೂರು ಜನ ಮಕ್ಕಳಿದ್ದರೂ ಹಿರಿಯನಿಗೆ ತಾನೇ ಅರಸುತನ ದೊರಕುವುದು? ಅವನ ಸೇವೆ ಮಾಡುವುದು ತಮ್ಮಂದಿರಾದವರ ಕರ್ತವ್ಯ. ದಶರಥ ಮಹಾರಾಜನು ಧರ್ಮನಿಷ್ಠ, ಕುಲಪರಂಪರೆಯನ್ನು ಚಾಚೂ ತಪ್ಪದೆ ಅನುಸರಿಸುವವನು, ಸತ್ಯಾಚಾರಿ, ದೀರ್ಘ ಕಾಲ ರಾಜ್ಯವನ್ನಾಳಿರುವುದರಿಂದ ರಾಮನಿಗೆ ಯೌವರಾಜ್ಯಾಭಿಷೇಕವನ್ನು ಕಟ್ಟುತ್ತಿದ್ದಾನೆ, ಇದನ್ನು ಕೇಳಿ ನೀನೇಕೆ ಅಳುವೆ? ತನ್ನ ಸಕ್ಕರೆಯ ಸವಿನುಡಿಯಿಂದ ಅನುದಿನವೂ ಅಕ್ಕರೆಯನ್ನು ತೋರಿಸುತ್ತಿರುವ ಅಕ್ಕನಿಗೆ ನನ್ನ ಮೇಲೆ ಎಂದಾದರೂ ರೋಷದೋಷಗಳು ಉಂಟಾದಾವೇ? ಪ್ರೀತಿಯ ನೆಲೆವನೆಯೆನಿಸಿದ ರಾಮಚಂದ್ರನು ನನ್ನ ಮಗನೇ ಅಲ್ಲವೇ. ಸೂರ್ಯ ತನ್ನ ದಾರಿಯನ್ನು ತಪ್ಪಬಹುದಾದರೂ ಅವನು ಎಂದಾದರೂ ಭರತನನ್ನು ಮೂಲೆಗುಂಪು ಮಾಡುವ ಆಲೋಚನೆ ಮಾಡಿಯಾನೇ? ಸವಿಯಾದ ಹಾಲಿನಲ್ಲಿ ಹುಳಿಯನ್ನು ಹಿಂಡಲು ಹೊರಟಿದ್ದೀಯಲ್ಲ. ರಾಜನು ಈ ರಾಜ್ಯವನ್ನು ರಾಮನಿಗೆ ಕೊಟ್ಟರೆ ನನ್ನ ಮಗನಿಗೆ ಕೊಟ್ಟ ಹಾಗೆ, ರಾಮನು ನನಗೆ ನೂರ್ಮಡಿ ಅತಿಶಯದ ಮಗ. ಅಯ್ಯೋ ಪಾಪಿ, ಕುಟಿಲಗತಿಯನ್ನು ಹೇಳಿಕೊಡುತ್ತಿದ್ದೀಯಲ್ಲ. ಧರ್ಮವನ್ನು ಮೀರಿ ನಡೆದರೆ ಯಾರು ಮೆಚ್ಚುತ್ತಾರೆ? ಎಲ್ಲರಿಗೂ ಸಮ್ಮತವಾದ ರೀತಿಯಲ್ಲಿ ಬಾಳದಿದ್ದರೆ ಉಭಯಕುಲ ಕೆಡುತ್ತದೆ.



ಮಂಥರೆಯ ಕುಟಿಲ ಬೋಧನೆ

ಅಪಕೀರ್ತಿಯುಂಟಾಗುತ್ತದೆ" ಎಂದು ಸತ್ಯಾಚಾರದ ನುಡಿಗಳನ್ನು ಕೈಕೇಯಿ ಆಡಿದಳು.

ಈ ಮಾತುಗಳಿಂದ ಮಂಥರೆ ಜ್ವಾಲಾಮುಖಿಯಂತಾದಳು; ಹಲ್ಲುಗಳನ್ನು ಕಡಿಯುತ್ತ, ಮಂಕಾದ ಮುಖದಿಂದ ಕೂಡಿ, ಕೊರಗಿನಿಂದ "ಎಲೆ ದೇವಿ, ಕಂದ ಭರತನ ಬಗ್ಗೆ ನನಗೆ ಚಿಕ್ಕಂದಿನಿಂದಲೂ ವಾತ್ಸಲ್ಯ ಬೆಳೆದಿದೆ. ಆ ಕಾರಣದಿಂದ ಈ ಸಲ್ಲದ ಕಾರ್ಯವನ್ನು ನಿಲ್ಲಿಸೆಂದು ಬಂದರೆ ನನ್ನ ಬಗ್ಗೆಯೇ ಅನುಮಾನ ಪಡುತ್ತಿರುವೆಯಲ್ಲ! ನೀನು ನನ್ನ ಒಡತಿ, ನಿನ್ನ ಸುಖದುಃಖಗಳು ನನ್ನವೇ ಎಂದು ತಿಳಿದು ಇಷ್ಟು ದಿನ ನಾನು ನೆಮ್ಮದಿಯಿಂದಿದ್ದೆ. ಮುಂದೆ ಭರತನಿಗಾಗಬಹುದಾದ ಕೋಟಲೆಗಳನ್ನು ಊಹಿಸಿಕೊಂಡು ಕೆಂಡದಲ್ಲಿ ಬಿದ್ದ ಇಲಿಯಂತೆ ಒದ್ದಾಡುತ್ತ ಬಂದು ತಿಳಿಸಿದ ನಾನು ನಿಮ್ಮ ಒಗ್ಗಟ್ಟನ್ನು ಮುರಿಯುವವಳಾಗಿಬಿಟ್ಟೆನಲ್ಲ! ಮೃದುಮಾತುಗಳಿಂದ ಮಮತೆಯನ್ನು ಹುಟ್ಟಿಸಿ ಓಲೈಸಿ ಸರ್ವಸ್ವವನ್ನೂ ಸೆಳೆದೊಯ್ಯುವ ಠಕ್ಕುತನವನ್ನು ನಿನಗೆ ಹೇಗೆ ಅರ್ಥಮಾಡಿಸುವುದು! ಕಂಜಮುಖಿಯರ ವಿಷಮಹೃದಯಗಳನ್ನು, ಅಮೃತಾನ್ನದಲ್ಲಿ ಬೆರೆಸಿದ ನಂಜನ್ನು ಹೇಗೆ ತಾನೇ ಕಾಣಿಸುವುದು; ತಿಂದಲ್ಲದೆ ಅನುಭವವುಂಟಾಗುವುದೇ? ಗಂಡನ ಪ್ರೀತಿ ಸಂಜೆಯ ಬಣ್ಣ, ಮಕ್ಕಳ ಬೆಡಗಿನ ನುಡಿ ಮೋಡದ ಗುಡುಗು, ಸವತಿಯ ಪ್ರೀತಿ ಮಿಂಚಿನ ರೀತಿ, ದಾಯಾದಿಯ ಸರಸ ವಿರಸ – ಈ ಜಗತ್ತಿನಲ್ಲಿ ಇದು ಸತ್ಯ. ಇದೇ ನಿನಗೆ ಪಥ್ಯ ಎನ್ನುತ್ತಿರುವೆ. ನೀನು ಮತಿಹೀನೆ, ಕಾಲಕರ್ಮಾಧೀನಗಳನ್ನು ಮೀರಿದ ನಡೆಯೆಲ್ಲಿದೆ? ಮನುಷ್ಯರ ಬುದ್ಧಿ ಕರ್ಮವನ್ನು ಹೊದ್ದಿ ನಡೆಯುವುದೇ ತಾನೇ? ಅರಸುತನ ರಾಮನಿಗಾದರೆ, ಭರತನಿಗೆ ಚರಭಾವ; ಕೌಸಲ್ಯೆಗೆ ಸಿರಿ, ನಿನಗೆ ದಾಸ್ಯ; ಲಕ್ಷ್ಮಣನಿಗೆ ಆಧಿಕ ಸುಖ, ಶತ್ರುಘ್ನನಿಗೆ ಅಧಿಕ ದುಃಖ. ರಾಜನ ಉಪಾಯವನ್ನರಿಯದೆ ನೀನು ಮೋಸ ಹೋಗುತ್ತಿರುವೆ; ಇದು ಉರಿಯ ಸುಖದ ಆಮಿಷ, ಸಿಂಹಿಯನ್ನು ಮುದ್ದಿಸುವ ಪರಿ. ಜಗತ್ತಿನ ಅಧಿಕಾರವೆಲ್ಲ ರಾಮನಿಗೆ ದೊರಕಿದರೆ ಭರತನು ಈ ಊರಲ್ಲಿಯೇ ಇರಲು ಸಾಧ್ಯವಾಗದು, ಇನ್ನು ಪಲಾಯನ ಮಾಡುವುದೇ ನಿಮ್ಮ ಪಾಡು; ಬಗೆಬಗೆಯ ಭೋಗಗಳನ್ನು ಅನುಭವಿಸಿ ಕಡುಬಡತನದಲ್ಲಿ, ಬಂಧುಗಳ ಮಧ್ಯದಲ್ಲಿ ಬಿಡಿಗಾಸಿಲ್ಲದೆ ಬದುಕುವುದು ವ್ಯರ್ಥ ಎಂದು ಅರಿಯಲಾರದ ಮುಗ್ಧೆ ನೀನು. ತನ್ನನ್ನು ತಂದೆಗಿಂತಲೂ ಮಿಗಿಲಾದ ಗೌರವದಿಂದ ನಡೆಸಿಕೊಳ್ಳುವ ಲಕ್ಷ್ಮಣನಿಗೆ ರಾಮ ಅಪಕಾರವನ್ನು ನೆನೆಸಲಾರ, ಆದರೆ ಭರತನಲ್ಲಿ ದೋಷಗಳನ್ನೇ ಕಾಣುತ್ತ ಅವನನ್ನು ನಾಶಮಾಡಿಬಿಡುವುದು ನಿಶ್ಚಿತ. ಇದು ನಿನಗೆ ತಿಳಿಯುತ್ತಿಲ್ಲ. ಈ ಲೋಕದಲ್ಲಿ ಜನರಿಗೆ ತಮ್ಮ ಪುಣ್ಯಾಪಾಪಗಳ ಫಲವನ್ನು ಅನುಭವಿಸಿದಲ್ಲದೆ ಬೇರೇನು ಗತಿಯಿದೆ? ನರನ ಬುದ್ಧಿಯು ವಿಧಿಲಿಖಿತವನ್ನೇ ಅನುಸರಿಸುತ್ತದೆ ಎಂಬುದು ಗಾದೆಮಾತು, ಅದೆಂದೂ ಸುಳ್ಳಾಗದು. ಅಧಿಕಾರವೆಷ್ಟಿದ್ದರೇನು, ಕರ್ಮಫಲವನ್ನು ಅನುಭವಿಸಿದ ಮೇಲೆಯೇ ಸಾವು ಬರುವುದು? ನಾನು ಹೇಳಿದ ಬುದ್ಧಿಮಾತು ಕಿವುಡನಿಗೆ ಹೇಳಿದ ಮಾತಿನಂತೆ, ದರಿದ್ರನ ಕೋಪಕ್ಕೆ ಬರಿ ಹಲ್ಲುಕಡಿಯುವುದರಲ್ಲಷ್ಟೇ ಪರ್ಯವಸಾನ, ಬರೀ ಕಾನನರೋದನ. ಜಗತ್ತಿನಲ್ಲಿ ಜೀವರಿಗೆ ಸುಖದುಃಖವುಂಟಾಗುವುದು ಜಗದೀಶನ ಆಜ್ಞೆಗನುಗುಣವಾಗಿಯೇ ಹೊರತು ಜಡಮತಿಗಳ ಮಂತ್ರತಂತ್ರಗಳಿಂದ ಅಲ್ಲ. 'ಅವನು' ಕೈಯಲ್ಲಿ ಎಲ್ಲರ ಕರ್ಮಫಲವನ್ನು ಹಿಡಿದಿದ್ದಾನೆ; ಗಾಳಿಪಟದ ಚಲನೆಯಲ್ಲಿ ಅದನ್ನಾಡಿಸುವವನ ಕೈ

ಕಾಣಿಸದು. ಬಡವರ ಕಷ್ಟಗಳನ್ನು ನೆನೆಸಿಕೊಂಡರೆ ಅವು ಪರಿಹಾರಗೊಳ್ಳುವುದೇ? ದೇಹವನ್ನಾವರಿಸಿರುವ ರೋಗವನ್ನು ನಿವಾರಿಸಲು ಔಷಧಿಯನ್ನು ಕುಡಿಸಿದರೆ ಅದು ನಾಲಗೆಗೆ ಕಹಿಯಾಗಿರುತ್ತದೆ, ಅದೇ ಅಪಥ್ಯವಸ್ತುಗಳು ರುಚಿಕರವೆನಿಸುತ್ತವೆ. ನನ್ನ ಮಾತುಗಳ ಕಾಠಿಣ್ಯ ನಿನಗೆ ಕೊನೆಯಲ್ಲಿ ಅರ್ಥವಾಗುತ್ತದೆ; ಇನ್ನೊಂದೆರಡು ವರ್ಷಗಳಲ್ಲಿ ಕೌಸಲ್ಯೆಯ ಮೆಲ್ನುಡಿಗಳ ಮಾಧುರ್ಯ ಹೇಗಿರುತ್ತದೆಂಬುದನ್ನು ನೀನೇ ಕಾಣುವೆ. ಸೂರ್ಯ-ತಾವರೆಗಳ ಅವಿನಾಭಾವಸಂಬಂಧವು ಕಮಲವು ನೀರೊಳಗಿರುವವರೆಗೆ, ನೀರು ಬತ್ತಿದಾಗ ಅವರಿಬ್ಬರಲ್ಲಿ ಶತ್ರುತ್ವವುಂಟಾಗುವುದಲ್ಲವೇ? ನಿನಗೆ ಸಂಪತ್ತಿರುವವರೆಗೂ ಕೌಸಲ್ಯೆ ರಾಮರು ನಿನ್ನೊಡನೆ ಸ್ನೇಹದಿಂದಿರುತ್ತಾರೆ, ನಿನಗೆ ಆಪತ್ತು ಅಡಸಿದಾಗ ಅವರೇ ನಿನ್ನನ್ನು ಚುಚ್ಚದೆ ಹಿತವರಾಗಿಯೇ ಇರುತ್ತಾರೆಯೇ? ಹಗೆಯೇ ಹಿತಕರ ಎಂದು ಉಪೇಕ್ಷೆಮಾಡಿದರೂ, ಸಮಯ ಬಂದಾಗ ಅವನೇ ಅಪಕಾರ ಮಾಡದಿರುತ್ತಾನೆಯೇ? ಬೆಂಕಿಯನ್ನು ಬಗಲಲ್ಲಿ ಅವಿತಿಟ್ಟುಕೊಂಡರೆ ಅದು ಮೈಯನ್ನು ಸುಡದೆ ಇರುತ್ತದೆಯೇ? ಮರ್ಮವನ್ನರಿಯದೆ ನೀನು ರಾಮನಿಗೆ ಸಂಪತ್ತು ಉಂಟಾಗುವಂತೆ ಮಾಡುತ್ತಿದ್ದೀಯೆ, ತನಗೆ ಸಿರಿ ಬಂದಾಗ ಅವನು ನಿನ್ನ ಮೊಗದ ಸಿರಿಯನ್ನು ಕಳೆಯದೆ ಇರುತ್ತಾನೆಯೇ? ಮುಖದಂತಿರುವುದೆಂದು ತಾವರೆ ಬೀಜವನ್ನು ನೀರಲ್ಲಿ ಬಿತ್ತಿ ಪೋಷಿಸಿದರೆ, ಹೂಬಿಟ್ಟು ಮುಖದ ಅಂದವನ್ನೇ ಸೆಳೆಯದಿರುವುದೇ? ಕ್ರೂರವಾದ ಮಾತುಗಳನ್ನು ಕೇಳಿ ಜನರು ಅಂಜುತ್ತಾರೆ, ಮೃದುಮಧುರವಾಣಿಯಿಂದ ಅಶಕ್ತಿಯನ್ನು ಹೊಂದುತ್ತಾರೆ. ಪ್ರೀತಿಯಿಂದ ತನ್ನ ತೊಡೆಯ ನಡುವೆ ಜಿಂಕೆಯನ್ನಿಟ್ಟುಕೊಂಡ ಚಂದ್ರನನ್ನು ಮೃಗಲಾಂಛನ ಎನ್ನುತ್ತಾರೆ; ಅದರಂತೆಯೇ ಅದರ ಕುಲವನ್ನು ಹಿಂಸಿಸುವ ಸಿಂಹವನ್ನು ಮೃಗಪತಿ ಎನ್ನುತ್ತಾರೆ. ಈ ಧರ್ಮವನ್ನು ತಿಳಿದು ಆಲೋಚಿಸು. ಹೆಚ್ಚಿಗೆ ಮಾತಿನಿಂದೇನು. ರಾಮನಿಗೆ ರಾಜ್ಯ ದೊರೆತರೆ ಅವನ ಅರಸಿಯರು ನಲಿಯುತ್ತಾರೆ, ಕಷ್ಟಪಡುತ್ತ ಭರತ ಹಾಳಾಗಲು ಅವನ ಸತಿಯು ಅಳಲಿ ತೊಳಲುತ್ತಾಳೆ. ನೆಲಕ್ಕೆ ಆಸೆಪಡದೆ ಸಿರಿಯನ್ನು ಸವತಿಯ ಮಗನಿಗೆ ಒಪ್ಪಿಸಿಕೊಡುವುದು ಸರಿಯಲ್ಲ. ರಾಮಪುರದರಸನ ಆಜ್ಞೆಯನ್ನು ಮೀರಿ ಹಿಂದಿನ ಜನ್ಮದ ಕರ್ಮಫಲವನ್ನುಣ್ಣದೆ ತಪ್ಪಿಸಿಕೊಳ್ಳುವುದು ನಿನ್ನ ಕೈಯಲ್ಲಿಲ್ಲ" ಎಂದು ಮಂಥರೆ ದೀರ್ಘವಾಗಿ ಕೈಕೇಯಿಗೆ ಉಪದೇಶ ಮಾಡಿದಳು.

೫. ಶಾಂತಿಕರ್ಮದಲ್ಲಿ ಬೇತಾಳ ಮೂಡಿದಂತೆ ರಾಮಪಟ್ಟಾಭಿಷೇಕಕ್ಕೆ ಕೈಕೇಯಿ ತಂದೊಡ್ಡಿದ ವಿಘ್ನ

ಗಿರಿರಾಜತನೂಜೆಯೇ ಕೇಳು, ಮಂಥರೆಯು ಮಾಯಾಜಾಲವನ್ನು ಬೀಸುವಂತಹ ನುಡಿಗಳನ್ನು ಅಶ್ವಪತಿಯಣುಗಿಗೆ ಹೇಳಿ ಅವಳ ಮನಸ್ಸನ್ನು ಕಲಕಿ ಕಿವಿಗೆ ಅಮೃತವನ್ನೆರೆಯುವ ಬಗೆಯಲ್ಲಿ ಉಪಾಯದಿಂದ ಮನಸ್ಸಿಗೆ ಹಿತಕಾರಿಯಾಗುವಂತೆ ಮಾಡಿ ಕೈಕೇಯಿಯ ಮನಸ್ಸಿನಲ್ಲಿ ದುರ್ಬೋಧನೆಯನ್ನು ಬಿತ್ತುವ ತಂತ್ರ ಹೂಡಿದಳು: "ಕೇಳಮ್ಮ, ರಾಮನಿಗೆ ರಾಜ್ಯ ದೊರೆತರೆ ಭರತನಿಗೆ ಊಳಿಗವೇ ಗತಿ, ಇಲ್ಲದಿದ್ದರೆ ಅವನು ಯತಿವೇಷವನ್ನು

ತೊಟ್ಟು ಕಾಡಿಗೆ ಹೋಗಿ ಎಲೆವನೆಯನ್ನು ಸೇರಬೇಕು; ನೀನು ರಾಜಮಾತೆಯ ದಾಸಿಯರ ಜೊತೆಯಲ್ಲಿರಬೇಕು, ನಿನ್ನ ಸೊಸೆಯರು ಹಾಕಿದ ಕೂಳನ್ನುಂಡು ಸೀತೆ ಹೇಳಿದ ರೀತಿಯಲ್ಲಿ ಸೇವೆಮಾಡುತ್ತಲಿರಬೇಕು. ತನ್ನ ಮಕ್ಕಳೇ ತನಗೆ ಆಗುವುದಿಲ್ಲವೆಂದ ಮೇಲೆ ಉಳಿದವರ ಮಕ್ಕಳು ತನಗೆ ಹಿತವನ್ನುಂಟುಮಾಡುತ್ತಾರೆಯೇ? ಇದನ್ನರ್ಥಮಾಡಿಕೊಂಡು ಬೇರೆಯವರು ಮಾಡುವುದಕ್ಕೆ ಬಾಯಿಬಿಡದೆ ನಿನ್ನ ಹಿತವನ್ನು ನೀನು ಕಾಪಾಡಿಕೋ. ಭರತನನ್ನು ಪೊರೆ, ಬರುವ ಸಿರಿಯನ್ನು ನೂಕದೆ ಮಗನನ್ನು ಭೂಪಾಲನನ್ನಾಗಿಸುವ ಉಪಾಯವನ್ನು ಬೇಗ ಆಲೋಚಿಸು. ದೊರೆತನವು ನಿನ್ನ ವಶವಾದ ಬಳಿಕ ಇಡೀ ಲೋಕವೇ ನಿನ್ನ ಸೇವಕರಂತೆ ನಡೆದುಕೊಳ್ಳುತ್ತಾರೆ, ಸ್ವಲ್ಪ ಕಾಲದಲ್ಲಿಯೇ ನಿಮ್ಮ ಭಾಗ್ಯ ಶಾಶ್ವತವಾಗುತ್ತದೆ. ರಾಮನಿಗೆ ಪಟ್ಟಕಟ್ಟಲು ಸಿದ್ಧಪಡಿಸಿಕೊಂಡಿರುವ ವಸ್ತುಸಮಸ್ತವನ್ನು ಬಳಸಿಕೊಂಡು ಜನರ ಒಪ್ಪಿಗೆಯನ್ನು ಪಡೆದು ಭರತನಿಗೆ ರಾಜ್ಯಾಧಿಪತ್ಯದ ಅಭಿಷೇಕವನ್ನು ಮಾಡಿ, ಆನಂತರ ರಾಮನಿಗೆ ಹದಿನಾಲ್ಕು ವರ್ಷಗಳ ಕಾಲ ಕಾಡಿನಲ್ಲಿ ಯತಿಯ ಹಾಗೆ ವಾಸಿಸುವಂತೆ ನೋಡಿಕೋ, ಆಗ ಇಡೀ ನಾಡು ನಿನ್ನ ವಶವರ್ತಿಯಾಗುತ್ತದೆ. ಇಡೀ ನಾಡು ನಿನ್ನ ಮಗನ ಪರವಾದ ಬಳಿಕ ನೀನು ಬಯಸಿದ್ದು ಕೈಗೂಡುತ್ತದೆ. ಕೌಸಲ್ಯಾಸುತನು ಕಾಡಿನಿಂದ ವಾಪಸು ಬಂದ ಮೇಲೂ ಭೃತ್ಯಭಾವದಿಂದ ಇರಬೇಕೇ ಹೊರತು, ರಾಜ್ಯವನ್ನು ವಶಪಡಿಸಿಕೊಳ್ಳಬೇಕೆಂದು ಪ್ರಯತ್ನಗಳನ್ನು ಮಾಡಿದರೂ ಮನೋರಥವು ಸಿದ್ಧಿಸಲಾರದು. ಆದ್ದರಿಂದ ಅಂಬುಜಾಕ್ಷಿಯೇ, ಚೆನ್ನಾಗಿ ಆಲೋಚಿಸಿ ಲಕ್ಷ್ಮಿಯನ್ನು ಬರಮಾಡಿಕೊಳ್ಳುವ ಉಪಾಯವನ್ನು ಮಾಡು. ನನ್ನ ಮನಸ್ಸಿನಲ್ಲಿರುವುದನ್ನೆಲ್ಲ ನಿನ್ನ ಮುಂದೆ ಬರಿದುಮಾಡಿಕೊಂಡಿದ್ದೇನೆ" ಎಂದು ವಿವಿಧ ಕುಹಕೋಪಾಯಗಳನ್ನು ಹೇಳಿದಾಗ ಕೈಕೇಯಿಗೆ ಅವೆಲ್ಲ ಸತ್ಯವೇ ಎನ್ನಿಸಿ ಒಂದು ಕ್ಷಣ ದಾಸಿಯನ್ನು ಸುಮ್ಮನೆ ನಿಟ್ಟಿಸಿ ನೋಡಿದಳು.

ಹಾಲಿನಲ್ಲಿ ಹುಳಿ ಹಿಂಡಿ ಕಲಕಿದ ಹಾಗೆ ಹೃದಯವನ್ನು ವಿಕಾರಗೊಳಿಸಲು ಕೇಕಯ ರಾಜಕುಮಾರಿಯು ನಿಬ್ಬೆರಗಾಗಿ ಮುಂದುಗಾಣದೆ ಅತಿ ಚಿಂತೆಯಿಂದ ತನ್ನ ಕಾಲ್ಬೆರಳನ್ನು ನೋಡಿ ಡೋಲಾಯಮಾನವಾದ ಮನಸ್ಸಿನಿಂದ ಕೂಡಿ, ರಾಮನಿಗೆ ಪಟ್ಟವಾಗದ ಹಾಗೆ ಮಾಡುವುದು ಹೇಗೆಂದು ಯೋಚಿಸುತ್ತ ಮಂಥರೆಯನ್ನು ಕುರಿತು ಹೀಗೆಂದಳು: "ನನಗೆ ಹಿತಕಾರಿಯಾದ ಕೆಲಸವನ್ನು ಆಲೋಚಿಸಿ ತಿಳಿಹೇಳುವವರು ನೀನಲ್ಲದೆ ನನಗೆ ಬೇರೆ ಯಾರಿದ್ದಾರೆ. ನೀನೇ ನನಗೆ ತಾಯಿ, ಸೋದರಿ. ತನ್ನ ಮಗನು ಭೂಮಿಯೊಡೆಯನಾಗಬೇಕೆಂದು ದಶರಥ ಮಹಾರಾಜನು ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡು, ಮುನಿಗಳ ಅನುಮತದಿಂದ ಪುಷ್ಯಯೋಗದಲ್ಲಿ ಪಟ್ಟವನ್ನು ಕಟ್ಟಲು ನಿರ್ಧರಿಸಿದ್ದಾನೆ. ಅದಕ್ಕೆ ತಡೆಯೊಡ್ಡುವುದು ಹೇಗೆ? ಈ ವಸುಧೆಗೆ ಅಧಿನಾಥಳೆನ್ನಿಸಿ ನನ್ನ ಭಾಗ್ಯವನ್ನು ರಕ್ಷಿಸುವುದಾದರೆ ನನ್ನ ತನು ಮನ ಧನ ಮಗ ಸರ್ವಸ್ವವೂ ನಿನ್ನ ಅಧೀನವಾಗುತ್ತೇವೆ. ಏನು ಮಾಡಬೇಕೆಂಬುದನ್ನು ಜ್ಞಾನನಿಧಿಯೇ, ಕಾಲತ್ರಯ ಅವಬೋಧಶಾಲಿಯೇ, ನಿಧಾನವಾಗಿ ತಿಳಿಸು" ಎಂದು ಬೇಡಿಕೊಳ್ಳಲು ಮಂಥರೆಯು ಎಚ್ಚರಿಕೆಯಿಂದ ಒಡತಿಗೆ ಈ ರೀತಿ ಹೇಳಿದಳು: "ನಿನ್ನ ಕಣ್ಣಿಗಿಂತಲೂ ಹೆಚ್ಚಾಗಿ ನನ್ನನ್ನು ಸಲಹಿರುವ ಕಾರಣದಿಂದ ನೀನೀಗ ಮಾಡಬೇಕಾದ ಕೆಲಸವನ್ನು ಗುಟ್ಟಾಗಿ ಒರೆದು

ನಿನ್ನನ್ನು ಸೌಭಾಗ್ಯದ ಒಡತಿಯನ್ನಾಗಿ ಮಾಡುತ್ತೇನೆ. ನಿನ್ನ ಮಗನಾದ ಭರತನಿಗೆ ಪಟ್ಟಾಭಿಷೇಕ, ರಾಮನಿಗೆ ಅರಣ್ಯವಾಸವಾಗುವ ಹಾಗೆ ರಾಜನನ್ನು ಒಪ್ಪಿಸುವ ಬಗೆಯನ್ನೀಗ ಹೇಳುತ್ತೇನೆ, ಕೇಳು. ಹಿಂದೆ ಇಂದ್ರ–ಶಂಬರರ ನಡುವೆ ಘೋರ ಯುದ್ಧ ನಡೆದಾಗ, ಇಂದ್ರನು ಗಾಸಿಗೊಂಡು ಬಂದು ಬೇಡಿಕೊಳ್ಳಲು ದಶರಥನು ಸುರಪನ ಸಹಾಯಕ್ಕೆ ಹೊರಟನಲ್ಲವೇ; ರಕ್ಕಸರ ಪಡೆಯೇ ಹಿಂಬಾಲಿಸಿ ಬರಲು ದಶರಥನು ಅವರೊಡನೆ ಹೋರಾಡುತ್ತಿರುವಾಗ ದಶರಥನ ತೇರಿನ ಅಚ್ಚು ಮುರಿಯಲು ಜೊತೆಯಲ್ಲಿದ್ದ ನೀನು ಧೈರ್ಯಗುಂದದೆ ತೇರಿಗೆ ನಿನ್ನ ಕೈಗಳನ್ನೇ ಆಸರೆಯಾಗಿ ನೀಡಿದುದನ್ನು ಸಂತಸದಿಂದ ಕಂಡ ನೃಪತಿಲಕನು ನಿನ್ನನ್ನು 'ನಾರಿಕುಲದರಸಿ, ಪತಿಹಿತೈಷಿಣಿ' ಎಂದು ಹೊಗಳಿ, ಯಾರಿಂದಲೂ ಆಗದ ಉಪಕಾರವನ್ನು ಮಾಡಿದ್ದರಿಂದ ಸೂರ್ಯವಂಶದ ಕೀರ್ತಿ ಹೆಚ್ಚಿತೆಂದು ನಿನಗೆ ಎರಡು ವರಗಳನ್ನಿತ್ತನಲ್ಲವೇ? ಆಗ ನೀನು ನಸುನಗೆಯಿಂದ ಕೂಡಿ 'ಆ ಎರಡು ವರಗಳೂ ಸದ್ಯಕ್ಕೆ ನಿನ್ನ ಅಧೀನದಲ್ಲಿಯೇ ಇರಲಿ, ನನಗೆ ಬೇಕಾದ ಸಮಯದಲ್ಲಿ ಕೇಳಿ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದ್ದು ನೆನಪಿದೆ ತಾನೇ? ಅದರಂತೆ ಭರತನಿಗೆ ರಾಜ್ಯ, ರಾಮನಿಗೆ ಹದಿನಾಲ್ಕು ವರ್ಷ ಕಾಂತಾರವಾಸ ಈ ವರಗಳನ್ನು ನೀಡುವಂತೆ ಮಹಾರಾಜರಲ್ಲಿ ಏಕಾಂತದಲ್ಲಿರುವಾಗ ಕೇಳಿಕೋ. ತಪನವಂಶಾಗ್ರಣಿಯು ಕೊಟ್ಟ ಮಾತಿಗೆ ತಪ್ಪಲಾರ; ನಿನ್ನಲ್ಲಿ ಅಮಿತ ಮೋಹದಿಂದ ಕೂಡಿರುವುದರಿಂದ ಕೋಪಮಾಡಿಕೊಳ್ಳಲಾರ. ಆದ್ದರಿಂದ ಹೋಗು, ಕೋಪಗೃಹವನ್ನು ಸೇರಿಕೋ, ಅಲಂಕಾರವನ್ನೆಲ್ಲ ಕೆಡಿಸಿಕೊಂಡು ನೆಲವನ್ನು ನೋಡುತ್ತ ಮೌನದಿಂದ ಬಿಗಿಗೊಂಡು ಕುಳಿತು, ಮಹಾರಾಜನು ಆಡಬಹುದಾದ ಸಮಾಧಾನದ ಮಾತುಗಳಿಗೆ ಕಿವಿಗೊಡದೆ ಮನಸ್ಸನ್ನು ಗಟ್ಟಿ ಮಾಡಿಕೊಂಡು ಮುಂದಾಗಲಿರುವ ಶುಭವನ್ನು ಕುರಿತು ಯೋಚನೆ ಮಾಡು. ಮಹಾರಾಜರ ಚಿತ್ತ ನಿನ್ನಲ್ಲಿ ಕೀಲಿಸಿಹೋಗಿದೆ, ತನ್ನ ಜೀವಕ್ಕಿಂತ ಹೆಚ್ಚಾಗಿ ನಿನ್ನನ್ನು ಪ್ರೀತಿಸುತ್ತಾರೆ, ಹಾಗಾಗಿ ನಿನಗೆ ಎದುರುತ್ತರ ನೀಡಲಾರರು. ನಿನ್ನ ಬೇಡಿಕೆಯನ್ನು ಈಡೇರಿಸುತ್ತಾರೆ, ನಿನಗಾಗಿ ಬೆಂಕಿಯಲ್ಲಾದರೂ ಹಾರಿಕೊಳ್ಳುತ್ತಾರೆ. ಮಣಿಧೇನು ಐಸಿರಿ ಏನನ್ನು ಕೊಡುವೆನೆಂದರೂ ಒಪ್ಪಬೇಡ, ನಿನ್ನ ನುಡಿಗಳು ಮೃದುವಾಗದಿರಲಿ. ಏನೇ ಆಸೆಗಳನ್ನು ತೋರಿಸಿದರೂ ನೀನು ಮಾತ್ರ ಅವರೆಡೆಗೆ ಪ್ರೀತಿಯ ನೋಟವನ್ನು ಬೀರಬೇಡ; ಶೋಕಾಕುಲಿತೆಯಾಗಿ ನಾನಾ ಬಗೆಯ ಕಠಿಣೋಕ್ತಿಗಳಿಂದ ಚುಚ್ಚಿ ಪ್ರೀತಿ ತೋರಿಸದಿದ್ದರೆ ನೀನು ಬೇಡಿದ್ದನ್ನಿತ್ತು ನಿನ್ನ ಒಲುಮೆಯನ್ನು ಗಳಿಸಲು ಬಯಸುತ್ತಾರೆ. ನೀನು ಮಾತ್ರ ನಿನ್ನ ವರಗಳನ್ನು ಬೇಡುವುದನ್ನು ಮರೆಯಬೇಡ: ರಾಮನಿಗೆ ಹದಿನಾಲ್ಕು ವರ್ಷಗಳ ವನವಾಸ, ಭರತನಿಗೆ ಪಟ್ಟಾಭಿಷೇಕ. ನೀನು ಬಯಸಿದ್ದು ನೆರವೇರುವುದರಲ್ಲಿ ಅನುಮಾನವೇ ಬೇಡ. ನಾಡೆಲ್ಲ ವಶವಾದ ಬಳಿಕ ಯಾರೇನು ಮಾಡಲು ಸಾಧ್ಯ? ಅರಣ್ಯವಾಸದಿಂದ ವಾಪಸಾದ ನಂತರವೂ ದೊರೆತನವು ನಿನ್ನ ಮಗನ ವಶದಲ್ಲೇ ಇರುವುದು, ಅದೇ ರೂಢಿಯಾಗುತ್ತದೆ. ನಾನು ಹೇಳಿದುದನ್ನು ಮರೆಯದೆ ಮಾಡಿ ಸುಖವನ್ನು ಹೊಂದು" ಎಂದು ಕುಬ್ಜೆಯು ಅಶ್ವಪತಿಕುವರಿಗೆ ಮಹಾಮಾಯೆ ಆವರಿಸಿದಂತೆ ಬೋಧಿಸಿದಳು.

ಮಂಥರೆಯ ಮಂದರದಂತಹ ವಚನರಚನೆಗಳನ್ನು ಕೇಳಿ ಕೈಕೇಯಿಯು ವಿಸ್ಮಿತಳಾಗಿ ಒಂದರೆಗಳಿಗೆ ಮೌನವಾಗಿ ಆಲೋಚನೆಯಲ್ಲಿ ಮುಳುಗಿದಳು. ಈ ಕುಳ್ಳಿಗೆ ಇಷ್ಟೊಂದು ಬುದ್ಧಿವಂತಿಕೆ ಎಲ್ಲಿಂದ ಬಂತು, ಸರಸ್ವತಿಯ ಅಂಶವನ್ನು ಹೊಂದಿ ಅವತರಿಸಿದ್ದಾಳೆಯೋ ಹೇಗೆ, ಇಲ್ಲದಿದ್ದರೆ ಈ ವಿವೇಕ ಎಲ್ಲಿಂದ ಬರಬೇಕು ಎಂಬ ಅಚ್ಚರಿಯೊಡನೆ ಸಂತಸಗೊಂಡು ಅವಳನ್ನು ಕೊಂಡಾಡಿದಳು. "ಮಗನನ್ನು ಸೋದರ ಮಾವನ ಮನೆಗೆ ಕಳಿಸಿ ಹಿರಿಯ ಮಗನಿಗೆ ರಾಜ್ಯವನ್ನೊಪ್ಪಿಸುವ ಮಹಾರಾಜನ ಹುನ್ನಾರವನ್ನು ಭೇದಿಸಿದ ನೀನು ನನ್ನ ಭಾಗ್ಯದೇವತೆ, ನನ್ನ ಏಳಿಗೆಯ ಹಿತಕಾರಿ; ನನ್ನ ಮಗನಿಗೆ ರಾಜ್ಯ ಬರುವುದೆಂದು ಅತಿಶಯವಾಗಿ ಸಂತೋಷಗೊಂಡಿರುವೆ. ಶಂಬರನ ಮಾಯೆ, ಕಾಲನೇಮಿಯ ಕಪಟ, ಮಾಯಾಸುರನ ಡಂಭ, ಮಾರೀಚನ ಕೃತ್ರಿಮ ಮುಂತಾದ ಕಪಟೋಪಾಯವೆಲ್ಲವನ್ನೂ ಒಳಗೊಂಡ ಬುದ್ಧಿ ನಿನ್ನದು. ನೀನು ಕುಟಿಲಗಳ ಮನೆ, ಕಪಟಮಂದಿರ, ತಟವಟದ ಮಠ, ಕೃತ್ರಿಮದ ನಿಲಯ, ಮಾಯಾಸಮೂಹ ಸಂಪುಟ, ಅನೃತದಾಗಾರ, ವಂಚನಾಲಯ, ಮಹಾ ಮಿತ್ರಭೇದದ ತವರ್ಮನೆ, ಪುಟಮಾಯಗಳ ತಾಣ ಎನ್ನಿಸುವ ಗೂನಿಯೇ, ನನ್ನ ಮಗನಿಗೆ ರಾಜ್ಯಾಧಿಪತ್ಯ ಕೈಸೇರಿದಾಕ್ಷಣವೇ ನಿನಗೆ ರೇಸಿಮೆ ಸೀರೆಯುಡಿಸಿ ನಗರದೆಲ್ಲೆಡೆ ಮೆರೆಸುತ್ತೇನೆ, ಮಣಿ ಧನ ಹಸುಗಳನ್ನು ಕೊಡುತ್ತೇನೆ. ನೀನು ಹೇಳಿದಂತೆಯೇ ಮಹಾರಾಜರ ಎದುರಿಗೆ ನಡೆದುಕೊಳ್ಳುತ್ತೇನೆ; ನನ್ನ ಮನದಿಷ್ಟವನ್ನು ನೆರವೇರಿಸದಿದ್ದರೆ ಅವರೆದುರಿನಲ್ಲಿ ಪ್ರಾಣವನ್ನೇ ಬಿಡುತ್ತೇನೆ, ನೋಡುತ್ತಿರು" ಎಂದು ಮಹಾರಾಣಿಯು ಕೋಪವನ್ನು ಸುತ್ತಿಕೊಂಡಳು. ಒಡವೆಗಳನ್ನೆಲ್ಲ ಕಿತ್ತೆಸೆದು, ಕೊಳಕು ಸೀರೆಯನ್ನುಟ್ಟು, ತಲೆಗೂದಲನ್ನು ಕೆದರಿಕೊಂಡು, ಮುಖವನ್ನು ಗಂಟಿಕ್ಕಿಕೊಂಡು, ಕೋಪಾಗಾರವನ್ನು ಹೊಕ್ಕು ಹಾಸಿಗೆಯನ್ನು ಅಸ್ತವ್ಯಸ್ತಗೊಳಿಸಿ, ನೆಲದ ಮೇಲೆ ಬೋರಲು ಬಿದ್ದುಕೊಂಡು ಬಿಕ್ಕಳಿಸತೊಡಗಿದಳು. ಏನೇ ಆಗಲಿ ಹಿಡಿದ ಕಾರ್ಯವನ್ನು ಸಾಧಿಸದೆ ಬಿಡಬಾರದು, ಅರಸನೇನಾದರೂ ಬಗ್ಗದಿದ್ದರೆ ಬದುಕುಳಿಯದೆ ನಾಥನ ಅಡಿಗಳಲ್ಲಿಯೇ ಪ್ರಾಣವೊಪ್ಪಿಸಬೇಕು. ಮನೋರಥವು ಈಡೇರುವವರೆಗೂ ಅನ್ನಾಹಾರವನ್ನು ತೊರೆಯುತ್ತೇನೆ, ಮಹಾರಾಜರು ಏನು ತಂದಿಟ್ಟರೂ ದೂರೀಕರಿಸುತ್ತೇನೆ, ಎಷ್ಟೇ ಸವಿನುಡಿಗಳನ್ನಾಡಿದರೂ ಅದಕ್ಕೆ ಸೊಪ್ಪು ಹಾಕುವುದಿಲ್ಲ, ಭರತನಿಗೆ ರಾಜ್ಯ, ರಾಮನಿಗೆ ವನವಾಸ – ಇವು ಕೈಗೂಡುವವರೆಗೂ ಏನನ್ನೂ ಮುಟ್ಟುವುದಿಲ್ಲ ಎಂದು ಶಪಥ ಮಾಡಿದಳು. ಹೀಗೆ ಅತಿರೋಷಾವೇಷವನ್ನು ಹೊದ್ದು ಹಲ್ಲು ಕಡಿಯುತ್ತ, ಭುಜಗಳನ್ನು ಕೊಡವಿಕೊಂಡು, ಕೋಪಾಗ್ನಿಯು ಬುಸುಗುಡುತ್ತಿರಲು, ಅಡಿಯಿಂದ ಮುಡಿಯವರೆಗೆ ಮೈ ಕುದಿಯುತ್ತಿರಲು, ಇಂದೀವರಾಕ್ಷಿಯು ಶ್ರೀರಾಮಪುರದರಸನಿಗೆ ಕೇಡನ್ನು ಬಯಸಿದಳು.

೬. ಕೈಕೇಯಿಯು ತನ್ನ ವಾಗ್ಬಾಣಗಳಿಂದ ಮಹಾರಾಜನನ್ನು ವ್ಯಥೆಗೊಳಿಸಿದುದು

ನಗರಾಜತನೂಜೆಯೇ ಕೇಳು, ರಾಮಾಭಿಷೇಕಕ್ಕೆ ಲಗುಬಗೆಯಿಂದ ಅನುವಾಗ ಬೇಕೆಂದು ತನ್ನ ಪರಿಜನರಿಗೆ ಅಪ್ಪಣೆಯಿತ್ತು ಹಗುರ ಮನಸ್ಸಿನಿಂದ ದಶರಥ ಮಹಾರಾಜನು ನಗುವ ಅರಮನೆಯ ಗಿಳಿಗಳು, ಕುಣಿಯುವ ನವಿಲುಗಳು, ಸೊಬಗನ್ನು ಹೊಂದಿದ ಬೊಂಬೆಗಳು ಇವುಗಳನ್ನು ಕಂಡು ಹರ್ಷಿತನಾಗಿ ತನ್ನರಮನೆಯನ್ನು ಹೊಕ್ಕ. ಸರಿ, ಸಂಭ್ರಮ ಆರಂಭವಾಯಿತು: ಒಂದೆಡೆ ನರ್ತಿಸುವವರು, ಮತ್ತೊಂದೆಡೆ ಹಾಡುವವರು, ಮಗುದೊಂದೆಡೆ ಹಾಸ್ಯಪಾತ್ರಗಳನ್ನು ಅಭಿನಯಿಸುವವರು, ಮತ್ತೂ ಒಂದೆಡೆ ವಿವಿಧ ಜೀವರಾಶಿಗಳಂತೆ ನಟಿಸುವವರು – ಇವುಗಳು ಸೊಗಯಿಸಿದವು. ಇವುಗಳನ್ನು ಕಾಣುತ್ತ ಮಹಾರಾಜನು ತನ್ನ ಆತ್ಮಸತಿಯನ್ನು ಹುಡುಕಾಡಿದ. ಮೂದಲಿಸುವ ಗಿಳಿಗಳು, ವಂದಿಸುವ ನವಿಲುಗಳು, ಆದರಿಸುವ ಬೊಂಬೆಗಳು ಇವುಗಳನ್ನು ಕಂಡು ನಸುನಗುತ್ತ ಮಹಾರಾಜನು ಕೈಕೇಯಿಯನ್ನರಸಿ, ಅರಮನೆಯಲ್ಲೆಲ್ಲೂ ಆಕೆಯನ್ನು ಕಾಣದೆ ಮನಸ್ಸಿನಲ್ಲಿ ಒಂದು ಬಗೆಯ ಅನುತಾಪವುದಿಸಿತು. ಅಷ್ಟು ಹೊತ್ತಿಗೆ ಕಾಣಿಸಿದ ದಾದಿಯೊಬ್ಬಳನ್ನು ಕಿರಿಯ ರಾಣಿ ಎಲ್ಲಿರುವಳೆಂದು ವಿಚಾರಿಸಿದ. ಸಾಮಾನ್ಯವಾಗಿ ತಾನು ಬರುವುದನ್ನರಿತ ಮಹಾರಾಣಿಯು ತನ್ನ ಪಾದುಕೆಗಳನ್ನು ಹಿಡಿದು, ಆನಂತರ ಹಸ್ತಲಾಘವವಿತ್ತು ಅಪ್ಪಿಕೊಂಡು ನಸುನಗುತ್ತ ಕರೆದೊಯ್ದು ಸಡಗರದಿಂದ ಕುಳ್ಳಿರಿಸಿ ತನ್ನ ಮುಖ ಕಣ್ಣು ಗಲ್ಲಗಳನ್ನು ಚುಂಬಿಸಿ ತಾಂಬೂಲದ ಗುಟುಕನ್ನು ನೀಡಿ ಉಪಚರಿಸುವಂತಹವಳು; ಈಗ ಎಲ್ಲಿ ಎಂದು ತಬ್ಬಿಬ್ಬುಗೊಂಡ. ಆಗ ಆ ದಾಸಿಯು, "ಮಹಾಪ್ರಭುಗಳೇ, ದೇವಿಯರು ಕೋಪಗೊಂಡು ತಮ್ಮ ಒಡವೆಗಳನ್ನೆಲ್ಲ ಕಿತ್ತೆಸೆದು ಶೋಕಗೃಹದಲ್ಲಿ ನೆಲದ ಮೇಲೆ ಮೌನದಿಂದ ಮಲಗಿದ್ದಾರೆ. ಅವರ ಮನಸ್ಸಿನಲ್ಲೇನಿದೆ ಎಂಬುದು ಯಾರಿಗೂ ತಿಳಿಯದು. ತಮ್ಮ ಪಾದದಲ್ಲಿ ತಮ್ಮ ಮನೋರಥವನ್ನು ಅರಿಕೆಮಾಡಿಕೊಳ್ಳಬೇಕೆಂಬುದು ಅವರ ಇಚ್ಛೆಯಿದ್ದಂತಿದೆ" ಎಂದು ಬಿನ್ನವಿಸಿಕೊಂಡಳು.

ಈ ಮಾತುಗಳನ್ನು ಕೇಳಿ ಮಹೀಪತಿಯ ಹೃದಯವು ಸಿಡಿಲಿನ ಹೊಡೆತಕ್ಕೆ ಸಿಕ್ಕ ಬೆಟ್ಟದಂತಾಯಿತು. ನಾರಿಯರ ಬಲೆಗೆ ಸಿಕ್ಕಿದ ಪುರುಷನು ಎಂತಹ ವೀರನಾದರೂ ನೀರಿನಂತೆ ಕರಗಿಹೋಗುತ್ತಾನೆ. ಶೋಕಗೃಹದೆಡೆಗೆ ಸಾಗುತ್ತ ಮಹಾರಾಜನ ಮನಸ್ಸಿನಲ್ಲಿ ಅವಳಿಗೇಕೆ ಕೋಪ ಬಂದಿದೆಯೋ, ಯಾರಿಂದ ಯಾವ ಅಪರಾಧ ಸಂಭವಿಸಿದೆಯೋ, ತನ್ನ ಪ್ರಾಣಪ್ರಿಯೆಯು ಹೀಗೆ ಮುನಿಸಿಕೊಂಡರೆ ತಾನು ಹೇಗೆ ತಾನೇ ನೆಮ್ಮದಿಯಿಂದಿರಲಿ ಎಂದು ಅವನಲ್ಲಿ ತಳಮಳವು ದಟ್ಟವಾಯಿತು. ಕೈಕೇಯಿಯಿದ್ದ ಕೋಣೆಯನ್ನು ಸಮೀಪಿಸಿದ ರಾಜನು ಬಂದು ನೋಡಿದರೆ ಸ್ವರ್ಗಚ್ಯುತ ಅಪ್ಸರೆಯಂತೆ ನೆಲದ ಮೇಲೆ ಬಿದ್ದುಕೊಂಡಿದ್ದ ಮಹಾರಾಣಿಯನ್ನು ಕಂಡು ಹೌಹಾರಿದ. ಬ್ರಹ್ಮದೇವನಲ್ಲಿ ಮುನಿಸಿಕೊಂಡು ಸಗ್ಗದಿಂದ ನುಗ್ಗಿಬಂದ ನುಡಿವೆಣ್ಣೋ, ದೇವೇಂದ್ರನಿಂದ ಸಿಡಿದು ಬಂದ ಶಚೀದೇವಿಯೋ, ಭರ್ಗನನ್ನು ತೊರೆದು ಬಂದ ಹಿಮವಂತನ ಮಗಳೋ, ಮುಗಿಲಿನಿಂದ ಕಳಚಿಬಿದ್ದ ಮಿಂಚೋ, ಕೆಳಗೆ

ಬಿದ್ದ ಕಿನ್ನರಿಯೋ ಎಂಬಂತೆ ನೆಲದ ಮೇಲೆ ಮಲಗಿದ್ದ ಕಡು ಚೆಲುವೆ ಕೈಕೇಯಿಯನ್ನು ಕಂಡು ಮಮ್ಮಲ ಮರುಗಿದ. "ಕಾಮನ ಮದ್ದಾನೆಯೇ, ನನ್ನ ಪ್ರಾಣವಲ್ಲಭೆಯೇ, ನಿನಗೆ ಯಾವ ಕಾರಣದಿಂದ ಕೋಪ ಬಂದಿದೆ? ಮೃದುವಾದ ಮಾಲತೀ ಬಳ್ಳಿಯಂತಹ ನಿನ್ನ ಮೈಯು ಏಕೆ ಬಾಡಿಹೋಗಿದೆ? ಒಡವೆಗಳನ್ನೇಕೆ ಕಿತ್ತೆಸೆದಿರುವೆ? ನೆಲದ ಮೇಲೇಕೆ ಮಲಗಿದ್ದೀಯೆ? ಈ ಲೋಕವು ನಿನಗೇನು ಅಪಕಾರ ಮಾಡಿದೆ? ನನ್ನ ಮನಸ್ಸಿನಲ್ಲಿ ಚಿಂತೆಯು ತುಂಬಿ ಕೊರಗುವಂತೆ ಏಕೆ ಮೌನದಿಂದಿದ್ದೀಯೆ? ನೀನೇನು ಕೇಳಿದರೂ ಮಾಡುತ್ತೇನೆ: ಬಡವರನ್ನು ಹಣವಂತರನ್ನಾಗಿಸಬೇಕೇ, ರಾಜನನ್ನು ದರಿದ್ರನನ್ನಾಗಿಸಬೇಕೇ, ಮಹಾ ಅಪರಾಧವನ್ನೆಸಗಿದವನನ್ನು ಕಾಪಾಡಬೇಕೇ, ವಿನಯವಂತನನ್ನು ಶಿಕ್ಷಿಸಬೇಕೇ, ನನ್ನಾಣೆ, ನೀನು ಹೇಳಿದರೆ ಹಾಗೆಯೇ ಮಾಡುತ್ತೇನೆ. ನನ್ನ ಪ್ರಾಣದೊಡತಿಯೇ, ಏನು ಬೇಕೋ ಕೇಳು, ಮಾತನಾಡದೆ ಸುಮ್ಮನೇಕೆ ಇರುವೆ? ಹೊಸ ಶಿರೀಷದ ಹೂವಿನಂತಹ ದೇಹವನ್ನು ನೆಲದಲ್ಲಿ ಈಡಾಡಿ ಧೂಳು ತುಂಬಿದ ನಿನ್ನ ಮುಖಚಂದ್ರನನ್ನು ಕೈಗಳಿಂದೇಕೆ ಮುಚ್ಚಿಕೊಂಡಿದ್ದೀಯೆ? ನಿನ್ನ ಬವಣೆಯನ್ನು ನೋಡಿ ನನ್ನ ಮನಸ್ಸು ದುಃಖಪೂರಿತವಾಗಿದೆ; ಈ ತಲ್ಲಣದಿಂದ ನನ್ನನ್ನು ಪಾರುಮಾಡು, ನೀನು ಬೇಡಿದ್ದನ್ನು ನೆರವೇರಿಸುತ್ತೇನೆ. ನೀನಲ್ಲದೆ ನನ್ನ ತನು ಮನ ಜೀವನ ಆದವರು ಬೇರೆ ಯಾರಿದ್ದಾರೆ? ನಾನು ನಿನ್ನ ಸೇವಕ, ನಿನಗಿಂತ ಅಧಿಕವಾದುದು ಬೇರಾವುದೂ ಇಲ್ಲ. ನಿನಗೆ ಬೇಕಾದುದನ್ನು ಬೇಡು, ನಿನ್ನ ಅಭೀಷ್ಟವನ್ನು ಸಲ್ಲಿಸುತ್ತೇನೆ. ನಚ್ಚಿದವನನ್ನು ಚುಚ್ಚುವುದೆ, ವನಜಾಕ್ಷಿ? ಕೊಟ್ಟ ಮಾತನ್ನು ತಪ್ಪುವುದಿಲ್ಲ. ಜಗತ್ತಿನಲ್ಲಿ ವಿಷಯಲಂಪಟರಿಗೆ ವಿವೇಕ ಕಡಿಮೆ; ಸ್ಮರವಶನಾದವನ ಬುದ್ಧಿಯು ಮಸುಳಿಸುತ್ತದೆ. ಕೊಂಕಣ ಸೌವೀರ ಸೌರಾಷ್ಟ್ರ ಮಗಧ ತೆಂಕ ವಂಗ ಅಂಗ ಕೋಸಲ ಕಾಶಿ ಮುಂತಾದ ಅಖಿಲ ಭೂತಳದ ಧನವನ್ನು ಶಂಕಿಸದೆ ನೀಡುತ್ತೇನೆ, ನಾನು ವೃದ್ಧ, ಕರುಣಪಾತ್ರನಾದ ಕಿಂಕರ ಎಂದು ತಿಳಿದು ಮಮತೆಯಿಂದ ನಿನ್ನ ಕರಕಮಲದಿಂದ ನನ್ನ ಎದೆಯನ್ನು ನೇವರಿಸಿ ಸಾಂತ್ವನಗೊಳಿಸು ಅರಸಿ, ಮೋಹದ ಸರಸಿ" ಎಂದು ದಶರಥ ಮಹಾರಾಜನು ಪರಿಪರಿಯಾಗಿ ಅಂಗಲಾಚಿದ.

ತನ್ನನ್ನು ಮೋಹಿಸುವ ಇನಿಯನು ಈ ಪರಿಯಲ್ಲಿ ಇನಿನುಡಿಗಳಿಂದ ಉಪಚರಿಸುವುದನ್ನು ಕಂಡು ವನಿತೆಯು ಅವನ ಎದೆಯು ಝಲ್ಲೆನಲು ಕ್ರೂರತರವಾದ ನುಡಿಗಳಿಂದ ಹೀಗೆಂದಳು: "ನನಗೆ ಯಾರೂ ಅಪಕಾರ ಮಾಡಿಲ್ಲ, ನನ್ನನ್ನು ಯಾವ ರೋಗ ಗ್ರಹಗಳೂ ಪೀಡಿಸುತ್ತಿಲ್ಲ, ನನಗೆ ನೀನು ಈ ಹಿಂದೆ ಕೊಟ್ಟಿರುವ ವರಗಳನ್ನು ಕೊಡು, ಅವುಗಳು ಯಾವುದೆಂದು ಕೇಳಿದರೆ ಹೇಳುತ್ತೇನೆ." ಮಡದಿಯಾಡಿದ ಮಾತನ್ನು ಕೇಳಿ ಉತ್ಸಾಹಗೊಂಡು ಅವಳನ್ನು ಮೇಲೆತ್ತಿ ಕುಳ್ಳಿರಿಸಿ ಸಮಾಧಾನ ಮಾಡಿದ ಭೂಪತಿಯು ಪ್ರೀತಿಯಿಂದ, "ಕೇಳೆನ್ನ ಮನದನ್ನೆಯೆ. ನಿನಗಿಂತ ಬೇರೆ ಪ್ರಾಣ ನನಗೆಲ್ಲಿಯದು? ನಾನು ಧರ್ಮಕಾರ್ಯಗಳನ್ನು ಮಾಡಿ ಗಳಿಸಿದ ಪುಣ್ಯದ ಮೇಲಾಣೆ, ನೀನು ಕೇಳಿದ್ದನ್ನು ಕೊಡದೆ ಇರುವುದಿಲ್ಲ. ನನಗೆ ಜೀವಕ್ಕಿಂತ ಮಿಗಿಲಾದವನು ಶ್ರೀರಾಮ ಎಂಬುದು ನಿನಗೂ ಗೊತ್ತು, ಅವನಿಗಿಂತ ಮಿಗಿಲಾದ ವಸ್ತುವು ನನಗೆ ಯಾವುದೂ ಇಲ್ಲ, ಅವನ ಮೇಲೆ ಆಣೆಯಿಟ್ಟು ಹೇಳುತ್ತೇನೆ: ಈ ಭೂಮಿ ಧನ

ಜೀವ ಮುಂತಾದುವನ್ನು ಕೇಳಿದರೆ ಕೊಡುತ್ತೇನೆ, ಈ ಮಾತು ಹುಸಿಯಲ್ಲ, ನಮ್ಮ ಕುಲಾಧಿನಾಥನಾದ ಪಾವನನಾದ ಅರುಣನ ಆಣೆ, ಕೇಳು, ನೆರವೇರಿಸುತ್ತೇನೆ" ಎಂದು ಒಪ್ಪಿಸಿದ. ಆತನಾಡಿದ ಮಾತುಗಳನ್ನು ಕೇಳಿದ ಭೃಂಗಕೇಶಿಯು, "ಸುರ ಗಾಂಧರ್ವ ಯಕ್ಷ ಕಿನ್ನರ ಸೂರ್ಯ ಚಂದ್ರ ನಕ್ಷತ್ರ ಹರಿಹರ ದೇವತೆಗಳು ವಿಧಿ ಭುವನ ಸಾಕ್ಷಿಯಾಗಿ ನೀನು ನನಗಿತ್ತ ವರಗಳನ್ನು ನೀಡೆಂದು ನಾನು ಮತ್ತೆ ಕೇಳಿಕೊಳ್ಳುತ್ತಿದ್ದೇನೆ. ಈ ಹಿಂದೆ ದೇವಾಸುರರ ನಡುವಣ ಯುದ್ಧದಲ್ಲಿ ನಿನ್ನನ್ನು ಬದುಕಿಸಲೆಂದು ಮುರಿದ ಅಚ್ಚಿಗೆ ನಾನು ಕರಗಳನ್ನಿತ್ತೆ; ಯುದ್ಧದಲ್ಲಿ ಗೆಲುವು ದೊರೆಯಲು ನನ್ನ ಕಾರ್ಯವನ್ನು ಮೆಚ್ಚಿ ನೀನು ನನಗೆ ಎರಡು ವರಗಳನ್ನು ನೀಡಿದ್ದೆ, ಅವುಗಳನ್ನು ನಿನ್ನ ಬಳಿಯೆ ಬಿಟ್ಟು ಬೇಕಾದಾಗ ಕೇಳುವೆನೆಂದು ನಾನು ಹೇಳಿದ್ದೆ. ಈಗ ಅವುಗಳನ್ನಿತ್ತು ಮೂಲೋಕಗಳು ಮೆಚ್ಚುವಂತೆ ನಿನ್ನ ಮಾತನ್ನುಳಿಸಿಕೋ. ನಿನ್ನ ಮಾತುಗಳನ್ನುಳಿಸಿಕೊಳ್ಳದಿದ್ದರೆ ನಾನು ತೃಣಸಮಾನವಾದ ನನ್ನ ಪ್ರಾಣವನ್ನು ನಿನ್ನ ಪಾದಮೂಲದಲ್ಲಿಯೇ ಬಿಟ್ಟುಬಿಡುತ್ತೇನೆ" ಎಂದು ತನ್ನ ಮಾತಿನಿಂದ ರಾಜನನ್ನು ಕಟ್ಟಿಹಾಕಿದಳು. ಆನಂತರ, "ಈಗ ನಡೆಸಿರುವ ಸಿದ್ಧತೆಗಳಲ್ಲಿಯೇ ಭರತನಿಗೆ ಯುವರಾಜ್ಯಾಭಿಷೇಕವನ್ನು ನೆರವೇರಿಸುವುದು, ಮತ್ತು ನಾರಸೀರೆಗಳನ್ನುಟ್ಟು ಮುನಿಗಳ ರೀತಿಯಲ್ಲಿ ಶ್ರೀರಾಮನು ಹದಿನಾಲ್ಕು ವರ್ಷಗಳ ಕಾಲ ಅಡವಿಗಳಲ್ಲಿ ಸಂಚರಿಸುವಂತೆ ಮಾಡಿ ಕುಲ ಶೀಲ ಸತ್ಯಗಳ ಮೂಲಕ ಧರ್ಮವನ್ನು ಉದ್ಧರಿಸಿ ರಾಜರುಗಳಲ್ಲಿಯೇ ನೀನು ಹೆಚ್ಚು ಪ್ರಸಿದ್ಧಿಯನ್ನು ಪಡೆಯುವುದು" – ಎಂಬ ತನ್ನ ಬಯಕೆಯನ್ನು ವ್ಯಕ್ತಪಡಿಸಿದಳು.

ಗರ ಸೇರಿದ ಗಾಳಿ ಸೋಕಿದಾಗ ಜೀವವು ಪರವಶಗೊಳ್ಳುವ ರೀತಿಯಲ್ಲಿ ಸತಿಯ ಕಡುವಾತುಗಳನ್ನು ಕೇಳಿದ ರಾಜನು ಮೂರ್ಛಾಗತನಾದ; ಆನಂತರ ಮೂರ್ಛೆ ತಿಳಿದು ತನ್ನಲ್ಲಿಯೇ ಚಿಂತಾಕ್ರಾಂತನಾಗಿ, 'ಇದೇನು ಕರಣವಿಕಾರವೋ, ಕನಸೊ, ನೆನಸಿನ ಭ್ರಮೆಯೊ, ಹೀಗಾಗಲು ಕಾರಣವೇನು' ಎಂದು ಕಣ್ಣುಗಳನ್ನು ತೆಗೆದು ಎದುರಿಗಿದ್ದ ಹೆಂಡತಿಯನ್ನು ನೋಡಿ ಹುಲಿಯನ್ನು ಕಂಡ ಜಿಂಕೆಯಂತೆ ಬೆದರಿದ. ಮನದಲ್ಲಿಯೇ ಪರಿತಪಿಸುತ್ತ, ನಿಟ್ಟುಸಿರು ಬಿಡುತ್ತ, ಕಣ್ಣುಗಳನ್ನು ಕಿಸಿದು ಕಾಂತೆಯನ್ನು ನೋಡುತ್ತ, ಮತ್ತೆ ಮಹಾಮೋಹದಿಂದ ಮೈಮರೆದು ಪ್ರಜ್ಞೆಯನ್ನು ಕಳೆದುಕೊಂಡ. ಆನಂತರ ಎಚ್ಚೆತ್ತು ಹೆಂಡತಿಯನ್ನು ಧಿಕ್ಕರಿಸುತ್ತ, "ಪಾಪಿ, ಕುಲಘಾತಕಿ, ರಾಮನಿಂದಾಗಲೀ ನನ್ನಿಂದಾಗಲೀ ನಿನಗೆ ಯಾವ ಅನ್ಯಾಯ ಆಗಿದೆ, ದುರ್ಮೇಧೆ, ದುರಾತ್ಮೆ, ರಾಮನಿಗೆ ಅಪ್ರಿಯವನ್ನು ನುಡಿದರೆ ರಾಜ್ಯ ಕೋಶ ಕೌಸಲ್ಯೆ ಸುಮಿತ್ರೆಯರನ್ನೂ ಬಿಡುತ್ತೇನೆ. ಅವನು ಸತ್ಯದಿಂದ ಪೊಡವಿಯನ್ನು ಪಾಲಿಸುವವನು, ಪಿತೃಮಾತೃವತ್ಸಲ. ಸೂರ್ಯನುದಯಿಸದೆ ಇದ್ದರೆ ಮಳೆ ಸುರಿಯದಿದ್ದರೆ ಸಸ್ಯ ಮುಂತಾದ ಲೋಕ ಉಳಿದೀತು ಹೇಗೆ? ರಾಮನನ್ನು ಅರೆನಿಮಿಷ ಕಾಣದಿದ್ದರೆ ನನ್ನ ಜೀವ ಉಳಿಯುವುದೇ? ಆ ಧರ್ಮಾತ್ಮನಿಂದ ನಿನಗೆ ಆದ ಅಪಕಾರವಾದರೂ ಏನು? ನಿನ್ನನ್ನು ಸ್ವಂತ ತಾಯಿಗಿಂತಲೂ ಹೆಚ್ಚಾಗಿ ಸೇವಿಸುತ್ತಾನೆ, ಪೂಜಿಸುತ್ತಾನೆ. ಇಷ್ಟಾದರೂ ನೀನು ಹೀಗೆ ನುಡಿಯುತ್ತಿರುವೆಯಲ್ಲ, ನಿನ್ನನ್ನು ಕಟ್ಟಿಕೊಂಡುದು ಸತ್ಯನಾಶಕ್ಕೂ ಕುಲನಾಶಕ್ಕೂ ಎಂಬಂತಾಯಿತು. ರಾಮನಾದರೋ ಕೀರ್ತಿವಂತ, ಗುರುಗಳ

ಬಗ್ಗೆ ಗೌರವವುಳ್ಳವನು, ದಾಕ್ಷಿಣ್ಯಪರ, ನೀತಿಜ್ಞ, ಶಾಂತಿದಾತ, ಕೃತಜ್ಞ, ಸತ್ಯವಾದಿ – ಇಂತಹ ಲೋಕಸಮ್ಮತ ರಾಮನನ್ನು ಅಡವಿಗೆ ಹೇಗೆ ಕಳಿಸಲಿ? ಲೋಕವನ್ನು ಸತ್ಯದಿಂದಲೂ, ದೀನರನ್ನು ದಾನದಿಂದಲೂ, ಗುರುಗಳನ್ನು ಸೇವೆಯಿಂದಲೂ, ಶತ್ರುಗಳನ್ನು ಕೈಯಲ್ಲಿನ ಆಯುಧಗಳಿಂದಲೂ ಗೆಲ್ಲುವ ಅತಿದಯಾಪರನೂ, ಸಾಧುಜನಸೇವಕನೂ ಆದ ಕುಮಾರನನ್ನು ಹೇಗೆ ಕಳಿಸಲಿ? ಯಾವ ಕಾರಣದಿಂದ ನೀನು ನನಗೆ ಈ ಶೋಕವನ್ನು ತಂದಿಟ್ಟೆ, ಪಾಪಿಷ್ಠೆಯೇ; ಅವನು ಯಾವ ಅಪರಾಧ ಮಾಡಿದ್ದಾನೆಂದು ನಾನು ಲೋಕಕ್ಕೆ ಹೇಳಲಿ! ರಾಮನು ಭರತನಿಗಿಂತ ಹಿರಿಯನೆಂದು ತಿಳಿ, ನಿನ್ನ ದುರುಳ ಬುದ್ಧಿಯನ್ನು ಬಿಡು, ತಾಯ್ತಂದೆಯರ ಸಾಧುಮಾರ್ಗವನ್ನನುಸರಿಸು, ನನ್ನ ಕುಲವನ್ನು ಕಳಂಕರಹಿತವೆನ್ನಿಸು, ನಿನ್ನ ಕಾಲಿಗೆ ಬೀಳುತ್ತೇನೆ, ಕುಮಾರನನ್ನು ಸಲಹಿ ಕೀರ್ತಿಯನ್ನು ಉಳಿಸು" ಎಂದು ಆಡಿದ ದೈನ್ಯ ತುಂಬಿದ ನುಡಿಗಳನ್ನು ಧಿಕ್ಕರಿಸಿದ ಕೈಕೇಯಿಯು ಹೀಗೆಂದಳು: "ಮೊದಲು ದೇವತೆಗಳೆದುರಿಗೆ ನಗುನಗುತ್ತ ವರಗಳನ್ನಿತ್ತು ಈಗ ಅನುತಾಪಪಡುತ್ತಿರುವೆಯಲ್ಲ, ಇದಾವ ಬುದ್ಧಿ! ಹರಿದುಹೋದ ನೀರಿಗೆ ಕಟ್ಟೆ ಕಟ್ಟಿ ಏನು ಪ್ರಯೋಜನ? ಸುಳ್ಳು ಹೇಳುವುದು ವ್ಯರ್ಥ. ಕೊಟ್ಟ ಮಾತಿಗೆ ತಪ್ಪಿ ನೀನು ರಾಜರ್ಷಿಗಳ ಸಭೆಯಲ್ಲಿ ಕುಳಿತು ಧರ್ಮಿಷ್ಠ ಎಂಬಿತ್ಯಾದಿ ಹೊಗಳಿಸಿಕೊಳ್ಳುವುದು ಹೇಗೆ? ಯುದ್ಧದಲ್ಲಿ ಜೀವವನ್ನುಳಿಸಿಕೊಳ್ಳಲು ವರಗಳನ್ನಿತ್ತು, ಈ ಕಡೆ ನನ್ನ ಮಗನನ್ನು ಸೋದರಮಾವನ ಮನೆಗೆ ಕಳಿಸಿ ರಾಜ್ಯವನ್ನು ಹಿರಿಯ ಮಗನಿಗೆ ಅರ್ಪಿಸಿ ಕೌಸಲ್ಯೆ ಸಮೇತ ಸುಖವಾಗಿರುವೆ. ಇಷ್ಟಾದರೂ ನಾನು ಧರ್ಮಜ್ಞ ಎಂದು ದೊರೆಗಳ ಎದುರಿನಲ್ಲಿ ಹೇಳಿಕೊಳ್ಳುವೆಯಾ! ನಿನಗೆ ಈ ಕೆಟ್ಟ ಬುದ್ಧಿ ಬಂದುದಾದರೂ ಏಕೆ, ರಘುಕುಲಕ್ಕೆ ಕಳಂಕವನ್ನು ತರಲೋಸುಗವೇ? ನುಡಿದ ಭಾಷೆಗೆ ತಪ್ಪದೆ, ಯಾಚಿಸಿದವರಿಗೆ ಕೊಡುವೆಡೆಯಲ್ಲಿ ಕಾರ್ಪಣ್ಯವನ್ನು ತೋರಿಸದೆ ಇಕ್ಷ್ವಾಕುಸಂತತಿಯ ರಾಜರು ಧರ್ಮದಿಂದ ಪೊಡವಿಯನ್ನು ಪಾಲಿಸಿದರು; ಆದರೆ ಈಗ ಭೂಪಶ್ರೇಷ್ಠನಾದ ನೀನು ಅವತರಿಸಿ ಸತ್ಯವನ್ನು ನಾಶಮಾಡಿ, ಏನೋ ಮಾತುಗಳನ್ನಾಡಿ ಸತ್ಕೀರ್ತಿಯನ್ನು ಪಡೆಯುವೆನೆಂದು ಭಾವಿಸಿರುವೆಯಲ್ಲ! ಶ್ರೇಷ್ಠರಾದವರು ಭಾಷೆಗೆ ತಪ್ಪಿದರೆ? ದೇವತೆಗಳ ಮುಂದೆ ಅಲರ್ಕನು ತನ್ನ ಕಣ್ಣುಗಳನ್ನೇ ಇತ್ತ, ಶಿಬಿಯು ಪಾರಿವಾಳಕ್ಕಾಗಿ ತನ್ನ ದೇಹದ ಮಾಂಸವನ್ನೇ ಇತ್ತ ಎಂಬುದು ತಿಳಿಯದೆ? ಸಮುದ್ರವೂ ತನ್ನ ಮೇರೆ ಮೀರದೆ ಮಿತಿಯಲ್ಲಿರುತ್ತದೆ, ಪರಿಶುದ್ಧಮತಿಗಳು ಸತ್ಯಕ್ಕೆ ಊನವಾಗದಂತೆ ಸಮತೆಯಿಂದಿರುತ್ತಾರೆ. ಇದನ್ನು ತಿಳಿದೂ ತಿಳಿಯದವರ ರೀತಿಯಲ್ಲಿ ಭ್ರಮೆಯಿಂದ ಕೂಡಿರುತ್ತಾರೆಯೇ? ಸುಳ್ಳೊ ನಿಜವೋ, ಧರ್ಮವೋ ಅಧರ್ಮವೋ ಕೊಟ್ಟ ಮಾತಿಗೆ ತಪ್ಪದ ಹಾಗೆ ಮೋಹಕ್ಕೊಳಗಾಗದೆ ನಡೆದುಕೋ. ವಿಷವನ್ನುಣಿಸಿ ಕಾಲುಗಳಿಗೆ ಬಿದ್ದಾಕ್ಷಣ ನಾನು ಸುಮ್ಮನಿರುವವಳಲ್ಲ, ರಾಮನಿಗೆ ಅಭಿಷೇಕವನ್ನು ಮಾಡಿದರೆ ನಾನಂತೂ ಜೀವದಿಂದ ಇರುವವಳಲ್ಲ, ಇದು ಖಂಡಿತ. ತನ್ನ ಮಗನಿಗೆ ಅರಸುತನವಾಗಲು ಹಿಗ್ಗುವ ಕೌಸಲ್ಯೆಯ ಎದುರಿನಲ್ಲಿ ಕೈಮುಗಿಯುತ್ತ ಬಾಳುವುದಕ್ಕಿಂತಲೂ ಸಾವೇ ಕ್ಷೇಮಂಕರವಾದುದು. ನನ್ನ ಮಗ ಭರತನ ಮೇಲಾಣೆ, ರಾಮನನ್ನು ಕಾಡಿಗೆ ಕಳಿಸದೆ ಮಾತಿಗೆ ತಪ್ಪಿದರೆ ನನ್ನ ಜೀವ ಉಳಿದಿರದು. ನೀನೆಷ್ಟೇ ಉಪಚಾರ ಮಾಡಿದರೂ ಆಮಿಷಗಳನ್ನೊಡ್ಡಿದರೂ ನಾನು

ಬಗ್ಗಲಾರೆ, ರಾಮನು ಕಾಡಿಗೆ ಹೋಗುವವರೆಗೂ ನಾನು ಬಿಡುವುದಿಲ್ಲ, ನನ್ನ ಮಾತನ್ನು ಹಿಂತೆಗೆದುಕೊಳ್ಳುವುದಿಲ್ಲ, ಇದು ಸತ್ಯ, ಇದು ನನ್ನ ಶಪಥ" ಎಂದು ಹೇಳಿದ ಕೈಕೇಯಿ ಮೌನ ತಾಳಿದಳು.

ಆಗ ದಶರಥನು ಅತ್ಯಂತ ನೋವಿನಿಂದ ಕೂಡಿ, "ಈ ಕ್ರೂರತನವನ್ನು ಯಾರ ಉಪದೇಶದಿಂದ ಪಡೆದೆ? ಭರತನಿಗೆ ರಾಜ್ಯವನ್ನಿತ್ತು, ರಾಮನನ್ನು ಕಾಡಿಗೆ ಕಳಿಸು ಎಂದು ಹೇಳಲು ನಿನಗೆ ಮನಸ್ಸಾದರೂ ಹೇಗೆ ಬರುತ್ತದೆ? ಇದೇನು ಮತಿವಿಕಳತೆಯೋ, ಗರ ಮುಟ್ಟಿತೋ, ದುರ್ಬುದ್ಧಿಯೋ, ಭಂಡತನವೋ, ನಿರ್ಲಜ್ಜೆಯೋ? ಈ ಕೆಟ್ಟ ಮಾತಿಗೆ ಯಾರು ತಾನೇ ಒಪ್ಪಿಯಾರು? ಅಯ್ಯೋ ಪಾಪಿಷ್ಠೆಯೇ, ಕುಲಘಾತಕಿಯೇ! ನೀನು ಕುಲವಿನಾಶಿನಿ ಎಂಬುದನ್ನು ನಾನು ಮೊದಲೇ ತಿಳಿಯದೆ ಹೋದೆನಲ್ಲ, ನನ್ನ ಕಾರ್ಯವೇ ನನಗೆ ದುಃಖದಾಯಿನಿಯಾಯಿತು! ಈ ವಿಷಮಯವಾದ ಮಾತನ್ನು ಬಿಡು; ರಾಮನ ಬದಲು ಭರತನೇ ರಾಜನಾಗಲಿ, ಆದರೆ ಯಾವ ಕಾರಣದಿಂದ ರಾಮನನ್ನು ಕಾಡಿಗೆ ಕಳಿಸೆಂದು ಒತ್ತಾಯಿಸುತ್ತಿರುವೆ? ಅವನು ಅರಣ್ಯದ ಪಾಲಾದರೆ ರಾಜ್ಯವು ಸುಖವಾಗಿರುವುದೇ? ಕಾರಣ ಕೇಳಿದವರಿಗೆ ಏನೆಂದು ಉತ್ತರವನ್ನು ಹೇಳುವುದು? ಈಗಾಗಲೇ ನಾನಾ ದೇಶಗಳ ರಾಜರುಗಳು ಬಂದಿದ್ದಾರೆ, ನಂಟರಿಷ್ಟರು ಆಗಮಿಸಿದ್ದಾರೆ, ಅವರೆದುರಿಗೆ ಆನಂದದಿಂದ ಮಗನಿಗೆ ಪಟ್ಟ ಕಟ್ಟುವೆನೆಂದು ಹೇಳಿ ಈಗ ಮಾತಿಗೆ ಕಟ್ಟುಬಿದ್ದು ಅವನನ್ನು ವಿಪಿನಕ್ಕೆ ಕಳಿಸಿದರೆ ಅವರೆಲ್ಲ ಏನು ತಿಳಿಯುತ್ತಾರೆ! ಇಷ್ಟು ಕಾಲ ಬದುಕಿದ್ದ ನನ್ನ ಬದುಕೇ ವ್ಯರ್ಥವಾಗಿ ಹೋಗುತ್ತದಲ್ಲ. ಸಭೆಯಲ್ಲಿ ಯಾವ ಮುಖ ಹೊತ್ತು ಕುಳಿತುಕೊಳ್ಳಲಿ? ನಮ್ಮ ಮನೆಯ ಕಾಮಧೇನುವನ್ನು ಕಾಡಿಗಟ್ಟಿ ದಿಕ್ಕು ದಿಕ್ಕುಗಳಲ್ಲಿ ಬಾಯ್ಬಿಡುವ ಹಾಗೆ, ಸರ್ವಗುಣನಿಲಯ ರಿಪುವಿಲಯ ಎನ್ನಿಸಿರುವ ರಾಮನನ್ನು ಕಾಡಿಗೆ ಕಳಿಸಿದ ಬಾಲಿಶನಾದ ದಶರಥನು ಈವರೆಗೆ ಹೇಗೆ ಧರೆಯನ್ನು ಪಾಲಿಸಿದ ಎಂದು ಜನರು ನನ್ನ ಜನ್ಮವನ್ನು ಜಾಲಾಡಿಬಿಡುತ್ತಾರೆ, ಅದಕ್ಕೆ ನಾನೇನು ಉತ್ತರವನ್ನು ನೀಡಲಿ? ಸಕಲಸದ್ಗುಣನಿಲಯ ಅಕಳಂಕಪುರುಷ ಜಾನಕೀರಮಣನನ್ನು ಅಟ್ಟಲೇನು ಕಾರಣವೆಂದು ಸಕಲ ಭುವನವೇ ಕೇಳಲು ನಾನೇನು ಹೇಳಲಿ? ಈ ಮುಂಚೆ ಕೈಕೇಯಿಗೆ ಇತ್ತ ವರವನ್ನು ನಡೆಸಿಕೊಡುವುದಕ್ಕಾಗಿ ಈ ರೀತಿ ಮಾಡಿದೆ ಎನ್ನಲೇ? ಅದು ಜನರ ಬಾಯಲ್ಲಿ ಅಪಹಾಸಕ್ಕೆ ಪಕ್ಕಾಗುವುದಿಲ್ಲವೇ? ಸತಿಯಾಗಿ ಸಖಿಯಾಗಿ ದಾಸಿಯಾಗಿ, ಅದಕ್ಕಿಂತ ಹೆಚ್ಚಾಗಿ ಭಗಿನಿಯಂತೆ ತಾಯಿಯಂತೆ ನನ್ನ ಹಿತವನ್ನೇ ಆಚರಿಸುವ ಕೌಸಲ್ಯೆಗೆ ನಿನ್ನ ಹಿತಕ್ಕೋಸುಗ ಅಪ್ರಿಯವನ್ನೆಸಗಲಾರೆ; ಅವಳ ಮಗನನ್ನು ಕಾಡಿಗೆ ಕಳಿಸಿ ನಾನೊಬ್ಬ ಸತ್ಯಸಂಧನೆಂದು ಹೇಳಿಕೊಳ್ಳುತ್ತ ಅವಳಿಗೆ ಮುಖ ತೋರಿಸುವುದು ಹೇಗೆ? ನಿನ್ನ ಮೋಹಾತಿಶಯದ ಬಲೆಗೆ ಸಿಕ್ಕಿ ಕೌಸಲ್ಯೆಯನ್ನು ಬೇರೆಯವಳೆಂದು ಭಾವಿಸಿ ಅವಳ ಮಗನನ್ನು ಅಡವಿಗಟ್ಟಿ ಅವಳನ್ನು ಎದುರಿಸುವುದೆಂತು? ಮಗ ಕಾಡಿಗೆ ಹೋದರೆ ಕೌಸಲ್ಯೆ ಜೀವ ಬಿಡುತ್ತಾಳೆ, ವೈದೇಹಿಯಾದರೋ ಗಂಡನನ್ನು ಬಿಟ್ಟು ಅರೆಕ್ಷಣವಾದರೂ ಇದ್ದಾಳೆಯೇ? ಈ ಪರಿಯನ್ನು ಕಂಡೂ ನಾನು ಬದುಕುಳಿದೇನೇ? ಮತಿಹೀನೆಯೇ, ಪ್ರಿಯನನ್ನು ಹೊರಗಟ್ಟಿ ಸಂಪತ್ತನ್ನು ಗಳಿಸಿ ಯಾವ ಸುಖವನ್ನು ಸಂಪಾದಿಸುತ್ತೀಯೆ?

ನೇಣು ಜೀವವನ್ನು ಸದ್ಗತಿಗೊಯ್ಯುವ ಹಿತಕಾರಿಯೆಂದು ಭಾವಿಸಿದಂತೆಯೇ ಸರಿ! ಜಗತ್ತಿಗೆ ಜೀವನಾಧಾರವೆನ್ನಿಸುವ ಸೂರ್ಯನಂತಹ ಮಗನನ್ನು ಹೊರಗಟ್ಟಿದರೆ ಲೋಕವೇ ನನ್ನನ್ನು ಬಾಲಿಶ, ಮತಿಹೀನ, ದುರ್ವಿದಗ್ಧ, ಬುದ್ಧಿಯನ್ನು ಕಳೆದುಕೊಂಡು ಕೈಕೇಯಿಗೆ ಆಳಾಗಿಬಿಟ್ಟ ಎಂದು ಹೀಯಾಳಿಸುತ್ತದಲ್ಲ! ಕೊನೆಯೇ ಇಲ್ಲದ ಮನೋವ್ಯಥೆ, ಲೋಕಬಂಧುವಿನ ಕುಲಕ್ಕೆ ದುಷ್ಕೀರ್ತಿಯುಂಟಾಗುವಂತೆ ಮಾಡುವ ಯಮನಂದನೆಯನ್ನೇ ತಂದು ಮನೆಯೊಳಗಿಟ್ಟುಕೊಂಡು ನಾನು ಸುಖಿಯಾಗುತ್ತೇನೆಂದು ಮರುಳುಗೊಂಡೆ! ಮುಂದೆ ಹೆಡೆಯಾಡಿಸುವ ಹಾವಿನೊಡನೆ ಆಟವಾಡುವೆನೆಂದು ಅದನ್ನು ಹಿಡಿಯಹೋದ ಮಗುವಿನ ಪರಿ ನನ್ನದಾಯಿತು. ನನ್ನ ಪೂರ್ವಾರ್ಜಿತದ ಕೆಟ್ಟ ಕರ್ಮವು ಈ ರೀತಿ ಕಾಡಿಸುತ್ತಿದೆ. ಕಾಮುಕ ದುರ್ವ್ಯಸನಿ ಕಾಪುರುಷ, ಹೆಂಡತಿಯ ಮಾತನ್ನು ಕೇಳಿ ಸದ್ಗುಣಿ ರಾಮನನ್ನು ಕಾಡಿಗೆ ಕಳಿಸಿದ ಈ ವ್ಯಕ್ತಿ ಇಷ್ಟು ಕಾಲ ಹೇಗೆ ಬದುಕಿದ ಎಂದು ಜನರು ಆಡಿಕೊಳ್ಳದೆ ಇರುತ್ತಾರೆಯೇ? ನನ್ನ ವಂಶದ ರಾಜರ ಕೀರ್ತಿಗೆ ಮಸಿ ಹತ್ತದಿರುವುದೇ? ಅಯ್ಯೋ ತಾಮಸಿಯೇ, ಕುಲಗೇಡಿತನವನ್ನು ನೆನೆದು ಅಪಯಶವನ್ನು ತಂದುಕೊಳ್ಳುವೆಯಲ್ಲ! ನಾನು ಏನು ಹೇಳಿದರೂ ಹಿತವೋ ಅಹಿತವೋ ಎಂದು ಯೋಚಿಸದೆ ತಲೆಯಲ್ಲಿ ಹೊತ್ತು ನೆರವೇರಿಸುವ ಸದ್ಧರ್ಮರೂಪನಾದ ಮಗನನ್ನು ಹೇಗೆ ಬಿಟ್ಟಿರಲಿ! ನನ್ನ ಜೀವ ತಾನೇ ಹೇಗೆ ಉಳಿದೀತು? ಸಾಧುಸಜ್ಜನರು ನನ್ನನ್ನು ಗೌರವಿಸುತ್ತಾರೆಯೇ, ಇತರ ರಾಜರುಗಳ ನಡುವೆ ನನ್ನ ಹೆಸರು ಹೇಗೆ ಉಳಿದೀತು? ಅವರೆಲ್ಲರಿಂದ ದೂರವಾಗಿ ಬದುಕುಳಿದರೇನು ಫಲ? ಅಯ್ಯೋ ಮೂಢೆ! ಕೌಸಲ್ಯೆ ಸುಮಿತ್ರೆ ಜಾನಕಿ ರಾಮ ಲಕ್ಷ್ಮಣರನ್ನೂ ಕೀರ್ತಿಯನ್ನೂ ಜನಪ್ರಶಂಸೆಯನ್ನೂ ಬಿಟ್ಟು ಮಗನೊಡನೆ ರಾಜ್ಯವನ್ನಾಳಲು ಇಚ್ಛಿಸುವೆಯಲ್ಲ. ದುರ್ವಿವೇಕದಿಂದ ಕೂಡಿದವಳನ್ನು ಭ್ರಮೆಗೊಂಡು ಕೈಹಿಡಿದು ಕಡೆಗಾಲದಲ್ಲಿ ಹಿಂಸೆಗೊಳಗಾದೆನಲ್ಲ! ನಿನ್ನ ಮಾತಿಗೆ ಒಪ್ಪಿ ಭರತನು ರಾಜ್ಯವನ್ನಾಳಲು ಸಿದ್ಧನಾದರೆ, ತನ್ನ ತಂದೆಯ ಸಾವಿನನಂತರ ಅವನು ಪರಕೃತ್ಯಗಳನ್ನು ಮಾಡುವುದು ಬೇಡ. ಕರುಣೆಯಿನಿತಿಲ್ಲದೆಯೇ ವಿನಯವಂತನನ್ನು ದೂರ ಅಟ್ಟಿ ಭೂಮಿಯನ್ನಾಳುವೆನೆನ್ನುತ್ತಿರುವೆ, ಇಕ್ಷ್ವಾಕುಸಂತತಿಯನ್ನೇ ತುಂಡರಿಸಬಯಸುತ್ತಿದ್ದೀಯೆ. ಪಲ್ಲಕ್ಕಿಯಲ್ಲಿಯೋ, ಆನೆಯ ಮಸ್ತಕದ ಮೇಲೋ, ಕುದುರೆಯನ್ನೇರಿಯೋ, ದಿವ್ಯರಥದಲ್ಲಿಯೋ ಸಂಚರಿಸುವ ರಾಮನು ಕಗ್ಗಾಡಿನ ಹಳ್ಳಕೊಳ್ಳಗಳಲ್ಲಿ ಹೇಗೆ ಸಂಚರಿಸುತ್ತಾನೆಯೋ! ಷಡ್ರಸೋಪೇತ ಮೃಷ್ಟಾನ್ನವನ್ನು ಆರೋಗಣೆ ಮಾಡುವ ಕಂದ ಕಹಿ ಒಗರು ಕಷಾಯದ ಆಹಾರವನ್ನು ಹೇಗೆ ತಿನ್ನುತ್ತಾನೆಯೋ! ದಿವ್ಯಾಂಬರಗಳಿಂದ ಅಲಂಕೃತನಾಗಿ ಮೆರೆಯುವ ಸುಕುಮಾರನು ನಾರುಮಡಿಯಲ್ಲಿ ಹೇಗೆ ದಿನಗಳೆಯುತ್ತಾನೆಯೋ! ಪರರ ದೋಷಗಳನ್ನೆಣಿಸದವನು, ಪರರ ಅಪರಾಧಗಳನ್ನು ಮರೆಯುವವನು, ಗುಣಗಳನ್ನು ಹೊಗಳುವವನು, ತನ್ನನ್ನು ಹೊಗಳಿದರೆ ನಾಚಿಕೊಳ್ಳುವವನು, ಸರ್ವಜೀವದಯಾಪರನು, ಧರ್ಮಸ್ವರೂಪನು ಎನ್ನಿಸಿಕೊಂಡ ರಾಮನನ್ನು ಕಾಡಿಗೆ ಕಳುಹಿಸು ಎನ್ನುವ ನಾಲಗೆಯು ಕತ್ತರಿಸಿ ಬೀಳಬಾರದೇ! ನಿನಗೆ ಮಹಾನರಕವಲ್ಲದೆ ಬೇರೆ ಗತಿಯಾಗುತ್ತದೆಯೇ, ದುಷ್ಟಳೇ! ಯುವರಾಜ ಪದವಿಯು ಭರತನಿಗಾಗುವುದು ನನಗೂ ಸಮ್ಮತವೇ; ಆದರೆ ರಾಮನು ಕ್ಷೇಮದಿಂದ ಅರಮನೆಯಲ್ಲಿಯೇ

ಉಳಿಯಲಿ. ಜಸವಂತಳಾಗಿ ಬಾಳಲು ದಯಾರ್ದ್ರಹೃದಯದಿಂದ ನನ್ನ ಈ ಮಾತುಗಳನ್ನು ಒಪ್ಪು, ಸುದತಿಯೇ, ಕೈಮುಗಿದು ಕಾಲುಗಳಿಗೆ ಬೀಳುತ್ತೇನೆ, ನೆರೆದಿರುವ ಪ್ರಾಜ್ಞರ ಮುಂದೆ ನನ್ನ ವಂಶಕ್ಕೆ ಅಭ್ಯುದಯವುಂಟಾಗುವಂತೆ ಸಲಹಿದರೆ ಮೂಲೋಕವೂ ಮೆಚ್ಚುತ್ತದೆ" ಎಂದು ಬೇಡಿಕೊಂಡ. ಕಾಮಿನೀವಶನಾದವನಾಗಲೀ, ಮನೋಭ್ರಾಮಕತೆಗೆ ಒಳಗಾಗಿ ತೊಳಲುತ್ತ ಲಘುವಾದವನಾಗಲೀ, ಈ ಜಗತ್ತಿನ ಜೀವರುಗಳಿಗೆ ಸ್ವಾತಂತ್ರ್ಯವೆಲ್ಲಿದೆ, ಕರ್ಮದಲ್ಲಿ ಕಟ್ಟಿಹಾಕಿ ಸುಖದುಃಖಗಳ ಅನುಭವವನ್ನೆಲ್ಲ ರಾಮಪುರದರಸನು ನಿಶ್ಚಯಿಸಿಬಿಡುತ್ತಾನೆ: ಈ ಪರಿಯನ್ನು ಅರಿಯದ ಜನರು ಈ ವಿಧದಲ್ಲಿ ನರಳುತ್ತಾರೆ!

೭. ದುಷ್ಟನುಡಿಗಳಿಂದ ಕೈಕೇಯಿ ದಶರಥನ ಮರ್ಮಭೇದನ ಮಾಡಿದುದು

ಮನದನ್ನೆ ಕೇಳು, ಚರಣಕ್ಕೆರಗಿದ ಇನಿಯನನ್ನು ನೋಡಿದರೂ ಮನಸ್ಸು ಕರಗದೆ ಕ್ರೂರತಮವಾದ ಕಠಿಣ ಮಾತುಗಳಿಂದ ಡಾಕಿನಿಯ ಹಾಗೆ ಧಿಕ್ಕರಿಸಿದಳು. ಲಜ್ಜೆಯನ್ನು ತೊರೆದ ಮಾನಿನಿಯರಿಗೆ ಜಗತ್ತಿನಲ್ಲಿ ಯಾವುದು ಇದಿರು? ಧರ್ಮಜ್ಞನಾದ ಮಹಾರಾಜನನ್ನು ಹುಲ್ಲುಕಡ್ಡಿಗೆ ಸಮಾನವಾಗಿ ಕಂಡಳು. ಮತ್ತೂ ಮತ್ತೂ ಕಟುನುಡಿಗಳನ್ನಾಡುವ ಹೆಂಡತಿಯ ಮುಖವನ್ನು ನೋಡುತ್ತ ರಾಜನ ಕ್ರೋಧ ಹೆಚ್ಚಿತು, ಕಣ್ಣುಗಳಿಂದ ಕಿಡಿಗಳನ್ನು ಚೆಲ್ಲುತ್ತ, "ಸತ್ಯವ್ರತನಾದ ಮಗನನ್ನು ಕಾಡಿಗೆ ಕಳುಸುತ್ತಿರುವೆಯಲ್ಲ, ನಿನ್ನ ಪಾಪಕೃತ್ಯ ಎಂಥ ಘೋರವಾದುದೆಂಬುದನ್ನು ಅರಿತಿರುವೆಯಾ? ನಿಡುಗಾಲ ಮಕ್ಕಳಿಲ್ಲದೆ ತೊಳಲಿ ಬಳಲಿ, ಪರಿಪರಿಯ ಯಾಗಪೂಜೆಗಳಿಂದ ದೇವತೆಗಳನ್ನು ಮೆಚ್ಚಿಸಿ ಪಡೆದ ಸುಗುಣರತ್ನಾಕರನಾದ ಮಗನನ್ನು ಹೇಗೆ ಅಡವಿಯ ಪಾಲು ಮಾಡಲಿ! ನೀಲಮೇಘಶ್ಯಾಮ ಅಭಿರಾಮ ರಾಮನನ್ನು, ಕಾಲಕಂಧರನ ಧನುರ್ಭಂಗ ಮಾಡಿದ ಉತ್ತುಂಗನನ್ನು, ಅಮರನಿಕರಪೂಜ್ಯನನ್ನು ಕಾಡಿಗೆ ಕಳಿಸುವುದೆಂತು! ಮೋಸಕ್ಕೆ ಸಿಕ್ಕಿ ಬಾಯಾರಿ ಬಿಸಿಲ ಬಾವಿಯಲ್ಲಿ ದಾಹವನ್ನು ಕಳೆಯಲು ಅಪೇಕ್ಷಿಸಿದೆನಲ್ಲ!" ಎಂದು ಅಮಿತ ಸಂತಾಪದಿಂದ ಭೂಪತಿಯು ಚಿಂತಿಸುತ್ತಿರಲು, ಅತ್ತ ಅರವಿಂದಬಾಂಧವನು ಪಶ್ಚಿಮಾದ್ರಿಯಲ್ಲಿ ವಿಶ್ರಮಿಸಿದ.

ಕತ್ತಲೆಯ ನೀಲವಸ್ತ್ರವನ್ನುಟ್ಟು ನಕ್ಷತ್ರಗಳ ಕವಡೆಹಾರವನ್ನು ಕೊರಳಲ್ಲಿ ಧರಿಸಿ ಕೇಕಯತನೂಜೆಯ ಅಪಯಶವು ನಾಲ್ಕೂ ದಿಕ್ಕುಗಳನ್ನು ಮುಚ್ಚುವ ಹಾಗೆ ಕತ್ತಲಾವರಿಸಿತು. ಅದನ್ನು ಕಂಡು ನೃಪೋತ್ತಮನು ಮರುಗುತ್ತ ತನ್ನ ನೋಟವನ್ನು ಆಗಸದೆಡೆಗೆ ಚೆಲ್ಲಿ ರಾತ್ರಿಯು ಎಂದೆಂದಿಗೂ ಮುಗಿಯದಿರಲಿ ಎಂದು ಪ್ರಾರ್ಥಿಸಿದ. ವ್ಯಾಕುಲದಿಂದ ಕೂಡಿದ ಹೃದಯವನ್ನು ಹೊತ್ತ ಅವನು ಹೆಂಡತಿಯನ್ನು ನೋಡಿ ಕೈಮುಗಿಯುತ್ತ ಮತ್ತೆ ಮತ್ತೆ ಪ್ರಾರ್ಥಿಸುತ್ತ ದೈನ್ಯಪ್ರಲಾಪದಿಂದ, "ಮಗನೊಡನೆ ನೀನು ಬಯಸಿದ ಭಾಗ್ಯವನ್ನು ಹೊಂದಿ ಸುಖಿಯಾಗು, ಆದರೆ ಹಿರಿಯ ಮಗ ರಾಮನನ್ನು ಕಾಡಿಗೆ ಕಳಿಸಬೇಡ, ನನ್ನ ಕುಲವನ್ನು ಉಳಿಸಿ ಕೀರ್ತಿಯನ್ನು ಗಳಿಸು, ನಿನ್ನ ಮನೋಭೀಷ್ಟದಂತೆಯೇ ನಾನು

ನಡೆದುಕೊಳ್ಳುತ್ತೇನೆ. ನೀನು ದಯೆಯನ್ನು ಹೊಂದಿ ನನ್ನ ಮಾತಿಗೆ ಒಡಂಬಡು" ಎಂದು ಅನೇಕ ವಿಧದಿಂದ ಗೋಳಾಡುತ್ತ ಭೂಮೀರಮಣನು ಮೂರ್ಛೆ ಹೊಂದಿ ನೆಲದ ಮೇಲೆ ಬಿದ್ದ. ಕೆಲಕಾಲದ ಮೇಲೆ ಎಚ್ಚೆತ್ತರೂ, "ಸತ್ಯವೇ ಪರಬ್ರಹ್ಮ, ಧರ್ಮವೆಲ್ಲವೂ ಸತ್ಯವನ್ನಾಶ್ರಯಿಸಿದೆ; ಹೀಗಾಗಿಯೇ ಹಿರಿಯರು ಸತ್ಯವೇ ಸದ್ಗತಿಗೆ ಕಾರಣ ಎನ್ನುತ್ತಾರೆ. ಸತ್ಯವಂತರ ಹಾದಿಯನ್ನು ಹಾಳುಗೆಡವಿ ಅಸತ್ಯವನ್ನು ಆಶ್ರಯಿಸುವ ದುಷ್ಕೃತ್ಯವನ್ನು ಅನುಸರಿಸಿ ಕೊಟ್ಟ ನುಡಿಯನ್ನು ಬಿಟ್ಟು ಬಳಲಿದರೇನು ಫಲ? ಸಕಲಧರ್ಮಗಳೂ ಸತ್ಯವ್ರತ ಸದಾಚಾರನಿವಹದ ತವರು ಎಂದು ನಂಬಿದ ಸೂರ್ಯವಂಶದಲ್ಲಿ ಹುಟ್ಟಿ ಸತ್ಯಭಾಷೆಯನ್ನು ತೊರೆದು ಪಿತೃಗಳನ್ನು ನರಕಕ್ಕಿಳಿಸಿ ಸಾಧುಗಳೊಡನೆ ಕುಳಿತುಕೊಂಡಿದ್ದರೇನು? ನಿನ್ನ ಮನಸ್ಸು ಧರ್ಮಾಚರಣೆಯನ್ನು ಬಯಸುವುದಾದರೆ, ಪಿತೃಸಂಕುಲವನ್ನು ಭಯಭಕ್ತಿಯಿಂದ ಸಂರಕ್ಷಿಸಿ ಧಾರ್ಮಿಕಶಿರೋರತ್ನ ಎನ್ನಿಸಿಕೊಳ್ಳಬೇಕಾದರೆ, ನೀನು ಕೊಟ್ಟ ಮಾತು ಸಫಲವಾಗಬೇಕಾದರೆ ಹಿರಿ ಮಗನನ್ನು ಈಗಲೇ ಕಾಡಿಗೆ ಕಳಿಸಿ ನಿರ್ಮಲಕೀರ್ತಿಯನ್ನು ಗಳಿಸು" ಎಂದು ನುಡಿದ ಹೆಂಡತಿಯ ನಿರ್ಲಜ್ಜೆ ದಿಟ್ಟತನಗಳನ್ನು ನಿಟ್ಟಿಸಿದ ನೃಪತಿಯು ಭ್ರಾಂತಮಾನಸನಾಗಿ ಬಳಲಿದ. ಮಂಕುಗೊಂಡ ಮುಖದಿಂದ ಕೂಡಿ ಕಣ್ಣುಗಳಿಂದ ಸುರಿಯುವ ನೀರಿನ ಹನಿಗಳನ್ನು ಕಷ್ಟಪಟ್ಟು ತೊಡೆದುಕೊಳ್ಳುತ್ತ ದುಷ್ಟೆಯನ್ನು ನೋಡಿ, "ಕುಲಗೇಡಿಯೇ, ರಕ್ಕಸಿಯೆ, ಈ ಪಾತಕಬುದ್ಧಿ ನಿನಗೆ ಎಲ್ಲಿಂದ ಬಂತು, ಯಾರಿಂದ ಕಲಿತೆ? ಈಗಲಾದರೂ ಭರತನನ್ನು ಬಿಟ್ಟು ರಾಮನಿಗೆ ಪಟ್ಟಗಟ್ಟಲು ಒಪ್ಪಿದರೆ ಎಲ್ಲರ ಪ್ರೀತಿಯನ್ನು ಗಳಿಸಿ ಸುಖವಾಗಿರುತ್ತೀಯೆ" ಎಂದು ಅನೇಕ ವಿಧವಾದ ಕೋಪಾವೇಶದಿಂದ ಬಳಲಿ ಕುಸಿದ. ಪೂರ್ವಕೃತ ಕರ್ಮವನ್ನು ಒರೆಸಿ ಹಾಕಲಾದೀತೇ? ರಾಮನನ್ನು ನೋಡುವ ಹಿರಿಯಾಸೆಯಿಂದ ದಶರಥನ ಮನಸ್ಸು ಮರುಗಿ ಮರುಗಿ ಕೊನೆಗೆ ಮೈಮರೆದೊರಗಿದ.

ಸೂರ್ಯೋದಯವಾಯಿತು. ವಸಿಷ್ಠರು ಸ್ನಾನಸಂಧ್ಯಾಕರ್ಮಗಳನ್ನು ಮುಗಿಸಿ ಪರಮಹರ್ಷದಿಂದ ದ್ವಿಜೋತ್ತಮರನ್ನೊಡಗೊಂಡು, ಸಕಲ ವಸ್ತುಗಳ ಸಮೇತ, ಸುರುಚಿರ ಅಲಂಕಾರದಿಂದ ಅಮರಾವತಿಯನ್ನೂ ಮೀರಿಸಿದ ಅಯೋಧ್ಯಾನಗರದನ್ನು ಸೇರಿ ಅಲಂಕೃತಗೊಂಡ ರಾಜವೀಧಿಯಲ್ಲಿ ಬಂದರು. ಕಸ್ತೂರಿ ಸಾರಣೆ, ಕಮನೀಯ ಕಾರಣೆ, ಎತ್ತಿ ಕಟ್ಟಿದ ಬಾವುಟಗಳು, ಎಡಬಲಗಳಲ್ಲಿ ಮುತ್ತಿನ ಆರತಿಯನ್ನು ಹಿಡಿದು ತಮ್ಮ ತಮ್ಮ ಮನೆಗಳ ಮುಂದೆ ನಿಂತಿರುವ ಚೆಲುವೆಯರು – ಇವುಗಳನ್ನೆಲ್ಲ ನೋಡುತ್ತ ಸಂತಸವೇರುತ್ತಿರಲು ಆ ದ್ವಿಜೋತ್ತಮರು ಅರಮನೆಯ ಕಡೆಗೆ ಸಾಗಿದರು. ದೀನಾನುಕಂಪಿಯಾದ ರಾಮನಿಗೆ ಸಿರಿಲಕುಮಿಯು ಒಲಿದು ಬರುವುದನ್ನು ನೋಡಲೆಂದು ನಾನು ನೀನೆಂದು ದಟ್ಟಣೆಯಿಂದ ಸೇರಿರುವ ಜಾನಪದರನ್ನು ಕಾಣುತ್ತ ಮುನಿವರ್ಯನು ಸಂತಸದಿಂದ ಬಂದರು. ತನಗೆ ನಮಸ್ಕರಿಸುವವರನ್ನು ಹರಸಿ, ಹಾಡುವವರನ್ನು ನಯದಿಂದ ಉಪಚರಿಸಿ, ಸ್ತುತಿಸುವವರನ್ನು ಸಂಭ್ರಮಿಸಿ, ಅವರ ಮನದಿಷ್ಟವು ನೆರವೇರಲೆಂದು ಹಾರೈಸುತ್ತ ಮುನಿತಿಲಕನು ಬಂದು ರಾಜನ ಅರಮನೆಯ ಕಕ್ಷೆಗಳನ್ನು ದಾಟಿ ಬಂದಾಗ ಸುಮಂತ್ರನು ಕಾಣಿಸಲು, ತಾನು ಬಂದಿರುವ ವಿಷಯವನ್ನು ಮಹಾರಾಜರಿಗೆ ತಿಳಿಸಲು

ಹೇಳಿದರು. ಮೊಸರು, ಬತ್ತದ ಅರಳು, ತುಪ್ಪ, ಜೇನುತುಪ್ಪ, ನಾನಾ ಕಾಳುಗಳು, ಬಿಳಿಯ ಕೊಡೆಗಳು, ಬೀಸಣಿಗೆಗಳು, ಬಿಳಿ ಆನೆಗಳು, ಬಿಳಿಗುದುರೆಗಳು, ದಿವ್ಯವಾದ ರಥಗಳು, ಸುಲಿಪಲ್ಲ ಚೆಲುವೆಯರು, ಸುರುಚಿರದ ವೇಶ್ಯೆಯರು, ವಿದ್ವನ್ಮಣಿಗಳು, ಸಿಂಹಾಸನ, ಪೀಠಗಳು, ಅತ್ತಿಯ ಮರ, ಮುಂತಾದ ಅಖಿಲ ವಸ್ತುನಿಚಯಗಳೊಡನೆ ಸಜ್ಜಾಗಿರುವ ವೇದವೇದಾಂಗಕೋವಿದರಾದ ಭೂಸುರೋತ್ತಮರು, ಪಶುಪಕ್ಷಿಗಳು, ಸುರಧೇನುಗಳು, ನಾನಾ ಬಗೆಯ ಪೌರರು, ಜನಸಾಮಾನ್ಯರು, ರಾಜರು, ಸಕಲಾಗಮಜ್ಞರು, ಅಸಂಖ್ಯ ವಸ್ತುಗಳನ್ನರ್ಪಿಸಿ ರಾಘವನ ಸೊಗಸಿನ ಅತಿಶಯವನ್ನು ನೋಡುವ ಅಭಿಲಾಷೆಯಿಂದ ಇಡೀ ಲೋಕವೇ ಕಾದಿದೆ ಎಂದು ರಾಜನನ್ನು ತ್ವರೆಗೊಳ್ಳಲು ಹೇಳು" ಎಂದು ಮುನಿಯು ಸುಮಂತ್ರನಿಗೆ ತಿಳಿಸಿದ. ಅದರಂತೆ ಮಂತ್ರಿವರ್ಯನು ದಶರಥನ ಮಲಗುವ ಮನೆಯ ಬಳಿ ಬಂದು ಇಕ್ಷ್ವಾಕುವಂಶಚೂಡಾಮಣಿಗೆ, "ಮಹಾಪ್ರಭುಗಳೇ, ಸೂರ್ಯ ಮೂಡಲಗಿರಿಯಲ್ಲಿ ಕಂಗೊಳಿಸಿದ್ದಾನೆ, ಮುನಿಶ್ರೇಷ್ಠರೂ ಪ್ರಜೆಗಳೂ ಸೇರಿ ರಾಮನ ಪಟ್ಟಾಭಿಷೇಕವನ್ನು ಕಣ್ತುಂಬಿಕೊಳ್ಳಲೋಸುಗ ಕಾಯುತ್ತಿದ್ದಾರೆ. ಸಾರಥಿ ಮಾತಲಿಯು ಬಂದು ಸ್ತುತಿಸಲು ಇಂದ್ರನು ಕಾರ್ತಿಕೇಯನನ್ನು ಒಡಗೊಂಡು ಬಂದು ದೈತ್ಯರನ್ನು ಗೆದ್ದ ಹಾಗೆ, ತಾವು ಬೇಗ ಎಚ್ಚರಗೊಂಡು ಈ ಲೋಕವನ್ನು ಸಂಭ್ರಮದಲ್ಲಿರಿಸಬೇಕು, ಇಂದ್ರನು ಚಂದ್ರನೊಡನೆ ಬಂದು ಬ್ರಹ್ಮನನ್ನು ಎಚ್ಚರಿಸುವಂತೆ ನಾನು ಬಂದು ತಮ್ಮ ಚರಣಕಮಲಗಳಲ್ಲಿ ಬಿನ್ನವಿಸಿಕೊಳ್ಳುತ್ತಿದ್ದೇನೆ. ದೇವೇಂದ್ರನು ಜಯವನ್ನೂ, ಅಗ್ನಿಯು ಶುಭಭಾವವನ್ನೂ, ಶನಿಯು ಶೌರ್ಯವನ್ನೂ, ನಿಋತಿಯು ಧೈರ್ಯವನ್ನೂ, ವರುಣನು ಆಜ್ಞಾಸತ್ವವನ್ನೂ, ಮರುತನು ಬುದ್ಧಿಯನ್ನೂ, ಕುಬೇರನು ನವಧಾನ್ಯವನ್ನೂ ಹರನು ಮಾನ್ಯತೆಯನ್ನೂ ಇತ್ತು ಪರಮವಿಕ್ರಮಿಗಳಾದ ತಮ್ಮನ್ನು ಸಲಹಲಿ, ತಾವು ಎಚ್ಚರಗೊಳ್ಳಿ" ಎಂದು ಸುಮಂತ್ರನು ನಾನಾ ವಿಧವಾಗಿ ಮಹಾರಾಜನಿಗೆ ಸುಪ್ರಭಾತವನ್ನು ಕೋರಿದ.

ಮಹಾರಾಜನು ಈ ಸ್ತುತಿಗಳನ್ನು ಕೇಳಿ ಅತ್ಯಂತ ದೈನ್ಯದಿಂದ ಕೂಡಿದ ಮೆಲುಮಾತಿನಿಂದ, "ನೀನು ಈ ಮಧುರ ಮಾತುಗಳಿಂದ ನನ್ನನ್ನು ಮತ್ತಷ್ಟು ಸಂಕಟಕ್ಕೀಡುಮಾಡುತ್ತಿರುವೆ" ಎಂದು ಹೇಳಿದ. ಆಗ ಸುಮಂತ್ರನು ಭಯದಿಂದ ಅಲ್ಲಿಯೇ ಇದ್ದ ಕೈಕೇಯಿಯನ್ನು ವಿಷಯವೇನೆಂದು ವಿಚಾರಿಸಿದ. "ತಾಯಿ, ಇದೇನಾಶ್ಚರ್ಯ, ಮಹಾರಾಜರು ನನ್ನೊಡನೆ ಈ ರೀತಿ ಕೋಪ ಬೆರೆತ ಮಾತುಗಳನ್ನಾಡುತ್ತಿದ್ದಾರೆ! ವಿಪರೀತಕರವಾದ ಮಾತನ್ನೇನು ನಾನು ಹೇಳಿದೆ? ದಯವಿಟ್ಟು ಹೇಳಿ" ಎಂದು ಬಿನ್ನವಿಸಿಕೊಂಡ. ಆಗ ಮಹಾರಾಣಿಯು, "ಮಹಾರಾಜರು ರಾತ್ರಿಯಿಡೀ ರಾಮನನ್ನು ನೆನೆಸಿಕೊಂಡು ನಿದ್ರೆಯನ್ನೇ ಮಾಡಲಿಲ್ಲ, ಮ್ಲಾನಮಾನಸರಾಗಿದ್ದಾರೆ. ಬೇಗ ಹೋಗಿ ರಾಮನನ್ನು ಕರೆದು ತಾ" ಎಂದು ತಿಳಿಸಿದಳು. ಅದರಂತೆ ಸುಮಂತ್ರನು ವೇಗವಾಗಿ ಬಂದು ಜನಸಂದಣಿಯ ನಡುವೆ ಹಾದು ಮಂಗಳಮೂರ್ತಿ ಶ್ರೀರಾಮನನ್ನು ಕಾಣಲು ತವಕಿಸುತ್ತಿರುವ ದಶರಥನನ್ನು ಹೊಗಳುತ್ತ ಬಂದು ರಾಜಸಂಕುಲವನ್ನು ಕಂಡ. ಬೆಳಗಾಗಿ ಪುಷ್ಯಯೋಗ ಒದಗಿಬಂದಿರಲು ದ್ವಿಜರು, ಮಂತ್ರಿಗಳು, ಸಕಲ ವಸ್ತುಗಳ ಸಮೇತ ಬಂದಿದ್ದ ಪುರೋಹಿತರು, ಸಮುದ್ರ, ನಾಲ್ಕೂ ದಿಕ್ಕುಗಳಲ್ಲಿ ಹರಿಯುವ ನದಿಗಳು,

ಗಂಗಾಯಮುನೆಯರ ಪವಿತ್ರ ಜಲಗಳನ್ನು ಸಂಗ್ರಹಿಸಿಕೊಂಡು ಬಂದಿದ್ದ ಭೂಸುರರು ರಾಮಾಭಿಷೇಕವನ್ನು ನೋಡುವ ಉತ್ಸಾಹದಿಂದ ಅರಮನೆಯಲ್ಲಿ ಸಂದಣಿಸಿದ್ದರು. ನೆರೆದ ಎಲ್ಲರನ್ನೂ ಉದ್ದೇಶಿಸಿ ಸುಮಂತ್ರನು, ತಾನು ಮಹಾರಾಜರನ್ನು ಕರೆತರಲು ಹೊರಟಿದ್ದೇನೆಂದು ನುಡಿದು, ಮತ್ತೆ ದಶರಥನ ಶಯ್ಯಾಗೃಹದ ಬಾಗಿಲ ಬಳಿ ಬಂದು, "ಸೂರ್ಯ ಚಂದ್ರ ವರುಣ ದೇವೇಂದ್ರ ಅಗ್ನಿ ಕುಬೇರರೂ ಋಷಿನಿವಹವೂ ನಿಮಗೆ ಒಳಿತನ್ನುಂಟುಮಾಡಲಿ. ರಾತ್ರಿ ಕಳೆದು ಪೂರ್ವದ ಬೆಟ್ಟದಲ್ಲಿ ಸೂರ್ಯನುದಯಿಸಿದ್ದಾನೆ. ಭೂಸುರರೂ ಭೂಪತಿಗಳೂ ನಿಮ್ಮ ಬರವನ್ನೆದುರು ನೋಡುತ್ತಿದ್ದಾರೆ. ಮಹಾರಾಜರೇ ಎಚ್ಚರಗೊಳ್ಳಿರಿ" ಎಂದು ಸ್ತುತಿಗೈದ. ಸೂತನ ಸ್ತುತಿಯನ್ನು ಕೇಳಿದ ದಶರಥನು ಅತಿಶಯ ಬಳಲಿಕೆಯಿಂದ ಕೂಡಿ, "ಮಂತ್ರಿ, ಮಗನನ್ನು ಕಾಣುವ ಬಯಕೆಯಿಂದ ರಾತ್ರಿಯೆಲ್ಲ ನಾನು ನಿದ್ರೆಯನ್ನೇ ಮಾಡಿಲ್ಲ, ಬೇಗ ಹೋಗಿ ರಾಮನನ್ನು ಕರೆದು ತಂದು ಉಪಕಾರ ಮಾಡು" ಎಂದಾಗ ಹಾಗೆ ಮಾಡಲು ಮಂತ್ರಿಯು ರಾಮನಿದ್ದ ಕಡೆಗೆ ಹೊರಟ.

ಹರುಷ ತುಂಬಿದ ಮಂತ್ರಿಯು ರಘುವರನ ಶುಭವನ್ನು ಹಾರೈಸುತ್ತ ಪರಿಪರಿಯಲ್ಲಿ ಅಲಂಕಾರಗೊಂಡ ನಗರದಲ್ಲಿ ಸೇರಿದ ಜನರು ಶ್ರೀರಾಮನನ್ನು ನಾನಾ ಬಗೆಯಲ್ಲಿ ಹೊಗಳುತ್ತಿದ್ದುದನ್ನು ಕಂಡು ಆನಂದಗೊಂಡು ರಾಜಪಥವನ್ನು ದಾಟಿ ಅರಮನೆಯ ಬಳಿ ಬಂದ. ಕಾಮನಬಿಲ್ಲುಗಳಂತೆ ಕಂಗೊಳಿಸುವ ತೋರಣಸಾಲು, ನಾನಾ ಹಣ್ಣುಗಳ ಗೊಂಚಲುಗಳು, ವಜ್ರಖಚಿತ ಕಂಬಗಳು, ದೇದೀಪ್ಯಮಾನವಾದ ಗೋಪುರಗಳಿಂದ ಕೂಡಿದ್ದ ಅರಮನೆಯನ್ನು ಹೊಕ್ಕು, ಅಲ್ಲಿ ವಿಹರಿಸುವ ರಾಜಹಂಸಗಳು, ಉಲಿಯುವ ಗಿಳಿಗಳು, ಕಲಕಂಠದಿಂದ ಒರೆಯುವ ದುಂಬಿವಿಂಡುಗಳು, ಕೂಜಿಸುವ ಕೋಗಿಲೆಗಳು ಇವುಗಳನ್ನೆಲ್ಲ ಕಂಡ. ಇಕ್ಕೆಲದಲ್ಲೂ ನೆರೆದ ಭೂಸುರರನ್ನು ನೋಡುತ್ತ ಸುಮಂತ್ರನು ಜಾನಕೀರಮಣನನ್ನು ಕಾಣಲೆಂದು ಆತನಿರುವ ಇಂದ್ರನ ಅರಮನೆಗಿತ ನಾಲ್ಕು ಪಟ್ಟು ವೈಭವದಿಂದ ಕೂಡಿದ ಶ್ರೀರಾಮನ ಮಂದಿರದೆಡೆಗೆ ಸರಸರನೆ ಬಂದ. ಮಂತ್ರಿಯು ಬರುತ್ತಿರುವುದನ್ನು ಕಂಡ ದ್ವಾರಪಾಲಕನು ಭರದಿಂದ ಮೇಲೆದ್ದು ಕೈಗಳನ್ನು ಮುಗಿದು ಸ್ವಾಗತಿಸಿದ. ತಾನು ಬಂದಿರುವ ವಿಷಯವನ್ನು ಯುವರಾಜರಿಗೆ ತಿಳಿಸಲು ಹೇಳಲು, ಆ ಮಾತನ್ನು ಕೇಳಿದ ಶ್ರೀರಾಮನು ತನ್ನನ್ನು ಕಾಣಲು ಆತನಿಗೆ ಅಪ್ಪಣೆಯನ್ನಿತ್ತ. ಸೇವಕರು ಮಂತ್ರಿಗೆ ಆ ಮಾತನ್ನು ಬಿನ್ನವಿಸಿದರು. ಆಗ ಸುಮಂತ್ರನು ಚಿತ್ರಪುತ್ಥಳಿಗಳು, ಗಿಳಿಗಳ ಮೃದುನುಡಿ, ನರ್ತಿಸುವ ನವಿಲುಗಳು, ನುಣ್ದನಿಗಳಲ್ಲಿ ಹಾಡುವ ಕೋಗಿಲೆಗಳು, ಸುಂದರಿಯರಾದ ಸೇವಕಿಯರು, ಸರಸದ ಮಾತುಗಳನ್ನಾಡುತ್ತ ಓಡಾಡುತ್ತಿದ್ದ ಜನಗಳ ನಡುವೆ ಹಾದು ರಾಮಚಂದ್ರನನ್ನು ನೋಡಲೆಂದು ಬಂದ.

ಥಳಥಳ ಹೊಳೆಯುವ ರತ್ನಮಯ ಸಿಂಹಾಸನದ ಮೇಲೆ ಮಣಿಗಣಖಚಿತ ದಿವ್ಯಾಭರಣಗಳನ್ನು ತೊಟ್ಟು, ನವಿರಾದ ರೇಷ್ಮೆವಸ್ತ್ರವನ್ನುಟ್ಟು ಸೂರ್ಯನ ತೇಜಸ್ಸಿನಿಂದ ಕೂಡಿ ಮಂಡಿಸಿದ್ದ ರಾಮ, ಪಕ್ಕದಲ್ಲಿ ಲಕ್ಷ್ಮಿಯಂತೆ ಕುಳಿತಿದ್ದ ಸೀತೆಯರ ಅಖಂಡ ತೇಜೋರಾಶಿಯನ್ನು ಮಂತ್ರಿಯು ಕಂಡ. ಸ್ತುತಿಸಿ ನಮಸ್ಕರಿಸಿ ನಿಂತ ಸುಮಂತ್ರನನ್ನು ಉಪಚರಿಸಿದ ಶ್ರೀರಾಮನು ಕುಶಲವನ್ನು ವಿಚಾರಿಸಿ ಆನಂತರ ಬಂದ ವಿಷಯವೇನೆಂದು ಕೇಳಿದ. ಆಗ ಸುಮಂತ್ರನು, ಮಹಾರಾಣಿ ಕೈಕೇಯಿಯೊಡನೆ ಕುಳಿತಿದ್ದ ಮಹಾರಾಜರು

ಅತಿಶಯ ಪ್ರೀತಿಯಿಂದ ತಮ್ಮನ್ನು ತಕ್ಷಣವೇ ಕಾಣುವ ಅಭಿಲಾಷೆ ಹೊಂದಿದ್ದಾರೆಂದು ತಿಳಿಸಿ, ಅವರ ಆಜ್ಞೆಯಂತೆ ಆತನನ್ನು ಕರೆದೊಯ್ಯಲು ತಾನು ಬಂದಿರುವ ಉದ್ದೇಶವನ್ನು ತಿಳಿಯಪಡಿಸಿದ. ಆ ಮಾತುಗಳನ್ನು ಕೇಳಿದ ಶ್ರೀರಾಮನು ಅತಿಶಯವಾಗಿ ಸಂತಸಗೊಂಡು ಸೀತೆಯ ಮುಖವನ್ನು ನೋಡಿ ನಸುನಗುತ್ತ, "ತಾಯಿಯು ತನ್ನ ಅಭ್ಯುದಯವನ್ನು ಬಯಸಿ ಹರಸಲು ತಂದೆಯ ಮನದಿಚ್ಛೆಯಂತೆ ನನಗೆ ಯುವರಾಜಪಟ್ಟವನ್ನು ಕಟ್ಟಲು ತನ್ನ ಒಪ್ಪಿಗೆಯನ್ನು ಸೂಚಿಸಲು ಕಳುಹಿಸಿದ್ದಾಳೆ. ನಾನು ಬೇಗನೆ ಹೋಗಿ ತಂದೆಯ ದರ್ಶನವನ್ನು ಪಡೆಯುತ್ತೇನೆ" ಎಂದು ನುಡಿದ. ಗಂಡನ ಸವಿ ಮಾತುಗಳನ್ನು ಕೇಳಿದ ಧರಣಿತನೂಜೆಯು ಅಕ್ಕರೆಯಿಂದ ಗಂಡನೊಡನೆ ಬಾಗಿಲವರೆಗೆ ಬಂದು ಮಂಗಳಾಚರಣೆ ಮಾಡಿ, "ಇಂದ್ರನಿಗೆ ಬ್ರಹ್ಮನು ಪಟ್ಟ ಕಟ್ಟುವ ಹಾಗೆ ಮುನಿಜನರ ಸನ್ನಿಧಾನದಲ್ಲಿ ಮಹಾರಾಜರು ನಿಮಗೆ ರಾಜ್ಯಸಂಪತ್ತನ್ನು ಒಪ್ಪಿಸುವುದನ್ನು ಕಾಣುವ ಭಾಗ್ಯ ನನ್ನದಾಗಲಿ. ವ್ರತಯುಕ್ತವಾದ ದೀಕ್ಷೆಯನ್ನು ತೊಟ್ಟು, ಜಿಂಕೆಯ ಚರ್ಮವನ್ನು ಧರಿಸಿ, ಮೃಗಶೃಂಗವನ್ನು ಕೈಯಲ್ಲಿ ಹಿಡಿದು ಸಿಂಹಾಸನದಲ್ಲಿ ಕುಳಿತ ನಿಮ್ಮನ್ನು ಕಂಡು ಭಜಿಸುತ್ತ ನಾನು ಕುಳ್ಳಿರುವಂತಾಗಲಿ, ಮೂಡುದಿಕ್ಕಿನಲ್ಲಿ ವಜ್ರಧಾರಿ ಇಂದ್ರನೂ, ತೆಂಕದಲ್ಲಿ ಯಮನೂ ಪಡುವಲಲ್ಲಿ ವರುಣನೂ ಬಡಗಲಲ್ಲಿ ಕುಬೇರನೂ ನಿಮಗೆ ವಿಜಯವನ್ನು ತಂದೀಯಲಿ" ಎಂದು ಬೀಳ್ಕೊಟ್ಟಳು.

ಸೀತೆಯನ್ನು ಬೀಳ್ಕೊಂಡ ಶ್ರೀರಾಮನು ಅರಮನೆಯ ನಾನಾ ಬಾಗಿಲುಗಳನ್ನು ದಾಟಿ, ಗುಹೆಯಿಂದ ಹೊರಹೊರಟ ಸಿಂಹದಂತೆ ಬಂದು, ಮಧ್ಯದಲ್ಲಿ ಕೈಜೋಡಿಸಿ ನಿಂತಿದ್ದ ಲಕ್ಷ್ಮಣನನ್ನು ಕಂಡು ಅಕ್ಕರೆಯಿಂದ ಮಾತನಾಡಿಸಿ, ಪರಿವಾರದೊಡನೆ ಮುನ್ನಡೆದು ಪೂರ್ವಾಚಲವನ್ನು ಪೂಷನು ಏರುವ ಹಾಗೆ ಮಂತ್ರಿಸಹಿತ ಹೊಂದೇರನ್ನೇರಿದ. ಗುಡುಗಿನಂತೆ ಶಬ್ದಗೈವ ರಥದ ರತ್ನಮಯ ಚಕ್ರಗಳ ಚೀತ್ಕೃತಿ, ಆನೆಯ ಮರಿಯ ಘೀಳಿನಂತಹ ಗಾಂಧರ್ವಗಾನಗಳಿಂದ ಕೂಡಿ ಸೂರ್ಯನ ಹೊಳಪನ್ನು ಧಿಕ್ಕರಿಸುವ ರಥವನ್ನೇರಿ ಇಂದ್ರನಂತೆ ಸಾಗಿಬರುವ ಇನಕುಲಾಗ್ರೇಸರನು ಅರಮನೆಯ ಆವರಣದಿಂದ ಹೊರಬರುವಷ್ಟರಲ್ಲಿ ಛತ್ರಚಾಮರಗಳಿಂದ ಕೂಡಿ ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದು ನಿಂತಿದ್ದ ಲಕ್ಷ್ಮಣನು ಅಣ್ಣನನ್ನು ಹಿಂಬಾಲಿಸಿದ. ದಾರಿಯುದ್ದಕ್ಕೂ ಮಾಗಧರು ವಂಶಸ್ತೋತ್ರಗೈಯುತ್ತಿದ್ದರು, ತಾಳವೇ ಮುಂತಾದ ವಾದ್ಯಗಳು ದನಿಗೈಯುತ್ತಿದ್ದವು, ಭೂಸುರಸಮೂಹವು ಆಶೀರ್ವಚನಗಳನ್ನು ಸುರಿಸುತ್ತಿದ್ದಿತು, ವೀರಭಟರು ಸಿಂಹನಾದ ಮಾಡುತ್ತಿದ್ದರು, ಆನೆಕುದುರೆರಥಗಳು ವೈಭವದಿಂದ ಸಾಗುತ್ತಿದ್ದವು – ಹೀಗೆ ರಾಜಬೀದಿಯನ್ನೆಲ್ಲ ತೇಜೋಮಯವಾಗಿ ಮಾಡುತ್ತ ಮೋಡಗಳ ರಾಶಿಯನ್ನು ಸೀಳಿಕೊಂಡು ಬರುವ ಚಂದ್ರನಂತೆ ಶ್ರೀರಾಮಚಂದ್ರನು ಸಾಗಿಬಂದ. ಎಡಬಲಗಳಲ್ಲಿನ ಉಪ್ಪರಿಗೆಗಳ ಮೇಲೆ ನಿಂತು ನೋಡುವ ಗಂಡಸರು ಹೆಂಗಸರು ಮಕ್ಕಳು ಹರುಷದಿಂದ ಅಡಿಗಡಿಗೆ ಹೂಮಳೆಗರೆಯುತ್ತಿದ್ದರು, ಕೆಲವರು ಹಾಡಿಹೊಗಳುತ್ತಿದ್ದರು, ಮತ್ತೆ ಕೆಲವರು ನಾನಾ ಬಗೆಯಲ್ಲಿ ಸ್ತುತಿಗೈಯುತ್ತಿದ್ದರು, ರಾಮನು ರಾಜನಾದರೆ ಮಳೆಯು ಸಸ್ಯಸಂಕುಲವನ್ನು ಬೆಳೆಸಿದಂತೆ ತನ್ನ ಹಿರಿಯರಿಗಿಂತಲೂ ಅತಿಶಯವಾಗಿ ನಮ್ಮನ್ನು

ಸಲಹುತ್ತಾನೆ. ಈತನನ್ನು ನೋಡಿ ಚತುರ್ವರ್ಣದ ಜನರೂ ನಲಿಯುತ್ತಾರೆ ಎನ್ನುತ್ತಿದ್ದರು. ಯುವತಿಗರ ದೃಷ್ಟಿಯಲ್ಲಿ ರಾಮನು ಮನ್ಮಥನೆನಿಸಿದರೆ, ಬುಧಜನರಿಗೆ ಪಾಲ್ಗಡಲು, ಅಹಂಕಾರಿಗಳ ಪಾಲಿಗೆ ಮುಕ್ಕಣ್ಣ, ಆರ್ತರಿಗೆ ಪಾರಿಜಾತ – ಎಂದು ಬಗೆಬಗೆಯಲ್ಲಿ ಜನರು ಹೊಗಳುತ್ತಿದ್ದುದು ಕೇಳಿಸಿದರೂ ಕೇಳಿಸದಂತೆ ಶ್ರೀರಾಮನು ನಡೆತಂದ. ಈ ಮಂಗಳಮೂರ್ತಿಯು ಯಾವಾಗ ಪಟ್ಟದಲ್ಲಿ ಕುಳಿತುಕೊಳ್ಳುವನೋ, ನಾವೆಲ್ಲರೂ ಸಂತೋಷದಿಂದ ಅದನ್ನು ನೋಡುತ್ತೇವೆಯೋ ಎಂದು ಜನರು ಕಾತರರಾಗಿ ಕಾಯುತ್ತಿದ್ದರು. ಹುಣ್ಣಿಮೆಯ ಚಂದ್ರನನ್ನು ಕಂಡ ನೈದಿಲೆಯಂತೆ, ಅಮೃತವನ್ನು ಕಂಡ ಬಿಡುಗಣ್ಣರಂತೆ ನೋಡುವ ಜನರ ದೃಷ್ಟಿ ರಾಮನ ಮೇಲಿದ್ದುದು ಮರಳಲೇ ಇಲ್ಲ. ಹೀಗೆ ರಾಮನು ದಶರಥನ ಮಂದಿರಕ್ಕೆ ಬರುವ ದಾರಿಯಲ್ಲಿ ಅಪರಿಮಿತ ಉತ್ಸಾಹದಿಂದ ನೋಡುವ, ಹೊಗಳುವ ಜನರನ್ನು ನೋಡುತ್ತ ಹರುಷದಿಂದ ಬಂದು ತೇರಿನಿಂದಿಳಿದು ಅರಮನೆ ಕಕ್ಷಾಂತರಗಳನ್ನು ದಾಟಿ ಹೋಗುತ್ತಿರಲು ಪರಿವಾರದ ಜನರು ಆನಂದ ತುಂಬಿದ ಕಂಗಳಿಂದ ಕಂಡು ನಮಿಸಿ ಹೊಗಳುತ್ತಿದ್ದರು, ಹೆಂಗೆಳೆಯರು ಅರಳುಗಳನ್ನು ಸೂಸುತ್ತಿದ್ದರು. ಅವರನ್ನೆಲ್ಲ ನೋಡಿ ನಸುನಗುತ್ತ ಇಂದಿರಾವರನಾದ **ರಾಮಪುರದರಸನು** ಮಹಾರಾಜನ ಕೋಣೆಯೆಡೆಗೆ ಬಂದ.

೮. ಕೈಕೇಯಿಯು ತನ್ನ ವರಗಳ ವೃತ್ತಾಂತವನ್ನು ರಾಮನಿಗೆ ಹೇಳುವುದು

ನಗರಾಜತನೂಭವೆಯೇ ಕೇಳು. ಶ್ರೀರಾಮನು ತನ್ನ ಹಿಂದೆ ಬಂದಿದ್ದ ಮಂತ್ರಿಗಳು ಮತ್ತು ಮಾಗಧರನ್ನು ಒಂದು ಹಂತದಲ್ಲಿ ನಿಲ್ಲಿಸಿ, ತಾನೊಬ್ಬನೇ ಬಂದು, ದಶರಥನ ಕೋಣೆಯ ಬಳಿಯಿದ್ದು ತನ್ನನ್ನು ಸ್ತುತಿಸಿದ ಪಡಿಹಾರಿಗಳನ್ನು ಮನ್ನಿಸಿ, ಒಳಹೊಕ್ಕ. ಅಲ್ಲಿದ್ದ ತಂದೆಯನ್ನು ಕಂಡು ಸಾಷ್ಟಾಂಗವೆರಗಿದ. ತಾಯಿ ಕೈಕೇಯಿಯ ಪಾದಾರವಿಂದಗಳಿಗೆ ವಂದಿಸಿ ನಿಂತುಕೊಂಡ. ಆದರೆ ದಶರಥನು ಎದುರಿಗೆ ನಿಂತಿದ್ದ ಮಗನನ್ನು ಮಾತನಾಡಿಸದೆ ಮೌನದಿಂದ ನಿಟ್ಟುಸಿರುಬಿಟ್ಟ. ಕಪ್ಪುಗಟ್ಟಿದ ಮುಖದಲ್ಲಿನ ಕಣ್ಣುಗಳಿಂದ ಕಪೋಲಗಳ ಮೇಲೆ ಹರಿದು ಬರುತ್ತಿರುವ ನೀರು, ಹೊರಸೂಸುವ ಬಿಸಿಯುಸಿರಿನಿಂದ ಬಿರಿದ ಮೂಗುಗಳಿಂದ ಕೂಡಿ ಹತ್ತಿರದ ಪೀಠವೊಂದರಲ್ಲಿ ಕುಳಿತಿದ್ದ ತಂದೆಯನ್ನು ಕಂಡು ಶ್ರೀರಾಮನು ಚಕಿತಗೊಂಡ: ಯಾವ ಕಾರಣದಿಂದ ಮಹಾರಾಜನು ಹುಬ್ಬು ಗಂಟಿಕ್ಕಿಕೊಂಡು ತನ್ನನ್ನು ಮಾತನಾಡಿಸದೇ ಇದ್ದಾನು ಎಂದು ಚಕಿತಗೊಂಡ. ಕೊಂದುಬಿಡುವಷ್ಟು ಕೋಪದಿಂದ ಕೂಡಿರುವಾಗಲೂ ನಾನು ಹೋದರೆ ನಸುನಗುತ್ತ ಅಪ್ಪಿಕೊಂಡು ಮುದ್ದಾಗರೆಯುವ ತಂದೆಯು ಇಂದು ಯಾವ ಕಾರಣದಿಂದ ಹೀಗೆ ಕಠಿಣನಾಗಿದ್ದಾನೆ ಎಂಬ ಚಿಂತೆ ಅವನನ್ನು ಕಾಡಿತು. ಅದೇ ಭಯದಿಂದ ಕೂಡಿ ರಘುವೀರನು ಕೈಕೇಯಿಯ ಬಳಿ ಹೋಗಿ ವಿನಯದಿಂದ ಮಹಾರಾಜನ ಚಿತ್ತದ ಅನುತಾಪಕ್ಕೆ ಕಾರಣವೇನೆಂದು ಕೇಳಿದ: "ಅಮ್ಮ, ಇದೇನಾಶ್ಚರ್ಯ, ಈ ಭೂಪಾಲಕರತ್ನವು ಕೋಪಗೊಳ್ಳಲು ಯಾರ ಕುಕೃತ್ಯವು ಕಾರಣ?

ತಂದೆಯ ಅಂತರಾಳಕ್ಕೆ ದುಃಖವೊದಗಲು ಯಾವ ಅಶುಭವಾರ್ತೆ ಕಾರಣವಾಯಿತು? ಆತನ ಆಜ್ಞೆಯನ್ನು ಯಾರಾದರೂ ಮೀರಿದರೋ, ಅಹಿತರಾಜರಾರಾದರೂ ಕ್ರೂರಕಾರ್ಯವನ್ನೆಸಗಿದರೋ, ದಯಪಿಟ್ಟು ಹೇಳಿ. ಭರತಶತ್ರುಘ್ನರಿಂದಲೇನಾದರೂ ಅಶುಭ ಸುದ್ದಿಯು ಬಂದಿತೋ? ಸೋದರಮಾವನೇನಾದರೂ ಅಪರಾಧವನ್ನು ಮಾಡಿದನೋ? ಪಾದಸೇವೆ ಮಾಡುವುದರಲ್ಲಿ ನನ್ನ ತಾಯಿಯನ್ನೊಳಗೊಂಡಂತೆ ಯಾರಿಂದಲಾದರೂ ಅಪಚಾರ ಸಂಭವಿಸಿತೇ? ದಯಪಿಟ್ಟು ಹೇಳಿ. ಗುರುವಚನವವನ್ನೋ ರಾಜಾಜ್ಞೆಯನ್ನೋ ಯಾರಾದರೂ ಮೀರಿ ನಡೆದರೇ? ತಂದೆಗೆ ಎಂದೂ ಈ ನಿರ್ವೃತಿ ದುರ್ವೃತ್ತಿ ತಾಕಿದುದಿಲ್ಲ, ಅವನ ಮನಸ್ಸಿನಲ್ಲಿ ಸಂಕಟವುದಿಸುವಂತೆ ಮಾಡಿದುದಕ್ಕೆ ಪ್ರತೀಕಾರವನ್ನು ಕೈಗೊಳ್ಳುವಂತೆ ಏನಾದರೂ ಮಾಡಬೇಕೇ ಹೇಳಿ. ಹಿರಿಯನೂ ಇಂದ್ರಸಮಾನನೂ ಸರ್ವಜನರ ಪ್ರತ್ಯಕ್ಷದೇವಸ್ವರೂಪನೂ ಹೀಗೆ ಕೋಪ ದುಃಖಗಳಿಂದ ಕೂಡಿರುವಾಗ ಯಾರು ತಾನೇ ಸಂತಸದಿಂದಿದ್ದಾರು? ಹೇಳಿದರೆ ನಾನು ನಿಮ್ಮ ಪಾದವು ಆಜ್ಞೆ ಮಾಡಿದ ರೀತಿಯಲ್ಲಿ ನಡೆದುಕೊಳ್ಳುತ್ತೇನೆ" ಎಂದು ನಮ್ರವಾದ ಮಾತುಗಳಿಂದ ಕೇಳಿಕೊಂಡ.

ಕೈಕೇಯಿಯ ಆಸೆಯೆಂಬ ಸಮುದ್ರದಲ್ಲಿ ಲಜ್ಜೆ ಮುಳಗಿಹೋಯಿತು, ಮುಂಬರಲಿರುವ ಐಸಿರಿಯ ಬಿಸಿಲತೊರೆಯಲ್ಲಿ ದಾಕ್ಷಿಣ್ಯ ಸೇರಿಹೋಯಿತು, ಕಾಳಕೂಟದ ಕಾಸಾರದಲ್ಲಿ ಮನೋರಥವು ಬೆರೆತುಹೋಯಿತು. ರಾಮನ ಮಾತುಗಳನ್ನು ಕೇಳಿ ಅವಳಲ್ಲಿ ಪುಳಕವುದಿಸಿತು, ಮನಸ್ಸಿನಲ್ಲಿ ಕೆಟ್ಟ ಬಗೆಯ ಹರ್ಷ ಉದಿಸಿ ಮುಂದಾಗಬೇಕಾದ ಕಾರ್ಯವನ್ನು ಅವನಿಗೆ ವಿವರಿಸಿದಳು: "ನಿಮ್ಮ ತಂದೆಗೆ ಯಾವುದೇ ಶಾರೀರಕ ಬಾಧೆಯಿಲ್ಲ, ಮನಸ್ಸು ಏನನ್ನೋ ಹಾರೈಸುತ್ತಲೂ ಇಲ್ಲ, ಶತ್ರುಗಳ ಭಯವಂತೂ ಇಲ್ಲವೇ ಇಲ್ಲ, ಪುತ್ರ ಮಿತ್ರ ಭೃತ್ಯರಾರೂ ಯಾವ ಅಪಚಾರವನ್ನೂ ಮಾಡಲಿಲ್ಲ, ಹಾಗೆ ನೋಡಿದರೆ ಅವರ ಈ ಸ್ಥಿತಿಗೆ ಕಾರಣವು ನೀನೇ! ಮಹಾರಾಜರ ಮನೋರಥವನ್ನು ನೀನು ಪೂರೈಸಿದರೆ ಅವರು ಸರಿಹೋಗುತ್ತಾರೆ. ಹಿಂದೆ ನಡೆದ ದೇವಾಸುರ ಯುದ್ಧದಲ್ಲಿ ನಾನು ಮಾಡಿದ ಸಹಾಯಕ್ಕಾಗಿ ಮಹಾರಾಜರು ಎರಡು ವರಗಳನ್ನು ಕರುಣಿಸಿದರು. ಆ ಎರಡನ್ನೂ ಈಗ ನೆರವೇರಿಸಬೇಕೆಂದು ನಾನು ಕೇಳಿಕೊಂಡೆ. ಕೊಟ್ಟ ಮಾತಿಗೆ ತಪ್ಪಿದರೆ ದೋಷವು ತಪ್ಪಿದ್ದಲ್ಲ. ನಿನ್ನ ದಾಕ್ಷಿಣ್ಯದಿಂದಾಗಿ ನೃಪತಿಯು ಖಿನ್ನರಾಗಿದ್ದಾರೆ, ಅದರಿಂದ ಪಾರಾಗುವ ಬೇರೆ ಉಪಾಯವಾವುದೂ ಇಲ್ಲ. ಸೂರ್ಯನ ಬಿಸಿಲಿನ ಉರುಬಿನಿಂದ ಗಿರಿಶಿಖರವು ಸೀಳುವ ಹಾಗೆ ವರಗಳ ಕರ್ಕಶವಾಕ್ಕು ಕಿವಿಗೆ ಬಿದ್ದು ರಾಜನ ಧೈರ್ಯ ಕುಸಿದುಹೋಗಿದೆ." ವಿಷವನ್ನು ನೋಡಿಯೇ ಕೆಲವು ಪ್ರಾಣಿಗಳು ಪ್ರಜ್ಞೆ ಕಳೆದುಕೊಳ್ಳುವಂತೆ, ಶ್ರೀರಾಮನು ಬೊಂಬೆಯ ಹಾಗೆ ಒಂದರೆಕ್ಷಣ ಎವೆಯಿಕ್ಕದೆ ನಿಂತುಬಿಟ್ಟ; ಅನಂತರ ಸಾವರಿಸಿಕೊಂಡು, "ಸೂರ್ಯನಿಗೆ ಎಂದಾದರೂ ತಣ್ಣೀರಿನಿಂದ ಭಯವುಂಟಾದೀತೇ, ತಂದೆ ಕೊಟ್ಟ ಮಾತು ಎಂದಾದರೂ ಹುಸಿಯಾಗುವುದುಂಟೆ? ತಂದೆಯ ಬಯಕೆಯನ್ನು ತಿಳಿದು ಅದರಂತೆ ನಡೆದುಕೊಳ್ಳುವವನೇ ಉತ್ತಮನಾದ ಮಗ, ಹೇಳಿದ್ದನ್ನು ಮನಃಪೂರ್ವಕವಾಗಿ ಮಾಡುವವನು ಮಧ್ಯಮ, ಹೇಳಿದರೂ

ನಡೆಸದಿದ್ದವನು ಅಧಮ. ಧರಣಿಜಾತೆ ಲಕ್ಷ್ಮಣರು ನನ್ನ ಐಶ್ವರ್ಯ, ಅವರನ್ನು ಬಿಟ್ಟು ವಿಷವನ್ನು ಸೇವಿಸು ಎಂದು ಹೇಳಿದರೂ ನಾನು ನೆರವೇರಿಸುತ್ತೇನೆ, ನಾನು ಮಾತಿಗೆ ತಪ್ಪುವವನಲ್ಲ. ತಂದೆಯ ಮನೋರಥವನ್ನು ಸಂತೋಷದಿಂದ ನೆರವೇರಿಸುತ್ತೇನೆ, ಏನು ಮಾಡಬೇಕೆಂಬುದನ್ನು ಹೇಳಿರಿ, ರಾಮನೆಂದಿಗೂ ಸುಳ್ಳಾಡನು" ಎಂದು ಆಶ್ವಾಸನೆಯಿತ್ತ.

ರಾಮನು ಹೀಗೆ ಭರವಸೆಯಿತ್ತ ಮೇಲೆ, ತನ್ನ ಬಯಕೆಯು ಈಡೇರುವುದು ಖಚಿತವೆಂದೂ, ಯಾವುದೇ ಅಡ್ಡಿಯಾಗದೆಂದೂ ದೃಢಗೊಂಡ ಬಳಿಕ ಕೈಕೇಯಿಯು ನಸುನಗುತ್ತ ಉಪಾಯದಿಂದ ವಿಷಯವನ್ನು ತಿಳಿಸಿದಳು: "ಬಹು ಹಿಂದೆ ದೇವತೆಗಳಿಗೂ ಅಸುರರಿಗೂ ನಡುವೆ ಒಂದು ಯುದ್ಧ ನಡೆಯಿತು; ಆಗ ನನ್ನ ಬಗ್ಗೆ ಪ್ರೀತಿಯುಂಟಾಗಲು ದಶರಥ ಮಹಾರಾಜರು ಎರಡು ವರಗಳನ್ನು ದಯಪಾಲಿಸಿದರು. ಆದರೆ ನಾನು ಆಗಲೇ ಅವುಗಳನ್ನು ಪಡೆಯದೆ, ಈಗ ಅವುಗಳನ್ನು ಹೊಂದ ಬಯಸಿದೆ. ನೀನು ಕೇಳುವುದಾದರೆ ಹೇಳುತ್ತೇನೆ, ಎಷ್ಟೇ ಆಗಲೀ, ನೀನು ನುಡಿದಂತೆ ನಡೆಯುವವರಲ್ಲಿ ಅಗ್ರೇಸರನಲ್ಲವೇ! ರಾಮಚಂದ್ರನಿಗೆ ಯೌವರಾಜ್ಯಾಭಿಷೇಕವನ್ನು ನೆರವೇರಿಸಲೆಂದು ನಡೆಸಿರುವ ಸಿದ್ಧತೆಯಲ್ಲಿಯೇ ನನ್ನ ಮಗನಾದ ಭರತನಿಗೆ ರಾಜ್ಯಪದವಿಯನ್ನೀಯುವುದು ಒಂದು, ಆನಂತರ ರಾಮನು ಮುನಿಸ್ತೋಮದೊಡನೆ ಸೇರಿ ಹದಿನಾಲ್ಕು ವರ್ಷಗಳ ಕಾಲ ವನವಾಸವನ್ನು ಕೈಗೊಳ್ಳುವುದು – ಈ ಎರಡು ವರಗಳನ್ನು ಕೃಪೆಗೈಯಬೇಕೆಂದು ರಾಜರಲ್ಲಿ ಕೇಳಿಕೊಂಡೆ. ನನ್ನ ಮಾತುಗಳು ನ್ಯಾಯಯುತವಾದ ಕಾರಣದಿಂದ ರಾಜನಲ್ಲಿ ಭಯ ಆವರಿಸಿದೆ; ನಿನ್ನ ದಾಕ್ಷಿಣ್ಯದ ಕಾರಣದಿಂದಾಗಿ ಅವರು ನಿನ್ನೊಡನೆ ಈ ವಿಷಯವನ್ನು ಹೇಳದೆ ಮೌನದಿಂದಿದ್ದಾರೆ. ಆ ಮಾತುಗಳನ್ನು ನೀನೀಗ ನಡೆಸಬೇಕು" ಎಂದು ನಸುನಗುತ್ತ ಹೇಳಿದಳು. ಆಗ ಶ್ರೀರಾಮನು ತಂದೆಯ ಕಡೆ ತಿರುಗಿ, "ಮೊದಲು ಈ ಭೂಮಿಯ ಭಾರವನ್ನು ನಾನು ಹೊರಬೇಕೆಂದು ಬಯಸಿದಿರಿ, ಈಗ ವನವಾಸಕ್ಕೆ ಅಣಿಯಾಗಬೇಕೆಂದು ಸೂಚಿಸುತ್ತಿದ್ದೀರಿ. ಎರಡರಲ್ಲಿಯೂ ನಿಮ್ಮ ವಾತ್ಸಲ್ಯವೇ ತುಂಬಿಕೊಂಡಿದೆ. ನನ್ನ ಮನಸ್ಸು ಖಿನ್ನಗೊಳ್ಳದೆ ಹದಿನಾಲ್ಕು ವರ್ಷ ವನವಾಸ ಮಾಡಿ ನಿಮ್ಮ ಮಾತನ್ನು ನೆರವೇರಿಸುತ್ತೇನೆ. ನೃಪತಿಯ ಆಜ್ಞೆಯನ್ನು ಪಾಲಿಸಲೋಸುಗ ನಾನು ನಾರುಬಟ್ಟೆಗಳನ್ನುಟ್ಟು ಜಟಾಧಾರಿಯಾಗಿ ಕಾಡಿಗೆ ಹೋಗುತ್ತೇನೆ. ಆದರೆ ನನ್ನ ಜೊತೆ ನೀವು ಮಾತನಾಡದಿರಲು ಕಾರಣವೇನು? ಧನಕನಕರಾಜ್ಯಭೋಗ ವಸ್ತುವಾಹನ ಇವುಗಳನ್ನೆಲ್ಲ ಪ್ರೀತಿಯಿಂದ ಭರತನಿಗೆ ಬಿಟ್ಟುಕೊಡುತ್ತೇನೆ; ತಂದೆ ಹೇಳಿದ ಹಿತವನ್ನು ಮಾಡದೆ ತಿರಸ್ಕರಿಸುತ್ತೇನೆಯೇ? ನೀವು ಕೋಪದಿಂದ ತಲೆಬಗ್ಗಿಸಿ, ಕಂಬನಿಯನ್ನು ಸುರಿಸುತ್ತ, ಮಾತನಾಡದಿರುವುದು ಮಾತ್ರ ನನ್ನ ಮನಸ್ಸಿಗೆ ಖೇದವನ್ನುಂಟುಮಾಡುತ್ತದೆ. ಚರರನ್ನಟ್ಟಿ ಭರತನನ್ನು ಕರೆಸಿಕೊಳ್ಳಿರಿ, ಅವನು ಬಾರದಿದ್ದರೂ ನಾನು ಇಂದೇ ಕಾಡಿಗೆ ತೆರಳುತ್ತೇನೆ" ಎಂದ.

ರಾಮನ ಮಾತುಗಳನ್ನು ಕೇಳಿದ ಕೈಕೇಯಿಯು ಆನಂದದಿಂದ, "ಭರತನನ್ನು ಕರೆತರಲು ರಥಕುದುರೆಗಳನ್ನಿತ್ತು ನಾನೀಗಲೇ ಚರರನ್ನು ಕಳಿಸುತ್ತೇನೆ. ಈ ಮಾತುಗಳನ್ನು ನಿನಗೆ ನೇರವಾಗಿ ಹೇಳಲು ರಾಜನಿಗೆ ಇರಿಸುಮುರಿಸು: ನೀನು ಕಾಡಿಗೆ ತೆರಳುವವರೆಗೂ



ಕೈಕೆಯಿಯು ರಾಮನಿಗೆ ತನಗೆ ದೊರೆತಿದ್ದ ವರಗಳನ್ನು ವಿವರಿಸಿದುದು

ಅವರು ಸ್ನಾನ ಅನ್ನಪಾನಾದಿಗಳನ್ನು ತೊರೆದಿರುವುದು ಖಂಡಿತ" ಎಂಬ ದಾರುಣವಾದ ಮಾತನ್ನು ಕೇಳಿದ ದಶರಥನು 'ಹಾ' ಎಂದು ಚೀರುತ್ತ ನೆರಕ್ಕುರುಳಿಬಿಟ್ಟ. ರಘುರಾಮನು ಅವನನ್ನು ಓಡಿದೆತ್ತಿ ಮೇಲೆ ಮಲಗಿಸಿ ತಾಯಿಯೊಡನೆ, "ಧನದಭಿಲಾಷೆ ರಾಜ್ಯಾಕಾಂಕ್ಷೆಗಳನ್ನು ತೊರೆದ ನನ್ನ ಮನಸ್ಸು ಮುನಿಸಮಾನವಾಗಿ ಈಗ ಅರಣ್ಯಮುಖಿಯಾಗಿದೆ. ನೀವು ಹೇಳಿದಂತೆಯೇ ನಾನೀಗ ಹೋಗಿ ತಾಯಿ ಕೌಸಲ್ಯೆಯ ಅಪ್ಪಣೆ ಪಡೆದು ಸೀತೆಯನ್ನು ಸಮಾಧಾನಪಡಿಸಿ ಹರ್ಷದಿಂದ ಮರಳಿ ಬಂದು ನಿಮಗೆ ವಂದಿಸಿ ಹೋಗುತ್ತೇನೆ, ಯಾವುದೇ ಸಂದೇಹ ಬೇಡ. ಹಿಂದಿನ ರಾಜರುಗಳಂತೆಯೇ ಭರತನು ಈ ರಾಜ್ಯವನ್ನು ರಕ್ಷಿಸಿ ರಾರಾಜಿಸಲಿ; ಸೂರ್ಯವಂಶಜ ರಾಜರೆಲ್ಲರೂ ಸಕಲಮುನಿವೃಂದದ ಪಾದಗಳಲ್ಲಿ ತಮ್ಮ ಶಿರಸ್ಸನ್ನಿಟ್ಟವರಾಗಿದ್ದಾರೆ. ನಾನು ನಿರಂತರವಾಗಿ ಹಾಗೆ ಮಾಡಲು ಮುನಿಗಳಿರುವ ಜಾಗಕ್ಕೇ ಹೋಗುತ್ತೇನೆ" ಎಂದು ನುಡಿದ. ಈ ಮಾತುಗಳನ್ನು ಕೇಳಿದ ದಶರಥನು ಗುಡುಗನ್ನು ಕೇಳಿದ ರಾಜಹಂಸದಂತೆ ಒದ್ದಾಡಿ ಮೂರ್ಛೆ ಹೋದ. ರಾಮನು ಆತನ ಪಾದಗಳಿಗೆರಗಿ ಬಲವಂದು, ಕೈಕೇಯಿಗೆ ನಮಸ್ಕರಿಸಿ ಒಂದೊಂದಾಗಿ ಅರಮನೆಯ ಕಕ್ಷೆಗಳನ್ನು ದಾಟುತ್ತ ಬರುವಾಗ ತನಗೆ ನಮಸ್ಕರಿಸುವ ಭೃತ್ಯಮಿತ್ರರನ್ನು ಸ್ನೇಹದಿಂದ ಮಾತನಾಡಿಸುತ್ತ, ರಾಜ್ಯಾಭಿಷೇಕಕ್ಕಾಗಿ ಸಂಗ್ರಹಿಸಿದ್ದ ವಸ್ತುಸಮಸ್ತಕ್ಕೆ ನಮಸ್ಕಾರ ಮಾಡಿ, ತನಗಾಗಿ ಹಿಡಿದು ಧಾವಿಸಿದ ಛತ್ರಚಾಮರಧಾರಿಗಳನ್ನು ದೂರೀಕರಿಸಿ ಬರುತ್ತಿರಲು, ಅವನ ಹಿಂದೆ ಅರಿವಿದ್ರಾವಣನಾದ ಲಕ್ಷ್ಮಣನು ನಾಗರಾಜನಂತೆ ಬುಸುಗುಡುತ್ತ ಬರುತ್ತಿರಲು, ಅಲ್ಲಿ ಸೇರಿದ್ದ ರಾಜಸಮೂಹ ಹಾಗೂ ವಿಪ್ರಬಾಂಧವರು 'ಇದೇನು ಒಂದಿಷ್ಟೂ ದೊರೆತನದ ಚಿಹ್ನೆಯನ್ನು ಹೊಂದದೆ ತ್ವರಿತಗತಿಯಿಂದ ಬರುತ್ತಿರುವನಲ್ಲ' ಎಂದು ವಿಸ್ಮಯಗೊಂಡು ತಮ್ಮತಮ್ಮಲ್ಲಿಯೇ ಮಾತನಾಡಿಕೊಂಡರು. ಕೈಗೆ ಸಿಕ್ಕಿದ್ದ ರಾಜ್ಯಾಭಿಷೇಕವು ತಪ್ಪಿಹೋಯಿತಲ್ಲ ಎಂದು ರಾಮನ ಮನಸ್ಸು ಕುಗ್ಗಿತೇ? ಮಲಿನತೆ ಮೆತ್ತಿಕೊಂಡಿತೇ? ಮುಖ ಕಳೆಗುಂದಿತೇ? ಊಹ್ಞೂ. ಹಿಮದಿಂದ ಚಂದ್ರನ ಕಲೆಗೆ ಊನವಾಗುತ್ತದೆಯೇ? ತನಗೆ ನಮಸ್ಕರಿಸಿದವರನ್ನು ಉಪಚರಿಸುತ್ತ, ಪುರಜನರನ್ನು ಮನ್ನಿಸುತ್ತ, ಸ್ನೇಹಿತರನ್ನು ಸಂತೈಸುತ್ತ ಸಂತೋಷಚಿತ್ತದಿಂದಲೇ ರಘುಪತಿರಾಮನು ತಾಯಿ ಕೌಸಲ್ಯೆಯ ಮನೆಯೆಡೆಗೆ ನಡೆತಂದ.

ತನ್ನ ಕಿರಿಯ ಹೆಂಡತಿಯ ಮಾತುಗಳನ್ನು ಕೇಳಿ, ಎಂದೂ ಬಿರುನುಡಿಯನ್ನಾಡದೆ ಬೇಸರಗೊಳಿಸದೆ ವಿಷಾದವನ್ನು ವ್ಯಕ್ತಪಡಿಸದೆ ನಮ್ಮ ಯೋಗಕ್ಷೇಮವನ್ನು ವಿಚಾರಿಸುವ ಕಲ್ಪವೃಕ್ಷವನ್ನು ಕಾಡಿಗೆ ಕಳಿಸಿ ರಾಜನು ಯಾವ ಗತಿಯನ್ನೈದುವನೋ ಎಂದು ವಿಷಯವನ್ನು ತಿಳಿದ ಅಂತಃಪುರಸ್ತ್ರೀಯರು ಕರುವನ್ನು ನೋಡದ ಎಳಗಂದಿ ಹಸುವಿನಂತೆ ಕಂಗಾಲಾದರು. ಎಡಬಲಗಳಲ್ಲಿ ಈ ಕುರಿತು ಬಿರುನುಡಿಗಳನ್ನಾಡುವವರ ಬಳಿ ಬಂದು ಅಮಾತ್ಯಾದಿಗಳನ್ನು ಸಂತಯಿಸಿ ತಾಯಿಯ ಮನೆಗೆ ಬರಲು. ಹೊರಬಾಗಿಲಿನಲ್ಲಿ ನಿಂತಿದ್ದ ವೃದ್ಧರು ನಮಸ್ಕರಿಸಿದಾಗ. ಅವರೆಡೆ ಹರುಷದಿಂದ ನೋಡಿ ನಸುನಗುತ್ತ, ಮತ್ತೊಂದೆಡೆಯಲ್ಲಿ ಭೂಸುರರೂ ಪ್ರಾಜ್ಞರೂ ಇರುವುದನ್ನು ಕಂಡು ಅವರಿಗೆ ನಮಸ್ಕರಿಸಿ ಉಪಚಾರದ ಮಾತುಗಳನ್ನಾಡಿ ಮುಂದೆ ನಡೆದ.

ಅಂತಃಪುರದ ಬಾಗಿಲಲ್ಲಿ ಹೆಂಗಸರೂ ಮಕ್ಕಳೂ ಸಡಗರದಿಂದ ಮೇಲೆದ್ದು ಮೃದು ಮಾತುಗಳಿಂದ ಸ್ತುತಿಸಿ, ಅಷ್ಟರಲ್ಲಿಯೇ ರಾಮನು ಬಂದ ವಾರ್ತೆಯನ್ನು ಕೌಸಲ್ಯೆಗೆ ತಿಳಿಸಲೆಂದು ಒಳಗೆ ಹೋದರು. ಅಲ್ಲಿ ಪೀಠವೊಂದರ ಮೇಲೆ ನಿಯಮಬದ್ಧಳಾಗಿ ಮೌನದಿಂದ ಕುಳಿತಿದ್ದ ನಿರ್ಮಲೆಯಾದ ರಾಣಿಯನ್ನು ಕಂಡರು. ಎಡಗಾಲಿನಿಂದ ನಾಲ್ಕು ಕಾಲ್ಬೆರಳುಗಳನ್ನು ಒತ್ತಿಕೊಂಡು, ಆರರ ಎಡೆಯಲ್ಲಿ ಬಲಹೆಜ್ಜೆಯನ್ನಿಟ್ಟು, ಹತ್ತು ದಳಗಳ ಕಮಲವನ್ನು ರಚಿಸಿ, ಹದಿನಾರು ಸಂವರ್ತಿಕಾಬಂಧನವನ್ನು ಮಾಡಿ, ಆನಂತರ ತೊಡರಿಸುತ್ತ ಭೂಶಿಖಿಗಳನ್ನು ಹಿಡಿದು ರುದ್ರಸ್ಥಾನದಲ್ಲಿ ಮರುತನನ್ನು ದೃಙ್ಮನಗಳಿಂದ ಹಿಡಿದಿಟ್ಟುಕೊಂಡು ಸರಸ್ವತಿಯ ತನ್ಮಯಾವಸ್ಥೆಯಿಂದಿದ್ದ ದೇವಿಯನ್ನು ಕಂಡ. ಹೂ, ಅಕ್ಷತೆ, ಅರಳು, ಮೊಸರು, ಗರಿಕೆ, ತುಪ್ಪಗಳಿಂದ ಕೂಡಿದ ಹಾಗೂ ನೀರಿನಿಂದ ಚಿನ್ನದ ಕಳಶಗಳಿಂದ ಹೂಚರುಗಳನ್ನು ಅಗ್ನಿಗರ್ಪಿಸುತ್ತ, ರಾತ್ರಿಯಲ್ಲಿ ನಿರ್ಮಾಯದಿಂದ ಕೂಡಿದ ಋಙ್ಮಂತ್ರದಿಂದ ಪಾರ್ವತೀದೇವಿಗೆ ನಮಸ್ಕರಿಸಿ ಮಗನ ಸಾಮ್ರಾಜ್ಯಾಭಿಷೇಕಕ್ಕೆ ನಿರ್ವಿಘ್ನವಾಗುವಂತೆ ಮಾಡಿ ರಾಮನ ಬರವನ್ನೇ ಎದುರುನೋಡುತ್ತಿದ್ದಳು.

ಅಷ್ಟರಲ್ಲಿ ದೂತಿಯರು ರಾಮನು ಬರುತ್ತಿರುವ ವಾರ್ತೆಯನ್ನು ಅರುಹಿದರು. ಕೌಸಲ್ಯೆ ಆನಂದದಿಂದ ಕೂಡಿದ ಮನಸ್ಸಿನಿಂದ ಎದುರು ನೋಡುತ್ತಿರುವಷ್ಟರಲ್ಲಿ ಸುಗುಣಗಂಭೀರನು ಬರಲು ಮನಸ್ಸಿಗೆ ಸಂತುಷ್ಟಿಯಾಗಲು ಕಣ್ಣ ಕಾಂತಿ ಹೆಚ್ಚಿ ದೃಷ್ಟಿಯಲ್ಲಿ ಆನಂದ ತುಳುಕಲು ಮಗನನ್ನು ಮಾತನಾಡಿಸುವುದನ್ನೇ ಮರೆತವಳಂತೆ ನಿಂತಳು. ಬಂದು ಭಕ್ತಿಯಿಂದ ನಮಸ್ಕರಿಸಿ ನಿಂತ ಮಗನನ್ನು ನೋಡುತ್ತ ಹೂಗಳಿಗಿಂತಲೂ ಮೆಲುವಾದ ತನ್ನ ತೋಳುಗಳಿಂದ ಅಪ್ಪಿಕೊಂಡು ಮುದ್ದಿಸಿದಳು. ಆನಂದದಿಂದ ಅವನ ತಲೆಯನ್ನು ಮೂಸುತ್ತ ತೃಪ್ತಿಪಟ್ಟಳು. ಆನಂತರ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮನದುಂಬಿ ಹರಸಿದಳು. "ಮಗು, ಧರ್ಮಿಷ್ಠನಾದ ರಾಜರ್ಷಿ ದಶರಥನು ಅಧಿಕ ಕೀರ್ತಿಯನ್ನು ಪಡೆಯುವ ರೀತಿಯಲ್ಲಿ ಹೆಚ್ಚಿನ ಸಂಪತ್ತು ಆಯುಷ್ಯಗಳನ್ನು ಹೊಂದುವಂತೆ ನಿನ್ನನ್ನು ಯುವರಾಜನನ್ನಾಗಿ ಮಾಡಲು, ನೀನು ಸಿಂಹಾಸನದ ಮೇಲೆ ರಾರಾಜಿಸುವುದನ್ನು ನೋಡಿ ಸಂತಸಪಡುವ ಕ್ಷಣವನ್ನೆದುರು ನೋಡುತ್ತಿದ್ದೇನೆ. ನಾನು ನೀಡುವ ಬಗೆಬಗೆಯ ಭಕ್ಷ್ಯಭೋಜ್ಯಗಳನ್ನುಂಡು ಸಂತಸಗೊಳಿಸು" ಎನ್ನಲು ತಾಯಿಗೆ ನಮಸ್ಕರಿಸಿ ಮೃದುವಾಣಿಯಿಂದ ಹೀಗೆಂದ: "ನಿನ್ನ ಕರುಣಾಕಟಾಕ್ಷದಿಂದ ನಾನು ಚೆನ್ನಾಗಿದ್ದೀನಮ್ಮ, ನಿನ್ನ ಇಷ್ಟವು ನೆರವೇಬಹುದಾದರೂ, ಮಹಾರಾಜನು ತಲೆಯ ಮೇಲೆ ಸತ್ಯಸಂಧತೆಯೆಂಬ ಮಣಿಯನ್ನು ಧರಿಸಿ ಉದಾರ ತೇಜೋರಾಶಿಯಿಂದ ಅಪ್ಪಣೆಕೊಟ್ಟ ತತ್ತ್ವವನ್ನು ವಿವರವಾಗಿ ನಿನ್ನ ಅಡಿದಾವರೆಗಳಲ್ಲಿ ನಿವೇದಿಸಿಕೊಳ್ಳಲು ಬಂದಿದ್ದೇನೆ" ಎಂದು **ರಾಮಪುರನಾಯಕನು** ತಾಯಿಯೊಡನೆ ಹೇಳಲು ತೊಡಗಿದ.

೯. ಶ್ರೀರಾಮನು ತಾಯಿಗೆ ತನ್ನ ವನವಾಸದ ವಿಷಯವನ್ನು ತಿಳಿಸುವುದು

ಶೈಲರಾಜತನುಜೆಯೇ ಕೇಳು, "ರಾಜ್ಯಾಧಿಪತ್ಯವನ್ನು ಭರತನಿಗಿತ್ತು, ಹದಿನಾಲ್ಕು ವರ್ಷಗಳ ಕಾಲ ಫಲಾಹಾರವನ್ನು ಸೇವಿಸುತ್ತ ಸುರುಚಿರ ವನ್ಯಮೂಲ ಆಹಾರವನ್ನು ಸೇವಿಸುವ ಮುನಿಗಳ ಸೇವೆ ಮಾಡು ಎಂದು ತಂದೆಯು ನಿಯಮಿಸಿರಲು ನೀನು ನೀಡುವ ಸಿದ್ಧಾನ್ನವನ್ನು ನಾನು ಹೇಗೆ ಭುಜಿಸಲಿ?" ಎಂದು ಶ್ರೀರಾಮನು ತಾಯಿಯನ್ನು ಕೇಳಿದ. ಆ ಮಾತುಗಳನ್ನು ಕೇಳಿದ ಕೌಸಲ್ಯೆಯ ಕಮಲದಂತಹ ಮುಖವು ಬಾಡಿಹೋಯಿತು, ಬೇತಾಳವು ಸೋಕಿದಂತೆ ತಕ್ಷಣವೇ ಕುಸಿದುಬಿದ್ದಳು, ಕೂದಲೆಲ್ಲ ಕೆದರಿಹೋಯಿತು. ಅದನ್ನು ಕಂಡು ಉಮ್ಮಳದಿಂದ ಮಾತಾಡಲಾರದ ಶ್ರೀರಾಮನು ತಾಯಿಯನ್ನು ಕುಳ್ಳಿರಿಸಿ ಬೀಸಣಿಗೆಯಿಂದ ಗಾಳಿ ಹಾಕಿ ಸಂತವಿಸುತ್ತ ಮೌನವಾದ. ನಾನಾ ಪರಿಯ ಉಪಚಾರಗಳಿಂದ ಕೌಸಲ್ಯಾದೇವಿಯು ಎಚ್ಚರಗೊಳ್ಳಲು ಮಗನನ್ನು ನಿಟ್ಟಿಸುತ್ತ, "ಮಗನೆ, ನನ್ನ ಗಂಡನಿಂದಲೇ ನನಗೆ ಇಷ್ಟು ಸುಖ ದೊರೆಯುವಂತಾಯಿತೇ! ನಿನ್ನ ಕಾರಣದಿಂದ ಸುಖವೊದಗಿತೆಂದು ಭಾವಿಸಿರುವಷ್ಟರಲ್ಲಿ ಊಹಿಸಲಾಗದಂತಹ ವಿಘ್ನವೊದಗಿತಲ್ಲ! ಮಂತ್ರೌಷಧಿಗಳಿಂದ ಕೂಡಿ ಸಂಕಲ್ಪಸಿದ್ಧಿ ಸಫಲವಾಯಿತು ಎಂದು ಸಂಭ್ರಮಗೊಳ್ಳುವೆಡೆಯಲ್ಲಿ ತಲೆಗೂದಲನ್ನು ಕೆದರಿಕೊಂಡು ಕೆಂಗಣ್ಣುಗಳಿಂದ ಕೂಡಿ ಪಿಶಾಚಿಯು ಬಂದಪ್ಪಳಿಸುವ ಹಾಗೆ ಕೈಕೇಯಿಯ ಮನೋರಥವೆಂಬ ಭೂತವು ಬಂದು ನನ್ನ ಆಸೆಯ ಸ್ಥಾನವನ್ನಾಕ್ರಮಿಸಿಬಿಟ್ಟಿತು! ನಿರತಿಶಯವಾದ ಸುಖವನ್ನನುಭವಿಸುವೆನೆಂಬ ಆಸೆಯಿಂದ ನಿಡುಗಾಲ ತಪಸ್ಸು ಮಾಡಿ ಪಡೆದ ಮಗನಿಂದ ಹರುಷ ಹೊಂದುವ ಸಮಯದಲ್ಲಿ ಅರಿಷ್ಟ ಸಂಭವಿಸಲು ನಾನು ಹೇಗೆ ತಾನೇ ಪ್ರಾಣವಿರಿಸಿಕೊಂಡಿರಲಿ? ಮಕ್ಕಳನ್ನು ಪಡೆಯದವಳಿಗೆ ಅದಷ್ಟೇ ದುಃಖವಾದರೂ, ಮಕ್ಕಳನ್ನು ಪಡೆಯುವುದೇ ಹೆಚ್ಚು ದುಃಖಕಾರಕ ಎಂಬ ಮಾತು ನಿಜವಾಯಿತು; ಅಹಂಕಾರವೂ ಹೋಯಿತು, ವಿಧಿಯ ನಿಯಮವನ್ನು ಮೀರದಂತೆಯೂ ಆಯಿತು. ಭರತನಿಗೆ ಅತಿಶಯವಾದ ರಾಜ್ಯಸಿರಿಯು ದೊರಕಲು ಅವನ ತಾಯಿಯು ತನ್ನವರ ಮುಂದೆ ಪ್ರತಿದಿನವೂ ಬಿರುನುಡಿಗಳನ್ನಾಡುತ್ತಿರಲು ಅದನ್ನು ಕೇಳಿಸಿಕೊಂಡು ಅನಾಥೆಯಂತೆ ತೊಳಲುತ್ತ ಹೊಟ್ಟೆ ಹೊರೆದುಕೊಳ್ಳುವುದಕ್ಕಿಂತಲೂ ನಿನ್ನೊಡನೆ ಕಾಡಿನಲ್ಲಿ ತಾಪಸಿಯಂತೆ ದಿನಗಳನ್ನು ನೂಕುತ್ತೇನೆ" ಎಂದು ಕಡುಸಂಕಟದಿಂದ ತನ್ನ ಮಗನ ಮುಂದೆ ತೋಡಿಕೊಂಡ ತಾಯಿ ಅಳಲನ್ನು ವರ್ಣಿಸುವುದು ಸಾಧ್ಯವೇ! "ಹತ್ತಾರು ಸಾವಿರ ವರುಷ ತಪಸ್ಸು ಮಾಡಿ ಮಗನನ್ನು ಪಡೆದು ಕಣ್ಣಿಗೆ ಹಬ್ಬವನ್ನುಂಟುಮಾಡಿಕೊಳ್ಳುವ ಹೊತ್ತಿನಲ್ಲಿ ಈ ವಿಪತ್ತು ಅಡಸಿಬಿಟ್ಟಿತು. ನಾನು ಹೇಗೆ ಬದುಕಿರಲಿ! ಮಹಾರಾಜರೇ ಈ ನೀಚಕರವಾದ ಸನ್ನಿವೇಶದಲ್ಲಿರುವಾಗ ನಾನಿಲ್ಲಿರುವುದು ತರವಲ್ಲ, ನಿನ್ನೊಡನೆ ನನ್ನನ್ನೂ ಕರೆದುಕೊಂಡು ಹೋಗು" ಎಂದು ಪಟ್ಟದ ರಾಣಿಯು ಅಂಗಲಾಚಿದಳು. "ಕೈಕೇಯಿಯ ಮಾತಿನ ರೂಪದಲ್ಲಿ ಮೃತ್ಯು ಎತ್ತಲಿಂದ ಬಂದು ಅಡಸಿತು! ಇಂತಹ ಮಾತುಗಳನ್ನು ಕೇಳಿ ರಾಜರು ಕರುಣೆಯಿಲ್ಲದೆ ನಿನ್ನನ್ನು ಕಾಡಿಗೆ ಹೋಗು ಎಂದು ಯಾವ ಬಾಯಿಂದ ಹೇಳಿದರು? ಕನಸಿನಲ್ಲಿಯೂ ಊಹಿಸದ ಇಂಥ ಕರ್ಮಫಲವು ಒತ್ತರಿಸಿಕೊಂಡು ಬರಲು ಅನುಭವಿಸಿದಲ್ಲದೇ ತೀರುತ್ತದೆಯೇ? ವಿಧಿವಶವಾದುದನ್ನು ಮೀರಲು

ಶಕ್ಯವೇ?" ಎಂದು ಪ್ರಲಾಪಿಸಿದಳು.

ಕೊನೆಯಿಲ್ಲದ ಚಿಂತೆ ಸಂಕಟಗಳಿಂದ ದೀನಳಾದ ತಾಯಿಯನ್ನು ನೋಡಿ ಲಕ್ಷ್ಮಣನು, "ತಾಯಿ, ಕೈಗೆ ಬಂದ ಅದೃಷ್ಟವನ್ನು ದೂರ ಸರಿಸಿ ಕಾಡಿಗೆ ಹೋಗುವುದು ಅನುಚಿತವಾದದ್ದು. ಹೆಣ್ಣಿನ ಮೋಹಕ್ಕೊಳಗಾದ ಮುದಿಯ ದುರ್ನೀತಿವಂತನು ಅವಿವೇಕದಿಂದ ಆಡಿದ ಮಾತನ್ನು ಸತ್ಯವೆಂದು ಯಾರು ತಾನೇ ಒಪ್ಪಿಯಾರು? ದಕ್ಷನೂ ದಾಂತನೂ ಶಾಂತನೂ ಆಗಮಾರ್ಥಗಳನ್ನರಿತ ಪ್ರಾಜ್ಞನೂ ಪಿತೃಮಾತೃವತ್ಸಲನೂ ಸದಯಹೃದಯನೂ ಆದ ರಘುವೀರನನ್ನು ಕಾಡಿಗೆ ಹೋಗು ಎಂದು ರಾಜನು ಹೇಗೆ ತಾನೇ ನುಡಿದ? ರಾಜ್ಯಕೋಶಗಳನ್ನು ಬಿಟ್ಟು ಅಡವಿಗೆ ಹೋಗುವುದೇ, ಭರತ ರಾಜನಾಗಲೆಂಬ ಹೆಣ್ಣಿನ ಮಾತಿಗೆ ಹೆದರುವುದು ವೀರಸಮ್ಮತವಲ್ಲ. ಮದನಪಾರವಶ್ಯದಿಂದ ಇಷ್ಟಾನಿಷ್ಟಗಳ, ಕೃತ್ಯಾಕೃತ್ಯಗಳ ವಿವೇಚನೆಯಿಲ್ಲದ ಸ್ವೈರವ್ಯಕ್ತಿಯು, ಹಿರಿಯನಾದರೆ ತಾನೇ ಏನು, ಅವನನ್ನು ಶಿಕ್ಷಿಸುವುದು ಧರ್ಮಸಮ್ಮತವಾದುದು. ಭರತನನ್ನು ರಾಜನನ್ನಾಗಿ ಮಾಡಿ ದುಷ್ಕಾರ್ಯಗಳಿಗೆ ಕಾರಣರಾಗುವವರನ್ನು ಒರೆಸಿಹಾಕಿ ಅಣ್ಣನ ಪಾದಯುಗಳದಲ್ಲಿ ನನ್ನ ಭುಜಬಲವನ್ನು ಮೆರೆಯುತ್ತೇನೆ. ಹೆಣ್ಣಿನ ಕಾರಣದಿಂದ ಕೈವಶವಾದ ರಾಜ್ಯವನ್ನು ಹೆಣ್ಣಿಗೆ ಒಪ್ಪಿಸಿಬಿಟ್ಟರೆ ನಮ್ಮನ್ನು ಲೋಕವು ಹೆಣ್ಣಿಗರೆನ್ನುವಿದಿಲ್ಲವೇ? ಹೀಗೆ ಮಾಡಲು ಹೊರಟಿರುವ ಶತ್ರುಗಳನ್ನು ತರಿದು ರಾಜ್ಯದ ಒಡೆತನವನ್ನು ಕೈವಶಮಾಡಿಕೊಳ್ಳುತ್ತೇನೆ. ತಾಯ ಮಾತನ್ನು ಕೇಳಿ ಭರತನು ಸೋದರಮಾವನೊಡನೆ ಸೈನ್ಯಸಮೇತ ಬಂದರೂ ಅವರನ್ನೆಲ್ಲ ಶಾಕಿನಿಗಳಿಗೆ ಕೈತುತ್ತುಮಾಡುತ್ತೇನೆ" ಎಂದು ಲಕ್ಷ್ಮಣನು ಹಲ್ಲುಗಳನ್ನು ಮಸೆದ.

ಹೀಗೆ ಕಲ್ಪಾಂತರುದ್ರನಂತೆ ಅಸೀಮ ಕೋಪದಿಂದ ಕುದಿಯುವ ಸೌಮಿತ್ರಿಯನ್ನು ಸಮಾಧಾನಪಡಿಸಲು ಶ್ರೀರಾಮನು ನಸುನಗುತ್ತ ಮೃದುವಾದ ಮಾತುಗಳಿಂದ ಈ ರೀತಿ ಹೇಳಿದ: "ಪಾಪಗಳಲ್ಲಿ ಮಿಗಿಲಾದುದೆನಿಸುವ ಕೋಪವನ್ನು ನಚ್ಚಿಕೊಂಡು ಉನ್ಮತ್ತ ಕ್ರೋಧದಿಂದ ರಾಜ್ಯವನ್ನು ಪಡೆಯುತ್ತೇನೆಂಬ ಹುಡುಗುಬುದ್ಧಿಯನ್ನು ತಾಳಿರುವೆಯಲ್ಲ. ಕೋಪವೇ ಸಕಲ ಪಾಪಕ್ಕೆ ಕಾರಣ, ಸಕಲ ಸನ್ಮಾರ್ಗದಾರಣ, ಚಿತ್ತವೈಕಲ್ಯಕಾರಣ, ಕೋಪವು ಅಶುಭಾಗಾರ, ಅಪಯಶಮಂದಿರ. ಕೋಪವು ಶಮದಿಂದ ಭಿನ್ನವಾದುದು; ಕಾಮುಕತೆ ತೃಷ್ಣೆ ಮುಂತಾದ ಪರಿವಾರವೆಲ್ಲವೂ ಸೇರಿ ಪುರುಷನನ್ನು ಆವರಿಸಿ ಸನ್ಮಾರ್ಗವಿಮುಖನನ್ನಾಗಿಸುತ್ತ ಕಂಗೆಡಿಸುತ್ತದೆ. ನಿಗಿನಿಗಿ ಉರಿಯುವ ಕೆಂಡವನ್ನೇ ಸುಖವೆಂದು ಮುದ್ದಿಸಲು ಹೋದರೆ ಸುಖ ಸಿಕ್ಕುತ್ತದೇನು? ದೀಪದ ಕುಡಿಯನ್ನು ಹೀರುತ್ತೇನೆಂದು ಭ್ರಮೆಗೊಂಡು ಹೊರಡುವ ಮಿಣುಕುಹುಳುವಿನಂತೆ ಆಗುವುದಲ್ಲದೆ ಹರ್ಷ ದೊರಕುವುದೇ? ಮೂಳೆ ಮಜ್ಜೆ ಮಾಂಸ ಕರುಳು ಕೊಬ್ಬು ರಕ್ತ ಇವುಗಳಿಂದ ಕೂಡಿ ಉಪಕಾರವನ್ನು ಮಾಡುತ್ತದಾದರೂ ಈ ದೇಹವು ಅದನ್ನು ಗಣಿಸದ ನೀರಗುಳ್ಳೆಯಂತೆ ಕೃತಘ್ನ. ನಾನಾ ಸುಖಗಳಂತೆ ಗಾಳಿ ಮೋಡ ಮಿಂಚುಗಳಿಗೂ ಪಕ್ಕಾಗುವ ಇದನ್ನು ನಚ್ಚಿ, ವಿವೇಕವನ್ನು ಚುಚ್ಚಿ ಕೊಲೆಮಾಡಲು ಹಾತೊರೆಯುವ ದುರ್ಬುದ್ಧಿ ನಿನಗೆ ಹೇಗೆ ಉಂಟಾಯಿತು? ತಾರುಣ್ಯ ಯೌವನ ಮೊದಲಾದುವೆಲ್ಲ ಅಲೆಗಳಂತೆ, ಸ್ತ್ರೀಭೋಗ ಮುಂತಾದ ಸುಖಗಳೂ ಕಾದ ಕಬ್ಬಿಣದ ಮೇಲೆ ಬಿದ್ದ ನೀರ ಕಣಗಳಂತೆ; ಕಾಣುವ ವಿಶ್ವವೆಲ್ಲವೂ

ಕನಸಿನ ಗಂಧರ್ವ ಪೀರ ನಗರಗಳಂತೆ, ಇವುಗಳನ್ನು ಸತ್ಯವೆಂದು ಭಾವಿಸಿ ಅವುಗಳಿಂದ ಸುಖವನ್ನು ಬಯಸುವುದೆಂದರೆ ವಿಷಸರ್ಪದ ಹಲ್ಲುಗಳನ್ನು ಹಿಡಿದುಕೊಂಡಂತೆ. ಬಾಲ್ಯವು ಒಂದು ನಿಮಿಷ, ಯೌವನದ ಸ್ತ್ರೀಲೋಲುಪತೆಯು ಅರೆನಿಮಿಷ, ಧನಧಾನ್ಯೈಶ್ವರ್ಯ ಪಡೆದೆನೆಂಬ ಹೆಮ್ಮೆ ಮತ್ತೊಂದು ನಿಮಿಷ, ದಾರಿದ್ರ್ಯ ಅರೆನಿಮಿಷ, ಮುಪ್ಪುಕಾಯಿಲೆಗಳಿಂದ ನರಳುವುದದಿನ್ನೊಂದು ಅರೆನಿಮಿಷ. ವೇಷಗಳಿಗೆ ಮಾರುಹೋಗುವ ವಿಟನಂತೆ ತೋರುವ ಸುಖವನ್ನು ಬುದ್ಧಿವಂತರು ಯಾರಾದರೂ ಬಯಸುತ್ತಾರೆಯೇ? ಸತಿ ಸುತ ಧನ – ಇವುಗಳನ್ನು ಪಡೆಯಲು ಹೆಣಗುತ್ತ ಕ್ಲೇಶಪಡುತ್ತಿರುವಷ್ಟರಲ್ಲಿ ಮೃತ್ಯುಬಾಧೆ ಅಡಸುತ್ತದೆ; ದುಃಖದ ಬಾಧೆಯಲ್ಲಿ ನರಳಿ ಹೊರಳುತ್ತ ಈ ಮಾನವರು ಪ್ರಾಣಿಗಳಂತೆ ಅರಿಯದೆ ಈ ಸುಖವೆಂಬ ಹುಸಿಯನ್ನೇ ಅರಸುವರಲ್ಲ! ಶತಕೋಟಿ ಬ್ರಹ್ಮಾಂಡದಲ್ಲಿ ಈ ಅಂಡವು ಒಂದು, ಅದರಲ್ಲಿ ಹಲವಾರು ದ್ವೀಪಗಳು, ಅದರಲ್ಲಿ ಈ ಭೂಮಿ ಒಂದು ದ್ವೀಪ, ಅದರಲ್ಲಿ ನವಖಂಡಗಳು, ಈ ಖಂಡದಲ್ಲಿ ಐವತ್ತಾರು ದೇಶಗಳು, ಒಂದೊಂದು ದೇಶದಲ್ಲಿಯೂ ಖೇಡ ಖರ್ವಡ ಮಡಂಬ ಪತ್ತಣಗಳು ಎಂಬ ನಾನಾ ಭಾಗಗಳು, ಹೀಗೆ ಈ ಭೂಮಿ ಎಂಬುದು ಒಂದು ಗೇಣುದ್ದ ಮಾತ್ರದ್ದು, ಇದಕ್ಕಾಗಿ ಹಂಬಲಿಸಿ ಜನ ಕೋಟಲೆಗೊಳ್ಳುವರಲ್ಲ! ತಂದೆತಾಯಿ ಅಣ್ಣತಮ್ಮಂದಿರು ಮಕ್ಕಳು ನಂಟರು ಇಷ್ಟಮಿತ್ರರು ಸೇವಕರು ಮುಂತಾದವರೆಲ್ಲ ಅರವಟ್ಟಿಗೆಯಲ್ಲಿ ಬಾಯಾರಿಕೆಯನ್ನು ತೀರಿಸಿಕೊಳ್ಳಲು ಸೇರಿರುವ ಪಯಣಗರು, ನೀರು ಕುಡಿದು ಅವರೆಲ್ಲ ಚದುರಿಹೋಗುವ ಹಾಗೆ; ಹೀಗಿರುವಾಗ ಯಾರಿಗೋಸುಗ ಜನ ಬಯಲಭ್ರಾಂತಿಗೆ ಒಳಗಾಗುತ್ತಾರೆ! ಇತರರನ್ನು ಆಶ್ರಯಿಸಿ ಶತ್ರುಗಳನ್ನು ಕೊಂದು ಭೂಮಿಕಾಣಿಗಳನ್ನು ಪಡೆದು, ಸಂಬಂಧಿಗಳನ್ನು ಸಲಹಿ, ದೇಹಸುಖಕ್ಕಾಗಿ ದುಷ್ಕೃತ್ಯಗಳನ್ನು ಮಾಡುತ್ತ ಆಯಾಸಗೊಂಡು ಮರುಳರ ಹಾಗೆ ಜನ ನರಳುವರಲ್ಲ, ಕೊನೆಗೆ ಮಣ್ಣುಬೂದಿಗಳಾಗಿ ನರಿನಾಯಿಗಳ ಎಂಜಲ ಪಾಲಾಗುತ್ತಾರೆ! ಇಂಥ ಸಿರಿಯನ್ನು ಏನೆಂದು ಹೇಳುವುದು! ದಶವಾಯುಗಳು ಹತ್ತು ಕರಣಗಳು ಅಹಂಕಾರವೇ ಮುಂತಾದವುಗಳು ಮತ್ತು ಮೂರು ಗುಣಗಳಿಂದಾದ ಆಕಾರ ಬದುಕು, ಇದು ಅಶುಭದಾಗಾರ ಎಂದು ತಿಳಿದು ವಿವೇಕದಿಂದ ಶಾಂತಿಯನ್ನು ಪಡೆದ ಮೇಲೆ ಹರುಷ ದೊರೆಯುತ್ತದೆ, ಕಾಮಧೇನುವಿನಂತೆ ಬೇಡಿದುದನ್ನು ನೀಡುತ್ತದೆ. ನಿರ್ವೈರದಿಂದ ಆನಂದವು ತನ್ನಿಂದ ತಾನೇ ಉದಿಸುತ್ತದೆ. ಬದುಕು ನೀರಮೇಲಣ ಗುಳ್ಳೆ, ಹುಲ್ಲುಕಡ್ಡಿಯಂತಹುದು; ಶರೀರವು ಅಲ್ಪಾಯುವಾದುದು, ಎಲ್ಲ ರೋಗಗಳ ಮನೆ; ತಾರುಣ್ಯ ಮುಂತಾದವು ಬಾಳಿನಲ್ಲಿ ಅಲೆಗಳಂತೆ ತೋರಿ ಅಡಗುವಂತಹವು. ಇದನ್ನು ತಿಳಿದು ಯಾರು ನಿರ್ವಿಕಾರಿಯಾಗಿದ್ದು ಹಗೆಗಳಲ್ಲಿಯೂ ಶಾಂತಿಯಿಂದಿರುತ್ತಾನೆಯೋ ಅಂಥವನಿಗೆ ಸುಖವು ದೊರೆಯುತ್ತದೆ. ಸೂರ್ಯನ ಉದಯಾಸ್ತಗಳಿಂದ ಎಲ್ಲ ಪ್ರಾಣಿಗಳು ಆಯುಷ್ಯವನ್ನು ಪಡೆದು ಕಾಲವಶವಾಗುತ್ತವೆ. ರಕ್ಕಸರೂಪಿನ ಅಹಂಕಾರವನ್ನು ಬಿಟ್ಟು ನೋಡಿದರೆ ಎಲ್ಲವೂ ನಶ್ವರ ಬಳಗ; ಇದರಿಂದ ಗಸಣಿಗೊಳ್ಳದೆ ಭ್ರಾಂತಿಗಳನ್ನೋಡಿಸಿದರೆ ಬಾಳು ನಿತ್ಯಾನಂದಮಯವೆನಿಸುತ್ತದೆ" ಎಂದು ಲಕ್ಷ್ಮಣನಿಗೆ ತಿಳಿಯಹೇಳಿದ.

ಆನಂತರ ತಾಯಿಯ ಕಡೆ ತಿರುಗಿ, "ತಂದೆಯ ಆದೇಶದಂತೆ ನಾನು ಕಾಡಿಗೆ

ಹೋಗುವುದಕ್ಕೆ ಬೇಗನೆ ಅನುಮತಿ ನೀಡಿದರೆ ನಿಯಮವನ್ನನುಸರಿಸಿ ಮತ್ತೆ ನಿನ್ನ ಅಡಿದಾವರೆಗಳೆಡೆಗೆ ಬರುತ್ತೇನೆ. ದಯಮಾಡು" ಎಂದು ರಾಮನು ಬೇಡಿಕೊಂಡ. ಈ ಮಾತನ್ನು ಕೇಳಿದ ಕೌಸಲ್ಯೆಯು, "ತಂದೆಯು ಭರತನಿಗೆ ರಾಜ್ಯಸಿರಿಯನ್ನು ನೀಡಿದರೇನು? ನೀನು ನನ್ನ ಕಣ್ಣ ಮುಂದೆಯೇ ಇಲ್ಲಿಯೇ ಸುಖವಾಗಿರಬಹುದಲ್ಲ. ತಂದೆಯ ಮಾತಿನ ಹಾಗೆಯೇ ತಾಯಿಯ ನುಡಿಯೂ ಅಲ್ಲವೇ? ಹಿರಿಯರ ಮಾತಿಗೆ ಗೌರವವನ್ನೀಯೋಣ, ಅದರಂತೆ ಭರತನಿಗೇ ರಾಜ್ಯವಾಗಲಿ; ನನಗೆ ಅದರ ಹಂಗಿಲ್ಲ, ನೀನು ನನ್ನ ಕಣ್ಣುಗಳೆದುರಿನಲ್ಲಿದ್ದರೆ ಮನೆಯು ಸಂತೋಷಮಯವಾಗಿರುತ್ತದೆ. ನನ್ನ ಮೇಲೆ ಇನಿತೂ ಕರುಣೆಯಿಲ್ಲದೆ ಕಾಡಿಗೆ ಹೋಗಿಯೇ ತೀರುತ್ತೇನೆ ಎನ್ನುವೆಯಾದರೆ ನಾನು ಬದುಕಿರಲಾರೆ" ಎಂದು ದುಃಖದಿಂದ ಕೂಡಿದ ಮೃದುದೈನ್ಯದಿಂದ ನುಡಿದಳು.

ತಾಯಿಯು ಮನದಲ್ಲಿ ಅಳಲನ್ನು ತುಂಬಿಕೊಂಡು ಆಡಿದ ಈ ಬಿರುನುಡಿಗಳನ್ನು ಕೇಳಿ ಧರ್ಮಾತ್ಮನಾದ ರಘುವೀರನು ಮತ್ತೆ, "ನಾನು ತಂದೆಯ ಮಾತನ್ನು ಎಳ್ಳಷ್ಟಾದರೂ ಮೀರಲಾರೆ. ಈ ಹಿಂದೆ ತಂದೆ ಸಗರನ ಮಾತನ್ನು ನಡೆಸಲೋಸುಗ ಧರ್ಮಮಾರ್ಗವನ್ನು ಹಿಡಿದ ಮಕ್ಕಳಾದ ಅರುವತ್ತು ಸಾವಿರ ಮಹಾರಥರು ಇಡೀ ಭೂಮಿಯನ್ನೇ ಅಗೆದು ಮುನಿಯ ಕೋಪಾಗ್ನಿಗೆ ಇಂಧನವಾದರಲ್ಲವೇ? ತಂದೆಯ ಆಜ್ಞೆಯನ್ನು ಮೀರದ ಪರಶುರಾಮನು ತಾಯಿಯನ್ನೇ ವಧೆಗೈದನಲ್ಲವೇ? ಈ ರೀತಿಯಾಗಿ ಹಿಂದಿನ ಧರ್ಮಶೀಲರುಗಳು ಅಮಿತ ಖ್ಯಾತಿಯನ್ನು ಗಳಿಸಿದರು. ಸತ್ಯಕುಲದಲ್ಲಿ ಹುಟ್ಟಿದವನೆನಿಸಿದ ನಾನು ಪಿತೃವಚನಘಾತಕನೆಂದು ಹೇಗೆ ತಾನೇ ಅನ್ನಿಸಿಕೊಳ್ಳಲಿ? ನಮ್ಮ ವಂಶದ ಹಿರಿಯರು ಅಖಿಲಾಗಮಜ್ಞರಾಗಿದ್ದು ಅಭ್ಯುದಯವನ್ನು ಸಾಧಿಸಿದರೇ ಹೊರತು ಸತ್ಯಕ್ಕೆ ಚ್ಯುತಿ ತಾರಲಿಲ್ಲ. ನಾನು ಆ ಹಿರಿಯರ ಮಾರ್ಗವನ್ನು ಮೀರದೆ ಕಾಡಿಗೆ ಹೋಗಿ ಹದಿನಾಲ್ಕು ವರ್ಷಗಳನ್ನು ಅಲ್ಲಿ ಕಳೆದು ಆ ಬಳಿಕ ನಿನ್ನ ಪಾದಕಮಲಗಳನ್ನು ಕಾಣುತ್ತೇನೆ" ಎಂದು ಮನವರಿಕೆ ಮಾಡಿಕೊಟ್ಟ. ಆನಂತರ ಲಕ್ಷ್ಮಣನಿಗೆ ಈ ರೀತಿ ನುಡಿದ: "ನನ್ನ ಬಗ್ಗೆ ನಿನಗಿರುವ ಭಕ್ತಿ, ನಿನ್ನ ಪರಾಕ್ರಮದ ಆಧಿಕ್ಯ, ಧೈರ್ಯ ಇವುಗಳನ್ನೆಲ್ಲ ನಾನು ಬಲ್ಲೆ, ಆದರೆ ನಾನು ತಂದೆಯ ಅಪ್ಪಣೆಯನ್ನು ಧಿಕ್ಕರಿಸಿ ಧರ್ಮವನ್ನು ಮೀರಲಾರೆ; ಹಾಗೆ ಮಾಡಿದರೆ ಅಪಕೀರ್ತಿ ಆವರಿಸದರಿರದು. ಭರತನ ತಾಯಿಯು ನನಗೆ ವನರಾಜ್ಯದ ಆಳ್ವಿಕೆಯನ್ನು ನಿಯಮಿಸಿದ್ದಾಳೆ. ಆದ್ದರಿಂದ ಜನಪತಿಯ ಮಾತನ್ನು ಸತ್ಯವನ್ನಾಗಿಸಿ ಸುಖವಾಗಿರು, ನಿನ್ನ ಕೋಪವನ್ನು ಬಿಡು." ಎಂದು ಹೇಳಿ ಲಕ್ಷ್ಮಣನೊಡಗೂಡಿ ತಾಯ ಪಾದಗಳಿಗೆ ನಮಿಸಿ, "ಮನಃಪೂರ್ವಕವಾಗಿ ನನಗೆ ಆಶೀರ್ವಾದ ಮಾಡಿ ಬೇಗ ಅಪ್ಪಣೆಯಿತ್ತರೆ ನಾನು ಮುಂದುವರಿಯುತ್ತೇನೆ, ಮಾತನ್ನು ನೆರವೇರಿಸಿ ಮರಳುತ್ತೇನೆ. ಇದನ್ನು ಮನಗಂಡು ಕಳಿಸಿಕೊಡು, ಮಾತನ್ನು ದಯವಿಟ್ಟು ಮುಂದುವರಿಸಬೇಡ, ನನ್ನ ಮೇಲಾಣೆ, ದೇವೇಂದ್ರನ ಮೇಲಾಣೆ. ಅಮ್ಮ, ನೀನು ನಾನು ಸೀತೆ ಲಕ್ಷ್ಮಣ ತಾಯಿ ಸುಮಿತ್ರೆ–ಎಲ್ಲರೂ ತಂದೆಯ ಆಜ್ಞೆಯನ್ನು ಪರಿಪಾಲಿಸುವುದು ದೇವರೂ ಮನುಷ್ಯರೂ ಒಪ್ಪುವ ಕುಲಧರ್ಮ. ಹಾಗಾಗಿ ನಿನ್ನ ದುಃಖವನ್ನು ತಡೆದುಕೊಂಡು ಗಟ್ಟಿ ಮನಸ್ಸು ಮಾಡಿಕೊಂಡು ಕೃಪೆಯಿಂದ ನನಗೆ ಅಪ್ಪಣೆಯಿತ್ತು ಕಳಿಸಿಕೊಡು" ಎಂದ.

ಈ ಮಾತನ್ನು ಕೇಳಿದ ಕೌಸಲ್ಯಾದೇವಿಯು ಮೂರ್ಛೆ ಹೋಗಿ ಬಹುಬೇಗ ಎಚ್ಚೆತ್ತು ರಾಮನನ್ನು ನೋಡುತ್ತ, "ಮಗು, ನಿನಗೆ ತಂದೆಯು ಹೇಗೋ ನಾನೂ ಹಾಗೆಯೇ ಅಲ್ಲವೇ? ಪರಮಧರ್ಮಿಯೂ ದಯಾಪರನಾದವನೂ ಆದವನು ನೀನು, ನನ್ನನ್ನು ದುಃಖದಲ್ಲಿ ಮುಳುಗಿಸಿ ಹೋಗುವುದು ನಿನಗೆ ತರವೇ? ನೀನಿಲ್ಲದೆ ಹೇಗೆ ಬದುಕಿರಲಿ, ಕರುವಿಲ್ಲದೆ ಎಳಗಂದಿ ಬದುಕಬಲ್ಲದೇ?" ಎಂದು ಗೋಗರೆದಳು. ಹೀಗೆ ದೈನ್ಯಾಲಾಪವನ್ನು ಮಾಡುವ ತಾಯನ್ನು ಕಂಡ ಸೌಮಿತ್ರಿಯ ಅಂತರಂಗದಲ್ಲಿ ಕ್ರೋಧಾಗ್ನಿ ಹೊತ್ತಿ ಉರಿಯಿತು, ಆದರೇನು ಮಾಡಲಾದೀತು? ಬುಸುಗುಡುವ ಭೋಗೇಂದ್ರನಂತೆ ನಿಟ್ಟುಸಿರುಗಳನ್ನು ಸೂಸುತ್ತ ನಿಂತ. ಅವನನ್ನು ಕಂಡ ರಾಮನು, "ನಿನ್ನ ಶೌರ್ಯ, ನನ್ನ ಮೇಲಿನ ಪ್ರೀತಿ ಎಲ್ಲವನ್ನೂ ನಾನು ಬಲ್ಲೆ. ಆದರೆ ಈ ಹೊತ್ತು ಕೋಪ ಮಾಡಿಕೊಳ್ಳಲು ಸಲ್ಲದು. ಗುರುಸಮಾನನಾದ ರಾಜರ್ಷಿ ತಂದೆಯು ತಿಳಿಯದೆಯೋ ಕಾಮಕ್ರೋಧಹರ್ಷಗಳಿಂದ ಕೂಡಿಯೋ ಹೇಳಿದರೂ ಮಾರುತ್ತರವನ್ನು ನೀಡದೆ ಆ ಆಜ್ಞೆಯನ್ನು ಸಂತೋಷದಿಂದಲೇ ನೆರವೇರಿಸಬೇಕು; ಧರ್ಮವೆಂದರೆ ಈ ರೀತಿಯದು. ನಾನು ಇದನ್ನು ತಿಳಿದೂ ಕೈಗೊಳ್ಳದ ಶಾತ್ಯದಿಂದ ಕೂಡಿ ಒಳ್ಳೆಯದು ಕೆಟ್ಟದ್ದು ಎಂದು ತೂಕಹಾಕುತ್ತ ಬಾಳುವುದರಲ್ಲಿ ಫಲವಿಲ್ಲ. ಲೋಕದಲ್ಲಿ ಧರ್ಮ ಅರ್ಥ ಕಾಮ ಮತ್ತು ಮೋಕ್ಷಗಳೇ ಪ್ರಾಕ್ಕರ್ಮಗಳು ಎಂದು ಎಲ್ಲ ಶಾಸ್ತ್ರಗಳೂ ಹೇಳುತ್ತವೆ; ಅವುಗಳಲ್ಲಿ ಒಂದಾಗಿರುವ ಸೌಖ್ಯಕರವಾದುದನ್ನು ಮೀರಿದರೆ ಉಳಿದೆರಡು ಶೋಕಮೋಹಗಳನ್ನಲ್ಲದೆ ಶುಭಕರವಾದುವನ್ನು ನೀಡವು – ಎಂದು ತಿಳಿದ ಸಜ್ಜನರು ವಿವೇಕದಿಂದ ಎಲ್ಲಕ್ಕೂ ಮೂಲವಾದ ಧರ್ಮವನ್ನು ಅನುಸರಿಸುತ್ತಾರೆ. ಮಕ್ಕಳಿಗೆ ಪಿತೃಸೇವೆಯನ್ನೇ ಶಾಸ್ತ್ರವು ವಿಧಿಸುವುದು, ಗೃಹಿಣಿಯರಿಗೆ ಗಂಡನ ಮಾತನ್ನು ಧಿಕ್ಕರಿಸದೆ ಅನುಸರಿಸುವುದು ಮಿಗಿಲಾದುದು ಎಂದು ಸತ್ಯವಂತರೂ ಧೀಮಂತರೂ ಹೇಳುತ್ತಾರೆ. ಆಯುಷ್ಮಂತನಾದ ರಾಜನಿರುವಾಗ ನನ್ನ ಜೊತೆಗೆ ಕಾಡಿಗೆ ಬರುವುದು ಯಾವ ಧರ್ಮ, ಇದನ್ನಾರು ಒಪ್ಪುತ್ತಾರೆ? ಜನರನ್ನೂ ಶಾಸ್ತ್ರವನ್ನೂ ದ್ವೇಷಿಸಿದರೆ ಯಾವನಿಗಾದರೂ ಸುಖವುಂಟಾಗುವುದೇ, ಅದು ಸತ್ಯ ಎನ್ನಿಸಿಕೊಳ್ಳುವುದೇ? ಸತ್ಕುಲ ಪರಂಪರೆಗೆ ಸತ್ಯ ಶೌಚಾಚಾರ ಪಾಪರಾಹಿತ್ಯಗಳು ಕೀರ್ತಿ ದೇವತಾಪ್ರೀತಿಗಳನ್ನು ಉಂಟುಮಾಡುವಂತಹುದು, ಅದಕ್ಕಿಂತಲೂ ಅಧಿಕವಾದ ಸಂಪತ್ತು ಪತಿಸೇವೆಯಿಂದ ದೊರಕುತ್ತವೆ; ಅದೇ ಸದ್ಧರ್ಮ. ಗಂಡನನ್ನು ಒಂಟಿಯಾಗಿ ಬಿಟ್ಟು ತಾನು ಸೌಖ್ಯವನ್ನು ಹೊಂದುವವಳಿಗೆ ಪಾತಿವ್ರತ್ಯ ಹೇಗೆ ಉಂಟಾಗುತ್ತದೆ? ಶುಭಲೋಕದ ಹಾದಿ ಹೇಗೆ ಗೋಚರಿಸುವುದು? ಮಕ್ಕಳ ಮನಸ್ಸು ತಂದೆಯ ಅಧೀನ, ಬಂದುದನ್ನು ಅನುಸರಿಸುವುದೇ ಸತೀಲಕ್ಷಣ. ಹಿಂದೆ ಅನೇಕ ರಾಜರು ಸತ್ಯಕ್ಕಾಗಿಯೇ ಕಷ್ಟಪಟ್ಟರು. ಇದನ್ನು ಅರ್ಥಮಾಡಿಕೊಳ್ಳದೆ ಸಿರಿಯೇ ಶ್ರೇಷ್ಠ ಎಂದು ಸಂತಸಪಡುತ್ತ ಮುಂದಿನ ದುರ್ಗತಿಯನ್ನು ನೋಡದಿರುವುದು ಸರಿಯಲ್ಲ. ಆದ್ದರಿಂದ ಧೈರ್ಯವನ್ನು ತಂದುಕೊಂಡು, ಕೋಪಶೋಕಗಳನ್ನು ಬದಿಗಿಟ್ಟು, ಅಭಿಷೇಕಕ್ಕೆ ಸಂಗ್ರಹಿಸಿರುವ ವಸ್ತು ಒಡವೆಗಳನ್ನೆಲ್ಲ ಪಕ್ಕಕ್ಕೆ ಸರಿಸು. ಅವುಗಳನ್ನೇ ನೋಡುತ್ತ ಸಂಕಟಪಡುವುದು ಸಮಂಜಸವಲ್ಲ. ಲಕ್ಷ್ಮಣನೇ ಕೇಳು, ತಂದೆಯು ಸಿರಿಯನ್ನು ಬುದ್ಧಿಪೂರ್ವಕವಾಗಿ ವ್ಯರ್ಥಗೊಳಿಸುವವನಲ್ಲ. ಆದ್ದರಿಂದ ಈ ವಸ್ತುಗಳನ್ನೆಲ್ಲ ಹಿಂದೆ ಸರಿಸಿ ನಾನು ಕಾಡಿನತ್ತ ತೆರಳಿದರೆ ಭರತನ ತಾಯಿಗೆ ಸಂತುಷ್ಟಿಯಾಗುತ್ತದೆ. ಮಹಾರಾಜನ ಬಗ್ಗೆ

ಕ್ರೂರನುಡಿಗಳನ್ನಾಡಲು ಆಗ ಅವಕಾಶವಿರುವುದಿಲ್ಲ. ಭರತನಿಗೆ ದೊರೆತನವು ದೊರೆತರೆ ಮತ್ತು ನಾನು ಅರಣ್ಯಕ್ಕೆ ಹೋದರೆ ತಂದೆಗೆ ಈ ಲೋಕದಲ್ಲಿ ಅಸತ್ಯ ಅಂಟಿಕೊಳ್ಳುವುದಿಲ್ಲ, ಪರಲೋಕದಲ್ಲಿ ಸದ್ಗತಿಗೆ ದಾರಿಯುಂಟಾಗುತ್ತದೆ. ಲೋಕದಲ್ಲಿ ಜನರಿಂದ ಕೀರ್ತಿತನಾಗಿ ಅರೆಗಳಿಗೆ ಬದುಕಿದರೆ ಸಾಕು, ಧರ್ಮವಿರುದ್ಧವಾಗಿ ನಾಯಿಯಂತೆ ಎಲ್ಲರಿಂದಲೂ ತಿರಸ್ಕೃತನಾಗಿ ಚಿರಂಜೀವಿಯಾಗಿದ್ದರೆ ತಾನೇ ಏನು ಪ್ರಯೋಜನ? ಇದನ್ನರಿಯದ ಮರುಳರು ಸಾಹಸ ಮಾಡಿ ಸದಾ ಪ್ರಯತ್ನಪಟ್ಟು ಬಯಸಿದುದು ಸಿಕ್ಕದಾದಾಗ ಕೊರಗುತ್ತ ಕ್ರೋಧಪರವಶರಾಗಿ ಸಂಕಟಪಡುತ್ತ ತೊಳಲುತ್ತಾರೆಯೇ ಹೊರತು ಸಿರಿರಾಮಪುರದರಸನು ಕರುಣೆಯಿಂದ ದಯಪಾಲಿಸದಿದ್ದರೆ ಮನೋರಥವು ಸಿದ್ಧಿಸಲಾರದು, ಪಡುವ ಶ್ರಮವು ನಿಷ್ಫಲವಾದುದು" ಎಂದು ಸಮಾಧಾನಪಡಿಸಿದ.

೧೦. ಲಕ್ಷ್ಮಣನಿಗೆ ತಿಳಿಯ ಹೇಳಿ, ತಾಯಿಯ ಆಶೀರ್ವಾದವನ್ನು ಹೊತ್ತು ರಾಮನು ಸೀತೆಯನ್ನು ಸಂತೈಸಿದುದು

ಹಿಮಾದ್ರಿತನಯೆಯೇ ಕೇಳು, ಶ್ರೀರಾಮನು ಬರುತ್ತ ಮೃದುಮಾತುಗಳಿಂದ ತಿಳಿಯ ಹೇಳುತ್ತಿರಬೇಕಾದರೆ, ಲಕ್ಷ್ಮಣನಿಗೆ ಕೋಪಾಗ್ನಿಯು ಅತಿಶಯವಾಗಿ ಹೆಚ್ಚಿತು. ಅವನ ಕಣ್ಣುಗಳು ಜ್ವಾಲಾಮುಖಿಯಂತೆ ಬೆಂಕಿಯುಗುಳುತ್ತಿರಲು, ಮೀಸೆಯು ನಿಟ್ಟುಸಿರಿನಿಂದ ಕೆತ್ತುತ್ತಿರಲು, ಅಣ್ಣನಲ್ಲಿ ರೋಷದಿಂದ ಹೀಗೆಂದ: "ಜಗತ್ತಿನಲ್ಲಿ ಸ್ವಧರ್ಮವು ಗುಣರಹಿತವಾಗಲು ಒಗುಮಿಗೆಯ ಪರಧರ್ಮವು ಅತಿಭಯಪ್ರದವಾಗುತ್ತದೆ ಎಂದು ನೀತಿಜ್ಞರು ಹೇಳುವ ಮಾತು ನಿನಗೆ ತಿಳಿಯದೇ? ಶಾಂತಿ ದಾಂತಿಗಳು ಬ್ರಾಹ್ಮಣರಿಗೆ ಸರಿ, ಕ್ಷತ್ರಿಯರು ಅದನ್ನು ಒಪ್ಪದೆ ಶತ್ರುಗಳ ಒಡಲನ್ನು ಕತ್ತಿಯಿಂದ ಇರಿದು ಸತ್ಕೀರ್ತಿಯನ್ನು ಪಡೆಯುತ್ತಾರೆ. ಶೌರ್ಯ ಧೈರ್ಯ ತೇಜಸ್ಸು ಧಾರ್ಷ್ಟ್ಯಗಳಿಂದ ಶತ್ರುಕುಲವಿನಾಶಕರೆನ್ನಿಸಿಕೊಂಡು ದಾನ ಒಡೆತನಭಾವಗಳಿಂದ ಕೂಡಿರುವುದೇ ಕ್ಷತ್ರಧರ್ಮ. ಅದು ಬಿಟ್ಟು ಬಡ ಹಾರುವನಂತೆ ಕೈಗೆ ಸಿಕ್ಕಿದ ರಾಜ್ಯಸಿರಿಯನ್ನು ಬಿಡುವ ಶಕ್ತರು ದೈವವಶವೆಂದು ಹೆಂಡತಿ–ಸೋದರರನ್ನು ಬಿಟ್ಟು ಹೋಗುವುದು ಯಾವ ಶೂರನಿಗೆ ಸಮ್ಮತವಾದುದು? ಬಲ ಪೌರುಷಗಳಿಲ್ಲದ ಅಧಮರು ಯಾವ ಯಾವುದೋ ನೀತಿಯನ್ನು ಹೇಳುತ್ತ, ದೈವೇಚ್ಛೆಯಿಂದಲ್ಲದೆ ಹಿರಿತನ ದೊರೆಯದು ಎಂಬ ಅನಾಥವಚನಗಳಿಂದ ಹಲುಬುತ್ತಾರೆ. ಅದೇ ಬಲಶೌರ್ಯಗಳಿಂದ ಶತ್ರುಗಳನ್ನಪ್ಪಳಿಸಿ ಕಡಿಖಂಡ ಮಾಡಿ ಭೂತಪ್ರೇತಗಳಿಗೆ ಔತಣವಿತ್ತು ಗೆಲವು ಸಾಧಿಸಿ ತೋರಿಸುತ್ತೇನೆ; ಶಕ್ತಿಯೇ ನನಗೆ ದೈವ. ಇಂದ್ರ ಅಗ್ನಿ ಯಮ ನಿಋತಿ ಮರುತ ಕುಬೇರ ವರುಣ ಶಿವರು ಕೋಪದಿಂದ ಬಿಲ್ಲುಬಾಣಗಳನ್ನು ಹಿಡಿದು ತಮ್ಮ ಬಲವನ್ನು ತೋರಿಸುವ ಇಚ್ಛೆಯಿಂದ ಬಂದರೆ ಯಾವ ದೈವವೇ ಆಗಲಿ ದಿಗ್ಬಲಿ ಕೊಡುತ್ತೇನೆ, ಅದರ ಪ್ರಾಣವನ್ನು ಹೀರುತ್ತೇನೆ, ಸೂರ್ಯವಂಶದ ಪರಂಪರೆಯ ವಿಕ್ರಮವನ್ನು ತೋರಿಸುತ್ತೇನೆ. ಗಂಡುಗೊಡಲಿಯನ್ನು ಹಿಡಿದು ಇಪ್ಪತ್ತೊಂದು ಬಾರಿ ಕಡುಗೋಪದಿಂದ ರಾಜರುಗಳನ್ನು ಕತ್ತರಿಸಿ ಅವರ ರಕ್ತದಲ್ಲಿಯೇ ಸ್ನಾನ ಆಹ್ನಿಕಗಳನ್ನು ಮಾಡಿ ಇಡೀ

ಭೂಮಿಯನ್ನು ತಮ್ಮ ಕುಲದವರಿಗೆ ಕೊಟ್ಟು ಪರಶುರಾಮನು ಕೀರ್ತಿಯನ್ನು ಪಡೆದ. ಅಗಸ್ತ್ಯನು ಸಪ್ತಸಾಗರಗಳನ್ನು ಒಕ್ಕುಡಿತೆಯಲ್ಲಿ ಅಡಗಿಸಿ ಕುಡಿದ. ಬಡ ಹಾರುವರೂ ಈ ರೀತಿ ಮಾಡಿರಬೇಕಾದರೆ ನಮ್ಮ ಧರ್ಮವನ್ನು ಹೇಗೆ ಹುಸಿಗೊಳಿಸಲಿ? ಭರತ, ಅವನ ಮಾವ, ಇವರೊಡನೆ ಸೇರಿ ನಮಗೆ ಪ್ರತಿಬಲವಾಗಿ ತನ್ನ ತಾಯಿಯ ಮಾತನ್ನು ಕೇಳಿ ನಮ್ಮ ದೊರೆತನವನ್ನು ಸೆಳೆದವರ ಜಠರಾದಿಗಳ ಮಾಂಸ ಮಿದುಳು ನೆತ್ತರುಗಳಿಂದ ಶಾಕಿನಿ ಡಾಕಿನಿಯರಿಗೆ ಔತಣವನ್ನು ಮಾಡುತ್ತೇನೆ; ನಮ್ಮ ಭುಜಸಾಹಸವನ್ನು ಪರೀಕ್ಷಿಸುವುದಾದರೆ ಭೈರವಾದಿಗಳನ್ನು ಕ್ಷಣದಲ್ಲಿ ನನ್ನ ಡಿಂಗರಿಗರನ್ನಾಗಿ ಮಾಡಿಕೊಳ್ಳುತ್ತೇನೆ. ಸೂರ್ಯವಂಶದಲ್ಲಿ ಹುಟ್ಟಿದ ರಾಜರುಗಳೆಲ್ಲ ರಾಜ್ಯವನ್ನಾಳಿ, ಅಶ್ವಮೇಧಯಾಗಗಳನ್ನು ಮಾಡಿ, ಷೋಡಶದಾನದಿಂದ ಬ್ರಾಹ್ಮಣರನ್ನು ಸಂತೋಷಗೊಳಿಸಿ, ಮಕ್ಕಳನ್ನು ಪಡೆದು ಸುಖವನ್ನು ಹೊಂದಿ, ಸೋದರರೇ ಮುಂತಾದವರನ್ನು ಸಂತಸಗೊಳಿಸಿ ಕೊನೆಗೆ ವೈರಾಗ್ಯದ ಹಾದಿಯನ್ನು ಕಂಡರೇ ಹೊರತು ಈ ರೀತಿ ನಿನ್ನಂತೆ ಯಾರು ತಾನೇ ಕಾಡಿಗೆ ಹೋದರು? ಕೂಡಿಹಾಕಿರುವ ಈ ವಸ್ತುಗಳಲ್ಲಿಯೇ ನಿನಗೆ ಪಟ್ಟವನ್ನು ಕಟ್ಟಿ, ಎಲ್ಲ ಅಡ್ಡಿಗಳನ್ನೂ ನಿವಾರಿಸಿ, ತಾಯಂದಿರು ದುಃಖವನ್ನು ಮರೆತು ಸುಖವನ್ನು ಹೊಂದುವ ಹಾಗೆ ಒಂದು ನಿಮಿಷದಲ್ಲಿ ಮಾಡುತ್ತೇನೆ. ಸಮಯಕ್ಕಾಗದ ನನ್ನಂತಹ ಪಾದಸೇವಕರು ನಿನಗಿದ್ದೂ ಏನು ಫಲ? ಕರಗತವಾದ ರಾಜ್ಯವನ್ನು ಬಿಟ್ಟು ಹೋದರೆ ಸೂರ್ಯವಂಶಸಂಭೂತನಾದ ರಾಜನಿಗೆ ಕೀರ್ತಿಯುಂಟಾಗುವುದೇ? ಕುಲಪರಂಪರೆಯ ರಾಜ್ಯವನ್ನು ವೃತ್ತಿಗೆ ಅವಿರೋಧವೆನಿಸುವ ರೀತಿಯಲ್ಲಿ ಅಭಿಷೇಕ ಮಾಡಿ ನೀಡಲು ರಾಜರನ್ನೆಲ್ಲ ಹರುಷಿತರನ್ನಾಗಿ ಮಾಡಬೇಕು; ಆನಂತರ ನಲವಿನಿಂದ ಪರಿವಾರದವರನ್ನೂ ಪ್ರಜೆಗಳನ್ನೂ ತನ್ನ ಕುಲಪುತ್ರರೆಂದೇ ಬಗೆದು ರಕ್ಷಿಸುವಂತೆ ಮಗನ ಕೈಗೆ ಒಪ್ಪಿಸಿ ಆನಂತರ ತಪೋರಾಜ್ಯದ ಕಡೆಗೆ ಹೋಗುವುದು ಸದ್ಧರ್ಮ ಎನಿಸುತ್ತದೆ. ರಾಜ್ಯವನ್ನು ಪರರ ಪಾಲು ಮಾಡಿ ನರಗುರಿಗಳ ಹಾಗೆ ಕಾಡಿಗೆ ಹೋಗುವುದಾದರೆ ಕೈಯಲ್ಲಿರುವ ಬಿಲ್ಲಬಾಣಗಳು ಹಾಗೂ ಧರಿಸಿದ ಕಿರೀಟಗಳು ಇರುವುದು ಅಲಂಕಾರಕ್ಕೋ ಜನರಂಜನೆಗೋ? ಈ ಬಗೆಯಲ್ಲಿ ಅಪಕೀರ್ತಿಯನ್ನು ಪಡೆದ ಬಾಳನ್ನು ನೋಡಿ ಸೇರಿರುವ ರಾಜರೆಲ್ಲ ಗೇಲಿ ಮಾಡುವುದಿಲ್ಲವೇ? ಈ ಬಗೆಯ ನಡವಳಿಕೆ ನೀತಿಯಲ್ಲ, ಹೋಗುವುದು ತರವಲ್ಲ, ಪುರುಷಸೂಚಕವಲ್ಲ" ಎಂದು ಲಕ್ಷ್ಮಣನು ರೋಷಾವೇಶದಿಂದ ನುಡಿದ.

ಎಂದೂ ರಾಮನ ವನವಾಸವನ್ನು ಒಪ್ಪದ ಸೌಮಿತ್ರಿಯ ಮಾತುಗಳನ್ನು ಕೇಳಿದ ಕೌಸಲ್ಯೆಯು ತೀವ್ರತರವಾದ ಶೋಕದಿಂದ ಕೂಡಿ ರಾಮನನ್ನು ಕುರಿತು. "ನನ್ನ ಅದೃಷ್ಟದ ಪರಿಯೇ ಇಂತಹುದು. ನನ್ನ ದುಃಖವು ಅಪೂರ್ವವಾದುದು. ಆದರೆ ಈ ದುಃಖಕ್ಕೆ ನೀನು ಕಾರಣನೆನಿಸುವುದು ದುಶ್ಚರಿತವೆನಿಸುತ್ತದೆ. ಜನಮನೋಹ್ಲಾದಿಯೂ ಕರುಣಾವನಧಿಯೂ ಭೂತಹಿತಕಾರಿಯೂ ಮನುಜೋತ್ತಮನೂ ಆದ ನೀನು ನನ್ನ ಮನಸ್ಸಿಗೆ ಸಂಕ್ಲೇಶವನ್ನುಂಟುಮಾಡುವುದು ಅನುಚಿತವಾದದ್ದು. ಸವತಿಯರ ನಡುವೆ ಸಂಕಟಪಡುತ್ತ, ಅವರ ಸಹಿಲಸಾಧ್ಯವಾದ ಗರ್ವದ ಮಾತುಗಳನ್ನು ಕೇಳುತ್ತ ದೈನ್ಯದಿಂದ ನಾನೆಂತು ಬದುಕಲಿ? ನಿನ್ನ ತಂದೆಯ ಮಾತಿನಂತೆಯೇ ನೀನು

ಕಾಡಿಗೆ ಹೋಗುವುದಾದರೆ ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗು, ಅಲ್ಲಿ ಸುಖವಾಗಿರುತ್ತೇನೆ, ಈ ತಾಯಿಯನ್ನು ಬವಣೆಗೆ ಒಳಗುಪಡಿಸಬೇಡ" ಎಂದು ದೀನತೆಯಿಂದ ಕೂಡಿದ ತಾಯಿಗೆ ರಾಮನು ಈ ರೀತಿ ಹೇಳಿದ: "ಭರತನ ತಾಯಿಯ ಮಾತಿಗೆ ಕಟ್ಟುಬಿದ್ದು, ನನ್ನ ಕಾರಣದಿಂದ ಕೊನೆಯಿಲ್ಲದ ಕ್ಲೇಶಕ್ಕೆ ಪಕ್ಕಾಗಿರುವ ತಂದೆಗೆ ನಾನು ಕಾಡಿಗೆ ಹೋಗುವುದರಿಂದ ಸ್ವಲ್ಪವಾದರೂ ಸಮಾಧಾನವಾಗಬಹುದು. ಗಂಡನ ಸೇವೆಯನ್ನು ಮರೆತ ಹೆಂಡತಿಯು ಕ್ರೂರಿಯೆನಿಸಿಕೊಳ್ಳುತ್ತಾಳೆ, ಆದ್ದರಿಂದ ದೇಹವಿರುವವರೆಗೂ ದೊರೆಯ ಶುಶ್ರೂಷೆ ಮಾಡುತ್ತ ಇರುವುದೇ ನಿನಗೆ ಪರಮಧರ್ಮ, ಇದೇ ಸನಾತನ ನಡವಳಿಕೆ, ತಾಯಿ. ಉಪವಾಸವ್ರತ, ಸತ್ಕಥಾಶ್ರವಣ, ಜಪತಪೋನಿರತತೆ, ಪತಿಸೇವೆಗಳಿಂದ ಸತಿಯು ವಿಮುಖಳಾದರೆ ಅಂತಹವಳು ಪಾಪಿನಿಯೆನಿಸಿಕೊಳ್ಳುವುದಿಲ್ಲವೇ? ಮಮತೆಯಿಂದ ಪತಿಸೇವೆಯನ್ನು ಮಾಡುವ ಸತಿಗೆ ಸ್ವರ್ಗವೇ ಮೊದಲಾದ ಸುಖವು ಅಪರಿಮಿತವಾಗಿ ಲಭಿಸುತ್ತದೆ. ಜಡನೋ ಕಿವುಡನೋ ಮೂಗನೋ ಕುರುಡನೋ ರಾಜನೋ ಸಾಮಾನ್ಯನೋ ಸತಿಗೆ ಪತಿಯೇ ದೈವವಲ್ಲವೇ? ಬೇರೆ ವ್ರತ ನಿಯಮ ತಪಗಳಿಂದ ಸದ್ಗತಿ ದೊರೆಯಲಾರದಲ್ಲವೇ? ಮಗ ಕಾಡಿಗೆ ಹೋದ ಎಂಬ ಕ್ಲೇಶದಿಂದ ಮತ್ತೆ ಮತ್ತೆ ಕೊರಗದೆ ಮನಸ್ಸನ್ನು ತಹಬಂದಿಗೆ ತಂದುಕೊಂಡು ಬದುಕುವುದು ಲೋಕಸಮ್ಮತವೂ ಹೌದು, ಶ್ರುತಿಸಮ್ಮತವೂ ಹೌದು. ಇದನ್ನೆಲ್ಲ ನಾನು ನಿನಗೆ ಹೇಳಲು ಎಷ್ಟರವನು? ಶೋಕಮೋಹ ಮುಂತಾದ ಪ್ರಾಪಂಚಿಕ ಅನುಭವವೆಲ್ಲವೂ ಚಿತ್ತದ ಆಕಾರ, ಅದರ ಚಟುವಟಿಕೆಗೆ ಪ್ರಾಣವೇ ಗಾಳಿ, ಆ ಬೀಸುವ ಗಾಳಿಯನ್ನು ನಿಯಂತ್ರಿಸಿ ಮಾನಸವೃತ್ತಿಯನ್ನು ಸ್ತಿಮಿತಗೊಳೊಸಿಕೊಳ್ಳುವುದೇ ಅಕಲಂಕವೃತ್ತಿ, ಅದಕ್ಕೆ ಶೋಕವನ್ನು ಹೋಗಲಾಡಿಸುವ ಶಕ್ತಿಯಿರುತ್ತದೆ, ಶಾಂತಿಯು ಲಭಿಸುತ್ತದೆ, ಮನಸ್ಸು ತುಯ್ದಾಟಗಳಿಲ್ಲದೆ ಪ್ರಶಾಂತವಾಗಿ ಆನಂದಸಾಗರವೆನಿಸುತ್ತದೆ. ಈ ಜಗತ್ತನ್ನು ಕನಸೆಂದು ತಿಳಿದು ಶಾಂತಿಯನ್ನಳವಡಿಸಿಕೊಂಡು ಯಾರೂ ಇಲ್ಲದ ಜಾಗದಲ್ಲಿ ಕುಳಿತು ರೆಪ್ಪೆಗಳನ್ನು ಮಿಟುಕಿಸದೆ ದಿಟ್ಟಿಯನ್ನು ಮೂಗಿನ ತುದಿಯ ಮೇಲೆ ನೆಲೆಗೊಳಿಸಿದರೆ ಈ ಬೀಸುವ ಗಾಳಿಯೂ ಸ್ತಿಮಿತಗೊಳ್ಳುತ್ತದೆ, ಹಾಗೆ ಸ್ಥಿರವಾದ ಮನಸ್ಸಿಗೆ ಅಖಂಡವಾದ ಬೆಳುಕು ಕಾಣಿಸುತ್ತದೆ. ಇದು ಸತತಾಭ್ಯಾಸದಿಂದ ಆಗುವಂಥದ್ದು. ಅನುದಿನವೂ ಈ ಬಗೆಯಲ್ಲಿ ಆಲೋಚಿಸಿದರೆ ಎಲ್ಲ ವಿಷಯಗಳೂ ನಿರಸನಗೊಳ್ಳುತ್ತವೆ; ನೋವು ಸಂಕಟವೆಂಬಿವು ಹೇಳ ಹೆಸರಿಲ್ಲದೆ ನಾನು ಹೋಗುವುದೂ ಸುಖಕರವೇ ಎನಿಸುತ್ತದೆ" ಎಂಬ ಶ್ರೀರಾಮನ ವಿವೇಕವಾಣಿಯನ್ನು ಕೇಳಿದ ಕೌಸಲ್ಯೆಯ ಶೋಕವು ಹೋಗಿ ನಿಶ್ಚಿಂತೆಯುಂಟಾಯಿತು, ಚಿದಾನಂದವೊದಗಿತು. ಆಗ ಕೌಸಲ್ಯೆಯು, "ಮಗು, ಸತ್ಯದ ಅನುಸರಣೆಗಾಗಿ ಹದಿನಾಲ್ಕು ವರ್ಷಗಳ ವನವಾಸವನ್ನು ಕ್ಷಣದಂತೆ ಕಳೆದು ಬರುವುದನ್ನು ನೋಡುತ್ತೇನೆ" ಎಂದಳು. ಚಿತ್ತದ ಆಯಾಸವನ್ನು ತೊಲಗಿಸಿ ನಾನಾ ಬಗೆಯಲ್ಲಿ ಮಗನಿಗೆ ಶುಭವನ್ನು ಹಾರೈಸಿದಳು: "ಗುರುಹಿರಿಯರ ಆಶೀರ್ವಾದ ಬಲದಿಂದ ಕಾಡಿನ ಮೃಗಗಳೆಲ್ಲವೂ ನಿನ್ನನ್ನು ಸಲಹಲಿ, ಎಲ್ಲ ದಿಕ್ಪಾಲಕರೂ ಗ್ರಹಗಳೂ ನಕ್ಷತ್ರಗಳೂ ಸಪ್ತರ್ಷಿಗಳೂ ವಿದ್ಯಾಧರರೂ ಸಾಧುಸಂಪನ್ನರೂ ನಿನಗೆ ಸತತ ಸಂತೋಷವನ್ನೀಯಲೆಂದು ಆಶೀರ್ವದಿಸಲಿ" ಎಂದು

ಎಲ್ಲ ದೇವತೆಗಳನ್ನೂ ಪ್ರಾರ್ಥಿಸಿದಳು. ಅನಂತರ ಮಂತ್ರಾಕ್ಷತೆಗಳನ್ನು ರಾಮನ ತಲೆಯ ಮೇಲೆ ತಳಿದು ಶಾಂತಿಮಂತ್ರಗಳನ್ನು ಜಪಿಸಿ ಪವಿತ್ರ ತೀರ್ಥವನ್ನು ಸಂಪ್ರೋಕ್ಷಿಸಿ, ಮಗನನ್ನು ಅಪ್ಪಿಕೊಂಡು, "ಮಗನೆ, ನಿರೋಗನಾಗಿ, ಸುಖಮಯನೆನಿಸಿ ಸಂತೋಷದಿಂದ ಮರಳಿ ಬಂದು ದೊರೆಯಾಗುವುದನ್ನು ನೋಡುವ ಭಾಗ್ಯ ನನ್ನದಾಗಲಿ" ಎಂದು ಹಾರೈಸಿದಳು.

ಈ ರೀತಿ ಆಶೀರ್ವದಿಸಿದ ತಾಯಿಯ ಪಾದಗಳಿಗೆ ರಘುವೀರನು ನಮಸ್ಕರಿಸಿ, ನಿಧಾನವಾಗಿ ಸೀತೆಯಿದ್ದ ಸ್ಥಳಕ್ಕೆ ಹೊರಟ. ಈ ಕಡೆ, ರಾಜಕೀಯ ಬೆಳವಣಿಗೆಗಳ ಬಗ್ಗೆ ಯಾವುದೇ ಅರಿವಿರದ ಸೀತೆಯು ತನ್ನ ಗಂಡನಿಗೆ ಒದಗಲಿರುವ ಸಿರಿಗೆ ಯಾವ ತೊಂದರೆಗಳೂ ಬಾರದಿರಲಿ ಎಂದು ಮಂತ್ರತಂತ್ರೋಪಚಾರದಿಂದ ಎಲ್ಲ ದೇವತೆಗಳನ್ನು ಪೂಜಿಸಿ ಗಂಡನು ಬರುವುದನ್ನೇ ಸಂತೋಷದಿಂದ ಎದುರು ನೋಡುತ್ತ ಇದ್ದಳು. ರಾಘವನು ಬೇಗ ಬೇಗ ಹೆಜ್ಜೆ ಹಾಕಿ ಬರುತ್ತಿರುವುದನ್ನು ಕಂಡ ಸೀತೆಯು ತಾನೂ ಸರಸರನೆ ಎದುರುಗಡೆ ಹೋಗಿ ಅವನ ಪಾದಗಳಿಗೆರಗಿ ಭಯದಿಂದ, "ಹುಣ್ಣಿಮೆಯ ಚಂದ್ರನಂತಹ ನಿನ್ನ ಮುಖವು ವ್ಯಥಿತವಾಗಿರುವಂತಿದೆಯಲ್ಲ, ಅದಕ್ಕೆ ಕಾರಣವೇನು? ನಿನ್ನ ಮುಖವು ಹುಣ್ಣಿಮೆಯ ಚಂದ್ರನ ಬೆಳಗನ್ನು ಕಂಡು ನಾಚಿಕೊಂಡಿತೋ, ಬೆಳ್ಗೊಡೆ ಚಾಮರಗಳ ಬೆಡಗು ನೋಡುಗರ ನೋಟಗಳು ಮುಖದ ಬೆಡಗನ್ನು ಅದುರಿಸಿತೋ, ಅಲಂಕೃತಗೊಂಡ ಬಿಳಿಯ ಕುದುರೆಗಳು, ರಥಗಳು, ಆನೆಗಳು, ವಂದಿಗಳ ಹೊಗಳಿಕೆಗಳ ಕಾರಣದಿಂದ ಮುಖದಲ್ಲಿ ಔದಾಸೀನ್ಯ ಉದಿಸಿತೋ? ದಯವಿಟ್ಟು ಹೇಳು" ಎಂದು ಆತಂಕದಿಂದ ವಿಚಾರಿಸಿದಳು. ಆಗ ಶ್ರೀರಾಮನು ಸಾವಧಾನವಾಗಿ, "ಕೇಳು ಧರಣಿಜಾತೆ, ಸತ್ಯಧರ್ಮಾಚಾರಿಯೂ ಭೂಪೋತ್ತಮನೂ ಆದ ತಂದೆಯು ಸಂಪ್ರೀತಿಯಿಂದ ಹಿಂದೆ ಭರತನ ತಾಯಿಗೆ ಎರಡು ವರಗಳನ್ನಿತ್ತಿದ್ದನಂತೆ, ಆದರೆ ಆ ವರಗಳನ್ನು ತಂದೆಯಲ್ಲಿಯೇ ನ್ಯಾಸವಾಗಿಟ್ಟಿದ್ದ ತಾಯಿಯು ಇಂದು ಆ ಎರಡು ವರಗಳನ್ನು ಕೇಳಿದಳು: ಮೊದಲನೆಯದು, ತನ್ನ ಮಗ ಭರತನಿಗೆ ಯುವರಾಜಪಟ್ಟವಾಗಬೇಕು, ಮತ್ತು ಎರಡನೆಯದು, ರಾಮನನ್ನು ಹದಿನಾಲ್ಕು ವರ್ಷ ವನವಾಸ ಕಳಿಸಬೇಕು – ಎಂಬುದೇ ಆ ವರಗಳು. ತಂದೆಯು ಸತ್ಯವನ್ನು ಮೀರದೆ, ಧರ್ಮಬದ್ಧನಾಗಿ ಅವುಗಳಿಗೆ ಒಪ್ಪಿಗೆಯಿತ್ತ. ಆದ್ದರಿಂದ ನಾನೀಗ ಹದಿನಾಲ್ಕು ವರ್ಷಗಳ ಕಾಲ ಕಾಡಿನ ಅಪೂರ್ವ ಸೊಬಗನ್ನು ಅನುಭವಿಸಲು ಹೊರಟಿದ್ದೇನೆ. ಅಲ್ಲಿ ಮುನಿಜನಗಳಗೆ ಕ್ಲೇಶವನ್ನುಂಟು ಮಾಡುವವರನ್ನು ನಿಗ್ರಹಿಸುವ ಹೊಣೆಯೂ ನನ್ನ ಮೇಲಿದೆ. ನೀನು ಪ್ರತಿದಿನವೂ ಬೆಳಗಾಗೆದ್ದು ಶ್ರೀಹರಿಯನ್ನು ಯಥಾವಿಧಿಯಾಗಿ ಪೂಜಿಸಿ. ಧರ್ಮಿಷ್ಠರಾದ ಗುರುಗಳಿಗೂ ದಶರಥ ಮಹೀಶನಿಗೂ ನಮಸ್ಕರಿಸಿ. ನನ್ನ ತಾಯಿ ಕೌಸಲ್ಯೆಯನ್ನು ಸಂತಸದಲ್ಲಿರಿಸುತ್ತ, ಉಳಿದ ತಾಯಿಯರ ಇಷ್ಟಾನುಸಾರವಾಗಿ ನಡೆದುಕೊಳ್ಳುತ್ತ ಕಾಲಕಾಲಕ್ಕೆ ಆಹಾರವನ್ನು ಸೇವಿಸುತ್ತ, ನಾನು ವಾಪಸು ಬರುವ ಕಾಲವನ್ನು ಎದುರುನೋಡುತ್ತಿರು. ನನ್ನ ತಮ್ಮಂದಿರಾದ ಭರತಶತ್ರುಘ್ನರಿಬ್ಬರೂ ಕರುಣಾಮಯಿಗಳು. ಅವರನ್ನು ನಮ್ಮ ಮಕ್ಕಳೆಂದು ತಿಳಿದು ಅವರ ಯೋಗಕ್ಷೇಮವನ್ನು ನೋಡಿಕೋ. ತಂದೆಯು ಉಚಿತಕಾರ್ಯವನ್ನು

ಮಾಡುವವರನ್ನು ಗೌರವಿಸುತ್ತ ದುಷ್ಟರನ್ನು ರಕ್ಷಿಸುವ ನೀತಿವಂತ, ಅವರ ಮಾತನ್ನು ಮೀರದೆ ಸಂತೋಷದಿಂದ ಕಾಲಕಳೆ. ಸಾಧ್ವಿಯರು ನಿನ್ನನ್ನು ಸ್ತ್ರೀರತ್ನಳೆಂದು ಒಪ್ಪುವ ಬಗೆಯಲ್ಲಿ ಬದುಕು" ಎಂದು ರಾಮಪುರದರಸನು ತನ್ನ ಹೆಂಡತಿಗೆ ಹೇಳಿದ.

೧೧. ಸೀತೆಗೆ ಬೋಧನೆ ಮಾಡಿ ತನ್ನ ತಂದೆಯ ಅಪ್ಪಣೆಯನ್ನು ಪಡೆಯಲು ರಾಮನು ಹೋದುದು

ಶೈಲೇಂದ್ರಜಾತೆಯೇ ಕೇಳು, ತಾನು ಕಾಡಿಗೆ ಹೋಗುತ್ತೇನೆ, ನೀನಿಲ್ಲಿ ಸುಖವಾಗಿರು ಎಂದು ಶ್ರೀರಾಮನು ಹೇಳಲು ಆ ಮಾತನ್ನು ಕೇಳಿದ ಧರಣಿಜಾತೆಯ ಕಣ್ಣುಗಳು ಕೆಂದಾವರೆಯಂತೆ ಕೆಂಪಾದವು, ವನವಿನೋದವನ್ನು ಹೊಂದಲು ಉತ್ಸುಕನಾದ ಪತಿಯನ್ನು ಕಿನಿಸಿನಿಂದ ನೋಡುತ್ತ, "ಅತ್ತೆ-ಮಾವ, ಭಾವ-ಮೈದುನ, ಮಕ್ಕಳು, ಸೊಸೆಯಂದಿರು ಎಲ್ಲ ತಮ್ಮ ತಮ್ಮ ಪುಣ್ಯಾನುಭವಿಗಳು ಎನಿಸಿಕೊಳ್ಳುತ್ತಾರೆ; ಆದರೆ ಹೆಂಡತಿ ಮಾತ್ರವೇ ಗಂಡನ ಭಾಗ್ಯಕ್ಕೆ ಪಾಲುದಾರಳು. ಹೆಣ್ಣಿಗೆ ಗಂಡನಲ್ಲದೆ ಬೇರೆ ದೈವವೇ ಇಲ್ಲ ಎಂದು ವಿವೇಕಿಗಳು ಹೇಳುತ್ತಾರೆ. ಹೀಗಾಗಿ ನಿನಗೆ ಆಜ್ಞಾಪಿಸಿರುವ ವನವಾಸ ನನಗೂ ಅನ್ವಯಿಸುತ್ತದೆ, ಹಿರಿಯರ ಮಾತನ್ನು ನಾನು ಮೀರಬಲ್ಲೆನೆ? ಪ್ರಾಜ್ಞನಾದ ನಿನಗೆ ತಿಳಿಯದ್ದು ಏನಿದೆ? ನಾನಾ ಬಗೆಯ ವಿಷಮಯವಾದ ಮರಗಿಡ ಪಕ್ಷಿಮೃಗಗಳನ್ನು ಲೆಕ್ಕಿಸದೆ, ಕಾಡಾದರೂ ಸರಿಯೆ, ನಿನ್ನ ಚರಣಸೇವಾಸಕ್ತಿಯಿಂದ ನಿನ್ನೊಡನೆ ಭಕ್ತಿಯಿಂದ ಬರುತ್ತೇನೆ, ಹೊಳೆಯುವ ಚಿನ್ನದ ಮನೆಯಲ್ಲಿಯಂತೆಯೇ ಅಲ್ಲಿ ನಾನು ಸಂತಸದಿಂದಿರುತ್ತೇನೆ, ನಿನ್ನ ಪ್ರೀತಿಗೆ ಭಂಗ ಬಾರದ ಹಾಗೆ, ಬ್ರಹ್ಮಚರ್ಯದಿಂದ ಇರುತ್ತೇನೆ. ಗೆಡ್ಡೆಗೆಣಸುಗಳನ್ನು ತಿನ್ನುತ್ತ ಸಂತುಷ್ಟಾಗಿರುತ್ತೇನೆ, ಬೆಟ್ಟಗಳು, ನದಿಕೊಳಗಳು ಮುಂತಾದೆಡೆಗಳಲ್ಲಿಯೂ, ಕಮಲಕುಮುದಗಳಿಂದ ತುಂಬಿದ ಸರೋವರಗಳ ದಡದಲ್ಲಿಯೂ ನಲವಿನಿಂದ ನಿನ್ನ ಜೊತೆಯಲ್ಲಿ ಅಡ್ಡಾಡುವ ಔತ್ಸುಕ್ಯ ನನ್ನಲ್ಲಿ ತುಂಬಿದೆ. ನಿನ್ನ ಸೇವೆ ಮಾಡುವುದು ತೌರಿನ ಅತಿಶಯ ಸುಖಕ್ಕೂ ಮಿಗಿಲಾದುದು. ವೀರಾಗ್ರೇಸರನಾದ ನೀನೇ ನನ್ನನ್ನು ನೋಡಿಕೊಳ್ಳುವುದರಿಂದ ನನಗೆಂದಿಗೂ ತೊಂದರೆ ಬಾರದು. ಆದ್ದರಿಂದ ನಿನ್ನೊಡನೆ ನಾನೂ ಕಾಡಿಗೆ ಬರಲು ಉದಾರವಾಗಿ ನನಗೆ ಅನುಮತಿಯನ್ನು ನೀಡು. ಬೇರೆಯ ಕಡೆ ಸುಖಸೌಖ್ಯದಿಂದ ಕೂಡಿರುವುದಕ್ಕಿಂತಲೂ ನಿನ್ನ ಚರಣಸನ್ನಿಧಿಯಲ್ಲಿರಲು, ಆಹಾರವಿಲ್ಲದಿದ್ದರೂ ಅದೇ ಸ್ವರ್ಗವೆನಿಸುತ್ತದೆ; ಆದ್ದರಿಂದ ನನ್ನನ್ನು ಕರೆದೊಯ್ದು ನಿನ್ನ ಅನುಚರಳಾಗಿರಲು ಅನುಮತಿ ನೀಡು" ಎಂದು ಕೈಮುಗಿದು ಬೇಡಿಕೊಂಡಳು.

ಆಗ ಶ್ರೀರಾಮನು ನಯದಿಂದ, "ಎಲ್ಲ ಧರ್ಮಗಳನ್ನೂ ತಿಳಿದ ಅಕಳಂಕ ಕುಲದಲ್ಲಿ ಹುಟ್ಟಿದ ನೀನು ನಿಯಮಾಚಾರವನ್ನು ಅರಿತವಳು; ಅದನ್ನು ಮರೆತು ಸಾಮಾನ್ಯ ಹೆಣ್ಣಿನ ರೀತಿ ಕ್ಲೇಶಗಳ ತವರು, ಅತೃಪ್ತಿಕರ ಆಹಾರಪಾನೀಯಗಳಿಂದಾಗಿ ಆಯಾಸಭರಿತವಾದ ವನವನ್ನು ಮನದಲ್ಲಿ ನಿಶ್ಚೈಸಬೇಡ. ಎಲೆಮನೆಯಲ್ಲಿ ವಾಸ, ಸಿಕ್ಕಿದ ಸೊಪ್ಪುಸದೆಗಳ

ಮೆಲುವು, ಸಮಯಕ್ಕೆ ಸರಿಯಾಗಿ ಮಾಡಲಾಗದ ನಿದ್ರೆ, ನಾನಾ ಬಗೆಯ ಕ್ರೂರ ಮೃಗಪಕ್ಷಿಗಳ ಕಿರಿಚಾಟ, ಹಣ್ಣುಹಂಪಲು ಸಿಕ್ಕದಿದ್ದರೆ ಉಪವಾಸ, ಇಷ್ಟಾದರೂ ಜಟಾಧಾರಿಯಾಗಿ ಋಷಿಮುನಿಗಳಿಗೆ ಮಾಡಬೇಕಾದ ಸೇವೆ, ಬರಸಿಡಿಲಿಗಿಂತ ಭಯಂಕರವಾದ ಸಿಂಹಶಾರ್ದೂಲಗಳ ಗರ್ಜನೆ, ಆನೆಗಳ ಘೀಂಕಾರ, ಈ ಧ್ವನಿಗಳಿಂದ ತಲೆ ಚಿಟ್ಟು ಹಿಡಿಯಬಹುದು; ಜೊತೆಗೆ ಮುಳ್ಳುಕಲ್ಲುಗಳ ಹಾದಿ, ದುಷ್ಟ ಸರ್ಪಗಳ ನೆರಪಿ, ನರಿ ತೋಳ ಹದ್ದುಗಳ ಬಾಧೆಗಳಿಂದ ಕೂಡಿದ ಕಾಡನ್ನು, ಅಲ್ಲಿನ ಕಷ್ಟಗಳ ಅರಿವಿಲ್ಲದೆ, ನೀನು ಬಯಸುತ್ತಿರುವೆಯಲ್ಲ! ಕಾಲಕಾಲಕ್ಕೆ ಋಷಿಗಳ ಆಚಾರವನ್ನನುಸರಿಸುತ್ತ ಮೂರು ಹೊತ್ತಿನ ಸ್ನಾನ, ನೀರನ್ನೇ ಕುಡಿದಿರಬೇಕಾದ ಪರಿಸ್ಥಿತಿ, ಚಳಿಯಿಂದ ಕೂಡಿದ ಗುಡಿಸಲು, ಬಿಸಿಲಿನಲ್ಲಿ ನಡೆಯಬೇಕಾದ ಸಂದರ್ಭ – ಇಂತಹವುಗಳಿಂದಾಗಿ ಕೋಮಲೆಯಾದ ನಿನಗೆ ಕಾಡಿನ ವಾಸ ಕಷ್ಟಕರವೆನಿಸುತ್ತದೆ. ದೇಹಕ್ಕೆ ಒದಗುವ ಕಷ್ಟಗಳು ಅಷ್ಟಿಷ್ಟು ಎಂದು ಹೇಳಬರುವುದಿಲ್ಲ, ಕ್ರೋಧ ಮುಂತಾದ ಭಾವಗಳನ್ನೂ ಇಂದ್ರಿಯಸ್ವಭಾವಗಳನ್ನೂ ಅಡಗಿಸಿಕೊಂಡು, ಭಯಮೋಹಗಳನ್ನು ಬಿಟ್ಟು ಓಡಾಡಿಕೊಂಡಿರುವುದು ತುಂಬ ಕಠಿಣಕರವಾದುದು. ಇವೆಲ್ಲ ಅನಿರೀಕ್ಷಿತವಾಗಿ ಯಾವಾಗ ಬೇಕಾದರೂ ಸಂಭವಿಸಬಹುದು. ಹೀಗಾಗಿ ವನವಾಸ ಎಂಬುದು ಸುಖಕರವಲ್ಲ ಎಂಬುದನ್ನರಿತು ಸುಖವಾಗಿ ಮನೆಯಲ್ಲಿ ಉಳಿದುಕೊಂಡಿರು" ಎಂದು ಒಪ್ಪಿಸಲು ಹೆಣಗಿದ.

ಪತಿಯ ಈ ಮಾತುಗಳನ್ನು ಕೇಳಿದ ಸೀತಾದೇವಿಯು ಮುಖವನ್ನು ಕೆಳಕ್ಕೆ ಹಾಕಿ ಮೆಲ್ಲನೆ ಅತ್ಯಂತ ವಿನಯದಿಂದ ಈ ರೀತಿ ಬಿನ್ನವಿಸಿಕೊಂಡಳು: "ನೀನು ಹೇಳಿದಂತೆ ವನವಾಸ ಕಾಲದಲ್ಲಿ ಸಂಭವಿಸಬಹುದಾದ ಎಲ್ಲ ಬಗೆಯ ತೊಂದರೆಗಳೂ ನಿನ್ನ ಬಗೆಗಿನ ಪಾದಭಕ್ತಿಯಿಂದ ನನಗೆ ಸುಖಕರವಾದ ಫಲವನ್ನೇ ನೀಡುತ್ತವೆ. ಶರಭ ಶಾರ್ದೂಲ ಹುಲಿ ಸಿಂಹ ಕೀಟಾದಿಗಳೂ, ಆನೆಹಾವುಪಕ್ಷಿಗಳೂ ನಾನಿದುವರೆಗೂ ಕಾಣದಂತಹ ಘೋರರೂಪಿನಿಂದ ಕೂಡಿರುವುವಾದರೂ ಅವುಗಳೆಲ್ಲ ನಿನ್ನ ಸನ್ಮೂರ್ತಿಯನ್ನು ನೋಡಿದಾಕ್ಷಣವೇ ಭಯದಿಂದ ಓಡಿಹೋಗುತ್ತವೆ. ಗುರುಜನವು ಯಾವೆಡೆಗೆ ಹೋಗಲು ನಿಮಗೆ ಆಜ್ಞಾಪಿಸಿದೆಯೋ ಅಲ್ಲಿಗೆ ನಾನೂ ಬರಲು ಅನುಮತಿಯನ್ನು ನೀಡು. ಇಲ್ಲದಿದ್ದರೆ ನನ್ನ ದೇಹವು ಈ ಭೂಮಿಯಲ್ಲಿರಲಾರದು, ಇದು ಖಂಡಿತ. ಪತಿಯ ಚರಣಸೇವೆಯನ್ನು ಮಾಡುವ ಹೆಣ್ಣನ್ನು ದೇವೇಂದ್ರನೂ ದಿಟ್ಟಿಸಿ ನೋಡಲಾರನೆಂಬುದು ಲೋಕದ ಜನವೆಲ್ಲ ಬಲ್ಲುದು. ನಮ್ಮ ತವರುಮನೆಯಲ್ಲಿರುವ ಕಾಲದಲ್ಲಿ ದೇವೇಂದ್ರಸಮಾನರಾದ ಜ್ಯೋತಿಷಿಗಳು ಹೇಳಿದ ಭವಿಷ್ಯದ್‌ವಾಕ್ಕುಗಳೆಲ್ಲವೂ ಅಸತ್ಯವೆನಿಸುತ್ತವೆಯೇನು? ನಾನು ಕೆಲಕಾಲ ಗಂಡನೊಡನೆ ವನವಾಸವನ್ನು ಅನುಭವಿಸಬೇಕಾಗುವುದೆಂದು ಸಾಮುದ್ರಿಕರು ತಾಯಿಯ ಬಳಿ ಹೇಳುತ್ತಿದ್ದುದನ್ನು ಕೇಳಿದ್ದೇನೆ. ವನಿತೆಗೆ ಪತಿಯೇ ದೈವವೆಂಬ ಶ್ರುತಿಯ ಮಾತನ್ನು ಅನುಸರಿಸದಿದ್ದರೆ ಪಾಪವುಂಟಾಗುತ್ತದೆ. ಮುಂದೆಂದೂ ಸುಖವು ಪ್ರಾಪ್ತವಾಗಲಾರದು ಎಂಬ ವೇದವಿದರ ಮಾತನ್ನು ನಾವು ಗೌರವಿಸಬೇಕಲ್ಲವೇ? ತವರುಮನೆಯಲ್ಲಿ ಹೇಗೆ ಸುಖದಿಂದಿರುತ್ತೇನೆಯೋ ಹಾಗೆಯೇ ನಾನು ನಿನ್ನ ಪಾದಸೇವೆ ಮಾಡುತ್ತ ವನವಾಸದಲ್ಲಿರುತ್ತೇನೆ. ನನ್ನನ್ನು ಪರೀಕ್ಷಿಸಲೋಸುಗ ಹಗುರ ಮಾತುಗಳನ್ನಾಡದೆ

ನಿನ್ನೊಡನೆ ಕರೆದೊಯ್ಯಿ. ಹಾಗೆ ಮಾಡದಿದ್ದರೆ ವಿಷ ಕುಡಿದೋ, ಬೆಂಕಿಯಲ್ಲಿ ಬಿದ್ದೋ, ನೀರಲ್ಲಿ ಮುಳುಗಿಯೋ ನಾನು ಪ್ರಾಣವನ್ನು ಕಳೆದುಕೊಳ್ಳುತ್ತೇನೆಯೇ ವಿನಾ ಬದುಕಿರಲಾರೆ. ನನ್ನ ಮನಸ್ಸಿನಲ್ಲಿರುವುದನ್ನು ಹೇಳುತ್ತಿದ್ದೇನೆ, ಕರುಣಾಕಲಿತ ಹೃದಯನಾದ ನೀನು ನನ್ನನ್ನು ಕಾಪಾಡುವುದು ಸಮಂಜಸ. ದೀನೆಯೂ ಪತಿವ್ರತೆಯೂ ಸಂಕ್ಲೇಶದಿಂದ ಮ್ಲಾನವದನೆಯೂ ಸುವ್ರತೆಯೂ ನಿನ್ನ ಸುಖಸಂತೋಷಗಳಲ್ಲಿ ಭಾಗಿನಿಯಾದವಳೂ ಆದ ನನ್ನನ್ನು ಬಿಟ್ಟು ಹೋಗುವುದು ಯಾವ ಧರ್ಮ? ಇದನ್ನು ನಾನು ಹೇಳಬೇಕೇ? ಪತಿಯು ಎಲ್ಲಿದ್ದರೆ ಅಲ್ಲಿ ನನಗೆ ಸುಖವಿರುತ್ತದೆ, ಇದರಲ್ಲಿ ಅನುಮಾನವಿಲ್ಲ." ಹೀಗೆಂದು ಕಣ್ಣಲ್ಲಿ ನೀರು ತುಂಬಿಕೊಂಡು ಮುಂದೆ ಮಾತನಾಡದೆ ಸೀತೆ ನಿಂತುಬಿಟ್ಟಳು.

ಆನಂತರ ಮತ್ತೆ ಸಾವರಿಸಿಕೊಂಡ ಭೂಜಾತೆಯು ತನ್ನನ್ನು ನಾನಾ ವಿಧವಾದ ಇನಿವಾತುಗಳಿಂದ ಉಪಚರಿಸಿದ ಇನಿಯನ ಮುಖವನ್ನು ನೋಡುತ್ತ, "ನಾನು ಮನೆಯಲ್ಲಿದ್ದರೆ ಉಡುವುದು ಉಣ್ಣುವುದರಲ್ಲೇನೂ ಕೊರೆಯಾಗದಿದ್ದರೂ, ಹೆಂಡತಿಯನ್ನು ಬಿಟ್ಟು ಹೋದ ಎಂದು ನಾಡಿನ ಜನರು ನಿನ್ನ ಬಗ್ಗೆ ಸಲ್ಲದ ಮಾತನ್ನಾಡುತ್ತಾರೆ, ಹಾಗೆಯೇ ಹೆಣ್ಣು ಗಂಡನನ್ನು ಬಿಟ್ಟು ಒಂಟಿಯಾಗಿ ಮನೆಯಲ್ಲಿ ಉಂಡುಡುತ್ತಿದ್ದರೆ ನಾಡವರು ಅವಳನ್ನು ಹೀಯಾಳಿಸದಿರುವರೆ? ಹೆಂಡತಿಯನ್ನು ಸಲಹಲಾರದೆ ಗಂಡನು ಹೆಂಡತಿಯನ್ನು ತಂದೆಯ ಬಳಿಯೇ ಬಿಟ್ಟು ಹೋದ ಎಂದು ಕೆಲವರು ಆಡಿಕೊಂಡರೆ, ಗಂಡನನ್ನು ಬಿಟ್ಟ ಈ ಹೆಣ್ಣು ಯಾತಕ್ಕಾಗಿ ಊರಲ್ಲೇ ಉಳಿದಳು ಎಂದೂ ಜನ ಆಡಿಕೊಳ್ಳುತ್ತಾರೆ. ಪತಿವ್ರತೆಯರು ಅನುಸರಿಸುವ ಹಿತವಹವಾದ ನಡತೆಯ ಬಗ್ಗೆ ನಾನು ಹೇಳುತ್ತಿದ್ದೇನೆಯೇ ಹೊರತು ಅನ್ಯಥಾ ಅಲ್ಲ. ಪಾತಿವ್ರತ್ಯವು ಹೃದಯಸ್ಥವಾಗಿರಲು ನನಗೆ ಕಾಡಿನ ವಾಸದಲ್ಲಿನ ಹುಲ್ಲು ಗರಿಕೆ ಜೊಂಡು ಮುಳ್ಳುಗಳು ಸುಖಕರವೆನಿಸುತ್ತವೆ; ಬಿರುಗಾಳಿ ಕಗ್ಗತ್ತಲೆ ಮುಂತಾದವು ಹಿತಕಾರಿಯೆನಿಸುತ್ತವೆ; ಕಗ್ಗಲ್ಲುಗಳೆ ಮೃದುತಲ್ಪಸಮನವಾಗುತ್ತವೆ; ಸೊಪ್ಪುಸದೆ ಗೆಡ್ಡೆಗೆಣಸುಗಳೇ ನನಗೆ ಅಮೃತಾಹಾರವೆನಿಸುತ್ತವೆ. ನಿನ್ನ ಮನಸ್ಸಿಗೆ ಬೇಸರವನ್ನಾಗಲೀ, ಬಾಳಿಗೆ ನೋವನ್ನಾಗಲೀ ನೀಡುವುದಿಲ್ಲ; ನಿನ್ನನ್ನು ಬಿಟ್ಟ ಇರವು ನನಗೆ ಸುಖಕರವಾಗದೆ ನರಕಸಮಾನವೆನಿಸುತ್ತದೆ, ಆದ್ದರಿಂದ ನಿನ್ನ ಜೊತೆ ಬರುವುದೇ ನನಗೆ ತಕ್ಕುದು. ನೀನು ಇದಕ್ಕೆ ಒಡಂಬಡದಿದ್ದರೆ ವಿಷವನ್ನು ಕುಡಿದು ಈಗಲೇ ಪ್ರಾಣ ಬಿಡುತ್ತೇನೆ, ನಿಮ್ಮ ಜೊತೆಯಿಲ್ಲದೆ ನಾನು ಕ್ಷಣಮಾತ್ರವೂ ಬದುಕಿರಲಾರೆ. ನಿಮ್ಮನ್ನು ಅರೆನಿಮಿಷ ನೋಡದಿದ್ದರೆ ಕಾಲವು ಯುಗಸಮಾನವೆನಿಸುತ್ತದೆ, ಅಂಥದ್ದರಲ್ಲಿ ಹದಿನಾಲ್ಕು ವರ್ಷಗಳು ಕಾಣದೆ ಹೇಗೆ ಜೀವಿಸಿರಲಿ?" ಎಂದು ಒಪ್ಪಿಸಲು ಹರಸಾಹಸ ಮಾಡಿದಳು.

"ತಂದೆಯ ಮಾತನ್ನು ಮೀರಲು ಸಾಧ್ಯವಿಲ್ಲ, ಧರ್ಮವು ಸನಾತನವಾದುದು, ತಾಯಿತಂದೆಗಳೂ ದೇವರಿಗಿಂತಲೂ ಮಿಗಿಲು, ಇದನ್ನು ತಿಳಿಯದೆ ಅವರನ್ನು ಶುಶ್ರೂಷೆಗೈಯದೆ ಬೇರೆ ದೈವಗಳನ್ನು ಪೂಜಿಸಿದರೆ ಸುಖವು ದೊರೆಯುವುದಿಲ್ಲ. ಎಂಬುದಕ್ಕಾಗಿ ನಾನು ಕಾಡಿಗೆ ಹೋಗುತ್ತಿದ್ದೇನೆ; ಕ್ರೂರವಾದ ಅರಣ್ಯದಲ್ಲಿ ಮಹಾ ತೊಂದರೆಗಳು ಸಂಭವಿಸಬಹುದೆಂಬ ಕಾರಣದಿಂದ ಹೆಂಡತಿಯೊಡನೆ ಹೋಗುವುದು ಅನುಚಿತ ಎಂದು ನಿನ್ನನ್ನು ಊರಲ್ಲಿಯೇ ಇರು ಎಂದು ಹೇಳಿದೆ. ಆದರೆ ಸೂರ್ಯನನ್ನು

ಬಿಟ್ಟು ನೆರಳಿರಬಹುದೇ ಎಂಬ ಕಾರಣದಿಂದ ನಿನ್ನನ್ನು ಜೊತೆಗೆ ಕರೆದೊಯ್ಯಲು ಒಪ್ಪುತ್ತೇನೆ. ತರುಣೀಮಣಿಯೆ, ದುಃಖವನ್ನು ಬಿಟ್ಟು ಸಂತೋಷವನ್ನು ಪಡೆದು ಹೋಗಲು ಬೇಕಾದ ಸಾಮಗ್ರಿಯನ್ನೆಲ್ಲ ಸಿದ್ಧಪಡಿಸಿಕೊ. ಯಾಗಾದಿ ಸರ್ವತೀರ್ಥಸ್ನಾನಫಲಗಳೂ, ಯೋಗವೇ ಮೊದಲಾದ ಜಪತಪಧ್ಯಾನಫಲಗಳೂ ಗುರುಸೇವೆಯಿಂದಲೇ ಒದಗಿ ಭೋಗಭಾಗ್ಯಗಳು ದೊರಕುತ್ತವೆ. ನಾನು ಕಾಡಿಗೆ ಹೋಗದೆ ಉಳಿಯುವುದಿಲ್ಲ, ಆದರೆ ನೀನೂ ಜೊತೆಗೆ ಬರುವುದು ಅತಿಶಯವಾದ ಪ್ರೇಮದ ಫಲ" ಎಂದು ಹೊರಡಲು ಸಿದ್ಧಳಾಗುವಂತೆ ಸೂಚಿಸಲು ಸೀತೆ ಸಂತಸಗೊಂಡಳು.

ಸೀತೆಯನ್ನೂ ಜೊತೆಗೆ ಕರೆದೊಯ್ಯಲು ರಾಮನು ಒಪ್ಪಿದುದನ್ನು ಕಂಡು ಲಕ್ಷ್ಮಣನು ರಘುನಾಥನಿಗೆ ತಲೆಬಾಗಿ ತನ್ನ ಮನಸ್ಸಿನಲ್ಲಿದ್ದುದನ್ನು ಈ ರೀತಿ ಬಿನ್ನವಿಸಿಕೊಂಡ: "ಮೃಗಪಕ್ಷಿಗಳ ಗಡಣವೇ ಇರುವ ದಟ್ಟ ಕಾನನಕ್ಕೆ ಧರಣಿಸುತೆಯ ಜೊತೆ ಹೋಗುವುದಾದರೆ ಬೇರೇನನ್ನೂ ನೋಡದೆ, ಅಣ್ಣ, ಬಿಲ್ಲುಬಾಣಗಳನ್ನು ಹಿಡಿದು ನಾನೂ ನಿಮ್ಮನ್ನು ಹಿಂಬಾಲಿಸುತ್ತೇನೆ. ನಿನ್ನ ಪಾದಸೇವೆಯನ್ನು ಹೊರತಾಗಿ ನಾನು ಸುರಲೋಕ ಭೋಗವನ್ನೂ, ದೇವತಾಶ್ವಗಳನ್ನೂ, ನಿರತಿಶಯದ ಐಶ್ವರ್ಯ ಮುಂತಾದ ಭೋಗಗಳನ್ನೂ ಬಯಸುವುದಿಲ್ಲ. ನಾನು ಬರುವುದಕ್ಕೆ ಅಪ್ಪಣೆ ಕೊಡು" ಎಂದು ಹೇಳಿದ ಸೌಮಿತ್ರಿಯನ್ನು ನೋಡುತ್ತ ರಾಮನು, ಅವನು ತನ್ನೊಡನೆ ಬರುವುದನ್ನು ತಡೆಯುವುದಕ್ಕೆ ಪ್ರಯತ್ನಿಸಿದ. ಅದರಿಂದ ಲಕ್ಷ್ಮಣನು ಕ್ರೋಧದಿಂದ, "ನಾನು ನಿನ್ನೊಡನೆ ಬರುವುದಕ್ಕೆ ಅಡ್ಡಿಯೇನಿದೆ?" ಎಂದು ಕೇಳಲು ರಘುವೀರನು ನಯದಿಂದ, "ಸೌಮಿತ್ರಿ ಕೇಳು, ನೀನು ನನಗೆ ತಮ್ಮ ಮಾತ್ರ ಅಲ್ಲ, ನನ್ನ ಪ್ರಾಣಸಖ, ನಿನಗೆ ಆಗಮಗಳ ಅರ್ಥ ತಿಳಿದೇ ಇದೆ. ನೀನೂ ನನ್ನೊಡನೆ ಬಂದರೆ ನಾನು ಕಾಡಿಗೆ ಹೋಗುವುದರಿಂದಾಗಿ ಕೌಸಲ್ಯೆ ಸುಮಿತ್ರೆಯರಿಗಾಗುವ ಸಂಕಟವನ್ನು ಯಾರು ಶಮನಮಾಡುತ್ತಾರೆ? ತಂದೆಯು ಕೈಕೇಯಿಗೆ ವಶನಾಗಿ ಮೊದಲೇ ವ್ಯಾಕುಲದಿಂದ ಕುದಿಯುತ್ತಿದ್ದಾನೆ, ಅಂತಹವನು ಇತರರನ್ನೇನು ನೋಡಿಕೊಳ್ಳುತ್ತಾನೆ? ಆದ್ದರಿಂದ ನೀನು ತಾಯಂದಿರ ಸೇವೆ ಮಾಡುತ್ತ ಇಲ್ಲಿಯೇ ಇರು. ಅರಸನು ಮನ್ಮಥಪಾಶದಿಂದ ರಾಜ್ಯವನ್ನು ಕೈಕೇಯಿಗೆ ಕೈವಶಮಾಡಿದ್ದಾನೆ; ಆಕೆ ನನ್ನ ತಾಯಿ ಕೌಸಲ್ಯೆ ಹಾಗೂ ಸುಮಿತ್ರೆಯರನ್ನು ಕನಸಿನಲ್ಲಾದರೂ ನೆನಪಿಸಿಕೊಳ್ಳುತ್ತಾಳೆಯೇ, ಅವರನ್ನು ಮನುಷ್ಯರೆಂದು ಬಗೆಯುತ್ತಾಳೆಯೇ? ಭರತನನ್ನು ರಾಜನನ್ನಾಗಿ ಮಾಡುವುದಲ್ಲದೆ. ಅವನು ಮಾತೃಶಾಸನವನ್ನು ತಲೆಯ ಮೇಲೆ ಹೊತ್ತು ನಮ್ಮವರನ್ನು ಕಾಪಾಡದೆ ಹೋಗಬಹುದು ಎಂಬ ಶಂಕೆ ನನಗಿದೆ. ಗಂಡನ ಹಂಗನ್ನು ಕಳೆದುಕೊಂಡು. ಸವತಿ ಅಧಿಕಾರವನ್ನು ಚಲಾಯಿಸುತ್ತಿರಲು. ಹತ್ತಿರ ಮಕ್ಕಳೂ ಇಲ್ಲದಿದ್ದರೆ ಅವಳ ದುಃಖವನ್ನು ನಿವಾರಿಸುವವರಾರು. ಜೊತೆಯಲ್ಲಿ ಮಾತಾಡುವವರಾರು? ಹೀಗಾಗಿ ನೀನು ಊರೊಳಗಿದ್ದು ಅವರನ್ನು ಉಪಚರಿಸು, ನನ್ನ ಮಾತನ್ನು ಕೇಳು" ಎಂದು ಅನೇಕ ವಿಧದಿಂದ ವಿವೇಕಯುತವಾದ ಮಾತುಗಳಿಂದ ಲಕ್ಷ್ಮಣನಿಗೆ ಹೇಳಲು ಲಕ್ಷ್ಮಣನು. "ದೇವ. ನಿನ್ನ ತೇಜಃಪ್ರಭಾವದಿಂದ ಬಂಧುಗಳಾದವರು ರಾಜನನ್ನೂ ಭರತನನ್ನೂ ಮೀರಿ ನನಗಿಂತಲೂ ಮಿಗಿಲಾಗಿ ತಾಯಿಯರ ಇಚ್ಛಾನುಸಾರವಾಗಿ ಅವರ ಸೇವೆ ಮಾಡುವವರಿದ್ದಾರೆ. ಅಲ್ಲದೆ,

ಸ್ವಾಮಿ, ಕೌಸಲ್ಯೆ ಸುಮಿತ್ರೆಯರು ಧೀಮಂತರು, ನನ್ನಂತಹ ಕೋಟಿ ಜನರನ್ನು ತಮ್ಮ ಹೊಟ್ಟೆಯಲ್ಲಿಟ್ಟುಕೊಂಡು ಪೊರೆಯುವ ಸಾಮರ್ಥ್ಯವುಳ್ಳ ಮಹಾಮಹಿಮರು. ಲೋಕವನ್ನೇ ಕಾಪಾಡುವವರಿಗೆ ಒಂದು ಹಳ್ಳಿಯನ್ನು ರಕ್ಷಿಸುವುದು ಕಷ್ಟವೇ? ಆದ್ದರಿಂದ ನಿನ್ನ ಸೇವೆಗೈಯಲು ಅನುಮತಿಸು. ಸೇವಕನಂತೆ ನಿಮಗೆ ದಾರಿ ತೋರುತ್ತ ನಾನು ಮುಂದೆ ಗುದ್ದಲಿ ಪಿಕಾಸಿಗಳನ್ನು ಹಿಡಿದು ಸಾಗುತ್ತೇನೆ, ಹೂ ಹಣ್ಣು ಗೆಡ್ಡೆಗಳನ್ನು ಸಂಗ್ರಹಿಸಿಕೊಂಡು ಬರುತ್ತೇನೆ. ಬೇರೇನನ್ನೂ ಯೋಚಿಸದೆ ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದುಕೊಂಡು ಹಗಲುರಾತ್ರಿ ಸ್ವಇಚ್ಛೆಯಿಂದ ನಿಮ್ಮ ಚರಣಗಳ ಸೇವೆ ಮಾಡುತ್ತೇನೆ. ಬೇಡ ಎನ್ನದೆ ನನ್ನನ್ನು ನಿನ್ನ ಸೇವೆಯಲ್ಲಿರಿಸಿಕೋ, ನಿನ್ನನ್ನೇ ಮೊರೆ ಹೋಗಿದ್ದೇನೆ" ಎಂದು ಪರಿಪರಿಯಾಗಿ ಬಿನ್ನವಿಸಿಕೊಂಡ. ಆಗ ಶ್ರೀರಾಮನು ಸಾವಧಾನದಿಂದ ಮಿತ್ರರೂ ಬಂಧುಬಾಂಧವರೂ ತಿಳಿಯುವ ಹಾಗೆ, "ನಮ್ಮ ಬಿಲ್ಲುಬಾಣಗಳೂ ಕತ್ತಿ ಕವಚಗಳೂ ಗುರುವಿನ ಬಳಿಯಿವೆ; ಬೇಗ ಹೋಗಿ ಅವುಗಳನ್ನು ತಾ" ಎಂದು ಹೇಳಲು ಲಕ್ಷ್ಮಣನು ರಭಸದಿಂದ ಹೋಗಿ ದಿವ್ಯಾಯುಧಗಳನ್ನು ತರಲು, ಅವುಗಳನ್ನು ತೆಗೆದುಕೊಂಡು ತಮ್ಮನ ಕಡೆ ನೋಡಿ, "ಹೋಗುವ ಮುಂಚೆ ಸುಹೃಜ್ಜನರಿಗೂ ಪರಿಜನರಿಗೂ ದಾನವೀಯಬೇಕು, ಹಾಗಾಗಿ ವೇದವೇದಾಂಗಪಾರಂಗತರಾದ ವಿಪ್ರಸಮೂಹಕ್ಕೆ ಸಾಧುಜನರಿಗೆ ಸಜ್ಜನರಿಗೆ ಸುಭೃತ್ಯರ ಇಷ್ಟಾರ್ಥಗಳನ್ನು ನೆರವೇರಿಸಬೇಕಾದರೆ ಗುರುಪುತ್ರನಾದ ಸುಯಜ್ಞಾಚಾರ್ಯನನ್ನು ಆದರದಿಂದ ಕರೆದು ತಾ; ಅವರ ಸಮ್ಮುಖದಲ್ಲಿ ಎಲ್ಲ ಪ್ರಾಜ್ಞರನ್ನೂ ಪೂಜಿಸಿ ಅರಣ್ಯದ ಕಡೆ ಹೋಗಬೇಕು" ಎಂದು ಸೂಚಿಸಿದ.

ಇದನ್ನು ಕೇಳಿದ ಲಕ್ಷ್ಮಣನು ಸಡಗರದಿಂದ ಹೋಗಿ ಬ್ರಾಹ್ಮಣನನ್ನು ಕಂಡು ವಂದಿಸಿ ರಘುನಂದನನು ಹೇಳಿದ್ದ ವಿಷಯವನ್ನರುಹಿ ನಸುನಗೆಯೊಡನೆ ಜೊತೆಯಲ್ಲಿ ಕರೆತಂದ. ಗುರುತನಯನನ್ನು ಕಂಡು ರಾಮನು ಅವನ ಚರಣಕಮಲಗಳಿಗೆ ಅಭಿವಂದಿಸಿ ಹರುಷದಿಂದ ಅಂಗವಸ್ತ್ರ ಕುಂಡಲ ಕಟಿಸೂತ್ರ ಮಣಿಕಂಕಣ ರತ್ನಾಭೂಷಣಗಳನ್ನಿತ್ತು ಸತ್ಕಾರ ಮಾಡಿ, ಖುಷಿಯೊಡನೆ, "ಹಾರಕೇಯೂರ ಮುಂತಾದ ಪರಿಪರಿಯ ವಸ್ತ್ರಾದಿ ಅಲಂಕಾರಗಳ ಸಮೇತ ಸೀತೆಯು ಮಾಡುವ ಪೂಜೆಯನ್ನು ಸ್ವೀಕರಿಸಬೇಕು; ಹಾಗೆಯೇ ಶತ್ರುಂಜಯವೆಂಬ ವೇಗಯುತವಾದ ಆನೆಯನ್ನು ನಿನಗೆ ಸಮರ್ಪಿಸುತ್ತೇನೆ, ದಯವಿಟ್ಟು ಕೈಗೊಳ್ಳಬೇಕು" ಎಂದು ದ್ವಿಜನನ್ನು ಕೇಳಿಕೊಂಡ. ಎಲ್ಲವನ್ನೂ ಆ ಬ್ರಾಹ್ಮಣೋತ್ತಮನು ಸ್ವೀಕರಿಸಿ ಹರಸಿದ. ಆನಂತರ ರಾಮನು, "ಸೌಮಿತ್ರಿಯೇ, ಅಗಸ್ತ್ಯ ಕೌಶಿಕ ಎಂಬ ಈರ್ವರು ದ್ವಿಜೋತ್ತಮರನ್ನು ಕರೆದು ತಾ, ಅವರು ನನ್ನ ತಾಯಿ ಕೌಸಲ್ಯೆಯನ್ನು ಪ್ರೀತಿಯಿಂದ ಆಶ್ರಯಿಸಿಕೊಂಡಿದ್ದಾರೆ, ಆ ಮಹಾ ಋಷಿಗಳಿಗೆ ಧನಕನಕವಸ್ತ್ರರತ್ನಗಳನ್ನೂ ಗೋಸಹಸ್ರವನ್ನೂ ಇನ್ನಿತರ ವಸ್ತುಗಳನ್ನೂ ಇತ್ತು ತೃಪ್ತಿಪಡಿಸು" ಎನ್ನಲು ಅದರಂತೆಯೇ ಲಕ್ಷ್ಮಣನು ಅವರನ್ನು ಕರೆತಂದು ಪೂಜಿಸಿದ. ಆನಂತರ, "ತೈತ್ತರೀಯಾಚಾರ್ಯನಾದ ಒಬ್ಬ ವೇದವಿದ್ವಾಂಸನಿಗೆ ವಸ್ತ್ರಾಭರಣಗಳನ್ನೂ ದಾಸಿಯರನ್ನೂ ಇತ್ತು ಸತ್ಕರಿಸು. ನಮ್ಮ ಸಾರಥಿಯಾದ ಚಿತ್ರರಥನು ಹಿಂದಿನಿಂದಲೂ ನಮ್ಮ ಆಶ್ರಯದಲ್ಲಿದ್ದಾನೆ; ಆವನಿಗೆ ಆನೆಗಳನ್ನೂ ರತ್ನಾಭರಣಗಳನ್ನೂ ಇತ್ತು ಸಂತೋಷಪಡಿಸು. ಸ್ವಾಧ್ಯಾಯನಿರತರಾದ

ಮತ್ತೆ ಕೆಲವರು ಇದ್ದಾರೆ, ಅವರಿಗೆಲ್ಲ ನವರತ್ನಖಚಿತವಾದ ಎಂಬತ್ತು ವಾಹನಗಳನ್ನೂ ಸಹಸ್ರ ಗೋವುಗಳನ್ನೂ ನೀಡು. ಸಕಲ ವಿಪ್ರೋತ್ತಮರೊಬ್ಬೊಬ್ಬರಿಗೂ ಧನಧಾನ್ಯವನ್ನಿತ್ತು ಪೂಜಿಸು" ಎಂದು ಹೇಳಲು ಲಕ್ಷ್ಮಣನು ಧನವನ್ನು ತರಿಸಿ ರಾಮನು ಹೇಳಿದಂತೆಯೇ ವಿಪ್ರಕುಲವನ್ನು ಅರ್ಚಿಸಲು, ಎಡಬಲಗಳಲ್ಲಿ ನಿಂತು ಕಂಬನಿ ಸುರಿಸುತ್ತಿದ್ದ ಸೇವಕರನ್ನು ನೋಡಿ ಅತ್ಯಂತ ಕರುಣೆಯಿಂದ ನಾನಾ ಬಗೆಯಲ್ಲಿ ಸಮಾಧಾನದ ಮಾತುಗಳನ್ನಾಡುತ್ತ ಉಪಚರಿಸಿ, ಅವರಿಗೆಲ್ಲ ಅವರ ಮನಸ್ಸಿನ ಇಷ್ಟವನ್ನು ತಿಳಿದು ಬೇಡಿದುದನ್ನು ಕೊಡು ಎಂದು ಸೂಚಿಸಲು ಲಕ್ಷ್ಮಣನು ಅವರೆಲ್ಲರಿಗೂ ಪ್ರೀತಿಯಿಂದ ಕಾಣಿಕೆಗಳನ್ನಿತ್ತ. ಹೆಂಗಸರಿಗೆ ಮಕ್ಕಳಿಗೆ ಮುದುಕರಿಗೆ ಹಾಗೂ ತಮ್ಮ ಅರಮನೆಯ ಪರಿವಾರದ ಜನರಿಗೆಲ್ಲ ಬೇಡಿದುದನ್ನಿತ್ತು, ಜಾಬಾಲಿ ಮುಂತಾದ ಮುನಿಮುಖ್ಯರಿಗೆ ಕರಿ ತುರಗ ರಥ ಕನಕ ವಸ್ತ್ರಾದಿಗಳನ್ನು ಅರ್ಪಿಸಿ ಹೊರಡಲು ಸಿದ್ಧನಾಗಿ ನಿಂತುಕೊಂಡ.

ಆ ಹೊತ್ತಿನಲ್ಲಿ ಅಯೋಧ್ಯೆಯಲ್ಲಿ ಗರ್ಗ ಗೋತ್ರದ ತ್ರಿಜಟ ಎಂಬ ಬ್ರಾಹ್ಮಣನು ತನ್ನ ಹೆಂಡತಿಮಕ್ಕಳ ಸಮೇತ ಕಾಡಿನಲ್ಲಿ ಉದುರಿದ ಧಾನ್ಯವನ್ನು ಆರಿಸಿ ತಂದು ಜೀವಿಸುತ್ತಿದ್ದ. ಶ್ರೀರಾಮನನ್ನು ಕಂಡರೆ ಏನಾದರೂ ಸಹಾಯವಾಗುವುದೆಂದು ಹೆಂಡತಿಯು ಸೂಚಿಸಲು ಆ ಬ್ರಾಹ್ಮಣನು ಅದೇ ರೀತಿ ಇದ್ದ ಹರಕು ಬಟ್ಟೆಯನ್ನೇ ಉಟ್ಟುಕೊಂಡು ಅರಮನೆಗೆ ಬಂದ. ಅರಮನೆಯ ಬಾಗಿಲುಗಳನ್ನು ದಾಟಿಕೊಂಡು ಬಂದು ಶ್ರೀರಾಮನ ಮುಂದೆ ನಿಂತು ತ್ರಿಜಟನು, "ಭೂಮಂಡಲಾಧಿಪನೇ ಕೇಳು, ನನಗೆ ಅನೇಕ ಮಕ್ಕಳು, ಆದರೆ ಬಡವ, ನನ್ನ ಈ ದಾರಿದ್ರ್ಯವನ್ನು ಹೋಗಲಾಡಿಸು" ಎಂದು ಬೇಡಿಕೊಂಡ. ಅವನ ಮಾತುಗಳನ್ನು ಕೇಳಿದ ರಘುವರನು ನಸುನಗುತ್ತ, "ನಿನಗೆ ಗೋಸಮೂಹವನ್ನೇ ಕೊಡುತ್ತೇನೆ. ನಿನ್ನ ಕೈಯಲ್ಲಿರುವ ಕೋಲನ್ನು ದೂರಕ್ಕೆ ಎಸೆ. ಅದು ಎಲ್ಲ ಹೋಗಿ ಬೀಳುವುದೋ ಅಲ್ಲಿಯವರೆಗೆ ನಿಂತಿರುವ ಹಸುಗಳನ್ನೆಲ್ಲ ನಿನಗೆ ಕೊಡುತ್ತೇನೆ" ಎಂದ. ಆಗ ವಿಪ್ರನು ತನ್ನ ಮೇಲುವಸ್ತ್ರವನ್ನು ಸೊಂಟಕ್ಕೆ ಬಿಗಿದುಕೊಂಡು ತನ್ನ ಕೈಯಲ್ಲಿನ ಕೋಲನ್ನು ಬಲವಾಗಿ ಬೀಸಿ ಎಸೆದ. ಆ ದಂಡವು ಸರಯೂ ನದಿಯ ದಂಡೆಯನ್ನು ಮೀರಿ ಬೀಳಲು ರಾಮನು ಬ್ರಾಹ್ಮಣನನ್ನು ಬಿಗಿದಪ್ಪಿಕೊಂಡು, "ನಾನು ಹಾಸ್ಯದಿಂದ ಹಾಗೆ ಹೇಳಿದೆ, ನಿನ್ನ ತೇಜಸ್ಸು ದುರವಗಾಹವಾದದ್ದು. ಆದರೆ ನೀನು ಕೋಪಗೊಳ್ಳಲಿಲ್ಲ. ನನ್ನ ಅಪರಾಧವನ್ನು ಮನಸ್ಸಿನಲ್ಲಿರಿಸಿಕೊಳ್ಳದೆ ನಾನು ನೀಡುವ ಮಣಿಕನಕ ವಸ್ತ್ರಗಳನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿಸು" ಎಂದು ಕೇಳಿಕೊಂಡ. ಈ ಮಾತುಗಳನ್ನು ಕೇಳಿದ ತ್ರಿಜಟನು ಸಂತೋಷದಿಂದ, "ಭೂಮಿಯ ಯೋಗಕ್ಷೇಮಕ್ಕೆ ಬದ್ಧಕಂಕಣನಾದ ನಿನ್ನಂತಹ ರಾಜರತ್ನವನ್ನು ದರ್ಶಿಸಿ ನಾನು ಧನ್ಯನಾದೆ. ನಿನಗೆ ಎಲ್ಲ ಶ್ರೇಯಸ್ಸೂ ದೊರೆಯಲಿ" ಎಂದು ಮನದುಂಬಿ ಹರಸಿ ಹೆಂಡತಿಯ ಸಮೇತ ರಾಮನಿತ್ತ ಅಸಂಖ್ಯ ಗೋವುಗಳೊಡನೆ ವಾಪಸಾದ.

ಈ ಕಡೆ ರಘುನಂದನನು ಸಂತೋಷಚಿತ್ತನಾಗಿ ತನ್ನ ಹಣವನ್ನೆಲ್ಲ ಭೂಸುರರಿಗೆ ಯಥೇಚ್ಛವಾಗಿ ನೀಡಿ, ಮಿತ್ರರನ್ನೆಲ್ಲ ಸಮಚಿತ್ತದಿಂದ ಸಂತೈಸಿ, ಸೇವಕವರ್ಗವನ್ನು ಪ್ರೀತಿಮಮತೆಗಳಿಂದ ಮನ್ನಿಸಿ, ಹೆಂಡತಿ ತಮ್ಮನೊಡನೆ ತಂದೆಯ ಪಾದದರ್ಶನವನ್ನು

ಮಾಡುವ ಉದ್ದೇಶದಿಂದ ಶ್ರೀರಾಮಪುರದರಸನು ಜನರ ಪ್ರೀತಿವಿಶ್ವಾಸಗಳನ್ನು ಸ್ವೀಕರಿಸುತ್ತ ಮುನ್ನಡೆಯುವ ಲೀಲೆಯನ್ನು ಏನೆಂದು ಬಣ್ಣಿಸುವುದು!

೧೨. ತಂದೆಯನ್ನು ಸಂತೈಸಿ ಅವನ ಅಪ್ಪಣೆ ಪಡೆದು ಗುರು ವಸಿಷ್ಠನ ಅನುಜ್ಞೆಯನ್ನು ಹೊಂದಿದುದು

ಮೇನಕಾತ್ಮಜೆ ಕೇಳು, ರಘುನಾಥನು ಮನೆಯಿಂದ ಹೊರಟು ಬರುತ್ತಿರುವ ಸುದ್ದಿಯನ್ನು ಕೇಳಿ ನಗರವಾಸಿ ಜನರು ಆತನನ್ನು ಕಾಣಲು ತಮ್ಮ ಮನೆಗಳ ಮೇಲೆ ಹತ್ತಿದರೆ, ಜ್ಞಾನಿಗಳೂ ಪರಿವಾರದ ಜನರೂ ವ್ಯಸನದಿಂದ ಅಂಗಡಿಯ ಬೀದಿಗಳಲ್ಲಿ ನಿಂತರು! ಇತ್ತ ಬರುವಾಗ ರಾಮನ ಹಿಂದೆ ಬಂದಿದ್ದ ಚತುರಂಗ ಸೈನ್ಯ, ಛತ್ರ, ಚಾಮರ ವಾದ್ಯವಾದನಗಳ ವೈಭವವಾವುದೂ ಈಗ ಇಲ್ಲ, ಅವನೊಡನೆ ಇರುವುದು ಸೀತೆ ಮತ್ತು ಲಕ್ಷ್ಮಣರು ಮಾತ್ರ. ತನ್ನ ತಂದೆಯ ಮಾತನ್ನು ನೆರವೇರಿಸುವುದಕ್ಕಾಗಿ ಕಾಡಿಗೆ ಹೊರಡಲು ಸಿದ್ಧನಾದ ಧರ್ಮಸ್ವರೂಪಿ ಮಗನನ್ನು ನೋಡಿದ ಜನ ವಿಧಿವಿಕೃತಕ್ಕೆ ಬೆರಗಾದರು. ತಮ್ಮತಮ್ಮೊಳಗೇ ನಾನಾ ಬಗೆಯಲ್ಲಿ ತಮ್ಮ ವ್ಯಥೆಯನ್ನು ಹೇಳಿಕೊಳ್ಳತೊಡಗಿದರು: ಶಿರೀಷ ಅಶೋಕ ಮುಂತಾದ ಹೂಗಳ ಕೋಮಲತೆಯನ್ನೂ ಮೀರಿಸಿದ ಮೃದುಲೆ ಸೀತೆಯು ಕಾಡಿನ ಕಷ್ಟಗಳನ್ನು ಹೇಗೆ ಸಹಿಸುತ್ತಾಳೆಯೋ! ಯಾವ ಕಾರಣವೂ ಇಲ್ಲದೆ ಸದ್ಗುಣನಾದ ಮಗನನ್ನು ಕಾಡಿಗೆ ಕಳಿಸುತ್ತಿರುವ ಮಹಾರಾಜನು ಈ ನಗರದಲ್ಲಿ ಇನ್ನು ಮುಂದೆ ಜನರ ಅಭಿಮಾನವನ್ನು ಹೇಗೆ ಉಳಿಸಿಕೊಂಡಾನು! ಬಲಿಯಿಲ್ಲದೆ ಭೂತಬೇತಾಳಗಳು ಅಲೆಯುವ ಹಾಗೆ ಶತ್ರುಗಳು ದೇಶವನ್ನು ಬಾಧಿಸುವರು; ಕೊಳವು ಬತ್ತಿದಾಗ ಅದರಲ್ಲಿನ ಜೀವಜಂತುಗಳೆಲ್ಲ ನಾಶವಾಗುವ ಹಾಗೆ ಈ ರಾಜ್ಯವು ಶೋಷಣೆಗೊಳಗಾಗದಿರದು. ನೀರಿಲ್ಲದ ನೆಲದಲ್ಲಿ ಮರಗಳು ಕೊಂಬೆಗಳನ್ನು ಬಿಟ್ಟು ಹೂಹಣ್ಣುಗಳನ್ನು ನೀಡಬಲ್ಲುವೇ? ರಾಮನು ಹೋದ ಕಡೆಗೇ ನಾವೆಲ್ಲ ಹೋಗಿಬಿಡುವುದು ಒಳಿತು. ನಮ್ಮ ಧನಕನಕ ವಸ್ತುವಾಹನ ಮುಂತಾದವುಗಳನ್ನೆಲ್ಲ ರಾಮನೊಡನೆ ಕೊಂಡೊಯ್ದುಬಿಟ್ಟರೆ ಆ ಕಾಡೇ ಪಟ್ಟಣವಾಗಿಬಿಡುತ್ತದಲ್ಲ! ಆಗ ಕ್ರೂರಜಂತುಗಳೆಲ್ಲ ಬಂದು ಜನರಹಿತವಾದ ಈ ನಗರದಲ್ಲಿ ವಾಸಿಸಲಿ; ಜನರಹಿತ ನಗರವನ್ನು ಕೈಕೇಯಿಯು ತನ್ನ ಮಗ ಮತ್ತಿತರ ಬಾಂಧವರೊಡನೆ ಆಳುತ್ತ ಸುಖವಾಗಿರಲಿ – ಎಂದು ಜನರೆಲ್ಲ ಮಾತಾಡಿಕೊಳ್ಳುತ್ತಿದ್ದರು.

ಅವೆಲ್ಲದರ ನಡುವೆಯೇ ರಾಮನು ನಡೆತಂದು ತಂದೆಯ ಅರಮನೆಯ ಬಾಗಿಲಿನಲ್ಲಿ ನಿಂತಿದ್ದ ಸೂತನಾದ ಸುಮಂತ್ರನನ್ನು ಕಂಡು ತಾನು ಬಂದಿರುವ ಸುದ್ದಿಯನ್ನು ತಂದೆಗೆ ತಿಳಿಸಲು ಹೇಳಿದ. ಆಗ ಆತನು ಅನೇಕ ದ್ವಾರಗಳನ್ನು ದಾಟಿ ನೀರಿಲ್ಲದ ಕೊಳದ ಹಾಗೆ, ಬೂದಿಯಲ್ಲಿ ಬೆರೆತ ಬೆಂಕಿ ತೇಜಸ್ಸನ್ನು ಕಳೆದುಕೊಳ್ಳುವ ಹಾಗೆ ಕಳಾಹೀನನಾಗಿದ್ದ ರಾಜನನ್ನು ಕಂಡು ನಮಸ್ಕರಿಸಿ, "ಭೂಸುರರಿಗೆ ಬೇಡಿದುದನ್ನಿತ್ತು, ಮಿತ್ರರನ್ನು ಚಿನ್ನ ವಸ್ತ್ರಗಳಿಂದ ಆದರಿಸಿ, ಭೃತ್ಯಜನರಿಗೆ ಇಷ್ಟವಾದುದನ್ನು ಯಥೇಚ್ಛವಾಗಿ ನೀಡಿ ಸಂತೋಷಗೊಳಿಸಿದ ಶ್ರೀರಾಮಚಂದ್ರಪ್ರಭುಗಳು ಸೀತೆ ಲಕ್ಷ್ಮಣರೊಡಗೂಡಿ ತಮ್ಮ ಪಾದದರ್ಶನಕ್ಕಾಗಿ ಬಾಗಿಲ

ಬಳಿ ನಿಂತಿದ್ದಾರೆ, ಬರಹೇಳಲೇ?" ಎಂದು ಬಿನ್ನವಿಸಿದ. ಸೂತವಾಣಿಯನ್ನು ಕೇಳಿದ ಮನುಜೇಶನು ಅಂತಃಪುರದ ಸ್ತ್ರೀಯರನ್ನೆಲ್ಲ ವಿನಯದಿಂದ ಕರೆತರುವಂತೆಯೂ, ಅವರೊಡನೆ ರಾಮನನ್ನು ನೋಡಬಯಸುವುದಾಗಿಯೂ ಸೂಚಿಸಿದ. ಅದರಂತೆ ಸುಮಂತ್ರನು ಅಂತಃಪುರಕ್ಕೆ ಹೋಗಿ ಮಹಾರಾಜನ ಆಜ್ಞೆಯನ್ನು ತಿಳಿಸಿದ. ಅಲ್ಲಿದ್ದ ಏಳುನೂರು ಮಂದಿ ಸ್ತ್ರೀಯರು ಕೌಸಲ್ಯೆಯನ್ನು ನಡುವೆಯಿರಿಸಿಕೊಂಡು ಬಂದರು. ಆಗ ರಾಮನನ್ನು ಕರೆತರುವಂತೆ ಮಹಾರಾಜನು ಆಜ್ಞಾಪಿಸಿದ. ಅಂತೆಯೇ ರಾಮಲಕ್ಷ್ಮಣರು ಬರಲು ಅವರನ್ನು ಕಂಡು ಮೇಲೆದ್ದ ಮಹಾರಾಜನು ಅವರ ಎದುರಿಗೆ ಹೋಗಿ ತನ್ನ ಬಾಹುಗಳಿಂದ ಬಿಗಿದಪ್ಪಿದ. ಆದರೆ ಶೋಕೋದ್ರೇಕದಿಂದ ಮೂರ್ಛೆ ಬಿದ್ದ. ಅದನ್ನು ಕಂಡು ಸ್ತ್ರೀಸಮೂಹವು ಅಳಲು ತೊಡಗಿದರು. ಶ್ರೀರಾಮನು ಲಕ್ಷ್ಮಣನೊಡನೆ ಸೇರಿ ತಂದೆಯನ್ನು ಮೇಲೆತ್ತಿ ಪರ್ಯಂಕದಲ್ಲಿ ಮಲಗಿಸಿ ನಾನಾ ಬಗೆಯಲ್ಲಿ ಉಪಚರಿಸಿದ. ಆನಂತರ ಒಂದೆರಡು ಗಳಿಗೆಯಲ್ಲಿ ದಶರಥನಿಗೆ ಎಚ್ಚರವಾಯಿತು.

ಸ್ವಲ್ಪ ಪ್ರಜ್ಞೆ ತಿಳಿದಾಗ ರಾಮನು ತಂದೆಗೆ ನಮಸ್ಕರಿಸಿ ದುಃಖಪೂರಿತ ಕಂಠದಿಂದ, "ಭೂಬ್ರಹ್ಮ, ದಂಡಕಾನನಕ್ಕೆ ಹೋಗಲು ಬೇಗ ನನಗೆ ಅಪ್ಪಣೆಯಿತ್ತರೆ ಹೊರಡುತ್ತೇನೆ. ನನ್ನೊಡನೆ ಮೈಥಿಲಿಯೂ ಲಕ್ಷ್ಮಣನೂ ಬರುತ್ತಾರೆ" ಎಂದು ನಾನಾ ಪರಿಯಲ್ಲಿ ಹೇಳಲು, ಮಗನ ಮನೋವೃತ್ತಿಯನ್ನು ಗಮನಿಸಿದ ಮಹಾರಾಜನು, "ಕೈಕೇಯಿಯ ಮಾತೆಂಬ ಗರವು ಸೋಕಿ ನಾನು ಹೇಳಿದ ಮಾತನ್ನು ಬಿಟ್ಟು ಇಂದು ಪುಷ್ಯಯೋಗದಲ್ಲಿ ಪಟ್ಟವನ್ನು ಧರಿಸಿ ನನ್ನ ಶೋಕವನ್ನು ಹೋಗಲಾಡಿಸು" ಎಂದು ಕೇಳಿಕೊಂಡ. ಆಗ ರಾಮನು ತಂದೆಗೆ ಅಭಿನಮಿಸಿ ಕೈಮುಗಿದು, "ತಂದೆಯೇ, ನೀನು ದೀರ್ಘಕಾಲ ಸತ್ಯವಾಕ್ಯ ಪರಿಪಾಲನೆ ಮಾಡುತ್ತ ರಾಜ್ಯವನ್ನಾಳಿದೆ, ಅದನ್ನು ಮೂರು ಲೋಕಗಳೂ ಹೊಗಳುತ್ತವೆ. ಹಲುಬದಿರು, ಹದಿನಾಲ್ಕು ವರ್ಷಗಳು ಒಂದು ನಿಮಿಷದ ಹಾಗೆ ಕಳೆದುಹೋಗುತ್ತದೆ. ದಯವಿಟ್ಟು ಹೋಗಲು ಅಪ್ಪಣೆ ಕೊಡು" ಎಂದ. ಆಗ ರಾಜನು ಶೋಕದಿಂದ, "ದೀರ್ಘಾಯುಸ್ಸು ಶ್ರೇಯಸ್ಸು ಸತ್ಕೀರ್ತಿಗಳನ್ನು ಹೊಂದುವುದಕ್ಕಾಗಿ ಹೋಗು. ನಿನ್ನ ದಾರಿಯು ಸುಗಮವಾಗಿರಲಿ, ಭಯರಹಿತವಾಗಿರಲಿ. ದೇವರು ನಿನ್ನನ್ನು ಕಾಪಾಡಲಿ. ಸತ್ಯವಾಕ್ಯಪರಿಪಾಲಕನಾದ ನಿನ್ನ ಮನಸ್ಸನ್ನು ಬದಲಿಸುವುದು ನನ್ನಿಂದ ಸಾಧ್ಯವಿಲ್ಲ. ಆದರೆ ಈ ಒಂದು ರಾತ್ರಿ ನನ್ನ ಮನೆಯಲ್ಲಿ ಕಳೆ, ನಾಳಿನ ಬೆಳಗ್ಗೆ ಹೊರಡು. ಸಾವಿನಂತಹ ಭಯಂಕರವಾದ ಗೋತ್ರಪಾಂಸಿನಿಯಾದ ಕೈಕೇಯಿಯ ಮಾತಿಗೆ ಮರುಳಾದ ನನ್ನ ಬುದ್ಧಿಯನ್ನು ಕ್ಷಮಿಸಿ, ನಿನ್ನ ತಾಯಿಯ ದೀನತೆಯನ್ನು ಮನಸ್ಸಿಗೆ ತಂದುಕೊಂಡು ನಮ್ಮನ್ನು ಉಳಿಸು" ಎಂದು ಅಂಗಲಾಚಿದ. ಆಗ, "ರಾಷ್ಟ್ರ ಧನ ಧಾನ್ಯ ವಸ್ತುಗಳನ್ನೆಲ್ಲ ಭರತನಿಗೆ ಒಪ್ಪಿಸುವುದು ಸುಖಕರವಾದುದು; ಈ ರಾಷ್ಟ್ರ ಜಾನಕಿ–ಇವುಗಳನ್ನಾದರೂ ಬಿಟ್ಟಿರಬಲ್ಲೆ, ನಾನು ಬಯಸುವುದು ಸತ್ಯವೊಂದನ್ನೇ. ಶೋಕವನ್ನು ಬಿಟ್ಟು ಧೈರ್ಯವನ್ನು ತಾಳಿ. ನಿಮ್ಮಂತಹ ದಾನಿ ಭೂಪಮಣಿಯು ಅಸತ್ಯಕ್ಕೆ ಬಾಗುವುದೇ? ನಿಮ್ಮ ಪಾದದಾಣೆ. ನಾನು ಯಾವುದನ್ನೂ ಬಯಸೆ, ದಯವಿಟ್ಟು ತುಂಬು ಹೃದಯದಿಂದ ಅಪ್ಪಣೆ ಕೊಡು. ಹದಿನಾಲ್ಕು ವರ್ಷ ಎಂಬುದು ಕಣ್ಣುಮುಚ್ಚಿಬಿಚ್ಚುವುದರೊಳಗೆ ಬಂದುಬಿಡುತ್ತದೆ. ಆನಂತರ

ನಾನು ಸಂತೋಷವಾಗಿ ನಗರಕ್ಕೆ ವಾಪಸಾಗುತ್ತೇನೆ. ನಿನ್ನ ಮಾತಿಗೆ ಧಕ್ಕೆಯುಂಟಾಗುವಂತಹ ಕಾರ್ಯವನ್ನು ನಾನೆಂದಿಗಾದರೂ ಮಾಡಿಯೇನೇ? ರಾಜ್ಯಭಾರವನ್ನು ಭರತನಿಗೊಪ್ಪಿಸಿ ನನಗೆ ಅಪ್ಪಣೆಯನ್ನು ನೀಡು" ಎಂದು ಶ್ರೀರಾಮನು ನಿಶ್ಚಯದಿಂದ ನುಡಿದ.

ರಾಮನ ದೃಢ ನುಡಿಯನ್ನು ಕೇಳಿ ದಶರಥನಿಗೆ ಭ್ರಮೆಯಡಸಿತು, ಹಲುಬುತ್ತ ಎರಡೂ ಕೈಗಳಿಂದ ಗಾಳಿಯನ್ನೇ ತಬ್ಬಿಕೊಳ್ಳುತ್ತ ಪಂಚಾವಸ್ಥೆಯನ್ನು ತಲುಪಿದ. ಯಜಮಾನನಿಗೆ ಒದಗಿದ ಈ ಗತಿಯನ್ನು ಕಂಡು ಅಂತಃಪುರ ಸ್ತ್ರೀಯರೆಲ್ಲರೂ 'ಹೋ' ಎಂದು ರೋದಿಸತೊಡಗಿದರು, ಎಲ್ಲರ ಮುಖಗಳೂ ಮ್ಲಾನಗೊಂಡವು. ಒಡೆಯನ ದುರ್ದೆಶೆಯನ್ನೂ, ಎಲ್ಲರ ಆರ್ತನಾದವನ್ನೂ ಕೇಳಿ ಸುಮಂತ್ರನ ಕೋಪಶಿಖಿ ಭುಗಿಲೆದ್ದು ಹಲ್ಲುಕಡಿಯುತ್ತ ಕೇಕಯರಾಜಕುಮಾರಿಯನ್ನು ಕಂಡು ಧಿಕ್ಕರಿಸಿ, "ಕುಲನಾಶಿನಿ, ಭವವಾದಿನಿ, ಪಾಪಿ, ದುರ್ಮಾರ್ಗಕಲಿತೆ, ದೇವೇಂದ್ರನಂತೆ ಅಜೇಯನಾದವನನ್ನು ಬೆಟ್ಟದಂತೆ ಚಲನೆಯಿಲ್ಲದ ಹಾಗೆ ಮಾಡಿಬಿಟ್ಟೆಯಲ್ಲ, ಮಹಾಸಾಗರದಂತಹ ಗಂಭೀರ ರಾಜಶ್ರೇಷ್ಠನನ್ನು ಕ್ಷೋಭೆಗೊಳಿಸಿಬಿಟ್ಟೆಯಲ್ಲ, ಜಗತ್ತಿನಲ್ಲಿ ಹೆಂಗಸರಿಗೆ ಗಂಡನೇ ಪರದೈವವಲ್ಲವೇ? ಆದರೆ ನೀನು ಗಂಡನನ್ನೇ ಹೊರತುಪಡಿಸಿ ಸಾಮ್ರಾಜ್ಯಸುಖವನ್ನು ಬಯಸುತ್ತಿರುವೆ; ರಾಜನನ್ನು ಕಳೆದುಕೊಂಡು ರಾಜತನವನ್ನು ಅನುಭವಿಸುವೆನೆಂಬ ಬಯಕೆಯನ್ನು ಹೊಂದಿರುವೆ. ಭೂಸುರರಾಗಲೀ, ಪರಿಜನರಾಗಲೀ ನಿನ್ನ ಜೊತೆಯಲ್ಲಿ ಉಳಿದಿರುತ್ತಾರೆಯೇ? ಬರಿದಾದ ನಗರದಲ್ಲಿ ಮಗನ ಜೊತೆ ಮಾತ್ರ ಬದುಕಿದರೆ ಸುಖವುಂಟೆ, ಮರುಳೆ? ದೀಪದ ಆಸೆಯಿಂದ ಸಾಯುವ ಮಿಡಿತೆಯ ಹಾಗೆ ದುರ್ಯಶವನ್ನು ಗಳಿಸುವೆಯಷ್ಟೆ. ನೀನೂ ನಿನ್ನ ತಾಯಿಯಂತೆಯೇ ಹಟಮಾರಿ, ದುಷ್ಟೆ; ನಿನ್ನ ತಂದೆಯು ಸಕಲ ಪ್ರಾಣಿಗಳ ಮಾತಿನ ಅರ್ಥವನ್ನು ತಿಳಿಯುವ ಉದ್ದೇಶದಿಂದ ದೇವತೋಪಾಸನೆಯನ್ನು ಮಾಡಲು, ಅವನ ಭಕ್ತಿಗೆ ಮೆಚ್ಚಿ ಆ ದೇವತೆಯು ಮೆಚ್ಚಿ ವರವಿತ್ತಿತಂತೆ. ಒಮ್ಮೆ ನಿನ್ನ ತಾಯಿಯೊಡನೆ ಮಂಚದಲ್ಲಿರುವಾಗ ಇರುವೆಯ ಸಾಲಿನಲ್ಲಿದ್ದ ಒಂದು ಇರುವೆಯು ಸಲ್ಲಾಪಕ್ಕೆ ಎಳಸಿ ತನ್ನ ಹೆಣ್ಣನ್ನು ಚಮತ್ಕಾರಯುತವಾಗಿ ಕರೆಯಿತಂತೆ. ಅದನ್ನು ಕೇಳಿ ಅದರ ಚಾತುರ್ಯವನ್ನು ಮೆಚ್ಚಿ ನಿನ್ನ ತಂದೆ ನಕ್ಕನಂತೆ. ನಕ್ಕದ್ದು ಯಾಕೆ ಎಂದು ನಿನ್ನ ತಾಯಿ ಕೇಳಿದಾಗ, ತಂದೆಯು 'ಅದನ್ನು ಹೇಳಲಾಗದು' ಎನ್ನಲು, 'ಹೇಳದಿದ್ದರೆ ನಾನು ಸಾಯುತ್ತೇನೆ' ಎಂದು ಹೆದರಿಸಿ ನಾನಾ ಬಗೆಯಲ್ಲಿ ಕೋಟಲೆಗೊಂಡಳಂತೆ. ಆಗ ತಂದೆಯು, 'ಪ್ರಾಣಿಗಳ ಮಾತಿನ ಅರ್ಥವನ್ನು ಬೇರೆಯವರಾರಿಗೂ ತಿಳಿಸಕೂಡದು, ಹಾಗೆ ಮಾಡಿದರೆ ನನಗೆ ಸಾವು ನಿಶ್ಚಿತ ಎಂದು ಗುರುವು ತಿಳಿಸಿದ್ದರು, ಹೀಗಾಗಿ ನಿನಗೆ ಹೇಳಕೂಡದು' ಎನ್ನಲು. ತಾಯಿಯು, 'ನೀನು ಸತ್ತರೂ ಪರವಾಯಿಲ್ಲ, ನಿನ್ನ ನಗುವಿನ ಕಾರಣವನ್ನು ಹೇಳಲೇಬೇಕು' ಎಂದು ಬಲವಂತ ಮಾಡಿದಳು. ಆದರೂ ಅದನ್ನು ಹೇಳದೆ ಅವಳನ್ನು ತೊರೆದು ನಿನ್ನ ತಂದೆಯು ಕುಬೇರನಂತೆ ಸುಖದಿಂದಿದ್ದ. ಮೂಢೆಯೇ, ನಿನ್ನನ್ನು ನೋಡಿದರೆ ನೀನು ಹೆತ್ತವಳ ನಡತೆಯನ್ನು ಅನುಸರಿಸಿ ಭೂಪೋತ್ತಮನನ್ನು ದುಃಖಸಾಗರದಲ್ಲಿ ಮುಳುಗಿಸಿ ಅಪಕೀರ್ತಿಯನ್ನು ಗಳಿಸಲು ಬಯಸುತ್ತಿರುವಂತೆ ತೋರುತ್ತದೆ. ಈ ನಿನ್ನ ದುರ್ಮಾರ್ಗವನ್ನು ಬಿಟ್ಟು ಸಾಧ್ವಿಯರ

ನಡತೆಯನ್ನು ಅನುಸರಿಸಿ ಉಭಯಸುಖವನ್ನು ಗಳಿಸು. ಗಂಡನ ಒಪ್ಪಿಗೆಗೆ ವಿರುದ್ಧವಾಗಿ ನಡೆದುಕೊಳ್ಳುವುದು ತಕ್ಕದ್ದಲ್ಲ. ಸಕಲ ಗುಣಭರಿತನಾದ ಶ್ರೀರಾಮನು ರಾಜನಾದರೆ ಲೋಕವೇ ಸುಖಕರವಾಗಿರುತ್ತದೆ, ಭರತನೂ ಸಾಮ್ರಾಜ್ಯಸುಖವನ್ನು ಅನುಭವಿಸುತ್ತಿರಲು, ಇಬ್ಬರನ್ನೂ ನೋಡಿ ಅವರನ್ನು ಪೋಷಣೆಗೈಯುತ್ತ ಅಕಳಂಕ ಕೀರ್ತಿಯನ್ನು ಗಳಿಸು. ಈ ರಾಜ್ಯದ ಅಧಿಕಾರಿ ರಘುವಲ್ಲಭ, ಶೂರಾಗ್ರಗಣ್ಯನಾದ ಆತನನ್ನು ಉಳಿದು ಭರತನಿಂದ ಈ ರಾಜ್ಯವು ಸುಖವಾಗಿರುವುದೇ? ನನ್ನ ಮಾತನ್ನು ಅರ್ಥಮಾಡಿಕೋ" ಎಂದು ಸುಮಂತ್ರನು ಕೊನೆಗೆ ದೀನನಾಗಿ ಕೇಳಿಕೊಂಡ. ಆದರೆ ಅವನ ಮಾತುಗಳನ್ನು ಲೆಕ್ಕಿಸದೆ, ಯಾವುದೇ ಒಳತೋಟಿಗೆ ಒಳಗಾಗದೆ ಕ್ರೂರ ವಾಕ್ಕುಗಳಿಂದ ಅವನನ್ನು ಧಿಕ್ಕರಿಸಿ ಮಾತನಾಡಿದಳು.

ಸೂತ ಮತ್ತು ತನ್ನ ಹೆಂಡತಿಯ ನಡುವಣ ಮಾತನ್ನು ಕೇಳಿದ ದಶರಥನು ಅತಿ ಶೋಕದಿಂದ ಹೀಗೆಂದ: "ರಾಮನ ಜೊತೆಗೆ ಚತುರಂಗಸೈನ್ಯವನ್ನೂ, ಆಯುಧಸಮೂಹವನ್ನೂ, ವ್ಯಾಪಾರಿಗಳನ್ನೂ, ಕರಿತುರಗರಥಗಳನ್ನೂ, ಕಾಡಿನಲ್ಲಿ ದಾರಿ ತೋರಿಸುವವರನ್ನೂ, ಧನಕನಕವಸ್ತುಗಳೆಲ್ಲವನ್ನೂ, ವಂದಿಮಾಗಧರನ್ನೂ, ಭೂಸುರರನ್ನೂ ಕಳಿಸು; ಕಾಡಿನಲ್ಲಾದರೂ ರಾಮನು ಸುಖವಾಗಿರಲಿ. ಇಲ್ಲಿ ಭರತನನ್ನೇ ರಾಜನನ್ನಾಗಿ ಮಾಡಲಿ" ಎಂದು ಹೇಳಿದ. ರಾಜನ ಈ ಮಾತುಗಳನ್ನು ಕೇಳಿದ ಕೈಕೇಯಿಯು ಕ್ರೋಧಭರಿತಳಾಗಿ, "ಊರಿನಲ್ಲಿರುವುದೆಲ್ಲವನ್ನೂ ರಾಮನ ಜೊತೆ ಕಳಿಸಿ ಬರಿನಗರಕ್ಕೆ ಭರತನನ್ನು ಅರಸನನ್ನಾಗಿ ಮಾಡಬೇಕೆಂದಿರುವೆಯಾ? ನೀನು ಕೊಟ್ಟ ವರ ಹೀಗೆ ನೆರವೇರಬೇಕೇನು?" ಎಂದು ಜರೆದಳು. ಆ ಮಾತನ್ನು ಕೇಳಿದ ಜನಪತಿಯು ಹಲ್ಲುಗಳನ್ನು ಕಡಿಯುತ್ತ, "ಕ್ರೂರ ಪಾತಕಕ್ಕೆ ಕೈಹಾಕಿ, ಕುಜನರ ನಡತೆಯನ್ನು ಅಳವಡಿಸಿಕೊಂಡು, ಧರ್ಮಮಾರ್ಗವನ್ನು ಹೂತುಹಾಕಿ, ನಿರ್ಲಜ್ಜೆಯಿಂದ ನಡೆಯುತ್ತಿರುವೆ. ಸತ್ಯಶೀಲವನ್ನು ದೂರೀಕರಿಸಿದ ನಿನ್ನನ್ನು ಯಾರಾದರೂ ಲೆಕ್ಕಿಸುತ್ತಾರೆಯೇ? ನೀನೊಬ್ಬ ರಾಕ್ಷಸಿ" ಎಂದು ಕಿಡಿನುಡಿಗಳನ್ನಾಡಿದ. ಅದನ್ನು ಕೇಳಿದ ಕೈಕೇಯಿಯು, "ನಿನ್ನ ವಂಶದ ರಾಜನಾದ ಸಗರನು ತನ್ನ ಜ್ಯೇಷ್ಠಪುತ್ರನಾದ ಸಮಂಜಸನನ್ನು ಕಾಡಿಗೆ ಕಳಿಸಿದ ರೀತಿಯನ್ನು ನೀನು ಕೇಳಿಲ್ಲವೇ? ಹಾಗೆಯೇ ರಾಮನೂ ಹೋಗಲಿ" ಎಂದಳು. ಆ ಮಾತನ್ನು ಕೇಳಿದ ರಾಜ ಕ್ಲೇಶಗೊಂಡ, ನೆರೆದ ಸಜ್ಜನರೆಲ್ಲರೂ ನಾಚಿಕೊಂಡರು. ಆಗ ಮಹಾಮಾತ್ಯನಾದ ಸಿದ್ಧಾರ್ಥನು, "ಅಸಮಂಜಸನು ದುಷ್ಟನಾಗಿದ್ದ, ಊರಿನ ಮಕ್ಕಳನ್ನು ಕೊಲ್ಲುತ್ತಿದ್ದ, ಜನರೆಲ್ಲರೂ ರಾಜನ ಬಳಿ ಹೋಗಿ, 'ಈ ನಗರದಲ್ಲಿ ವಾಸಿಸಲು ನಮಗೆ ಸಾಧ್ಯವಿಲ್ಲ. ಅಪ್ಪಣೆಯಿತ್ತರೆ ನಾವು ಬೇರೆಡೆಗೆ ಹೋಗುತ್ತೇವೆ' ಎಂದರು. ಅದಕ್ಕೆ ಕಾರಣವೇನೆಂದು ರಾಜನು ವಿಚಾರಿಸಲು. ಪ್ರಜೆಗಳು ಇದ್ದ ವಿಷಯವನ್ನು ತಿಳಿಸಿ, 'ನಿಮ್ಮ ಮಗನು ಮಕ್ಕಳನ್ನು ಹಿಡಿದುಕೊಂಡು ಹೋಗಿ ಸರಯೂನದಿಯಲ್ಲಿ ಮುಳುಗಿಸಿ ಸಂತೋಷಪಡುತ್ತಾನೆ; ಆದ್ದರಿಂದ ಈ ಊರನ್ನು ಬಿಡುವ ಪರಿಸ್ಥಿತಿ ಬಂದಿದೆ' ಎನ್ನಲು, ರಾಜನು ಕಡುಕೋಪದಿಂದ ಮಗನನ್ನು ಅಡವಿಗಟ್ಟಿ ಲೋಕವನ್ನು ಪೊರೆದ. ಹೀಗೆ ಸಗರನು ಧರ್ಮಸ್ವರೂಪ. ಆದರೆ ನೀನು ನಿರಪರಾಧಿಯಾದ ರಘೂತ್ತಮನನ್ನು ಅಟ್ಟುತ್ತಿರುವೆಯಲ್ಲ. ಇಷ್ಟಾದರೂ ರಾಮನಲ್ಲಿ ದುರ್ಗುಣಲೇಶವೂ ಇಲ್ಲ. ಅಂಥದ್ದರಲ್ಲಿ ರಾಮನನ್ನು ವನಕ್ಕೆ ಕಳಿಸುವ ದುರ್ಬುದ್ಧಿ ನಿನ್ನದು. ಹೀಗಾಗಿ ಜನರೆಲ್ಲರೂ

ರಾಮನೊಡನೆ ಹೋಗುತ್ತಾರೆ. ಬರಿದು ನಗರದ ಆಡಳಿತವನ್ನು ವಹಿಸಿಕೊಂಡು ನಿನ್ನ ಮಗನು ಸುಖದಲ್ಲಿರಲಿ!" ಎಂದು ಅಮಾತ್ಯನು ಜರೆದ.

ಈ ಬಗೆಯಲ್ಲಿ ಧಿಕ್ಕಾರದ ಮಾತುಗಳನ್ನಾಡುವ ಅಮಾತ್ಯನನ್ನು ನೋಡಿ ರಘುವೀರನು ಮತ್ತೆ ಮಹೀಶನೊಂದಿಗೆ, "ದೇವ, ಬಿನ್ನಹ, ಮುನಿಯ ವೇಷಧರಿಸಿ ಕಾಡಿನೆಡೆಗೆ ಹೋಗುವ ನನಗೆ ಚತುರಂಗ ಬಲದಿಂದಲಾಗಲೀ ಧನಧಾನ್ಯಗಳಿಂದಾಗಲೀ ಪರಿವಾರದಿಂದಾಗಲೀ ಏನು ಪ್ರಯೋಜನ? ಆನೆಯನ್ನು ಕೊಟ್ಟು ಅಂಕುಶಕ್ಕೆ ಆಸೆಪಟ್ಟರೇನು ಪ್ರಯೋಜನ? ಹದಿನಾಲ್ಕು ವರ್ಷ ವನವಾಸದಲ್ಲಿರುವ ನನಗೆ ಗುದ್ದಲಿ ಬುಟ್ಟಿಗಳನ್ನು ಕೊಟ್ಟರೆ ಸಾಕು. ನಾರುಬಟ್ಟೆಯನ್ನು ದಯಪಾಲಿಸಿದರೆ ಅದನ್ನುಟ್ಟು ಹೊರಡುತ್ತೇನೆ" ಎಂದ. ಅದನ್ನು ಕೇಳಿ ಅಶ್ವಪತಿಕುಮಾರಿಯು ನಗುತ್ತ, "ಮಗನೆ, ಸತ್ಯವ್ರತಾಗ್ರಣಿ, ನಿನ್ನಿಂದ ಭಾಷೆಗೆ ಊನ ಬರಬಾರದು" ಎಂದು ಮುನಿಜನರಿಗೆ ತಕ್ಕ ಬಗೆ ಬಗೆಯ ಬಟ್ಟೆಗಳನ್ನು ತರಿಸಿ ರಾಜನ ಮುಂದೆಯೇ ಅವುಗಳನ್ನು ರಾಮನಿಗೆ ನೀಡಿದಳು. ರಘುನಾಥನು ತನ್ನ ನಯವಾದ ವಸ್ತ್ರಗಳನ್ನು ತೆಗೆದು ಒರಟು ಬಟ್ಟೆಯನ್ನು ಉಟ್ಟ; ಅಂತೆಯೇ ಲಕ್ಷ್ಮಣನೂ ಉಡುಪು ಬದಲಿಸಿದ. ಅವರು ನಾರುಮಡಿಯುಟ್ಟುದನ್ನು ನೋಡಿ ಕೈಕೇಯಿಯು ಕಮಲಮುಖಿಯಾದ ಸೀತೆಯ ಕಡೆ ನೋಡಿ ಅವಳ ಕೈಗೆ ನಾರಚೀರಗಳನ್ನಿತ್ತಳು. ಅದನ್ನು ಕಂಡ ಜಾನಕಿಯ ಮುಖ ಕಳೆಯನ್ನು ಕಳೆದುಕೊಂಡ ಚಂದ್ರನಂತಾಯಿತು, ವಿಕೃತಿಗೊಂಡಿತು; ಬಿರುಗಾಳಿಯಿಂದ ಅಲುಗಾಡುವ ಬಾಳೆಯ ಮರದಂತೆ ಕಂಪಿಸಿತು. ಆಗ ಸೀತೆಯು, "ಈ ಬಟ್ಟೆಗಳನ್ನು ಮುನಿಪತ್ನಿಯರು ಹೇಗೆ ಉಡುತ್ತಾರೋ ತಿಳಿಯದು" ಎಂದಾಗ ಅವಳ ಕಣ್ಣುಗಳಲ್ಲಿ ನೀರು ತುಂಬಿದವು. ಅದನ್ನು ನೋಡಿದ ರಾಘವನು ತನ್ನ ಕೈಯಲ್ಲಿ ಸೀರೆಯನ್ನು ತೆಗೆದುಕೊಂಡು ಅವಳ ಸೊಂಟಕ್ಕೆ ತಾನೇ ಸುತ್ತತೊಡಗಿದ; ಇದನ್ನು ಕಂಡ ಸೀತೆ ನಾಚಿಕೊಂಡಳು. ಈ ದೃಶ್ಯವನ್ನು ಕಂಡ ಅಂತಃಪುರದ ಹೆಂಗಳೆಯರು ಜೋರಾಗಿ ಅಳತೊಡಗಿದರು. ಆನಂತರ ರಘುಜನೆಡೆಗೆ ನೋಡಿ, "ತಂದೆಯ ಆಜ್ಞೆಯನ್ನು ಮೀರಲಾರದೆ ನೀನಂತೂ ಲಕ್ಷ್ಮಣನೊಡನೆ ಕಾಡಿಗೆ ಹೋಗಲು ಇಚ್ಛಿಸುವೆ. ಆದರೆ ಕೋಮಲೆಯಾದ ಈ ಮೈಥಿಲಿಯು ಕಾಡಿಗೆ ಹೋಗುವುದು ಅನುಚಿತ, ಹೀಗಾಗಿ ಆಕೆಯನ್ನು ನಗರದಲ್ಲಿಯೇ ಬಿಟ್ಟು ನಮ್ಮನ್ನು ಸಂತೋಷಗೊಳಿಸಬೇಕು" ಎಂದು ಬೇಡಿಕೊಂಡರು. ಆಗ ರಾಘವನು ನಗುತ್ತ, "ತಂದೆಯ ಆಜ್ಞೆಯಂತೆ ವನವಾಸ ನನಗೆ ಮಾತ್ರ, ನೀನು ಜೊತೆಯಲ್ಲಿ ಬರಬೇಡ ಎಂದು ಒಪ್ಪಿಸಲು ನಾನೆಷ್ಟೇ ಪ್ರಯತ್ನಿಸಿದರೂ ಪತಿವ್ರತೆಯಾದ ಸೀತೆ ನನ್ನೊಡನೆ ಬರಲು ಹಟ ಹಿಡಿದಳು. ಅವಳ ಪ್ರೀತಿಯ ಬಯಕೆಯನ್ನು ಪೂರೈಸುವುದು ನನ್ನ ಕರ್ತವ್ಯ" ಎನ್ನುತ್ತ ಸೀತೆಗೆ ಸೀರೆಯನ್ನುಡಿಸಿದ.

ಇದನ್ನು ನೋಡಿದ ಗುರು ವಸಿಷ್ಠರು ಕೋಪದಿಂದ ಕೈಕೇಯಿಯೆಡೆ ನೋಡುತ್ತ, "ಕಲಗೆಡುಕಿ, ಪಾಪಿ, ದುರ್ಮೇಧೆ, ಮಹಾರಾಜನನ್ನು ಒಲಿಸಿ ವಂಚಿಸಿ ಅವನನ್ನು ಕಾರ್ಪಣ್ಯನೆನ್ನಿಸಿ ಜನಕಜೆಯನ್ನು ಕಾಡಿಗೆ ಹೋಗೆಂದು ಹೇಳುತ್ತಿರುವೆಯಲ್ಲ. ಆ ಸಾಧ್ವಿಯಾದರೋ ಗಂಡ ಎಲ್ಲಿರುವನೋ ಅಲ್ಲಿಗೆ ಹೋಗಲು ಸಿದ್ಧಳಾಗಿದ್ದಾಳೆ. ಎಲ್ಲ ಪ್ರಜೆಗಳೂ ಪರಿವಾರವೂ ಭರತಶತ್ರುಘ್ನರೊಡನೆ ನಾವೆಲ್ಲ ಧರ್ಮಪಂಥಾನವನ್ನು ಹಿಡಿದು

ಕಾಡಿಗೇ ಹೋಗಿಬಿಡುವೆವು. ಆಗ ಇಲ್ಲಿ ಮರಗಳನ್ನು ಬಿಟ್ಟು ಜನಗಳಾರೂ ಇರುವುದಿಲ್ಲ. ನೀನೇ ಈ ಬರಿದಾದ ನಗರವನ್ನು ಪಾಲನೆಮಾಡು. ಮೂಢೆ, ಶ್ರೀರಾಮನು ಕಾಡಿನಲ್ಲಿದ್ದರೆ ಅದೇ ರಾಜಧಾನಿಯಾಗುತ್ತದೆ, ಆತನಿಲ್ಲದಿದ್ದರೆ ಈ ಊರು ಶೂನ್ಯವಾಗುತ್ತದೆ. ಮನುಷ್ಯರೊಡನೆ ಅಮಾತ್ಯರೂ ಮೃಗಪಕ್ಷಿಗಳೂ ಆ ಮಹಾಮಹಿಮನೊಡನೆಯೇ ಹೋಗಿಬಿಡುವವು. ನಿನ್ನ ಮುಖವನ್ನು ನೋಡುವವರು ಇಲ್ಲಿ ಯಾರೂ ಉಳಿಯುವುದಿಲ್ಲ. ಸುಮ್ಮನೆ ಸೀತೆಯ ಚೀರವಸನಗಳನ್ನು ತೆಗೆಸಿ ದಿವ್ಯಾಭರಣಗಳನ್ನು ಕೊಟ್ಟು ಕಳಿಸು" ಎಂದ ಧೀರಾಗ್ರಗಣ್ಯ ವಸಿಷ್ಠನು ಮತ್ತೆ, "ವೀರ ರಾಘವನು ಮಾತ್ರ ಕಾಡಿಗೆ ಹೋಗಬೇಕೆಂದು ಕ್ರೂರಿಯಾದ ನೀನು ನಿಯಮಿಸಿದೆ. ಹೀಗಾಗಿ ಮಹಾರಾಜನಂದನೆಯು ಸುಂದರ ವಸ್ತ್ರಗಳನ್ನುಟ್ಟು ಚೆನ್ನಾಗಿ ಅಲಂಕರಿಸಿಕೊಂಡು ಗಂಡನ ಜೊತೆಯಲ್ಲಿ ವೈಭವದಿಂದ ಸಂಚರಿಸಲಿ. ಆಗ ಈ ನಗರಕ್ಕೆ ಕ್ಲೇಶ ಸಂಭವಿಸದು. ಶ್ರೀರಾಮಪುರದರಸ ಆನಂದದಿಂದಿರಲಿ" ಎನ್ನಲು ಕೈಕೇಯಿಯು ಮರುಮಾತುಗುಡದೆ ಸುಮ್ಮನೆ ನಿಂತಿದ್ದಳು.

೧೩. ಎಲ್ಲರಿಂದ ಬೀಳ್ಕೊಂಡು ರಾಮನು ಸೀತಾಲಕ್ಷ್ಮಣರೊಡನೆ ಸರಯೂ ನದಿಯನ್ನು ದಾಟಿದುದು

ಭೂಧರಾತ್ಮಭವೆ ಕೇಳು, ರಾಘವನು ವಿನೋದದಿಂದ ಮುನಿವೇಷವನ್ನು ಧರಿಸಿ, "ನಿಮ್ಮ ಪಾದಬಲದಿಂದ ನಾನು ವನವಾಸವನ್ನು ಕಳೆದು ಬರುತ್ತೇನೆ; ನಮಸ್ಕರಿಸುತ್ತೇನೆ, ಆಶೀರ್ವಾದ ಮಾಡಿ" ಎಂದು ತಂದೆಗೆ ನಮಸ್ಕರಿಸಿ, ತಂದೆಯನ್ನು ಚೆನ್ನಾಗಿ ನೋಡಿಕೊಳ್ಳಲು ತಾಯಿಯನ್ನು ಕೇಳಿಕೊಂಡ. ರಾಮನಾಡಿದ ಮಾತನ್ನು ಕೇಳಿದ ದಶರಥನು ತನ್ನ ಅದೃಷ್ಟವನ್ನು ಹಳಿದುಕೊಂಡು ಮೂರ್ಛೆಗೊಂಡ. ಅರೆನಿಮಿಷ ಪ್ರಜ್ಞೆಯನ್ನು ಕಳೆದುಕೊಂಡು ಆನಂತರ ಎಚ್ಚೆತ್ತು, 'ಶ್ರೀರಾಮ' ಎನ್ನುತ್ತ, "ಕಾಮಿಯಾಗಿ ನಾನು ದುರಾಧ್ಯೆ ಕೈಕೇಯಿಯ ವಶನಾಗಿ ಯಮಕಿಂಕರರ ಬಾಧೆಗೆ ಸಿಲುಕಿದೆ. ಹಿಂದಿನ ಜನ್ಮದಲ್ಲಿ ನಾನು ಎಷ್ಟು ಜೀವರನ್ನು ನೋಯಿಸಿದೆನೋ, ಅದರಿಂದಲೇ ನನಗೆ ಈಗ ಇಂತಹ ನೋವುಂಟಾಗಿದೆ. ನಾರಸೀರೆಗಳನ್ನುಟ್ಟು ಈ ಸುಕುಮಾರರು ಹೀಗಿರುವುದನ್ನು ನೋಡುವ ಹಣೆಬರಹ ಪ್ರಾಪ್ತವಾಯಿತೇ!" ಎಂದು ಹಲುಬಿ ಮತ್ತೆ ಮೂರ್ಛೆ ಹೋದ. ಆನಂತರ ಎಚ್ಚೆತ್ತು, ಸುಮಂತ್ರನಿಗೆ, "ರಾಜಯೋಗ್ಯ ರಥಕುದುರೆಗಳನ್ನು ತರಿಸಿ ಮಣಿಖಚಿತವಾದ ತೇರಿನಲ್ಲಿ ರಘೂತ್ತಮನನ್ನು ರಾಜ್ಯದ ಕೊನೆಯನ್ನು ತಲುಪಿಸು" ಎಂದು ಆಜ್ಞೆಯಿತ್ತ. ಸೂತನು ತಕ್ಷಣವೇ ಮುತ್ತುಮಾಣಿಕ್ಯಗಳಿಂದ ಅಲಂಕೃತವಾದ ರಥವನ್ನು ತರಿಸಿ, ಗಜಹಯಗಳನ್ನು ಅಳವಡಿಸಿ ತಂದು ದಶರಥನಿಗೆ ಈ ವಿಷಯವನ್ನು ಅರಿಕೆ ಮಾಡಿಕೊಂಡ. ಅವನ ಮಾತುಗಳನ್ನು ಕೇಳಿದ ಪಂಕ್ತಿರಥನು ವಸ್ತ್ರ ಮುಕ್ತಾಫಲವ್ರಾತ ಮಣಿಕನಕ ಭೂಷಣಗಳನ್ನು ತರಿಸಿ ಜನಕತನಯೆಗೆ ನೀಡಲು ಆದೇಶಿಸಿದ. ಅದರಂತೆ ಸೂತನು ಚಂದ್ರಕಿರಣಗಳಂತಹ ವಜ್ರಾಭರಣರತ್ನಗಳನ್ನು ತರಿಸಿ ತಂದೀಯಲು ಸೀತೆಯು ಸಂತಸದಿಂದ ಅಲಂಕಾರ ಮಾಡಿಕೊಂಡುದನ್ನು ಕಂಡ ಕೌಸಲ್ಯೆಯು ಸೊಸೆಯನ್ನು ತೆಗೆದಪ್ಪಿ

ಮುದ್ದಾಡಿ ಮಮತೆಯಿಂದ ಚುಂಬಿಸುತ್ತ ಗದ್ಗದ ಕಂಠದಿಂದ, "ಕುಲಜೆ ಧರಣಿತನೂಜೆ, ಸ್ತ್ರೀಸ್ಥಿರಚಿತ್ತ ಎಂಬುದು ಬಿಸಿಲ್ಗುದುರೆಯಂತೆ, ಎಳೆಮಿಂಚಿನಂತೆ ಕ್ಷಣಿಕವಾದುದು, ಬಗೆಬಗೆಯ ಚೇಷ್ಟೆಗಳನ್ನು ಮಾಡುವ ಕಪಿಯಂತೆ ಚಂಚಲವಾದುದು. ಸುಳ್ಳು ಅಕಾರಣದ್ವೇಷ ಅತಿಸಾಹಸ ಹೊಸಧೈರ್ಯ ಅಶುಚಿ ನಿಷ್ಕರುಣೆ ಮೂರ್ಖತನಗಳು ಲಲನೆಯರ ಜೊತೆಗೆ ಹುಟ್ಟಿದವು. ಸತ್ಯವೆಂಬುದು ಅವಳಲ್ಲಿ ಮುಗಿಲ ನೆರಳು – ಇದು ಹೆಣ್ಣುಗಳ ಸಂಪ್ರದಾಯ, ಮೂಲೋಕದಲ್ಲೂ ಜನಜನಿತವಾದುದು. ಆದರಣೆಯಿಲ್ಲ, ನಯ ಸಲ್ಲ, ಸತ್ಯಾಚಾರದ ಹಾದಿ ಇನ್ನಿಲ್ಲ, ದಯೆ ಹೊಲ್ಲ, ಕೃಪೆಯ ಹೆಸರೇ ಇಲ್ಲ. ಸವಿನುಡಿಯನ್ನೇನೋ ಆಡುತ್ತಾರೆ, ಲಲ್ಲೆಮಾತಿನಿಂದ ಮರುಳು ಮಾಡಿ ಬಯಸಿದ್ದನ್ನು ನೆರವೇರಿಸದಿದ್ದರೆ ಗಂಡನ ಮುಖ ನೋಡಲೂ ಇಷ್ಟವಿಲ್ಲದೆ ಕಾಡಿಗಟ್ಟುತ್ತಾರೆ. ಧನಧಾನ್ಯಗಳ ಸಮೃದ್ಧಿಯಿಂದಿರುವಾಗ ಗಂಡನನ್ನು ಅನುಸರಿಸುತ್ತ, ಮೋಹಗೊಳಿಸುತ್ತ ಯಾರಿಗೂ ಗೊತ್ತಾಗದಂತೆ ಮೋಸ ಮಾಡುತ್ತಾರೆ. ನಿರ್ಧನಿಕನಾದರಂತೂ ಕ್ರೂರ ನಿಷ್ಠುರತೆಯಿಂದ ಅವನನ್ನು ನೆನೆಪಿಸಿಕೊಳ್ಳಲೂ ಇಷ್ಟಪಡಲಾರಳು. ಇದು ಚಂಚಲವನಿತೆಯರ ಪರಂಪರೆಯಲ್ಲಿ ಅಪರೂಪವೇನಲ್ಲ. ಆದರೆ ಪತಿವ್ರತೆಯರಾದವರು ಎಂದಿಗೂ ಧರ್ಮವನ್ನು ಮೀರುವವರಲ್ಲ, ಹುಟ್ಟಿ–ಸೇರಿದ ಮನೆಗಳೆರಡಕ್ಕೂ ಕೀರ್ತಿಯನ್ನು ಗಳಿಸಿ, ಸುರಮುನಿಗಳ ಸೇವೆಗೈಯುವ ಸಾಧ್ವೀಜನರ ಮಹಿಮೆ ಎಣೆಯಿಲ್ಲದ್ದು, ಕಂದ. ಸಿರಿವಂತನಾಗಲೀ ದರಿದ್ರನಾಗಲೀ, ಸುಖ ಬರಲಿ ಕಷ್ಟವಿರಲಿ, ಗಂಡನೇ ಪರದೇವತೆಯೆಂಬ ಭಾವನೆ ಸುಚರಿತ್ರೆಯರ ಸಂತತಿಗೆ ಮಕುಟದ ಮಾಣಿಕ್ಯದಂತೆ. ಅಂತೆಯೇ ನೀನು ಗಂಡನ ಚರಣಗಳನ್ನು ಅನುಸರಿಸುತ್ತ ಸುಖವನ್ನು ನೀಡು" ಎಂದು ಬೋಧಿಸಿದಳು. ಕೋಸಲಾತ್ಮಜೆಯು ಹೇಳಿದ ಹಿತವಚನಗಳ್ನು ಕೇಳಿ ಸಂತಸಗೊಂಡ ಜನಕಜಾತ್ಮಜೆಯು, "ಅಮ್ಮ, ನಯವಿನಯ ಭಕ್ತಿಗಳನ್ನನುಸರಿಸಿ ಶಚೀದೇವಿ ದಾಕ್ಷಾಯಿಣೀ ಅನಸೂಯಾ ಲೋಪಾಮುದ್ರೆ ಮುಂತಾದ ಸತಿಯರಂತೆ ಹೆಸರನ್ನು ಪಡೆದು ನಿಮ್ಮ ಅನುಗ್ರಹವನ್ನು ಸಂಪಾದಿಸುತ್ತೇನೆ. ವಿಪದ–ಸಂಪದ, ವ್ಯಸನ–ಹರ್ಷ, ಕೋಪಶಾಂತಿ, ಹಾಸ–ನಿಷ್ಠುರತೆ ಮುಂತಾದ ವಿವಿಧ ಮನೋಸ್ಥಿತಿಯಲ್ಲಿ, ಸೂರ್ಯಕಿರಣಗಳು ಹೇಗೆ ಒಂದೇ ಸಮನೆ ಇರುತ್ತದೆಯೋ ಹಾಗೆ ಮಹಾರಾಜನ ಮನಸ್ಸಿಗನುಗುಣವಾಗಿ ನಡೆದುಕೊಳ್ಳುತ್ತ ಹದಿನಾಲ್ಕು ವರ್ಷಗಳನ್ನು ಕಳೆದು ಮತ್ತೆ ಅಯೋಧ್ಯೆಗೆ ಬರುತ್ತೇನೆ, ಇದು ಸತ್ಯ" ಎಂದು ಆಶ್ವಾಸನೆಯಿತ್ತಳು. ಈ ಮಾತುಗಳನ್ನು ಕೇಳಿದ ಕೌಸಲ್ಯೆ ಸೀತೆಯನ್ನು ಬಿಗಿದಪ್ಪಿಕೊಂಡು ಹೊಗಳುತ್ತ ಮನಸಾರೆ ಹರಸಿ ಆನಂದತುಂದಿಲಳಾದಳು.

ಆನಂತರ ಶ್ರೀರಾಮನು ತಾಯ ಬಳಿ ಹೋಗಿ, "ಅಮ್ಮ, ಹದಿನಾಲ್ಕು ವರ್ಷಗಳು ನಿಮಿಷವೆಂಬಂತೆ ಕಳೆದುಹೋಗುತ್ತವೆ. ಮನೆಯಲ್ಲಿದ್ದಂತೆಯೇ ಬಹು ಬೇಗ ಬಂದು ನಿಮ್ಮನ್ನು ಕಾಣುತ್ತೇವೆ, ದುಃಖಿಸಬೇಡ. ಅಪ್ಪನನ್ನು ಸಂತೈಸು. ದಿನಗಳು ಬಹುಬೇಗ ಕಳೆದುಹೋಗುತ್ತವೆ, ಮನಸ್ಸಿಗೆ ಆನಂದ ದೊರಕುತ್ತದೆ, ಚಿಂತೆ ಮಾಡಬೇಡ" ಎಂದು ಮೃದುಮಾತುಗಳಿಂದ ಹೇಳಿ, ಬಳಿಕ ಮಿಕ್ಕ ತಾಯಂದಿರಿಗೆ, "ಮೋಸದಿಂದಲೋ ಅಜ್ಞಾನದಿಂದಲೋ ನನ್ನಿಂದೇನಾದರೂ ಅಪಚಾರವಾಗಿದ್ದರೆ ದಯವಿಟ್ಟು ಬೇಸರಗೊಳ್ಳದೆ

ಕ್ಷಮಿಸಿರಿ" ಎಂದು ಬೇಡಿಕೊಂಡ. ಆ ಮಾತುಗಳನ್ನು ಕೇಳಿದ ಅವರಿಗೆ ದುಃಖ ಉಮ್ಮಳಿಸಿ ಬಂತು. ಗದ್ಗದ ಕಂಠದಿಂದ ತಮ್ಮತಮ್ಮಲ್ಲಿಯೇ ರಾಮನ ಸದ್ಗುಣಗಳನ್ನು ಹೊಗಳತೊಡಗಿದರು. ಇತ್ತ ಸೀತೆಯು ಲಕ್ಷ್ಮಣಸಹಿತ ದಶರಥನ ಬಳಿ ಹೋಗಿ ನಮಸ್ಕರಿಸಿ, ಪ್ರಾರ್ಥಿಸಿದಳು. ಅನಂತರ ಬೇಗ ಕೌಸಲ್ಯೆಗೆ ಅಭಿನಮಿಸಿ ಅವಳ ಅನುಜ್ಞೆ ಪಡೆದು ಹೊರಡಲು, ಲಕ್ಷ್ಮಣನು ತನ್ನ ಹೆತ್ತಮ್ಮ ಸುಮಿತ್ರೆಯೆಡೆ ಹೋಗಿ ನಮಸ್ಕಾರ ಮಾಡಿ ನಿಂತುಕೊಳ್ಳಲು ಅವನನ್ನು ತೆಗೆದಪ್ಪಿಕೊಂಡ ಆ ತಾಯಿ ಮಗನಿಗೆ ಈ ರೀತಿ ನುಡಿದಳು: "ಧರ್ಮಮಾರ್ಗಾನುಸರಣೆಯು ನಮ್ಮ ಕುಲಪರಂಪರೆ, ನೃಪಕೀರ್ತಿಯೂ ಅದರಿಂದಲೇ ಲಭಿಸಿದುದು. ಹಿರಿಯರ ಅನುವರ್ತನವೇ ಶುಭೋದಯದ ನೆಲೆ. ನೀನು ಅಣ್ಣನ ಚರಣಗಳನ್ನು ಬಿಡದೆ, ಸುಖದುಃಖಗಳಲ್ಲಿಯೂ, ಶೋಕಹರ್ಷಗಳಲ್ಲಿಯೂ ಅವನನ್ನು ಅನುಸರಿಸು. ದಾಶರಥಿಯನ್ನೇ ದಶರಥನೆಂದೂ, ಜಾನಕಿಯನ್ನು ನಾನೇ ಎಂದೂ, ಅಡವಿಯನ್ನೇ ಅಯೋಧ್ಯೆಯೆಂದೂ ಭಾವಿಸು. ಸುಖವಾಗಿ ಹೋಗಿ ಬಾ" ಎಂದು ಹರಸಿದಳು.

ಅಷ್ಟರಲ್ಲಿ ಸುಮಂತ್ರನು ರಥವನ್ನು ಸಿದ್ಧಪಡಿಸಿ ತಂದು ಹೊರಗೆ ನಿಲ್ಲಿಸಿ, ರಾಮನ ಬಳಿ ಬಂದು ದೇವೇಂದ್ರನಿಗೆ ಮಾತಲಿಯು ಬಿನ್ನಹವನ್ನು ಮಾಡಿದಂತೆ ಪರಮ ಭಕ್ತಿಯಿಂದ ವಿಜ್ಞಾಪನೆ ಮಾಡಿಕೊಂಡ. ಹೊಂದೇರನ್ನೇರಲು ರಾಮನು ನಿಶ್ಚಯಿಸಿ, ಸೀತೆಗೆ ಹೇಳಿದ. ಆಕೆಯು ಅತ್ತೆಯಿತ್ತಿದ್ದ ಶುಭಕರ ಭೂಷಣಾಂಬರಗಳಿಂದ ಅಲಂಕೃತಳಾಗಿ ತೇರನ್ನೇರಿದಳು. ಸೌಮಿತ್ರಿಯು ಕೈಯಲ್ಲಿ ಬಿಲ್ಲುಬಾಣ, ಕವಚ, ಚರ್ಮ ಬಿಗಿದ ಬುಟ್ಟಿ, ಗುದ್ದಲಿ ಮುಂತಾದ ಮುಖ್ಯ ವಸ್ತುಗಳನ್ನು ರಥದಲ್ಲಿರಿಸಿದ. ಆನಂತರ ರಾಮಲಕ್ಷ್ಮಣರು ತೇರನ್ನು ಮೂರು ಬಾರಿ ಬಲವಂದು ಹತ್ತಿದರು. ಆಗ ಸೂತನು ಮರುದ್ವೇಗದ ಕುದುರೆಗಳನ್ನು ಕೈಯಲ್ಲಿನ ಚಾಟಿಯಿಂದ ತಿವಿಯಲು ತಕ್ಷಣವೇ ಸೂರ್ಯನನ್ನು ಹಿಡಿಯಲು ಹಾರಿದವೋ ಎಂಬಂತೆ ಘನಗರ್ಜನೆ ಮಾಡುತ್ತ ಓಡಿದವು. ಮಿಂಚಿನ ವೇಗ ಮತ್ತು ಪ್ರಭೆಯಿಂದ ಹೊಂದೇರು ಓಡುತ್ತಿರಲು ಊರಿನ ಹೆಂಗಸರು ಮಕ್ಕಳು ವೃದ್ಧರು ಶೋಕವಿಹ್ವಲದಿಂದ ಕೂಡಿದ್ದರು, ಕೆಲವರಂತೂ ಶೋಕೋದ್ವೇಗದಿಂದ ಮೂರ್ಛೆಯೇ ಹೋದರು. ತೇರಿನ ಹಿಂದೆ ಪಶುಪಕ್ಷಿಗಳ ಹೊರತಾಗಿ ಊರಿನ ಜನರೆಲ್ಲರೂ ಹಿಂದೆಯೇ ಓಡಿಬರುತ್ತಿರಲು, ಕೆಲವರು ತಾವೂ ಅವರ ಜೊತೆಯೇ ಬರುತ್ತೇವೆಂದು ಹಲುಬುತ್ತಿದ್ದರು. ಕೆಲವರು, "ಸೂತನೇ, ಇಷ್ಟೇಕೆ ತ್ವರೆ ಮಾಡುತ್ತಿದ್ದೀಯೆ, ತೇರನ್ನು ನಿಧಾನವಾಗಿ ಓಡಿಸು, ಅರಸುಮಕ್ಕಳ ಚಂದ್ರಬಿಂಬದಂತಹ ಮುಖಗಳನ್ನು ನೋಡಿ ಸಮಾಧಾನಪಡುತ್ತೇವೆ" ಎಂದು ಕೂಗುತ್ತಿದ್ದರೆ, ಮತ್ತೆ ಕೆಲವರು, "ದೇವರಂತಹ ಮಕ್ಕಳನ್ನು ಬಿಟ್ಟಿರಲು ಅವರ ಮಾತೆಯರ ಹೃದಯಗಳು ಕಲ್ಲಾಗಿರಬೇಕು" ಎಂದುಕೊಂಡರು. ಮತ್ತೂ ಕೆಲವರು, "ಗಂಡನನ್ನು ಬಿಟ್ಟಿರದೆ ಜೊತೆಗೆ ಹೋಗುತ್ತಿರುವ ವೈದೇಹಿಯೇ ಧನ್ಯೆ! ಅಣ್ಣನನ್ನು ಅನುಸರಿಸುತ್ತಿರುವ ಲಕ್ಷ್ಮಣನು ಧರ್ಮವನ್ನು ಮೀರದೆ ಸನ್ಮಾರ್ಗದಲ್ಲಿ ನಡೆಯುವ ಪುಣ್ಯವಂತ!" ಎಂದು ಕೂಗಿದರು. ಇತ್ತ ದಶರಥ ಮಹಾರಾಜನು ಮಗನ ಮುಖವನ್ನು ನೋಡಬೇಕೆಂದು ಓಡುತ್ತ ಕೋಣೆಯಿಂದ ಹೊರಗೆ ಬಂದ. ಅವನ ಹಿಂದೆಯೇ ಸ್ತ್ರೀಯರೂ ಬಂದರು.

ಬೇಗ ರಥವನ್ನು ಓಡಿಸು ಎಂದು ಶ್ರೀರಾಮನು ಹೇಳಲು ಸಾರಥಿಯು ಹಾಗೆ ಮಾಡಲು, ಪರಿಜನರೂ ಪುರಜನರೂ 'ನಿಧಾನಿಸು ನಿಧಾನಿಸು' ಎಂದು ಕೂಗುತ್ತಿದ್ದರು. ರಾಜನೂ ಹಿಂದೆಯೇ ಓಡಿಬರುತ್ತಿರಲು ಸೂತನು ಕಂಡು ಮಾರ್ಗಮಧ್ಯದಲ್ಲಿ ರಥವನ್ನು ನಿಲ್ಲಿಸಿದರೂ, ಕುದುರೆಗಳ ಹಾಗೂ ಓಡಿಬರುವ ಜನಗಳ ಕಾಲ್ತುಳಿತದಿಂದ ಎದ್ದ ಕೆಂಧೂಳು ದಟ್ಟವಾಗಿ ಎಲ್ಲೆಡೆ ಆವರಿಸಿ ಏನೂ ಕಾಣದಂತಾಯಿತು. ಆದರೆ ಜನರ ಕಂಬನಿ ಧಾರಾಕಾರವಾಗಿ ಸುರಿದು ಧೂಳು ಅಡಗಿತು. ಆದರೆ ಲೋಕ ದಾವಾಗ್ನಿಯ ಹೊಗೆ ಹೊಮ್ಮಿ ದಾರಿಯನ್ನು ಕಾಣದ ಜನರೆಲ್ಲ ತೇರನ್ನು ಸುತ್ತುವರಿಯುತ್ತಿರಲು, ಅಷ್ಟರಲ್ಲಿ ಹಿಂದೆ ಬರುತ್ತಿರುವ ಮಹಾರಾಜನ ಎಡಬಲಗಳಲ್ಲಿ ಕಂಚುಕಿಗಳು ಕೂಗುತ್ತಿರಲು ಅದನ್ನು ನೋಡಿದ ಜನರ ಕಂಬನಿ ಕೋಡಿವರಿಯಿತು. 'ರಾಮ ಲಕ್ಷ್ಮಣ ವೈದೇಹಿ ಸುಮಂತ್ರ' ಎಂದು ಕೂಗುತ್ತ ಹಿಂದೆ ಓಡಿಬರುತ್ತಿರುವ ತಾಯಂದಿರ ದೈನ್ಯವನ್ನು ನೋಡಿ ರಾಘವನ ಚಿತ್ತ ಸಂಕೋಚಗೊಂಡಿತು. ರಾಜನ ಮನಸ್ಸಿನ ಅನುತಾಪವನ್ನು ಕಂಡು, ತೇರನ್ನು ತ್ವರಿತವಾಗಿ ನಡೆಸೆಂದು ಧೀರ ರಾಮನು ಸುಮಂತ್ರನಿಗೆ ಆಜ್ಞಾಪಿಸಲು ಆ ಧ್ವನಿ ಅರಸನಿಗೆ ಕೇಳಿಸಿತು. ಆಗ ಆತನು, "ಓ ಸುಮಂತ್ರ, ರಥವನ್ನು ನಿಲ್ಲಿಸು, ಹೋಗಬೇಡ" ಎಂದು ಕೂಗುತ್ತ ಹಿಂಬಾಲಿಸುತ್ತಿದ್ದರೆ, ರಾಮನು "ಓಡಿಸು" ಎಂದು ಹೇಳುತ್ತಿದ್ದ. ಈ ಈರ್ವರ ಆಜ್ಞೆಗಳ ನಡುವೆ ಸಿಲುಕಿದ ಸುಮಂತ್ರನು ಹೋಗಲೂ ಆರದೆ, ನಿಲ್ಲಲೂ ಆರದೆ ಮನಸ್ಸು ಡೋಲಾಯಮಾನದಿಂದ ಒದ್ದಾಡತೊಡಗಿತು. ತಾಯಂದಿರ ಹುಲುಬುವುದನ್ನು ಕಂಡ ರಾಮನು ಸೂತನಿಗೆ ಮತ್ತೆ ರಥವನ್ನು ಜೋರಾಗಿ ಓಡಿಸೆಂದು ಹೇಳಿದ. ರಾಮನ ನಿಷ್ಠುರ ಧ್ವನಿಯನ್ನು ಕೇಳಿದ ಸುಮಂತ್ರ ಹಾಗೆಯೇ ಮಾಡಿದ.

"ಬಡವರಿಗೆ, ಅನಾಥರಿಗೆ, ಅಶಕ್ತರಿಗೆ, ತಾಪಸಸಮೂಹಕ್ಕೆ ಇದ್ದ ರಕ್ಷಕನು ಎಲ್ಲಿ ಹೋಗುತ್ತಿದ್ದಾನೆ? ಕೋಪದಿಂದ ಶಪಿಸಿದರೂ ಪಾಲಿಸುವ ಸದ್ಧರ್ಮಮೂರ್ತಿ ಎಲ್ಲಿಗೆ ಹೋಗುತ್ತಿದ್ದಾನೆ? ಹೆತ್ತಮ್ಮನಂತೆಯೇ ನನ್ನನ್ನು ಕಂಡಾಕ್ಷಣ ನಮಸ್ಕರಿಸುವ ಸತ್ಯಸ್ವರೂಪನು ಎಲ್ಲಿ ಹೋಗುತ್ತಿದ್ದಾನೆ? ಯಾವ ದುರ್ದಶೆ ಅವನನ್ನು ಕಾಡುತ್ತಿದೆ?" ಎಂದು ಎಲ್ಲರೂ ಮರುಗಿ ಗೋಳಿಟ್ಟರು. ಸಾಧುಜನರು ಅಗ್ನಿಹೋತ್ರವನ್ನು ಮರೆತರು, ಸೂರ್ಯ ಮರೆಯಾದ ಚಂದ್ರ ನಕ್ಷತ್ರಗಳು ನಿಷ್ಪ್ರಭೆಯನ್ನು ತಾಳಿದವು, ಶೀತಲ ಗಾಳಿಯು ಬೀಸುವುದನ್ನು ನಿಲ್ಲಿಸಿತು, ಕುದುರೆ ಆನೆಗಳು ಮೇಯುವುದನ್ನು ನಿಲ್ಲಿಸಿದವು, ತಾಯಂದಿರು ಮಕ್ಕಳಿಗೆ ಹಾಲುಣಿಸುವುದನ್ನು ನಿಲ್ಲಿಸಿದರು – ಹೀಗೆ ರಾಮನು ಹೋಗುವ ಸಂದರ್ಭದಲ್ಲಿ ಎಲ್ಲರೂ ಶೋಕಾಕುಲಿತರಾದರು. ಮರುದ್ವೇಗದಿಂದ ತೇರು ಪುರವನ್ನು ಬಿಟ್ಟು ದೂರ ಹೋಯಿತು, ಇತ್ತ ಸೇರಿದ್ದ ಅಂತಃಪುರದ ಅಂಗನೆಯರೆಲ್ಲ ಮಹಾರಾಜನೊಡನೆ ಭೋರೆಂದು ಅಳತೊಡಗಿದರು, ಅಳುವಿನ ಧ್ವನಿ ಮುಂಗಾರ ಗುಡುಗಿನಂತೆ ಎಲ್ಲೆಡೆ ಹಬ್ಬಿತು. ಇಡೀ ಜನಪದವೇ ರೋಗಗ್ರಸ್ತವೆಂಬಂತೆ ಕಾಣಿಸಿತು. ಎಲ್ಲರೂ ಒಂದಷ್ಟು ಹೊತ್ತು ಚಿತ್ರದ ಬೊಂಬೆಗಳಂತೆ ಸ್ತಬ್ದವಾಗಿಬಿಟ್ಟರು. ಕೊಂಚ ಹೊತ್ತಿನ ಬಳಿಕ ಎಚ್ಚೆತ್ತು ನಾಲ್ಕೂ ದಿಕ್ಕುಗಳನ್ನು ದಿಟ್ಟಿಸಿ ಜನ ಹಲುಬಿದ ಪರಿಯನ್ನು ಬಣ್ಣಿಸಲು ಸಾಧ್ಯವೇ? ಹತ್ತೂ ದಿಕ್ಕುಗಳಲ್ಲಿ ಕತ್ತಲು ಕವಿಯಿತು, ಭೂಮಿಯು ನಡುಗಿತು, ತಾರೆಗಳೂ ಗ್ರಹಗಳೂ



ಅರಣ್ಯದತ್ತ ರಾಮಸೀತಾಲಕ್ಷ್ಮಣರ ನಿರ್ಗಮನ

ಸುತ್ತತೊಡಗಿದವು. ಬಿರುಗಾಳಿಯು ಯರ್‍ರಾಬಿರ್‍ರಿ ಬೀಸತೊಡಗಿತು. ತಮ್ಮ ಕೆಲಸಗಳನ್ನು ಮರೆತ ಜನ ರಥ ಎಲ್ಲಿ ಹೋಯಿತು ಎಂದು ಹುಡುಕಿ, ಕಾಣದೆ ಕೊನೆಗೆ ಹತಾಶರಾಗಿ ರಾಮನ ಹೆಸರನ್ನೇ ನೆನೆಸಿಕೊಳ್ಳುತ್ತ ಊರತ್ತ ಹಿಂದಿರುಗಿದರು. ಅಂದು ಇಡೀ ನಗರದಲ್ಲಿ ಹೆಂಡತಿಯರು ತಮ್ಮ ಗಂಡಂದಿರನ್ನು ಆದರಿಸಲಿಲ್ಲ, ಜನರು ಅನ್ನಪಾನಾದಿಗಳನ್ನು ತೊರೆದರು, ಶ್ರೀರಾಮ ಎಲ್ಲಿ ಹೋದನೆಂದು ಸುತ್ತಲೂ ಹುಡುಕಾಡಿದರು, ಅರಸರು ತಮ್ಮ ಅಂತಸ್ತನ್ನು ಪರಿಗಣಿಸಲಿಲ್ಲ, ವಿಪ್ರರು ತಮ್ಮ ಹಾದಿಯನ್ನು ಹುಡುಕಾಡಿದರು, ರಾಜನ ಅಂತಃಪುರವೊಂದನ್ನುಳಿದು ಮಿಕ್ಕೆಲ್ಲ ಜಾಗವೂ ನಿರ್ಜನವಾದವು.

ಇತ್ತ, ಶ್ರೀರಾಮನ ರಥವು ಗಾಳಿಯ ವೇಗವನ್ನೂ ಮೀರಿಸಿ ಎಳೆಮಿಂಚಿನಂತೆ, ಬಿಟ್ಟ ಬಾಣದಂತೆ ನೇರವಾಗಿ ಹೋಗಲು ಜನರೆಲ್ಲ ದೃಷ್ಟಿ ಹಾಯುವಷ್ಟು ದೂರವೂ ಅದನ್ನೇ ನಿಟ್ಟಿಸುತ್ತ ನಿಂತರು. ನೋಟವನ್ನೂ ಮೀರಿ ರಥವು ಸಾಗಿಹೋಗಲು 'ಹಾ ರಾಮ, ಸೌಮಿತ್ರಿ, ವೈದೇಹಿ' ಎಂದು ಜನರೆಲ್ಲ ನೆಲದ ಮೇಲೆ ಶೋಕೋದ್ರೇಕದಿಂದ ಕುಸಿದು ಬಿದ್ದರು. ದಶರಥನೂ ಸೊರಗಿ ನೆಲದ ಮೇಲೆ ಬಿದ್ದುದನ್ನು ನೋಡಿ ಕೌಸಲ್ಯೆಯು ಆತನಿಗೆ ತನ್ನ ಕೈಯಾಸರೆಯಿತ್ತು ನಿಲ್ಲಿಸಲು, ಎಡಬದಿಯಲ್ಲಿ ಕೈಕೇಯಿಯು ಸಹಾಯಕ್ಕಾಗಿ ಸರಸರನೆ ಬಂದಳು, ಸುಮಿತ್ರೆಯು ಧಾವಿಸಿದಳು. ಅಷ್ಟರಲ್ಲಿ ಎಚ್ಚೆತ್ತುಕೊಂಡ ದಶರಥನು ನಿಟ್ಟುಸಿರುಗಳನ್ನು ಸೂಸುತ್ತ, ತೆರೆದ ಕಂಗಳಿಂದ ಸುತ್ತಲೂ ನೋಡುತ್ತ ಕೈಕೇಯಿಯನ್ನು ನೋಡಿ ಕೋಪದಿಂದ ಹಲ್ಲುಕಡಿಯುತ್ತ ರೋಷಾವೇಶಗೊಂಡು, "ಕುಲಗೆಡುಕಿ, ಪಾಪಿಷ್ಠೆ, ಕ್ರೂರೆ, ನೀನು ನನ್ನ ಬಂಧುವಲ್ಲ, ಹೆಣ್ಣಿನ ಆಕಾರದ ದುಷ್ಟೆ, ರಕ್ಕಸಿ, ನನ್ನನ್ನು ಮುಟ್ಟಬೇಡ, ಮೋಸದ ಬುದ್ಧಿಯಿಂದ ನೆಲವನ್ನು ಗೆದ್ದಿದ್ದೀಯೆ, ಲೋಕವನ್ನೆಲ್ಲ ನಾಶಗೈಯಲು ಇಚ್ಛಿಸಿದ ಮಹಾಪಾಪಿ, ಮಗನನ್ನು ದೊರೆಯನ್ನಾಗಿ ಮಾಡಿ ಸುಖವಾಗಿ ಬಾಳು" ಎಂದು ಗರ್ಜಿಸುತ್ತ ಅವಳನ್ನು ದೂರೀಕರಿಸಿದ; ತನ್ನ ವಿಷಾದತೀವ್ರತೆಯಿಂದಲೇ ಮೂರ್ಛೆಗೆ ಸಂದ. ದೇವೇಂದ್ರನಿಗೆ ಆಪ್ತನಾದ ತನ್ನ ಪತಿಯನ್ನು ನೋಡುತ್ತ ಕೌಸಲ್ಯೆಯು ಖಿನ್ನಳಾಗಿ ನಿಧಾನವಾಗಿ ಅವನ್ನು ಹಿಡಿದೆತ್ತಿ, ನಯವಿನಯದ ಮಾತುಗಳಿಂದ ಅವನನ್ನು ಸಂತೈಸಿದಳು. ಎಚ್ಚೆತ್ತ ದಶರಥನು ನಿಟ್ಟಿಸಿರು ಬಿಡುತ್ತ ಮಗನು ಹೋದ ದಿಕ್ಕನ್ನೇ ದಿಟ್ಟಿಸುತ್ತ ಬೆಂಕಿಯನ್ನು ಕಂಡ ಜಿಂಕೆಮರಿಯಂತೆ ಮಗನು ವನವಿಹಾರಕ್ಕೆ ಹೋಗಿದ್ದಾನೆ ಎಂದು ಅತೀವ ಸಂಕಟದಿಂದ ತನ್ನ ಸತಿಯೊಡನೆ ಹೀಗೆಂದ: "ಅತಿಶಯವಾದ ಸೌಧಾಗ್ರದಲ್ಲಿ ಹಂಸತೂಲಿಕಾತಲ್ಪದಲ್ಲಿ ಕಸ್ತೂರಿಮನುಗುಗಳ ಪರಿಮಳದಿಂದ ಲೇಪಿತರಾದ ಲಲಿತಾಂಗಿಯರ ಕೋಮಲ ಬೆರಳುಗಳು ಆಡಿಸುವ ತಾಳವೃಂತಗಳಿಂದ ಸೂಸುವ ಗಾಳಿಯಲ್ಲಿ ಹಾಯಾಗಿ ಮಲಗುವ ರಾಜಾಧಿರಾಜನು ಕಾಡಿನಲ್ಲಿ ಹೇಗಿರುತ್ತಾನೆಯೋ! ಮೃದುತಲ್ಪದಲ್ಲಿ ಮಲಗುವ ಕೋಮಲದೇಹಿಯು ಕಠಿಣವಾದ ಕಲ್ಲುಗಳ ಮೇಲೆ ಹೇಗೆ ನಿದ್ರಿಸುತ್ತಾನೆಯೋ! ಚದುರೆಯರು ಬಡಿಸುವ ರುಚಿಕರವಾದ ಅನ್ನವನ್ನು ಊಟಮಾಡುವ ಚೆನ್ನನು ಕಾಡಿನಲ್ಲಿನ ಸೊಪ್ಪುಗೆಡ್ಡೆಹಣ್ಣುಗಳನ್ನು ತಿಂದು ಹೊಟ್ಟೆಹೊರೆಯಬೇಕಾದ ಸ್ಥಿತಿ ಬಂದಿತಲ್ಲ! ಎದೆಯನ್ನು ಕಲ್ಲಾಗಿಸಿಕೊಂಡ ಪಾಪಿಷ್ಠೆಯೇ, ಮದದಿಂದ ಕೂಡಿ ಲೋಕವಿರೋಧಿಯಾದ ಕೃತ್ಯವನ್ನು ಗೈದೆಯಲ್ಲ!

ಮಕ್ಕಳು ಚೂಪಾದ ಕಲ್ಲುಮುಳ್ಳುಗಳ ಹಾದಿಯನ್ನು ತಮ್ಮ ಮೃದುವಾದ ಹೆಜ್ಜೆಗಳನ್ನಿಕ್ಕುತ್ತ ಹೇಗೆ ಸವೆಸುತ್ತಾರೆಯೋ! ಕ್ರೂರಮೃಗಗಳ ದಾರುಣ ಶಬ್ದಗಳ ನಡುವೆ ಭೂಮಿಸುತೆಯು ಹೇಗೆ ತಾನೇ ಜೀವಿಸಿಯಾಳು! ಅವರು ಮೂವರಿಗೂ ನಿನ್ನ ದೆಸೆಯಿಂದ ಘೋರಕಷ್ಟವು ಪ್ರಾಪ್ತವಾಯಿತು" ಎಂದು ಒಂದೇ ಸಮನೆ ಕೈಕೇಯಿಯನ್ನು ಧಿಕ್ಕರಿಸಿ, ರಾಘವನ ಸದ್ಗುಣಗಳನ್ನು ಸ್ಮರಿಸಿಕೊಳ್ಳುತ್ತ ದಶರಥನು ಊರನ್ನು ಹೊಕ್ಕ. ಆನೆಕುದುರೆಗಳ ಸಂಚಾರ, ಕಾಲಾಳುಗಳ ಹೆಜ್ಜೆಸಪ್ಪುಳ, ಪರಿಪರಿಯಾದ ಶೃಂಗಾರಭರಿತ ಜನಗಳು ತುಂಬಿರುತ್ತಿದ್ದ ನಗರವು ಈಗ ಬರಿದಾಗಿತ್ತು, ಕಳಾಹೀನವಾಗಿತ್ತು. ಅದನ್ನು ಕಂಡು ರಾಜನ ಉಮ್ಮಳ ಮತ್ತಷ್ಟು ಹೆಚ್ಚಿತು. ಕೊನೆಗೂ ಪ್ರಯಾಸದಿಂದ ಅರಮನೆಯನ್ನು ಹೊಕ್ಕು, ಮಗನನ್ನು ಕಾಣದೆ ಅಳುತ್ತ ನೆಲದ ಮೇಲೊರಗಿ ಸುತ್ತ ನೆರೆದ ಜನರತ್ತ ನೋಡುತ್ತ ದೈನ್ಯದಿಂದ ಪಂಕ್ತಿರಥನು, "ಈ ಅರಮನೆ ಹಾವಿನ ಹುತ್ತ, ಇದನ್ನು ಬಿಟ್ಟು ಕೌಸಲ್ಯೆಯು ನನ್ನನ್ನು ತನ್ನ ಅರಮನೆಗೆ ಕರೆದೊಯ್ಯಲಿ, ಅಲ್ಲಿ ನಾನು ಸಮಾಧಾನದಿಂದಿರುತ್ತೇನೆ" ಎನ್ನಲು ಪರಿಜನರು 'ಅಪ್ಪಣೆ' ಎನ್ನುತ್ತ ನವಿರಾಗಿ ಅರಸನನ್ನು ಎತ್ತಿಕೊಂಡು ಹೋದಾಗ, ಅಲ್ಲಿ ಆತನು ಕಿವಿಡುಮೂಕುಕುರುಡುಗಳನ್ನು ಪಡೆದಂತೆ ಸುತ್ತಲೂ ನೋಡುತ್ತ ಮಕ್ಕಳನ್ನು ನೆನೆನೆನೆದು ನಾನಾವಿಧವಾಗಿ ಹಲುಬಿದ. ಅರಮನೆಯು ಚಂದ್ರನಿಲ್ಲದ ಬಾನಿನಂತಿತ್ತು. ಅದನ್ನು ನೋಡಿದ ರಾಜನು 'ರಾಮ' ಎಂದು ಮತ್ತೆ ಮತ್ತೆ ಕೂಗುತ್ತ ಕಡುಶೋಕದಿಂದ ಮಕ್ಕಳಿಗಾಗಿ ಹಂಬಲಿಸುತ್ತ ಕೌಸಲ್ಯೆಯೊಡನೆ ಹೀಗೆಂದ: "ಆವರಿಸಿದ ತೀವ್ರ ಶೋಕದಿಂದಾಗಿ ನನ್ನ ನೋಟ ಮನಸ್ಸುಗಳು ಶ್ರೀರಾಮಪುರದರಸನೊಡನೆಯೇ ಹೋಗಿಬಿಟ್ಟಿವೆ, ಅವೆರಡೂ ಇಲ್ಲಿಯವರೆಗೆ ನನ್ನಲ್ಲಿಗೆ ಮರಳಿಲ್ಲ. ಆದ್ದರಿಂದ ನನ್ನ ದೇಹವನ್ನು ನಿನ್ನ ಕೈಗಳಿಂದ ಮುಟ್ಟು."

೧೪. ರಾಘವನು ಗೋಮತಿಯೆಡೆಗೆ ಹೋಗಲು ವಾಮದೇವನು ಜನರಿಗೆ ತತ್ತ್ವೋಪದೇಶ ಮಾಡಿದುದು

ಹೈಮವತಿ ಕೇಳು, ದಶರಥನು ಮಗನನ್ನು ನೆನೆಸಿಕೊಂಡು ಭ್ರಮೆಗೊಳಗಾಗಿ ಬಳಲುತ್ತಿರಲು, ಕೌಸಲ್ಯೆಯಲ್ಲಿಯೂ ಮಹತ್ತರ ವ್ಯಸನವುಂಟಾಗಿ ರಾಮನ ಸದ್ಗುಣಗಳನ್ನು ಸ್ಮರಿಸಿಕೊಂಡು, "ಕೈಕೇಯಿಯು ಕೆಟ್ಟ ಹಾವಿನ ಹಾಗೆ ಹುಟ್ಟಿ ಕಾಮಚಾರಿಣಿ ಎನ್ನಿಸಿಕೊಂಡು ತಾಮಸಿಯಾಗಿ ಜನರನ್ನು ಸಂಕಟಗೊಳಿಸಿದಳು. ಪರಮ ಧರ್ಮಸ್ವರೂಪಿ ರಾಮನನ್ನು ಕಾಡಿಗೆ ಕಳಿಸಿ ವಿಷಜಂತುವಿನಂತೆ ಊರನ್ನೇ ನಿರ್ಜನವಾಗಿಸಿಬಿಟ್ಟಳು. ಕಾಮವಶವಾಗಿ ಅವಳಿಗೆ ವರಗಳನ್ನಿತ್ತು ಈಗ ಸಂಕಟಪಟ್ಟು ಮಾಡುವುದೇನು? ಹುಲಿಸಿಂಹತೋಳನರಿಗಳಿರುವ ಕ್ರೂರ ಕಾನನದಲ್ಲಿ ರಾಮನು ಹೇಗಿರುತ್ತಾನೆಯೋ? ವನವಾಸವನ್ನು ಮುಗಿಸಿ ದೇವೇಂದ್ರನಂತೆ ದಿವ್ಯವಾದ ವಸ್ತ್ರಭೂಷಣಗಳೊಡನೆ ರಥವನ್ನೇರಿ ಮತ್ತೆ ಜನರನ್ನು ಸಂತಸಗೊಳಿಸಲು ಬರುವುದನ್ನು ಕಾಣುವುದು ಇನ್ನೆಂದಿಗೋ? ಅರಮನೆಯ ಮುಂಗಡೆಯಲ್ಲಿ ಆರತಿಗಳನ್ನು ಹಿಡಿದು ಮನದ

ಹರುಷದ ಹೂಗಳನ್ನೆರಚುವ ಸುಮಂಗಲಿಯರ ಹಾಡುಗಳನ್ನು ಕೇಳುವುದು ಇನ್ನು ಯಾವ ಯುಗಕ್ಕೋ? ದಿವ್ಯಾಯುಧಗಳನ್ನು ಹಿಡಿದು ಬಿಳಿಯಾನೆಯ ಮೇಲೆ ಕುಳಿತು, ನಾಲ್ಕು ದಿಕ್ಕುಗಳಲ್ಲಿಯೂ ಹುಣ್ಣಿಮೆಯಂದು ಸಮುದ್ರವು ಭೋರ್ಗರೆಯುವಂತೆ ಜನರು ಜಯಘೋಷ ಮಾಡುತ್ತಿರಲು ಬಾವುಟಧ್ವಜಗಳು ಹಾರಾಡುತ್ತಿರಲು ಪನ್ನೀರಿನಿಂದ ಪರಿಮಳಭರಿತವಾದ ಅಯೋಧ್ಯಾನಗರವನ್ನು ಇನ್ನೆಂದಿಗೆ ಕಾಣುವೆನೋ" ಎಂದು ಹಲವು ವಿಧದಿಂದ ಹಲುಬಿದಳು.

ಹೀಗೆ ಜೋರಾಗಿ ಗೋಳಾಡುವ ಕೌಸಲ್ಯೆಯನ್ನು ಕಂಡು ಸುಮಿತ್ರೆಯು ಹೀಗೆಂದಳು: "ನಮ್ಮ ಪರಂಪರೆಯ ರಾಜಧರ್ಮವನ್ನು ಬಿಡದೆ ಎಲ್ಲರನ್ನೂ ಸಂತೋಷಗೊಳಿಸಲು ತಂದೆಯ ಆಜ್ಞೆಯನ್ನು ಎಣೆಯಿಲ್ಲದ ಕೀರ್ತಿಯನ್ನು ಪಡೆಯಲು ಕಾಡಿಗೆ ಹೋದ ಮಹಾಂತ ರಾಮನನ್ನು ನೆನೆಸಿಕೊಂಡು ಮರುಗಲೇನು ಕಾರಣ? ಶಿಷ್ಟಾಚರಣೆಗನುಗುಣವಾಗಿ ಅವನ ಹಿಂದೆ ಲಕ್ಷ್ಮಣನೂ ಅವನ ಸೇವೆಗೆಂದು ಹೋಗಿದ್ದಾನೆ, ವೈದೇಹಿಯು ಪತಿವ್ರತೆಯ ಧರ್ಮವನ್ನು ಮೀರದೆ ಸಂತಸದಿಂದಲೇ ಗಂಡನ ಜೊತೆ ಹೋಗಿದ್ದಾಳೆ. ಅದರಿಂದ ಶ್ರೀರಾಮನು ಮೂರು ಲೋಕಗಳಲ್ಲಿಯೂ ದಿಗಂತದವರೆಗಿನ ಕೀರ್ತಿಯನ್ನು ಗಳಿಸಿ ಹಿರಿಯ ಮಹಾರಾಜರ ಸಾಲಿಗೆ ಮಕುಟವಿಡುತ್ತಾನೆ; ಹೀಗಾಗಿ ದುಃಖಪಡುತ್ತಿರಬೇಕೇ? ರಾಮನು ಅಮಿತ ವಿಕ್ರಮ, ಪರಬಲಮರ್ದನ ಭೀಮ, ಅವನನ್ನು ಕಾಡಿನಲ್ಲಿರುವ ಪ್ರಾಣಿಗಳೆಲ್ಲ ಸೇವಕರಂತೆ ಸೇವಿಸುತ್ತವೆಯೇ ವಿನಾ ತೊಂದರೆಯೀಯಲಾರವು. ಅಕ್ಕ, ಅವನ ಮೇಲೆ ಸೂರ್ಯನು ಬಿಸಿಲನ್ನು ಬೀರಲಾರ, ಚಂದ್ರ ಶೀತವನ್ನೆರಚಲಾರ, ಗಾಳಿ ಜೋರಾಗಿ ಬೀಸದು, ಎಲ್ಲವೂ ಎಷ್ಟು ಬೇಕೋ ಅಷ್ಟು ಮಟ್ಟಿಗೆ ಇರುತ್ತವೆ. ಅಂತಹ ಮಹಾಪುರುಷನ ಬಗ್ಗೆ ಚಿಂತಮಾಡಲೇಕೆ? ಹಗಲು ಇರುಳು ಮೊದಲಾದ ಸರ್ವಭೂತಗಳೂ, ನಿಗಮ ಆಗಮಗಳೆ ಮೊದಲಾದ ವಾಗ್ಜಾಲವೆಲ್ಲವೂ ರಾಮನನ್ನು ಆವಶ್ಯಕತೆಗನುಗುಣವಾಗಿ ಕಾಪಾಡುತ್ತವೆ. ತಿಮಿಧ್ವಜನ ಮಗನನ್ನು ಕೊಂದದ್ದರಿಂದ ರಾಮನಿಗೆ ದಿವ್ಯಾಯುಧಗಳು ದೊರಕಿವೆ, ಅವುಗಳಿಂದಾಗಿ ಅವನು ಕಾಡಿನಲ್ಲಿಯೂ ಅರಮನೆಯಂತೆಯೇ ಸುಖವಾಗಿರುತ್ತಾನೆ. ಕಲೆಗೆ ಕಲೆ, ಬಲಕ್ಕೆ ಬಲ, ಸಾಹಸಕ್ಕೆ ಸಾಹಸ, ಮುಳಿಸಿಗೆ ಮುಳಿಸು, ಶಾಂತಿಗೆ ಶಾಂತಿ – ಹೀಗೆ ಇರುವ ಶ್ರೀರಾಮನು ತೃಣಕ್ಕೆ ತೃಣ, ಘನಕ್ಕೆ ಘನನಾಗಿದ್ದಾನೆ. ಹಲವಾರು ಬ್ರಹ್ಮಾಂಡಗಳನ್ನು ಸೃಷ್ಟಿಸಿ ರಕ್ಷಣೆಗೈದು ಕೊಲ್ಲುವ ಚಾತುರ್ಯಭರಿತನನ್ನು ಮನುಷ್ಯನೆಂದು ಬಗೆದು ಶೋಕಿಸುವುದರಿಂದಾಗುವ ಪ್ರಯೋಜನವೇನು? ಶತ್ರುಕುಲವನ್ನು ತರಿದು ತಾಪಸಿಗಳನ್ನು ಪೊರೆದು, ಕೊರೆಯಿಲ್ಲದ ಧರ್ಮವನ್ನು ಮತ್ತು ನಂಬಿದವರ ಕೈಯನ್ನು ಹಿಡಿದು, ಸರ್ವಜೀವಗಳನ್ನು ಸಂತೋಷಗೊಳಿಸಿ, ಎಲ್ಲರೂ ಜಯಕಾರ ಮಾಡುತ್ತಿರಲು ರಥವನ್ನೇರಿ ಧರಣಿಜಾತೆಯ ಜೊತೆಗೆ ಬರುವುದನ್ನು ಬೇಗನೇ ನೋಡುತ್ತೀಯೆ. ಆದ್ದರಿಂದ ಶೋಕಪಡುವ ಕಾರಣವೇ ಇಲ್ಲ, ನಿನ್ನ ಕಾಲಿಗೆ ಬೀಳುತ್ತೇನೆ, ಕ್ಲೇಶವನ್ನು ಬಿಟ್ಟು ಶುಭವನ್ನು ಯೋಚಿಸು. ಎಣೆಯಿರದ ವೈಭವದಿಂದ ಬಂದು ನಿನ್ನ ಮೃದುಪದಗಳಿಗೆ ಮಣಿಯುವ ಮಕ್ಕಳನ್ನು ನೋಡಿ ಅಪ್ಪಿಕೊಂಡು ಮುಂಡಾಡುತ್ತ ಆನಂದದ ಕಣ್ಣೀರಿನಿಂದ ನೆಲವನ್ನು ನೆನೆಸುವ ಕ್ಷಣವು ಬೇಗನೇ ಬರುತ್ತದೆ" ಎಂದು ಆತ್ಮೀಯವಾಗಿಯೂ, ವಿಹಿತ

ವಾಕ್ಕುಗಳಿಂದಲೂ ಸುಮಿತ್ರೆ ಕೌಸಲ್ಯೆಯನ್ನು ಸಮಾಧಾನಗೊಳಿಸಿದಳು.

ಇತ್ತ ಅರಮನೆಯಲ್ಲಿ ಹೀಗಿರಲು, ಅತ್ತ ಮುಂದೆ ಸಾಗುವ ದಿವ್ಯರಥವನ್ನು ಬಿಡದೆ ಹಿಂಬಾಲಿಸುತ್ತ, ರಾಮನ ಗುಣಗಳನ್ನು ಸ್ತುತಿಸುತ್ತ ಬರುವ ಪ್ರಜೆಗಳನ್ನು ಉದ್ದೇಶಿಸಿ ರಾಮ ಹೀಗೆಂದ: "ಭರತನಿಗೆ ಈ ರಾಜ್ಯಪಾಲನೆಯ ಹೊಣೆ ಬಿದ್ದಿದೆ. ಆತನು ಸದ್ಗುಣವಂತ, ಶ್ರೇಷ್ಠ ವ್ಯಕ್ತಿ, ನನ್ನಂತೆಯೇ ಆತನಲ್ಲಿಯೂ ಭಯಭಕ್ತಿಯನ್ನಿರಿಸಿಕೊಂಡು ನಡೆದುಕೊಳ್ಳಿರಿ. ಆತನು ನಿಮಗೆ ಹಿತವಾದುದನ್ನು ಮಾಡುವ ಹೃದಯವಂತ, ಪ್ರಜಾಪರಿಪಾಲನಸ್ವಾಂತ. ಯುವರಾಜನಾಗಿರುವ ಭರತನು ಎಲ್ಲರನ್ನೂ ಯಥೋಚಿತವಾಗಿ ಸಂರಕ್ಷಿಸುತ್ತಾನೆ. ವಿವೇಕವುಳ್ಳ ಪ್ರಜೆಗಳಾದ ನೀವೆಲ್ಲರೂ ರಾಜಾಜ್ಞೆಯನ್ನು ಒಂದಿಷ್ಟಾದರೂ ಮೀರದೆ ನಡೆದುಕೊಳ್ಳಿರಿ. ಇದರಿಂದ ಬಹು ಬೇಗ ಕೀರ್ತಿ ಮತ್ತು ಧರ್ಮಾನುಸರಣೆಗಳು ಕೈವಶವಾಗುತ್ತವೆ" ಎಂದು ವಿನಯದಿಂದ ಕೂಡಿದ ಮಿದುಮಾತುಗಳಿಂದ ಎಲ್ಲರನ್ನೂ ಸಂತೈಸಿದ. ಹಿಂತಿರುಗಲು ಯಾರಿಗೂ ಮನಸ್ಸಿಲ್ಲದಿದ್ದರೂ ಆನಂದಾಶ್ರು ಹೊಮ್ಮುತ್ತಿರಲು ಅವರೆಲ್ಲರೂ ವಾಪಸಾದರು. ರಾಮನು ಮುಂದೆ ಮುಂದೆ ಸಾಗುತ್ತಿರುವುದನ್ನು ಕಂಡ ವಿಪ್ರವೃಂದವು ಊರಿಗೆ ಮರಳಲು ಸಾಧ್ಯವಾಗದೆ ಬಹುವಿಧದಿಂದ ಪ್ರಾರ್ಥಿಸತೊಡಗಿದರು: "ಜಾತ್ಯಶ್ವಗಳೇ, ಕಲ್ಲುಮುಳ್ಳುಗಳಿಂದ ಕೂಡಿದ ಈ ದಾರಿಯಲ್ಲಿ ಹಿಂಬಾಲಿಸುವುದು ಬಾಲಕರು ತರುಣರಿಗೇ ಕಷ್ಟಕರವಾಗಿರುವಾಗ ನಮಗಂತೂ ಅಸಾಧ್ಯ. ಈ ರಾಮನು ಬ್ರಾಹ್ಮಣ ಹಿತಕಾರಿ, ಆತನನ್ನು ಬ್ರಾಹ್ಮಣ ಸಂಕುಲವೇ ಹಿಂಬಾಲಿಸಿ ಬರುತ್ತಿದೆ; ನಮ್ಮ ಪ್ರಾರ್ಥನೆಯನ್ನು ಕೇಳಿಸಿಕೊಂಡು ಪಾಲಿಸಿ" ಎಂದು ಜೋರಾಗಿ ಓಡುತ್ತಿದ್ದ ರಥದ ಕುದುರೆಗಳನ್ನುದ್ದೇಶಿಸಿ ಗೋಗರೆದರು. ಹೀಗೆ ವಿಪ್ರಸಮೂಹವು ಹಿಂದೆ ಹಿಂದೆಯೇ ಬರುತ್ತಿರುವುದನ್ನು ಕಂಡ ರಾಮನು ರಥದಿಂದ ಕೆಳಗಿಳಿದು ಕಾಲ್ನಡಿಗೆಯಿಂದ ಬರುತ್ತಿರುವವರನ್ನು ಬಿಟ್ಟು ತಮಸಾನದಿಯ ಕಡೆಗೆ ಸೀತಾಲಕ್ಷ್ಮಣರೊಡನೆ ಮುಂದುವರಿದ. ಕ್ರಮಕ್ರಮೇಣ ನಿಧಾನವಾಗುತ್ತ ಬಂದ ಆ ಬ್ರಾಹ್ಮಣರು, "ವನಜಾಕ್ಷ ರಾಮ, ನಮ್ಮ ಮಾತನ್ನು ಲಾಲಿಸು, ನೀನು ರಾಜ, ಅತಿ ದಯಾವಂತ, ಆರ್ತರಕ್ಷಕ, ವಿನಯದಿಂದ ಎಲ್ಲರನ್ನೂ ರಕ್ಷಿಸುವ ಸದ್ಗುಣಶಾಲಿಯಲ್ಲವೇ? ನಾವೆಲ್ಲ ಪಕ್ವಬುದ್ಧಿಯವರು, ಜ್ಞಾನಾಧಿಕರು, ಕುಲವಂತರು. ನಾವೆಲ್ಲರೂ ನಿನ್ನ ಸದ್ಗುಣಗಳಿಗೆ ಮಾರುವೋಗಿ ಮನೆಗಳನ್ನು ಬಿಟ್ಟು ಬಂದಿದ್ದೇವೆ; ನಮ್ಮ ಹೆಗಲ ಮೇಲೆ ಆರಣಿಗಳ ರೂಪದಲ್ಲಿ ಯಜ್ಞಾಗ್ನಿಯೂ ಬರುತ್ತಿದೆ, ನಿನ್ನ ಗುಣವೆಂಬ ಹಗ್ಗವು ನಮ್ಮನ್ನು ಕಟ್ಟಿ ಎಳೆದು ತಂದಿವೆ. ನಮ್ಮ ಗೃಹಿಣಿಯರು ಮನೆಗಳಲ್ಲಿದ್ದಾರೆ, ಅವರನ್ನು ಬಿಟ್ಟು ಬರುವುದು ಸರಿಯಲ್ಲವಾದರೂ ಯಾಗಗಳನ್ನು ಕಾಪಾಡಲೂ, ಸಂತರ್ಪಣೆಗಳನ್ನು ನಡೆಸಲೂ, ಭುವನಾಧಿಪತ್ಯವನ್ನು ಹೊರಲೂ ವಾಪಸು ಬರುವಂತೆ ನಿನ್ನನ್ನು ಪ್ರಾರ್ಥಿಸಿಕೊಳ್ಳಲೆಂದೇ ಬಂದಿದ್ದೇವೆ. ನೀನು ಮರಳಿ ಬಂದು ಅಖಿಲ ಭೂದೇವತತಿಯನ್ನು ಸಲಹು. ನಿಗಮೋದಿತ ವಿಧಿಗಳು ಕ್ಷತ್ರಿಯರಿಂದ ಫಲಿತವಾಗುತ್ತವೆ, ಅದರಿಂದ ನಮ್ಮ ಕರ್ಮಗಳನ್ನು ಫಲಪ್ರದವಾಗಿಸಲು ನಗರಕ್ಕೆ ಬಂದು ಯುವರಾಜ ಪದವಿಯನ್ನು ಸ್ವೀಕರಿಸಿ ದೇವತೆಗಳನ್ನು ಸಂತಸಗೊಳಿಸು. ಮೃಗಗಳೂ ಪಕ್ಷಿಗಳೂ ಕೀಟಗಳೂ ಸ್ಥಾವರಗಳೂ ನೀನಿಲ್ಲದೆ ತೊಳಲುತ್ತಿವೆ. ನಮ್ಮ ಆರ್ತತೆಯನ್ನು

ಪ್ರತಿಧ್ವನಿಸುತ್ತಿವೆ. ಜಂಗಮಾಜಂಗಮಗಳನ್ನು ಬಳಲಿಸದೆ ಕೃಪೆಯಿಂದ ಹಿಂದುಳಿದು ಕೀರ್ತ್ಯಂಗನೆಯ ಕೈವಿಡಿದು ಗೋದ್ವಿಜವರಕುಲವನ್ನು ರಕ್ಷಿಸು" ಎಂದು ನಾಲ್ಕು ದಿಕ್ಕುಗಳನ್ನೂ ಯಾಚಿಸಿದರು.

ಸ್ವಲ್ಪ ದೂರ ತೆರಳಿದ ಮೇಲೆ ಹಾದಿಯನ್ನು ಅಡ್ಡಗಟ್ಟಿ ನಿಂದ ಪಡಿಬಲದಂತೆ ತಮಸಾನದಿಯು ಹರಿಯುತ್ತಿರುವುದು ಕಾಣಿಸಿತು. ಅಷ್ಟರಲ್ಲಿ ಸೂರ್ಯನ ರಥಾಶ್ವವು ಮೇರುವಿನತ್ತ ಸಾಗಲು, ಸುಮಂತ್ರನು ಕುದುರೆಗಳನ್ನು ರಥದಿಂದ ಬಿಚ್ಚಿ ನದಿಯ ಹತ್ತಿರ ಕರೆದೊಯ್ದು ಅವುಗಳ ಮೈತೊಳೆದು, ನೀರು ಕುಡಿಸಿ ಮೈನೇವರಿಸಿ ಕಡಿವಾಣಗಳನ್ನು ಸಡಿಲಗೊಳಿಸಿ ನದಿದಡದ ಗುಂಟ ಓಡಾಡಿಸಿದ. ಅದನ್ನು ಕಂಡ ರಾಮನು ಸೀತಾಲಕ್ಷ್ಮಣರಿಗೆ ತಮಸೆಯನ್ನು ತೋರಿಸುತ್ತ, "ಹಾಗೆ ಹೀಗೆ ಸಾಗುವ ಕೆಮ್ಮೀನುಗಳ ಸಾಲು, ಜೋರಾಗಿ ಹರಿಯುವ ನೀರಿನಿಂದೇಳುವ ತೆರೆನೊರೆಗಳು, ಗದ್ದಲ ಮಾಡುತ್ತ ಹಾರಾಡುವ ನೀರುಹಕ್ಕಿಗಳು, ಒಳಗೇ ಬುಸುಗುಡುವ ಮೊಸಳೆಗಳು – ಇವುಗಳಿಂದ ಕೂಡಿದ ನದಿಯು ದಿವ್ಯಾಸ್ತ್ರಗಳ ಆಗರವಾಗಿ ಕಾಣುತ್ತಿದೆ" ಎಂದು ಬಣ್ಣಿಸಿದ. ಸುಮಂತ್ರನೆಡೆಗೆ ತಿರುಗಿ, "ಈ ಜಾಗವು ರಮಣೀಯವಾಗಿದೆ. ಇಲ್ಲಿಯೇ ಈ ರಾತ್ರಿಯನ್ನು ಕಳೆಯೋಣ" ಎಂದು ಸೂಚಿಸಿದ. ಆನಂತರ ರಘುವೀರ ಲಕ್ಷ್ಮಣನನ್ನು ಕುರಿತು, "ಎಲೆ ವತ್ಸ, ಇವತ್ತು ವನವಾಸದ ಮೊದಲ ದಿನವಾದ ಕಾರಣ ನಮ್ಮ ಮನಸ್ಸು ಉತ್ಕಂಠತೆಯಿಂದ ಕೂಡಿದೆ; ದುಃಖೋನ್ಮಾದದಿಂದ ಕೂಡಿದ ಮೃಗಪಕ್ಷಿಗಳು ತಮ್ಮ ನೆಲೆಗಳಿಗೆ ಬೇಗನೇ ಸಾಗುವಂತೆ ತೋರುತ್ತಿವೆ. ಜನಶೂನ್ಯ ಅಯೋಧ್ಯೆಯಲ್ಲಿ ಸ್ತ್ರೀಬಾಲರು, ನಮ್ಮ ತಂದೆತಾಯ್ಗಳು ನಮ್ಮನ್ನು ನೆನೆಸಿಕೊಂಡು ಮರುಗುತ್ತಿರುತ್ತಾರೆ. ಧಾರ್ಮಿಕ ಶಿಖಾಮಣಿಯಾದ ಭರತನು ಅವರನ್ನೆಲ್ಲ ಸಮಾಧಾನಪಡಿಸುತ್ತಿರುತ್ತಾನೆ. ಈ ರಾತ್ರಿ ನಾವು ಮೈಮರೆತು ನಿದ್ರಿಸುವುದು ತರವಲ್ಲ; ಹಾಗಾಗಿ ಎಚ್ಚರದಿಂದಿರಬೇಕು" ಎಂದು ಹೇಳಿದ. ಆ ಬಳಿಕ ಸುಮಂತ್ರನನ್ನು ಕುರಿತು ರಾಮನು ಅತಿ ವಿನಯದಿಂದ, "ರಥಕುದುರೆಗಳನ್ನು ಜತನದಿಂದ ಕಾಪಾಡಬೇಕು. ಈ ರಾತ್ರಿ ನಾವು ನೀರನ್ನಷ್ಟೇ ಕುಡಿದು ಕಾಲ ಹಾಕಬೇಕು" ಎಂದು ಹೇಳಿ ಚಿಗುರಿನ ಹಾಸಿನ ಮೇಲೆ ಉರುಳಿಕೊಂಡ. 'ಜಗದೀಶನಾದರೂ ಪ್ರಾರಬ್ಧವನ್ನು ಮೀರುವುದು ಜಗತ್ತಿನಲ್ಲಿ ಅತಿ ದುಷ್ಕರ' ಎಂಬುದನ್ನು ತೋರಿಸುವಂತೆ ಶ್ರೀರಾಮನು ಮೃದುಶಯ್ಯೆಯನ್ನು ಬಿಟ್ಟು ಎಲೆವಾಸಿನ ಮೇಲೆ ಮಲಗಿದ, ನೀರನ್ನು ಕುಡಿದು ಹಸಿವಾರಿಸಿಕೊಂಡ ಎಂದ ಮೇಲೆ ಸಾಮಾನ್ಯರ ಪಾಡೇನು? ವಿಧಿಕೃತವನ್ನು ಮೀರುವುದು ಸಾಧ್ಯವೇ?' ಎಂದುಕೊಳ್ಳುತ್ತ ಸುಮಂತ್ರನೂ ಸೌಮಿತ್ರಿಯೂ ರಾಮನ ಪಾದಮೂಲದಲ್ಲಿ ಕಾವಲು ಕೂತರು. ನೀರ ಆಹಾರದಿಂದ ಚಿಗುರಿನ ಹಾಸಿನಲ್ಲಿ ಹೆಂಡತಿಯೊಡನೆ ರಾಮನು ಮಲಗಿರಲು, ಲಕ್ಷ್ಮಣನು ಹೃದಯದ ಅನುತಾಪದಿಂದ ಸೂತನೊಡನೆ, "ಈ ರಾಜಶ್ರೇಷ್ಠನಿಗೆ ಕೈಕೇಯಿಯ ಕಾರಣದಿಂದ ಈ ಸ್ಥಿತಿ ಬಂತು" ಎಂದು ಹೇಳಿ ರಾಘವನ ಸದ್ಗುಣಗಳನ್ನು ಹೊಗಳುತ್ತ ಚಂದ್ರನು ಅಸ್ತಮಿಸುವವರೆಗೂ ಇಬ್ಬರೂ ಆ ಇರುಳು ಪೂರ್ತಿ ಎಚ್ಚರದಿಂದಿದ್ದರು.

ಅಷ್ಟರಲ್ಲಿ ರಾಮನಿಗೆ ಎಚ್ಚರವಾಯಿತು. ಆತನು ಮೂಡು ದಿಕ್ಕನ್ನು ದಿಟ್ಟಿಸಿ ಲಕ್ಷ್ಮಣನನ್ನು ಕರೆದು ಮೆಲುವಾಗಿ, "ಸ್ತ್ರೀಪುರುಷರಾದಿಯಾಗಿ ಬಹಳ ಜನರು ನಮ್ಮ ಹಿಂದೆಯೇ ಬಂದು

ಅಲ್ಲಲ್ಲಿ ಚಳಿಯನ್ನನುಭವಿಸುತ್ತ ಒಬ್ಬರೊಬ್ಬರ ಎದೆಗೆ ಒರಗಿಕೊಂಡಿದ್ದಾರೆ, ನೋಡು. ತಂದೆ ತಾಯ್ಗಳೂ ಈಗಲೂ ನಮ್ಮನ್ನು ನೆನೆಸಿಕೊಂಡು ಶೋಕಿಸುತ್ತಿರುತ್ತಾರೆ. ಅಪಾರ ದುಃಖ ತುಂಬಿಕೊಂಡು ತಾಯ್ತಂದೆಯರು ಅತೀವ ಸಂಕ್ಲೇಶದಿಂದ ಕಣ್ಣೀರು ಸುರಿಸುತ್ತ ಜಡರಂತೆ ಕುರುಡರಂತೆ ಇದ್ದರೆ, ಭರತನು ಧರ್ಮವನ್ನನುಸರಿಸುತ್ತ ಸಮಾಧಾನ ಮಾಡುತ್ತಿರುತ್ತಾನೆ. ಕರುಣಾಕರನಾದ ಸೂರ್ಯನು ಉದಯಿಸಲು ಈ ಜನರು ಶೋಕಕ್ಕೊಳಗಾಗುತ್ತಾರೆ. ಆದ್ದರಿಂದ ನಾವು ಇಲ್ಲಿಂದ ಹೊರಟುಬಿಡಬೇಕು" ಎಂದು ಹೇಳಿದ. ಇದು ಸರಿಯಾದುದೆಂದು ಭಾವಿಸಿದ ಲಕ್ಷ್ಮಣನು ಸುಮಂತ್ರನನ್ನು ಕರೆದು ಅಣ್ಣನು ಹೇಳಿದ್ದನ್ನು ಹೇಳಿ ರಥಕ್ಕೆ ಕುದುರೆಗಳನ್ನು ಹೂಡಿಸಿ ಅಣ್ಣನಿಗೆ ಈ ವಿಷಯವನ್ನು ಅರುಹಿದ. ರಾಮನು ವೈದೇಹಿ ಸೌಮಿತ್ರಿಯೊಡನೆ ರಥವನ್ನು ಹತ್ತಿ ತಮಸಾನದಿಯನ್ನು ದಾಟಿ ಹೊರಟರು. ಜನರಿರುವ ಸ್ಥಳವನ್ನು ಬಿಟ್ಟು ಮುಮ್ಮುಖವಾಗಿ ಶಬ್ದಮಾಡದಂತೆ ಒಂದಷ್ಟು ದೂರ ಹೋಗಿ ಮತ್ತೆ ಹಿಂತಿರುಗಿ ಜನರು ಹಿಂಬಾಲಿಸಲಾರದ ದಾರಿ ಹಿಡಿದು ಹೋಗು ಎಂಬ ರಾಮನ ಆಜ್ಞೆಯನ್ನು ಅನುಸರಿಸಿ ಸೂತನು ರಥವನ್ನು ವೇಗವಾಗಿ ಓಡಿಸಿದ. ಕೆಲವೇ ಕ್ಷಣದಲ್ಲಿ ಜನರು ಕಾಣಲಾರದಷ್ಟು ದೂರ ರಥ ಹೋದ ಮೇಲೆ ಆರಾಮವಾಗಿ ಸರಸದ ಮಾತುಗಳನ್ನಾಡುತ್ತ ಕಾಡಿನ ಸೊಬಗನ್ನು ಸವಿಯುತ್ತ ಪಯಣ ಬೆಳೆಸಿದರು.

ಅಷ್ಟರಲ್ಲಿ ನಿಚ್ಚಳವಾಗಿ ಭಾಸ್ಕರೋದಯವಾಯಿತು. ಇತ್ತ ರಾಮನನ್ನು ಹಿಂಬಾಲಿಸಿ ಬಂದಿದ್ದ ಜನರು ಎಚ್ಚೆತ್ತು ರಾಮನನ್ನು ಎಲ್ಲಿಯೂ ಕಾಣದೆ ಕಂಗಾಲಾದರು. ದಿಕ್ತಟಗಳೇ ಅಳುವಂತೆ ಅವರೆಲ್ಲ ಎಲ್ಲ ದಿಕ್ಕುಗಳಿಗೂ ತಿರುಗಿ ಗೋಳಿಡಲಾರಂಭಿಸಿದರು. ನಿದ್ದೆ ಎಂಬ ತಾಮಸವು ನಮ್ಮನ್ನು ಮೋಸಗೊಳಿಸಿತು ಎಂದು ಬೈದುಕೊಳ್ಳುತ್ತ, ನಮ್ಮ ದುರ್ಬುದ್ಧಿಯನ್ನು ಸುಡಬೇಕು ಎಂದು ಗದ್ಗದದಿಂದ ಮರುಗುತ್ತ ರಾಮನ ಗುಣಗಳನ್ನು ಹೊಗಳಿದರು. ಸರ್ವಜೀವಾನುಕಂಪಿ ಎಲ್ಲಿ ಹೋದ, ರಾಜಮೌಳಿಯು ಎತ್ತ ಹೋದ, ಮಹಾಪರಾಕ್ರಮಿ ನಮ್ಮನ್ನೇಕೆ ಬಿಟ್ಟು ಹೋದ, ರಾಮನಿಗೆ ಭಕ್ತಜನರನ್ನುಳಿದ ಏಕಾಂತ ಸ್ಥಳ ಎಲ್ಲಿಯಾದರೂ ಇರಬಹುದೇ, ಎಲ್ಲ ಜನರನ್ನೂ ಮಕ್ಕಳಂತೆ ಪ್ರೀತಿಯಿಂದ ಮಾತನಾಡಿಸಿ ಯೋಗಕ್ಷೇಮ ವಿಚಾರಿಸುವ ಕರುಣಾಮಯಿ ಎಲ್ಲಿ ಹೋದ ಎಂದು ಜನರೆಲ್ಲ ಕಾಡಿನಲ್ಲೆಲ್ಲ ಹುಡುಕಾಡಿ ನಿರಾಶೆಗೊಂಡರು. ಧನವೇ ನಿಧನ, ಮಹಾಪ್ರಯಾಣವೇ ಶುಭಕರ ಎಂದುಕೊಳ್ಳುತ್ತ ಬೇಗ ಬೇಗೆ ಒಣಕಟ್ಟಿಗೆಗಳನ್ನು ಆರಿಸಿ ತಂದು ಅಗ್ನಿಯನ್ನು ಪ್ರತಿಷ್ಠಾಪಿಸಿ ಒಮ್ಮೆಗೇ ಉರಿಯನ್ನು ಹೊಕ್ಕ ರೀತಿಯಲ್ಲಿ ಜನರೆಲ್ಲ ಬಹುವಿಧ ಪ್ರಲಾಪ ಮಾಡುವರಲ್ಲ, ಇನ್ನು ಹೆತ್ತವರ ಸಂಕಟವನ್ನು ಬಣ್ಣಿಸುವುದು ಮಾನವರಿಗೆ ಸಾಧ್ಯವೇ? ಹೀಗೆ ಜನರು ನಾನಾ ಬಗೆಯಲ್ಲಿ ಪ್ರಲಾಪಿಸುತ್ತ ತೇರು ಹೋಗಿರಬಹುದಾದ ದಿಕ್ಕಿನಲ್ಲಿ ಒಂದಷ್ಟು ದೂರ ಹೋಗಿ ಹುಡುಕಾಡಿ ಎಲ್ಲಿಯೂ ಶ್ರೀರಘುವರನನ್ನು ಕಾಣದೆ ಹತಾಶರಾಗಿ ತಮ್ಮನ್ನು ತಾವು ಧಿಕ್ಕರಿಸಿಕೊಳ್ಳುತ್ತ, ಬೇರೇನೂ ತೋಚದೆ ಜೀವಚ್ಛವಗಳಂತೆ ಊರಿನ ಕಡೆ ಮರಳಿದರು.

ಚಂದ್ರನಿಲ್ಲದ ಆಗಸ, ನೀರಿಲ್ಲದ ಸರೋವರದ ರೂಪವನ್ನು ತಳೆದ ನಗರವನ್ನು ಹೊಕ್ಕ ಜನರು ಎಲ್ಲಿಯೂ ಜನರನ್ನು ಕಾಣದೆ ದುಗುಡದಿಂದ ಕರುಮಾಡಗಳಲ್ಲಿ

ಅಂಗಡಿಬೀದಿಗಳಲ್ಲಿ ಓಡಾಡುತ್ತ ರಾಘವನ ಗುಣಗಳನ್ನು ನೆನೆಸಿಕೊಂಡು ಹಲುಬುತ್ತಿರಲು, ಅಷ್ಟರಲ್ಲಿ ವಾಮದೇವನು ಬಂದ. ಆ ಬ್ರಾಹ್ಮಣಸಮುದಾಯವನ್ನು ನೋಡಿ ಮಂದಹಾಸದಿಂದ ಕೂಡಿ ಮೃದುನುಡಿಗಳಿಂದ, "ಅಖಿಲಾಗಮಜ್ಞರಾದ ನೀವೆಲ್ಲ ಈ ಪರಿಯ ದುಃಖಕ್ಕೊಳಗಾಗಿರುವಿರಲ್ಲ, ಕಾರಣವೇನು?" ಎಂದು ವಿಚಾರಿಸಿದ. ಆಗ ಸಭಾಸದರು, "ಮಹೋದಯರೇ, ಶ್ರೀರಾಮನು ನಾಡನ್ನು ಬಿಟ್ಟು ಕಾಡಿಗೆ ಹೊರಟುಬಿಟ್ಟ, ಇದರಿಂದ ನಮಗೆ ಅತಿಕ್ಲೇಶವುಂಟಾಗಿದೆ" ಎನ್ನಲು ಆ ಯತಿಯು, "ಪರತರ ಪರಾತ್ಪರ, ಪಾವನಕ್ಕೆ ಪಾವನ, ನಿರತಿಶಯ, ನಿರಘ, ನಿತ್ಯಾನಂದ, ನಿರ್ಲೇಪ, ಪರಮಕಾರುಣಿಕ, ಪರಬೊಮ್ಮನು ಈ ಲೋಕವನ್ನು ರಕ್ಷಿಸಲು ಪ್ರತಿಜ್ಞೆ ಮಾಡಿ ಈ ಭೂಮಿಯಲ್ಲಿ ಅವತರಿಸಿ, ದುರುಳರನ್ನು ಸಂಹರಿಸಿ, ಭಜಿಸುವವರ ಇಷ್ಟವನ್ನೀಯಲೋಸುಗ ಮಾನವನಾಗಿ ಸಂಚರಿಸುವ ಆ ಮಹಾಮಹಿಮನ ಮಹಿಮೆಯನ್ನು ನನಗೆ ತಿಳಿದಮಟ್ಟಿಗೆ ವಿವರಿಸುತ್ತೇನೆ. ಹಿಂದೆ ತಮ ಎಂಬ ರಕ್ಕಸನು ದುಷ್ಟತನದಿಂದ ವೇದಗಳನ್ನೆಲ್ಲ ಕದ್ದು ಸಮುದ್ರದಲ್ಲಿ ಮುಳುಗಿಸಿಬಿಟ್ಟ. ಆಗ ದೇವತೆಗಳೆಲ್ಲ ಪ್ರಾರ್ಥಿಸಲು ಪರಬ್ರಹ್ಮನು ಮೀನಿನ ರೂಪವನ್ನು ತಾಳಿ ದಾನವನನ್ನು ಸಂಹರಿಸಿ ವೇದಗಳನ್ನು ಕೈಲಿತ್ತಾಗ ಬ್ರಹ್ಮಾದಿ ದೇವತೆಗಳೆಲ್ಲ ಆತನ ಮಹಿಮೆಯನ್ನು ಸ್ತುತಿಸಿದರು. ಹಾಗೆಯೇ ಮರಣಬಾಧೆಯನ್ನು ಹೋಗಲಾಡಿಸಿ ಅಮರತ್ವವನ್ನು ಪಡೆಯಲು ಮಂದರವನ್ನು ಕ್ಷೀರಸಮುದ್ರದಲ್ಲಿಟ್ಟು ನಾಗರಾಜನನ್ನು ಹಗ್ಗವನ್ನಾಗಿಸಿಕೊಂಡು ಕಡೆಯುತ್ತ ಕೈಬಿಟ್ಟಾಗ ಪರ್ವತವು ಕೆಳಗಿಳಿಯಿತು. ಆಗ ಪರದೇವನು ಪರಮಕೃಪೆಯಿಂದ ಆಮೆಯ ರೂಪವನ್ನು ಧರಿಸಿ ತನ್ನ ಬೆನ್ನಲ್ಲಿ ಗಿರಿಯನ್ನು ಹೊತ್ತು, ದೇವತೆಗಳನ್ನು ಕರೆದು ಅಮೃತವನ್ನೆರೆದು ಬಿಡುಗಣ್ಣರನ್ನು ಪೊರೆದ. ಆ ಮಹಾಮಹಿಮನೇ ಈಗ ರಾಮಚಂದ್ರನಾಗಿದ್ದಾನೆ. ತನ್ನ ಬಲದಿಂದ ಸೊಕ್ಕಿ ಭೂಮಿಯನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು ಹೋದ ಹಿರಣ್ಯಾಕ್ಷನನ್ನು ಕುಕ್ಕಿರಿಯಲು ಹಂದಿಯ ರೂಪವನ್ನು ತಾಳಿ ತನ್ನ ದಾಡೆಗಳಿಂದಲೇ ದೈತೇಯನನ್ನು ಕಡಿದು ತಿರೆಯನ್ನು ಪೊರೆದ ಅತಿಶಯನೇ ಈಗ ರಾಮನಾಗಿ ಜನಿಸಿದ್ದಾನೆ. ಅಗಣಿತ ತಪಸ್ಸಿನಿಂದ ಗಳಿಸಿದ ಬಾಹುಬಲ ಆಧಿಕ್ಯದ ಸತ್ವದಿಂದ ಅಖಿಲದೇವತೆಗಳನ್ನು ಜಗತ್ತಿನಲ್ಲಿ ಇಲ್ಲವಾಗಿಸಿ ಮುಮ್ಮೂರ್ತಿಗಳ ತಂದೆ ತಾನೆಂದು ದ್ವೇಷವನ್ನು ಸಾಧಿಸಲು, ಮಗುವು ಕರೆದಾಗ ಕಂಭದಿಂದ ಮೂಡಿ ಬಂದು ದಾನವನನ್ನು ಸಿಗಿದು ಮಹಿಮೆಯನ್ನು ತೋರಿದ ಕರುಣಾಳುವೂ ನಿಗಮಗೋಚರನೂ ಜಗತ್ಪೂಜ್ಯನೂ ಆದವನು ಈ ರಾಮಚಂದ್ರ. ದೇವೇಂದ್ರನ ಐಶ್ವರ್ಯವನ್ನೆಲ್ಲ ಕಸಿದುಕೊಂಡು ದೇವತೆಗಳಲ್ಲಿ ಒಬ್ಬರೂ ಇಲ್ಲದಂತೆ ಅಡಗಿಸಿದ ಬಲಿಯ ಉಪಟಳದಿಂದ ರೋಸಿಹೋದ ದೇವತೆಗಳು ಬಂದು ಪ್ರಾರ್ಥಿಸಿಕೊಳ್ಳಲು ಬ್ರಾಹ್ಮಣವಟುವಿನ ರೂಪಿನಲ್ಲಿ ಭೂಮಿಯಲ್ಲವತರಿಸಿ ಯಜ್ಞದ ನೆವದಲ್ಲಿ ಹೋಗಿ ಮೂರಡಿ ಭೂಮಿಯನ್ನು ಬೇಡಿ ತ್ರಿವಿಕ್ರಮನಾಗಿ ಬೆಳೆದು ದನುಜನನ್ನು ತುಳಿದು ಇಂದ್ರನ ಸಿರಿಯನ್ನು ವಾಪಸು ಕೊಡಿಸಿದವನು ರಘುರಾಮನೇ ಅಲ್ಲವೇ? ತನ್ನ ಭುಜಬಲದಿಂದ ಸೊಕ್ಕಿನಿಂದ ಕೃತವೀರ್ಯಸುತನು ಬ್ರಾಹ್ಮಣನನ್ನು ಘಾತಿಸಲು ಗಂಡುಗೊಡಲಿಯನ್ನು ಹಿಡಿದು ಇಪ್ಪತ್ತೊಂದು ಬಾರಿ ಸಂಚರಿಸಿ ಕ್ಷತ್ರಿಯಕುಲವನ್ನೇ ತರಿದು ಅವರ ರಕ್ತದಿಂದಲೇ ತರ್ಪಣವಿತ್ತು ಕರುಣೆಯಿಂದ ನೆಲವನ್ನೆಲ್ಲ ದ್ವಿಜರಿಗಿತ್ತ ಪರಶುರಾಮನೇ

ಈ ರಘುವಂಶಸಂಭೂತನಲ್ಲವೇ? ದುರುಳ ದಶಶಿರನ ಉರುಬಿಗೆ ಬೆದರಿ ಬ್ರಹ್ಮಮುಖ್ಯ ಅಮರರು ಬಿನ್ನಪಗೈಯಲು ಮನುಷ್ಯಾಕೃತಿಯಿಂದ ದಶರಥನ ಮಗನಾಗಿ ಹುಟ್ಟಿ, ಮುನಿವರನ ಯಜ್ಞವನ್ನು ರಕ್ಷಿಸಿ, ಹರಧನುಸ್ಸನ್ನು ಮುರಿದು ಧರಣಿಸುತೆಯ ಕೈಹಿಡಿದು, ಕೈಕೇಯಿಯ ಮಾತನ್ನು ನಡೆಸಲೆಂದು ಮನುಷ್ಯರೂಪನಿಂದ ಕಾಡಿನಲ್ಲಿ ಸಂಚರಿಸಲು ಹೋಗಿರುವ ಗತಶೋಕನೂ, ಮೋಹನಿರ್ಲೇಪನೂ, ಚೇತನರೂಪನೂ ಆದ ಅತಿಶಯನಿಗೆ ಕುಂದೆಂಬುದಿದೆಯೇ? ತನ್ನ ಮಾಯೆಯನ್ನು ಹರವಿ ಜನರನ್ನು ಮೋಹಕಗೊಳಿಸಿ ಸಂಚರಿಸುತ್ತಿರುವನಲ್ಲದೆ ಅವನಿಗೆ ಕಷ್ಟವೆಂಬುದಿದೆಯೇ? ತಿಳಿದೂ ತಿಳಿಯದ ರೀತಿಯಲ್ಲಿ ಆತನಿಗಾಗಿ ಕ್ಲೇಶಗೊಳ್ಳುವುದು ಅನುಚಿತ. ಯಾರನ್ನು ನೆನೆಸಿಕೊಂಡರೆ ಪಾಪತತಿಗಳು ಓಡುವವೋ ಅಂತಹ ಮಹಾಪುರುಷನಿಗೆ ವಿಷಯಲೇಪವುಂಟಾಗುವುದೇ?" ಎಂದು ನಿಜತತ್ವವನ್ನು ವಿವರಿಸಿದ. ಇದನ್ನು ಕೇಳಿದ ಎಲ್ಲರೂ ಹರ್ಷ ತಾಳಿ ರಘುವೀರನನ್ನು ಇಂದಿರಾಪತಿಯೆಂದೇ ಭಾವಿಸಿ ಆತನ ಶುಭನಾಮಧ್ಯಾನದಲ್ಲಿ ನಿರತರಾಗಿ ತಮ್ಮ ತಮ್ಮ ಮನೆಗಳಿಗೆ ಹೋಗಿ ಸುಖವಾಗಿದ್ದರು.

ಇತ್ತ ರಘುನಂದನನ್ನು ವೈದೇಹಿ ಲಕ್ಷ್ಮಣರ ಸಮೇತ ಕಾಡಿನ ವಿಲಾಸವಿಭವಗಳನ್ನು ಕಂಡು ಆನಂದಿಸುತ್ತ ಗೋಮತಿಯ ತಟವನ್ನು ತಲುಪಿದರು. ತಿಳಿನೀರಿನಿಂದ ಜುಳುಜುಳು ಹರಿಯುತ್ತಿದ್ದ ಆ ಪಾವನ ನದಿಯನ್ನು ನೋಡಿ ಅದನ್ನು ದಾಟಿ ಬಂದು ಅಭವನ ಮಸ್ತಕಮಾಲೆಯೆನಿಸಿದ ಭಾಗೀರಥಿಯನ್ನು ಕಂಡು ಹರ್ಷಗೊಂಡರು. ನೀರಾನೆಗಳ ಆಟ, ಸುಳಿಯುವ ಸುಳಿದೆರೆಗಳು, ಆಗಸಕ್ಕೇಳುವ ನೀರ ಹನಿಗಳು ಇವುಗಳಿಂದ ನಾದಗೈಯುತ್ತ ರಭಸದಿಂದ ಸರಿಯುವ ಅವಳ ಲೀಲೆಯನ್ನು ಕಂಡು ಆನಂದಿಸುತ್ತ ಶ್ರೀರಾಮಪುರದರಸನು ನಲುಮೆಯಿಂದಿದ್ದನು.

೧೫. ಶ್ರೀರಾಮನು ಏಕಾಂತದಲ್ಲಿ ಸುಮಂತ್ರನಿಗೆ ನಿಜಭಕ್ತಿ ನೆಲೆಯನ್ನು ತಿಳಿಸಿದುದು

ಗಿರಿರಾಜತನುಜೆಯೇ ಕೇಳು, ರಾಘವನು ದಾರಿಯಲ್ಲಿ ಬರುತ್ತ ಹಿಂದೆ ತಿರುಗಿ ತನ್ನ ಊರನ್ನು ನೋಡಿ ಮರುಕದಿಂದ, "ಸುಮಂತ್ರನೇ ನೀನಿನ್ನು ವಾಪಸಾಗು. ನಾವು ಸರಯೂತಟದ ಕಾಡಿನಲ್ಲಿ ಬೇಟೆಯಾಡುತ್ತೇವೆ" ಎಂದು ಅಯೋಧ್ಯಾಮುಖವಾಗಿ ನಿಂತುಕೊಂಡು ಕೈಮುಗಿದು, "ಮನುವಂಶದಧಿದೇವಿ ನಗರಿಣಿ ತಾಯೆ, ಕಾಡನ್ನು ಹೊಗಲು ನಿನ್ನ ಅಪ್ಪಣೆಯನ್ನು ಬೇಡುತ್ತೇನೆ; ಪಿತೃವಾಕ್ಯವನ್ನು ನೆರವೇರಿಸಿ ಮರಳಿ ಬರುತ್ತೇನೆ" ಎಂದು ಕಣ್ಣು ತುಂಬ ನೀರು ತಂದುಕೊಂಡು ನೋಡುತ್ತ, ಜನಪದವನ್ನು ಅನುಕಂಪದಿಂದ ಮಾನಸಿಕವಾಗಿ ಬೀಳ್ಕೊಂಡು ಗಂಗಾತಟಕ್ಕೆ ಮುದದಿಂದ ಹೋದ. ಖಂಡೇಂದುಮೌಳಿಯ ಆ ಶಿರೋರತ್ನಕ್ಕೆ ನಮಸ್ಕರಿಸಿ, ಗಂಡುಗಲಿಯ ಮೃದು ನುಡಿಗಳನ್ನು ಸ್ತುತಿಸಿ ಮುಂದಿದ್ದ ದಿವ್ಯಕಾನನವನ್ನು ನೋಡಿ, ಕೋಗಿಲೆಯ ಕೂಜನ, ಗಿಳಿಗಳಾಲಾಪಗಳನ್ನು ಕೇಳಿ ಅತ್ಯಂತ ಹರುಷವನ್ನು ತಾಳಿ, ರಥವನ್ನು ನಿಲ್ಲಿಸಲು ಸೂತನಿಗೆ

ಆದೇಶಿಸಿದ. ದೇವನದಿಯ ತೀರದಲ್ಲಿ ಕಾಣುವ ಈ ಬನದಲ್ಲಿ ಈ ರಾತ್ರಿಯಿದ್ದು, ನಾಳಿನ ಸೂರ್ಯೋದಯವಾದ ಬಳಿಕ ಮುಂದೆ ಸಾಗುತ್ತೇವೆ ಎಂದು ರಥದಿಂದ ಇಳಿದ ಶ್ರೀರಾಮನು ಇಂಗುಳದ ಮರಗಳ ತೋಪಿನ ಬಳಿ ಹೋಗಿ ಕುಳಿತುಕೊಂಡ. ಕರುಣೆ ತುಂಬಿದ ಮೃದುವಾಣಿಯಿಂದ ಪ್ರೀತಿಯಿಂದ ಸುಮಂತ್ರನನ್ನು ಹತ್ತಿರ ಕರೆದು, "ಧೀಮಂತನೇ ಕೇಳು, ನಗರದಲ್ಲಿ ತಂದೆತಾಯಂದಿರು ವ್ಯಸನದಿಂದಲೂ ಭ್ರಾಮಕತನದಿಂದಲೂ ತೊಳಲುತ್ತಿರುತ್ತಾರೆ. ಅದರಿಂದ ನೀನು ಹೋಗಿ ಸಮಾಧಾನಗೊಳ್ಳುವ ರೀತಿಯಲ್ಲಿ ಹೇಳು" ಎಂದು ಹೇಳಿದ. ಅದನ್ನು ಕೇಳಿದ ಸುಮಂತ್ರನು ಶೋಕಾಕುಲಿತನಾಗುತ್ತ ಗದ್ಗದಕಂಠದಿಂದ, "ದೇವ, ಊರಿಗೆ ವಾಪಸಾಗಲು ಆಜ್ಞಾಪಿಸಿದರೆ ನಾನೇನು ತಾನೇ ಹೇಳಲಿ? ನನಗೆ ನಿನ್ನ ಪಾದಗಳಿರುವೆಡೆಯೇ ಪಾವನವಾದ ಅಯೋಧ್ಯಾನಗರ, ನೀವಿರದಿದ್ದರೆ ಆ ಊರು ಜನಶೂನ್ಯ. ಜೀವವಿಲ್ಲದ ದೇಹವನ್ನು ಹೊಂದಿರುವುದು ಎಂತು? ನಿನ್ನ ಪಾವನವಾದ ಆಕಾರವನ್ನು ಕಾಣದೆ ನಾನು ಹೇಗಿರಬಲ್ಲೆ? ಸದಾ ಭಜಿಸುತ್ತಿದ್ದರೂ ಸನಕಾದಿಗಳಿಗೆ ಲಭಿಸದ ಈ ಪಾದಗಳ ಸಮೀಪದಲ್ಲಿಯೇ ಇರುವ ಪರಮಾನಂದವನ್ನು ಬಿಟ್ಟು ಮತ್ತೆ ಕಾರ್ಯಜಂಜಡವನ್ನು ಧೀಮಂತರಾದವರು ನೆನೆಯುತ್ತಾರೆಯೇ? ಸಿಕ್ಕಿರುವ ನಿಧಿಯನ್ನು ಚೆಲ್ಲಿ ಭಿಕ್ಷಾಟನೆಯಲ್ಲಿ ತೊಡಗಬೇಕೇ? ದೇವನು ಆಜ್ಞಾಪಿಸಿದುದನ್ನು ಮೀರುವುದು ಬ್ರಹ್ಮನಿಗಾದರೂ ಸಾಧ್ಯವೇ? ಭರತನು ನಿನ್ನ ಭಕ್ತಾಗ್ರಗಣ್ಯ, ರಾಜ್ಯಸಿರಿಯನ್ನು ಬಯಸುವವನಲ್ಲ, ತಂದೆ ತಾಯಿ ಧನಧಾನ್ಯ ದೊರೆದೇವತೆ ಎಲ್ಲವೂ ನಿನ್ನ ಪದಸರೋಜಗಳೇ ಎಂದು ಭಾವಿಸಿರುವವನು. ಅಂತಹವನಿಗೆ ಈ ವಿಚಾರವನ್ನು ನಾನು ಹೇಗೆ ತಾನೇ ಹೇಳಲಿ" ಎಂದು ರೋದಿಸತೊಡಗಿದ.

ಹೀಗೆ ಅಮಿತವಾದ ದುಃಖದಿಂದ ಕಲುಷಿತನಾಗಿ ಮುಂದೆ ನಿಂತಿದ್ದ ಸೂತನನ್ನು ರಘುನಂದನನು ಅತ್ಯಂತ ಸ್ನೇಹದಿಂದ, "ನಿನಗೆ ಈ ಚಿಂತೆಯಿಂದ ಏನು ಪ್ರಯೋಜನ? ದೇಹಗಳಿಗೆ ಸಂಯೋಗ ವಿಯೋಗಗಳು ಇರುತ್ತವೆ, ವಸ್ತುಗಳಿಗಲ್ಲ; ಅಂತೆಯೇ ಹರ್ಷದೈನ್ಯಗಳು. ಈ ದ್ವಂದ್ವವನ್ನುಳ್ಳವರೇ ಲೋಕದಲ್ಲಿ ಮೂಢರು. ನಿಸ್ಪೃಹನಾಗಿ ಅನುದಿನವೂ ಭಗವಂತನನ್ನು ಭಜಿಸುತ್ತಿದ್ದರೆ ದುಸ್ಸಹವು ಹೋಗಿ ನಿರ್ವಾಣವೊದಗುತ್ತದೆ. ಈಶ್ವರಾಕೃತಿಯನ್ನೇ ಭಕ್ತಿಯಿಂದ ಅನವರತ ಆಲೋಚಿಸುತ್ತಿದ್ದರೆ ಮುಕ್ತಿಯುಂಟಾಗುತ್ತದೆ" ಎಂದು ತಿಳಿಯ ಹೇಳಿದ. ಆಗ ಸುಮಂತ್ರನು ನಯದಿಂದ, "ಈ ಪರಿಯ ಭಕ್ತಿಯನ್ನು ಬಾಲಾದಿ ಮೂಢರು ಎಲ್ಲಿ ಅರಿಯುವರು? ಇಂತಹ ಭಕ್ತಿಯನ್ನು ನನಗೆ ದಯವಿಟ್ಟು ಉಪದೇಶಿಸು" ಎಂದು ಬೇಡಿಕೊಳ್ಳಲು ರಾಮನು ಹೇಳತೊಡಗಿದ: "ಕೇಳೈ ಸುಮಂತ್ರ, ನನ್ನ ಭಕ್ತಿಯಲ್ಲಿ ಎರಡು ವಿಧ – ಶುದ್ಧ, ಅಶುದ್ಧ; ಕ್ರಿಯಾಮಿಶ್ರ ಹಾಗೂ ಗುಣಮಿಶ್ರ. ಎಲ್ಲವೂ ನನ್ನಿಂದ, ಸರ್ವವೂ ನನ್ನಲ್ಲಿಯೇ ಇರುವುದು, ನನ್ನ ಹೊರತು ಬೇರೇನೂ ಇಲ್ಲ ಎಂಬ ಅರಿವೇ ಮುಕ್ತಿಪ್ರದಾಯಕವಾದ ಶುದ್ಧಭಕ್ತಿ. ನನ್ನ ಕಥಾಶ್ರವಣ, ರತಿ, ಹೊಗಳಿಕೆ, ಸ್ಮರಣೆ, ವಿಮಲಪದಸೇವನೆ, ಅರ್ಚನೆ, ದಾಸ್ಯ, ಸ್ನೇಹ, ಆತ್ಮಮಮತೆ ಎಂಬ ನವವಿಧ ಭಕ್ತಿಗಳೆ ಕ್ರಿಯೆಯಿಂದ ಕೂಡಿದ ಭಕ್ತಿ. ಬ್ರಹ್ಮ ಶಿವ ಮುಂತಾದವರು, ವಾಲ್ಮೀಕಿ, ಸುಮನರು, ಮರಿಚಿ ಪ್ರಜಾಪತಿ, ಸೀತೆ, ಭರತ ಮುಂತಾದವರು ಆ ಕ್ರಮದಲ್ಲಿಯೂ, ಶಬರಿ ಪೌಲಸ್ತ್ಯ

ಮಾರುತಿ ರವಿಜ ಅರುಣಸುತರೆಂಬ ಕ್ರಿಯಾಮಿಶ್ರರೆನಿಸುವ ಭಕ್ತಿಕೋವಿದರ ಮತದಂತೆ ಒಂಬತ್ತು ವಿಧ ಈ ಭಕ್ತಿ. ಇದರಲ್ಲಿ ಸಿಲುಕಿದ ಯಾವನಾದರೂ ಮುಕ್ತನಾಗುತ್ತಾನೆ ಎಂಬುದು ಶ್ರುತಿಶಾಸ್ತ್ರಸಮ್ಮತವಾದುದು. ಈ ವಿಧವಾದ ಗುಣಮಿಶ್ರ ಭಕ್ತಿ ಮೂರು ವಿಧ; ಆ ಭಾವಗಳು ಒಂದೊಂದೂ ಮೂರಾಗಿ ತೋರುತ್ತವೆ. ಅದನ್ನು ವಿಶ್ಲೇಷಿಸಿದರೆ ಗುಣಗಳು ಮೂರು – ಸಾತ್ವಿಕ ರಾಜಸ ಮತ್ತು ತಾಮಸ. ಸಕಲಶಾಸ್ತ್ರಗಳಿಂದ ನಿಶ್ಚಯಿಸಿಕೊಂಡು ಅಕಳಂಕಬುದ್ಧಿಯಿಂದ ತಿಳಿದು ಧ್ಯಾನಿಸಿ ಮುಕ್ತಿಯನ್ನು ಪಡೆಯುವುದು ಸಾತ್ವಿಕ ಸಾತ್ವಿಕ; ಅಖಿಲ ಭೂತಗಳಲ್ಲಿಯೂ ಪ್ರಕಟವಾಗಿರುವ ನನ್ನನ್ನು ಪರೋಕ್ಷದಿಂದ ಭಜಿಸುವ ಯುಕ್ತಿಯೇ ಸಾತ್ವಿಕ ರಾಜಸ; ಜಡಜಂಗಮಪ್ರಕರದಲ್ಲಿರುವ ನನ್ನನ್ನು ತರತಮಭಾವದಿಂದ ತಿಳಿಯುವುದು ಸಾತ್ವಿಕ ತಾಮಸ. ಸದಾ ಕಾಲವೂ ನಿಷ್ಕಾಮಕರ್ಮಗಳನ್ನು ಮಾಡುತ್ತ ಕ್ವಚಿತ್ ಗತಿಯನ್ನನುಸರಿಸಿ ಕಾಮ್ಯಕ್ಕೆ ಆಸೆಪಡುವ ಭಕ್ತಿಯನ್ನು ಹೊಂದಿರುವುದು ರಾಜಸದಲ್ಲಿ ಸಾತ್ವಿಕ; ಮೋಹದಂಭಗಳಲ್ಲಿ ಅತಿಶಯದ ಭೋಗಕ್ಕಾಗಿ ಭಕ್ತಿಯನ್ನು ಮಾಡುವುದೇ ರಾಜಸ ರಾಜಸ; ಹಣದ ಆಕಾಂಕ್ಷೆಯಿಂದಲೂ ಅನಿಷ್ಟನಿವಾರಣೆಗಾಗಿಯೂ ಮಾಡುವ ಭಕ್ತಿ ರಾಜಸ ತಾಮಸ. ಶರೀರಸಂಸಾರಗಳನ್ನು ಪೋಷಿಸಲೋಸುಗ ತೋರಿಕೆ ದಂಬದಿಂದ ಕಠಿಣನೆನಿಸಿ ಶರಣಾಗುವುದು ತಾಮಸ ಸಾತ್ವಿಕ; ಹರ್ಷವನ್ನು ಪಡೆಯುವುದಕ್ಕಾಗಿ ದಂಭದಿಂದ ಮಾಡುವ ಭಕ್ತಿ ತಾಮಸದ ರಾಜಸ; ಮೂರ್ಖ ಆಚಾರ ತನುದಂಡನೆಯ ಶಾಸ್ತ್ರಭಕ್ತಿಯು ತಾಮಸ ತಾಮಸ ಎನ್ನಿಸಿಕೊಳ್ಳುತ್ತದೆ. ಹೀಗೆ ನನ್ನ ಭಕ್ತಿಯಲ್ಲಿ ಅನೇಕ ವಿಧಗಳುಂಟು. ಇವುಗಳನ್ನು ಪರೀಕ್ಷಿಸಿದರೆ ಗುಣಮಿಶ್ರ ಭಕ್ತಿಯಲ್ಲಿ ಹಿರಿದಾದುದು ಸಾತ್ವಿಕ; ಅದರಲ್ಲಿಯೂ ಶ್ರೇಷ್ಠವಾದುದು ಸಾತ್ವಿಕ ಸಾತ್ವಿಕ. ಯಾವ ಭಕ್ತಿಭಾವದಿಂದ ಭಜಿಸಿದರೂ ನಾನು ಹರುಷಗೊಳ್ಳುತ್ತೇನೆ; ಆದರೆ ಸಾತ್ವಿಕರೆಂದರೆ ನನಗೆ ಪರಮಹಿತ, ಅವರು ನನ್ನ ಮಾರ್ಗವನ್ನು ಅರಿತು ಶಾಸ್ತ್ರಾಗಮಗಳನ್ನು ಅನುಸರಿಸುತ್ತ ನನಗೆ ಸಂತುಷ್ಟಿಯನ್ನುಂಟುಮಾಡುತ್ತಾರೆ. ಎಲ್ಲ ಜೀವಿಗಳಲ್ಲಿಯೂ ವಾಸಿಸುವ ಚೈತನ್ಯರೂಪನೇ ನಾನು ಎಂದು ಭಾವಿಸಿ ಭಜಿಸುವವರೇ ಸಾತ್ವಿಕರು; ಸರ್ವಸಂಪತ್ತಿನ ಆಸೆಯಿಂದ ರಾಜಸರು ಬ್ರಹ್ಮನನ್ನು ಪೂಜಿಸುತ್ತಾರೆ; ಭೇತಾಳಪತಿಯನ್ನು ಪೂಜಿಸುವವರು ತಾಮಸರು. ತಾಮಸದಿಂದಲೇ ರಾಜಸವೂ ಬೇರ್ವರಿದು ಹುಟ್ಟುತ್ತದೆ, ಅದರಿಂದ ಸತ್ವವು ಜನಿಸುತ್ತದೆ. ರಾಜಸತಾಮಸಗಳನ್ನು ಕಳೆದು ಸಾತ್ವಿಕವನ್ನು ತಳೆದು ಭಜಿಸುವವನಿಗೆ ನಾನು ಕೈವಲ್ಯವನ್ನೀಯುತ್ತೇನೆ. ಸಾತ್ವಿಕದಲ್ಲಿ ನನ್ನ ಭಕ್ತಿಯು ಬೆಳಗುತ್ತದೆ; ರಾಜಸದಲ್ಲಿ ಭೋಗತೃಪ್ತಿಯುಂಟಾಗುತ್ತದೆ, ಗೀರ್ವಾಣಭೋಗಗಳು ಬೆಳಗುತ್ತವೆ; ತಾಮಸವು ಮೋಹಭಯಗಳನ್ನು ಬೆಳೆಸುತ್ತದೆ, ಆ ಗುಣಗಳು ಹೊಳೆಯುತ್ತವೆ. ಮಾನವನು ಯಾವ ಬಗೆಯ ಆಹಾರವನ್ನು ಸೇವಿಸುತ್ತಾನೆಯೋ ಅದಕ್ಕನುಗುಣವಾಗಿ ದುರ್ವೃತ್ತಿಗಳು ಎರಕಗೊಳ್ಳುತ್ತವೆ, ದೇಹಾಭಿಮಾನಗಳು ಬೆರೆಯುತ್ತವೆ, ಮುಂದಿನ ಸದ್ಗತಿಗೂ ಭಂಗ ಬರುತ್ತದೆ. ಬರಡು ನಾಲಗೆಯ ಚಾಪಲ್ಯವನ್ನು ಹಳಿದರೆ ಉರುತರ ಇಂದ್ರಿಯಗಳನ್ನು ಜಯಿಸಿದಂತೆ, ವಿವೇಕದಿಂದ ಇಂದ್ರಿಯವೈಕಲ್ಯವನ್ನು ಕಳೆದರೆ ಮನಸ್ಸು ನಿರ್ಮಲಗೊಳ್ಳುತ್ತದೆ. ಆ ಕಾರಣದಿಂದ ಸಾತ್ವಿಕಾಹಾರವನ್ನು ಸೇವಿಸಿದರೆ ಹೃದಯವು ನಿರ್ಮಲವಾಗಿ ವೈರಾಗ್ಯವುಂಟಾಗುತ್ತದೆ; ಅದರಿಂದ ದೇಹಾಭಿಮಾನವು ನಾಶಗೊಳ್ಳುತ್ತದೆ. ಅಭಿಮಾನವೇ

ಮಾಯೆ, ಇದೇ ಎಲ್ಲ ಜೀವರನ್ನೂ ಬಂಧಿಸಿ ಅವಿದ್ಯೆಗೆ ಕಾರಣವಾಗುವುದು. ಅದರ ಉದಯವಿಲ್ಲದಿರುವುದೇ ಮುಕ್ತಿ ಎನಿಸಿಕೊಳ್ಳುತ್ತದೆ. ಸುಮಂತ್ರನೇ ಕೇಳು, ಎರಡು ತೆರದ ಅಭಿಮಾನವು ಸಾಮಾನ್ಯ. ಮೊತ್ತ ಮೊದಲಿನದೇ ಶರೀರಾಭಿಮಾನ, ಹೆಂಡತಿಮಕ್ಕಳೆಂಬ ಭ್ರಮೆ; ಎರಡನೆಯದು ಸತ್ವಾಭಿಮಾನ, ಶಾಸ್ತ್ರಸಮ್ಮತವಾದುದು. ದೇಹಾತ್ಮಬುದ್ಧಿಯು ಮೊದಲಿನದು, ವ್ಯಾಪಕವಾದ ಜಾತಿಗೋತ್ರಾತ್ಮಸಂಬಂಧಗಳ ಭ್ರಮೆಯು ಉದಿಸುತ್ತವೆ, ಅಂತಹ ಅಭಿಮಾನವು ಆಧಿಕವಾದುದು. ಪ್ರತಿಜಾತಿಗೂ ವಿಹಿತವಾದುದು ನಿಷೇಧವಾದುದು ಎಂದು ಶಾಸ್ತ್ರಗಳು ಆಚರಣೆಗಳನ್ನು ವಿಧಿಸುತ್ತವೆ: ವಿಹಿತಕರ ಆಚರಣೆ ಪುಣ್ಯಕರ, ಅದನ್ನು ಬಿಟ್ಟರೆ ಪಾಪ. ಪುಣ್ಯಪಾಪಗಳಿಂದಲೇ ಸುಗತಿದುರ್ಗತಿಗಳುಂಟಾಗುತ್ತವೆ. ಅದರಿಂದ ವಿಚಿತ್ರತರವಾದ ಜನ್ಮಗಳುಂಟಾಗುತ್ತವೆ. ಹುಟ್ಟಿದರೆ ಸಾವು ಬೆಂಬಿಡದು; ಸಾವುಂಟಾದರೆ ಮತ್ತೆ ಹುಟ್ಟುವುದು. ಇದು ಸುಜ್ಞಾನದಿಂದಲ್ಲದೆ ಕೊನೆಗೊಳ್ಳದು. ಜೀವಗಳ ಕರ್ಮಕ್ಕನುಗುಣವಾಗಿ ಪಂಚಭೂತಗಳಿಂದೊಡಗೂಡಿದಂತೆ ದೇವದೇವನು ಹೆಣ್ಣು ಗಂಡುಗಳೆಂಬ ಪ್ರಾಣಿಗಳ ದೇಹಗಳನ್ನು ಸೃಷ್ಟಿಸುತ್ತಾನೆ. ಅವುಗಳಲ್ಲಿ ಕುಲಗೋತ್ರ ಸೂತ್ರ ಆಶ್ರಮ ಶಾಖಾ ಶಿಖಾ ನಾಮ ರೂಪ ಕ್ರಿಯಾಭ್ರಾಂತಿಯುಂಟಾಗುವುದು; ತಾಯಿ ತಂಗಿ ಹೆಂಡತಿ ಮಗಳು ಸೊಸೆ, ಹಾಗೆಯೇ ತಂದೆ ಮಗ ಮೊಮ್ಮಗ ಮಾವ ಭಾವಗಳೆಂಬ ಕಲ್ಪನೆಗಳುಂಟಾಗುತ್ತವೆ. ಹೀಗೆ ಕಲ್ಪಿತವಾದ ದೇಹಾಭಿಮಾನವು ಕುಲಗೋತ್ರ ಭ್ರಾಂತಿಯನ್ನೂ, ಪುಣ್ಯಪಾಪಗಳ ಪಾಶಗಳನ್ನೂ ಉಂಟುಮಾಡುತ್ತವೆ ಎಂದು ಶಾಸ್ತ್ರಗಳು ಹೇಳುತ್ತವೆ. ಅವುಗಳ ವಾಸನೆಗಳಿಗೆ ಅಖಿಲ ಜೀವರುಗಳೆಲ್ಲ ಸಿಲುಕಿ ತೊಳಲುತ್ತಾರೆ. ಒಂದೇ ಮನಸ್ಸಿನಿಂದ ನನ್ನನ್ನು ಭಜಿಸುವ ನಿರ್ಮಲ ಮನಸ್ಸಿನವರಿಗೆ ಸಕಲ ಪಾಪಗಳು ಅಳಿದು ಸುಖರಾಶಿಯೊದಗುತ್ತದೆ. ಮೂಳೆ ಚರ್ಮ ನರ ಮಜ್ಜೆ ಮಾಂಸ ರಕ್ತ ಮಲಮೂತ್ರಗಳಿಂದ ಕೂಡಿ ಆಶುಚಿಯಾದದು ಈ ಹೊಲೆದೇಹ; ನೀರ ಗುಳ್ಳೆಯ ಹಾಗೆ ಇದು ಹುಟ್ಟು ಸಾವುಗಳಿಂದ ಕೂಡಿದ ನೀರಿನ ಹಾಗೆ ನಾರುತ್ತದೆ; ಎಷ್ಟೇ ತೀರ್ಥಸ್ನಾನ ಮಾಡಿದರೂ ಹೊಲೆ ಹೋಗಿ ಪಾವಿತ್ರ್ಯ ಹೇಗೆ ತಾನೇ ಬರುತ್ತದೆ? ವಿಲಯ ಅತಿಶಯ ವದಾನುಶ್ರವಿಕ – ಈ ಮೂರು ಗುಣಗಳೂ ತಾದಾರ್ಥ್ಯವನ್ನು ಬೇಡುತ್ತವೆ; ಸ್ಮೃತಿಯು ಅದನ್ನು ಹೇಳುತ್ತದೆ, ಪುರಾಣತತಿಯು ಅದರ ಮಾರ್ಗಾನುಸರಣೆಯನ್ನು ಮಾಡುತ್ತದೆ. ಸುಲಭವಲ್ಲದ ಪರಸ್ಪರವಾದಗಳಿಂದ ಮೋಹಕಗೊಳಿಸಿ ಭ್ರಾಮಕಗೊಳಿಸುತ್ತವೆ. ಕುರುಡರ ಕೈಹಿಡಿದು ಸಲೀಸಾದ ಹಾದಿಯನ್ನು ಕಾಣಬಹುದೇ? ಹಾರುವನು ವೇದಗಳನ್ನು ಬಲ್ಲವನು, ಧರ್ಮಸಾರವನ್ನರಿತವನು. ವೈಷ್ಣವ ಶೈವ ಶಾಕ್ತೇಯ ಹೈರಣ್ಯಗರ್ಭ ಸೌರ ಮುಂತಾದ ಮತಾಚರಣೆಗಳನ್ನು ಮಾಡುತ್ತ ಕ್ರೂರಕರ್ಮವಿಹೀನ ಕೃಪಣ ಶಾಠ್ಯನೆನ್ನುತ್ತ ಜೋರಾಗಿ ಯಜ್ಞಗಳನ್ನು ಮಾಡುವುದರಿಂದ ಪರಮಾರ್ಥಗತಿಗೆ ಏನು ಪ್ರಯೋಜನ? ನಿಗಮಾಗಮ ಪುರಾಣಗಳು, ಇಷ್ಟಪೂರ್ತಿಗಾಗಿ ಮಾಡುವ ಅಗಣಿತ ನೇಮ ದಾನ ಮುಂತಾದವುಗಳಲ್ಲಿ ಸಿಲುಕಿ ಬಗೆಬಗೆಯ ಮಾತುಗಳೆಲ್ಲ ಹುಸಿಯೇ ಸರಿ. ಲೋಕ ದೇಹ ಮುಂತಾದ ವಾಸನೆಗಳನ್ನು ಬದಿಗಿರಿಸಿ, ವೈರಾಗ್ಯವನ್ನು ಅಳವಡಿಸಿಕೊಂಡು, ಮದದಂಭಗಳನ್ನು ಬಿಟ್ಟು ಏಕಾಂತ ಭಕ್ತಿಯಿಂದ ಕೂಡಿದರೆ ನಾನು ಸುಲಭ, ಇಲ್ಲದಿದ್ದರೆ ದುರ್ಲಭ" ಎಂದು ವಿವರವಾಗಿ ನಿರೂಪಿಸಿದ.

ಆಗ ಸುಮಂತ್ರನು ಕರುಣೆಯು ಹೆಚ್ಚಿ, ನಿಜ ತತ್ವ ಸಂಗತಿಗಳನ್ನು ತಿಳಿದು ಜಗದಾರಾಧ್ಯನ ಚರಣಗಳಿಗೆ ಮಣಿದು ಪರಮ ಭಕ್ತಿಯಿಂದ, "ಜಗದೀಶ, ನೀನು ದಯೆಯಿರಿಸಿ ಹೇಳಿದ ಬಗೆಯನ್ನೆಲ್ಲ ಕೇಳಿದೆ. ಏಕಾಂತ ಭಕ್ತಿಯನ್ನು ಬೆಳೆಸಿಕೊಳ್ಳುವುದು ಹೇಗೆ, ತಿಳಿಸಿದರೆ ನಿನ್ನ ಪಾದಾರವಿಂದಗಳನ್ನು ಹೊಂದಿ ಕೃತಾರ್ಥನೆನಿಸುತ್ತೇನೆ" ಎಂದು ಪ್ರಾರ್ಥಿಸಿಕೊಂಡ. ಆಗ ರಘುನಾಥನು, "ವೈರಾಗ್ಯವನ್ನೂ ವಾಸನಾತ್ರಯಗಳನ್ನೂ ಕಳೆದುಕೊಂಡು, ಭೂತಾನುಕಂಪವನ್ನೆಲ್ಲ ತೊರೆದು, ನಿನ್ನೊಳಗೆಯೇ ಇರುವ ಸರ್ವೇಶನಾದ ನನಗೆ ಸದಾ ಕಾಲವೂ ಸಕಲಧರ್ಮಗಳನ್ನೂ ಅರ್ಪಿಸಿ, ನಿಶ್ಚಲವಾದ ಮನಸ್ಸಿನಲ್ಲಿ ನನ್ನನ್ನಿರಿಸಿಕೊಂಡು, ನಿನಗೆ ತಿಳಿದುದನ್ನು ಬೇರೆಯವರಿಗೆ ತಿಳಿಸುತ್ತ, ಹಾಡಿಹೊಗಳುತ್ತ ಹರ್ಷಗೊಳ್ಳುವಾತನಿಗೆ ನಾನು ನಿರ್ಮಲ ಭಕ್ತಿಯನ್ನೂ ಅಕ್ಷಯಪದವನ್ನೂ ಕೊಡುತ್ತೇನೆ. ಪ್ರತಿನಿತ್ಯವೂ ಒಬ್ಬನೇ ಕುಳಿತು ಎದೆಗಣ್ಣಿನಿಂದ ನನ್ನ ಮೂರ್ತಿಯನ್ನೇ ನೋಡಿ ಧ್ಯಾನಮಾಡುತ್ತ, ಹದಿನಾರು ಉಪಚಾರಗಳಿಂದ ಅರ್ಚಿಸುತ್ತ ತನ್ಮಯಾವಸ್ಥೆಯನ್ನು ಸೇರಿ. ತನುಪುಳಕವು ತುಂಬಿ, ಮೈಮರೆತು ನಸುನಗೆಯೊಡನೆ ಕಣ್ಣೀರು ಸುರಿಯುತ್ತಿರಲು, ಅಖಂಡ ಆನಂದಸಾಮ್ರಾಜ್ಯವನ್ನು ಅನುಭವಿಸುವವನೇ ಏಕಾಂತಭಕ್ತ, ಅವನಿಗೆ ಹೊರತಾದುದು ಯಾವುದೂ ಇಲ್ಲ ಎಂದು ತಿಳಿ. ಕಠಿಣ ತಪಃಪರಿಪಾಕದಿಂದ ಹೊಂದಿದ ಭಕ್ತಿಯಿಂದ ನನ್ನನ್ನು ಒಲಿಸಿಕೊಂಡರೆ, ಅದರಿಂದ ಸರ್ವಾತ್ಮನು ನಾನು ಎಂಬ ತಿಳಿವಳಿಕೆಯ ಚೆಲುವಾದ ಸುಜ್ಞಾನಸಂಪತ್ತು ಉಂಟಾಗುತ್ತದೆ; ಅದರ ದೆಸೆಯಿಂದ ವೈರಾಗ್ಯವುದಿಸುತ್ತದೆ; ಅಂತಹವನು ಸದಾನಂದಮಯನಾಗಿ ನೆಲದಲ್ಲಿ ಸಂಚರಿಸುತ್ತಾನೆ. ಅವನು ನನ್ನ ಮಾಯೆಯನ್ನು ಗೆದ್ದು ಸುಖವಾಗಿರುತ್ತಾನೆ. ಪ್ರಾರಬ್ಧವನ್ನು ನೀಗಿಕೊಳ್ಳಬಯಸುವವನಿಗೆ ಇದು ಸಿದ್ಧಾಂತ" ಎಂದು ವಿವರಿಸಿದ. ಹೀಗೆ ತಾವರೆಗಣ್ಣನು ಪ್ರೇಮದಿಂದ ಒಲಿದು ತತ್ವವನ್ನು ಬಿಡಿಸಿ ತಿಳಿಸಿದ ಆ ಮೃದೂಕ್ತಿಗಳು ಸೂತನ ತಾಮಸೀಬುದ್ಧಿಯನ್ನು ಹೋಗಲಾಡಿಸಿ ನಿಬಿಡ ಆನಂದವನ್ನು ಉಣ್ಣಿಸಲು, ಸುಮಂತ್ರನು ರಾಮಪುರದರಸನನ್ನು ಅತೀವ ಭಕ್ತಿಯಿಂದ ಸ್ತುತಿಸಿ ನಮಿಸಿ, ಮಾತುಗಳು ಹೊರಡದೆ ಬ್ರಹ್ಮಾನಂದವನ್ನು ಅನುಭವಿಸಿದ.

೧೬. ದೇವನದಿಯನ್ನು ದಾಟಿಸಿದ ಅಂಬಿಗನಿಗೆ ರಾಮನು ಪ್ರೀತಿ ತೋರಿಸಿ ವಿಪ್ರೋತ್ತಮರನ್ನು ಉಪಚರಿಸಿದುದು

ಗಿರಿಜೆ ಮುಂದಾದುನ್ನು ಹೇಳುತ್ತೇನೆ, ಕೇಳು. ರಾಮನು ಸೂತನಿಗೆ ಹೀಗೆ ಏಕಾಂತಭಕ್ತಿಯ ಸ್ವರೂಪ ಮತ್ತು ಮಹತ್ವಗಳನ್ನು ತಿಳಿಸಲು, ಸುಮಂತ್ರನು ಪರಮಾನಂದಭರಿತನಾಗಿ ಹಾಡಿಹೊಗಳುತ್ತ ದೇವನ ಅಡಿಗಳಿಗೆರಗಿ ಅಯೋಧ್ಯೆಗೆ ವಾಪಸಾದ. ಇತ್ತ ರಘುವರನು ದೇವನದಿಯನ್ನು ನೋಡಿ ಸಂತಸಗೊಂಡು ಸೌಮಿತ್ರಿಯನ್ನು ಕರೆದು ರಾತ್ರಿಯನ್ನು ಕಳೆಯಲು ಈ ತಾಣವು ರಮ್ಯವಾಗಿದೆ ಎಂದು ಹೇಳಿದ. ಅದನ್ನು ಕೇಳಿದ ಲಕ್ಷ್ಮಣನು ಕಾಡಿನೊಳಗೆ ಹೊಕ್ಕು ಎಲ್ಲ ಕಡೆಯೂ ಕಣ್ಣು ಹಾಯಿಸಿದಾಗ ಅವನಿಗೆ ಅತೀವ ಮುದವೆನಿಸಿತು. ಅದರಲ್ಲಿ ಒಂದು ಇಂಗುದಿಮರದ

ಕೆಳಗೆ ಒಂದು ಎಲೆವನೆಯನ್ನು ನಿರ್ಮಿಸಿ ಬಂದು ಅದನ್ನು ಅಣ್ಣನಿಗೆ ತಿಳಿಸಿದ; ಶ್ರೀರಾಮನು ಜಾನಕಿಯೊಡನೆ ಬಂದು ಮರದ ನೆರಳಿನಲ್ಲಿ ಎಳೆಚಿಗುರಿನ ಹಾಸಿನ ಮೇಲೆ ಕುಳಿತ. ಅಷ್ಟರಲ್ಲಿ ರಾಮನು ಬಂದಿರುವ ವಿಷಯವನ್ನು ತನ್ನ ಜನರಿಂದ ಅರಿತ ಬೇಡರೊಡೆಯ ಗುಹನು ಆನಂದಭರಿತನಾಗಿ ಅಸಂಖ್ಯ ಕುದುರೆಗಳು ಹಾಗೂ ಅಸಂಖ್ಯಾತ ಧನುರ್ಧರರಾದ ಭಟರು ಹಾಗೂ ಅಧಿಕ ಸಂಖ್ಯೆಯ ರಥಗಳನ್ನು ಸಿದ್ಧಪಡಿಸಿ, ಅವುಗಳೊಡನೆ ಜೇನುತುಪ್ಪ, ಗೆಡ್ಡೆಗೆಣಸು ಮುಂತಾದವುಗಳನ್ನು ಸಂಗ್ರಹಿಸಿಕೊಂಡು ರಘುರಾಮನನ್ನು ಕಾಣಲು ಬಂದ. ದೇವನಿಗೆ ದೀರ್ಘದಂಡ ನಮಸ್ಕಾರ ಮಾಡಿ ತಾನು ತಂದ ಕಾಣಿಕೆಗಳನ್ನು ರಾಮನ ಮುಂದಿರಿಸಿ, "ದೇವೋತ್ತಮನೆ, ಜಗನ್ನಾಥನೇ, ಕೋದಂಡಧರನೇ, ನಿನ್ನ ದಾಸನಾದ ನಾನು ಬಂದಿದ್ದೇನೆ, ನನ್ನನ್ನು ಹರಸು. ನಾನು, ನನ್ನ ಹೆಂಡತಿ ಮಕ್ಕಳು, ಈ ರಾಜ್ಯ, ಆನೆಕುದುರೆಹಸುಗಳು – ಇವೆಲ್ಲವನ್ನೂ ಭಾವವಾಚಕಕಾಯಕಗಳಿಂದ ನಾನು ಗಳಿಸಿದ ಪುಣ್ಯವೆಲ್ಲವನ್ನೂ ನಿನ್ನ ಪಾವನಶ್ರೀಚರಣಗಳಿಗೆ ಸಮರ್ಪಿಸಿದ್ದೇನೆ. ಸನಕಾದಿಗಳು ಅರಿಯದ ಸುಮೂರ್ತಿಯನ್ನು ಕಾಣುವ ಭಾಗ್ಯ ಇಂದು ನನ್ನದಾಯಿತು, ನಾನು ನಿನ್ನ ಮೊರೆವೊಕ್ಕಿದ್ದೇನೆ, ಸಲಹು" ಎಂದು ತಂದುದೆಲ್ಲವನ್ನೂ ರಘುನಾಥನಿಗೆ ಅರ್ಪಿಸಿ ಕೈಮುಗಿದು ನಿಂತುಕೊಂಡು ಕಣ್ಣುಗಳಲ್ಲಿ ಆನಂದಬಿಂದುಗಳನ್ನು ಉದುರಿಸಿ ಭಕ್ತಿಯಿಂದ ಸ್ತುತಿಸಿದ. ಅದನ್ನು ಕೇಳಿದ ರಾಮನು ಅತುಲಪ್ರೇಮದಿಂದ ಆ ಕಿರಾತನನ್ನು ಸಮಾಧಾನಪಡಿಸಿ, "ಈ ಭೂಮಿಯಲ್ಲಿ ಸಾವಿರದಲ್ಲೊಬ್ಬನಿಗೆ ನನ್ನ ನಿಜವಾದ ಭಕ್ತಿ ಉದಿಸುತ್ತದೆ, ಅಂತಹ ಭಕ್ತಿಯಿಂದ ಅವನು ಅಗ್ಗಳನೆನಿಸುತ್ತಾನೆ, ವ್ರತಾದಿಗಳಿಂದ ಪಾವನನಾಗುತ್ತಾನೆ. ಕ್ಷುದ್ರಯೋನಿಜರಾದರೂ ನನ್ನಲ್ಲಿ ಸದ್ಭಕ್ತಿಯನ್ನು ಹೊಂದಿದರೆ ಪರಿಶುದ್ಧನೆನಿಸುತ್ತಾನೆ, ಅಂತಹವನು ನಿಗಮಾಚಾರನಾದ ಕರ್ಮಸತ್ಯವ್ರತಾಚಾರಿಯಾಧ ವಿಪ್ರೋತ್ತಮನಿಗಿಂತ ಅಧಿಕನಾಗುತ್ತಾನೆ. ಜಾತಿವರ್ಣಾಶ್ರಮಾಚಾರದ ಅಭಿಮಾನಿಗಳಿಗಾಗಲೀ ತರ್ಕಶಾಸ್ತ್ರಕರ್ಮಾಚಾರರತರಿಗಾಗಲೀ ಭಕ್ತಿ ಹುಟ್ಟಲಾರದು; ಯಾಗ ಯೋಗ ಸ್ವಾಧ್ಯಾಯ ತೀರ್ಥಸ್ನಾನಗಳಾಗಲೀ ಅವರನ್ನು ಪವಿತ್ರಗೊಳಿಸಲಾರದು. ಭೂತಳದಲ್ಲಿ ನನ್ನ ಭಕ್ತಿ ಹುಟ್ಟುವುದು ಪುಣ್ಯಪರಿಪಾಕದಿಂದ, ಅಂತಹವನಿಗೆ ಕರ್ಮ ಯೋಗ ಮುಂತಾದ ಜಂಜಡಗಳ ಆವಶ್ಯಕತೆಯಿಲ್ಲ. ನಾನಾ ಬಗೆಯ ಕರ್ಮಗಳು ಮತ್ತು ಅಭಿಮಾನಗಳನ್ನು ಬಿಟ್ಟು ನಲವಿನಿಂದ ಕೂಡಿದ ಸರಿಯಾದ ಭಕ್ತಿಗೆ ನಾನು ಸುಲಭ" ಎಂದು ನಯವಾದ ಮಾತುಗಳಿಂದ ವಿವರಿಸಿದ.


ಈ ಮಾತುಗಳಿಂದ ಗುಹನು ಆನಂದತುಂದಿಲನಾದ. ಆನಂತರ ದೂರದಲ್ಲಿ ಕೈಮುಗಿದು ನಿಂತುಕೊಂಡು, "ನನ್ನೊಡನೆ ಬಂದಿರುವ ಆನೆ ಕುದುರೆ ರಥ ಪದಾತಿಗಳನ್ನೂ ಸಿರಿಯನ್ನೂ ನಿನ್ನ ಪಾದಗಳಿಗೆ ಒಪ್ಪಿಸಿದ್ದೇನೆ, ಅದನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿಸು" ಎಂದು ಬೇಡಿಕೊಂಡ. ಅವನನ್ನು ಕಕ್ಕುಲತೆಯಿಂದ ನೋಡಿ ಶ್ರೀರಾಮನು, "ಗುಹನೇ, ನಿನ್ನ ಮಾತುಗಳನ್ನು ಕೇಳಿ, ನಿನ್ನ ಸನ್ಮಾನವನ್ನು ಕಂಡು ನಾನು ಸಂಪ್ರೀತರಾಗಿದ್ದೇನೆ. ನಿನ್ನನ್ನು ನೋಡಿ ನನ್ನ ಕಣ್ಣುಗಳಿಗೆ ಹಬ್ಬವಾಗಿದೆ. ನಿನ್ನ ಒಡಹುಟ್ಟಿದವರೂ, ಹೆಂಡತಿ ಮಕ್ಕಳೂ, ಬಂಧುಬಾಂಧವರೂ ಆರೋಗ್ಯದಿಂದಿರುವರೇ?" ಎಂದು ಪ್ರೀತಿಯಿಂದ ಗುಹನನ್ನು

ವಾತ್ಸಲ್ಯದಿಂದ ತೆಗೆದಪ್ಪಿಕೊಂಡು ಆನಂದಿಸಿದ. ಆನಂತರ, "ನಿನ್ನ ಮನಸ್ಸಿನಲ್ಲಿ ನನ್ನ ಬಗ್ಗೆಯಿರುವ ಪ್ರೀತಿಯ ಬಗೆಯನ್ನು ನಾನು ಬಲ್ಲೆ. ನಿನ್ನ ಆಧಿಪತ್ಯದ ಐಶ್ವರ್ಯವೆಲ್ಲ ನನ್ನದೇ ಎಂದು ತಿಳಿ. ನಾನು ನನ್ನ ತಂದೆಯ ಆಜ್ಞೆಯಂತೆ ಮುನಿವೇಷವನ್ನು ತೊಟ್ಟು ಹದಿನಾಲ್ಕು ವರುಷಗಳ ಕಾಲ ಕಾಡಿನಲ್ಲಿ ವಾಸಿಸಲು ನಿರ್ಧರಿಸಿದ್ದೇನೆ. ಆ ವ್ರತಕ್ಕೆ ಊನ ಬರಬಾರದಲ್ಲವೇ? ಆದ ಕಾರಣ, ನೀನು ತಂದಿರುವ ಸಕಲ ಸಾಮಗ್ರಿಗಳನ್ನು ವಾಪಸ್ಸು ಕಳಿಸು. ನಿನ್ನ ಭಕ್ತಿಯಿಂದಲೇ ನಾನು ಪ್ರೀತನಾಗಿದ್ದೇನೆ" ಎಂದು ಆಜ್ಞಾಪಿಸಲು ಗುಹನು ಅಂತೆಯೇ ಮಾಡಿದ. ಅಷ್ಟರಲ್ಲಿ ಸಂಜೆಯಾಯಿತು. ಶ್ರೀರಾಮನ ಸಂಧ್ಯಾಕಾರ್ಯಗಳನ್ನು ಮುಗಿಸಿ ಮರದ ನೆರಳಿಗೆ ಬಂದ. ಆಗ ಲಕ್ಷ್ಮಣನೂ ದೇವಗಂಗಾನದಿಯಲ್ಲಿ ಕಾಲುಗಳನ್ನು ತೊಳೆದುಕೊಂಡು, ಪಾವನತೀರ್ಥವನ್ನು ತೆಗೆದುಕೊಂಡು, ಅತ್ತಿಗೆಯ ಪಾದಗಳಿಗೆ ನಮಸ್ಕರಿಸಿ ಗಂಗೆಯ ನೀರನ್ನು ತಂದಿತ್ತ. ಅದನ್ನು ಕುಡಿದ ಶ್ರೀರಾಮನು ಸೀತೆಯೊಡನೆ ತಳಿರ್ವಾಸಿನ ಬಳಿ ಬಂದು ಕುಳ್ಳಿರಲು, ಲಕ್ಷ್ಮಣನು ಸ್ವಲ್ಪ ದೂರದಲ್ಲಿ ನಾಲ್ಕೂ ದಿಕ್ಕುಗಳನ್ನು ನಿಟ್ಟಿಸುತ್ತ ನಿಂತ. ಅದನ್ನು ನೋಡಿದ ಗುಹನು ಅವನ ಬಳಿ ಬಂದು, "ದೇವ, ನಿನಗೆಂದೇ ನಾನು ಹಾಸಿಗೆಗಳನ್ನೂ, ಶ್ರೇಷ್ಠವಾದ ಆಹಾರವನ್ನೂ ತಂದಿದ್ದೇನೆ. ಅವುಗಳನ್ನು ಸ್ವೀಕರಿಸಿ ನನ್ನನ್ನು ಉದ್ಧರಿಸು. ಈ ರಾತ್ರಿ ಪೂರ್ತಿ ನಾನು ಎಚ್ಚರವಾಗಿದ್ದು, ನಿಮಗೆ ಲೇಶಮಾತ್ರವಾದರೂ ತೊಂದರೆ ಆಗದಂತೆ ಕಾವಲಿಗಿರುತ್ತೇನೆ. ನನಗೆ ಇಲ್ಲಿನ ವನಚರರೆಲ್ಲರೂ ತಿಳಿದಿರುವವರೇ" ಎಂದು ಬೇಡಿಕೊಂಡ. ಆಗ ಸೌಮಿತ್ರಿಯು ನಯದಿಂದ, "ಗುಹನೇ, ನಿನಗಿಂತ ದೊಡ್ಡ ಗೆಳೆಯ ನನಗೆ ಯಾರಿದ್ದಾರೆ? ಮಹಾರಾಜಾಧಿರಾಜನಾದ ದಶರಥನು ರಾಜೋಪಭೋಗಗಳನ್ನು ತೊರೆದು ಶ್ರೀರಾಮನು ತಾಪಸರ ಹಾಗೆ ಮರದ ನೆರಳಿನಲ್ಲಿರುವುದನ್ನೇ ನೆನೆನೆನೆದು ಬಹು ಬೇಗ ದೇಹವನ್ನು ತೊರೆಯುತ್ತಾನೆ; ಅವನನ್ನು ತಾಯಿ ಕೌಸಲ್ಯೆಯೂ ಅನುಸರಿಸುತ್ತಿರುತ್ತಾಳೆ, ನನ್ನ ಅಮ್ಮನೂ ಅವಳೊಡನೆಯೇ ಹೋಗುತ್ತಾಳೆ, ಅಥವಾ ಶತ್ರುಘ್ನನಿರುವನಲ್ಲ ಎಂದು ನನ್ನ ತಾಯಿ ಬದುಕಬಹುದು. ನಗರದ ಜನತೆಯೆಲ್ಲ ಕಂಗೆಟ್ಟು ಹೋಗುತ್ತದೆ. ಹೀಗೆ ಎಲ್ಲರನ್ನೂ ಚಿಂತಾನಿಚಯವು ಆವರಿಸಿರಲು ನಿದ್ದೆಯ ಸೌಖ್ಯ ಎಲ್ಲಿಯದು? ಹದಿನಾಲ್ಕು ಲೋಕಗಳ ಒಡೆಯನಾದವನಿಗೇ ವಿಧಿಯನ್ನು ಮೀರಲು ಸಾಧ್ಯವಿಲ್ಲ. ಹೀಗಾಗಿ ಭ್ರಾಂತಿಗೊಂಡು ಏನು ತಾನೇ ಪ್ರಯೋಜನ?" ಎಂದು ಸಮಾಧಾನ ಮಾಡಲು ಗುಹನು ಸಂತಾಪದಿಂದ ಮರುಗುತ್ತ ಗಂಡು ಜಿಂಕೆಯಂತೆ ದೈನ್ಯತೆಯನ್ನು ಹೊಂದಿದ.

ಕಂಬನಿಗರೆಯುತ್ತ ಉಸಿರೆತ್ತಲೂ ಆಗದೆ ಸಂಕಟಪಡುವ ಗುಹನನ್ನು ನೋಡಿ ಲಕ್ಷ್ಮಣನು ತನ್ನಲ್ಲಿಯೇ, 'ಹೆರರ ನೋವು ತನ್ನದೆಂದು ಭಾವಿಸುತ್ತ ಸಂಕಟಗೊಳ್ಳುವ ನೀನು ನಿಜವಾದ ಮಹಾಪುರುಷ, ಕರುಣಾಳುಗಳಲ್ಲಿ ಅಧಿಕನಾದವನು, ಆತನು ಅನುಭವಿಸುವ ತಾಪವನ್ನು ಹೊರಚೆಲ್ಲಬೇಕು' ಎಂದು ನಿಶ್ಚಯಿಸಿ ಗುಹನಿಗೆ ಹೀಗೆಂದ: "ನಿರ್ಮಲಚಿತ್ತನಾದ ಗೆಳೆಯನೇ, ನೀನೇಕೆ ಅಳುತ್ತಿದ್ದೀಯೆ? ಶ್ರೀರಾಮನೆಂದರೆ ಪರಬ್ರಹ್ಮನೇ ಆಗಿದ್ದಾನೆ. ಭೂಭಾರವನ್ನು ಇಳುಹಲೆಂದೇ ಮನುಜಾಕಾರವೆತ್ತು ಮನುಷ್ಯನಂತೆ ಕಾಣುತ್ತಿದ್ದಾನೆ. ಬೆಳಕು ಎಂದಾದರೂ ಕತ್ತಲೆಯಲ್ಲಿ ಸಿಲುಕುತ್ತದೆಯೇ? ರಘುವೀರನು

ನರರ ಹಾಗೆ ಎಂದಾದರೂ ದುಃಖ ಕೋಟಲೆಗಳಲ್ಲಿ ತೊಳಲುತ್ತಾನೆಯೇ? ಅದನ್ನು ತಿಳಿಯದೆ ನೀನು ಅನವಶ್ಯಕವಾಗಿ ಸಂಕಟಪಡುತ್ತಿದ್ದೀಯೆ? ಯಾರಾದರೂ ವಿಧಿಯನ್ನು ಮೀರಲಳವೇ? ಯಾರಿಂದಲೋ ದುಃಖವುಂಟಾಗಿದೆ ಎಂಬುದೇ ಭ್ರಾಂತಿ; ನನ್ನಿದ ಸುಖವುಂಟಾಗುತ್ತದೆ ಎಂಬುದು ಬರಿದು ಅಭಿಮಾನ. ಯಾರಿಂದಲೂ ಉಪಕಾರ ಅಪಕಾರ ಎರಡೂ ಆಗುವುದು ಸಾಧ್ಯವಿಲ್ಲ. ಪ್ರತಿ ಜೀವಿಯೂ ಪ್ರಾರಬ್ಧಕಾರಣ ಎಂಬ ಹಗ್ಗದಿಂದ ಬಂಧಿತನಾಗಿದ್ದಾನೆ. ಪುಣ್ಯಪಾಪಗಳಿಂದ ಸುಖದುಃಖಗಳು ಉದಿಸುತ್ತವೆ. ಒಂದು ಇನ್ನೊಂದನ್ನು ಬಿಟ್ಟಿರಲಾರದು; ದಿನರಾತ್ರಿಗಳಂತಿರುವ ಇವುಗಳನ್ನು ಮೀರುವುದು ಹದಿನಾಲ್ಕು ಲೋಕದಲ್ಲಿ ಯಾರಿಂದಲೂ ಸಾಧ್ಯವಿಲ್ಲ. ನೀರಿನಲ್ಲಿ ಕೆಸರು, ಕೆಸರಿನಲ್ಲಿ ನೀರು ಇರುವಂತೆ ಸುಖದ ನಡುವೆ ದುಃಖ, ದುಃಖದ ನಡುವೆ ಸುಖ ಇರುತ್ತದೆ. ಪೂರ್ವಪ್ರಾರಬ್ಧವನ್ನು ಅನುಭವಿಸಿದಲ್ಲದೆ ಅದು ತೀರದು. ಯಾರೂ ಏನೂ ಮಾಡಲಾರರು. ಅದಕ್ಕಾಗಿ ಮರುಗಿ ಮಾಡುವುದೇನು? ಲೋಕಗಳನ್ನೆಲ್ಲ ಸೃಷ್ಟಿಸಿ ಪಾಲಿಸುವವನು ಮನುಷ್ಯ ದೇಹವನ್ನು ಧರಿಸಿರುವ ಎಲ್ಲರಲ್ಲೂ ಇರುವ ಈ ಚಿನ್ಮಯನು ಲೋಕದ ನಡೆಯಂತೆ ಪ್ರಾರಬ್ಧವನ್ನು ಮೀರಬಾರದೆಂಬುದನ್ನು ತೋರಿಸಲೋಸುಗ ಹೀಗಿದ್ದಾನೆ. ಸೂರ್ಯನಿಗೆ ಹಗಲು ಇರುಳುಗಳ ಬಾಧೆಯುಂಟೇ?" ಎಂದು ಲಕ್ಷ್ಮಣನು ತಾತ್ವಿಕತೆಯನ್ನು ನುಡಿದು ಗುಹನನ್ನು ಸಮಾಧಾನಪಡಿಸುವಷ್ಟರಲ್ಲಿ ಬೆಳಗಾಯಿತು.

ಸೂರ್ಯೋದಯದೊಡನೆ ಸೂರ್ಯವಂಶದ ರಾಜಶ್ರೇಷ್ಠನು ಎಚ್ಚೆತ್ತು ಪೂರ್ವಸಂಧ್ಯಾಕ್ರಿಯೆಯನ್ನು ನಿರ್ವರ್ತಿಸಿ ಘನಗಂಭೀರ ಧ್ವನಿಯಿಂದ ಲಕ್ಷ್ಮಣನನ್ನು ಕರೆದು ನದಿಯನ್ನು ದಾಟಲು ಏರ್ಪಾಟು ಮಾಡುವುದೆಂದು ಸೂಚಿಸಿದ. ಆತನು ಈ ವಿಷಯವನ್ನು ನಿಷಾದಪತಿಗೆ ತಿಳಿಸಿ ನದಿಯನ್ನು ದಾಟಲು ತೆಪ್ಪವನ್ನು ತರಿಸು ಎಂದು ಹೇಳಿದ. 'ಹಸಾದ' ಎಂದು ಗುಹನು ಹೋಗಿ ತನ್ನ ದಾಯಾದ್ಯರಿಗೆ ಆ ಕ್ಷಣವೇ ಶ್ರೇಷ್ಠವಾದೊಂದು ದೋಣಿಯನ್ನು ಅಲಂಕರಿಸಿ ತರಲು ಅಪ್ಪಣೆ ಮಾಡಿದ. ಅವರು ಸಡಗರದಿಂದ ಹೋಗಿ ಅತಿ ತ್ವರಿತವಾಗಿ ನಾವೆಯೊಂದನ್ನು ಸಿದ್ಧಪಡಿಸಿ ದೇವಗಂಗೆಯ ಬಳಿ ತಂದಿಟ್ಟರು. ಸುಂದರವಾದ ಆ ಅಂಬುಸರಣಿಯನ್ನು ನೋಡಿ ರಘುವೀರನು ಸಂತಸದಿಂದ ಗುಹನನ್ನು ಕರೆದು ಮೃದೂಕ್ತಿಗಳಿಂದ, "ಆಪ್ತನೇ, ನಾನು ಜನಗಳಿರುವ ಕಡೆ ಇರುವುದು ತಕ್ಕುದಲ್ಲ, ಮುನಿಸೇವ್ಯವಾದ ನಿರ್ಜನಸ್ಥಾನಕ್ಕೆ ಹೋಗಿ ಪರಮ ಸುಖದಲ್ಲಿರಬೇಕು, ಮುನಿವೇಷವನ್ನು ಧರಿಸಿ ಕಾಡಿನಲ್ಲಿ ಓಡಾಡುವುದೇ ಸುಖಾವಹವಾದುದು. ಬೇಗ ಆಲದ ಹಾಲನ್ನು ತರಿಸು" ಎಂದು ಹೇಳಿದ. ಹಾಗೆ ತಂದಿತ್ತ ಹಾಲಿನಿಂದ ತನ್ನ ತಲೆಗೂದಲನ್ನು ಕಟೆಗಳನ್ನಾಗಿಸಿಕೊಂಡ; ಲಕ್ಷ್ಮಣನೂ ಅಣ್ಣನಂತೆಯೇ ಜಟೆಗಳನ್ನು ಧರಿಸಿ ಸಿದ್ಧನಾದ. ಹೀಗೆ ರಾಮಲಕ್ಷ್ಮಣರು ಮುನಿನಾಯಕರ ರೀತಿಯಲ್ಲಿ ಕಂಗೊಳಿಸುವ ಸಮಯದಲ್ಲಿ ನಾವೆಯು ಹೊರಡಲು ಸಿದ್ಧವಾಗಿತ್ತು. "ಸೌಮಿತ್ರಿ, ದೋಣಿ ಬಂದಿದೆ. ಬೇಗ ಹೋಗಿ ನಿನ್ನ ಅತ್ತಿಗೆಯನ್ನು ಕರೆದು ತಾ" ಎನ್ನಲು 'ಹಸಾದ'ವೆಂದು ಹೊರಟ ಲಕ್ಷ್ಮಣನು ಸೀತೆಯೊಂದಿಗೆ ಬಂದು ಅತ್ತಿಗೆಯನ್ನೇ ಮೊದಲು ದೋಣಿಯನ್ನೇರಿಸಿದ. ಶ್ರೀರಾಮಚಂದ್ರನು ಗುಹನ ಕೈಗಳನ್ನು ಹಿಡಿದುಕೊಂಡು ಪ್ರೀತಿಯಿಂದ ಬೀಳ್ಕೊಂಡು



ಪಾವನ ಗಂಗೆಯನ್ನು ದಾಟುತ್ತಿರುವ ಸಂದರ್ಭ

ದೋಣಿಯನ್ನೇರಿದ, ಶ್ರೀರಾಮನೂ ಪ್ರಿಯನಾದ ತಮ್ಮನೊಡನೆ ನಾವೆಯನ್ನೇರಿದ. ಆಚಿನ ದಡಕ್ಕೆ ತಲುಪಿಸಿ ಬರಲು ಗುಹನೂ ನಾವೆಯನ್ನೇರಿದ. ದೋಣಿ ಹೊರಟಿತು

ದೋಣಿಯು ನದಿಯ ಮಧ್ಯವನ್ನು ತಲುಪಿದಾಗ ನಿಂತುಕೊಂಡ ವೈದೇಹಿಯು ಕರಗಳನ್ನು ಮುಗಿದು, "ಮುನಿಜನಸ್ತುತ ದೇವಿ ಗಂಗಾಂಬಿಕೆಯೇ, ನನ್ನ ಪ್ರಾರ್ಥನೆಯನ್ನು ಕೃಪೆಯಿಟ್ಟು ನಡೆಸಿಕೊಡು. ವನವಾಸವನ್ನು ಕಳೆದು ಕ್ಷೇಮದಿಂದ ಪತಿಸಹಿತ ವಾಪಸ್ಸಾದ ಮೇಲೆ ಭೂಮೀಸುರರ ಪಾದಪೂಜೆ ಮಾಡಿ, ಸಾವಿರ ಗೋವುಗಳನ್ನು ವಸ್ತ್ರಸಮೇತ ಸಕಲೋಪಚಾರಸಹಿತವಾಗಿ ಕಿಂಚಿತ್ತೂ ಕುಂದಾಗದಂತೆ ಅರ್ಪಿಸುತ್ತೇನೆ. ಅಲ್ಲದೆ ನಿನ್ನ ದಡದಲ್ಲಿರುವ ವನದೇವತೆಗಳನ್ನು ಅರ್ಚಿಸಿ ಒಂದು ಸಾಸಿರ ಹೆಂಡದ ಗಡಿಗೆಗಳನ್ನೂ ಮಾಂಸವನ್ನೂ ಅರ್ಪಿಸುತ್ತೇನೆ" ಎಂದು ಗಂಗಾದೇವಿಯನ್ನು ಬೇಡಿಕೊಂಡಳು. ಪಾವನ ಗಂಗೆಯನ್ನು ದಾಟಿ ಆಚಿನ ದಡವನ್ನು ಸೇರಿ ಮೂವರೂ ನಾವೆಯಿಂದ ಇಳಿದರು. ಕೈಕಾಲುಗಳನ್ನು ತೊಳೆದುಕೊಂಡು ಕೋವಿದಾಗ್ರೇಸರನು ಪುನರಾಚಮನ ಮಾಡಿ ಗುಹನನ್ನು ಕರೆದು ಅನಂದದಿಂದ ಕೂಡಿ, ಮತ್ತೆ ತನ್ನ ರಾಜ್ಯಕ್ಕೆ ಹೋಗಿ, ತಮ್ಮ ನೆನಪನ್ನು ಹೊತ್ತು ಆನಂದದಿಂದ ಇರು ಎಂದು ಹೇಳಲು ಆತನು ಅವರೆಲ್ಲರಿಗೂ ನಮಿಸಿ ಶೃಂಗವೇಪುರಕ್ಕೆ ಹಿಂದಿರುಗಿದ.

ಆನಂತರ ಮೂವರೂ ಹೊರಟರು. ರಘುವೀರನು ಲಕ್ಷ್ಮಣನ್ನು ನೋಡಿ, "ಮನುಷ್ಯರ ಸುಳಿವೇ ಇಲ್ಲದೆ ಭಣಗುಟ್ಟುವ ಈ ಜಾಗವು ಕ್ರೂರವಾದ ಸಿಂಹಹುಲಿಗಳು ಗರ್ಜಿಸುತ್ತಿವೆ. ಕೋಮಲೆಯಾದ ಸೀತೆಯು ಯಾವತ್ತೂ ಕಾಡಿನ ಭೀಕರತೆಯನ್ನು ಕಂಡವಳಲ್ಲ. ಆದ್ದರಿಂದ ಅವಳು ಬೆದರದ ಹಾಗೆ ನಾನು ಅವಳ ಹಿಂದುಗಡೆ ನಾಲ್ಕೂ ದಿಕ್ಕುಗಳನ್ನು ಪರೀಕ್ಷಿಸುತ್ತ ಬರುತ್ತೇನೆ. ನೀನು ಆಕೆಯ ಮುಂದೆ ಬಿಲ್ಲುಬಾಣಗಳನ್ನು ಹಿಡಿದು ರಕ್ಷಣಾತ್ಮಕವಾಗಿ ನಡೆ" ಎಂದು ಹೇಳಿದ. ಹೀಗೆ ಜಾನಕಿಯು ಪರಮಾತ್ಮ-ಪ್ರತ್ಯಗಾತ್ಮರ ನಡುವೆ ಶೋಭಿಸುವ ಮೂಲಪ್ರಕೃತಿಯಂತೆ ಸಡಗರದಿಂದ ಮೃದುವಾದ ಹೆಜ್ಜೆಗಳನ್ನಿಡುತ್ತ ತನ್ನ ಒಡಹುಟ್ಟಿದವನನ್ನು ಸಂತೋಷಗೊಳಿಸುವವಳಂತೆ ಕಾಣಿಸಿದಳು. ಸೂರ್ಯಚಂದ್ರರ ಹಾಗೆ ಅಖಿಲ ಭೂತಳವನ್ನೂ ಬೆಳಗುತ್ತ, ತಾಮಸಿಗಳಾದ ರಾಕ್ಷಸರ ಭಯದಿಂದ ಬರುವ ಬ್ರಾಹಣಸ್ತೋಮಕ್ಕೆ ಅಭಯವನ್ನು ನೀಡುತ್ತ ತನ್ನನ್ನು ಕಂಡವರನ್ನು ಧನ್ಯರನ್ನಾಗಿಸುತ್ತ ರಾಮಪುರದರಸ ರಾಜೀವನಿರ್ಜಿತವದನನು ಆ ಮಹಾರಣ್ಯವನ್ನು ಕಳೆದು ಮುನಿಮಂಡಲಾಗ್ರೇಸರನ ಆಶ್ರಮದ ಸಮೀಪಕ್ಕೆ ಬಂದ.

೧೭. ಆಶ್ರಮದ ಮುನಿಗಳ ಉಪಚಾರವನ್ನು ಕೈಗೊಂಡು ಮೂವರೂ ಭಾರದ್ವಾಜರ ಆಶ್ರಮವನ್ನು ಸೇರಿದುದು

ಹಿಮರಾಜತನಯೆಯೇ ಕೇಳು: ರಾಮಚಂದ್ರನು ಗಂಗಾನದಿಯನ್ನು ದಾಟಿ ಕಾಡಿನಲ್ಲಿ ನಾಲ್ಕು ವಿಧದ ಮೃಗಗಳನ್ನು ಕೊಂದು ದೇವನದಿಯಲ್ಲಿ ಸಾಯಂ ಆಹ್ನಿಕಕ್ರಿಯೆಗಳನ್ನು ನೆರವೇರಿಸಿ ಹಣ್ಣುಗಳನ್ನು ತಿಂದು ನೀರು ಕುಡಿದು ಆಯಾಸ ಪರಿಹಾರ ಮಾಡಿಕೊಂಡು

ಮರದ ಬಳಿ ಬಂದು ನಗುತ್ತ ಲಕ್ಷ್ಮಣನಿಗೆ ಹೀಗೆಂದ: "ಇಂದಿನಿಂದ ಮೊದಲಾಗಿ ಮತ್ತೆ ಊರನ್ನು ಸೇರುವವರೆಗೂ ರಾತ್ರಿಯ ವೇಳೆ ನಾವಿಬ್ಬರೂ ಸೀತೆಯನ್ನು ಅಡವಿಯಲ್ಲಿ ರಕ್ಷಿಸಬೇಕು" ಎಂದು ಮತ್ತೆ, "ದುಃಖವನ್ನು ಹೊತ್ತು ಸುಮಂತ್ರನು ವಾಪಸಾದುದು ನನ್ನ ಹೃದಯಕ್ಕೆ ಅತೀವ ಸಂಕ್ಲೇಶವನ್ನುಂಟುಮಾಡಿದೆ. ಅದರಿಂದಾಗಿ ನನಗೂ ಊರಿನ ನೆನಪು ಬರುತ್ತಿದೆ, ಅದರ ಪರಿಯನ್ನು ಹೇಗೆ ಎಂದು ಹೇಳಲಿ? ಪಾಪ, ನಮ್ಮನ್ನು ನೆನೆಸಿಕೊಂಡು ಮರುಕದಿಂದ ನಿದ್ರೆಯುಳಿದು ತೊಳಲುತ್ತಿರುತ್ತಾನೆ, ತನ್ನ ಅಭೀಷ್ಟಗಳು ನೆರವೇರಿತೆಂಬ ಸಂಭ್ರಮದಲ್ಲಿ ಭರತನ ತಾಯಿಯು ಹಿಗ್ಗುತ್ತಿರುತ್ತಾಳೆ, ವಾರ್ಧಕ್ಯದಲ್ಲಿ ಮಹಾರಾಜನನ್ನು ಬಾಧಿಸುತ್ತಿರುತ್ತಾಳೆ, ಪಾಪ ರಾಜನಾದರೋ ಹುಲಿಯನ್ನು ಕಂಡ ಎರಳೆಯಂತೆ ತನ್ನ ಸಹಾಯಕ್ಕೆ ಯಾರೂ ಇಲ್ಲದೆ ಅಳಲುತ್ತಿರುತ್ತಾನೆ. ತನ್ನ ಮನಸ್ಸಿಗೆ ಅನುಗುಣವಾಗಿ ನಡೆದುಕೊಳ್ಳುವ ಮಗನನ್ನು ಹುಚ್ಚನಾದರೂ ಕಾಡಿಗೆ ಕಳಿಸಲಾರ. ಧರ್ಮ ಅರ್ಥಗಳಿಗಿಂತಲೂ ಕಾಮವೇ ಅಧಿಕವಾದುದೆಂದು ನನಗೆ ಅನ್ನಿಸುತ್ತಿದೆ. ಭರತನಿಗೆ ಉನ್ನತ ಪದವಿ ದೊರೆಯಲು ಯಾರನ್ನೂ ಗಣಿಸದೆ ರಾಜನಂತೆಯೇ ಸುಖದಿಂದಿರುತ್ತಾನೆ. ನಾವು ಕಾಡಿಗೆ ಬರಲು ತಂದೆಗೆ ಮುಪ್ಪಡಸಿ ಹೆಂಡತಿಯ ವಶವರ್ತಿಯಾಗಿ ಧರ್ಮಾರ್ಥಗಳನ್ನು ತೊರೆದು ಕಾಮವೊಂದನ್ನೇ ಹಿಡಿಯುತ್ತಾನೆ. ತಂದೆಯ ಹಾಗೆ ನಿಂದಾರ್ಹರು ಬೇರಾರೂ ಇರಲಾರರು. ಭರತನಿಗೆ ರಾಜ್ಯವು ದೊರೆಯಬೇಕೆಂದು ಕೈಕಾದೇವಿಯು ನಮ್ಮನ್ನು ಕಾಡಿಗೆ ಕಳಿಸಲು ಮುಖ್ಯ ಕಾರಣಳಾದಳು. ಸಿರಿಯ ಮದದಿಂದ ಸೊಕ್ಕಿ ಕೈಕೇಯಿಯು ದುರ್ಮಾರ್ಗದಿಂದ ಅರಸನಿಗೆ ತೊಂದರೆಯನ್ನೀಯುತ್ತಾಳೆ. ದುಃಖದಿಂದ ಕೊರಗುವ ಕೌಸಲ್ಯೆ ಸುಮಿತ್ರೆಯರನ್ನು ಅನುದಿನವೂ ಮಹಾ ಕಷ್ಟಗಳಿಗೆ ಒಳಪಡಿಸದಿರಲಾರಳು. ಕೇಳುವವರಿಲ್ಲದ ಅನಾಥರಂತೆ ತಿಳಿಯದ ಕಡೆ ಸೀತೆಯ ಜೊತೆಗೆ ನಾನು ಕಾಡಿಗೆ ಹೋಗಿ ಇರುತ್ತೇನೆ. ನೀನು ಊರಿಗೆ ಹೋಗಿ ತಾಯಂದಿರನ್ನು ಸಂತೋಷದಲ್ಲಿರಿಸು. ಹೆತ್ತವರಿಗೆ ಆನಂದ ನೆಮ್ಮದಿಗಳನ್ನು ನೀಡುತ್ತ ಸಲಹುವುದನ್ನು ಬಿಟ್ಟು ಶೋಕದ ನಡುಮಡುವಿನಲ್ಲಿ ಮುಳುಗಿಸುವುದು ಯಾವ ಧರ್ಮ? ನನ್ನಂತಹ ಮಗನನ್ನು ಪಡೆದವಳಿಗೆ ದುಃಖವನ್ನಿತ್ತು ಜೀವಿಸುವ ಕೆಟ್ಟ ಜನ್ಮವನ್ನು ಸುಡಲಿ, ಈ ರೀತಿ ಬದುಕಿ ಫಲವೇನು? ಲಕ್ಷ್ಮಣನೇ, ನಮ್ಮ ತಾಯಂದಿರಿಗೆ ಶೋಕವನ್ನಿತ್ತ ಮಗನ ಹೆಸರನ್ನು ಹೊತ್ತ ಶತ್ರು ನಾನಾದೆ. ಇಂಥ ಮಗನು ಏಕೆ ಹುಟ್ಟಿದ ಎಂದು ಜನರು ಆಡಿಕೊಳ್ಳುವಂತಾಯಿತು. ಈ ಮಹಾದುಃಖವನ್ನು ಹೇಗೆ ತಾಳಿಕೊಳ್ಳಲಿ; ನಾನು ಮಹಾ ತಾಮಸಿಯಾಗಿಬಿಟ್ಟೆ, ಅಪಕೀರ್ತಿಯನ್ನು ಪಡೆದೆ. ವಿಧಿಯು ನನ್ನನ್ನು ಕಾಮಚರ ಎನ್ನಿಸಿಬಿಟ್ಟಿತು. ಇಷ್ಟು ಕಷ್ಟವೇಕೆ ಎಂದು ಅಯೋಧ್ಯಾನಗರವನ್ನು ಅಸ್ತ್ರಶಸ್ತ್ರಗಳಿಂದ ಮುಗಿಸಿಬಿಡಬೇಕೆನಿಸುತ್ತದೆ. ಧರ್ಮವನ್ನೆಸಗದ ನನಗೆ ಇಹಪರಗಳೆರಡೂ ಕೆಡುತ್ತವೆ. ಮುಂದುಗಾಣದಂತೆ ಮನಸ್ಸಿನಲ್ಲಿ ಅನುತಾಪವು ತುಂಬಿಕೊಂಡು ಕಾಡಿನಲ್ಲಿ ಅಲೆಯುವಂತಾಯಿತಲ್ಲ!" ಎಂದು ವನಜಾಕ್ಷನು ಮನುಷ್ಯರಂತೆ ಲೀಲೆಯಿಂದ ಹೇಳಲು ಸೌಮಿತ್ರಿಯು ಭಯದಿಂದ ನಡುಗಿಹೋದ.

"ದೇವ, ನೀನು ಮನುಷ್ಯರ ಹಾಗೆ ಆಟಕ್ಕೆಂದು ಸುಖದುಃಖಗಳಿಗೊಳಗಾದವನೆಂದು ತೋರಿಸಿಕೊಂಡರೆ ದೇವಿ ಜಾನಕಿಯು ಪರಿತಾಪಗೊಳ್ಳುವಳು. ನನಗೂ

ಭಯಶೋಕಗಳುಂಟಾಗುತ್ತವೆ. ಸೀತೆಗಾಗಲೀ ನನಗಾಗಲೀ ನಿನ್ನ ಪಾವನ ಪಾದಗಳನ್ನು ಬಿಟ್ಟು ಜೀವವು ದೇಹದಲ್ಲಿ ಇರಬಲ್ಲುದೇ? ಆ ಮಾತು ಹಾಗಿರಲಿ. ಚಿಂತೆ ತುಂಬಿದ್ದರೂ ನಿರ್ಲಿಪ್ತ ಪರಬ್ರಹ್ಮನಾದ ನಿನಗೆ ಕ್ಲೇಶ ಎಂಬುದು ಎತ್ತಣದು? ಜಗತ್ತಿನಲ್ಲಿ ಧರ್ಮಕ್ಕೆ ಗ್ಲಾನಿಯುಂಟಾದರೆ ನಾನು ಜನಿಸಿ ಧರ್ಮವನ್ನು ಸ್ಥಾಪಿಸುವೆನೆಂದು ದೇವಾನುದೇವತೆಗಳಿಗೆ ಮೊದಲು ಅಭಯವನ್ನು ಕೊಟ್ಟು ಹುಟ್ಟಿದವನಿಗೆ ಭೋಗಭೂಮಿಯಲ್ಲಿ ಅವತರಿಸಿ ಸುಖದುಃಖಗಳನ್ನು ನಟಿಸುವುದಲ್ಲದೆ ನಿತ್ಯ ನಿರ್ಮಲನೂ ನಿಗಮಮಸ್ತಕಮಣಿಯೂ ಆದ ನಿನಗೆ ಸಂಕ್ಲೇಶವೆಲ್ಲಿಯದು? ನಿನ್ನನ್ನು ನೆನಯುವವರಿಗೂ ಕ್ಲೇಶಲೇಶವಿರುವುದಿಲ್ಲ ಅಲ್ಲವೇ?" ಎಂದು ಮೃದುವಾದ ತತ್ತ್ವನೀತಿಯುತವಾದ ಮಾತುಗಳಿಂದ ಬಿನ್ನಹಗೈಯಲು ಅದನ್ನು ಕೇಳಿದ ರಾಮನು ನಟನೆಯ ಶೋಕವನ್ನು ತೊರೆದು ಹರ್ಷಾನಂದದಲ್ಲಿದ್ದ. ಅಷ್ಟರಲ್ಲಿ ಚಂದ್ರನು ಪಶ್ಚಿಮದಿಕ್ಕಿನೆಡೆ ಒಲವು ತೋರಿಸಲು ಲೋಕಬಂಧುವು ಬಂದು ಮೂಡಣಗಿರಿಯ ತಲೆವಣಿಯಂತೆ ರಂಜಿಸಲು ರಾಮನು ಗಂಗಾಸ್ನಾನ ಮಾಡಿ ಪೂರ್ವಾಹ್ನಿಕಗಳನ್ನು ನೆರವೇರಿಸಿದ.

ಅನಂತರ ತಮ್ಮ ಪಯಣವನ್ನು ಮೂವರೂ ಮುಂದುವರಿಸಿದರು. ನಾನಾ ಬಗೆಯ ಗಿಡಮರಗಳು ತುಂಬಿದ್ದ ಹರ್ಷಾನಂದಕರವಾದ ಹಾಡಿಗಳನ್ನು ದಾಟಿ ಬರಲು ಮುಂದೆ ಒಂದೆಡೆ ಒಂದು ಅದ್ಭುತವಾದ ಸ್ಥಳವು ಕಣ್ಣಿಗೆ ಬಿದ್ದಿತು. ಅದೇ ದೇವಗಂಗೆ ಹಾಗೂ ಸೂರ್ಯಸಂಭವೆಯಾದ ಯಮುನೆಯರ ಸಂಗಮಸ್ಥಾನವಾದ ಪ್ರಯಾಗ. ಅಲ್ಲದೆ ಸನಿಹದಲ್ಲಿ ಆಗಸಕ್ಕೇರುತ್ತಿರುವ ಯಜ್ಞಧೂಮವು ಕಾಣಿಸಲು ಶ್ರೀರಾಮನು ಲಕ್ಷ್ಮಣನಿಗೆ, "ಅಲ್ಲಿ ನೋಡು, ಅಲ್ಲಿ ಯತ್ಯಾಶ್ರಮವಿರುವಂತೆ ತೋರುತ್ತಿದೆ. ಹೇಗಿದ್ದರೂ ಭಾಸ್ಕರನು ಚರಮಗಿರಿಯನ್ನೈದುತ್ತಿದ್ದಾನೆ. ನಾವು ಇಲ್ಲಿಯೇ ಸಂತಸದಿದ ಈ ಇರುಳನ್ನು ಕಳೆಯಬಹುದು" ಎಂದು ಹೇಳಿದ. ಸೀತಾಲಕ್ಷ್ಮಣರನ್ನು ಅಲ್ಲಿಯೇ ನಿಂತಿರಲು ಹೇಳಿ ರಘುವೀರನು ಆಶ್ರಮದ ಬಳಿ ಹೋಗಿ ಮುನಿಬಾಲಕನೊಬ್ಬನನ್ನು ಕರೆದು ನಸುನಗುತ್ತ, "ಆರ್ಯ ಮಾಣವಕನೇ, ರಾಮಲಕ್ಷ್ಮಣ ಎಂಬಿಬ್ಬರು ಸೀತೆಯೆಂಬಾಕೆಯೊಡನೆ ಬಂದಿದ್ದಾರೆ ಎಂಬ ವಿಚಾರವನ್ನು ಯತಿವರ್ಯರಿಗೆ ಹೇಳಿ ಬಾ" ಎಂದ. ಆ ವಟುವು ತ್ವರಿತವಾಗಿ ಹೋಗಿ ಈ ವಿಚಾರವನ್ನು ತಿಳಿಸಿದ. ಶ್ರೇಷ್ಠವಾದ ಅಮೃತರಸವನ್ನು ಕುಡಿದು ತೃಪ್ತಿ ಹೊಂದಿದವನಂತೆ ಹರ್ಷದಿಂದ ಆ ಬಾಲಕನ ಪರಮಮಧುರವಾಣಿಯನ್ನು ಕೇಳಿ ತನ್ನ ತಪಃಫಲದ ರಾಶಿಯೇ ಕೈಗೆ ಬಂದ ಇಂದಿನ ದಿನವೇ ಸುದಿನ ಎಂದು ಭಾವಿಸಿದ ತಪೋಧನನು "ಅವರನ್ನು ಬೇಗ ಕರೆದು ತಾ" ಎಂದು ಆಣತಿಯಿತ್ತ. ಅಂತೆಯೇ ಆ ವಟುವು ಓಡಿ ಬಂದು ಶ್ರೀರಾಮನಿಗೆ ವಿಷಯವನ್ನು ತಿಳಿಸಿದ.

ಹುಡುಗನು ಹೇಳಿದಾಕ್ಷಣವೇ ವೈದೇಹಿ ಲಕ್ಷ್ಮಣರ ಸಮೇತ ರಘುವರನು ನಿಟಿಲಲೋಚನಮಿತ್ರನಾದ ಭಾರದ್ವಾಜನ ಆಶ್ರಮವನ್ನು ಹೊಕ್ಕು ಸಮ್ಯಕ್‌ಜ್ಞಾನಿಯಾದ ಮುನಿಯನ್ನು ಕಂಡು ತನ್ನ ಗೋತ್ರಹೆಸರುಗಳನ್ನು ಸ್ಪಷ್ಟವಾಗಿ ಉಚ್ಚರಿಸುತ್ತ ದೀರ್ಘದಂಡ ನಮಸ್ಕಾರ ಮಾಡಿದ; ಲಕ್ಷ್ಮಣನೂ ಅವನನ್ನು ಅನುಸರಿಸಿದ; ಸೀತೆಯೂ ಮುನಿಗಳಿಗೆ ವಂದಿಸಿದಳು. ಪರಾತ್ಪರನ ಈ ನಟನೆಯನ್ನು ಕಂಡು ಮುನಿಪತಿಯು ಅಮಿತ

ಹರ್ಷದಿಂದ ಅವನನ್ನು ಮೇಲೆತ್ತಿ ಕುಳ್ಳಿರಿಸಿ ನಾನಾ ಮಾತುಗಳಿಂದ ಉಪಚರಿಸಿದ. ಆನಂತರ ಅತ್ಯಾನಂದಭರಿತನಾಗಿ ಮೈಮರೆತು ರೋಮಾಂಚನಗೊಂಡು ಮುನಿಯು ರಘೂತ್ತಮನಿಗೆ ಅರ್ಘ್ಯಪಾದ್ಯಾದಿಗಳನ್ನಿತ್ತು ಆಚಮನ ಮಾಡಲು ಅನುಗೈಯಲು, 'ಇದು ಸೂಕ್ತ ಸಮಯವಲ್ಲ'ವೆಂದು ಉಪಚಾರವನ್ನು ನಿಲ್ಲಿಸಿ ಮುನಿಪೋತ್ತಮನನ್ನು, "ಮುನಿರಾಯರೇ, ಇದೇನು ಹೊಸ ರೀತಿ, ಕ್ಷತ್ರಿಯಕುಲದವನಾದ ನನಗೆ ಈ ಬಗೆಯ ಉಪಚಾರ ಮಾಡಲು ಇಚ್ಛಿಸಿರುವಿರಲ್ಲ! ದಶರಥನ ಮಗನಾಗಿ ಹುಟ್ಟಿ ಸಕಲಸುಖಗಳಿಂದ ಕೂಡಿರುತ್ತಿರಲು, ತಂದೆಯು ಯುವರಾಜನಾಗೆಂದು ನನಗೆ ಆಣತಿಯಿತ್ತ; ಅಷ್ಟರಲ್ಲಿ ಅದನ್ನು ತಿಳಿದ ಭರತನ ತಾಯಿಯು ತನಗೆ ರಾಜನು ಹಿಂದೆ ನೀಡಿದ್ದ ವರಗಳನ್ನು ನೆನಪಿಸಿಕೊಂಡು ಅವುಗಳನ್ನು ನೆರವೇರಿಸೆಂದು ಕೇಳಲು ಆ ದಿವ್ಯಪುರುಷನು ತಾನಿತ್ತ ಮಾತುಗಳನ್ನು ಮೀರಲಾರದೆ ರಾಜ್ಯವನ್ನು ಭರತನಿಗಿತ್ತು, ನನಗೆ ಹದಿನಾಲ್ಕು ವರ್ಷಗಳು ವನವಾಸವನ್ನು ಮಾಡಿ ಬಾ ಎಂದು ಅಪ್ಪಣೆಯಿತ್ತ; ಅದಕ್ಕನುಗುಣವಾಗಿ ನಾನು ಹೊರಡಲು ಸಿದ್ಧನಾದೆ, ಆದರೆ ನನ್ನ ಸುದತಿ ಸೀತೆಯು ಜೊತೆಗೆ ಬರಲು ಸಿದ್ಧಳಾದಳು, ಅಂತೆಯೇ ಲಕ್ಷ್ಮಣನೂ ನನ್ನೊಡನೆ ಇರಲು ಬಂದಿದ್ದಾನೆ. ನನ್ನನ್ನು ತಮ್ಮ ಅನುಚರನೆಂದು ಭಾವಿಸಿ ದಯೆಯಿಟ್ಟು ಅನುಗ್ರಹಿಸಬೇಕು" ಎಂದು ಕೇಳಿಕೊಂಡ.

ಆಗ ಮುನಿಪನು ಶ್ರೀರಾಮಚಂದ್ರನನ್ನು ಕುರಿತು, "ನಿನ್ನ ಉಪಾಸನೆಯಿಂದಲೇ ನಾನು ಈ ಲೋಕದ ವಿವರಗಳನ್ನೆಲ್ಲ ತಿಳಿದೆ, ಕಾಲತ್ರಯಾವಸ್ಥೆಯ ಬವಣೆಗಳನ್ನೆಲ್ಲ ಅರಿತೆ. ಪರಬ್ರಹ್ಮನೇ ಲೋಕವನ್ನು ಉದ್ಧರಿಸಲೋಸುಗ ಈ ಜಗತ್ತಿನಲ್ಲಿ ಅವತರಿಸಿ ದಂಡಕಾರಣ್ಯದ ಋಷಿಗಳನ್ನು ಸಲಹಲೋಸುಗ ಬರುವನೆಂದು ಬ್ರಹ್ಮನೇ ಹಿಂದೆ ಹೇಳಿದ್ದನು. ಅಂದಿನಿಂದಲೂ ನಾನು ಅಮಿತ ನೇಮದಿಂದ ಕೂಡಿ ನಿನ್ನ ಚರಣಸಂದರ್ಶನದ ಆಕಾಂಕ್ಷೆಯಿಂದ ನಿನ್ನ ಹೆಸರುಗಳನ್ನು ಹಿಡಿದು ಭಕ್ತಿಯಿಂದಿದ್ದುದಕ್ಕೆ ಕರುಣಾಳುಗಳ ದೇವನೇ ಜಟಾಧಾರಿಯಾಗಿ ನಾರುಮಡಿಯುಟ್ಟು ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದ ಸೌಮಿತ್ರಿ ಮತ್ತು ವೈದೇಹಿಯರ ಜೊತೆಗೆ ಬಂದು ನನ್ನ ಪುಣ್ಯಬಲದಿಂದ ದರ್ಶನವಿತ್ತಿರುವೆ. ಸರ್ವಭೂತಾವಾಸ, ನೀಲಮೇಘಶ್ಯಾಮ, ನಿರಂಜನ, ನಿರಾತಂಕ ಪರ್ವತಾತ್ಮಜೆಯ ಮಾನಸದೀಪ, ಮುನಿತಾಪಹರಣ, ನಿಜಚರಣಕಿರಣ, ಶರ್ವನೀರೇಜಭವಕೇಶವಾದ್ಯರು ಮಾಡುವ ಖರ್ವ, ನಿರ್ವಾಣಪಕ್ಷ, ಚಿನ್ಮಾತ್ರ, ಪರಮ ಪುರುಷ ನೀನೇ. ವ್ಯಾಪಕ, ನಿರಂಜನ, ಪುರಾಣಪುರುಷ, ಗೋಪಿಕಾನಂದಸ್ವರೂಪ, ಶಾಶ್ವತ, ನಿಖಿಲರೂಪಮಾನಕ್ರಿಯೆಗಳಿಲ್ಲದ ಪರಬ್ರಹ್ಮ, ವೇದಾರ್ಥ, ವೇದರೂಪ, ತಾಪಹರ, ಹರವಿಷ್ಣುಸೃಷ್ಟ್ಯಾದಿರೂಪ, ನಿರ್ಲೇಪ, ಗಂಗಾಚರಣಪಂಕಜ, ಚಿತ್ಸ್ವರೂಪ, ಪಾವನ, ಸನಕಾದಿ ಮೌನಿ ಹೃದಯಾಬ್ಜದೀಪ, ಭೂಭಾರಕರನ್ನು ತರಿದು ನರರೂಪವನ್ನು ಧರಿಸಿ ಅಖಿಲ ಧರ್ಮಗಳನ್ನು ಪೊರೆಯಲೆಂದು ರಾಜಕುಮಾರನಾಗಿ ಹುಟ್ಟಿ ಮನುಷ್ಯನ ರೀತಿಯಲ್ಲಿಯೇ ಮೂರುಲೋಕವನ್ನೂ ಮೋಹಿಸಿ ಸುತ್ತಾಡುವೆಯಲ್ಲದೆ ನಿನಗೆ ಸುಖದುಃಖಲೇಶವಾದರೂ ಅಂಟುತ್ತದೆಯೇ? ನಿನ್ನ ಧ್ಯಾನದಿಂದಲೇ ನಾನು ಇವೆಲ್ಲವನ್ನೂ ತಿಳಿದಿದ್ದೇನೆ. ಶರಣನಾದ ನನ್ನನ್ನು ಕಾಪಾಡು" ಎಂದು ರಘುವರನ ಚರಣದ್ವಯಗಳನ್ನು ತೊಳೆದು ತಲೆಯಲ್ಲಿ ಧರಿಸಿ, ಶಿಷ್ಯರಿಗಿತ್ತು, ಸಂತಸಗೊಂಡು ಮತ್ತೆ

ಮತ್ತೆ ಸ್ತುತಿಸಿದ. "ಸನಕಾದಿಗಳು ಅನುದಿನ ಧ್ಯಾನಿಸಿದರೂ ಮನಸ್ಸಿನ ತುದಿಗೂ ಅಂಟದ ಈ ಚರಣಗಳು ನನ್ನ ಮನಗೇ ಬಂದುದುರಿಂದ ನಾನೆಷ್ಟು ಧನ್ಯ, ನಾನೆಷ್ಟು ಮಾನ್ಯ, ಹೇ ದೇವ ದೇವ. ನಿನ್ನ ಉಂಗುಟದ ತುದಿಯಲ್ಲಿ ದೇವಗಂಗೆಯು ಹುಟ್ಟಿ ಲೋಕದ ಪಾಪವೊಂದಿನಿತೂ ತಗುಲದ ಹಾಗೆ ಅಖಿಲಲೋಕಗಳನ್ನೂ ಪಾವನಗೊಳಿಸುವ ನದಿಯನ್ನು ಹರನು ತನ್ನ ಜಟೆಯಲ್ಲಿ ಧರಿಸಿ ಮಂಗಳಪ್ರದ ನಾಮಗಳನ್ನು ಧರಿಸಿದ. ನಿನ್ನ ಪಾದಗಳನ್ನು ಕಂಡು ನಾನು ಕೃತಕೃತ್ಯನಾದೆ, ನನ್ನ ಭವ ಹಿಂಗಿತು" ಎಂದು ಸಂತಸದಿಂದ ಸ್ತುತಿಸುವ ಮುನಿಪನಿಗೆ ರಘುವರನು ಹೀಗೆಂದು ಮಾರ್ನುಡಿದ: "ಮುನಿತಿಲಕ, ನೀನು ಮಾಡಿದ ಸ್ತುತಿಯಿಂದ ನನ್ನ ಮನಸ್ಸಿಗೆ ಅತೀವ ಹರ್ಷವೆನಿಸಿದೆ. ನಿನ್ನ ಮನಸ್ಸಿನಲ್ಲಿ ಏನು ಬಯಕೆಯಿದೆಯೋ ಕೇಳಲು ನೀಡುತ್ತೇನೆ." ಆಗ ಮುನಿಯು ಕರಗಳನ್ನು ಜೋಡಿಸಿ, "ಇನಕುಲಾಗ್ರಣಿಯೇ, ನಾನು ಒಂದನ್ನು ಬೇಡುತ್ತೇನೆ, ನಿನ್ನ ರೂಪವು ನನ್ನ ಮನಸ್ಸಿನಿಂದ ಎಂದೆಂದೂ ಮರೆಯಾಗದಂತೆ ಮಾಡು, ನನ್ನ ಹೃದಯಕಮಲಗಳನ್ನು ಎಂದೆಂದೂ ಬಿಟ್ಟುಹೋಗದಂತೆ ನೆಲಸು" ಎಂದು ಬೇಡಿಕೊಳ್ಳಲು ಶ್ರೀರಾಮನು, "ಜಗತ್ತಿನಲ್ಲಿರುವ ಎಲ್ಲ ವಸ್ತುಗಳ ರೀತಿಯನ್ನು ತಿಳಿದು ನನ್ನ ಮಾಯೆಯು ಆವರಿಸದ ಹಾಗೆ ನನ್ನ ಕೃಪೆಯು ನಿನ್ನನ್ನು ಕಾಪಿಡುತ್ತದೆ. ನಿನ್ನ ಮನಸ್ಸಿನಿಂದ ಅಗಲದಂತೆ ನನ್ನ ಮೂರ್ತಿಯು ಸದಾ ನೆಲಸಿರುತ್ತದೆ" ಎಂದು ನಿಗಮಗೋಚರ ರಾಮಚಂದ್ರನು ಆ ಮುನಿವರನಿಗೆ ಅಭಯವನ್ನು ಕರುಣಿಸಿದ.

ತನ್ನ ಭಕ್ತನಿಗೆ ಈ ರೀತಿಯಲ್ಲಿ ಅಭಯವನ್ನಿತ್ತು, ಲೋಕಾಚರಣೆಯನ್ನು ಎಂದಿನಂತೆಯೇ ಮನುಷ್ಯನಂತೆಯೇ ನೆರವೇರಿಸಿ, "ಸುಜನಸನ್ನುತ ಮಹಾಮುನಿಯೇ, ನಿನ್ನ ದರ್ಶನದಿಂದ ನಾನು ಧನ್ಯನಾದೆ" ಎಂದು ವಿನಯಪ್ರದರ್ಶನ ಮಾಡಿದ ಭಗವತ್ ಸಲ್ಲಾಪವು ಮುನಿನಾಥನಿಗೆ ನಿಮಿಷಮಾತ್ರದಲ್ಲಿ ಅಜಪದವಿಯನ್ನು ಕರುಣಿಸಿತು. ಪ್ರಿಯ ಅತಿಥಿಯಾದ ರಾಮನು ಬಂದುದರಿಂದ ವರಮುನಿ ಭಾರದ್ವಾಜನು ಅರ್ಘ್ಯ ಪಾದ್ಯ ಆಚಮನ ಪುಷ್ಪಫಲಗಳನ್ನಿತ್ತು ಉಪಚಾರ ಮಾಡಿ ಹೊಗಳಿ ಪರಿಪರಿಯ ಚಿತ್ರಕತೆಗಳನ್ನು ಹೇಳುತ್ತ ಆನಂದಭರಿತನಾಗಿದ್ದು, ಇಡೀ ರಾತ್ರಿಯನ್ನು ರಾಮಪುರದಧೀಶನೊಡನೆ ಮಾತನಾಡುತ್ತ ಕಳೆದ.

೧೮. ಅಲ್ಲಿಂದ ಮುಂದೆ ನಡೆದು ಶ್ರೀರಾಮನು ವಾಲ್ಮೀಕಿಯ ಆಶ್ರಮವನ್ನು ಸೇರಿದುದು

ಅಂಬುದಳಾಯತಾಕ್ಷಣೆ ಕೇಳು, ಮುನಿನಿಕುರುಂಬದೊಡನೆ ಬೆರೆತು ನಾನಾ ಕತೆಗಳನ್ನು ಹೇಳುತ್ತಿರಲು ಚಂದ್ರನು ಪಶ್ಚಿಮಸಾಗರಕ್ಕಿಳಿಯಲು, ದ್ವಾದಶಾರ್ಕಬಿಂಬವು ಪೂರ್ವಸಮುದ್ರವನ್ನು ಮೆಟ್ಟಿ ಕತ್ತಲನ್ನು ತುಳಿಯುತ್ತ ಉದಯಾಚಲದ ತುದಿಯ ಮೇಲೆ ನಿಲ್ಲಲು ಅಂಬುಜೋದರನು ತಪೋಧನರೊಡನೆ ಸಂಗಮಸ್ಥಾನಕ್ಕೆ ಬಂದ. ಸ್ನಾನ ಆಹ್ನಿಕಕ್ರಿಯೆಗಳನ್ನು ಮುಗಿಸಿ ಭಕ್ತಿಯಿಂದ ಮುನಿತಿಲಕನಿಗೆ ಅಭಿವಂದಿಸಿ ಕುಳಿತುಕೊಂಡು,

"ಮಹಾಭಾಗ, ಹದಿನಾಲ್ಕು ವರ್ಷಗಳ ಕಾಲ ನಾನು ವಾಸಿಸಬಹುದಾದ ಒಂದು ಸ್ಥಳವನ್ನು ಸೂಚಿಸಬೇಕು" ಎಂದು ಕೇಳಿಕೊಂಡ. ಆ ನುಡಿಯನ್ನು ಕೇಳಿದ ಭಾರದ್ವಾಜನು ನಸುನಗುತ್ತ ಸ್ನೇಹಪೂರ್ವಕವಾಗಿ, "ಗಂಗೆ-ಯಮುನಾ ನದಿಗಳು ಸಂಗಮಿಸುವ ಈ ಶುಭಸ್ಥಾನವಾದ ಪ್ರಯಾಗವನ್ನು ಕಾಣಲು ದೇವತೆಗಳು ಬಯಸುತ್ತಾರೆ, ಈ ತಾಣದಲ್ಲಿರಲು ಬಯಸುತ್ತಾರೆ. ಇಂತಹ ರಮಣೀಯ ಸ್ಥಳದಲ್ಲಿ ನಾವು ವಾಸಿಸುತ್ತಿದ್ದೇವೆ. ಇಲ್ಲಿಯೇ ನೀನೂ ಇದ್ದು ನಮ್ಮ ಶ್ರಮನಿವಾರಣೆ ಮಾಡಬಹುದಲ್ಲ" ಎಂದು ಹೇಳಿದರು. ಆಗ ರಘುವೀರನು ಮುನಿಯನ್ನು ಕುರಿತು, "ಇದು ಉತ್ತಮೋತ್ತಮ ಸ್ನಾನಸ್ಥಾನ ಎಂಬುದರಲ್ಲಿ ಸಂಶಯವಿಲ್ಲ. ಹಾಗಾಗಿ ಆರ್ಯಲೋಕೋತ್ತಮರು ಇಲ್ಲಿಗೆ ಬರುತ್ತಾರೆ, ಸರಸಸಲ್ಲಾಪಗಳನ್ನು ಮಾಡುತ್ತ ಹರುಷದಿಂದ ಸುತ್ತುವರಿಯುತ್ತಾರೆ. ಎಲ್ಲ ಭೋಗಗಳನ್ನು ಬಿಟ್ಟು ಮುನಿವೃತ್ತಿಯನ್ನು ಅನುಸರಿಸುತ್ತ ಇರುವವರಿಗೆ ಸಂಸರ್ಗದೋಷವುಂಟಾಗುತ್ತದೆ. ಆದರಿಂದ, ಋಷಿಸತ್ತಮ, ಜನರಿಲ್ಲದ ಒಂದು ಒಳ್ಳೆಯ ಸ್ಥಳವನ್ನು ಸೂಚಿಸಿ" ಎಂದು ವಿವರಿಸಿದ. ಅದನ್ನು ಕೇಳಿದ ಮುನಿಪೋತ್ತಮನು, "ರಘುವೀರ, ಇಲ್ಲಿಂದ ಮೂರು ಗಾವುದ ದೂರ ಹೋದರೆ ಸನ್ಯಾಸಿಗಳಿಗೆ ಬಹು ಪರಿಚಿತವಾದ, ನಾನಾ ಮೃಗಪಕ್ಷಿಸಮೂಹದಿಂದ ಕೂಡಿ ಅಮಿತ ರಮ್ಯವೆನಿಸಿ, ಗಾಳಿಬಿಸಿಲುಗಳ ಉಪಟಳವಿಲ್ಲದೆ ಸುಖಾವಹವಾದ ಗಂಧಮಾದನದಂತೆ ಕಂಗೊಳಿಸುವ ಹಾಗೂ ಮೇರುಗಿರಿಯಂತೆ ಹೊನ್ನಬಣ್ಣದಿಂದ ಹೊಳೆಯುವ ಒಂದು ಬೆಟ್ಟವಿದೆ. ಆ ಗಿರಿಯನ್ನು ನೋಡಿದವರಿಗೆ ಎಲ್ಲ ಸುಖಸಂಪದಗಳು ಉಂಟಾಗುತ್ತವೆ, ಮನಸ್ಸಿಗೆ ಲೇಶವಾದರೂ ಕೋಟಲೆಯಾಗದು. ಆದ್ದರಿಂದ ಅನೇಕ ಮಂದಿ ತಾಪಸರು ಮಾತ್ರವಲ್ಲ, ಸುರರ ಕಿನ್ನರರು ಕೂಡ ಅದನ್ನು ಬಿಡದೆ ಅಲ್ಲಿಯೇ ನೆಲಸಿಬಿಟ್ಟಿದ್ದಾರೆ. ವೈದೇಹಿಯೂ ಅಲ್ಲಿ ಹಾಯಾಗಿರಬಹುದು" ಎಂದು ಹೇಳಿದ ತಪೋನಿಧಿಗೆ ಅಭಿವಾದನೆಗೈದು ಅಲ್ಲಿಂದ ಬೀಳ್ಕೊಂಡು ಹೊರಟರು. ಅಲ್ಲಿಂದ ಸೂರ್ಯಸಂಭವೆ ಯಮುನೆಯ ದಡಕ್ಕೆ ಬಂದು ಅಲ್ಲಿದ್ದ ಅಂಬಿಗರ ನೆರವಿನಿಂದ ನದಿಯನ್ನು ತೆಪ್ಪದಲ್ಲಿ ದಾಟಿ ಚೆಲ್ಲೆಗಂಗಳ ಚೆಲುವೆ ಜಾನಕಿಯೊಡನೆ ಮುಂದಿನ ದಾರಿಯನ್ನು ಹಿಡಿದು ಹೊರಟರು.

ಮುಂದೆ ಬಂದರೆ ಬದರಿ ಮರಗಳ ಒಂದು ವನ ಕಾಣಿಸಿತು. ಅದನ್ನು ದಾಟಿ ಮುಂದೆ ಸಾಗಲು ನೀಲ ಆಕಾಶದಡಿಯಲ್ಲಿ ಶೀತಲವಾದ ಮರಗಳ ರಾಜನೆಂಬಂತೆ ಒಂದು ಆಲದ ಮರವು ಸಾಕ್ಷಾತ್ ಮಹೇಶನಂತೆ ಕಾಣಿಸಿತು. ಅದನ್ನು ಕಂಡ ಸೀತೆಯು ಅತ್ಯಂತ ಹರುಷಗೊಂಡು ನಮಸ್ಕರಿಸಿ ಕರಗಳನ್ನು ಮುಗಿದುಕೊಂಡು ಪ್ರಾರ್ಥನೆ ಮಾಡಿ ಭಕ್ತಿಯಿಂದ, "ಎಲೆ ನ್ಯಗ್ರೋಧವೃಕ್ಷೋತ್ತಮ, ನಮ್ಮನ್ನು ಈ ದಟ್ಟ ಕಾಡಿನ ನಡುವೆ ಕಾಪಾಡು. ವನವಾಸವನ್ನು ಕಳೆದು ಸುಖದಿಂದ ಹಿಂದಿರುಗಿ ಹೋಗುವ ಸಂದರ್ಭದಲ್ಲಿ ಮಂಗಳಕರವಾದ ಹೂಗಳಿಂದಲೂ ಹಣ್ಣಿನ ರಸಗಳಿಂದಲೂ ರುಚಿಕರವಾದ ಪಕ್ವಾನ್ನಗಳಿಂದಲೂ ನಿನ್ನ ಅರ್ಚನೆ ಮಾಡುತ್ತೇನೆ" ಎಂದು ಬೇಡಿಕೊಂಡಳು. ಕಣ್ಣು ಮುಚ್ಚಿ ಹಾಗೆ ಧ್ಯಾನಿಸುವ ಜಾನಕಿಯನ್ನು ನೋಡುತ್ತ ಸೂರ್ಯವಂಶಕೇತುವು ಲಕ್ಷ್ಮಣನೊಡನೆ. "ನೀನು ಸೀತೆಯನ್ನು ಮುಂದೆ ಕರೆದೊಯ್ಯಲು ನಾನು ಹಿಂದೆಯೇ ಬರುತ್ತೇನೆ" ಎಂದ. ಅಂತೆಯೇ ವೈದೇಹಿಸೌಮಿತ್ರಿಯರು ಮುಂದೆ ಹೋಗಲು ಸಿಂಹವಿಕ್ರಮ ರಾಮನು ಹಿಂದೆ ಮೆಲ್ಲಡಿಗಳನ್ನಿಡುತ್ತ ಹೋಗುವ ರೀತಿಯನ್ನು ಕಂಡು ಸರ್ವ ಲೋಕವೂ ಆನಂದದಿಂದ

ಸಂಭ್ರಮಿಸಿತು. ಹಾಗೆ ಸಾಗುತ್ತ ಅಂಗನಾಮಣಿ ಸೀತೆಯು ಯಾವ ಮರಗಿಡಗಳ ಯಾವ ಹೂಹಣ್ಣುಗಳನ್ನು ಬಯಸಿದರೂ ಅದನ್ನು ತಂದುಕೊಡುತ್ತ ಆ ಕಾಡಿನುದ್ದಕ್ಕೆ ಮುನ್ನಡೆದರು. ಸೊಲ್ಲುವ ಗಿಳಿಗಳ ಸೊಂಪು, ವೈಯಾರದಿಂದ ಸಾಗುವ ಅಂಚೆಗಳ ಗುಂಪು, ಸುಳಿಯುವ ಮೆಲುಗಾಳಿಯ ತಂಪು, ಉಲುಹುವ ದುಂಬಿಗಳ ಪೆಂಪು, ಸಡಗರದಿಂದ ಪಂಚಮಧ್ವನಿಯಲ್ಲಿ ಹಾಡುವ ಕೋಗಿಲೆಯ ಕುಕಿಲಿನ ನುಂಪುಗಳಿಂದ ಕೂಡಿದ ಸೂರ್ಯಸುತೆಯ ದಡದ ಗುಂಟ ಬೆಳೆದಿದ್ದ ನಂದನದಲ್ಲಿ ಹೆಜ್ಜೆಯಿಡುತ್ತ, ಪ್ರಕೃತಿ ವಿದ್ಯಮಾನಗಳ ವಿನೋದಗಳನ್ನು ನಿಟ್ಟಿಸುತ್ತ ನಡೆದರೂ, ಅವರು ಪಶ್ಚಿಮಾಭಿಮುಖವಾಗಿ ಅಂದು ಒಂದು ಕ್ರೋಶದಷ್ಟು ದೂರವನ್ನು ಮಾತ್ರ ಕ್ರಮಿಸಲು ಸಾಧ್ಯವಾಯಿತು. ಸಂಜೆಯಾದ್ದರಿಂದ ಸಂಧ್ಯಾವಂದನಾದಿಗಳನ್ನು ಮುಗಿಸಿ ರುಚಿಕರವಾದ ಮಾಗಿದ ಹಣ್ಣುಗಳನ್ನು ತಿಂದು ಅಲ್ಲಿಯೇ ಮಲಗಿ ಸುಖನಿದ್ರೈದರು.

ಎಂದಿನಂತೆ ಮೂಡಗಡಲಿನಿಂದ ನೇಸರನು ಮೇಲೆದ್ದ. ರಾತ್ರಿಯಿಡೀ ಜಾಗರವಿದ್ದು ಆಗ ತಾನೇ ಕಣ್ಣು ಮುಚ್ಚಿಕೊಂಡಿದ್ದ ಲಕ್ಷ್ಮಣನನ್ನು ಎಚ್ಚರಿಸಿ ಬೆಳಗಿನ ಸಂಧ್ಯಾಕೃತ್ಯಗಳನ್ನು ಮುಗಿಸಿ, ಕಾಡಿನ ವೈಭವವನ್ನು ಸವಿಯುತ್ತ ಮೂವರೂ ವಾಲ್ಮೀಕಿಋಷಿಗಳ ಆಶ್ರಮದ ಕಡೆಗೆ ಸಾಗಿದರು. ದೇವೇಂದ್ರನ ನಂದನವನದಂತೆ ಹೂಹಣ್ಣುಗಳಿಂದ ಇಡಿಕಿರಿದಿದ್ದ ಮರಗಿಡಗಳಿಂದ ಕೂಡಿದ್ದ ಆಶ್ರಮದಲ್ಲಿನ ಮುನಿಗಳ ಪರಮಪಾವನ ಶುಭವಾಣಿಗಳನ್ನು ಕೇಳುತ್ತ ಒಳಹೊಕ್ಕು ದ್ವಿಜವರರ ನಡುವೆ ಕಂಗೊಳಿಸುತ್ತಿದ್ದ ವಾಲ್ಮೀಕಿ ಮುನಿಯನ್ನು ಕಂಡರು. ವೈದೇಹಿಸಮೇತರಾಗಿ ರಾಮಲಕ್ಷ್ಮಣರು ಮುನಿಯ ಚರಣಗಳಿಗೆ ಅಭಿನಮಿಸಿದರು. ರಾಘವನ ಪರಮಮಂಗಳ ಮೂರ್ತಿಯನ್ನು ಕಂಡ ಪ್ರಾಚೇತಸನು ಹಿಗ್ಗಿನಿಂದ ತುಂಬಿದ. ಮನ್ಮಥರೂಪಿಯೂ, ಅಮಿತ ಪ್ರತಾಪಿಯೂ ಬಂಧುರಕಂಠವುಳ್ಳವನೂ ಜಟಾಕಲಾಪನೂ ಆದ ರಾಮನನ್ನೂ ಲಕ್ಷ್ಮಣನನ್ನೂ ವೈದೇಹಿಯನ್ನೂ ಕಂಡ ಋಷಿವರೇಣ್ಯನು ಅವರಲ್ಲಿ ರಮಾನಾಥನನ್ನು ಗುರುತಿಸಿ ಮುನಿಸಹಿತ ಮೇಲೆದ್ದು ಆದರದಿಂದ ಅರ್ಘ್ಯಪಾದ್ಯಾಚಮಾನಗಳಿಂದ ಸತ್ಕರಿಸಿ ಸ್ತುತಿಸಿದ. ಮಧುರವಾದ ಹಣ್ಣು ಗೆಡ್ಡೆ ಗೆಣಸುಗಳನ್ನು ತಂದು ಮುಂದಿರಿಸಿ ಒಪ್ಪಿಸಿಕೊಳ್ಳಬೇಕೆಂದು ಹೇಳಿ, "ಸದಯನೇ, ಎಲ್ಲರೂ ಕ್ಷೇಮವೇ? ಭೂಮಿಯ ಸಂರಕ್ಷಣೆಗೋಸುಗ ಬಂದಿರಿ" ಎಂದು ನಯವಾಗಿ ಪದ್ಮನಾಭನನ್ನು ಮನುಷ್ಯೋಪಚಾರಗಳಿಂದ ಹರ್ಷವುಂಟಾಗುವ ಹಾಗೆ ಸತ್ಕರಿಸಿದರು. ಆಗ ಶ್ರೀರಾಮಚಂದ್ರನು ತನ್ನ ಮುಂದಿನ ಕಾರ್ಯವನ್ನು ಕುರಿತು ಮುನಿಗಳಿಗೆ ಈ ರೀತಿ ಹೇಳಿದ: "ತಂದೆಯ ಆಜ್ಞೆಯಿಂದ ನಾನು ಕಾಡಿಗೆ ಬಂದಿದ್ದೇನೆ, ಈ ವಿಷಯ ತಮಗೂ ಇಷ್ಟು ಹೊತ್ತಿಗೆ ತಿಳಿದಿರಬೇಕು. ಹೆಂಡತಿ ತಮ್ಮನ ಜೊತೆಯಲ್ಲಿ ನಾನು ಸುಕ್ಷೇಮದಿಂದ ಇರಲು ತಕ್ಕುದಾದ ಒಂದು ಜಾಗವನ್ನು ತೋರಿಸಿದರೆ ಅಲ್ಲಿ ಕೆಲಕಾಲ ಇದ್ದು ಆನಂತರ ಮುಂದೆ ಹೋಗುತ್ತೇವೆ." ಈ ಮಾತನ್ನು ಕೇಳಿದ ಯತಿಶಿಖಾಮಣಿಯು ನಸುನಗುತ್ತ, "ಕ್ಷಿತಿಸುತಾರಮಣನೇ, ನೀನು ಎಲ್ಲರಲ್ಲಿಯೂ ವಾಸಿಸುವವನಾದರೂ, ಅಖಿಲಭೂತ ಸನ್ಮಾನಮಾನಸನಿಲಯನಾದ ನಿನಗೆ ವಾಸಿಸಲು ತಕ್ಕುದಾದ ಒಂದು ನೆಲೆ ಬೇಕೆಂದು ಕೇಳುತ್ತಿರುವುದರಿಂದ ಹೇಳುತ್ತಿದ್ದೇನೆ: ನಿನ್ನ ನಾಮಸಂಕೀರ್ತನೆಯಿಂದ ಪಾವನಿತವಾಗಿ ನಿರ್ದ್ವಂದ್ವವೂ ನಿಸ್ಪೃಹವೂ ಆದ ನಿಜಾನಂದವನ್ನು ಹೊಂದಿ, ಹಮ್ಮುಬಿಮ್ಮುಗಳನ್ನು



ರಾಮಸೀತಾಲಕ್ಷ್ಮಣರು ವಾಲ್ಮೀಕಿ ಆಶ್ರಮದಲ್ಲಿ

ತೊರೆದು ಸಮಬುದ್ಧಿಯಿಂದ ಕೂಡಿರುವವರ ಮನಸ್ಸೇ ನಿನ್ನ ವಾಸಸ್ಥಾನ. ಹಿತವಾದುದನ್ನು ಹೊಂದಿದಾಗ ಹರ್ಷವನ್ನು ಪಡೆಯದೆ, ಅನಿಷ್ಟ ಸಂಭವಿಸಿತೆಂದು ದುಃಖಿಸದೆ ಪಡೆದುದರಿಂದ ತುಷ್ಟಿವಡೆದು ಆನಂದದಿಂದ ನೀನೇ ಸರ್ವಭೂತಾವಾಸನೆಂದು ಅರಿತು ನಿರ್ಲೇಪದಿಂದಿರುವವನ ಹೃದಯವೇ ಸೀತಾಸಮೇತನಾದ ನಿನ್ನ ಮನೆಯಲ್ಲವೇ? ನಿನ್ನ ಚರಣಸೇವಾಸಕ್ತಿಯಿಂದ ಪರಮಕೀರ್ತನೆಯಿಂದ ಪಾಪವಿರಹಿತನೆನಿಸುವ ಶಾಂತಮಾನಸವು ನಿನಗೆ ಪರಮ ಮಂಗಳಗೃಹ. ಹೆಚ್ಚೇನು ಹೇಳಲಿ, ನಾನು ಬ್ರಹ್ಮರ್ಷಿಯಾದುದು ನಿನ್ನ ನಾಮದ ಮಹಿಮೆಯಿಂದಲೇ ಅಲ್ಲವೇ? ನನ್ನ ಹುಟ್ಟೇನೋ ಬ್ರಾಹ್ಮಣಕುಲದಲ್ಲಿ ಆಯಿತಾದರೂ, ಹೇಗೋ ಭೂಮಿಯೇ ತಿರಸ್ಕರಿಸುವಂತಹ ನಡತೆ ನನ್ನದಾಯಿತು, ಶೂದ್ರಾಂಗನೆಯರ ಜೊತೆಯೇ ಸಂಸಾರವೂ ನಡೆಯಿತು. ಇಬ್ಬರು ಮಕ್ಕಳಾದರು, ಅವರನ್ನು ಸಾಕುವುದಕ್ಕಾಗಿ ಕಳ್ಳರ ಸಂಗ ನನಗಾಯಿತು, ವಿವಿಧ ಆಯುಧಗಳನ್ನು ಧರಿಸಿ ಹಿಂಸಾಕಾರ್ಯದಲ್ಲಿ ನಿರತನಾದೆ. ಹೀಗೆ ಕೆಲವು ಕಾಲ ಕಳೆಯಲು, ಒಂದು ದಿನ ಅಗ್ನಿಯೇ ಅವತಾರವೆತ್ತಿ ಬಂದಂತೆ ದೇವಕುಲಶಿಖಾಮಣಿ ನಾರದನು ಆ ಮಾರ್ಗದಲ್ಲಿ ಬರುತ್ತಿರುವುದನ್ನು ಕಂಡು ಕಡು ಕೋಪದಿಂದ, 'ನಿಲ್ಲು, ನಿಲ್ಲು, ಎಲ್ಲಿಗೆ ಹೋಗುತ್ತಿರುವೇ?' ಎಂದು ಗರ್ಜಿಸುತ್ತ ಹೋದೆ. ನನ್ನನ್ನು ಕಂಡು ಭಯವನ್ನು ನಟಿಸುತ್ತಲೇ ಧೈರ್ಯವನ್ನು ತಂದುಕೊಂಡಂತೆ, 'ಹಾರುವಾಧಮ, ದುಷ್ಟರಾದ ಬೇಡರ ಕಸುಬನ್ನು ಕೈಗೊಂಡೆಯಲ್ಲ, ಯಾಕೆ?' ಎಂದು ಕೇಳಿದ. ನಾನು, 'ಒಂದೇ ಸಮನೆ ಹಸಿವೆಯಿಂದ ನರಳುವ ಹೆಂಡತಿಮಕ್ಕಳನ್ನು ಸಾಕುವುದಕ್ಕಾಗಿ' ಎಂದೆ. ಆಗ ಅವರು, 'ವೀರನೇ, ನೀನು ಮಾಡುವ ಪಾತಕವು ನಿನ್ನ ಮಕ್ಕಳಿಗೆ ಅಂಟುವುದೋ ಇಲ್ಲವೋ ಎಂಬುದನ್ನು ಅವರನ್ನು ವಿಚಾರಿಸಿ ಹೇಳು, ನೀನು ವಾಪಸಾಗುವವರೆಗೂ ಇಲ್ಲಿಯೇ ಇದ್ದು ನಿನ್ನ ಉತ್ತರವನ್ನು ತಿಳಿಯುತ್ತೇನೆ' ಎಂದರು. ಆನಂತರ ತಕ್ಷಣವೇ ಮನೆಗೆ ಹೋದೆ. ಹೆಂಡತಿಮಕ್ಕಳೆಲ್ಲರನ್ನೂ ಕರೆದು, 'ನಾನು ಪ್ರತಿದಿನ ಮಾಡುವ ಹಿಂಸಾಕೃತ್ಯದ ಪಾತಕವೆಲ್ಲವನ್ನೂ ನೀವೂ ಹಂಚಿಕೊಂಡು ಅನುಭವಿಸುತ್ತೀರೋ ಇಲ್ಲವೋ?' ಎಂದು ಕೇಳಿದೆ. ಅವರು ಒಟ್ಟಾಗಿ ಸೇರಿ ಕೊಂಚ ಯೋಚಿಸಿ, 'ಪ್ರತಿದಿನವೂ ನೀನು ತಂದ ವಸ್ತುಗಳನ್ನು ನಾವು ಪಡೆಯುತ್ತೇವಲ್ಲದೆ ನಿನ್ನ ದೋಷ ನಮಗೆ ಹೊದ್ದದು' ಎಂದು ನಿಶ್ಚಯದಿಂದ ನುಡಿದರು. ಅದನ್ನು ಕೇಳಿ ಆಶ್ಚರ್ಯವೂ ಆಯಿತು, ಭಯವೂ ಆಯಿತು. ತಲೆಯ ತುಂಬ ಚಿಂತೆಯನ್ನು ತುಂಬಿಕೊಂಡು ನನ್ನ ದಾರಿ ಹಿಡಿದು ಮರಳಿ ಮುನಿಯಿದ್ದ ಜಾಗಕ್ಕೆ ಬಂದೆ. ನಾನು ಪಡೆದ ಉತ್ತರವನ್ನು ನಿರೂಪಿಸಿ ನನ್ನ ಕೈಲಿದ್ದ ಆಯುಧಗಳನ್ನು ಬಿಸುಟು ಮುನಿವರನಿಗೆ ನಮಸ್ಕರಿಸಿ ದುಃಖದಿಂದ, 'ಖೂಳತನದಿಂದ ದುರಾಚಾರಕರ್ಮಗಳಿಗೆ ಆಳಾಗಿಬಿಟ್ಟೆ. ನನಗೆ ಒದಗಬಹುದಾದ ನರಕವನ್ನು ನೆನೆದು ಚಿತ್ತ ನಡುಗುತ್ತಿದೆ. ಅದರಿಂದ ಪಾರಾಗುವುದನ್ನು ತಿಳಿಸಿಕೊಟ್ಟು ಬದುಕಿಸು, ನನ್ನ ದುಷ್ಕೃತ್ಯಗಳ ಫಲವನ್ನು ನಿವಾರಣೆಮಾಡು' ಎಂದು ದೈನ್ಯದಿಂದ ನಾರದನ ಪಾದಗಳಿಗೆರಗಿದೆ. ಆಗ ಮುನಿವರನು ಅತಿ ಕರುಣೆಯಿಂದ ನನ್ನನ್ನು ನೋಡಿ, 'ಭಯಪಡಬೇಡ. ಸತ್ಸಮಾಗಮವು ಫಲಿಸುವಂತಹ ಮಂತ್ರವೊಂದನ್ನು ನಿನಗೆ ಉಪದೇಶಿಸುತ್ತೇನೆ. ಗಮನವಿಟ್ಟು ಕೇಳು' ಎಂದು ಕಣ್ಣುಮುಚ್ಚಿಕೊಂಡು ದುಷ್ಟ ವಿಪ್ರಾಧಮನಾದ ನನ್ನನ್ನು ಉದ್ಧರಿಸಬೇಕೆಂಬ

ಸಂಕಲ್ಪವನ್ನು ತೊಟ್ಟು, ಯಾವ ಮಂತ್ರವು ಹಾಗೆ ಮಾಡೀತೆಂದು ಯೋಚಿಸಿ ಕಣ್ಣು ಬಿಟ್ಟರು. 'ರಾಮ' ಎಂಬ ನಿನ್ನ ಹೆಸರಿನ ಎರಡು ವರ್ಣಗಳನ್ನು ಅದಲುಬದಲಾಗಿ ಎಡೆಬಿಡದೆ ಉಚ್ಚರಿಸುವಂತೆ ಬೋಧಿಸಿದರು. ನಾನು ಭಕ್ತಿಯಿಂದ ಹಿಂದುಮುಂದು ಎಂಬುದನ್ನು ಗಣನೆಗೆ ತಂದುಕೊಳ್ಳದೆ ಉಚ್ಚರಿಸುತ್ತ ನನ್ನ ಅಂತಃಕರಣವು ತನ್ಮಯಾವಸ್ಥೆಯನ್ನು ತಲುಪಿತು; ನಾನು ಲೋಕದ ಆಗುಹೋಗುಗಳನ್ನೆಲ್ಲ ಮರೆತು ಬಹುಕಾಲ ಸುಖದಿಂದಿದ್ದೆ. ಹೀಗೇ ಜಪಿಸುತ್ತಿರಲು ನನ್ನ ಸುತ್ತ ಹುತ್ತ ಕಟ್ಟಿತು, ನಾನು ಅದರೊಳಗೆ ಹುಗಿದುಹೋದೆ. ಅದರಲ್ಲಿಯೇ ನಾನು ನಿಸ್ಸಂಗ ನಿಶ್ಚಲಹೃದಯವನ್ನು ಹೊಂದಿದ್ದೆ. ಹೀಗೇ ಬಹುಕಾಲ ಕಳೆದ ಮೇಲೆ ಬ್ರಹ್ಮರ್ಷಿಯು ಆ ಮಾರ್ಗದಲ್ಲಿ ಬಂದರು. ಹುತ್ತವನ್ನು ಕಂಡ ಮುನಿಯು ಕರುಣೆಯಿಂದ ನನ್ನ ಹೆಸರನ್ನು ಹಿಡಿದು ಕರೆಯಲು ನಾನು ಗುರುವಚನವನ್ನು ಗೌರವಿಸಿ ಹುತ್ತದಿಂದ ಹೊರಬಂದೆ, ಗುರುಗಳಿಗೆ ಭಕ್ತಿಯಿಂದ ನಮಿಸಿದೆ. ನನ್ನನ್ನು ನೋಡಿದ ಋಷಿವರ್ಯನು ಹರ್ಷದಿಂದ, 'ನಿನಗೆ ಕಿರಾತಜನ್ಮ ಹೋಯಿತು, ನೀನು ವಲ್ಮೀಕದಲ್ಲಿ ಹುಟ್ಟಿದ್ದರಿಂದ ವಾಲ್ಮೀಕಿ ಎಂಬ ಹೆಸರಿನಿಂದ ಮುಕ್ತಿಗಾಧಾರವಾದ ನಿಖಿಲಾರ್ಥವನ್ನು ನೀಡುವ ಕೃತಿಯನ್ನು ರಚಿಸಿ ಮೂರು ಲೋಕಗಳನ್ನೂ ಪೊರೆಯುತ್ತೀಯೆ' ಎಂದು ಆಶೀರ್ವದಿಸಿ ಹೋದ. ಅಂದಿನಿಂದಲೂ ನಾನು ಈ ಬೆಟ್ಟದ ಬುಡದಲ್ಲಿ ವಾಸಿಸುತ್ತಿದ್ದೇನೆ. ರಾಘವ, ನಿನ್ನ ಹೆಸರಿನ ಸ್ಮರಣೆಯ ಮಹಿಮೆಯು ಎಂತಹುದೋ ಹೇಳುವುದಕ್ಕೆ ಯಾರಿಗೆ ಸಾಧ್ಯ? 'ಮರಾ' ಎಂದು ಜಪಿಸಿ ನಾನು ಮುನಿಯಾಗಿಬಿಟ್ಟೆ. ಇನ್ನು ಕ್ರಮವಾಗಿ ಆ ಹೆಸರನ್ನು ಸ್ಮರಿಸುವವರು ಏನಾಗುತ್ತಾರೆಯೋ! ಮತಿಗಗೋಚರನಾದ ನೀನೇ ಎಲ್ಲವನ್ನೂ ಬಲ್ಲೆ, ಬೇರಾರು ತಾನೆ ಅರಿಯಬಲ್ಲರು? ನಿನ್ನ ಚರಣಸೇವಕನಾದ ಕಾರಣದಿಂದ **ಶ್ರೀರಾಮಪುರದರಸನಾದ** ನೀನು ಕರುಣಿಸಿದೆಯಲ್ಲದೆ ತಪಸ್ಸು ಸ್ವಾಧ್ಯಾಯ ಮಂತ್ರ ತಂತ್ರಗಳಲ್ಲಿ ಸಿಲುಕುವೆಯಾ?"

೧೯. ಶಿವನು ಶಿವೆಗೆ ರಾಮನಾಮದ ಮಹಿಮೆಯನ್ನು ವಿಸ್ತರಿಸಿ ಹೇಳಿದುದು

ಘೋರತರವಾದ ದುಷ್ಕರ್ಮಗಳಿಗೆ ವಶನಾಗಿ ನಿರಂತರವಾಗಿ ಕಳ್ಳತನ ಮಾಡುತ್ತ ಪಕ್ಷಿಮೃಗಗಳನ್ನು ಹಿಂಸಿಸುತ್ತ ಸಂಸಾರವನ್ನು ಹೊರೆಯುವ ನೀಚಜನ್ಮದಲ್ಲಿ ಹುಟ್ಟಿ ಗೋವಿಪ್ರಹತಕನೆನಿಸುವ ಕಿರಾತಪತಿಗೆ ಸುಜ್ಞಾನವು ಹುಟ್ಟಿದ ಪರಿಯನ್ನು ಕರುಣೆಯಿಟ್ಟು ಹೇಳಬೇಕೆಂದು ಭಕ್ತಿಯಿಂದ ಧಾರಿಣೀಧರಜಾತೆ ಕೇಳಲು ಗೌರೀಶನು ಹೀಗೆ ಹೇಳಿದ: ಒಳ್ಳೆಯ ಪ್ರಶ್ನೆಯನ್ನು ಕೇಳುವ ಸಾಮರ್ಥ್ಯವು ಶಿವನ ಒಲುಮೆಗೊಳಗಾದವರಿಗಲ್ಲದೆ ಬೇರೆಯವರಿಗೆ ಉದಿಸದು. ನೀನು ಕೇಳುತ್ತಿರುವುದು ಈ ಭೂಮಿಯಲ್ಲಿರುವವರೆಲ್ಲರೂ ಕೇಳಿ ಧನ್ಯರಾಗುವ ಸಚ್ಚರಿತ್ರೆಯಾದ ಕಾರಣ ಹೇಳುತ್ತಿದ್ದೇನೆ. ಹಲವು ವೇದಾಂತಗಳನ್ನು ಬಲ್ಲ ಬ್ರಾಹ್ಮಣಕುಲದಲ್ಲಿ ಹುಟ್ಟಿದ ಮಗುವನ್ನು ತಂದೆತಾಯಿಯರು ಒಂದೆಡೆ ಮಲಗಿಸಿ ಹೋಗಿರಲು ಅದು ಅಳುತ್ತಿರುವುದನ್ನು ಕಂಡ ಮಕ್ಕಳಿಲ್ಲದ ಬೇಡನೊಬ್ಬನು ಸಂತಸದಿಂದ

ಎತ್ತಿಕೊಂಡು ಹೋದ. ಆ ಪುಳಿಂದ ಕೆಲವು ಕಾಲ ಆ ಮಗುವನ್ನು ತನ್ನ ಮಗುವಿನಂತೆಯೇ ಅಕ್ಕರೆಯಿಂದ ಸಾಕಿದ. ಅವನಿಗೆ ಯೌವನ ಉದಯಿಸಿತು; ಆಗ ಬೇಡನು ತನ್ನ ಜಾತಿಗೆ ತಕ್ಕ ರೀತಿಯಲ್ಲಿ ಮಗನ ಮದುವೆಯನ್ನು ಮಾಡಿದ. ಎಲ್ಲರೂ ಸುಖದಿಂದ ಬಾಳುತ್ತಿದ್ದರು. ತನಗೂ ಮಕ್ಕಳಾಯಿತು. ಆಗ ತನ್ನ ಹೆಂಡತಿ ಮಕ್ಕಳನ್ನು ಹೊರೆಯುವ ಉದ್ದೇಶದಿಂದ ತನ್ನ ತೋಳ್ಬಲವನ್ನು ಬಳಸಿಕೊಂಡು ಕಿರಾತವೃತ್ತಿಯಿಂದ ಸಾಕಷ್ಟು ಸಂಪಾದನೆ ಮಾಡಿದ. ಕ್ರೂರ ಹಿಂಸಾಕೃತ್ಯವನ್ನು ಮಾಡುತ್ತ, ಕೋಳಿ ನವಿಲು ಕೋಣ ಎತ್ತು ಜಿಂಕೆ ಹಂದಿ ಮುಂತಾದ ಪ್ರಾಣಿಗಳನ್ನು ಕೊಂದರೂ ಸಂಸಾರದ ನಿಭಾವಣೆ ಕಷ್ಟಕರವಾಗಲು ಅವನು ಕಳ್ಳತನಕ್ಕೆ ಕೈಹಾಕಿದ; ಖೇಟ ಖರ್ವಡಗಳನ್ನು ಸೇರಿ ಅನ್ಯರ ಒಡವೆಹಣಗಳನ್ನು ಕದ್ದು ಹೊಟ್ಟೆಹೊರೆಯುತ್ತ ಕಾಲಕಳೆದ. ಹೀಗೇ ಕೆಲವು ದಿನಗಳು ಕಳೆದವು. ಅತಿ ಕ್ರೂರನೂ ಕಠಿಣನೂ ಹಿಂಸಾನಿರತನೂ ನಿರ್ಮೋಹಿಯೂ ಪಿಸುಣನೂ ಗೋವಿಪ್ರಹತಕನೂ ಎನ್ನಿಸಿಕೊಂಡು ಕಳ್ಳನ ವೇಷದಿಂದ ಪ್ರತಿದಿನವೂ ಹಾದಿಹೋಕರನ್ನು ಕೊಳ್ಳೆ ಹೊಡೆಯುತ್ತ ಜನರನ್ನು ಹಿಂಸಿಸಿ ಬದುಕುತ್ತಿದ್ದ. ಅರಣ್ಯದ ಮಾರ್ಗಮಧ್ಯೆ ನಿಂತು ಪಯಣಿಗರನ್ನು ಅಡ್ಡಗಟ್ಟಿ ಹಿಂಸಿಸಿ ಸುಲಿಗೆ ಮಾಡಿ ಎರಡನೆಯ ಮೃತ್ಯುವೇ ತಾನೆನಿಸಿಕೊಂಡ. ಹೀಗೆ ಆ ಬೇಡನು ಕೆಲ ಕಾಲ ಕಳೆಯಲು ಈ ಕಡೆ ನೆಲದ ಮೇಲೆ ಒಂದು ಹನಿಯೂ ಬೀಳದಂತಹ ಅನಾವೃಷ್ಟಿ ತಲೆದೋರಿತು. ಹನ್ನೆರಡು ವರ್ಷಗಳ ಕಾಲ ಹೀಗಾಗಲು ಭೂಮಿಯಲ್ಲಿ ಹಸುರೆಂಬುದೇ ಕಾಣದಾಯಿತು. ಸಂಕಟಪಡುತ್ತ ಪ್ರಾಣಿಗಳು ನಿಲ್ಲಲು ನೆಲವೇ ಇಲ್ಲದೆ ಪ್ರಳಯಕಾಲವೆಂಬಂತಾಯಿತು; ಆಹಾರ ಹುಡುಕಿಕೊಂಡು ದೆಸೆದೆಸೆಗೆ ಓಡುತ್ತ ಪ್ರಾಣಿಗಳು ಸತ್ತುಬಿದ್ದವು. ಜನರೂ ಅತ್ಯಂತ ದುಃಖದಿಂದ ಕಾಲಕಳೆಯುವಂತಾಯಿತು.

ಹೀಗೆ ಅಪಾರ ವಿಕಾರವು ಸಂಭವಿಸಲು ಸಪ್ತರ್ಷಿಗಳು ಕೂಡ ನಿಲ್ಲಲು ನೆಲೆಯಿಲ್ಲದೆ ಅಲೆದಾಡುತ್ತ ಹಿಮಪರ್ವತದ ಪ್ರದೇಶಕ್ಕೆ ಹೋಗಬೇಕೆಂದು ಬರುತ್ತಿರಲು ದಾರಿಯಲ್ಲಿ ಈ ಬೇಡನನ್ನು ಕಂಡರು. ಅವನೋ ಕೈಯಲ್ಲಿ ಆಯುಧಗಳನ್ನು ಹಿಡಿದು ವೇಗದಿಂದ ಓಡಿಬಂದು ಇವರನ್ನು ಅಡ್ಡಗಟ್ಟಿ ಅವರಲ್ಲಿದ್ದುದೆಲ್ಲವನ್ನೂ ಪಡೆಯುತ್ತೇನೆಂದು ಭಾವಿಸಿದ. ಬಹಳ ಕಾಲದ ಬಳಿಕ ತನಗೆ ಸಾಕಷ್ಟು ಹಣ ಸಿಕ್ಕಬಹುದೆಂದು ನಲವಿನಿಂದ ಕತ್ತಿಯನ್ನು ಜಳಪಿಸುತ್ತ ಕೂಗುತ್ತ 'ಎಲವೆಲವೋ ಹೋಗಬೇಡ, ನಿಲ್ಲು, ನಿಲ್ಲು' ಎನ್ನುತ್ತ ಲಯಕಾಲದ ರುದ್ರನ ಹಾಗೆ ಖೂಳನು ಅಟ್ಟಿಸಿಕೊಂಡು ಬರುವುದನ್ನು ಕಂಡು ಸಪ್ತಋಷಿಗಳು ಭಯಭೀತರಾಗಿ ಮುಂದುಗಾಣದೆ ಒಬ್ಬರೊಬ್ಬರ ಮುಖವನ್ನು ನೋಡುತ್ತ ಆಲೋಚಿಸಿದರು. ಅಡಸಿದ ಆಪತ್ತಿನಲ್ಲಿ ಧೈರ್ಯಗುಂದಿದರೆ ಕಾರ್ಯ ಕೆಡುವುದೆಂದು ಹೇಗೋ ಮನಸ್ಸನ್ನು ಹಿಡಿತದಲ್ಲಿರಿಸಿಕೊಂಡು ವಿಪತ್ತಿನಿಂದ ಪಾರಾಗಬೇಕೆಂದು ಆಡಬೇಕಾದ ಧೈರ್ಯದ ಮಾತುಗಳನ್ನು ಒಗ್ಗೂಡಿಸಿಕೊಂಡು, ಕಣ್ಣಿನಲ್ಲಿ ಕಿಡಿಗಳನ್ನುದುರಿಸುತ್ತ ಆರ್ಭಟಿಸುತ್ತ ಬಿರುನುಡಿಗಳನ್ನಾಡುತ್ತ ಬರುವ ಪುಳಿಂದಾಗ್ರೇಸರನ ಕಡೆ ನೋಡುತ್ತ ಕಶ್ಯಪನು ಉಪಾಯದಿಂದ ಹೀಗೆಂದ: 'ಜೀವನವು ತಾವರೆಯೆಲೆಯ ಮೇಲಿನ ನೀರ ಹನಿಯಂತೆ ಅಸ್ಥಿರ, ಶರೀರಭೋಗಗಳು ನೀರಗುಳ್ಳೆಯಂತೆ ಕ್ಷಣಿಕ, ಸಂಪತ್ತು ಮಿಂಚಿನಂತೆ ತೋರಿ ಕಣ್ಮರೆಯಾಗುವಂತಹುದು, ಯೌವನವು ಮೋಡದ ನೆರಳು. ಶೋಕಕಷ್ಟತಾಪತ್ರಯಗಳಿಂದ

ಕೋಟಲೆಗೊಳ್ಳುವ ಈ ಶರೀರವು ಮಲಮೂತ್ರಗಳ ದುರ್ಗಂಧದ ನೆಲೆ; ಇದನ್ನು ನೆಚ್ಚಿಕೊಂಡು ನೀಚರು ಓಡಾಡುವರಲ್ಲ! ಮೂಳೆಹಂದರವನ್ನು ನರಗಳು ಬಿಗಿದಿರುತ್ತವೆ, ಸ್ನಾಯುಗಳು ಅದಕ್ಕೆ ಮಾಂಸರಕ್ತವನ್ನು ಲೇಪಿಸಿ ಹಿಡಿದಿರುತ್ತವೆ, ಅದಕ್ಕೆ ಚರ್ಮವು ರಕ್ಷೆಯಾಗಿ ಸುತ್ತಿರುತ್ತದೆ. ದುರ್ಗಂಧ ರೋಗ ರಕ್ತಗಳ ಈ ಮಂದಿರವು ಸುರಿಯುವ ಪಿತ್ತ ಶ್ಲೇಷ್ಮ ಅಶುಚಿಗಳ ಆಗರ, ಅದೂ ಕ್ಷಣಿಕ. ಇದನ್ನು ತಿಳಿಯದೆ ಅದೇ ಹಿತವೆಂದು ಪರಲೋಕಶೋಕವನ್ನು ಲೆಕ್ಕಿಸದೆ ನರಕವನ್ನು ಸೇರುತ್ತಾರೆ. ಇದಕ್ಕಿಂತಲೂ ಜೀವಿಗಳಿಗೆ ಅಶುಭವಾದುದು ಬೇರೇನಿದೆ? ಬ್ರಾಹ್ಮಣದೂಷಣ, ಅವರ ಹಣವನ್ನು ದೋಚುವುದು, ಅವರ ಹೆಂಡತಿಮಕ್ಕಳಿಗೆ ತೊಂದರೆ ಕೊಡುವುದೇ ಪಾಪಕರವಾದವು. ಅಂತಹದರಲ್ಲಿ ಬ್ರಹ್ಮಹತ್ಯೆ, ಮದ್ಯಪಾನ, ಗುರುತಲ್ಪಗಮನ, ಕಳ್ಳತನಗಳು ಕ್ಷೋಭೆಗೊಳಿಸುತ್ತವೆ. ಬ್ರಾಹ್ಮಣನ ಹಣವನ್ನು ಕದಿಯುವುದೆಂಬ ಬೆಂಕಿಯು ಧರ್ಮವನ್ನು ಸುಟ್ಟು ಅಂಥ ಕಳ್ಳನನ್ನು ಕರಿಕಲಾಗಿಸುತ್ತದೆ. ಒಳ್ಳೆಯದಾಗಲೆಂದು ಹಾರೈಸುವವರು ಬ್ರಾಹ್ಮಣರ ಹಣವನ್ನು ಮುಟ್ಟಬಾರದಲ್ಲವೇ? ತನ್ನ ಆಶ್ರಯದಲ್ಲಿರುವವರನ್ನು ಕಾಪಾಡಲೆಂದು ಗೋಬ್ರಾಹ್ಮಣರನ್ನು ಕೊಂದು ಅವರ ದ್ರವ್ಯವನ್ನು ಅಪಹರಿಸಿದರೆ ಪಾತಕಗಳು ಒಟ್ಟೈಸಿ ಕ್ರೂರವಾದ ನರಕದಲ್ಲಿ ಪಾಪಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸದೆ ಇರಲಾಗುತ್ತದೆಯೇ? ಇದು ತಿಳಿಯದೆ?" ಎಂದು ವಿವರಿಸಲು ಆ ಸಾಧುಜನರ ಸಂದರ್ಶನದಿಂದಾಗಿ ಕ್ರೂರ ಬೇಡನು ನಮ್ರತೆಯನ್ನು ಹೊಂದಿದ. 'ಸಾಧುಜನರ ಸಂಸರ್ಗದಿಂದ ಪಾಪನಾಶವಾಗುವುದು, ಹೃತ್ಸಿದ್ಧಿಯಾಗುವುದು, ಅದರಿಂದ ಪುಣ್ಯ ಸಂಪಾದನೆಯಾಗುತ್ತದೆ, ಅದರ ಫಲದಿಂದ ಸ್ವರ್ಗ ಮುಂತಾದ ಭೋಗಗಳು ದೊರೆಯುತ್ತವೆ. ಹೀಗಾಗಿ ಈ ಲೋಕದಲ್ಲಿ ಸತ್ಸಂಗವು ಕೈವಲ್ಯದ ಹಾದಿ ದೊರೆಯುತ್ತದೆ. ಬೆಳುದಿಂಗಳಿನಿಂದ ಕಲ್ಲುಗಳೂ ಸಂತಸಗೊಳ್ಳುವುದಿಲ್ಲವೇ? ಸಜ್ಜನರ ಬಳಿಯಲ್ಲಿ ಕರುಣೆಯುಂಟಾಗುವುದರಲ್ಲಿ ಆಶ್ಚರ್ಯವೇನಿದೆ? ಗಂಗಾಸ್ನಾನ, ತುಳಸೀಸಮರ್ಪಣ, ಸತ್ಪುರುಷಸಂಗ, ಹರಿಕೀರ್ತನ ಮುಂತಾದವು ಎಲ್ಲ ಪಾಪಗಳನ್ನೂ ಹಿಂಗಿಸುತ್ತವೆ, ಸಾಧುಕರವಾಗಿಸುತ್ತವೆ' – ಮುಂತಾದ ಆ ವಿಪ್ರರ ಹಿತವಾಕ್ಕುಗಳನ್ನು ಕೇಳಿ ಅವರಿಗೆ ಮತ್ತೆ ನಮಸ್ಕರಿಸಿ, ಮೃದುನುಡಿಗಳಿಂದ ಅವರನ್ನು ಕೇಳಿದ: "ಮನೆಗೆ ಹೋಗಿ ನನ್ನವರನ್ನು ಕೇಳಿ ಬರುವವರೆಗೂ ನೀವು ಇಲ್ಲೇ ಇರುವಿರೆಂದು ನಾನು ಹೇಗೆ ನಂಬಲಿ? ನಿಮ್ಮ ಜೀವಗಳನ್ನು ಕೊಳ್ಳದೆ ಉಳಿಸಿ ನಾನು ಬದುಕುವುದಾದರೂ ಹೇಗೆ?" ಎನ್ನಲು ಮೊದಲು ವಸಿಷ್ಠನು ವಿನಯದಿಂದ, "ಶಬರನೇ ಕೇಳು, ಒಂದು ವಾರ ಕಾಲ ಬೆಳಗಿನ ಸ್ನಾನವನ್ನು ಬಿಟ್ಟ ಬ್ರಾಹ್ಮಣನಿಗೆ ಒದಗುವ ಪಾಪ ನನಗುಂಟಾಗಲಿ" ಎಂದ. "ಶೂದ್ರಗ್ರಾಮದಲ್ಲಿ ವಾಸಿಸಿ ಅವರೊಡನೆ ಒಂದೇ ಬಾವಿಯ ನೀರನ್ನು ಕುಡಿಯುವ ಬ್ರಾಹ್ಮಣನು ಹೋಗುವ ನರಕಕ್ಕೆ ನಾನು ಹೋಗುವಂತಾಗಲಿ" ಎಂದು ವಿಶ್ವಾಮಿತ್ರನು ಹೇಳಿದ. "ನೀನು ಬರುವ ಮುಂಚೆಯೇ ಹೊರಟುಹೋದರೆ ವೈಶ್ವದೇವರಿಗೆ ಭಕ್ತಿಯಿಂದ ಹವಿಸ್ಸನ್ನರ್ಪಿಸದೆ ಊಟಮಾಡುವ ದ್ವಿಜಾಧಮನಿಗೆ ಬರುವ ಪಾಪ ನನಗೆ ಉಂಟಾಗಲಿ" ಎಂದು ಲಕ್ಷಪಾದ ಹೇಳಿದರೆ; ಜಮದಗ್ನಿಯು, "ಮುಂಚೆಯೇ ನಾನು ಹೊರಟುಹೋದರೆ ದುಃಖದಿಂದ ಬಳಲುತ್ತಿರುವ ಶ್ರೋತ್ರಿಯನನ್ನು ತಿರಸ್ಕರಿಸಿದ ಪಾತಕವು ನನಗುಂಟಾಗಲಿ" ಎಂದ. "ಅತಿಶಯ ವೈಭವದಿಂದ ಒಬ್ಬನೇ ಊಟಮಾಡಿದರೆ ಬ್ರಾಹ್ಮಣನಿಗೆ ಬರುವ

ಪಾತಕವು ಇಲ್ಲಿಂದ ಹೋದರೆ ನನಗೆ ಬರಲಿ" ಎಂದು ಅಗಸ್ತ್ಯನು ನುಡಿದ. "ಮೊದಲೇ ಹೊರಟು ಹೋದರೆ ತಂದೆತಾಯಿಗಳ ಮಾತನ್ನು ಮೀರಿ ನಡೆದವನಿಗೆ ಯಾವ ಪಾಪವು ಅಡಸುತ್ತದೆಯೋ ಅಂತಹ ಪಾಪವು ನನಗೆ ಬರಲಿ" ಎಂದು ಕಶ್ಯಪನು ಹೇಳಲು; ಅತ್ರಿಯು, "ಬುದ್ಧಿಯಿಲ್ಲದೆ ಬ್ರಾಹ್ಮಣನು ಪೂರ್ವದಿಕ್ಕಿಗೆ ಅಭಿಮುಖವಾಗಿ ಮಲಮೂತ್ರಗಳನ್ನು ವಿಸರ್ಜಿಸಿದರೆ ಯಾವ ಪಾಪವು ಬರುವುದೋ ಅಂತಹ ಪಾಪವು ನನಗೆ ಬರಲಿ" ಎಂದ. ಈ ಮಾತುಗಳನ್ನು ಕೇಳಿ ಸಂತೃಪ್ತನಾದ ಶಬರನು ತನ್ನ ಮನೆಯ ಕಡೆ ಹೊರಟ.

ಬೊಗಳುವ ನಾಯಿಗಳ ತಂಡ, ಊಳಿಡುವ ನರಿಗಳ ಹಿಂಡು, ಅರಚುತ್ತಿರುವ ಹಂದಿಗಳು, ಕತ್ತರಿಸುವ ಆಯುಧಗಳಿಂದ ಸುರಿಯುವ ರಕ್ತಮಾಂಸಕ್ಕೆ ಎರಗುವ ಹದ್ದುಗಳು, ಕುಕ್ಕಿ ಕುಕ್ಕಿ ಹುಳಗಳನ್ನು ತಿನ್ನುವ ಕೋಳಿಗಳು, ಬಿಡಿಸಿಟ್ಟಿರುವ ಎಲುಬುಗಳ ಮೇಲೆ ಉರುಳಾಡುವ ಕಾಡುಹಕ್ಕಿಗಳು, ಕೊಲ್ಲು ಕುಟ್ಟು ಕಡಿ ಎಂದು ಕೂಗಾಡುತ್ತಿರುವ ಜನರು – ಇವುಗಳಿಂದ ಶಬರಗೇರಿಯು ಕೂಡಿತ್ತು. ಒಂದು ಕಡೆ ಮಾಂಸದ ರಾಶಿಯ ದುರ್ಗಂಧ, ಮತ್ತೊಂದೆಡೆ ಮಜ್ಜೆಮೇಧಸ್ಸಿನ ಕಿಮಟುವಾಸನೆ, ಒಂದು ಕಡೆಯಲಿರುವ ಹೆಂಡದ ಗಡಿಗೆಗಳು, ಮಗುದೊಂದೆಡೆ ಹೊಲಸು ನಾರುವ ಮೂಳೆಯ ಒಟ್ಟಿಲು, ಮಗುದೂ ಒಂದೆಡೆಯಲ್ಲಿ ಅಸ್ಥಿಪಂಜರಗಳು ಜೋತಾಡುತ್ತಿದ್ದು ಯಮಧರ್ಮನ ಮನೆಗಿಂತ ಅಧಿಕವೆನ್ನಿಸುವ ಆ ಕೇರಿಯು ಜೀವರಾಶಿಯು ಕಂಪಿಸುವ ಹಾಗೆ ಬೀಭತ್ಸಕರವಾಗಿತ್ತು. ಊರ ಬಾಗಿಲಲ್ಲಿಯೇ ಹರಿತವಾದ ಆಯುಧಗಳನ್ನು ಹಿಡಿದು ಆರ್ಭಟಿಸುವ ಭಟರುಗಳು ಅಲ್ಲಲ್ಲಿ ನಿಂತುಕೊಂಡು ಒಂದು ಹುಲ್ಲುಕಡ್ಡಿಯೂ ಚಲಿಸದ ಹಾಗೆ ನಿಯಂತ್ರಿಸುತ್ತ ಯಾರಿಗೂ ಒಳಹೊಗಲು ಅಸಾಧ್ಯವೆನ್ನಿಸುವಂತೆ ಆ ಪ್ರದೇಶ ಅತ್ಯಂತ ಘೋರವಾಗಿತ್ತು. ಅಂತಹ ಊರೆಂಬ ಕಾಡಿಗೆ ಬಂದ ಶಬರರಾಜನನ್ನು ಕಂಡು ಮಿಕ್ಕೆಲ್ಲರೂ ನಮಸ್ಕರಿಸಿ ಸ್ತುತಿಸಲು ಅದನ್ನೆಲ್ಲ ಕೇಳಿಸಿಕೊಂಡು ಬಂದು ತನ್ನ ಮಲಗುವ ಮನೆಯನ್ನು ಹೊಕ್ಕು ಕುಳಿತ.

ಹೀಗೆ ದುಮ್ಮಾನವನ್ನು ಹೊತ್ತು ಮಾತನಾಡದೆಯೇ ಕುಳಿತ ಪತಿಯ ಸನಿಹಕ್ಕೆ ಅವನ ಹೆಂಡತಿಯು ಹೋಗಿ ಮೆಲುವಾಗಿ ಸಾಂತ್ವನದ ಮಾತುಗಳಿಂದ ಅವನನ್ನು ಉಪಚರಿಸಿದಳು. ಆದರೂ ಈ ಬೇಡ ಸುಮ್ಮನೆ ಕುಳಿತಿದ್ದ. ಅವಳು ಅವನ ಕಾಲುಗಳನ್ನೊತ್ತುತ್ತ ವೈಯಾರವನ್ನು ಬೀರಲು ಆ ಶಬರಪತಿಯು ಮ್ಲಾನವದನದಿಂದಲೇ ಹೀಗೆಂದ: "ಹೆಣ್ಣೆ, ನಿನ್ನ ಉಪಚಾರದಿಂದಲೂ ನನಗೆ ಹಿತವಾಗುತ್ತಿಲ್ಲ, ಒಂದು ಮಾತನ್ನು ಕೇಳುತ್ತೇನೆ, ನೀನು ನಿಜವನ್ನೇ ಹೇಳಬೇಕು; ನಾನು ದುಷ್ಟ, ಸತ್ಯವೇ ಸದ್ಗತಿದಾಯಕ, ಅಸತ್ಯವೇ ನರಕ ಇದನ್ನು ಗಮನಿಸಿ ಹೇಳು" ಎನ್ನಲು, ಹೆಂಡತಿಯು ನಗುತ್ತ, "ನನ್ನ ತನುಮನಗಳನ್ನು ನಿನಗರ್ಪಿಸಿದ್ದೇನೆ, ನಿನಗೆಂದೂ ಮೋಸಮಾಡಲಾರೆ, ನಿನ್ನ ಮನಸ್ಸಿನಲ್ಲಿರುವುದನ್ನು ಕೇಳು" ಎಂದು ಆಶ್ವಾಸನೆಯಿತ್ತಳು. ಆಗ ಬೇಡನು, "ಕಳ್ಳತನ, ಬೇಸಾಯವ್ಯಾಪಾರಗಳಲ್ಲಿನ ಮೋಸ, ಮಿತ್ರದ್ರೋಹ, ಗೋವಿಪ್ರಹತಿ, ಇಂತಹ ಅವಿಚಾರಿತ ಕಾರ್ಯಗಳನ್ನು ಮಾಡಿ ನಾನು ಹಣವನ್ನೇನೋ ಸಂಪಾದಿಸಿದೆ, ಹಾಗೆ ಗಳಿಸಿದ ಹಣದಿಂದ ಹೆಂಡತಿಮಕ್ಕಳನ್ನು ಸಾಕಿ

ಇಷ್ಟು ದಿನಗಳ ಕಾಲ ಸುಖದಿಂದಿದ್ದೆ. ಇಷ್ಟು ಕಾಲ ನೀನು ಸಾಕಷ್ಟು ಸುಖವನ್ನನುಭವಿಸಿದೆ, ಸಂಪತ್ತೂ ನಿನ್ನ ವಶವಾಯಿತು. ನಿಮಗಾಗಿ ನಾನು ಇಷ್ಟು ದಿನಗಳು ಮಾಡಿದ ಪಾಪವು ಎಣೆಯಿಲ್ಲದಷ್ಟು. ನೀನು ಗಂಡನ ಅರ್ಧಾಂಗಿಯಲ್ಲವೇ, ನೀನು ಈ ಪಾಪದಲ್ಲಿ ಅರ್ಧವನ್ನು ಹಂಚಿಕೊಳ್ಳುವೆಯಲ್ಲವೇ?" ಎನ್ನಲು ಆ ಚೋರಪತ್ನಿಯು ನಗುತ್ತ, "ನನ್ನನ್ನು ಪ್ರೀತಿಯಿಂದ ಕಂಡು, ಮಕ್ಕಳನ್ನು ಸಲಹಿ, ನನ್ನ ನಂಟರಿಷ್ಟರಿಗೂ ವಸ್ತ್ರಭೂಷಣಗಳನ್ನಿತ್ತು ಇಷ್ಟು ದಿನ ನೀನು ಸುಖದಿಂದಿರಿಸಿದ್ದುದೇನೋ ಸತ್ಯವೇ. ನಾವೆಲ್ಲ ನಿನ್ನ ಸೇವಕರು, ಮಾಡಿದ ತಪ್ಪಿಗೆ ಶಿಕ್ಷಾರ್ಹರು, ನಮ್ಮ ಮೇಲೆ ಕೋಪಿಸಿಕೊಂಡು ಪೊರೆಯಲು ಕೊಲ್ಲಲೂ ನಿನಗೆ ಅಧಿಕಾರವಿದೆ. ಆದರೆ ಪ್ರೀತಿಯಿಂದ ಮೋಹದಿಂದ ಎಲ್ಲರೂ ಹೆಂಡತಿಮಕ್ಕಳನ್ನು ಪಾಲಿಸುತ್ತಾರಲ್ಲವೇ? ಹಾಗಾಗಿ ನಾವು ನಿನ್ನ ಪಾಪವನ್ನು ಹೇಗೆ ಹಂಚಿಕೊಳ್ಳಬಲ್ಲೆವು? ಯಾರಾದರೂ ಮಾಡಿದ ಪಾಪವನ್ನು ಬೇರಾರಾದರೂ ಹಂಚಿಕೊಳ್ಳಲಾದೀತೇ? ತಾನು ಮಾಡಿದ ಪಾತಕಗಳ ಫಲವನ್ನು ಬೇರೆಯವರು ಅನುಭವಿಸುವುದು ಶಾಸ್ತ್ರಸಮ್ಮತವಲ್ಲ. ಹೆಂಡತಿ ಮಕ್ಕಳು ಶಿಷ್ಯರು ಮಾಡುವ ಮಂಗಳವು ಗುರುವಿಗೆ ಸೇರುವುದಿಲ್ಲ; ಹಾಗೆಯೇ ಅವರಿಗೆ ಈತನ ಪಾತಕಗಳ ಫಲವು ಸೇರವು. ಸತಿಯ ಧರ್ಮಭಂಗವು ಪತಿಗೆ ಸೇರುತ್ತದೆ; ಆದರೆ ಸತಿಗೈದ ಪುಣ್ಯವು ಗಂಡನಿಗೆ ಸೇರದು. ಮಾಡಿದವನು, ಮಾಡಿಸಿದವನು, ನೋಡಿದವನು, ಹೇಳಿದವನು ಕೂಡುಣ್ಣುತ್ತಾರೆಂಬುದು ಧರ್ಮದ ಮಾತು. ಆದರೆ ಹೆಂಡತಿಗೆ ಈ ನಾಲ್ಕೂ ಅಧಿಕಾರದಲ್ಲಿ ಎಳ್ಳಷ್ಟೂ ಸೇರುವುದಿಲ್ಲ. ಹೇಳಿದಂತೆ ಇದ್ದು, ಕೊಟ್ಟುದನ್ನು ತಿಂದು, ಉತ್ತರವನ್ನೂ ನೀಡಲು ಅಧಿಕಾರವಿಲ್ಲದ ಹೆಂಡತಿಯು ಗಂಡನ ಪಾಪದಲ್ಲಿ ಭಾಗಿಯೆನಿಸುವುದಿಲ್ಲ" ಎಂದುತ್ತರಿಸಿದಳು.

ಈ ಮಾತುಗಳನ್ನು ಕೇಳಿ ಸಂಕಟಗೊಂಡ ಶಬರನು ತನ್ನ ಮಗನೊಂದಿಗೆ ಹೀಗೆ ಹೇಳಿದ: "ನಾನು ಮಾಡಿದ ಪಾತಕಸಹಸ್ರಗಳಿಗೂ ಸಣ್ಣಪುಟ್ಟ ಪಾಪಕಾರ್ಯಗಳಿಗೂ ಲೆಕ್ಕವಿಲ್ಲ. ಈ ನಮ್ಮ ಜಾತಿಧರ್ಮಕ್ಕೆ ಅನುಗುಣವಾಗಿ ನಡೆದುಕೊಂಡು ನಿಮ್ಮನ್ನೆಲ್ಲ ನಾನಿಷ್ಟು ದಿನಗಳೂ ಸಲಹಿದೆ. ಅದನ್ನೆಲ್ಲ ನೆನೆಸಿಕೊಂಡು ಈಗ ನನ್ನ ಮನಸ್ಸು ಸೋತಿದೆ, ಭಯವು ಹುಟ್ಟಿದೆ. ಆದ್ದರಿಂದ ನೀನು ಅವುಗಳಲ್ಲಿ ಒಂದಷ್ಟು ಭಾರವನ್ನು ಹೊರಬೇಕು" ಎಂದು ಕೇಳಿಕೊಂಡ. ಅದನ್ನು ಕೇಳಿದ ಮಗನು ನಗುತ್ತ, "ನಿನ್ನ ಮಾತನ್ನು ಕೇಳಿ ನನ್ನ ಕಿವಿ ಕಿವುಡಾದವು, ನನ್ನ ನಾಲಿಗೆಯಲ್ಲಿ ಮಾತೇ ಹೊರಡವು, ಮನಸ್ಸು ನಡುಗುತ್ತಿದೆ. ಅಪ್ಪ, ನಿನ್ನ ಮಾತುಗಳಿಂದೇನು ಫಲ? ನಾನಂತೂ ನಿನ್ನ ಪಾತಕಗಳಲ್ಲಿ ಒಂದಿನಿತೂ ತೆಗೆದುಕೊಳ್ಳುವುದಿಲ್ಲ. ನಾನು ಆಳು, ನೀನು ದೊರೆ; ನಾನು ಸೇವಕ, ನೀನು ಯಜಮಾನ – ನಮ್ಮ ನಡುವೆ ಇರುವುದು ಸ್ವಾಮಿಭೃತ್ಯನ್ಯಾಯ; ನಾನು ಪೋಷ್ಯ, ನೀನು ಪೋಷಕ; ನಾನು ಮಗ, ನೀನು ಕೃಪಾಳುವಾದ ತಂದೆ. ಶಾಸ್ತ್ರವಿಧಿಯಿಂದ ಹೆಂಡತಿಮಕ್ಕಳಿಗೆ ಪುರುಷನ ಪಾಪ ಎಳ್ಳಷ್ಟೂ ಸೇರುವುದಿಲ್ಲ. ಪರಿಜನರನ್ನು ಸಾಕಲು ಅವರಿಗರಿಯದಂತೆ ಮಾಡಿದ ಪಾಪದ ಉರಿ ಅವರನ್ನು ಸುಡಲಾರದು. ಅದಕ್ಕಾಗಿ ಹಲುಬಿ ಏನು ಪ್ರಯೋಜನ? ಇದನ್ನು ಅರಿತ ಧೀಮಂತರು ಸತಿಸುತರಿಗೆ ಸುಖವನ್ನುಂಟುಮಾಡಲು ಪಾತಕಗಳನ್ನು ಮಾಡುವುದಿಲ್ಲ. ತಾವರೆ ಎಲೆಯ ಮೇಲಿರುವ ನೀರಹನಿಯಂತೆ ಒಡನಿದ್ದರೂ ಇಲ್ಲದಂತೆ

ಕಾಲಕಳೆಯುತ್ತಾರೆ. ಹಾಗಾಗಿ ನೀನು ಮಾಡಿದುದನ್ನು ನೀನು ಉಣ್ಣಬೇಕೇ ಹೊರತು ಪರರು ಉಣ್ಣಲಾರರು" ಎಂದು ಖಂಡಿತವಾಗಿ ನುಡಿದ.

ಮಗನಾಡಿದ ಮಾತನ್ನು ಕೇಳಿ ಬೇಡರೊಡೆಯನು ಮನಸ್ಸಿನಲ್ಲಿಯೇ ಕಂದಿ ಕುಂದಿದ, ಚಿಂತೆಯಿಂದ ಬೆಂದ. ತನ್ನ ಪೂರ್ವ ದುಷ್ಕೃತ್ಯಗಳನ್ನು ನೆನೆಸಿಕೊಂಡು ಮನಸ್ಸಿಗೆ ಯಾವ ಆಲೋಚನೆಯೂ ಬಾರದಾಯಿತು. ಬಯಲಾಸೆಯಿಂದ ಪರಿಜನರಿಗಾಗಿ ನಾನು ಪಾತಕಗಳ ಆಳಾದೆ ಎಂದುಕೊಂಡು ಆ ಮುನಿಗಳಿದ್ದ ಜಾಗಕ್ಕೆ ಶಬರನು ಕೆಂಡವನ್ನು ತುಳಿದ ಬೆಕ್ಕಿನಂತೆ ಬಂದ. ಪರಮಪುರುಷರ ದರ್ಶನದಿಂದ ಉದ್ಭವವಾದ ಜ್ಞಾನದಿಂದ ಎಚ್ಚೆತ್ತು, ಧರ್ಮವನ್ನು ಮರೆತು ಸುಖಾಸ್ಪದವೆಂದು ಹಿಂದುಮುಂದು ನೋಡದೆ ಮನೋವಶನಾದವನು ನನ್ನಂತೆ ನರಕಭಾಜನನಾಗುವನಲ್ಲದೆ ಉಳಿಯನು ಎಂದು ತನ್ನಲ್ಲಿಯೇ ಕೊರಗುತ್ತ, 'ಮುಂದೇನು ಗತಿ' ಎಂದು ಭಯಾತುರನಾಗಿ ಬೇಗ ಬೇಗ ನಡೆತಂದ. ಬಿರಬಿರನೆ ಬರುವ ಪುಳಿಂದನನ್ನು ಕಂಡ ಋಷಿಗಳು ಭೀತಿಯಿಂದ ತಲ್ಲಣಿಸುತ್ತ ಒಬ್ಬರೊಬ್ಬರ ಮುಖವನ್ನು ನೋಡಿಕೊಂಡರು. ಆದರೆ ಪುಳಿಂದ ಮನೆಯಲ್ಲಿ ನಡೆದುದನ್ನು ಚಿಂತಿಸಿ, ಈ ಬಾಧೆಯಿಂದ ತಪ್ಪಿಸುವವರಾರೆಂದು ರಘುವರನನ್ನು ಮೊರೆವೊಗಬೇಕೆಂದು ಆಲೋಚಿಸಿ ಸ್ತುತಿಸತೊಡಗಿದ.

"ವಿಷಯಸುಖವು ಶಾಶ್ವತವೆಂದು ಭಾವಿಸಿ ನರಕಕ್ಕೆ ಹೆದರದೆ ದೊಡ್ಡ ಪಾತಕಗಳನ್ನು ಮಾಡಿ ಹರ್ಷಗೊಳ್ಳುತ್ತಿರುವೆನಲ್ಲ, ಯಮನ ಉಗ್ರಕಿಂಕರರಿಂದ ತಪ್ಪಿಸಿಕೊಳ್ಳುವುದೆಂತು? ಆ ಮಾರ್ಗವೆಂದರೆ ಗುರುಪದವಿಡಿದು ಸಕಲಶೋಕವನ್ನೂ ಹೋಗಲಾಡಿಸುವ ಎಚ್ಚರದಿಂದ ನೃಪವರನೂ ವಿಪುಳಕೋದಂಡಧರನೂ ಆದ ರಘುವರನನ್ನು ನೆನೆ; ಬಲುವಿಧದ ಕರ್ಮದಲ್ಲಿ ಸಿಲುಕಿ, ನಾನಾ ಯೋನಿಗಳಲ್ಲಿ ಬಿದ್ದು ಪುಣ್ಯದಿಂದ ಸದ್ವಿಪ್ರಜನ್ಮ ಸುವಿವೇಕಗಳನ್ನು ಗಳಿಸಿದ್ದೂ ಪರಮನನ್ನು ಮರೆತು ಕೊಲ್ಲುವುದಕ್ಕೂ, ಪಶು ಆಹಾರವನ್ನು ತಿನ್ನುವುದರಲ್ಲಿ ರೋಮಾಂಚನವನ್ನು ಪಡೆಯುವುದಕ್ಕೂ ಸಿಕ್ಕದೆ ಎಲೈ ಮನಸ್ಸೇ, ನೃಪವರನೂ ವಿಪುಳಕೋದಂಡಧರನೂ ಆದ ರಘುವರನನ್ನು ನೆನೆ; ಮಡದಿಮಗ ಮಿತ್ರಬಾಂಧವರೆಲ್ಲ ಹೊಗಳುವುದನ್ನು ಕೇಳಿ ಕೆಲವೇ ಮನೋರಥವನ್ನು ಸಾಧಿಸುವುದಕ್ಕೆ ಇಚ್ಛೆಸುವುದರಿಂದ ಕ್ರೂರಮತಿಯು ನರಕಗತಿಯನ್ನು ಹಿಡಿಯುತ್ತದೆ. ಆದ್ದರಿಂದ ಮೌಢ್ಯವನ್ನು ತೊರೆದು ಎಲೈ ಮನಸ್ಸೇ, ನೃಪವರನೂ ವಿಪುಳಕೋದಂಡಧರನೂ ಆದ ರಘುವರನನ್ನು ನೆನೆ; ಜಾನಕಿಪತಿಯ ಸತ್ಕಥೆಯನ್ನು ಪ್ರತಿದಿನವೂ ಕೇಳುತ್ತ, ಅವನನ್ನೇ ಧ್ಯಾನಿಸುತ್ತ, ಮಾನಸದಲ್ಲಿ ಅವನ ಮಂಗಳಮೂರ್ತಿಯನ್ನು ಎಡೆಬಿಡದೆ ಪೂಜನೆಗೈಯುತ್ತ, ನಮಿಸಿ, ಮತ್ತೆ ಬಾಗಿ, ನಮಿಸಿ ಆನಂದಗೊಳ್ಳುತ್ತ ಇರದೆ ಸತತವೂ ಚಿಂತಾಸಕ್ತನಾಗಿರುವುದರಿಂದ ಏನು ಪ್ರಯೋಜನ? ಸಂಸಾರಸುಖವು ಹೀನವೆಂದು ತಿಳಿದು ಎಲೈ ಮನಸ್ಸೇ, ನೃಪವರನೂ ವಿಪುಳಕೋದಂಡಧರನೂ ಆದ ರಘುವರನನ್ನು ನೆನೆ; ಅರಿಷಡ್ವರ್ಗಗಳನ್ನೂ ವ್ಯಸನಸಪ್ತಕಗಳನ್ನೂ ಬಿಟ್ಟು, ಕ್ರೋಧಲೋಭಾದಿ ಅಹಂಕಾರಗಳನ್ನೂ, ಪರಸ್ತ್ರೀ ಪರಧನವಂಚನೆಗಳನ್ನು ಕಳೆದು, ದುರ್ಮಾರ್ಗಸಂಗತಿಗಳನ್ನು ಹರಿದುಕೊಂಡು, ಭಕ್ತಿಯಿಂದ ಸಜ್ಜನಸೇವೆಗೆ ಅರ್ಪಿಸಿಕೊಂಡು ಭೂಸುರರ ಪಾದಕಮಲಗಳನ್ನು ಹೃದಯದಲ್ಲಿ

ಸ್ಮರಿಸುತ್ತ ಎಲೈ ಮನಸ್ಸೇ, ನೃಪವರನೂ ವಿಪುಳಕೋದಂಡಧರನೂ ಆದ ರಘುವರನನ್ನು ನೆನೆ; ಪರರನ್ನು ದೂಷಿಸುವುದು ಪಾಪಕರ, ಹಾಗಾಗಿ ಋಷಿವಚನವನ್ನು ಹಿಡಿದು ದೇವರ ಧ್ಯಾನವೇ ಪರವೆಂದು ತಿಳಿದು ಹರಿಗೋವಿಂದ ಶ್ರೀವಿಷ್ಣು ಮಾಧವ ಮುಕುಂದ ಎನ್ನುತ್ತ ಸ್ಮರಿಸುತ್ತ ಸುಖದಿಂದಿರುವ ಮಾರ್ಗವನ್ನು ಹಿಡಿಯದೆ ಕೊರಗುತ್ತಿದ್ದರೆ ಎಳ್ಳಷ್ಟೂ ಸುಖ ದೊರೆಯದು ಮರುಳೆ, ಆದ್ದರಿಂದ ಸುರವರಾರ್ಚಿತಚರಣನನ್ನು ಬಿಡದೆ ಎಲೈ ಮನಸ್ಸೇ, ನೃಪವರನೂ ವಿಪುಳಕೋದಂಡಧರನೂ ಆದ ರಘುವರನನ್ನು ನೆನೆ; ಜಗತ್ತಿನಲ್ಲಿ ಅವನೇ ಪರಿಪೂರ್ಣನೂ ಜಗದಾಶ್ರಯನೂ ಸತ್ಯನೂ ಜಗದ್ರೂಪನೂ ಜಗದಾಧಾರನೂ ನಿಗಮವಾಚಾಮಗೋಚರನೂ ನಿರುಪಮಾನಂದನೂ ಚಿನ್ಮಾತ್ರನೂ ಆದವನೆಂದು ತಿಳಿದು ಮನಸ್ಸಿನಲ್ಲಿ ಸದಾ ಭಾವಿಸುತ್ತಿರಲು ಕರ್ಮಗಳ ಸೊಗಡಳಿದು ನಿತ್ಯಸುಖವು ದೊರೆಯುವ ಕಾರಣದಿಂದ ಜಗದೀಶನನ್ನು ಎಲೈ ಮನಸ್ಸೇ, ನೃಪವರನೂ ವಿಪುಳಕೋದಂಡಧರನೂ ಆದ ರಘುವರನನ್ನು ಬಿಡದೆ ನೆನೆ."

ಹೀಗೆ ನಿಗಮಾಗಮೋದಿತ ಸಂಸ್ತವವನ್ನು ಅಂತರಂಗದಲ್ಲಿಯೇ ಮಾಡುತ್ತ ಶುಭೋದಯವನ್ನು ನೀಡುವ ಮೂರ್ತಿಯನ್ನು ಚಿಂತಿಸಲು ಆ ಋಷಿಗಳ ಆಸೆಯನ್ನು ನೆರವೇರಿಸಲೆಂದು ಕರುಣಾವನಧಿಯು ಸಂತಸದಿಂದ ಆ ವನದಲ್ಲಿ ಎಣೆಯಿಲ್ಲದ ಶಶಿಸೂರ್ಯತೇಜಸ್ಸಿನಿಂದ ಕೂಡಿದ ದಿವ್ಯಾಕಾರದಿಂದ ಕಂಗೊಳಿಸಿದ. ಅದನ್ನು ಕಂಡು ಆ ಮಹಾಂತರು ಆನಂದತುಂದಿಲರಾದರು, ಆ ಭಕ್ತಿವಶತೆಯನ್ನು ಬಣ್ಣಿಸಲು ನನಗೆ ಸಾಧ್ಯವೇ! ಹರಬ್ರಹ್ಮರು ಪರಿಪರಿಯಗಿ ಪರಮವಾಕ್ಯಗಳಿಂದ ಅನವರತವೂ ಪೂಜಿಸಲು ಸಿರಿಸರಸ್ವತಿಗೌರಿಯರು ಮಾಡುವ ಧ್ಯಾನಕ್ಕೂ ಸಿಕ್ಕದ ಪರಬ್ರಹ್ಮನು ಕರೆದಾಕ್ಷಣವೆ ಕಾನನದೊಳಗೆ ಬಂದು ನಿಂದು ಪರಿಪಾಲಿಸುವ ಬಗೆಯನ್ನು, ಸಿರಿಯೆರೆಯ **ರಾಮಪುರದರಸ** ಭಕ್ತಾಧೀನನೆಂಬ ಬಿರುದು ಉದ್ಧರಿಸುವುದನ್ನು ಏನೆಂದು ಬಣ್ಣಿಸಲಿ!

೨೦. ವರ್ಣಪಲ್ಲಟ ಜಪದಿಂದ ಕಿರಾತದ್ವಿಜನು ವರ್ಣಿತನಾದ ಕಥೆಯನ್ನು ಋಷಿಗಣ ಕೇಳಿ ಸಂತಸಪಟ್ಟುದು

ಗಿರಿರಾಜಸುತೆಯೇ ಕೇಳು, ದ್ವಿಜೋತ್ತಮರು ಭಕ್ತಿಯಿಂದ ಸ್ತುತಿಸಲು ಶರಣಜನಮಂದಾರನಾದ ಶ್ರೀರಾಮನು ದಯದಿಂದ ಕಾಪಾಡಲು ನಿಶ್ಚೈಸಿ. ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದು, ಮಂದಹಾಸದಿಂದ ಕೂಡಿದವನಾಗಿ, ಹಣೆಯಲ್ಲಿ ಕಸ್ತೂರಿತಿಲಕವು ರಾರಾಜಿಸಲು, ಕೌಸ್ತುಭವನ್ನು ಧರಿಸಿ ಸೀತೆಲಕ್ಷ್ಮಣರು ಸೇವಿಸುತ್ತಿರಲು ಮುಂದುಗಡೆಯಲ್ಲಿಯೇ ತೇಜೋರೂಪದಿಂದ ಕಂಗೊಳಿಸಿದ. ಆಪದುದ್ಧರಣನು ಹೀಗೆ ದಯೆಗೈಯಲು ತಾಪಸರ ಮನಸ್ತಾಪ ಕರಗಿಹೋಗಿ ಸಂತಸದಿಂದ ಹಿಗ್ಗಿ ದಿವ್ಯಮೂರ್ತಿಯನ್ನು ನೋಡುತ್ತ ನಿಂತರು; ಅದೇ ವೇಳೆಗೆ ಚೋರರಾಜನು ಕೂಗುತ್ತ ಓಡಿಬಂದು ಆ ಪರಮಪುರುಷನಿಗೆ ನಿಜಭಕ್ತಿಯಿಂದ ನಮಿಸಿ ನಯವಿನಯ ನುಡಿಗಳಿಂದ ಹೀಗೆ ಬಿನ್ನವಿಸಿದ: "ಋಷಿವರ್ಯರ ಅಪ್ಪಣೆಯಂತೆ ನಾನು ಮನೆಗೆ ಹೋಗಿ ನನ್ನ

ಪಾಪವನ್ನು ಹಂಚಿಕೊಳ್ಳುವಿರಾ ಎಂದು ಹೆಂಡತಿ ಮಗ ಅಣ್ಣತಮ್ಮಂದಿರು ಮುಂತಾದವರನ್ನು ಕೇಳಿಕೊಂಡೆ. ಆದರೆ ಅವರು ಹೇಳಿದುದೆಂದರೆ, ತಮ್ಮನ್ನು ಕಾಪಾಡಲೆಂದೇ ದೇವರು ತನ್ನನ್ನು ಸೃಷ್ಟಿಸಿದ್ದಾನೆ, ತಾವೆಲ್ಲರೂ ಅವನ ಅಂಕೆಯಲ್ಲಿರುವವರು, ಹಾಗಾಗಿ ಅವನು ಮಾಡಿದ ಪಾಪದಲ್ಲಿ ತಾವು ಭಾಗಿಗಳಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ಅವರ ಮಾತುಗಳನ್ನು ಕೇಳಿದ ನಾನು ಭೀತಿಯಿಂದ ನಡುಗುತ್ತ ಮನೆಯಿಂದ ಹೊರಟು ಚಿಂತೆಯಿಂದ ಕೂಡಿದವನಾಗಿ, ನನ್ನ ಪಾಪವನ್ನು ಹೋಗಲಾಡಿಸುವ ಪುಣ್ಯಾತ್ಮರು ಇವರು ಎಂದು ಋಷಿಗಳನ್ನು ನೆನೆಯುತ್ತ ಬಂದೆ. ಶಾಂತರಿಂದ ಪರುಷವು ಮೃದುವಾಗುವುದು ಹೆಚ್ಚಿನದೇ, ಚಂದ್ರನ ಸ್ಪರ್ಶದಿಂದ ಕಲ್ಲೂ ಮೃದುವಾಗುವುದು, ಅಂತೆಯೇ ಸಾಧುಸಂಸರ್ಗದಿಂದ ಕಠಿಣನೂ ಕೋಮಲಹೃದಯದವನಾಗಲಾರನೇ ಅತಿನೀಚಜನ್ಮನಾದ ನನಗೆ ಮಹಾಪಾಪವೇ ಒದಗಲಿದೆ, ಆದರೆ ಧೃತಿವಂತರೇ, ನಿಮ್ಮ ಚರಣಸಂಸರ್ಗವು ಹಿಂದಿನ ಜನ್ಮದ ಪುಣ್ಯಬಲದಿಂದ ನನಗುಂಟಾಯಿತು. ನನ್ನ ಪಾಪರಾಶಿಗಳನ್ನು ನಾಶಮಾಡಿ ಸದ್ಗತಿಯುಂಟಾಗುವಂತೆ ಹರಸಿ ಕಾಪಾಡಿರಿ" ಎಂದು ತಮ್ಮ ಮುಂದೆ ಉರುಳಿದ ಕಿರಾತನನ್ನು ನೋಡಿ ಯತಿಗಳೆಲ್ಲರೂ ದಿಗ್ಭ್ರಮೆಯಿಂದ ಕೂಡಿದರು.

ಆಗ ವಸಿಷ್ಠನನ್ನು ನೋಡಿ ಶಬರನು ಹೀಗೆಂದ: "ಮಿಕ್ಕ ಮುನಿಗಳೆಲ್ಲರೂ ಹಾಗಿರಲಿ, ನೀವು ನನಗೆ ಉಪದೇಶ ಮಾಡಿ ಕಾಪಾಡಿರಿ" ಎಂದು ಬೇಡಿಕೊಂಡ. ಆಗ ವಸಿಷ್ಠನು, "ನರಕದ ದಾರಿ ಹಿಡಿದ ಬೇಡಜನ್ಮದ ಕಳ್ಳನನ್ನು, ಕ್ರೂರನೂ ದುರ್ಮತಿಯೂ ಆದ ಕಠಿಣಹೃದಯನಿಗೆ, ಸದಾ ಮಾಂಸಾಹಾರ ಮದ್ಯಪಾನಗಳಿಂದ ಕೂಡಿದವನಿಗೆ ಹೇಗೆ ತಾನೇ ಉಪದೇಶಿಸಲು ಸಾಧ್ಯ? ಆಗದು, ಹೊರಟುಹೋಗು. ಜ್ಞಾನಿಯೂ ವಿನೀತನೂ ಶುದ್ಧಾತ್ಮನೂ ಶ್ರದ್ಧಾಪರನೂ ನಿಧಾನಿಯೂ ದೃಢಕರ್ಮನೂ ಆಸ್ತಿಕನೂ ಎನ್ನಿಸಿದ ಬ್ರಾಹ್ಮಣನಾದರೆ ಅವನು ಉಪದೇಶ ಪಡೆಯಲು ಯೋಗ್ಯನಾಗುತ್ತಾನೆ; ಆದರೆ ದ್ವಿಜನು ದುಶ್ಶೀಲನಾದರೆ ಯೋಗ್ಯನೆನಿಸಲಾರ. ಅದೇ ಶೂದ್ರನು ಜ್ಞಾನಾರ್ಹನೂ ಜಿತೇಂದ್ರಿಯನೂ ಆದರೆ ಅರ್ಹನಾಗುತ್ತಾನೆ, ಅಂತಹವನನ್ನು ಮಾನ್ಯಮಾಡಬೇಕು" ಎಂದು ಕನಲಿದರು. ಆಗ ಶಬರನು, "ಮುನಿತಿಲಕನೇ, ನಾನು ನಿಮ್ಮ ಶಿಷ್ಯನಾಗಿದ್ದೇನೆ. ಮನಸ್ಸಿನ ಕಲ್ಮಷವನ್ನೆಲ್ಲ ತೊಡೆದುಕೊಂಡು ಶುದ್ಧಹೃದಯದಿಂದ ನಿಮ್ಮ ಮೊರೆವೊಕ್ಕಿದ್ದೇನೆ. ನನ್ನಂತಹವನಿಗೆ ಉಪದೇಶಮಾಡುವುದು ಅನುಚಿತವಾಗಲಾರದು. ಸಾಧುಗಳು ಸರ್ವರನ್ನೂ ಸಮದೃಷ್ಟಿಯಿಂದ ನೋಡುವವರಲ್ಲವೇ? ನನಗೆ ಕರುಣೆಯಿಂದ ದಾರಿಯನ್ನು ತೋರಲು ಸಮರ್ಥರಾದ ಈ ಮುನಿಗಳೆಲ್ಲರೂ ನಿಮಗೆ ವಿಧೇಯರಾಗಿರುವ ಕಾರಣದಿಂದ ನಿಮ್ಮ ಅನುಮತಿಯಿಂದ ಸತ್ಪಥವನ್ನು ತೋರಿಸುತ್ತಾರೆ. ಕೃಪೆಯಿಂದ ನನ್ನನ್ನು ಕಾಪಾಡಿ. ಪರಮ ವಿಪತ್ತು ಅಡಸಿದಾಗ ತನ್ನ ಹಿರಿಮೆಯನ್ನೂ ಇತರರ ನೀಚತೆಯನ್ನೂ ಕೃತ್ಯಾಕೃತ್ಯಗಳನ್ನೂ ಎಣಿಸಬಾರದಲ್ಲವೇ? ಕಿರಾತಹಸ್ತದಲ್ಲಿ ನಿಮ್ಮ ಆಯುಸ್ಸು ಸಿಕ್ಕಿಕೊಂಡಿತು, ನಾನು ಉಳಿಸಿದರೆ ಅದು ಉಳಿಯುತ್ತದೆ. ತಾನು ಉಳಿಯುವುದಕ್ಕಿಂತಲೂ ಹಿರಿದಾದ ಲಾಭವೇನಿದೆ?" ಎಂದು ಕ್ರೌರ್ಯವಿನೀತತೆಗಳು ಸೇರಿಕೊಂಡ ಮಾತನ್ನು ಆ ಪುಳಿಂದ ಆಡಿದ. ಆ ಮಾತುಗಳನ್ನು ಕೇಳಿದ ಋಷಿಗಳು ವಸಿಷ್ಠನೊಡನೆ, "ಎಲೆ ಮಹಾಪುರುಷ, ಇಂತಹ

ಸಮಯದಲ್ಲಿ ಹಿಂದುಮುಂದುಗಳನ್ನು ಆಲೋಚಿಸಬಾರದು. ನೀವು ನಮ್ಮೆಲ್ಲರನ್ನೂ ರಕ್ಷಿಸಬಲ್ಲವರು, ನಿಮ್ಮಂತಹವರು ಬೇರೆ ಯಾರಿದ್ದಾರೆ?" ಎಂದು ನುಡಿದರು. ಕಳ್ಳರು ರೋಗಗಳು ಪ್ರಾಣಿಬಾಧೆಗಳು, ನಿರ್ಜನವಾದ ಘೋರಕಾನನ ಇವುಗಳಲ್ಲಿ ಯಾರು ತಾನೇ ರಕ್ಷಿಸಬಲ್ಲರು? ಕರುಣೆಯಿರಿಸಿ ರಕ್ಷಿಸಬಹುದಾದರೆ ಮೇಘಶ್ಯಾಮನೂ ಶಬರವೃಂದಭಂಗನೂ ಸುರನತಚರಣನೂ ಆದ ವೀರರಾಘವನಲ್ಲದೆ ಬೇರಾರು ಇರುವರು? ಹಾಗಾಗಿ ಆತನನ್ನು ಭಕ್ತಿಯಿಂದ ಸ್ಮರಿಸೋಣ ಎಂದು 'ಆಪದುದ್ಧಾರಕ, ಅಖಿಲಭೂಧಾರಕ, ಶ್ರೀಪದಸ್ಥಾಲಿಕ, ಆಶ್ರಿತಜನವ್ಯಾಪಕ, ಅಘತಾಪೋಪಹರಣ, ವ್ಯಾಧಿಭಯಸಂಹಾರ, ಹರಿಬ್ರಹ್ಮರ ರೂಪಿನಿಂದ ಉದ್ಧರಿಸುವ ಕರುಣಾಗಾರ ದೀಪದೀಪ್ತಾಂಗ ಕೋದಂಡಧರ ರಘುಪುಂಗವನಿಗೆ ಶರಣು ಶರಣು' ಎಂಬುದಾಗಿ ಆತ್ಮರಕ್ಷಣಾರ್ಥವಾಗಿ ಮುನಿಪನು ಮನಸ್ಸಿನಲ್ಲಿಯೇ ಶ್ರೀರಾಮಚಂದ್ರನನ್ನು ಧ್ಯಾನಿಸಲು ನಿರ್ಧರಿಸಿ, ಬಾಹ್ಯವೃತ್ತಿಗಳನ್ನು ಕಳೆದುಕೊಂಡು ಮೌನದಿಂದ ದಿಟ್ಟಿಸಲು ಅರೆನಿಮಿಷದಲ್ಲಿಯೇ ಸನಕಾದಿಸೇವ್ಯ ಸಜ್ಜನವಿನುತಸಾಕಾರನು ಸರ್ವಾತ್ಮತತ್ವದಲ್ಲಿ ತೆರಪಿಲ್ಲದಂತೆ ಮಿನುಗಿದುದನ್ನು ಕಂಡು ವಸಿಷ್ಠನು ಅಮೃತವನ್ನು ಕಂಡ ದೇವೇಂದ್ರನಂತೆ ಹಿಗ್ಗಿದ. ಅದನ್ನು ನೋಡುತ್ತಿರುವಷ್ಟರಲ್ಲಿಯೇ ಪರಮ ಮಂಗಳ ಮೂರ್ತಿಯಲ್ಲಿ 'ಮರ' ಎಂಬ ಶಬ್ದವು ಮೂಡಿತು. ಆ ಭಕ್ತವತ್ಸಲತೆಗೆ ಇನ್ನೇನು ಹೇಳುವುದು? ಮುನಿ ತಕ್ಷಣವೇ ಕಣ್ಣು ಬಿಟ್ಟು ಸಂತಸದಿಂದ ನಸುನಗುತ್ತ ವಿಪ್ರರ ಕಡೆ ನೋಡಿ, "ದೇವದೇವನ ಈ ರೀತಿ ಅತ್ಯಾಶ್ಚರ್ಯಕರ! ನನಗಾದ ದರ್ಶನವನ್ನು ನಿಮ್ಮೆದುರು ಹೇಳುತ್ತೇನೆ. ನಾನು ಧ್ಯಾನದಲ್ಲಿರುವಾಗ ಒಂದು ಮಂಗಳ ಮೂರ್ತಿಯನ್ನು ಕಂಡೆ. ಅದರ ಮುಖದಿಂದ ಗುಡುಗಿನಂತಹ ಧ್ವನಿಯಲ್ಲಿ 'ಮರ' ಎಂಬ ಧ್ವನಿಯು ಕೇಳಿಸಿತು. ಆ ಮೂರ್ತಿಯು ಸರ್ವಾತ್ಮಕತ್ವದಿಂದ ಕಂಗೊಳಿಸುತ್ತಿತ್ತು. ಈ ರೀತಿ ಕಾಣಿಸಲು ಕಾರಣವೇನು ಎಂಬುದನ್ನು ಹೇಳಿರಿ" ಎಂದು ಕೇಳಿದ.

ಅದನ್ನು ಕೇಳಿದ ಋಷಿಗಳು ಸಂತೋಷದಿಂದ ವಸಿಷ್ಠನಿಗೆ ಈ ರೀತಿ ವಿವರಿಸಿದರು: "ಮುನಿರಾಯನೇ ಕೇಳು, ಬೇಡನಿಗೆ ಉಪದೇಶಮಾಡುವುದು ಘನನರಕಕ್ಕೆ ಎಡೆಮಾಡಿಕೊಡುವುದೆಂದು ತಿಳಿದ ಪ್ರಾಣಭಯವು ನಿನ್ನ ಮನಸ್ಸಿನಲ್ಲಿ ತುಂಬಿಕೊಂಡಿರುವಾಗ ನಿಖಿಲಭೂತಸ್ವರೂಪನು ಜಗದ ಅಭಿನ್ನತೆಯನ್ನು ತೋರ್ಪಡಿಸಿ ಈ ಮೂಲಕ ವ್ಯಾಧನಿಗೆ ಉಪದೇಶ ಮಾಡಬೇಕೆಂದು ಪರ್ಯಾಯವಾಗಿ ನೇಮಿಸಿದ್ದಾನೆಯೇ ಹೊರತು ಬೇರೆಯಲ್ಲ. ಆದ್ದರಿಂದ ಬೇಡನ ಪ್ರಾರ್ಥನೆಯನ್ನು ಮನ್ನಿಸಿ 'ಮರ' ಎಂದು ಉಪದೇಶಗೈದು ನಮ್ಮ ಪ್ರಾಣವನ್ನುಳಿಸಬೇಕು" ಎಂದು ಬೇಡಿಕೊಂಡರು. ಪರಮ ಮಂಗಳಮೂರ್ತಿ ತನಗೆ ಸೂಚಿಸಿದುದನ್ನು ಆ ನೀಚನಿಗೆ ಹೇಳಲು ಅದು ಅವನನ್ನು ಪಾಪವಿಮುಕ್ತಗೊಳಿಸುವುದು ಖಂಡಿತ ಎಂದು ವಸಿಷ್ಠನು ತಿಳಿಸಲು ವಿಪ್ರರು ಆ ಮಾತನ್ನು ನಿರ್ಭರಾನಂದದಿಂದ ಒಪ್ಪಿಕೊಂಡರು. ಮೊರವೊಕ್ಕವರನ್ನು ಕಾಪಾಡುವುದು ಧರ್ಮ ಎಂದರಿತು ವಸಿಷ್ಠನು ಆ ಕಿರಾತನನ್ನು ಕರೆದು, "ನೀನು ಕೇಳಿದ ಮಂತ್ರವನ್ನು ಉಪದೇಶಿಸುತ್ತೇನೆ, ಅದನ್ನು ಜಪಿಸಿದರೆ ನಿನ್ನ ಅಭೀಷ್ಟವೆಲ್ಲವೂ ಸಿದ್ಧಿಸುತ್ತದೆ" ಎಂದು ಹೇಳಿದ. ಮುನಿಯು ಹೇಳಿದ ಮಾತನ್ನು ಕೇಳಿದ ಬೇಡನು ಗದರಿಸುವುದನ್ನು ಬಿಟ್ಟು

ಅವನ ಪದಕಮಲಗಳಿಗೆರಗಿ ಭಜಿಸಿ ಮತ್ತೆ ನಮಸ್ಕರಿಸಿ ಕೈಮುಗಿದು ನಿಂತುಕೊಂಡು ಎಡಬಿಡದಂತೆ 'ಮರ' ಮಂತ್ರವನ್ನು ಜಪಿಸತೊಡಗಿದ. ಕ್ರಮೇಣ ಅವನ ಮನಸ್ಸಿನ ವೈರವೆಲ್ಲವೂ ಮರೆಯಾಯಿತು. "ಭಗವನ್ನಾಮಜಪವು ಭಜಕರನ್ನು ಕೃತಕೃತ್ಯರೆಂದೆನಿಸಿ ಸೂರ್ಯಚಂದ್ರ ಕಿರಣಗಳಂತೆ ಅಜಪದವಿಯನ್ನು ಕೊಡುವುದಿಲ್ಲವೇ? ಅತಿನೀಚ, ಪಾಪಿ, ದುಷ್ಟಾಚಾರಿ, ಗೋಭಕ್ಷಕ, ಮಹಾಘಾತಕನು ಕೂಡ ಮೊರೆವೊಕ್ಕರೆ ರಾಮನಾಮವು ಅತಿಶಯವಾದ ಭವಾಂಬುಧಿಯನ್ನು ದಾಟುವ ಉಪಾಯವನ್ನು ದಯಪಾಲಿಸುತ್ತದೆ. ನಿನ್ನ ದೃಷ್ಟಿಮಾತ್ರದಿಂದ ಕೃತಕೃತ್ಯತೆಯನ್ನು ಹೊಂದಿ, ಭವಾಂಬುಧಿಯನ್ನು ದಾಟಿ, ಪಾಪವಾಗಲೀ ಪುನರ್ಜನ್ಮವಾಗಲೀ ಇಲ್ಲದೆ ಅತಿಶಯ ಶುದ್ಧತೆಯನ್ನು ಹೊಂದಿದೆ; ನನ್ನ ಜೀವ ತನುಮನಧನಗಳೆಲ್ಲವನ್ನೂ ಹೆಂಡತಿಮಕ್ಕಳನ್ನೂ ನಿನ್ನ ಚರಣಗಳಿಗರ್ಪಿಸುವೆ, ನಿನ್ನ ಶುಶ್ರೂಷೆಗೈಯಲು ನಾನಿದ್ದೇನೆ; ನವನವೀನ ವಸ್ತುನಿಚಯಗಳನ್ನೂ ಬೇಡಿದುದನ್ನೂ ಸಮರ್ಪಿಸುತ್ತೇನೆ. ಗುರುಪಾದವಂದನೆ, ಗುರುಪಾದ ಸೇವೆ, ಅವರ ಮಾತಿನಂತೆ ನಡೆಯುವುದು ಇಹಪರಗಳೆರಡನ್ನೂ ಅರೆನಿಮಿಷದಲ್ಲಿ ನೀಡಿ ಕಾಪಾಡುತ್ತದೆ, ಅವನನ್ನೇ ಪರಬ್ರಹ್ಮನೆಂದು ತಿಳಿದರೆ ಸರ್ವಸಂಪತ್ತೂ ಒದಗುತ್ತವೆ. ಗುರುಚರಣೋದಕವನ್ನು ಸೇವಿಸಿದರೆ ಅಖಿಲಪಾತಕರಾಶಿ ನೀಗಿ ಅಮಂಗಲವೆಲ್ಲ ಸುಮಂಗಲವಾಗಿಬಿಡುತ್ತದೆ; ಅದರಿಂದಲೇ ನನಗೆ ಪೂರ್ವಜನ್ಮದ ಸುಕೃತದಿಂದ ಗುರುಸಾನ್ನಿಧ್ಯ ದೊರಕುತ್ತದೆ. ಪರಮಪುರುಷನು ಗುರೂತ್ತಮ ರೂಪಿನಿಂದ ಸುಳಿದು ಕರುಣಿಸಿದರೆ ಆ ಕ್ಷಣವೆ ಕೈವಲ್ಯದ ನಿತ್ಯಸುಖ ಕರತಲಾಮಲಕವಗುತ್ತದೆ; ಆದ್ದರಿಂದಲೇ ಗುರುಪಾದಗಳನ್ನು ಅನುದಿನವೂ ಪೂಜಿಸಬೇಕು; ಅವನ ಕರುಣಮಾತ್ರದಿಂದ ದುಸ್ತರವಾದ ಪಾತಕಸಾಗರವನ್ನು ಗೋಷ್ಪದದಂತೆ ದಾಟಬಿಡಬಲ್ಲೆ" ಎಂದು ಸ್ತುತಿಗೈಯುತ್ತ ವ್ಯಾಧನು ಮತ್ತೆ ವಸಿಷ್ಠಋಷಿಯ ಪಾದಕ್ಕೆ ಎರಗಿದ.

ಹೀಗೆ ನುಡಿದ ಶಬರನ ಮಾತುಗಳನ್ನು ಕೇಳುತ್ತ ಮುನಿಪುಂಗವನು ಅಚ್ಚರಿ ಹೊಂದಿ ಋಷಿಗಳೊಡನೆ ಹೀಗೆಂದ: "ಇವತ್ತು ಇದೇನು ಚೋದ್ಯ! ಅಸಂಸ್ಕೃತ ಕಳ್ಳನಿಗೆ ಈ ತತ್ತ್ವಬೋಧೆಯು ಎಲ್ಲಿಂದ ಬಂದೊದಗಿತು? ಶಾಸ್ತ್ರೀಯವಿಧಿಯನ್ನು ಮೀರದಂತಹ ವೈರಾಗ್ಯದಿಂದ ಕೂಡಿದ ಹೃದಯ ಮನಸ್ಸುಗಳು ಹೊಂದಿರುವ ಭಾವನೆಗಳನ್ನು ನಾಲಗೆಯು ಮಾತಿನ ಮೂಲಕ ದಾಟಿಸುತ್ತದೆಯಲ್ಲವೇ! ಈತನು ಕಿರಾತಕುಲದಲ್ಲಿ ಹುಟ್ಟಿದ್ದರೆ ಈ ತತ್ತ್ವವು ಉದಯಿಸುತ್ತಿದ್ದಿತೇ? ಬ್ರಾಹ್ಮಣಕುಲದಲ್ಲಿ ಹುಟ್ಟಿದವನು ದುಸ್ಸಂಗದಲ್ಲಿ ಸೇರಿ ಪತಿತಗೊಂಡವನಲ್ಲದೆ ಈತನು ಹುಟ್ಟುಶೂದ್ರನಲ್ಲ. ಘನತರವಾದ ಪೂರ್ವಾರ್ಜಿತ ಪುಣ್ಯಬಲದಿಂದ ಹುಟ್ಟಿದ ಸುಜ್ಞಾನವು ಅಜ್ಞಾನಬಾಧೆಯನ್ನು ಹೋಗಲಾಡಿಸಿ ಪಾರುಗಾಣಿಸುವುದಲ್ಲದೆ ಉಳಿದವರಿಗೆ ಇಂತಹ ವೈರಾಗ್ಯ ಪ್ರಾಪ್ತವಾಗಬಲ್ಲುದೇ? ಕಪ್ಪಾದುದು ಬಿಳುಪಾಗಲು ಸಾಧ್ಯವಾಗದಂತೆ ಬದ್ಧವಸ್ತುವಿಗೆ ಎಂದಿಗೂ ಜ್ಞಾನವುಂಟಾಗದು; ಉದ್ಧತ ಆಚಾರದಿಂದ ಪತಿತನಾದವನನ್ನು ಪೊರೆದು ಕಳಿಸುವುದು ಸೂಕ್ತವಾದುದು. ಸಿದ್ಧವಾದ ವೇದೋಕ್ತ ಅಕ್ಷರದ್ವಯವನ್ನು ಉಪದೇಶ ಮಾಡಿ ಇವನನ್ನು ಉದ್ಧರಿಸಬೇಕು ಎಂದು ನಿಶ್ಚಯಿಸಿದ ಬ್ರಹ್ಮಪುತ್ರನು ಪುಳಿಂದನ ಕಿವಿಯಲ್ಲಿ ಉಪದೇಶ ಮಾಡಿದ. ಅ

ಸರ್ವೋತ್ಕೃಷ್ಟ ಮಂತ್ರವು ಕಿವಿಯನ್ನು ಸೇರಿದ ತಕ್ಷಣ ಅವನ ಪಾಪಗಳೆಲ್ಲ ಹರಿದು ನಿರ್ಮಲಾಂತಃಕರಣನಾಗಿ ಗುರುವಿನ ಚರಣಗಳಿಗೆರಗಿ ಸಂತಸದಿಂದ ಗೋ ಧನ ರತ್ನ ಮುತ್ತುಗಳನ್ನು ಯಥೇಷ್ಟವಾಗಿ ತಂದು ಭಕ್ತಿಯಿಂದ ಮುಂದಿಟ್ಟು, ಬಿಳಿಯ ದುಕೂಲ ರುದ್ರಾಕ್ಷಮಾಲೆಗಳನ್ನು ಗುರುಚರಣಕ್ಕರ್ಪಿಸಿ ಅರೆನಿಮಿಷದಲ್ಲಿ ಧನ್ಯನಾದ. ಧನಕನಕವಸ್ತು ವಾಹನಗಳನ್ನೊಪ್ಪಿಸಿ ತಲೆ ಬಾಗಿ ನಿಂದು "ನಾನು ನಾನಾ ಬಗೆಯ ಪಾತಕಾಂಬುಧಿಯನ್ನು ದಾಟಿ ಈಗ ಪೂರ್ಣಾನಂದಮಯನಾಗಿದ್ದೇನೆ" ಎಂದು ಶಬರನು ಹೇಳಿದ. ಇವನ ನಡತೆಯ ಪರಿಯನ್ನು ಕಂಡ ಋಷಿಗಳು ಚಕಿತಗೊಂಡು, 'ಹೀಗೆ ಒಮ್ಮೆಗೇ ವೈರಾಗ್ಯವುಂಟಾಗಿ ಹರಿಭಕ್ತಿಯುಂಟಾದುದು ಪೂರ್ವಸುಕೃತದ ಫಲವಲ್ಲದೆ ಅನ್ಯತಃ ಸಾಧ್ಯವೇ?' ಎಂದು ತಮತಮಗೆ ಮಾತಾಡಿಕೊಂಡು ಹರುಷದಿಂದ ಅವನು ಕೊಟ್ಟ ವಸ್ತುಗಳೆಲ್ಲವನ್ನೂ ತೆಗೆದುಕೊಂಡು ಮುಂದೆ ಹಿಮಾಚಲದತ್ತ ಸಾಗಿದರು. ಇತ್ತ ವ್ಯಾಧಾಗ್ರೇಸರನು ಹಿಂದಿನ ವೇಷವನ್ನು ಬಿಟ್ಟು ಬಿಲ್ಲುಬಾಣ ಮುಂತಾದ ಆಯುಧಗಳನ್ನು ಎಸೆದು ನದಿಯಲ್ಲಿ ಮಿಂದು ವೈರಾಗ್ಯದಿಂದ ನಾರುಮಡಿಯನ್ನುಟ್ಟು ಕೈಯಲ್ಲಿ ರುದ್ರಾಕ್ಷಿಮಾಲೆಯನ್ನು ಹಿಡಿದು ಸೂಕ್ತವಾದ ಸ್ಥಳವೊಂದನ್ನು ಹುಡುಕಿ ಕುಳಿತು, ಮಂತ್ರಾಧಿದೇವತೆಯು ವಶವಾಗುವವರೆಗೂ ಇಲ್ಲಿಂದ ಮೇಲೇಳುವುದಿಲ್ಲವೆಂಬ ಕಡು ಶಪಥವನ್ನು ಮಾಡಿ, ತದೇಕಚಿತ್ತದಿಂದ ಸಿರಿಯರಸನ ಪಾದಗಳನ್ನು ನೆನೆಯುತ್ತ ಮುನಿವರನು ನೀಡಿದ್ದ ಪರಮ ಮಂತ್ರವನ್ನು ಹೊರತು ಬೇರೇನನ್ನೂ ನೆನೆಸದೆ ಆನಂದದಲ್ಲಿ ಓಲಾಡುತ್ತ ಇದ್ದ. ತನ್ನ ಹೃದಯದಲ್ಲಿ ಮಾರುತನನ್ನು ಇರಿಸಿಕೊಂಡು ಹೊರಗಿನದರ ಬಗ್ಗೆ ಆಲೋಚಿಸದೆ, ಇಂದ್ರಿಯಗಳನ್ನು ಲೆಕ್ಕಿಸದೆ ಒಂದೇ ಸಮನೆ ಮಹಾಮಂತ್ರವನ್ನೇ ಜಪಿಸುತ್ತಿದ್ದ. ದೇಹಸುಖವನ್ನು ಗಮನಿಸದೆ, ನೀರು ಗಾಳಿಗಳನ್ನೇ ಸೇವಿಸುತ್ತ ಕೆಲಕಾಲ ಈ ರೀತಿಯಲ್ಲಿರುತ್ತ ನಿಡುಗಾಲ ನಿತ್ಯೋಪವಾಸವನ್ನೂ ಕೈಕೊಂಡ.

ಹೀಗೆ ಆತನು ತಪಸ್ಸಿನಲ್ಲಿ ನಿರತನಾಗಿರಲು ಹೆಂಡತಿಮಕ್ಕಳು ಪ್ರಿಯಬಂಧುಗಳು ಅವನ ಬರವನ್ನೇ ನಿರೀಕ್ಷಿಸುತ್ತ, ಬಹುಕಾಲ ಬಾರದಿರಲು ಸಂಕಟಪಡುತ್ತ ಕಡೆಗೆ ಅವನಿಗಾಗಿ ಕಾಡಿನಲ್ಲೆಲ್ಲ ಹುಡುಕಾಡಿದರು. ಆದರೆ ಎಲ್ಲಿಯೂ ಅವನ ಸುಳಿವೇ ಇಲ್ಲ. ದುಮ್ಮಾನದಿಂದ ಮುಂದೆ ಸಾಗುತ್ತ ಬರಲು, ಎಷ್ಟೋ ಕಾಲದ ಬಳಿಕ, ನದಿಯ ದಡದಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡು ಮೌನದಿಂದ ವಿಗ್ರಹದಂತೆ ಕುಳಿತಿದ್ದ ಒಬ್ಬನನ್ನು ಕಂಡರು. ಹತ್ತಿರ ಹೋಗಿ ನೋಡಿದರೆ ತನ್ನ ಗಂಡನೇ ಎಂದು ಹೆಂಗಸಿಗೆ ಗುರುತು ಹತ್ತಿತು; ಎಲ್ಲರೂ ಪಕ್ಕಕ್ಕೆ ಬಂದು ಮೆಲುವಾಗಿ ಕರೆದು ಎಚ್ಚರಿಸಲು ಪ್ರಯತ್ನಿಸಿದರು. ಆದರೆ ಅವನು ಮರುಮಾತುಗೊಡಲಿಲ್ಲ. ಆಗ ಹೆಂಡತಿ ಮಗ ಬಂಧುಗಳು ಅವನ ಪಕ್ಕದಲ್ಲಿಯೇ ಕುಳಿತು ಮೂದಲಿಸಿ ಮಾತಾಡಿದರು. ಆದರೂ ಅವನು ಮರದ ಕೊರಡಿನಂತೆ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತಿದ್ದ. ನಾನಾ ಬಗೆಯ ಉಪಾಯಗಳನ್ನು ಮಾಡಿ ಅವನನ್ನು ಎಚ್ಚರಗೊಳಿಸಲು ಪ್ರಯತ್ನಿಸಿದರು. "ಕಣ್ಣು ಮುಚ್ಚಿಕೊಂಡು ತಪಸ್ಸನ್ನು ಮಾಡುವುದು ಬ್ರಾಂಬರು ಕ್ಷತ್ರಿಯರ ಹಣೆಬರಹ; ಆ ಅಯೋಗ್ಯ ಕೆಲಸವನ್ನು ಮಾಡುವ ವಿಪರೀತಬುದ್ಧಿ ನಿನಗೆಲ್ಲಿ ಅಂಟಿಕೊಂಡಿತು. ಸಂಪಾದಿಸಿರುವ ಸುಖವನ್ನು ಅನುಭವಿಸದೆ

ದರಿದ್ರನ ಹಾಗೆ ತಪಸ್ಸು ಮಾಡುತ್ತಿರುವೆಯಲ್ಲ! ದರಿದ್ರನಾದವನಿಗೆ ಪುಣ್ಯಕ್ಷೇತ್ರಗಳಲ್ಲಿ ಪೂಜೆಗೈಯುವುದು ಸರಿ, ಆದರೆ ಬೇಕಾದಷ್ಟು ಸಂಪತ್ತಿದ್ದು ಸುಖಪಡಬಹುದಾದವನನ್ನು ಪುಣ್ಯವು ಹುಡುಕಿಕೊಂಡು ಬರುತ್ತದೆ. ಕಳ್ಳತನ–ಬೇಟೆಗಳಿಂದಲೇ ನಮ್ಮ ಬದುಕು ನಡೆಯಬೇಕು; ಅದನ್ನು ಬಿಟ್ಟು ಈ ರೀತಿಯ ದಯೆಯು ಶಬರಕುಲಕ್ಕೆ ದೂರ, ಈ ರೀತಿ ಹುಲ್ಲುಮಣ್ಣುಗಳಲ್ಲಿ ಕುಳಿತು ಮಾಡುವ ಸನ್ಯಾಸ ಮೌನಗಳು ನಮಗೆ ತಕ್ಕುವಲ್ಲ. ದೇವತೆಗಳೂ ಮುನಿಗಳೂ ಬ್ರಹ್ಮಚಾರಿಗಳೂ ಪಿತೃದೇವರು ತಪಸ್ಸನ್ನು ಬಿಟ್ಟು ಸಂಸಾರವಂದಿಗರಾಗಲು ಬಯಸುತ್ತಾರೆ. ನಿರವಲಂಬನದಿಂದ ಧರ್ಮವೂ ಉಂಟಾಗದು, ಪರವೂ ಕೈಸಾರದು. ಈ ದುರ್ಬುದ್ಧಿಯನ್ನು ಬಿಟ್ಟು ಇಷ್ಟಮಿತ್ರರು ಹೇಳುವ ರೀತಿಯಲ್ಲಿ ಹೆಂಡತಿ ಮಗ ಬಾಂಧವರನ್ನು ಸಂತೋಷಗೊಳಿಸುವುದನ್ನೂ, ನೀನೂ ಸುಖಭೋಗಗಳ 'ನ್ನನುಭವಿಸುವುದನ್ನೂ ತ್ಯಜಿಸುವ ಕಾಲ ಇದಲ್ಲ" ಎಂದು ಅನೇಕ ವಿಧದಿಂದ ಅವನನ್ನು ಬಹಿರ್ಮುಖಗೊಳಿಸಲು, ಮನವೊಲಿಸಲು ಪ್ರಯತ್ನಿಸಿದರೂ, ಪರತರಕ್ಕೆ ಅಂಟಿಕೊಂಡ ಅವನ ಚಿತ್ತವನ್ನು ಹೊರಗೆಳೆಯಲು ಸಾಧ್ಯವಾಗಲಿಲ್ಲ. ಇದರಿಂದ ಆತಂಕಗೊಂಡ ಅವರು, 'ಯಾರು ಈ ರೀತಿ ಮಾಡಿದವನು, ಯಾರಿಂದ ಈತನು ವಂಚನೆಗೆ ಒಳಗಾದ, ಯಾವನು ಈ ಪರಿಯ ಭ್ರಮೆಯ ಔಷಧಿಗಳನ್ನಿತ್ತು ಈತನ ಮನಸ್ಸು ಕೆಡಿಸಿದವನು, ಯಾವ ಪುಣ್ಯಾತ್ಮನೋ ಏನೋ ಇವನಿಗೆ ಕಳ್ಳತನವನ್ನು ಬಿಡಲು ಯಾಕೆ ಹೇಳಿದನೋ ಏನೋ' ಎಂದು ಚಿಂತೆಗೊಳಗಾದರು. 'ಇವನಿಗೆ ಯಾವನು ವಿಚಿತ್ರ ಮಂತ್ರೌಷಧಿಗಳನ್ನು ಕಾಡಿನಲ್ಲಿ ಮರಗಳೊಡನೆ ನಿಂತು ಕುಲಕಸುಬನ್ನು ತೊರೆದು ಪರಸುಖ ಎನ್ನುವ ಆಸೆಯನ್ನು ತೋರಿಸಿ ಭೋಗವನ್ನು ತೂರಿ ಭ್ರಷ್ಟನಾಗುವಂತೆ ಮಾಡಿದನೋ! ಸಿಕ್ಕ ಮೃಷ್ಟಾನ್ನವನ್ನು ಬಿಟ್ಟು ತಿರಿಪೆ ಬೇಡಿದಂತಾಯಿತು; ತನ್ನ ಕುಲವನ್ನು ಬಿಟ್ಟರೆ ಸದ್ಗತಿಯುಂಟಾಗುವುದೇ? ಮೂರ್ಖತೆಯನ್ನು ಬಿಟ್ಟು ಸರಿಯಾಗಿ ಆಲೋಚಿಸಿ ಸುಖವಾಗಿ ಬಾಳುವುದನ್ನು ಬಯಸು' ಎಂದು ಬೇಡಿಕೊಂಡರು. 'ದುಷ್ಕರ್ಮಿಯಾದವನಿಗೆ ದುರಾಚಾರದಲ್ಲಿ ತೊಡಗಿರುವಾತನೇ ಗುರು, ತನ್ನ ಕುಲಧರ್ಮವನ್ನು ಬಿಡು ಎಂಬ ನೀಚನಿಗೆ ಶರಣಾಗುತ್ತಾರೆಯೇ? ಅಂಥವನು ಏನು ಮಾಡಿದರೂ ಒಳ್ಳೆಯದು ಲಭಿಸುತ್ತದೆಯೇ? ಹುರಿದ ಬೀಜವು ಮೊಳಕೆಯೊಡೆಯುತ್ತದೆಯೇ? ಮೂರ್ಖನಾದ ನಿನಗೆ ಸ್ವರ್ಗ ದೊರೆಯುವುದೇ? ನಿರರ್ಥಕವಾಗಿ ದೇಹವನ್ನು ಒಣಗಿಸಿಕೊಂಡರೆ ಏನು ಪ್ರಯೋಜನ? ಕಣ್ಣುಬಿಟ್ಟು ನೋಡು, ಸುಖ ನೀಡು' ಎಂದು ಮುಂತಾಗಿ ಪರಿಪರಿಯಾಗಿ ಕೇಳಿಕೊಂಡರು.

'ರಾಮ' ಎಂಬ ಎರಡಕ್ಷರಗಳಲ್ಲಿ ನಾಟಿಹೋದ ಚಿತ್ತವು ಭ್ರಮೆಯ ಮಾತುಗಳನ್ನು ಮೆಚ್ಚುತ್ತದೆಯೇ? ಪರಮಾನಂದಕರವಾದ ಲೋಕವನ್ನು ವಶಮಾಡಿಕೊಳ್ಳುವ ಸುಖದಲ್ಲಿರುವ ನಿರ್ಮಲಾಂತಃಕರಣವು ವಿಷಯಗಳಿಗೆ ಎರಗುವುದೇ? ಮಹಾಮಹಿಮನು ಈ ದುಷ್ಟಸಂಸರ್ಗದ ಭ್ರಮೆಯಿಂದ ಕದಲುತ್ತಾನೆಯೇ? ಅವನ ಬಂಧುಮಿತ್ರರು ಬರಿದೆ ಸಂಕಟಗೊಂಡರೇ ವಿನಾ ಏನೂ ಉಪಯೋಗವಾಗಲಿಲ್ಲ. 'ಇನ್ನೇನು ಮಾಡುವುದು, ಮನೆಗೆ ಹೋಗೋಣ. ಪರದಲ್ಲಿ ಸೇರಿಹೋದ ಚಿತ್ತವು ಇತ್ತ ತಿರುಗದು; ಅವನನ್ನು ಸೆಳೆಯಲು ಪ್ರಯತ್ನಿಸಿದರೆ ನಮಗೆ ದೋಷ ಅಂಟುತ್ತದೆ; ಅವನು ಆತ್ಮಸುಖದಿಂದ

ಇರಲಿ, ನಾವು ಹಿಂದಿರುಗೋಣ' ಎಂದು ಅವರಲ್ಲಿ ಒಬ್ಬ ವೃದ್ಧ ಬೇಡ ಹೇಳಿದ. ಬೇರೆ ವಿಧಿಯಿಲ್ಲದೆ ಹೆಂಡತಿ ಮಗ ಎಲ್ಲರೂ ತಮ್ಮ ಕುಲವನ್ನೇ ಬೈದುಕೊಳ್ಳುತ್ತ ವಾಪಸಾದರು. ಇವನೋ ಇತ್ತ ನಿರತಿಶಯ ತಪದಲ್ಲಿರಲು, ಸರ್ವಭೂತಗಳು ನಾನಾ ಬಗೆಯಲ್ಲಿ ಇವನ ತಪಸ್ಸಿನ ಪ್ರಭಾವಕ್ಕೊಳಗಾದುದನ್ನು ಏನೆಂದು ಬಣ್ಣಿಸುವುದು! ಭೂಮಿ ನೀರು ಗಾಳಿ ಬೆಂಕಿ ಆಕಾಶಗಳು ಈ ತಪಸ್ಸಿಗೆ ಹೆದರಿಕೊಂಡು ತಮ್ಮ ಸ್ವಭಾವವನ್ನು ಮರೆತು ಎಲ್ಲ ಒಟ್ಟಾಗಿ ಸೇರಿದವು; ಕಾಡೆಲ್ಲ ನಿಮಿಷದಲ್ಲಿ ಚೈತ್ರಮಾಸದ ನಂದನವನ್ನೂ ಮೀರಿಸುವಂತೆ ಆರು ಋತುಗಳೂ ಒಂದೇ ಬಾರಿಗೆ ಎರಕವಾದ ರೀತಿಯಲ್ಲಿ ಆದುವು; ಇಂತಹ ಅವನ ತಪೋಮಹಿಮೆಯನ್ನು ಏನೆಂದು ಬಣ್ಣಿಸುವುದು! ಮರಗಳೆಲ್ಲ ಕಲ್ಪತರುಗಳಾದವು, ಹೂಹಣ್ಣುಗಳನ್ನು ತುಂಬಿಕೊಂಡು ಯಾರ್‍ಯಾರು ಏನು ಬೇಡಿದರೂ ಈಯುತ್ತಿದ್ದವು; ಸೂರ್ಯ ಬೆಂಕಿಗಳು ತಮ್ಮ ತಾಪವನ್ನು ಬಿಟ್ಟು ಜೀವತತಿಯನ್ನು ಪೊರೆದವು, ನೀರು ದೋಷವನ್ನು ಉಳಿದು ಅಮೃತದಂತಾಯಿತು, ಗಾಳಿಯು ಶೀತಲವಾಯಿತು, ಈ ಮಹದಚ್ಚರಿಯು ಭೂತಳಕ್ಕೆ ಹೊಸದೆನಿಸಿತು. ಪದ್ಮಾಸನದಲ್ಲಿ ಕುಳಿತು, ನಿಶ್ಚಲನಾಗಿ, ಪಕ್ಷಿಸಂಕುಲವು ತಲೆಯ ಮೇಲೆ ಗೂಡು ಕಟ್ಟಲು, ಕ್ರಿಮಿಕೀಟಜಂತುಗಳು ಶರೀರವನ್ನು ಆಶ್ರಯಿಸಿ ಅವನ ಮಾಂಸವನ್ನು ಕಿತ್ತು ತಿನ್ನುತ್ತಿರಲು, ಪರದಲ್ಲಿಟ್ಟ ತನ್ನ ದೃಷ್ಟಿಯನ್ನು ಇತ್ತ ತಿರುಗಿಸದೆ ಕಂಬದ ಹಾಗೆ ರಾಜೀವಲೋಚನ **ರಾಮಪುರದಧಿನಾಥ**ನನ್ನು ಭಜಿಸುವ ಗಾಢ ತಪದಲ್ಲಿದ್ದ ರೀತಿಯನ್ನು ವರ್ಣಿಸಲು ಯಾವನು ತಾನೇ ಸಮರ್ಥ, ವಾಸುಕಿಗಾದರೂ ಅದು ಸಾಧ್ಯವೇ?

೨೧. ಬ್ರಹ್ಮನಿಷ್ಠೆಯಲ್ಲಿದ್ದ ತಾಪಸನಿಗೆ ಬ್ರಹ್ಮಾದಿಗಳು ಬಂದು ವರವಿತ್ತುದು

ಗಿರಿಜೆ ಕೇಳು, ನಾರುಬಟ್ಟೆ ಜಿಂಕೆಯ ಚರ್ಮಗಳನ್ನುಟ್ಟು ಹುಲ್ಲಿನ ಆಸನದಲ್ಲಿ ಮರದ ಬುಡದಲ್ಲಿ ಒಂಟಿಯಾಗಿ ಗುರು ಹೇಳಿದ ರೀತಿಯಲ್ಲಿ ಪಂಚೇಂದ್ರಿಯಗಳನ್ನು ನಿಗ್ರಹಿಸಿಕೊಂಡು ರಾಘವಾರ್ಪಿತಚಿತ್ತದಿಂದ ಮಂತ್ರವನ್ನು ಜಪಿಸುತ್ತ ಕುಳಿತ ತಾಪಸನಿಗೆ ವರುಷಗಳು ನಿಮಿಷದಂತೆ ಕಳೆದವು. ಅನ್ನನೀರುಗಳನ್ನು ತೊರೆದು ದೇಹದಂಡನೆ ಮಾಡಿಕೊಂಡ ಅವನ ರೀತಿಯನ್ನು ಕಂಡು, ತಮ್ಮ ಸ್ಥಾನಗಳಿಗೆ ಏನು ತೊಂದರೆಯುಂಟಾಗುವುದೋ ಎಂಬ ಸಂಕಟದಿಂದ ದೇವತೆಗಳು ದೇವೇಂದ್ರನಲ್ಲಿ ಈ ಮುನಿಯ ವಿಷಯವನ್ನು ಪ್ರಸ್ತಾಪಿಸಿದರು. ಅದನ್ನು ಕೇಳಿದ ದೇವೇಂದ್ರನು ಆ ಕುರಿತು ಏನು ಮಾಡಬಹುದೆಂಬುದರ ಬಗ್ಗೆ ಆಲೋಚಿಸತೊಡಗಿದ. ಯಾವುದಾದರೂ ರೀತಿಯಿಂದ ಈ ತಪಸ್ಸನ್ನು ಭಂಗಗೊಳಿಸದಿದ್ದರೆ ದೇವತೆಗಳ ಗೌರವವೇ ನಾಶವಾಗುವುದೆಂದು ಗಾನಕೋವಿದರಾದ ಗಾಂಧರ್ವ ಮುಂತಾದ ಅನೇಕ ಸುರನಾಯಕಸಮೂಹವನ್ನೂ, ಕಾಮ ವಸಂತ ತಂಗಾಳಿ ಚಂದ್ರ ಹಾಗೂ ಎಲ್ಲ ದೇವತೆಗಳನ್ನೂ ಬರಮಾಡಿಕೊಂಡು ಕಳ್ಳನ ತಪಃಪ್ರಭಾವವನ್ನು ನೀಗುವ ಉಪಾಯದ ಬಗ್ಗೆ ಯೋಚಿಸಲು ಹೇಳಿದ. ಭೂಮಿಯ

ಮೇಲೆ ಕಳ್ಳರ ನಾಯಕನು ತನ್ನ ತಪಸ್ಸಿನಿಂದಾಗಿ ಲೋಕಗಳನ್ನೆಲ್ಲ ಗೆಲ್ಲುವ ವಿಶ್ವಾಸದಿಂದ ಕುಳಿತಿದ್ದಾನೆ. ಹದಿನಾಲ್ಕು ಲೋಕಗಳೂ ಅವನ ತಪಸ್ಸಿನ ಕಾವಿನಿಂದಾಗಿ ಭಯದಿಂದ ನಡುಗುತ್ತಿವೆ. ಯಾವುದಾದರೂ ಉಪಾಯದಿಂದ ಅವನ ತಪಸ್ಸನ್ನು ಕೆಡಿಸಿ ನಮಗೆಲ್ಲ ಮಂಗಳವುಂಟಾಗುವಂತೆ ಮಾಡಬೇಕು ಎಂದು ದೇವೆಂದ್ರನು ಅಪ್ಪಣೆ ಮಾಡಲು ದೇವತೆಗಳೆಲ್ಲ ಒಟ್ಟಾಗಿ ಸಭೆ ಸೇರಿದರು. ಮೇನಕೆ ತಿಲೋತ್ತಮೆ ಸುಕೇಶಿ ಊರ್ವಶಿ ರಂಭೆ ಮಾನಿನೀಮಣಿ ಚಂದ್ರರೇಖೆ ಮದಾಲಸೆ ಚಂದ್ರವದನೆ ಮುಂತಾದ ಪ್ರಮುಖ ಅಪ್ಸರಸ್ತ್ರೀಯರೆಲ್ಲರೂ, ಗಾನಕೋವಿದ ಕಲಾಕುಶಲರಾದ ಗಾಂಧರ್ವತತಿಯೂ, ಹೂಬಾಣ ಮರುತ ಮಾಧವರು ಜೊತೆಗೂಡಿ ಭೂಮಿಯ ಮೇಲುಗಡೆಗೆ ಇಳಿದು ಬಂದರು.

ದೇವೇಂದ್ರನ ಆಣತಿಯಿಂದ ಭೂಮಿಗಿಳಿದ ದೇವತೆಗಳು ಅತೀವ ಮೋಹನಾಕೃತಿಯನ್ನು ತಾಳಿ ಕಲ್ಲುಮರಗಳೂ ಆಕರ್ಷಣೆಗೊಳ್ಳುವ ರೀತಿಯಲ್ಲಿ ಜಗನ್ಮೋಹನಗಳನ್ನು ಸೃಷ್ಟಿಸುತ್ತ ಜನರ ಹತ್ತಿರ ಹೋಗಿ, ಪರಮಪಾವನ ಮೌನಿ ಘೋರತಪಸ್ಸಿನಲ್ಲಿ ಕುಳಿತಿರುವ ರೀತಿಯನ್ನು ಕಂಡು ಭಯಗೊಂಡು ಅದಕ್ಕೆ ಅಡ್ಡಿಯನ್ನುಂಟುಮಾಡುವ ಬಗ್ಗೆ ಒಬ್ಬರೊಬ್ಬರ ಮುಖಗಳನ್ನು ನೋಡುತ್ತ ಚಿಂತಿಸತೊಡಗಿದರು. ನೋಡಿದಾಕ್ಷಣವೇ ಮರುಳುಗೊಳ್ಳುವಂತಹ ಆಕೃತಿಯನ್ನು ಧರಿಸಿ ಆಡುತ್ತ ಹಾಡುತ್ತ ಕಾಡಿನಲ್ಲಿ ಸುಳಿದಾಡುತ್ತ ಬಂದು, ಆ ವನದ ಚೆಲುವು ವೈಭವಗಳನ್ನು ಕಂಡು ಅಚ್ಚರಿಗೊಂಡು, ಅಲ್ಲಿದ್ದ ಅಮೃತಸಮಾನವಾದ ಹಣ್ಣುಗಳನ್ನು ತಿಂದು, ಹೂಗಳನ್ನು ಕುಡಿದು, ಮಧುಪಾನ ಮಾಡಿ, ಅಂಜಿಸಲು ಹೋಗಿ ತಾವೇ ಅಂಜಿದ ಪರಿಯಲ್ಲಿ, ಸಂತೋಷದಿಂದ ಮೈಮರೆತರು. ಮಾಯೆಯಿಂದ ತಪಸ್ಸನ್ನು ಕೆಡಿಸಲೆಂದು ಬಂದ ದೇವಾನುದೇವತೆಗಳ ಮನಃಸ್ಥಿತಿಯನ್ನು ಕಂಡ ಭಕ್ತವತ್ಸಲನಾದ ರಾಘವನು ಅವರ ಮೇಲೆ ತನ್ನ ಮಾಯಾಜಾಲವನ್ನು ಬೀರಿ ಬ್ರಹ್ಮವಿಷ್ಣುಮಹೇಶ್ವರರ ಮೂರು ಗುಣಗಳಿಂದ ಕೂಡಿದ ಬಹುಜನರನ್ನು ಸೃಷ್ಟಿಸಿ ಅನುಕರಿಸಲು ಅದು ದೇವತತಿಯನ್ನು ಆಕರ್ಷಿಸಿತು. ಇಡೀ ವನವೇ ರಾಘವಾತ್ಮತೆಯಾಗಿ ಕಂಗೊಳಿಸಿತು; ಮರ ಮರಗಳ ಬಳಿ ರಾಘವನ ಪಾವನಾಕೃತಿ ಜಗನ್ಮೋಹನಾಕೃತಿಯಾಗಿ ಅಪ್ಸರೆಯರಿಗೆ ತೋರಲು ಅವರೆಲ್ಲ ಮನ್ಮಥಭಾವದಿಂದ ಆ ಮೂರ್ತಿಗಳಲ್ಲಿ ತೀವ್ರಾನುರಾಗವನ್ನು ಹೊಂದಿದರು; ಲಜ್ಜಾಹೀನರಾಗಿ ಆ ವಧುಗಳೆಲ್ಲ ಪರಸ್ಪರ ಭ್ರಾಂತಿಗೊಳಗಾದರು. ಜಿತಮದನ ಸ್ಮಿತವದನ ಶುಭರದನನೂ, ಸುವರ್ಣಕೋದಂಡದೋರ್ದಂಡನೂ, ದಿವ್ಯಚೇಲಧಾರಿಯೂ, ವನಮಾಲಾವಿರಾಜಿತ ಸುವಕ್ಷಸ್ಥಳನೂ, ಚಂದ್ರಸೂರ್ಯಮನ್ಮಥರನ್ನು ಧಿಕ್ಕರಿಸಿ ಸತಿಯರು ಅತಿಮೋಹಗೊಂಡು ಕ್ಷಿತಿಜಾಪತಿಯನ್ನು ಅಪ್ಪಿಕೊಳ್ಳುವ ಬಯಕೆಯಿಂದ ಮರಮರಗಳನ್ನು ಹುಡುಕಾಡಿದರು. ಇದೆ ರಾಮ ಎಂದು ಒಮ್ಮೆ ಬಯಲನ್ನಪ್ಪಿದರೆ, ದೂರದಲ್ಲಿ ರಾಮನಿರುವನೆಂದು ಭ್ರಮಿಸಿ ಅವನನ್ನು ತಬ್ಬಿಕೊಳ್ಳಲು ಮತ್ತೊಮ್ಮೆ ಹೋಗಿ, ಪಕ್ಕದಲ್ಲಿಯೇ ಇರುವನಲ್ಲ ಎಂದು ಮಗುದೊಮ್ಮೆ ಭ್ರಮಿಸಿ, ಹೀಗೆ ಹಿಂದೆ ಮುಂದೆ ಸನಿಹದಲ್ಲಿ ದೂರದಲ್ಲಿ ಎಲ್ಲೆಡೆಯೂ ಮೋಹನಾಕೃತಿಯು ವಿಶ್ವರೂಪವನ್ನು ಧರಿಸಿ ಅಪ್ಸರೆಯರ ಕಣ್ಣುಗಳಿಗೆ ಕಾಣಿಸಿಕೊಳ್ಳಲು ಅವರು ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ತಿರುಗತೊಡಗಿದರು. ಕೈಗೆ

ಸಿಕ್ಕದಂತೆ, ಕಾಣಿಸದ ಬಗೆಯಲ್ಲಿ, ಮೈಗೆ ಮೈ ತಾಕದಂತೆ ಅನುರಾಗದಿಂದ ತಮ್ಮ ತಮ್ಮ ಕೈಗಳನ್ನೇ ಹಿಡಿದುಕೊಂಡು ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತ ಧಾವತಿಗೊಂಡರು. ನರುಗಂಪನ್ನು ಬೀರುತ್ತ, ಅಲ್ಲಲ್ಲಿ ಸುಳಿದಾಡಿ ಸುರುಸುರು ಸದ್ದನ್ನುಂಟುಮಾಡುತ್ತ ಅವರಲ್ಲಿ ಭೋಗೇಚ್ಛೆಯನ್ನುಂಟುಮಾಡಿ ಅವರಲ್ಲಿ ಮುಕ್ತಿಯ ಬಯಕೆಯನ್ನುಂಟುಮಾಡುವ ಪರಿಯನ್ನು ಏನೆಂದು ವರ್ಣಿಸುವುದು! ವನದಲ್ಲಿ ಎಲ್ಲೆಡೆಯೂ ಹುಡುಕಾಡುತ್ತ ಕಾಣದೆ ಗಾಢ ನಿರಾಶೆಯಿಂದಲೂ ಸಂಕಟದಿಂದಲೂ ಕುಳಿತುಕೊಂಡು, ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ನೋಡುತ್ತಿರಲು ತಮ್ಮೊಳಗೇ ಪಾವನಮೂರ್ತಿಯು ಕಾಣಿಸಿಕೊಳ್ಳಲು ಅಲ್ಲಿಯೇ ಅವನನ್ನು ಭರದಿಂದ ಅಪ್ಪಿಕೊಂಡು ಪರಮ ಸಂತಸದಿಂದ ತಮ್ಮ ಬಯಕೆಗಳನ್ನು ತೀರಿಸಿಕೊಳ್ಳುವ ಈ ನಾರಿಯರಿಗೆ ಸನಕಾದಿ ಮುನಿಗಳ ಧ್ಯಾನಕ್ಕೂ ನಿಲುಕದ ದಿವ್ಯಚರಣಗಳು ದೊರೆಯಿತೆಂಬುದು ಅವರ ಸುಕೃತಫಲವಲ್ಲವೇ!

ನಾನಾ ಉಪಾಯಗಳನ್ನು ಮಾಡಿದರೂ ಫಲಿಸದಿರಲು ದೇವತೆಗಳ ಅಂತರಂಗದಲ್ಲಿ ಈತನನ್ನು ಗೆಲ್ಲಲು ಅಸಾಧ್ಯವೆಂದು ಭಾವಿಸಿ ಮುನಿಶಾಪ ಬರಬಹುದೆಂದು ಹೆದರಿ ವಾಪಸ್ಸು ದೇವೇಂದ್ರನ ಬಳಿ ಓಡಿಹೋಗಿ ತಮ್ಮ ಪಡಿಪಾಟಲನ್ನು ತೋಡಿಕೊಂಡರು. ಅವನು ಬ್ರಹ್ಮದೇವನಿಗೆ ಈ ವಿಷಯವನ್ನು ನಿವೇದಿಸಿಕೊಂಡ ಆತನು ಮುಂದೆ ಮಾಡಬೇಕಾದ ಕಾರ್ಯಗಳನ್ನು ಹೀಗೆ ವಿವರಿಸಿದ: "ಶಚಿಯರಸನೇ, ಈತನ ಘೋರತಪಸ್ಸಿನಿಂದ ದೇವತೆಗಳಿಗೆ ತೊಂದರೆಯಾಗುತ್ತದೆಂಬ ಚಿಂತೆಯನ್ನು ಬಿಡು. ಈತನು ವಾಲ್ಮೀಕಿ ಎಂಬ ಶುಭನಾಮದಿಂದ ಬ್ರಹ್ಮರ್ಷಿಯಾಗುತ್ತಾನೆ; ಎಲ್ಲರನ್ನೂ ಸಲಹುವಂತಹ ರಾಮಾಯಣ ಮಹಾಕಾವ್ಯವನ್ನು ಬರೆಯುತ್ತಾನೆ, ಇದಕ್ಕೆ ಸಂದೇಹವಿಲ್ಲ." ಈ ಮಾತುಗಳನ್ನು ಕೇಳಿದ ಇಂದ್ರನಿಗೆ ಚಿಂತೆ ಪರಿಹಾರವಾಯಿತು.

ಇತ್ತ ಏನಾಯಿತೆಂಬುದನ್ನು ಈಗ ನಿರೂಪಿಸುತ್ತೇನೆ: ಅಡ್ಡಿಗಳನ್ನುಂಟುಮಾಡುವ ಉದ್ದೇಶದಿಂದ ಬಂದ ದಿವಿಜಸಮೂಹವನ್ನು ಭ್ರಮೆಗೊಳಿಸಿದ ರಘುನಾಯಕನು ಚಿಂತಿತಾರ್ಥವನ್ನು ನೆರವೇರಿಸುವನೆಂಬ ಬಿರುದನ್ನು ಮೆರೆಯಲು, ತಪೋನಿರತನಾಗಿ ಕುಳಿತಿದ್ದ ಮುನಿಗೆ ನೊಣ ಇರುವೆ ಮುಂತಾದ ಕೀಟಗಳ ಉಪಟಳವಿಲ್ಲದಿರುವ ಹಾಗೆ ಅನುಗ್ರಹಿಸಲು ಅವನ ಸುತ್ತ ಹುತ್ತವನ್ನು ನಿರ್ಮಿಸಿದನೆಂದರೆ ಶರಣಜನರಕ್ಷಕನಾದ ಆತನ ಕರುಣೆ ಎಂತಹುದು! ಬಿಸಿಲು ಗಾಳಿ ಮಳೆಗಳುಂಟಾದಾಗ ಆ ಹುತ್ತದಲ್ಲಿ ಕ್ರಿಮಿಕೀಟಗಳ ಕಸರಿಲ್ಲದೆ ಮುನಿಪತಿಯು, ಯುಗ ಮನ್ವಂತರಗಳ ಅರಿವಿಲ್ಲದಂತೆ, ಬಲು ದೀರ್ಘಕಾಲ ತಪಸ್ಸನ್ನೆಸಗಿದ ಹೊಸಬಗೆಯನ್ನು ಬಣ್ಣಿಸಲು ಯಾರಿಗೆ ತಾನೇ ಸಾಧ್ಯವಾದೀತು? ಸೂರ್ಯಚಂದ್ರರನ್ನು ಒಂದೆಡೆ ನಿಲ್ಲಿಸಿ, ಮಾರುತನನ್ನು ಮಿಸುಕದ ಹಾಗೆ ಮಾಡಿ, ಮುನಿಪತಿಯು ದಿವ್ಯಾಮೃತವನ್ನುಂಡು ಸುಖದಿಂದಿದ್ದ.

ಹಿಮವತ್ಪರ್ವತಕ್ಕೆ ಹೋದ ವಸಿಷ್ಠ ಮುಂತಾದ ಮುನಿಗಳು ತಮ್ಮ ಶಿಷ್ಯರುಗಳ ಸಮೇತ ವಾಪಸ್ಸು ಹೊರಟು ಬರುತ್ತ ಒಂದು ದಿನ ದೇವೇಣದ್ರನ ನಂದನವನಕ್ಕಿಂತಲೂ ಇಮ್ಮಡಿ ಚೆಲುವಾದ ವನವನ್ನು ಕಂಡು ವಿಸ್ಮಯಗೊಂಡರು. ಅವರಿಗೆ ಅಮಿತವಾದ ಸಂತಸವಾಯಿತು; ವನವನ್ನು ಹೊಕ್ಕು ಆಯಾಸ ಪರಿಹರಿಸಿಕೊಳ್ಳಲೆಂದು ಒಂದು

ಮರದಡಿ ಕುಳಿತಿದ್ದರು. ಅಷ್ಟರಲ್ಲಿ ಶ್ರೀರಾಮನು ತನ್ನ ಭಕ್ತವಾತ್ಸಲ್ಯವನ್ನು ಜನರಿಗೆ ತೋರ್ಪಡಿಸಬೇಕೆಂದು ನಿರ್ಧರಿಸಿ ಮುನಿಗಳಿದ್ದ ಸ್ಥಳವನ್ನು ದಿವ್ಯ ಭವನವಾಗಿ ಮಾರ್ಪಡಿಸಿ, ಎಲ್ಲ ವಸ್ತುಗಳನ್ನೂ ಚಿನ್ನದ ಪಾತ್ರೆಗಳನ್ನೂ ಬಾಳೆಲೆಗಳನ್ನೂ ಸಂತೋಷದಾಯಕವಾದ ಜೇನುತುಪ್ಪ ಗೆಡ್ಡೆಗೆಣಸುಗಳನ್ನೂ ಯತಿಗಳಿಗೆ ಕಾಣುವಂತೆ ಅವರ ಎದುರಲ್ಲಿ ಒಂದು ನಿಮಿಷದಲ್ಲಿ ಸೃಷ್ಟಿಸಿದ. ಬೆಲ್ಲ ಜೀರಿಗೆ ಮುಂತಾದ ವಸ್ತುಗಳನ್ನೂ ಸುಸ್ವಾದುವಾದ ಎಣ್ಣೆಗಳನ್ನೂ ವೀಳ್ಯದೆಲೆ ಏಲಕ್ಕಿ ಲವಂಗ ಮುಂತಾದ ಸಾಮಗ್ರಿಗಳನ್ನೂ ಮುಂದಿರಿಸಿದ. ಅವುಗಳನ್ನೆಲ್ಲ ಕಂಡ ಮುನಿಗಳು ವಿಸ್ಮಯಗೊಂಡು ಸ್ನಾನಸಂಧ್ಯಾವಂದನೆಗಳನ್ನು ಮುಗಿಸಿ ಅಡುಗೆಯನ್ನು ಮಾಡಿಕೊಂಡು ದೇವತತಿಗಳಿಗೆ ನೈವೇದ್ಯಗೈದು ಆನಂದದಿಂದ ಊಟಮಾಡಿ ಕೈಕಾಲುಗಳನ್ನು ತೊಳೆದುಕೊಂಡರು. ಸೂರ್ಯನು ಪಶ್ಚಿಮದಿಕ್ಕಿಗೆ ಮುದ್ದಿಡಲು ಸಾಯಂಕಾಲವಾಯಿತು, ಸಾಯಮಾಹ್ನಿಕಗಳನ್ನು ಮಾಡಿ ಕುಳಿತುಕೊಂಡು, ಈ ತಾಣವು ಇಷ್ಟು ಸಮೃದ್ಧವಾಗಲು ಕಾರಣವೇನು, ವಿಚಿತ್ರವಾಗಿದೆಯಲ್ಲ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡರು. ಆನಂತರ ತಾವಿದ್ದ ಜಾಗಗಳಲ್ಲಿಯೇ ಮಲಗಿದರು, ಆ ಕ್ಷಣವೇ ಅವರನ್ನೆಲ್ಲ ಗಾಢ ನಿದ್ದೆ ಆವರಿಸಿತು.

ಹೀಗೆ ಬಾಹ್ಯ ಪರಿವೆಯೇ ಇಲ್ಲದೆ ಸುಖದಿಂದ ಮಲಗಿರುವಾಗ ಅವರಿಗೆಲ್ಲ ಕಣ್ಣಿಗೆ ಕಟ್ಟಿದಂತೆ ವಿಚಿತ್ರವಾದ ಕನಸೊಂದು ಬಿತ್ತು; ಅದರಲ್ಲಿ ಆಮಿಷಗಳನ್ನೆಲ್ಲ ಗೆದ್ದು ನಿರ್ಮಮತೆಯಿಂದ ತಪಸ್ಸನ್ನು ಮಾಡುತ್ತಿದ್ದ ಚಂದ್ರಬಿಂಬದಂತೆ ತೇಜಸ್ವಿಯಾದ ಮೂಳೆಚಕ್ಕಳದಿಂದ ಕೂಡಿದ ಒಬ್ಬ ಪುರುಷನನ್ನು ಕಂಡರು. ಪುಟಕ್ಕಿಟ್ಟ ಚಿನ್ನದಂತಹ ಮೈಕಾಂತಿಯ ಆತನು ಪದ್ಮಾಸನದಲ್ಲಿ ಕುಳಿತು ಚಂಚಲತೆಯನ್ನು ನೀಗಿಕೊಂಡು ಏಕಾಗ್ರಚಿತ್ತದಿಂದ ಸೀತಾಸಹಿತ ಮೂರ್ತಿಯನ್ನು ಮನಸ್ಸಿನಲ್ಲಿರಿಸಿ, ಮಿಕ್ಕೆಲ್ಲ ಭಾವಗಳನ್ನು ಹೊಡೆದೋಡಿಸಿ, ಇಂದ್ರಿಯಗಳ ಕೋಟಲೆಯಿಲ್ಲದೆ ರಾಮನ ದಿವ್ಯನಾಮವನ್ನು ಜಪಿಸುತ್ತ ಪೂಜೆಗೈಯುತ್ತಿರುವ ಅಖಂಡವಾದ ಬೆಳಕಿನಂತೆ ಕಂಗೊಳಿಸಿದ. ಹೊಳೆಯುವ ತಾವರೆಯ ಸಿಂಹಾಸನದಲ್ಲಿ, ತನ್ನ ಎಡಭಾಗದಲ್ಲಿ ಧರಣಿಸುತೆಯು ಒಪ್ಪಿರಲು ನಸುನಗೆಯಿಂದ ಕೂಡಿದ ಇಂದಿರಾಂಗನು ಶೋಭಿಸುತ್ತಿದ್ದ; ಅವನ ಪಾದದ ಬಳಿ ವೀರಾಸನವನ್ನು ಹಾಕಿಕೊಂಡು ಮಾರುತಿ ಕುಳಿತಿದ್ದರೆ, ಧನುರ್ಧರನಾಗಿ ಸುರುಚಿರವದನದಿಂದ ಕೂಡಿದ ಲಕ್ಷ್ಮಣ ಪಕ್ಕದಲ್ಲಿ ನಿಂತಿದ್ದ; ಭರತನು ಅವರ ಹಿಂದೆ ಬೆಳ್ಗೊಡೆವಿಡಿದು ನಿಂತಿದ್ದರೆ, ಶತ್ರುಘ್ನನು ಚಾಮರವಿಕ್ಕುತ್ತಿದ್ದ. ದಂಡಗಳನ್ನು ಹಿಡಿದ ವಂದಿಗಳು ಬಿರುದನ್ನು ಉಗ್ಗಡಿಸುತ್ತಿದ್ದರು. ಕುವಲಯದಳಶ್ಯಾಮನಾದ, ಭೂಷಣಾವಳಿಗಳಿಂದ ಶೋಭಿತನಾದ, ನಿರಂತರವಾಗಿ ತನ್ನನ್ನು ಸ್ತುತಿಸುವ ಸನಕಾದಿ ಯೋಗಿಗಳ ಸಮೂಹದಲ್ಲಿ ರಾಜಿಸುವ, ಶ್ರೀರಾಮಮೂರ್ತಿಯನ್ನು ಮುನಿಗಳು ಕನಸಿನಲ್ಲಿ ಕಂಡರು. ಆನಂದನಿಧಿಯನ್ನು ನೋಡಿ ಅಮಲಾನಂದದಿಂದ ಕೂಡಿದ ಅವರಿಗೆ ರಾತ್ರಿಯು ನಿಮಿಷವೆಂಬಂತೆ ಕಳೆದುಹೋಯಿತು. ನೇಸರು ಉದಯಿಸಲು ಎಚ್ಚರಗೊಂಡು ಮುನಿವರರೆಲ್ಲರೂ ಸ್ನಾನ ಆಹ್ನಿಕಗಳನ್ನು ಪೂರೈಸಿ ಬಹು ವಿಸ್ಮಯಕಾರಿಯಾದ ತಮ್ಮ ಕನಸನ್ನೇ ನೆನಸುತ್ತ ಮುದದಿಂದ ಕುಳಿತಿರಲು ಅವರ ಬಳಿಗೆ ಜ್ಞಾನನಿಧಿಯಾದ ನಾರದಮುನಿಯು ಅವರನ್ನುದ್ಧರಿಸುವ ಇಚ್ಛೆಯಿಂದ ಬಂದ.

ಮಹಾಮುನಿಗಳನ್ನು ಕಂಡ ತಾಪಸರು ಮೇಲೆದ್ದು ಭಕ್ತಿಯಿಂದ ಅವರನ್ನು ಇದಿರುಗೊಂಡು, ಅಭಿವಾದನೆಗೈದು ಕುಳ್ಳಿರಿಸಿ ನಾನಾ ಬಗೆಯ ಉಪಚಾರಗಳಿಂದ ಸತ್ಕರಿಸಿ ಮೃದುನುಡಿಗಳಿಂದ ನುತಿಸಿದರು. ಅವರು ಬರುವ ಕಾರಣವೇನೆಂದು ಬೆಸಗೊಂಡು, "ಎಲೆ ಮುನಿರಾಯ, ಈ ವನವು ಈ ಪರಿಯಲ್ಲಿ ಬೆರಗುವಡೆಸುತ್ತಿದೆಯಲ್ಲ, ಇದಕ್ಕೆ ಕಾರಣವೇನು, ಯಾರ ದೆಸೆಯಿಂದ ಹೀಗಾಯಿತು? ಜೊತೆಗೆ ನಾವು ನಿನ್ನೆ ರಾತ್ರಿ ವಿಚಿತ್ರವಾದ ಕನಸೊಂದನ್ನು ಕಂಡೆವು. ಬೆಂಕಿಯಂತೆ ಬೆಳಗುವ ಪುರುಷಾಕೃತಿಯೊಂದು ಶ್ರೀರಾಮನ ದಿವ್ಯನಾಮಗಳನ್ನು ಜಪಿಸುತ್ತ ಕುಳಿತಿರಲು, ಆ ಮುನಿಪನಿಗೆ ಒಲಿದು ರಾಘವನು ವರದಹಸ್ತವನ್ನು ನೀಡಿ ಶೋಭಿಸುತ್ತಿದ್ದ; ನೆಲಮರಗಳೆಲ್ಲವೂ ಶ್ರೀರಾಮಾಕೃತಿಯನ್ನೇ ತಾಳಿದ ಮಹಾ ಚೆಲುವನ್ನು ನೋಡಿದೆವು. ಇದೇನು ವಿಚಿತ್ರ? ಇದೆಲ್ಲ ಯಾರಿಂದ ಆಯಿತು ಎಂಬುದ ದಯಪಿಟ್ಟು ಹೇಳಬೇಕು" ಎಂದು ಬೇಡಿಕೊಡರು. ಆಗ ನಾರದ ಮಹಾಮುನಿಯು ಮಂದಹಾಸದಿಂದ ಕೂಡಿ ಈ ಮುಂದಿನಂತೆ ನಿರೂಪಿಸಿದ: "ಹಿಂದೊಂದು ದಿನ ನಾನು ಮಹಾದೇವನ ಕೈಲಾಸಕ್ಕೆ ಹೋಗಿರಲು ಸ್ವಯಂಪ್ರೇರಿತನಾಗಿ ಹೇಳಿದ್ದ ಕತೆಯೊಂದನ್ನು ನಿಮಗೀಗ ಹೇಳುತ್ತೇನೆ: ಮುಂದೆ ರಾವಣ ಎಂಬೊಬ್ಬ ರಕ್ಕಸನು ಹುಟ್ಟಲು ಅವನ ಬಾಧೆಯನ್ನು ತಡೆಯದೆ ದೇವತೆಗಳೆಲ್ಲರೂ ಶ್ರೀಹರಿಯನ್ನು ಪ್ರಾರ್ಥಿಸಿ ತಮ್ಮನ್ನು ರಕ್ಕಸನ ಉಪಟಳದಿಂದ ಪಾರುಮಾಡಬೇಕೆಂದು ಬೇಡಿಕೊಳ್ಳಲು, ಮುಮ್ಮೂರ್ತಿಗಳ ಸತ್ವವನ್ನೂ ಒಗ್ಗೂಡಿಸಿಕೊಂಡು ಪರಮಾತ್ಮನೇ ರವಿವಂಶಸಂಭೂತನಾದ ದಶರಥನಿಗೆ ಮಗನಾಗಿ ಮನುಷ್ಯರೂಪದಲ್ಲಿ ಅವತರಿಸಿ, ಕಲ್ಲುಬಂಡೆಯನ್ನು ನವಯುವತಿಯನ್ನಾಗಿಸಿ, ಶಿವಧನುಸ್ಸನ್ನು ಮುರಿದು ವೈದೇಹಿಯನ್ನು ವರಿಸಿ, ಕಾರಣಾಂತರದಿಂದ ದಂಡಕಾರಣ್ಯಕ್ಕೆ ಹೋಗಿ ವಿರಾಧ ಮೊದಲಾದ ರಕ್ಕಸರನ್ನು ಸವರಿ, ಮಾರೀಚನನ್ನು ತರಿದು, ಸೂರ್ಯತನಯನಾದ ಸುಗ್ರೀವನಿಗೆ ಒಲಿದು ವಾಲಿಯನ್ನು ಸಂಹರಿಸಿ, ಅಂಜನಾಸುತನ ಕರವಿಡಿದು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಮುಂದೆ ಸಾಗಿ ದಶಕಂಧರನ ವಂಶವನ್ನು ನಿರ್ನಾಮಗೊಳಿಸಿ, ಅವನ ತಮ್ಮನಿಗೆ ಲಂಕಾಧಿಪತ್ಯವನ್ನೊಪ್ಪಿಸಿ, ಪುಷ್ಪಕವಿಮಾನದಲ್ಲಿ ಮರಳಿ ವೇಗವಾಗಿ ಬಂದು ಭರತನ ಇಷ್ಟವನ್ನು ನೆರವೇರಿಸಿ, ಕೊನೆಗೆ ಅಯೋಧ್ಯಾಪುರದಲ್ಲಿ ದೊರೆಯಾಗಿ ಬಹು ಕಾಲ ಲೋಕವನ್ನು ಪಾಲಿಸಿದ ಪರಮ ಮಂಗಳ ಚರಿತೆಯು ಲೋಕದಲ್ಲಿ ಪ್ರಸಾರಗೊಳ್ಳಲು ನಿರ್ಧರಿಸಿ, ದುಷ್ಟ ಬೇಡನೊಬ್ಬನಿಗೆ ಒಂದು ರೀತಿಯಲ್ಲಿ ಉಪದೇಶ ಮಾಡಲು ಅದರಿಂದ ಅವನು ಪರಮತಪೋನಿಧಿಯೆನಿಸಿ ಬ್ರಾಹ್ಮಣೋತ್ತಮನಾಗಿ ಪರಮಾತ್ಮನ ದಿವ್ಯಮಂಗಳ ಚರಿತೆಯನ್ನು ವಿರಚಿಸಿ, ವಾಲ್ಮೀಕಿ ಎಂಬ ಹೆಸರಿನಿಂದ ಪರಮಪುರುಷನೆನಿಸುತ್ತಾನೆ – ಎಂದು ಹರನು ನಿರೂಪಿಸಿದುದರ ಅರ್ಥವು ನನಗೆ ಈಗ ಆಗುತ್ತಿದೆ ಅಂದು ನಾನು ಕೇಳಿದುದನ್ನು ನೆನಪಿನಿಂದ ನಿಮಗೀಗ ಹೇಳಿದ್ದೇನೆ" ಎಂದು ನಾರದನು ಮುನಿಪೋತ್ತಮರಿಗೆ ನಿರೂಪಿಸಿದ.

ಹೀಗೆ ನಾರದನು ಮುನಿಗಳಿಗೆ ಹೇಳುತ್ತಿರಲು ಆಕಾಶದಲ್ಲಿ ಒಂದು ಅಶರೀರವಾಣಿಯಾಯಿತು: "ಮುನಿಪೋತ್ತಮನೇ, ಇದು ಸತ್ಯ. ಹುತ್ತದ ಮಧ್ಯದಲ್ಲಿರುವ ಸೂರ್ಯಸಮಾನ ತೇಜಸ್ಸಿನ ಮೌನಿಯನ್ನು ಉಪಾಯಾಂತರದಿಂದ ಹೊರಬರುವಂತೆ

ಮಾಡಿದರೆ ಎಲ್ಲರಿಗೂ ಒಳಿತಾಗುತ್ತದೆ." ನಾರದನು ಹೇಳಿದುದು ಮನದಟ್ಟಾಗಲು ವಸಿಷ್ಠನು ಇದು ನಿವಾಗಿಯೂ ಅದ್ಭುತ ಎಂದುಕೊಳ್ಳುತ್ತ, ನಿಧಾನವಾಗಿ ಹುತ್ತವನ್ನು ಸುತ್ತಲೂ ಸಡಿಲುಗೊಳಿಸುತ್ತ ಬರಲು ಅದರ ನಡುವೆ ಹುಟ್ಟುತ್ತಿರುವ ಸೂರ್ಯನೋ ಪುಟಕ್ಕಿಟ್ಟ ಚಿನ್ನವೋ ಎಂಬಂತೆ ಅಪಾರ ತೇಜಸ್ಸಿನಿಂದ ಕೂಡಿದ ಶುಭಮೂರ್ತಿಯನ್ನು ಅಚ್ಚರಿಯಿಂದ ನೋಡಿದ. ಇಂದ್ರಿಯಗಳನ್ನು ಕಿತ್ತುಹಾಕಿದ ಮನಸ್ಸನ್ನು ರಘುವರನ ಪದಕಮಲಗಳಲ್ಲಿ ಇರಿಸಿ, ಅವುಗಳಿಂದ ತನ್ನ ನೋಟವನ್ನು ಕೀಳದೆ ಹಗಲೂ ಇರುಳೂ ಅವನ ಹೆಸರನ್ನೇ ಜಪಿಸುತ್ತ ತನ್ನ ಹೃದಯದಾಕಾಶದ ನಡುವೆ ರಘುವೀರನನ್ನಿರಿಸಿ ಪರಿಪರಿಯ ಪೂಜೆಗಳನ್ನು ಅರ್ಪಿಸುತ್ತ, ಮತ್ತೇನನ್ನೂ ಆಲೋಚಿಸದೆ ಅಮಲ ಬ್ರಹ್ಮಮೂರ್ತಿಯನ್ನೇ ನೋಡಿ ನಸುನಗುತ್ತಿರುವ ಮುನಿವರನನ್ನು, ನೆಲದಿಂದ ಗಿಡವನ್ನು ನಿಧಾನವಾಗಿ ಕೀಳುವಂತೆ, ಎಚ್ಚರಗೊಳಿಸಲು ಆ ಮುನಿಗಳು ಬಯಸಿದರು. ನಾನಾ ಬಗೆಯ ಶೀತಲೋಪಚಾರಗಳಿಂದ ಪ್ರಯತ್ನಿಸಿದರೂ ಎಚ್ಚರಾಗದೆ ತನ್ನಲ್ಲೇ ಲೀನವಾಗಿರುವ ಆ ಮಹಾತ್ಮನನ್ನು ಇನ್ನಾವ ಉಪಾಯಗಳಿಂದ ಬಹಿರ್ಮುಖನನ್ನಾಗಿಸಬೇಕೆಂಬುದು ಹೊಳೆಯದೆ ತಲೆತಗ್ಗಿಸಿ ನಿಂತುಬಿಟ್ಟರು.

ಅಷ್ಟರಲ್ಲಿ ಬ್ರಹ್ಮವಿಷ್ಣುಮಹೇಶ್ವರರೇ ಆದಿಯಾಗಿ ಮುಖ್ಯ ದೇವತೆಗಳೆಲ್ಲ ಮುಖ್ಯ ತಪೋಧನರ ಸಮೇತ ಅಲ್ಲಿಗೆ ಬಂದರು. ಸನ್ಮುನಿಯನ್ನು ಅಚ್ಚರಿಯಿಂದ ನಿಟ್ಟಿಸುತ್ತ ಅವರೆಲ್ಲ ನಿಂತಿರಲು, ಏನೇ ಉಪಾಯಗಳನ್ನು ಮಾಡಿದರೂ ಆತನನ್ನು ಎಚ್ಚರಿಸಲು ಸಾಧ್ಯವಾಗದಿದ್ದಾಗ ಬ್ರಹ್ಮದೇವನು ತಾನು ಆಲೋಚಿಸಿರುವ ಯುಕ್ತಿಯನ್ನು ತಾಪಸರಿಗೆ ಹೇಳಿದ: "ಬೇಡನಾಗಿ ಕಾಡಿನಲ್ಲಿ ಅಲೆಯುತ್ತಿದ್ದಾಗ ಅವನಿಗೆ ಉಪದೇಶ ಮಾಡಿದ ಗುರುವಿನ ಬಗೆಗಿನ ಭಕ್ತಿ ಎಲ್ಲೂ ಹೋಗಿರಲಾರದು; ಅವನ ಬಳಿ ಹೋಗಿ ಕಿವಿಯಲ್ಲಿ 'ನಿನ್ನ ಗುರುವು ಬಂದಿದ್ದಾನೆ, ಕಣ್ದೆರೆದು ನೋಡು' ಎಂದು ಪಿಸುಗುಟ್ಟಿದರೆ ಖಂಡಿತ ಎಚ್ಚರಗೊಳ್ಳುತ್ತಾನೆ" ಎಂದ. ಆ ಮಾತನ್ನು ಕೇಳಿದ ದೇವತೆಗಳೆಲ್ಲ ಸಂತಸಗೊಂಡು ಹಾಗೆ ಮಾಡಲು ಅವನಿಗೆ ಸಮ್ಮತಿಯಿತ್ತರು. ಆಗ ಆತನು, "ನಿನಗೆ ರಾಮಮಂತ್ರವನ್ನು ಉಪದೇಶಿಸಿದ ಗುರು ವಸಿಷ್ಠರು ಬಂದಿದ್ದಾರೆ, ಅವರಿಗೆ ಭಕ್ತಿಯಿಂದ ಎರಗುವುದು ಉಚಿತ" ಎಂದು ಬ್ರಹ್ಮನು ಕಿವಿಯಲ್ಲಿ ಹೇಳಿದಾಗ, ತನ್ನ ಕಣ್ಣುಗಳನ್ನು ತೆರೆದು ಬೇಗ ಎದ್ದು ಗುರುವಂದನೆ ಮಾಡಿ, "ತಪಸ್ಸಿನ ಅಮಲ ಸೌಭಾಗ್ಯಲಕ್ಷ್ಮಿಯನ್ನು ಕಂಡು ಕೃತಾರ್ಥನಾದೆ, ಶ್ರೀರಾಮನ ವಿಮಲ ಪದಪಂಕಜವನ್ನು ಕಂಡೆ, ನಾನೇನು ಪುಣ್ಯವಂತನೋ!" ಎಂದು ನಮಸ್ಕರಿಸಿದ. "ಗುರು ಪದಾಂಬುಜಗಳನ್ನು ಕಂಡು ನನ್ನ ಪಾಪರಾಶಿಯೆಲ್ಲ ಕರಗಿಹೋಯಿತು, ನನ್ನ ಅವಿದ್ಯೆಯು ತೊಲಗಿತು, ವಿದ್ಯೆಯು ಕರಗತವಾಯಿತು" ಎಂದು ಪ್ರದಕ್ಷಿಣೆ ಬಂದು ಮತ್ತೆ ಮತ್ತೆ ನಮಸ್ಕರಿಸುತ್ತ ಕೈಮುಗಿದು ಸ್ತುತಿಸುತ್ತ, "ನಿಮಗೆ ಆತಿಥ್ಯವನ್ನು ಮಾಡುತ್ತೇನೆ, ದಯವಿಟ್ಟು ಸ್ವೀಕರಿಸಬೇಕು" ಎಂದು ವಿಜ್ಞಾಪನೆ ಮಾಡಿಕೊಂಡ. ಆಗ ಜೋರಾಗಿ ಸುರಭೇರಿಯ ಶಬ್ದವಾಯಿತು; ದೇವದುಂದುಭಿಯು ಮೊಳಗಿತು. ಆಗಸದಲ್ಲಿ ಒಂದೆಡೆ ಗಾಂಧರ್ವರು ಹಾಡಲು ತೊಡಗಿದರೆ, ಮತ್ತೊಂದೆಡೆ ಎಳೆಮಿಂಚಿನಂತಹ ಅಪ್ಸರೆಯರು ನರ್ತನ ಮಾಡಲು, ದೇವತೆಗಳು ಸಡಗರದಿಂದ ಹೂಮಳೆಗರೆದರು. ದಿಕ್ಕುಗಳೆಲ್ಲ ಪ್ರಕಾಶಮಾನವಾಗಲು,

ಗಾಳಿಯು ತಂಪಾಗಿಯೂ ಮೆಲುವಾಗಿಯೂ ಬೀಸತೊಡಗಿತು, ಸೂರ್ಯಚಂದ್ರರು ಹೆಚ್ಚಿನ ದೀಪ್ತಿಯಿಂದ ಬೆಳಗಿದರು. ಸೇರಿದ್ದ ಮುನಿವೃಂದವೂ, ಅವರ ನಡುವೆ ಹರಿಬ್ರಹ್ಮಾದಿಗಳೂ ಸಂತಸಗೊಳ್ಳುತ್ತಿರಲು, ಎಲ್ಲ ದೇವತೆಗಳಿಗೂ ಕೇಳಿಸುವ ಹಾಗೆ ಲಕ್ಷ್ಮೀಪತಿಯು ಆನಂದದಿಂದ, "ತನ್ನ ಪರಮ ತಪಸ್ಸಿನಿಂದ ಹದಿನಾಲ್ಕು ಲೋಕಗಳೂ ಭೀತಗೊಳ್ಳುವಂತೆ, ದಿಕ್ಪಾಲಕರೆಲ್ಲರೂ ನಡುಗುವಂತೆ ಮಾಡಿದ ಈತ ಮತ್ತೊಂದು ಬ್ರಹ್ಮಾಂಡವನ್ನೇ ಸೃಷ್ಟಿಸುವಷ್ಟು ಶಕ್ತಿವಂತನಾಗಿದ್ದಾನೆ. ಈತನಿಗೆ ಹುತ್ತದಿಂದ ಎರಡನೆಯ ಜನ್ಮ ಉಂಟಾಗಿದೆ; ಅತ್ಯುತ್ತಮವಾದ ಬ್ರಹ್ಮರ್ಷಿಪದವನ್ನು ಹೊಂದಿ ಬ್ರಾಹ್ಮಣಸಮುದಾಯದಲ್ಲಿಯೇ ಅತ್ಯಂತ ಶ್ರೇಷ್ಠನೆನಿಸಿರುವ ಈತನು ವಾಲ್ಮೀಕಿ ಮುನಿಯೆಂಬ ಹೆಸರಿನಿಂದ ರಾಮಾಯಣವನ್ನು ರಚಿಸುತ್ತಾನೆ. ದುರ್ಜನರನ್ನು ಒತ್ತರಿಸುವ ಉದ್ದೇಶದಿಂದಲೇ ಜನಿಸುವ ನಾನು ಕಾವ್ಯಾತ್ಮಕತೆಯನ್ನು ಹೊಂದಿ ಇವನ ಬಾಯಿಂದ ಹೊರಟು ಬಂದು ಶೋಭಿಸುತ್ತೇನೆ. ಈತನಿಂದ ಹೊರಬಂದ ರಾಮಾಯಣದ ಒಂದಕ್ಷರವನ್ನು ಭಕ್ತಿಯಿಂದ ಬರೆದು ಓದಿ ಕೇಳಿದರೆ ಪಾತಕಗಳೆಲ್ಲ ಹೋಗಿ ಪರಮಪಾವನನೆನಿಸಿ ಮೂಲೋಕವಾಸಿಯೆ ನಿಸಿಕೊಳ್ಳುತ್ತಾನೆ. ಕಿವಿಗೊಟ್ಟು ಕೇಳಿದರೂ ಬ್ರಹ್ಮಹತ್ಯಾದಿ ದೋಷಗಳು ಹತ್ತಿಯಂತೆ ಹಾರಿಹೋಗುತ್ತವೆ; ಅತೀತವರ್ಣಾಚಾರದವನಾದರೂ ಮುಕ್ತಿಯನ್ನು ಹೊಂದುತ್ತಾನೆ" ಎಂಬ ಅತಿಶಯವಾದ ವರವನ್ನಿತ್ತ. ಅದನ್ನು ಕಂಡು ಕೇಳಿ ಆನಂದದಿಂದ ಹರನು, "ಈ ಕಾವ್ಯದ ಒಂದೆರಡು ಅಕ್ಷರಗಳನ್ನು ಕೇಳುವ ಯಾರಾದರೂ ಅಂತಹವನಿಗೆ ಕೈಲಾಸವು ಅಂಗೈನೆಲ್ಲಿಯಂತೆ ಸುಲಭಸಾಧ್ಯವಾಗುತ್ತದೆ" ಎಂದು ಘೋಷಿಸಿದ. ಇದನ್ನು ಕೇಳಿದ ಬಳಿಕ ಬ್ರಹ್ಮದೇವನು, "ಈ ಮಹಾಮುನಿಯ ನಾಲಗೆಯ ತುದಿಯಲ್ಲಿ ಸರಸ್ವತಿಯು ನೆಲಸಲಿ, ಇನಿದಾದ ಶಬ್ದಗಳಿಂದ ಕೂಡಿದಂತೆ ಕಾವ್ಯವನ್ನು ರಚಿಸುವ ಶಕ್ತಿ ಈತನಿಗೆ ಒದಗಿಬರಲಿ. ಕವಿತಾರಚನೆಗೆ ಈತನೇ ಆದಿಪುರುಷ ಎನ್ನಿಸಿ, ಈತನ ಕಾವ್ಯವು ಭೂಮಿಯಲ್ಲಿ ಆದಿಮಹಾಕಾವ್ಯವೆನ್ನಿಸಲಿ. ಈ ಮಹಾಕಾವ್ಯವನ್ನು ಎಲ್ಲರೂ ಓದಿ ವಿವೇಕಿಗಳಾಗಿ ಸುಖವನ್ನು ಪಡೆದು ಭವವನ್ನು ಹರಿದುಕೊಂಡು ನಮ್ಮ ಲೋಕಕ್ಕೆ ಬರುತ್ತಾರೆ" ಎಂಬ ಮಹಾವರಗಳನ್ನು ಕರುಣಿಸಿದ. ಹೀಗೆ ತ್ರಿಮೂರ್ತಿಗಳು ದಯಪಾಲಿಸಿದ ವರಗಳನ್ನು ಪಡೆದು ವಾಲ್ಮೀಕಿಯು ಹರ್ಷದಿಂದ, ತನ್ನ ಮುಂದೆ ನಿಂತಿದ್ದ ಹರಿಯನ್ನು ಕುರಿತು, "ಚಿಂತಿತಾರ್ಥಪ್ರದನೇ, ಮಹೇಶ ಯೋಗೀಶನುತನೇ, ವೇದಮಸ್ತಕಭೂಷಣನೇ, ಸಂತರಲ್ಲಿ ನೆಲಸಿರುವವನೇ, ಏಕಾಂತಭಾವನೇ, ಸದ್ಗುಣನಿಲಯನೇ ಶ್ರೀರಾಮಪುರದಧಿನಾಥನೇ ಸಲಹು ಸಲಹು" ಎಂದು ಅತಿಶಯ ಭಕ್ತಿಭಾವದಿಂದ ಸ್ತುತಿಸಿದ.

೨೨. ವಾಲ್ಮೀಕಿಯ ಉಪಚಾರದಿಂದ ಸಂತುಷ್ಟನಾದ ಶ್ರೀರಾಮನು ಚಿತ್ರಕೂಟಕ್ಕೆ ಹೋಗಿ ನೆಲಸಿದುದು

ಸಕಲ ದೇವತೆಗಳಿಂದ ವರಗಳನ್ನು ಪಡೆದು ಶ್ರೇಷ್ಠವಾದ ಬ್ರಹ್ಮರ್ಷಿ ಪದವಿಯನ್ನು ಪಡೆದು, ವಾಲ್ಮೀಕಿಯು ಭಕ್ತಿಯಿಂದ ಕೈಗಳನ್ನು ಮುಗಿದು ತನ್ನ ಅಂತಂಗದಲ್ಲಿ ಸರ್ವಾತ್ಮನಾದ ಶ್ರೀಹರಿಯನ್ನು ಸ್ತುತಿಗೈದು ಸಂತೋಷಗೊಳಿಸಿದ. ಅನಂತ ಬಗೆಯಿಂದ ಸ್ತುತಿಗೈವ ಮುನಿವರನ ಅಂತರಂಗವನ್ನು ತಿಳಿದು ಹರಿ ಹಲವಾರು ವರಗಳನ್ನು ಕೊಟ್ಟು ದೇವತೆಗಳೊಡನೆ ತನ್ನ ನಿಲಯಕ್ಕೆ ಮರಳಿದ. ಸಂತೋಷಗೊಂಡ ಈ ಮುನಿಯು ನಾರದಮುನಿಯು ಹೇಳಿದ ಮಾತನ್ನು ನೆತ್ತಿಯಲ್ಲಿ ಹೊತ್ತು ರಾಮಾಯಣ ಕಾವ್ಯವನ್ನು ರಚಿಸಿ ಕವಿಸಂತತೀಕಾಂತನೆನಿಸಿಕೊಂಡು ರಾಮನನ್ನು ಏಕಾಂತಭಕ್ತಿಯಿಂದ ಜಪಿಸುತ್ತ ಆನಂದದಿಂದಿದ್ದ. ಬಂಧುರಸ್ನೇಹದಿಂದ ವಾಲ್ಮೀಕಿಯು ರಾಘವನನ್ನು ಕಣ್ಣ ಮುಂದೆ ಹೊಂದಿ ಪೂಜಿಸಿ ಕೃತಾರ್ಥತೆಯನ್ನು ಪಡೆದು, ಆತನು ಪರ್ವತಪ್ರದೇಶದಲ್ಲಿ ವಾಸಿಸಲು ಯೋಗ್ಯವಾದ ಒಂದು ತಾಣವನ್ನು ಸೂಚಿಸಿದ.

ಮುನಿಪನನ್ನು ಬೀಳ್ಕೊಂಡು ಜನನಾಥನಾದ ಶ್ರೀರಾಮನು ಚಿತ್ರಕೂಟಾದ್ರಿಗೆ ಹೋಗಿ ಆ ಸ್ಥಳವನ್ನು ನೋಡಿ ಅಲ್ಲಿ ಎಲೆವನೆಯನ್ನು ನಿರ್ಮಿಸಲು ನೇಮಿಸಿದ. ಲಕ್ಷ್ಮಣನು ಅಣ್ಣನ ಆಣತಿಯಂತೆ ಭರಭರನೆ ಹೋಗಿ ದೊಡ್ಡ ದೊಡ್ಡ ಮರದ ತುಂಡುಗಳನ್ನು ತಂದು ಪ್ರಶಸ್ತವಾದ ಒಂದು ಋಷಿಮಂದಿರವನ್ನು ನಿರ್ಮಿಸಿ ಸಿಂಗಾರಗೈದು ಬಿನ್ನವಿಸಿದ. ಆಗ ಗೃಹವಾಸ್ತುಪುರುಷನನ್ನು ಪೂಜಿಸಬೇಕೆಂದು ವನಜಾಕ್ಷನು ಹೇಳಲು, ಅಣ್ಣನು ಹೇಳಿದ ರೀತಿಯಲ್ಲಿ ಕೃಷ್ಣಮೃಗವೊಂದನ್ನು ಹಿಡಿದು ತಂದು ಅಣ್ಣನಿಗೆ ಬಿನ್ನವಿಸಲು, ರಾಮನು ಶಾಸ್ತ್ರೋಕ್ತಕ್ರಮಗಳನ್ನು ಅನುಸರಿಸಿ ಸ್ನಾನಸಂಧ್ಯಾದಿಗಳನ್ನು ಮಾಡಿ, ನಾನಾ ಗೆಡ್ಡೆಗಳು ಹಣ್ಣುಗಳು ನೀರು ಮಾಂಸಗಳನ್ನು ತಂದು, ಸಮಿತ್ತು ಕುಶಗಳನ್ನು ಸಂಗ್ರಹಿಸಿಕೊಂಡು ಬಂದು ವಾಸ್ತು ಸಂತರ್ಪಣೆಯನ್ನು ಮಾಡಲು ರಾಘವನು ಉದ್ಯುಕ್ತನಾದ. ವೇದೋಕ್ತವಿಧಿಯಿಂದ ವೈಶ್ವದೇವದ ಬಲಿಯನ್ನು ಹಾಗೂ ರೌದ್ರವೈಷ್ಣವವಾಸ್ತು ಬಲಿಗಳನ್ನು ಭಕ್ತಿಯಿಂದ ಅರ್ಪಿಸಿ ಅವುಗಳಿಗನುವಾದ ಜಪಗಳನ್ನು ಮಾಡಿ, ಮಂಗಳಾಧಿಕ್ಯದಿಂದ ಸಾಧುಜನಸಂಸೇವೆಯನ್ನು ಮಾಡಿ, ಹೆಂಡತಿ ಮತ್ತು ತಮ್ಮನೊಡನೆ ಆ ಪರ್ಣಮಂದಿರದಲ್ಲಿ ವಾಸಿಸತೊಡಗಿದ.

ಇತ್ತ ದುಃಖಸ್ವಾಂತನಾದ ಸುಮಂತ್ರನು ಊರ ದಾರಿಯನ್ನು ಹಿಡಿದು ಅಯೋಧ್ಯಾನಗರಿಗೆ ವಾಪಸಾದ. ಜೀವವಿಲ್ಲದ ದೇಹದಂತೆ ಆ ನಗರಿಯು ನಿಶ್ಶಬ್ದವಾಗಿತ್ತು. ತುಂಬ ಸಂಕ್ಲೇಶದಿಂದ ಬೇಗ ಬೇಗ ನಗರವನ್ನು ಹೊಕ್ಕಾಗ, ಎದುರಾದ ಜನರೆಲ್ಲರೂ 'ದೇವನು ಎಲ್ಲಿದ್ದಾನೆ?' ಎಂದು ವಿಚಾರಿಸುವವರೇ. ಅವರಿಗೆ ಇದ್ದ ಸಂಗತಿಯನ್ನು ವಿವರಿಸುತ್ತ ಖಿನ್ನಮಾನಸನಾಗಿ ಮತ್ತಷ್ಟು ವೇಗವಾಗಿ ಸಾಗಿ ಅರಮನೆಯ ಬಾಗಿಲವರೆಗೆ ಹೋಗಿ ರಥದಿಂದ ಇಳಿದ. ಹೋಗಿ ದೊರೆಯನ್ನು ಗಂಗಾತೀರದಲ್ಲಿಳಿಸಿ ವಾಪಸು ಬಂದ ದುರುಳನೆಂದು ಜನರೆಲ್ಲಿ ನಿಂದಿಸುವರೋ ಎಂಬಂತೆ ಯಾರ ಕಣ್ಣಿಗೂ ಬೀಳದಂತೆ ಕಳ್ಳನ ಹಾಗೆ ನೃಪಾಲಯವನ್ನು ಹೊಕ್ಕ. ಸರಸರನೆ ಹೋಗಿ ದಶರಥ ಮಹಾರಾಜನ

ಚರಣಕಮಲಗಳಿಗೆ ನಮಿಸಿ ಕೈಮುಗಿದು, ಕೌಸಲ್ಯೆಗೆ ನಮಸ್ಕರಿಸಿ ದೂರದಲ್ಲಿ ಖಿನ್ನತೆಯಿಂದ ನಿಂತ. ಸೂತನನ್ನು ನೋಡಿ ಅವರ ಅಂತರಂಗದಲ್ಲಿ ಶೋಕ ತುಂಬಿಕೊಂಡಿತು. ರಾಮನನ್ನು ಕರೆದೊಯ್ದು ಅರಣ್ಯಕ್ಕೆ ತಲುಪಿಸಿ ತಾನೊಬ್ಬನೇ ಮನೆಗೆ ಬಂದು ತನ್ನ ಯಜಮಾನನಿಗೆ ಏನು ತಾನೆ ಈ ದುರ್ಜೀವಿ ಹೇಳಬಲ್ಲ? "ಹಿತಕಾರಿಯಾದ ನೀನು ಅರಸನನ್ನು ಅಲ್ಲಿಯೆ ಬಿಟ್ಟು ಬರುವುದೇ?" ಎಂದು ಸ್ತ್ರೀಯರು ಹಲುಬುತ್ತಿರಲು ಅದನ್ನು ಕೇಳಿದ ದಶರಥ ಮಹಾರಾಜನು ಮೂರ್ಛಿತನಾದ. ಆಗ ಅಲ್ಲಿದ್ದ ಎಲ್ಲರೂ ಗೈದ ಆರ್ತರವವು ದಿಕ್ಕುಗಳಿಗೆಲ್ಲ ಪಸರಿಸಿತು. ನೆಲದ ಮೇಲೆ ಬಿದ್ದ ಮಹಾರಾಜನನ್ನು ನೋಡಿ ಅಳುವ ಸ್ತ್ರೀಯರ ಗೋಳನ್ನು ಕೇಳಿದ ಸುಮಂತ್ರನು ರಾಜನನ್ನು ಹಿಡಿದು ಮೇಲೆತ್ತಿ ಕುಳ್ಳಿರಿಸಿ ಉಪಚರಿಸತೊಡಗಿದ. ಅಷ್ಟರಲ್ಲಿ ಕೌಸಲ್ಯೆಯು ಎರಡೂ ಕೈಗಳನ್ನು ಹಿಡಿದು ಅವನ ಕಮಲನೇತ್ರಗಳಿಂದ ಸುರಿಯುವ ನೀರನ್ನು ಕೈಗಳಿಂದ ಒರಸಿ, ತನ್ನ ಸೆರಗಿನಿಂದ ಗಾಳಿ ಬೀಸಿ, ಪಾದಗಳನ್ನು ಒತ್ತುತ್ತಿದ್ದರೆ, ಇದಾವುದರ ಅರಿವೂ ಇಲ್ಲದ ಪ್ರಜ್ಞಾಹೀನನ ಹಾಗೆ ನರನಾಥ ಬೆಪ್ಪಾಗಿ ಕುಳಿತಿದ್ದ.

ಮಹಾರಾಜನು ಮಾತಾಡದಿರಲು ಆರ್ತತೆಯಿಂದ ಸ್ತ್ರೀಜನರೆಲ್ಲ ಮತ್ತೆ ಮತ್ತೆ ಜೋರಾಗಿ ಅಳುವುದನ್ನು ಕಂಡು ಕೌಸಲ್ಯೆಯು ಪೊಡವಿಪತಿಯನ್ನು ಮೃದುಮಾತುಗಳಿಂದ ಸಮಾಧಾನಪಡಿಸಲೆಂದು ಅವನ ಕೈಯನ್ನು ಹಿಡಿದು, "ಯಾವ ಭಯದಿಂದ ನಡುಗುತ್ತಿರುವಿರಿ? ಸಾರಥಿಯನ್ನೇಕೆ ಮಾತನಾಡಿಸುತ್ತಿಲ್ಲ? ಕಾಳ್ಗಿಚ್ಚಿನಂತಹ ಕೈಕೇಯಿಯು ಇಲ್ಲಿಲ್ಲ" ಎಂದು ಗದ್ಗದದಿಂದ ನುಡಿದಳು. ಆವರಿಸಿದ್ದ ಭ್ರಮಾಂಧಕಾರವು ನಿಧಾನವಾಗಿ ಹರಿಯುತ್ತ ಕೊಂಚ ಹೊತ್ತಿನಲ್ಲಿ ರಾಜನು ಎಚ್ಚರಗೊಂಡು ಕಣ್ಣು ತೆರೆದು ತನ್ನ ಹಿರಿಯ ಹೆಂಡತಿಯನ್ನು ಕಂಡು, ಹಿಂದೆ ತಿರುಗಿ ಸೂತನನ್ನು ಕರೆದು ಮೃದುವಾಗಿ ಮೊದಲಿಸಿದ: "ಜಲಜಾಕ್ಷ ರಾಮನು ಎಲ್ಲಿದ್ದಾನೆ? ಅವನನ್ನು ಯಾವ ದಾರಿಗೆ ಸೇರಿಸಿ ಬಂದೆ? ಮುಂದೆ ಯಾವ ಸ್ಥಳವನ್ನು ಹೋಗಿ ಸೇರಬೇಕೆಂದು ಅವನು ಬಯಸಿದ್ದಾನೆ? ತನ್ನ ಮೃದುವಾದ ಹೆಜ್ಜೆಗಳನ್ನಿಡುತ್ತ ಅವನು ಹೇಗೆ ಸಾಗುತ್ತಾನೆ? ರಥ ಗಜ ಅಶ್ವಗಳಿಲ್ಲದೆ ರಾಜಕುಮಾರನು ಹೇಗೆ ತಾನೇ ಕಾಡಿನಲ್ಲಿ ಹೋಗಬಲ್ಲ? ಚಂದ್ರಶಾಲೆಯಲ್ಲಿ ಅಡ್ಡಾಡಿಕೊಂಡಿದ್ದ ಸುಕುಮಾರನು ದುಷ್ಟಮೃಗಕೀಟಗಳುಳ್ಳ ಅರಣ್ಯದಲ್ಲಿ ಹೇಗೆ ಸಂಚರಿಸುತ್ತಾನೆ? ಇಲ್ಲಿಂದ ಹೊರಟ ಅವರು ಯಾವ ನಗರವನ್ನು ಸೇರಿದರು, ಅಲ್ಲಿಂದ ಬೇರೆಲ್ಲಿಗೆ ಹೋದರು? ಅಲ್ಲಿ ಅವರೇನು ಹೇಳಿದರು, ಈಗ ಅವರೆಲ್ಲಿದ್ದಾರೆ, ಹೇಗಿದ್ದಾರೆ? ಎಲ್ಲವನ್ನೂ ವಿವರವಾಗಿ ನನಗೆ ತಿಳಿಯುವಂತೆ ಹೇಳು" ಎಂದು ಕೇಳಿದ. ಆಗ ಸುಮಂತ್ರನು ರಾಜನಿಗೆ ಅಭಿನಮಿಸಿ ಇಲ್ಲಿಂದ ಹೊರಟ ಕ್ಷಣದಿಂದ ತಾನು ವಾಪಸು ಬಂದವರೆಗಿನ ಎಲ್ಲ ಸಂಗತಿಗಳನ್ನೂ ನಿಧಾನವಾಗಿ ನಿರೂಪಿಸಿದ: "'ಸುಮಂತ್ರನೇ, ನೀನು ನಗರಕ್ಕೆ ಮರಳಿ ಎಲ್ಲರ ಕ್ಷೇಮಸಮಾಚಾರಗಳನ್ನು ವಿಚಾರಿಸಿ, ತಾಯಂದಿರಿಗೆ ನಮಸ್ಕಾರಗಳನ್ನು ತಿಳಿಸಿ, ತಂದೆಯ ಅಡಿದಾವರೆಗಳಿಗೆ ಬಾಗಿ ಸಂತೋಷದಿಂದ ನಮಸ್ಕರಿಸಿದ ಎಂದು ಹೇಳು. ಅಯೋಧ್ಯಾಧಿನಾಥ ಭರತನಿಗೆ ಹಾಗೂ ಇತರ ಸ್ನೇಹಿತರಿಗೆ ನಾವು ಕ್ಷೇಮವಾಗಿರುವುದನ್ನು ತಿಳಿಸು ಎಂದುದಲ್ಲದೆ, ದೊರೆತನದಿಂದ ಎಲ್ಲರನ್ನೂ ಪಾಲಿಸುತ್ತ ತಾಯಂದಿರ ಇಚ್ಛೆಯಂತೆ

ತಂದೆಯ ಆಜ್ಞೆಯನ್ನು ಮೀರದೆ ಸತ್ಯಾಭಿವರ್ಧನವನ್ನು ಮಾಡುತ್ತ ರವಿಕುಲದರಸುಗಳಲ್ಲಿ ಅತ್ಯಂತ ಶ್ರೇಷ್ಠನೆನಿಸಿಕೋ ಎಂದು ಭರತನಿಗೆ ಹೇಳು' ಎಂದು ರಾಮನು ಹೇಳಿದ. ಅಷ್ಟರಲ್ಲಿ ಲಕ್ಷ್ಮಣನು ಹಾವಿನಂತೆ ಬುಸುಗುಡುತ್ತ, 'ತಾನು ಲೋಭದಿಂದ ಮಾಡಿದ ಅಪರಾಧವನ್ನು ನಡೆಸಿಕೊಳ್ಳುವ ಉದ್ದೇಶದಿಂದ ಮಹಾರಾಜನು ಮೂರು ಲೋಕಗಳಲ್ಲಿಯೂ ಒಪ್ಪಿತನಾದ ರಘುವೀರನನ್ನು ಕಾಡಿಗಟ್ಟಿದ; ಶ್ರೀರಾಮನೇ ನನ್ನ ಒಡೆಯ, ತಂದೆತಾಯಿಬಂಧು ಪ್ರಿಯಸಖ ಎಂದು ಬಂದಿದ್ದೇನೆ, ನೀನು ನನಗೆ ತಂದೆಯೇ ಅಲ್ಲ ಎಂದು ವಿಜ್ಞಾಪಿಸು' ಎಂದು ಕ್ರೋಧದಿಂದ ಹೇಳಿದ."

"ರಾಮಲಕ್ಷ್ಮಣ ಇಬ್ಬರು ಹೇಳಿದುದನ್ನೂ ಕೇಳಿ ತನ್ನ ತಲೆಯನ್ನು ಬಗ್ಗಿಸಿ ಕಂಬನಿ ಮಿಡಿಯುತ್ತಿರಲು, ಭಾಮಿನೀಮಣಿ ಸೀತೆಯು ತನ್ನ ಶೋಕಾಧಿಕ್ಯದಲ್ಲಿ ಏನನ್ನು ಹೇಳುವುದೂ ಸಾಧ್ಯವಾಗದೆ ಸುಮ್ಮನೆ ನಿಂತಿರುವಾಗ, ನಾನು ಊರಿಗೆ ಹಿಂದಿರುಗಬೇಕಾದ್ದರಿಂದ ರಾಮಲಕ್ಷ್ಮಣರಿಗೆ ನಮಸ್ಕರಿಸಿ ರಥವನ್ನೇರಿ ಬಂದೆ. ಗುಹನೊಡನೆ ಸ್ವಲ್ಪ ದೂರ ಬಂದು, ರಾಘವೇಶ್ವರನು ನನ್ನನ್ನು ನೆನೆಸಿಕೊಳ್ಳಬಹುದೆಂಬ ಹಂಬಲದಿಂದ ಒಂದು ಸ್ಥಳದಲ್ಲಿ ನಾಲ್ಕಾರು ದಿನಗಳಿದ್ದೆ. ಆದರೆ ಆತನಿಂದ ಯಾವುದೇ ಸಂದೇಶ ಬಾರದಿರಲು ನನ್ನ ಮನಸ್ಸು ಖಿನ್ನವಾಯಿತು; ದಿಕ್ಕುಗಳೆಲ್ಲ ಮಂಕಾದುವು. ಹೀಗಾಗಿ ವಿಧಿಯಿಲ್ಲದೆ ಅಲ್ಲಿಂದ ಹೊರಟು ದೇವನದಿಯನ್ನು ಬಿಟ್ಟು ನಗರದ ಕಡೆ ಬಂದೆ. ಪರಿಮಳವಿಲ್ಲದ ಹೂಗಳನ್ನು ಬಿಟ್ಟ ಗಿಡಬಳ್ಳಿಗಳನ್ನೂ, ಹಣ್ಣುಗಳಿಲ್ಲದ ಮರಗಳನ್ನೂ, ಮೊರೆಯುವ ದುಂಬಿಗಳಿಲ್ಲದೆ ಅರ್ಧ ಅರಳಿದ ಹೂಗಳಿಂದ ಕೂಡಿದ ಸರೋವರಗಳನ್ನೂ, ದೈನ್ಯಾಲಾಪದಿಂದ ಕೊರಗುವ ಜನರನ್ನೂ ನೋಡುತ್ತ ನಾಚಿ ಮುಖ ಮುಚ್ಚಿಕೊಂಡು, ಬಿಟ್ಟು ಬಂದ ದೇಶಗಳನ್ನು ಹಿಂದಿರುಗಿ ನೋಡುತ್ತ ಬಂದೆ. ಕಲುಷಿತವಾದ ಬಿಸಿನೀರಿನಿಂದ ತುಂಬಿದ ಕುಂಟೆ ಬಾವಿಗಳಿಂದ ಕೂಡಿ ತಮ್ಮ ಶಕ್ತಿಯನ್ನು ಕಳೆದುಕೊಂಡು ಸರೀಸೃಪಗಳೊಂದೂ ಸಂಚರಿಸದೆ, ಉಲಿವ ಕೋಗಿಲೆ ಗಿಳಿಗಳೇ ಕಾಣಿಸದೆ ರಾಮಶೋಕದಿಂದ ಕೂಡಿವೆಯೆನಿಸಿ ಮಲಿನವಾದ ಉದ್ಯಾನವನಗಳನ್ನು ನೋಡಿ ಮುಖ ಮುಚ್ಚಿಕೊಂಡು ಬಂದೆ. ಚಿನ್ನದ ರಥವನ್ನು ಕಂಡ ಜನರು ಶ್ರೀರಾಮನ ಬಂದನೆಂಬ ಆಸೆಯಿಂದ ನೋಡಲು ಬಂದು ಇಂದೀವರನನ್ನು ಕಾಣದೆ ಎಲ್ಲರೂ ಕೇಳುವುದನ್ನು ಕೇಳುವ ಕ್ಲೇಶದಿಂದ ತಪ್ಪಿಸಿಕೊಳ್ಳಲು ನಾನು ವೇಗದಿಂದ ರಥವನ್ನೋಡಿಸಿಕೊಂಡು ಬಂದು ನಗರವನ್ನು ಸೇರಿದೆ, ಆದರೆ ನಗರದ ಎಲ್ಲಡೆಯೂ ಜನಶೂನ್ಯವಾಗಿದ್ದುದನ್ನು ಕಂಡು ಅರಮನೆಗೆ ಬಂದೆ. ಹಾಗೆ ಬರುವಾಗ ಬೀದಿಗಳಲ್ಲಿ ಕರುಮಾಡದ ಮೇಲೆ ನಿಂತು ನೋಡುವ ನಾರೀಜನರೂ ಬಾಲವೃದ್ಧರೂ ರಥವು ಬರಿದಾಗಿರುವುದನ್ನು ಕಂಡು ಶೋಕದಿಂದ ಮೊರೆಯುತ್ತಿರಲು, ಶತ್ರುಗಳನ್ನು ಕಂಡ ರೀತಿಯಲ್ಲಿ ಎಲ್ಲರನ್ನೂ ನಿವಾರಿಸಿಕೊಂಡು, ಮಿತ್ರರೂ ಬಾಂಧವರೂ ಮೂದಲಿಸದೆ ತೀವ್ರಶೋಕದಿಂದ ನಗರವನ್ನು ನಿಟ್ಟಿಸಲಾರದೆ ಬಂದೆ" ಎಂದು ಸೂತ ಹೇಳಿದ.

ಹೀಗೆ ಸುಮಂತ್ರನು ಹೇಳುವುದನ್ನು ಕೇಳಿದ ಜನನಾಥನು ಹೆಚ್ಚಿದ ಸಂತಾಪದಿಂದ, "ಎಲೈ ಸುಮಂತ್ರ ಕೇಳು, ಮುಂದಾಗುವುದನ್ನು ಕಾಣಲು ಯಾರಿಗೆ ತಾನೇ ಸಾಧ್ಯ?

ಪ್ರಾರಬ್ಧಫಲದಿಂದ ಹೆಂಡತಿಯ ಮಾತಿನ ಮೋಹಮದದಿಂದ ಮನೆಯಲ್ಲಿನ ಒಬ್ಬರೂ ಅರಿಯದಂತೆ ಅಮಾತ್ಯ ಮತ್ತು ಪರಿಜನರು ಕಾಣದಂತೆ ನಾನೆ ಸ್ವಬುದ್ಧಿಯಿಂದ ಮಾಡಿದ ಕೃತ್ಯದ ಫಲವನ್ನು ಉಣ್ಣಲೂ ಆರೆ, ಪರಿಹರಿಸಲೂ ಆರೆ. ಕೇಡು ಬಂದು ಒದಗುವ ಸಂದರ್ಭದಲ್ಲಿ ಯಾರಿಗಾದರೂ ಬುದ್ಧಿ ಓಡುವುದಿಲ್ಲ. ಕುಲನಾಶಕ ಕೃತ್ಯದ ಬಗ್ಗೆ ಮಾತಾಡಿ ಫಲವೇನು? ನೀರದಳಾಕ್ಷ, ಸಾರಸಕಟಾಕ್ಷ, ನೀರದಸುಗಾತ್ರ, ನಿರುಪಮಸ್ತೋತ್ರ, ಚಾರುಮಣಿಭೂಷ, ಶರಣಜನಪೋಷ, ಕ್ಷತ್ರಿಯೋತ್ತಮವೇಶನಾದ ರಾಮನನ್ನು ಕಾಣದೆ ನನ್ನ ಪ್ರಾಣವು ಜಾರಿಹೋಗದೆ ಇರದು. ಹಾ ರಾಮಾ! ಪಾಪಿಷ್ಠ ಎಂದು ನನ್ನನ್ನು ಬಿಟ್ಟು ಹೋದೆಯಾ? ಹಾ ರಾಮ! ನೇಮಿಷ್ಠನಾದ ಸೌಮಿತ್ರಿಯೇ ನನ್ನನ್ನು ತೊರೆದೆಯಾ? ನೆರಳಿನಂತೆ ಪತಿಯನ್ನು ಹಿಂಬಾಲಿಸುವ ಸತ್ಯಾತ್ಮ ವೈದೇಹಿಯೇ ನನ್ನನ್ನು ನೋಡಲು ಇಷ್ಟವಿಲ್ಲವೇ? ಘೋರತರವಾದ ಕೈಕಾಗ್ನಿಯಲ್ಲಿ ಬೇಯಲು ನನ್ನನ್ನು ಬಿಟ್ಟು ಚೆಲುವಾದ ಕಾಡು ನದಿಪರ್ವತಗಳನ್ನು ನೋಡುತ್ತ ವನವಿಹಾರಮಾಡುವುದು ನಿಮಗೆ ತರವೇ?" ಎಂದು ನೆನೆನೆನೆಸಿಕೊಂಡು ಪಂಕ್ತಿರಥನು ಮರುಗಿದ. ಹೀಗೆ ಅರಸನು ಶೋಕದಿಂದ ನೆಲದ ಮೇಲೆ ಹೊರಳಾಡುತ್ತಿರುವುದನ್ನು ಕಂಡ ಕೌಸಲ್ಯೆಯು ಸಂತಾಪದಿಂದ ಸುಮಂತ್ರನನ್ನು ಕರೆದು, "ಸುತ್ತಲೂ ಆವರಿಸಿರುವ ದುಃಖಸಾಗರದಲ್ಲಿ ತೊಳಲಾಡುತ್ತ ಇಲ್ಲಿದ್ದರೆ ನನ್ನ ಪ್ರಾಣವುಳಿಯದು; ರಾಮಲಕ್ಷ್ಮಣಸೀತೆಯರು ಇರುವ ಜಾಗಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಕಾಪಾಡು, ಹಿಂದೆ ಮುಂದೆ ಆಲೋಚಿಸಬೇಡ" ಎಂದು ಮರುಗಿ ಬಳಲಿದಳು.

ಹೀಗೆ ಅಂತಃಪುರಾಂಗನೆಯರೆಲ್ಲ ತೀವ್ರ ಶೋಕದಿಂದ ಮಾಡುವ ಆರ್ತನಾದವು ದಿಕ್ಕುಗಳನ್ನು ತಲುಪಲು ಜನರ ಅಳಲಿನ ಗದಬದವನ್ನು ಕಂಡು ಹೆದರಿದ ಸುಮಂತ್ರನು ವಿನಯದಿಂದ ಅವರನ್ನೆಲ್ಲ ಪ್ರೀತಿಭರಿತ ಮಾತುಗಳಿಂದ ಸಮಾಧಾನಪಡಿಸುವಷ್ಟಕ್ಕೆ ಅವನಿಗೆ ಹರನು ತ್ರಿಪುರವನ್ನು ಜಯಿಸಿದಂತೆ ಆಯಿತು. ಅವರ ದುಃಖವನ್ನು ಹೋಗಲಾಡಿಸಲು ವಿನಯದಿಂದ, "ಇಷ್ಟಜನರೆಲ್ಲ ಶೋಕಿಸುವಂತೆ ನೀವೆಲ್ಲ ಇಷ್ಟೊಂದು ದುಃಖಪಡುವುದು ತಕ್ಕುದೇ? ನಗರಕ್ಕಿಂತಲೂ ಚೆನ್ನಾಗಿರುವ ಕಾಡಿನಲ್ಲಿ ರಘೂದ್ವಹನು ಸುಖದಿಂದಿದ್ದಾನೆ; ಅವನ ಪಾದಪಯೋಜಗಳನ್ನು ಸೌಮಿತ್ರಿ ಸೇವಿಸುತ್ತಿದ್ದಾನೆ; ಹೀಗಾಗಿ ಆತನು ಆನಂದಮಯನಾಗಿ ಬಾಳುತ್ತಿದ್ದಾನೆ. ಊರಿನ ಉದ್ಯಾನವನದಲ್ಲಿ ವಿಹರಿಸುವ ಹಾಗೆ ಜನಕಜೆಯು ನಗುವನ್ನು ಬೀರುತ್ತ ಸುಖದಿಂದಿದ್ದಾಳೆ; ಒಗುಮಿಗೆಯ ಸತ್ಯವನ್ನು ಪಾಲಿಸುವುದು ಪರಮಮಂಗಳ ಎಂದು ರಾಮನಿದ್ದಾನೆ. ಇದನ್ನು ತಿಳಿಯದೆ ಮುಗ್ಧತೆಯಿಂದ ತೊಳಲಾಡಿದರೆ ಬರುವ ಪುರುಷಾರ್ಥವೇನು? ಅಗಣಿತ ಸುಖದಿಂದ ಕೂಡಿರುವ ಆತನನ್ನು ನೆನೆಸಿಕೊಂಡರೆ ಪಾಪಹರಣವಾಗುತ್ತದೆ ಎಂಬುದನ್ನು ಅರಿತುಕೊಂಡವನಿಗೆ ಎಲ್ಲಿಯದು ದುಃಖ? ಆ ಮಹಾಪುರುಷನನ್ನು ಸ್ಮರಿಸಿದರೆ ಕಾಯಕ್ಲೇಶ ಮಹಾಶೋಕಗಳನ್ನು ಕಳೆದುಕೊಂಡು ಮಹಾಮುನಿಗಳೆಲ್ಲ ಆರಾಮವೆನ್ನಿಸಿದರು. ಭೂಮಿಯ ಭಾರವನ್ನಿಳುಹಲು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪೊರೆಯಲು ರಾಮಪುರದಧಿನಾಥನು ಅವತರಿಸಿದ್ದಾನೆ ಎಂಬುದನ್ನು ಅರ್ಥಮಾಡಿಕೊಂಡು ಸುಖವಾಗಿರಿ" ಎಂದು ಧೀಮಂತ ಸುಮಂತ್ರನು ಹೇಳಿದ.

೨೩. ಶಬ್ದವೇಧಿಯಿಂದ ವೈಶ್ಯಜಾತನನ್ನು ತಾನು ಕೊಂದ ಸಂಗತಿಯನ್ನು ದಶರಥ ಹೇಳಿದುದು

ಶೈಲತನುಜೆಯೇ, ಅಂತಃಪುರಾಂಗನೆಯರನ್ನು ಸುಮಂತ್ರನು ಸಾಂತ್ವನಗೊಳಿಸುತ್ತಿರಲು, ಇತ್ತ ಕೌಸಲ್ಯೆಯು ತನ್ನ ಮಗನನ್ನು ನೆನೆನೆನೆದು ಉಮ್ಮಳದಿಂದ ತನ್ನ ಅಂತರಂಗದ ಕೋಪವನ್ನು ವಾಂತಿಮಾಡಿದಂತೆ ಮುಂದಿರುವ ದಶರಥನನ್ನು ನಿಷ್ಠುರ ಮಾತುಗಳಿಂದ ನಿಂದಿಸಿದ ಪರಿಯನ್ನು ಯಾರಿಂದ ತಾನೇ ಬಣ್ಣಿಸಲಾದೀತು? "ಪರಮ ಕಾರಣಿಕ, ಶಾಂತಿದಾಂತ, ಸಾಧುಜನರಕ್ಷಕ ಎಂದು ಹೊಗಳುಭಟ್ಟರು ಹೊಗಳುವ ಹಾಗೆ ಮೇರು ಸತ್ಕೀರ್ತಿಯನ್ನು ಪಡೆದ ನೀನು ರಾಮನನ್ನು ನಿಷ್ಕಾರಣವಾಗಿ ಕಾಡಿಗಟ್ಟಿದ್ದು ಯಾಕೆ? ದುಷ್ಟಮೃಗಗಳಿಂದ ಕೂಡಿದ ಅರಣ್ಯದಲ್ಲಿ ಅವರು ಜೀವನವನ್ನು ನಡೆಸುವುದೆಂತು? ಏನು ತಿನ್ನಬೇಕು? ಈ ಕಲ್ಲು ಮನಸ್ಸು ಹೇಗಾದರೂ ಬಂತು? ಮನ್ಮಥನಂತೆ ಸುಕುಮಾರನಾದ ಶರೀರವುಳ್ಳ, ಸುಲಿಪಲ್ಲು, ಮುತ್ತುಗದೆಲೆಯಂತೆ ವಿಶಾಲವಾದ ಕಣ್ಣುಗಳಿರುವ, ಕೋಮಲ ಮನಸ್ಸು ಸಚ್ಚಾರಿತ್ರಗಳನ್ನುಳ್ಳ, ಎಲ್ಲ ಸದ್ಗುಣಗಳ ನಿಲಯನಾದ ಮಗನನ್ನು ಹೊರಗಟ್ಟಿದರೆ, ಅವನು ಕಾಡುಮೇಡುಗಳಲ್ಲಿ ಹೇಗಿರಬಲ್ಲ? ನನ್ನ ಹೃದಯವನ್ನು ಶತಕೋಟಿ ಬಾರಿ ತಿವಿದಂತಾಗಿದೆ, ನಾನು ಹೇಗೆ ತಾಳಿಕೊಳ್ಳಲಿ? ಹದಿನಾಲ್ಕು ವರ್ಷಗಳ ಕಾಲ ಕೈಕೇಯಿಯ ಮಗನು ಈ ರಾಜ್ಯವನ್ನು ಅನುಭವಿಸಿದ ಎಂಜಲು ಭಾಗ್ಯವನ್ನು, ಪ್ರಾಣಿಗಳು ತಿಂದುಳಿಸಿದ ಹಣ್ಣುಗಳನ್ನು ತಿನ್ನುವಂತೆ, ಕದನಕರ್ಕಶನಾದ ರಾಘವನು ಹೇಗೆ ತಾನೇ ಸ್ವೀಕರಿಸಬಲ್ಲ? ದುಃಖದ ದರಿದ್ರ ಅರಣ್ಯದಲ್ಲಿ ಹೇಗೆ ಬದುಕಿ ಬರಬಲ್ಲ? ಪದ್ಮಾಕ್ಷನಾದ ರಾಮನಿಗೆ ಪೂರ್ವಕೃತದಿಂದ ಈ ದೊಡ್ಡ ವಿಪತ್ತು ಅಡಸಿತಲ್ಲ! ಸಕಲವಿದ್ಯಾವಿಚಕ್ಷಣನಾದ ರಾಮನು ದುರ್ಯುಕ್ತಿಗಳನ್ನು ಮಾಡಿದರೆ ಒಪ್ಪುವವನೇ? ಅವನ ಮನಸ್ಸು ಕೆಟ್ಟರೆ ಒಂದೇ ಬಾಣದಿಂದ ಒಮ್ಮೆಗೇ ಮೂರು ಲೋಕಗಳನ್ನೂ ಸುಟ್ಟು ಬೂದಿ ಮಾಡಬಲ್ಲ. ಅಂತಹ ರಾಮನು ಶ್ರುತಿನಿಕರವು ಸಾರುವ ಅಕಳಂಕ ಸತ್ಯಾನುಸರಣವನ್ನು ಮಾಡುತ್ತ ಕಾಡಿನಲ್ಲಿ ಹೇಗಿರಬಲ್ಲ? ನನ್ನ ಮಗನಿಗೆ ಮೃಗಗಳೊಡನೆ ಬದುಕುವಂತೆ ಮಾಡಿಬಿಟ್ಟಿರಲ್ಲ! ಹೆಂಡತಿಯರು ಉಂಡ ಬಳಿಕ ಗಂಡಂದಿರು ಊಟಮಾಡುವರೇ? ಹಾಗೆಯೇ ನೀಚರು ದುಷ್ಟರು ಅಧಮರು ಸಾರವನ್ನೆಲ್ಲ ಕೊಂಡ ಬಳಿಕ ಭೂಮಿಯನ್ನು ಕೊಳ್ಳುವುದು ತರವೇ? ಶೂರನೂ ಉದಾರಿಯೂ ಧೀರಾಗ್ರಗಣ್ಯನೂ ಆದ ರಘುವೀರನು ನಿಮ್ಮ ದಯದಿಂದ ಈ ಗತಿಯನ್ನು ಪಡೆಯುವಂತಾಯಿತು! ಹೆಣ್ಣಿಗೆ ಗಂಡನೇ ಮುಖ್ಯಪ್ರಾಣ, ಮಗನು ಎರಡನೆಯ ಮನೆ, ಮೂರನೆಯದು ತವರುಮನೆ ಎಂಬುದು ಲೋಕದಲ್ಲಿ ಜನಜನಿತವಾದ ಭಾವನೆ. ಆದರೆ ಮತ್ತೊಬ್ಬ ಹೆಂಡತಿಯ ಕಾರಣದಿಂದ ಮಗನನ್ನು ಕಾಡಿಗೆ ಕಳಿಸಿ ಬಾಯಿಬಾಯಿಬಿಡುತ್ತ ಅವಳ ಪಕ್ಕದಲ್ಲಿ ಮಗನನ್ನು ನೆನೆಸಿಕೊಂಡು ಕೂತಿದ್ದರೆ ನನಗೆ ಬೇರಾರು ಗತಿ?" ಎಂದು ಅತ್ಯಂತ ನಿಷ್ಠುರವಾದ ಮಾತುಗಳಿಂದ ಕೌಸಲ್ಯೆಯು ಗಂಡನನ್ನು ಚುಚ್ಚಿದಳು.

ಕಾಸಿದ ಕಂಬಿಯನ್ನು ಕಿವಿಯಲ್ಲಿ ತುರುಕಿದ ಹಾಗೆ ಆಡಿದ ಉದಾಸೀನದ

ಮಾತುಗಳು ಕಿವಿಯಲ್ಲಿ ಭೋರ್ಗರೆಯಲು ಸ್ತಿಮಿತವನ್ನು ಕಳೆದುಕೊಂಡ ಮಹಾರಾಜನು ಸಂತಾಪದಿಂದ ಬೇಯುತ್ತ, ಮಗನನ್ನು ನೆನೆಸಿಕೊಂಡು ಗೋಳಿಡುತ್ತ, ಬೇಸರಗೊಂಡು ಆಗಾಗ ಪ್ರಜ್ಞಾಹೀನತೆಗೊಳಗಾಗುತ್ತ, ಮುಂಚೂಣಿ ಭಟನಿಲ್ಲದ ಸೇನೆಯಂತೆ ಬೆದರುತ್ತ ಸುರೇಶಮಿತ್ರನು ಕರಗಳನ್ನು ಮುಗಿದು ಕೌಸಲ್ಯೆಯನ್ನು ಈ ರೀತಿ ಪ್ರಾರ್ಥಿಸಿದ: "ಹೆಂಡತಿಯ ಮೋಹಕ್ಕೊಳಗಾಗಿ ಮಗನನ್ನು ಕಾಡಿಗಟ್ಟಿದ ಎಂದು ಅತಿಶಯವಾದ ದುಷ್ಕೀರ್ತಿಯು ಅಡಸಿ ನಾನು ಹಂಬಲಿಸುತ್ತಿರಬೇಕಾದರೆ ಅವನನ್ನು ಹಗಲೆಲ್ಲ ಹಂಗಿಸುವುದೇ ಸತ್ಯವೆಂದೆನಿಸುತ್ತದೆ; ಹಿತಕಾರಿಯಾಗಲು ಹೊರಟು ಅಹಿತವನ್ನು ಮಾಡಬೇಕಾದ ಸಂದರ್ಭದಲ್ಲಿ ಸದಾ ಕ್ರೂರಿ, ಕೃಪಣ, ಅಧಮ ಎಂದು ಗಂಡನನ್ನೇ ದೇವರೆಂದು ಬಗೆಯುವ ಸಾಧ್ವಿಯೂ ಭಾವಿಸುವುದು ಕಾಲಬಲವಲ್ಲವೇ?" ಗಂಡನು ಆಡಿದ ನುಡಿಗಳನ್ನು ಕೇಳಿ ಕೌಸಲ್ಯೆಯು ತನ್ನ ಪತಿವ್ರತಾಧರ್ಮವನ್ನು ನೆನೆಸಿಕೊಂಡು ನಡುಗಿಹೋದಳು. ಮಹಾರಾಜನ ಅಡಿಗಳಿಗೆರಗಿ ಭಕ್ತಿಭಾವದಿಂದ, "ಮಗನನ್ನು ನೆನೆಸಿಕೊಂಡು ಉಮ್ಮಳದುರಿ ಹೆಚ್ಚಿ ನನ್ನ ಮನಸ್ಸು ಸಲ್ಲದ ಅಪರಾಧವನ್ನು ಮಾಡಿಬಿಟ್ಟಿತು. ನನ್ನ ಕೆಡುನುಡಿಗಳನ್ನು ಕರುಣಾನಿಧಿಯಾದ ನೀವು ಕ್ಷಮಿಸಿ. ಕೆಟ್ಟವರನ್ನು ಕಾಪಾಡುವುದು ಸದ್ಧರ್ಮವಲ್ಲವೇ? ನಿಮ್ಮ ಚರಣಸೇವೆಯ ಬಲದಿಂದಾಗಿ ನಾನು ಯಾವುದಾದರೊಂದು ತಪ್ಪನ್ನು ಮಾಡಿದ್ದರೆ ಅದನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಿರಿ. ದುಃಖ ತುಂಬಿದ ವ್ಯಕ್ತಿಗೆ ವಿವೇಕವಿರುವುದೇ?" ಎಂದು ಹಲುಬಿದಳು.

ಮಕ್ಕಳನ್ನು ನೆನೆಸಿಕೊಂಡು ದಶರಥನು ಅರೆನಿಮಿಷಕ್ಕೊಮ್ಮೆ ಮೂರ್ಛೆ ಹೋಗುತ್ತಾನೆ; ಪ್ರಜ್ಞಾಹೀನನಾಗಿ ಕಣ್ಣುಗಳನ್ನು ಮುಚ್ಚಿಕೊಂಡು ಕಳವಳಪಡುತ್ತ ಅರೆನಿಮಿಷಕ್ಕೊಮ್ಮೆ ಎಚ್ಚರಗೊಂಡು ತಲ್ಲಣಿಸುತ್ತಾನೆ. ಅವನ ವ್ಯಾಮೋಹಾಂಧಕಾರವು ಹೇಳಲಸದಳ; ಪರಿಪರಿಯಾಗಿ ಗೋಳಿಡುತ್ತ ಬಳಲಿ ಅಳುತ್ತ ಅರ್ಧರಾತ್ರಿಯಲ್ಲಿ ತಾನು ಹಿಂದೆ ಗೈದ ದುಷ್ಕೃತವನ್ನು ನೆನೆಸಿಕೊಂಡು, ಅದನ್ನು ಕೌಸಲ್ಯೆಗೆ ಹೇಳಲು ತೊಡಗಿದ: "ಅಂಗಳದಲ್ಲಿದ್ದ ಮಂದಾರತರುವನ್ನು ಕಡಿದು ಹಾಕಿ, ಮುಂಗಡೆಯಲ್ಲಿ ಶಿಂಶುಪವೃಕ್ಷವನ್ನು ನಟ್ಟು ನೀರುಣಿಸಿ ಫಲ ಬಿಟ್ಟಾಗ ಅದನ್ನು ಕಂಡು ಅಳಲುತ್ತ ಭಂಗಪಡುವಂತೆ, ಎಷ್ಟೋ ಕಾಲದ ಹಿಂದೆ ಮನುಜಪುಂಗವನೊಬ್ಬನನ್ನು ಸಾವಿಗೀಡು ಮಾಡಿ ಅದನ್ನು ನೆನೆಸಿಕೊಂಡು ಸಂಕಟಪಡುವ ಬುದ್ಧಿಗೇಡಿಯಾದ ನನ್ನನ್ನು ನೋಡಿ ಶೋಕಿಸುವ ಹಣೆಯಬರಹ ನಿನ್ನದಾಯಿತು. ಕಾರ್ಯಾಕಾರ್ಯಗಳ ಪರಿಯನ್ನು ಅರಿಯದ ತರಳನಾಗಿದ್ದ ಕಾಲದಲ್ಲಿ ನಾನು ಮಾಡಿದ ಪಾತಕದ ಫಲವನ್ನು ಅನುಭವಿಸುವ ಸಂದರ್ಭ ಈಗ ಬಂದಿದೆ. ಶರೀರಬಲ ಯೌವನಗಳ ಸೊಕ್ಕಿನಿಂದ ರಾತ್ರಿಯಲ್ಲಿ ಮುನಿಕುಮಾರಕನನ್ನು ಬಾಣ ಬಿಟ್ಟು ಕೊಂದೆ. ಅಜ್ಞಾನದ ಫಲವಾಗಿ ಮಾಡಿದ ಕಾರ್ಯದಿಂದ ಬಂದ ಪಾತಕದ ಆ ಕತೆಯನ್ನು ಈಗ ಹೇಳುತ್ತೇನೆ, ಕೇಳು:

"ಚಾತಕಗಳ ಜೀವನೌಷಧವೂ, ಗಿಡಬಳ್ಳಿಗಳಿಗೆ ಅಮೃತಘುಟಿಕೆಯೂ, ನವಿಲುಗಳಿಗೆ ಆನಂದದಾಯಕವೂ, ವಿರಾಗಿಗಳ ಹಾಗೂ ಪಥಿಕರ ಆತುರವನ್ನು ಹೆಚ್ಚಿಸುವಂತಹುದೂ ಆದ ಮಳೆಗಾಲವು ಯೌವನದಿಂದ ಕೂಡಿದ ಮದದಾನೆಯಂತೆ ಆರಂಭವಾಯಿತು.

ಆ ಸಮಯದಲ್ಲಿ ಒಂದು ದಿನ ರಾತ್ರಿಯಲ್ಲಿ ನಾನು ಯೌವನಮದದಿಂದ ರಥದಲ್ಲಿ ಕುಳಿತು ಒಬ್ಬನೇ ಬೇಟೆಗೆ ಹೊರಟೆ. ಸರಯೂನದಿಯ ತೀರದ ಪ್ರದೇಶದಲ್ಲಿ ನೀರು ಕುಡಿಯಲು ಬರುವ ಆನೆ ಕಾಡುಕೋಣ ಅಥವಾ ಬೇರಾವುದಾದರೂ ಕಾಡುಮೃಗವನ್ನು ಬೇಟೆಯಾಡುವುದು ನನ್ನ ಉದ್ದೇಶವಾಗಿತ್ತು. ರಾತ್ರಿ ನದಿಯ ತೀರದ ಒಂದು ತಗ್ಗಿನಲ್ಲಿ ಕೂತು ಮೃಗವನ್ನು ನಿರೀಕ್ಷಿಸುತ್ತಿದ್ದೆ. ಶಿವನ ಕಂಠದ ವಿಷಕ್ಕಿಂತ ಕಪ್ಪಾದ ಕಗ್ಗತ್ತಲೆಯು ಕವಿದಿತ್ತು. ಅಂತಹ ನಟ್ಟಿರುಳಿನಲ್ಲಿ ಹೀಗೆ ಕಾತರದಿಂದ ಕುಳಿತಿದ್ದ ನನ್ನ ಕಿವಿಗೆ ಬುಡುಬುಡು ಎಂಬ ಒಂದು ಶಬ್ದವು ಕೇಳಿಸಿತು; ಅದು ಆನೆಯು ಘೀಳಿಡುತ್ತಿರುವ ಶಬ್ದದಂತೆ ನನ್ನಗನ್ನಿಸಿತು. ಸರಿ, ಸರ್‍ರನೆ ಶಬ್ದವೇಧಿ ಬಾಣವನ್ನು ತೆಗೆದು ನೀರು ಕುಡಿಯಲು ಬಂದ ಆನೆಯ ಕಡೆ ಗುರಿಯಿಟ್ಟು ಹೊಡೆದೆ. ನೋಡುವ ಕುತೂಹಲದಿಂದ ಧ್ವನಿ ಬಂದ ದಿಕ್ಕಿನ ಕಡೆ ಹೋದೆ. ಆ ಹೊತ್ತಿಗೆ, ನನ್ನ ಬಾಣವು ಮರ್ಮವನ್ನು ತಾಕಿದ್ದರಿಂದ ಮಹಾವೇದನೆಯಿಂದ ತರಹರಿಸುತ್ತ 'ಅನಘ ಮೇಘಶ್ಯಾಮ, ರಾಮ, ಹಾ ಸತ್ತೆ' ಎಂಬ ಕೂಗು ಕೇಳಿಸಿತು. ಅಲ್ಲದೆ, 'ಅಯ್ಯೋ, ಕಾಡಿನಲ್ಲಿ ಸಿಕ್ಕುವುದನ್ನೇ ಆಹಾರವಾಗಿ ಸೇವಿಸುತ್ತ ಜೀವಿಸುವ ಮನುಷ್ಯರನ್ನು ಕೊಲ್ಲುವುದು ಯಾವ ಶಾಸ್ತ್ರದಲ್ಲಿ ಹೇಳಿದೆ? ಯಾವ ವಿಧಿಯು ನನಗೆ ಈ ದುರವಸ್ಥೆಯನ್ನು ತಂದಿತು? ನಾರುಬಟ್ಟೆಯುಟ್ಟು, ಜಟಾಧಾರಿಯಾಗಿ, ವನ್ಯಾಹಾರ ಸೇವನೆ ಮಾಡುತ್ತ ಬದುಕುತ್ತಿದ್ದ ನಾನು ಯಾರಿಗೇನು ಅಪಕಾರ ಮಾಡಿದೆ? ಅಂತಹ ನಿಷ್ಪಾಪಿಯನ್ನು ಬಾಣ ಬಿಟ್ಟು ಕೊಲ್ಲುವುದೆಂದರೇನು? ಇಂತಹ ದುಷ್ಕಾರ್ಯ ಮಾಡುವ ಇಚ್ಛೆಯಿಂದ ಬಂದಿರುವ ಕ್ರೂರ ಗುರುತಲ್ಪಗಾಮಿನಿಯಂತಹ ವೀರ ಯಾವನೋ! ಮುಪ್ಪಿನಿಂದ ಜೀರ್ಣವಾದ ದೇಹವನ್ನು ಹೊತ್ತು ಕೂತಿದ್ದ, ನೆಲದಿಂದ ಆಸರೆಯಿಲ್ಲದೆ ಮೇಲೇಳಲಾಗದ, ರಾತ್ರಿಯಲ್ಲಿ ಏನನ್ನೂ ಕಾಣಲಾರದ ಅರೆಜೀವಿಯಾದ ವೃದ್ಧ ತಂದೆತಾಯಿಗಳು ನಾನಿಲ್ಲದೆ ಹೇಗೆ ಬದುಕುತ್ತಾರೆ ಎಂಬ ಚಿಂತೆ ನನ್ನನ್ನು ಕೊರೆಯುತ್ತಿದೆಯೇ ಹೊರತು ನನಗಾಗಿ ನಾನು ಗೋಳಿಡುತ್ತಿಲ್ಲ. ಅಯ್ಯೋ ಶಿವಮಹಾದೇವ!' ಎಂದು ಬಾಣದ ಉರುಬೆಗೆ ಗೋಳಾಡುತ್ತಿದ್ದ.

ಹಾಗೆ ದೀನನಾಗಿ ಅಳುತ್ತಿದ್ದ ಮುನಿಕುಮಾರನು ಕೆಳಗೆ ಬಿದ್ದು ಒದ್ದಾಡುವ ಶಬ್ದವು ನನ್ನ ಕಿವಿಗಳಿಗೆ ಬಿದ್ದಾಕ್ಷಣವೇ ನನ್ನ ಕೈಲಿದ್ದ ಬಿಲ್ಲುಬಾಣಗಳು ಕೆಳಗೆ ಬಿದ್ದುವು, ನನ್ನ ಮುಖ ಕಂದಿತು, ಎದೆಯಲ್ಲಿ ಗಾಢ ಅನುತಾಪವುಂಟಾಯಿತು. ಮೆಲ್ಲಗೆ ಹೋದಾಗ ನೆಲದ ಮೇಲೆ ಜಟೆ ಬಿಚ್ಚಿ ಹರಡಿಕೊಂಡಿದ್ದ ತಾಪಸನೊಬ್ಬ ಕಾಣಿಸಿದ. ಅವನ ಎದೆಯಲ್ಲಿ ಬಾಣವು ನಟ್ಟಿದ್ದರಿಂದ ರಕ್ತ ಸುರಿದು ನೋವಿನಿಂದ ಹೊರಳಾಡುತ್ತ ಕೈಗಳನ್ನು ಬಡಿಯುತ್ತಿದ್ದ. ತನ್ನ ತಾಯ್ತಂದೆಯರನ್ನು ನೆನೆಯುತ್ತ ಮಣ್ಣಲ್ಲಿ ಮೈಚೆಲ್ಲಿದ್ದ ಅವನ ಕಣ್ಣಿನಲ್ಲಿ ನೀರು ಹರಿಯುತ್ತಿತ್ತು. ಅವನ ಕೈಯಲ್ಲಿ ಕಳಶವಿದ್ದುದನ್ನು ನೋಡಿ ಏನಾಗಿರಬಹುದೆಂದು ಊಹಿಸಿ ನನ್ನ ಎದೆ ನಡುಗಿತು. ನಿಧಾನವಾಗಿ ಅವನ ಹತ್ತಿರ ಹೋದಾಗ ಕಡುಕಷ್ಟದಿಂದ ಕಣ್ಣುಗಳನ್ನು ತೆರೆದು ಕಲ್ಲುಮರಗಳನ್ನೂ ಸುಟ್ಟು ಬೂದಿಮಾಡುವವನಂತೆ ನೋಡಿದ. 'ಕಾಡಿನಲ್ಲಿ ಕಂದಮೂಲಗಳನ್ನು ತಿಂದು ಬದುಕುವ ಅನಾಥರ ಮೇಲೆ ಬಾಣ ಬಿಡುವುದೆಂದು ನಿನ್ನ ಗುರುವು ಹೇಳಿರದಿದ್ದರೆ, ನನ್ನ ಮೇಲೆ ಬಾಣ ಬಿಟ್ಟು ಹೊಡೆಯಲು ನಾನು ನಿನಗೆ

ಮಾಡಿದ ಅಪರಾಧವಾದರೂ ಏನು? ನನ್ನ ತಾಯಿತಂದೆಯರು ವಯಸ್ಸಾದವರು, ಕಣ್ಣು ಕಾಣಿಸದವರು. ನಾನೊಬ್ಬನೇ ಅವರಿಗೆ ಮಗ, ಮತ್ತೊಬ್ಬ ಮಗನೂ ಇಲ್ಲದ ಅನಾಥರು. ನನ್ನ ಬರವನ್ನೇ ನಿರೀಕ್ಷಿಸುತ್ತ ಹಸಿವು ಬಾಯಾರಿಕೆಗಳಿಂದ ನರಳುವ ಅವರಿಗೆ ಯಾರು ದಿಕ್ಕು? ನಾನು ನೀರು ತೆಗೆದುಕೊಂಡು ಹೋಗುವುದು ತಡವಾದರೆ ಹೊಟ್ಟೆಯಲ್ಲಿನ ಕೋಪದಿಂದ ಶಪಿಸದೆ ಇರರು. ಆದ್ದರಿಂದ ಈಗ ನೀನೇ ಅವರಿರುವ ಜಾಗಕ್ಕೆ ಹೋಗಿ ಈ ವಿಚಾರವನ್ನು ತಿಳಿಸು, ನನ್ನನ್ನು ಈ ಬಾಣಾಘಾತದಿಂದ ಬಿಡುಗಡೆಗೊಳಿಸು. ನೋವು ನನ್ನ ಪ್ರಾಣಗಳನ್ನು ಹೀರುತ್ತಿದೆ, ಶಕ್ತಿಯನ್ನೆಲ್ಲ ಹಿಂಡಿ ಹಾಕುತ್ತಿದೆ. ಬೇಗನೆ ನನ್ನನ್ನು ಉದ್ಧರಿಸು' ಎಂದು ದೈನ್ಯದಿಂದ ಬೇಡಿಕೊಂಡ. ಅವನ ದನಿಯನ್ನು ಕೇಳಿ ನನ್ನ ಜಂಘಾಬಲವೇ ಉಡುಗಿತು; ಉಸಿರು ಬಿಗಿಹಿಡಿದು ನಿಂತಿರುವಾಗ ಅವನೇ ಮತ್ತೆ ಭಯನಿವಾರಣೆಯ ಉಪಾಯವನ್ನು ಹೇಳಿದ: 'ಬಾಣವನ್ನು ಮೈಯಿಂದ ಕಿತ್ತರೆ ನನ್ನ ಪ್ರಾಣ ಹೋಗಬಹುದೆಂಬ ಚಿಂತೆಯೇ? ನಾನು ಬ್ರಾಹ್ಮಣನಲ್ಲ, ಹೀಗಾಗಿ ನಿನಗೆ ಬ್ರಹ್ಮಹತ್ಯಾ ದೋಷವು ಬರುವುದಿಲ್ಲ. ವರತಪೋರಾಶಿಯಾದ ವೈಶ್ಯೋತ್ತಮನಿಂದ ಗರ್ಭ ಧರಿಸಿ ಶೂದ್ರಾಂಗನೆಯಾದ ನನ್ನ ತಾಯಿ ನನ್ನನ್ನು ಹೆತ್ತಳು. ರಾಜನೇ, ಇದನ್ನು ಅರಿತು ನನ್ನ ದೇಹದಿಂದ ಬಾಣವನ್ನು ಕಿತ್ತುಹಾಕು' ಎಂದು ನಿಟ್ಟುಸಿರು ಬಿಡುತ್ತ ಕಷ್ಟದಿಂದ ಈ ಮಾತುಗಳನ್ನು ಹೇಳಲು ನಾನು ಕಡುಭೀತಿಯಿಂದ ಬಾಣವನ್ನು ಕೀಳಲು ಆ ಕ್ಷಣವೇ ಅವನ ಪ್ರಾಣಪಕ್ಷಿ ಹಾರಿಹೋಯಿತು, ನನ್ನ ಮನಸ್ಸಿನಲ್ಲಿ ವಿಷಾದ ಮನೆಮಾಡಿತು.

"ಅಂಗವಿಕಲನಾದ ಆ ಋಷಿಕುಮಾರನ ದೇಹವನ್ನು ಎತ್ತಿ ದಡದಲ್ಲಿರಿಸಿದೆ. ಅನುತಾಪದಿಂದಾಗಿ ಅರೆಕ್ಷಣ ಏನೂ ಮನಸ್ಸಿಗೆ ಹೊಳೆಯದಾಯಿತು. ಏನು ಮಾಡಲೂ ತೋಚದೆ ಬೇಗ ಹೋಗಿ ವೃದ್ಧರನ್ನು ಸಮಾಧಾನಪಡಿಬೇಕೆಂದು ಆ ಋಷಿಕುಮಾರನು ಹೇಳಿದ ದಾರಿಯನ್ನು ಹಿಡಿದು ಹೊರಟೆ, ಆದರೆ ಹೆಜ್ಜೆಗಳನ್ನು ಮುಂದಿಡಲು ಸಾಧ್ಯವಾಗದಷ್ಟು ಹೃದಯ ಭಾರವಾಗಿತ್ತು. ಇದಕ್ಕೆ ಮತ್ತೇನಾದರೂ ಉಪಾಯವಿದೆಯೇ ಎಂದು ಆಲೋಚಿಸಿದೆ. ಹಸಿವು ನೀರಡಿಕೆಗಳಿಂದ ಕೂಡಿದ ಈ ಮುದಿ ದಂಪತಿಗಳು ಮಗನನ್ನು ಎದುರು ನೋಡುತ್ತಿದ್ದಾರೆ. ನಾನು ಹೋಗಿ ಅವರಿಗೆ ಏನೆಂದು ಹೇಳಲಿ ಎಂದು ಚಿಂತಿಸಿದೆ. ಆಗ ನನ್ನ ಮನಸ್ಸಿಗೊಂದು ಮಾರ್ಗ ಹೊಳೆಯಿತು: ಆ ಕುಮಾರನು ತಂದಿದ್ದ ಕಳಶದಲ್ಲಿ ನೀರನ್ನು ತುಂಬಿಕೊಂಡು ಒಂದು ಮರದಡಿಯಲ್ಲಿ ಹಸಿವು ಬಾಯಾರಿಕೆಗಳಿಂದ ಬಳಲಿ ಒರಗಿದ್ದ ವೃದ್ಧರನ್ನು ಕಂಡು ಭಯದಿಂದ ಸ್ವಲ್ಪವೂ ಸಪ್ಪಳವಾಗದ ಹಾಗೆ ಮೆಟ್ಟಂಗಾಲನ್ನಿಡುತ್ತ ಅವರೆಡೆಗೆ ಬಂದರೂ ಹೆಜ್ಜೆ ಸಪ್ಪುಳನ್ನು ಹಿಡಿದು ಮಗನು ಬಂದನೆಂದೇ ತಿಳಿದು ಮಾತಾಡಿಸಿದರು. 'ಮಗನೇ, ನೀರನ್ನು ತರಲೆಂದು ಹೋಗಿ ವಾಪಸು ಬರಲು ಯಾಕಿಷ್ಟು ತಡಮಾಡಿದೆ? ನಿನ್ನ ತಾಯಿಯು ಬಾಯಾರಿಕೆಯ ಜೊತೆಗೆ ಮಗನು ಬರುವುದು ತಡವಾಯಿತೆಂದು ತುಂಬ ಆತಂಕಗೊಂಡಿದ್ದಳು. ಮಾತಿಗೆ ಮಾತು ಬಂದು ಕೊಂಚ ಕೋಪಿಸಿಕೊಂಡರೆ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಪ್ರೀತಿಯನ್ನು ಹೊಂದಿರಬೇಕಲ್ಲದೆ ನೀನು ನೀರಾಟವಲ್ಲಿ ತೊಡಗುತ್ತಾರೆಯೇ? ನಾವು ಗತಿಹೀನರು, ಕಣ್ಣು ಕಾಣದವರು, ಅನಾಥರು ನಮಗೆ

ನೀನೇ ಗತಿ, ನೀನೇ ನಮ್ಮ ಕಣ್ಣು ಎಂದು ನೆಚ್ಚಿಕೊಂಡಿರುವುದಲ್ಲದೆ ನಮ್ಮ ಕೈಬಿಟ್ಟರೆ ನಮ್ಮನ್ನಾರು ಕಾಪಾಡುವವರು? ನಾನಿಷ್ಟು ಮಾತನಾಡುತ್ತಿದ್ದರೂ ತುಂಬ ಜಾಣನಾದ ನೀನು ಉತ್ತರವನ್ನೇ ಕೊಡದೆ ಸುಮ್ಮನಿದ್ದೀಯಲ್ಲ? ನೀನು ಮುನಿಸಿಕೊಂಡರೆ ನಾವು ಬದುಕುವುದು ಹೇಗೆ?' ಎಂದು ಮೂದಲಿಸಲು ನನ್ನ ನಡುಕ ಹೆಚ್ಚಿತು. ಮುಂದುವರೆದು, 'ನಾವೆಷ್ಟೇ ಕೋಪಿಸಿಕೊಂಡರೂ ನಮ್ಮನ್ನು ಕಿನಿಸಿನಿಂದ ಕಾಣದೆ, ನಾವು ಅಹಿತವನ್ನು ಮಾಡಿದರೂ ವಿನಯವನ್ನು ತೋರಿಸುತ್ತ ಒಂದಿಷ್ಟನ್ನೂ ಬಚ್ಚಿಡದೆ ನಿನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಪೊರೆದೆ, ಈಗ ದಟ್ಟಡವಿಯಲ್ಲಿ ನಮ್ಮ ಕೈಬಿಟ್ಟರೆ ಯಾರು ದಿಕ್ಕು? ಮುನಿಸೇಕೆ, ಮಾತಾಡು ಬಾ ಕಂದ' ಎಂದು ಹೇಳಲು ನಾನು ಅತಿ ಭೀತನಾಗಿ ಮೆಲ್ಲನೆ ಮಾತು ಶುರುಮಾಡಿದೆ. ದಿಟ್ಟತನದಿಂದ ಮಾತನಾಡಿದರೆ ಕೋಪಿಸಿಕೊಳ್ಳಬಹುದೆಂಬ ಭಯ ನನ್ನನ್ನು ಮೆಟ್ಟುತ್ತಿರಲು, ಅಳುಕುತ್ತ ಬಳುಕುತ್ತ, 'ಮಹಾತ್ಮರೇ ಕೇಳಿ, ನಾನು ನಿಮ್ಮ ಮಗನಲ್ಲ, ಕ್ಷತ್ರಿಯನಾದ ದಶರಥ. ಕೆಲವು ದುಷ್ಟಮೃಗಗಳು ನದಿಯಲ್ಲಿರಲು ಈ ನಟ್ಟಿರುಳು ಸಂಚರಿಸುತ್ತ ನನ್ನ ಕರ್ಮದಿಂದ ಒಂದು ದೊಡ್ಡ ಪಾತಕಕೃತ್ಯ ನಡೆದುಹೋಯಿತು, ಅದನ್ನು ಏನೆಂದು ತಾನೇ ಹೇಳಲಿ! ಆನೆಗಳು ನೀರು ಕುಡಿಯಲು ಬರುವುದೆಂದು ಭಾವಿಸಿ ತಗ್ಗಿನಲ್ಲಿ ಕೂತು ನೋಡುತ್ತಿರಬೇಕಾದರೆ ಕಳಶದಲ್ಲಿ ನೀರು ತುಂಬುವ ಶಬ್ದವನ್ನು ಆನೆಯೇ ಎಂದು ತಪ್ಪು ತಿಳಿದು ಶಬ್ದವೇಧಿ ಎಂಬ ಬಾಣವನ್ನು ಬಿಡಲು ಅದು ನಾಟಿಕೊಂಡು ಮನುಷ್ಯನ ಆರ್ತರವವೊಂದು ಕೇಳಿಸಿತು. ಗಾಬರಿಯಿಂದ ಓಡಿಹೋಗಿ ನೋಡಲು ಜಟಾಧಾರಿಯಾದ ಮುನಿಕುಮಾರನೊಬ್ಬನು ಬಿದ್ದು ಒದ್ದಾಡುವುದನ್ನು ನೋಡಿದೆ. ನನಗೆ ಆಶ್ಚರ್ಯಭಯಗಳುಂಟಾದುವು. ಆಗ ಮುನಿಕುಮಾರನು, 'ರಾಜನೇ, ಭಯಗೊಳ್ಳಬೇಡ; ನನ್ನ ಪೂರ್ವಕೃತವು ನಿನ್ನ ಅಜ್ಞಾನದ ರೂಪದಲ್ಲಿ ಬಂದಡಸಿತು. ಚುಚ್ಚಿಕೊಂಡಿರುವ ಬಾಣವನ್ನು ಬೇಗ ಕಿತ್ತು, ಮುದುಕರಾದ ತಾಯಿತಂದೆಯರಿಗೆ ಈ ಸುದ್ದಿಯನ್ನು ತಲುಪಿಸು, ನೀರನ್ನು ತೆಗೆದುಕೊಂಡು ಹೋಗಿ ಕೊಡು' ಎಂದು ಹೇಳಿದ. ನಾನು ಆತನ ಮಾತಿನಂತೆಯೇ ಬಾಣವನ್ನು ಕಿತ್ತು, ಅರೆನಿಮಿಷವೂ ತಡಮಾಡದೆ ಬಂದು ತಮ್ಮ ಪಾದಗಳಿಗೆ ಅರುಹಿದ್ದೇನೆ. 'ಸ್ವಾಮಿ, ನಾನು ಮಹಾಪರಾಧ ಮಾಡಿದೆನೆಂಬುದನ್ನು ಮರೆಮಾಚದೆ ಹೇಳಿದ್ದೇನೆ. ಕರುಣೆಯಿಟ್ಟು ನನ್ನನ್ನು ಕಾಪಾಡಿ' ಎಂದ ಮಾತುಗಳನ್ನು ಕೇಳಿ ಮೂರ್ಛೆ ಹೋಗಿ, ಸ್ವಲ್ಪ ವೇಳೆಯ ಬಳಿಕ ಎಚ್ಚರಗೊಂಡು ಅತ್ಯಧಿಕ ಕೋಪದಿಂದ, 'ಕುಲಗೆಡುಕ, ಪಾಪಿಷ್ಠ, ಕ್ರೂರಕರ್ಮಾಚಾರಿ, ನೀನು ಹೇಳಿದ ಈ ಕೆಟ್ಟ ಮಾತಿಗೆ ನಾನೇನೆನ್ನಲಿ? ಬ್ರಹ್ಮೈಕನಿಷ್ಠನಾದವನು ವಾನಪ್ರಸ್ಥದಲ್ಲಿರುವ ಮುನಿಯನ್ನು ಕೊಲ್ಲಬಹುದೇ? ತಿಳಿಯದೆ ಹೀಗೆ ಮಾಡಿಬಿಟ್ಟೆ ಎಂದು ಹಲುಬಿದರೇನು ಬಂತು? ನಮ್ಮ ಮಗನ ಪ್ರಾಣವಂತೂ ಹೋಯಿತಲ್ಲವೇ? ಇದನ್ನೆಲ್ಲ ಹೇಳಿ ಪ್ರಯೋಜನವೇನು, ಬೇಗ ನಮ್ಮನ್ನು ಮಗನಿರುವ ಜಾಗಕ್ಕೆ ಕರೆದುಕೊಂಡು ಹೋಗು' ಎಂದು ನುಡಿದ. ನಾನು ಬೇಗನೇ ಅವರನ್ನು ಒಂದು ಕಾವಡಿಯಲ್ಲಿ ಕೂರಿಸಿಕೊಂಡು ಹೊತ್ತೊಯ್ದು ಮಗನ ಬಳಿ ಇಳಿಸಿದೆ.

"ನೆಲದ ಮೇಲಿದ್ದ ಮಗನ ಶವವನ್ನು ತಡವರಿಸುತ್ತ ವೃದ್ಧ ದಂಪತಿಗಳು ಅದರ

ಮೇಲೆ ಬಿದ್ದು ಹೊರಳಾಡಿದರು, ಗೋಳಾಡಿದರು. 'ಹಾ ಮಗನೇ, ನಮ್ಮನ್ನು ಬಿಟ್ಟು ಎಲ್ಲಿಗೆ ಹೋದೆ? ಬಾ ಮಗನೇ, ಕಣ್ಣು ಬಿಟ್ಟು ನೋಡದೆ ಯಾಕಿದ್ದೀಯೆ, ನಮಗೆ ನಮಸ್ಕರಿಸದೆ ಏಕಿರುವೇ? ಕೋಪದಿಂದ ನಮ್ಮ ಕಡೆ ನೋಡದಿದ್ದರೆ ನಮ್ಮನ್ನಾರು ಕಾಪಾಡುವವರು? ನಿನ್ನ ಅಮ್ಮನು ಸಂತಾಪಗೊಂಡಿದ್ದಾಳೆ, ಎದ್ದು ಮಾತಾಡು, ಮುಖ ನೋಡು, ನಿಷ್ಕರುಣಿಯಾಗಬೇಡ! ಇಷ್ಟು ದಿನ ಒಂದು ಕ್ಷಣವಾದರೂ ಬಿಡದೆ ನಾವು ಅಂದುದನ್ನು ಮಾಡಿ, ನಮ್ಮ ಮನಸ್ಸಿನಂತೆ ನಡೆದು ನಮ್ಮ ಮಾತನ್ನು ಮೀರದೆ ಅತ್ಯಂತ ವಿಧೇಯನೆನಿಸಿ ಕೀರ್ತಿಯನ್ನು ಗಳಿಸಿ, ಈಗ ನಮ್ಮನ್ನು ಬಿಟ್ಟು ಹೋಗುವುದು ತಕ್ಕುದೇ? ರೆಕ್ಕೆಗಳನ್ನು ಕತ್ತರಿಸಿದ ಹಕ್ಕಿಗಳಂತೆ ನಾವು ಮರುಗುತ್ತಿದ್ದೇವೆ, ಕಂದ, ಮುಳಿಸಿಂದ ಮಾತನಾಡದಿದ್ದರೂ ಪರವಾಗಿಲ್ಲ, ಕರುಣೆಯಿಂದ ಬಂದು ನಮ್ಮನ್ನು ಅಪ್ಪಿಕೋ' ಎಂದು ಆ ದಂಪತಿಗಳು ರೋದಿಸಲು ನೆಲವೇ ಅದುರಿತು. ತಾಪಸನು ಹೀಗೆ ಪ್ರಲಾಪಿಸುತ್ತಿರಲು ಎದುರು ನಿಂತು ಯಾರು ತಾನೇ ಮಾತನಾಡಲಾದೀತು? 'ಎಲವೋ ಕೊಲೆಗಡುಕ, ಇಂಥ ನಿಷ್ಪಾಪಿಯಾದ ಧರ್ಮರೂಪನನ್ನು ಮತ್ತೆ ಹೇಗೆ ನೋಡಲಿ? ಈ ಪರಿಯ ಖೇದವನ್ನು ತಂದಿಟ್ಟ ನಿಷ್ಕರುಣಿಯೇ' ಎಂದು ನನ್ನನ್ನು ಬೈದು, ಮಗನನ್ನು ನೋಡುತ್ತ, 'ಉತ್ಸಾಹದಿಂದ ರಣರಂಗಕ್ಕೆ ಹೋಗಿ ಹೋರಾಡಿ ಮರಣವನ್ನೈದುವವರು ಹೊಂದುವ ಸದ್ಗತಿಯು ನಿನಗೆ ದೊರೆಯಲಿ! ಮನಸ್ಸನ್ನು ಸ್ತಿಮಿತದಲ್ಲಿರಿಸಿಕೊಂಡು ಅನುದಿನವೂ ತಲೆಯಲ್ಲಿರುವ ಸಹಸ್ರಾರವನ್ನು ಕಾಣುವ ಪರಿವ್ರಾಜಕರಿಗೆ ಯಾವ ಘನಗತಿಯುಂಟಾಗುವುದೋ ಅಂತಹ ಸುಖಸ್ಥಾನವು ನಿನಗೆ ಒದಗಲಿ! ಸಗರ ಶೈಬ್ಯ ದಿಲೀಪ ದುಂದುಮಾರ ಮಾಂಧಾತ ನಳ ನಹುಷ ಮುಂತಾದವರಿಗೆ ಲಭಿಸಿದ ಸದ್ಗತಿಯು ನಿನಗೆ ಉಂಟಾಗಲಿ! ನಿಗಮ ಪಾರಾಯಣರಾದ ಶ್ರೌತರಿಗೆ, ಅತಿಶಯವಾದ ಕರ್ಮಿಷ್ಟರಿಗೆ, ಭೂಹಿರಣ್ಯ ಮುಂತಾದ ಬಗೆಬಗೆಯ ದಾನಿಗಳಿಗೆ ಯಾವ ಗತಿಯು ಉಂಟಾಗುತ್ತದೆಯೋ ಅಂತಹ ಗತಿಯು ನಿನಗೆ ಉಂಟಾಗಲಿ! ಶ್ರೇಷ್ಠವಾದ ಮಂತ್ರಗಳನ್ನು ನೇಮದಿಂದ ಪ್ರತಿನಿತ್ಯವೂ ಎಡೆಬಿಡದೆ ಪರಿಪಾಲನೆ ಮಾಡುವ ಸತ್ಪುರುಷರಿಗೆ ಸಿಕ್ಕುವ ಪರಮ ಸದ್ಗತಿಯು ನಿನಗೆ ದೊರೆಯುವುದರಲ್ಲಿ ಸಂಶಯವಿಲ್ಲ! ನಮ್ಮ ಕುಲದಲ್ಲಿ ಹುಟ್ಟಿದವರಾರಿಗೂ ದುರ್ಗತಿಯುಂಟಾಗುವುದಿಲ್ಲ, ಆದ್ದರಿಂದ ನೀನು ದೇವೇಂದ್ರನೆಡೆಗೆ ಹೋಗುತ್ತೀಯೆ' ಎಂದು ಆ ತಾಪಸಿಯು ಪರಿಪರಿಯಾಗಿ ಹಂಬಲಿಸಿ ರೋದಿಸುತ್ತ ಮಗನಿಗೆ ತರ್ಪಣವನ್ನು ನೀಡಿದ. ಆ ಹೊತ್ತಿಗೆ ಆಕಾಶದಲ್ಲಿ ಒಂದು ಅದ್ಭುತವು ಸಂಭವಿಸಿತು, ಅದನ್ನು ಏನೆಂದು ವರ್ಣಿಸಲಿ!

"ತಂದೆತಾಯಿಗಳ ಸೇವೆ ಹಾಗೂ ಸಾಧುಜನರ ಸಂಗದಲ್ಲಿ ಮಾಡಿದ ತಪಸ್ಸಿನಿಂದ ಗಳಿಸಿದ ಪುಣ್ಯಫಲದ ಕಾರಣದಿಂದ ಹಾರವಸ್ತ್ರಾಭರಣಗಳನ್ನಿಟ್ಟ ಒಂದು ದಿವ್ಯರಥವು ಇಳಿದು ಬಂದಿತು; ಅದರಲ್ಲಿ ದೇವೇಂದ್ರನೊಡನೆ ಆ ಕುಮಾರನಿದ್ದ. ತನ್ನ ತಂದೆತಾಯಿಗಳನ್ನು ನೋಡಿ, 'ನಿಮ್ಮ ಸೇವೆಯಿಂದಾಗಿ ನನಗೆ ಸುರಲೋಕವು ಬಹು ಬೇಗ ಪ್ರಾಪ್ತವಾಗಿದೆ. ನೀವೂ ಬೇಗ ಆ ಎಡೆಗೆ ಬನ್ನಿರಿ' ಎಂದು ಹೇಳಲು ಆ ಹೊಂದೇರು ಮರಳಿ ಆಕಾಶಕ್ಕೆ ಹಾರಿತು. ಅದನ್ನು ನೋಡಿದ ನನಗೆ ಆಶ್ಚರ್ಯವೂ ಭಯವೂ ಉಂಟಾಗಿ ಯಾವ ಮಾತನ್ನೂ ಆಡಲಾರದೆ ನಿಶ್ಚಲನಾಗಿ ಮುನಿದಂಪತಿಯನ್ನೂ ಮರೆತು ನಿಂತಿದ್ದೆ. ಅಷ್ಟರಲ್ಲಿ

ಆ ತಾಪಸೋತ್ತಮನು ನನ್ನನ್ನು ಕರೆದು ಕನಲಿಕೆಯಿಂದ, 'ನಮಗೆ ಸಾವಿನ ಭಯವಿಲ್ಲ, ನಮ್ಮನ್ನೂ ಕೊಂದುಬಿಡು. ಅಸಮಾನನಾದ ಮಗನನ್ನು ನಿನ್ನ ಕೈಯಾರೆ ಕೊಂದು ನಮಗೆ ಮಗನಿಲ್ಲದಂತೆ ಮಾಡಿದೆ, ಅದರಿಂದ ನಿನಗೆ ಅಂಥದೇ ಪರಿಣಾಮವಿರುವ ಒಂದು ಶಾಪವನ್ನು ನೀಡುತ್ತೇನೆ. ನಾವು ಮಗನನ್ನು ಕಾಣಲಾರದ ಸ್ಥಿತಿಯಲ್ಲಿ ಸಂಕಟಪಡುತ್ತ ಹೇಗೆ ಚಿತೆಯನ್ನೇರಬೇಕೋ ಹಾಗೆಯೇ ನೀನೂ ನಿನ್ನ ಮಕ್ಕಳನ್ನು ನೆನೆಸಿಕೊಳ್ಳುತ್ತ ಪ್ರಾಣಬಿಡುವಂತಾಗಲಿ! ಇದು ನಿಶ್ಚಿತ' ಎಂದು ಆ ಹೇಳಿ ತನ್ನ ಹೆಂಡತಿಯೊಡನೆ ಚಿತೆಯನ್ನೇರಿ ತನ್ನ ಐಹಿಕ ದೇಹವನ್ನು ನೀಗಿಕೊಂಡು ಒಂದೇ ಕ್ಷಣದಲ್ಲಿ ಸ್ವರ್ಗಸ್ಥನಾದ.

"ಸೊಕ್ಕು, ಜವ್ವನದ ಉಬ್ಬುಗಳಿಂದಾಗಿ ನಾನು ಮಾಡಿದ ದುಷ್ಕರ್ಮದಿಂದಾಗಿ ಆ ಮುನಿಯಿತ್ತ ಶಾಪವು ಸತ್ಯವಾಗದೇ ಇದ್ದೀತೇ? ಕೈಗೆ ಸಿಕ್ಕಿದ ರತ್ನವನ್ನು ಬೇಕೆಂದೇ ಬಿಸಾಡಿ ಆನಂತರ ಚಿಂತಿಸುವುದು ಆಳಲುವುದು ಬಳಲುವುದು ವಿಧಿಕೃತವೇ ಸರಿ. ಇದನ್ನು ಮೀರಲು ಯಾರಿಂದಲೂ ಅಸಾಧ್ಯ. ಮುನಿಯ ಶಾಪವು ಈಗ ನನಗೆ ತಟ್ಟುತ್ತಿರುವುದು ಕಾಣಿಸುತ್ತಿದೆ. ಶ್ರೀ ರಾಮಚಂದ್ರನ ಫುಲ್ಲಾರವಿಂದ ಮುಖವನ್ನು ನಾನಿನ್ನು ನೋಡಲಾರೆ, ನನ್ನ ದೇಹ ಇನ್ನು ಇರಲಾರದು. ಇಷ್ಟು ಹೊತ್ತು ನಾನು ಭ್ರಮೆಗೊಂಡ ರೀತಿಯಲ್ಲಿ ಶೋಕಿಸುತ್ತ ತೊಳಲುತ್ತ ಮಾತಿನಲ್ಲಿ ತೋರಿಸಿಕೊಳ್ಳುತ್ತಿದ್ದೆ. ನನಗೀಗ ಮಾತನಾಡಲೂ ಶಕ್ತಿಯಿಲ್ಲದಾಗಿದೆ. ಕೌಸಲ್ಯೆಯೇ, ಬೇಗ ಬಂದು ನಿನ್ನ ಕೈಗಳಿಂದ ನನ್ನ ಮೈಯನ್ನು ಮುಟ್ಟು, ಸ್ವಲ್ಪ ಹೊತ್ತಿನ ಬಳಿಕ ನಿನಗೆ ಅದೂ ದೊರೆಯದೆ ಹೋಗಿಬಿಡುತ್ತದೆ" ಎನ್ನುತ್ತ ಬಂಧುರಸ್ನೇಹದಿಂದ ಹೇಳಿ ದಶರಥನು, ರಾಮನ ಅಂಗೋಪಾಂಗಗಳನ್ನು ಒಂದೊಂದಾಗಿ ನೆನೆಸಿಕೊಳ್ಳುತ್ತ, ಅವನನ್ನು ಹೊಗಳುತ್ತ ಇಂದಿರಾಪತಿಯಾದ **ರಾಮಪುರದರಸ**ನನ್ನು ಮಗನೆಂದು ಭಾವಿಸಿ ಚಿಂತೆಗೀಡಾಗಿ ಅವನಲ್ಲಿಯೇ ತನ್ನ ಮನಸ್ಸನ್ನು ಎರಕಹೊಯ್ದ ರೀತಿಯಲ್ಲಿ ಹೊಂದಿಸಿದ ಆತನೆಷ್ಟು ಧನ್ಯನೋ! ಗಿರಿಜೆಯೇ, ಆ ಪುಣ್ಯವು ಮತ್ತಾರಿಗೂ ಲಭಿಸದು.

೨೪. ವಸಿಷ್ಠರ ಮಾತಿನಂತೆ ಅಯೋಧ್ಯೆಗೆ ಬಂದ ಭರತನು ತಾಯಂದಿರಿಗೆ ವಂದಿಸಿದುದು

ಗಿರಿಜೆ ಕೇಳು, ದಶರಥನು ಈ ರೀತಿಯಲ್ಲಿ ಕೌಸಲ್ಯೆ-ಸುಮಿತ್ರೆಯರಿಗೆ ಹೇಳಿದ ತನ್ನ ದುಷ್ಕೃತದ ವೃತಾಂತವನ್ನು ನೆನೆಸಿಕೊಂಡು ಮೈಮರೆತು ಮಲಗಿರಲು ಅರ್ಧರಾತ್ರಿಯಲ್ಲಿ ಈ ಸತಿಯರು ಹಂಬಲಿಸುತ್ತ ಮಹಾರಾಜನನ್ನು ನೋಡಲು ಕುಳಿತಿರಲು ಆ ರಾತ್ರಿ ಕಳೆಯಿತು. ಮಾರನೆಯ ಬೆಳಗಿನ ಜಾವ ವಂದಿಗಳು ಬಂದು ತಂತ್ರೀಸ್ವನದೊಡನೆ ಇಂಪಾದ ರೀತಿಯಲ್ಲಿ ಮಂಗಳಗೀತಗಳನ್ನು ಹಾಡಲು ತೊಡಗಿದರು. ಕೆಲವರು ಹಾಡುತ್ತ, ಕೆಲವರು ಮಹಾರಾಜನ ಕೀರ್ತಿಯನ್ನು ಸ್ತುತಿಸುತ್ತಿರಲು, ವೀಣೆಗಳನ್ನು ನಲವಿನಿಂದ ನುಡಿಸುತ್ತ ಎಂದಿನಂತೆ ಮಹಾರಾಜನನ್ನು ಎಚ್ಚರಗೊಳಿಸುತ್ತಿದ್ದರು. ಮಾಧುರ್ಯದಿಂದ ಕೂಡಿದ ಗಾಯನವನ್ನು ಕೇಳುತ್ತ ಅಸಂಖ್ಯ ಕೋಗಿಲೆಗಳು ಗಿಳಿಗಳು ಹಾಗೂ ಕಳಹಂಸಗಳು ಕಲಕಲರವ ಮಾಡುತ್ತಿರಲು ಸೂರ್ಯನು ಮೂಡುಬೆಟ್ಟವನ್ನೇರಿದ. ಚೆಲುವ ನಾರಿಯರು

ಹರಿಚಂದನದ ಪರಿಮಳವನ್ನು ಬೆರೆಸಿದ ನೀರನ್ನು ಚಿನ್ನದ ಕೊಡಗಳಲ್ಲಿ ತುಂಬಿಕೊಂಡು ಬಂದು, ನಾನಾ ಬಗೆಯ ಮಂಗಳಗೀತಗಳನ್ನು ಹಾಡುತ್ತ ರಾಜಾಧಿರಾಜನ ಮೀಹಕ್ಕಾಗಿ ತಂದಿಟ್ಟರು. ಆದರೆ ಎಷ್ಟು ಹೊತ್ತಾದರೂ ರಾಜನು ಎಚ್ಚರಗೊಳ್ಳಲಿಲ್ಲ. ಆ ಹೊತ್ತಿಗೆ ಕೌಸಲ್ಯೆ ಎಚ್ಚರಗೊಂಡು ಮೆಲ್ಲನೆ ಹೆಜ್ಜೆಯಿಡುತ್ತ ಬಂದಳು. ಬಂದವಳೇ ಗಂಡನನ್ನು ಎಚ್ಚರಗೊಳಿಸಲೆಂದು ಬರಲು, ಅಲ್ಲಿದ್ದ ಮಿಕ್ಕ ಮಂಗಳಪಾಠಕ ನಾರಿಯರು ಅಲ್ಲಿಂದ ಸರಿದು ಹೋದರು. ಮಹಾರಾಣಿಯು ರಾಜನು ಮಲಗಿದ್ದ ಹಾಸಿಗೆಯ ಪಕ್ಕದಲ್ಲಿ ನಿಂತು ಸದ್ದುಮಾಡಿದಳು, ಆದರೆ ಆಗಲೂ ರಾಜನಿಗೆ ಎಚ್ಚರವಾಗಲಿಲ್ಲ. ಮತ್ತೂ ಸನಿಹಕ್ಕೆ ಬಂದು ತನ್ನ ಕೈಗಳಿಂದ ಮಹಾರಾಜನ ಪಾದಕಮಲಗಳನ್ನು ಮೃದುವಾಗಿ ಅಲುಗಾಡಿಸಲು ಹಿಡಿದುಕೊಂಡಳು, ಆದರೆ ಆಗಲೂ ರಾಜನಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಪಾದಗಳನ್ನು ನೇವರಿಸಿ ಕೈಗಳನ್ನು ಒತ್ತಿ ಮುಖದ ಬಳಿ ಬಂದು ಪಟ್ಟಮಹಿಷಿಯು ನಿಟ್ಟಿಸಲು ಮುಖದಿಂದ ಹೊಮ್ಮುತ್ತಿದ್ದ ಕೆಟ್ಟ ವಾಸನೆ ಮೂಗಿಗೆ ಬಡಿಯಲು ಆಕೆಯು ಭಯದಿಂದ ತತ್ತರಿಸಿದಳು. ಅಲ್ಲಿದ್ದ ಮಿಕ್ಕ ನಾರಿಯರಿಗೂ ಸಂಭವಿಸಿರಬಹುದಾದ ಅನರ್ಥಕರ ಪರಿಸ್ಥಿತಿಯ ಅರಿವಾಯಿತು. ತಕ್ಷಣವೇ ಅವರೆಲ್ಲ ಬಂದು ರಾಜನ ಸುತ್ತಲೂ ನಿಂತು ಆತನ ಅಂಗಶೈಥಿಲ್ಯವನ್ನು ಗಮನಿಸಿದರು.

ಕಂದಿದ ಕಂಗಳು, ಶೂನ್ಯವಾದ ದಿಟ್ಟಿ, ನಂದಿರುವ ದೇಹಕಾಂತಿಗಳನ್ನು ಕಂಡು ಕೌಸಲ್ಯೆಯು 'ಹಾ ಹಾ, ನಾಥ' ಎಂದು ನೆಲದ ಮೇಲೆ ದೊಪ್ಪನೆ ಕುಸಿದು ಬಿದ್ದಳು. ನಿಂತಿದ್ದ ಹೆಂಗಸರೂ 'ಹೋ' ಎಂದು ಶೋಕದಿಂದ ಆಳಲು ತೊಡಗಿದರು; ಅವರೆಲ್ಲರ ಆರ್ತನಾದ ಅರಮನೆಯಿಂದ ಹೊರಟು ಅರೆನಿಮಿಷದಲ್ಲಿಯೇ ಎಂಟು ದಿಕ್ಕುಗಳಲ್ಲೂ ವ್ಯಾಪಿಸಿ ಪ್ರತಿಧ್ವನಿಸಿತು. ದಶರಥನ ಹೆಂಡತಿಯರೂ, ಅಂತಃಪುರದ ನಾರಿಯರೂ ನಾನಾ ಬಗೆಯಲ್ಲಿ ಪ್ರಲಾಪಗೈಯುತ್ತಿರಲು, ಅವರಂತೆಯೇ ಕೌಸಲ್ಯೆಯೂ ಕಂಬನಿಗಳನ್ನು ಸುರಿಸುತ್ತ ಕೈಕೇಯಿಯನ್ನು ನೋಡಿ, "ಕ್ರೂರೆ, ಗೂನಿಯ ಮಾತಿನಿಂದ ಗಂಡನನ್ನೇ ನೀಗಿ ಗಳಿಸಿದ ಸಂಪತ್ತನ್ನು ಅನುಭವಿಸಲು ಇಚ್ಛಿಸಿದೆಯಲ್ಲ, ಈ ರಾಜಕುಲವನ್ನೂ ಮಹಾ ಕಾಳರಾತ್ರಿಯ ಹಾಗೆ ನೀರಿನಲ್ಲಿ ಕದಡಿಬಿಟ್ಟೆಯಲ್ಲ! ಮಗನು ಕಾಡಿಗೆ ಹೋಗಲು ಅವನನ್ನೇ ನೆನೆನೆನೆದು ದೊರೆಯು ಸಂಕಟದಿಂದ ತೀರಿಹೋದ ವಾರ್ತೆಯನ್ನು ಕೇಳಿದರೆ ಕಾಡಿನಲ್ಲಿರುವ ಮಕ್ಕಳು ಪ್ರಾಣಬಿಡುತ್ತಾರೆ, ಅದನ್ನು ನೋಡಿದ ಬಂಧುಬಾಂಧವರೂ ಸಾಯುತ್ತಾರೆ, ರಾಜಕುಲವೆಲ್ಲ ಸಂಹಾರಗೊಳ್ಳುತ್ತದೆ. ಪಾಪಿ, ನಿನ್ನೊಬ್ಬಳ ದುರಾಸೆಯು ಈ ಪರಿಯಲ್ಲಿ ಬಾಂಧವವಂಶವೇ ನಾಶವಾಗುತ್ತದಲ್ಲ, ಅಕಟಕಟ! ಕುಲವನ್ನೇ ನುಂಗಿದ ಕಾಳರಕ್ಕಸಿಯನ್ನು ನೋಡಿಕೊಂಡು ಅವಳ ಪಕ್ಕದಲ್ಲಿ ನಾನು ಬದುಕಲಾರೆ; ಮಹಾ ಪರಾಕ್ರಮಿಯಾದ ರಾಜನನ್ನು ತಬ್ಬಿಕೊಂಡು ಅವನೊಡನೆ ಚಿತೆಯನ್ನೇರುತ್ತೇನೆ" ಎಂದು ಪ್ರಲಾಪಿಸಿದಳು. ಅವಳಂತೆಯೇ ಇತರ ಸ್ತ್ರೀಯರೂ ಗೋಳಿಡುತ್ತಿದ್ದ ಪರಿಯನ್ನು ಏನೆಂದು ಹೇಳುವುದು? ಜಗತ್ತಿನಲ್ಲಿಯ ಎಲ್ಲ ಜೀವಿಗಳನ್ನೂ ಸುಖದುಃಖಗಳು ಬೆನ್ನುಹತ್ತಿರುವುದಲ್ಲವೇ?

ಕಡುದುಃಖವು ಊರಲ್ಲೆಲ್ಲ ಹರಡಿ, ಎತ್ತ ನೋಡಿದರೂ ಜನರು ಪರಿತಪಸುತ್ತಿರಲು, ಅಷ್ಟರಲ್ಲಿ ಜಾಬಾಲಿ ಕಾಶ್ಯಪ ಕಣ್ವ ಪೌದ್ಗಲ್ಯ ವಸಿಷ್ಠ ಮುಂತಾದ ಮುನಿವರ್ಯರು

ಬಂದು ಆ ನೃಪೋತ್ತಮನ ಅವಸ್ಥೆಯನ್ನು ನೋಡಿ, ಯಾರೂ ಊಹಿಸದಿದ್ದ ಸಂದರ್ಭವೊದಗಿದೆಯಲ್ಲ, ಇದನ್ನು ಹೇಗೆ ನಿಭಾಯಿಸುವುದು ಎಂದು ತಮ್ಮತಮ್ಮಲ್ಲಿ ಆಲೋಚಿಸಿದರು. ಕೊನೆಯಲ್ಲಿ ಬ್ರಹ್ಮಪುತ್ರನಾದ ವಸಿಷ್ಠನು ಅನಾಯಕತ್ವದ ನಾಡು ಏನೆಲ್ಲ ಬವಣೆಗಳನ್ನು ಅನುಭವಿಸಬೇಕಾಗುವುದೆಂಬುದನ್ನು ವಿವರವಾಗಿ ನಿರೂಪಿಸಿದ: "ಅರಸನಾದವನು ಇಕ್ಷ್ವಾಕುಕುಲದವನು, ಈ ನೆಲವನ್ನು ದಕ್ಷತೆಯಿದ ಪರಿಪಾಲಿಸಿದವನು, ಹಿಂದಿನವರ ಹಾದಿಯನ್ನನುಸರಿಸಿ ಧರ್ಮಸ್ಥಿತಿಯನ್ನು ಅನುಸರಿಸಿ ಎಲ್ಲ ಜನಸಮೂಹದ ಒಲವನ್ನೂ ಗಳಿಸಿದ ಮೇಧಾವಿಯಾದ ಪಂಕ್ತಿರಥ. ಆತನು ಹೋದ ಬಳಿಕ ಅವನಂತೆಯೇ ಆಳಲು ಶಕ್ತನಾದವನು ವರಧನುರ್ಧರ ಶ್ರೀರಾಮ, ಆದರೆ ಅವನು ಲಕ್ಷ್ಮಣನ ಜೊತೆ ಚಿತ್ರಕೂಟದಲ್ಲಿದ್ದಾನೆ. ಭರತಶತ್ರುಘ್ನರೂ ದೂರದ ಕೇಕಯ ರಾಜ್ಯದಲ್ಲಿದ್ದಾರೆ. ಅರಾಜಕವಾದ ರಾಜ್ಯದಲ್ಲಿ ಸಿಡಿಲು ಆಲಿಕಲ್ಲುಗಳಿಂದ ಕೂಡಿದ ಘೋರತರವಾದ ಮಳೆಯು ಸುರಿಯುತ್ತದೆ. ಸ್ವಾಮಿಭೃತ್ಯನ್ಯಾಯ, ಗುರುಶಿಷ್ಯ, ಮಗತಂದೆಯರ ನಡುವಣ ಮರ್ಯಾದೆಗಳು ಹಾಗೂ ಧರ್ಮಾಧರ್ಮಸ್ಥಿತಿಗಳು ನಡೆಯಲಾರವು. ನಿರರ್ಥಕ ಕಲಹ ಸ್ವಾತಂತ್ರ್ಯಗಳು ಹೆಚ್ಚಾಗಿ ಹೆಂಡತಿ ಗಂಡನನ್ನೇ ನುಡಿಸದ ಸ್ಥಿತಿಯು ಬಂದೊದಗುತ್ತದೆ. ಒಡೆಯನಿಲ್ಲದ ರಾಜ್ಯದಲ್ಲಿ ಬಲಿಷ್ಠರು ದುರ್ಬಲರನ್ನು ಬಾಧೆಗೊಳಪಡಿಸುವ ದುಃಸ್ಥಿತಿಯೊದಗುತ್ತದೆ, ರಮ್ಯವಾದ ಉದ್ಯಾನಗಳಿರುವ ಈ ದೇಶದಲ್ಲಿ ಚೆಲುವ ನರನಾರಿಯರು ಓಡಾಡಲು ಸಾಧ್ಯವಾಗುವುದಿಲ್ಲ, ಬುದ್ಧಿವಂತರಿಂದ ಕೂಡಿದ ಸಭೆಗಳಲ್ಲಿ ಚರ್ಚೆಗಳು ನಡೆಯುವುದು ಶಕ್ಯವಾಗದು, ಹಲವು ಬಗೆಯ ಯಜ್ಞಗಳಲ್ಲಿ ಬ್ರಾಹ್ಮಣೋತ್ತಮರಿಗೆ ಪ್ರೀತಿಯಿಂದ ದಕ್ಷಿಣೆ ದೊರೆಯಲಾರದು. ಅರಸಿಲ್ಲದ ನಾಡಿನಲ್ಲಿ ನೀತಿಜ್ಞರು, ಪುರಾಣನಿಪುಣರು, ತತ್ವಜ್ಞರು ನೀಡುವ ಉಪನ್ಯಾಸಗಳನ್ನು ಪುರಾಣಪ್ರವಚನಗಳನ್ನು ಕೇಳಲು ಜನರು ಉದ್ಯಾನ-ವಾತಾಯನಗಳಿಗೆ ಬರುವುದಿಲ್ಲ, ಸರ್ವಭೂಷಣಭೂಷಿತರಾದ ಸ್ತ್ರೀಯರು ಬೀದಿಗಳಲ್ಲಿ ಓಡಾಡಲು ಹಿಂಜರಿಯುವರು, ಕಾಮುಕರ ಉಪಟಳ ಹೆಚ್ಚಾಗುವುದು, ಎಲ್ಲರೂ ಧ್ಯಾನವನ್ನು ಬಿಡುತ್ತಾರೆ. ರಾಜನಿಲ್ಲದ ರಾಷ್ಟ್ರದಲ್ಲಿ ತಮ್ಮ ವ್ಯಾಪಾರ ವಹಿವಾಟುಗಳನ್ನು ನಡೆಸಲು ವರ್ತಕರು ಬೇರೆ ದೇಶಗಳಿಗೆ ಹೋಗಲು ಹೆದರುತ್ತಾರೆ. ಹಣವಂತರು ಭಯಗೊಳ್ಳುತ್ತಾರೆ, ದಂತಗಳುಳ್ಳ ಎತ್ತರವಾದ ಆನೆಗಳು ಬೀದಿಗಳಲ್ಲಿ ಓಡಾಡವು, ನಟಗಾಯಕರೇ ಮುಂತಾದವರು ಉತ್ಸಾಹದಿಂದ ಸಂಚರಿಸಲಾರರು. ಅರಾಜಕವಾದ ದೇಶದಲ್ಲಿ ಜಾತಿವರ್ಣಾಶ್ರಮಗಳ ಆಚಾರಗಳೂ ಧಾರ್ಮಿಕವಿಧಿಗಳೂ ಸಾಂಗವಾಗಿ ನೆರವೇರಲಾರವು, ದೇವತಾರಾಧನೆಯ ಮಾತೇ ಇಲ್ಲದಂತಾಗುವುದು, ಧರ್ಮವನ್ನೆಲ್ಲ ತೊರೆದು ಅತಿ ಘೋರ ರೀತಿಯಲ್ಲಿ ಭೀತಿ ಆವರಿಸುತ್ತದೆ, ಅತ್ಯಂತ ವಿಕ್ರಮಶಾಲಿಗಳು ತಮ್ಮತಮ್ಮಲ್ಲಿಯೇ ಹಗೆಯನ್ನು ಸಾಧಿಸುತ್ತಾರೆ, ವಿನೀತರಾದ ಪ್ರಜೆಗಳಲ್ಲಿ ಶತ್ರುಭಯ ನೆಲೆಗೊಳ್ಳುವುದು. ನೀರಿಲ್ಲದ ನದಿ, ಹುಲ್ಲೂ ಬೆಳೆಯದ ವನ, ನೋಡಿಕೊಳ್ಳುವವರಿಲ್ಲದ ಗೋವೃಂದ, ತಮ್ಮ ಮನಸ್ಸಿನ ಇಚ್ಛೆಯನ್ನರಿತು ಕಾಪಾಡುವ ಗಂಡಂದಿರಿಲ್ಲದ ನಾರಿಯರು, ಜಗಳಗಳಿಂದ ಕೂಡಿ ಮಾತ್ಸ್ಯನ್ಯಾಯವುಂಟಾಗಿ ಮತ್ತೇನೂ ಉಳಯದಂತಾಗಿಬಿಡುತ್ತದೆ. ಹೀಗಾಗಿ ರಾಷ್ಟ್ರವು ಸುಖವಾಗಿರಬೇಕಾದರೆ ಅಧಿಕಪ್ರತಾಪಿಯಾದವನು ಅರಸಾಗಬೇಕು; ಬಲಿಷ್ಠ ದೇಹ-ನೋಟಗಳನ್ನು ಹೊಂದಿದವನು ನೆಲದೊಡೆಯನು ಧರ್ಮಪ್ರವರನಾಗಿ

ರಾಷ್ಟ್ರವನ್ನು ಆಳಲು, ಅಂತಹವನು ಶತ್ರುಗಳನ್ನು ತರಿದು, ಲೋಕವನ್ನು ಪರಿಪಾಲನೆ ಮಾಡಲು, ದೈವಭೀರುವಾಗಿ ತಂದೆತಾಯಿಯರ ಮನಸ್ಸನ್ನರಿತು ಪೋಷಿಸುವ ಬಲಿಷ್ಠನೊಬ್ಬನು ನಾಯಕನಾಗಬೇಕು; ಹೀಗಾಗದಿದ್ದರೆ ಅನಾಯಕತ್ವವುಂಟಾಗಿ ಆಗಬಾರದ್ದು ಆಗುತ್ತದೆ."

ಋಷಿವರ್ಯನ ಮಾತನ್ನು ಕೇಳಿ ಅಲ್ಲಿದ್ದ ವಿಪ್ರವರ್ಗವೆಲ್ಲ ಹರುಷಗೊಂಡು ಭರತನನ್ನು ಅಯೋಧ್ಯೆಗೆ ಬರಿಸಬೇಕೆಂದು ಸಲಹೆಯಿತ್ತರು. ಆಗ ವಸಿಷ್ಠ ಮಹರ್ಷಿಯು ಮಂತ್ರಿಗಳನ್ನು ಕರೆದು ಮೂರು ದಿನಗಳಲ್ಲಿ ಭರತಶತ್ರುಘ್ನರನ್ನು ಕರೆತರಲು ಏರ್ಪಾಟು ಮಾಡುವಂತೆ ನೇಮಿಸಿದ. ಅವರು ತಕ್ಷಣವೇ ಸಂದೇಶವಾಹಕರನ್ನು ಕರೆದು ಈ ಕಾರ್ಯವನ್ನು ವಹಿಸಿದರು. ಹೀಗೆ ನೇಮಕಗೊಂಡ ಚರರನ್ನು ನೋಡಿ ವಸಿಷ್ಠನು, "ಆದಷ್ಟು ಬೇಗ ನೀವು ಹೋಗಿ, ಕಟ್ಟಿದ ಈ ಬಟ್ಟೆಯ ಗಂಟನ್ನು ಅವರಿಗೆ ಕೊಟ್ಟು. ಕೇಕಯರಾಜ ಹಾಗೂ ಅವರ ಮಕ್ಕಳ ಕುಶಲವನ್ನು ವಿಚಾರಿಸಿ, ವಸಿಷ್ಠರು ಅತ್ಯಂತ ತ್ವರಿತವಾಗಿ ನಿಮ್ಮನ್ನು ಅಯೋಧ್ಯೆಗೆ ಬರಹೇಳಿದರೆಂದು ಭರತನಿಗೆ ನಯವಾಗಿ ತಿಳಿಸಿರಿ" ಎಂದು ಸೂಚಿಸಿದರು. ಅದರಂತೆಯೇ ಆ ಸಂದೇಶವಾಹಕರು ಬಹು ವೇಗವಾಗಿ ಓಡಬಲ್ಲ ಕುದುರೆಗಳನ್ನೇರಿ ಹಸ್ತಿನಾವತಿಯ ಬಳಿಯ ಗಂಗಾನದಿಯನ್ನು ದಾಟಿ ಪಶ್ಚಿಮದಿಕ್ಕಿನಲ್ಲಿನ ಕುರುಜಾಂಗಣವನ್ನು ಹಾದು, ಪಾಂಚಾಲದೇಶವನ್ನು ಸೇರಿ, ಅಲ್ಲಿನ ನದನದಿಗಳನ್ನು ನೋಡುತ್ತ ಅತ್ಯಂತ ವೇಗವಾಗಿ ಶರದಂಡ ನದಿಯನ್ನು ದಾಟಿ, ದೇವತಾಶ್ರಯವಾದ ನಿಕೂಲವೃಕ್ಷವನ್ನು ಸೇರಿ ಕುಳಿಂಗ ಮುಂತಾದ ದೇಶಗಳನ್ನು ಹಾದು ಇಕ್ಷುಮತಿ ನದಿಯ ದಡವನ್ನು ಸೇರಿದರು. ಬಾಹ್ಲೀಕ ವಿಷ್ಣುಪದ ಶಾಲ್ಮಲಿಗಳನ್ನು ನೋಡುತ್ತ ಸಿಂಹಶಾರ್ದೂಲ ಮೃಗಗಳ ನಡುವೆಯೇ ವೇಗಗತಿಯಿಂದ ಬಂದು ಮಹತ್ಪಟ್ಟಣವಾದ ಗಿರಿವ್ರಜವನ್ನು ತಲುಪಿದರು. ದೊರೆಯ ಹಿತ, ಪ್ರಜೆಗಳ ರಕ್ಷಣೆ, ರಾಜಗೋತ್ರದವರಿಗೆ ಯಶಸ್ಸು ದೊರೆಯಲೆಂಬ ಉದ್ದೇಶದಿಂದ ತಮ್ಮ ದೇಹಶ್ರಮವನ್ನು ಲೆಕ್ಕಿಸದೆ ಹಗಲುರಾತ್ರಿ ಅತ್ಯಂತ ತ್ವರಿತವಾಗಿ ಪ್ರಯಾಣ ಮಾಡಿ ರಾತ್ರಿಯ ಹೊತ್ತಿಗೆ ಕೇಕಯ ರಾಜಧಾನಿಯನ್ನು ಬಂದು ಸೇರಿದರು. ಸೂರ್ಯೋದಯವಾದ ಬಳಿಕ ರಾಜನನ್ನು ಕಾಣೋಣ ಎಂದು ನಿರ್ಧರಿಸಿ. ಅತಿ ದಣಿದ ಕುದುರೆಗಳಿಗೆ ನೀರು ಕುಡಿಸಿ ನಗರದ ಹೊರವಲಯದಲ್ಲಿ ರಾತ್ರಿಯನ್ನು ಕಳೆಯಲು ಉದ್ದೇಶಿಸಿ ವಿಶ್ರಮಿಸಿಕೊಂಡರು.

ಇತ್ತ ಭರತನು ಸೋದರಮಾವನ ಉಪಚಾರದಿಂದ ಹರ್ಷಗೊಂಡು ಷಡ್ರಸೋಪೇತವಾದ ಊಟ ಮಾಡಿ ರಾತ್ರಿ ಸುಖವಾಗಿ ಮಲಗಿರಲು ಅವನಿಗೆ ಅತ್ಯಂತ ಅಹಿತಕರವೆನಿಸುವ ಕನಸೊಂದು ಬಿತ್ತು. ಎಚ್ಚರಗೊಂಡು ಭಯದಿಂದ ನಿದ್ರೆ ಮಾಡಲಾರದೆ ಅತಿ ದುಃಖದಿಂದ ಸೂರ್ಯನು ಮೂಡುದಿಕ್ಕಿಗೆ ಬರಲು ಸ್ನೇಹಿತರ ಬಳಿ ಹೋದ. ಅಲ್ಲಿ ಒಂದು ಕಡೆ ಹಾಡುವವರು, ಮತ್ತೊಂದೆಡೆ ಆಡುವವರು. ಮಗುದೊಂದೆಡೆ ನೋಡುವವರು ಇದ್ದ ಸುಖಗೋಷ್ಠಿ ನಡೆಯುತ್ತಿತ್ತು. ಅದಾವುದೂ ಅವನನ್ನು ಸೆಳೆಯಲಿಲ್ಲ, ಮಾತನಾಡದೆ ಅತ್ಯಂತ ಖೇದದಿಂದ ಭರತನಿರುವುದನ್ನು ಕಂಡ ಸ್ನೇಹಿತರು ಬಗೆಬಗೆಯಿಂದ ಉಪಚರಿಸುತ್ತ ಅವನ ದುಃಖದ ಕಾರಣ ಕೇಳಿದರು: ತಾನು ರಾತ್ರಿ ಕಂಡ

ಕೆಟ್ಟ ಕನಸಿನ ಬಗ್ಗೆ ಅವರಿಗೆ ತಿಳಿಸಿದ: "ನಮ್ಮ ತಂದೆಯು ಮಂಕಾದ ಮುಖದಿಂದ ಕೂಡಿ ತಲೆ ಕೆದರಿಕೊಂಡು ಬೆಟ್ಟದ ತುದಿಯನ್ನು ಸೇರಿ ಕೈಯಲ್ಲಿ ಎಳ್ಳೆಣ್ಣೆಯನ್ನು ಹಿಡಿದು ಕುಡಿಯುತ್ತ, ಆದರೂ ತನ್ನ ತಾಪ ತಡೆಯಲಾರದೆ ಸಗಣಿಯ ಗುಂಡಿಗೆ ದುಮುಕಿದ; ಕನಸಿನಲ್ಲಿ ಸಮುದ್ರವು ಕಲ್ಲುನೆಲ ಕಾಣುವಂತೆ ಬತ್ತಿಹೋಗಿತ್ತು; ಚಂದ್ರನು ನೆಲಕ್ಕೆ ಬಿದ್ದು ಕತ್ತಲೆಯಲ್ಲಿ ಸಿಕ್ಕಿಕೊಂಡಂತೆಯೂ ಭಯಾನಕವಾದ ಕನಸು ಅದು. ಸೀಳಿರುವ ಭೂಮಿ, ನಾನಾ ಮರಗಳೂ ಮುರಿದು ಭೂಮಿಗೆ ಬೀಳುವುದನ್ನು, ಪಟ್ಟದಾನೆಯ ದಂತ ಪುಡಿಪುಡಿಯಾಗುವುದನ್ನು ಕಂಡು ತಲೆಗೆದರಿದ ತಂದೆಯು ಕೋಪದಿಂದ ಕಬ್ಬಿಣದ ಪೀಠದಲ್ಲಿ ಕುಳಿತಿರಲು, ಕೆಂಪುಕಪ್ಪು ಬಣ್ಣಗಳ ಗೋಪಿಕೆಯರು ಕರೆಯುತ್ತಿದ್ದರು, ಕತ್ತೆಗಳು ಎಳೆಯುತ್ತಿದ್ದ ರಥವನ್ನೇರಿ ದಕ್ಷಿಣ ದಿಕ್ಕಿಗೆ ಸಾಗುವ ತಂದೆಯನ್ನು ಕಂಡೆ. ಕೆದರಿದ ತಲೆ, ಕೆಂಗಣ್ಣು ಕೆಂಗೋರೆಮೀಸೆಗಳಿದ್ದ ಹಾಗೂ ಕೆಂಪು ಬಟ್ಟೆಯನ್ನು ಹೊದ್ದು ಕತ್ತಿಯನ್ನು ಹಿಡಿದು ನಾಲ್ಕು ದಿಕ್ಕುಗಳನ್ನೂ ಬೆದರಿಸುವ ಘೋರ ರಕ್ಕಸರು ಸುತ್ತುವರಿದಿದ್ದುದನ್ನು ಕಂಡು ನನ್ನ ಮನಸ್ಸು ಭಯದಿಂದ ತತ್ತರಿಸುತ್ತಿದೆ. ತಂದೆಯ ಆರೋಗ್ಯ ಹೇಗಿರುವುದೋ, ರಾಮನ ಕ್ಷೇಮ ಎಂತೋ ಎಂಬ ಚಿಂತೆ ನನ್ನನ್ನು ಆವರಿಸಿ ನಡುಗುತ್ತಿದ್ದೇನೆ."

ಹೀಗೆ ಭರತನು ಸ್ನೇಹಿತರ ಜೊತೆ ಮಾತನಾಡುತ್ತಿರಲು ಅಯೋಧ್ಯೆಯಿಂದ ಬಂದಿದ್ದ ದೂತರು ನಗರವನ್ನು ಹೊಕ್ಕು ಸಲಿಗೆಯಿಂದ ಅವನಿಗೆ ನಮಸ್ಕರಿಸಿ ಕೈಮುಗಿದುಕೊಂಡು ನಿಂತುಕೊಂಡು, "ತಮ್ಮ ಕುಶಲವನ್ನು ತಿಳಿದುಕೊಂಡು, ತಮ್ಮ ಸೋದರಮಾವಂದಿರ ಅಪ್ಪಣೆಯನ್ನು ಪಡೆದು ತಮ್ಮನ್ನು ಅಯೋಧ್ಯಾನಗರಕ್ಕೆ ಅತಿ ಶೀಘ್ರವಾಗಿ ಕರೆದುಕೊಂಡು ಬರುವಂತೆ ಮುನಿರಾಯ ವಸಿಷ್ಠರು ಅಪ್ಪಣೆ ಮಾಡಿದ್ದಾರೆ. ವಸ್ತ್ರಭೂಷಣಸುವರ್ಣವೇ ಮೊದಲಾದ ನಾನಾ ವಸ್ತುಗಳಿರುವ ಇದನ್ನು ಒಪ್ಪಿಸಿಕೊಂಡು ತಮ್ಮ ಸೋದರಮಾವಂದಿರಿಗೆ ಅರ್ಪಿಸಬೇಕೆಂದು ತಿಳಿಸಿದ್ದಾರೆ" ಎಂದು ಬಿನ್ನವಿಸಿಕೊಂಡರು. ಅವರ ಮೃದುವಚನಗಳನ್ನು ಕೇಳಿದ ಭರತನು ಹರ್ಷದಿಂದ ದೂತರನ್ನುಪಚರಿಸಿ ಊರಿನಲ್ಲಿ ಎಲ್ಲರ ಕುಶಲಗಳನ್ನು ವಿಚಾರಿಸಿಕೊಂಡನು: "ಪೂಜ್ಯ ಮಹಾರಾಜರು ಕುಶಲವಾಗಿದ್ದಾರೆಯೇ? ಶ್ರೀರಾಮನು ಸಂತೋಷದಿಂದಿರುವನೇ? ಮಹಾವೀರ ಲಕ್ಷ್ಮಣನು ಕ್ಷೇಮವೇ? ಅಮ್ಮ ಕೌಸಲ್ಯೆ ಹರ್ಷದಿಂದಿದ್ದಾಳೆಯೇ? ದೊಡ್ಡಮ್ಮ ಸುಮಿತ್ರೆ ಸುಖವಾಗಿದ್ದಾಳೆಯೇ? ಪ್ರಾಜ್ಞೆಯಾದರೂ ದುಷ್ಟಯೋಚನೆಗಳಿಂದ ಕೂಡಿ ಯಾರ ಮಾತಿಗೂ ಬಗ್ಗದ ಚಂಡಿಯಂತಹ ನನ್ನ ತಾಯಿ ಸುಖವಾಗಿದ್ದಾಳೆಯೇ? ನನಗೆ ಅವಳು ವಿಶೇಷವಾಗಿ ಏನು ಹೇಳಿಕಳಿಸಿದ್ದಾಳೆ?" ಎಂದು ಮೂದಲಿಕೆಯಿಂದ ಕೇಳಿದ. ಆಗ ದೂತರು ಮುಗುಳ್ನಗುತ್ತ, "ತಮ್ಮ ಕೃಪೆಯಿಂದ ಬಂಧುಗಳೆಲ್ಲ ಸುಕ್ಷೇಮದಿಂದಿದ್ದಾರೆ, ಯಾವುದೇ ತೊಂದರೆಯಿಲ್ಲ. ಇಡೀ ಸಾಮ್ರಾಜ್ಯವು ತಮ್ಮನ್ನು ಇದಿರು ನೋಡುತ್ತಿದೆ. ತಾವು ದಯವಿಟ್ಟು ಊರಿಗೆ ಬೇಗ ಹೊರಡಬೇಕು" ಎಂದು ಚರರು ವಿಜ್ಞಾಪಿಸಿಕೊಂಡರು. ಆಗ ಭರತನು ಲಗುಬಗೆಯಿಂದ ಮೇಲೆದ್ದು ತಾತನ ಬಳಿಗೆ ಬಂದು ದೂತರು ಹೇಳಿದುದನ್ನೆಲ್ಲ ಒಂದೂ ಬಿಡದಂತೆ ನಯವಾಗಿ ತಿಳಿಸಿದ. "ಪೂಜ್ಯ ತಂದೆಯ ಪಾದದರ್ಶನ ಮಾಡಬೇಕೆಂಬ ಹಂಬಲ ನನ್ನ ಮನಸ್ಸನ್ನು ಆವರಿಸಿ ಎಂದಿಗೆ ಊರಿಗೆ ಹೋದೇನೋ ಅನ್ನಿಸಿತ್ತು, ಆದರೆ ಅಷ್ಟರಲ್ಲಿ ಮಹಾರಾಜರೇ ನನ್ನನ್ನು

ಕರೆತರಲು ಪ್ರೀತಿಯಿಂದ ದೂತರನ್ನಟ್ಟಿದ್ದಾರೆ. ನಿತ್ಯವೂ ಅಂದುಕೊಂಡ ಹಾಗೆ ಇಂದು ಅಯೋಧ್ಯೆಗೆ ಮರಳಿ ತಂದೆಯ ಚರಣಗಳನ್ನು ಕಾಣುತ್ತೇನೆ" ಎಂದು ವಿಜ್ಞಾಪಿಸಿಕೊಂಡ ಭರತನ ಕೌಶಲವನ್ನು ಮೆಚ್ಚಿಕೊಂಡ ತಾತನು ಮೊಮ್ಮಗನನ್ನು ಪ್ರೀತಿಯಿಂದ ಅಪ್ಪಿಕೊಂಡ. ಭರತನು ಈ ಪರಿಯಲ್ಲಿ ಬಿನ್ನವಿಸಿಕೊಳ್ಳಲು ಮಾತಾಮಹನು ಪರಮಸಂಭ್ರಮದಿಂದ, "ಸುಖವಾಗಿ ಹೋಗಿ ಬಾ ಮಗು, ಮಹಾರಾಜರು, ರಘುವೀರ ಲಕ್ಷ್ಮಣರು, ಕೌಸಲ್ಯೆ ಸುಮಿತ್ರೆ ಕೈಕೇಯಿಯರು ಸೀತಾದೇವಿ ಮುಂತಾದ ಮುಖ್ಯರನ್ನೆಲ್ಲ ಕೇಳಿದೆನೆಂದು ಹೇಳು" ಎಂದು ಹರಸಿ ಬೀಳ್ಕೊಟ್ಟನು. ಹೀಗೆ ಹೇಳಿದ ಅಶ್ವಪತಿ ಮಹಾರಾಜನು ಶ್ರೇಷ್ಠವಾದ ಆನೆ ದಿವ್ಯಾಶ್ವ ಉತ್ಕೃಷ್ಟವಾದ ಜಿಂಕೆಯ ಚರ್ಮ ಕನಕ ಧನ ಭೂಷಣ ವಸ್ತ್ರಗಳನ್ನೂ ಸಿಂಹದ ಬಲ ಮತ್ತು ಬಿಳಿಯ ಕೋರೆಹಲ್ಲುಗಳಿದ್ದ ನಾಯಿಗಳನ್ನೂ ಭರತನಿಗೆ ಉಡುಗೊರೆಯಾಗಿ ಕೊಟ್ಟು ಬಳಿಕ ಸಪ್ರೇಮದಿಂದ ಬೀಳ್ಕೊಟ್ಟ.

ತಾತನ ಅಪ್ಪಣೆಯನ್ನು ಪಡೆದು ಅಂತಃಪುರಕ್ಕೆ ಹೋಗಿ ತನ್ನ ತಾಯಿಯ ತಾಯಿಗೆ ನಮಸ್ಕರಿಸಿ ಆಕೆಯ ಆಶೀರ್ವಾದವನ್ನು ಪಡೆದು, ಸೋದರಮಾವನಾದ ಯುಧಾಜಿತನಿಗೆ ಅಭಿನಮಿಸಿ, ಅರಮನೆಯಲ್ಲಿನ ಇತರ ಪ್ರಿಯಬಂಧುಗಳಿಗೆ ಹೇಳಿ ಅವರ ಅನುಮತಿ ಪಡೆದು ಹೊರಹೊರಟು ಶತ್ರುಘ್ನನೊಡನೆ ಹೊಂದೇರನ್ನೇರಿದ. ಭರತನು ತನ್ನ ರಥವನ್ನಡರಲು ಅವನ ಮೈಗಾವಲಿಗಾಗಿ ಕಳಿಸಿದ್ದ ಆನೆರಥತುರಗಕಾಲಾಳುಗಳಿಗೆ ಚತುರಂಗಸೇನೆಯು ಶಿಸ್ತಿನಿಂದ ಅವನ ರಥದ ಎಡಬಲದಲ್ಲಿ ಸಾಗಲು ಬಲಾಧ್ಯಕ್ಷನೂ ಮಂತ್ರಿಗಳೂ ಸೂಚನೆ ನೀಡಲು ಅವರೆಲ್ಲ ಪಟ್ಟಣವನ್ನು ಬಿಟ್ಟು ತ್ವರಿತ ಗತಿಯಿಂದ ಪೂರ್ವದಿಕ್ಕಿನೆಡೆಗೆ ಪಯಣ ಬೆಳೆಸಿದರು. ಸ್ವಲ್ಪ ಹೊತ್ತಿನಲ್ಲಿಯೇ ಸುದಾಮನದಿಯನ್ನು ದಾಟಿ ಪ್ರತ್ಯಕ್ಸ್ರೋತವನ್ನೂ ಮೀರಿ ಶತದ್ರು ನದಿಯನ್ನು ಹಿಂದೆ ಬಿಟ್ಟು ವೇಳಾದಾನ ಪರ್ವತಗಳಲ್ಲಿ ವೇಗವಾಗಿ ಹರಿಯುವ ಮುಖ್ಯಶಿಲಾನದಿಯೇ ಮುಂತಾದವನ್ನು ದಾಟಿ, ಮಹಾ ಬೆಟ್ಟವಾದ ಚೈತ್ರರಥವನ್ನೂ ಕಳೆದು, ಗಂಗಾಸರಸ್ವತಿಗಳ ಉತ್ತರಭಾಗದಲ್ಲಿನ ವೀರಮತ್ಸ್ಯ ಮುಂತಾದ ದೇಶಗಳನ್ನು ಮೀರಿ ಚೆಲುವಾದ ಭಾರುಂಡವನಕ್ಕೆ ಬಂದರು. ಅಲ್ಲಿಂದ ಮುಂದೆ ಸಾಗಿ ಕುಳಿಂಗ ಎಂಬ ಹೆಸರಿನ ಜುಳುಜುಳು ಹರಿಯುವ ಹೊಳೆಯನ್ನೂ ಬೆಟ್ಟಗಳ ನಡುವೆ ರಭಸವಾಗಿ ಹರಿಯುವ ಕಾಳಿಂದಿನದಿಯೆಡೆಗೆ ಐತಂದರು. ಅಲ್ಲಿ ದಣಿದ ಕುದುರೆಗಳ ಮೈದೊಳೆದು ನೀರನ್ನು ಕುಡಿಸಿದರು. ಭರತ ಮುಂತಾದವರೆಲ್ಲ ಸ್ನಾನ ಮಾಡಿ ಆಹ್ನಿಕಗಳನ್ನು ಮುಗಿಸಿದರು. ಆನಂತರ ಅಲ್ಲಿಂದ ಹೊರಟು ಸುಂದರವಾದ ದೇಶಗಳನ್ನೂ ನದನದಿಗಳನ್ನೂ ಕಳೆದು ಆನೆಕುದುರೆ ರಥಗಳನ್ನು ಮಹಾನದಿಗಳಲ್ಲಿಳಿಸಿ ವೇಗವಾಗಿ ಚಲಿಸುತ್ತ ಗೋಮತಿಯ ಬಳಿಯಿದ್ದ ಸಾಲವನಕ್ಕೆ ಬಂದರು.

ಈ ರೀತಿಯಲ್ಲಿ ತ್ವರಿತವಾಗಿ ಪ್ರಯಾಣ ಮಾಡಲು ಏಳುದಿನಗಳ ಕಾಲ ಅರೆನಿಮಿಷದಂತೆ ಕಳೆದುಹೋಗಲು ಅಯೋಧ್ಯಾನಗರ ಹತ್ತಿರ ಬಂದಿತು. ಊರಿನ ಬಳಿ ಬಂದಾಗ ಭರತನು ತನ್ನ ಸೈನ್ಯವನ್ನು ಕರುಣೆಯಿಂದ ನೋಡಿ ಬಳಲಿತೆಂದು ಯೋಚಿಸಿ ಎಲ್ಲರನ್ನೂ ಸಾಂತ್ವನ ಮಾಡಿ ಸಾರಥಿಯೊಡನೆ ಮೃದುವಾಗಿ, "ನಮ್ಮ ಊರು ಕಣ್ಣುಗಳಿಗೆ ಪರಮ ಸಂತೋಷದಾಯಕವಾಗಿದೆಯಲ್ಲವೇ? ಉದ್ಯಾನವನಗಳಲ್ಲಿ

ಆಟವಾಡುವ ಜನರು, ವೇದಾಧ್ಯಯನನಿರತರಾದ ಮುನಿಗಳು, ಹಿರಿಯರು ಎಲ್ಲ ದೊಡ್ಡ ಸಂಖ್ಯೆಯಲ್ಲಿ ಸೇರಿರುತ್ತಿದ್ದರು. ಆದರೆ ಇಂದು ಆ ಸಂದಣಿಯೆಲ್ಲ ಎಲ್ಲ ಹೋಯಿತು? ಎಲ್ಲ ಕನಸಿನ ರೀತಿಯಲ್ಲಿ ವಿಚಿತ್ರವಾಗಿ ಕಾಣಿಸುತ್ತಿದೆಯಲ್ಲ!" ಎಂದು ಕೇಳಿದ. ಜೊತೆಗೆ ಅವನ ಮುಖ ಬಾಡಿತು, ಮನಸ್ಸಿಗೆ ಕಳವಳವಾಯಿತು, ನಿಟ್ಟುಸಿರು ಹೊರಬಿತ್ತು. "ನೀರಾಟವನ್ನು ಬಯಸಿ ಯೌವನಿಗರು ಚೆಲುವೆಯರಾದ ನವಯುವತಿರೊಡನೆ ಬಂದು ನಗುತ್ತ ಕೊಳದ ತಡಿಯಲ್ಲಿ ಕಲಕಲರವಗೈಯುತ್ತ ನಡೆದಾಡುತ್ತಿದ್ದರು; ಮಂಗಳಕರವಾದ ಕಹಳೆಯ ಶಬ್ದ ಊರಲ್ಲೆಲ್ಲ ಪ್ರತಿಧ್ವನಿಸುತ್ತಿತ್ತು; ದೂರದಲ್ಲಿ ಬರುವ ಮದಗಜಗಳ ಘೀಳಾಟ ಕೇಳಿಸುತ್ತಿತ್ತು. ಆದರೆ ಈಗ ಅದೊಂದೂ ಇಲ್ಲವಲ್ಲ! ಇದನ್ನು ನೋಡಿದರೆ ನನ್ನ ಮನಸ್ಸಿಗೆ ಅದೇನೋ ಭಯ ಆವರಿಸುತ್ತಿದೆ. ಉದ್ಯಾನದ ಮರಗಳಲ್ಲಿ ಹೂವು ಹೀಚುಗಳು ಬಿಟ್ಟು ಹಕ್ಕಿಗಳ ಗುಂಪನ್ನು ತೃಪ್ತಿಪಡಿಸುತ್ತಿದ್ದ ಈ ಸಮಯದಲ್ಲಿ ಇಲ್ಲಿಯ ಆವರಣವೆಲ್ಲ ಎಲೆಗಳಿಲ್ಲದ, ಹಕ್ಕಿಗಳ ಉಲುಹಿಲ್ಲದ, ಮರಗಳು ಗುಂಪಾಗಿ ತೋರುತ್ತಿವೆಯಲ್ಲ! ಪರಿಮಳವನ್ನು ಬೀರುವ ತಂಗಾಳಿಯ ತೀಟ, ಕೋಗಿಲೆಗಿಳಿಗಳ ಕೂಜನ, ಹಂಸಗಳ ನಲಿದಾಟ – ಯಾವುದೂ ಇಲ್ಲವಲ್ಲ! ಇಂತಹ ವಿಚಿತ್ರ ಪರಿಸ್ಥಿತಿ ಇರಲು ಏನು ಕಾರಣ" ಎಂದು ಭರತನು ಸಾರಥಿಯನ್ನು ಕೇಳಿದ. ಮನಸ್ಸಿನಲ್ಲಿ ಯೋಚನೆ ತುಂಬಿಕೊಂಡು ಕಳವಳದಿಂದ ಸಾರಥಿಗೆ ಪ್ರಶ್ನೆಗಳನ್ನು ಹಾಕುತ್ತ ನಿಧಾನವಾಗಿ ಬರಲು, ನಗರದ್ವಾರಗಳನ್ನು ದಾಟಿ ಬರುತ್ತಿರಲು ತಲೆತಗ್ಗಿಸಿ ವಂದನೆಗೈದು ಸ್ತುತಿಸುವ ಜನರನ್ನು ನಿರೀಕ್ಷಿಸಿ ನಾಲ್ದೆಸೆಗಳನ್ನು ನಿಟ್ಟಿಸಲು ನಗರದಲ್ಲಿ ಜನರೇ ಇಲ್ಲವಲ್ಲ ಎನ್ನಿಸಿತು. ಈ ಪರಿಯನ್ನು ಕಂಡ ಭರತನಿಗೆ ಹೇಳಲಾಗದ ಸಂಕಟ ಉಂಟಾಯಿತು. ಹೀಗೆ ತಳಮಳಗೊಳ್ಳುತ್ತ ಅಂತೂ ರಾಜಕುಮಾರನು ಅರಮನೆಗೆ ಬಂದ.

ಆದರೆ ಅರಮನೆಯು ಕಮನೀಯವಾಗಿ ಕಂಗೊಳಿಸುವ ಬದಲು ಸಂಭ್ರಮರಹಿತವಾಗಿತ್ತು. ಅನ್ಯಮನಸ್ಕನಾಗಿ ಭರತನು ಕ್ರಮಕ್ರಮವಾಗಿ ಒಳಗೆ ಸಾಗಿ ತಂದೆಯಿರುತ್ತಿದ್ದ ತಾಣಕ್ಕೆ ಹೋಗಿ ನೋಡಿದರೆ ಅಲ್ಲಿ ಆತ ಕಾಣಿಸಲಿಲ್ಲ; ಅದರಿಂದಾಗಿ ಮನಸ್ಸಿಗೆ ಆಘಾತವೆನಿಸಿತು. ಭ್ರಮೆಗೊಂಡವನಂತೆ ತನ್ನ ತಾಯಿ ಕೈಕೇಯಿಯನ್ನು ನಿಟ್ಟಿಸಲು ಆಕೆ ಮಗನನ್ನು ಕಂಡು ಹಿಗ್ಗುತ್ತ ಅತೀವ ಪುತ್ರವಾತ್ಸಲ್ಯದಿಂದ ಅಪ್ಪಿಕೊಂಡು ಮುಂಡಾಡಿದಳು. ಆನಂತರ ಮಗನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, 'ಹೋಗಿ ಎಷ್ಟೊಂದು ದಿನಗಳಾಗಿಬಿಟ್ಟವಲ್ಲ!' ಎಂದು ಅವನ ಯೋಗಕ್ಷೇಮವನ್ನು ವಿಚಾರಿಸಿಕೊಂಡಳು; ತನ್ನ ತವರು ಮನೆಯಲ್ಲಿ ತಾಯಿತಂದೆಯರು ಬಂಧುಜನರೆಲ್ಲ ಕುಶಲವೇ ಎಂದು ಮತ್ತೆ ಮತ್ತೆ ಕೇಳುವ ತಾಯಿಯನ್ನು ಕಂಡು ತನ್ನ ಮನದೊಡೆಯನಾದ **ಶ್ರೀರಾಮಪುರದರಸ**ನನ್ನು ನೆನೆಸಿಕೊಳ್ಳುತ್ತ ಅವಳ ಮಾತಿಗೆ ಉತ್ತರವನ್ನಿತ್ತ.

೨೫. ತಾಯಿಯ ಮಾತನ್ನು ಧಿಕ್ಕರಿಸಿ ಭರತನು ರಾಮನನ್ನು ಕಾಣಲು ನಿಶ್ಚೈಸಿದುದು

ತಾಯಿಯು ನಗುನಗುತ್ತ ಹಲವು ಬಗೆಯಲ್ಲಿ ಕುಶಲಪ್ರಶ್ನೆಗಳನ್ನು ಮಾಡುವ ಹರ್ಷವನ್ನು ಕಂಡು ಭರತನು ತನ್ನ ಮನಸ್ಸಿನ ಭೀತಿ ಅನುಮಾನ ಸಂಕಟಗಳನ್ನೆಲ್ಲ ವಿವರವಾಗಿ ಹೇಳಿಕೊಂಡು, "ಅಲ್ಲಮ್ಮ, ತಂದೆಯು ಯಾವಾಗಲೂ ನಿನ್ನ ಮಂದಿರವನ್ನು ಬಿಟ್ಟು ಹೋದವರೇ ಅಲ್ಲ, ಆದರೆ ಇವತ್ತೇನು ಆಶ್ಚರ್ಯ, ಕಾಣಿಸುತ್ತಿಲ್ಲ! ಅವರೆಲ್ಲಿದ್ದಾರೆಯೋ ಅಲ್ಲಿಗೇ ಹೋಗಿ ನನ್ನ ಅಭಿವಂದನೆಗಳನ್ನು ಸಲ್ಲಿಸಿ ಬರುತ್ತೇನೆ" ಎಂದ. ಹೀಗೆ ಕೇಳಿದ ಮಗನಿಗೆ ಪ್ರೀತಿಯಿಂದ ನಿಧಾನವಾಗಿ ವಿಷಯವನ್ನು ತಿಳಿಸಿ ಅವನನ್ನು ಸಂತೈಸಲು ಪ್ರಯತ್ನಿಸಿದಳು. "ಇನವಂಶಭೂಷಣರಾದ ದಶರಥ ಮಹಾರಾಜರು ಮತ್ತೆ ಮತ್ತೆ ಯಾಗ ಮಾಡುವ ಸ್ವಭಾವದವರು. ಅಂತಹ ನಿಮ್ಮ ತಂದೆಯು ದೇವೇಂದ್ರನ ಅರ್ಧಾಸನವನ್ನು ಬಯಸಿ ಸ್ವರ್ಗಕ್ಕೆ ಹೊರಟು ಹೋದರು" ಎಂದ ಪ್ರೀತಿಯ ನುಡಿಯನ್ನು ಕೇಳಿ ಭರತನು 'ಹಾ' ಎನ್ನುತ್ತ ವಿಸ್ಮಿತನಾಗಿ ನಡುಗುತ್ತ ನೆಲದ ಮೇಲೆ ಬಿದ್ದು ಬಾಡಿದ ಮುಖವುಳ್ಳವನಾಗಿ, ಕಲ್ಲುಗಳೂ ಮರಗಳೂ ಕರಗುವ ಹಾಗೆ ಗೋಳೋ ಎಂದು ಅಳತೊಡಗಿದ. ಚಂದಿರನಿಲ್ಲದ ಬಾನು, ಅಲೆಗಳ ಭೋರ್ಗರೆತವಿಲ್ಲದ ಕಡಲು, ರಾಜನಿಲ್ಲದ ಅರಮನೆಯು ದುರ್ಮನೆಯಾಗಿ ತೋರುವುದೆಂದು ಹಲುಬಿದ. ಅವನ ಕಣ್ಣುಗಳಿಂದ ಸುರಿದ ನೀರು ನೆಲದಲ್ಲಿ ಮಡುಗಟ್ಟುವಂತೆ ದುಃಖದಿಂದ ಒರಲುತ್ತ ಹೊರಳುತ್ತಿರುವ ಭರತನ ರೀತಿಯಲ್ಲಿಯೇ ಶತ್ರುಘ್ನನೂ ಘೋರ ದುಃಖದಿಂದ ಕೂಡಿದ. ಹೀಗೆ ಪೂರ್ಣ ನಿಜವನ್ನರಿಯದ ಅವರಿಬ್ಬರೂ ರೋದಿಸುತ್ತಿರಲು, "ಇದೇಕೆ ಮಗುವೆ ಅಜ್ಞಾನಿಗಳು ಅಳುವ ರೀತಿಯಲ್ಲಿ ಹೀಗೆ ದುಃಖಿಸುವುದರಿಂದೇನು ಪ್ರಯೋಜನ? ಮಿಕ್ಕ ವಿಷಯವನ್ನು ತಿಳಿದು ನನ್ನ ಮುಂದೆ ಕುಳಿತುಕೋ" ಎಂದಳು. ಆಗ ಭರತನು, "ರಾಮಚಂದ್ರನಿಗೆ ಯುವರಾಜಪಟ್ಟವನ್ನು ಕೊಟ್ಟು ಸಂತೋಷ ಸಾಮ್ರಾಜ್ಯದಲ್ಲಿರುವನೆಂದು ಭಾವಿಸಿ ನಾನು ಅವರ ಅಪ್ಪಣೆಯನ್ನು ಪಡೆದು ಮಾವನ ಮನೆಗೆ ಮೋದದಿಂದ ಹೋದೆ. ಒಂದೇ ಸಮನೆ ಪ್ರಯಾಣ ಮಾಡಿ ಬಂದ ಚಾರರು ನನ್ನನ್ನು ವಿವಿಧ ಸಮಾಧಾನದ ನುಡಿಗಳಿಂದ ಕರೆದ ರೀತಿಯಿಂದ ನನ್ನ ಮನಸ್ಸು ಕ್ಲೇಶವನ್ನು ಹೊಂದಿ ದಿಗಿಲಿನಿಂದ ಚಿಂತೆಯಿಂದ ತವಕದಿಂದ ಇಲ್ಲಿಗೆ ಬಂದೆ. ಆದರೆ ತಂದೆಯ ಪಾದದರ್ಶನವಾಗದೆ ನನ್ನ ಹೃದಯ ಕಿತ್ತು ಬರುತ್ತಿದೆ. ನನಗಿನ್ನಾರು ಗತಿ! ನೆಲದೊಡೆಯನೂ ಮಕುಟಮಣಿಗಳಿಂದ ಹೊಳೆಯುವ ಪಾದಗಳುಳ್ಳವನೂ ಮರ್ತ್ಯಲೋಕದ ದುರ್ಗತಿಯನ್ನು ನೀಗಿಸುವಂತಹವನೂ ಆದ ಅಣ್ಣ ಗುಣಧಾಮನಾದ ರಾಮ ಎಲ್ಲಿದ್ದಾನೆ, ಅವನಲ್ಲದೆ ಈಗ ನನಗೆ ಬೇರೆ ಗತಿ ಯಾರಿದ್ದಾರೆ? ಅವನೆಲ್ಲಿದ್ದಾನೆಂದು ಹೇಳಿದರೆ ಅಲ್ಲಿಗೆ ಹೋಗಿ ಅವನ ಚರಣಗಳಿಗೆ ಬೀಳುತ್ತೇನೆ. ಮೃದುಹೃದಯಿ ಶಾಂತ ಸತ್ಯವ್ರತ ದಯಾಶೀಲನಾದ ಆತನು ನನ್ನ ಹೃದಯದ ನೋವನ್ನು ಅರ್ಥಮಾಡಿಕೊಂಡು ಸಾಂತ್ವನ ಹೇಳುತ್ತಾನೆ. ಆತನನ್ನು ನನಗೆ ತೋರಿಸದಿರುವ ಕಾರಣವೇನು? ದಯಾರ್ದ್ರಹೃದಯಿಯಾದ ತಂದೆಯು ಕೊನೆಯುಸಿರೆಳೆಯುವಾಗ ಹೇಳಿದ ಅವನ ಕೊನೆಯ ಮಾತುಗಳೇನು?" ಎಂದು ಭರತ

ಗೋಳುಕರೆದ. ಆಗ ಕೈಕೇಯಿಯು ಮಗನನ್ನು ಕುರಿತು, "ರೋಗರುಜೆಯಿಂದ ನಿನ್ನ ತಂದೆಯು ಸಾವನ್ನಪ್ಪಲಿಲ್ಲ. 'ರಾಮ ಲಕ್ಷ್ಮಣ ಸೀತಾದೇವಿ; ರಾಘವ ರಘೂತ್ತಮ, ನರನಾಥ ಶ್ರೀರಾಘವನನ್ನೂ ಸಲ್ಲಕ್ಷಣನಾದ ಲಕ್ಷ್ಮಣನನ್ನೂ ಕಂಬುಗ್ರೀವೆಯಾದ ಸೀತೆಯನ್ನೂ ಯಾರು ನೋಡುತ್ತಾರೆಯೋ ಅವರೇ ಧನ್ಯರು' ಎಂದು ಹಂಬಲಿಸುತ್ತ ಪ್ರಜ್ಞಾಹೀನರಾಗಿ ಅಸುವನ್ನು ನೀಗಿದರು."

ತಾಯಿಯ ಈ ಮಾತುಗಳು ಭರತನಿಗೆ ಆಕೆ ಮೊದಲು ಹೇಳಿದ ನುಡಿಗಳಿಗಿಂತ ಮಿಗಿಲಾದ ಭಯವನ್ನುಂಟುಮಾಡಿತು; ತಾಯಿಯ ಮುಖವನ್ನು ನೋಡುತ್ತ ಆತುರನಾಗಿ ಅತ್ಯಂತ ದೈನ್ಯದಿಂದ, "ಪದ್ಮಾಕ್ಷನಾದ ರಾಮನು ಈಗ ಎಲ್ಲಿದ್ದಾನೆ? ಲಕ್ಷ್ಮಣನೆಲ್ಲಿದ್ದಾನೆ? ಸೀತೆ ಎಲ್ಲಿದ್ದಾಳೆ?" ಎಂದು ಕೇಳಲು ಕೈಕೇಯಿಯು ಸಂತಸದಿಂದ, "ಕೆಲವು ಕಾಲ ಕಾಡಿನಲ್ಲಿದ್ದು ಬರಲು ಇಚ್ಛಿಸಿ ಶ್ರೀರಾಮನು ಸುಮಿತ್ರಾತನಯ ಹಾಗೂ ವೈದೇಹಿಯರ ಜೊತೆಗೂಡಿ ದಂಡಕಕಾನನಕ್ಕೆ ಹೊರಟು ಹೋದ" ಎಂದುದನ್ನು ಕೇಳಿದ ಭರತನು ಸಂತಾಪದಿಂದ, "ಅಣ್ಣನು ಯಾರ ಬ್ರಹ್ಮಸ್ವವನ್ನು ಸೆಳೆದುಕೊಂಡ? ದೀನರನ್ನು ಹಿಂಸೆಗೀಡುಮಾಡಿದ? ಪರಸತಿಯರನ್ನು ಮೋಹಿಸಿದ? ಅವನು ಯಾವ ಕಾರಣದಿಂದ ಕಾಡಿಗೆ ಹೋಗಬೇಕಾಯಿತು?" ಎಂದು ಕೇಳಲು ತಾಯಿಯು ನಗುತ್ತ, "ರಾಮನು ಯಾವ ಬ್ರಾಹ್ಮಣನ ಸ್ವತ್ತನ್ನೂ ಅಪಹರಿಸಲಿಲ್ಲ, ಪರಸತಿಯರ ಬಯಕೆಯಾಗಲೀ ಮಹಾ ಹಿಂಸಾಕೃತ್ಯವಾಗಲೀ ರಾಮನಲ್ಲಿ ಎಂದಿಗಾದರೂ ಉಂಟಾದೀತೇ? ಅವನು ಕಾಡಿಗೆ ಹೋಗಬೇಕಾದುದು ನಾನು ಕೇಳಿದ ಮೇಲೆ. ಮಹಾರಾಜರು ರಾಮನಿಗೆ ಯೌವರಾಜಪಟ್ಟವನ್ನು ಕಟ್ಟಬೇಕೆಂದು ಯೋಚಿಸಲು ನಾನು ಕೋಪಗೊಂಡು ಅವರು ನನಗೆ ಹಿಂದೆ ಕೊಟ್ಟಿದ್ದ ಎರಡು ವರಗಳನ್ನು ಕೇಳಿದೆ; ಅವುಗಳೆಂದರೆ ರಾಮನನ್ನು ಕಾಡಿಗಟ್ಟುವುದು, ಭರತನಿಗೆ ಪಟ್ಟ ಕಟ್ಟುವುದು. ಕೊಟ್ಟ ಮಾತನ್ನು ಮೀರಲಾರದೆ ದೇವೇಂದ್ರಸಮಾನರಾದ ಮಹಾರಾಜರು ಆ ರೀತಿ ಮಾಡಿ ಮಗನನ್ನು ನೆನೆನೆನೆದು ಕೊರಗುತ್ತ ಪಂಚತ್ವವನ್ನೈದಿದರು. ನೀನು ರಾಜಧರ್ಮವನ್ನು ಅನುಸರಿಸು, ನಾನು ನಿನ್ನ ಮೇಲಿನ ಪ್ರೀತಿಯಿಂದ ಹೀಗೆ ಮಾಡಿದೆ. ಅಮಿತವಾದ ಯಾಗಾದಿಗಳನ್ನು ಮಾಡಿದ ದಿಲೀಪನೇ ಮುಂತಾದ ರಾಜರ್ಷಿಗಳು ಯಾವ ಗತಿಯನ್ನು ಅನುಸರಿಸಿದರೋ ಅದೇ ರೀತಿಯಲ್ಲಿಯೇ ದಶರಥ ಮಹಾರಾಜರೂ ಸದ್ಗತಿಯನ್ನು ಹೊಂದಿದರು. ತಂದೆಯ ಕೃತ್ಯಗಳನ್ನು ನೆರವೇರಿಸಿ, ದೇವತೆಗಳು ಸಂತಸಗೊಳ್ಳುವ ಹಾಗೆ ನೀನು ದೊರೆಯಾಗಿ ನನಗೆ ಹಿಗ್ಗನ್ನು ತಾ, ನಾನು ಸಂಪಾದಿಸಿ ಕೊಟ್ಟ ಸ್ವರಾಜ್ಯಸಂಭ್ರಮವನ್ನು ಅನುಭವಿಸು" ಎಂದು ಹೇಳಿದಳು.

ತಾಯಿಯ ನುಡಿಗಳನ್ನು ಕೇಳಿ, ಉರಿಯುವ ಹುಣ್ಣಿಗೆ ಉಪ್ಪನ್ನು ಸವರಿದಂತಾಗಿ, ಮೊದಲೇ ದುಃಖಗೊಂಡಿದ್ದ ತನಗೆ ಮತ್ತಷ್ಟು ದುಃಖವೊದಗಿತಲ್ಲ ಎಂದು ಭರತನು, "ಅಣ್ಣನಿಲ್ಲದ ಮೇಲೆ ಈ ರಾಜ್ಯದ ಅತಿಶಯವಾದ ಭೋಗಗಳು ಅನಾಥನಾದ ನನಗೆ ಬರುವುದಾದರೂ ಎಂತು? ವಂಶಸಂಹಾರಕರವಾದ ಕೃತ್ಯವನ್ನು ಮಾಡಿದ ಮೃತ್ಯುಸ್ವರೂಪಿಯಾದ ಪಾಪಿ ನೀನು, ಮುಗ್ಧನಾದ ತಂದೆಯನ್ನು ದುರ್ಬೋಧೆಯಿಂದ

ಕಿಚ್ಚಿಗೀಡುಮಾಡಿದ ಕುಲಗೆಡುಕಿ ನೀನು. ಕುಲವನ್ನೇ ನುಂಗುವ ಕಾಳರಾತ್ರಿಯನ್ನು ಹೆಂಡತಿ ಎಂದು ತಂದೆ ಹೇಗೆ ತಾನೇ ಒಲಿದ? ದೇವೇಂದ್ರಸಮಾನನಾದ ತಂದೆಯು ಶೋಕಾನಲದಿಂದ ಬೇಯುವಂತಾಯಿತು, ಸತ್ಯವ್ರತನಾದ ಆತನಿಗೆ ಅಪಕೀರ್ತಿ ಅಂಟಿಕೊಂಡಿತು. ಇದನ್ನೆಲ್ಲ ನೋಡಿ ದೊಡ್ಡಮ್ಮರಾದ ಕೌಸಲ್ಯೆ ಸುಮಿತ್ರೆಯರು ಹೇಗೆ ತಾನೇ ಬದುಕಿ ಉಳಿದಾರು! ದುರ್ವೃತ್ತೆಯೇ, ಪಾಪಕೃತೆಯೇ, ನಾಲ್ಕು ಮಕ್ಕಳಲ್ಲಿ ರಾಮನನ್ನು ಹೇಗೆ ತಾನೇ ಕಟುಕ ಹೃದಯದಿಂದ ಕಾಡಿಗೆ ಕಳಿಸಿದೆ? ಅನರ್ಥವನ್ನು ಆಲೋಚಿಸಿ ಕೆಟ್ಟ ದಾರಿಯನ್ನು ಹಿಡಿದೆ, ಈ ಭೂಮಿಯಲ್ಲೀಗ ನನ್ನನ್ನು ಕಾಪಾಡುವವರು ಯಾರಿದ್ದಾರೆ? ಸೈನ್ಯಗಳ ಬೆಂಬಲವಿಲ್ಲದೆ ನಾನು ಜವಾಬ್ದಾರಿಯನ್ನು ನಿರ್ವಹಿಸಲು ಶಕ್ಯವೇ? ಹಿರಿಯನೂ ಪೂಜ್ಯನೂ ಸತ್ಯಧರ್ಮಾಚಾರಸಂಪನ್ನನೂ ಆದ ಅಣ್ಣನು ಮಾತ್ರ ಈ ರಾಜ್ಯಲಕ್ಷ್ಮಿಯನ್ನು ಪಾಲಿಸಲು ಸಮರ್ಥನೇ ಹೊರತು ಬೇರೆಯವರು ಈ ಹೊಣೆಯನ್ನು ನಿರ್ವಹಸಬಲ್ಲರೇ? ನಮ್ಮ ಹಿರಿಯರೆಲ್ಲ ಸತ್ಪರಂಪರೆಯನ್ನು ಅನುಸರಿಸಿ ಅಣ್ಣಂದಿರ ಸೇವೆಯನ್ನು ಮಾಡುತ್ತ ಕುಲವನ್ನುದ್ಧರಿಸಿದರು; ಆ ಧರ್ಮಾತ್ಮರ ಕುಲದಲ್ಲಿ ಹುಟ್ಟಿದ ನಾನು ಕ್ರೂರವಾದ ನರಕಕ್ಕೆ ಹೋಗಬೇಕೇ? ಕುಲಗೆಡುಕಿ, ನಿನ್ನಿಂದಾದ ಈ ಕೃತ್ಯಕ್ಕಾಗಿ ನಾನು ಅಣ್ಣನ ಬಳಿ ಹೋಗಿ ಅವನ ಕಾಲುಗಳನ್ನು ಹಿಡಿದು ರಾಜ್ಯವನ್ನು ಆತನಿಗೇ ಒಪ್ಪಿಸಿ ಅವನು ಹೇಳಿದ ಕೆಲಸವನ್ನು ಮಾಡಿಕೊಂಡಿರುತ್ತೇನೆ" ಎಂದು ಕೋಪದಿಂದ ಹೇಳಿದ.

ತಾಯಿಯ ಕುತ್ಸಿತವನ್ನು ನೆನೆಸಿಕೊಂಡಂತೆ ಅವನ ಕೋಪಶಿಖಿಯು ಹೆಚ್ಚುತ್ತಿತ್ತು; ತಾಯಿಯನ್ನು ನೋಡುತ್ತ ತುಚ್ಛ ಮಾತುಗಳಿಂದ ಕೂಡಿ ತನ್ನ ರೋಷವನ್ನುಗುಳುತ್ತ ಮತ್ತೆ ಮತ್ತೆ ಮೂದಲಿಸಿದ: "ಕೊಲ್ಲುವಂತಹ ಯಾವ ತಪ್ಪನ್ನು ರಾಜನು ಮಾಡಿದ, ಶ್ರೀರಾಮನು ಕಾಡಿಗಟ್ಟುವಂತಹ ಯಾವ ಅಪಚಾರವನ್ನೆಸಗಿದ? ಇದನ್ನೆಲ್ಲ ಮಾಡಿ ನೀನು ನರಕಕ್ಕೆ ಈಡಾದೆ, ನೀನು ಎಂದಿಗೂ ಗಂಡನೊಡನೆ ಸಾಲೋಕ್ಯವನ್ನು ಗಳಿಸಲಾರೆ. ಹೇಳಬಾರದಂತಹ ಘೋರಪಾತಕವನ್ನು ಮಾಡಿ ನೀನು ಮಹಾ ಖೂಳರ ಪಂಕ್ತಿಗೆ ಸೇರಿದೆ, ನನ್ನನ್ನು ಅಪಕೀರ್ತಿ ಪುರುಷನ ಆಳಾಗುವಂತೆ ಮಾಡಿದೆ, ನಾನು ಸರ್ವಲೋಕಹಿತಕಾರ್ಯವನ್ನು ನೋಡದಂತೆ ಮಾಡಿಬಿಟ್ಟೆ. ಆಳಿದ ಪ್ರಭುವನ್ನು ಕೊಂದು, ಅರಸಾಗಬೇಕಾದವನನ್ನು ಕಾಡಿಗೆ ಕಳಿಸಿ ಕೀಳುಜನರ ಜೊತೆ ಸೇರಿ ನಾನು ಅರಸನಂತೆ ಅಯೋಧ್ಯಾನಗರಿಯಲ್ಲಿ ಬಾಳಬಲ್ಲೆನೆ? ನೀನು ರಾಜ್ಯಕಾಮುಕರ ಮಿತ್ರೆ, ಮೃತ್ಯುರೂಪಿನ ಮಾತೃ! ಕುಲವನ್ನೇ ನಾಶಮಾಡಲು ಗಂಡನನ್ನೇ ಕೊಂದು ನೆಲಕ್ಕೆ ಒಡೆಯಳಾಗಲು ಬಯಸಿದೆಯಾ? ಪಾಪಿಯೇ, ನಿನ್ನ ಹೊಟ್ಟೆಯಲ್ಲಿ ಹುಟ್ಟಿ ನಾನು ನರಕಕ್ಕೆ ಅಧಿನಾಥನಾಗಿಬಿಟ್ಟೆ, ನಿನ್ನ ಕಾರಣದಿಂದ ಉದಾತ್ತಳಾದ ಕೌಸಲ್ಯೆ ಸುಮಿತ್ರೆ ಮೊದಲಾದ ಅಖಿಲ ಲಲನಾಶಿರೋಮಣಿಯರಿಗೆ ಅತಿಶೋಕವನ್ನು ತಂದಿಟ್ಟೆ. ನೀನು ಅಶ್ವಪತಿ ಮಹಾರಾಜನ ಮಗಳಲ್ಲ, ಯಮನ ಮಗಳು. ನೀನು ಮಾಡಿದ ಕುಕೃತ್ಯದಿಂದ ತಂದೆಯ ಕುಲಕ್ಕೆ ಅಪಯಶಸ್ಸನ್ನು ತಂದೆ, ತವರಿಗೆ ಮಸಿಬಳಿದು ಬಾಳಲು ಬಯಸಿದೆ. ನಿನ್ನೊಡನೆ ಮಾತನಾಡಿದರೆ ಪಾಪರಾಶಿಯು ಅಂಟಿಕೊಳ್ಳುತ್ತದೆ! ಅದನ್ನೆಲ್ಲ ಹೇಳಿ ಫಲವೇನು?" ಎಂದು ಎಣೆಯಿಲ್ಲದ ಕಠಿಣ ನುಡಿಗಳನ್ನಾಡುತ್ತ ಬಲು ದುಃಖದಿಂದ

ನೆಲದ ಮೇಲೆ ಬಿದ್ದು ಮೂರ್ಛೆಹೋದ.

ಕೆಲವು ಕ್ಷಣಗಳಲ್ಲಿ ಎಚ್ಚೆತ್ತುಕೊಂಡ ಭರತನು ನಿಟ್ಟುಸಿರುಗಳನ್ನು ಸೂಸುತ್ತ ಎಡಬಲಗಳನ್ನು ನೋಡಿ ಅಲ್ಲಿದ್ದವರನ್ನುದ್ದೇಶಿಸಿ, "ನನಗಾಗಿ ರಾಜ್ಯವನ್ನು ಕೇಳಲು ನಾನು ಇವಳಿಗೇನೂ ಹೇಳಲಿಲ್ಲ, ರಘುವರನಿಗೆ ಸಲ್ಲಬೇಕಾದ ಪಟ್ಟವನ್ನು ನಾನೆಂದೂ ಬಯಸಲಾರೆ, ಈಗಲೋ ತಂದೆಯು ಸ್ವರ್ಗಸ್ಥನಾಗಿದ್ದಾನೆ, ಅಣ್ಣನು ಕ್ರೂರತರ ಅಡವಿಗೆ ಹೋಗಿದ್ದಾನೆ. ಇದೆಲ್ಲ ಗೊತ್ತಾಗದೆ ನಾನು ಮಾವನ ಮನೆಯಲ್ಲಿದ್ದುಬಿಟ್ಟೆ. ಈ ಪಾತಕಿಯ ದೆಸೆಯಿಂದಾಗಿ ನನ್ನಲ್ಲಿ ಭಯವು ತುಂಬಿಹೋಗಿದೆ. ಬಿರುಬಿಸಿಲಿನ ಬೇಗೆಯಿಂದ ಕೂಡಿ ದಿಕ್ತಟಗಳು ಬೇಯುತ್ತಿದ್ದ ಒಂದು ಮಧ್ಯಾಹ್ನ ನೆಲದ ಮೇಲೆ ನೇಗಿಲಿಗೆ ಎರಡು ಎತ್ತುಗಳನ್ನು ಕಟ್ಟಿ ರೈತನೊಬ್ಬ ಉಳುತ್ತಿರಲು ಅದನ್ನು ಆಕಾಶದಲ್ಲಿ ಕಂಡ ಕಾಮಧೇನುವು ತನ್ನ ಮಕ್ಕಳಿಗೆ ಒದಗಿದ ದುಃಸ್ಥಿಯನ್ನು ಕಂಡು ದುಃಖವು ಉಕ್ಕೇರಿ ಅವಳ ಕಣ್ಣುಗಳಿಂದ ಧಾರಾಕಾರವಾಗಿ ಹನಿಗಳುದುರಿದುವಂತೆ. ಅವುಗಳಲ್ಲಿ ಕೆಲವು ಕೆಳಗಿದ್ದ ಇಂದ್ರನ ಮೇಲೆ ಬಿದ್ದುವು; ಆ ಕಂಬನಿಗಳ ಬಿಸಿಯಿಂದ ಅವನಿಗೆ ಹೆದರಿಕೆಯುಂಟಾಯಿತು; ಮೇಲೆ ನೋಡಲು ಅದು ನಂದಿನಿಯ ಕಣ್ಣೀರೆಂಬುದು ನಿಶ್ಚಿತವಾಯಿತು. ಆಕೆಯ ಬಳಿ ಹೋಗಿ ಕಣ್ಣೀರಿನ ಕಾರಣವೇನೆಂದು ಕಾಮಧೇನುವನ್ನು ಕೇಳಿದನಂತೆ. ಆಗ ಆಕೆಯು ತುಂಬಿ ತುಳುಕುವ ಶೋಕದಿಂದ, 'ನನ್ನ ಇಬ್ಬರು ಮಕ್ಕಳು ಮಧ್ಯಾಹ್ನದ ಈ ಉರಿ ಬಿಸಿಲಿನಲ್ಲಿ ಪಡುತ್ತಿರುವ ಶ್ರಮವನ್ನು ಕಂಡು ನನ್ನ ಕಣ್ಣುಗಳಿಂದ ನೀರು ಉಕ್ಕಿತು' ಎಂದು ಹೇಳಿದಳಂತೆ. ಆಗ ಸುರಪನು, 'ಭೂಮಿಯಳಿರುವ ಹಸುಎತ್ತುಗಳೆಲ್ಲ ನಿನ್ನ ಸಂತತಿಯವೇ ಅಲ್ಲವೇ? ಇಬ್ಬರಿಗಾಗಿ ಶೋಕಿಸಿದರೆ ಎಂದಿಗಾದರೂ ನಿನ್ನ ದುಃಖ ಆರಬಲ್ಲುದೇ? ಎತ್ತು ಹಸುಗಳು ಭೂಮಿಯಲ್ಲಿ ಎಲ್ಲರ ಜೀವನಾಧಾರಗಳು, ಇದೆಲ್ಲ ಬ್ರಹ್ಮಸೃಷ್ಟಿಯ ಸತ್ಯಗಳು. ಅದನ್ನು ನೋಡಿಕೊಂಡು ಅತ್ತರೇನು ಫಲ?' ಎಂದು ಆಕೆಯನ್ನು ಸಂತೈಸಿದನಂತೆ. ತನ್ನ ಕುಲಪರಂಪರೆಯಲ್ಲಿ ಹುಟ್ಟಿದ ಎರಡು ಎತ್ತುಗಳು ನೆಲದಲ್ಲಿ ದುಡಿಯುವುದನ್ನು ನೋಡಿ ಕಾಮಧೇನುವು ಸಂಕಟಪಟ್ಟಳು. ಇಂತಹ ಹೆಣ್ಣುಮಕ್ಕಳ ಕುಲದೇವತಾರೂಪಿಯಾದ ಕೌಸಲ್ಯೆಯ ದಿವ್ಯಪುರುಷನಾದ ಉದಾರನಾದ ಮನೋಹರರೂಪಿಯಾದ ಮಗನನ್ನು ನೀನು ಕಾಡಿಗೆ ತೊಲಗಿಸಿದೆಯಲ್ಲ, ಅವಳ ಸಂತಾಪ ಎಂತಹುದಿದ್ದೀತು, ಅದನ್ನೆಲ್ಲ ಆಕೆ ಹೇಗೆ ಸೈರಿಸಿಯಾಳು! ಕುಲಗೆಡುಕಿ, ಯಮರೂಪಿ, ಸೂರ್ಯವಂಶವನ್ನೇ ನೀನು ನೀರಲ್ಲದ್ದಿಬಿಟ್ಟೆಯಲ್ಲ! ಪಾತಕಿಯ ಹೊಟ್ಟೆಯಲ್ಲಿ ಹುಟ್ಟಿದ ನಾನು ಈ ಕ್ಷಣ ಮಹಾಪಾತಕಿಯಾದೆ, ನಿನ್ನನ್ನು ಕೊಂದರೂ ಅದು ದುಷ್ಟನಿಗ್ರಹ ಕಾರ್ಯವಾಗುತ್ತದೆಯೇ ಹೊರತು ಸ್ತ್ರೀಹತ್ಯೆಯೂ ಆಗದು, ಮಾತೃಹತ್ಯೆಯೂ ಆಗದು!" ಎಂದು ನಾನಾ ವಿಧದಲ್ಲಿ ಜೋರಾಗಿ ಅಳುತ್ತಿದ್ದ.

ಆ ಅಳುವಿನ ಶಬ್ದವನ್ನು ಕೇಳಿದ ಕೌಸಲ್ಯೆಯು ಭರತ ಊರಿಗೆ ಹಿಂದಿರುಗಿದನೆಂಬುದನ್ನು ಊಹಿಸಿ ಬಂದು ತನ್ನ ತೋಳುಗಳನ್ನು ಚಾಚಿ 'ಮಗನೆ, ಬಾ' ಎಂದು ಕರೆದಳು. 'ಅಗೋ ಭರತನು ಬಂದಿದ್ದಾನೆ' ಎಂದು ಸುಮಿತ್ರೆಗೆ ಹೇಳಿ ಬಾಳೆಯ ಮರದಂತೆ ಬಳುಕುತ್ತ ಬರುವುದನ್ನು ಕಂಡ ಭರತನು ಶತ್ರುಘ್ನನ ಜೊತೆಗೂಡಿ ಇದಿರೆದ್ದು ಮಾತೆಯರ

ಚರಣಗಳಿಗೆರಗಿ ನೆಲದ ಮೇಲೆ ದೊಪ್ಪನೆ ಬಿದ್ದ. ಒತ್ತಿ ಬರುತ್ತಿರುವ ದುಃಖವನ್ನು ತಡೆದುಕೊಳ್ಳಲಾರದೆ ಅಳಲುತ್ತಿರುವ ಭರತನನ್ನು ಕೌಸಲ್ಯೆಯು ಹಿಡಿದು ಮೇಲೆತ್ತಿ ಅವನ ತಲೆಯನ್ನು ಎದೆಗೊತ್ತಿಕೊಂಡು ಹೀಗೆ ಹೇಳಿದಳು: "ಪತಿಯ ಧರ್ಮಸಂಕಟವನ್ನು ನೋಡದೆ ನಿನ್ನ ತಾಯಿಯು ಅತಿಶಯವಾದ ವೈಭವವನ್ನು ಬಯಸಿ ಪುರುಷೋತ್ತಮನಾದ ಶ್ರೀರಘುವರನನ್ನೂ ವೈದೇಹಿಯನ್ನೂ ಜೊತೆಗೆ ಲಕ್ಷ್ಮಣನನ್ನೂ ಕಾಡಿಗೆ ಕಳಿಸಿ ನೀನು ದೊರೆತನವನ್ನು ಹೊಂದಿ ನಿರಂತರ ಸುಖವನ್ನು ಹೊಂದಲೆಂದು ಈ ರೀತಿ ಮಾಡಿದ್ದಾಳೆ; ನೀನು ಆಕೆಯ ಆಸೆಯಂತೆ ನಿಶ್ಚಿಂತೆಯಿಂದ ಈ ರಾಜ್ಯವನ್ನು ಸುಖದಿಂದ ಪಾಲಿಸು. ದೇವರಂತಹ ಮಗನಿಲ್ಲದೆ ನಾನು ಇಲ್ಲಿರುವುದು ತರವಲ್ಲ, ಕರುಣೆಯುಂಟಾದರೆ ನನ್ನನ್ನು ಕಾಡಿನಲ್ಲಿ ಅವನಿರುವ ಕಡೆಗೆ ಕರೆದೊಯ್ದು ಬಿಟ್ಟರೆ ಸುಖವಾಗಿರುತ್ತೇನೆ. ವಿಮಲಮತಿಯಾದ ನೀನು ನನ್ನ ಮೇಲಿನ ಪ್ರೇಮದಿಂದ ಈ ಕೆಲಸವನ್ನು ಆದಷ್ಟು ಬೇಗ ನಡೆಸಿಕೊಡು." ಆ ಸಾಧ್ವಿಯ ಮಾತುಗಳನ್ನು ಕೇಳಿದ ಭರತನಿಗೆ ಪರಿತಾಪದಿಂದ ಉರಿಯುವ ಗಾಯವನ್ನು ಸಲಾಕಿಯಿಂದ ತಿವಿದಂತಾಯಿತು; ಅವನ ಕೋಪ ಶೋಕವಾಯಿತು.

ಕೊನೆಯಿಲ್ಲದ ಹಲುಬಿಕೆಯಿಂದ ಆಕೆಯ ಪಾದಗಳಿಗೆರಗಿ ತುಂಬ ಕ್ಲೇಶದಿಂದ ಅಳುತ್ತ, "ಅಮ್ಮಾ, ಕಿಲ್ಬಿಷದ ಹಾದಿಯನ್ನು ತಿಳಿಯದ ಮುಗ್ಧನಾದ ನನ್ನನ್ನು ಈ ಪರಿಯಿಂದ ಚುಚ್ಚಬಹುದೇ? ಶ್ರೀರಾಮಚಂದ್ರನ ಪಾದಗಳಲ್ಲಿ ಅಡಗಿ ನಾನು ಆತನನ್ನು ಸೇವಿಸುತ್ತೇನೆ. ನನ್ನ ತಾಯಿಯ ಉದ್ದೇಶವನ್ನು ಬೇರೆಯವರಿಂದ ಕೇಳಲಿ, ಅವಳೇ ಹೇಳಲಿ, ಈ ಧರಣಿಯನ್ನು ಆಳಲು ಒಪ್ಪಿದರೆ ನಾನು ಪರಕ್ಕೆ ಬಾಹಿರನಾಗುತ್ತೇನೆ" ಎಂದು ನಾನಾ ಬಗೆಯಲ್ಲಿ ತನ್ನ ಋಜುತ್ವವನ್ನು ಸ್ಪಷ್ಟಪಡಿಸಲೆತ್ನಿಸಿದ; "ರಾಮನ ಪಾದಗಳಿಗೆರಗಿದಿದ್ದರೆ ಹರಕೇಶವರನ್ನು ದ್ವೇಷಿಸುವ ದೋಷ, ಗುರುನಿರಾಕರಣೆ, ಗೋವನ್ನು ಕಾಲಿನಿಂದ ಒದೆಯುವುದು, ಮೈಮರೆತು ನಿದ್ರಿಸುವವರನ್ನು ಕೊಲ್ಲುವುದು, ಪರಧನವನ್ನಪರಿಸುವುದು, ಪರಸ್ತ್ರೀಕಾಮುಕತೆ, ಮರೆವೊಕ್ಕವರನ್ನು ಶತ್ರುಗಳಿಗೊಪ್ಪಿಸುವುದು – ಇವುಗಳನ್ನು ಗೈದವನಿಗೆ ಒದಗುವ ದುರ್ಗತಿಯು ನನಗೆ ಉಂಟಾಗಲಿ! ಹಿತನೆಂದು ಗುಟ್ಟಾಗಿ ಸ್ನೇಹಿತನು ಹೇಳಿದ ಮಾತನ್ನು ಇತರರ ಮುಂದೆ ಹೇಳುವವನಿಗೆ ಯಾವ ಗತಿಯುಂಟಾಗುವುದೋ, ಸಜ್ಜನರ ಮನಸ್ಸನ್ನು ನೋಯಿಸುವವನಿಗೆ ಯಾವ ಪಾತಕ ಉಂಟಾಗುವುದೋ, ಅತಿಶಯವಾದ ಮಂತ್ರಗಳನ್ನು ಕಲಿತು ಶಾಸ್ತ್ರವನ್ನು ಮರೆತು ದುರಾಚಾರಿಯಾದವನಿಗೆ ಯಾವ ದೋಷ ಅಂಟುವುದೋ, ಅಂತಹ ಗತಿ ರಾಮನ ಪಾದಸೇವೆಯನ್ನು ಮಾಡದಿದ್ದರೆ ನನಗೆ ಉಂಟಾಗಲಿ! ನಂಬಿಸಿ ವಿಷವುಣಿಸುವವನಿಗೆ, ನಗುತ್ತಲೇ ಬೆಂಕಿಯಿಕ್ಕುವವನಿಗೆ, ಮೋಸದಿಂದ ಪರರ ಆಸ್ತಿಯನ್ನು ಕಬಳಿಸುವವನಿಗೆ ಯಾವ ಗತಿಯುಂಟಾಗುವುದೋ; ಕಷ್ಟದಲ್ಲಿರುವಾಗ ಉಂಬಳಿಯನ್ನಿತ್ತು ಕಾಪಾಡಿದವನನ್ನು, ಕ್ಷಾಮದಲ್ಲಿ ಪೊರೆದವನನ್ನು ಮರೆದವರಿಗೆ ಯಾವ ಗತಿ ಬರುವುದೋ, ರಾಮನನ್ನು ಮರೆತರೆ, ನನಗೆ ಅಂತಹ ಗತಿಯೊದಗಲಿ! ಹೆಂಡತಿಮಕ್ಕಳನ್ನು ಬಿಟ್ಟು ಮೃಷ್ಟಾನ್ನ ಭೋಜನವನ್ನುಂಡವನಿಗೆ, ಅತಿಥಿಗಳನ್ನು ಬಿಟ್ಟು ಊಟಮಾಡುವವನಿಗೆ, ಕಾಮುಕತನದಿಂದ ಹೆಂಡ ಕುಡಿದು ಪರಸ್ತ್ರೀಯೊಡನೆ ಬೆರೆತವನಿಗೆ ಯಾವ ಗತಿ ತಪ್ಪುವುದಿಲ್ಲವೋ ಅಂತಹ ಗತಿ ರಾಮನಿಗೆ ಎರಡು ಬಗೆದರೆ

ನನಗುಂಟಾಗಲಿ! ದುರ್ಬಲರಾದ ತಾಯಿತಂದೆಯರನ್ನು ಮನೆಯಿಂದ ಹೊರಗಟ್ಟಿದರೆ, ಋತುಸ್ನಾತಳಾದ ಹೆಂಡತಿಯನ್ನು ಕಡೆಗಣಿಸಿದರೆ, ಖೂಳನಾಗಿ ರಾಜದ್ರೋಹವೆಸಗಿದರೆ, ಮಾಂಸ, ಲೋಹ, ಅರಗು ಮುಂತಾದವುಗಳನ್ನು ಮಾರಿ ಸಂಸಾರ ಹೊರೆಯುತ್ತಿದ್ದರೆ, ಸೂರ್ಯನಿಗೆ ಅಭಿಮುಖವಾಗಿ ಮಲಮೂತ್ರಗಳನ್ನು ವಿಸರ್ಜಿಸಿದರೆ ಬರುವ ಪಾಪವು ಅಣ್ಣನನ್ನು ಕಡೆಗಣಿಸಿದರೆ ನನಗೆ ಉಂಟಾಗಲಿ! ಮುಖವನ್ನು ಮೇಲೆತ್ತಿ ಬೇಡುವವನನ್ನು ತಿರಸ್ಕರಿಸಿದವನಿಗೆ, ತನ್ನನ್ನು ಹೊಗಳಿ ಇತರರನ್ನು ನಿಂದಿಸುವ ನಾರಕಿಗೆ, ಕುಡಿಯುವ ನೀರನ್ನು ದ್ವೇಷದಿಂದ ಕೆಡಿಸುವವನಿಗೆ, ತನ್ನ ಕರ್ತವ್ಯವನ್ನು ಮರೆತ ಬ್ರಾಹ್ಮಣನಿಗೆ ಯಾವ ದುರ್ಗತಿ ಪ್ರಾಪ್ತವಾಗುತ್ತದೆಯೋ ಅಂತಹುದು – ಅಣ್ಣನಿಗೆ ಕೆಟ್ಟುದಾಗಲೆಂದು ಬಯಸಿದರೆ – ನನಗೂ ಬರಲಿ! ಯುದ್ಧರಂಗದಲ್ಲಿ ಹೆದರಿಕೆಯಿಂದ ಹೇಡಿಯಾಗಿ ಪಲಾಯನ ಮಾಡುವವನಿಗೂ, ಯುದ್ಧಭೀತಿಯಿಂದ ಶರಣಾಗುವವನನ್ನು ಹೊಡೆಯುವವನಿಗೂ, ಬರುವ ಪಾತಕವು, ಮಹಾರಾಜನಿಗೆ ಕೇಡನ್ನು ಬಯಸಿದರೆ ನನಗುಂಟಾಗಲಿ" ಎಂದು ಅತಿ ದುಃಖದಿಂದ ಕ್ರೂರ ಶಪಥಗಳನ್ನು ಮಾಡಿ ಬಸವಳಿದು ನೆಲದ ಮೇಲೆ ಬಿದ್ದ ಮಗನನ್ನು ಕಂಡ ಕೌಸಲ್ಯೆಯು ಅವನನ್ನು ತಕ್ಕೈಸಿಕೊಂಡು ಉಪಚರಿಸಿದಳು. "ಮರೆತು ಕೂಡ ನೀನು ಎಂದಿಗೂ ಧರ್ಮದಿಂದ ದೂರ ಸರಿದುದಿಲ್ಲ, ಬಾಲಕನೇ, ನಿನ್ನ ಮನಸ್ಸನ್ನು ನಾನು ಬಲ್ಲೆ. ಮರುಗಿ ಮಾಡುವುದೇನು? ವಿಧಿಕೃತವನ್ನು ಮೀರುವುದು ಈ ಜಗತ್ತಿನಲ್ಲಿ ಯಾರಿಂದಲಾದರೂ ಶಕ್ಯವೇ? ನೀನು ಪರಮ ಧಾರ್ಮಿಕಮೂರ್ತಿ, ಸುಮ್ಮನೆ ಶೋಕಿಸುತ್ತ ಕೂತರೇನು ಫಲ?" ಎಂದು ಸಂತೈಸುವಷ್ಟರಲ್ಲಿ ರಾತ್ರಿಯಾಯಿತು.

ಮೂಡಣದಲ್ಲಿ ನೇಸರು ಮೂಡಿದ. ದ್ವಿಜೋತ್ತಮರೊಡನೆ ವಸಿಷ್ಠ ಮಹರ್ಷಿಯು ಬಂದು ಭರತನನ್ನು ನೋಡಿ, ಸಂಕಟಗೊಳ್ಳುವುದನ್ನು ನಿಲ್ಲಿಸಿ ಮುಂದೆ ಆಗಬೇಕಾಗಿರುವ ಕಾರ್ಯವನ್ನು ನಡೆಸಬೇಕೆಂದು ಮನಸ್ಸಿನಲ್ಲಿ ಆಲೋಚನೆ ಮಾಡಿ ಪ್ರೀತಿಯಿಂದ ಹೀಗೆಂದ: "ಬಾಲಕ, ವತ್ಸ, ಇದೇನು ಕಾರಣದಿಂದ ನೀನು ಪ್ರಲಾಪಿಸುತ್ತಿರುವೆ? ಮನುಷ್ಯರಿಗೆ ಸಂಭವಿಸುವುದನ್ನು ಈ ಜಗತ್ತಿನಲ್ಲಿ ನಿಲ್ಲಿಸುವುದು ಸಾಧ್ಯವೇ? ಎಲ್ಲ ಸುಖಗಳನ್ನೂ ಅನುಭವಿಸಿ ಶ್ರುತ್ಯನುಗುಣವಾಗಿ ಎಲ್ಲ ಯಾಗಗಳನ್ನೂ ಮಾಡಿ, ಹದಿನಾರು ಬಗೆಯ ಮಹಾದಾನ ಪರಂಪರೆಯಿಂದ ದೇವತೆಗಳನ್ನೆಲ್ಲ ಸಂತುಷ್ಟಿಗೊಳಿಸಿ, ಯೋಗೀಶನಾದ ರಾಮನನ್ನು ಪಡೆದು ಇಂದ್ರಲೋಕದ ಭೋಗಗಳನ್ನು ಅನುಭವಿಸುವ ಇಚ್ಛೆಯಿಂದ ಹೋಗಿರುವ ಯಶೋರಾಶಿಯ ನೆಲೆಯಾದವನನ್ನು ನೆನೆದು ರೋದಿಸುವುದು ವ್ಯರ್ಥವಲ್ಲವೇ? ಅವಿಶುದ್ಧಾತ್ಮರ ಹುಟ್ಟುಸಾವುಗಳಿಗೆ ಕೊನೆಯಿಲ್ಲ, ಎಷ್ಟು ಮಂದಿ ದೇಹಿಗಳಿದ್ದಾರೆಯೋ ಅವರೆಲ್ಲರೂ ಅನಿತ್ಯರೇ. ಇದನ್ನು ಅರಿಯದೆ ಅಮಿತ ದುಃಖಗಳಿಗೊಳಗಾಗಿ ಕೊರಗುವ ಮೂಢಜನರಿಗೆ ಏನನ್ನು ತಾನೇ ಹೇಳಬಹುದು? ಆತ್ಮನು ಬಿಟ್ಟು ಹೋದ ದೇಹವನ್ನು ನೋಡುತ್ತ ಗೋಳಾಡುವುದು ವಿನೋದವಾಗಿ ಕಾಣುತ್ತದೆ, ಹಾಗೆ ಬಳಲುವುದು ನಿರರ್ಥಕವಲ್ಲವೇ? ಹುಟ್ಟಿದ ಮೇಲೆ ಸ್ವರ್ಗನರಕಗಳ ದಾರಿಯನ್ನು ತುಳಿದಲ್ಲದೆ ತೀರದು; ಅಲ್ಲಿಂದ ಮರಳಿ ಬಂದು ದೇಹ ಹೊತ್ತು ಮನುಷ್ಯನೆನಿಸುತ್ತಾನೆ. ಈ ಸತ್ಯವನ್ನು ಅರಿತು ತಲೆ ಚಚ್ಚಿಕೊಂಡು ಅಳುವುದು ಅನ್ಯಾಯ. ಕೊನೆಯಿಲ್ಲದ ದಾರಿಯನ್ನು ನೋಡು,

ಅದಕ್ಕೇನಾದರೂ ದುಃಖವಿದೆಯೇ ಎಂದು ತಿಳಿದು ಪಂಡಿತರಾದವರು ಹೋದ ಶರೀರಗಳ ಬಗ್ಗೆ ಯೋಚಿಸುವುದಿಲ್ಲ. ಆತ್ಮನು ಹಿಂದೆ ಮಾಡಿದ ಪಾಪಪುಣ್ಯಗಳ ಬಲದಿಂದ ದೇಹ ಪ್ರಾಪ್ತಿಯಾಗುತ್ತದೆ, ಆನಂತರ ಅದ್ಭುತವೆನಿಸುವ ಸುಖದುಃಖಗಳನ್ನು ಅನುಭವಿಸುತ್ತಾನೆ, ಆ ದೇಹ ಸವೆದು ಹೋಗಲು ಅದನ್ನು ಬಿಟ್ಟು ಮತ್ತೊಂದು ಹೊಸ ದೇಹವನ್ನು ಹೊಂದುತ್ತಾನೆ. ಈ ಪರಿಯಲ್ಲಿ ಎರಡೂ ಬಗೆಯ ನಷ್ಟ ಸಂಭವಿಸುತ್ತದೆ, ಇದು ಸತ್ಯವಾಗಿರಬೇಕಾದರೆ, ಸಂಬಂಧವೇ ತಿಳಿಯದಿರುವಾಗ ಯಾರಿಗಾಗಿ ಯಾರು ಶೋಕಿಸಬೇಕು? ಜೀವನಿಗೆ ಶರೀರಸಂಗಮವಾದ ಮೇಲೆ ಬಾಲ್ಯ ಯೌವನಗಳು ತೋರಿ ಮುಪ್ಪು ಅಡಸುತ್ತದೆ, ಆನಂತರ ಮತ್ತೊಂದು ದೇಹವನ್ನು ಹಿಡಿಯುತ್ತಾನೆ. ಅದೇ ಸತ್ಯ, ಆದ್ದರಿಂದ ಹೋದ ದೇಹವನ್ನು ನೆನೆಸಿಕೊಂಡು ತೊಳಲುವುದು ಸರಿಯಲ್ಲ. ಧೀರಾತ್ಮನೇ ಕೇಳು, ಆತ್ಮಕ್ಕೆಂದಿಗೂ ಸಾವುಹುಟ್ಟುಗಳು ಕಾಣಿಸುವುದಿಲ್ಲ; ಷಡ್ಭಾವಗಳು ಆನಂದ ರುಚಿ ಬುದ್ಧಿ ಮುಂತಾದವುಗಳ ಲೇಪವಿಲ್ಲದ ಸಾಕ್ಷಿಗೆ ಜನನಮರಣಗಳುಂಟೇ? ಆತ್ಮನು ನಿರತಿಶಯವಾದ ಆನಂದಮಯನೆಂದು ತಿಳಿದು, ಅಹಂಕಾರವುಳ್ಳ ಅನಿತ್ಯ ದೇಹದ ಅಭಿಮಾನವನ್ನು ಹೊಂದದೆ, ಅನುದಿನವೂ ನಿತ್ಯಸುಖದಲ್ಲಿರುವುದನ್ನು ಬಿಟ್ಟು ಪ್ರಾರಬ್ಧವಶವಾದ ನಂತರ ಕಲ್ಪಿತ ಭ್ರಾಂತಿಯಿಂದ ಮರುಗಿದರೇನು ಬಂತು? ಆತ್ಮನು ಜನನಮರಣದ ಬಾಧೆಗಳುಕದ ಚಿನ್ಮಯಾನಂದ ಎಂಬುದನ್ನು ತಿಳಿದು ನೋಡಿದರೆ ಪರಮಸುಖವು ಲಭಿಸುತ್ತದೆ" ಎಂದು ಗುರುವರನು ನುಡಿದ ಸಾರಭರಿತ ಮಾತುಗಳ ಔಷಧವು ಘಮ್ಮನೆ ಮಹಾಶೋಕವೆಂಬ ರುಜೆಯನ್ನು ಹೋಗಲಾಡಿಸಲು ಭರತನು ಸಮಾಧಾನ ಹೊಂದಿದ. ಮನಸ್ಸಿನ ತಾಪವು ಥಟ್ಟನೆ ತೊಲಗಲು ಅಂತರಂಗವು ನಿರ್ಮಲವಾಯಿತು. ಆಮೇಲೆ ಹೊಟ್ಟೆ ಹೊಸೆದುಕೊಂಡು ಅಳುವುದು, ಅದು ಇದ್ದುದೇ ಹುಸಿ ಎಂಬಂತೆ, ಎಲ್ಲಿ ಹೋಯಿತೋ!

ಹೀಗೆ ಮಹಾಮುನಿಯ ನುಡಿಯಿಂದ ನಿರ್ಮಲನಾದ ಭರತನು ಅವರ ಅಡಿಗಳಿಗೆರಗಿ ತಾನು ಮುಂದೆ ಮಾಡಬೇಕಾದ ಕರ್ತವ್ಯವನ್ನು ತಿಳಿಸಿರೆಂದು ಕೇಳಿಕೊಂಡನು. "ಎಣ್ಣೆಯ ಕೊಪ್ಪರಿಗೆಯಲ್ಲಿಟ್ಟಿರುವ ಪೊಡವಿಪತಿಯ ಶರೀರವನ್ನು ಹೊರತೆಗೆದು ಶಾಸ್ತ್ರೋಕ್ತವಿಧಿಗನುಗುಣವಾಗಿ ಉತ್ತರಕ್ರಿಯೆಗಳನ್ನು ನೆರವೇರಿಸು. ತಡಮಾಡಲು ಇದು ಸಮಯವಲ್ಲ" ಎಂದು ಮುನಿತಿಲಕನು ನುಡಿಯಲು ಭರತನು ಧೈರ್ಯ ತಂದುಕೊಂಡು ಎಣ್ಣೆಯ ಕೊಪ್ಪರಿಗೆಯಿಂದ ದಶರಥನ ದೇಹವನ್ನು ಹೊರತೆಗೆದು ರತ್ನಮಯವಾದ ಹಾಸಿಗೆಯಲ್ಲಿ ಕುಳ್ಳಿರಿಸಿ ಅಲಂಕಾರ ಮಾಡಿದ ರೀತಿಯನ್ನು ಕಂಡು ಭರತನು ಮತ್ತೆ ಗೋಳಾಡಿದ. "ನನ್ನನ್ನು ಸೋದರಮಾವನ ಮನೆಗೆ ಕಳಿಸಿ ರಘುವೀರನನ್ನು ಖಿನ್ನಮಾನಸನನ್ನಾಗಿಸಿ ಕಾಡಿಗಟ್ಟಿ ಯಾರೂ ಅರಿಯದ ಈ ಪರಿಯಲ್ಲಿ ಕೊನೆಯುಸಿರೆಳೆದೆಯೆಲ್ಲ ಭೂಪಾಲತಿಲಕ" ಎಂದು ತಂದೆಯ ಗುಣಕರ್ಮಗಳನ್ನು ನೆನೆಸಿಕೊಂಡು ಅಳುವ ಹುಡುಗನನ್ನು ನೋಡಿ ವಸಿಷ್ಠನು ಪ್ರೀತಿಯಿಂದ, "ಎಲೈ ಮಗು, ಶೋಕವನ್ನು ಬಿಟ್ಟು ತಂದೆಯ ಪ್ರೇತಕಾರ್ಯಗಳನ್ನು ನೆರವೇರಿಸು" ಎಂದು ಹೇಳಿ ಆಚಾರ್ಯ ಋತ್ವಿಕ್ ಪುರೋಹಿತಸಂದೋಹವನ್ನು ಕರೆಸಿ. ಬೆಂಕಿಯನ್ನು ತಂದಿರಿಸಲು ಆದೇಶಿಸಿದ. ಕ್ರತುಭುಜನನ್ನು ಹೊರಗಿರಿಸಿ ಕ್ಷಿತಿಪತಿಯನ್ನು ಶಿಬಿಕೆಯಲ್ಲಿ ಮಲಗಿಸಿ.

ಮುಂದೆ ನಾನಾ ಬಗೆಯ ತಮ್ಮಟೆ ಭೇರಿ ಮುಂತಾದ ವಾದ್ಯಗಳು ಭೋರ್ಗರೆಯುತ್ತಿರಲು, ಜನರು ಚಿನ್ನ ಬೆಳ್ಳಿಯ ನಾಣ್ಯಗಳನ್ನೂ ಹೂಗಳನ್ನೂ ಎರಚುತ್ತಿರಲು, ರಾಜಧಾನಿಯ ಅತಿಶಯವಾದ ಬೀದಿಗಳಲ್ಲಿ ಸಾಗಿ ಸರಯೂ ನದಿಯ ದಡಕ್ಕೆ ಬರಲು, ಅಲ್ಲಿ ಸುಗಂಧಭರಿತವಾದ ಅಗರು ಚಂದನ ದೇವದಾರುಗಳಿಂದ ಕೂಡಿದ ಚಿತೆಯನ್ನು ನಿರ್ಮಿಸಿ, ಜಪ ಮಾಡಿ, ಸಾಮಗಾನವನ್ನು ಹಾಡಿ, ಶಾಸ್ತ್ರೋಕ್ತವಾಗಿ ಶ್ರೌತವಿಧಿಯನ್ನು ಮೀರದಂತೆ ಅಗ್ನಿಸಂಸ್ಕಾರವನ್ನೆಸಗಿದರು. ಅದನ್ನು ನೋಡಿ ಅಂತಃಪುರಸ್ತ್ರೀಯರು ತಮ್ಮ ಎದೆಗಳಲ್ಲಿ ಮಡುಗಟ್ಟಿದ್ದ ದುಃಖವನ್ನು ಅಳುವಿನ ಮೂಲಕ ಹೊರಹೊಮ್ಮಿಸಿದರು. ಅಷ್ಟರಲ್ಲಿ ಮುನಿಶ್ರೇಷ್ಠನಾದ ವಸಿಷ್ಠನು ಬಂದು ಅವರನ್ನೆಲ್ಲ ಸಮಾಧಾನಪಡಿಸಿ ನದಿಯಲ್ಲಿ ಮುಳುಗಿ ಸ್ನಾನಮಾಡುವಂತೆ ಹೇಳಿ ತರ್ಪಣೋದಕವನ್ನು ನೀಡಿಸಿ ಬೇಗ ನಗರಪ್ರವೇಶವನ್ನು ಮಾಡಿಸಿದ. ಹತ್ತು ದಿನಗಳು ಕಳೆದ ಬಳಿಕ ಪರಮಭಕ್ತಿಯಿಂದ ಶ್ರಾದ್ಧಕರ್ಮಗಳನ್ನು ನೆರವೇರಿಸಿ ನಾನಾ ಬಗೆಯ ವಸ್ತ್ರಾಭರಣಗಳನ್ನೂ ಗೋವುಗಳನ್ನೂ ಧನಧಾನ್ಯಗಳನ್ನೂ ಭೂಮಿಯನ್ನೂ ಭೂಸುರರಿಗೆ ದಾನಮಾಡಿದರು. ಗುರುವಿನ ಆಣತಿಯಂತೆ ಪಿತೃಕಾರ್ಯವನ್ನೆಲ್ಲ ಪರಮಭಕ್ತಿಯಿಂದ ಸಾಂಗೋಪಾಂಗವಾಗಿ ನೆರವೇರಿಸಿದ ಭರತನು ಶತ್ರುಘ್ನನೊಡನೆ ಸಂಕಟದಿಂದ ಬೇರೇನನ್ನೂ ನೆನೆಯದೆ ಎಷ್ಟು ಬೇಗ **ಸಿರಿರಾಮಪುರದರಸ**ನ ಚರಣದ್ವಯಗಳನ್ನು ಕಾಣುವೆನೋ ಎಂದು ಅಂದಿನ ಇರುಳನ್ನು ಕಳೆದ.

೨೬. ತನಗೆ ಪಟ್ಟಕಟ್ಟುವುದನ್ನು ಒಲ್ಲದ ಭರತನು ರಘುವೀರನ ಚರಣಗಳನ್ನು ಕಾಣಲು ಕಾಡಿಗೆ ಹೋದುದು

ತಂದೆಗೆ ಮಾಡಬೇಕಾದ ಅಪರವಿಧಿಗಳನ್ನೆಲ್ಲ ಯತಿವರ್ಯನು ಹೇಳಿದ ಹಾಗೆ ಮಾಡಿ ಮುಗಿಸಿದ ಭರತನು ಹಿತಬಂಧುಗಳೊಡನೆ ಮೌನದಿಂದ ಕುಳಿತಿರುವಾಗ ಶತ್ರುಘ್ನನು ತಂದೆಯ ಗುಣಗಳನ್ನು ನೆನೆಸಿಕೊಂಡು ಅತಿ ದುಃಖದಿಂದ ಕೊರಗುತ್ತಿದ್ದ. ಮೋಹ ಎಂಬುದು ಜೀವಗಳನ್ನು ಬಿಟ್ಟಿರಲಾಪುದೇ? "ನಾನು ಒಂದು ನಿಮಿಷ ಕಣ್ಣಿಗೆ ಕಾಣಿಸದಿದ್ದರೆ ಅಪ್ಪನು ಎಲ್ಲರನ್ನೂ ಕೇಳಿ ಹುಡುಕಿಕೊಂಡು ಬಂದು ಎಷ್ಟು ಅಲಂಕಾರಗಳನ್ನು ಮಾಡಿ ಮುದ್ದುಗೈದರೂ ತೃಪ್ತನಾಗುತ್ತಿರಲಿಲ್ಲ; ಇದು ಅವನ ನಿತ್ಯದ ದಿನಚರಿ. ಅವನ ಉಪಚಾರದಿಂದಲೇ ನಾನು ಬೆಳೆದೆ, ಅಂತಹ ತಂದೆಯು ತೀರಿಕೊಂಡ, ಅಣ್ಣನು ಕಾಡಿಗೆ ಹೋದ, ಹೀಗಿರಬೇಕಾದರೆ ನಮ್ಮನ್ನಾರು ಗಮನಿಸುವವರು? ಕೇಳುವವರಿಲ್ಲದ ಸ್ಥಳದಲ್ಲಿ ಹೇಗಿರುವುದು?" ಎಂದು ಶತ್ರುಘ್ನನು ಅಪರಿಮಿತ ದುಃಖದಿಂದ ಶೋಕಿಸಿದ. ಅವನನ್ನು ಸಂತೈಸಲು ಬಳಿ ಹೋದ ಭರತನೂ ದುಃಖವನ್ನು ತಾಳಿಕೊಳ್ಳಲಾರದೆ ಕ್ಲೇಶಕ್ಕೊಳಗಾದ. ಆಗ ವಸಿಷ್ಠನು ಕಕ್ಕುಲತೆಯಿಂದ ಅವನನ್ನು ಅಪ್ಪಿಕೊಂಡು ಸಾಂತ್ವನ ಹೇಳಿ, "ನಿನ್ನ ವಿವೇಕಕ್ಕೆ ಎಣೆಯಿಲ್ಲದಂತಹ ಮೋಹ ಅಂಟಿಬಿಟ್ಟಿದೆ, ಅದರಿಂದ ನಿಜತತ್ವ ನಿನಗೆ ಕಾಣಿಸುತ್ತಿಲ್ಲ. ಎಷ್ಟೇ ಆದರೂ ದುಃಖತ್ರಯಗಳನ್ನು (ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ) ಪರಿಹರಿಸಲು ಜನರಿಗೆ ಸಾಧ್ಯವಿಲ್ಲ, ಹಾಗಾಗಿ ಆ ಕುರಿತು ಬರಿದೆ ಚಿಂತಿಸುತ್ತ

ಕೂತರೆ ಏನು ಬಂದೀತು? ಇದು ಬದುಕಿನ ಸತ್ಯಗಳು. ಮನುಮುನಿಜನರೆಲ್ಲರೂ ಅಂತಹ ದುಸ್ಸಹ ದುಃಖಗಳನ್ನು ಸಹಿಸಿಕೊಂಡು ಅನುಭವಿಸುತ್ತಿದ್ದಾರೆ. ಆದ್ದರಿಂದ ನಿನ್ನ ಕಲ್ಪಿತಭ್ರಾಂತಿಯನ್ನು ದೂರಸರಿಸಿ ಮುಂದೆ ನಡೆಯಬೇಕಾದ ಕಾರ್ಯಗಳ ಬಗ್ಗೆ ಗಮನ ಹರಿಸುವುದು ಲೇಸು" ಎಂದು ತಿಳಿಹೇಳಿದ. ಗುರುವು ಹೇಳಿದ ಮಾತಿನ ತಥ್ಯವನ್ನು ಅರ್ಥಮಾಡಿಕೊಂಡ ಭರತನು ಸಮಾಧಾನ ಮಾಡಿಕೊಂಡು ಶತ್ರುಘ್ನನನ್ನು ನೋಡಿ ಅವನನ್ನು ಸಮಾಧಾನಪಡಿಸಿ ಹೀಗೆಂದು ನುಡಿದ: "ಸ್ವರ್ಗಕ್ಕೆ ಹೋದ ತಂದೆಯನ್ನು ನೆನೆಸಿಕೊಂಡೇನು ಪ್ರಯೋಜನ? ತಂದೆಯು ನಮಗೆ ಪರದೈವ ಎಂಬುದು ನಿಜವೇ. ತಂದೆಯ ಸ್ಥಾನದಲ್ಲಿರುವ ರಘುವೀರನಿರುವ ಜಾಗಕ್ಕೆ ಹೋಗಿ ಇಲ್ಲಿನ ಎಲ್ಲ ವೃತ್ತಾಂತಗಳನ್ನೂ ಹೇಳಿ ಅವನು ಏನು ಹೇಳುವನೋ ಹಾಗೆ ನಡೆದುಕೊಳ್ಳೋಣ. ಅವನಿರಬೇಕಾದರೆ ನಮಗೇತಕ್ಕೆ ಭಯ?" ಶತ್ರುಘ್ನನೂ ಅತಿ ಕಷ್ಟದಿಂದ ಅಳುವನ್ನು ನಿಲ್ಲಿಸಿದ.

ಊರು ಬಂದು ಸೇರಿದ ಮೇಲೆ ಅರಮನೆಯನ್ನು ಹೊಗುವಷ್ಟರಲ್ಲಿ ಅಂತಃಪುರದ ಬಾಗಿಲ ಹತ್ತಿರ ಶೃಂಗಾರ ಮಾಡಿಕೊಂಡ ಗೂನಿ ಮಂಥರೆಯು ಕಾಣಿಸಿದಳು. ಅವಳನ್ನು ಕಂಡೊಡನೆಯೇ ಭರತನ ಕೋಪ ನೆತ್ತಿಗೇರಿತು, ನಡೆದ ಅನರ್ಥಗಳಿಗೆಲ್ಲ ಇವಳೇ ಸೂತ್ರಧಾರಿ ಎಂದು ಸೂಚಿಸಲು ಶತ್ರುಘ್ನನು ಸರ್ರನೆ ಹೋಗಿ ಅವಳ ಮುಂದಲೆಯನ್ನು ಹಿಡಿದು ಒಂದೆರಡು ಒದೆತಗಳನ್ನು ಕೊಟ್ಟ. ಹೀಗೆ ಒದೆಯುವುದನ್ನು ನೋಡಿದ ಅಂತಃಪುರಸ್ತ್ರೀಯರು ಭಯಗೊಂಡು ದಿಕ್ಕಾಪಾಲಾಗಿ ಓಡಿಹೋದರು. ಮಂಥರೆಯು ನೆಲದ ಮೇಲೆ ಬಿದ್ದು ಹೊರಳಾಡುತ್ತ ಭೋರೆಂದು ಕೂಗುತ್ತ ರಚ್ಚೆಮಾಡಿದಳು. ಅದನ್ನು ನೋಡಿದ ಕೈಕೇಯಿಯು ಬಂದು ಅವಳನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಲು ಶತ್ರುಘ್ನನು ಕೋಪದಿಂದ "ಖೋಡಿ, ಕುಲಗೆಡುಕಿ, ಈ ಕ್ಷಣವೇ ನಿನ್ನನ್ನು ತರಿದುಹಾಕುತ್ತೇನೆ" ಎಂದು ಆರ್ಭಟಿಸಲು ಅವಳೂ ಭೀತಳಾದಳು. ಹೀಗೆ ಶತ್ರುಘ್ನ ಕ್ರೋಧಾತಿರೇಕಕ್ಕೊಳಗಾಗಲು, ತೊಂದರೆ ಬಂತೆಂದು ಕೈಕೇಯಿಯು ಭರತನನ್ನು ಮೊರೆವೊಗಲು ಅಲ್ಲಿಗೆ ಬಂದು ತಾಯಿಯನ್ನು ಹೊಡೆಯಲು ಉದ್ಯುಕ್ತನಾದ ತಮ್ಮನಿಗೆ ಭರತನು ನಯದಿಂದ, "ಈ ದುಷ್ಟೆಯನ್ನು ತರಿದು ಹಾಕುವುದು ಉಚಿತವಲ್ಲ; ಹೆಂಗಸರಿಗೆ ತೊಂದರೆ ಕೊಡುವವರೆಂದು ಅಣ್ಣನು ಅತಿ ಕೋಪಗೊಂಡು ನಮ್ಮನ್ನು ದುರ್ಮೇಧರೆಂದು ತಿರಸ್ಕರಿಸಿದರೆ ಗತಿಯೇನು? ಹೀಗಾಗಿ ತಡೆದುಕೋ" ಎಂದು ಹೇಳಿದ. ಅಬಲೆಯರನ್ನು ಕೊಲ್ಲುವುದು ಧರ್ಮಸಮ್ಮತವಲ್ಲ ಎಂದು ಭರತನು ತಿಳಿಹೇಳಲು ಶತ್ರುಘ್ನನು ತನ್ನ ಕೋಪವನ್ನು ಹಿಡಿತದಲ್ಲಿರಿಸಿಕೊಂಡ; ಅಷ್ಟರಲ್ಲಿ ಕೈಕೇಯಿಯು ಸರಕ್ಕನೆ ನೆಲದ ಮೇಲೆ ಬಿದಿದ್ದ ಕುಬ್ಜೆಯನ್ನೆತ್ತಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಅವಳ ಆಭರಣಗಳನ್ನು ಲೆಕ್ಕಿಸದೆ ಅಂತಃಪುರಕ್ಕೆ ಕರೆದೊಯ್ದಳು.

ದಶರಥನು ಸತ್ತು ಹದಿಮೂರು ದಿನಗಳು ಕಳೆದವು. ಇಂದು ತನ್ನ ಕುಲದ ಏಳ್ಗೆಯುಂಟಾಗುವುದೆಂಬ ಸಂತಸದಿಂದ ಸೂರ್ಯನು ಉದಯಿಸಲು ಹದಿನಾಲ್ಕನೆಯ ದಿನ ಆರಂಭವಾಯಿತು. ಅರಮನೆಗೆ ಬಂದ ಗುರು ವಸಿಷ್ಠನು ಭರತನು ಇನ್ನು ದೊರೆಯ ಅಧಿಕಾರವನ್ನು ಪಡೆದು ಎಲ್ಲರನ್ನೂ ಪಾಲಿಸುವುದು ಸೂಕ್ತ ಎಂಬ ಭಾವನೆಯಿಂದ. ಆಗಮಜ್ಞರು ಪಂಡಿತರು ಧೀಮಂತರು ಸಾಮಾಜಿಕರು ಮತ್ತು ಅರಮನೆಯಲ್ಲಿದ್ದ

ಹಿತವರಿರೆಲ್ಲರಿಗೂ ಹೇಳಿಕಳಿಸಲು ಎಲ್ಲರೂ ಅರೆನಿಮಿಷದಲ್ಲಿ ಬಂದು ಸೇರಿದರು. ಸೇರಿದ್ದ ಪ್ರಾಜ್ಞರೆಲ್ಲರೂ ತಮ್ಮತಮ್ಮಲ್ಲಿ ಆಲೋಚನೆಯನ್ನು ಮಾಡಿ ಪಟ್ಟಾಭಿಷೇಕವನ್ನು ನೆರವೇರಿಸಲು ಬೇಕಾದ ಆನೆ ಕುದುರೆ ರಥ ರತ್ನ ಮಾಲ್ಯ ಮುಂತಾದವನ್ನೆಲ್ಲ ತರಿಸಿ, ಸಂತೋಷದಿಂದ ಕೂಡಿ ಭರತನನ್ನು ಕರೆದು, "ಅಯ್ಯ, ತಂದೆ ದೇವೇಂದ್ರನ ಬಳಿ ಹೋದ, ನಿನ್ನ ಅಣ್ಣ ಚಿತ್ರಕೂಟದಲ್ಲಿದ್ದಾನೆ. ದೊರೆಯಿಲ್ಲದ ರಾಷ್ಟ್ರವು ಅಪಾಯಗಳನ್ನೆದುರಿಸುತ್ತದೆ. ಅದನ್ನು ತಪ್ಪಿಸಲು ನೀನು ರಾಜನಾಗಬೇಕು. ಕುಲಪರಂಪರೆಯಿಂದ ಸಾಗಿ ಬಂದ ರಾಜಧರ್ಮವನ್ನು ಬಿಡದೆ ಪಟ್ಟದರಸನೆನ್ನಿಸಿಕೊಂಡು ಲೋಕವನ್ನು ಪರಿಪಾಲಿಸು, ತಡಮಾಡುವುದು ಸರಿಯಲ್ಲ" ಎಂದು ಕುಲವೃದ್ಧರೇ ಮೊದಲಾದವರೂ ಬಂಧುಗಳೂ ಹೇಳಿದರು. ಆಗ ಭರತನು, "ಹಿರಿಯನಾದ ರಾಘವನನ್ನು ರಾಜನಾಗಿ ಮಾಡಬೇಕಲ್ಲದೆ ಬೇರೆಯವನನ್ನು ಸಿಂಹಾಸನದಲ್ಲಿ ಕೂಡಿಸುವುದು ತರವಲ್ಲ. ವೈಭವದಿಂದ ಕೀರ್ತಿ ಬರುವುದಿಲ್ಲ. ಅರಸುತನ ಹಿರಿಯನ ಸ್ವತ್ತು, ತಮ್ಮಂದಿರಿಗೆ ಅವನ ಸೇವೆ ಹಕ್ಕು. ಇದು ನಮ್ಮ ಗೋತ್ರದವರು ಪಾಲಿಸಿಕೊಂಡು ಬಂದ ರಾಜಧರ್ಮ. ನಮ್ಮ ಕುಲಪರಂಪರೆಯನ್ನು ತಿಳಿದೂ ಸನ್ಮಾರ್ಗವನ್ನು ತೊರೆದು ನನಗೆ ಪಟ್ಟವನ್ನು ಕಟ್ಟುತ್ತೇವೆಂದು ಪ್ರೀತಿಯಿಂದ ನುಡಿಯುವ ನಿಮ್ಮ ಮಾತಿಗೆ ಏನೆನ್ನಬೇಕು? ದಿನಕರವಂಶದ ಸಚ್ಚರಿತೆಯನ್ನು ಮೀರಿ ನಡೆದುಕೊಂಡರೆ ಶ್ರೇಯಸ್ಸು ಉಂಟಾಗುವುದೇ? ಇದೇನೂ ಪರಮ ಪಂಡಿತರಾದ ನಿಮಗೆ ತಿಳಿಯದ್ದೇನಲ್ಲ. ಇವತ್ತೇ ನಾನು ಹೋಗಿ ರಘುನಂದನನ ಚರಣಗಳನ್ನು ಹಿಡಿದು ಕರೆತಂದು, ತಾಯಿಯ ಕಾರಣದಿಂದ ಉಂಟಾದ ಶತಾಪರಾಧಗಳನ್ನು ಪರಿಹರಿಸಿ ರಾಜ್ಯವನ್ನು ಒಪ್ಪಿಸಿಕೊಟ್ಟು ಅವನ ಸೇವೆಯಲ್ಲಿ ನಿಲ್ಲುತ್ತೇನೆ" ಎಂದು ಹೊರಡಲು ಸಿದ್ಧನಾದ.

ಭರತನ ನುಡಿಗಳನ್ನು ಕೇಳಿ ನೆರೆದಿದ್ದವರೆಲ್ಲರ ಕಣ್ಣುಗಳಲ್ಲಿ ಆನಂದಾಶ್ರುಗಳು ತುಳುಕಿತು, ಮುಖಗಳಲ್ಲಿ ಅಚ್ಚರಿ ಕಾಣಿಸಿಕೊಂಡಿತು. ಬಾಡಿರುವ ಗಿಡಮರಗಳೆಲ್ಲ ಮಳೆ ಬಂದು ಅಮೃತಾಭಿಷೇಕದಿಂದ ಕಳಕಳಿಸುವಂತೆ ಭರತನಾಡಿದ ನುಡಿಗೆ ಸೇರಿದ್ದ ಪ್ರಜೆ ಪರಿವಾರವೆಲ್ಲ ತುಳುಕುವ ಆನಂದದಿಂದ ಸಂಭ್ರಮದಿಂದ, 'ನಳಿನಾಕ್ಷನಾದ ರಾಘವನ ಬಗೆಗಿನ ಭಕ್ತಿ ಈ ಪರಿಯಲ್ಲಿ ನಿನ್ನಲ್ಲುದಿಸಿದ ಕಾರಣದಿಂದ ನಿನ್ನ ಅರಮನೆಯಲ್ಲಿ ಸಿರಿಲಕುಮಿ ನೆಲಸಿರಲಿ' ಎಂದು ಮನಃಪೂರ್ವಕವಾಗಿ ಹರಸಿದರು. ಜನರ ಕಲಕಲವನ್ನು ಕೇಳಿದ ಭರತನು ತಾನು ಕಾಡಿಗೆ ಹೋಗುವ ಅಭಿಲಾಷೆಯಿಂದ ಬೇಕಾದ ಸಿದ್ಧತೆಯನ್ನು ಮಾಡಲು ಆಜ್ಞೆ ಮಾಡಿದ. ಮಂತ್ರಿಗಳು ತ್ವರೆಯಿಂದ ಹೋಗಿ ಕಾಡಿನಲ್ಲಿ ದಾರಿ ತೋರುವ ನಿಪುಣರು ಹಾಗೂ ಇತರ ಸಹಾಯಗಳನ್ನು ಮಾಡುವ ಜನರನ್ನು ನೇಮಿಸಿ, ರಾಜಕುಮಾರನು ಹೋಗುವ ದಾರಿಯನ್ನು ಸಿಂಗರಿಸಲು ಹೇಳಿಕಳಿಸಿದರು. ಅವರ ಮಾರ್ಗದರ್ಶನಕ್ಕನುಗುಣವಾಗಿ ಗಿಡಬಳ್ಳಿಗಳನ್ನು ಕತ್ತರಿಸಿ ಮುಳ್ಳುಪೊದೆಗಳನ್ನು ತರಿದು, ನೆಲದ ಉಬ್ಬುತಗ್ಗುಗಳನ್ನು ಸಮಗೊಳಿಸಿ, ನೆರಳಿಲ್ಲದ ತಾಣಗಳಲ್ಲಿ ಆಶ್ರಯಗಳನ್ನು ನಿರ್ಮಿಸಿ, ಕೆರೆಕೊಳಗಳನ್ನು ಶುಚಿಗೊಳಿಸಿ ದಾರಿಯ ಎರಡೂ ಕಡೆಗಳಲ್ಲಿ ತೋರಣಗಳನ್ನು ಕಟ್ಟಿ ಸಿದ್ಧಪಡಿಸಿದರು. ದಾರಿಯುದ್ದಕ್ಕೂ ಪನ್ನೀರನ್ನು ಸಿಂಪಡಿಸಿ, ಧ್ವಜಪತಾಕೆಗಳನ್ನು ಕಟ್ಟಿ, ಕನ್ನಡಿಯ ತೋರಣಗಳನ್ನು ಕಟ್ಟಿ ದೇವತಾಮಾರ್ಗವೆಂಬಂತೆ ಸೊಗಸಾಗಿ

ಅಲಂಕಾರಮಾಡಿಸಿದರು. ನೆರೆದ ಸಭೆಯನ್ನು ಮುಗಿಸಿ ಜನರನ್ನು ಅವರವರ ಮನೆಗಳಿಗೆ ಕಳಿಸಿದ ಭರತನು ಶತ್ರುಘ್ನನ ಜೊತೆ ತನ್ನ ಮನೆಗೈದಿ ಹೋಗುವುದನ್ನೇ ಎದುರು ನೋಡುತ್ತ ಮಲಗಿ ಅಂದು ರಾತ್ರಿ ಸುಖನಿದ್ದೆ ಮಾಡಿದರು.

ಮಾರನೆಯ ದಿನ ಅರುಣೋದಯದ ಹೊತ್ತಿಗೆ ಶ್ರುತಿಪಾಠಕರ ಮಂಗಳಗೀತೆಗಳು, ಶಂಖದುಂದುಭಿಮೃದಂಗ ಮುಂತಾದ ವಾದ್ಯಗಳ ಮೊಳಗು, ಪರಿಪರಿಯ ಗಾಯನದ ಇಂಚರಗಳು ಅರಮನೆಯನ್ನೆಲ್ಲ ವ್ಯಾಪಿಸಿತು. ಅದನ್ನು ಕೇಳಿದ ಭರತನು ಎಚ್ಚರಗೊಂಡು ತಾನು ರಾಜನಲ್ಲ ಎಂದು ಎಲ್ಲರಿಗೆ ಹೇಳಿ ಗಾಯನಾದಿಗಳನ್ನು ನಿಲ್ಲಿಸಿ ಹೊರಟು ಶತ್ರುಘ್ನನೊಡನೆ ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಿಕೊಂಡ. ಭೂಮಿಯಿರುವವರೆಗೂ ಅಪಕೀರ್ತಿಯು ಅಡಸುವ ರೀತಿಯಲ್ಲಿ ತಂತ್ರ ಮಾಡಿ ನಿರ್ಲಜ್ಜೆಯಿಂದ ಆ ಕೈಕೇಯಿಯು ಹೆಂಗಸರ ಜೊತೆಯಿದ್ದಾಳೆ. ಆ ಹೊಲೆಗೆಲಸಕ್ಕೆ ಏನೆನ್ನಬೇಕು, ಏನು ಮಾಡಬೇಕು? ಕುಲವಿನಾಶದ ಪಾಪ ಅಂಟಿಕೊಂಡಿತು ಎಂದು ಶೋಕಿಸುತ್ತಿರಲು, ಅಕ್ಕಪಕ್ಕದಲ್ಲಿದ್ದ ಅಂತಃಪುರಸ್ತ್ರೀಯರೂ ದುಃಖಕ್ಕೊಳಗಾದರು. ಅಷ್ಟರಲ್ಲಿ ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಮತ್ತು ಮುಖ್ಯ ರಾಜಪುತ್ರರ ಜೊತೆಯಲ್ಲಿ ವಸಿಷ್ಠ ಮಹರ್ಷಿಯು, ಚಿತ್ರಚಾವಡಿಯಲ್ಲಿ ಭರತನಿಗೆ ಪಟ್ಟಾಭಿಷೇಕವನ್ನು ನೆರವೇರಿಸಲು ಸಂಭ್ರಮದಿಂದ ಸಕಲ ಸಾಮಗ್ರಿಗಳೊಡನೆ, ಬಂದು ಕುಳಿತು ಮಂತ್ರಿಗಳಿಗೆ ಹೇಳಿಕಳಿಸಿದರು. ಮುನಿಯ ಮನದ ಅಭೀಷ್ಟವನ್ನು ಕಂಡು ಭರತನು ಕಡುಗೋಪದಿಂದ ತೊಳಲಿದ ಪರಿಯನ್ನು ಏನೆಂದು ವರ್ಣಿಸುವುದು! ಮರುಗುತ್ತಿರುವ ಭರತನನ್ನು ಕಂಡು ವಸಿಷ್ಠಮುನಿಯು, "ದಶರಥ ಮಹಾರಾಜನು ನಿನಗೆ ದೊರೆತನವನ್ನಿತ್ತು ಸ್ವರ್ಗಕ್ಕೆ ಹೊರಟು ಹೋದ; ಶ್ರೀರಾಮ ಪಿತೃವಾಕ್ಯವನ್ನು ಹಿಡಿದು ವಿಪಿನದ ಕಡೆಗೆ ಸಾಗಿದ. ದೇವೇಂದ್ರನ ಆಧಿಪತ್ಯಕ್ಕಿಂತಲೂ ಮಿಗಿಲಾದ ಈ ಧರ್ಮಾಧಿಪತ್ಯವನ್ನು ವಹಿಸಿಕೊಂಡು ನೀನು ಎಲ್ಲರನ್ನೂ ಕಾಪಾಡಬೇಕು" ಎಂದು ನಿರೂಪಿಸಲು ಭರತನು ಕೋಪದಿಂದ ಭುಗಿಲೆದ್ದ. "ಎಲ್ಲ ಧರ್ಮಸೂಕ್ಷ್ಮಗಳನ್ನೂ ಬಲ್ಲ ಸರ್ವಜ್ಞರಾದ ತಾವು ಈ ರೀತಿಯಲ್ಲಿ ಹೇಳಿದರೆ ಇದಕ್ಕೆ ಉತ್ತರವನ್ನು ನೀಡಲು ನಾನು ಸಮರ್ಥನೇ? ಸಗರ ರಘು ಅಜ ಮಹಾರಾಜರಿಗಿಂತಲೂ ನಾನು ಬಲ್ಲಿದನೇನು? ಪಟ್ಟದಲ್ಲಿರಲು ಜ್ಯೇಷ್ಠ ಪುತ್ರನು ಅರ್ಹನಲ್ಲದೆ ನಾನು ಸಮರ್ಥನೇ? ಹಾಗೆ ನೋಡಿದರೆ ಪತಿತ, ಕುಲಘಾತಕ ಎನ್ನಿಸಿಕೊಳ್ಳುವಂತಹವನೇ ಹೊರತು ನಾನು ಸುಖಿಯಾಗಿರಬಲ್ಲೆನೇ? ಹಿರಿಯರು ಸ್ವತಂತ್ರರು, ಏನನ್ನು ಮಾಡಿದರೂ ಉತ್ತಮವಾದುದನ್ನೇ ಮಾಡುವವರು, ಕಿರಿದಾದರೂ ಧರ್ಮಮಾರ್ಗವನ್ನು ಬಿಟ್ಟು ಹೋಗದವರು, ಪಾತಕವನ್ನೆಂದಿಗೂ ಮಾಡಿದವರಲ್ಲ. ಹೀಗಾಗಿ ನಾನೇ ಹೋಗಿ ರಾಮನ ಕಾಲು ಹಿಡಿದು ತಂದೆಯಿತ್ತ ರಾಜ್ಯವನ್ನು ಹರುಷದಿಂದ ಆತನಿಗೊಪ್ಪಿಸಿ ಅವನ ಪಾದುಕೆಗಳನ್ನು ಕಾಯುವ ಚಾಕರಿಯನ್ನು ಮಾಡುತ್ತ ಅವನ ಬಳಿಯೇ ಇರುತ್ತೇನೆ. ನಾನು ದೊರೆತನಕ್ಕೆ ಯೋಗ್ಯನಲ್ಲ. ನನ್ನ ತಾಯಿ ಮಾಡಿದ ಪಾಪಕ್ಕೆ ನಾನು ಬಾಧ್ಯನಲ್ಲ, ಶ್ರೀರಾಮನು ನನಗೆ ತಂದೆಗಿಂತಲೂ ಮಿಗಿಲು ಎಂದು ತಿಳಿದು, ಚಿತ್ರಕೂಟಕ್ಕೆ ಹೋಗುವ ದಾರಿಯನ್ನು ಸಮಗೊಳಿಸಲು ಹೇಳಿದ್ದೇನೆ. ಧೀಮಂತರೇ, ಈ ಪರುಠವಣೆ ಯಾಕೆ? ಕಸವ ಹೊರುವ ಜಾತಿಯವನಿಗೆ ಎಂದಿಗಾದರೂ ಮಹೋನ್ನತ

ಪದವಿ ದೊರೆಯುತ್ತದೆಯೇ? ಸುಮ್ಮನೆ ನನ್ನನ್ನು ಯಾಕೆ ನೋಯಿಸುತ್ತೀರಿ, ದಯವಿಟ್ಟು ಆ ಯೋಚನೆಯನ್ನು ಬಿಟ್ಟುಬಿಡಿರಿ" ಎಂದು ಖಡಾಖಂಡಿತವಾಗಿ ಹೇಳಿದ. ಆನಂತರ ಸೇವಕರನ್ನು ಕರೆದು, ಸೇನಾನಿಗಳು ಚತುರಂಗಸೈನ್ಯ ಸಮೇತ ಬರಲಿ ಎಂದು ಆಜ್ಞಾಪಿಸಿ, ತನ್ನ ರಥವನ್ನು ಬೇಗ ತರಲು ಸಾರಥಿಗೆ ಸೂಚಿಸಿದ. ಅದರಂತೆಯೇ ಕುದುರೆಗಳನ್ನು ಹೂಡಿರುವ ಅಲಂಕೃತವಾದ ರಥವು ಬಂದು ಕ್ಷಿಪ್ರದಲ್ಲಿಯೇ ಮುಂದೆ ನಿಂತಿತು. ಇದನ್ನು ಕಂಡು ಋಷಿಗಳೂ ನೆರೆದ ಜನರೂ ವಿಸ್ಮಯಗೊಂಡರು. 'ಕೈಗೆ ಬಂದ ರಾಜ್ಯಾಧಿಪತ್ಯ ಭೋಗಗಳನ್ನು ತಿರಸ್ಕರಿಸಿ ಪರವನ್ನು ಚಿಂತಿಸುತ್ತ ರಾಮನನ್ನು ಕಂಡು ಅವನ ಚರಣಗಳಿಗೆ ರಾಜ್ಯವನ್ನೊಪ್ಪಿಸಿ ತಾನು ಅವನ ದಾಸನಾಗಿರಲು ಬಯಸುವ ಭರತನ ಈ ಬುದ್ಧಿಯ ಅತಿಶಯವನ್ನು ಹೊಗಳಲಾದೀತೇ? ಭರತನು ನಿರ್ಮಲ ಮನಸ್ಸಿನ ವೈರಾಗ್ಯನಿಧಿಯೇ ಸರಿ' ಎಂದು ಪರಮಋಷಿಗಳು ಅತೀವ ಸಂತೋಷದಿಂದ ತಮ್ಮ ಮನೆಗಳತ್ತ ನಡೆದರು.

ರಾಮಚಂದ್ರನನ್ನು ಕರೆತರಲು ಭರತನು ಹೊರಟಿರುವ ವಿಷಯವನ್ನು ಅಯೋಧ್ಯಾ ಪಟ್ಟಣದ ಪ್ರಜೆಗಳೂ ಪರಿವಾರದವರೂ ಸುಮಂತ್ರ ಮುಂತಾದವರೂ ಕೇಳಿ ಅತೀವ ಹರುಷಕ್ಕೊಳಗಾದರು. ಆನೆಗಳು ಕುದುರೆಗಳು ರಥ ಪಲ್ಲಕ್ಕಿಗಳನ್ನು ಅಲಂಕರಿಸಿದ ಮಹೋತ್ಸಾಹವನ್ನು ನೋಡುವ ಅಭಿಲಾಷೆಯಿಂದ ಬೀದಿಗಳಲ್ಲಿ ಬಂದು ನಿಂತರು. ಪ್ರೀತಿಯಿಂದ ತನ್ನ ಅಣ್ಣನನ್ನು ಕರೆತರಲು ಹೊರಟ ಭರತನ ಮಹಾತಿಶಯವನ್ನು ಕೇಳಿ ಕೌಸಲ್ಯೆ ಸುಮಿತ್ರೆ ಮುಂತಾದವರು ಕೇಳಿ ತಾವೂ ಸಂತಸದಿಂದ ಅವನೊಂದಿಗೆ ಹೊರಡಲು ಸಿದ್ಧರಾದರು. ಈ ವಿಷಯವನ್ನು ಕೇಳಿದ ಕೈಕೇಯಿಯು ತನ್ನ ಪಾತಕವನ್ನು ಹೋಗಲಾಡಿಸಿಕೊಳ್ಳಲು ನಿಶ್ಚಯಿಸಿ ಅವರೊಡನೆ ತಾನೂ ಹೊರಟು ನಿಂತಳು, ಅವಳೊಡನೆ ಇಡೀ ಅಂತಃಪುರದ ನಾರಿಯರೂ ಸೇರಿದರು. ಹೀಗೆ ನಗರದ ಪ್ರಜಾಪರಿವಾರ ಅಂತಃಪುರಸ್ತ್ರೀಯರು ಸಂತರು ಪುರೋಹಿತರು ಪರಮಪ್ರೀತಿಯಿಂದ ತಾವು ಮುಂದಾಗಿ ಹೋಗಲು ಬಂದು ನಿಂತಾಗ ಭರತನು ನಲಿಯುತ್ತ ಎಲ್ಲರ ಮುಂಭಾಗದಲ್ಲಿ ತಾಯಂದಿರು ಮತ್ತು ಶತ್ರುಘ್ನನೊಡನೆ ಹೋಗಿ, ತಾನೆಂದುಕೊಂಡುದು ಫಲಿಸಿತು ಎಂಬ ಸಂತೃಪ್ತಿಯಿಂದ ಚತುರಂಗಬಲಸಮೇತನಾಗಿ ಅಣ್ಣನನ್ನು ನೋಡಲು ಹೊರಟ. ಭೂಮಿಯು ಬೆಸಲಾದ ರೀತಿಯಲ್ಲಿ ಪಡೆ ನಡೆಯಲು, ಜನರ ನಡಿಗೆಯಿಂದೆದ್ದ ಧೂಳು ಆಗಸದ ನದಿಯನ್ನು ಮುಚ್ಚಲು, ಪಟಪಟನೆ ಹಾರಾಡುವ ಧ್ವಜಪಟಗಳು ಎಬ್ಬಿಸಿದ ಬಿರುಗಾಳಿಯಿಂದ ದೇವತೆಗಳು ತಲ್ಲಣಗೊಂಡರು, ಸ್ವರ್ಗದ ನಾರೀಜನರೆಲ್ಲರೂ ಭಯದಿಂದ ತಮ್ಮ ಗಂಡಂದಿರನ್ನು ತಬ್ಬಿಕೊಂಡರು, ಇದೇನು ಪ್ರಳಯಕಾಲದಲ್ಲಿ ಬೀಸುವ ಮಹಾ ಗಾಳಿಯೋ ಎಂದು ಚಿಂತೆಗೊಳಗಾದರು. ಒಂಬತ್ತು ಸಾವಿರ ಆನೆಗಳು, ಅರುವತ್ತು ಸಾವಿರ ತೇರುಗಳು, ಕುದುರೆಗಳ ಸಂಖ್ಯೆ ಎಷ್ಟು ಲಕ್ಷವೋ ಲೆಕ್ಕವಿಲ್ಲ, ಇನ್ನು ಭಟಸಂದೋಹವೋ ಅಸಂಖ್ಯ, ಜೊತೆಗೆ ಜನಸಮೂಹ ಬೇರೆ. ಈ ಎಲ್ಲದರ ಕಾಲ್ತುಳಿತಕ್ಕೆ ಭೂಮಿ ಕಂಪಿಸಿತು. ಭರತನ ಎಡಬಲದಲ್ಲಿ ಮಂತ್ರಿಗಳು, ಋಷಿಸಮೂಹ ಸುತ್ತುವರಿದಿದ್ದರು; ಅವರೆಲ್ಲರೂ ಶ್ರೀರಾಮನನ್ನು ಕಾಣುವ ಹರ್ಷದಿಂದ ಆತನ ಗುಣಗಳನ್ನು ನೆನೆಸಿಕೊಳ್ಳುತ್ತ ಸಡಗರದಿಂದ ಮಾತಾಡಿಕೊಳ್ಳುತ್ತಿದ್ದರು. ಸರಿ ದಾರಿ ಹಿಡಿದು ರಾಮನನ್ನು ಬೇಗ ನೋಡುವ ಆತುರದಿಂದ

ವೇಗವಾಗಿ ಜನರು ನಡೆಯುತ್ತಿದ್ದರು; ಚತುರಂಗಸೈನ್ಯವು ಉಲ್ಲಾಸದಿಂದ ಅವರನ್ನು ಅನುಸರಿಸುತ್ತಿತ್ತು. ಹೀಗೆ ಕೆಲವು ದಿನಗಳು ಪ್ರಯಾಣ ಮಾಡಿದ ಮೇಲೆ ಎಲ್ಲರೂ ಗಂಗಾದಡವನ್ನು ತಲುಪಿದರು. ನದಿಯನ್ನು ಕಂಡು ಭರತನು ಈ ದಿನ ಬಲವು ಇಲ್ಲಿ ವಿಶ್ರಮಿಸಿಕೊಳ್ಳಲಿ ಎಂದು ಮಂತ್ರಿಗಳಿಗೆ ಸೂಚಿಸಿದ. ಹೀಗೆ ಹೇಳಿದವನೇ ಭರತನು ಸುರನದಿಯಲ್ಲಿ ಸ್ನಾನ ಮಾಡಿ ತಂದೆಯನ್ನು ನೆನೆಸಿಕೊಂಡು ಪಿತೃತರ್ಪಣವನ್ನು ನೀಡಿ, ಭೂಸುರರನ್ನು ಸತ್ಕರಿಸಿ ಕುಳಿತುಕೊಂಡ.

ಇತ್ತ ಕೋಲಾಹಲ ಧ್ವನಿಯನ್ನು ಕೇಳಿದ ಗುಹನು ಚಿಂತೆಯನ್ನು ಹೊದ್ದು ತನ್ನ ಸೈನ್ಯವನ್ನೆಲ್ಲ ಒಗ್ಗೂಡಿಸಿಕೊಂಡು, ಈ ಮಹಾಸೈನ್ಯವು ಯಾವ ಕಾರಣದಿಂದ ಬಂದಿರಬಹುದು ಎಂದು ಯೋಚಿಸತೊಡಗಿದ. ಇಷ್ಟು ದೊಡ್ಡ ಪಡೆ ಇಲ್ಲಿಗೆ ಬಂದ ಕಾರಣವೇನಿರಬಹುದು? ಇದು ಬೇರೆ ಯಾರದಾದರೂ ಸೈನ್ಯವಿದ್ದೀತೇ ಎಂದು ನಿಷಾಧಾಧಿಪತಿಯು ತನ್ನ ಜನರಿಂದೊಡಗೂಡಿ ಬಂದು ನೋಡಲು ಕಂಚುವಾಳ ಗಿಡದ ಲಾಂಛನವುಳ್ಳ ಧ್ವಜಗಳು ಕಾಣಿಸಿದವು. ಶತ್ರುವಿನಾಶಕ್ಕಾಗಿ ತನ್ನ ಬಾಂಧವರನ್ನೆಲ್ಲ ಕರೆದು ಹೀಗೆ ಸೂಚಿಸಿದ: "ದುರುಳತನದಿಂದ ಶ್ರೀರಾಮನನ್ನು ಕಾಡಿಗಟ್ಟಿ ದೊರೆತನವನ್ನು ಆಕ್ರಮಿಸಿಕೊಂಡು ರಾಜ್ಯವನ್ನು ಹೇಗೆ ನಿಷ್ಕಂಟಕವನ್ನಾಗಿಸಬಹುದೆಂದು ಆಲೋಚಿಸಿ ಭರತನು ಸೈನ್ಯವನ್ನೆಲ್ಲ ಸೇರಿಸಿಕೊಂಡು ತ್ವರಿತವಾಗಿ ಬಂದು ರಘುನಂದನನನ್ನು ಸೆರೆ ಹಿಡಿದುಕೊಂಡು ಹೋಗುವ ದುರ್ಬುದ್ಧಿಯಿಂದ ಬಂದಿರುವಂತೆ ತೋರುತ್ತಿದೆ. ರಾಮನ ಸಹಾಯಕ ಎಂದು ಭಾವಿಸಿರುವ ನಮ್ಮಿಬ್ಬರ ನಡುವೆ ಈ ಕ್ರೂರಿಯೂ ಕೃಪಣನೂ ಕುಲಘಾತುಕನೂ ಆದ ಭರತನು ವಿರಸವನ್ನು ತಂದಿಡಬಹುದು. ಅರಸುತನವನ್ನು ಬಿಟ್ಟು ಮುನಿತನವನ್ನು ತಾಳಿ ಕಾಡಿನಲ್ಲಿರುವುದನ್ನೂ ಸಹಿಸದೆ ಈ ಭರತನು ತನ್ನ ಬಲಸಮೇತ ಹುರಿಗೊಂಡು ಬಂದಿದ್ದಾನೆ. ಅವನು ಗಂಗಾನದಿಯನ್ನು ದಾಟದಂತೆ ನೀವೆಲ್ಲ ಬಿಲ್ಲುಗಳನ್ನು ಹಿಡಿದು ಬಾಣಗಳನ್ನು ಸಂಗ್ರಹಿಸಿಕೊಂಡು ಸಾಧ್ಯವಾದ ಉಪಾಯಗಳನ್ನೆಲ್ಲ ಮಾಡಿ ಸೈನ್ಯವನ್ನು ಸೋಲಿಸಿ ಮೊದಲು ಭರತನನ್ನು ಸೆರೆ ಹಿಡಿಯಬೇಕು" ಎಂದು ತನ್ನವರಿಗೆ ಆಜ್ಞಾಪಿಸಿದ. ಕೊಂಚ ಹೊತ್ತಿನ ಬಳಿಕ, "ಸೂರ್ಯಮಿತ್ರನಾದ ರಾಮನು ನಮಗೆ ಹಿರಿಯ, ಗುರು, ದೇವತಾತ್ಮ; ಆತನಿಗಾಗಿ ನಮ್ಮ ತನುಮನಪ್ರಾಣಗಳನ್ನು ಒತ್ತೆಯಿಟ್ಟು ನಾವು ಆತನಿಗೆ ನಿಷ್ಠೆಯಿಂದಿರಬೇಕು" ಎಂದು ಸೂಚಿಸಿದ. ಆನಂತರ, ಭರತನ ಬಳಿಗೆ ನಯದಿಂದ ಹೋಗಿ ಅವನು ಇಲ್ಲಿಗೆ ಬಂದ ಕಾರಣವನ್ನು ತಿಳಿದು ಬರುವುದು ಉತ್ತಮ ಎಂದು ಆಲೋಚಿಸಿ ಜೇನು ಮಜ್ಜೆ ಮಾಂಸಗಳನ್ನು ಅವನಿಗೆ ಕಪ್ಪವಾಗಿ ಒಪ್ಪಿಸಲು ಅವನ್ನೆಲ್ಲ ಸಂಗ್ರಹಿಸಿಕೊಂಡ.

ಕಪ್ಪವನ್ನು ಹಿಡಿದುಕೊಂಡು ನೂರು ಮಂದಿ ಒಡನಾಡಿಗಳೊಡನೆ ಗುಹನು ತನ್ನೆಡೆಗೆ ಬರುತ್ತಿರುವುದನ್ನು ದೂರದಲ್ಲಿ ಕಂಡ ಭರತನು ಅಣ್ಣನಿಗೆ ಆಪ್ತನಾದ ಗುಹನು ಬರುತ್ತಿರುವ ವಿಷಯವನ್ನು ತನಗೆ ಹಿತವರಾದ ಮಂತ್ರಿಗಳಿಗೆ ತಿಳಿಸಿದ. ಆನಂತರ ತಾನು ಬಂದಿರುವ ವಿಷಯವನ್ನೆಲ್ಲ ಅವನಿಗೆ ತಿಳಿಸುವೆನೆಂದು ನಿಶ್ಚಯಿಸಿ ಗುಹನು ಬಂದಾಗ ಅವನ ಕೈಗಳನ್ನು ಹಿಡಿದುಕೊಂಡು ಬಂದು ಕುಳ್ಳಿರಿಸಿಕೊಂಡು ಅವನಿತ್ತ ಕಾಣಿಕೆಗಳನ್ನು ಸ್ವೀಕರಿಸಿ ಅವನ ಕುಶಲವನ್ನು ವಿಚಾರಿಸಿದ. ಹೀಗೆ ಆತ್ಮೀಯತೆಯಿಂದ

ಕುಳ್ಳಿರಿಸಿಕೊಂಡು ಕ್ಷೇಮಸಮಾಚಾರವನ್ನು ಕೇಳುವ ಭರತನನ್ನು ನೋಡಿ ಸುಮಂತ್ರನು, "ಪ್ರಭುಗಳೇ, ಈತನು ಗುಹ, ರಾಮಚಂದ್ರನಿಗೆ ಪರಮಪ್ರಿಯನಾದವನು, ಒಂದು ರೀತಿ ಲಕ್ಷ್ಮಣನಿಗಿಂತಲೂ ಹೆಚ್ಚು. ಈತನಿಗೆ ಧನುರ್ಧಾರಿಗಳಾದ ಅಸಂಖ್ಯ ಕಾಡುವಾಸಿಗರು ದಾಸರು" ಎಂದು ಪರಿಚಯ ಮಾಡಿಸಿದ. ಅಷ್ಟರಲ್ಲಿ ಗುಹನು ಮೇಲೆದ್ದು ನಿಜವಾದ ಭಕ್ತಿಯಿಂದ ಕೈಗಳನ್ನು ಮುಗಿದುಕೊಂಡು, "ದೇವ, ತಾವು ದಯವಿಟ್ಟು ನಮ್ಮ ನಿಲಯಕ್ಕೆ ಬಂದುದು ನಮ್ಮ ಭಾಗ್ಯ. ನಮ್ಮ ನಾಡು ಇದರಿಂದ ಪಾವನವಾಯಿತು; ನನ್ನ ಕುಲವೆಲ್ಲ ಪಾವನಗೊಂಡಂತೆ, ನನ್ನ ಪುಣ್ಯವು ಹಣ್ಣು ಬಿಟ್ಟಂತೆ ಮನಸ್ಸು ಧನ್ಯವಾಯಿತು. ನನ್ನ ಸತ್ಕಾರವನ್ನು ಸ್ವೀಕರಿಸಿ ಉಪಕರಿಸಬೇಕು" ಎಂದು ಬಿನ್ನವಿಸಿಕೊಂಡ. ಆಗ ಭರತನು ನಸುನಗುತ್ತ, "ಈ ಸೈನ್ಯ ಮತ್ತು ಜನಸಮೂಹಕ್ಕೆಲ್ಲ ಔತಣ ಮಾಡಿಸಲು ಇಚ್ಛೆಸಿರುವೆಯಲ್ಲ, ಇದು ನಿನ್ನ ದೊಡ್ಡ ಗುಣ. ನಿನ್ನ ಉಪಚಾರವನ್ನು ಹೊಂದಿ ಶ್ರೀರಾಮನು ಚಿತ್ರಕೂಟಕ್ಕೆ ಹೋದನೆಂಬ ವಿಷಯವನ್ನು ಸುಮಂತ್ರನು ಹೇಳಿದ್ದಾನೆ. ಇದನ್ನೆಲ್ಲ ಕೇಳಿ ನನ್ನ ಮನಸ್ಸು ತುಂಬಿ ಬಂದಿದೆ. ನನಗೆ ಎಲ್ಲವೂ ಸಂದಾಯವಾದಂತೆ. ಈ ಸೈನ್ಯವೆಲ್ಲ ಭಾಗೀರಥಿಯನ್ನು ದಾಟಿ ಮುಂದೆ ಹೋಗುವುದು ಹೇಗೆಂದು ದಾರಿ ತೋರಿಸು" ಎಂದು ನುಡಿದ. ಗುಹನು ಕೈಮುಗಿದುಕೊಂಡು, "ಎಣಿಸಲಸಾಧ್ಯವಾದಷ್ಟು ಸೈನ್ಯ ಸೇರಿದೆ, ಆನೆಕುದುರೆರಥಗಳೂ ಇವೆ. ತಾವು ಹೀಗೆ ಇವುಗಳೊಡನೆ ಭಯಂಕರವಾಗಿ ಬಂದುದನ್ನು ಕಂಡು ನನಗೆ ಭಯವಾಗುತ್ತಿದೆ; ತಮ್ಮ ಮನಸ್ಸಿನಲ್ಲಿ ಏನಿದೆಯೋ ತಿಳಿಯದು" ಎಂದು ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಿಕೊಂಡ. ಆಗ ಭರತನು, "ಕುತ್ಸಿತ ಮನಸ್ಸಿನವನನ್ನು ಕಂಡು ಅನುಮಾನಪಡುವಂತೆ ನಿನಗಾಗಿರುವ ವಿಷಯವನ್ನು ಹೇಳಿದ್ದೀಯೆ. ಆದರೆ ಸತ್ಯವಾದ ಮಾತನ್ನು ಹೇಳುತ್ತೇನೆ, ಕೇಳು. ನಮ್ಮ ಕುಲಪರಂಪರೆಯ ಶ್ರೇಷ್ಠತೆಯನ್ನು ಮನಸ್ಸಿನಲ್ಲಿರಿಸಿಕೊಂಡು ತಂದೆಗಿಂತಲೂ ಮಿಗಿಲಾದ ರಘುವರತಿಲಕನನ್ನು ಕರೆದುಕೊಂಡು ಬರಲು ಹೊರಟಿದ್ದೇನೆ, ಗುರುಗಳಾಣೆ, ನನ್ನ ಮಾತು ಸತ್ಯ, ನಾನು ಧರ್ಮವನ್ನು ಬಿಟ್ಟಿರುವವನಲ್ಲ" ಎಂದು ಶಾಂತಚಿತ್ತದಿಂದ ಹೇಳಿದ ಭರತನ ಮನಃಸ್ಥಿತಿಯನ್ನು ತಿಳಿದ ಗುಹನು ಸಂತೋಷದಿಂದ, "ಜನನಾಥ, ತಾವು ಧನ್ಯರು, ಮಾನ್ಯರು, ಈ ಜಗತ್ತಿನಲ್ಲಿ ನಿಮಗೆ ಸರಿಸಮಾನರಾರಿದ್ದಾರೆ? ತಾನಾಗಿ ಒಲಿದು ಬಂದ ರಾಜ್ಯವನ್ನು ಬಿಟ್ಟು ಕಾಡಿಗೆ ಹೋದ ಅಣ್ಣನನ್ನು ಕರೆತಂದರೆ ನಿಮ್ಮ ಕೀರ್ತಿ ಚಂದ್ರಸೂರ್ಯರಿರುವವರೆಗೂ ಮೂರೂ ಲೋಕಗಳಲ್ಲಿ ಬೆಳಗುತ್ತದೆ. ನಿರ್ಮಲಚಿತ್ತ, ಸಾಧುತ್ವ, ಶಮೆ, ದಮೆ, ಕಾಂತಿ ಮುಂತಾದ ಉತ್ತಮ ಗುಣಗಳಿಗೆ ತಾವು ನೆಲೆವನೆಯಾಗಿದ್ದೀರಿ. ನಿಮ್ಮಂತಹ ಉತ್ತಮರು ಮೂಜಗದಲ್ಲಿ ಬೇರೆ ಯಾರಿದ್ದಾರು! ತಾವು ನೃಪಕುಲರತ್ನರು, ತಮ್ಮ ಗುಣಗಳನ್ನು ವರ್ಣಿಸಲು ನನಗೆಲ್ಲಿ ಸಾಮರ್ಥ್ಯವಿದೆ? ತಮ್ಮ ಚರಣದರ್ಶನದಿಂದ ನಾನು ಭಾಗ್ಯವಂತನಾದೆ" ಎಂದು ಆನಂದತುಂದಿಲನಾದ. ಭರತನು ಈ ಪರಿಯ ಸಲ್ಲಾಪಭಾವದಲ್ಲಿರುವ ವಾರ್ತೆಯನ್ನು ಪಶ್ಚಿಮದಿಕ್ಕಿಗೆ ಹೋಗಿ ತಿಳಿಸಿ ಬರುತ್ತೇನೆ ಎಂಬಂತೆ ಸೂರ್ಯನು ಈವಿಯಿಂದ ಪಡುಗಡಲಲ್ಲಿಳಿದ. ಆಗ ಭರತನು ಶತ್ರುಘ್ನಸಮೇತನಾಗಿ ಸಾವಧಾನದಿಂದ ಸಂಧ್ಯಾದಿಗಳನ್ನು ಮುಗಿಸಿ ತನ್ನ ಮನದ ದೈವವನ್ನು ಪೂಜಿಸಿ ಮಲಗಲೆಂದು ಲಕ್ಷ್ಮೀರಮಣ ಶ್ರೀರಾಮಪುರದ ಒಡೆಯನನ್ನು ಧ್ಯಾನಿಸಿದ.

೨೭. ಶೃಂಗಿವೇರಪುರವನ್ನು ಬಿಟ್ಟು ಭರತನು ಸೈನ್ಯಸಮೇತ ಭಾರದ್ವಾಜಾಶ್ರಮಕ್ಕೆ ಬಂದುದು

ಅದ್ರಿಜಾತೆಯೇ ಕೇಳು, ರಘುವೀರನ ಪಾದಾರವಿಂದಗಳನ್ನು ನೆನೆದುದರಿಂದ ಉಂಟಾದ ತೀವ್ರ ಚಿಂತೆಯಿಂದ ಮೈಯೆಲ್ಲ ಬೆವರಿ ಬೆಂಡಾಗುತ್ತ ಭರತನು ಅವನ ಉತ್ತಮೋತ್ತಮ ಗುಣಗಳನ್ನು ಕುರಿತು ಆಲೋಚಿಸಿದ: ತಾಯಿಯ ಕೆಟ್ಟ ಕೆಲಸವು ಕುಲದ ಸಚ್ಚರಿತೆಯನ್ನು ಹಾಳುಮಾಡಿತು ಎಂದು ಗೋಳಾಡಲು ಗುಹನು ಮೃದುನುಡಿಗಳಿಂದ ಅವನನ್ನು ಸಮಾಧಾನಪಡಿಸಿದ. ಸೂತನ ಜೊತೆಗೂಡಿ ರಾಮನು ಸೀತಾಲಕ್ಷ್ಮಣರ ಜೊತೆಯಲ್ಲಿ ಈ ಜಾಗಕ್ಕೆ ಬಂದಾಗ ನಾನು ಶ್ರೇಷ್ಠ ಮಾಂಸವೇ ಮೊದಲಾದುವನ್ನು ಕೈಯಲ್ಲಿ ಹಿಡಿದು ಅವರ ಬಳಿ ಬಂದು ಪ್ರೀತಿಯಿಂದ ಅರ್ಪಿಸಲು, ತಾವು ತಂದೆಯ ಆಜ್ಞೆಯಿಂದ ಕಾಡಿನಲ್ಲಿ ವಾಸಿಸಬೇಕಾಗಿರುವುದರಿಂದ ತಮಗೊಂದು ತಕ್ಕುದಾದ ಸ್ಥಳವನ್ನು ತೋರಿಸಲು ಕೇಳಿದರು. "ರಘುವೀರರು ನನಗೆ ಗುರು ದೈವ ಪ್ರಾಣ ಸಖ ದೊರೆ – ಎಲ್ಲವೂ. ಅವರ ಪಾದಗಳಿಗೆ ನನ್ನ ಮೈಯೊಡ್ಡಿ ಸತ್ಕೀರ್ತಿಯನ್ನು ಪಡೆಯುತ್ತೇನೆ ಎಂದು ಸತ್ಕರಿಸಲು ಹೊರಟರೆ ಅದಾವುದನ್ನೂ ಒಪ್ಪದ ಅವರು ತಮ್ಮ ಬೊಗಸೆಯಿಂದಲೇ ನೀರನ್ನು ಕುಡಿದು ಇಂಗುದಿ ಮರದ ನೆರಳಿನಲ್ಲಿ ಚಿಗುರಿನ ಹಾಸಿನ ಮೇಲೆ ಧರಣಿಜಾತೆಯ ಜೊತೆಯಲ್ಲಿ ಕುಳಿತರು. ದೂರದಲ್ಲಿ ಲಕ್ಷ್ಮಣಸ್ವಾಮಿಗಳು ಭಕ್ತಿಯಿಂದ ಜಾಗ್ರತರಾಗಿರುವುದನ್ನು ಕಂಡು ತುಂಬ ಚಿಂತೆಯುಂಟಾಯಿತು. ಅವರ ಬಳಿಗೆ ಹೋಗಿ ಪ್ರೀತಿಯಿಂದ ಉಪಚಾರ ಮಾಡಲು ಅರ್ಪಿಸಿದ ರಾಜೋಚಿತವಾದ ಹಾಸಿಗೆಗಳನ್ನಾಗಲೀ, ಮಾಗಿದ ರುಚಿಕರವಾದ ಹಣ್ಣುಗಳನ್ನಾಗಲೀ ಸ್ವೀಕರಿಸದೆ ಕಾಡಿನಲ್ಲಿ ವಾಸಿಸುವರ ರೀತಿಯಿಂದಲೇ ಇದ್ದರು. ನಾನು ತಂದ ವಸ್ತುಗಳನ್ನು ಸ್ವೀಕರಿಸಿ ಮೃದುಹಾಸಿಗೆಯಲ್ಲಿ ಸುಖವಾಗಿ ನಿದ್ರಿಸಿ, ನಾನು ನನ್ನ ಬಂಧುಗಳೊಡನೆ ರಾತ್ರಿಯೆಲ್ಲ ಎಚ್ಚರದಿಂದಿದಿದ್ದು ಕಾಯುತ್ತೇನೆ ಎಂದು ಹೇಳಲು ಸೌಮಿತ್ರಿ ನಸುನಗುತ್ತ, 'ಸಾಮಾನ್ಯರು ಹೇಳುತ್ತಾರಲ್ಲ ಗಾದೆ – ತಲೆಯನ್ನು ಬಿಟ್ಟು ಮೊಳಕಾಲನ್ನು ಪೂಜಿಸುತ್ತಾರೆಯೇ – ಹಾಗೆ ರಘುವೀರನು ಕಷ್ಟದಲ್ಲಿರುವಾಗ ನೀನು ಸುಖವಾಗಿರು ಎನ್ನುವೆಯಲ್ಲ. ಜೀವವಿಲ್ಲದೆ ದೇಹಕ್ಕೆ ಚೆಲುವು ಉಂಟೇ, ಹಾಗೆ ಅಣ್ಣನ ಸುಖವೇ ನನ್ನ ಸುಖ. ಲೋಕನಾಯಕನಾದ ಪ್ರಭುವು ಸೀತಾಸಮೇತನಾಗಿ ನೆಲದ ಮೇಲೆ ಮಲಗಿರಬೇಕಾದರೆ ನಾನು ಪಲ್ಲಂಕದಲ್ಲಿ ಮಲಗಲೇ? ಸುಂದರವಾದ ವಸ್ತುಗಳನ್ನು ನೋಡಿ ನಲಿಯಲೇ?' ಎಂದು ಅಣ್ಣನ ಬಗೆಗಿನ ಭಯಭಕ್ತಿಯಿಂದ ಸಂಕಟಗೊಳ್ಳುವುದನ್ನು ಕಂಡು ನಾನು ಅವರ ಹತ್ತಿರ ಹೋಗಿ ಜ್ಞಾತಿಗಳ ಜೊತೆಯಲ್ಲಿ ಅವರ ಜೊತೆಯಲ್ಲಿ ಕಾವಲಿದ್ದೆ" ಎಂದು ವಿವರಿಸಿದ. ಅರುವತ್ತು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿ ಪರಮಪುರುಷನನ್ನೇ ಮಗನಾಗಿ ಪಡೆದು ಸಂತೋಷಿಸುವ ಹೊತ್ತಿನಲ್ಲಿ ದುರವಸ್ಥೆ ಬಂದೊದಗಲು ಅರಸರು ಹೇಗಿರುತ್ತಾರೆಯೋ? ಯಜಮಾನರ ಶೋಕವನ್ನು ಕಂಡ ಕೌಸಲ್ಯಾದೇವಿಯವರೂ ಸುಮಿತ್ರಾದೇವಿಯವರೂ ಹೇಗೆ ದುಃಖವನ್ನು ತಡೆದುಕೊಳ್ಳುತ್ತಾರೆಯೋ ಎಂದು ಗುಹ ತಲ್ಲಣಿಸಿದ.

ಆ ಮಾತನ್ನು ಕೇಳಿದ ಭರತನ ಮುಖ ಬಾಡಿತು, ಆನಂತರ ಗುಹನನ್ನು ಕುರಿತು, "ಎಲೈ ಸಖನೇ, ಆವತ್ತು ರಾತ್ರಿ ಅಣ್ಣನೇನು ಊಟ ಮಾಡಿದ, ಮಲಗಿದುದು ಯಾವ ಜಾಗದಲ್ಲಿ? ಸೀತಾದೇವಿಯವರು ಹೇಗಿದ್ದರು?" ಎಂದು ವಿಚಾರಿಸಿದ. ಆಗ, "ನಾನಾ ಬಗೆಯ ಪಕ್ವಫಲಗಳನ್ನು ತಂದಿತ್ತರೂ ಅವುಗಳ ಕಡೆ ನೋಡದೆ ರಾಮದೇವರು ಬರೀ ನೀರು ಕುಡಿದು ಇಂಗುದಿ ಮರದ ಬುಡದಲ್ಲಿ ಚಿಗುರನ್ನು ಹಾಸಿಕೊಂಡು ಸೀತೆಯೊಡನೆ ಮಲಗಿದರು, ದೂರದಲ್ಲಿ ಬಿಲ್ಲುಬಾಣಗಳನ್ನು ಹಿಡಿದ ಲಕ್ಷ್ಮಣದೇವರು ಮತ್ತು ಬಂಧುಗಳೊಡನೆ ನಾನು ಕಾದುಕೊಂಡಿದ್ದೆವು" ಎಂದು ಗುಹನು ಹೇಳಿದ. ಅದನ್ನು ಕೇಳುತ್ತ ಭರತನು 'ಹಾ' ಎಂದು ದುಃಖಿಸಿ ಅಳುತ್ತಿರಲು ಶತ್ರುಘ್ನನು ಬಂದು ಅವನೊಡನೆ ಪ್ರಲಾಪಿಸತೊಡಗಿದ. ಮಕ್ಕಳ ಇರವನ್ನು ಕಂಡ ಕೌಸಲ್ಯೆ ಬಂದು ಮಕ್ಕಳನ್ನು ಅಪ್ಪಿಕೊಂಡು ಕಂಬನಿ ಸುರಿಸಿದಳು, ಅಷ್ಟರಲ್ಲಿ ಸುಮಿತ್ರೆ ಮತ್ತಿತರ ಸ್ತ್ರೀಯರೂ ಶೋಕಿಸಿದರು. ಅವರೆಲ್ಲ ದುಃಖಿಸುವುದನ್ನು ನೋಡಲಾರದೆ, ಸಮಾಧಾನಗೊಳ್ಳುವವರೆಗೂ ಗುಹನು ದೂರದಲ್ಲಿ ಹೋಗಿ ನಿಂತ.

ಇರುಳು ಕಳೆಯಿತು. ಮೂದೇವಮಯನಾದ ಸೂರ್ಯನು ಮೂಡುಬೆಟ್ಟದ ತುದಿಯನ್ನು ಸೇರಿ ತನ್ನ ವಂಶದವರನ್ನು ಪ್ರೀತಿಯಿಂದ ನೋಡಿದ. ಅಳುತ್ತಳುತ್ತಲೇ ಮಲಗಿ ನಿದ್ರಿಸಿದ್ದ ಭರತನು ಎಚ್ಚರಗೊಂಡು ತಾನು ಮಾಡಬೇಕಾಗಿದ್ದ ಕೆಲಸಗಳನ್ನು ನೆನೆಸಿಕೊಂಡು ಶತ್ರುಘ್ನನನ್ನು ಎಚ್ಚರಿಸಿ, ಪ್ರಯಾಣಕ್ಕೆ ಸಿದ್ಧತೆಗಳನ್ನು ಮಾಡಲು ಸೂಚಿಸುತ್ತಿರುವಷ್ಟರಲ್ಲಿ ಗುಹನು ಹತ್ತಿರ ಬಂದು ಕೈಮುಗಿದು ನಿಂತ. ಆಗ ಭರತನು, "ರಾತ್ರಿ ಒಂದು ಯುಗ ಎನ್ನಿಸಿತು. ನಿನ್ನಿಂದಾಗಿ ನಾವು ಹೊಸ ಸುಗ್ಗಿಯನ್ನು ಉಂಡೆವು. ಹಾಗೆಯೇ ನಾವು ಈ ನದಿಯನ್ನು ದಾಟಲು ಸಹಾಯ ಮಾಡು" ಎನ್ನಲು ಗುಹನು ತನ್ನ ಬಂಧುವರ್ಗದವರನ್ನೆಲ್ಲ ಸೇರಿಸಿ ಐನೂರು ದೋಣಿಗಳನ್ನು ಸಂಗ್ರಹಿಸಿಕೊಂಡು ಹೊಸ ಗಂಟೆಗಳಿಂದ ಅಲಂಕೃತವಾದ ಸ್ವಸ್ತಿಕ ಎಂಬ ನೌಕೆಯನ್ನು ತಾನು ಹಿಡಿದುಕೊಂಡು ಬಂದ. ಎಲ್ಲವೂ ಸಿದ್ಧವಾಗಿರುವುದನ್ನು ತಿಳಿಸಲು ಭರತನು ಶತ್ರುಘ್ನನೊಡನೆ ಸ್ವಸ್ತಿಕವನ್ನೇರಿದ; ಅಂತೆಯೇ ಅಂತಃಪುರಾಂಗನೆಯರೆಲ್ಲ ಬೇರೆ ಬೇರೆ ದೋಣಿಗಳಲ್ಲಿ ಕೂತರು. ಋತ್ವಿಕ್ಕುಗಳು ಅಗ್ನಿಯೊಡನೆ ನೌಕೆಗಳನ್ನೇರಿದರು. ಕೆಲವರು ಆನೆಗಳನ್ನೇರಿ ಮತ್ತೆ ಕೆಲವರು ಕುದುರೆಗಳ ಮೇಲೆ ಕುಳಿತು ಕೆಲವರು ತೆಪ್ಪಗಳನ್ನಡರಿ, ಕೆಲವರು ಗಡಿಗೆಗಳನ್ನು ಹಿಡಿದುಕೊಂಡು ತೇಲುತ್ತ ಸಾಗಿಬಂದರು, ಕೆಲವರು ಈಜಿಕೊಂಡು ಬಂದರು – ಹೀಗೆ ನಾನಾ ಉಪಾಯಗಳಿಂದ ಎಲ್ಲರೂ ಸುಸೂತ್ರವಾಗಿ ಗಂಗಾನದಿಯನ್ನು ದಾಟಿದರು.

ಭರತನು ನಾವೆಯಿಂದ ಇಳಿದು ದಡದಲ್ಲಿ ನದಿಯನ್ನು ಆಶ್ಚರ್ಯದಿಂದ ನೋಡುತ್ತ ಕುಳಿತುಕೊಂಡ. ಎಲ್ಲರೂ ಸುಖವಾಗಿ ನದಿಯನ್ನು ದಾಟಿ ಬಂದ ಮೇಲೆ ಭರತನು ಬಲ್ಲಹರ ಶಿಖಾಮಣಿಯಾದ ವಸಿಷ್ಠಮುನಿಯನ್ನೊಡಗೊಂಡು ಭರದ್ವಾಜರ ಆಶ್ರಮದತ್ತ ಹೊರಡಲು ಆ ಮುನಿವರನ ಶಿಷ್ಯರು ಗುರುವಿನ ಮನಸ್ಸನ್ನರಿತು ಮುಂದೆ ಸಾಗಿದರು. ಭರತನೊಡನೆ ಬರುತ್ತಿರುವ ಸರಸಿಜಾನನತನಯರನ್ನು ಕಂಡ ಭರದ್ವಾಜನು ಇದಿರೆದ್ದು ಬಂದು ಸ್ವಾಗತಿಸಲು, ಭರತನು ಮುನಿಗಳ ಚರಣಗಳಿಗೆ ನಮಸ್ಕರಿಸಿದ.

ದಶರಥಪುತ್ರರನ್ನು ಹರಸಿದ ಅವರು ಶ್ರೇಷ್ಠವಾದ ರೀತಿಯಲ್ಲಿ ಅರ್ಘ್ಯೋಪಚಾರಗಳನ್ನು ಮಾಡಿ ವಸಿಷ್ಠಮುನಿಯನ್ನು ಸಂತಸದಿಂದ ಆಲಿಂಗನಗೈದು ಕೈಹಿಡಿದು ವಿನಯದಿಂದ ಕರೆದೊಯ್ದು ಕುಳ್ಳಿರಿಸಿ ಉಪಚರಿಸಿದ. ಆನಂತರ ಪುರದುರ್ಗಪುತ್ರಮಿತ್ರಾದಿಗಳ ಕುಶಲವನ್ನು ವಿಚಾರಿಸಿದಾಗ ಭರತನು ವಿನಯದಿಂದ ಕೈಮುಗಿದು ಹೀಗೆಂದ: "ತಮ್ಮ ಚರಣಬಲದಿಂದ ಎಲ್ಲರೂ ಆರೋಗ್ಯಭಾಗ್ಯದಿಂದಿದ್ದಾರೆ. ತಮ್ಮ ಆಶ್ರಮದ ಮರಗಿಡಗಳೂ ಶಿಷ್ಯರೂ ತಪೋಗ್ನಿಗಳೂ ಕುಶಲವೇ?" ಎಂದು ವಿಚಾರಿಸಿದ. ಅವನ ಮಾತನ್ನು ಕೇಳಿ ಸಂತಸಗೊಂಡ ಭರದ್ವಾಜನು, "ಮಹಾರಾಜ, ನಿನ್ನ ದೃಢ ಪರಾಕ್ರಮದಿಂದ ಲೋಕವೆಲ್ಲವೂ ಸುಖದಿಂದಿದೆ, ಶ್ರೀರಾಮನು ತಂದೆಯಿತ್ತ ರಾಜ್ಯವನ್ನು ಬಿಟ್ಟು ಕಾಡಿಗೆ ಬರಲೇನು ಕಾರಣ? ರಾಘವನನ್ನು ಕಳಿಸಿ ನಿಷ್ಕಂಟಕವಾಗಿ ಭೋಗವನ್ನನುಭವಿಸಬೇಕೆಂಬ ಆಸೆ ನಿನಗಾಯಿತೇ?" ಎಂದು ಮೂದಲಿಸಲು ಭರತನಿಗೆ ಅತೀವ ಅನುತಾಪವುಂಟಾಯಿತು; ಕಣ್ಣೀರು ಸುರಿಸುತ್ತ ಮುನಿವರ್ಯನಿಗೆ ನಮಸ್ಕರಿಸಿ ಕೈಮುಗಿದುಕೊಂಡು, "ನನ್ನ ತಾಯಿ ಮಾಡಿದ ಕಾರ್ಯವು ನನಗೆ ಕೊಂಚವಾದರೂ ಸಮ್ಮತವಾಗಿದ್ದರೆ ನಾನು ನರಕಕ್ಕೆ ಹೋಗುತ್ತೇನೆ, ತಮ್ಮ ಚರಣಗಳಿಗೆ ಈ ವಿಷಯ ತಿಳಿಯದುದೇ?" ಎಂದು ಅತ್ಯಂತ ಭಕ್ತಿಯಿಂದ ಬಿನ್ನವಿಸಿಕೊಂಡ. "ತಂದೆಯಿಂದ ಬಂದ ರಾಜ್ಯಭೋಗಗಳನ್ನು ಭಕ್ತಿಯಿಂದ ರಾಮನ ಪಾದಪದ್ಮಗಳಿಗೆ ಅರ್ಪಿಸಿ ಅವನನ್ನು ಮತ್ತೆ ಕರೆತಂದು ಗದ್ದುಗೆಯ ಮೇಲೆ ಕುಳ್ಳಿರಿಸಿ ನಾನು ಕೃತಕೃತ್ಯನಾಗುವ ಉದ್ದೇಶದಿಂದ ಗುರು ವಸಿಷ್ಠರು ಹಾಗೂ ಪ್ರಜೆಪರಿವಾರಗಳ ಸಮೇತ ಬಂದಿದ್ದೇನೆ. ಇದು ಸತ್ಯವೇ ಸುಳ್ಳೆ ಎಂಬುದನ್ನು ತಮ್ಮ ದಿವ್ಯದೃಷ್ಟಿಯಿಂದ ತಿಳಿದು, ತಪ್ಪು ಮಾಡಿದ್ದರೆ ನನ್ನನ್ನು ಧಿಕ್ಕಾರಮಾಡಿ ಕರುಣಿಸಿರಿ" ಎಂದು ಗದ್ಗದವಾಣಿಯಿಂದ ಕಂಬನಿ ಸುರಿಸುತ್ತ ನುಡಿದ. ಅದನ್ನು ಕಂಡ ಭರದ್ವಾಜಮುನಿಯು, "ನನಗೆ ಎಲ್ಲವೂ ಜ್ಞಾನದೃಷ್ಟಿಯಿಂದ ತಿಳಿದಿದೆ; ಆದರೆ ನಿನ್ನ ನಿರ್ಮಲತೆಯು ಲೋಕಕ್ಕೆ ತಿಳಿಯಲೆಂಬ ಉದ್ದೇಶದಿಂದ ಈ ರೀತಿ ಕೇಳಿದೆನೇ ಹೊರತು ನಿನ್ನ ಬಗ್ಗೆ ಕೊಂಚವಾದರೂ ಅನುಮಾನದಿಂದಲ್ಲ. ಸಜ್ಜನರ ಮಕುಟಮಣಿಯೇ, ನಿನ್ನಂತೆ ಅಪರಿಮಿತ ಶ್ರೀರಾಮಭಕ್ತನು ಸಾಗರಪರ್ಯಂತವಾದ ಈ ಜಗತ್ತಿನಲ್ಲಿ ಬೇರಾರಿದ್ದಾರೆ? ಪರತರಾನಂದಮಯನು ಭೂಮಿಯ ಭಾರವನ್ನಿಳುಹಲು ಧರಣಿಯಲ್ಲಿ ಅವತರಿಸಲು ಅವನ ಪರಿಚರರಾದ ನೀವೆಲ್ಲ ಮನುಷ್ಯರೂಪವನ್ನು ತಾಳಿ ಬಂದಿರುವವರಾದ್ದರಿಂದ ಈ ಬುದ್ಧಿಯು ನಿಮಗಲ್ಲದೆ ಮಿಕ್ಕ ಮಾನವರಿಗೆ ಉಂಟಾಗುವುದೇ? ಉಂಟಾದರೂ ಧರ್ಮವನ್ನು ಮೀರದೆ ಪರಂಧಾಮನಲ್ಲಿ ಒಂದಾಗುತ್ತದೆಯೇ? ನನಗೆ ಎಲ್ಲವೂ ಗೊತ್ತು, ಬಲ್ಲಹರಲ್ಲಿ ಅಗ್ಗಳನಾದವನೇ, ಕ್ಲೇಶಗೊಳ್ಳಲೇಕೆ, ಸಂತಾಪವನ್ನು ಬಿಟ್ಟು ಈ ರಾತ್ರಿ ಇಲ್ಲಿದ್ದು ಬೆಳಿಗ್ಗೆ ಮುಂದೆ ಹೋಗಬಹುದು" ಎಂದು ಸಮಾಧಾನ ಮಾಡಿದ. ಆಗ ಭರತನು ಮುನಿವರನಿಗೆ ಮಣಿದು, "ರಘುವರನು ಇರುವ ಜಾಗವಾವುದು, ಇಲ್ಲಿಂದ ಎಷ್ಟು ದೂರ ಎಂಬುದನ್ನು ಹೇಳಿದರೆ ಬೇಗ ಹೋಗಿ ಅವನ ಚರಣಗಳಿಗೆರಗುವ ಕಾತರ ನನ್ನದು" ಎಂದು ನುಡಿದ.

"ಭಕ್ತಾಗ್ರಣಿಯೇ, ಯೋಚಿಸಬೇಡ, ಮುಂದೆ ಕಾಣುತ್ತಿದೆಯಲ್ಲ ಒಂದು ಬೆಟ್ಟ,

ಅದೇ ವಸಂತನ ಮನೆಯಂತಿರುವ ಚಿತ್ರಕೂಟಾದ್ರಿ, ರಘುವೀರನು ತನ್ನ ಹೆಂಡತಿ ತಮ್ಮನೊಡನೆ ಸಂತೋಷದಿಂದ ಆ ಬೆಟ್ಟದ ಬಳಿಯಿದ್ದಾನೆ. ಬೆಳಿಗ್ಗೆ ನಾವು ನೀಡುವ ಕಾಡಿನ ಉಪಾಹಾರವನ್ನು ಸೇವಿಸಿ ಹೋಗಬಹುದು" ಎನ್ನಲು ಭರತನು, "ತಮ್ಮ ಚರಣಗಳನ್ನು ಕಂಡು, ತಮ್ಮ ಉಪಚಾರಗಳನ್ನು ಹೊಂದಿ, ತಮ್ಮ ಮಾತುಗಳನ್ನು ಕೇಳಿ ಅಮಿತವಾದ ಸಂತಸವುಂಟಾಯಿತು. ತಮ್ಮ ಆಶ್ರಮಕ್ಕೆ ಒಂದು ಕ್ರೋಶ ದೂರದಲ್ಲಿ ನನ್ನ ಸೈನ್ಯ ಬೀಡುಬಿಟ್ಟಿದೆ, ಹಾಗೆಯೇ ಆನೆಕುದುರೆರಥಗಳೂ ಅಳಿವೆ. ಅವುಗಳೆಲ್ಲವನ್ನೂ ಒಳಗೊಂಡು ಬಂದರೆ ಆಶ್ರಮದ ಗಿಡಮರಬಳ್ಳಿಗಳಿಗೆ ತೊಂದರೆಯಾದೀತೆಂದು ಹೆದರಿ ನಾವು ಮಾತ್ರ ಬಂದಿದ್ದೇವೆ. ಸೇನೆ ಒಂದು ಕಡೆ, ನಾನೊಂದು ಕಡೆ ಇರುವುದನ್ನು ಕಂಡರೆ ಸಮಾನೀಕರಿಗೆ ಅನುಮಾನವುಂಟಾಗದಿರುವುದೇ? ತಾವು ಅಪ್ಪಣೆಯನ್ನು ಕೊಟ್ಟರೆ ಈ ರಾತ್ರಿಯಿದ್ದು ಬೆಳಿಗ್ಗೆ ಸೈನ್ಯದೊಡನೆ ಬೆಟ್ಟದ ತಪ್ಪಲಿಗೆ ಹೋಗುತ್ತೇನೆ" ಎಂದ. ಆಗ ಮುನಿವರರು, "ಸೈನ್ಯವೆಲ್ಲಕ್ಕೂ ಹರ್ಷದಿಂದ ಆತಿಥ್ಯವನ್ನು ಮಾಡುವ ಬಯಕೆ ನಮ್ಮದು, ಅದನ್ನೆಲ್ಲ ಈಗಲೇ ಇಲ್ಲಿಗೆ ಬರುವಂತೆ ಹೇಳು. ನಮ್ಮ ಸತ್ಕಾರವನ್ನು ಕೈಕೊಂಡು ಸಂತೋಷವಾಗಿ ಮುಂದೆ ಸಾಗಬಹುದು" ಎಂದು ನುಡಿಯಲು ಭರತನು 'ಹಸಾದ' ಎಂದು ತನ್ನ ಸೈನ್ಯವನ್ನೆಲ್ಲ ಕರೆಸಿದ. ಸಮುದ್ರವು ಉಕ್ಕೇರಿದಂತೆ ಸೈನ್ಯವು ಬರಲು ತಾಪಸನು ಕೈಕಾಲುಗಳನ್ನು ತೊಳೆದುಕೊಂಡು ಆಚಮನ ಮಾಡಿ ಅಗ್ನಿಹೋತ್ರಮಂದಿರಕ್ಕೆ ಹೋಗಿ ಅಗ್ನಿಯನ್ನು ಪ್ರದಕ್ಷಿಣೆ ಬಂದು, ಯತಿಪೀಠದಲ್ಲಿ ಕುಳಿತು ಕೈಯಲ್ಲಿ ದರ್ಭೆ ಹಿಡಿದು ಪದ್ಮಾಸನವನ್ನು ಹಾಕಿಕೊಂಡು ಮುದ್ರೆಯಿಂದ ಉಸಿರನ್ನು ತೆಗೆದುಕೊಂಡು ಸೂರ್ಯನಿಂದ ಅರೆನಿಮಿಷದಲ್ಲಿ ಅಗ್ನಿಯನ್ನು ಕುಂಭಿಸಿ, ಉಪಶಮನ ಮಾಡಿ ಸಂಪೂರ್ಣ ಕುಂಭಕದಲ್ಲಿ ಮನಸ್ಸು ಮಿಸುಕದ ರೀತಿಯಲ್ಲಿ ನಿಲ್ಲಿಸಿಕೊಂಡು ಇಂದ್ರಿಯಗಳಾಟವು ಕೊಂಚವೂ ಇಲ್ಲದ ರೀತಿಯಲ್ಲಿ ನಿಶ್ಚಲನಾಗಿ ಊಹಾಪೋಹ ಎನಿಸಿದ. ನಡುನೆತ್ತಿಯಲ್ಲಿ ಹೊಳೆಯುವ ಅಖಂಡ ತೇಜೋರಾಶಿಯೊಡನೆ ಸೇರಿ ನಿದ್ರೆ ಎಚ್ಚರಗಳ ಹಂಗಿಲ್ಲದೆ ದೀಪದ ಕುಡಿಯಂತೆ ಹರ ವಿಷ್ಣು ವಿಧಾತ್ರರನ್ನೊಳಗೊಂಡ ರಾಮಪುರೀಶನೆನಿಸಿಕೊಂಡು ಉಬ್ಬರವಿಳಿತಗಳಿಲ್ಲದ ಕಡಲಿನಂತೆ ಪೂರ್ತಿ ನೀರು ತುಂಬಿದ ಕಳಶದಂತೆ ಇದ್ದ.

೨೮. ಬ್ರಹ್ಮರ್ಷಿಗಳು ನೀಡಿದ ಔತಣವನ್ನು ಸ್ವೀಕರಿಸಿ ರಾತ್ರಿಯನ್ನು ಕಳೆದು ಭರತನು ಬೆಳಿಗ್ಗೆ ಮುಂದೆ ಸಾಗಿದುದು

ಮಹಾಯೋಗೀಶನಾದ ಭರದ್ವಾಜನು ಕರ್ಮಚಿತ್ತದಿಂದ ಅರೆನಿಮಿಷ ಚಿತ್ಸಮಾಧಿಯನ್ನು ವಿಸ್ತರಿಸಿ ಯೋಗಬಲದಿಂದ ಚರಾಚರಗಳು ಕರತಲಾಮಲಕವಾಗಲು ಮುನಿವರನು ಒಬ್ಬೊಬ್ಬರನ್ನೂ ಕರೆದು ಆಗಬೇಕಾದ ಕೆಲಸಗಳನ್ನು ಸೂಚಿಸಿದ ಅಚ್ಚರಿಯನ್ನು ಏನೆಂದು ಹೇಳಲಿ! "ವಿಶ್ವಕರ್ಮನೇ, ನಿನಗೆ ನಮಸ್ಕಾರ, ನಿನ್ನ ಬಲಸಮೇತವಾಗಿ ಬಂದು ಭರತನು ಇರಲು ಬೇಕಾದ ನಿವಾಸವನ್ನು ರಚಿಸು" ಎಂದ; ದಿಕ್ಪಾಲಕರೊಡನೆ, "ನಾನು ಈ ನೆಲದೊಡೆಯನಿಗೆ ಆತಿಥ್ಯವನ್ನು ನೀಡಲು ಇಚ್ಛೆಸಿದ್ದೇನೆ, ನೀವೆಲ್ಲ ಭೂಮಿಗೆ ಬಂದು

ನನಗೆ ಸಹಾಯ ಮಾಡಬೇಕು" ಎಂದ; ಇಲ್ಲಿಗೆ ಬರಲು ನಾಲ್ಕೂ ದಿಕ್ಕುಗಳ ನದಿಗಳಿಗೆ ಆಜ್ಞಾಪಿಸಿದ; "ನಳಿನಾಕ್ಷ ಭರತನಿಗೆ ಭೋಜನ ಮಾಡಿಸಲು ನನ್ನ ಮನಸ್ಸು ಬಯಸಿದೆ, ನದಿಗಳೆಲ್ಲವೂ ತಮ್ಮ ಕೊಂಕನ್ನು ಬಿಟ್ಟು ಮೈರೇಯ ಮದ್ಯ ಪಾಯಸರೂಪದಲ್ಲಿ ಬಂದು ಸಮಭಾವದಿಂದ ಎಲ್ಲ ಪ್ರಾಣಿಗಳನ್ನು ಸತ್ಕರಿಸಲು ಸುಲಭವಾಗುವಂತೆ ಹರಿಯಲಿ" ಎಂದೂ, ಅಪ್ಸರಗಣವೂ ದೇವಕಳೆಯ ಗಾಂಧರ್ವ ಮೇನಕೆ ಮುಂತಾದವರನ್ನು ಕುರಿತು, "ನೀವೆಲ್ಲ ಹರುಷದಿಂದ ಮೋಹಕ ರೂಪವನ್ನು ಧರಿಸಿ ಬಂದು ಭರತನ ಪರಿವಾರವನ್ನು ಸಂತಸಗೊಳಿಸಬೇಕು" ಎಂದು ನೇಮಿಸಿದ. "ಚೈತ್ರರಥ ಮುಂತಾದ ದಿವ್ಯೋದ್ಯಾನಗಳೆಲ್ಲ ಇಲ್ಲಿಗೆ ಬರಲಿ" "ವರವಿಲಾಸಿನಿಯರೆಲ್ಲರೂ ಈ ಜನರನ್ನು ತುಷ್ಟಿಗೊಳಿಸಲು ಬರಲಿ" ಎಂದು ಸೂಚಿಸಿದ. ಚಂದ್ರನನ್ನು ನೋಡಿ, "ಸೋಮನೇ, ಷಡ್ರಸಗಳನ್ನು ಸೃಜಿಸು" ಎಂದ; ಇಂದ್ರನೇ ಮುಂತಾವರಿಗೆ ಮುನಿತಿಲಕನು, "ಎಲ್ಲ ಜೀವರೂ ತೃಪ್ತಿಪಡುವಂತೆ ನೀವೆಲ್ಲರೂ ನಾನಾ ಬಗೆಯಲ್ಲಿ ಪ್ರಯತ್ನಿಸಿರಿ" ಎಂದು ಯೋಗಿತಿಲಕನು ಧ್ಯಾನಯೋಗದಲ್ಲಿ ಕುಳಿತು ಇಚ್ಛಿಸಿದಂತೆಯೇ ಎಲ್ಲವೂ ಕ್ಷಣಾರ್ಧದಲ್ಲಿ ಸಿದ್ಧವಾಯಿತು. ಮುನಿಪೋತ್ತಮನ ತಪೋದ್ದಾಮತೆಯನ್ನು ಏನೆಂದು ಹೇಳುವುದು? ಆ ಆಶ್ರಮವು ಸ್ವರ್ಗಕ್ಕೆ ಇಮ್ಮಡಿಯಾದ ವೈಭವವನ್ನು ಪಡೆಯಿತು.

ಐದು ಯೋಜನ ಅಗಲದಲ್ಲಿ ಅಲ್ಲಿನ ಭೂಮಿ ರತ್ನಮಯವಾಯಿತು; ಅಲ್ಲಲ್ಲಿ ಅಮಿತ ವೈಭವದಿಂದ ಕೂಡಿದ ವಾಸಸ್ಥಾನಗಳು ನಿರ್ಮಿತವಾದವು; ಅವುಗಳ ನಡುವೆ ಅರಮನೆಯೊಂದು ಕಣ್ಗೆಸೆಯಿತು; ಚಂದ್ರನನ್ನು ಚುಂಬಿಸುವಂತಹ ಗೋಪುರಗಳ ಎತ್ತರವಾದ ಕರುಮಾಡಗಳು ಮೇಲೆದ್ದುವು; ವಿನೋದಗಳಿಗೆಂದು ಕೊಳಗಳು ನಿರ್ಮಾಣಗೊಂಡವು; ರತ್ನದ ಎಲೆಗಳನ್ನು ನೋಡಿ ಕೋಗಿಲೆಗಳು ಕೂಜಿಸುವಂತಾಯಿತು, ಚೆನ್ನಾಗಿ ಕುಣಿಯುವ ನವಿಲುಗಳು, ಠೀವಿಯಿಂದ ನಡೆಯುವ ಹಂಸಗಳು, ಪಚ್ಚೆಯನ್ನು ನೀರೆಂದು ಭಾವಿಸುವ ಚಕ್ರವಾಕಗಳು, ಬೆರಗನ್ನುಂಟುಮಾಡುವ ಚಿನ್ನದ ಪುತ್ಥಳಿಗಳು ಸೃಷ್ಟಿಗೊಂಡವು. ದೇವೇಂದ್ರನ ಅರಮನೆಯೋ, ಕುಬೇರನ ಆವಾಸವೋ, ಶಿವನಾಲಯವೋ, ಬ್ರಹ್ಮನ ಮಂದಿರವೋ, ವಿಷ್ಣುವಿನ ನಿಲಯವೋ, ಲಕ್ಷ್ಮಿಯ ತವರುಮನೆಯೋ ಎಂದು ತೋರುವಂತಹ ಅತಿಶಯದಿಂದ ಅನೇಕ ಬಗೆಯಲ್ಲಿ ಶಿಲ್ಪಿಗೂ ಅಸಾಧ್ಯವೆನ್ನಿಸುವ ಚಿತ್ರರಚನೆಗಳುಳ್ಳ ನಿವಾಸಸ್ಥಾನಗಳನ್ನು ಆ ಪರಮಋಷಿಯು ಮೆಚ್ಚುವಂತೆ ಮಯನು ಕಣ್ಣು ಮುಚ್ಚಿ ಬಿಚ್ಚುವಷ್ಟು ಬೇಗ ನಿರ್ಮಿಸಿಬಿಟ್ಟ. ಪಾಯಸ, ಮೈರೇಯ, ಆಸವ, ಕಬ್ಬಿನ ರಸ, ಪಾನಕ್ಷೀರ, ಸ್ವಾದೋದಕದಿಂದ ಕೂಡಿದ ವಿವಿಧ ನದಿಗಳು ಪ್ರಸನ್ನತೆಯಿಂದ ಭೂಮಿಯಲ್ಲಿ ಹರಿಯತೊಡಗಿದವು. ಜೊತೆಗೆ ಆಶ್ಚರ್ಯಕರವಾದ ರೀತಿಯಲ್ಲಿ ಆಗಸದಲ್ಲಿ ಮೋಡಗಳು ರಾಶಿಗಟ್ಟಿ ಹದವಾದ ಮಳೆ ಸುರಿಸಿತು. ನಂದನ ಚತ್ರರಥ ಕುರು ರಮ್ಯಕಗಳ ಮರಗಳೆಲ್ಲ ಪುಟ್ಟ ಪುಟ್ಟ ರೂಪದಲ್ಲಿ ಬಂದು ಕೊಂಬೆಗಳು ಕೈಗೆ ಸಿಗುವಂತಹ ರೀತಿಯಲ್ಲಿ ಮೈವೆತ್ತುವು. ಸುಲಲಿತವಾದ ವಸ್ತ್ರಗಳನ್ನು ತೊಟ್ಟು, ಚಂದನ ಮುಂತಾದ ಹಾರಗಳನ್ನು, ವಿವಿಧ ಪರಿಮಳಗಳ ಹೂಗಳನ್ನು ಧರಿಸಿದ ಸುಂದರಾಂಗನೆಯರು ವಿಹರಿಸತೊಡಗಿದರು. ಹಲವಾರು ಬಗೆಯ ವಸ್ತ್ರಭೂಷಣಗಳನ್ನು ತೊಟ್ಟ ಹದಿನಾರು ಸಾವಿರ ಮಂದಿ

ವಿಮಲನೇತ್ರೆಯರಾದ ದೇವತಾಂಗನೆಯರು ಕುಬೇರನ ಅರಮನೆಯಿಂದ ಬಂದರು; ತುಂಬುರುನಾರದರು ಗಾಂಧರ್ವಕೋವಿದರು ಠೀವಿಯಿಂದ ಗುಂಪುಗೂಡಿ ಮುನಿಯೆಡೆಗೆ ಬಂದರು; ಕೇಳಲು ಇಂಪಾದ ಶಬ್ದ ಮಾಡುತ್ತ ವಿವಿಧ ದಿಕ್ಕುಗಳಲ್ಲಿ ದೇವದುಂದುಭಿಗಳು ಮೊಳಗಿದವು. ಒಂದು ಕಡೆ ವೀಣಾನಾದದೊಡನೆ ಗಾಯನದ ಇಂಪು, ಮತ್ತೊಂದೆಡೆ ಮೃದಂಗದ ತಾಳಕ್ಕನುಗುಣವಾದ ಹಾಡುಗಾರಿಕೆ, ಮಗುದೊಂದೆಡೆ ಶ್ರುತಿಮಾಧುರ್ಯ ಯತಿಲಯಾನ್ವಿತವಾದ ಗಾಂಧರ್ವಗಾನ; ಒಂದೆಡೆಯ ಕೊಳಲು ಕಾಂಸ್ಯಗಳ ಧ್ವನಿಗುಂಫನ, ಮತ್ತೊಂದೆಡೆಯ ಲಾಸ್ಯ ನರ್ತನ ನೃತ್ಯ ವೈಭವಗಳಿಂದ ಕೂಡಿ ದೇವಲೋಕಕ್ಕಿಂತಲೂ ಆ ಪ್ರದೇಶ ಇಮ್ಮಡಿ ಬೆರಗನ್ನು ಹುಟ್ಟಿಸುತ್ತಿತ್ತು. ಸಂತಸವನ್ನು ನೀಡುವ ವಸಂತನ ರಥ, ಜಯಂತ, ಮನ್ಮಥ, ಮಂದಾನಿಲ – ಇವುಗಳ ಮುಂದೆ ಶುಕಪಿಕ ಅಂಚೆಕೊಂಚೆಗಳ ಸಂದಣಿಗಳು ಸೇರಿ ನೋಟಕರ ಚಿಂತಾಹರಣ ಮಾಡುತ್ತ ದೇವತಾಸಮಾನ ವೈಭವವನ್ನು ಬೀರುತ್ತ ಆನಂದದ ಸಂತೆ ಮುಂದುವರಿಯಿತು.

ಅಷ್ಟರಲ್ಲಿ ಭರತನು ತನ್ನ ಪರಿವಾರವನ್ನೆಲ್ಲ ಬೀಡುಬಿಡಿಸಲು ಕರೆತಂದು ನೋಡುತ್ತಾನೆ, ದೇವತೆಗಳನ್ನೆಲ್ಲ ಭೂಮಿಗೆ ಕರೆಸಿ ಆಶ್ರಮವನ್ನು ನಂದನವನವನ್ನಾಗಿ ಮಾಡಿದ ಮುನಿಯ ಸಾಮರ್ಥ್ಯವನ್ನು ಕಂಡು ನಿಬ್ಬೆರಗುಗೊಂಡ. ಎಲ್ಲರನ್ನೂ ಸೂಕ್ತವಾದ ಮನೆಗಳಲ್ಲಿ ಬಿಡಾರ ಮಾಡಿಸಿ ವಿಶ್ರಮಿಸಲು ಸೂಚಿಸಿ ಹಿಂದಿರುಗಲು ಅರಮನೆಯು ಕಣ್ಣಿಗೆ ಬಿತ್ತು, ಇಂದ್ರಲೋಕದಂತೆ ಆನಂದಕರವಾಗಿದ್ದ ಅದರಲ್ಲಿ ಸಚಿವರೊಡನೆ ಪ್ರವೇಶಿಸಿದ. ಅದರಲ್ಲಿ ಮೊದಲಿಗೆ ಕಾಣಿಸಿದುದು ಇಂದ್ರನ ಓಲಗಶಾಲೆಯಂತಹ ಚೆಲುವಾದ ಒಂದು ಹಜಾರ, ಅದರ ಮಧ್ಯದಲ್ಲಿ ಬೆಳ್ಗೊಡೆ ಚಾಮರಗಳಿಂದ ಕಂಗೊಳ್ಳಿಸುವ ದಿವ್ಯವಾದ ಸಿಂಹಾಸನ. ಅದನ್ನು ಕಂಡ ಭರತನಿಗೆ ಚೆಂದದ ಈ ಗದ್ದುಗೆಯು ರಘುವರನಿಗೆಂದು ಹೇಳಿ ಮಾಡಿಸಿದ ಹಾಗಿದೆಯೆಂದು ಅದಕ್ಕೆ ನಮಸ್ಕರಿಸಿ, ಭಕ್ತಿಯಿಂದ ಚಾಮರವನ್ನು ಹಿಡಿದುಕೊಂಡು ಕುಳಿತಿದ್ದಾಗ ಮಂತ್ರಿ ಸೇನಾನಿಗಳು ಅವನ ಎಡಬಲಗಳಲ್ಲಿ ಕುಳಿತುಕೊಂಡರು. ಭರತನು ಹಾಗೆ ಕುಳಿತಾಗ ಅರೆನಿಮಿಷದಲ್ಲಿ ಮನ್ಮಥನ ಮದವಾರಣಗಳಂತಿದ್ದ ದೇವತಾ ಸ್ತ್ರೀಯರು ತಂಡಗಳಲ್ಲಿ ಬಂದು ಖಂಡಸಕ್ಕರೆಯ ರಸವು ತುಳುಕಾಡುವಂತಹ ಗಾಂಧರ್ವಗಾನವನ್ನು ಪ್ರಚುರಪಡಿಸಲು, ತುಂಬುರನಾರದಾದಿಗಳು ಆನಂದದಿಂದ ವೀಣಾವಾದನ ಮಾಡಿದರು. ಕೊಳಲು ನಾಸಿಕ ವೀಣೆ ಡಮರು ಡಿಂಡಿಮ ಡಕ್ಕೆ ಮದ್ದಳೆ ಶಂಖ ತಾಳ ನಾದಮಯವಾದ ಗೆಜ್ಜೆ ನಾಗಸ್ವರ ಮುಂತಾದವುಗಳ ದನಿಯು ಒಂದು ನಿಮಿಷದಲ್ಲಿ ದಿಕ್ತಟವನ್ನು ಪಸರಿಸಿ ಲೋಕವು ಶಬ್ದಾನಂದದದಲ್ಲಿ ಲೀನವಾಯಿತು ಎಂಬ ರೀತಿಯಿಂದ ಸಭೆಯಲ್ಲಿನ ಎಲ್ಲರೂ ರೆಪ್ಪೆಗಳನ್ನು ಮಿಟುಕಿಸದ ಬೊಂಬೆಗಳಂತೆ ಕುಳಿತಿದ್ದರು.

ಪರಮಾನ್ನ ತುಂಬಿದ, ಮೈರೇಯದಿಂದ ಕೂಡಿದ ನದಿಗಳು ಮುಂದೆ ಹರಿಯುತ್ತಿರಲು, ಆನಂತರ ನಾನಾ ಬಗೆಯ ಪಕ್ವಫಲಗಳ ರಸಕಾಸಾರಗಳು ಶೋಭಿಸಲು, ಶ್ರೇಷ್ಠವಾದ ದುಕೂಲ–ಆಭರಣಗಳು, ಸುಗಂಧದ್ರವ್ಯಗಳು ಹಾಗೂ ಪರಿಮಳಭರಿತವಾದ ನಾನಾವಸ್ತುಗಳು ಬರುವುದನ್ನು ಕಂಡು ಭರತನು ಮುನಿಯ ಯೋಗಸಾಮರ್ಥ್ಯಕ್ಕೆ ಬೆರಗಾದ. ಎಷ್ಟು ಬಗೆಯ ಹೂಹಾರಗಳು, ಆಭರಣಗಳು, ವಸ್ತ್ರಗಳು; ಎಷ್ಟು ವಿಧದ

ಆಶ್ಚರ್ಯಕರವಾದ ವನ ಸರೋವರಗಳ ಕ್ರೀಡೋಪಕರಣಗಳನ್ನು ಸುರಲೋಕದಲ್ಲಿ ಆಟಕ್ಕಾಗಿ ಬಳಸುತ್ತಾರೆ ಎಂದು ಜನರು ಅಂದುಕೊಳ್ಳುತ್ತಾರೆಯೋ ಅವೆಲ್ಲವೂ ಕ್ಷಣಾರ್ಧದಲ್ಲಿ ಭರತನ ಎದುರಿಗೇ! ನೆನೆಸಿಕೊಂಡವರಿಗೆ ನೆನೆಸಿಕೊಂಡದ್ದು ಪ್ರತ್ಯಕ್ಷವಾಗುವ ಆಶ್ಚರ್ಯವನ್ನು ಏನೆಂದು ಬಣ್ಣಿಸುವುದು! ನೋಡಿದರೆ ಮೋಹಕ್ಕೊಳಗಾಗಿಸುವಂತಹ ಅಲಂಕಾರದಿಂದ ಕೂಡಿದ ಗಾಡಿಕಾತಿಯರು ಬಂದವರನ್ನು ಮಜ್ಜನಭೋಜನಾದಿಗಳಿಂದ ಉಪಚರಿಸುತ್ತ, ದಿವ್ಯಾಂಬರಗಳನ್ನು ಹೊದಿಸುತ್ತ, ಎಣೆಯಿಲ್ಲದ ಆಭರಣಗಳನ್ನು ತೊಡಿಸಿ, ಕೈಹಿಡಿದು ಬೀದಿಗಳಲ್ಲಿ ಸಂಚಾರ ಮಾಡಿಸುವವರು, ಅಚ್ಚರಿಯ ಆಟಪಾಟಗಳನ್ನು ತೋರಿಸುವವರು ಅಲ್ಲಿ ತುಂಬಿದ್ದರು. ಆನೆಗಳಿಗೆ ಬೇಕಾದ ಆಹಾರ, ಕುದುರೆಗಳ ಮೇಪಿನ ಹುಲ್ಲು, ಒಂಟೆ ಮುಂತಾದ ಎಲ್ಲ ಪ್ರಾಣಿಗಳಿಗೂ ಇಷ್ಟವಾದ ವಸ್ತುಗಳೆಲ್ಲ ಕೇಳಬೇಕಾಗಿಯೇ ಇಲ್ಲದ ರೀತಿಯಲ್ಲಿ ಎದುರಿಗಿದ್ದು ಬೇಕಾದುದನ್ನು ಸರಕ್ಕನೆ ತೆಗೆದುಕೊಡುವ ಪರಿಚಾರಕರು ವಿಸ್ಮಯವನ್ನುಂಟುಮಾಡಿದರು. ಇದನ್ನು ಆಗುಮಾಡಿದ ತಾಪಸನ ಸಂಯಮ ಸಚ್ಚರಿತಗಳನ್ನು ಎಷ್ಟೆಂದು ಹೊಗಳುವುದು! ಎಲ್ಲೆಲ್ಲಿ ನೋಡಿದರೂ ಬಯಸುವ ಅನ್ನಪಾನಾದಿಗಳು ಸುಲಭವಾಗಿ ದೊರಕುತ್ತಿದ್ದವು; ಯಾವ ವಸ್ತ್ರಭೂಷಣಗಳನ್ನು ಬಯಸಿದರೂ ದೊರೆಯುತ್ತಿದ್ದವು; ಎತ್ತ ನೋಡಿದರೂ ಇಷ್ಟವಾದುದನ್ನು ಪೂರೈಸುವ ಶೃಂಗಾರನಾಯಿಕಾಸಮುದಾಯ! ಅಲ್ಲಿ ಯಾರೂ ಒಂದೊಂದನ್ನು ಬೇಡುತ್ತಿರಲಿಲ್ಲ, ಸುರರ ಸಂತೆಯು ವಿನೋದಗೈಯುತ್ತ ನೀಡುವವರೇ ಎಲ್ಲ ಕಡೆಯೂ. ಬ್ರಹ್ಮನ ನಗರ, ವಿಷ್ಣುವಿನ ನೆಲೆವನೆ, ಕೈಲಾಸೇಶನ ಮನೆ, ಕುಬೇರನ ಪಟ್ಟಣ, ದೇವೇಂದ್ರನ ರಾಜಧಾನಿ, ದೇವತೆಗಳ ಊರು ಎನ್ನುವಂತೆ ಆ ಎಲರುಣಿಗನು ಸೃಷ್ಟಿಸಿದ ನಗರ ಕಂಗೊಳಿಸಿತು. ಮದನನ ಆಡುಂಬೊಲ, ವಸಂತನಾಲಯ, ಜಗತ್ತಿಗೆ ಸಂತಸವೀವ ಗಾಂಧರ್ವನಗರಕ್ಕೂ ಮಿಗಿಲೆನಿಸುವಂತೆ ಮುನಿಯ ಅನುಜ್ಞೆಯಿಂದ ಆಶ್ರಮಸ್ಥಾನವು ಚೆಲುವನ್ನು ಸೂಸುತ್ತಿತ್ತು. ಆ ದಿನ ಗಿಡಮರಬಳ್ಳಿಗಳೆಲ್ಲ ರಾಮನ ಆಕಾರವನ್ನು ತಾಳಿ ಕರೆಕರೆದು ಮನಸ್ಸಿಗೆ ಇಷ್ಟವಾದವುಗಳನ್ನು ನೀಡುತ್ತ ಎಲ್ಲರನ್ನೂ ಮುದಗೊಳಿಸುವ, ಮೃದುನುಡಿಗಳಿಂದ ಅನ್ನಪಾನಾದಿಗಳನ್ನಿತ್ತು ಉಪಚರಿಸುತ್ತ ಹರುಷಗೊಳಿಸುತ್ತಿದ್ದವು. ಅಲ್ಲಿ ಸೇರಿದ್ದ ಪ್ರಾಣಿಗಳೆಲ್ಲ ಸ್ವರ್ಗಭೋಜನವನ್ನುಂಡು ಬೆರಗಾದವು. ಇದನ್ನು ಆಗುಮಾಡಿದ ತಾಪಸನ ಶಕ್ತಿಯೆಂತಹುದೋ!

ಹೀಗೆ ಅಕಳಂಕಸುಖದ ಸುಗ್ಗಿಯನ್ನು ಸೂರೆಗೈದು ಜನಪ್ರಕರವಿರಬೇಕಾದರೆ ರಾತ್ರಿಯು ಒಂದು ನಿಮಿಷದಂತೆ ಕಳೆದುಹೋಯಿತು. ಅರೆನಿಮಿಷದಲ್ಲಿಯೇ ಸೂರ್ಯಬಿಂಬವು ಮೂಡುಬೆಟ್ಟದ ತುದಿಯಲ್ಲಿಟ್ಟ ಮಣಿಮುಕುರದಂತೆ ಕಾಣಿಸಿಕೊಂಡಿತು. ಆ ಸಮಯದಲ್ಲಿ ಸುಕುಮಾರನಾದ ಭರತನು ಎಚ್ಚೆತ್ತುಕೊಂಡು ಭಕ್ತಿಯಿಂದ ಕುಲದೇವರಿಗೆ ನಮಿಸಿ, ಶತ್ರುಘ್ನ ಸಕಲ ಮಂತ್ರಿಗಳು ಹಾಗೂ ವಸಿಷ್ಠಮುನಿಯನ್ನು ಒಳಗೊಂಡು ಭರದ್ವಾಜ ಮುನಿಯ ಬಳಿಗೆ ಹೋದ. ಅಷ್ಟು ಹೊತ್ತಿಗೆ ಆ ಮುನಿಪನು ಪೂರ್ವಾಹ್ನಿಕಕ್ರಿಯಗಳನ್ನು ಪೂರೈಸಿ ಅಗ್ನಿಯನ್ನು ಪೂಜಿಸುತ್ತ ಭಾಸುರತೇಜಸ್ಸಿನಿಂದ ಕೂಡಿ ಅಗ್ನಿನಿಲಯದಲ್ಲಿ ಕುಳಿತಿದ್ದ. ಭರತನು ಅವನ ಬಳಿಗೆ ಹೋಗಿ ಚರಣಗಳಿಗೆ ನಮಿಸಿ, "ವಾಸುದೇವಾತ್ಮಕರಾದ ತಮ್ಮ

ಕೃಪೆಯಿಂದ ಸ್ವರ್ಗೋಪಮವಾದ ಆತಿಥ್ಯದಲ್ಲಿ ರಾತ್ರಿಯನ್ನು ಸುಖವಾಗಿ ಕಳೆದೆವು. ರಘುವರನನ್ನು ಕಾಣುವ ಆತುರ ಹೆಚ್ಚಾಗಿದೆ, ತಾವು ಕೃಪೆಯಿಟ್ಟು ಬೀಳ್ಕೊಟ್ಟರೆ ಹೋಗಿ ಆತನ ಪಾದಗಳಿಗೆರಗಿ ಅವನನ್ನು ಜೊತೆಗೆ ಕರೆತಂದು ಅಕಲಂಕನೆನಿಸುತ್ತೇನೆ. ನಮ್ಮನ್ನು ಆಶೀರ್ವದಿಸಿ ಕಳಿಸಿಕೊಡಿ" ಎಂದು ವಿಜ್ಞಾಪಿಸಿಕೊಂಡ. ಭ್ರಾತೃಹಿತಕರ ಭರತನನ್ನು ನೋಡಿ ನಸುನಗುತ್ತ ಭರದ್ವಾಜನು, "ರಮ್ಯವಾದ ಮಂದಾಕಿನೀನದಿಯ ಬಡಗ ದೆಸೆಯಲ್ಲಿ ಅಸಂಖ್ಯವಾದ ದಿವ್ಯ ಬಳ್ಳಿಗಳೂ ಮರಗಳು ತುಂಬಿ ಮನೋಹರವಾದ ಹಾರದಂತೆ ಕಂಗೊಳಿಸುವ ಚಿತ್ರಕೂಟಗಿರಿಯು ಕಂಗೊಳಿಸುತ್ತದೆ. ಆ ಸುಂದರವಾದ ಬೆಟ್ಟವು ಇಲ್ಲಿಂದ ಐದು ಯೋಜನ ದೂರದಲ್ಲಿದೆ. ತೆಂಕ ಮುಖವಾಗಿ ಹೋದರೆ ರಾಮಚಂದ್ರನಿರುವ ಎಲೆವನೆ ಅಲ್ಲಿ ಕಾಣಿಸುತ್ತದೆ. ನಿಧಾನವಾಗಿ ಹೋಗಿ ಅಣ್ಣನ ಪಾದದರ್ಶನ ಮಾಡು. ಒಳ್ಳೆಯದಾಗಲಿ" ಎಂದು ಹೊರಡಲು ಅನುಮತಿಯನ್ನಿತ್ತ. ಭಕ್ತಿಯಿಂದ ಮುನಿಯ ಪಾದಗಳಿಗೆರಗಿದ ಭರತನು ಹೊರಡುವಷ್ಟರಲ್ಲಿ ನಿರ್ಲಜ್ಜೆಯಿಂದ ಕೈಕೇಯಿಯು ಅಲ್ಲಿಗೆ ಬಂದು ನಮಸ್ಕರಿಸಿದಳು. ಆನಂತರ ಸುಮಿತ್ರೆ ಮೊದಲಾದ ರಾಜಸ್ತ್ರೀಯರೆಲ್ಲ ಋಷಿಯ ಚರಣಗಳಿಗೆರಗಿ ಭರತನ ಪಕ್ಕದಲ್ಲಿ ನಿಂತುಕೊಂಡರು. ಅವರನ್ನು ನೋಡಿ ಮುನಿಯು, "ರಘುಜನೇ, ನಿನ್ನ ತಾಯಿಯು ಮಾಡಿದುದು ಜಗತ್ತಿನಲ್ಲಿ ಅತಿಶಯವಾದುದು" ಎಂದು ನುಡಿಯಲು ಭರತನು ಕೈಗಳನ್ನು ಮುಗಿದುಕೊಂಡು, "ತನ್ನ ಮಾತುಗಳಿಂದ ಗಂಡನನ್ನು ನುಂಗಿಕೊಂಡು ದೌರ್ಜನ್ಯಪೂರಿತವಾಗಿ ರಾಮಲಕ್ಷ್ಮಣರನ್ನು ಕಾಡಿಗಟ್ಟಿ ಪಾತಕವನ್ನು ಗಳಿಸಿ, ಕುಲವನ್ನು ನೀರಲ್ಲಿ ಮುಳುಗಿಸಿದ ದುಷ್ಟೆಯ ಬಸಿರಿನಲ್ಲಿ ಹುಟ್ಟಿದುದಕ್ಕಾಗಿ ನಾನು ವಿಖ್ಯಾತರಾದ ರಾಜಸಂಕುಲದಲ್ಲಿ ಲೋಕನಿಂದಕನೆನಿಸಿದೆ, ಅವರ ಮುಂದೆ ತಲೆಯೆತ್ತಿ ಮಾತಾಡಲಾರದಾದೆ. ಈ ದುಷ್ಕೃತ್ಯವನ್ನು ಅವಳನ್ನು ಕತ್ತರಿಸಿ ಪರಿಹರಿಸುತ್ತೇನೆಂದು ಆಯುಧವನ್ನು ಹಿಡಿಯಲು ಕೌಸಲ್ಯೆ ತಾಯಿಯು ನನ್ನ ಕೈಹಿಡಿದುಕೊಂಡು ಸಮಾಧಾನಪಡಿಸಿದಳು, ಆಕೆಗೆ ಎದುರು ಹೇಳಲಾರದೆ ನಾನು ಸುಮ್ಮನಾದೆ. ರಾಮನ ಚರಣಗಳೆಡೆ ಈಗ ಹೊರಟಿದ್ದೇನೆ, ಇಲ್ಲಿಯೂ ಅವಳೇನಾದರೂ ಅಡ್ಡ ಬಂದರೆ ತುಂಡುಮಾಡಿಬಿಡುತ್ತೇನೆ" ಎಂದು ಕಡುಗೋಪದಿಂದ ಗರ್ಜಿಸಿದ. ಆಗ ಭರದ್ವಾಜಮುನಿಯು, "ಒಳ್ಳೆಯವರನ್ನು ಕಾಪಾಡಿ, ಗೋಬ್ರಾಹ್ಮಣರನ್ನು ರಕ್ಷಣೆ ಮಾಡಿ, ಕಾಡಿಗೆ ಬಂದು ರಕ್ಕಸರನ್ನು ಕೊಂದು ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ ಕರುಣೆಯಿಂದ ರಘುವೀರನು ಕಾಡಿಗೆ ಬಂದಿದ್ದಾನೆ. ನಿನ್ನ ಬಗ್ಗೆ ತಾಯಿ ಕೈಕೇಯಿಯು ಆಡಿದ ಮಮತೆಯ ಮಾತುಗಳಿಂದ ನಿರ್ಮಮತೆಯುಳ್ಳವರನ್ನು ನಿವಾರಣೆ ಮಾಡುವ ಲೋಕೋಪಕಾರದ ರಮಣೀಯಚರಿತೆಯಾಯಿತು ಎಂದು ಭಾವಿಸಬೇಕು. ಈಕೆಯ ಸುವಾಣಿ ಮಿತಿಯಿಲ್ಲದಷ್ಟು ಅತಿಶಯವಾದ ಹಿತವನ್ನುಂಟುಮಾಡಿದೆ ಎಂದು ತಿಳಿದುಕೋ" ಎಂದು ವಿಶ್ಲೇಷಿಸಲು ಭರತನು ಸಂಯಮಿಗೆ ಅತಿಭಕ್ತಿಯಿಂದ ನಮಸ್ಕರಿಸಿ ಬೀಳ್ಕೊಂಡು ತನ್ನ ಪರಿವಾರ ಹಾಗೂ ಸೈನ್ಯಸಮೂಹವನ್ನೆಲ್ಲ ಕರೆಸಿ ಚಿತ್ರಕೂಟದತ್ತ ಪಯಣ ಬೆಳೆಸಿದ.

ದಾರಿಯನ್ನು ತಿಳಿದು ನಡೆದು ಹೋಗಲು ಆಣತಿಯಿತ್ತು, ಸ್ತ್ರೀಯರನ್ನು ಪಲ್ಲಕ್ಕಿಗಳಲ್ಲಿ ಕುಳ್ಳಿರಿಸಿ ತಾನು ಕನಕರತ್ನಮಯವಾದ ಶಿಬಿಕೆಯನ್ನೇರಿ ಮುಂದುವರಿಯಲು ನಿಶ್ಚಯಿಸಿದ.

ಮುನಿಪತಿಯು ಹೇಳಿದ್ದ ಚಿತ್ರಕೂಟಾದ್ರಿಯ ದಾರಿಯಗುಂಟ ಅಪಾರವಾದ ಸಾಗರವು ಧರಣಿತಳವನ್ನು ಆಲಂಗಿಸಿಕೊಳ್ಳಲು ಹೊರಟಿದೆಯೋ ಎಂಬಂತೆ ಚತುರಂಗಸೈನ್ಯವು ಮರಪೊದೆಬಳ್ಳಿಗಳ ನಡುವೆ ಮುಂದುವರಿಯಿತು. ಆ ಸೈನ್ಯದ ಮತ್ತು ಕುದುರೆಗಳ ನಡಿಗೆಯ ರಭಸದಿಂದಾಗಿ ಸುತ್ತಮುತ್ತಲಿದ್ದ ಪಕ್ಷಿಗಳೂ ಶರಭಗಳೂ ದೂರಸರಿದವು, ಭೂಮಿ ತಲ್ಲಣಗೊಂಡಿತು. ಹೀಗೆ ನದಿನದಹೊಳೆಗಳನ್ನೆಲ್ಲ ದಾಟಿ, ನಗರ ಖರ್ವಡ ಖೇಟಗಳನ್ನು ಕಳೆದು ಸಾಗುತ್ತಿರಲು ಮುನಿಯು ಹೇಳಿದ್ದ ಕುರುಹುಗಳಿದ್ದ ಬೆಟ್ಟವು ಕಾಣಿಸಿತು. ಆಗ ಭರತನು ಜಲಜಪೀಠನ ಮಗನನ್ನೂ ಸುಮಂತ್ರನನ್ನೂ ಮಿಕ್ಕ ಮುಖ್ಯರನ್ನೂ ಕರೆದು ದಿವ್ಯಸಿರಿ ದೊರಕಿದಂತಾಗಿ ಆ ಗಿರಿಯನ್ನು ಪರದೈವವೆಂದು ಬಗೆದು ದೂರದಿಂದಲೇ ನಮಸ್ಕರಿಸಿದ. ಹೊಸದಾದ ಮೋಡಗಳು ಮುಸುಕಿಕೊಂಡಿವೆಯೋ ಸಾಗರಗಳು ಸುತ್ತುವರಿದಿವೆಯೋ ಅಥವಾ ಆಕಾಶವೇ ತುಂಬಿಕೊಂಡಿದೆಯೋ ಎಂಬಂತೆ ವಿಚಿತ್ರತರವಾಗಿ ಹಲವು ಬಣ್ಣಗಳನ್ನು ಪಡೆದು ನವರಸೋನ್ಮೇಷಣಪೋಷಣ ಬೀಜವಾಗಿ ವನವು ಅಪರಿಮಿತ ಶೋಭೆಯಿಂದ ಕಂಗೊಳಿಸುತ್ತಿತ್ತು. ಇಂತಹ ಕಡೆ ಪ್ರಾಣಿಗಳು ಓಡಾಡುವುದು ತುಂಬ ಕಷ್ಟಕರವೇ ಸರಿ ಎಂದು ಶತ್ರುಘ್ನನಿಗೆ ತೋರಿಸಿದ. ಅಲ್ಲಿ ಸೂರ್ಯಕಿರಣಗಳು ಬೀಳುವುದೂ ಅಸಾಧ್ಯ, ಮಂದಮಾರುತವು ಬೀಸುವುದೂ ಅಸದಳ ಎಂದ ಮೇಲೆ ಮನುಷ್ಯರು ಹೋಗುವುದು ಸಾಧ್ಯವಾಗುವುದೇ ಎನ್ನುವಂತೆ ದಟ್ಟವಾದ ಕತ್ತಲೆ ತುಂಬಿಕೊಂಡಿರುತ್ತದೆ; ಶರಭ ಶಾರ್ದೂಲ ಸಿಂಹ ಆನೆಗಳ ಆರ್ಭಟೆಯು ಘೋರವೂ ಭೀಕರವೂ ಎನ್ನಿಸಿ ಮನುಷ್ಯರು ಮುಂದೆ ಸಾಗುವುದು ಹೇಗೆ ಎಂದು ಯೋಚಿಸುವಂತೆ ಮಾಡುವ ಈ ಕಾನನವನ್ನು ನೋಡು ಎಂದು ಭರತನು ಶತ್ರುಘ್ನನಿಗೆ ತೋರಿಸಿ ಹೇಳಿದ. ಈ ಹೇರಡವಿಯು ದೇವತಾಸಮೂಹವು ಬೀಡುಬಿಡುವ ತಾಣ, ಮುಂದಡಿಯಿಟ್ಟರೆ ಯಾವೆಡೆಗಳನ್ನು ನೆಲೆಯಾಗಿಸಿಕೊಂಡು ಮುನಿವರರು ತಪಸ್ಸು ಮಾಡುತ್ತಿರುತ್ತಾರೆಯೋ, ಈ ಕಡುಗತ್ತಲೆಯಲ್ಲಿ ಏನೇನಿರುವುದೋ ಕಾಣಿಸುವುದಿಲ್ಲ, ಕಾಣುವಷ್ಟು ಕಾಡಿನ ಆಧಾರದ ಮೇಲೆ ಮುಂದುವರಿಯುತ್ತ, ಅನಿರೀಕ್ಷಿತವಾದ ತೊಂದರೆಗಳುಂಟಾದರೆ ಚಾಕಚಕ್ಯತೆಯಿಂದ ಅವುಗಳನ್ನೆದುರಿಸಿ ಪರಿಹರಿಸಿಕೊಂಡು ಸೇನೆಯನ್ನು ಮುನ್ನಡೆಸಬೇಕೆಂದು ಸೇನಾಪತಿಗೆ ಎಚ್ಚರಿಕೆಯನ್ನು ಕೊಟ್ಟ. ಭರತನು ಕಾಡು ಬಲ್ಲವರನ್ನು ಕರೆದು ಈ ದಟ್ಟವಾದ ಕಾಡಿನಲ್ಲಿ ರಘುರಾಮನು ಯಾವ ಜಾಗದಲ್ಲಿದ್ದಾನೆಂಬುದನ್ನು ನೋಡಿಕೊಂಡು ಬರುವಂತೆ ಹೇಳಿಕಳಿಸಿದ. ಅಂತೆಯೇ ಕಾನನವನ್ನೆಲ್ಲ ಸುತ್ತಾಡಿದ ಅವರು ಮುನಿಗಳಿರುವ ನೆಲೆಗಳನ್ನು ಕಂಡುಕೊಳ್ಳುತ್ತ, ಅವರಿವರನ್ನು ವಿಚಾರಿಸಿ ಕಡೆಗೆ ಜನಕಜಾರಮಣನಿದ್ದ ಪರ್ಣಶಾಲೆಯ ಹತ್ತಿರ ಬಂದು ನೋಡಿ ಅದೇ ಎಂದು ಖಚಿತಪಡಿಸಿಕೊಂಡು, ಬಂದ ದಾರಿಯ ಕುರುಹು ಹಿಡಿದು ಬೇಗ ವಾಪಸಾದರು. ಬಂದವರೇ ಭರತನಿಗೆ ಅಡ್ಡಬಿದ್ದು, "ದೇವರೇ, ಮಂದಾಕಿನೀ ನದಿಯ ದಡದ ಅತಿ ರಮ್ಯವಾದ ಜಾಗದ ಪರ್ಣಶಾಲೆಯಲ್ಲಿ ಸೀತಾಸಮೇತರಾದ ರಾಘವರು ಶೋಭಿಸುತ್ತಿದ್ದಾರೆ. ಎಲೆವನೆಗೆ ದೂರದಲ್ಲಿ ಸುಮಿತ್ರಾತನಯರು ಎಚ್ಚರವಹಿಸಿ ನಾಲ್ಕೂ ದಿಕ್ಕುಗಳತ್ತ ಕಣ್ಣುಹಾಯಿಸುತ್ತ ಕಾಯುತ್ತಿದ್ದಾರೆ. ಆ ಪ್ರದೇಶವು ದೇವತೆಗಳು ಹೊಗಲೂ

ಅಸಾಧ್ಯವೆನ್ನಿಸುವಂತಿದೆ" ಎಂದು ವರದಿಯೊಪ್ಪಿಸಿದರು. ಚರರ ಮಾತುಗಳನ್ನು ಕೇಳಿ ಭರತನ ಮನಸ್ಸು ನಿರಾಳವಾಯಿತು.

ಸೈನ್ಯವನ್ನೆಲ್ಲ ಪ್ರಶಸ್ತವಾದ ಒಂದು ಜಾಗದಲ್ಲಿ ಬೀಡುಬಿಡಿಸಿ ಭರತನು ದಾರಿ ತಿಳಿದ ಬುದ್ಧಿವಂತ ವನಚರರ ಜೊತೆಯಲ್ಲಿ ಅಣ್ಣನನ್ನು ಕಾಣುವ ಹರ್ಷಾತಿರೇಕದಿಂದ ಕಾಡಿನಲ್ಲಿ ನುಗ್ಗಿ ಮುಂದುವರಿದ. ನಾನಾ ಬಗೆಯ ಪೊದೆಬಳ್ಳಿಹೊಂಡಗಳನ್ನು ದಾಟಿ, ತದೇಕಚಿತ್ತರಾಗಿ ಪರಧ್ಯಾನದಲ್ಲಿ ತೊಡಗಿರುವ ಮುನಿಜನರನ್ನು ನೋಡುತ್ತ, ಅಲ್ಲಲ್ಲಿ ದಾರಿಯನ್ನು ಹುಡುಕುತ್ತ ಅವರೆಲ್ಲ ಮುಂದುವರಿದರು. ರವಿಕಿರಣಗಳೇ ಹೊಗದ ಆ ದಟ್ಟಡವಿಯಲ್ಲಿದ್ದ ಎಲ್ಲ ಪ್ರಾಣಿಪಕ್ಷಿನಿಚಯವನ್ನೂ, ಕಾಡುವಾಸಿ ಜನರನ್ನೂ, ಬೇಡವನಿತೆಯರ ಕುಡಿನೋಟವಲ್ಲದೆ ಬೇರೆ ಬಗೆಯ ಬೆಳ್ದಿಂಗಳು – ಕಾಮ ಮಂದಾನಿಲ ವಸಂತ ಕುವಲಯಮಿತ್ರನ ಬೆಳಕುಗಳನ್ನು ತಡೆಯುವ ಶಿವನಂತೆ – ಆ ದಟ್ಟ ಕಾಡು ಭಯವನ್ನುಂಟುಮಾಡುವಂತಿತ್ತು. ಅಲ್ಲಲ್ಲಿ ಕೊಳಹೊಂಡಗಳನ್ನು ನೋಡುತ್ತ, ತಪಸ್ವಿಗಳನ್ನು ಕಾಣುತ್ತ, ಅನೇಕ ಬಗೆಯ ಕಾಡುಪ್ರಾಣಿಗಳ ಕೂಗಾಟ ದುಂಬಿಗಳ ಝೇಂಕಾರಗಳನ್ನು ಕೇಳುತ್ತ, ಬೇಟೆಗಾರರು ತೋರಿಸುವ ದಾರಿಯಲ್ಲಿ ಮುನ್ನಡೆದು ಮೇಲೆ ಮೇಲೇರುತ್ತ **ಶ್ರೀರಾಮಪುರಿನಾಯಕ**ನ ಪಾದಗಳನ್ನು ಕಾಣುವ ಆತುರದಲ್ಲಿ ಭರತನು ಬರುತ್ತಿದ್ದ.

೨೯. ಚಿತ್ರಕೂಟಗಿರಿಯ ವರ್ಣನೆ

ಇತ್ತ ನರಲೀಲೆಯಿಂದ ನಾನಾ ಬಗೆಯ ಜನರೊಡನೆ ಪ್ರೀತಿಯಿಂದ ಸೇರಿ ಅವರಿಗೆ ಅಜ್ಞಾನವು ಅಂಟದ ಹಾಗೆ ಪರುಷಶಿಲೆಯಂತೆ ಕೃತಕೃತ್ಯರನ್ನಾಗಿ ಮಾಡುವ ರಘುಚಂದ್ರಮನು ಧರಣಿತನೂಜೆಯನ್ನು ಕರೆದು ನಸುನಗುತ್ತ, "ಈ ಬೆಟ್ಟದ ವೈಭವವನ್ನು ನೋಡಿದರೆ ನನ್ನ ಮನಸ್ಸು ಉಲ್ಲಾಸದಿಂದ ತುಂಬಿಬಿಡುತ್ತದೆ. ನದಿದಡ, ಮರಗಳ ಸಮೂಹ, ನಾನಾ ಬಗೆಯ ಮೃಗಪಕ್ಷಿಗಳನ್ನು ನೋಡುತ್ತಲೇ ಇರಬೇಕೆನ್ನಿಸುತ್ತದೆ, ಅಲ್ಲವೇ? ಅರಸಿಯೇ, ಈ ಚಿತ್ರಕೂಟಾದ್ರಿಯು ಸಾಕೇತಪುರದ ನೆನಪನ್ನು ಮರೆಸುತ್ತಿದೆ. ಇಲ್ಲಿರುವ ವರಮೌನಿಸಂಕುಲವೂ ಮೃಗಪಕ್ಷಿಗಳವೂ ನಮ್ಮ ಆಪ್ತ ಬಂಧುಜನರಂತೆ ಭಾಸವಾಗುತ್ತಿದೆ" ಎಂದು ನುಡಿದು, ಸೀತೆಯ ಕೈಹಿಡಿದುಕೊಂಡು ಆ ಗಿರಿಯ ವೈಭವವನ್ನು ಸಂಭ್ರಮದಿಂದ ನೋಡಿ ವರ್ಣಿಸಿ ನಲಿಯುತ್ತಿದ್ದ.

ನಗರಾಜಸಂಭವೆಯೇ, ಕೇಳು, ಪಾತಾಳದ ನಾಗಕುಲನ ಮಣಿಗಣದ ತೇಜಃಪುಂಜವು ಅವುಗಳ ನಿಶ್ವಾಸದ ಗಾಳಿಯೊಡನೆ ಸೇರಿ ಮೇಲೆದ್ದು ಬರುವುದನ್ನು ಕಂಡು ಅಂಬುಜೋದ್ಭವನು ಅಧಿಕ ಹರುಷದಿಂದ ಭೂತಳದಲ್ಲಿ ಅತ್ಯಂತ ಅದ್ಭುತವಾಗಿ ಮೇರುಗಿರಿಗೂ ಮಿಗಿಲಾಗಿ ತೋರುವ ಹಾಗೆ ಆ ಬೆಟ್ಟಕ್ಕೆ ಅತಿಶಯವಾಗಿ ಲೇಪಿಸಿದಂತೆ ರಂಜಿಸಿತು. ಸೂರ್ಯನಂತೆ ಗೋನಿಕರದಿಂದ ಕೂಡಿ, ವಿಷ್ಣುವಿನಂತೆ ವನಮಾಲಾಧಾರಿಯಾಗಿ ಕಂಗೊಳಿಸುತ್ತ, ಪದ್ಮಭವನಂತೆ ಭ್ರಮರರಾಜಿಯಿಂದ

ಸುತ್ತುವರಿದು, ಮಹಾರಾಜನ ಸೈನ್ಯದಂತೆ ಹರಿತವಾದ ಕತ್ತಿಗಳ ಸಮುದಯದಿಂದ ಹೊಮ್ಮುವ ಕಾಂತಿಯಿಂದ ಕೂಡಿ, ಶಮಧನರಾದ ಮುನಿಸಂದೋಹದಂತೆ ಶಿಖೆಗಳನ್ನು ಹೊಂದಿ, ಕುವಲಯಪ್ರಿಯನಾದ ಚಂದ್ರನಂತೆ ದ್ವಿಜಪೂಜಿತನಾಗಿ ಆ ಶೈಲೇಂದ್ರನು ಶೋಭಿಸಿದ. ರಮಣೀಯವೆನಿಸುವ ಮಂಗಳಕರಧ್ವನಿಗಳಿಂದ ತುಂಬಿ, ಭಯಂಕರವಾದ ಹಾವುಗಳ ಹೆಡೆಗಳ ಬಳೆಗಳನ್ನು ತೊಟ್ಟು, ಪ್ರಜ್ವಲಿಸುವ ಸೂರ್ಯಚಂದ್ರರೆಂಬ ತಲೆಯ ಮೇಲಿನ ಕಣ್ಣುಗಳಿಂದ ಶೋಭಿತವಾಗಿ, ಕಮನೀಯವಾದ ಕಪ್ಪು ಕೊರಳಿನಿಂದ ಹೊಳೆಯುತ್ತ, ಭಾರಿಯಾದ ಅರ್ಜುನ(ಮತ್ತಿ)ಮರಗಳ ನೆರಳನ್ನು ಹರಡಿಕೊಂಡು, ಸದಾ ಕಾಲವೂ ವಿಪ್ರಸ್ತೋಮದಿಂದ ಸೇವಿತವಾಗಿ, ಶಿವನ ಹಾಗೆ ಆ ಪರ್ವತವು ರಂಜಿಸುತ್ತಿತ್ತು. ಮೊಲಗಳಿಂದ ಕೂಡಿದ್ದರೂ ಚಂದ್ರನಲ್ಲ, ಶರಧನ(ನೀರು)ನಾಗಿದ್ದರೂ ಘನ(ಮೋಡ)ರಾಜನಲ್ಲ, ಬ್ರಾಹ್ಮಣರೆಂಬ ರತ್ನಗಳಿಂದ ಕೂಡಿದ್ದರೂ ಸಮುದ್ರವಲ್ಲ, ನಕ್ಷತ್ರಗಳಿಂದ ಶೋಭಿತವಾದರೂ ಗುರುವಲ್ಲ, ಕೋಡು(ಶೃಂಗ)ಗಳಿಂದ ಕೂಡಿದ್ದರೂ ಜಿಂಕೆಯಲ್ಲ, ಕದಳಿ(ಧ್ವಜ)ಗಳಿಂದ ತುಂಬಿದ್ದರೂ ರಾಜನ ಸೈನ್ಯವಲ್ಲ ಎಂಬಂತೆ ಆ (ಮೋಡವನ್ನು ಹೊತ್ತ) ಜೀಮೂತವಾಹನನು ಅತಿಶಯದಿಂದ ರಾರಾಜಿಸಿದ. ಹರಿ(ಸಿಂಹ)ಮಯನೂ, ಮದದಿಂದ ಕೂಡಿದ ಕರಿ(ವಿಷ್ಣು)ಮಯನೂ, ಹಣ್ಣುಗಳು ತುಂಬಿದ ಮರಗಳಿಂದ ಕೂಡಿದುದೂ, ನಿರ್ಮಲವಾದ ಸುಶರ(ಸಿಹಿ ನೀರು)ಮಯವೂ, ಸುಂದರವಾದ ಪುಷ್ಕರ(ಕೊಳ)ಮಯವೂ, ಹರಿಣ(ಜಿಂಕೆ)ಮಯವೂ, ಭಯಂಕರವಾದ ಶರಭಮಯವೂ, ಉರಗ(ಮಯ)ವೂ, ಅಳಿ(ದುಂಬಿ)ಮಯವೂ, ತುರು(ದನ)ಮಯವೂ, ಹರಿಯುವ ನಿರ್ಝರ(ನದಿ)ಮಯವೂ, ದೊಡ್ಡ ಕಾಸಾರ(ಸರೋವರ)ಮಯವೂ, ವಾನರ(ಕಪಿ)ಮಯವೂ, ಹಾರುವ ಖೇಚರ(ಪಕ್ಷಿ)ಮಯವೂ, ದಿವ್ಯವಾದ ಹೂಗಳ ಸುರಭಿ(ಸುಗಂಧ)ಮಯವೂ ಆಗಿ ಆ ಪರ್ವತವಿತ್ತು. ವಿಸ್ತಾರವಾದ ನೀಲ ಕಪ್ಪಾದ ಕಾಡುಕೋಣ(ಕರಾಳ ಕಾಸರ)ಗಳಿಂದಲೂ (ಸರ)ಸರೋವರಗಳಿಂದಲೂ, ಸೊಕ್ಕಿದ ಕಾಡು ಕಾಗೆಗಳು (ಪ್ರಮತ್ತ ಕಾಕೋಲ) ಮತ್ತು ಕಾಡುಹಂದಿ(ಕೋಲ)ಗಳಿಂದಲೂ, ಅತಿಶಯವಾಗಿ ಅರಳಿದ ಮುತ್ತುಗದ ಹೂ(ಕಿಂಶುಕ)ಗಳಿಂದಲೂ ರತ್ನಮಯಕೋಡುಗಳಿಂದಲೂ, ಆಳವಾದ ಪ್ರಪಾತ(ಕಂದರ)ಗಳಿಂದಲೂ (ದರ)ಹಳ್ಳಗಳಿಂದಲೂ, ಮೇಲೆದ್ದು ನಿಂತ ಅತಿ ಕ್ರೂರವಾದ ಹಾವು(ಪನ್ನಗ)ಗಳಿಂದಲೂ ಬೆಟ್ಟ(ನಗ)ಗಳಿಂದಲೂ, ಅರಳಿದ ಸುರಭಿಹೂಗಳ ಸುವಾಸನೆ(ಸುರಭಿ)ಯಿಂದಲೂ ಕೂಡಿ ಆ ಕ್ಷಿತಿಧರ(ಬೆಟ್ಟ)ವು ಶೋಭಿಸುತ್ತಿತ್ತು.

ಸದಾಕಾಲವೂ ಉದಾರತನದಿಂದ ಅನುದಿನವೂ ದ್ವಿಜ(ಪಕ್ಷಿ)ಸಂಕುಲವನ್ನು ಪೋಷಣೆ ಮಾಡುತ್ತ, ತನ್ನೊಳಗೆ ಹರಿ(ರಾಮ)ನನ್ನು ಇಟ್ಟುಕೊಂಡು ವಂಶ(ಬಿದಿರು) ವನ್ನು ಅಭಿವೃದ್ಧಿಪಡಿಸುತ್ತ, ದನಗಾಹಿ(ಗೋಪಾಲ)ಗಳನ್ನು ಸಂತುಷ್ಟಿಗೊಳಿಸುತ್ತ, ಆಕರ್ಷಕ(ಕಾಂತಾ)ವಾದ ವಿಶೇಷ ಉಪಚಾರಗಳಿಗೆ ಆಸ್ಪದವೀಯುತ್ತ ಸಂತೋಷದಿಂದಿರುವ ಶ್ರೇಷ್ಠ ವಂಶ(ವಿ+ಪ್ರವರ, ವಿಪ್ರವರ)ದವನಂತೆ ಆ ರಾಜ(ಮರ, ಧರಾಧರ)ನು ಶೋಭಿಸುತ್ತಿದ್ದನು. ಹಿಂದೆ ಇಂದ್ರನು ಅಸಂಖ್ಯ ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿ ನಾಶಗೈಯಲು ಪಶ್ಚಾತ್ತಾಪದಿಂದ ಕಠೋರ ತಪಸ್ಸು ಮಾಡುತ್ತಿರಲು, 'ಕಿರಿಯ ಮಗನು

ಬಂದ, ಇನ್ನು ಭಯವಿಲ್ಲ' ಎಂಬ ಹೆಮ್ಮೆಯಿಂದ ಎತ್ತರೆತ್ತರಕ್ಕೆ ಬೆಳೆಯುತ್ತಿರುವುದನ್ನು ಕಂಡು ಇಂದ್ರನು ಮಹಾಭೀತಿಯಿಂದ ರತ್ನಗಳನ್ನು ಕೊಟ್ಟು ಸಮಾಧಾಪಡಿಸಿದನೋ ಎಂಬಂತೆ ಪರ್ವತದ ರತ್ನಮಯ ಶಿಖರಗಳು ಶೋಭಿಸಿದುವು. ಚಿನ್ನದಿಂದಲೂ ನೀಲವರ್ಣದಿಂದಲೂ ಶೋಭಿಸುತ್ತಿದ್ದೇವೆ ಎಂದು ಮೇರುಪರ್ವತ ಮತ್ತು ಕೈಲಾಸಗಳು ಗರ್ವದಿಂದ ಕೂಡಿದ್ದರೆ, ತನ್ನೊಳಗೆ ನವರತ್ನಗಳೂ ಮಿನುಗುವ ನವಲೋಹ(ಚಿನ್ನ)ವೂ ತುಂಬಿದ್ದರೂ ಗರ್ವಪಡದೆ ತಾನು ಮುನಿಗಳಿಗೂ ಮೃಗಗಳಿಗೂ ಪಕ್ಷಿಸಂಕುಲಕ್ಕೂ ಆಸ್ಪದವಿತ್ತು ಎಲ್ಲ ಜೀವಿಗಳನ್ನೂ ಪೋಷಿಸುತ್ತಿರುವೆ ಎಂಬ ಭಾವದಿಂದ ಆ ಶೈಲೇಂದ್ರನು ಕಂಗೊಳಿಸಿದ. ಹೊಳೆಯುವ ಬಳ್ಳಿವನೆಯೊಳಗೆ ಕಂಗೊಳಿಸುವ ಸುರ ಯಕ್ಷ ಗಾಂಧರ್ವ ಕಿನ್ನರಸ್ತ್ರೀಯರು ಮಧುರ ಗಾನವನ್ನು ಕೇಳುತ್ತ ಬಂದು ವಾಪಸ್ಸು ಹೋಗದೆ ಇಲ್ಲಿಯೇ ಉಳಿದಿರುವ ಕರುಗಳಿಂದ ಕೂಡಿದ ಹಸುಗಳನ್ನು ಕರೆದು ಹಾಲುಕರೆದು ಉಣ್ಣುವ ಬೇಡಿತಿಯರ ದೇಹಕಾಂತಿಯು ಹರಡುತ್ತಿರುವ ಅಂಜನಾಚಲವೇ ಇದು ಎಂಬ ರೀತಿಯಲ್ಲಿ ಚಿತ್ರಕೂಟಗಿರಿಯು ನೋಡುವವರ ಕಣ್ಣಿಗೆ ಅಚ್ಚರಿಯನ್ನುಂಟುಮಾಡುತ್ತಿತ್ತು. ಶಿಖರದ ತುದಿಯಿಂದ ಹರಿದು ಬರುವ ನೀರಿನ ಹನಿಗಳನ್ನು ಮುತ್ತುಗಳೆಂದು ತಿಳಿದು ಬೇಡರ ಹೆಂಗಸರು ಆಸೆಯಿಂದ ತಮ್ಮ ಸೆರಗನ್ನು ಹರಡಿಕೊಳ್ಳಲು ಅವರು ಕೂದಲಿಗೆ ಸುತ್ತಿಕೊಂಡಿದ್ದ ಗುಲಗಂಜಿಗಳನ್ನು ಕಂಡು ಗಿಳಿಗಳು ದಾಳಿಂಬೆಯ ಬೀಜಗಳೆಂದು ಬಗೆದು ಕುಕ್ಕುತ್ತಿದ್ದರೆ, ದುಂಬಿಗಳ ಹಿಂಡು ಅವರ ಮೊಲೆಗಳನ್ನು ಕಮಲಗಳೆಂದು ಭಾವಿಸಿ ಎರಗುತ್ತಿದ್ದವು! ಸೊಪ್ಪನ್ನು ಮೇಯಲೆಂದು ಬಂದ ಮರಿಗಳನ್ನು ನೋಡಿ ತನ್ನ ಜಾತಿಯವೇ ಇವು ಎಂದು ಭಾವಿಸಿ ಮದ್ದಾನೆಯು ಹಾಲುಗಲ್ಲನ್ನು ಕಂಡು ಉರವಾದ ಕೋಪದಿಂದ ತಿವಿಯಲು ಅವುಗಳು ದೊಡ್ಡ ಬಂಡೆಗಳಿಗೆ ತಾಕಿ ಕೋರೆಗಳು ಮುರಿದು ರಕ್ತವನ್ನು ಸುರಿಸುತ್ತ ಬೆದರಿ ವೇಗವಾಗಿ ಬರುತ್ತಿರಲು, ಅದನ್ನು ನೋಡಿದ ಹೆಣ್ಣಾನೆಯೊಂದು ಮರುಕದಿಂದ ಅದನ್ನು ತೊಳೆದು ಮದ್ದನ್ನಿಕ್ಕುವ ಆಶ್ಚರ್ಯವನ್ನು ಏನೆಂದು ಹೇಳಲಿ!

ದೇವಕನ್ನಿಕೆಯರ ಕಣ್ಣ ನೋಟ ಮತ್ತು ಮಂದಹಾಸಗಳ ಕಾಂತಿಯಿಂದ ಕೈಲಾಸಪರ್ವತದಂತೆ ಒಮ್ಮೆ ಆ ಬೆಟ್ಟವು ಶೋಭಿಸಿದರೆ, ಅವರ ದೇಹಕಾಂತಿಯಿಂದಾಗಿ ಮತ್ತೊಮ್ಮೆ ಕನಕಾದ್ರಿಯಂತೆ ಕಣ್ಸೆಳೆಯುತ್ತದೆ; ಮಿರುಗುವ ಅವರ ಕೂದಲ ಹೊಳಪಿನಿಂದ ಒಮ್ಮೆ ಹುಲ್ಲು ಬೆಳೆದ ಬೆಟ್ಟದಂತೆ ಕಾಣಿಸಿ ಅದರ ನಿಜವಾದ ಸ್ವರೂಪವು ಯಾವುದು ಎಂದು ನಿಶ್ಚಯಿಸಿ ಹೇಳಲಾಗದಂತಹುದು. ದುಂಡು ಮೊಲೆಯ ಬೇಡಿತಿಯರ ಇಂಪಾದ ಹಾಡಿಗೆ ಹುತ್ತದಿಂದ ಹೊರಬಂದು ಹೆಡೆಯೆತ್ತಿ ನೋಡುವ ಹಾವಿನ ನೆತ್ತಿಯಲ್ಲಿರುವ ಮಣಿಗಳ ಕೋರೈಸುವ ದೀಪ್ತಿಯಿಂದ ಬೆಟ್ಟದ ತಪ್ಪಲು ರತ್ನಮಯವಾದಂತೆನಿಸುತ್ತದೆ; ಕುಬೇರ ದೇವೇಂದ್ರ ಮುಂತಾದ ದೇವತೆಗಳು ತಮಗೆ ಮತ್ತೊಂದು ವೈಭವದ ಮನೆ ದೊರೆಯಿತೆಂದು ತಮ್ಮ ಮದಗಮನೆಯರಾದ ಹೆಣ್ಣುಗಳೊಡನೆ ಬಂದು ಅಲ್ಲಿ ವಿಹರಿಸುತ್ತಾರೆ. ಕೆನ್ನೆಗೆ ಅರಿಸಿನವನ್ನು ಪೂಸಿಕೊಂಡು, ಕೊರಳಲ್ಲಿ ತಾಳಿಯನ್ನು ಕಟ್ಟಿಕೊಂಡು, ಕಿವಿಯಲ್ಲಿ ಬೆಂಡೋಲೆಗಳನ್ನು ಧರಿಸಿ, ಹಣೆಯಲ್ಲಿ ಕಸ್ತೂರಿ ಬೊಟ್ಟನಿಟ್ಟುಕೊಂಡು ಮರಗಳ ನೆರಳಿನಲ್ಲಿ

ಕುಳಿತ ತಮ್ಮ ಗಂಡಂದಿರ ಪದಕಮಲಗಳನ್ನು ಅನುದಿನವೂ ಪೂಜಿಸುವ ಮುನಿಶ್ರೇಷ್ಠರ ಪತ್ನಿಯರ ತಂಡವು ತಪ್ಪಲು ಪ್ರದೇಶದಲ್ಲಿ ಶೋಭಿಸುತ್ತದೆ. ಅಲ್ಲಿ ತಮ್ಮ ಹಗೆಯನ್ನು ಮರೆತು ಹಾವುಮುಂಗುಸಿಗಳು ಒಂದಾಗುತ್ತವೆ, ಜಿಂಕೆಯ ಮರಿಗಳಿಗೆ ಹುಲಿಯು ಮೊಲೆಯೂಡುತ್ತದೆ, ಆನೆಯ ಮರಿಗಳೊಡನೆ ಸಿಂಹಶಾಬಕಗಳು ಹಸುಹುಲಿಗಳು ಆಟವಾಡುತ್ತವೆ, ಎಲ್ಲವೂ ಒಟ್ಟಾಗಿ ಮರಗಳಡಿಯಲ್ಲಿ ಹಾಯಾಗಿ ಮಲಗಿರುತ್ತವೆ, ಬೆಕ್ಕುಹುಲಿಗಳು ಪ್ರೀತಿಯಿಂದ ಒಡನಾಡುತ್ತವೆ; ಇದೆಲ್ಲವೂ ಆ ಗಿರಿಯ ಮಹಿಮೆಯಲ್ಲವೇ! ಮುನಿವಟುಗಳ ಒಟ್ಟಾಗಿ ಹುಲಿಯನ್ನು ಹಿಡಿದು ತಂದು ಅವುಗಳ ಮೈ ನೇವರಿಸಿ ಹಗ್ಗದಿಂದ ಕಟ್ಟಿಹಾಕಿ ಉಳಿದ ಹವಿಸ್ಸನ್ನು ತಿನ್ನಲು ಕೊಟ್ಟು ಕಾಡುಗಳ ಮಧ್ಯೆ ಕರೆದೊಯ್ದು ಸಮಿತ್ತು ದರ್ಭೆ ಗೆಡ್ಡೆಗೆಣಸುಗಳನ್ನು ಕಿತ್ತು ತಂದು ಹೊರೆಮಾಡಿ ಅವುಗಳ ಮೇಲೆ ಪ್ರತಿದಿನವೂ ಹೊರಿಸಿಕೊಂಡು ಆಶ್ರಮಗಳಲ್ಲಿ ಶೋಭಿಸುವ ಮುನಿಗಳಿಗೆಂದು ಕೊಂಡೊಯ್ಯುವ ಆಶ್ಚರ್ಯವನ್ನು ಏನೆಂದು ಹೇಳುವುದು! ಗುರುಗಳಿಗೆ ತಕ್ಕವರಾದ ಕಿತ್ತಡಿಗಳು ಪ್ರತಿನಿತ್ಯವೂ ಅಗ್ನಿಹೋತ್ರವನ್ನು ವಿರಚಿಸಿದಾಗ ಅದರಿಂದ ಹೊರಡುವ ಹೊಗೆಯು ಮನೋಹರವಾದ ದಂಡದಂತೆ ಆಗಸದವರೆಗೂ ಹಬ್ಬಲು, ಅದನ್ನು ಕಬ್ಬಿಣದ ಮೆಟ್ಟಿಲುಗಳೆಂದು ಭಾವಿಸಿ ಅಮರಾವತಿಯಲ್ಲಿರುವ ತರುಣಿಯರು ಆ ಬೆಟ್ಟದ ಬುಡಕ್ಕೆ ಪ್ರತಿದಿನವೂ ಇಳಿದುಬರುತ್ತಾರೆ ಎಂದರೆ ಆ ಗಿರಿಯ ಅತಿಶಯವನ್ನು ಏನೆಂದು ವರ್ಣಿಸುವುದು! ಮೋಡಗಳು ಬಂದು ಆ ಬೆಟ್ಟದ ತುದಿಯನ್ನು ಆವರಿಸಲು ಪ್ರಾಣಿಯೆಂದು ಭಾವಿಸಿ ಅದನ್ನು ಕೊಂದು ಮಾಂಸವನ್ನು ಒಯ್ಯಬೇಕೆಂದು ತೋರಮೊಲೆಗಳು ಗುಂಗುರಕೂದಲ ಓರೆತುರುಬು ಎಳೆಯ ಚಿಗುರಿನ ಉಡುಗೆಯುಟ್ಟ ಎಣ್ಣೆಮೈಯ ಕಿರಾತನಾರಿಯರು ತಮ್ಮತಮ್ಮಲ್ಲಿ ಮಾತಾಡಿಕೊಳ್ಳುತ್ತ ಬಂದು ಆಕರ್ಷಣೆಗಳನ್ನಿಟ್ಟು ಕಾಯುತ್ತಿರಲು, ಆ ಗಿರಿಯು ಸುಂದರವಾದ ಶತಶೃಂಗಪರ್ವತದಂತೆ ಕಣ್ಗೆಸೆಯುತ್ತದೆ. ಸೂರ್ಯನು ಹುಟ್ಟುವ ಮುನ್ನವೇ ಒಬ್ಬ ತರುಣಿಯು ಸರೋವರಗಳಲ್ಲಿ ಕಂಗೊಳಿಸುವ ಮೀನುಗಳನ್ನು ಮಲ್ಲಿಗೆಯ ಮೊಗ್ಗುಗಳೆಂದು ಭಾವಿಸಿ ಅವುಗಳನ್ನು ಕೀಳಲೆಂದು ಬೆಟ್ಟತುದಿಯನ್ನೇರಿ, ಪತ್ತಲದ ನೆರಿಗೆಯನ್ನು ಸಿಕ್ಕಿಸಿಕೊಂಡು ಕೈಗಳನ್ನು ಮೇಲೆ ಚಾಚಿ ಬಿಸಿಲುಕೋಲನ್ನು ಹಿಡಿದುಕೊಂಡು, ಕೋಡುಗಲ್ಲಿನ ಗಳೆಯನ್ನು ಹತ್ತಿ ಆಟವಾಡುವ ದೊಂಬರ ಹುಡುಗಿಯಂತೆ ಕಾಣಿಸುತ್ತಾಳೆ!

ಹೊಳೆಯುವ ದರ್ಭಾಸನದ ಮೇಲೆ ಕುಳಿತು, ಜೋಗವಟ್ಟಿಗೆಯನ್ನು ಹಿಡಿದು, ಚಂದ್ರಕಿರಣದಂತೆ ಬೆಳ್ಳಗಿರುವ ವಿಭೂತಿಯನ್ನು ಬಳಿದುಕೊಂಡು, ರುದ್ರಾಕ್ಷಿ ಜಪಮಾಲೆಗಳನ್ನು ಹಿಡಿದು ಪವನಪಂಚಕವನ್ನು ನಿಗ್ರಹಿಸಿ ನಿಶ್ಚಲತ್ವದಿಂದ ಮೌನವಾಂತ, ಹಸಿವುನೀರಡಿಕೆನಿದ್ರೆಗಳ ಹಂಗಿನಿತೂ ಇಲ್ಲದ, ಬಿಸಿಲುಚಳಿಮಳೆಗಳಂಟದ, ಸದೃಢವಾದ ದೇಹವುಳ್ಳ ಕಾಮನ ಬಾಣವನ್ನು ಮುರಿದ ಯೋಗಿಯಂತೆ ಆ ಗಿರಿಶ್ರೇಷ್ಠವು ಎಸೆಯುತ್ತದೆ! ಕೊರಳಿಗೆ ಕಸ್ತೂರಿಯನ್ನು ಬಳಿದುಕೊಂಡು, ಹಣೆಯಲ್ಲಿ ಚೆಂದವಾದ ಕುಂಕುಮದ ಬೊಟ್ಟನ್ನಿರಿಸಿ, ಅತಿಶಯವಾದ ಜಡೆಯನ್ನು ಕಟ್ಟಿ, ಸಿಡಿಲಿನಿಂದಾದ ಶಿಖಿಯಿಂದ ಭೂಷಿತವಾಗಿ, ತನ್ನ ಗಂಡನೊಡನೆ ದೇವತಾರಮಣಿಯು ಬೆಟ್ಟದ ಮೊದರಿನಲ್ಲಿ ಸುಖವಾಗಿರಲು; ಯತಿಕುಲವೆಲ್ಲ ಆ ಬೆಟ್ಟದ ತಪ್ಪಲಿನಲ್ಲಿ ಆಶ್ರಯ ಪಡೆದದ್ದರಿಂದ

ಕಾಮನು ಬರಲು ಹೆದರಿ ಹಿಂದಿರುಗಲು, ತಪಸ್ಸಿಗೆ ನಿರ್ವಿಘ್ನವಾಗುತ್ತದೆ. ಮೇಲಿನಿಂದ ಹರಿದು ಬರುವ ನೀರು ಎರಡು ಕವಲುಗಳಾಗಿ ನೀಲಮಣಿಯಂತಹ ಬಂಡೆಯ ಮೇಲೆ ಒಂದು, ಚಂದ್ರಕಾಂತಶಿಲೆಯ ಮೇಲೆ ಮತ್ತೊಂದು ಹರಿಯುತ್ತ ಮುಂದೆ ಎರಡೂ ಒಂದುಗೂಡಿ ಗಂಗೆ-ಯಮುನೆಯರ ಸಂಗಮದ ರೀತಿಯಲ್ಲಿ ಶೋಭಿಸಲು ಅಲ್ಲಲ್ಲಿರುವ ಮುನಿಗಳು ಅಲ್ಲಿಯೇ ಸ್ನಾನಪಾನಾದಿಗಳನ್ನು ಮಾಡುವ ಸೊಬಗನ್ನು ಏನೆಂದು ವರ್ಣಿಸಲಿ! ಸೂರ್ಯಮಂಡಲವನ್ನೇ ಮುಟ್ಟುವ ಆ ಬೆಟ್ಟದ ಶಿಖರಗಳ ಹೊಂಬಣ್ಣವನ್ನು ಹೊತ್ತು ಹರಿಯುವ ನೀರ ತಡಿಯಲ್ಲಿ ಸೊಂಪಾಗಿ ಬೆಳೆದ ಜಂಬುಹುಲ್ಲಿನ ಪೊದೆಯಲ್ಲಿ ಮೂರ್ತಿಗಳನ್ನಿಟ್ಟು ಪೂಜಿಸುತ್ತ ಕೀರ್ತನೆಗೈಯುತ್ತ ಆನಂದದಿಂದ ನರ್ತಿಸುವ ಭಕ್ತರು ಆ ಬೆಟ್ಟದ ತಪ್ಪಲಿನಲ್ಲಿ ಕಣ್ಸೆಳೆಯುತ್ತಾರೆ. ಸಗಣಿ(ಗೋಮಯ)ಯಿಂದ ಕೂಡಿದ್ದರೂ ಗೋವುಗಳಿಲ್ಲದ, ಅಮೃತ(ಸೋಮ)ಕ್ಕೆ ಆಶ್ರಯವಾಗಿಯೂ ಯಮ(ಸೋಮ)ನನ್ನು ಮೀರುವ, ಮುತ್ತುಗದಿಂದ ಕೂಡಿದ್ದರೂ ಪಲಾಶ(ವಿಷ)ಸಂಹಾರಿಯಾಗಿ ಸಂತೋಷದಾಯಕವಾದ, ಸುಮ(ಹೂ)ಮಯವಾದರೂ ಸುಮನೋಹರವಾದ, ಕಾಮಕ್ಕೆ ಆಸ್ಪದವಾಗಿಯೂ ಕಾಮಾರಿ(ಶಿವ)ಪೋಷಕವಾದ, ಸೌಂದರ್ಯ(ವಾಮ) ಯುತವಾಗಿದ್ದರೂ ಕೆಟ್ಟ(ವಾಮ)ಜನರಿಗೆ ದುರ್ಗಮವಾಗಿಯೂ ಆ ಗಿರೀಂದ್ರವು ವಿಶೇಷವಾದುದಾಗಿದೆ. ಬಿದಿರುಗಳ ಸಂದಿಗಳಲ್ಲಿ ಹಾದು ಬರುವ ಗಾಳಿಯಿಂದಾಗುವ ಸುಸ್ವರವನ್ನು ಕೇಳುತ್ತ ನಿಂತ ಜಿಂಕೆಮರಿಗಳ ಗುಂಪು ಅದರ ಬುಡದಲ್ಲಿನ ಹುತ್ತಗಳಿಂದ ಮೇಲೆದ್ದ ಹಾವುಗಳು ತಮ್ಮ ಮಾಣಿಕ್ಯಮಂಡಿತವಾದ ಹೆಡೆಗಳನ್ನು ಮೇಲೆತ್ತಲು ಅದನ್ನು ಕಂಡು ಚೆದುರಿ ಓಡಿಹೋಗಲು, ಅವುಗಳ ಕಣ್ಣುಗಳ ಕಾಂತಿಯು ಬೆಟ್ಟವು ಧರಿಸಿರುವ ನೀಲಮಣಿಮಾಲೆಯಂತೆ ಶೋಭಿಸುತ್ತದೆ.

ಕಮಲನೇತ್ರನು ಸೂರ್ಯವಂಶದಲ್ಲಿ ಹುಟ್ಟಿ ತನ್ನ ಹೆಂಡತಿ ಮತ್ತು ತಮ್ಮನೊಡನೆ ಇಲ್ಲಿಗೆ ಬಂದಿರಬೇಕಾದರೆ 'ನಿಮಗಿನ್ನು ರಾಕ್ಷಸರ ಭಯ ಬೇಡ, ನಿಮ್ಮ ನಿಮ್ಮ ಸ್ಥಳಗಳಲ್ಲಿಯೇ ಇರಿ' ಎಂದು ಸೂಚಿಸುವಂತೆ ದುಂಬಿಗಳ ಝೇಂಕಾರದಿಂದ ಕೂಡಿದ ಗಾಳಿಯು ಬೀಸಲು, ತನ್ನ ಸುಂದರವಾದ ಕಮಲಹಸ್ತಗಳಿಂದ ಮುನಿಸಂಕುಲವನ್ನು ಕರೆಯುತ್ತಿದೆಯೋ ಎಂಬಂತೆ ಆ ಮಹೀಧರಶ್ರೇಷ್ಠವು ಕಂಗೊಳಿಸುತ್ತದೆ. ಇನವಂಶಸಂಭೂತನಾದ ರಾಘವನ ದರ್ಶನಮಾಡಬೇಕೆಂದು ದೇವೇಂದ್ರನು ಐರಾವತವನ್ನೇರಿ ಬಂದು ಆತುರದಿಂದ ಹುಡುಕುತ್ತಿರುವನೋ ಎಂಬಂತೆ ಹಾಲುಗಲ್ಲಿನಿಂದ ಕಂಗೊಳಿಸುವ ಬೆಟ್ಟದ ತುದಿಯಲ್ಲಿ ಮಕರಂದರಸವನ್ನು ಹೀರುವ ಆಸೆಯಿಂದ ಬಂದ ದುಂಬಿಗಳನ್ನಪ್ಪಿರುವ ಬಿರಿವೂಗಳಿಂದ ಕೂಡಿ ಹಬ್ಬಿರುವ ಮಲ್ಲಿಗೆ ಬಳ್ಳಿಯು ಅತಿಶಯವಾಗಿ ರಾರಾಜಿಸುತ್ತದೆ. ನೀರು ಕುಡಿಯಬೇಕೆಂಬ ಆಸೆಯಿಂದ ಬಂದ ಆನೆಮರಿಗಳು ಕೊಳವನ್ನು ಹೊಕ್ಕು ಸೊಂಡಿಲುಗಳಿಂದ ತಾವರೆಗಳನ್ನು ಕೀಳಲು ತಕ್ಷಣವೇ ಅವುಗಳ ನಡುವಿನಲ್ಲಿದ್ದ ಅಳಿಸಂಕುಲವು ಹಾರಿದಾಗ ಮೋಡದಂತೆ ಕಂಡು, ಚಿಗುರು ಹೂಗಳ ಸೋಂಕಿನಿಂದ ಹೊಳೆಯುವ ಮಿಂಚಿನಂತೆ ತೋರಿ, ಪಾರಿವಾಳಗಳ ಕಲರವವು ಗುಡುಗಿನಂತೆ ಕೇಳಿಸಲು ಮಳೆಗಾಲವು ಬಂತೆಂದು ನವಿಲುಗಳು ಹರ್ಷದಿಂದ ಕುಣಿಯಲು ತೊಡಗುತ್ತವೆ.

ಮರವನ್ನು ಹತ್ತಿ ಮದ್ಯವನ್ನು ಕುಡಿದು, ಹುತ್ತವನ್ನು ಅಗೆದು ಅದರಲ್ಲಿ ಜೇನನ್ನು ಸುರಿದು ಸೊಕ್ಕಿನಿಂದ ಓಡಾಡುವ ಕರಡಿಯನ್ನು ಕಂಡು ಭಯಗೊಂಡ ಒಬ್ಬಳು ರತ್ನಪರ್ವತವನ್ನೇರಲು ಅವಳ ಪರಿಮಳದಿಂದಾಗಿ ಕೈಗಳು ತುರುಬು ತುಟಿಗಳ ಬಳಿಗೆ ಬಂದ ದುಂಬಿ ಕೋಗಿಲೆ ನವಿಲು ಗಿಳಿ ಹಂಸಗಳ ಗುಂಪು ಬೆಟ್ಟದ ಸೊಬಗನ್ನು ಮೆಚ್ಚಿ ಬ್ರಹ್ಮನು ಕೊಟ್ಟ ಸುಂದರವಾದ ವಸ್ತ್ರದಂತೆ ಕಾಣಿಸುತ್ತದೆ. ಈ ಬೆಟ್ಟದ ತುದಿಯನ್ನು ನೋಡುವ ಅಭಿಲಾಷೆಯಿಂದ ಅಡಕೆ ತಾಳೆ ತೆಂಗಿನ ಮರಗಳು ಆಕಾಶದೆತ್ತರಕ್ಕೆ ಬೆಳೆದರೂ ಕಾಣಿಸದಿರಲು ಅಚ್ಚರಿವಡುತ್ತ ತಲೆ ತೂಗಿದಂತೆ ಗಾಳಿ ಬೀಸಿ ತೊನೆದಾಡಲು ಬ್ರಹ್ಮದೇವನು ತನ್ನ ಸೃಷ್ಟಿಯು ಸಡಿಲಗೊಳ್ಳದ ಹಾಗೆ ಹಗ್ಗದಿಂದ ಕಟ್ಟಿದಂತೆ ನಾಗಬಳ್ಳಿಗಳು ಕಾಣಿಸುತ್ತವೆ. ಶಿಖರಗಳೆಂಬ ಸೌಧಗಳಿಂದಲೂ, ಸನ್ಮಾರ್ಗ ಎಂಬ ಬೀದಿಗಳಿಂದಲೂ, ರಂಜಿಸುವ ಗುಹೆಗಳೆಂಬ ಅಂತಃಪುರಗಳಿಂದಲೂ, ಸುಂದರವಾದ ಬಳ್ಳಿಗಳೆಂಬ ಲಲನೆಯರಿಂದಲೂ, ಸುರಹೊನ್ನೆ ಎಂಬ ಪುರುಷರಿಂದಲೂ, ಭಾರಿ ಬಂಡೆಗಳೆಂಬ ಆನೆಗಳಿಂದಲೂ, ಕಂಗೊಳಿಸುವ ಮರೀಚಿಕೆಗಳೆಂಬ ಕುದುರೆಗಳಿಂದಲೂ, ಗಿಳಿಕೋಗಿಲೆ ಮುಂತಾದ ಮಂಗಳಪಾಠಕರಿಂದಲೂ, ದುಂಬಿ ನವಿಲುಗಳ ಸಂಗೀತ ನರ್ತನದಿಂದಲೂ, ಸಿಂಹ ಎಂಬ ರಾಜನಿಂದಲೂ ಕೂಡಿ ಆ ಗಿರಿಯು ನಗರದಂತೆ ಶೋಭಿಸುತ್ತದೆ.

ಚಿಗುರಿನಂತಹ ಅಡಿಗಳು, ನುಣುಪಾದ ತೊಡೆಗಳು, ಗಿಳಿಯ ಉಲಿಯಂತಹ ಮಾತುಗಳು, ಬಲ್ಮೊಲೆಗಳು, ನಳಿತೋಳುಗಳು, ಬಡನಡು, ತೆಳುವಾದ ಹೊಟ್ಟೆ. ಹೊಳೆಯುವ ಚಂದ್ರನಂತಹ ಹಣೆ, ತಿಲಕದ ಕಾಂತಿ, ತಾವರೆಯೆಸಳಿನಂತಹ ಕಣ್ಣುಗಳು, ಸುಳಿಗುರುಳಿನಿಂದ ಕೂಡಿದ ಹೆಣ್ಣುಗಳು ನೀರಾಟಕ್ಕೆಂದು ಬಂದು ನೀರನ್ನು ಚಿಮ್ಮಲು ಭೂಲಲನೆಯು ತನ್ನನ್ನು ಹೊತ್ತಿರುವವನಿಗೆ ಅಭಿಷೇಕವನ್ನು ಮಾಡುತ್ತಿರುವಳೋ ಎಂಬಂತೆ ಕಾಣಿಸುತ್ತದೆ. ವಿಷ್ಣುವಿನ ಕಣ್ಣು, ಬ್ರಹ್ಮನ ಪೀಠ, ಲಕ್ಷ್ಮಿಯ ನೆಲೆವನೆ. ಸೂರ್ಯನ ಸ್ನೇಹ, ಮನಸಿಜನ ಈಟಿ, ದುಂಬಿಗಳ ಊಟದ ಮನೆ, ಪರಿಮಳದ ಆಗಾರವಲ್ಲದೆ, ಯುವತಿಯರ ಮುಖಚಂದ್ರನಿಂದಾಗಿ ತಾವು ಅರೆಯಾದೆವೆಂದು ಮರುಗುತ್ತಿರಲು, ಅದ್ರಿಮಣಿಯೆಂಬ ಸೂರ್ಯನಿಂದ ಅರಳುವಂತಾಯಿತೋ ಎನ್ನುವಂತೆ ತಾವರೆಗಳ ಸಂಕುಲವು ಶೋಭಿಸುತ್ತದೆ. ಸೂರ್ಯನನ್ನೊಡಗೊಂಡು. ಮರಗಳನ್ನು ಹೊಂದಿ, ಜಿಂಕೆಗಳ ಮನೆಯಾಗಿ, ಸಾರಂಗಗಳಿಂದ ಶೋಭಿತವಾಗಿ. ಕಮಲಗಳಿಂದ ರಾರಾಜಿತವಾಗಿ, ಮುನಿಬ್ರಾಹ್ಮಣರಿಗೆ ಸಂತೋಷದಾಯಕವಾಗಿ ಸಮುದ್ರದಂತೆ ಅಚಲೇಂದ್ರನು ರಂಜಿಸುತ್ತಾನೆ. ಎಳೆಲೆಯ ಬಾಳೆಯಲ್ಲಿ ಹುಟ್ಟಿದ ದಿವ್ಯವಾದ ಹಿಮಚೂರ್ಣದ ಕಂಪಿನಿಂದಾಗಿ ದುಂಬಿಗಳು ಎರಗಲು, ನೇರಿಳೆಯ ಹಣ್ಣುಗಳೆಂದು ಗಿಳಿವಿಂಡು ಬರಲು, ಅವುಗಳ ಕೊಕ್ಕುಗಳನ್ನು ಚಿಗುರೆಂದು ಬಗೆದು ಕೋಗಿಲೆಗಳ ಸಂತತಿಯೈತರಲು, ಕತ್ತಲೆಯಲ್ಲಿ ಅವುಗಳ ದೇಹಕಾಂತಿಯ ಜಾಲವು ಹರಡಲು. ಬೇಡ ಹೆಂಗಸರು ಆ ಗಿರಿಯ ತಪ್ಪಲಲ್ಲಿ ಮನ್ಮಥಕೇಳಿಯಲ್ಲಿ ತಲ್ಲೀನರಾಗಿರುವರು. ಉನ್ನತವಾದ ಶಿಖರವನ್ನು ಕವಿದ ಶುಭ್ರವಾದ ಮೋಡಗಳಲ್ಲಿ ಹೊಳೆಯುವ ಮಿಂಚು ಕಂಗೊಳಿಸಲು. ದೇವತಾಸ್ತ್ರೀಯೊಬ್ಬಳು ಕಾಮಕೇಳಿಗೆ ಅನುಕೂಲಕರೆಯಾಗಿ ದುಕೂಲದ ಮುಸುಕನ್ನಿಟ್ಟು

ಧಾರುಣಿಧರನಾಥ(ಮರ) ಎಂಬ ಪ್ರಿಯನನ್ನು ಬಳ್ಳಿಗಳೆಂಬ ತೋಳುಗಳಿಂದ ಬಿಗಿದಪ್ಪಿಕೊಂಡು ಸುರತಸಂತೋಷದಲ್ಲಿರುವಳೋ ಎಂಬಂತೆ ಕಾಣಿಸುತ್ತದೆ. ಸೂರ್ಯನ ರಥಚಕ್ರಗಳಿಂದ ಹರಿತಗೊಂಡ ಮರಕತ, ಮಹಾಪದ್ಮರಾಗ, ವೈಡೂರ್ಯ, ಹುಲ್ಲಿನ ಪುಷ್ಪರಾಗ, ಮರಗಳ ವಜ್ರ, ಗೋಮೇಧಿಕಗಳ ಹೊಳಪಿನಿಂದ ಉಜ್ವಲವಾದ ಶಿಖರಾಗ್ರದ ಮಹಾಕಾಂತಿಯಿಂದ ಅದ್ರಿಯು ರಮ್ಯತರವಾಗಿ ದೇವೇಂದ್ರನ ಮಣಿಶೈಲವೋ ಕುಬೇರನ ಅರಮನೆಯ ಮಾಳಿಗೆಯೋ ಸೂರ್ಯಚಂದ್ರರ ಮನೆಯೋ ಆಗಿರಬಹುದೇ ಹೊರತು ಬೆಟ್ಟವಲ್ಲ ಎಂಬಂತೆ ತೋರುತ್ತದೆ. ನೀಲದ ನೆಲಗಟ್ಟಿನಿಂದ, ರತ್ನದ ಹಸೆಮಣೆಯಿಂದ, ಬಾಳೆಯ ಕಂಬಗಳಿಂದ, ಚಿಗುರಿನ ಮೇಲ್ಗಟ್ಟಿನಿಂದ, ತೋರವಾದ ಬಿದಿರಿನ ಮುತ್ತುಗಳ ರಂಗವಲ್ಲಿಯಿಂದ, ಗಿಳಿಗಳ ಮಾತುಗಳೆಂಬ ಮಂತ್ರದಿಂದ, ದುಂಬಿಗಳ ಗೀತದಿಂದ ಕೋಗಿಲೆಗಳ ಹಾಡಿನಿಂದ, ಹಾವುಗಳ ನಾಟ್ಯದಿಂದ ಶೋಭಾಯಮಾನವಾದ ಮಂಟಪದಲ್ಲಿ ಶೈಲೇಶನಾದ ಮಾಧವನು ವನವೆಂಬ ರಮೆಯನ್ನು ಮದುವೆಯಾಗುತ್ತಿರುವಂತೆ ಕಾಣಿಸುತ್ತದೆ.

ರಾಜನಿಗೆ ಆಪ್ತನು ಯಾರು, ತಾವರೆಗೆ ಚಂದ್ರ ಏನಾಗಬೇಕು, ಸರಸ್ವತಿಗೆ ಪ್ರಿಯವಾದ ವಸ್ತ್ರವಾವುದು, ರಾಮಚರಣಸೇವಕನ ಮುಖಕಾಂತಿ ಯಾವುದು – ಈ ಪ್ರಶ್ನೆಗಳಿಗೆ ಮೂರು ಅಕ್ಷರಗಳ ನಾಲ್ಕು ಸಾಲುಗಳನ್ನು ಬರೆದು ಮಧ್ಯಾಕ್ಷರವನ್ನು ಸಾಲಾಗಿ ಓದಲು ಪರಿಶೋಭಿಸುವ ಹೆಸರು ತನಗಿರುವುದೆಂದು ಆ ಗಿರಿಯು ಪೆಂಪಿನಿಂದ ಕಂಗೊಳಿಸುತ್ತದೆ. ಸೂರ್ಯನ ಉದಯಗಿರಿಯಂತೆ, ಹಂಸದ ಬಿಳುಪಿನಿಂದ ಚಂದ್ರನಂತೆ ಹೊಳೆಯುತ್ತ, ಶಿವನ ಹಾಗೆ ಸರ್ವಮಂಗಳಕಾರಕನಾಗಿ, ಇಂದ್ರನ ಅರಮನೆಯಂತೆ ಬುಧರು ಗುರುಗಳಿಂದ ಶೋಭಿತವಾಗಿ, ರಾಜನ ಓಲಗದಂತೆ ಕವಿಯಿಂದ ಕೂಡಿದುದೂ, ದೇವತೆಗಳ ಉದ್ಯಾನದಂತೆ ಮಂದಾರರಂಜಿತವಾದುದೂ, ಯುದ್ಧದಲ್ಲಿ ನಾಗಕೇತುವಿನಂತೆ ವಿರಾಜಿತವಾಗಿ ನವಗ್ರಹಗಳ ಹೆಸರನ್ನೂ ಹೊಂದಿ ಆ ಗಿರಿನಾಥನು ಒಪ್ಪಿದ್ದ. ದೇವೇಂದ್ರನಂತೆ ರಂಭಾ(ಬಾಳೆಯ ಮರ)ವಿಲಾಸಿ, ಅಗ್ನಿಯಂತೆ ಪುಂಡರೀಕ(ಆಗ್ನೇಯ ದಿಕ್ಕಿನ ಆನೆ)ದಿಂದ ಕೂಡಿದವನು, ಯಮನಂತೆ ಕೈಯಲ್ಲಿ ದಂಡವನ್ನು ಹಿಡಿದವನು, ನೈರುತಿಯಂತೆ ಪುಣ್ಯಜನಪೋಷಕ, ವರುಣನಂತೆ ಶರ(ನೀರು)ಮಯ, ಅಗ್ನಿಯಂತೆ ಸಾರಂಗವುಳ್ಳದ್ದು, ಕುಬೇರನಂತೆ ಕರಿಗೊರಳ ಕಳೆಯಾಗಿ, ಈಶ್ವರನಂತೆ ದಿಗಂಬರನಾಗಿ ಗಿರಿವರವು ದಿಕ್ಪಾಲಕರಂತೆ ಶೋಭಿಸುತ್ತದೆ. ಕೂಗುವವ(ರಾವಣ)ನ ಸಖಿಯಂತೆಯೂ ವ್ಯಾಸಮಂದಿರದಂತೆ ಗಿಳಿ–ವ್ಯಾಸನ ಮಗನ ಮಾತುಗಾರಿಕೆಯುಳ್ಳದ್ದೂ, ಸರೋವರದಂತೆಯೂ ವಿಷ್ಣುವಿನ ಹಾಗೆಯೂ ಕಮಲ–ಲಕ್ಷ್ಮಿಯಿಂದ ಕೂಡಿದವನೂ, ಶಿವನಂತೆಯೂ ಕೃಷ್ಣನಂತೆಯೂ ಗೋ–ಗೋವರ್ಧನಧರನಾಗಿರುವವನೂ, ಸರೋವರದಂತೆಯೂ ರಾಜನಂತೆಯೂ ಕಲಕಂಠಶೋಭಿತನೂ, ಮೇರುಗಿರಿಯಂತೆಯೂ ರಣದಂತೆಯೂ ಪಕ್ಷಿ–ಬಾಣಗಳಿಂದ ಕೂಡಿಯೂ ಗಿರೀಂದ್ರನು ಕಂಗೊಳಿಸುವನು.

ತರುಣಿಯೊಬ್ಬಳು ಪುರುಷನ ಬಳಿಗೆ ಹೋಗುತ್ತಿರುವಾಗ ಬಿರುಗಾಳಿ ಬೀಸಲು ಅವಳ ಸೆರಗು ಹಾರಿಹೋಗಲು, ಅವಳ ಮೊಲೆಗಳನ್ನು ತಾವರೆಗಳೆಂದೂ, ತುಟಿಗಳನ್ನು ಆಲದ

ಹಣ್ಣುಗಳೆಂದೂ ಬಗೆದು ದುಂಬಿಗಳೂ ಗಿಳಿಗಳೂ ಕುಕ್ಕುತ್ತವೆ; ಬರುವ ದಾರಿಯಲ್ಲಿ ಅವು ಚೆಲುವಾದ ಮುತ್ತುಗದ ಹೂ ನೇರಿಳೆಹಣ್ಣು ಎಂದು ತಿಳಿದು ಕಾದಾಡುತ್ತಿರಲು ನಗುತ್ತ ತರುಣಿಯ ನೋಟಕ್ಕೆ ಬೆದರಿ ಮುಟ್ಟದೆ ಭ್ರಾಂತಿ ಹರಿದು ಶೃಂಗಾಗ್ರಕ್ಕೆ ಹಾರಿಹೋಗುತ್ತವೆ. ದೇವೇಂದ್ರನ (ವಜ್ರಿ) ಹಾಗೆ (ಮರ)ವಜ್ರವನ್ನು ಹೊಂದಿ, ಆಕಾಶದಲ್ಲಿ ಹೊಳೆಯುವವನ (ಗೋ+ವಿಭಾಸುರ=ಸೂರ್ಯ) ಹಾಗೆ ಗೋಪಿಯರ ಕಲಿಯು (ಗೋಪಿ+ಭಾಸುರ) ಓಡಾಡಲು, ಐರಾವತದಿಂದ ಪ್ರೇರಿತವಾದ ಐರಾವತವನ್ನು ಏರಿ, ಸೂರ್ಯನ ಹಾಗೆ (ಭೂರಿ ನೇತ್ರ) ಭಾರಿ (ನೇತ್ರ)ಅಡಕೆಯಮರಗಳನ್ನು ಹೊಂದಿ, ಇಂದ್ರಾಣಿಯನ್ನು ಪೋಷಿಸುವವನಂತೆ ಲಕ್ಕಿಗಿಡ(ಇಂದ್ರಾಣಿ)ಗಳನ್ನು ಪೋಷಿಸುತ್ತ, ಕಾಮಧೇನುವಿನಿಂದ (ಸುರಭಿ) ಕೂಡಿದವನಂತೆ ಸುವಾಸನೆ(ಸುರಭಿ)ಯಿಂದ ಮನೋಹರನಾಗಿ, ಎಲ್ಲ ಕಾಲದಲ್ಲಿಯೂ ಆ ಗಿರಿ(ಧರಾಧಿಪ)ಶ್ರೇಷ್ಠವು ದೇವೇಂದ್ರನ ಹಾಗೆ ರಂಜಿಸುವ ಬಗೆಯನ್ನು ಏನೆಂದು ಹೇಳಲಿ! ಒಂದು ಕಡೆ ನೋಡಿದರೆ (ರಜತ)ಬೆಳ್ಳಿಯಂತೆ, ಮತ್ತೊಂದೆಡೆಯಲ್ಲಿ ಪುಷ್ಪರಾಗದಂತೆ (ಹೂವಿನ ಧೂಳು), ಮಗುದೊಂದೆಡೆಯಲ್ಲಿ ದೇವದಾರು(ಪೀಡ) ಮರಗಳಿಂದ ಕೂಡಿದ, [ಕ್ಷತ ಪೀಡ] ಪೀಡೆಯನ್ನು ಹೋಗಲಾಡಿಸುವ, ಒಂದು ಕಡೆ ನೀಲದ (ಆಕಾಶ) ಕಾಂತಿ, ಮತ್ತೂ ಒಂದು ಕಡೆ ಕೆಂಪು (ಮಾಂಜಿಷ್ಠ) ಬಣ್ಣದ ತಾಳೆಯ ಹೂ, ಇನ್ನೂ ಒಂದು ಕಡೆ ಬಿಳುಪಿನ (ಪಾರದ) ಬಣ್ಣವನ್ನು ಹೊಂದಿ ರಾಜಿಸುವ ಗಿರಿಯನ್ನು ನೋಡು ಎಂದು ರಾಘವನು ಅವನಿಜೆಗೆ ತೋರಿಸಿದ. "ಧರಣಿತನೂಜೆಯೇ, ಈ ಬೆಟ್ಟದಲ್ಲಿ ಎಷ್ಟೊಂದು ಬಗೆಯ ಮರಗಿಡಗಳಿವೆ: ಹಲಸು, ಕಾಚು, ಅಂಕೋಲೆ, ತಕ್ಕೋಲ, ಬಿದಿರು, ತಿಲಕ, ತುಂಬೆ, ನೆಲ್ಲಿ, ಹಿಪ್ಪೆ, ಕನಕ, ಮಾವು, ಕುಂಕುಮ ಕೇಸರಿ, ದಾಳಿಂಬೆ, ಬಿಲ್ವ, ಬೇವು, ಬದರಿ, ಹೂಬಿಟ್ಟ ಕಡಹ, ಕುರುವಕ, ಶ್ರೀಗಂಧ, ಲೋಧ್ರ, ನೇರಿಳೆ, ನಿಂಬೆ, ಗಜನಿಂಬೆ, ತಾಳ, ಹಿಂತಾಳ, ಮುಂತಾದ ಮರಗಳು ತುಂಬಿವೆ! ಸುಂದರವಾದ ಗಿಳಿ, ಕೋಗಿಲೆ, ಗೂಬೆ, ಚಾತಕ, ಹಂಸ, ಕೊಕ್ಕರೆ, ಭರದ್ವಾಜ, ಹದ್ದು, ನವಿಲು, ಟಿವ್ವಕ್ಕಿ, ಚಕ್ರವಾಕ, ಕೊಂಚೆ, ಪಾರಿವಾಳ, ಕಾಗೆ, ಚಕೋರ, ಗುಬ್ಬಚ್ಚಿ, ಖಂಜನ, ದುಂಬಿ, ಮರಕುಟಿಗ, ಗಿಡುಗ, ಕಲಿಂಗ, ನೀರು ಹಕ್ಕಿ, ಕವುಜಗ ಮುಂತಾದ ಹಕ್ಕಿಗಳು ಹೇಗೆ ಚಿಲಿಪಿಲಿಗುಟ್ಟುತ್ತವೆ! ಸಾರಂಗ ಗೋಕರ್ಣ ಕೃಷ್ಣಸಾರ ರುರು ಚಮೂರು ಮುಂತಾದ ನಾನಾ ಬಗೆಯ ಜಿಂಕೆಗಳು, ಸಿಂಹ, ಆನೆ, ಕತ್ತಿಮೃಗ, ಕರಡಿ, ಎತ್ತು, ಕೋಣ, ಕಾಡುಕೋಣ, ಕಂದಳಿ, ಹುಲಿ, ಕೋತಿ, ಚಮರಿಮೃಗ, ಮುಳ್ಳುಹಂದಿ, ಘೇಂಡಾಮೃಗ, ಮುಂಗುಸಿ, ನರಿ, ಶರಭ – ಮುಂತಾದ ಮೃಗಗಳೆಲ್ಲ ತಮ್ಮ ಹಗೆಯನ್ನು ಮರೆತು ಅಕ್ಕಪಕ್ಕ ಸಂಚರಿಸುತ್ತಿರುವುದು ಅಚ್ಚರಿಯುಂಟುಮಾಡುತ್ತದೆ!

ಈ ಕಡೆ ನೋಡಿದರೆ, ಅಲ್ಲಲ್ಲಿ ಹೂಹಣ್ಣುಗಳಿಂದ ಜಗ್ಗಿರುವ ದೊಡ್ಡ ಮರವೊಂದರ ತಣ್ಣೆಳಲಲ್ಲಿ ಸಂತೋಷದಿಂದ ವಿದ್ಯಾಧರರೂ ಕಿನ್ನರರೂ ಕಿಂಪುರುಷರೂ ವಿನೋದದಿಂದ ಏರುಜವ್ವನದ ತಮ್ಮ ಪ್ರಿಯತಮೆಯರೊಡನೆ ಬಂದು ಗುಹೆಗಳಲ್ಲಿ ಸಲ್ಲಾಪಗೈಯುತ್ತಿದ್ದರೆ, ಎಲ್ಲೆಲ್ಲೂ ತಂಗಾಳಿಯು ಪರಿಮಳಭರಿತವಾಗಿ ಬೀಸುತ್ತದೆ; ಇದನ್ನು ನೋಡಿದರೆ ಯಾರಿಗೆ ತಾನೇ ಆಹ್ಲಾದವೆನಿಸದು? ಹೂಹಣ್ಣುಗಳಿಂದ ತುಂಬಿರುವ

ಮರಗಳಿಂದಲೂ ಪಕ್ಷಿನಿವಹದಿಂದಲೂ ಕೂಡಿರುವ ವನದಿಂದ ಮೆರೆಯುವ ಶಿಖರದಲ್ಲಿ ಕೆಲವು ವರ್ಷಗಳ ಕಾಲ ನಿನ್ನ ಮತ್ತು ತಮ್ಮನ ಜೊತೆಯಲ್ಲಿ ನಾನು ವಾಸಿಸಬೇಕು; ಇಲ್ಲಿ ನನಗೆ ಯಾವ ಶೋಕದ ಉರಿಯೂ ತಾಕದು, ಏಕೆಂದರೆ ಇದರಿಂದ ಎರಡು ಫಲಗಳು ದೊರೆತಂತಾಗುವುದು: ಪಿತೃಋಣವನ್ನು ತೀರಿಸುವುದು ಒಂದಾದರೆ, ಭರತನಿಗೆ ರಾಜ್ಯಸಂಪತ್ತು ದೊರೆಯುವುದು ಇನ್ನೊಂದು. ಈ ವನವಾಸದಿಂದ ನಾನು ವ್ರತವನ್ನು ಆಚರಿಸುವಂತಾಗುವುದು, ವನವಾಸ ಮಾಡಿದರೆ ಸ್ವರ್ಗಮೋಕ್ಷವೇ ಮೊದಲಾದವು ಉಂಟಾಗುತ್ತವೆ ಎಂದು ಇಕ್ಷ್ವಾಕುನೃಪಮುಖ್ಯರೆಲ್ಲ ಸ್ವಪ್ರೇರಣೆಯಿಂದ ವಾನಪ್ರಸ್ಥವ್ರತವನ್ನು ತೊಟ್ಟಿದ್ದರು; ನನಗೂ ಇದು ಲಭಿಸಿರುವುದೇನೂ ಅಚ್ಚರಿಯ ವಿಷಯವಲ್ಲ, ಈ ಬೆಟ್ಟದಲ್ಲಿದ್ದರೆ ನಾವು ಸದಾ ಸುಖಿಯಾಗಿರುತ್ತೇವೆ; ನೀನು ಜೊತೆಗಿದ್ದು ಪರಿಶುದ್ಧ ಮನಸ್ಸಿನಿಂದ ನನ್ನನ್ನು ಸಂತೋಷಗೊಳಿಸುವುದರಿಂದ ಬೇಸರಕ್ಕೆ ಆಸ್ಪದವೇ ಇರುವುದಿಲ್ಲ. ನೀಲಿ ಹಳದಿ ಬಿಳುಪು ಕೆಂಪು ಬಣ್ಣಗಳ ಭಾರಿ ಬಂಡೆಗಳು ಇಲ್ಲಿವೆ; ಬೆಟ್ಟದ ಬುಡದಲ್ಲಿರುವ ಕಾಡು ಉದ್ಯಾನವನದಂತಿದೆ, ಅದರಲ್ಲಿ ಬಳ್ಳಿಮಾಡಗಳೂ ಆಟದ ಸ್ಥಳಗಳೂ ಯಥೇಚ್ಛವಾಗಿವೆ; ಭೂರ್ಜಪತ್ರ, ಪುನ್ನಾಗ, ತಾವರೆ ಮುಂತಾದ ಎಲೆಗಳು ಉದುರಿ ನೆಲವೆಲ್ಲ ಹಾಸಿಗೆಯಂತಿದೆ; ಆದ್ದರಿಂದಲೇ ಇಲ್ಲಿ ಕಾಮಿಗಳ ಸಂಕುಲವೇ ನೆರೆದಿವೆ, ನೋಡು. ಹೊಳೆಯುವ ಚಿನ್ನ ಮುತ್ತುರತ್ನಗಳನ್ನು ಹೀಗಳೆದು ಹೂಹಣ್ಣುಗಳಿಂದ ತುಂಬಿದ ಮರಗಿಡಗಳು ಹಾಗೂ ನಿರ್ಮಲವಾದ ನೀರಿನ ಕೊಳಗಳಿಂದ ಕೂಡಿದ ಈ ಪರ್ವತವು ತುಂಬ ಪ್ರಶಸ್ತವಾಗಿದೆ; ನೀನು ಹಾಗೂ ಲಕ್ಷ್ಮಣನ ಜೊತೆಯಲ್ಲಿ ನಾನು ಹದಿನಾಲ್ಕು ವರ್ಷಗಳ ಕಾಲ ಇಲ್ಲಿ ಸತ್ಪುರುಷನಂತೆ, ರಾಜಋಷಿಯಂತೆ, ಸತ್ಯಪರಿಪಾಲನಾಸಕ್ತಿಯಿಂದ ಬಾಳಿ ಕುಲಧರ್ಮವನ್ನು ಹೆಚ್ಚಿಸುತ್ತ ಸುಖವಾಗಿರುತ್ತೇನೆ. ಆ ಅಲ್ಲಿ ನೋಡು ನೀರೇಜನೇತ್ರೆ, ಈ ಗಿರಿಯಲ್ಲಿ ಶುಭ್ರವಾದ ನೀರಿನಿಂದ, ಹಂಸಕೊಕ್ಕರೆಯಂತಹ ಹಕ್ಕಿಗಳ ಗುಂಪಿನಿಂದ, ದಡಗಳಲ್ಲಿ ಮರಳ ರಾಶಿಯಿಂದ, ಹೂಹಣ್ಣುಗಳಿಂದ ಸಮೃದ್ಧವಾದ ಮರಬಳ್ಳಿಗಳಿಂದ, ಬಳಲಿ ಬಾಯಾರಿ ನೀರು ಕುಡಿಯಲೆಂದು ಬರುವ ಜಿಂಕೆಗಳ ತಂಡದಿಂದ, ಎರಡೂ ಕಡೆಗಳಲ್ಲಿ ಘೋರತಪಸ್ಸು ಮಾಡುವ ಸೂರ್ಯನಂತೆ ಪ್ರಜ್ವಲಿಸುತ್ತ ತಪಸ್ಸು ಮಾಡುವ ಸಿದ್ಧರಿಂದ ಕೂಡಿದ ಗಂಗೆಯನ್ನು ನೋಡು. ಗಂಟುಕೂದಲು, ನಾರುಬಟ್ಟೆ, ಕೃಷ್ಣಾಜಿನ, ಯಜ್ಞೋಪವೀತಗಳಿಂದ ಕೂಡಿರುವ ಋಷಿಗಳನ್ನೂ, ಸ್ನಾನ ಮಾಡುತ್ತ ಸೂರ್ಯಮಂಡಲದೆಡೆಗೆ ನೋಡುತ್ತ ತೋಳುಗಳನ್ನು ಮೇಲೆತ್ತಿ ಉಗ್ರತಪಸ್ಸನ್ನು ಆಚರಿಸುತ್ತಿರಲು, ಮೌನಿಕುಲದಲ್ಲಿಯೂ ನೀರಿನಲ್ಲಿಯೂ ಗಾಳಿಯಲ್ಲಿಯೂ ಇರುವ ಹೂಗಳ ಮೇಲೇರಿ ಚಕ್ರವಾಕಗಳು ಅಲ್ಲಲ್ಲಿ ವಿಹರಿಸುತ್ತವೆ, ನೋಡು. ಈ ನದಿಯ ಸೊಬಗನ್ನು ನೋಡಿ ಆನಂದದಿಂದ ನರ್ತಿಸುತ್ತವೆಯೋ ಎಂಬಂತೆ ಗಾಳಿ ಬೀಸಲು ಹೂಗಳೂ ಎಲೆಗಳೂ ಓಲಾಡುತ್ತವೆ; ನದಿಯ ತಟದಲ್ಲಿ ವಿಷ್ಣು–ಲಕ್ಷ್ಮಿಯರಂತೆ ವಿಹರಿಸುತ್ತಿರುವ ಚಕ್ರವಾಕಗಳ ಧ್ವನಿ ತುಂಬಿಕೊಂಡಿದೆ; ನಾನಿಲ್ಲಿ ಸ್ನಾನ ಮಾಡುತ್ತೇನೆ, ನೀನೂ ಮಜ್ಜನ ಮಾಡು! ಈ ನದಿಯಲ್ಲಿ ಜಲಚರಗಳ ಭಯವಿಲ್ಲ, ತಾವರೆನೈದಿಲೆಗಳನ್ನು ಮುಳುಗಿಸಿ ಅವುಗಳ ಮೈ ತೊಳೆದು ನಲಿದಾಡು; ಈ ಬೆಟ್ಟವನ್ನೇ ಸಾಕೇತನಗರಿಯೆಂದು,

ಹಾವು ಮುಂತಾದ ಜಂತುಗಳನ್ನು ನಗರದ ಜನವೆಂದು, ಗಂಗಾನದಿಯನ್ನು ಸರಯೂ ನದಿಯೆಂದು ತಿಳಿ. ಪರಿಶುದ್ಧವಾದ ಜೇನು, ಗೆಡ್ಡೆ ಹಣ್ಣುಗಳ ಆಹಾರದಿಂದ, ದೇವಗಂಗೆಯ ಸ್ನಾನದಿಂದ, ಸತ್ಪುರುಷ ಸಂಗದಿಂದ, ಅಯೋಧ್ಯೆಯನ್ನು ಬಯಸದೆ ನಾನು ಹರುಷದಿಂದಿರುತ್ತೇನೆ" ಎಂದು ಶ್ರೀರಾಮನು ಸೀತೆಗೆ ಉತ್ಸಾಹದಿಂದ ಹೇಳಿದ. ಶೈಲೇಂದ್ರಜಾತೆಯೇ, ಹೀಗೆ ಧರಣಿಸುತೆ ಲಕ್ಷ್ಮಣರ ಜೊತೆಗೂಡಿ ಸಂತೋಷದಿಂದ ಗಿರಿನದಿಗಳ ವೈಭವವನ್ನು ನೋಡುತ್ತ ಶ್ರೀರಾಮಪುರದಧೀಶ್ವರನು ಅಲ್ಲಿ ಓಡಾಡಿಕೊಂಡಿದ್ದ.

೩೦. ಸೀತೆಯೊಡನೆ ಮಂದಾಕಿನಿಯ ಚೆಲುವನ್ನು ನೋಡುತ್ತಿದ್ದ ರಾಮನನ್ನು ಭರತನು ಕಂಡುದು

ಗಿರಿತನೂಜೆಯೇ ಕೇಳು, ಸಾವಧಾನವಾಗಿ ವನವಿಹಾರ ಮಾಡಿ ಅಮಿತ ಹರ್ಷದಿಂದ ಕೂಡಿ ಶ್ರೀರಾಮನು ಪರ್ಣಮಂದಿರದಲ್ಲಿ ಮನೋಲ್ಲಾಸಭರಿತನಾಗಿ ಸೀತೆಯೊಡನೆ ಕುಳಿತಿದ್ದ. ಆಗ ಅವನ ಕಣ್ಣಿಗೆ ಎಲೆವನೆಯ ಮುಂಭಾಗದಲ್ಲಿ ಭಯದಿಂದ ಓಡಿಬರುತ್ತಿರುವ ಜಿಂಕೆಗಳ ಹಿಂಡು ಹಾಗೂ ಆಗಸದಲ್ಲಿ ಹಾರಿಬರುತ್ತಿರುವ ಪಕ್ಷಿಗಳ ಗುಂಪು ಕಾಣಿಸಿತು; ಅದನ್ನು ಕಂಡು ರಘುವರನು ಆ ಹೊತ್ತಿಗೆ ಹತ್ತಿರದಲ್ಲಿ ಸಂಚರಿಸುತ್ತಿದ್ದ ಲಕ್ಷ್ಮಣನಿಗೆ, "ಸೊಂಡಿಲನ್ನು ಮೇಲಕ್ಕೆತ್ತಿಕೊಂಡು ಘೀಳಿಡುತ್ತ ಆನೆಗಳ ತಂಡವು ಭೀತಿಯಿಂದ ಓಡಿ ಬರುತ್ತಿವೆ, ಜೋರಾಗಿ ಓಡಿಬರುವ ಕಾಡುಹಂದಿಗಳನ್ನು ನೋಡಿ ಹಿಂದೆ ಹಿಂದೆ ನೋಡುತ್ತ ಹರಿಣಗಳ ಸಾಲು ಬರುತ್ತಿದೆ, ಹೀಗೆ ಪ್ರಾಣಿಪಕ್ಷಿಗಳು ಓಡಿಬರುವುದಕ್ಕೆ ಕಾರಣವೇನು ಎಂಬುದನ್ನು ವಿಚಾರಿಸು" ಎಂದು ಹೇಳಿದ. ಅದನ್ನುಸರಿಸಿ ಲಕ್ಷ್ಮಣನು ಹತ್ತಿರದಲ್ಲಿದ ಸಾಲಮರದ ತುದಿಗೇರಿ ಸುತ್ತ ನೋಡಲು ಅವನಿಗೊಂದು ವಿಚಿತ್ರ ಕಾಣಿಸಿತು: ಇಡೀ ಕಾಡೇ ಆವರಿಸಿಕೊಂಡು ಬರುತ್ತಿದೆಯೋ ಎಂಬಂತೆ ಸಾಗಿಬರುತ್ತಿರುವ ಮಹಾ ಸೈನ್ಯದ ಸದ್ದನ್ನಾಲಿಸಿ ಅಣ್ಣನೊಡನೆ, "ದೇವ, ನೆಲ ಬೆಸಲಾದ ಹಾಗೆ ದೊಡ್ಡ ಸೈನ್ಯವೊಂದು ಈ ಕಡೆ ಬರುತ್ತಿದೆ. ಅತ್ತಿಗೆಯನ್ನು ಪರ್ಣಶಾಲೆಯಿಂದ ಕರೆದೊಯ್ದು ಅಲ್ಲಿರುವ ಗುಹೆಯಲ್ಲಿ ಅಡಗಿಸಿ ಬಿಲ್ಲುಬಾಣಗಳನ್ನು ಹಿಡಿದು ಬಾ" ಎನ್ನಲು ರಾಮಚಂದ್ರನು ಮುಗುಳ್ನಗುತ್ತ, "ಹೀಗೇಕೆ ಕಾತರದಿಂದ ಮಾತಾಡುತ್ತಿರುವೆ? ಬೇರೆಯವರ ಸೈನ್ಯವು ಈ ಕಡೆಗೆ ಬರಲು ಕಾರಣವಿಲ್ಲ; ಯಾರಾದರೂ ಹಾಯಾಗಿ ವನವಿಹಾರ ಮಾಡುತ್ತ, ಸ್ವಲ್ಪ ಹೊತ್ತು ಬೇಟೆಯಾಡಲೆಂದು ಬಂದಿದ್ದಾರೆಯೋ ಏನೋ! ಈ ಜಾಗದಲ್ಲಿ ಯಾವ ಭೂತವೂ ಸುಳಿಯುವುದಿಲ್ಲ, ಇನ್ನು ಮನುಷ್ಯರೇಕೆ ಬರುತ್ತಾರೆ? ಇನ್ನೂ ಸ್ವಲ್ಪ ಸೂಕ್ಷ್ಮವಾಗಿ ನೋಡು" ಎಂದ. ಅಣ್ಣನ ಆಜ್ಞೆಯಂತೆ ಸೌಮಿತ್ರಿಯು ಮತ್ತೆ ಸುತ್ತಲೂ ಕಣ್ಣಾಡಿಸುತ್ತ ಕಿವಿಗೊಟ್ಟು ಆಲಿಸಲು ರಥಗಳು ಬರುವ ಸದ್ದು ಕೇಳಿಸಿತು. ರಥಗಳ ಮೇಲೆ ಹಾರಾಡುವ ಕಂಚುವಾಳದ ಚಿಹ್ನೆಯಿರುವ ಧ್ವಜಗಳ ಚೆಲುವನ್ನು ಕಂಡು, 'ಭರತನು ದುರ್ಜನರ ಮಾತನ್ನು ಕೇಳಿಕೊಂಡು ನಮ್ಮನ್ನು ಜೀವಂತವಾಗಿ ಉಳಿಸಬಾರದೆಂಬ ಅತ್ಯಾಸೆಯಿಂದ ನಾವಿರುವ ಜಾಗವನ್ನು ಹುಡುಕಿಕೊಂಡು ಬರುತ್ತಿದ್ದಾನೆ; ತಡಮಾಡದೆ ಅವನ ಸೈನ್ಯವನ್ನು

ಸದೆಬಡಿದು ಶಾಕಿನಿಯರಿಗೆ ಔತಣವನ್ನು ಮಾಡಿಸುತ್ತೇನೆ' ಎಂದು ಮಹಾರೋಷದಿಂದ ಯೋಚಿಸಿದ. 'ಮರುಳು ಮಾತುಗಳನ್ನಾಡಿ ಮಹಾರಾಜರನ್ನು ಮರುಳನನ್ನಾಗಿಸಿ ನಮ್ಮನ್ನು ಕಾಡಿಗೆ ಕಳಿಸಿ ರಾಜ್ಯವನ್ನು ಕೈವಶಮಾಡಿಕೊಂಡರೂ ತನ್ನ ಆಸೆ ಪೂರ್ಣಳಾಗದವಳಂತೆ ಆ ದುರಾರಾಧ್ಯೆಯಾದ ಕೈಕೇಯಿಯು ಮಗನಿಗೆ ಹೇಳಿ ಸೈನ್ಯವನ್ನು ಸೇರಿಸಿಕೊಂಡು ಈ ದಟ್ಟವಾದ ಕಾಡಿನೊಳಗಿರುವ ನಮ್ಮನ್ನು ಹಿಡಿಯಬೇಕೆಂದು ಬರುತ್ತಿದ್ದಾಳೆ. ಅವಳನ್ನೂ ಭರತನನ್ನೂ ಪರಿವಾರವನ್ನೂ ಈಗಲೇ ಕೊಂದುಹಾಕುತ್ತೇನೆ' ಎಂದು ಮನಸ್ಸಿನಲ್ಲಿ ನಿರ್ಧರಿಸಿ, ಬುಸುಗುಡುತ್ತಲೇ ಮರದಿಂದ ಕೆಳಗಿಳಿದು ಬಂದ.

ಇಳಿದವನೇ ಬಿಲ್ಲುಬಾಣಗಳನ್ನು ತೆಗೆದುಕೊಂಡು ಘುಡುಘುಡಿಸುತ್ತ ಅಣ್ಣನ ಬಳಿ ಬಂದು ಸೈನ್ಯವು ಬರುತ್ತಿರುವ ವಿಷಯವನ್ನು ತಿಳಿಸಿದ. ಅವನ ಭೀಕರ ರೋಷವನ್ನು ಕಂಡ ರಾಮನು ನಯವಾಗಿ, "ಚಿಕ್ಕ ವಯಸ್ಸಿನವನಾದರೂ ಪರಮಧಾರ್ಮಿಕ ಶಿರೋರತ್ನ, ಸಾಧುಗಳರಸ, ರಾಗಲೋಭಗಳನ್ನು ತೊರೆದ ಮನಸ್ಸಿನವಾದ ಭರತನು ಕನಸಿನಲ್ಲಿಯೂ ನಮಗೆ ಅಪಕಾರವನ್ನು ಬಯಸುವುದಿಲ್ಲ. ಪ್ರಾಯಶಃ ತನ್ನ ತಾಯಿಯನ್ನು ಧಿಕ್ಕರಿಸಿ, ತಂದೆಯನ್ನು ಸಮಾಧಾನ ಮಾಡಿ, ತನಗೆ ಬಂದ ಸಂಪತ್ತೆಲ್ಲವನ್ನೂ ನನಗೆ ಒಪ್ಪಿಸಿಕೊಟ್ಟು ತಾನು ಸೇವಕನಂತಿರಬೇಕೆಂದು ಮನಸ್ಸಿನಲ್ಲಿಯೇ ನಿರ್ಧರಿಸಿ ತಾಯಂದಿರನ್ನೂ ಜೊತೆಯಲ್ಲಿ ಕರೆದುಕೊಂಡು ಬರುತ್ತಿರಬೇಕು. ನೀನು ಹೇಳುವ ಮಾತುಗಳು ದುರಾಗ್ರಹದಿಂದ ಕೂಡಿರುವಂತಹವು; ಸ್ವಲ್ಪ ಸಮಾಧಾನಚಿತ್ತದಿಂದ ಆಲೋಚನೆ ಮಾಡಿ ನೋಡು ಲಕ್ಷ್ಮಣ, ಆತುರದ ನಿರ್ಧಾರ ಮಾಡಬೇಡ" ಎಂದು ಹೇಳಲು ಸೌಮಿತ್ರಿಯು ಕೊಂಚ ಸಮಾಧಾನಗೊಂಡ. "ಕೇಳು ಲಕ್ಷ್ಮಣ, ಭರತನು ತನ್ನ ತಾಯಿ ಮಾಡಿದ ದುಷ್ಕಾರ್ಯವನ್ನು ಮನಸ್ಸಿಗೆ ಹಚ್ಚಿಕೊಂಡು ಮರುಗುತ್ತ, ಈ ಸಿರಿಯನ್ನು ಸಾರರಹಿತವೆಂದು ಬಗೆದು, ಎಲ್ಲರನ್ನೂ ಒಡಗೂಡಿಕೊಂಡು, ಕಾಡಿನಲ್ಲಿ ನಾವು ಪಡುತ್ತಿರಬಹುದಾದ ಪಾಡನ್ನು ನೆನೆಸಿಕೊಂಡು, ನಮ್ಮನ್ನು ಸಾಂತ್ವನಗೊಳಿಸಿ ಜೊತೆಗೆ ಕರೆದೊಯ್ಯಲು ವಿಪ್ರಮುನಿಸಮುದಾಯದ ಜೊತೆಯಲ್ಲಿ ಬಂದಿರುವಂತೆ ತೋರುತ್ತದೆ; ನೀನು ಸುಮ್ಮನೆ ಕೋಪಮಾಡಿಕೊಳ್ಳಬೇಡ. ಭೋಗಾಪೇಕ್ಷೆಯಿಂದ ತಮ್ಮನ ಪ್ರಾಣ ತೆಗೆಯುವ ಆಲೋಚನೆ ಮಾಡುತ್ತಾರೆಯೇ? ಎಷ್ಟೇ ಪಾತಕಿಯಾದರೂ, ಅತಿ ಕ್ರೂರ ಮನಸ್ಸಿನವನಾದರೂ, ಮಗನು ತಂದೆಯನ್ನು ಕೊಲ್ಲುತ್ತಾನೆಯೇ? ನಿನ್ನಂತಹವನಿಗೆ ಇದು ತಕ್ಕುದೇ? ಆಸೆಗೊಳಗಾಗಿ ಹುಡುಗನನ್ನು ತರಿದು ಹಾಕುವ ರೀತಿ ಯೋಚಿಸುವೆಯಲ್ಲ!" ಎಂದು ರಾಘವನು ನುಡಿಯಲು ಲಕ್ಷ್ಮಣನು ತನ್ನ ಆತುರಕ್ಕೆ ನಾಚಿಕೊಂಡು ತನ್ನ ಕಡುಗೋಪವನ್ನು ತೊರೆದು ಇನಕುಲೋತ್ತುಂಗನ ಪಕ್ಕದಲ್ಲಿ ತಲೆ ತಗ್ಗಿಸಿ ನಿಂತುಕೊಂಡ.

ಇತ್ತ ಭರತನ ಸೈನ್ಯ ಹತ್ತಿರ ಹತ್ತಿರ ಬಂದಿತು. ಆಗ ಭರತನು ಒಟ್ಟಾಗಿ ಮುಂದುವರಿಯುವುದನ್ನು ತಡೆದು, "ಎಲ್ಲರೂ ಗುಂಪುಗೂಡಿ ಹೊಕ್ಕರೆ ಗಿಡಮರಬಳ್ಳಿಪೊದೆಗಳಿಗೆ ತೊಂದರೆಯಾಗುತ್ತದೆ ಮತ್ತು ಮುನಿಜನರಿಗೆ ಆಯಾಸವಾಗುತ್ತದೆ, ಆದ್ದರಿಂದ ಸೈನ್ಯವೆಲ್ಲ ಇಲ್ಲೇ ಇರಲಿ, ಆಮೇಲೆ ನಿಧಾವಾಗಿ ಕರೆಸಿಕೊಳ್ಳೋಣ" ಎಂದು ಆಜ್ಞಾಪಿಸಲು ಅದರಂತೆ ಆನೆಕುದುರೆರಥಪದಾತಿಗಳನ್ನು

ಒಂದು ಕಡೆ ಸಮತಟ್ಟಾದ ನೆಲದಲ್ಲಿ ಬೀಡುಬಿಡಿಸಿ ಸೇನಾನಿಗಳು ಬಂದು ವರದಿ ಮಾಡಿದರು. ಆಗ ಭರತನು ಸಂತುಷ್ಟನಾಗಿ ಶತ್ರುಘ್ನನನ್ನು ಕುರಿತು, "ಬ್ರಹ್ಮ ರುದ್ರ ಇಂದ್ರರು ಕಣ್ಣನ್ನು ಅರೆಮುಚ್ಚಿಕೊಂಡು ಯಾವ ಸಿರಿರೇಖೆಗಳನ್ನೊಳಗೊಂಡ ಚರಣಗಳನ್ನು ಧ್ಯಾನಿಸುವರೋ ಅವನ್ನು ಕಾಣುವತನಕ ನಾವು ವಾಹನಗಳನ್ನು ಬಿಟ್ಟು ಮಂತ್ರಿಗಳೊಡನೆ ಕಾಲ್ನಡಿಗೆಯಿಂದಲೇ ಹೋಗೋಣ. ಗುಹನು ಮುಂದೆ ನಡೆದು ದಾರಿ ತೋರಿಸಲಿ" ಎಂದು ಹೇಳಿದ. ಅದರಂತೆ ಆ ಬೇಡರೊಡೆಯನು ಹೊರಟ. "ಮುನಿಗಳಿಗೆ ಆತಿಥ್ಯವನ್ನು ಮಾಡುವ ರೀತಿಯಲ್ಲಿ ತನು ಬಾಗಿ ಹೋಗಿ ರಘುವೀರ ಲಕ್ಷ್ಮಣರ ಮಹೋನ್ನತವಾದ ಶುಭಚರಣಗಳು ನನ್ನ ಕಣ್ಣಿದಿರಿನಲ್ಲಿ ಹೊಳೆಯುತ್ತಿರಲು ಅವುಗಳಿಗೆ ಅಭಿಷೇಕಗೈದು ತಲೆಯ ಮೇಲೆ ಆ ತೀರ್ಥವನ್ನು ಸಿಂಪಡಿಸಿಕೊಂಡರೆ ಮನಸ್ಸು ಶಾಂತಗೊಂಡು ನಾನು ಕೃತಾರ್ಥನಾಗುತ್ತೇನೆ. ಮನುಕುಲದ ರಾಜಪರಂಪರೆಯಲ್ಲಿ ಶ್ರೀರಾಮನು ಪಟ್ಟದ ಮೇಲೆ ಓಲಗವನ್ನು ನೋಡುತ್ತ ಕುಳಿತಿರಲು, ಅವನ ಪಾದಸೇವೆಯನ್ನು ಮಾಡುತ್ತ ನಾನು ಧನ್ಯನಾಗುತ್ತೇನೆ; ಬೆಳುದಿಂಗಳನ್ನು ಬೀರುತ್ತ ಮೂಡುತ್ತಿರುವ ಪೂರ್ಣಚಂದ್ರನ ಬಿಂಬದಂತೆ ಮಣಿಖಚಿತವಾದ ಕಿರೀಟದ ಕಾಂತಿಯಿಂದ ಶೋಭಿಸುವ ಅಣ್ಣನ ಮುಖವನ್ನು ಕಂಡು ನಾನು ಧನ್ಯನಾಗುತ್ತೇನೆ. ಇದು ಕೈಗೂಡುವ ಕಾಲ ಬಂದಿದೆ" ಎಂದು ಕಣ್ಣೀರಿಡುತ್ತ ಮತ್ತೆ ಹೀಗೆಂದ: "ವಸಿಷ್ಠರೇ ಮೊದಲಾದ ಮುನಿವರರೆಲ್ಲರೂ ತಮ್ಮ ಯೋಗಶಕ್ತಿಯಿಂದ ಸಾಕ್ಷಾತ್ಕರಿಸಿಕೊಳ್ಳಲು ಹೆಣಗಿದರೂ ನಿಲುಕದ ಪಾವನಚರಣಗಳು ಮಹಾಪರಾಕ್ರಮಿಯಾದ ಲಕ್ಷ್ಮಣನಿಗೆ ತಾನಾಗಿ ಲಭ್ಯವಾಯಿತು, ಈ ಜಗತ್ತಿನಲ್ಲಿ ಅವನಂತಹ ಪುಣ್ಯವಂತರು ಯಾರಿದ್ದಾರೆ? ಸದಾ ಸಿರಿಪಾದಗಳನ್ನು ಸೇವಿಸುವ ಅತ್ತಿಗೆಯು ಅದೆಷ್ಟು ಭಾಗ್ಯಶಾಲಿಯೋ! ಅವನ ಸನಿಹದಲ್ಲಿರುವ ಮರಗಿಡಪೊದೆಬಳ್ಳಿಗಳದು ಅದೆಂತಹ ಪರಿಪಾಕಗೊಂಡ ತಪಸ್ಸಿನ ಫಲವೋ! ನೀಲಮೇಘಶ್ಯಾಮನ ಸುಕೀರ್ತಿಯ ಮೂರ್ತಿಯನ್ನು, ಅಗಲವಾದ ತಾವರೆಗಣ್ಣಿನ ಪವಿತ್ರನನ್ನು, ಆಲಸ್ಯರಹಿತವಾದ ಸ್ತುತಿಗೆ ವಶನಾಗಿ ಸಂಪದವನ್ನೀಯುವ ಕರುಣಾವನಧಿಯನ್ನು, ಬಾಲೇಂದುಮೌಳಿಯ ಹೃದಯಾಲಯನನ್ನು, ಅಪರಿಮಿತ ಶೀಲಸದ್ಗುಣರತ್ನರತ್ನಾಕರನಾದ ಮನುಷ್ಯರೂಪದ ಲೀಲಾಸದನನನ್ನು ಕಂಡು ನಾನು ಧನ್ಯನಾಗುತ್ತೇನೆ" ಎಂದು ಭರತನು ಅಮಿತ ಭಕ್ತಿರಸದಿಂದ ತನ್ನ ಬಂಧುಗಳನ್ನೊಡಗೊಂಡು ಆ ಕಾಡಿನೊಳಗೆ ಮುನ್ನಡೆದ. ಮುಂದೆ ಗುಹನು ದಾರಿ ತೋರಿಸುತ್ತಿರಲು ಎಡಬಲಗಳಲ್ಲಿ ಪ್ರಶಾಂತಸುಂದರವಾದ ಋಷ್ಯಾಶ್ರಮಗಳನ್ನು ಕಂಡರೂ ಎಲ್ಲಿಯೂ ನಿಲ್ಲದೆ ಸರಸರನೆ ನಡೆಯುತ್ತಿರಲು ರಾಮಾಶ್ರಮದಲ್ಲಿನ ಅಗ್ನಿಯಿಂದ ಮೇಲೇಳುತ್ತಿದ್ದ ದಟ್ಟವಾದ ಹೊಗೆಯು ಕಾಣಿಸಿತು. ಅದನ್ನು ಕಂಡ ಭರತನು ಹರ್ಷಗೊಂಡು, ಬಂಧುಗಳನ್ನೂ ಗುರುಗಳನ್ನೂ ಬೇಗ ಕರೆತರುವಂತೆ ಚರರಿಗೆ ಆಜ್ಞೆಮಾಡಿ, ರಘುನಾಯಕನನ್ನು ಕಾಣುವ ಲವಲವಿಕೆಯಿಂದ ಮುಂದೆ ಸಾಗಿ, ಕಾಡಾನೆ ಪ್ರಾಣಿಪಕ್ಷಿಗಳ ಆಡುಂಬೊಲವನ್ನೂ ಅಲ್ಲಲ್ಲಿ ಹೂವುಗಳ ರಾಶಿಯನ್ನೂ ಕಂಡು ಆ ಕುರುಹನ್ನು ಹಿಡಿದು ನಡೆದ.

ಚೂಪಾದ ದಂತಗಳಿಂದ ಆನೆಗಳು ಗರ್ಜಿಸುತ್ತ ಹೋರಾಡಿದ ತಾಣವಿದು. ಇದು ಕಾಡುಕೋಣದ ರೋಷದಿಂದ ಮುರಿದ ಕೊಂಬು, ಸಿಂಹವು ದಯೆಯಿಲ್ಲದೆ ಆನೆಯ

ಕುಂಭವನ್ನು ಸೀಳಿದಾಗ ಹೊರಚೆಲ್ಲಿದ ಮುತ್ತುಗಳಿವು, ಇದು ಸೀತಾಮಾತೆಯ ಅಡುಗೆಗೆಂದು ತಂದು ಹಾಕಿರುವ ಉರುವಲಿನ ರಾಶಿ, ಇದು ಹೊಟ್ಟಿನ ರಾಶಿ; ಭರದ್ವಾಜಮುನಿಗಳು ಹೇಳಿದ ಪ್ರದೇಶ ಇದೇ ಇರಬೇಕು ಎಂದು ಸಂತಸಗೊಂಡ. ಮಧುರವಾದ ನಾದ ಕೇಳಿಸುತ್ತಿದೆ, ಅಣ್ಣನಿರುವ ಜಾಗಕ್ಕೆ ಬಂದಿರುವುದರಿಂದ ತುಂಬ ಸಂತಸವಾಗುತ್ತಿದೆ, ಒಳ್ಳೆಯದಾಗುತ್ತದೆ ಎಂಬ ಸೂಚನೆಯನ್ನು ನೀಡುವಂತೆ ಮರಳಿನಲ್ಲಿ ಪದ್ಮ ವಜ್ರ ಅಂಕುಶಗಳಿರುವ ಶುಭರೇಖೆಗಳುಳ್ಳ ಹೆಜ್ಜೆಗಳ ಗುರುತನ್ನು ನೋಡುತ್ತ ಆನಂದತುಂದಿಲನಾಗಿ ಭರತನು ಅದಕ್ಕೆ ನಮಸ್ಕರಿಸಿದ. ನಿಗಮಗಳ ಶಿಖಾಮಣಿ, ಆತ್ಮವೇತ್ತರಾದ ಜನರ ಪರುಷದ ಗಣಿ, ದಾನಚಿಂತಾಮಣಿ, ಶಾಸ್ತ್ರಸಮೂಹದ ವಚನರಚನೆಗಳನ್ನು ಪೋಷಿಸುವ ಸನ್ಮಣಿ, ಹರಬ್ರಹ್ಮರು ಸದಾ ಧ್ಯಾನಿಸುವ ಹಾಗೂ ಬುದ್ಧಿಗೆ ಅಗೋಚರವಾದ ಈ ಸಿರಿಪಾದಗಳು ನನ್ನಲ್ಲಿ ಹರ್ಷವನ್ನುಂಟುಮಾಡಲೆಂದು ಗೋಚರಿಸಿವೆ. ಇದು ಜಗತ್ತಿನ ಬೀಜ, ನಿಗಮಗಳಲ್ಲಿ ಅಡಕವಾದ ಸತ್ಯ, ಮಂತ್ರತಂತ್ರಗಳ ಹೊಲ, ಸತ್ಯಸುಖಗಳ ನೆಲ, ಇದು ಪಾರ್ವತಿಯ ಮನಸ್ಸಿನ ಆಡುಂಬೊಲ, ಹೃದಯಕಮಲದ ಹಂಸ, ಇದು ಬೆಳಗಿನ ಬೆಳಗು ಎನ್ನುತ್ತ ಪಾದಕ್ಕೆ ನಮಸ್ಕರಿಸಿ ಆನಂದಸಾಗರದಲ್ಲಿ ಓಲಾಡುತ್ತ ಎದುರಿನ ಆಶ್ರಮದಲ್ಲಿದ್ದ ರಾಮನನ್ನು ನೋಡಿ ಆಯೆಡೆಗೆ ಭರತನು ಭಕ್ತಿಯಿಂದ ನಡೆದ. ಸತತವಾದ ಅಭ್ಯಾಸಬಲದಿಂದ ಕತ್ತಲೆಯು ಹೋಗಿ ಚಿತ್ತದಲ್ಲಿ ಚಿಜ್ಯೋತಿಯು ಬೆಳಗುವ ರೀತಿಯಲ್ಲಿ ಅತಿಶಯವಾದ ದಟ್ಟ ಕಾಡನ್ನು ಕಳೆದು ಬರಲು ಎಲೆವನೆಯ ಮಧ್ಯದಲ್ಲಿ ನೀಳವಾದ ಕೇಶರಾಶಿಯ ಸತಿಯ ಬೆಳ್ನಗೆಯ ಕಾಂತಿಯಿಂದ ಹೊಳೆಯುವ ಅತ್ಯಂತ ಮೋಹನಾಕಾರವಾದ ಶರೀರವನ್ನು ಪಡೆದ ರಘುವೀರನನ್ನು ಕಂಡು ಭರತನು ಪರವಶಗೊಂಡ. ನೆಲದ ಮೇಲೆ ಕುಳಿತ ಅಣ್ಣನನ್ನು ಕಂಡು ಅವನ ಎರಡೂ ಕಣ್ಣುಗಳಲ್ಲಿ ಉಕ್ಕಿಬರುವ ಕಂಬನಿಯನ್ನು ತಾಳಲಾರದೆ ಪೂರ್ಣಚಂದ್ರನನ್ನು ನೋಡಿದ ಮಣಿಯು ಕರಗುವ ರೀತಿಯಲ್ಲಿ ಶತ್ರುಘ್ನನಿಗೆ ಹೀಗೆಂದ: "ವೈಭವೋಪೇತವಾದ ಅರಮನೆಯ ಮೇಲುಪ್ಪರಿಗೆಯಲ್ಲಿ ಮೃದುವಾದ ಹಾಸಿಗೆಯ ಮೇಲೆ ಕುಸುಮಪರಿಮಳದಿಂದ ರಾಜಶ್ರೀವಿಯಲ್ಲಿರಬೇಕಾದ ಬಿಸಜನೇತ್ರನಿಗೆ ನನ್ನ ದೆಸೆಯಿಂದಾಗಿ ಎಲೆವನೆಯಲ್ಲಿ ಇರುವಂತಾಯಿತೇ, ಅಕಟಾ" ಎಂದು ಗದ್ಗದಿಸಿದ. "ಇದರಿಂದಾಗಿ ಯಾವ ಶಾಸ್ತ್ರದಲ್ಲಿ ನೋಡಿದರೂ ಪ್ರಾಯಶ್ಚಿತ್ತ ಕಾಣಸಿಗದ ಗುರುದ್ರೋಹದ ಪಾತಕಕ್ಕೆ ನಾನು ಈಡಾದೆ. ಇಂಥ ನನ್ನ ಶರೀರವನ್ನು ಹೊತ್ತೇನು ಪ್ರಯೋಜನ? ಪಾತಕಿಯ ಹೊಟ್ಟೆಯಲ್ಲಿ ಹುಟ್ಟಿದ ನಾನು ಮಹಾಪಾತಕಿಯಾಗಿಬಿಟ್ಟೆ, ಅಪಕೀರ್ತಿಯನ್ನು ಹೊತ್ತೆ. ಇನ್ನೇನು ಹೇಳುವುದು, ಪ್ರಾಣಬಿಡುವುದೇ ಲೇಸು" ಎಂದು ಸಂಕಟದಿಂದ ಗೋಳಾಡಿದ. "ರಾಜ್ಯವನ್ನು ಕಿತ್ತುಕೊಂಡ ಪಾತಕಿಯೆಂಬ ಕೋಪ ರಘುವರನಿಗುಂಟಾದರೆ, ಲಕ್ಷ್ಮಣನು ಹುಚ್ಚನಾಗದಿರನು ಎಂಬ ಭಯ ನನ್ನ ಮನಸ್ಸಿನಲ್ಲಿ ತುಂಬಿಕೊಂಡು ತಳಮಳವಾಗುತ್ತಿದೆ. ಈ ಚಿಂತೆಯು ನನ್ನನ್ನು ಕಾಡುತ್ತಿರಬೇಕಾದರೆ ಅಣ್ಣನ ಬಳಿ ಹೋಗುವುದು ಹೇಗೆಂಬ ಚಿಂತೆಯುಂಟಾಗಿದೆ, ಏನು ಮಾಡಲಿ?" ಎನ್ನಲು ಅವನ ಪಾದಗಳನ್ನು ಮುಟ್ಟಿ ಶತ್ರುಘ್ನನು ಸಮಾಧಾನಗೈದು ಸೂಕ್ತ ಮಾತುಗಳಿಂದ ಉಪಚರಿಸಿದ: "ಜಗತ್ತಿನ ಜೀವಜಂತುಗಳ ಬುದ್ಧಿಯಲ್ಲಿ ಸಾಕ್ಷೀಭೂತನಾಗಿ, ಜಗತ್ತಿನ ಜೀವರುಗಳ ಸಕಲ ಆಗುಹೋಗುಗಳ

ಸೂತ್ರಧಾರನಾಗಿ, ಪುಣ್ಯವಂತರಾರು ಪಾಪಿಷ್ಠರಾರು ಎಂಬುದನ್ನು ಬಲ್ಲ ಸರ್ವಜ್ಞನಾದ ರಘುನಾಥನು ಸುಗುಣನೂ ದಯಾಪರನೂ ಅನಾಥರಕ್ಷಕನೂ ಆದವನು; ಆತನು ನಮ್ಮ ಮನಸ್ಸಿನಲ್ಲಿರುವುದನ್ನು ತಿಳಿದು ಕೃಪೆಯಿಂದ ಪೊರೆಯುತ್ತಾನೆ, ಇದಕ್ಕೆ ಚಿಂತಿಸದೆ ಆತನ ಪಾದಗಳೆಡೆಗೆ ಹೋಗೋಣ."

ತಮ್ಮನ ಮಾತುಗಳನ್ನು ಕೇಳಿದ ಭರತನಿಗೆ ಚಿಂತೆಯು ದೂರವಾಗಿ ಹರ್ಷವು ತುಂಬಿಕೊಂಡಿತು. ಆಶ್ರಮದತ್ತ ಹೋಗುವ ದಾರಿಯಲ್ಲಿ ಸಾಗುತ್ತ ಅಲ್ಲಲ್ಲಿ ಕಾಣಿಸಿದ ರಘುನಾಥಜಾನಕಿಯರ ಪಾದಕಮಲಗಳ ಗುರುತುಗಳನ್ನು ಹೂಗಳಿಂದ ಪೂಜಿಸುತ್ತ, ಮತ್ತೆ ಮತ್ತೆ ನಮಿಸುತ್ತ ತಲೆ ತಗ್ಗಿಸಿಕೊಂಡು ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಒಳಗೆ ಹೊರಗೆ ಎರಡೂ ಕಡೆಗಳಲ್ಲಿ ನೀಲಮೇಘಶ್ಯಾಮನನ್ನು ತುಂಬಿಕೊಂಡು ಮುಂದೆ ಮುಂದೆ ನಡೆದ. ಹಾಗೆ ಬಂದು ಅಂಬುಜದಳಾಯತಾಕ್ಷನೂ, ಸಮುದ್ರಪರ್ಯಂತವಾದ ಪೃಥ್ವಿಗೆ ಅಧಿಪತಿಯಾದವನೂ, ಅಹಂಕಾರರಾಕ್ಷಸಸಂಹಾರಕನೂ ಆದ ಶ್ರೀರಾಮನನ್ನು ಕಂಡ. ಸುರುಚಿರವಾದ ಜಟಾಮಂಡಲದಿಂದ ಕೂಡಿ, ನಾರುಮಡಿಯುಟ್ಟು, ಕೃಷ್ಣಾಜಿನವನ್ನು ಹೊದೆದು, ಕೈಯಲ್ಲಿ ದರ್ಭೆಯನ್ನು ಹಿಡಿದು ನೆಲದ ಮೇಲೆ ಕುಳಿತಿರಬೇಕಾದರೆ, ಪಕ್ಕದಲ್ಲಿ ಲಕ್ಷ್ಮಣನು ಕೈಮುಗಿದುಕೊಂಡು ಭಕ್ತಿಭಾವದಿಂದ ಸೇವಿಸುತ್ತಿರಲು, ತನ್ನ ಚಿದ್ರೂಪವನ್ನು ಮರೆಮಾಚಿ ಮಾನುಷಾಕಾರವನ್ನು ತೋರಿ ಮೆರೆಯುವ ಪರಬ್ರಹ್ಮನನ್ನು ಕಂಡ. ಸೂರ್ಯ ಚಂದ್ರ ಅಗ್ನಿ ಮಿಂಚು ಮುಂತಾದ ಯಾವುದರಿಂದಲೂ ಉಪಮಿಸಬಾರದ ಚಿದಾನಂದನು ಮಾನುಷರೂಪದಿಂದ ಕಂಗೊಳಿಸಲು ಭರತನು ಬಹು ಬೇಗ ಅವನ ಬಳಿ ಬಂದು, "ಜ್ಞಾನಸ್ವರೂಪ, ಚಿದ್ದೀಪ, ಶರಣರತಾಪಪರಿಹಾರಕ, ಕರುಣಾಕರ, ಆರ್ತತ್ರಾಣ, ಭಾನುವಂಶಪವಿತ್ರ ಸಲಹು" ಎನ್ನುತ್ತ ಶ್ರೀರಾಮನ ಮುಂದೆ ಭಕ್ತಿಭಾವದಿಂದ ಕೆಡೆದ. 'ನನ್ನಿಂದ ಅಪರಾಧವಾಯಿತು, ಇನ್ನೇನುಮಾಡಲಿ' ಎಂಬ ಭಯದಿಂದ ಕಣ್ಣುಗಳಲ್ಲಿ ದುಃಖಾಶ್ರು ತುಂಬಿ, ನಡುಗುವ ಕಂಠದಿಂದ ಸ್ವರವೇ ಹೊರಡದೆ, ಏನನ್ನೂ ಮಾತಾಡಲಾರದೆ, ಈ ಪರಬ್ರಹ್ಮಸ್ವರೂಪನನ್ನು ನೋಡಿದ ಸಂತೋಷವು ಅವನಲ್ಲಿ ಅಂತರ್ಭಾವವನ್ನುಂಟುಮಾಡಿತು. ಅಂಬುಜದಳಾಕ್ಷನ ಅಡಿದಾವರೆಗಳನ್ನು ಕಂಡು ದಂಬಮದಮಾನವರ್ಜಿತನಾಗಿ ನೆಲದ ಮೇಲೆ ಬಿದ್ದ ನೆರಳಿನಂತೆ ಏನೊಂದನ್ನೂ ನೋಡಲಾರದ ಸಂಭ್ರಮರಾಶಿಯಲ್ಲಿ ಮುಳುಗಿ, ಒಳಗೂ ಹೊರಗೂ ತುಂಬಿದ ಆನಂದದಿಂದ **ರಾಮಪುರನಾಥ**ನೇ ತಾನು ಎಂಬಂತೆ ಭಾವಾತೀತನೆನಿಸಿ ಏನೊಂದನ್ನೂ ಚಿಂತಿಸದೆ ಭರತನು ನೆಲದಲ್ಲಿ ಕೆಡೆದಿದ್ದ.

೩೧. ಶ್ರೀರಾಮನು ಕುಶಲವನ್ನು ವಿಚಾರಿಸಿ ಭರತನಿಗೆ ರಾಜನೀತಿಯನ್ನು ಬೋಧಿಸಿದುದು

ಗಿರಿಜಾತೆಯೇ, ಅತಿ ಖೇದದಿಂದ ಮುಂದೇನೂ ತೋಚದೆ ನೆಲದಲ್ಲಿ ಒರಗಿದ್ದ ಭರತನಂತೆಯೇ ಶತ್ರುಘ್ನನೂ ಶ್ರೀರಾಮನ ಪಾದಕಮಲದ ಬಳಿ ಬಿದ್ದಿದ್ದುದನ್ನು ಕಂಡು ಕರುಣೆಯಿಂದ ಮೇಲೆತ್ತಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತಲೆಯನ್ನು ನೇವರಿಸಿ, ಕಂಬನಿಗಳನ್ನೊರೆಸಿ ಸಮಾಧಾನ ಮಾಡಿದ ಶ್ರೀರಘುವರನು, "ಅರಮನೆಯಲ್ಲಿ ಕ್ಷೇಮದಿಂದಿರುವುದನ್ನು ಬಿಟ್ಟು ದುಷ್ಟಮೃಗಗಳ ಈ ಕಾಡಿಗೆ ಬರಲು ಕಾರಣವಾದರೂ ಏನು?" ಎಂದು ಪ್ರೀತಿಯಿಂದ ವಿಚಾರಿಸಿದ. "ಸುಕುಮಾರ, ದೊರೆಯ ಅಣುಗ, ದುರ್ಗಮವಾದ ಹಾದಿಯಲ್ಲಿ ಬಲು ಕಷ್ಟದಿಂದ ಹಾವುಕಾಡುಮೃಗಗಳಿಂದ ಕೂಡಿದ ಕಾಡಿನಲ್ಲಿ ಬರುತ್ತಾರೆಯೇ? ಸತ್ವಪೂರಿತ, ಸುಧಾರ್ಮಿಕಶಿರೋರತ್ನ, ಅಶ್ವಮೇಧವೇ ಮೊದಲಾದ ಯಜ್ಞಗಳನ್ನು ಮಾಡಿದ ಮಹಾಪುರುಷರಾದ ಮಹಾರಾಜರ ಚರಣಸೇವೆಯೇ ಅತ್ಯುನ್ನತ ಗತಿ ಎಂದು ಸೇವಿಸುತ್ತಿರುವೆ ತಾನೇ? ಕುಲಗುರುಗಳಾದ ವಸಿಷ್ಠರೂ, ಅವರ ಮಕ್ಕಳೂ, ಕೌಸಲ್ಯೆ ಮೊದಲಾದವರೆಲ್ಲ ಶಾಂತಿಸಂತೋಷಗಳಿಂದ ಕೂಡಿರುವರೇ? ನಿನ್ನ ತಾಯಿಯು ಆರೋಗ್ಯದಿಂದಿರುವಳೇ? ಜಲಜಬಾಂಧವ ವಂಶವನ್ನು ಅನುಸರಿಸಿಕೊಂಡು ಬಂದಿರುವ ಕುಲವೃದ್ಧರಾದ ಆಪ್ತಮಂತ್ರಿಗಳೂ, ಪ್ರಜೆಪರಿವಾರವೆಲ್ಲವೂ ಸುಖವಾಗಿರುವರೇ? ಭರತನೇ, ನಿನ್ನ ಆಳ್ವಿಕೆಯಲ್ಲಿ ಅಯೋಧ್ಯಾನಗರವು ಸುಕ್ಷೇಮದಿಂದಿರುವುದೇ? ವಿಧ್ಯುಕ್ತವಾಗಿ ಅಗ್ನಿಕಾರ್ಯಗಳನ್ನು ಎಡಬಿಡದಂತೆ ನಿಯತವಾಗಿ ನಡೆಸಿಕೊಂಡು ಬರುತ್ತಿರುವ ಪುರೋಹಿತರೆಲ್ಲರೂ ಊರಲ್ಲಿ ಕ್ಷೇಮದಿಂದಿರುವರೇ? ಶಾಸ್ತ್ರಶಸ್ತ್ರಾಗಮಜ್ಞರೂ, ಕವಿತಾಗಮಜ್ಞರೂ, ವಿವಿಧಾಸ್ತ್ರಬಲಸಂಪನ್ನರೂ, ಯುದ್ಧಗಳಲ್ಲಿ ಗೆಲವನ್ನು ತಂದೀಯುವ ಯೋಧಮುಖ್ಯರೂ ತೃಪ್ತಿಯಿಂದಿದ್ದಾರೆಯೇ? ನೀತಿಜ್ಞರು, ಅತಿನಿಪುಣರು, ಅಖಿಲಾಗಮಶಾಸ್ತ್ರಚಾತುರ್ಯರು, ಪತಿಕಾರ್ಯಧುರೀಣರು, ಅತಿಶಯ ಜನರ ಮಾತುಗಳನ್ನರಿತ ಅನಸೂಯರು, ಅತ್ಯಂತ ಆಪ್ತಮಂತ್ರಿಕೋವಿದರು ಮುಂತಾದವರ ಸಹಾಯದಿಂದ ಸಾಮ್ರಾಜ್ಯಕ್ಕೆ ಶುಭವನ್ನುಂಟುಮಾಡುವುದು ರಾಜನೀತಿ. ಸದ್ವಂಶಜರಾದ ಮಂತ್ರಿಗಳಿಂದ ಭೋಗವೇ ಮುಂತಾದವು ವೃದ್ಧಿಯಾಗುತ್ತವೆ; ಯಾವುದನ್ನು ಮಾಡಬೇಕಾದರೂ ಬಹಳ ಜನರನ್ನು ವಿಚಾರಿಸದೆ ಕೆಲವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ನಿದ್ದೆಯಲ್ಲಿ ಮುಳಗಿಹೋಗದೆ ಪ್ರಯತ್ನಶೀಲನಾಗಿ ಕೆಲವು ಕಾರ್ಯಗಳನ್ನು ರಾತ್ರಿಯಲ್ಲಿ ಕೂಡ ಬೇರಾರಿಗೂ ತಿಳಿಯದ ಹಾಗೆ ಆತುರದಿಂದಾಗಲೀ ಆಲಸ್ಯದಿಂದಾಗಲೀ ಮಾಡದೆ ನೃಪತಿಲಕರು ರಾಜಕಾರ್ಯಗಳನ್ನು ಸಾಧಿಸಬೇಕು; ನೀನು ಹೀಗೆಯೇ ಮಾಡುತ್ತಿದ್ದೀ ತಾನೇ? ಹಿಂದೆ ಮಾಡಿದ ಕಾರ್ಯಗಳ ಹಿನ್ನೆಲೆಯಲ್ಲಿ ಮುಂದೆ ಮಾಡಬೇಕಾದ ಪ್ರಯತ್ನಗಳ ಬಗ್ಗೆ ಮೂರ್ಖರನ್ನು ಬಿಟ್ಟು ಸ್ವಂತ ಆಲೋಚನೆಯನ್ನು ಹೊಂದಿದ ಧೀಮಂತರ ಜೊತೆಗೆ ಪರ್ಯಾಲೋಚಿಸಿ ತಡಮಾಡದೆ ಅರಸುಗಳು ದೇಶದ ಐಶ್ವರ್ಯವೃದ್ಧಿಯನ್ನು ಮಾಡಬೇಕು; ಇದನ್ನರಿತು ನೀನು ನಡೆಯಬೇಕು. ಕೆಲವು ಮಂದಿ ಮೂರ್ಖರೂ ಮತಿಹೀನರೂ ಕೆಲಸಗಳಲ್ಲಿ ಮೂಗು ತೂರಿಸಿ ರಾಜನಿಗೆ ಅಪಕೀರ್ತಿಯನ್ನು

ತರುತ್ತಾರೆ. ಬುದ್ಧಿವಂತನಾದ ರಾಜನು ಎಲ್ಲ ಕಾರ್ಯಗಳ ಮೇಲುಸ್ತುವಾರಿ ಮಾಡಿ ರಾಜ್ಯದ ಸಿರಿಯನ್ನು ಹೆಚ್ಚಿಸುತ್ತಾನೆ. ಭ್ರಮೆಯಿಂದ ಹಿರಿಯರನ್ನು ದೂರಪಿಟ್ಟು ನೀಚರ ಜೊತೆ ಸಮಾಲೋಚನೆ ಮಾಡಿದರೆ ದೇಶದಲ್ಲಿ ದುರ್ಭಿಕ್ಷ ಭಯ ಮರಣಗಳು ಉಂಟಾಗುತ್ತವೆ. ಈ ರಾಜಧರ್ಮದ ಸ್ವರೂಪವನ್ನು ತಿಳಿದು ನೀನು ಆಡಳಿತವನ್ನು ನಡೆಸುತ್ತಿರುವೆ ತಾನೇ?

"ಒಳ್ಳೆಯದು ಮಧ್ಯಮದ್ದು ಕೆಟ್ಟದ್ದು ಎನಿಸಿಕೊಳ್ಳುವ ಕೆಲಸಗಳ ಬಗ್ಗೆ ಅಸಡ್ಡೆ ಮಾಡದೆ ಅದಕ್ಕೆ ತಕ್ಕಂತೆ ಉತ್ತಮರು ಮಧ್ಯಮರು ಕನಿಷ್ಠರನ್ನು ನೇಮಿಸಿ ಕಾರ್ಯಗಳನ್ನು ಆಗುಮಾಡಿಸಬೇಕು. ಇದರಲ್ಲಿ ಏರುಪೇರಾದರೆ ಅನರ್ಥವುಂಟಾಗುವುದು ಖಂಡಿತ. ಯಾವನಿಂದ ಯಾವ ಕೆಲಸವನ್ನು ಮಾಡಿಸಬೇಕು ಎಂಬ ವಿವೇಚನೆಯಿಂದ ಕೂಡಿದ ಮಂತ್ರಿಯಿಂದ ರಾಜ್ಯದ ವೈಭವ ಹೆಚ್ಚುತ್ತದೆ ಎಂದು ತಿಳಿದು ಅಂತಹವನಿಗೆ ನೀನು ಮಾನ್ಯತೆಯನ್ನು ನೀಡುತ್ತಿರುವೆ ತಾನೇ? ಕುಶಲೋಪಾಯಗಳನ್ನು ಬಲ್ಲವನನ್ನು ದೂಷಿಸುವ ಆವೇಶಚರನನ್ನು ಹಾಗೂ ಹಣಕ್ಕೆ ಆಸೆಪಡುವ ಶೂರನನ್ನೂ ನಾಶಪಡಿಸುವುದನ್ನು ಮರೆತರೆ ನಿನ್ನ ಅರಸುತನಕ್ಕೆ ಚ್ಯುತಿ ಎಂಬುದು ನಿನಗೆ ತಿಳಿದಿದೆ ತಾನೇ? ಚಾಣಾಕ್ಷತೆಯನ್ನು ಬಿಟ್ಟು ಕಠಿಣ ದಂಡನೆಯಿಂದ ಪ್ರಜಾಕ್ಲೇಶ ಹಾಗೂ ಹಿಂಸಾಮಾರ್ಗವನ್ನು ಅನುಸರಿಸಿದರೆ ನಾಶ ಖಂಡಿತ ಎಂಬುದನ್ನರಿತು ಆಲೋಚನೆಯಿಂದ ಕೂಡಿ ಕಾರ್ಯಗಳನ್ನೆಸಗುವುದನ್ನು ಅನುಸರಿಸುತ್ತಿರುವೆಯಲ್ಲವೇ? ಬುದ್ಧಿವಂತರೂ ಧೈರ್ಯವಂತರೂ ಶುಚಿಯಾದವರೂ ಶೂರರೂ ಮುನಿಜನಹಿತಕರರೂ ಸತ್ಕುಲಪ್ರಸೂತರೂ ಆದ ಪಿತೃಪಿತಾಮಹರ ಕಾಲದಿಂದಲೂ ರಾಜರುಗಳು ಅನುಸರಿಸಿಕೊಂಡು ಬಂದಿರುವ ಕೌಶಲವನ್ನು ತಿಳಿದುಕೊಂಡು ನಿನ್ನ ಅಧಿಕಾರವನ್ನು ಚಲಾಯಿಸುತ್ತಿರುವೆಯಲ್ಲವೇ? ಯುದ್ಧವಿಶಾರದರನ್ನು, ಕಷ್ಟದ ಕೆಲಸ ಮಾಡುವವರನ್ನು ಹುಡುಕಿ ಸೇನಾಪತಿಯ ಜೊತೆಯಲ್ಲಿರಿಸುವುದು ಉಚಿತವಾದುದು; ನೀನು ಈ ರೀತಿ ನಡೆಯುತ್ತಿರುವೆಯಾ? ಸೇವಕರಿಗೂ ಅಮಾತ್ಯರಿಗೂ ಸಲ್ಲಬೇಕಾದ ಭತ್ಯೆ ಜೀವಿತಗಳನ್ನು ಕಾಲಕಾಲಕ್ಕೆ ಸಲ್ಲಿಸಿ ಸತ್ಕರಿಸದಿದ್ದರೆ ಅವರು ನಿನ್ನ ಹಿಂದೆ ಬೈದುಕೊಳ್ಳುತ್ತಾರೆ; ಅಲ್ಲದೆ ನಿನಗೆ ಕೆಟ್ಟುದನ್ನು ಬಯಸುತ್ತಾರೆ. ಅಧಿಕಾರವಿದೆಯೆಂದು ಇದನ್ನು ದೀರ್ಘಕಾಲ ಉಪೇಕ್ಷಿಸಿದರೆ ಸಂಬಂಧಗಳು ಕೆಡುತ್ತವೆ, ಅಂತಹವರು ಹಣದಾಸೆಗೆ ಬಲಿಯಾಗುತ್ತಾರೆ ಎಂಬುದನ್ನು ಅರಸನಾದವನು ತಿಳಿದಿರಬೇಕು, ಅದರಂತೆ ನೀನು ವರ್ತಿಸುತ್ತಿರುವೆಯಾ? ನಮ್ಮ ವಂಶದ ಇತಿಹಾಸವನ್ನು ತಿಳಿದು ದಾಯಾದ್ಯರ ಸುಖದುಃಖಗಳನ್ನು ವಿಚಾರಿಸುತ್ತ, ಸಂಪ್ರದಾಯಕ್ಕನುಗುಣವಾಗಿ ಸಾಮಂತರನ್ನು ಮಾನದಾನಗಳಿಂದ ಒಲಿಸಿಕೊಂಡು, ಅನುಮಾನಗಳುಂಟಾದಂತೆ ಎಚ್ಚರವಹಿಸಿ, ರಾಜಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು; ಹೇಳಿದ ಕೆಲಸವನ್ನು ಮಾಡುವ ನಿಷ್ಠಾವಂತ ಸೇವರಿರುವ ರಾಜನು ನಿಜವಾಗಿ ಸುಖಿ; ನೀನು ಈ ಪರಿಯಲ್ಲಿಯೇ ಆಡಳಿತ ನಿರ್ವಹಿಸುತ್ತಿರುವೆ ತಾನೇ?

"ಐಶ್ವರ್ಯವನ್ನೆಲ್ಲ ಕಿತ್ತುಕೊಂಡು ಊರಿನಿಂದ ಓಡಿಸಿದ ಶತ್ರುಗಳು ಕೆಲಕಾಲದಲ್ಲಿಯೇ ಆಪ್ತರೆಂದು ಬಂದಾಗ ಅವರನ್ನು ಉಪೇಕ್ಷಿಸಿದರೆ ಕೋಣೆಯಲ್ಲಿನ ಬೆಂಕಿಯನ್ನು ಪೊದೆಯ ಪಕ್ಕದಲ್ಲಿ ಗಾಳಿಗೆದುರಾಗಿ ಇಟ್ಟವನ ರೀತಿಯಂತೆ ಆಗುತ್ತದೆ: ಇದನ್ನು ಮರೆಯದೆ ಎಚ್ಚರಿಕೆಯಿಂದ ಇರುವುದು ರಾಜನ ರೀತಿ. ನೀನಿದನ್ನು ತಿಳಿದು ಸದಾ

ಪರಿಪಾಲನೆ ಮಾಡುತ್ತಿದ್ದೀ ತಾನೇ, ಭರತ? ನಟನೆಕೃತಕತೆಗಳಿಂದ ನ್ಯಾಯವನ್ನು ನುಡಿಯುತ್ತ ಧರ್ಮವನ್ನು ಕಾಡಿಗಟ್ಟಿ ದುರ್ಬೋಧಪಂಡಿತರ ಹಾಗೂ ಲೋಕಾಯತರ ಕುಟಿಲಬುದ್ಧಿಯನ್ನೂ ಅನರ್ಥಾಚರಣೆಯನ್ನೂ ಮಾಡಿದರೆ ಸಂಕಟ ಹಾನಿಗಳುಂಟಾಗುತ್ತವೆ ಎಂಬುದನ್ನು ತಿಳಿದು ಮಹಾರಾಜನ ಧರ್ಮಪದ್ಧತಿಯನ್ನು ಅನುಸರಿಸಿ ನೀನು ನಡೆದುಕೊಳ್ಳುತ್ತಿದ್ದೀಯೆ, ಅಲ್ಲವೇ? ಧನ ಧಾನ್ಯ ಜಲ ತೃಣ ಯಂತ್ರಸಾಮಗ್ರಿಗಳನ್ನು ಪ್ರಾಣಾಪ್ತರಾದ ಭಟರ ರಕ್ಷಣೆಯಲ್ಲಿ ಗುಪ್ತವಾಗಿ ಜೋಪಾನವಾಗಿರಿಸಿದರೆ ಪುರದುರ್ಗಗಳು ಅಭಿವೃದ್ಧಿಯತ್ತ ಸಾಗುತ್ತವೆ. ಇದನ್ನು ಅರಿತ ರಾಜನು ಯಾರನ್ನೂ ನಿಷ್ಠುರವಾಗಿ ಕಾಣದೆ ಪ್ರಿಯನುಡಿಯಿಂದ ಉಪಚರಿಸುತ್ತಿದ್ದರೆ ಸಮುದ್ರಪರ್ಯಂತವಾದ ರಾಷ್ಟ್ರವು ಕೈವಶವಾಗುತ್ತದೆ ಎಂಬುದನ್ನು ತಿಳಿದು ವರ್ತಿಸು. ದೇವತೆಗಳು ಪಿತೃಗಳು ವಿಪ್ರರು ಅಭ್ಯಾಗತರು ಯುದ್ಧಕೋವಿದರು ಮಿತ್ರವರ್ಗ ಮುಂತಾದವರನ್ನು ಯಾವ ಯಾವ ಕಾಲದಲ್ಲಿ ಸತ್ಕರಿಸಬೇಕು ಎಂಬುದನ್ನು ತಿಳಿದು ಸಾವಧಾನದಿಂದ ಹಣವನ್ನು ಗಳಿಸಿ ಅನರ್ಹರಿಗೆ ನೀಡುವುದನ್ನು ಬಿಟ್ಟು ವೆಚ್ಚ ಮಾಡುವ ರಾಜನು ಈ ಜಗತ್ತಿನಲ್ಲಿ ಹೆಚ್ಚು ಕಾಲ ಇರುತ್ತಾನೆ, ಇದನ್ನರಿತು ವರ್ತಿಸು. ಹಣದಾಸೆಯಿಂದ ಬೇರೆಯವರ ಮನೆಗಳಲ್ಲಿದ್ದುದನ್ನು ಕದ್ದು ತಂದು ಕೋಶವನ್ನು ಬೆಳೆಸಿ, ನಿಷ್ಕಾರಣವಾಗಿ ಸಜ್ಜನರಿಗೆ ಕಿರುಕುಳ ನೀಡುವ ಅತಿ ಲೋಭಮೋಹಗಳಿಂದ ಕುರುಡಾದ ರಾಜನು ಬಹು ಬೇಗ ಮೃತ್ಯುವನ್ನೈದುತ್ತಾನೆ; ಈ ದುರ್ವರ್ತನೆಯನ್ನು ಬಿಟ್ಟು ಸಜ್ಜನರಂತೆ ಇರುವೆ ತಾನೆ? ಗುರುಹಿರಿಯರಲ್ಲಿಯೂ, ದೇವತೆಗಳು ಅತಿಥಿಗಳಲ್ಲಿಯೂ, ತರುಣ ವೃದ್ಧರಲ್ಲಿಯೂ, ಪರಸ್ತ್ರೀ ಹಾಗೂ ತನ್ನ ಮೋಹದ ತರುಣಿಯರಲ್ಲಿಯೂ ಎಲ್ಲಕಾಲದಲ್ಲಿಯೂ ಸಮಚಿತ್ತದಿಂದಲೂ ಅಸೂಯೆಯಿಲ್ಲದೆಯೂ ಸರಸಮೃದು ವಚನಗಳಿಂದಲೂ ದಾನಮಾನಗಳಿಂದಲೂ ಸಂತೋಷಗೊಳಿಸುವ ರಾಜನ್ಯಚೂಡಾರತ್ನನು ಚಿರಕಾಲ ಸುಖವಾಗಿರುತ್ತಾನೆ; ಇದು ಅರಸುಗಳ ನೀತಿ, ಇದನ್ನರಿತು ನೀನು ನಡೆದುಕೋ.

"ಹೆಚ್ಚಿನ ಆದಾಯದ ಬಗ್ಗೆ ಯೋಚಿಸುತ್ತ, ಬೇಡದ್ದಕ್ಕೆ ವ್ಯಯಮಾಡದೆ ಧರ್ಮಮಾರ್ಗದಲ್ಲಿ ಹಣವನ್ನು ಗಳಿಸುತ್ತ ಹೆಚ್ಚಿನ ಹಣದಿಂದ ಧರ್ಮವನ್ನು ಸಾಧಿಸುತ್ತ, ಎರಡನ್ನೂ ಸಮದೃಷ್ಟಿಯಿಂದ ನೋಡುತ್ತ ಏಳಿಗೆಯನ್ನು ಹೊಂದುವ ಅರಸನು ಬಾಳುತ್ತಾನೆಯೇ ವಿನಾ ಆಸೆಕಳವಳಗಳಲ್ಲಿ ಮುಳುಗಿರುವ ರಾಜನು ಉಳಿಯುವುದಿಲ್ಲ; ಈ ಧರ್ಮವನ್ನರಿತು ನಮ್ಮ ಕುಲಪರಂಪರೆಯ ರಾಜರು ನಡೆದ ಮಾರ್ಗದಲ್ಲಿ ನೀನು ನಡೆಯುತ್ತಿರುವೆಯಲ್ಲವೇ? ಹುಸಿ, ಲೋಭ, ದೀರ್ಘದ್ವೇಷ, ಕೋಪ, ಆಲಸ್ಯ, ಚಾಪಲ್ಯ, ಚಿಂತೆ, ವಿಪರೀತದ ಆಲೋಚನೆಗಳನ್ನು ಬಿಟ್ಟು ರಾಜನಾದವನು ವೇದಾರ್ಥಕೋವಿದರೂ ವಿಪ್ರಪೌರವರೂ ಹೊಗಳುವ ರೀತಿಯಲ್ಲಿ ನೀನಿರುವೆಯೆಂದು ಭಾವಿಸಿದ್ದೇನೆ. ನಾಲ್ಕು ಮಂದಿಯ ಜೊತೆಗೆ ಎಲ್ಲರಿಗೂ ತಿಳಿಯುವಂತೆ ಮಂತ್ರಾಲೋಚನೆ ಮಾಡಿ, ಯಾರಿಗೂ ತಿಳಿಯದಂತೆ ಒಬ್ಬನ ಜೊತೆ ಸಮಾಲೋಚಿಸಿ ರಾಜ್ಯಭಾರ ಮಾಡುವುದು ಸೂರ್ಯವಂಶೋದ್ಭವರಾದ ರಾಜರ ದೊರೆತನದ ರೀತಿ; ಅದನ್ನು ಅನುಸರಿಸಿ, ಸತ್ಯ ಧರ್ಮಗಳ ಅನುಷ್ಠಾನವನ್ನು ಬಿಡದೆ ಪರಿಪಾಲಿಸುತ್ತಿರುವೆಯಾ? ತಂದೆತಾಯಿಗಳೂ

ಬಂಧು-ಇಷ್ಟಜನರೂ ಉತ್ಸಾಹದಿಂದ ಇದ್ದಾರೆಯೇ? ಪ್ರತಿಯೊಂದೂ ವರ್ಣವೂ ಅನುಸರಣೆ ಮಾಡಬೇಕಾದ ನೀತಿಯನ್ನು ಅನುಸರಿಸುತ್ತ ಯಥಾಕ್ರಮದಲ್ಲಿ ಬಿಡದೆ ಧರ್ಮವನ್ನು ಪರಿಪಾಲಿಸುತ್ತಿದ್ದಾರೆಯೇ? ಚೆನ್ನಾಗಿ ಮಳೆಬೆಳೆಗಳಾಗಿ ಪ್ರಜೆಗಳೆಲ್ಲರೂ ಆರೋಗ್ಯದಿಂದಿರುವರೇ? ಕ್ರೂರಿಗಳೂ ಪಿತಂಡವಾದಿಗಳೂ ರಾಜ್ಯದಲ್ಲಿ ನೆಲೆಗೊಂಡಿಲ್ಲ ತಾನೇ? ಮಾತಿನಿಂದಲ್ಲದೆ ಮನಃಪೂರ್ವಕವಾಗಿ ಆತ್ಮೀಯತೆಯನ್ನು ತೋರಿಸುತ್ತ, ಚಪಲದ ನಡವಳಿಕೆಯು ಹೆಚ್ಚದ ರೀತಿಯಲ್ಲಿ, ನಿಷ್ಠುರವಾಗಿ ಮಾತನಾಡದೆ ಅಂತಃಪುರಸ್ತ್ರೀಯರನ್ನು ಪ್ರಸನ್ನರಾಗಿರುವಂತೆ ನೋಡಿಕೊಂಡಿರುವೆಯಾ? ಹೊಸ ಸೇವಕರ ಬಗ್ಗೆ ಪಕ್ಷಪಾತ ತೋರಿಸುತ್ತ ಹಳಬರನ್ನು ಉಪೇಕ್ಷೆ ಮಾಡದೆ, ಹಸುಆನೆಕುದುರೆಗಳನ್ನು ಪೋಷಿಸುತ್ತ ಪ್ರಾಣಿಗಳು ಸಂತಸವಾಗಿರುವಂತೆ ನೋಡಿಕೊಂಡಿರುವೆಯಲ್ಲವೇ?

"ಮೃಷ್ಟಾನ್ನಭೋಜನವನ್ನು ಒಬ್ಬನೇ ಉಣ್ಣದೆ ಬಂಧುಬಾಂಧವರೊಡನೆ ಊಟಮಾಡಿ ಅವರನ್ನು ಸದಾ ಪ್ರೀತಿಯಿಂದ ಕಾಣುವೆ ತಾನೇ? ಇವನೇ ಚಿರಕಾಲ ಈ ರಾಜ್ಯವನ್ನು ಆಳುವಂತಾಗಲಿ ಎಂದು ಅವರೆಲ್ಲ ಪ್ರಾರ್ಥನೆಗೈಯುವಂತೆ ಅವರನ್ನೆಲ್ಲ ಹಿತಕರವಾಗಿ ಕಾಣುತ್ತಿರುವೆಯಾ? ನಾಲ್ಕು ತಿಂಗಳ ಕಾಲ ಹದಮಳೆಯಾಗಿ ಹೂಹಣ್ಣುಧಾನ್ಯಗಳು ಸಮೃದ್ಧವಾಗಿ ಬೆಳೆದು ಲೋಕವು ಸಂತಸದಿಂದಿರಲು ವೈಭವದಿಂದ ಭೋಗಗಳನ್ನು ಅನುಭವಿಸುವ ದೇವೇಂದ್ರನಂತೆ, ಪ್ರಜೆಗಳನ್ನೆಲ್ಲ ಮಕ್ಕಳಂತೆ ಕಾಣುತ್ತ ಪಾಲಿಸುವ ಅರಸನು ಲೋಕಾಕಾಂಕ್ಷಿತನಾಗುತ್ತಾನೆ, ಇದು ಖಂಡಿತ. ಕಂದಿಸದೆ ಕುಂದಿಸದೆ ಕಿರಿಕಿರಿಯುಂಟುಮಾಡದೆ ತನ್ನ ಕಿರಣಗಳಿಂದ ವರ್ಷದ ಎಂಟು ತಿಂಗಳ ಕಾಲ ಭೂಮಿಯ ಮೇಲಿರುವ ನೀರನ್ನು ಹೀರುವ ಸೂರ್ಯನೋಪಾದಿಯಲ್ಲಿ ಪ್ರಜೆಗಳನ್ನೂ ಪರಿವಾರದವರನ್ನೂ ನಂದನದಂತೆ ಕಾಣುತ್ತ ನಾನಾ ಬಗೆಯ ಕೈಗಳಿಂದ ಹಣವನ್ನು ನಯವಾಗಿ ಸೆಳೆಯುವ ರಾಜನು ಲೋಕಬಂಧುವೇ ಸರಿ. ಇದನ್ನು ಅರಸನಾಗ ಬಯಸುವವನು ತಿಳಿದಿರುವುದು ಅಗತ್ಯ. ಗುಪ್ತಚರರನ್ನು ಕಳಿಸಿ ಜನರ ಅಂತರಂಗವನ್ನು ಹೊಕ್ಕು ಅಲ್ಲಿ ನಡೆಯುವ ಆಲೋಚನೆಗಳನ್ನೂ, ರಾಜ್ಯದಲ್ಲಿ ನಡೆಯುವ ಎಲ್ಲ ಸಂಗತಿಗಳನ್ನೂ ತಿಳಿದು ಅವರಿಗೆ ಸಂತಸವಾಗುವಂತೆ ನಡೆಯುತ್ತ, ದುರ್ಮಾರ್ಗಿಗಳನ್ನು ನಿಗ್ರಹಿಸುತ್ತ, ಧರ್ಮವನ್ನು ನಿಧಿಯೆಂದು ಭಾವಿಸಿ ಅಭಿವೃದ್ಧಿಗೈಯುತ್ತ ರಾಜನು ಧನ್ಯನಾಗುತ್ತಾನೆ. ಕೃತ್ಯ ಅಕೃತ್ಯಗಳನ್ನು ಹೊತ್ತು ತರುವವರೆಗೂ ಕಳವಳಪಡದೆ ಇದ್ದು, ಧರ್ಮವನ್ನು ಮೀರದವರನ್ನು ಕಾಪಾಡುವ ಮನುವಿನಂತೆ ಜನರು ಮಾಡುವ ಒಳಿತು ಕೆಡುಕುಗಳನ್ನು ತಿಳಿಯದವನಂತಿದ್ದು, ಸಮಯ ಬಂದಾಗ ಪಾತಕವು ಬೆಳೆಯದ ಹಾಗೆ ನಿಗ್ರಹಿಸಿ ಜಗತ್ತನ್ನು ರಕ್ಷಿಸುವುದು ರಾಜನಿಗೆ ಆವಶ್ಯಕವಾದ ಗುಣ. ಬಯಸದಿದ್ದರೂ ನದಿಗಳೆಲ್ಲವೂ ಸಮುದ್ರದ ಕಡೆಗೆ ಪ್ರಿಯನನ್ನು ಸೇರುವ ಕಾತರದಲ್ಲಿ ಹರಿಯುವ ಹಾಗೆ ಎಲ್ಲರನ್ನೂ ಸ್ವವಶವಾಗಿರುವಂತೆ ಮಾಡುವ ವರುಣನ ಹಾಗೆ, ಸಸ್ಯಗಳು ಸೊಂಪಾಗಿ ಬೆಳೆಯುವಂತೆ ಮಾಡಿ ಸಸ್ಯಾಧಿಪತಿಯು ಜನಮನಕ್ಕೆ ಪ್ರಿಯವನ್ನುಂಟುಮಾಡುವ ಹಾಗೆ ಸದಾ ಎಲ್ಲರನ್ನೂ ಹರ್ಷದಿಂದಿರಿಸಿ ಪಾಲನೆಮಾಡುವ ರಾಜನು ಮುಖ್ಯನಾಗುತ್ತಾನೆ. ಇಂದ್ರ ರವಿ ಮಾರುತ ವರುಣ ಸೂರ್ಯಚಂದ್ರರ ಅಂಶವನ್ನು ಹೊತ್ತು ಸಜ್ಜನಸಮುದಾಯವನ್ನು ಪಾಲಿಸುವ ಪರದೇವತೆಯೆ ಕಣ್ಣಿಗೆ

ಕಾಣುವ ರಾಜನೆನ್ನಿಸಿಕೊಂಡು ವಿಷ್ಣುಸಮಾನನೆನ್ನಿಸಿ ಮೆರೆಯುತ್ತಾನೆಂದು ಎಲ್ಲ ಶಾಸ್ತ್ರಗಳೂ ಹೇಳುತ್ತವೆ. ಆ ಮಾತು ಸಾರ್ಥಕವಾಗುವಂತೆ ದಯೆಯಿಂದ ದೊರೆತನವನ್ನು ಸ್ವೀಕರಿಸಿ ಕುಲಧರ್ಮಕ್ಕನುಗುಣವಾಗಿ ಧರೆಯನ್ನು ಪೊರೆಯಬೇಕು, ಭರತ."

ಹೀಗೆ ರಘುವರನು ಅಮಿತವಾದ ಹಿತವಚನಗಳನ್ನು ಸಂತಸದಿಂದ ಉಪದೇಶ ಮಾಡಲು ಭರತನು ತನ್ನ ಮನಸ್ಸಿನಲ್ಲಿ ನೆಲೆಯೂರಿದ್ದ ಯೋಚನೆಯನ್ನು ಈ ರೀತಿ ಬಿನ್ನವಿಸಿಕೊಂಡ: "ರಾಜನೀತಿಯ ಬಗ್ಗೆ ಚಿಂತಿಸಲು ನಾನಾರು? ದಶರಥಮಹಾರಾಜನ ಅಂತರಂಗಕ್ಕೆ ಪ್ರಿಯನಾದ ಹಿರಿಯ ಮಗನು ರಾಜನಾಗುವನೇ ಹೊರತು ಧರ್ಮಮಾರ್ಗವನ್ನು ಬಿಟ್ಟು ಕನಿಷ್ಠನು ರಾಜನಾಗುತ್ತಾನೆಯೇ? ಸೂರ್ಯವಂಶವನ್ನು ಪೊರೆದು ಸೂರ್ಯಚಂದ್ರರಿರುವ ತನಕ ಅದರ ಪರಮಮಂಗಳ ಚರಿತೆಯನ್ನು ಪಾವನವೆನ್ನಿಸಿ ಸುರನರರನ್ನು ರಕ್ಷಿಸುವಂತೆ ಮಾಡುವವನು ಅನಂತನಾದ ರಘುಕುಲೋತ್ತಂಸ ನೀನು ತಾನೇ? ಕರುಣೆಯಿಂದ ಕೂಡಿ ಅಯೋಧ್ಯೆಯ ಅಧಿಪತಿಯಾಗಿ ನಾಡನ್ನು ರಕ್ಷಿಸು" ಎಂದು **ಶ್ರೀರಾಮಪುರದರಸ** ರಘುವೀರನ ಚರಣಗಳಿಗೆರಗಿ ಸ್ತುತಿಸುತ್ತ ಭರತನು ಪ್ರಾರ್ಥಿಸಿಕೊಂಡ.

೩೨. ಶ್ರೀರಾಮನು ತಂದೆಗೆ ತರ್ಪಣವಿತ್ತುದು

ಗಿರಿಜಾತೆಯೇ ಕೇಳು, ಭರತನು ಶ್ರೀರಾಮನ ಪಾದಯುಗಳಕ್ಕೆ ನಮಿಸಿ ಅಯೋಧ್ಯಾನಗರದ ವೃತ್ತಾಂತವನ್ನೆಲ್ಲ ಕಣ್ಣಿಗೆ ಕಟ್ಟುವಂತೆ ವಿಸ್ತಾರವಾಗಿ ನಿರೂಪಿಸಿದ. ಆ ಬಳಿಕ "ಜಗದೇಕ ವೀರನೇ ಕೇಳು, ನಾನು ತಾತನ ಮನೆಗೆ ಹೋದ ಬಳಿಕ ಕೈಕೇಯಿಯ ಮಾತಿನಂತೆ ನೀನು ಕಾಡಿಗೆ ಬಂದುದನ್ನು ಖಚಿತಪಡಿಸಿಕೊಂಡ ತಂದೆಯು ಸೀತೆ ಲಕ್ಷ್ಮಣ ಮತ್ತು ನಿನ್ನ ಗುಣಗಳನ್ನು ನೆನೆಸಿಕೊಳ್ಳುತ್ತ ಇಂದ್ರನೊಡನೆ ಅರ್ಧಾಸನವನ್ನು ಬಯಸಿ ಸ್ವರ್ಗಲೋಕಕ್ಕೆ ಹೋಗಿಬಿಡಲು ಗುರು ವಸಿಷ್ಠರು ಕರುಣೆಯಿಂದ ನನಗೆ ಬರ ಹೇಳಿ ಶಾಸ್ತ್ರಸಮ್ಮತವಾದ ರೀತಿಯಲ್ಲಿ ಪಿತೃಕಾರ್ಯಗಳನ್ನು ಮಾಡಿಸಿ, ದೊರೆತನವನ್ನು ವಹಿಸಿಕೊಂಡು ದೇಶವನ್ನಾಳಲು ಹೇಳಿದರು. ಆನಂತರ ಅಲ್ಲಿ ನಡೆದ ವೃತ್ತಾಂತವನ್ನೆಲ್ಲ ಇನ್ನಷ್ಟು ವಿಸ್ತಾರವಾಗಿ ಹೇಳುತ್ತೇನೆ. ಆದರೆ ನಾನು ಪಟ್ಟದಲ್ಲಿ ಕೂರಲು ಒಪ್ಪದೆ ಕೋಪಗೊಂಡು ವಲ್ಕಲವನ್ನುಟ್ಟು ಮುನಿಗಳ ಜೊತೆಗೆ ಇಲ್ಲಿಗೆ ಬಂದೆ. ಸರ್ವಜ್ಞನೇ, ನೀನು ಮೊದಲು ರಾಜ್ಯಪರಿಪಾಲನೆಯ ಉದ್ದೇಶದಿಂದ ಅಯೋಧ್ಯೆಗೆ ಮರಳು" ಎಂದು ಕೇಳಿಕೊಂಡ. ಭರತನಾಡಿದ ಮಾತುಗಳಲ್ಲಿದ್ದ ತಂದೆಯು ನಿಧನ ಹೊಂದಿದ ಸಂಗತಿಯಿಂದ ಅತೀವ ದುಃಖಗೊಂಡು ರಾಘವನು ಮೂರ್ಛೆಯಿಂದ ನೆಲದ ಮೇಲೆ ಉರುಳಿದ. ತಂದೆಯ ಸಾವಿನ ವಾರ್ತೆಯು ಅಣ್ಣನನ್ನು ಪ್ರಜ್ಞಾಹೀನನ್ನಾಗಿ ಮಾಡಿದುದನ್ನು ಕಂಡು ಲಕ್ಷ್ಮಣನು ಶ್ರೀರಾಮನ ಅಡಿದಾವರೆಗಳನ್ನು ಹಿಡಿದುಕೊಂಡು ಅಳಲು ತೊಡಗಿದ. ಹೀಗೆ ಅಣ್ಣತಮ್ಮಂದಿರ ಅಳಲನ್ನು ಕಂಡ ಸೀತೆಯ ಕಣ್ಣುಗಳಲ್ಲಿಯೂ ನೀರು ಉಕ್ಕಿತು. ಅವರೆಲ್ಲರ ದುಃಖವನ್ನು ನೋಡಿದ ಭರತ ಶತ್ರುಘ್ನರು ತಮ್ಮ ಬುದ್ಧಿಗೆ ತೋಚಿದ ರೀತಿಯಲ್ಲಿ ಅವರನ್ನು ಸಂತೈಸಿದರು. ಕೊಂಚ ಕಾಲದ ಬಳಿಕ ಮೂರ್ಛೆಯಿಂದ ಎಚ್ಚೆತ್ತ

ರಘುನಾಥನು ಸುತ್ತಲೂ ನೋಡಿ ಶೋಕದಿಂದ ಕೂಡಿ ಭರತನೊಡನೆ, “ನನ್ನನ್ನು ನೆನೆಸಿಕೊಂಡು ಧರ್ಮಜ್ಞನಾದ ತಂದೆಯು ಸ್ವರ್ಗಸ್ಥನಾದ ವಿಷಯವನ್ನು ಕೇಳಿ ಮೇಲೆ ಜನಪದ ರಾಜ್ಯಸಿರಿ ನಗರವೈಭವಗಳು ಇನ್ನು ನನಗೇಕೆ, ಮುನಿವೇಷ ಧರಿಸಿ ಕಾಡಿನಲ್ಲಿಯೇ ಮುಂದಿನ ದಿನಗಳನ್ನು ಕಳೆದುಬಿಡುತ್ತೇನೆ” ಎಂಬ ಕಠೋರವಾದ ಮಾತುಗಳಲ್ಲಿ ಅಡಗಿದ್ದ ಶೋಕವಿಷಾದಗಳ ಆಳವನ್ನು ಏನೆಂದು ಬಣ್ಣಿಸುವುದು?

ಬೆಟ್ಟವು ಮಾರ್ದನಿಯೀಯುವ ರೀತಿಯಲ್ಲಿ ಐವರೂ ತಂದೆಯ ಗುಣಗಳನ್ನು ನೆನೆದು ಜೋರಾಗಿ ರೋದಿಸುತ್ತಿರಲು, ಈ ವಿಷಯವನ್ನು ತಿಳಿದ ಭರತನ ಸೈನ್ಯದ ಮುಖ್ಯರುಗಳೆಲ್ಲ, ‘ಭರತನೂ ಗುರುವರನನ್ನೇ ಸೇರಿಕೊಂಡುಬಿಟ್ಟರೇನು ಗತಿ’ ಎಂದು ಚಿಂತಿಸುತ್ತ ವೇಗದಿಂದ ಆನೆಕುದುರೆರಥಗಳನ್ನೇರಿ ವೇಗದಿಂದ ರಾಮಾದಿಗಳಿದ್ದ ಜಾಗಕ್ಕೆ ಧಾವಿಸಿದರು. ಯಜ್ಞವೇದಿಕೆಯಿದ್ದ ಸಮತಟ್ಟಾದ ಜಾಗದಲ್ಲಿ ಜಟಾಮಕುಟಧಾರಿಯಾಗಿ ಶ್ರೀರಾಮನು ಮಂಡಿತನಾಗಿದ್ದರೆ, ಅವನ ಎಡದಲ್ಲಿ ಚಂದ್ರಧಾರಿ ಹರನಂತೆ ಮಂಡಿಸಿದ್ದ ಜಾನಕಿ, ಎಡಬಲಗಳಲ್ಲಿ ಲಕ್ಷ್ಮಣಭರತಶತ್ರುಘ್ನರು ಕೂತಿರುವುದನ್ನು ತಂಡತಂಡವಾಗಿ ಬಂದ ಜನರೆಲ್ಲರೂ ಕಂಡು ನಮಸ್ಕರಿಸಿದರು, ಕೆಲವರು ಮುಂಗಡೆಯಲ್ಲೇ ಸಾಷ್ಟಾಂಗವೆರಗಿದರೆ, ಮತ್ತೆ ಕೆಲವರು ದೂರದಿಂದಲೇ ಕೈಮುಗಿದರು. ಇದನ್ನು ಕಂಡ ತಾಯಂದಿರು ಅಖಂಡ ದುಃಖಾಂತರಂಗದಿಂದ ತೊಳಲುತ್ತಿದ್ದರು. ಆನಂತರ ತಾಯಂದಿರು ಗುರು ವಸಿಷ್ಠಮುನಿಯನ್ನು ಮುಂದೆ ಮಾಡಿಕೊಂಡು ಸರಸರನೆ ಬಂದು ಮಗನನ್ನು ಕಂಡು ಶೋಕಾರ್ತರಾಗಿರಲು, ಅವರನ್ನು ನೋಡಿದ ರಘುರಾಮನು ಮೇಲೆದ್ದು ಭಕ್ತಿಯಿಂದ ಗುರುವಿನ ಕಾಲುಗಳಿಗೆರಗಿ, ತಾಯಂದಿರಿಗೆ ಅಭಿನಮಿಸಿದ. ಕೌಸಲ್ಯೆಯು ತನ್ನೊಡಲ ಕುಡಿಯನ್ನು ಅಪ್ಪಿಕೊಂಡು ಕಣ್ಣೀರ್ಗರೆಯುತ್ತಲು, ಸುಮಿತ್ರೆ ಕೈಕೇಯಿಯರೂ ಅವಳಂತೆಯೇ ದುಃಖದಲ್ಲಿ ಬೇಯುತ್ತಿದ್ದರು. ಅಷ್ಟರಲ್ಲಿ ಲಕ್ಷ್ಮಣನೂ ಬಂದು ಅವರಿಗೆಲ್ಲ ನಮಸ್ಕರಿಸಲು ಅವರೆಲ್ಲ ಕರಗಿ ಹೋಗಿ ತಮ್ಮ ಕೈ ಕಣ್ಣುಗಳಿಂದ ಅವನನ್ನು ನೇವರಿಸುತ್ತ ಅಲ್ಲಿಯೇ ತಲೆ ತಗ್ಗಿಸಿ ಕುಳಿತುಕೊಂಡರು. ಒಬ್ಬೊಬ್ಬರೂ ಮಕ್ಕಳನ್ನು ಸೆಳೆದು ಅಪ್ಪಿಕೊಂಡು ಮೃದುನುಡಿಗಳಿಂದ ಸಮಾಧಾನ ಮಾಡುತ್ತ ಯೋಗಕ್ಷೇಮವನ್ನು ವಿಚಾರಿಸಿದರು.

ಆ ಹೊತ್ತಿನಲ್ಲಿ ಆಗಬೇಕಾದ ಕಾರ್ಯದ ಔಚಿತ್ಯಕ್ಕನುಗುಣವಾಗಿ ಗುರು ವಸಿಷ್ಠನು, “ಎಲ್ಲ ಭೋಗಗಳನ್ನೂ ಅನುಭವಿಸಿ, ಭೂಸುರಸಮೂಹವು ಸಂತಸಗೊಳ್ಳುವ ಬಗೆಯಲ್ಲಿ ನಾನಾ ಯಜ್ಞಯಾಗಗಳನ್ನು ಶ್ರದ್ಧೆಯಿಂದ ಮಾಡಿ, ದೇವೇಂದ್ರನ ಆಸ್ಥಾನದಲ್ಲಿ ದೇವತೆಗಳು ಎಡಬಲಗಳಲ್ಲಿ ನಿಂತು ಅವನ ಕೀರ್ತಿಯನ್ನು ಉಗ್ಗಡಿಸುತ್ತಿರಲು, ಸಂತೋಷಕೌತುಕಗಳಿಂದ ಶಾಂತಚಿತ್ತನಾಗಿರುವ ತಂದೆಯನ್ನು ನೆನೆಸಿಕೊಂಡು ಅಳುವುದರಿಂದೇನು ಬಂತು? ಬೇಗ ಪಿತೃಕಾರ್ಯವನ್ನು ಚಾಚೂ ತಪ್ಪದೆ ನೆರವೇರಿಸಿ” ಎಂದು ಸೂಚಿಸಿದರು. ಗುರುವಾಕ್ಯದಿಂದ ಎಚ್ಚೆತ್ತು ತನ್ನ ಕರ್ತವ್ಯವನ್ನು ಅರಿತ ರಘುರಾಮನು ಮಂದಾಕಿನಿಯಲ್ಲಿಳಿದು ಸ್ನಾನ ಮಾಡಿ ತಂದೆಗೆ ತರ್ಪಣವನ್ನರ್ಪಿಸಿ ದಡಕ್ಕೆ ಬರಲು, ಸುಮಿತ್ರಾತನಯನೂ ಬಂದು ಮಿಂದು ಅರ್ಘ್ಯಗಳನ್ನಿತ್ತ; ಸೀತೆಯೂ ಇಳಿದು ಬಂದು ಸ್ನಾನ ಮಾಡಿ ದಡವನ್ನು ಸೇರಿದಳು. ಆಗ ಲೋಕಬಂಧುವಿನ ಕುಲತಿಲಕನಾದ ರಾಮನಿಗೆ ವಸಿಷ್ಠಮಹರ್ಷಿಯು,

"ಸೂರ್ಯವಂಶೋದ್ಭವರಾದ ಹಿಂದಿನ ರಾಜರುಗಳಂತೆಯೇ ಅಶ್ವಮೇಧವೇ ಮುಂತಾದ ಯಾಗಗಳನ್ನು ಮಾಡಿ ಮೂರು ಲೋಕಗಳಲ್ಲಿಯೂ ಕೀರ್ತಿವಂತನಾದ ದಶರಥ ಮಹಾರಾಜನಿಗೆ ಸಂತುಷ್ಟಿಕರವಾದ ಅಂತ್ಯಕ್ರಿಯೆಗಳನ್ನು ಮಾಡು. ನಾನು ಹೇಳುವುದನ್ನು ಕೇಳು: ಇಲ್ಲಿಂದ ಸಾಕಷ್ಟು ದೂರದಲ್ಲಿ ಪಿತೃದೇವತೆಗಳಿಗೆ ತುಷ್ಟಿಕರವೆನಿಸುವ ಪರಮಪಾವನವಾದ ಜಾಗವೊಂದಿದೆ; ಅದು ದೇವನಿರ್ಮಿತ ತಾಣ, ಅದರ ಹೆಸರು ಗಯೆ; ಅಲ್ಲಿ ಅತಿಪವಿತ್ರವಾದ ಆಲದ ಮರದ ದಟ್ಟ ನೆರಳಿನಲ್ಲಿ ಒಂದು ಪುಣ್ಯಶಿಲೆಯಿದೆ. ಪಕ್ಕದಲ್ಲಿ ಫಲ್ಗುಣಿ ಎಂಬ ಹೆಸರಿನ ನದಿಯೊಂದು ಹರಿಯುತ್ತದೆ. ನೀನು ಭಕ್ತಿಯಿಂದ ಆ ನದಿಯಲ್ಲಿ ಮಿಂದು ನೆಲ್ಲಿಕಾಯಿ ಗಾತ್ರದ ಅನ್ನತರ್ಪಣವನ್ನು ಇಪ್ಪತ್ತೊಂದು ಕುಲ ಹಾಗೂ ಸಪ್ತಗೋತ್ರಗಳ ಪಿತೃಗಳಿಗೆ ಸಾವಧಾನದಿಂದ ಸಮರ್ಪಿಸಿ ತುಷ್ಟಿಗೊಳಿಸು. ಸೀತೆ ಲಕ್ಷ್ಮಣ ಭರತ ಶತ್ರುಘ್ನರೊಡನೆ ಆ ಪವಿತ್ರ ಜಾಗಕ್ಕೆ ಹೋಗಿ ಪಿತೃಗಳನ್ನು ಸಂತೃಪ್ತಿಗೊಳಿಸಬೇಕು" ಎಂದು ಹೇಳಿ, ತಕ್ಷಣದಲ್ಲಿ ಮಾಡಬೇಕಾದ ಕಾರ್ಯಗಳನ್ನು ನೆರವೇರಿಸಲು ನೆರವಾದರು. ಇಂಗುದೀ ಹಿಂಡಿಯನ್ನು ತರಲು ಸೀತಾದೇವಿಯು ತನ್ನ ಮೃದು ಕರಗಳಿಂದ ಉಂಡೆಗಳನ್ನು ಮಾಡಿ ರಘುರಾಮನ ಕೈಗಳಲ್ಲಿರಿಸಿದಳು. ರಾಮನು ಅದನ್ನು ಹಿಡಿದುಕೊಂಡು ಮಂತ್ರಗಳಿಂದ ಅದನ್ನು ಪಾವನವನ್ನಾಗಿಸಿ ಪಿತೃಗಳನ್ನು ಸ್ಮರಿಸಿ ಕಾಲೋಚಿತದ ಕರ್ಮಗಳನ್ನು ನೆರವೇರಿಸಿದ.

ಕಾಲೋಚಿತವಾದ ಕರ್ಮಗಳನ್ನು ಮಾಡಿ, ಸೈನ್ಯವನ್ನು ಬೆಟ್ಟದ ತಪ್ಪಲಿನಲ್ಲಿರಿಸಿ, ತಡಮಾಡದೆ ಗುರುಸಹಿತ ಗಯೆಗೆ ಹೋಗಿ ಫಲ್ಗುಣೀತೀರದಲ್ಲಿ ಸ್ನಾನ ಆಹ್ನಿಕಗಳನ್ನು ಪೂರೈಸಿದ ಬಳಿಕ ಪಿತೃದೇವತೆಗಳನ್ನು ಪೂಜಿಸಲು ಪಿತೃತುಷ್ಟಿಕರನೂ, ಅತುಲ ಸಾಧುಜನಸೇವ್ಯನೂ ಆದ ಗಯಾಸುರನನ್ನು ಧ್ಯಾನಿಸಿ, "ದೃಢಮತಿಯೆ ಕೇಳು, ನಾನು ನೀಡುವ ಪಿಂಡವನ್ನು ಪ್ರೀತಿಯಿಂದ ನಾಲಗೆಯ ಮೇಲೆ ಇರಿಸಿಕೊಂಡು ಪಿತೃಗಳಿಗೆ ಹರ್ಷವನ್ನುಂಟುಮಾಡು" ಎನ್ನಲು ಜಗದೀಶನ ಅನುಮತಿಯಿಂದ ಗಯಾಶಿರವು ಸಂತುಷ್ಟಿಯನ್ನು ಹೊಂದಿತು; ಶ್ರೀರಾಮನು ಕೊಡುವ ಪಿಂಡಗಳನ್ನು ತನ್ನ ನಾಲಗೆಯ ತುದಿಯಲಿರಿಸಿಕೊಳ್ಳಲು ಪಿತೃಗಳೆಲ್ಲರೂ ಪ್ರೇಮದಿಂದ, "ನಾವು ಇಂದು ಮುಕ್ತರಾಗಿದ್ದೇವೆ" ಎಂದು ನೇರವಾಗಿರದ ನುಡಿಗಳಿಂದ ಸೂಚಿಸಿದರು. ಆ ಅಶರೀರವಾಣಿಯನ್ನು ಕೇಳಿ ಅತ್ಯಾಶ್ಚರ್ಯ ಹೊಂದಿದ ರಘುವರನು ಫಲ್ಗುಣಿಯನ್ನು ಕುರಿತು, "ಇದೇನು, ಬೀಜಗಳಿಲ್ಲದೆಯೇ ನನ್ನ ಪಿತೃಕುಲವು ಮುಕ್ತಿಯನ್ನು ಹೊಂದಿದ ಬಗೆ ಹೇಗೆ, ದಯವಿಟ್ಟು ಹೇಳು" ಎಂದು ಕೇಳಿಕೊಂಡ. ಆಗ ಫಲ್ಗುಣಿಯು ಸಂತಸಭರಿತಳಾಗಿ ಈ ರೀತಿ ನುಡಿದಳು: "ಈ ವೈದೇಹಿಯು ಆಚಮನ ಮಾಡಿ ಎರೆದ ನೀರಿನಿಂದ ಅವರೆಲ್ಲ ಮುಕ್ತರಾದರು." ಆಗ ರಾಮಚಂದ್ರನು ತನ್ನ ಹೆಂಡತಿಯ ಮುಖವನ್ನು ಸಂತೋಷದಿಂದ ನಗುತ್ತ ನೋಡಲು ಸೀತೆ ನಾಚಿಕೊಂಡು ತಲೆಬಗ್ಗಿಸಿ ಕಾಲುಂಗುರವನ್ನು ನೋಡಿಕೊಳ್ಳುತ್ತ, ಕೋಪದಿಂದ ಫಲ್ಗುಣಿಯನ್ನು ಕರೆದು ನಿಷ್ಠುರವಾಣಿಯಿಂದ, "ದುಷ್ಟಾತ್ಮೆ, ಹೆಣ್ಣಾಗಿರುವ ನೀನು ಹೆಣ್ಣಿನ ನಡತೆಯ ಬಗ್ಗೆ ಗಂಡನಿಗೆ ಹೇಳುತ್ತಿರುವೆಯಲ್ಲ, ಅದರಿಂದಾಗಿ ನೀನು ಗುಪ್ತವಾಗಿ ಹರಿಯುತ್ತ ಸಮುದ್ರವನ್ನು ಸೇರು" ಎಂದು ಶಾಪವಿತ್ತಳು; ಆ ಕ್ಷಣವೇ

ನದಿಯು ಗುಪ್ತಗಾಮಿನಿಯಾಯಿತು.

"ದೇವ ನೀನು ನಿಖಿಲಾಧಾರ, ನಿರುಪಮ, ದಯಾಕರ, ಸುಜೀವನಾಧಾರ. ಆರ್ತತ್ರಾಣ, ಶುಭಚರಣ, ಪಾವನ ಪವಿತ್ರ, ಪರಬ್ರೊಮ್ಮ, ಮುಮ್ಮೂರ್ತಿಗಳನ್ನು ಸೃಷ್ಟಿಸಿದವನೇ, ಬ್ರಹ್ಮನ ತಾತನೇ, ಲಕ್ಷ್ಮೀರಮಣ, ಸಚ್ಚಿದ್ರೂಪ ಎಂದು ತಿಳಿಯದೆ ಈ ಭೂಮಿಗೆ ಒಡೆಯ ಎಂಬ ಗರ್ವವನ್ನು ಹೊತ್ತ ನಮ್ಮನ್ನು ಉದ್ಧರಿಸಿ ಕಾಪಾಡು. ಸಂಗವಿರಹಿತನೇ, ಚರಾಚರ ಜೀವರುಗಳ ಒಳಹೊರಗೆ ಸದಾ ಇರುವವನೇ, ಸ್ಥಿತಿಲಯಗಳನ್ನು ಮಾಡಿದವನೇ, ಮಂಗಳಾತ್ಮಕನೇ, ಜಗತ್ತಿನ ಮೂಲವಾದ ನಿನ್ನ ಮಹಿಮೆಯನ್ನು ಅನುದಿನವೂ ಧ್ಯಾನಿಸುವ ಯೋಗಿಗಳಿಗೂ ನಿಗಮಗಳಿಗೂ ತಿಳಿಯದ ಇಂದ್ರಿಯಾದಿಗಳಿಗೆ ಅಳವಡದ ನಿನ್ನ ಸನ್ಮಹಿಮೆಯನ್ನು ಮನುಷ್ಯರಾದ ನಾವು ಹೇಗೆ ತಾನೇ ಕಾಣಲು ಶಕ್ಯ? ನಮ್ಮ ಕೃತ್ಯಗಳನ್ನು ನೆನಪಿಟ್ಟುಕೊಳ್ಳದೆ ಮರೆತು, ನಮ್ಮ ಜೀವವು ಪರಮಾಣುಸ್ವರೂಪವನ್ನು ಹೊಂದಿದಾಗ ನೀನು ಪಾಲನೆಗೈಯ್ಯದಿದ್ದರೆ ನಾವು ಹೇಗೆ ತಾನೇ ಬದುಕಬಲ್ಲೆವು? ಹಿಂಸಕರೂ ಹಿಸುಣರೂ ಕ್ರೋಧಸಹಿತರೂ ದುರುಳರೂ ಅತಿಕಾಮರೂ ನಿರ್ದಯರೂ ಆದವರೇ ತುಂಬಿರುವ ಈ ಜಗತ್ತಿನಲ್ಲಿ ನಮ್ಮನ್ಯಾರು ಲಕ್ಷಿಸುತ್ತಾರೆ? ಈಗ ನೀನು ಪಿತೃಕಾರ್ಯ ಮಾಡಿದ ಗಯೆಯಲ್ಲಿ ಸಜ್ಜನರಾದ ಪಿತೃಗಳು ಅನಾಯಾಸದಿಂದ ಮುಕ್ತಿಪಡೆಯುತ್ತಾರೆ. ದ್ವಿಜಕುಲದವರು ಈ ಮಹಾ ಸ್ಥಾನಕ್ಕೆ ಬಂದು ತಮ್ಮ ಮನದಿಷ್ಟಗಳನ್ನು ಪಡೆಯಲು ಬರುತ್ತಿದ್ದು ಈ ಮಹಾಗಯೆಯಲ್ಲಿ ಯಾರೂ ನಮ್ಮ ದೌರ್ಜನ್ಯವನ್ನು ಲಕ್ಷ್ಯಕ್ಕೆ ತಂದುಕೊಳ್ಳುವುದಿಲ್ಲ. ಗಯೆಯಲ್ಲಿನ ವಿಪ್ರಜೀವನ ಕಂಗೆಟ್ಟಿದೆ, ಕಷ್ಟದಿಂದ ಕೂಡಿದೆ, ದೇವ, ನೀನು ಕೃಪೆಯಿಂದ ಈ ಭೂಸುರರನ್ನು ಕಾಪಾಡದಿದ್ದರೆ ಅವರಿಗೆ ಆಪತ್ತು ಅಡಸುತ್ತದೆ."

ಈ ಬಗೆಯ ದುಃಖಯುತವಾದ ವಿಪ್ರವಾಣಿಯನ್ನು ಕೇಳಿ ಅವರ ಬಗ್ಗೆ ಮನಸ್ಸಿನಲ್ಲಿ ಪ್ರೀತಿ ಹುಟ್ಟಿ, ಮುಂದೆ ಪಿತೃಕಾರ್ಯಗಳನ್ನು ಮಾಡಲು ಬರುವ ವಿಪ್ರನು ಹಿಂದಿನ ಶ್ರದ್ಧೆಯಿಂದ ಗಯಾಶಿರದಲ್ಲಿ ಸಂತೋಷದಿಂದ ಪೂರ್ವಾಚರಣೆಯನ್ನು ಬಿಡದೆ ಅನ್ನವನೀಯುವಂತೆ ಅಭಯವನ್ನಿತ್ತು ಕರುಣಾಳುಗಳ ದೇವ ಎಂಬ ಬಿರುದನ್ನು ಹೊತ್ತ, ಎಂದಿನಂತೆಯೇ ಗಯದಲ್ಲಿ ನಿಯಮಗಳನ್ನು ಮೀರದೆ ವಿಪ್ರವೃಂದದ ಅನುಮತಿಯನ್ನು ಪಡೆದು ಪಿತೃಕಾರ್ಯಗಳನ್ನು ಮಾಡಿ ಬ್ರಾಹ್ಮಣೋತ್ತಮರನ್ನು ಸಂತುಷ್ಟಿಗೊಳಿಸಲಿ ಎಂದು ವರವನ್ನಿತ್ತು ರಘುನಾಥನು ವಿಪ್ರಸಮುದಾಯವನ್ನು ನೋಡಿ ಕರುಣೆಯಿಂದ ಮತ್ತೆ ಹೀಗೆಂದ: "ಮುಂದೆ ಕಲಿಯುಗ ಬರುತ್ತದೆ, ಅದರಲ್ಲಿ ಧರ್ಮ ಎಂಬ ಸುದ್ದಿಯೇ ಇರುವುದಿಲ್ಲ. ಗುರುವಂಚನೆ, ಹಣಗಳಿಕೆ, ಉದ್ಧಟತನದ ಮಾತು, ಆಚಾರರಹಿತವಾದ ನಡವಳಿಕೆ, ಧರ್ಮಲೋಪ, ಪಾಪಾಚಾರಗಳನ್ನು ಮಾಡುವ ಬ್ರಾಹ್ಮಣರು ಹುಟ್ಟುತ್ತಾರೆ. ನನ್ನನ್ನು ಕರೆದು ಅನ್ನವನ್ನೀಯುವವರಿರುವುದಿಲ್ಲ. ಹೀಗಾಗಿ ನಿಮಗೆ ಸುಖವುಂಟಾಗುವಂತೆ ಅನ್ನಭರಿತ ಪರ್ವತ, ಹಾಲಿನಿಂದ ತುಂಬಿದ ಕೊಳ, ತುಪ್ಪದ ಬಾವಿ, ಮೊಸರಿನ ಹೊಂಡಗಳು ಈ ಪ್ರದೇಶದಲ್ಲೆ ನೆಲೆಗೊಳ್ಳಲಿ" ಎಂದು ವರವನ್ನಿತ್ತ.

ಅನಂತರ ಶಿವನಿರುವ ನೆಲೆಯಾದ ಕಾಶಿಯು ಕೈಲಾಸಸಮವೆಂದು ಬಗೆದು

ಹರ್ಷದಿಂದ ಗುರು ವಸಿಷ್ಠನ ಜೊತೆಯಲ್ಲಿ ಅಲ್ಲಿಗೆ ನಡೆತಂದ. ದೇವಗಂಗೆಯಲ್ಲಿ ಮುಳುಗಿ ಸ್ನಾನ ಮಾಡಿ ಪಿತೃಗಳನ್ನು ಸ್ಮರಿಸಿ ತರ್ಪಣವನ್ನಿತ್ತು ನದಿಯ ದಡದಲ್ಲಿ ಕುಳಿತು ಗುರುವನ್ನು ಕುರಿತು ಹೀಗೆಂದ: "ಗುರುಗಳೇ, ಜೀವರುಗಳು ದೇಹವನ್ನು ಹೊಕ್ಕು ಈ ಲೋಕಕ್ಕೆ ಬಂದು ಜೀವನವು ಹ್ರಸ್ವವಾದುದೆಂದು ಪೋಷಣೆ ಮಾಡಿಕೊಂಡು ನೋವನ್ನು ಕೊಡದೆ ಸಂತಸಗೊಂಡು ಒಳಗಿನ ನಿಜವಸ್ತುವನ್ನು ಹುಲ್ಲು ಕಡ್ಡಿಯಂತೆ ಬಗೆದು ಈ ಜಾಗದಲ್ಲಿ ಬಿಡಬೇಕೆಂದು ಬಯಸುತ್ತಾರೆ. ಈ ಲೋಕದಲ್ಲಿ ಸಾವನ್ನು ಒಳಗೊಂಡರೂ ದೇಹಿಗಳು ಅದಾವ ಕಾರಣದಿಂದ ಮತ್ತದನ್ನೇ ಬಯಸುತ್ತಾರೆ? ಸಾವನ್ನು ಯಾರಾದರೂ ಬಯಸುತ್ತಾರೆಯೇ? ಈ ಲೋಕವು ಅತಿಶಯ ಪ್ರೀತಿಯಿಂದ ಅದನ್ನು ಇಚ್ಛಿಸುತ್ತದಲ್ಲ, ಯಾಕೆ?" ಶ್ರೀರಾಮನ ಈ ಪ್ರಶ್ನೆಯನ್ನು ಕೇಳಿದ ಮುನಿಪೋತ್ತಮನು ನಸುನಗುತ್ತ, ಅಗಸ್ತ್ಯನ ಮಗನು ಹಿಂದೆ ಸುತೀಕ್ಷ್ಣನಿಗೆ ಹೇಳಿದ ಕತೆಯನ್ನು ಮತ್ತೆ ನಿರೂಪಿಸಲು ವಿಪ್ರಸಮುದಾಯವೂ ದೇವತಾನಿಕರವೂ ಸಂತಸಗೊಂಡಿತು: "ಕೇಳು ರಘುವರ, ಮಹಾದೇವನು ತನ್ನ ಪ್ರಮಥಗಣಗಳೊಡನೆ ಈ ಭೂಮಿಯಲ್ಲಿ ಅವತರಿಸಿ ಸಂತೋಷದಿಂದಿದ್ದ; ಅದನ್ನು ಕಂಡ ದೇವತಾ ಸಮುದಾಯವೆಲ್ಲ ಸೇರಿ ಮುಕ್ಕಣ್ಣನನ್ನು ಭಜಿಸಲು ಸಿದ್ಧರಾಗಿ ದೀಕ್ಷೆಯನ್ನು ತಾಳಿ ಸಾವಿರಾರು ವರ್ಷಗಳ ಕಾಲ ಅನ್ನನೀರುಗಳನ್ನು ಬಿಟ್ಟು ಕೃಚ್ಛ್ರ ಚಾಂದ್ರಾಯಣಗಳ ಮೂಲಕ ಉಪಾಸನೆ ಮಾಡಿದರು. ಎಣೆಯಿಲ್ಲದ ಮುಕ್ತಿಯನ್ನು ಬಯಸಿ ನಿದ್ದೆ ಆಹಾರಗಳನ್ನು ಮರೆತು ಅನುದಿನವೂ ಹರಸ್ಮರಣೆಯಿಂದ ದೀರ್ಘಕಾಲ ತಪಸ್ಸು ಮಾಡುತ್ತಿದ್ದ ಬ್ರಾಹ್ಮಣೋತ್ತಮರ ಕಷ್ಟವನ್ನು ಕಂಡು ಶಿವನು ಕರುಣೆಯಿಂದ ಬಂದು, 'ಯಾವ ಉದ್ದೇಶದಿಂದ ನೀವು ತಪಸ್ಸು ಮಾಡುತ್ತಿರುವಿರಿ?' ಎಂದು ಕೇಳಿದ. ಆಗ ಅವರು ಮಹಾದೇವನಿಗೆ ಸಾಷ್ಟಾಂಗವೆರಗಿ, ತಮ್ಮ ಮನದಿಷ್ಟವನ್ನು ಈ ರೀತಿ ನಿವೇದಿಸಿಕೊಂಡರು: 'ದೇವದೇವನೇ, ಜಗತ್ತಿನ ಸಮಸ್ತ ಜೀವರು ಪಾತಕದ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ನರಕ ಮುಂತಾದ ಉಪದ್ರವದಿಂದ ಭೂಮಿಯಲ್ಲಿ ಜನಿಸುತ್ತಾರೆ, ಕೊನೆಯೇ ಇಲ್ಲದ ರೀತಿಯಲ್ಲಿ ನಾನಾ ಬಗೆಯ ಸಂಕಟಗಳನ್ನು ಅನುಭವಿಸುತ್ತಾರೆ. ಅವರಿಗೆ ಮುಕ್ತಿಯನ್ನು ನೀಡಿ ಕಾಪಾಡಬೇಕು' ಎಂದು ನಾನಾ ಬಗೆಯಲ್ಲಿ ಬೇಡಿಕೊಂಡರು. ಈ ಮಾತನ್ನು ಕೇಳಿ ಚಂದ್ರಶೇಖರನಿಗೆ ಚಿಂತೆಯುಂಟಾಯಿತು. ಪಾಪಪುಣ್ಯಗಳ ಕಾರಣದಿಂದ ತಮ್ಮ ಕರ್ಮಾನುಸಾರವಾಗಿ ಜೀವರುಗಳು ಗತಿಯನ್ನು ಹೊಂದುತ್ತಾರೆ; ಈ ಜೀವಸಂದೋಹಕ್ಕೆ ಈ ಭೂತಳದಲ್ಲಿ ಆತುರದಿಂದ ಶರೀರತ್ಯಾಗದಿಂದ ಎಣೆಯಿಲ್ಲದ ಮುಕ್ತಿಯು ದೊರಕುವ ಬಗೆ ಹೇಗೆ? ಮೂರು ಲೋಕಕ್ಕೆ ಉಪಕಾರಗೈಯುವ ಉದ್ದೇಶದಿಂದ ಯತಿಗಳು ಈ ರೀತಿಯಲ್ಲಿ ತಪಸ್ಸು ಮಾಡುತ್ತಲಿದ್ದಾರೆ; ಇದಕ್ಕೇನು ಪರಿಹಾರ ಎಂಬ ಆಲೋಚನೆ ಹರನ ಮನಸ್ಸಿನಲ್ಲಿ ತುಂಬಿಕೊಂಡಿತು ಅಷ್ಟರಲ್ಲಿ ಬ್ರಹ್ಮದೇವನು ಅಲ್ಲಿಗೆ ಬಂದ. ದೇವತೆಗಳ ಹಿರಿಯನು ಬರುತ್ತಿರುವುದನ್ನು ಕಂಡು ಹರ್ಷಗೊಂಡ ಭರ್ಗನು ಎದ್ದು ಎದುರುಗೊಂಡು ಸೆಳೆದಪ್ಪಿಕೊಂಡು ಕ್ಷೇಮಸಮಾಚಾರಗಳನ್ನು ಕೇಳಿದ. ನಾಲ್ಮೊಗನು ಕಂದುಗೊರಲನನ್ನು ಕುರಿತು, 'ಕೃಪಾಸಿಂಧುವೇ, ಕಂಗೊಳಿಸುವ ನಿನ್ನ ಮುಖಕಮಲವು ಮಂಕಾಗಿದೆಯಲ್ಲ, ಏನು ಕಾರಣ? ಸಂಕೋಚವಿಲ್ಲದೆ ಹೇಳು' ಎಂದು ಕೇಳಿದ. ಆಗ ಪರಮೇಶನು ಬಿದಿಯನ್ನು ಕುರಿತು, 'ಜಗತ್ತಿನಲ್ಲಿ ಎಲ್ಲ ಪ್ರಾಣಿಗಳಿಗೆ

ಕಷ್ಟವುಂಟಾಗದ ರೀತಿಯಲ್ಲಿ ಮುಕ್ತಿಯನ್ನು ದಯಪಾಲಿಸು ಎಂದು ಮುನೀಶ್ವರರು ಆರಾಧನೆಗೈಯುತ್ತಾರೆ, ಅದನ್ನು ಹೇಗೆ ಸಾಧಿಸುವುದು ಎಂಬ ಯೋಚನೆಯು ನನ್ನನ್ನು ಆವರಿಸಿಬಿಟ್ಟಿದೆ, ಈ ಚಿಂತಾಸಮುದ್ರದ ಆಚೆಗಿನ ದಡವೇ ಕಾಣಿಸುತ್ತಿಲ್ಲ, ಸಮಸ್ಯೆಗೆ ಯಾವ ಉಪಾಯವೂ ಹೊಳೆಯುತ್ತಿಲ್ಲ. ಈಗ ನೀನು ಬಂದುದರಿಂದ ನನ್ನ ಮನಸ್ಸು ಹಗುರಾಗಿ ಸಂತಸಗೊಂಡಿದೆ' ಎಂದುತ್ತರಿಸಿದ. ಆಗ ಹಿರಣ್ಯಗರ್ಭನು, 'ವಿಪ್ರೋತ್ತಮರು ಕೇಳುವ ಈ ಬೇಡಿಕೆಯು ಈಡೇರುವುದು ಅಸಾಧ್ಯ. ಮುಕ್ತಿಯನ್ನು ನಿರಾಯಾಸಗೊಳಿಸಕೂಡದು. ಹಾಗೇನಾದರೂ ಮಾಡಿಬಿಟ್ಟರೆ ದುರಾಶೆಯಿಂದ 'ಜೀವನಕ್ಕಿಂತ ಕೃಪೆಯೇ ಮುಖ್ಯ' ಎಂದು ಭಾವಿಸಿಬಿಡುತ್ತಾರೆ. ಈ ಸಮಸ್ಯೆಯ ನಿವಾರಣೆಗೆ ಯಾವುದೇ ಸಮಂಜಸವಾದ ಉಪಾಯ ಹೊಳೆಯುತ್ತಿಲ್ಲವಾದರೂ, ದೇವದೇವನ ಮಹಾಮಂತ್ರವಿಲ್ಲದೆ ಯಾವ ಜೀವಕ್ಕೂ ಮೋಕ್ಷ ಒದಗುವುದಿಲ್ಲ. ಇದಕ್ಕಾಗಿ ನಾನು ಹಿಂದೆ ಹಲವು ಕಾಲ ಅತಿ ನಿಷ್ಠುರವಾದ ತಪಸ್ಸನ್ನು ಮಾಡಿದೆ; ಒಂದು ದಿನ ಕೃಪಾಸಿಂಧುವು ಬಂದು ಶ್ರೇಷ್ಠ ಮಂತ್ರವೊಂದನ್ನು ಹೇಳಿಕೊಡಲು ನಾನದನ್ನು ವಿಪ್ರರಿಗೆ ಹೇಳಿದೆ. ಅದು ಸುಲಭವಾದ ಷಡಕ್ಷರ ಮಂತ್ರ. ಹೆಂಗಸರು ಮುಂತಾದವರಿಗೂ ಅನಾಯಾಸವಾಗಿ ಮೋಕ್ಷವನ್ನಿತ್ತುದು. ಈಗ ಈ ಸಮಸ್ಯೆಯ ನಿವಾರಣೆಗೆ ಸಕಲೋಪಕಾರಕವಾದ ರಾಮಮಂತ್ರವಲ್ಲದೆ ಬೇರೊಂದು ಉಪಾಯವು ನನಗೆ ತೋಚುತ್ತಿಲ್ಲ' ಎಂದ. ಇದರಿಂದ ಸಂತಸಗೊಂಡ ಹರನು ಬೊಮ್ಮದೇವನೊಡನೆ, 'ಸಕಲಾಗಮಜ್ಞನೇ, ಈ ಮೋಕ್ಷೋಪಾಯ ವಿದ್ಯೆಯನ್ನು ಭಕ್ತಿಯಿಂದ ಭಜಿಸಿದರೆ ಸಕಲ ಪ್ರಾಣಿಗಳಿಗೆ ಸಂತೋಷವಾಗುತ್ತದೆ' ಎಂದ. ಬ್ರಹ್ಮನು ಇದನ್ನು ಹರನಿಗೆ ಹೇಳಲು ನಿಶ್ಚಯಿಸಿದ. ಸುರತರಂಗಿಣಿಯ ದಡದಲ್ಲಿ ಸೂರ್ಯೋದಯದ ಕಾಲದಲ್ಲಿ ಮಂತ್ರರಾಜವೆನಿಸಿದ 'ಓಂ ನಮೋ ರಾಮಾಯ' ಎಂಬ ಷಡಕ್ಷರವನ್ನು ಪ್ರೀತಿಯಿಂದ ಹರನ ಕಿವಿಯಲ್ಲಿ ಉಪದೇಶಿಸಿ, ಅವನ ಸತ್ಕಾರವನ್ನು ಪಡೆದು ಬ್ರಹ್ಮದೇವನು ಹೊರಟು ಹೋದ. ಆನಂತರ ಹರದೇವನು ಪರಮ ಭಕ್ತಿಯಿಂದ ಮನ್ವಂತರಸಹಸ್ರದಲ್ಲಿ ನಿರಂತರವಾದ ಜಪತಪಹೋಮ ಅರ್ಚನೆಗಳಿಂದ ಆರಾಧಿಸಲು ಕರುಣದಿಂದ ಶ್ರೀರಾಮನು ಮಹಾದೇವನ ಮುಂಗಡೆ ಬಂದು ಕಂಗೊಳಿಸಿದ. ಆ ತೇಜೋಮಯವೂ ಆನಂದಸ್ವರೂಪವೂ ಆದ ಮೂರ್ತಿಯನ್ನು ನೋಡುತ್ತ ತನ್ನ ಗಣಗಳೊಡನೆ ಈಶ್ವರನು ಮಣಿಯಲು, ಶ್ರೀರಾಮಚಂದ್ರನು ಅವನನ್ನು ತನ್ನ ಕೈಗಳಿಂದ ಮೇಲೆತ್ತಿ ಬೇಡಿದ ವರವನ್ನೀಯುವೆನೆಂದು ಆಶ್ವಾಸನೆಯಿತ್ತ. ಹರನು ಆ ಜಗತ್ಪತಿಗೆ ಮತ್ತೆ ನಮಿಸಿ, ದೇವ ತಾಪಸ ವಿಪ್ರತತಿಗೆ ಮೋಕ್ಷಪದವಿಯನ್ನಿತ್ತು ಸಂತಸಗೊಳಿಸಬೇಕೆಂದು ಬೇಡಿಕೊಳ್ಳಲು ರಾಮನು ಆ ಕ್ಷಣವೇ ಅದಕ್ಕೆ ಒಪ್ಪಿದ. ಇಂದುಶೇಖರನಿಂದ ಆ ಪರಮ ಮುನಿಗಳೂ ಆ ಕ್ಷಣವೇ ಪರಮಧಾಮವನ್ನು ಸೇರಿದರು. ಆಗ ಹರನನ್ನು ನೋಡಿ 'ಮನದಿಷ್ಟವನ್ನು ನೆರವೇರಿಸುತ್ತೇನೆ, ಬೇಕಾದುದನ್ನು ಬೇಡಿಕೊಳ್ಳೆಂ'ದು ಹೇಳಲು, 'ಸ್ವಾಮಿ, ನಿನ್ನ ಸನ್ಮೂರ್ತಿಯನ್ನು ಸದಾ ನೋಡುತ್ತಿರುವ ಭಾಗ್ಯವೊಂದನ್ನಲ್ಲದೆ ಬೇರೆ ಯಾವುದೇ ಆಸೆ ನನಗಿಲ್ಲ, ಹೀಗಾಗಿ ನೀನು ಪ್ರೀತಿಯಿಂದ ಏನನ್ನು ಕೊಟ್ಟರೂ ಹಸಾದವೆಂದು ಸ್ವೀಕರಿಸುತ್ತೇನೆ' ಎಂದು ಬಿನ್ನವಿಸಿಕೊಂಡ. 'ಹಾಗಾದರೆ ಕೇಳು, ಕ್ರಿಮಿಕೀಟವೇ ಮುಂತಾದ ಜೀವಿಗಳಲ್ಲಿ ದೇಹವನ್ನು ಬಿಟ್ಟ ಕ್ಷಣವೇ ಕೈವಲ್ಯ ಸಂಭವಿಸುತ್ತದೆ; ಇದು ಸೂರ್ಯಚಂದ್ರರಿರುವ ತನಕ

ತಪ್ಪುವುದಿಲ್ಲ' ಎಂದು ವರವನ್ನಿತ್ತು, ಮತ್ತೆ 'ಹರನೆ, ಆದರದಿಂದ ಈ ಮಹಾಮಂತ್ರವನ್ನು ಬಿಡದೆ ನೀನು ಮುಮುಕ್ಷುಗಳ ಬಲಗಿವಿಯಲ್ಲಿ ಉಪದೇಶ ಮಾಡಿದರೆ ಅದರಿಂದ ಅವರು ಆ ಕ್ಷಣದಲ್ಲಿಯೇ ಮುಕ್ತರಾಗುತ್ತಾರೆ. ದೇವತೆಗಳಿಂದ ಆರಾಧಿತವಾದ ಈ ಸುಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನಾನು ಮುದದಿಂದ ಇರುತ್ತೇನೆ. ಕಲ್ಲು ಮುಂತಾದ ವಸ್ತುಗಳ ಪ್ರತಿಮೆಗಳ ಬಳಿ ಯಾರಾದರೂ ನನ್ನನ್ನು ಭಕ್ತಿಯಿಂದ ಪೂಜಿಸಿದರೆ ಅವರ ಪಾಪಗಳನ್ನೆಲ್ಲ ಕೊನೆಗಾಣಿಸುತ್ತೇನೆ. ಇಲ್ಲಿ ದೇಹವನ್ನು ಬಿಟ್ಟವರಿಗೆ ಪುನರ್ಜನ್ಮವಿರಹಿತವಾದ ಮುಕ್ತಿಯನ್ನು ಕರುಣಿಸುತ್ತೇನೆ' ಎಂದು ಅಭಯವನ್ನಿತ್ತುದನ್ನು ಮಹಾಸಭೆಯಲ್ಲಿದ್ದ ಜನರು ತಿಳಿದು ಸಂತಸಗೊಂಡರು. ಬ್ರಹ್ಮನಿಂದಾಗಿ ನಿನ್ನಿಂದಾದ ಅತಿಶಯವಾದ ತಾರಕಮಂತ್ರವನ್ನು ಯಾವನು ಮನಸ್ಸಿನಲ್ಲಿ ನೆಲೆಗೊಳಿಸಿಕೊಂಡಿರುವನೋ ಅವನು ದೇಹವಿರುವವರೆಗೂ ಎಲ್ಲ ಭೋಗಗಳನ್ನೂ ಅನುಭವಿಸಿ ಆನಂತರ ಅತಿಶಯವಾದ ಕೈವಲ್ಯಪದವಿಯನ್ನು ಪಡೆಯುತ್ತಾನೆ ಎಂದು ಯತಿನಿವಹವು ಸಂತಸಗೊಳ್ಳುವಂತೆ ಹೇಳಿ ಶ್ರೀ ರಾಮಚಂದ್ರನು ಆಕ್ಷಣದಲ್ಲಿಯೇ ಅಂತರ್ಧಾನನಾದ. ಅಂದಿನಿಂದಲೂ ಮುನಿಸಂದೋಹದೊಂದಿಗೆ ಇಂದುಶೇಖರನು ಮರಳಿ ಪ್ರಮಥಗಣಗಳ ಸಮೇತ ಒಂದು ಕ್ಷಣವೂ ಅಗಲದಂತೆ ಇಲ್ಲಿ ನೆಲೆಸಿದ್ದಾನೆ. ಸುಂದರವಾದ ಹರಿಹರಕ್ಷೇತ್ರಗಳು ಆ ಪ್ರದೇಶದಲ್ಲಿ ಅಸಂಖ್ಯವಾಗಿವೆ. ಈ ಮಂಗಳಕ್ಷೇತ್ರವು ಅವಿಮುಕ್ತವಾದುದು ಎಂದು ತಿಳಿ. ಇದು ಹರನು ತಪೋನುಷ್ಠಾನದಿಂದ ಅರ್ಚನೆ ಮಾಡಿದ ಪವಿತ್ರವಾದ ಪರಮ ಪುಣ್ಯಕ್ಷೇತ್ರ, ಪಾಪಹರವಾದುದು. ಶರೀರವನ್ನು ಬಿಟ್ಟಷ್ಟಕ್ಕೇ ಕ್ರಿಮಿಕೀಟಮನುಷ್ಯರೆಲ್ಲರಿಗೂ ಒಂದಿಷ್ಟೂ ಆಯಾಸವಿಲ್ಲದೆ ಮುಕ್ತಿಯು ಕೈಸಾರುತ್ತದೆ. ತಾರಕಮಂತ್ರ ಮಹಿಮೆಯನ್ನು ತಿಳಿದ ಪ್ರಾಜ್ಞಸಮೂಹವು ಇದನ್ನು ಅವಿಮುಕ್ತ ಮಂದಿರವೆಂದು ಭಾವಿಸಿ ಶಾಶ್ವತವಾಗಿ ಇಲ್ಲಿಯೇ ಇದ್ದಾರೆ. ಈ ಮಹಾಕ್ಷೇತ್ರದ ಮಹಿಮೆಯನ್ನು ವರ್ಣಿಸಲು ಶಿವನಲ್ಲದೆ ಉಳಿದವರಿಗೆ ಅಸಾಧ್ಯ. ನಿನ್ನ ಕಾರಣದಿಂದಾಗಿ ಇದು ಮಹಾದೇವನಿಗೆ ಅತ್ಯಂತ ಪ್ರೀತಿ ಮತ್ತು ಆನಂದಗಳ ನೆಲೆಯಾಗಿದೆ. ರಾಮ ಮಂಗಳಧಾಮ ಮುಮ್ಮೂರ್ತಿಧಾಮ, ನೀನು ಮನುಷ್ಯವೇಷದಿಂದ ಈ ಕಥೆಯನ್ನು ಅರಿಯದವನಂತೆ ಲೋಕಹಿತಕ್ಕಾಗಿ ಜಗತ್ತಿನ ಜನರಿಗೆ ಆಶ್ಚರ್ಯವನ್ನುಂಟು ಮಾಡುತ್ತಿರುವೆ." ಹೀಗೆಂದು ವಸಿಷ್ಠರು ಅರುಹಲು ದೇವೇಂದ್ರ ಮುಂತಾದ ದೇವತೆಗಳೂ ಮುನಿಜನರೂ ಜಯಜಯಧ್ವನಿಯಿಂದ ಶ್ರೀರಾಮನನ್ನು ಹೊಗಳುತ್ತಿರಲು, ಕರುಣೆಯಿಂದ ಅವರವರ ಮನದಿಷ್ಟಗಳನ್ನಿತ್ತು ಶಿವಾಲಯವನ್ನು ಬಿಟ್ಟು ವಾಪಸ್ಸು ಬಂದು ಬಂಧುಬಾಂಧವರನ್ನೆಲ್ಲ ಕಂಡು ರಾಜೀವಾಕ್ಷನು ಚಿತ್ರಕೂಟದಲ್ಲಿ ಸುಖದಿಂದಿದ್ದ. ಇದರಿಂದ ಋಷಿಗಳಿಗೆ ಆನಂದವುಂಟಾಯಿತು, ಹೋದ ಮಳೆಯು ಬಂದರೆ ಭೂಮಿಯು ಹರ್ಷಗೊಳ್ಳುವಂತೆ ಎಲ್ಲರೂ ಸಂತಸಗೊಂಡರು. ದಯಾನಿಧಿಯಾದ ರಾಮನು ಎಲ್ಲರನ್ನೂ ಅವರವರಿಷ್ಟದಂತೆ ಆದರಿಸುತ್ತಿರಲು ಭರತನು ಅಣ್ಣನ ಪಾದಪದ್ಮಗಳಿಗೆರಗಿ ಮುಂದೆ ಆಗಬೇಕಾದ ವಿಷಯಗಳನ್ನು ಬಿನ್ನವಿಸಿದ: "ರಾಜನಿಲ್ಲದ ನಮ್ಮ ರಾಜ್ಯವು ಮಳೆಗಾಗಿ ಎದುರುನೋಡುವ ಚಾತಕ ಪಕ್ಷಿಯಂತೆ ನಿನ್ನ ಪಾದಕಮಲಗಳನ್ನು ಬಯಸುತ್ತಿದೆ. **ರಾಮಪುರನಾಥ**, ಎಲ್ಲರಿಗೂ ಸಂತುಷ್ಟಿಯಾಗುವಂತೆ ನೀನು ಅರಸನಾಗಿ ಮೂರು ಲೋಕಗಳೂ ಆನಂದಸಾಮ್ರಾಜ್ಯದ ಅನುಭವವನ್ನು ಹೊಂದುವಂತೆ ದಯವಿಟ್ಟು ಕೃಪೆಮಾಡಬೇಕು" ಎಂದು ಬೇಡಿಕೊಂಡ.

೩೩. ಶ್ರೀರಾಮನು ಭರತನನ್ನು ಸಮಾಧಾನಪಡಿಸಿದುದು

ಹಿಮಗಿರಿತನೂಜೆಯೇ ಕೇಳು, ಗೌರವಭಾವದಿಂದ ಪ್ರಾರ್ಥಿಸುವ ಭರತನನ್ನು ನೋಡಿ ಮುಗುಳ್ನಗೆಯಿಂದ ಕೂಡಿ, "ತಂದೆಯು ದಯೆಯಿಂದ ಕೊಟ್ಟ ರಾಜ್ಯವೈಭವವನ್ನೆಲ್ಲ ಬಿಟ್ಟು ಶಮಧರರ ರೀತಿಯನ್ನು ಅನುಸರಿಸಿ ಕಾಡಿಗೆ ಬಂದ ನಿನ್ನ ನಿರ್ಮಲ ಮನಸ್ಸಿಗೆ ಏನೆಂದು ಹೇಳಲಿ? ನಗರದಲ್ಲಿ ರಾಜನೆನ್ನಿಸಿಕೊಂಡು ಪ್ರಜೆಗಳ ಪಾಲನೆ ಮಾಡಬೇಕಪ್ಪ, ನೀನು" ಎಂದು ರಾಮನು ನುಡಿಯಲು ಭರತನು ಮತ್ತೆ, "ತಲೆಯನ್ನು ಬಿಟ್ಟು ಮೊಳಕಾಲಿಗೆ ಪಾರುಪತ್ಯವನ್ನಾರು ಕೊಡುತ್ತಾರೆ? ಮೂಲೋಕನಾಯಕನೂ ಉತ್ತಮನೂ ಸರ್ವಜನಪ್ರಿಯನೂ ಆದ ನೀನು ದೊರೆಯೆನ್ನಿಸಿಕೊಂಡು ಎಲ್ಲರನ್ನೂ ಕೃಪೆಯಿಟ್ಟು ಪೊರೆದು ಸಲಹು. ಯಮಸ್ವರೂಪಿಯಾಗಿ ನನ್ನ ತಾಯಿಯು ತನ್ನ ಮಾತಿನಿಂದ ರಾಜೋತ್ತಮನನ್ನು ಧಿಕ್ಕರಿಸಿ ಅಪಕೀರ್ತಿಯುಂಟುಮಾಡಿರುವುದನ್ನು ಯಾರು ತಾನೇ ಅರಿಯರು? ಮನಸ್ಸಿನಲ್ಲಿ ಇದನ್ನು ಇಟ್ಟುಕೊಳ್ಳದೆ ನನ್ನ ಮಾತಿಗೆ ಒಡಂಬಡು. ತಾಪದಿಂದ ಬೇಯುತ್ತಿರುವ ಸಾಮಾನ್ಯರು ಪ್ರಜಾಹಿತಕಾರಿಗಳು ಭೂಸುರರು ಮತ್ತು ತಾಯಂದಿರು ಕೋಪದಿಂದ ಉರಿಯುವ ಸೇವಕರು ಸಂತೋಷಗೊಳ್ಳುವಂತೆ ನೀನು ಲಕ್ಷ್ಮೀರಮಣನಂತೆ ಅರಸನಾಗು, ಸಾಕೇತನಗರದ ದುಃಖವನ್ನು ಹೋಗಲಾಡಿಸು, ಭಕ್ತನಂತೆ ಶಿಷ್ಯನಂತೆ ದಾಸನಂತೆ ನನ್ನನ್ನು ಕಂಡು ಕೃಪೆದೋರು" ಎಂದು ದೈನ್ಯದಿಂದ ಕಾಲುಗಳಿಗೆರಗಿ ಬೇಡಿಕೊಂಡ. ಅವನನ್ನು ಸೆಳೆದಪ್ಪಿಕೊಂಡ ರಘುನಾಥನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಅವನ ಕಣ್ಣೀರನ್ನೊರಸಿ ಗಲ್ಲವನ್ನು ಹಿಡಿದು ಅಲುಗಿಸುತ್ತ, "ಸಚ್ಚರಿತ ಸತ್ಕುಲಜಾತ ತೇಜಸ್ವಿ ವಿನಯಪರ ಧರ್ಮಶೀಲನೆನಿಸಿದ ಮಗನು ರಾಜ್ಯವನ್ನು ಬಯಸಿ ಸಾಧುಜನರ ಹಾದಿಯನ್ನು ಬಿಟ್ಟು ಪಾತಕವನ್ನು ಮಾಡಬಹುದೇ? ಪರದೇವತೆಯಾದ ತಾಯಿಯನ್ನು ಧಿಕ್ಕರಿಸಬಹುದೇ, ತಂದೆಯಂತೆಯೇ ಅವಳನ್ನೂ ಪ್ರೀತಿಯಿಂದ ಕಾಣಬೇಕಲ್ಲವೇ? ಮನುಮುನಿಗಳೆಲ್ಲ ಈ ರೀತಿಯಲ್ಲವೇ ಹೇಳವುದು? ನಮ್ಮನ್ನು ಸನ್ಮಾನಿಸಿದರೂ ಅವಮಾನಿಸಿದರೂ ತಂದೆತಾಯಿಯರನ್ನು ಮನಃಪೂರ್ವಕವಾಗಿ ಸೇವಿಸುವುದು ಧರ್ಮವಲ್ಲದೆ ಅವರನ್ನು ಕೈಬಿಟ್ಟರೆ ಸಜ್ಜನರು ಒಪ್ಪುತ್ತಾರೆಯೇ? ಸಮಾನರೂ ಆಪ್ತರೂ ಪ್ರಜೆಪರಿವಾರದವರೂ ವಿದ್ವಜ್ಜನರೂ ಆದವರ ಮುಂದೆ 'ನಾವು ಭರತನಿಗೆ ಈ ರಾಜ್ಯವನ್ನು ಕೊಟ್ಟಿದ್ದೇನೆ, ನೀನು ಹದಿನಾಲ್ಕು ವರ್ಷ ಕಾಡಿಗೆ ಹೋಗಿರು' ಎಂದು ತಂದೆ ತಾಯಿಯರಿಬ್ಬರೂ ಮಾಡಿದ ಆಜ್ಞೆಯನ್ನು ಮೀರಿ ಬಾಳಿದರೇನು ಫಲ? ಅಸತ್ಯವನ್ನು ಹಿಡಿದರೆ ಕುಲಕೆಡುತ್ತದೆ, ಬದುಕು ನಿಷ್ಫಲವಾಗುತ್ತದೆ. ತಂದೆತಾಯಿಯರು ಸಕಲ ಬಂಧುಗಳ ಸಮ್ಮುಖದಲ್ಲಿ ವಿಭಾಗಮಾಡಿ ಕೊಟ್ಟುದನ್ನು ನಾವು ಪಡೆದು ಪಿತೃವಾಕ್ಯವನ್ನು ಸತ್ಯವೆಂದೆನಿಸಿ ಕೀರ್ತಿಯನ್ನು ಪಡೆಯುವುದೇ ಲೇಸು; ತಿಳಿಯದೆ ಅವರು ಹೀಗೆ ಮಾಡಿದ್ದಾರೆ ಎಂದು ಕುಂದನ್ನರಸಿ ಜರೆಯುವುದು ಅನ್ಯಾಯ. ನಮ್ಮನ್ನು ಪ್ರೀತಿಯಿಂದ ಬೆಳೆಸಿದ ಅವರು ಯಾರಿಗೆ ಯಾವುದನ್ನು ನೀಡಲೂ ಸರ್ವಸ್ವತಂತ್ರರಲ್ಲವೇ? ಒಡೆಯನಾದವನು ಹೆಂಡತಿ ಮಗ ದಾಸ ಸೇವಕ ಮುಂತಾದವರಿಗೆ ತನ್ನ ಮನಸ್ಸಿಗೆ ತೋಚಿದಂತೆ ಆಜ್ಞಾಪಿಸುವುದು ಹಿತಕ್ಕಾಗಿಯೇ ಎಂದು ತಿಳಿಯಬೇಕೇ ಹೊರತು ದೋಷ ಎಂದು ಭಾವಿಸಬಾರದು;

ಹಾಗೆ ಮಾಡುವುದು ತಪ್ಪು. ನೀನು ಬುದ್ಧಿವಂತ, ತಂದೆಯು ರಾಜ್ಯ-ಕಾಡುಗಳನ್ನು ನಮ್ಮಿಬ್ಬರಲ್ಲಿ ಹಂಚಿ ಸ್ವರ್ಗವನ್ನು ಸೇರಿದ್ದಾನೆ. ಅವನ ಇಚ್ಛೆಯನ್ನು ಗೌರವಿಸದೆ ರಾಜ್ಯದ ಒಡೆತನವನ್ನು ಬಯಸಿ ಪಾಪವನ್ನು ಬರಮಾಡಿಕೊಳ್ಳುವುದು ನಮ್ಮ ರವಿಕುಲದ ಕೀರ್ತಿಗೆ ಮಸಿಬಳಿದಂತೆ. ಭರತ, ಪ್ರಾಜ್ಞರು ಮೆಚ್ಚಿಕೊಳ್ಳುವ ರೀತಿಯಲ್ಲಿ ತಂದೆ ಹೇಳಿದ ಮಾತನ್ನು ಪಾಲಿಸು, ನಾನು ಹದಿನಾಲ್ಕು ವರ್ಷಗಳ ಕಾಲದ ವನವಾಸವನ್ನು ಮುಗಿಸಿ ಬರುತ್ತೇನೆ. ದಿವಸಗಳು ನಿಮಿಷಗಳಂತೆ ಓಡಿಬಿಡುತ್ತವೆ. ಸುಮ್ಮನೆ ಕೊರಗಬೇಡ, ಊರಿಗೆ ಹಿಂದಿರುಗಿ ಹೋಗು" ಎಂದ.

ಆ ಮಾತುಗಳನ್ನು ಕೇಳಿ ಭರತನು ಮತ್ತೆ ಅಣ್ಣನ ಪಾದಗಳನ್ನು ಹಿಡಿದು ನೆರೆದವರ ಮುಂದೆ, "ತಾಯಿತಂದೆಯರ ಮಾತನ್ನು ಕೇಳಬೇಕಾದುದು ಧರ್ಮವಾದರೂ, ನನಗೆ ಬಂದ ಪಾಲನ್ನು ಯಾರಿಗೆ ಕೊಡುವುದಕ್ಕೂ ನನಗೆ ಹಕ್ಕಿರುವುದು; ಅದು ಜನಸಮ್ಮತವಾದುದೂ ಹೌದು, ಸತ್ಯಪರವಾದವರ ಅಭಿಪ್ರಾಯವೂ ಹೌದು. ಈ ರಾಜ್ಯವನ್ನು ನಿನ್ನ ಪಾದಕಮಲಗಳಿಗೆ ಅರ್ಪಣೆ ಮಾಡುತ್ತೇನೆ, ಅದನ್ನು ಒಪ್ಪಿಕೊಂಡು ಜನರನ್ನು ಸಂತೋಷಗೊಳಿಸು, ಶರಣಾದವರ ಬಗ್ಗೆ ಕರುಣೆ ತೋರಿಸು. ಸಗರ ದಿಲೀಪ ರಘು ಮುಂತಾದ ಅಯೋಧ್ಯಾಪತಿಗಳಿಗಿಂತ ನೀನು ಐದು ಪಟ್ಟು ಸತ್ಯಸಂಪನ್ನ. ನಿನ್ನನ್ನು ಬಿಟ್ಟು ಮತ್ತಾರೂ ನಗರಾಧಿಪತಿಯಾಗಲಾರರು. ಅನರ್ಹನು ಪ್ರಭುತ್ವವನ್ನು ಬಯಸುವುದು ಹಾಸ್ಯಕರ; ಯಾವುದೋ ಪಕ್ಷಿ ಗರುಡನ ಸ್ಥಾನವನ್ನು ಬಯಸುವುದು, ಕತ್ತೆಯು ಕುದುರೆಯಂತೆ ಓಡುವುದನ್ನು ಬಯಸುವುದು ತಪ್ಪು. ಆಕಾಶದಲ್ಲಿ ಹರಡಿಕೊಂಡ ಕೊಂಬೆಯಲ್ಲಿರುವ ಹಣ್ಣು ಕುಳ್ಳನ ಕೈಗೆಟುಕುವುದೆ? ಸೂರ್ಯವಂಶದ ರಾಜರ ಸಿಂಹಾಸನ-ಅಧಿಕಾರಗಳು ನಿನಗಲ್ಲದೆ ಬೇರೆಯವರಿಗೆ ಸಿಕ್ಕಬಹುದೇ? ಜನರೂ ತಾಯಂದಿರೂ ಸಂತೋಷಪಡುವಂತೆ ನನ್ನ ಮಾತಿಗೆ ಬೆಲೆ ಕೊಟ್ಟು ಕರುಣೆಯಿಂದ ರಾಜನಾಗಿ ಕಾಪಾಡು" ಎಂದು ಅತಿ ದೀನತೆಯಿಂದ ಬೇಡಿಕೊಂಡ ಭರತನನ್ನು ಸಂತೈಸುತ್ತ ರಾಮನು ಹೀಗೆಂದ: "ಇತರರ ಸುಖಪರಂಪರೆಯನ್ನು ಜೀವರುಗಳು ಬಯಸಿ ಪಡೆಯಲಾರರು, ಸಿದ್ಧನಾದರೂ ಇತರರಿಗೆ ಸಲ್ಲುವ ಫಲಾಫಲಗಳನ್ನು ತನ್ನದಾಗಿ ಮಾಡಿಕೊಳ್ಳಲಾರ. ಈ ರೀತಿಯಲ್ಲಿ ಸುಮ್ಮನೆ ಪ್ರಯತ್ನಪಡುವ ಕೋವಿದರ ಬಗ್ಗೆ ಏನು ಹೇಳುವುದು, ಮಾಯಾವಿಲಾಸವಲ್ಲವೇ? ಅತಿಶಯದ ಸುಖವನ್ನು ಹೊಂದಲು ಪ್ರಯತ್ನಿಸಿದರೆ ಕಷ್ಟವೊದಗುತ್ತದೆ, ಕಷ್ಟಕಾರ್ಯವನ್ನು ಮಾಡಿದರೆ ಹಿತಕರವಾದ ಸುಖವು ಕೈಸಾರಬಹುದು; ಆದ ಕಾರಣ ಒಳ್ಳೆಯ ಹಾಗೂ ಕೆಟ್ಟ ಫಲಗಳೆರಡೂ ದೇವನು ನೀಡಿದರೆ ಉಂಟೇ ಹೊರತು ಮಾನವರ ಪ್ರಯತ್ನದಿಂದ ಏನು ತಾನೇ ಆದೀತು? ಹುರುಳಿಲ್ಲದ ಆಸೆಗಳಿಂದ ನರಗುರಿಗಳು ಅಸಂಗತರಾಗುತ್ತಾರೆ. ಬಟ್ಟೆಯು ಹಳೆಯದಾಗಲು ಮತ್ತೊಂದನ್ನು ಧರಿಸುವಂತೆ ಬೇರೆ ಬೇರೆ ದೇಹಗಳನ್ನು ಧರಿಸುತ್ತ ಸಂಭ್ರಮಪಡುತ್ತ ತಿಂದು ಮಲಗುವುದೇ ಪುರುಷಾರ್ಥಸಾಧನೆ, ತಾನೇ ಈಶ್ವರ ಎಂಬ ಅಹಂಕಾರವನ್ನು ಹೊಂದಿ, ಬರಲಿರುವ ಸಾವನ್ನು ಮರೆತು, ತಾಮ್ರಕಬ್ಬಿಣಗಳು ಬೆರೆತ ಹಾಗೆ ಏನೊಂದನ್ನೂ ತಿಳಿಯದೆ ದಂಭದಿಂದ ಬದುಕುವ ದಡ್ಡರಿಗೆ ಏನು ತಾನೇ ಹೇಳಲು ಸಾಧ್ಯ? ಸೂರ್ಯೋದಯವಾದರೆ ಸ್ನಾನ ಊಟಗಳ ಸಡಗರ,

ಸೂರ್ಯಾಸ್ತವಾದರೆ ಹೆಂಡತಿಯ ಸಹವಾಸದ ಸಂಭ್ರಮಗಳನ್ನಷ್ಟೇ ನೆನೆದರೆ, ಕಳೆದುಹೋಗುತ್ತಿರುವ ಆಯುಷ್ಯದ ಅರಿವೂ ಉಂಟಾಗದು, ಸಂಯಮದ ಘನತೆಯೂ ಅರ್ಥವಾಗದು, ನರೆಜರೆಗಳಿಂದ ದೇಹವು ಕ್ಷೀಣಿಸುವುದೂ ಗಮನಕ್ಕೆ ಹೋಗದು, ಇದೇ ಪರಮಾತ್ಮನ ಮಾಯೆಯ ಮಹಿಮೆ. ಸಾಮಾನ್ಯರು ಯುಗಾದಿ ದೀಪಾವಳಿ ಸಂಕ್ರಾಂತಿಗಳೆಂದು ಹಬ್ಬ ಮಾಡುತ್ತ ಮಿಂದು ತಿಂದು ಸುಖಿಯೆಂದು ಭಾವಿಸುವರಲ್ಲದೆ, ಆಯುಸ್ಸು ತೀರುತ್ತಿರುವುದನ್ನು ತಿಳಿಯರು. ಸಂಪಾದಿಸಿದ ಹಣವು ಖರ್ಚಾಗುವವರೆಗೆ, ಜೀವನದಲ್ಲಿ ವಿಯೋಗಗಳುಂಟಾಗುವರೆಗೆ, ಸಾವು ಬಂದು ಅಡಸುವವರೆಗೆ ಮಾತ್ರವೇ ಹೆಂಡಿರು ಮಕ್ಕಳು ಬಂಧುಗಳು ಎಂದು ಅರ್ಥಮಾಡಿಕೊಳ್ಳುವುದಿಲ್ಲವಲ್ಲ, ಇದಕ್ಕೇನು ಹೇಳುವುದು? ಸಮುದ್ರವನ್ನು ಸೇರಿದ ನದಿಯು ಹಿಂದಿರುಗಲಾಗದಂತೆ ತಾರುಣ್ಯ ಯೌವನಗಳು ಮತ್ತೆ ಬಂದಾವೇ? ನೀರಡಿಕೆಯಿಂದ ಅರವಟ್ಟಿಗೆಯಲ್ಲಿ ಸೇರಿದ ಜನರು ನೀರು ಕುಡಿದ ಬಳಿಕ ಹೊರಟು ಹೋದವರು ಮತ್ತೆ ಸೇರುತ್ತಾರೆಯೇ? ಹೆಂಡಿರುಮಕ್ಕಳೆಲ್ಲರೂ ಸಂತೋಷವನ್ನನುಭವಿಸಿ ಹೊಗಳುತ್ತಾರೆ, ಆದರೆ ಯಾರಿಗೆ ಯಾರೂ ಆಗುವುದಿಲ್ಲ; ಮನುಷ್ಯರ ಈ ಅವಸ್ಥೆಯನ್ನೇ ಹಿತಕರವಾದುದೆಂದು ತಿಳಿದು ತೊಳಲುವರಲ್ಲ! ಸಾವು ಬೆನ್ನತ್ತಿ ಬರುತ್ತಿದೆ ಎಂಬುದನ್ನು ಅರಿಯದೆ, ಉತ್ತಮ ವ್ಯಕ್ತಿಯು ಹೊರಟು ಹೋದ ಎಂದು ಹೆಣದ ಮುಂದೆ ಗೋಳಾಡುವವರು ತಮಗೇ ಮುಂದೊದಗಲಿರುವ ಅವಸ್ಥೆಯನ್ನು ತಿಳಿಯದೆ ಮರುಗುವ ನರಪಶುಗಳೊಡನೆ ಸೇರಿ ನೀನೂ ಏತಕ್ಕೆ ಹಲುಬುತ್ತಿದ್ದೀಯೆ? ತಂದೆಯು ಉತ್ತಮ ನಡವಳಿಕೆಯಿಂದ ಗಳಿಸಿದ ಪುಣ್ಯಫಲದಿಂದ ಉತ್ತಮೋತ್ತಮ ಗತಿಯನ್ನು ಸೇರಿದ್ದಾನೆ. ಆತನನ್ನು ನೆನೆನೆನೆದು ಬಳಲುವುದೇಕೆ? ತಂದೆ, ಅಜ್ಜರು ಮುಂತಾದ ನಮ್ಮ ಕುಲಪರಂಪರೆಯ ರಾಜರೆಲ್ಲರೂ ಎಲ್ಲ ತತ್ವಗಳನ್ನೂ ತಿಳಿದವರಾಗಿ ಈ ದೇಹವು ಅನಿತ್ಯವೆಂದು ಅರಿತು ಅಶ್ವಮೇಧವೇ ಮೊದಲಾದ ಯಜ್ಞಗಳನ್ನು ಮಾಡಿ ಸುರರನ್ನೂ ಭೂಸುರರನ್ನೂ ಸಂತುಷ್ಟಿಗೊಳಿಸಿ, ಲೋಕವನ್ನು ಸಲಹಿ, ಪ್ರಖ್ಯಾತಿಯನ್ನು ಗಳಿಸಿ, ದೀರ್ಘಾಯುಸ್ಸನ್ನು ಹೊಂದಿ ಸುಖಗಳನ್ನೆಲ್ಲ ಅನುಭವಿಸಿ ಕ್ರಮವಾಗಿ ತೀರಿಕೊಂಡು ಉತ್ತಮಗತಿಗಳನ್ನು ಪಡೆದರು. ಇಂತಹ ಕುಲಚರಿತ್ರೆಯನ್ನು ತಿಳಿದು, ಕುಶಲಧರ್ಮವನ್ನು ಹಳಿದು, ನೆಲದಾಸೆಯನ್ನು ತಳೆದು, ನೇಮಗಳನ್ನು ಕಳೆದು ಹಲುಬಿದರೇನು ಫಲ? ಗುರುಪರಂಪರೆಯ ಅನುಸರಣೆಯೇ ಸಫಲ ಎಂದು ಈ ಹಿರಿಯರಿಂದ ಕಲಿತು, ಈ ರಾಜ್ಯಭೋಗವನ್ನನುಭವಿಸುವುದು ತಂದೆಯ ಆಜ್ಞೆಯೆಂಬುದನ್ನು ಅರ್ಥಮಾಡಿಕೊಂಡು ಹೆಣ್ಣುಮಕ್ಕಳ ಜೊತೆಗೆ ಅಯೋಧ್ಯೆಗೆ ಸುಖವಾಗಿ ಹಿಂದಿರುಗಿ ಹೋಗು. ಈ ಬದುಕು ಮೂರು ದಿನದ್ದೆಂಬುದನ್ನು ಅರಿತು ಸತ್ಯವನ್ನು ಮೀರಿ ನಾನು ಊರಿಗೆ ವಾಪಸು ಬಂದರೇನು ಫಲ? ಸತ್ಯವನ್ನು ಮೀರದೆ ಸದಾಚಾರನಿರತನಾದ ಸತ್ಯಶೀಲ ಧರಣಿಪಾಲನಾದ ತಂದೆಯು ಆಜ್ಞಾಪಿಸಿದಂತೆ ನೀನು ಹೋಗಿ ರಾಜ್ಯವನ್ನು ಪರಿಪಾಲಿಸು; ನಾನು ಅವನ ನೇಮವು ಮುಗಿಯುವವರೆಗೂ ಕಾಡಿನಲ್ಲಿ ಓಡಾಡಿಕೊಂಡಿರುತ್ತೇನೆ. ಆದ್ದರಿಂದ ಭರತನೇ, ನೀನು ಬೇಗ ಪಟ್ಟಣಕ್ಕೆ ವಾಪಸಾಗು" ಎಂದು ತಿಳಿಹೇಳಿದ.

"ಹಿಂದುಮುಂದನ್ನರಿಯದೆ, ಆತ್ಮಕ್ಕೆ ಹಿತವನ್ನು ಮಾಡದೆ, ಸುಂದರಿಯ

ಮೋಹದಿಂದ ತಪ್ಪನ್ನು ಮಾಡಿದ ತಂದೆಯ ಮಾತನ್ನು ಅನುಸರಿಸುವುದು ಧರ್ಮಕ್ಕೆ ಊನವನ್ನುಂಟುಮಾಡಿದಂತೆ. ಎಲ್ಲ ಶಾಸ್ತ್ರಾರ್ಥಗಳನ್ನೂ ತಿಳಿದು ಪ್ರಾಜ್ಞನೆನ್ನಿಸಿಕೊಂಡ ನೀನು ತಂದೆ ಮಾಡಿದ ತಪ್ಪನ್ನು ಸಮರ್ಥಿಸುವುದು ಸರಿಯೇ? ಜನಹಿತಕಾರಿಯೇ? ತಾಯಿಯು ತಪ್ಪು ಮಾಡಿದಳೆಂದು ಜರಿಯುವುದು ಅನ್ಯಾಯ, ಆದರೆ ತಂದೆ ಮಾಡಿದ್ದನ್ನು ಸರಿ ಎಂದು ಹೇಳಲಾದೀತೇ? ಸೂರ್ಯಕುಲದೀಪಕನಾದ ನೀನು ಇದೆಲ್ಲವನ್ನೂ ತಿಳಿಯದವನೇನಲ್ಲ. ಬಾಲಕನಾದ ನಾನು ಇದನ್ನು ನಿನಗೆ ಹೇಳಬೇಕೇ? ನಿನ್ನನ್ನು ಕರೆದೊಯ್ಯಲೆಂದು ಬಂದ ತಾಯಿಯರ ಸಡಗರವನ್ನೂ, ಮತ್ತೆ ಮತ್ತೆ ನಿನ್ನನ್ನು ಹೊಗಳುತ್ತಿರುವ ಋತ್ವಿಜರನ್ನೂ, ಭೂಸುರರನ್ನೂ, ಜೊತೆಯಲ್ಲಿ ಬಂದಿರುವ ಪ್ರಜೆಗಳನ್ನೂ ನಗರದ ಜನರನ್ನೂ ಸಂತಸಗೊಳಿಸು. ಕುಲಪರಂಪರೆಯ ರೀತಿಯನ್ನು ಅನುಸರಿಸಿ ನೆಲದೊಡೆಯನಾಗಿ, ಕಿರಿಯರನ್ನು ಸೂಕ್ತ ಸೇವೆಯಲ್ಲಿ ನಿಯೋಜಿಸಿ, ಧರ್ಮಾಚರಣೆಯಿಂದ ಚಾತುರ್ವರ್ಣ್ಯವನ್ನು ಸಲಹಿ ಸೂರ್ಯಕುಲದ ಕೀರ್ತಿಯನ್ನು ಸಮುದ್ರಗಳವರೆಗೂ ಹಬ್ಬಿಸಿ, ಎಲ್ಲ ಭೋಗವಿಲಾಸಗಳನ್ನೂ ಅನುಭವಿಸುತ್ತ ದೊರೆತನವನ್ನು ಹಿಡಿ. ಕದನಕರ್ಕಶನಾಗಿ ಶತ್ರುಮಂಡಲವನ್ನು ಸದೆದು, ಸದಯನಾಗಿ ದುಃಖವನ್ನು ಹೋಗಲಾಡಿಸಿ, ಷೋಡಶಮಹಾದಾನಗಳ ಮಾಡುತ್ತ ಭೂಸುರರನ್ನು ತೃಪ್ತಿಗೊಳಿಸಿ, ಸಮುದ್ರಪರ್ಯಂತವಾದ ನಾಡನ್ನು ಪರಿಪಾಲನೆ ಮಾಡುತ್ತ ಶ್ರೇಷ್ಠ ಗಾರ್ಹಸ್ಥ್ಯವನ್ನು ಅನುಸರಿಸುವುದೇ ಕ್ಷತ್ರಧರ್ಮ, ಈ ಮರ್ಮವನ್ನು ನೀನರಿಯೆಯೇನು? ಅರಸುತನವೆಲ್ಲಿ, ಕಾಡಿನ ಬದುಕೆಲ್ಲಿ? ಬಿಲ್ಲುಬಾಣಗಳನ್ನು ಹಿಡಿಯುವ ಠೀವಿಯೆಲ್ಲಿ, ಜಡೆಗಳನ್ನು ಕಟ್ಟಿಕೊಳ್ಳುವುದೆಲ್ಲಿ? ಮೃದುವಾದ ಹಾಸಿಗೆಯನ್ನು ಮಲಗುವುದೆಲ್ಲಿ, ಸಮತಲ ನೆಲದ ಮೇಲೆ ಒರಗುವುದೆಲ್ಲಿ? ಮೃಷ್ಟಾನ್ನವೆಲ್ಲಿ, ಕಾಡಿನ ಆಹಾರವೆಲ್ಲಿ? ಇದೆಲ್ಲ ಕ್ಷತ್ರಧರ್ಮಕ್ಕೆ ದೂರ, ಹರಿಭಕ್ತಿ ಶತ್ರುನಿಗ್ರಹ ಧರ್ಮರಕ್ಷಣೆಗಳು ರಾಜರುಗಳ ಕರ್ತವ್ಯವಲ್ಲವೇ? ಪಟ್ಟದಲ್ಲಿ ಕುಳಿತು ರಾಜಧರ್ಮವನ್ನನುಸರಿಸಿ ಸಜ್ಜನರನ್ನು ಪೊರೆದು, ಸತ್ಪುತ್ರರ ಜೊತೆಯಲ್ಲಿ ಮುದದಿಂದ ವಿವಿಧ ಯಜ್ಞಯಾಗಗಳನ್ನು ಮಾಡಿ ಕೊನೆಗೆ ರಾಜ್ಯಭಾರವನ್ನು ಮಕ್ಕಳಿಗೊಪ್ಪಿಸಿ ಕಾಡಿಗೆ ಹೋಗಿ ತಪಸ್ಸನ್ನಾಚರಿಸುವುದು ಹಿಂದಿನಿಂದಲೂ ನಡೆದುಬಂದ ಪದ್ಧತಿ. ಸಾಧುತಿಲಕನೇ, ಹೆಚ್ಚೇನು ಹೇಳಲಿ, ಇದೆಲ್ಲವೂ ಧರ್ಮಾಂತರಂಗನಾದ ನೀನು ಅರಿಯದಿರುವುದೇ? ನನಗೆ ತಿಳಿಯದ ಹಾಗೆ ನನ್ನ ತಾಯಿಯು ಮಾಡಿದ ಪಾತಕವನ್ನೂ, ಮೋಹವಶನಾದ ತಂದೆಯು ಮಾಡಿದ ತಪ್ಪನ್ನೂ, ಗೂನಿಯಾದ ಮಂಥರೆಯು ಮಾಡಿದ ದುರ್ಬೋಧೆಯನ್ನೂ ಮನಸ್ಸಿನಲ್ಲಿ ಇರಿಸಿಕೊಳ್ಳದೆ ಅಯೋಧ್ಯಾನಗರಿಯ ಅಧಿನಾಥನೆನಿಸಿ ಪ್ರಜೆಗಳನ್ನೂ ತಾಯಂದಿರನ್ನೂ ಸಾಮಂತ ರಾಜರುಗಳನ್ನೂ ಆನಂದಗೊಳಿಸು, ರವಿಕುಲದ ಅರಸುಗಳ ಕೀರ್ತಿಗೆ ಪ್ರೀತಿಯಿಂದ ಒಪ್ಪವನ್ನಿತ್ತು ಬೆಳಗಿಸು. ಚಿನ್ನಮಣ್ಣುಗಳಂತೆ ಬೆರೆತ ಸುಖದುಃಖ, ಹೊಗಳಿಕೆ-ತೆಗಳಿಕೆ, ಹಿತ-ಅಹಿತಗಳನ್ನು ಸಮಾನವಾಗಿ ಕಾಣುವ ಸಮಚಿತ್ತದವನಾದ ನಿನಗೆ ನಾನು ವಿಜ್ಞಾಪಿಸಿಕೊಳ್ಳುವುದೇನಿದೆ? ನೀನೇ ವಿವೇಚನೆಯಿಂದ ತಿಳಿದು, ತಪ್ಪುಗಳನ್ನು ಮರೆತು ಕೃಪೆಯಿಂದ ಪರಿಪಾಲಿಸು. ಅಂತಃಪುರವಾಸಿಗಳ, ಪ್ರಜೆಗಳ ಮನಸ್ಸಿಗೆ ಕಷ್ಟವಾಗದ ಹಾಗೆ, ಇಲ್ಲಿಯೇ ಈ ಬೆಟ್ಟದಲ್ಲಿಯೇ ಅಭಿಷೇಕವನ್ನು ಮಾಡುವುದಕ್ಕೆ ಗುರು ವಸಿಷ್ಠರ ಹಿರಿತನದಲ್ಲಿ ಋತ್ವಿಜರೊಡನೆ ಸಿದ್ಧವಾಗಿ ಬಂದಿದ್ದೇವೆ; ಅದಕ್ಕೆ ಒಪ್ಪಿಗೆಯನ್ನಿತ್ತು ಎಲ್ಲರಿಗೂ

ನೆಮ್ಮದಿಯನ್ನು ತಾ! ನನಗೆ ತೋಚಿದ್ದನ್ನು ಹೇಳಿದ್ದೇನೆ, ಇದನ್ನು ದಯವಿಟ್ಟು ಒಪ್ಪಿ ದೊರೆತನದ ಭಾರವನ್ನು ವಹಿಸಿಕೊಂಡು, ನಮ್ಮನ್ನಾವರಿಸಿರುವ ಅಪಕೀರ್ತಿಯನ್ನು ಹೋಗಲಾಡಿಸಿ ನಮ್ಮ ಮೇಲೆ ಕರುಣೆ ತೋರಿಸು; ನೀನು ಉದಾಸೀನ ಮಾಡಿದರೆ ನಾನೂ ನಾರುಬಟ್ಟೆಯನ್ನುಟ್ಟು ಜಟೆಯನ್ನು ಕಟ್ಟಿ ನಿನ್ನೊಡನೆಯೇ ಇದ್ದುಬಿಡುತ್ತೇನೆ" ಎಂದು ಭರತನು ಅಣ್ಣನ ಅಡಿದಾವರೆಗಳಿಗೆರಗಿ ನೆಲದಮೇಲೆ ಉರುಳಿದ

ತಮ್ಮನ ಈ ಬಗೆಯ ಒತ್ತಾಯವನ್ನು ನಿವಾರಿಸಿಕೊಳ್ಳಲು ರಘೂದ್ವಹನು ಉಪಾಯದಿಂದ ಕೂಡಿ ಅವನಿಗೆ ನಿಧಾನವಾಗಿ ತಿಳಿಯ ಹೇಳಲು ತೊಡಗಿದ: "ಪಾಪವಿರಹಿತ, ಸಜ್ಜನೋತ್ತಂಸ, ನೀನು ಹೇಳಿದ ಮಾತುಗಳೆಲ್ಲವೂ ಸಮಂಜಸವಾದುವೇ; ಆದರೆ ಒಂದು ಗುಟ್ಟನ್ನು ಹೇಳುತ್ತೇನೆ, ಅದರ ಬಗ್ಗೆ ಸಮಚಿತ್ತದಿಂದ ಆಲೋಚನೆ ಮಾಡು. ಹಿಂದೆ, ಸೇರಿದ್ದ ಪಿತೃಗಳನ್ನು ನೋಡಿ ಗಯಸು ನುಡಿದ ಮಾತನ್ನು ಹೇಳುತ್ತೇನೆ. ಪುತ್ ಎಂಬ ನರಕದಿಂದ ರಕ್ಷಿಸುವ ಕಾರಣದಿಂದ ಪಿತೃಗಳು ಪುತ್ರರನ್ನು ಬಯಸುತ್ತಾರೆ; ದೇವತೆಗಳಿಗೆ ಹರಸಿಕೊಂಡು ತಂದೆತಾಯಿಗಳು ಅನೇಕ ಮಕ್ಕಳನ್ನು ಪಡೆಯಲು ಬಯಸುತ್ತಾರೆ; ಅವರಲ್ಲಿ ಒಬ್ಬ ಯಜ್ಞಯಾಗಗಳನ್ನು ಮಾಡಿದರೆ, ಮತ್ತೊಬ್ಬ ಕನ್ಯಾದಾನ ಮಾಡುತ್ತಾನೆ, ಮಗುದೊಬ್ಬ ಭೂಸುರರ ಸೇವೆ ಮಾಡುತ್ತಾನೆ. ಇದರಿಂದ ನರಕವು ತಪ್ಪಿ ಒಳಿತಾಗುತ್ತದೆ ಎಂದು ನಂಬಿ ತಾಯ್ತಂದೆಯರು ಪುತ್ರರನ್ನು ಪಡೆಯಲು ಆಸೆಪಡುತ್ತಾರೆ. ಮಕ್ಕಳಲ್ಲಿ ಒಬ್ಬನಾದರೂ ಪ್ರತಿ ವರ್ಷವೂ ಗಯೆಗೆ ಹೋಗಿ ಭಕ್ತಿಯಿಂದ ಪಿತೃಗಳಿಗೆ ಅನ್ನತರ್ಪಣವನ್ನು ನೀಡುವುದು ಪುತ್ರನ ಕರ್ತವ್ಯ. ನಮ್ಮ ತಂದೆಯು ಸುಳ್ಳನ್ನು ಹೇಳುವವನಲ್ಲ, ಎರಡನ್ನಾಡದೆ ಸತ್ಯವನ್ನು ಮೆರೆದು ಇಂದ್ರಾಸನದಲ್ಲಿ ಮಂಡಿತನಾಗಿದ್ದಾನೆ.. ರವಿಕುಲಮಂಡನನೆನಿಸಿದ್ದಾನೆ. ಪಿತೃಗಳ ದುಃಖವನ್ನು ಹೋಗಲಾಡಿಸದ ಮಗನು ಹುಟ್ಟಿದರೇನು, ಬಿಟ್ಟರೇನು? ನಿಮ್ಮ ತಾತ ಅಶ್ವಪತಿರಾಜನು ನಿನ್ನ ತಾಯಿಯ ಮದುವೆಯ ಸಂದರ್ಭದಲ್ಲಿ ಎಲ್ಲರೆದುರಿಗೆ, ಅವಳ ಮಗನಿಗೆ ಪಟ್ಟಕಟ್ಟುವುದೇ ಕೊಡಬೇಕಾದ ಕನ್ಯಾಶುಲ್ಕ ಎಂದು ಹೇಳಿದ್ದಕ್ಕೆ ತಂದೆಯು ಒಪ್ಪಿಗೆ ಸೂಚಿಸಿದ್ದನಂತೆ. ಅಲ್ಲದೆ ಕೈಕಾತಾಯಿಯು ದೇವಾಸುರ ಯುದ್ಧ ಕಾಲದಲ್ಲಿ ಸಹಾಯಮಾಡಿ ಗಳಿಸಿಕೊಂಡಿದ್ದ ವರವನ್ನು ಈಗ ಕೇಳಿದಾಗ ತಂದೆಯು ಅದಕ್ಕೊಪ್ಪಿದ. ತಂದೆಯ ಮಾತನ್ನು ಸ್ವಲ್ಪವೂ ತಪ್ಪದ ರೀತಿಯಲ್ಲಿ ಸತ್ಯವಾಗಿಸುವುದು ಮಗನ ಕರ್ತವ್ಯ. ಆದ್ದರಿಂದ ನೀನು ಶತ್ರುಘ್ನನೊಡನೆ ಊರಿಗೆ ಹೋಗಿ ರಾಜ್ಯಭಾರ ಮಾಡು. ನಾನು ಲಕ್ಷ್ಮಣನ ಜೊತೆಯಲ್ಲಿ ಕಾಡಿನಲ್ಲಿದ್ದು ಋಷಿಗಳ ಭಯವನ್ನು ಹೋಲಾಡಿಸುತ್ತ ನಿಯಮವನ್ನು ಪಾಲಿಸುತ್ತೇನೆ. ಆನಂತರ ಎಲ್ಲರೂ ಊರಿಗೆ ವಾಪಸು ಬರುತ್ತೇವೆ, ಇದು ಸತ್ಯ, ಎಂದಿಗೂ ಸುಳ್ಳಾಗದು. ಹೀಗಾಗಿ ನೀನು ನಿರುಮ್ಮಳನಾಗಿ ಅಂತಃಪುರಸ್ತ್ರೀಯರು ಹಿರಿಯರು ಹಾಗೂ ಪರಿಜನರ ಸಮೇತ ನಗರಕ್ಕೆ ನಡೆದು ಶ್ರದ್ಧೆಯಿಂದ ಪಿತೃವಾಕ್ಯವನ್ನು ಪರಿಪಾಲನೆ ಮಾಡು" ಎಂದು ಸಜ್ಜನಸಾಧುಗಳ ಮಾತಿಗನುಗುಣವಾಗಿ ತಮ್ಮನಿಗೆ ಬುದ್ಧಿ ಹೇಳಿದ.

ಆದರೆ ಅಲ್ಲಿಯೇ ಇದ್ದ ಜಾಬಾಲಿ ಮುನಿಗಳು ಧರ್ಮಬಾಹಿರವಾದ ಈ ಮಾತುಗಳನ್ನಾಡಿದರು: "ತಂದೆ ತಾಯಿ ಗುರು ಮಗ ತಮ್ಮ ಬಂಧು ಬಳಗ ಮಿತ್ರ

ಎಂದು ಆಲೋಚಿಸುವುದು ವ್ಯರ್ಥ; ಕಾಡಿನಲ್ಲಿ ಬೆಳುದಿಂಗಳು ಸುರಿದ ಹಾಗೆ ನಿಷ್ಫಲ. ಈ ಜಗತ್ತಿಗೆ ಬರುವಾಗ ವ್ಯಕ್ತಿ ತಾನೊಬ್ಬನೇ ಬರುತ್ತಾನೆ, ಹೋಗುವಾಗ ಒಬ್ಬನೇ ಹೋಗುತ್ತಾನೆ. ಹಾಗಾಗಿ ಮನುಷ್ಯನಿಗೆ ಹಿಂದೆ ಮುಂದೆ ಯಾವನೂ ಇಲ್ಲ. ಪ್ರತಿಯೊಬ್ಬನೂ ತನಗೆ ಬಂದುದನ್ನು ಮಾಡುತ್ತಿರುವವನೇ ಹೊರತು ಯಾರಿಗೆ ಯಾರೂ ಹಿತವರಲ್ಲ. ಊರಿಂದೂರಿಗೆ ಹೋಗುವವನು ಮಧ್ಯದಲ್ಲಿ ಒಂದು ಹಳ್ಳಿಯಲ್ಲಿ ಕೊಂಚ ಕಾಲವಿದ್ದು ಮುಂದೆ ಸಾಗುತ್ತಾನೆ, ಆನಂತರ ಅವರನ್ನು ಕಾಣುವುದೇ ಇಲ್ಲ. ಅವರಂತೆಯೇ ತಾಯಿ ತಂದೆ ಅಣ್ಣ ತಮ್ಮ ಮಕ್ಕಳು – ಎಲ್ಲ. ಆಕಸ್ಮಿಕವಾಗಿ ಜೊತೆ ಸೇರಿ ತಂದ ಬುತ್ತಿಯನ್ನುಂಡು ಮುಂದೆ ಹೋಗುವವರೇ ಹೊರತು ಯಾರೂ ಮತ್ತಾರ ಹಿತವನ್ನೂ ಬಯಸುವವರಲ್ಲ. ಪ್ರಾಣಿಯು ಹುಟ್ಟಲು ತಂದೆಯ ಬೀಜ ನಿಮಿತ್ತವಷ್ಟೆ; ಋತುಮತಿಯಾದ ತಾಯ ಗರ್ಭದಲ್ಲಿ ರಜಸ್ಸು-ರೇತಸ್ಸುಗಳು ಸೇರಿದಾಗ ಮಗುವಿಗೆ ಜನ್ಮ ನೀಡುತ್ತಾಳೆ. ತೀರಿ ಹೋದ ತಂದೆ ಯಾರು, ತಾನು ಯಾರು? ಈಗ ಆತನು ಹೇಗಿದ್ದಾನೆಂಬುದನ್ನು ತಿಳಿದವರಾರು? ಭ್ರಾಂತರಾದವರು ಈ ಜಗತ್ತಿನ ರೀತಿಯನ್ನು ಅರಿಯದೆ ಬರಿದೆ ತೊಳಲಿ ಬಳಲುತ್ತಾರೆ. ಹೋದವರ ಬಗ್ಗೆ ಶೋಕಿಸುವುದು, ಅಷ್ಟಕಗಳೆಂದು ಪಿತೃದೇವತೆಗಳಿಗೆ ಶ್ರದ್ಧೆಯಿಂದ ಮೃಷ್ಟಾನ್ನಗಳನ್ನಿಟ್ಟು, ತಾವು ಊಟಮಾಡಿದರೆ ಅವರಿಗೆ ಸಂತೋಷವಾಗುತ್ತದೆಯೇ? ಮೇಲೆ ನರಕ ಸ್ವರ್ಗಗಳಿರುವುದನ್ನು ಯಾರು ಕಂಡಿದ್ದಾರೆ? ಇದೆಲ್ಲ ಚಿತ್ತಚಾಂಚಲ್ಯವಲ್ಲದೆ ಬೇರಲ್ಲ. ಕೇವಲ ಊಹೆಯಿಂದ ಎಲ್ಲವೂ ನಿಜವಾಗಿಬಿಡುತ್ತದೇನು? ಈ ಭೂಮಿಯಲ್ಲಿ ಜೀವವು ಇರುವವರೆಗೂ ನೋಡಿದುದು ಮಾಡಿದುದು ಕೂಡಿದುದು ಎಲ್ಲವೂ ಬೆಳಗುತ್ತವೆ, ಆದರೆ ಹೋದ ಮೇಲೇನು? ತಿಳಿಯದೆ ಅಜ್ಞಾನದಿಂದ ಶಾಸ್ತ್ರಕೂಪವನ್ನು ಸೇರಿ ಕುರುಡರಂತೆ ಎಟುಕದ ಹಣ್ಣಿಗೆ ಕೈಚಾಚಿ ತೊಳಲುತ್ತಾರೆ. ಶಾಂತ ಸದ್ಗುಣಶೀಲ ರಾಮನೇ, ಸತ್ಯವಂತರುಗಳು ಸಂತಾಪಗೊಂಡಿದ್ದಾರೆ, ಭರತಕುಮಾರನು ಭಕ್ತಿಯಿಂದ ಕೇಳಿಕೊಳ್ಳುತ್ತಿದ್ದಾನೆ, ಅಂತಃಪುರಾಂಗನೆಯರು ದೈನ್ಯದಿಂದ ಕೂಡಿದ್ದಾರೆ, ಮುನಿಗಳು ಖೇದಗೊಂಡಿದ್ದಾರೆ; ಅವರ ಹೃತ್ತಾಪವನ್ನು ಹೋಗಲಾಡಿಸುವ ಬಗೆಯಲ್ಲಿ ನೀನು ದೊರೆತನವನ್ನು ಒಪ್ಪಿಕೋ. ಜನರನ್ನು ಸಂತಸಗೊಳಿಸು, ಸಕಲ ಜೀವರಿಗೆ ಲೇಸ ಬಯಸುವಾತನೇ ದೈವವೆಂಬುದನ್ನು ತಿಳಿದುಕೋ. ಈ ಜಗತ್ತಿನಲ್ಲಿ ಜೀವರನ್ನು ಸಂತಸಗೊಳಿಸುವುದೇ ಶಿವಪೂಜೆ, ಅದಕ್ಕಿಂತಲೂ ಮಿಗಿಲಾದ ತಪಸ್ಸೆಂಬುದಿಲ್ಲ ಎಂಬ ಸಾಧುಜನರ ಮಾತನ್ನು ನಿಜಗೊಳಿಸು. ರಘುವರನೇ ಕೇಳು, ತಾಪಸನಾದ ನಾನು ಲೋಕಹಿತಾರ್ಥವಾಗಿ ಹೇಳಿದುದನ್ನು ಪರಿಗಣಿಸಿ, ಸಕಲಲೋಕ ಸಂತಸಕ್ಕಾಗಿ, ನಿಮ್ಮ ವಂಶದ ಕೀರ್ತಿ ಹೆಚ್ಚುವ ಬಗೆಯಲ್ಲಿ, ರಾಜನೀತಿಯು ಹಾಳಾಗದಂತೆ ರಾಜನ ಹೊಣೆಯನ್ನು ಹೊತ್ತು ಎಲ್ಲರನ್ನೂ ಪೊರೆದು ಸುಖದಿಂದ ಇರಿಸು" ಎಂದು ಬೋಧಿಸಲು ಜನರಿಗೆ ಹರ್ಷವೆನಿಸಿತು, ಭರತನ ಮನಸ್ಸು ಹಗುರವಾಯಿತು, ಸೇರಿದ್ದ ಪ್ರಜೆಗಳೂ ಪರಿವಾರದವರೂ ತಮ್ಮತಮ್ಮಲ್ಲಿ ಪಿಸುಗುಟ್ಟಿಕೊಂಡರು. ಆಗ ರಾಮಪುರದರಸನು ಜಾಬಾಲಿ ಮುನಿಗಳಿಗೆ ವಂದಿಸಿ ಮಾನವನಂತೆ ಪ್ರೀತಿಯಿಂದ ಮಾರುತ್ತರವನ್ನಿತ್ತ.

೩೪. ಗುರು ವಸಿಷ್ಠರ ಆಣತಿಯಂತೆ ಭರತನು ಶ್ರೀರಾಮನ ಪಾದುಕೆಗಳೊಡನೆ ಅಯೋಧ್ಯೆಗೆ ಹೋದುದು

ಜಾಬಾಲಿಮುನಿಯು ಆಡಿದ ಮಾತುಗಳನ್ನು ಕೇಳಿದ ಶ್ರೀರಾಮಚಂದ್ರನು ಮುಗುಳುನಗುತ್ತ ಧರ್ಮವೇ ದೇಹವೆತ್ತು ಬಂದ ರೀತಿಯಲ್ಲಿ ಉತ್ತರವಿತ್ತ; "ವಿಮಲಮತಿಯೇ, ದುಷ್ಕಾರ್ಯವನ್ನು ಸತ್ಕಾರ್ಯವೆನ್ನಿಸಿ ಪಾತಕವನ್ನು ಪುಣ್ಯವೆನ್ನಿಸಿ ನನ್ನ ಮೇಲಿನ ಪ್ರೀತಿಯಿಂದ ತಾವು ಹೇಳಿದ ವಿಚಿತ್ರವೆನ್ನಿಸುವ ಮಾತುಗಳಿಗೆ ಏನು ಉತ್ತರವಿದೆ? ಹೆಂಬೇಡಿಯನ್ನು ಶೂರನೆಂದೂ, ಹೇಸಿಕೆಯನ್ನು ಶುಭಕರವೆಂದೂ ಹೇಳಿದಂತೆಯೇ ತಪ್ಪಾದುದನ್ನು ಮೋಹಕವಾಗಿ ತೋರುವ ರೀತಿಯಲ್ಲಿ ಆಡಿದ ಮಾತುಗಳನ್ನು ಕೇಳಿ, ಕ್ರೂರವಾದ ಮೊಸಳೆಗಳಿಂದ ಕೂಡಿದ ಮಡುವು ಆಳವಾಗಿ ಕಾಣುವಂತೆ ಸಾಧುಗಳ ಮುಂದೆ ಬಣ್ಣಿಸುವುದು ತರವೇ, ತಾಪಸವರೇಣ್ಯ? ನಿಯಮಗಳನ್ನು ಗಾಳಿಗೆ ತೂರಿ ಸ್ವಚ್ಛಂದದಿಂದ ನಡೆದುಕೊಳ್ಳುತ್ತ ಸತ್ಯದಿಂದ ಕೂಡಿದ ಧರ್ಮಸ್ಥಿತಿಯನ್ನು ಬೆದರಿಸಿ ಎಷ್ಟು ದಿನಗಳು ಬದುಕಬೇಕು? ಹಾಗೆ ಬದುಕಿದರೆ ಧರ್ಮದೂಷಕನೆಂದು ಈ ಲೋಕವು ನನ್ನನ್ನು ಕಂಡು ಬೆದರದಿರುತ್ತದೆಯೇ? ಆನಂತರ ಯಾರು ತಾನೇ ನನ್ನ ಮುಖವನ್ನು ನೋಡುತ್ತಾರೆ? ಇಂಥ ರಾಜನ ನೀತಿಯನ್ನು ಕಂಡ ಪ್ರಜೆಗಳು ಯಾರು ತಾನೆ ಆದರಿಸುತ್ತಾರೆ? ಸುರರು ಭೂಸುರರು ಋಷಿವರರು ಸಂತೋಷಗೊಳ್ಳುವ ಸ್ವರ್ಗಸುಖವನ್ನು, ಈ ಭೂಮಿಯ ಬದುಕಿಗೆ ಯಶಸ್ಸನ್ನೂ, ದೀರ್ಘಾಯುಸ್ಸನ್ನೂ ನೀಡುವುದು ಸತ್ಯ; ಜಪತಪಗಳಿಂದ ದಾನಪವಿತ್ರತೆಗಳಿಂದ ಬರುವ ನಿರುತವಾದ ತುಷ್ಟಿಯೇ ಸತ್ಯ ಎಂದು ವೇದಗಳು ಹೇಳುತ್ತಿರಲು ಅದನ್ನೆಲ್ಲ ಧಿಕ್ಕರಿಸಬಹುದೇ, ಹಿಂದಿನ ನಡವಳಿಕೆಗಳು ಅಲಂಘ್ಯವಾದವು. ಕುಲವನ್ನು ಉದ್ಧರಿಸುವವನೊಬ್ಬ, ನರಕಕ್ಕೆ ಎಳೆಯುವವನೊಬ್ಬ; ಸ್ವರ್ಗವನ್ನು ಆದರಿಸುವವನೊಬ್ಬ, ದುಃಖ ನೀಡುವವನೊಬ್ಬ; ಹೀಗೆ ಸತ್ಯಪರವಾದವನು ಯಾರು ಎಂದರಿಯದೆ ಅರಸುಗಳು ಅನೇಕರಾಗಿ ಕಾಣಿಸುತ್ತಾರೆ. ಭರತನ ಉಪಚಾರದಿಂದಲೂ ತಾಯಂದಿರ ನುಡಿಗಳಿಂದಲೂ ಬಂಧುಮಿತ್ರರ ಮೃದುವಾಣಿಯಿಂದಲೂ ಪರವಶನಾಗಿ ಪರಗತಿಯನ್ನು ಸೇರಿಸುವ ಸತ್ಯವನ್ನು ಹೇಗೆ ತಾನೇ ದೂರೀಕರಿಸಲಿ? ರಾಜನ ಎದುರಿನಲ್ಲಿ, ಪಂಡಿತರ ಸಮ್ಮುಖದಲ್ಲಿ, ಮಾಡಿದ ಪ್ರತಿಜ್ಞೆಯನ್ನು ಮುರಿದು ಸುಖಕ್ಕಾಗಿ ಆಸೆಪಟ್ಟು ರಾಮನು ಆಡಿದ ಮಾತಿಗೆ ತಪ್ಪಿಯಾನೇ? ಮೋಹವಂಚನೆಗಳಿಗೆ ಬಲಿಯಾದಾನೇ? ಪಿತೃದೇವತಾದಿಗಳಿಗೆ ನೀಡುವ ಸಂತಸವನ್ನೂ ಕೀರ್ತಿಯನ್ನೂ ಸದ್ಗತಿಯನ್ನೂ ನೀಡುವ ಕಾಮಧೇನುವಾದ ಸತ್ಯವನ್ನು ಹಳಿಯುತ್ತಾರೆಯೇ, ವೇದನಿಧಿಯೇ? ಮನಸ್ಸಿನಲ್ಲಿ ಒಂದನ್ನಿಟ್ಟುಕೊಂಡು ಮಾತಿನಲ್ಲಿ ಬೇರೊಂದನ್ನು ತೋರಿಸುತ್ತ ದೇಹದಿಂದ ಮತ್ತೊಂದನ್ನು ಮಾಡುತ್ತ ಅಸತ್ಯ–ಪಾತಕಗಳ ಮನೆ ಎನ್ನಿಸಿಕೊಳ್ಳುವ ದುರ್ಮಾರ್ಗವಾದ ಕ್ಷತ್ರಧರ್ಮವನ್ನು ನಂಬಿ ವಿಷಯಸುಖಗಳನ್ನು ಅನುಭವಿಸುತ್ತ, ತಂದೆಯಾಡಿದ ಮಾತನ್ನು ಅಸತ್ಯವೆನ್ನಿಸಿ ಕೆಟ್ಟ ಹೆಸರನ್ನು ಪಡೆದು ಸದ್ಗತಿಗೆ ಎರವಾಗುವ ಬಗೆಯಲ್ಲಿ ಸತ್ಯಮಾರ್ಗವನ್ನು ತೊರೆಯಬೇಕೇ, ಮುನಿಪ? ಅತಿಥಿಪೂಜೆ, ದ್ವಿಜೋತ್ತಮ ಪಾದಸೇವೆ, ಭೂತಾನುಕಂಪೆ, ಸತ್ಯಧರ್ಮಗಳ ಪಾಲನೆ, ಗುರುಜನಾನುಸೇವನೆ, ಸ್ನಾನದಾನಪೂಜಾದಿ ವಿಧಿಗಳು –

ಇವು ಸತ್ಪುರುಷರು ಅನುಸರಿಸುವ ವಿಧಿಗಳು; ಇವೇ ಸದ್ಗತಿಗೆ ಏರುವ ಮೆಟ್ಟಿಲುಗಳು ಎಂದು ಭಾವಿಸಿದ್ದ ನಳ ನಹುಷ ಭರತ ಸಗರಾದಿಗಳ ಅಭಿಮತವನ್ನು ಧಿಕ್ಕರಿಸಲು ತಕ್ಕದ್ದೇ? ಬುದ್ಧಾಚರಣೆಯು ಭವಬಂಧಕ್ಕೆ ಕರಣೆ. ದಶರಥನು ಭರತಖಂಡದಲ್ಲಿ ಹುಟ್ಟಿ, ನಾನಾ ಧರ್ಮಕಾರ್ಯಗಳನ್ನೆಸಗಿ, ಅಶ್ವಮೇಧಗಳನ್ನು ಮಾಡಿ ದೇವೇಂದ್ರನ ಸ್ವರ್ಗಕ್ಕೆ ಒಡೆಯನಾದ. ಎಲ್ಲ ಭೂಸುರರು ಇದನ್ನರಿತು ಸಾಧುಸೇವೆಯಿಂದ ಪರಿಪರಿಯ ಸತ್ಕರ್ಮಗಳನ್ನು ಮಾಡಿ, ಯಜ್ಞಗಳಿಂದ ಮರುತ ಅಗ್ನಿ ಮುಂತಾದ ದೇವತೆಗಳನ್ನು ಸಂತುಷ್ಟಿಗೊಳಿಸಿ ಸುಖದಲ್ಲಿರುವುದನ್ನು ನೋಡಿ ಪ್ರಲಾಪಿಸಬೇಕೇ, ಯತಿವರ? ತಂದೆಯ ಮಾತಿಗನುಗುಣವಾಗಿ ನಡೆದು ಪರಶುರಾಮನು ತಾಯಿಯ ತಲೆಯನ್ನೇ ತರಿದ. ಇಂಥ ಧರ್ಮಜ್ಞರ ನೀತಿಯನ್ನು ತಿಳಿದು ಪಿತೃವಾಕ್ಯ ಪಾಲನೆ ಮಾಡಿ ಸದ್ಗತಿಗಳನ್ನು ಹೊಂದಿ ಪ್ರೀತಿಯಿಂದ ತಂದೆಯು ಆಡಿದ ಮಾತನ್ನು ಪ್ರಾಜ್ಞರ ಮುಂದೆ ತಲೆಯಲ್ಲಿ ಹೊತ್ತು ಈಗ ಸುಖದಿಚ್ಛೆಗೆ ಬಲಿಯಾಗಿ ನಡೆದರೆ ಯಾರು ಮೆಚ್ಚುತ್ತಾರೆ, ಪರಸುಖವು ಹೇಗೆ ತಾನೇ ದೊರೆಕೊಳ್ಳುತ್ತದೆ? ಬುದ್ಧಾಚರಣೆಯಂತೆ ನಡೆದು ದೇಹಸುಖಗಳಿಗೆ ಬದ್ಧನಾಗಿ, ದೋಷಪೂರಿತವಾದ ನುಡಿಗಳನ್ನು ನಚ್ಚಿ, ಧರ್ಮದ ದಾರಿಯನ್ನು ಚುಚ್ಚಿ, ಸಿರಿಯನ್ನು ಮೆಚ್ಚಿ ನಡೆಯಲೇ? ನಿರ್ಮಲ ಮನಸ್ಸಿನಿಂದ ಕೂಡಿ ಸಜ್ಜನರು ಮೆಚ್ಚುವ ಧರ್ಮಮಾರ್ಗದಲ್ಲಿ ನಡೆಯಲು ಕಂಕಣಬದ್ಧನಾಗಿ ನನ್ನ ವಂಶವನ್ನು ಉದ್ಧರಿಸದೆ ಅಳಿಮನಸ್ಸಿನಿಂದ ಕೂಡಿದರೆ ಯಾರು ಒಪ್ಪುತ್ತಾರೆ?" ಎಂದು ಈ ರೀತಿಯಲ್ಲಿ ಶ್ರೀರಾಮನು ಕ್ರೋಧದಿಂದ ಕೂಡಿದ ಮಾತುಗಳನ್ನಾಡಿದ.

ಅದನ್ನು ಕೇಳಿದ ವಸಿಷ್ಠ ಮುನಿಯು, "ರಘುವರನೇ, ಜಾಬಾಲಿಗಳು ಸರ್ವಜ್ಞನಿಧಿ, ಜನರ ಆಟಕೂಟಗಳನ್ನು ಮನಸ್ಸಿನಲ್ಲಿಯೇ ಅರಿತುಕೊಳ್ಳಬಲ್ಲವರು, ಆದರೂ ಎಲ್ಲರೂ ನಿನ್ನನ್ನು ಮನೆಗೆ ಕರೆದೊಯ್ಯಲೆಂದು ಬಂದುದನ್ನು ನೋಡಿ ಅವರನ್ನೆಲ್ಲ ಸಂತೋಷಗೊಳಿಸಲೆಂದು ಹಾಗೆ ಹೇಳಿದರೇ ಹೊರತು ಕೆಟ್ಟ ಆಲೋಚನೆಯಿಂದಲ್ಲ. ನಾನು ಹೇಳುವುದನ್ನು ಕೇಳು: ಮೊದಲು ಬ್ರಹ್ಮವು ಜಲಮಯವಾಗಿತ್ತು, ಮಧುಸೂದನನು ವರಾಹ ರೂಪಿನಿಂದ ಭೂಮಿಯನ್ನು ನಿರ್ಮಿಸಿದ, ಬ್ರಹ್ಮನಿಗೆ ಆಧಾರವಾಗಿ ದೇವತೆಗಳನ್ನು ಸೃಷ್ಟಿಸಿದ; ಆ ಬ್ರಹ್ಮನಿಂದ ಮರೀಚಿ, ಕಶ್ಯಪ, ಅವನಿಂದ ವಿವಸ್ವಂತ, ಆತನ ಮಗ ಇಕ್ಷ್ವಾಕು, ಆತನಿಂದ ಕುಕ್ಷಿ, ಅವನ ಮಗ ವಿಕುಕ್ಷಿ, ಆಮೇಲೆ ಬಾಣ, ಅವನಿಂಧ ಅನರಣ್ಯ, ಆಮೇಲೆ ಪೃಥು, ಅವನ ತನಯ ತ್ರಿಶಂಕು, ಅವನ ಕುಮಾರ ದುಂಧುಮಾರ, ಯವನಾಶ್ವ, ಆತನಿಂದ ಮಾಂಧಾತ, ಆತನಿಂದ ಸುಸಂಧಿ, ಅವನಿಗೆ ದೈವಸಂಧಿ, ಭರತ, ಆನಂತರ ಸಿತ, ಸಗರ, ಅಸಮಂಜ, ಅವನ ಮಗ ಅಂಶುಮಂತ, ಮತ್ತವನ ತನಯ ದಿಲೀಪ, ಅವನಿಂದ ಭಗೀರಥ, ಆತನ ಮಗ ಕಾಕುಸ್ಥ, ಆನಂತರ ರಘು, ಆಮೇಲೆ ಶಂಬಣ, ಅವನ ಹೊಟ್ಟೆಯಲ್ಲಿ ಹುಟ್ಟಿದವನೇ ಅಗ್ನಿವರ್ಣ, ಶೀಘ್ರಗ, ಪ್ರಶುಶ್ರುಕ, ಅಂಬರೀಷ, ನಹುಷ, ಅಜ, ಅವನ ಮಗನೇ ದಶರಥ, ಆ ವಿಕ್ರಮನ ಮಗನೇ ನೀನು. ಇಂಥಹ ನಿನ್ನ ವಂಶದ ರಾಜರ ಧರ್ಮಮಾರ್ಗವನ್ನು ತಿಳಿದು ನೀನು ಮುನ್ನಡೆಯಬೇಕು. ನಿಮ್ಮ ಕುಲಪರಂಪರೆಯ ಅರಸುಗಳು ತಮ್ಮ ತಮ್ಮ ಹಿರಿಯ ಮಗನಿಗೆ ಪಟ್ಟಕಟ್ಟಿ ರಾಜನನ್ನಾಗಿಸಿದರು. ಈ

ಕುಲಧರ್ಮವನ್ನು ಮೀರದೆ ಸಿರಿಸಾಮ್ರಾಜ್ಯದ ಒಡೆತನವನ್ನು ಸ್ವೀಕರಿಸಿ ಧರ್ಮವನ್ನು ಬೆಳೆಸಿ ಕೀರ್ತಿಯಿಂದ ಬೆಳಗು" ಎಂದು ಹೇಳಿದ. ಆನಂತರ ಮುಗುಳುನಗುತ್ತ, "ವ್ಯಕ್ತಿಗೆ ಲೋಕದಲ್ಲಿ ಮೂರು ಜನರು ಪೂಜ್ಯರು: ಪರಮ ಧರ್ಮಜ್ಞನಾದ ತಂದೆ, ಹೆತ್ತವಳು ಮತ್ತು ಧರ್ಮವನ್ನು ತಿಳಿಯಹೇಳುವ ಆಚಾರ್ಯ; ಈ ಮೂವರೂ ಸಮರಲ್ಲವೇ? ತಂದೆಯು ಸ್ವರ್ಗಸ್ಥನಾಗಲು ಸಾಧ್ವಿಯಾದ ತಾಯಿ ಮತ್ತು ಗುರು ಇಬ್ಬರೂ ಪೂಜ್ಯರು. ನಾವಿಬ್ಬರೂ ಹೇಳುವ ರೀತಿಯನ್ನು ಒಪ್ಪಿಕೊಂಡು ನಡೆಯುವುದರಿಂದ ಸಜ್ಜನರ ವ್ಯಕ್ತಿತ್ವಕ್ಕೆ ಭಂಗವುಂಟಾಗುತ್ತದೆಯೇ? ಸೇರಿರುವ ವಿದ್ವಜ್ಜನರ ಮಾತು ವಿಫಲವಾಗಬೇಕೇ? ಶ್ರುತಿಯಿಂದ ಹುಟ್ಟಿ ವಿಹಿತಾಚರಣೆ ಎನ್ನಿಸಿಕೊಂಡ ಬಳಿಕ ಜನರು ಒಪ್ಪದ ಕಾರ್ಯವನ್ನು ಮಾಡಬಹುದೇ? ಪ್ರೀತಿಯಿಂದ ತಂದೆಯಿತ್ತ ರಾಜ್ಯವನ್ನು ಭರತನು ಅಷ್ಟೇ ಪ್ರೀತಿಯಿಂದ ನಿನಗೊಪ್ಪಿಸುತ್ತಿದ್ದಾನೆ; ಅದನ್ನು ನೀನು ಸ್ವೀಕರಿಸಿದರೆ ಸತ್ಪುರುಷರು, ತಾಯಂದಿರು ಹಾಗೂ ಎಲ್ಲ ಜನರನ್ನು ಸಂತೋಷಗೊಳಿಸುತ್ತದೆ. ಇದೇ ಸದ್ಧರ್ಮಕ್ಕೆ ವ್ಯತಿರಿಕ್ತವಾಗುವುದಿಲ್ಲ" ಎಂದು ಹೇಳಿದ. ಅದಕ್ಕೆ ಮಾರುತ್ತರವಾಗಿ ರಘುನಾಥನು ಮುಗುಳ್ನಗೆಯಿಂದ ಕೂಡಿ, "ಪೂಜ್ಯರೇ, ತಾವು ದಯೆಯಿಂದ ಹೇಳಿದ ಮಾತುಗಳು ಪರಮ ಸುಖವನ್ನುಂಟು ಮಾಡುವಂತಹವಾಗಿವೆ. ಆದರೆ ಎಲ್ಲರೆದುರಿನಲ್ಲಿ ತಾಯಿಗೆ ತಂದೆಯಿತ್ತ ಮಾತನ್ನು – ಸುಖದಾಯಕವೋ ಅಲ್ಲವೋ – ನೆರವೇರಿಸುತ್ತೇನೆ ಎಂದು ನಾನು ಪ್ರತಿಜ್ಞೆ ಮಾಡಿದೆ. ಇದನ್ನು ತಪ್ಪಿಸಿಕೊಳ್ಳಲು ಉಪಾಯವನ್ನು ಹುಡುಕಿದರೆ ಅದು ದುರ್ಯಶಕ್ಕೆ ಎಡೆಯಾಗುವುದು. ಕಾರ್ಯಸಾಧನೆ ಮಾಡಿ ಧರ್ಮವನ್ನು ಗಳಿಸುವ ಸಾಧುಜನರು ಕಾಯಸುಖಕ್ಕೆ ಆಸೆಪಡುತ್ತಾರೆಯೇ? ನನ್ನ ದೇಹಕ್ಕೆ ಕಾರಣವಾಗಿ ಪೋಷಣೆ ಮಾಡಿದ ತಂದೆಯು ಸ್ವತಂತ್ರನಾಗಿ ತೀರ್ಮಾನವೊಂದನ್ನು ಕೈಗೊಂಡರೆ ಅದನ್ನು ತಪ್ಪಿಸಿಕೊಳ್ಳಲು ಮಾರ್ಗವನ್ನು ಹುಡುಕುತ್ತಾರೆಯೇ? ತಂದೆಯು ಹೇಳುವಂತೆ ಕೇಳುವುದು ಪುತ್ರಮತ, ಜನಸಮ್ಮತ ಕೂಡ" ಎಂದ.

ಸಾಧುಸಜ್ಜನರ ಅಭಿಪ್ರಾಯಕ್ಕನುಗುಣವಾಗಿ ನಗರಕ್ಕೆ ಬಂದು ಅರಸನೆನ್ನಿಸಿ ಕೊಳ್ಳುವುದಕ್ಕೆ ಒಪ್ಪದ ರಘುವರನ ಮಾತನ್ನು ಕೇಳದ ಭರತನು ಮಂತ್ರಿಯೊಡನೆ ಹೀಗೆಂದ: "ಅಣ್ಣನನ್ನು ಒಪ್ಪಿಸುವುದಕ್ಕೆ ಸುಮ್ಮನೆ ಕಷ್ಟಪಟ್ಟರೇನು ಫಲ? ತಂದೆಯ ಮಾತಿಗೆ ಅನುಗುಣವಾಗಿ ನಡೆದುಕೊಳ್ಳುವುದು ಅಣ್ಣನ ನಿಲವು; ಅಣ್ಣನ ಪಾದಕಮಲಗಳನ್ನು ಹಿಡಿದು ನಡೆಯುವುದು ನನ್ನ ನೇಮ. ಹೀಗಾಗಿ ನೀನು ತಡಮಾಡದೆ ಹೋಗಿ ಸಮತಲದ ನೆಲದಲ್ಲಿ ದರ್ಭೆಯ ಹಾಸೊಂದನ್ನು ಸಿದ್ಧಗೊಳಿಸು. ನಾನು ಕಟ್ಟಕ್ಕರೆಯಿಂದ ಪ್ರಾಯೋಪವೇಶವನ್ನು ಕೈಗೊಂಡು ಅಣ್ಣನು ಕೃಪೆಗೈಯುವವರೆಗೂ ಇಲ್ಲಿಯೇ ಇರುತ್ತೇನೆ. ಇದಕ್ಕೆ ಇಲ್ಲಿ ಸೇರಿರುವವರೆಲ್ಲರೂ ಸಾಕ್ಷಿಗಳಾಗಲಿ" ಎಂದು ಹೇಳಿ ಹೊರಡಲನುವಾದ. ಭರತನ ಮಾತುಗಳನ್ನು ಕೇಳಿ ಶ್ರೀರಾಮಚಂದ್ರನು ಬೆರಗುವಟ್ಟು ನಿಂತ. ಆಗ ಗುರುಗಳು ಭರತನಿಗೆ ಕಣ್ಸನ್ನೆ ಮಾಡಿ ಏಕಾಂತದಲ್ಲಿ ಹೇಳಲೆಂದು "ಸ್ವಲ್ಪ ಬಾ" ಎಂದು ಕೈಹಿಡಿದು ಕರೆದೊಯ್ದರು. ಆನಂತರ, "ಬಾಲಕನೇ ಕೇಳು. ಬ್ರಹ್ಮನೇ ಮೊದಲಾದವರ ಪ್ರಾರ್ಥನೆಯಂತೆ ಭೂಭಾರವನ್ನಿಳುಹಲು ದಂಡಕಾರಣ್ಯದ ದೈತ್ಯರನ್ನು ತರಿದು

ದಶಶಿರನನ್ನು ಸಂಹರಿಸಲೆಂದು ಹೋಗುವವನಿದ್ದಾನೆ. ಯೋಗೀಶ್ವರನಾದ ವಿಷ್ಣುವೇ ಶ್ರೀರಾಮ, ಯೋಗಮಾಯೆಯೇ ಸೀತೆ, ಶೇಷನೇ ಲಕ್ಷ್ಮಣ; ಇವರು ಅಮರೇಂದ್ರನೇ ಮೊದಲಾವರಿಗೆ ಅಭಯವನ್ನಿತ್ತು ಕಾರ್ಯಸಾಧನೆಗಾಗಿ ಇಲ್ಲಿ ಅವತರಿಸಿದ್ದಾರೆ. ಇದನ್ನರಿತು ನೀನು ಅಸದಳ ಮನೋರೋಗವನ್ನು ಪರಿಹರಿಸಿಕೊಂಡು, ಬೇಗನೇ ಅಣ್ಣನ ಅಪ್ಪಣೆಯನ್ನು ಪಡೆದು ವಾಪಸಾಗು" ಎಂಬ ರಹಸ್ಯವನ್ನು ಭರತನಿಗೆ ಬಿಡಿಸಿ ಹೇಳಿ ಅತ್ತ ಹೋದರು. ಇದನ್ನು ಕೇಳಿದ ಭರತನು ರಘುವರನು ಪರಬ್ರಹ್ಮನೆಂಬುದನ್ನು ಅರಿತು ತನ್ನ ದುಃಖವನ್ನು ನೀಗಿಕೊಂಡ. ಭರತನಿಗೆ ತಿಳಿಹೇಳಲೆಂದು ಬಯಸಿದ ರಾಮನು, "ಪ್ರಾಯೋಪವೇಶವು ದೊರೆಗಳು ಮಾಡುವ ವ್ರತವಲ್ಲ; ಸುಮ್ಮನೆ ದಾರುಣವಾದ ಇದನ್ನು ಕೈಗೊಂಡು ಏಕೆ ಬಳಲುತ್ತೀಯೆ. ನಿನ್ನ ಹಟವನ್ನು ಬಿಟ್ಟು ಶುಭಕರಜಲದಿಂದ ನನ್ನನ್ನು ಸ್ಪರ್ಶಿಸು" ಎಂದು ಹೇಳಿ, ತಕ್ಷಣವೇ ಕೈಗಳನ್ನು ತೊಳೆದುಕೊಂಡು ನಾಲ್ಕೂ ದಿಕ್ಕುಗಳಿಗೆ ನಮಸ್ಕರಿಸಿ ಅಣ್ಣನು ಹೇಳಿದಂತೆ ಮಾಡಿದ. ಆಗ ರಾಮನು ಭರತನನ್ನು ಕುರಿತು, "ಮಹಾರಾಜನಿಗೆ ಕೊಟ್ಟ ಭಾಷೆಯನ್ನು ನೆರವೇರಿಸುವುದಕ್ಕಾಗಿ ನಾನು ಹದಿನಾಲ್ಕು ವರ್ಷ ಕಾಡಿನಲ್ಲಿರುತ್ತೇನೆ, ನೀನು ಪಟ್ಟಣಕ್ಕೆ ಹೋಗಿ ಹೊಳೆಯುವ ಸಿಂಹಾಸನದಲ್ಲಿ ಕುಳಿತುಕೊಳ್ಳಬೇಕು" ಎಂದು ಅವನನ್ನು ಒಪ್ಪಿಸಿ ಮತ್ತೆ, "ನಿನ್ನ ಮನೋಭಾವವನ್ನು ನಾನು ಬಲ್ಲೆ, ನಿನ್ನ ಭಕ್ತಿಯಿಂದ ಮೂರು ಲೋಕಗಳೂ ಹರ್ಷವನ್ನು ಹೊಂದಿವೆ. ತಂದೆಯು ವಿಹಿತವೆಂದು ಅಹಿತವನ್ನು ಹೇಳಿದರೂ ತಿಳಿದಂತಹವನು ಅದನ್ನೊಪ್ಪಿ ಭಾಷೆಗೆ ತಪ್ಪದೆ ಅದನ್ನು ಸಲ್ಲಿಸಿ ಸುಖಾಸ್ಪದವಾದುದನ್ನು ಬಯಸಿ ಋಣದಲ್ಲಿ ಮುಳುಗದೆ ಮುಕ್ತನಾದವನೇ ಪುತ್ರ ಎನ್ನಿಸಿಕೊಳ್ಳುತ್ತಾನೆ. ಸಾಗರವು ಮೇರೆ ಮೀರಿದರೂ, ಚಂದ್ರನು ಬೆಳುದಿಂಗಳನ್ನು ಬಿಟ್ಟರೂ, ಹಿಮಾಲಯವು ತಂಪನ್ನು ಕಳೆದುಕೊಂಡರೂ ನಾನು ಮಾತ್ರ ಕೊಟ್ಟ ಭಾಷೆಗೆ ತಪ್ಪಲಾರೆ. ನಾನೆಂದೂ ದುಷ್ಕರ ದುರ್ನೀತಿ ಮಾರ್ಗಗಳನ್ನೊಪ್ಪುವವನಲ್ಲ. ನನ್ನ ಪ್ರತಿಜ್ಞೆಯನ್ನು ಪೂರೈಸಿ ಮರಳಿ ಅಯೋಧ್ಯೆಗೆ ಬರುತ್ತೇನೆ; ನೀನು ಅಲ್ಲಿಯವರೆಗೆ ಜಗತ್ತನ್ನು ಪರಿಪಾಲಿಸುತ್ತಿರು. ಆದ್ದರಿಂದ ನೀನು ಬೇಗ ಜೊತೆಗೆ ಬಂದ ಜನರೊಡನೆ ವಾಪಸ್ಸು ಹೋಗು" ಎಂದು ಹೇಳಿದ.

ಹೀಗೆ ನಡೆದ ಅಣ್ಣತಮ್ಮಂದಿರ ಸಂಭಾಷಣೆಯನ್ನು ಕೇಳಿದ ಋಷಿಗಳೂ ಜನಪದರೂ ಸಂತಸ ತಾಳಿ ಭರತನಿಗೆ, "ಹಿಂದಿನ ರಾಜರುಗಳಲ್ಲಿ ನಿನ್ನನ್ನು ಹೋಲುವ ಮೃದುಹೃದಯಿಗಳು ಯಾರೂ ಇಲ್ಲ. ನೀನು ಈ ಧರೆಯಲ್ಲಿ ಅತಿಶಯವಾದ ಸತ್ಯವಚನಪರಿಪಾಲಕನಾಗಿ ರಘುವರನು ಮರಳಿ ಬರುವವರೆಗೂ ಆಡಳಿತವನ್ನು ನಡೆಸು" ಎಂದು ಕೇಳಿಕೊಂಡರು. ಇದು ದೇವಕಾರ್ಯ ಎಂದು ಮನಸ್ಸಿನಲ್ಲಿಯೇ ಭಾವಿಸಿದ ಕೌಸಲ್ಯೆಯು ಪ್ರಾಜ್ಞರ ಸಲಹೆಯನ್ನು ಅನುಮೋದಿಸಿ, "ಅಣುಗ, ಋಷಿಬಳಗವು ಯಾವುದನ್ನು ಯುಕ್ತವೆಂದು ಹೇಳುವುದೋ ಹಾಗೆ ನಡೆದು ರಾಮನ ಆಜ್ಞೆಯನ್ನು ಪಾಲಿಸಿ ನಗರಕ್ಕೆ ಹಿಂದಿರುಗುವುದು ಒಳ್ಳೆಯದು. ರಾಮನೇ, ಭರತನಿನ್ನೂ ಚಿಕ್ಕವನು, ಇವನು ಭೂಮಿಯನ್ನು ಪಾಲಿಸಲು ಶಕ್ತನಾಗುವಂತೆ ನಿನ್ನ ಪಾದುಕೆಗಳನ್ನು ಅವನಿಗೆ ಕೊಟ್ಟು ಸಹಕರಿಸು" ಎಂದು ನಯವಾಗಿ ನುಡಿದಳು. ಅದಕ್ಕೆ ಒಪ್ಪಿದ ಶ್ರೀರಾಮನು

ಭರತನಿಗೆ ತನ್ನ ಪಾದುಕೆಗಳನ್ನು ಸಂತೋಷದಿಂದ ಕೊಟ್ಟ.

ಸಕಲ ಭೂತಲದ ಯೋಗಕ್ಷೇಮವೂ ಸುರಧಾಮವೂ ಅಖಿಲಜೀವಶುಭೋದಯವೂ ಕಲ್ಪಲತೆಯೂ ಶುಕವಾಮದೇವಾದಿ ಬ್ರಹ್ಮಹರದೇವೇಂದ್ರರ ಹೃದಯಕಮಲವೂ ಆದ ಪಾದುಕೆಗಳನ್ನು ಭಕ್ತಿಯಿಂದ ಸ್ವೀಕರಿಸಿ ಅವುಗಳನ್ನು ತನ್ನ ತಲೆಯ ಮೇಲಿಟ್ಟುಕೊಂಡು ಸ್ತುತಿಸಿ, ಮುನಿಸಮೂಹದ ನಡುವೆ ಭರತನು ರಾಮಚಂದ್ರನಿಗೆ ತನ್ನ ಮನೋರಥವನ್ನೂ ನಿರ್ವೃತಿಪಥವನ್ನೂ ಪ್ರಕಟಿಸಿದ. ಭೂಮಂಡಲದ ಭಾರವನ್ನೆಲ್ಲ ಆ ಪಾದುಕೆಗಳಲ್ಲಿರಿಸಿ, ತಾನು ಊರ ಹೊರಗಿನ ಒಂದು ಸ್ಥಳದಲ್ಲಿ ಜಟಾಧಾರಿಯಾಗಿ ವಲ್ಕಲವನ್ನುಟ್ಟು ಮುನಿವೇಷವನ್ನು ಧರಿಸಿ ಹದಿನಾಲ್ಕು ವರ್ಷಗಳ ಕಾಲದ ನಂತರ ರಾಮಚಂದ್ರನ ಮಂಗಳಮೂರ್ತಿಯು ವಾಪಸ್ಸು ಬರಲು ಸಂತೋಷಗೊಳ್ಳುತ್ತೇನೆ; ಬಾರದಿದ್ದರೆ ಈ ದೇಹವನ್ನು ಅಗ್ನಿಗೆ ಆಹುತಿಯಾಗಿ ನೀಡುತ್ತೇನೆ ಎಂದು ಘೋಷಿಸಿದ. ಈ ಮಾತಿಗೆ ಒಪ್ಪಿಗೆ ಸೂಚಿಸಿ ರಘುರಾಮನು ತಮ್ಮನನ್ನು ತೆಗೆದಪ್ಪಿಕೊಂಡು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಸಮಾಧಾನ ಮಾಡಿ, ಶತ್ರುಘ್ನನಿಗೂ ಪ್ರಿಯವಾಕ್ಕುಗಳನ್ನಾಡಿ, "ಹುಡುಗರೇ, ತಾಯಿಯ ಕಠೋರಬುದ್ಧಿಯನ್ನು ಮನಸ್ಸನಲ್ಲಿರಿಸಿಕೊಳ್ಳಬೇಡಿ, ಕೋಪವನ್ನುಳಿಸಿಕೊಂಡು ಆಕೆಯ ಮನಸ್ಸನ್ನು ನೋಯಿಸಬೇಡಿ, ಆಕೆಯ ಸೇವೆಯನ್ನು ಭಕ್ತಿಯಿಂದ ಮಾಡಿ, ನನ್ನಾಣೆ, ಸೀತೆಯ ಮೇಲಾಣೆ, ಗುರುಗಳ ಮೇಲಾಣೆ" ಎಂದು ಆನಂದಕಂಬನಿಗಳನ್ನು ಸುರಿಸುತ್ತ ಭರತನಿಗೆ ಅಪ್ಪಣೆಯನ್ನಿತ್ತ. ಆಗ ಭರತನು ಅತ್ಯಂತ ಹರ್ಷದಿಂದ ಪಾದುಕೆಗಳನ್ನು ತಲೆಯಲ್ಲಿ ಹೊತ್ತು ಅಣ್ಣನಿಗೆ ಬಲವಂದು ನಮಸ್ಕರಿಸಿ, ಇಂದೀವರಾಕ್ಷಿ ಸೀತೆ ಅತ್ತಿಗೆಗೆ ನಮಿಸಿ, ಲಕ್ಷ್ಮಣನನ್ನು ಪ್ರೀತಿಯಿಂದ ಅಪ್ಪಿಕೊಂಡು ಬೀಳ್ಕೊಂಡ ಭರತನ ಚಂದವನ್ನೇನು ಹೇಳುವುದು?

ಹಾಗೆಯೇ ಕೌಸಲ್ಯೆಯು ಮಗನನ್ನು ಅಕ್ಕರೆಯಿಂದ ತಕ್ಕೈಸಿಕೊಂಡು ಸಮಾಧಾನ ಮಾಡಿ, ಸೊಸೆಯನ್ನು ಬರಸೆಳೆದು ತಲೆ ನೇವರಿಸಿ ಉಪಚಾರಗೈದು, ಹೊರಗೆ ಬರಲು ನಿಂತಿದ್ದ ಲಕ್ಷ್ಮಣನು ಕಾಲ್ಗೆರಗಲು ಅವನನ್ನು ಮೇಲೆತ್ತಿ ಮುದ್ದಿಸಿದಳು. ಆನಂತರ ಸುಮಿತ್ರೆಯೂ ಇದೇ ರೀತಿಯಲ್ಲಿ ಎಲ್ಲರೊಡನೆಯೂ ಪ್ರೀತಿಯಿಂದ ಸಾಂತ್ವನದ ಮಾತುಗಳನ್ನಾಡಿದಳು. ಕೈಕೇಯಿಯೂ ಅಕ್ಕನ ಹಿಂದೆ ಒಬ್ಬಳೇ ನಿಂತುಕೊಂಡು ಕೈಮುಗಿದುಕೊಂಡು ಕಣ್ಣೀರನ್ನು ಸುರಿಸುತ್ತ, "ನಿನ್ನಂತಹ ಸರ್ವಪ್ರಿಯನ ಏಳಿಗೆಗೆ ಭಂಗ ತಂದ ಉಭಯಕುಲಪಾತಕಿಯಾದ ನನ್ನನ್ನು ಕ್ಷಮಿಸು. ಪರಬ್ರಹ್ಮನೇ ಆದ ನೀನು ಪಾವನಪರಾತ್ಪರ, ಮನುಷ್ಯರನ್ನು ಪರೀಕ್ಷಿಸಲೆಂದು ನಿನ್ನ ಮಾಯಿಯಿಂದ ಹಲವಾರು ರೂಪಗಳನ್ನು ಧರಿಸಿ ನಾನಾ ಪರಿಯಿಂದ ಮೋಹಗೊಳಿಸುತ್ತ ಪರವಶಗೊಳಿಸುತ್ತೀಯೆ. ಅದರಿಂದಾಗಿಯೇ ನನಗೆ ಪಾತಕಬುದ್ಧಿ ಉದಯಿಸಿತು. ನನ್ನಿಂದ ಆದ ಲೋಕವಿಘ್ನಕರವಾದ ಕಾರ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಕರುಣಾಳು ಎಂಬ ಬಿರುದಿಗನುಗುಣವಾದ ನಿನ್ನಿಂದಾಗಿ ನನಗಿಂದು ವಿವೇಕವುಂಟಾಗಿದೆ. ನೀನು ಮಹಾಪುರುಷ ಎಂಬುದನ್ನು ಅರ್ಥಮಾಡಿಕೊಂಡೇ ನಾನೂ ಬಂದೆ. ನನ್ನ ಕೆಟ್ಟ ಕಾರ್ಯಗಳಿಗಾಗಿ ನೊಂದೆ. ನಿನ್ನನ್ನು ಮೊರೆವೊಕ್ಕೆ, ಕೃಪೆಯಿಂದ ಕಾಪಾಡು" ಎಂದು ಸ್ತುತಿಸಿದಳು. ರಘುನಾಥನು ನಸುನಗುತ್ತ



ರಾಮನ ಪಾದುಕೆಯನ್ನು ಭರತನು ತನ್ನ ತಲೆಯ ಮೇಲಿರಿಸಿಕೊಂಡ ಪ್ರಸಂಗ

ತಾಯಿಗೆ ಹೀಗೆಂದ: "ತಾಯಿ, ನೀನು ಹೇಳಿದ್ದು ಸುಳ್ಳಲ್ಲ, ಮಾಯೆಯು ನನ್ನ ಅಧೀನವೇ. ನನ್ನ ಬಲದಿಂದ ಸ್ತ್ರೀಯಾಗಿ ಮೋಹಗೊಳಿಸುವುದು ಸತ್ಯವೇ: ನನ್ನ ಪ್ರೇರಣೆಯಿಂದಲೇ ದೇವತೆಗಳ ಮಾತನ್ನು ನೆರವೇರಿಸುವುದಕ್ಕಾಗಿ ಸರಸ್ವತಿಯೇ ಉಪಾಯದಿಂದ ನಿನ್ನ ಮೂಲಕ ಹೇಳಿಸಿದ್ದಾಳೆ. ಇದರಿಂದ ಕಿಂಚಿತ್ತೂ ಅಪಾಯವಿಲ್ಲ, ಇವೆಲ್ಲ ನಡೆದದ್ದು ನನ್ನ ಒಪ್ಪಿಗೆಯಿಂದಲೇ. ನಾನು ಬೆಸನೀಯದೆ ಹುಲ್ಲುಕಡ್ಡಿಯಾದರೂ ಅಲುಗೀತೇ? ಅವು ಹಾಗೆ ಚಲಿಸಲು ಕಾರಣವೇನು, ನನ್ನ ಅಧೀನವಾದ ಪ್ರಕೃತಿಯು ಎಲ್ಲ ಪ್ರಾಣಿಗಳನ್ನೂ ಮಿಸುಕಾಡದ ರೀತಿಯಲ್ಲಿ ಬಂಧಿಸಿದ್ದಾಳೆ. ಕತ್ತಲೆಯಾಗಿದ್ದರೂ ಆಕಾಶವು ಕಾಣಿಸುವಂತೆ ನಾನು ಎಲ್ಲದರಲ್ಲಿಯೂ ಇದ್ದೂ ಅವುಗಳಲ್ಲಿ ಸಿಲುಕದ ಹಾಗೆ ಸಮದೃಷ್ಟಿಯಿಂದ ನನ್ನನ್ನು ಭಜಿಸುವವರನ್ನು ಭಜಿಸುವೆನೇ ಹೊರತು ಬೇರಲ್ಲ. ವೇದಗಳು ಹುಡುಕಿಯೂ ನನ್ನನ್ನು ಕಾಣವು, ಬ್ರಹ್ಮನೇ ಮೊದಲಾದ ದೇವತೆಗಳು ನನ್ನ ಸ್ವರೂಪವನ್ನು ತಿಳಿದವರಲ್ಲ, ನನ್ನಲ್ಲಿ ಅನನ್ಯ ಭಕ್ತಿಯನ್ನು ಹೊಂದಿರುವುದರಿಂದ ಅವರನ್ನು ಕಾಪಾಡುತ್ತೇನೆಯೇ ಹೊರತು ಮಿಕ್ಕಂತೆ ಯೋಗಯಾಗಗಳ ಬಲೆಯಲ್ಲಿ ಸಿಕ್ಕಿಕೊಳ್ಳುವುದಿಲ್ಲ. ಇದನ್ನೆಲ್ಲ ಮರೆಮಾಚಿ ರಾಮನನ್ನು ಸುಖದುಃಖಗಳಿಂದ ಕೂಡಿದವನೆಂದು ತಿಳಿದವನಿಗೆ ತತ್ವವು ಗೋಚರವಾಗುವುದಿಲ್ಲ; ಅದು ಹುಟ್ಟಿದ ಕ್ಷಣವೇ ನಿರ್ವಾಣಪದವಿ ದೊರೆಯುತ್ತದೆ. ವಿಷಯಗಳಿಗೆ ಅಂಟಿಕೊಳ್ಳದೆ ಹೃದಯಮಂದಿರದ ನಡುವೆ ನನ್ನ ಮೂರ್ತಿಯನ್ನು ಇಟ್ಟುಕೊಂಡು ನೋಡುತ್ತಿರುವ ಅಭ್ಯಾಸವನ್ನು ಮಾಡಿಕೊಂಡರೆ ಪಾತಕತತಿಗಳೆಲ್ಲ ನಾಶವಾಗಿ ನಿಜವು ಬೆಳಗಿ ಆನಂದವುಂಟಾಗುತ್ತದೆ. ಇದನ್ನು ತಿಳಿದವರಿಗೆ ಎಂದಿಗೂ ಭವಬಂಧದ ಹೆಸರೂ ಇಲ್ಲದಂತಾಗುತ್ತದೆ" ಎಂದು ತತ್ವಾರ್ಥವನ್ನು ಬೋಧಿಸಿದಾಗ, ಕೈಕೇಯಿಯು ಅವನ ಪದವನಜಗಳಿಗೆ ಅಭಿನಮಿಸಿ ಮತ್ತೆ ಪ್ರಾರ್ಥನೆ ಮಾಡಿ ಆನಂದಭರಿತಳಾಗಿ ಭರತನ ಬಳಿಗೆ ಬಂದಳು.

ವಸಿಷ್ಠ ಹಾಗೂ ಜಾಬಾಲಿಗಳೇ ಮುಖ್ಯರಾದ ಮುನಿಗಳು ಆ ಅಖಂಡನಿಧಿಯನ್ನು ಕಂಡು ಬೀಳ್ಕೊಂಡು ಮಿಕ್ಕವರಿದ್ದ ಜಾಗಕ್ಕೆ ಬರಲು, ಇದನ್ನರಿತ ಜನಸಮೂಹವು ಅವರೆಡೆಗೆ ಧಾವಿಸಿ ಬಂದಿತು. ಸೇರಿದ್ದ ಪ್ರಜೆಗಳು ಹಾಗೂ ಮಂತ್ರಿಗಳ ಒಪ್ಪಿಗೆ ಪಡೆದ ಭರತನು ಪಾದುಕೆಗಳನ್ನು ತಲೆಯ ಮೇಲಿರಿಸಿಕೊಂಡು ಹರುಷದಿಂದ ಓಲಾಡುತ್ತ ಮಣಿರಥದ ಬಳಿಗೆ ಬಂದ. ತಕ್ಷಣವೇ ರಥದಲ್ಲಿನ ಸಿಂಹಾಸನದ ಮೇಲೆ ಪಾದುಕೆಗಳನ್ನಿರಿಸಿ ನಮಸ್ಕಾರಗೈದು ಮತ್ತೆ ಎಲ್ಲರ ಬಳಿಗೆ ಬಂದು ರಾಜರ ಕುಲಧರ್ಮವನ್ನು ಮೀರದೆ ಕೈಯಲ್ಲಿ ಕತ್ತಿಯನ್ನು ಹಿಡಿದು ನಮಸ್ಕರಿಸಿದ. ಸಾಮಂತರಿಂದಲೂ, ಎಲ್ಲ ಕಾರ್ಯಗಳನ್ನು ಅರಿತ ಧೀಮಂತರಿಂದಲೂ ಪುರಜನ–ಪರಿಜನರಿಂದಲೂ ಶ್ರೀರಾಮನ ಪಾದುಕೆಗಳಿಗೆ ನಮಸ್ಕಾರವನ್ನು ಮಾಡಿಸಿ, ಕುದುರೆಯನ್ನೇರಿ ತೇರಿನ ಪಕ್ಕದಲ್ಲಿಯೇ ಭರತನು ಬರುತ್ತಿರಲು. ಮಿಕ್ಕವರೂ ತಮ್ಮ ತಮ್ಮ ಆನೆ ಕುದುರೆ ರಥಗಳನ್ನೇರಿ ಬಂದರು. ವಿವಿಧ ಕಾಡುಪ್ರದೇಶಗಳನ್ನು ದಾಟಿ, ಅನೇಕ ಪರ್ವತಗಳನ್ನು ಏರಿ ಇಳಿದು, ಪ್ರಯಾಗಕ್ಕೆ ಬಂದು ಭರದ್ವಾಜಮುನಿಯ ಆಶ್ರಮದ ಬಳಿ ಬಂದು ಆ ಮುನಿವರ್ಯನಿಗೆ ಭಯಭಕ್ತಿಯಿಂದ ಅಭಿನಮಿಸಿ, ನಡೆದುದೆಲ್ಲವನ್ನೂ ಅವನಿಗೆ ವಿವರಿಸಿದ. ಅದನ್ನು ಕೇಳಿದ ಮುನಿಪೋತ್ತಮನು ಆನಂದದಿಂದ ತುಂಬಿ ತುಳುಕುತ್ತ

ಸೂರ್ಯಕುಲೋತ್ತಮನ ಬಲ್ಲಿ ನಸುನಗುತ್ತ, "ವಿಮಲಮತಿಯೇ, ಕೃತಯುಗದ ಯಾವ ರಾಜನೂ ನಿನ್ನ ಶ್ರೇಷ್ಠ ನಡವಳಿಕೆಗೆ ಸಮನಾಗಲಾರ. ದೇವತೆಗಳೂ ಮಹರ್ಷಿಗಣವೂ ತ್ರಿಮೂರ್ತಿಗಳೂ ಇದರಿಂದ ಹರ್ಷಿತರಾಗಿದ್ದಾರೆ. ಈ ಅಮರಗಂಗೆಯು ನಿನಗೆ ಅಮಿತ ಶ್ರೇಯಸ್ಸನ್ನಿತ್ತು ಕಾಪಾಡಲಿ" ಎಂದು ಆಶೀರ್ವದಿಸಿದ. ಆನಂತರ ತನ್ನ ಸೈನ್ಯಸಮೇತವಾಗಿ ಮುನಿವರ್ಯನಿಗೆ ನಮಸ್ಕರಿಸಿ ಅವರಿಂದ ಬೀಳ್ಕೊಂಡು ಮುನ್ನಡೆದ.

ಭರತನಾದಿಯಾಗಿ ಎಲ್ಲರೂ ವೇಗವಾಗಿ ಅಯೋಧ್ಯಾಪುರಕ್ಕಭಿಮುಖವಾಗಿ ಸಾಗುತ್ತ ಗಂಗಾನದಿಯನ್ನು ದಾಟಿ ಶೃಂಗಿವೇರಪುರಕ್ಕೆ ಬಂದು, ಅಲ್ಲಿ ಗುಹನನ್ನು ಸತ್ಕರಿಸಿ, ಅವನಿಂದ ಬೀಳ್ಕೊಂಡು ಮುಂದುವರಿದರು. ವೈಭವರಹಿತವಾದ ರಾಜನಂತೆಯೂ, ಮಂಜಿನಿಂದ ಆವೃತವಾಗಿರುವಂತೆಯೂ ಕಾಣಿಸದಾದ ಅಯೋಧ್ಯೆಯನ್ನು ಅಲ್ಲಿನ ಮರಗಳ ಗುರುತು ಹಿಡಿದು ಸೂತನೊಡನೆ ಹೀಗೆಂದ: "ಸೂರ್ಯನು ನೋಡದ ತಾವರೆಯೋ, ಚಂದ್ರಕಿರಣಗಳು ಬೀಳದ ನೈದಿಲೆಯೋ ಎನ್ನುವಂತೆ ದಟ್ಟವಾದ ಮಂಜಿನಿಂದ ಆವೃತವಾಗಿ ನಮ್ಮ ನಗರವಿದೆ. ಹೆಂಗೆಳೆಯರು ಆಟವಾಡುವ ಜಾಗ, ಯುವಜನಾಂಗವು ವಿಲಾಸದಿಂದ ವಿಹರಿಸುವ ತಾಣ, ಕುದುರೆಗಳ ಹೇಷಾರವದಿಂದ ಕೂಡಿರುವ ಬೀದಿಗಳು – ಎಲ್ಲವೂ ಕಾಂತಿಹೀನವಾಗಿ ಕಾಣುತ್ತಿದೆಯಲ್ಲ! ರತ್ನಪಡಿಯ ಅಂಗಡಿಗಳಲ್ಲಿ ಹೊಳಪಿಲ್ಲ, ಸುಗಂಧದ ಅಂಗಡಿಗಳಲ್ಲಿ ಪರಿಮಳವಿಲ್ಲ, ಉನ್ನತವಾದ ಸೌಧಗಳು ಯಾವುದೇ ಅಲಂಕಾರವಿಲ್ಲದೆ ಮಂಕುವಡೆದಿವೆ, ವಂದಿಮಾಗಧರ ದನಿಯೂ ಕೇಳುತ್ತಿಲ್ಲ, ದೇವಾಲಯಗಳಲ್ಲಿ ಶ್ರುತಿಮಧುರವಾದ ನಾದ ಕೇಳಿಸುತ್ತಿಲ್ಲ. ಖಿನ್ನತೆಯ ರಾಜನು ನಗರವನ್ನು ಆಳುವ ಹಾಗೆ ಕಾಣುತ್ತಿದೆ! ದೇವಾಲಯಗಳಲ್ಲಿ ವಾದಿಸುವ ಶಾಸ್ತ್ರಪಂಡಿತರಾಗಲೀ, ತಾರ್ಕಿಕರಾಗಲೀ, ನಿಗಮಾಗಮಗಳ ವ್ಯಾಖ್ಯಾನ ಮಾಡುವ, ಅವುಗಳ ಕ್ರಿಯಾಸೂತ್ರವನ್ನು ವಿವರಿಸುವ ಪಂಡಿತರೇ ಇಲ್ಲವಲ್ಲ. ಶಸ್ತ್ರಾಸ್ತ್ರದ ಅಭ್ಯಾಸ ತಾಣಗಳಲ್ಲಿ ಜನರೇ ಕಾಣುತ್ತಿಲ್ಲ, ಆನೆ ಕುದುರೆಗಳ ಸವಾರರೂ ಕಣ್ಣಿಗೆ ಬೀಳುತ್ತಿಲ್ಲ. ಹೀಗೆ ಎಲ್ಲ ಕಡೆಯೂ ನಿಶ್ಶಬ್ದವಾವರಿಸಿ ಅಲೆಗಳಿಲ್ಲದ ಸಮುದ್ರದಂತೆ ಪಟ್ಟಣವು ತೋರುತ್ತಿದೆ. ಒಂದು ಕಡೆಯ ಅಲಂಕರಣಗೊಂಡ ಭದ್ರಗಜಗಳೆಲ್ಲಿ, ಮತ್ತೊಂದೆಡೆಯ ಶೃಂಗಾರಗೊಂಡ ಕುದುರೆಗಳ ಸಮೂಹವೆಲ್ಲಿ, ಮತ್ತೂ ಒಂದೆಡೆಯ ರತ್ನಮಯವಾದ ಹೊಂದೇರ ಸಮೂಹವೆಲ್ಲಿ, ಮಣಿಖಚಿತ ಸೈನ್ಯವೆಲ್ಲಿ, ಒಂದು ಕಡೆಯಲ್ಲಿನ ನಾನಾ ವಾಹನಗಳಲ್ಲಿ ಬಂದು ಅರಮನೆಯ ಕಡೆಗೆ ಸಾಗುತ್ತಿದ್ದ ಮಕುಟವರ್ಧನರೆಲ್ಲಿ, ಸೂತನೇ ಆ ವೈಭವವೆಲ್ಲ ಎಲ್ಲಿ ಹೋದುವು? ರಾಜನು ಬರಲು ತರುಣಿಯರೆಲ್ಲ ಕರುಮಾಡದ ಮೇಲೇರಿ ಸಂತಸದಿಂದ ಬತ್ತದರಳನ್ನು ಚೆಲ್ಲುವ ದೃಶ್ಯವಾಗಲೀ, ನಾನಾ ಬಗೆಯ ಫಲಗಳುಂಟಾಗಲೆಂದು ಮಂತ್ರಾಕ್ಷತೆಗಳನ್ನು ಹಾಕುವ ವಿಪ್ರಜನಸಂದಣಿಗಳು, ಕೈಗಳನ್ನೆತ್ತಿ ಬಿರುದುಗಳನ್ನು ಉಗ್ಗಡಿಸುವ ಪಾಠಕರು – ಯಾರೂ ಕಾಣುತ್ತಿಲ್ಲವಲ್ಲ" ಎಂದು ಮರುಗುತ್ತ ತಲೆಯ ಮೇಲೆ ಪಾದುಕೆಗಳನ್ನಿರಿಸಿಕೊಂಡು ಅರಮನೆಯನ್ನು ಹೊಕ್ಕ. ಆನಂತರ ತಾಯಂದಿರನ್ನು ಮೃದುನುಡಿಗಳಿಂದ ಉಪಚರಿಸುತ್ತ ರಘುಜಾತನು ರಾಜಾಸ್ಥಾನಕ್ಕೆ ಬಂದು ಪಾದುಕೆಗಳನ್ನಿಟ್ಟು, ಸಂತೋಷದಿಂದ ನೆರೆದ ಅಮಾತ್ಯರನ್ನೂ

ಗುರುಗಳನ್ನೂ ಕುರಿತು ಈ ರೀತಿ ಹೇಳಿದ: "ಸೀತಾರಮಣನಿದ್ದಿದ್ದರೆ ಈ ರಾಜಧಾನಿಯಲ್ಲಿ ನಾನೂ ಸಂತೋಷದಿಂದಿರಬಹುದಾಗಿತ್ತು. ಅವನಿಲ್ಲದ ಈ ಊರಿನಲ್ಲಿ ನಾನಿರುವುದು ಸಲ್ಲದು, ಇದು ಸಾಧುಸಮ್ಮತವಲ್ಲ" ಎಂದು ಹೇಳಿ, ನಡೆದ ವೃತ್ತಾಂತವನ್ನೆಲ್ಲ ಬಿನ್ನಪಿಸಿ ಶ್ರೀರಾಮನ ಚರಣಸೇವೆಯಲ್ಲಿರಲು ಇರುಳು ಹಗಲೆಂಬ ಭೇದವಿಲ್ಲದೆ ನಿರಾಹಾರದಿಂದ ಪಾದದಪ್ಪಣೆಯಂತೆ ಸ್ವಾಮಿಕಾರ್ಯವನ್ನೆಸಗಲು ಸರಯೂ ನದಿಯ ತೀರದಲ್ಲಿರುವ ನಂದಿಗ್ರಾಮದ ಬಳಿ ಪಾದುಕೆಗಳನ್ನಿಟ್ಟು ಪೂಜಿಸಿದರೆ ತನ್ನ ಮನಸ್ಸಿಗೆ ಸಂತಸವಾಗುತ್ತದೆ ಎಂದು ಅಲ್ಲಿಗೆ ನಡೆದ. ಭರತನ ಭಕುತಿ-ಆನಂದಗಳ ಅವಿನಾಭಾವವನ್ನು ನೋಡುತ್ತ ಋಷಿಗಣ ವಿಪ್ರವೃಂದವು ನಾನಾ ಬಗೆಯಲ್ಲಿ ಹೊಗಳಿತು, ದೇವತತಿಯು ಅಮೃತವನ್ನು ಕುಡಿದ ಹಾಗೆ ಆನಂದಿಸಿತು, ನಾರದಾದಿಗಳು ಸಂತಸದಿಂದ ಭರತನ ಸಚ್ಚರಿತೆಯನ್ನು ಕುರಿತು ಹಾಡಿದರು. ಹಾವುಗೆಗಳನ್ನು ಅಲಂಕರಿಸಿ ಶತ್ರುಘ್ನನೊಡನೆ ಹರುಷದಿಂದ ಅತ್ಯಂತ ವೇಗದಿಂದ ನಂದಿಗ್ರಾಮದೆಡೆಗೆ ನಡೆದ. ರಾಜನು ಹೋದನೆಂದು ಗುರು ವಸಿಷ್ಠನೇ ಮುಂತಾದ ಪರಮಾಪ್ತರೂ ಹೋಗಿ ಅವನ ಜೊತೆಗೆ ನಿಲ್ಲಲು, ದೇವೇಂದ್ರನ ಎಡಬಲಗಳಲ್ಲಿ ನಿಂತ ಬೃಹಸ್ಪತಿಯೇ ಮೊದಲಾದ ಋಷಿಗಳಂತೆ ಕಂಡರು.

ಸಾಧುಜನರ ಒಪ್ಪಿಗೆ ಪಡೆದು ಅಲ್ಲೊಂದು ಅರಮನೆಯನ್ನು ನಿರ್ಮಿಸಿ, ಸಂತೋಷಭರಿತನಾಗಿ ಸಿಂಹಾಸನದಲ್ಲಿ ಹಾವುಗೆಳನ್ನಿಟ್ಟು, ಭಕ್ತಿಗೌರವಗಳಿಂದ ಅದಕ್ಕೆ ಪಟ್ಟಾಭಿಷೇಕವನ್ನು ಮಾಡಿ, ತಾನು ಅವುಗಳ ಮುಂದೆ ದಂಡವನ್ನು ಹಿಡಿದುಕೊಂಡು "ಶ್ರೀಭವ, ಸುರೇಶ, ಜೀಯ, ಅವಧಾರು, ಮೇದಿನಿಯರಸ ದಯೆಗೈವುದು" ಎಂದು ಅವನ ಪರವಾಗಿ ಆಧಿಪತ್ಯವನ್ನು ವಹಿಸಿಕೊಂಡು ಭರತನು ಭಕ್ತಿಯಿಂದ ಓಲಗಗೊಡುತ್ತಲಿದ್ದ. ಯಾವ ಕೆಲಸವನ್ನೇ ಮಾಡಲಿ ಅದನ್ನು ಪಾದುಕೆಗಳಿಗೆ ನಿವೇದಿಸುತ್ತ, ಏನನ್ನೇ ಮಾಡಲಿ ಪಾದಗಳ ಅಪ್ಪಣೆಯೆಂದು ತಿಳಿದು, ತಾನು ಕೊಡುವ ಆದೇಶಗಳಲ್ಲಿ ಪ್ರಾಜ್ಞರು ಹೊಗಳುವಂತೆ ಶ್ರೀರಾಮನ ಹೆಸರನ್ನು ನೀಡಿ, ನಳ ನಹುಷ ದಿಲೀಪರಿಗೂ ಮಿಗಿಲೆನಿಸಿ ವಸುಧೆಯನ್ನು ಪಾಲಿಸುತ್ತ ತಾನು ಸೇವಕಭಾವದಿಂದಿದ್ದ ಭರತನ ಸಾಧುಚರಿತೆಯನ್ನು ವರ್ಣಿಸಲು ಶಬ್ದಗಳೇ ಇಲ್ಲ. ಸಿರಿಗಾಗಿ ಹಾರೈಸದೆ, ಹಗಲಿರುಳು ಭಕ್ತಿಯಿಂದ ತನುಮನಧನಗಳನ್ನು ಅರ್ಪಣೆಗೈದು ವೀರವ್ರತವನ್ನು ಹಿಡಿದು ನಾರುಬಟ್ಟೆಯನ್ನುಟ್ಟು ಸೊಪ್ಪುಪತ್ರೆಗಳನ್ನೇ ಆಹಾರವಾಗಿ ಸೇವಿಸುತ್ತ, ಕಾರಣಾತ್ಮಕನಾದ ಶ್ರೀರಾಮನ ಅಡಿದಾವರೆಗಳನ್ನು ತನ್ನ ಎದೆಯಲ್ಲಿರಿಸಿಕೊಂಡು ಸಂತಸಭರಿತನಾಗಿ ಭರತನು ರಘುಭಗೀರಥರಿಗೂ ಅಧಿಕತರವಾಗಿ ರಾಜ್ಯವನ್ನಾಳಿದ. ಹಗಲು ರಾತ್ರಿಗಳಲ್ಲಿ ಸತ್ಕಥೆಗಳನ್ನು ಕೇಳುತ್ತ, ಶ್ರೀರಾಮನ ಪಾದಗಳನ್ನು ಕೀರ್ತಿಸುತ್ತ, ಅವನ ಧ್ಯಾನಸಮಾಧಿಗಳಿಂದ ರಾಮಾತ್ಮನೆನ್ನಿಸಿಕೊಂಡು, ಒಂದಿಷ್ಟೂ ಬೇಸರಗೊಳ್ಳದೆ ರಾಮಪುರದರಸ ಮತ್ತೆ ಬರುವುದನ್ನು ನಿರೀಕ್ಷಿಸುತ್ತಿದ್ದ ಭರತನ ಪಾವನ ಚರಿತೆಯನ್ನು ಹೊಗಳಲು, ಅಗಜೆಯೇ, ಫಣಿಪತಿಗೂ ಅಸಾಧ್ಯ.

೩೫. ಶ್ರೀರಾಮನು ಲಕ್ಷ್ಮಣನಿಗೆ ಪರಮತತ್ವವನ್ನು ಬೋಧಿಸಿದುದು

ಹೈಮವತಿ ಕೇಳು, ಭರತನು ತನ್ನ ನಗರಕ್ಕೆ ಹೋಗಲು ಅವನ ಬಗೆಗಿನ ಪ್ರೇಮಾನುರಾಗಗಳಿಂದ ಲಕ್ಷ್ಮಣನು ಅವನ ಸದ್ಗುಣಗಳನ್ನು ನೆನೆಸಿಕೊಂಡು ತೊಳಲುತ್ತಿರಬೇಕಾದರೆ, ಅದನ್ನು ಕಂಡ ಶ್ರೀರಾಮನು ಅವನನ್ನು ಕರೆದು ಪ್ರೀತಿಯಿಂದ, "ಬಾ, ನಿನ್ನ ಮನಸ್ಸಿನ ಬೇಗುದಿ ಭ್ರಮೆಯನ್ನುಂಟುಮಾಡುವಂಥದು, ಇದು ಬಯಲ ಮಾಯಾವರಣ; ಇದರ ಒಳಹೊಕ್ಕು ನೋಡಿದರೆ ಕ್ಲೇಶ ಉಳಿಯುವುದಿಲ್ಲ" ಎಂದು ಹೇಳಿದ. ಆಗ ಸೌಮಿತ್ರಿಯು ರಾಮನ ಚರಣಗಳಿಗೆ ನಮಸ್ಕರಿಸಿ, "ದೇವಾ, ಮನೆ ಐಶ್ವರ್ಯಗಳ ಗುಂಗು ಹೋಗಿ ನಾನು ಆನಂದದಿಂದ ಇದ್ದೇನೆ. ಹುಟ್ಟುಸಾವುಗಳ ಆಟದ ಕೋಟಲೆ ಹಾಗೂ ಅನುರಾಗವು ಹೋಗುವ ಬಗೆ ಹೇಗೆ, ಅದನ್ನು ವಿಶದವಾಗಿ ತಿಳಿಸಿ ಕೃತಕೃತ್ಯನನ್ನಾಗಿಸು" ಎಂದು ಬಿನ್ನವಿಸಿಕೊಂಡ. ಆಗ ರಘುವರನು, "ಹಾಗಾದರೆ ಕೇಳು, ನಿತ್ಯನೂ ನಿರಾಮಯನೂ ನಿಜಾನಂದನೂ ಆದ ಚಿದ್ರೂಪನು ಯೋಗಮಾಯೆಯನ್ನು ಸೃಷ್ಟಿಸಿ ಆದನ್ನು ನಚ್ಚಿ ಮೆಚ್ಚಿ ಈಶ್ವರನೆನಿಸಿ ಲೀಲಾವಿಲಾಸದಿಂದ ಭೂಮಿಯಲ್ಲಿ ನಾನಾ ರೂಪಗಳನ್ನು ನೀಡುತ್ತ, ಅವಕ್ಕೆ ನಾನಾ ಬಗೆಯ ವಿಕೃತಿಗಳನ್ನಿತ್ತು ತಿಳಿವಳಿಕೆಯಿಲ್ಲದೆ ಪಾಪ ಧರ್ಮಗಳ ಲೇಪನಕ್ಕೆ ಒಳಗುಮಾಡುತ್ತಾನೆ. ಪುಣ್ಯಪಾಪಗಳನ್ನು ಮಾಡಿದ ಕಾರಣದಿಂದ ಪರಲೋಕದ ಅತಿಶಯವಾದ ಸುಖಸಂಕಷ್ಟಗಳನ್ನುಂಡು, ಲೋಕದ ಸ್ಥಿತಿಯಿಂದ ದೂರವಾಗಿ ಆಕಾಶಮಾರ್ಗದಲ್ಲಿ ಬಂದು ಮತ್ತೆಯೂ ಭ್ರಮಾಮಂಡಲವನ್ನು ಆಶ್ರಯಿಸುತ್ತಾನೆ. ಮಳೆಯ ಹನಿಗಳ ಜೊತೆಗೆ ಇಳೆಗಿಳಿದು ಸಸ್ಯಾದಿಗಳಲ್ಲಿ ಸೇರಿಕೊಂಡು ಧಾನ್ಯಗಳ ಮೂಲಕ ಜೀವಸಮೂಹಕ್ಕೆ ಅನುರಾಗವನ್ನು ಬೀರುತ್ತ ಶುಕ್ಲಮಯನಾಗಿ ಹೊಟ್ಟೆಯಲ್ಲಿರುತ್ತಾನೆ. ಋತುಸಮಯದಲ್ಲಿ ಸ್ತ್ರೀಪುರುಷರ ಕೂಟದಿಂದ ಯೋನಿಯಿಂದ ಬೀಳುವ ಶುಕ್ಲಶೋಣಿತಗಳೊಡನೆ ಸೇರಿ ಯಾವುದೇ ಯತ್ನವಿಲ್ಲದೆ ಮೊದಲನೆಯ ದಿನ ಗುಳ್ಳೆಯ ಹಾಗೆ ತೋರಿ, ಏಳನೆಯ ದಿನಕ್ಕೆ ಗೋಲಾಕೃತಿಯನ್ನು ತಾಳಿ, ಒಳಗೇ ದ್ರವದ ಅಳ್ಳೆಯಲ್ಲಿ ಬೆಳೆಯುತ್ತ ಅರುವತ್ತನೆಯ ದಿನಕ್ಕೆ ಬೆರಳುಗಳು ತೊಡೆ ಭುಜಗಳಿಂದ ಕೂಡಿದ ಆಕಾರವನ್ನು ಪಡೆಯುತ್ತಾನೆ. ಕೈಕಾಲುಗಳೇ ಮುಂತಾದ ವಿವಿಧ ಅಂಗಗಳು, ಮೂಗು ಕಿವಿ ಕಣ್ಣುಗಳು, ಗುದ ಗುಹ್ಯಗಳ ಆಕಾರವನ್ನು ಹೊಂದಿದ ದೇಹವು ತೊಂಬತ್ತು ದಿನಕ್ಕೆ ರೂಪುಗೊಳ್ಳುತ್ತದೆ. ನಾಲ್ಕು ತಿಂಗಳಲ್ಲಿ ಇಂದ್ರಿಯಗಳು ಮುಖ ಮಲಮೂತ್ರ ದ್ವಾರಗಳು ಮುಂತಾದವು ತೋರಿ, ಜಠರಾಗ್ನಿಯಿಂದ ಬೆಳೆಯತೊಡಗುತ್ತದೆ. ಈ ಗರ್ಭಸ್ಥವಾದ ಪಿಂಡದಲ್ಲಿ ಕೈಬೆರಳುಗಳು ಸೊಂಟ ಹಣೆ ಗಲ್ಲ ಎದೆ ಹೊಟ್ಟೆ ಭುಜ ಮುಂತಾದವು ಐದನೆಯ ತಿಂಗಳಲ್ಲಿ ಸಂಘಟಿತವಾಗುತ್ತವೆ. ಆರನೆಯ ತಿಂಗಳಲ್ಲಿ ಕೀಲುಗಳು ಕೂದಲು ಉಗುರುಗಳನ್ನೂ ಜಠರಪ್ರದೇಶವನ್ನೂ ಪಡೆಯುತ್ತದೆ. ವಿವಿಧ ಧಾತುಗಳು, ನವಚಕ್ರಗಳಲ್ಲಿರುವ ತಾಣ, ಅವುಗಳನ್ನು ಸೇರಿಸುವ ನರಗಳು ಬೆಳೆದು ಸ್ಪಷ್ಟ ಆಕಾರದ ಅಂಗೋಪಾಂಗಗಳಿಂದ ಕೂಡಿದ ಶಿಶುವು ಗರ್ಭದಲ್ಲಿಯೇ ಹೊರಳುತ್ತದೆ. ತಾಯಿಯು ಸೇವಿಸುವ ಆಹಾರವು ಅವಳ ಹೊಕ್ಕುಳನಾಳದ ಮೂಲಕ ಒಳಹೊಗಲು, ಅದರ ಆಸರೆಯಿಂದ ಏಳನೆಯ ತಿಂಗಳಲ್ಲಿ ಬೆಳೆದು ತೋರುತ್ತದೆ. ಗುದ ಮಣ್ಣು, ತಲೆ ನೀರು,

ಹೊಕ್ಕುಳ ಕುಳಿಯು ಬೆಂಕಿ, ಶ್ವಾಸಕೋಶ ಗಾಳಿ, ಹೃದಯವು ಆಕಾಶ – ಹೀಗಾಗಿ ಗಾಳಿಯು ಹೃದಯಪ್ರದೇಶದಲ್ಲಿ ಆಹಾರವನ್ನು ಗಟ್ಟಿಗೊಳಿಸಿ ಜಠರಾಗ್ನಿಗೆ ಅನ್ನರಸವನ್ನು ನೀಡುತ್ತದೆ. ಸರ್ವಾಂಗಗಳಲ್ಲಿ ಕೀಲುಗಳ ಮೂಲಕ ನಾಳಗಳಲ್ಲಿ ರಕ್ತಮೂತ್ರಗಳು ಚಲಿಸತೊಡಗಲು ಶಿಶುವು ಎಂಟನೆಯ ತಿಂಗಳಲ್ಲಿ ಕೈಕಾಲುಗಳನ್ನಾಡಿಸಲು ತೊಡಗುತ್ತದೆ. ಹೇಸಿಕೆ ದುರ್ನಾತ ಕೀವು ರಕ್ತಗಳು ತುಂಬಿರಲು ಸುತ್ತಿ ಮುತ್ತಿ ಕಚ್ಚುವ ಕ್ರಿಮಿಕೀಟಗಳ ಸಂಕುಲವು ಆಯಾಸಗೊಳಿಸಲು ಒಮ್ಮೊಮ್ಮೆ ಚಲಿಸುತ್ತ ಈ ನರಕದ ಅನುಭವಕ್ಕೆ ಬೇಸತ್ತು ನಿರಾಶೆಯಿಂದ ಕೂಸು ಜನ್ಮಕರ್ಮಗಳನ್ನು ನೆನೆಸಿಕೊಳ್ಳುತ್ತ ಹಂಬಲಿಸುವ ಪರಿಯನ್ನು ಏನೆಂದು ಬಣ್ಣಿಸುವುದು! ಹರಿಹರರನ್ನು ನಿಂದಿಸುತ್ತ, ತನ್ನ ಹೆಂಡತಿಯನ್ನು ಬಿಟ್ಟು ಬೇರೆಯ ಸುಂದರಿಯರನ್ನು ಬಯಸಿ, ಸಜ್ಜನರನ್ನು ಹೀಯಾಳಿಸಿ, ಭೂಸುರರನ್ನು ದ್ವೇಷಿಸಿ, ಗುರುವನ್ನು ಮನುಷ್ಯಮಾತ್ರನೆಂದು ತಿಳಿದು, ದೈವಭಕ್ತರನ್ನು ತಿರಸ್ಕಾರಗೈದು, ಕಥಾಶ್ರವಣವನ್ನು ಹಳಿದ ಕಾರಣದಿಂದ ಈ ನರಕಸದೃಶ ಗರ್ಭಯಾತನೆಯುಂಟಾಯಿತು, ದೇವರೇ, ಹಾ ಎಂದು ದುಃಖಿಸುತ್ತದೆ. ಪರಮ ಕರುಣಾಸಮುದ್ರನಾದ ಹರಿಯು ನನ್ನ ಯಾತನೆಯನ್ನು ನೀಗಿಸಿ ನರಕಬಾಧೆಯಿಂದ ಬಿಡಿಸಿ ಜಗತ್ತನ್ನು ಕಾಣಿಸಿದರೆ, ಅನುದಿನವೂ ಭಕ್ತಿಯಿಂದ ಶುಭನಾಮಕೀರ್ತನೆಯನ್ನು ಮಾಡುತ್ತ, ಅವನ ಚರಣಸೇವೆಯನ್ನು ಗೈಯುತ್ತ, ಸಾಧುಜನರ ಜೊತೆ ಸೇರಿ, ಸತತ ಪೂಜಾದಿ ಅಮಿತ ಭಕ್ತಿಯಿಂದ ಮೆಚ್ಚಿಸುತ್ತ ಗರ್ಭದ ಅನುಭವವನ್ನು ಸ್ಮರಿಸುತ್ತ ನನ್ನ ಭವಬಂಧನವನ್ನು ಹರಿದುಕೊಳ್ಳುತ್ತೇನೆ ಎಂದು ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತದೆ. ಹೀಗೆ ಅನಂತ ರೀತಿಯಲ್ಲಿ ಪ್ರಲಾಪಿಸುತ್ತ ತನ್ನಲ್ಲಿನ ಅಂತರಾತ್ಮವನ್ನು ನೆನೆಯುತ್ತ ಅಳುತ್ತಿರಲು, ಅಷ್ಟರಲ್ಲಿ ಚಿಂತಾಯಕನು ನೇಮವನ್ನು ಅನುಸರಿಸಿ ಯೋನಿದ್ವಾರದಿಂದ ಬೇಗನೆ ಒಳಹೊಕ್ಕು ಮಾಸಿನಲ್ಲಿ ಸಿಕ್ಕಿಕೊಂಡಿರುವ ಶಿಶುವನ್ನು ಬರಸಿಡಿಲಂತೆ ಹೊಡೆದು ಭ್ರಮೆಯಿಂದೊಡಗೂಡುವಂತೆ ಮಾಡಿ ಅದರ ಮನಸ್ಸನ್ನು ಹರಿಯಾಜ್ಞೆಯಂತೆ ತಿರುಗಿಸುವ ಸಮೀರನ ಉರುಬೆಯನ್ನು ಏನೆಂದು ಹೇಳುವುದು! ಪೀಡನೆಯ ಬಲದಿಂದ ಮಹಾ ಯೋನಿಯಂತ್ರವನ್ನು ಭ್ರಾಮಕಗೊಳಿಸಿ ನರಕದಲ್ಲಿಳಿದು ಪ್ರಾರಬ್ಧಬಲದಿಂದ ಶಿಶುವನ್ನು ಭೂಮಿಗೆ ಹೊರದಬ್ಬುತ್ತದೆ. ವಿಷ್ಣುವಿನ ಮಾಯೆಯು ಕವಿಯಲು ಕೆಸರಲ್ಲಿ ಬಿದ್ದ ಮೀನಿನಂತೆ ಸ್ವಲ್ಪ ಹೊತ್ತು ಮೂರ್ಛೆಯಿಂದಿದ್ದು ಮೈಮರೆತು ಬಿದ್ದಿರುತ್ತದೆ. ರಜಸ್ಸು ಘನವಾದರೆ ಹೆಣ್ಣುಮಗು, ರೇತಸ್ಸು ಘನವಾದರೆ ಗಂಡುಮಗುವಾಗುತ್ತದೆ; ಎರಡೂ ಸಮವಾದರೆ ನಪುಂಸಕನು ಹುಟ್ಟುತ್ತಾನೆ. ತಂದೆತಾಯಿಯರ ಬಯಕೆಗನುಗುಣವಾಗಿ ಹಾಗೂ ತನ್ನ ಕರ್ಮಾನುಸಾರವಾಗಿ ಮಗುವು ಕುಳ್ಳ ಮೆಳ್ಳೆಗಣ್ಣ ಸಣಕಲ ಡುಮ್ಮರಾಗಿ ನಾನಾ ಯೋನಿಗಳಲ್ಲಿ ಹುಟ್ಟಿ ಹಲವು ವಿಧವಾದ ಸುಖದುಃಖಗಳನ್ನು ಅನುಭವಿಸುತ್ತದೆ.

"ಹೀಗೆ ಜೀವವು ಪರಿಪರಿಯ ಯೋನಿಗಳಲ್ಲಿ ಹುಟ್ಟಿ ನಾನಾ ಬಗೆಯ ಅನುಭವಗಳನ್ನುಂಡು ದಣಿವಿಲ್ಲದೆ ತಾನು ಮಾಡಿದ ಅಕೃತ್ಯಗಳನ್ನು ಮರೆತು ನರಕಯಾತನೆಯನ್ನು ಅನುಭವಿಸಿದ್ದನ್ನು ನೆನೆಸಿಕೊಳ್ಳದೆ ಮರುಳುತನದಿಂದ ಮತ್ತಷ್ಟು ಭೋಗಗಳನ್ನು ಬಯಸುತ್ತ ಕುರಿಗಳ ರೀತಿಯಲ್ಲಿ – ರೇಸಿಮೆ ಹುಳುವಿನಂತೆ

ಸಿಲುಕಿಕೊಂಡು - ನರಳುವಂತೆ ಮಾಡುವ ವಿಷ್ಣುಮಾಯೆಯ ಮಹಿಮೆಯನ್ನು ಎಂತಹುದೆಂದು ಹೇಳಲಾರೆ! ಹಗೆಯ ಮಂದಿರದ ಮಾಟ, ಮಾರಿಯಿರುವ ಮನೆಯಲ್ಲಿನ ನಲಿದಾಟ, ಕೋತಿಗಳ ಕಾಟ, ಹೆಂಡಕುಡುಕರ ವಿಟರ ಓಡಾಟ, ಜಗಳಗಂಟನ ಕೂಟ, ಮರೀಚಿಕೆಯ ನೋಟ, ಹಾದರಿಗೆ ಬೇಟ, ದುಷ್ಟರ ನುಡಿಗಳಿಂದ ಕೂಡಿದ ಹಗರಣದಂತಹ ಸಂಸಾರಸುಖವು ಬೀದಿಯಲ್ಲಿಟ್ಟ ಸೊಡರು! ಮರೀಚಿಕೆಯ ಸಿರಿ, ಬೀಸುವ ಗಾಳಿಯ ಪರಿ, ಹೊಳೆಯು ಮಿಂಚುಗಳ ಒನಪು, ಮೋಡಗಳ ವೈಖರಿ, ಭೋಗದ ಗುಂಪು, ಇಂದ್ರಜಾಲದ ಇಂಪು, ಬೈಗುಳದ ಸೊಂಪು - ಇವುಗಳನ್ನು ನಿಜವೆಂದು ನೆಚ್ಚಿ, ನೀಚಸುಖಗಳನ್ನು ಮೆಚ್ಚಿ, ಮರುಳುಬುದ್ಧಿಯನ್ನು ನಂಬಿ ಸಂಸಾರವೆಂಬ ಕಾಡನ್ನು ದಾಟುವ ಪರಿಯನ್ನರಿಯದೆ ಮರುಗುತ್ತ ಹಲ್ಲುಗಳನ್ನು ಕಚ್ಚಿ ನರಳುವುದು! ಬಿಳಿಯ ಕಲ್ಲಿನ ಪುಡಿಯನ್ನು ಮೊಸರನ್ನವೆಂದು ಬಗೆದು ತಿಂದು ಪ್ರಾಣ ಬಿಡುವ ತಿರುಕನಂತೆ ಈ ಸಂಸಾರಸುಖ. ಅದನ್ನು ಶಾಶ್ವತವೆಂದು ನಂಬಿ ಬಯಲಾಸೆಯಿಂದ ಬಳಲಿ ಕಳೆಗುಂದಿ ಕಾರ್ಪಣ್ಯಕ್ಕೊಳಗಾಗುವ ಮಡ್ಡರಿಗೆ ತಿಳಿಹೇಳುವುದು ಕಷ್ಟ. ಅಂತಹವರು ಹುಳುಬಿದ್ದ ನಾಯಿಯ ಹಾಗೆ ಮುಂದುಗಾಣದೆ ಸ್ವರ್ಗನರಕಗಳ ದಾರಿಯ ಗುಂಟ ಬರಿದೆ ತೊಳಲುತ್ತಾರೆ. ಹುಸಿಯಾದ ಸಂಸಾರಸುಖವನ್ನು ನಿಜವೆಂದು ಹಿಗ್ಗುತ್ತಿರಲು ಜನನಮರಣಗಳ ಜಂಜಡ ತಪ್ಪದು, ಶಾಸ್ತ್ರಗಳ ಓದಿನಿಂದ ಕೊಂಚವಾದರೂ ಉಪಯೋಗವಾಗದು; ಸದ್ಗುರು ಚರಣಗಳನ್ನು ಹಿಡಿದು ಭವರೋಗವನ್ನು ಹೋಗಲಾಡಿಸುತ್ತ ಆನಂದದಿಂದ ಪ್ರಾರಬ್ಧಫಲವನ್ನುಣ್ಣುವುದೇ ಜಾಣತನ, ಅದುವೆ ಸದ್ಗತಿಯ ದಾರಿ. ಗಾಳಿ ಮನಸ್ಸು ರೇತಸ್ಸುಗಳು ಈ ದೇಹವನ್ನು ತುಂಬಿ ಹೊರಗೆ ಒಳಗೆ ಬಾಧಿಸುತ್ತವೆ; ಅದರಿಂದ ಮರುತಾದಿಗಳನ್ನು ಜಯಿಸಿದವನೇ ಭವಬಂಧನಗಳನ್ನು ಕಳಚಿಕೊಂಡು ಸುಖದಲ್ಲಿರುತ್ತಾನೆ. ಬರಿದೆ ವೇದಾಂತವಾಕ್ಯಗಳಿಂದ ಬಳಲುವುದೆ ಮಾಯೆ, ಮಾತಿನ ಮುಕ್ತಿ ಆನಂದಕರವೆನಿಸದು; ಹಾಗಾಗಿ ಮುಕ್ತಿಯನ್ನು ಬಯಸುವವರು ಮೊದಲು ಇವನ್ನು ಗೆಲ್ಲಬೇಕು. ಮೂಲಾಧಾರದಿಂದ ಹಿಡಿದು ಶಿಖೆಯವರೆಗೆ ಪ್ರತಿ ಅಂಗವನ್ನು ಶುದ್ಧಿಗೊಳಿಸುತ್ತ, ಚಂಚಲಗೊಳ್ಳಲು ಅವಕಾಶವೀಯದೆ ಸರ್ವವ್ಯಾಪಿಯನ್ನಾಗಿಸಿ ಇಂದ್ರಿಯಗಳನ್ನು ನಿಗ್ರಹಿಸಿ, ಉಸಿರಾಡುತ್ತ ಕೊನೆಗೆ ಮುದುರುವ ಕಮಲಗಳಿಂದ ಪದೇ ಪದೇ ವಿಕಾರಗೊಳಿಸುವುದು ಉಸಿರಿನ ಕೃತ್ಯ, ಅದೇ ಜೀವರುಗಳ ಸಂತೆಯ ಪಾಲಿಗೆ ಸತ್ಯ. ಮಾರುತನು ತನ್ನ ಶಕ್ತಿಯಿಂದ ಬೆರೆತ ಹಾಗೆ ಮೈಮುರಿಯುವ, ಭಯಗೊಳಿಸಿ ಹಲ್ಲು ಕಿರಿಯುವ ಮರದಂತೆ ಒಮ್ಮೆ ಇದ್ದು; ಮತ್ತೊಮ್ಮೆ ಓಡಾಡಿ ಬೆಚ್ಚುತ್ತ, ನೋಡಿ ನಡುಗುತ್ತ, ನೋಡಿ ಬೀಗಿ ತೊಡೆ ತಟ್ಟಿ ನಗುತ್ತ ಕುಣಿಯುತ್ತಾನೆ; ಮಗುದೊಮ್ಮೆ ಕಣ್ಣು ಮೀಟಿ ಆಕಳಿಸುತ್ತ ಮೂತಿಯಿಂದ ಅಣಕಿಸುತ್ತ ತೂಕಡಿಸುತ್ತ ಓಲಾಡಿ ನಾನಾ ಚೇಷ್ಟೆಗಳನ್ನು ಮಾಡುತ್ತಾನೆ. ರಸ ರಕ್ತ ಕೊಬ್ಬು ಹೊಟ್ಟೆಗಳನ್ನು ಚೆನ್ನಾಗಿ ಪೋಷಿಸಿ ಕೆಟ್ಟ ಚಾಳಿಯನ್ನಂಟಿಸಿಕೊಂಡು ಮನುಷ್ಯ ಪ್ರಾಣಿ ದೇವರು ರಾಕ್ಷಸರ ಬೊಂಬೆಗಳನ್ನು ಕುಣಿದಾಡಿಸುತ್ತ, ನಗು ಅಳು ಕನಸು ವೈಭವಗಳನ್ನು ತೋರಿಸುತ್ತ, ಮಿಸುಕಾಡಲೂ ಅವಕಾಶ ಕೊಡದೆ ತನ್ನ ವಶವರ್ತಿಯನ್ನಾಗಿಸಿಕೊಂಡು ನಜ್ಜುಗುಜ್ಜಾಗಿಸುವ ಅನಿಲನನ್ನು

ಹಿಡಿದು ಆಕಾಶದಲ್ಲಿಡಲು ಅವನು ಸುಮ್ಮನಾಗುತ್ತಾನೆ; ಆಗ ಸುಖವುಂಟಾಗುತ್ತದೆ. ಮನಸ್ಸು ಎಂಬ ಹುಲಿಯು ವಿಧವಿಧವಾದ ಸ್ವಭಾವಗಳ ಜನಗಳಲ್ಲಿ ಸೇರಿಕೊಂಡು ಚಿಂತನೆ ಮೂರ್ಛೆ ಜಡತೆ ನೆನಪು ಮರವೆ ಎಂಬ ಐದು ವಿಕಾರವಾದ ಚೇಷ್ಟೆಗಳಿಂದ ದೇವಾಸುರರನ್ನೆಲ್ಲ ನಾನಾ ಪರಿಯಲ್ಲಿ ಕುಣಿಸಿ ರೇಗಿಸಿ ಕೂಗಿಸಿ ಕೊಡವಿ, ಕೋಪ ಭ್ರಮೆ ವಿಕಾರಗಳಿಂದ ಆವರಿಸಿ ನಾನಾ ಬಗೆಯ ಅಪಾಯಗಳನ್ನು ಮಾಡುವಂತೆ ಪ್ರಚೋದಿಸಿ ಮುರಿದು ಮುರಿದು ತಿನ್ನುತ್ತ ತಾನು ಸಿಕ್ಕಿಹಾಕಿಕೊಳ್ಳದೆ ಹಿಂಸೆ ಮಾಡುವನು.

"ಯೋಗಿಗಳ ತಪಸ್ಸಿನಿಂದಾಗಿ ಪಕ್ಕಕ್ಕೆ ಸರಿದು, ವಂಚಕ ವಿರಾಗಿಗಳ ಧ್ಯಾನದಿಂದ ಹೆರೆಯೆತ್ತಿ ಬಿಸಾಕಿ, ಆಗಮಿಕರ ಕ್ರಿಯೆಯನ್ನು ಹಾಳುಮಾಡಿ, ತತ್ವವಿದರ ಪ್ರಭಾವವನ್ನು ತಗ್ಗಿಸಿ, ಸಮಾಧಿಯನ್ನು ಉಬ್ಬಿಸಿ ಮುನಿಗಳನ್ನು ನಾಯಿಯಂತೆ ಕೂಗಿಸುತ್ತದೆ, ಮನಸ್ಸು ಒಳಗೆ ಹಾಯಾಗಿರಲು ಭೋಗಿಯಾಗಿ ಹೊರಗೆ ಬರಲು ಬಾಹ್ಯನಾಗಿ ಸುಖದುಃಖಗಳನ್ನು ಅನುಭವಿಸಲು ಚಿತ್ತವೇ ಕಾರಣವಲ್ಲವೇ? ಮಾಂಸ ಮೇದಸ್ಸು ಮಜ್ಜೆ ರಕ್ತಗಳಲ್ಲಿ ಸೇರಿ ಹರಡಿಕೊಂಡು, ತಿಂದ ಷಡ್ರಸದಿಂದ ಬಲಿಷ್ಠವಾಗಿ ಎಲ್ಲ ಪ್ರಾಣಿಗಳ ದೇಹಕ್ಕೆ ಕಾರಣವಾಗಿ, ಮನಸ್ಸಿನ ಆಶೆಯಂತೆ ಕುಲಛಲಗಳು ಭಯ ಸಾಧುತ್ವಗಳನ್ನು ಬಿಟ್ಟು ಚಪಲತೆಯಿಂದ ಹೆಣ್ಣಿನ ವ್ಯಾಮೋಹದಲ್ಲಿ ತೊಳಲುವಂತೆ ಮಾಡುವ ರೇತಸ್ಸು ಆಶ್ಚರ್ಯಜನಕವಲ್ಲವೇ? ಹಸಿವು ನೀರಡಿಕೆ ನಿದ್ದೆಗಳು ವಸುವಿನಿಂದ ಹುಟ್ಟಿದವು; ಅದು ತನ್ನಲ್ಲಿರಲು ಯಾವುದನ್ನಾದರೂ ತಿನ್ನುವಾಗ ನಾಲಗೆಯನ್ನು ಬಿಡಲು ಸಾಧ್ಯವಿಲ್ಲ; ಅದರ ಮೂಲಕ ತೆಗೆದುಕೊಂಡದ್ದನ್ನು ಗುಹ್ಯಕ್ಕೆ ಕಳಿಸಿ, ಸುಂದರಿಯನ್ನು ಹುಡುಕಿ ಬೆರೆತು ಕಾಮಾಂಧತೆಯ ತೀವ್ರತೆಯಲ್ಲಿ ಮುಳುಗಿಸಿ ಹುಸಿಸುಖದಿಂದ ಈ ರೇತಸ್ಸು ಮೂರು ಲೋಕಗಳ ಜನರ ಚೆಲುವನ್ನು ಹಾಳುಮಾಡಿ ದೇಹವನ್ನು ಕೃಶಗೊಳಿಸುವುದು. ರೇತಸ್ಸು ನಿಂತರೆ ಯಾರಾದರೂ ಸಾಯುತ್ತಾರೇನು? ಹೆಂಡತಿ ಮಕ್ಕಳ ಕಾಟವನ್ನು ಗಣಿಸುತ್ತಾನೆಯೇ? ಶಿಥಿಲಗೊಳ್ಳುತ್ತಾನೆಯೇ? ದೇವತೆಗಳ ಸಾತ್ವಿಕತೆಯನ್ನು ನೆನೆದು, ಅದರಿಂದ ಮುಂದಿನದನ್ನು ತಿಳಿದು ತಡೆದುಕೊಂಡರೆ ಸುಖವೆಂಬುದು ಅಂಗೈಯ ನೆಲ್ಲಿಯಾಗುತ್ತದೆ. ಮನಸ್ಸಿನ ನೆನಪೇ ಕಾಮ, ಮುಂದುವರಿಯುವ ಗಾಳಿಯೇ ನಿಗ್ರಹ; ಮೋಹಗೊಳಿಸುವ ಧೈರ್ಯವೇ ಮಾಯೆ, ಮನಸ್ಸು ಮರುತ ರೇತಸ್ಸುಗಳ ಸ್ವರೂಪವನ್ನು ತಿಳಿದುಕೊಂಡು ಅವುಗಳನ್ನು ತಹಬಂದಿಗೆ ತಂದುಕೊಂಡರೆ ಸುಲಭವಾಗಿ ಮುಕ್ತಿ ದೊರೆಯುತ್ತದೆ. ಕಾಮವು ಮನಸ್ಸಿಗಿಂತ ಬಲಿಷ್ಠವಾದುದೇ, ಮರುತನು ಛಲಕ್ಕಿಂತ ಹಿರಿದೇ, ಮಾಯೆಯು ಬಿಂದುವಿಗಿಂತ ಘನವೇ, ಮದವನ್ನು ಬಿಟ್ಟು ಇವುಗಳನ್ನು ನಿಯಂತ್ರಿಸಿಕೊಂಡರೆ ಸುಖವುಂಟಾಗುತ್ತದೆ. ಬಿಂದುವು ಸ್ಥೂಲತನು. ಪ್ರಾಣ ಸೂಕ್ಷ್ಮತನು: ಅವುಗಳ ಮೇಲೆ ಮನಸ್ಸು; ಅದರಿಂದ ಅವುಗಳನ್ನು ಉಪಾಯವಾಗಿ ನಿಗ್ರಹಿಸಿದರೆ ಕನ್ನಡಿಯನ್ನು ಹಿಡಿದುಕೊಂಡಂತೆ ತ್ರಿಮೂರ್ತಿಗಳು ಕಾಣಿಸುತ್ತಾರೆ. ಆದರೆ ಸಂದೇಹದಲ್ಲಿ ಸಿಲುಕಿ ಈ ಮರುತ ಬಿಂದುಗಳನ್ನು ಪೋಲು ಮಾಡಿದರೆ, ಅವುಗಳ ಕುಹಕದಿಂದ ಮುಂದುಗೆಟ್ಟು ತೊಳಲುವಂತಾಗುತ್ತದೆ. ಮೂಲಧಾರವನ್ನು ಬಲವಾಗಿ ಹಿಡಿದು. ಗಾಳಿಯನ್ನು ಮೇಲಕ್ಕೆ ಸಾಗಿಸಿ ನಾಳದ ಮಧ್ಯದಲ್ಲಿ ಹೊಗುವಂತೆ ಮಾಡಿ ಅಕ್ಷರದ್ವಯದಿಂದ

(ರಾಮ)? ನಿಲ್ಲಿಸಿದರೆ ಮುಂದೆ ಚಲಿಸಲಾರದೆ ನಿಶ್ಚಲವಾಗಿರಲು, ಬಿಂದುವು ಮಿಡುಕದೆ ನಿಲ್ಲುತ್ತದೆ. ಆಗ ಹರ್ಷವುಂಟಾಗಿ ದೇವತೆಗಳನ್ನೂ ಧಿಕ್ಕರಿಸುವಂತಾಗುತ್ತಾನೆ. ಕಾಮವನ್ನು ಬಿಟ್ಟು, ಕೋಪವನ್ನು ನಿಗ್ರಹಿಸಿ, ಲೋಭವನ್ನು ತೊರೆದು, ಮೋಹದ ಬಲೆಯನ್ನು ಕಡಿದು, ಮದವನ್ನು ತರಿದು, ಮತ್ಸರವನ್ನು ಬಡಿದು, ಕಡುಮಮತೆಯನ್ನು ಬಿಟ್ಟು, ಶಾಂತಿಯನ್ನು ಹಿಡಿದು, ದೃಢಸಂಯಮದಿಂದ ಸದ್ಭಕ್ತಿಯನ್ನು ಬಿಡದೆ, ಸದಾ ಸತ್ಯ ತತ್ವಗಳನ್ನು ನಂಬಿಕೊಂಡು ಮುಕ್ತಿಯನ್ನು ಸಾಧಿಸಬೇಕು. ಡ ಢ ಣ ತ ಥ ದ ಧ ನ ಪ ಫ ಎನ್ನುವ ಅಕ್ಷರ ರತ್ನಮಯವಾದ ಹತ್ತುದಳದ ರುದ್ರನಿಲಯದಿಂದ ಅಗ್ನಿಯನ್ನು ಪುಟಗೊಳಿಸಿ ಒಳಗೆ ಎಳೆದುಕೊಂಡ ಉಸಿರನ್ನು ಮೂಗಿನಲ್ಲಿ ಬಿಗಿಹಿಡಿದುಕೊಳ್ಳುವುದು (ಕುಂಭಕ) ಆಸನವೆನಿಸುತ್ತದೆ; ಕ ಖ ಗ ಘ ಙ ಚ ಛ ಜ ಝ ಞ ಟ ಠ ಗಳೆಂಬ ಅಕ್ಷರಗಳ ಕೃಷ್ಣಪರ್ಣದ ವೀರನೆಲೆಯಲ್ಲಿ ಮೂಗಿನಿಂದ ಎಳೆದುಕೊಂಡ ಉಸಿರನ್ನು ನಿಲ್ಲಿಸುವುದೇ (ಪೂರಕ) ಪ್ರಾಣಾಯಾಮ ಎನ್ನಿಸಿಕೊಳ್ಳುತ್ತದೆ. ಹದಿನಾರು ದಳದ ಕಮಲದ ರೂಪದಲ್ಲಿ ಸೇರಿದ ಸ್ವರ್ಣವರ್ಣವು ಸದಾಶಿವನ ಮಂದಿರವನ್ನು ಸಂಕೋಚಿಸಿದರೆ ಅದೇ ಪ್ರತ್ಯಾಹಾರ (ಇಂದ್ರಿಯಗಳನ್ನು ವಿಷಯಗಳಿಂದ ಬೇರ್ಪಡಿಸಿ ಮನಸ್ಸನ್ನು ನಿಗ್ರಹಿಸುವುದು) ಎನಿಸುತ್ತದೆ. ಉದಯ ಅಸ್ತಮಾನಗಳಿಲ್ಲದ ಚಿದದ್ವಯದ ಸದನವನ್ನು ಸೇರಿ ರಾಜಿಸುವ ಸದಮಲದ ತೇಜವನ್ನು ಕಳೆದುಕೊಳ್ಳದೆ ನಿಟ್ಟಿಸುವುದೇ ಧ್ಯಾನ ಎಂಬ ಅಂಗ ಎನ್ನಿಸಿಕೊಳ್ಳುತ್ತದೆ. ಸಾವಿರ ದಳಗಳಿಂದ ಕೂಡಿ ಪರಬ್ರಹ್ಮದ ಆವಾಸವಾಗಿರುವ ಚಂದ್ರನ ಕಿರಣವನ್ನುಂಡರೂ ಚಂದ್ರನನ್ನು ಸೇರದಿರುವ ಸುಖಮಯವಾದ ಸ್ಥಿತಿಯೇ ಧಾರಣ. ಹದಿನಾರು ಬೆರಳುಗಳ ಪ್ರಮಾಣದಿಂದ ಹೊಳೆಯುವ ಶಿಖಾಂತವಾದ ಬೆಳಗನ್ನು ಸೇರಿ ಕರ್ಪೂರದ ರಾಸಿಯನ್ನು ಉರಿಯು ನುಂಗಿದಂತೆ ಚಿತ್‌ಸ್ವರೂಪವನ್ನು ಹೊಂದುವುದು ಸಮಾಧಿ ಎಂಬ ಅಂಗವಾಗುತ್ತದೆ (ಯಮ ನಿಯಮ ಆಸನ ಪ್ರಾಣಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿ–ಎಂಬ ಅಷ್ಟಾಂಗಯೋಗ).

"ಯಮದ ಕಾರಣದಿಂದ ಭಯ ಚಿಂತೆ ಹಸಿವು ಜಿಪುಣತನ ನಿದ್ದೆ ಶೀತ ಉಷ್ಣ ಬಾಯಾರಿಕೆ ಭ್ರಮೆ ಮುಂತಾದವು ವಶವಾಗುತ್ತವೆ; ಶಮೆ ದಮ ತಾಳ್ಮೆ ಧೈರ್ಯ ಸ್ಥೈರ್ಯ ನಿಸ್ಪೃಹತೆ ಶಾಂತಿಗಳು ಉಂಟಾಗುತ್ತವೆ. ಗುರುಸೇವೆ, ಪರ ಪುರುಷಾರ್ಥ ಹಾಗೂ ಪರಸ್ತ್ರೀ ವಿಮುಖತೆ, ಹಿತ ಅಹಿತಗಳ ವಿವೇಚನೆ, ನಿರ್ಮಲಮನಸ್ಸು, ಸರ್ವಭೂತಸಮಾನದೃಷ್ಟಿ ಇವುಗಳು ನಿಯಮದಿಂದ ದೊರೆಯುತ್ತವೆ. ಬ್ರಹ್ಮ ಮುಂತಾದವರೆಲ್ಲರನ್ನೂ ಹಿಡಿದು ದಾರಿ ತಪ್ಪಿಸಿ ದೇಹವನ್ನು ಬಂಧಿಸಲು ಆಸನದಿ ನಿಲ್ಲಲು ಅಗ್ನಿಯು ಮೇಲುಮುಖವಾಗಿ ಮಾರ್ಗದ ಮಲವನ್ನು ಹರಿಯುವುದು; ಗುದದ ಎಡ ಬಲಗಳ ಮಡಗಳನ್ನು ಬಲಿಷ್ಠಗೊಳಿಸಿ ಉಸಿರನ್ನು ಮೇಲ್ಮುಖವಾಗಿ ನಿಲ್ಲಿಸಿದರೆ ಅದು ಸಿದ್ಧಾಸನವೆನಿಸುತ್ತದೆ, ಅದು ಮಹಾಸಿದ್ಧಿಗಳನ್ನುಂಟುಮಾಡುವಂಥದು. ಹೀಗೆ ಅತೀವ ರಹಸ್ಯತರ ಅರ್ಥವನ್ನು ಮನಸ್ಸಿನಲ್ಲಿರಿಸಿಕೊಂಡು ಏಕಾಂತ ಸ್ಥಳದಲ್ಲಿ ಕುಳಿತುಕೊಂಡು ತನ್ನಲ್ಲಿಯೇ ಚಿಂತಿಸುತ್ತ ಗುದ ಲಿಂಗ ಹೊಕ್ಕುಳ ಹೃದಯ ಹೆಗಲು ಭ್ರೂಮಧ್ಯ ತಲೆಶಿಖೆಗಳನ್ನು ಆ ಕ್ರಮದಲ್ಲಿ

ಉಪಾಯವಾಗಿಯೂ ಅಭ್ಯಾಸಬಲದಿಂದಲೂ ಮನಸ್ಸಿನಲ್ಲಿ ನಿಲ್ಲಿಸಿಕೊಂಡರೆ ಎಲ್ಲವೂ ಆನಂದವಶವಾಗುತ್ತದೆ. ಮಧ್ಯದ ಕರ್ಮಗಳನ್ನು ಹಿಡಿದು ತೊಳಲುವ ಅನುಭವವೆಲ್ಲ ಹತ್ತಿರ ಬಾರವು.

"ದುಷ್ಟರ ಸಂಗದಿಂದ ದೂರವಿದ್ದು, ಗುರುಮುಖದಿಂದ ದಿವ್ಯಮೂರ್ತಿಯ ಜ್ಞಾನವನ್ನು ಪಡೆದು, ಅದನ್ನು ಮನಸ್ಸಿನಲ್ಲಿರಿಸಿಕೊಂಡು, ಸತ್ಯದಿಂದ ಹೊಳೆಯುವ ಚಿನ್ನದ ಭೂಮಿಯಲ್ಲಿ ಬೆಳಗುವ ಸೂರ್ಯನ ಕಾಂತಿಯಿಂದ ಹೊಳೆಯುತ್ತ ಸುಖವನ್ನು ಅನುಭವಿಸಬೇಕು. ಕೈಯಲ್ಲಿ ಶಂಖಚಕ್ರಪದ್ಮಧಾರಿಯಾಗಿ ಅಭಯಪ್ರದನಾಗಿ ತನ್ನ ಎಡಪಕ್ಕದಲ್ಲಿ ಲಕ್ಷ್ಮಿಯನ್ನು ಹೊಂದಿ ಮಿರುಗುವ ಮಣಿಕಿರೀಟ ಕರ್ಣಕುಂಡಲ ಹಾರ ಪದಕ ದಿವ್ಯಾಂಬರಗಳನ್ನು ಧರಿಸಿದವನೂ ಆದ ಶ್ರೀಹರಿಯ ಚಿನ್ಮೂರ್ತಿಯನ್ನು ಮನಸ್ಸಿನಲ್ಲಿರಿಸಿಕೊಂಡು, ಮನಸ್ಸು ನೋಟಗಳನ್ನು ಬೇರೆಡೆಗೆ ಹರಿಯಲೀಯದೆ ಧ್ಯಾನಿಸುತ್ತಿದ್ದರೆ ಇಡೀ ಜಗತ್ತೇ ಆ ಆಕೃತಿಯನ್ನು ಹೊಂದಿ ತೋರುತ್ತದೆ. ಮನಸ್ಸನ್ನು ಅದರಲ್ಲಿ ತಾದಾತ್ಮ್ಯಗೊಳಿಸಿದರೆ ಹಗಲು ಇರುಳುಗಳು ಅಂಟದ, ಗುಡುಗು ಮಿಂಚುಗಳಿರದ ತಾಣವನ್ನು ಸುಲಭವಾಗಿ ಸೇರಬಹುದು. ಮಣ್ಣನ್ನು ನೀರಿನಲ್ಲಿಯೂ, ಮಣ್ಣುನೀರುಗಳನ್ನು ಬೆಂಕಿಯಲ್ಲಿಯೂ, ಅಗ್ನಿಯನ್ನು ಗಾಳಿಯಲ್ಲಿಯೂ ಬೆರೆಸಿ, ಆಗಸಕ್ಕೆ ಹೋದರೆ ಆತ್ಮನು ನಿಶ್ಚಲನಾಗುತ್ತಾನೆ, ಅಂತಹ ಅಖಂಡತೇಜಃಪೀಠದಲ್ಲಿ ಹರಿಯನ್ನಿಟ್ಟು ಶಾಂತಿಕುಸುಮಗಳಿಂದ ಮನಸ್ಸಿನಲ್ಲಿ ಹಗಲಿರುಳೂ ಅರ್ಚಿಸುತ್ತಿದ್ದರೆ ನೀನೇ ಬೆಳಕಾಗಿ ಬೆಳಗುವೆ. ರಸರುಚಿಗಳಿಂದ ನಿಡಿದಾಗಿರುವ ನಾಲಗೆಯನ್ನು ಹಿಂದಕ್ಕೆ ತಾಲುವಿಗೆ ಅಂಟಿಸಿ ಚಿದಾಕಾಶದಲ್ಲಿ ಕಾಣಿಸುವ ರುಚಿಕರವಾದ ಬೆಳುದಿಂಗಳನ್ನು ಕೇಳಿದರೆ ಅಮೃತರಸವು ಧಾರೆಯಾಗಿ ಬರುತ್ತದೆ, ಅದನ್ನು ಉಂಡುಂಡು ಸಂತೋಷಗೊಂಡು ಜರಾಮರಣಗಳನ್ನು ಜರೆದು, ಮನಸ್ಸನ್ನು ಮೀರಿ ಸುಖವನ್ನು ಬೆರೆತಿರಬಹುದು. ಪ್ರಣವಮಯವಾದ ಅಪ್ಸರೆಯನ್ನು ಸೂಕ್ಷ್ಮವಾದ ಕುಂಡಿಲಿನಿಯನ್ನೂ ಅಣುರೂಪದ ಚಕ್ರಗಳನ್ನೂ ಅಣಿಮಾದಿಗಳನ್ನು ನೀಡುವ ಸುಷುಮ್ನೆಯನ್ನೂ ಕಂದವನ್ನು ಮಣಿಸಿರುವ ಪದ್ಮವನ್ನೂ ಹೃದಯಾಕಾಶದಲ್ಲಿ ಅನುದಿನವೂ ನೋಡುತ್ತಿರಲು ಬೆಳುದಿಂಗಳನ್ನೂ ಮೀರಿಸುವ ಕಾಂತಿಯಿಂದ ಕೂಡಿ ತೊಳಗುತ್ತೀಯೆ. ರತ್ನದ ಬೆಟ್ಟಗಳು, ವಜ್ರದ ದಿನ್ನೆಗಳು, ಚೆಲುವಾದ ಹೊನ್ನಗಿರಿಗಳು, ಕಾವ್ಯಶೈಲ ಕುಲಪರ್ವತಗಳನ್ನು ಹಿಡಿದು ಚಿಣಿಚಿಣಿಚಿಣಿಯ ಗಂಟೆ ಶಂಖ ಮದ್ದಳೆ ತಾಳ ಭೇರಿ ತಂತಿಸ್ವರಗಳಿಂದ ಕೂಡಿದ ನಾದಗಳನ್ನು ಭಾವಿಸಿಕೊಂಡು ಮರೆಯದಿರುವವರೆಗೂ ಸುಖದ ಸುಗ್ಗಿಯನ್ನು ಸೂರೆಗೊಳ್ಳುತ್ತೀಯೆ.

"ಎಷ್ಟು ಹೇಳಿದರೇನು? ನಿನ್ನಲ್ಲಿ ನೀನೇ ಆಲೋಚನೆ ಮಾಡಿದರೆ ಕಡೆಯಲ್ಲಿ ಕಾಂತಿಯುಕ್ತವಾದ ಘನತೇಜಸ್ಸು ವಶವಾಗುತ್ತದೆ; ಕೈ ಹುಣ್ಣಿಗೆ ಕನ್ನಡಿಯೇಕೆ? ಅವರಿವರನ್ನು ಕೇಳಬೇಕೇಕೆ? ಆನನವೇ ಮುತಾದ ಕರ್ಮಗಳ ಕೊನೆಗಾಣಿಸಬೇಕೆಂದವರೆ. ಕೋಟಲೆಗಳಿಂದ ಪಾರಾಗಬೇಕಾದರೆ ವಿನೋದಗಳ ಕಡೆ ಗಮನ ಹರಿಸದೆ ನಾನು ಹೇಳಿದ ಹಾಗೆ ತಿಳಿದುಕೊಂಡು ಸುಖಿಯಾಗು. ರಾಗವಿರಾಗಗಳಿಲ್ಲದೆ ಹಿತಾಹಿತಗಳ

ಆಗುಹೋಗುಗಳನ್ನು ಅರಿಯುವುದೇ ಎಚ್ಚರಿಕೆ (ಜಾಗ್ರತ್), ಲೋಕದ ಭೋಗ ಮೋಹಗಳೆಂಬುದೇ ಕನಸು (ಸ್ವಪ್ನ), ಅದನ್ನು ನಿವಾರಿಸಿಕೊಂಡು ಬರೆದ ಭಾಗದಂತಿರುವುದೇ ನಿದ್ದೆ (ಸುಷುಪ್ತಿ), ಆ ಕತ್ತಲೆಯನ್ನು ಹರಿದುಕೊಂಡು ಸತ್ಯವನ್ನು ಕಾಣುವುದೇ ಮೋಕ್ಷ (ತುರ್ಯ); ಅದನ್ನು ಮೀರಿದ ಚಂದ್ರಿಕಾಭೋಗವು ತುರ್ಯಾತೀತ – ಇವು ಯೋಗಿಜನಗಳ ಪಂಚಾವಸ್ಥೆಗಳು. ಭ್ರಮೆಯಿಂದ ಕೋಟಲೆಗಳ ಅನುಭವ, ಗುರುವಿನ ಬೋಧೆಯಿಂದ ವರ್ಣ ಕರ್ಮ ಕಾಲಗಳನ್ನು ಮೀರಿ ಅಖಂಡ ಆನಂದವನ್ನು ಅನುಭವಿಸಿ, ಹುಟ್ಟುಸಾವುಗಳನ್ನು ದಾಟಿ, ದೇವತೆಗಳ ಸನ್ನಿಧಿಗೆ ಸನ್ನಿಧಿಯಾದ **ಶ್ರೀರಾಮಪುರ**ದ ಅಮಲವಾದ ಸದ್ಬ್ರಹ್ಮವೇ ನಾನು ಎಂದು ಭಾವಿಸಿ ಸಂಭ್ರಮದಿಂದ ಪ್ರಾರಬ್ಧವಿರುವವರೆಗೂ ಭವಜಲಧಿಯಲ್ಲಿ ಸಾಗುತ್ತಿರಬೇಕು."

೩೬. ಶ್ರೀರಾಮನು ಖರನನ್ನು ಕೊಂದು, ಮುಂದೆ ಅತ್ರಿಯ ಆಶ್ರಮಕ್ಕೆ ಹೋದುದು

ಗಿರಿಜೆಯೇ, ಹೀಗೆ ಶ್ರೀರಘುವರನು ಪ್ರೀತಿಯಿಂದ ಪರತತ್ವಬೋಧೆಯನ್ನು ಮಾಡಿ ಆನಂದತುಂದಿಲನನ್ನಾಗಿಸಲು ಲಕ್ಷ್ಮಣನು ಅಣ್ಣನ ಪಾದಗಳಿಗೆ ನಮಸ್ಕರಿಸಿ ಭಕ್ತಿಭಾವದಿಂದ ಪಕ್ಕಕ್ಕೆ ಹೋಗಿ ನಿಂತ. ಯೋಗಮಾಯೆಯಿಂದ ಕೂಡಿದ ಮಾಧವನು ಸೀತಾಸಮೇತನಾಗಿ ತನ್ನ ಗುಡಿಸಿಲಿನಲ್ಲಿ ಕುಳಿತಿರಲು, ಅತ್ತ ಮುನಿವರರೆಲ್ಲ ವಿನೋದದಿಂದ ಸಲ್ಲಾಪಗೈಯುತ್ತಿದ್ದರು. ಈ ರೀತಿ ತಾಪಸರು ತಮ್ಮತಮ್ಮಲ್ಲಿಯೇ ಮೆಲುದನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದ ರೀತಿಯನ್ನು ನೋಡಿದ ಮೂಲೋಕದೊಡೆಯನು ತನ್ನಲ್ಲಿಯೇ ಈ ರೀತಿ ಆಲೋಚಿಸಿದ: ಮುನಿಗಳೆಲ್ಲ ಒಂದೆಡೆಯಲ್ಲಿ ಕುಳಿತು ಮಾತಾಡಿಕೊಳ್ಳುತ್ತಿರುವುದಕ್ಕೆ ಕಾರಣ ಯಾರಿಂದಲಾದರೂ ನಡೆದ ಅಪರಾಧವಾಗಿರಬಹುದೇ? ಲಕ್ಷ್ಮಣನು ವಿನಯಪರನಾದರೂ ಅವನು ಮಾಡುವ ಮುನಿಗಳ ಉಪಚಾರದಲ್ಲಿ ಏನಾದರೂ ಕೊರತೆಯಾಯಿತೇ? ಅಥವಾ ಧರಣಿಸುತೆಯು ಏನಾದರೂ ತಪ್ಪು ಮಾಡಿರಬಹುದೇ? ಅಥವಾ ನನ್ನ ಕಡೆಯಿಂದಲೇ ನಿಷ್ಠುರವೆನಿಸುವ ಅಪಚಾರವೇನಾದರೂ ಆಗಿಹೋಗಿದೆಯೋ? ಇಷ್ಟು ಜನರೂ ಒಂದು ಕಡೆ ಸೇರಿ ಪರ್ಯಾಲೋಚಿಸುತ್ತಿರುವುದನ್ನು ನೋಡಿದರೆ ಅವರಿಗೇನಾದರೂ ಕೋಪಬಂದಿದೆಯೋ ಎಂಬ ಭಯ ಉಂಟಾಗುತ್ತಿದೆ. ಹೀಗಾಗಿ ಒಬ್ಬ ಯೋಗಿಯನ್ನು ಶ್ರೀರಾಮನು ಈ ವಿಚಾರವಾಗಿ ಬೆಸಗೊಳ್ಳಲು ಆ ವೃದ್ಧನು ನಡುಗುತ್ತ, "ಸಕಲಜೀವಿಗಳ ಬಗ್ಗೆ ಅನುಕಂಪೆಯುಳ್ಳವನೂ, ಎಲ್ಲರ ಭಾಗ್ಯಸ್ವರೂಪನೂ, ನಿಜಾನಂದನೂ ಆದ ನಿನ್ನ ದೆಸೆಯಿಂದ ನಮಗೆ ಯಾವುದೇ ತೊಂದರೆಯಾಗಲು ಸಾಧ್ಯವಿಲ್ಲ. ನಿನ್ನ ತಮ್ಮನೋ ಸುಕುಮಾರಚಿತ್ತ, ಬುಧಜನಸೇವಿತ; ಇನ್ನು ಸೀತಾದೇವಿಯೋ ಅಕಳಂಕಿ, ಧರ್ಮಾವತಾರೆ. ಎಲ್ಲರೂ ಅನುದಿನವೂ ಭಕ್ತಿಯಿಂದ ನಮ್ಮನ್ನು ನೋಡಿಕೊಳ್ಳುತ್ತಿರುವಿರಿ. ನಮ್ಮ ಚಿಂತೆಗೆ ಕಾರಣ ರಾವಣನ ತಮ್ಮನಾದ ಖರ ಎನ್ನುವವನು; ಅವನು ಕ್ರೂರವಾದ

ಗುಡುಗಿನ ಧ್ವನಿಯವನೂ, ಕಪ್ಪಾದ ವಿಕಾರರೂಪವುಳ್ಳವನೂ, ಇತರ ರಕ್ಕಸರ ಜೊತೆ ಸೇರಿ ಋಷಿಮುನಿಗಳನ್ನೂ ಸಾಧುಸಂತರನ್ನೂ ಭೀತಿಗೊಳಿಸುತ್ತ ತೊಂದರೆಯಿತ್ತು ನರಮಾಂಸಭಕ್ಷಣೆ ಮಾಡಿ ಅರಗಿಸಿಕೊಳ್ಳುವವನು. ಅವನು ಇತರರೊಡನೆ ಸೇರಿ ಘೋರರೂಪವನ್ನು ತೋರಿಸುತ್ತ ಭಯಗೊಳಿಸುತ್ತಾನೆ; ಹೇಯವಸ್ತುಗಳನ್ನು ನಮ್ಮ ಮೇಲೆ ಎಸೆಯುತ್ತಾನೆ. ಆ ಕಾರಣದಿಂದ ಮುನಿಗಳೆಲ್ಲ ಚಿಂತೆ ಮಾಡುವ ಹಾಗಾಗಿದೆ. ನಾನಾ ರೂಪಗಳಲ್ಲಿ ಜೋರಾಗಿ ಶಬ್ದ ಮಾಡುತ್ತ ಬಂದು ಆಶ್ರಮದ ಅಂಗಳಗಳಲ್ಲಿ ರಕ್ತದ ಮಡಕೆಗಳನ್ನಿಟ್ಟು, ಕೇಕರಿಸುತ್ತ ಶಾಂತಿಕಲಶಗಳನ್ನು ಒಡೆದು, ಆನಂದದಿಂದ ಸಮಾಧಿಸ್ಥಿತಿಯಲ್ಲಿದ್ದವರನ್ನು ಹಿಂಸಿಸಿ ರಕ್ಕಸರು ಬಾಧೆಗೊಳಿಸುತ್ತಾರೆ. ನೀನು ಬಂದಿರುವುದರಿಂದ ಈ ಕಡೆ ಬಾರದವರಾಗಿದ್ದಾರೆ. ನೀನು ಹೋದರೆ ಈ ಸ್ಥಳವು ಸುರಕ್ಷಿತವಾಗಿರುವುದೇ? ಈ ಬೆಟ್ಟದ ಹತ್ತಿರ ಆಶ್ರಮಗಲ್ಲಿವೆ, ಹಣ್ಣುಗಳು ಬಿಟ್ಟ ಮರಗಳಿವೆ, ಹೂಬಿಟ್ಟ ಗಿಡಬಳ್ಳಿಗಳಿವೆ, ಆದರೆ ಅವರ ಭಯದಿಂದ ಅಲ್ಲಿ ನಿಲ್ಲಲಾರದೆ ನಾವಿಲ್ಲಿಗೆ ಬಂದು, ಅವರ ಪಾಲಿನ ಯಮನಂತಿರುವ ನಿನ್ನ ದಯದಿಂದ ನೆಮ್ಮದಿಯಿಂದಿದ್ದೇವೆ, ನಮ್ಮ ಮೂಲನಿವಾಸಗಳಿಗೆ ಹೋಗಲು ನಾವು ಆಲೋಚನೆ ಮಾಡುತ್ತಿದ್ದೇವೆ. ಆದರೆ ಆ ರಮ್ಯವಾದ ಜಾಗವು ಕ್ರೂರಿಯಾದ ಖರನ ಬಾಧೆಗೊಳಗಾಗಿದೆ, ಹೀಗಾಗಿ ಎಲ್ಲರೂ ತಮ್ಮ ಹಿಂದಿನ ಜಾಗಗಳಿಗೆ ಹೋಗಲು ಆಲೋಚಿಸುತ್ತಿದ್ದಾರೆ" ಎಂದು ನಿರೂಪಿಸಿದ. ಇತರರೂ ಆ ಮಾತಿಗೆ ತಮ್ಮ ದನಿಗೂಡಿಸಿದರು.

ಮುನಿಗಳ ಮಾತುಗಳನ್ನು ಕೇಳಿದ ಜನನಾಥನು ಅವರನ್ನು ಸಮಾಧಾನ ಮಾಡಿ ನಸುನಗುತ್ತ, ಮನಸ್ಸಿನಲ್ಲಿಯೇ ಮುಂದೆ ಮಾಡಬೇಕಾದ ಕಾರ್ಯಗಳ ಬಗ್ಗೆ ಚಿಂತಿಸುತ್ತ ಸೀತಾಲಕ್ಷ್ಮಣರೊಡನೆ ಬೆಟ್ಟದಿಂದ ಕೆಳಗಿಳಿದು ಬರಲು, ಆ ಮುನಿಗಳೂ ಅವರೊಡನೆ ಬಂದರು. ಮುಂದೆ ಸಾಗುವಾಗ ರಘುನಂದನನು ಸುತ್ತಮುತ್ತಲೂ ನೋಡುತ್ತ, ಭರತನು ಬಂದು ತನ್ನ ಮನಸ್ಸಿನಲ್ಲಿದ್ದುದನ್ನು ತೋಡಿಕೊಂಡ ಜಾಗ ಇದು, ತಾಯಂದಿರನ್ನು ಕಂಡು ನಮಸ್ಕರಿಸಿದ ಸ್ಥಳ, ಸಂತರು ನೆಲಸಿರುವ ತಾಣ, ಸೈನಿಕರು ಬೀಡುಬಿಟ್ಟ ನೆಲೆ, ಆನೆಗಳನ್ನು ಕಟ್ಟಿಹಾಕಿದ್ದ ಪ್ರದೇಶ, ರಾಜರುಗಳು ತಂಗಿದ್ದ ಭೂಮಿ; ಇದನ್ನು ಬಿಟ್ಟು ತಾವು ತೆಂಕದಿಕ್ಕಿಗೆ ಹೋಗಬೇಕಾಗಿದೆಯೆಂದು ಹೇಳಿದ. ಈ ರೀತಿಯಲ್ಲಿ ಆ ಜಾಗವನ್ನೆಲ್ಲ ನೋಡುತ್ತ ಮುನಿಗಳೊಡನೆ ಸಲ್ಲಾಪಗೈಯುತ್ತ, ತಾಳೆಮರಗಳೆ ಹೆಚ್ಚಾಗಿದ್ದ ಜಾಗದಿಂದ ಮುಂದೆ ಅತ್ರಿ ಮುನಿಯ ಆಶ್ರಮಕ್ಕೆ ಬಂದ. ಆಯಾಸ ಪರಿಹರಿಸಿಕೊಳ್ಳಲು ಮರದ ನೆರಳಿನಲಿ ಒಂದರೆಕ್ಷಣ ಕುಳಿತಿದ್ದು ಶಿಷ್ಯರುಗಳ ಮೂಲಕ ಮುನಿವರ್ಯನಿಗೆ ಹೇಳಿಕಳಿಸಿ ಅನುಮತಿ ಪಡೆದು ವಿಪ್ರಸಮೂಹದೊಡನೆ ಆಶ್ರಮವನ್ನು ಪ್ರವೇಶಿಸಿದ. ಭೂಮಿಯನ್ನು ನೋಡಲು ಕುತೂಹಲದಿಂದ ಬಂದ ದೇವಗುರು ಬೃಹಸ್ಪತಿಯೋ, ಕೈಲಾಸವಾಸಿ ಶಿವನೋ, ಲಕ್ಷ್ಮೀರಮಣನೋ ಎಂಬಂತಿದ್ದ ಅವರ ದಿವ್ಯಮೂರ್ತಿಯನ್ನು ಕಂಡು, ಹೂಹಣ್ಣುಗಳೊಡನೆ ಋಷಿಯ ಪಾದಗಳಿಗೆ ಅಭಿನಮಿಸಲು, ಸೀತಾದೇವಿಯೂ ಲಕ್ಷ್ಮಣನೂ ಅವನನ್ನು ಅನುಸರಿಸಿದರು. "ಪರಮತೇಜೋರಾಶಿಗಳೂ, ಪಾವನ ಮೂರ್ತಿಗಳು ಆದ ತಮ್ಮ ಪಾದದರ್ಶನದಿಂದ ನಾನು ಧನ್ಯನಾದೆ. ನನ್ನ ಮೇಲೆ

ಕರುಣೆಯಿಟ್ಟು ನನಗೆ ಮಾರ್ಗದರ್ಶನ ಮಾಡಬೇಕು" ಎಂದು ರಘುವರನು ಕೇಳಿಕೊಳ್ಳಲು ಮುನಿಯು ನಸುನಗುತ್ತ, "ಪರಬ್ರಹ್ಮನೇ ಆದ ನೀನು ಮನುಷ್ಯರ ನಡವಳಿಕೆಗಳಿಂದ ಅವರ ಆಟಕೋಟಲೆಗಳಲ್ಲಿ ತೊಡಗಿಕೊಂಡು ಹರವಿರಿಂಚಾದಿಗಳ ನಿಯಮಗಳಿಗೂ ಸಿಕ್ಕದ ಪರತತ್ವವೇ ಅಲ್ಲವೇ? ದೀರ್ಘ ಕಾಲ ಯೋಗದಿಂದ ನಿನ್ನನ್ನು ಧ್ಯಾನಿಸಲು ಆ ಬಲದಿಂದಲೂ ನನ್ನ ವ್ರತಕ್ಕೆ ಫಲರೂಪವಾಗಿಯೂ ನೀನು ಪ್ರೀತಿಯಿಂದ ನನ್ನ ಬಳಿ ಬಂದಿದ್ದೀಯೆ" ಎಂದು ನಾನಾ ಬಗೆಯಲ್ಲಿ ಸ್ತುತಿಸಿದ. ಆನಂತರ ಯತಿಶಿಖಾಮಣಿಯು ರಾಮನನ್ನು ಕೂಡಿಸಿ ಅರ್ಘ್ಯಪಾದ್ಯಾದಿಗಳನ್ನಿತ್ತು ಅತಿಶಯವಾಗಿ ಉಪಚರಿಸಿ, "ನಾನಿಂದು ಕೃತಕೃತ್ಯನಾದೆ, ನನ್ನ ಯೋಗವು ಫಲ ನೀಡಿತು" ಎಂದು ಆನಂದಿಸಿದರು

ಆ ಬಳಿಕ ಕೆಲ ಹೊತ್ತು ಲೌಕಿಕ ವಿಚಾರಗಳ ಬಗ್ಗೆ ಸಂಭಾಷಿಸುತ್ತ, "ರಾಮನೇ, ನನ್ನ ಧರ್ಮಪತ್ನಿ ಅನಸೂಯೆಯು ಹತ್ತು ಸಾವಿರ ವರುಷಗಳ ದೀರ್ಘ ತಪಸ್ಸಿನಿಂದ ಅಡ್ಡಿ ಆತಂಕಗಳನ್ನು ನಿವಾರಿಸಿದಳು; ಅನಾವೃಷ್ಟಿಯಿಂದ ಎಲ್ಲೆಡೆಯೂ ಬರವು ಆವರಿಸಲು ಎಲ್ಲರನ್ನೂ ಸಲಹಿ, ಬತ್ತಿ ಹೋಗಿದ್ದ ಜಾಹ್ನವಿಯಲ್ಲಿ ನೀರು ಹರಿಯುವಂತೆ ಮಾಡಿ, ಆನಂತರ ಹಗಲಿರುಳೆನ್ನದೆ ದೇವತಾಕಾರ್ಯಗಳನ್ನು ಮಾಡುತ್ತಿರುವ ಆಕೆಯು ಧರ್ಮಚಾರಿಣಿ, ತಾಪಸೋತ್ತಮಿ. ಅವಳು ಮನೆಯೊಳಗಿದ್ದಾಳೆ; ಆಕೆಯನ್ನು ಹೋಗಿ ನೋಡುವಂತೆ ಧರಣಿಜೆಗೆ ಹೇಳು. ವೃದ್ಧಳೂ, ಕೀರ್ತಿಪರಳೂ, ಭೂಮಿಯಲ್ಲಿ ಸಮೃದ್ಧ ಬೆಳೆ ಬೆಳೆಯುವಂತೆ ಮಾಡಿದ ತಾಪಸಿಯೂ ಆದ ಅವಳ ದರ್ಶನದಿಂದ ಸಂಪತ್ಸಮೃದ್ಧಿಯು ಕೂಗಿಡುತ್ತದೆ" ಎಂದು ಅತ್ರಿಮುನಿ ಹೇಳಲು ರಘುನಾಥನು ಪ್ರೀತಿಯಿಂದ ಸೀತೆಯನ್ನು ಕರೆದು ಅನಸೂಯೆಗೆ ಅಭಿನಮಿಸಿ ಆಶೀರ್ವಾದವನ್ನು ಪಡೆಯಲು ಸೂಚಿಸಿದ.

ಆಗ ಸೀತೆಯು ಅತ್ಯಂತ ಹರ್ಷಿತಳಾಗಿ ಆಶ್ರಮದ ಒಳಹೊಕ್ಕಳು. ಅನಸೂಯೆಯಾದರೋ ಮುಪ್ಪಿನಿಂದಲೂ ತಪಸ್ಸಿನಿಂದಾಗಿಯೂ ಕೃಶವಾದ ದೇಹ, ನರೆಯಿಂದಾಗಿ ಬೆಳ್ಳಗಾದ ಕೂದಲುಗಳಿಂದ ಕಂಗೊಳಿಸುತ್ತಿದ್ದಳು; ಆ ದಿವ್ಯಮೂರ್ತಿಯನ್ನು ಕಂಡು 'ಧರಣಿಜೆಯು ಅಭಿವಾದನೆಯನ್ನು ಮಾಡುತ್ತಿದ್ದಾಳೆ' ಎಂದು ಹೇಳುತ್ತ ಕಾಲುಗಳಿಗೆರಗಿದಳು. ಆಗ ಅನಸೂಯೆಯು ಸೀತೆಯನ್ನು ಪರಮಹರ್ಷದಿಂದ ಅಪ್ಪಿಕೊಂಡು, ಪ್ರೀತಿಯಿಂದ ಗಲ್ಲವನ್ನು ಅಲುಗಿಸಿ ಪಕ್ಕದಲ್ಲಿ ಕೂರಿಸಿಕೊಂಡು ಯೋಗಕ್ಷೇಮವನ್ನು ವಿಚಾರಿಸಿದಳು. ಆನಂತರ, "ಸೀತೆ, ಸತ್ಯವ್ರತ ಸದಾಚಾರಚರಿತೆ, ಮಾತೆ, ಭರ್ತೃಪ್ರೀತೆ, ನಿನ್ನ ಸದ್ಗುಣಗಳನ್ನು ಇಷ್ಟು ಎಂದು ಬಣ್ಣಿಸಲು ಸಾಧ್ಯವೇ? ಸಂಪತ್ತು ಸಮೃದ್ಧಿಗಳನ್ನು ಬಯಸದೆ ಗಂಡನ ಜೊತೆಯಲ್ಲಿ ಕಾಡಿಗೆ ಬಂದು ಸೇವೆಯಲ್ಲಿ ತೊಡಗಿ ಪ್ರಿಯಬಂಧುವಾಗಿ ನೀನು ಪೂಜಾರ್ಹಳಾದ ಜಗನ್ಮಾತೆಯೆನಿಸಿದ್ದೀಯೆ. ಈ ಜಗತ್ತಿನಲ್ಲಿ ಪುಣ್ಯದಲ್ಲಿ ಪತಿವ್ರತೆಯರಿಗೆ ಯಾರು ಸಾಟಿ? ಊರಲ್ಲಿರಲಿ ಕಾಡಿನಲ್ಲಿರಲಿ, ಪಾತಕವಾಗಲೀ ಪುಣ್ಯವಾಗಲೀ ಕಾಮಿಯಾಗಿರಲಿ ದುಶ್ಶೀಲನಾಗಿರಲಿ, ದರಿದ್ರನಾಗಿರಲಿ ಹಣವಂತನಾಗಿರಲಿ ಗಂಡನೇ ದೇವರು, ಬಂಧುಬಳಗ, ಗುರುಪರ ಎಂದು ಭಾವಿಸಿ ಜಗತ್ತನ್ನು ಪವಿತ್ರವಾಗಿಸುವ ಶಚೀದೇವಿ

ಸಾವಿತ್ರಿ ಅರುಂಧತಿಯರಿಗೆ ನೀನು ಸಮಳಾಗಿದ್ದೀಯೆ" ಎಂದು ಹೊಗಳಿದಳು. ಸಕಲಧರ್ಮಸ್ವರೂಪಿಣಿಯೂ, ತಾಪಸೋತ್ತಮೆಯೂ, ಆದ ಅನಸೂಯೆಯು ಪ್ರೀತಿಯನ್ನು ತೋರಿಸಿ ಆಡಿದ ಮಾತುಗಳನ್ನು ಭಕ್ತಿಯಿಂದ ಕೇಳಿದ ಸೀತೆಯು ಕೈಗಳನ್ನು ಮುಗಿದು, "ಸಕಲಲೋಕದಲ್ಲಿಯೂ ಆರಾಧ್ಯನಾದ ಮತ್ತು ಸರ್ವಗುಣಗಳ ನೆಲೆವನೆಯಾದ ಹಾಗೂ ಅಕಳಂಕನೂ ಅಧಿಕಧರ್ಮಸ್ವರೂಪನೂ ಸಾಧುನಿಕರದ ಬಗ್ಗೆ ಭಕ್ತಿಯುಳ್ಳವನೂ ಆದ ರಾಮನು ಮಹಾಪುರುಷ, ಅದನ್ನು ಯಾರು ತಾನೇ ತಿಳಿಯರು? ಮದುವೆಯ ಹೊತ್ತಿನಲ್ಲಿ ತಾಯಿಯು ಎಲ್ಲರೆದುರಿನಲ್ಲಿ ಹೇಳಿದ ಬುದ್ಧಿವಾದವನ್ನು ನಾನು ಮನಸ್ಸನಲ್ಲಿರಿಸಿಕೊಂಡಿದ್ದೇನೆ. ಪತಿಸೇವೆಯಿಂದ ಸಾವಿತ್ರಿ ಶಚಿ ರೋಹಿಣಿಯರು ಅತಿಶಯವಾಗಿ ಬೆಳಗುತ್ತಿದ್ದಾರೆ; ಅದನ್ನರಿತು ಗಂಡನನ್ನು ಎಲ್ಲ ಕಾಲಗಳಲ್ಲಿಯೂ ಅನುಸರಿಸುತ್ತ ಪರಗತಿಯನ್ನು ಸಾಧಿಸು ಎಂದು ಹೇಳಿದ ಬುದ್ಧಿಮಾತುಗಳು ಮತ್ತು ಆಗಿಹೋದ ಪತಿವ್ರತೆಯರ ಆದರ್ಶಗಳನ್ನು ಹೊತ್ತು ಬಂದು ನಿಮ್ಮ ಪಾದಕಮಲಗಳನ್ನು ಕಂಡು ಪುನೀತಳಾದೆ. ನನ್ನನ್ನು ಆಶೀರ್ವದಿಸಿ" ಎಂದು ಕೇಳಿಕೊಂಡಳು. ಆಗ ಅನಸೂಯೆಯು ಸೀತೆಯ ಮಾತುಗಳನ್ನು ಕೇಳಿ ಸಂತಸಗೊಂಡು ಅವಳನ್ನು ತೆಗೆದಪ್ಪಿಕೊಂಡು ಮುದ್ದಿಸುತ್ತ, "ಈ ವಸ್ತ್ರಗಳು, ಕಿವಿಯ ಆಭರಣಗಳು ಹಾಗೂ ಸುಗಂಧದ್ರವ್ಯಗಳು ಅಭ್ಯುದಯಕರವಾದವು, ಇವನ್ನು ತೆಗೆದುಕೋ" ಎಂದು ಉಡುಗೊರೆಯಾಗಿ ನೀಡಿ ಅವುಗಳ ಮಹಿಮೆಯನ್ನು ಈ ರೀತಿ ವಿವರಿಸಿದಳು: "ಈ ವಸ್ತ್ರಗಳು ಮತ್ತು ಕಿವಿಯ ಆಭರಣಗಳಿಂದ ನೀನು ಚಿರಸುವಾಸಿನಿಯಾಗುತ್ತೀಯೆ, ಪ್ರತಿನಿತ್ಯವೂ ಅರಿಸಿನವನ್ನು ಪೂಸಿಕೊಂಡರೆ ಹದಿನಾರು ವರ್ಷದ ಯೌವನೆಯಾಗುತ್ತೀಯೆ." ಆನಂತರ, "ಸೀತಾಮಾತೆಯೇ, ನಿನ್ನ ಸ್ವಯಂವರದ ವಿಷಯವನ್ನು ಅವರಿವರಿಂದ ಒಂದಷ್ಟು ತಿಳಿದಿದ್ದೇನೆ. ಆದರೆ ಅದನ್ನು ಮತ್ತೆ ಕೇಳಬೇಕೆಂಬ ಆಸೆಯಾಗುತ್ತಿದೆ; ಅದನ್ನು ವಿಸ್ತಾರವಾಗಿ ಹೇಳು" ಎಂದಳು.

ಆಗ ಸೀತಾದೇವಿಯು ತನ್ನ ಹುಟ್ಟಿನಿಂದ ಹಿಡಿದು ಅಲ್ಲಿನವರೆಗಿನ ಕತೆಯನ್ನು ಹೇಳಲು ತೊಡಗಿದಳು: "ಧರ್ಮಜ್ಞನಾದ ಮಿಥಿಲಾಧಿಪತಿ ಜನಕನು ಯಾಗವನ್ನು ಮಾಡಲೆಂದು ಒಂದು ದಿನ ನೆಲವನ್ನು ಅಗೆದು ಶುದ್ಧಿಮಾಡುತ್ತಿರಲು ನೇಗಿಲ ಗುಳಕ್ಕೆ ಒಂದು ಚಿನ್ನದ ಭರಣಿ ಸಿಲುಕಿತು; ಅದನ್ನು ತೆಗೆದು ನೋಡಲು ನಾನು ಶಿಶುರೂಪದಲ್ಲಿ ಅದರಲ್ಲಿದ್ದುದನ್ನು ಕಂಡು ತನ್ನ ಮಗಳೆಂದೇ ಬಗೆದು ಸಂತಸದಿಂದಿರಲು, ಆ ಹೊತ್ತಿಗೆ 'ಧರ್ಮದಿಂದ ಈ ಮಗುವು ನಿನ್ನ ಮಗಳೆಂದೇ ಭಾವಿಸಿ ಸಾಕಿ ಸಲಹು' ಎಂದು ಅಶರೀರವಾಣಿಯಾಯಿತು. ಮಹಾರಾಜ–ಮಹಾರಾಣಿಯರು ಸಂತೋಷದಿಂದ ನನ್ನನ್ನು ಮಗಳಂತೆ ಬೆಳೆಸಿದರು. ಹೀಗೇ ಕಾಲಕಳೆದು ನಾನು ಪ್ರಾಪ್ತವಯಸ್ಕಳಾದೆ; ಬ್ರಹ್ಮನಾಗಲೀ ದೇವೇಂದ್ರನಾಗಲೀ ಹರನಾಗಲೀ ಹೆಣ್ಣುಮಗುವನ್ನು ಹೆತ್ತರೆ ಚಿಂತೆಯೇ ಅಲ್ಲವೇ? ಅಯೋನಿಜೆಯಾದ ತನ್ನನ್ನು ಮದುವೆ ಮಾಡಿ ಕೊಡಲು ಅನುರೂಪನಾದ ವರನಾರು ಎಂದು ಯೋಚಿಸಿದ ತಂದೆಯು ಕೊನೆಗೆ ತನಗೆ ಹಿರಿಯರಿಂದ ವರವಾಗಿ ಬಂದಿದ್ದ ಶಿವಧನುಸ್ಸನ್ನು ಯಾರು ಹೆದೆಯೇರಿಸುತ್ತಾರೆಯೋ ಆ ವೀರನಿಗೆ

ಕೊಟ್ಟು ಮದುವೆ ಮಾಡುವುದು ಎಂದು ತೀರ್ಮಾನಿಸಿದ. ಶಿವನ ಕೋದಂಡವನ್ನು ಹೊರತೆಗೆಸಿ ಪೂಜಿಸಿ, ಸ್ವಯಂವರದ ವಿವರಗಳ ಪತ್ರಿಕೆಗಳನ್ನು ಎಲ್ಲ ಕಡೆಗೂ ಕಳಿಸಲು ನಾಲಕ್ಕೂ ದಿಕ್ಕುಗಳಿಂದ ರಾಜಕುಮಾರರು ಮಿಥಿಲೆಗೆ ಬಂದರು. ಆದರೆ ಯಾರಿಗೂ ಹರಧನುಸ್ಸನ್ನು ಎತ್ತಲು ಸಾಧ್ಯವಾಗಲಿಲ್ಲ; ಆಗ ಅವರೆಲ್ಲ ಸೇರಿ ಯುದ್ಧವನ್ನು ಸಾರಿ ನಗರಕ್ಕೆ ಮುತ್ತಿಗೆ ಹಾಕಿದರು; ಆಗ ತಂದೆಯು ಸೂರ್ಯನ ಬೆಂಬಲದಿಂದ ಬಲವನ್ನು ಗಳಿಸಿ ಅವರನ್ನು ಅಡಗಿಸಿ ನೆಮ್ಮದಿಯಿಂದಿದ್ದ. ಆನಂತರವೂ ರಾಜಕುಮಾರರುಗಳು ಬಂದು ಶಿವಧನುಸ್ಸನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ ಎತ್ತಲು ಪ್ರಯತ್ನಿಸಿ ವಿಫಲರಾಗುತ್ತಿದ್ದರು; ಅದರಿಂದ ತಂದೆಯ ಚಿಂತೆ ಹೆಚ್ಚಿತು. ಆದರೆ ಅಷ್ಟು ಹೊತ್ತಿಗೆ ವಿಶ್ವಾಮಿತ್ರ ಮಹಾಮುನಿಯು ಅಣ್ಣತಮ್ಮಂದಿರಾದ ಇಬ್ಬರು ರಾಜಕುಮಾರರೊಡನೆ ಮಿಥಿಲೆಗೆ ಬಂದರು. ತಂದೆಯು ಮುನಿವರ್ಯರನ್ನು ಭಕ್ತಿಯಿಂದ ಸ್ವಾಗತಿಸಿ ಉಪಚರಿಸಿ, ಅವರ ಜೊತೆಯಲ್ಲಿ ಸೂರ್ಯಚಂದ್ರರಂತಿದ್ದ ಕುಮಾರರ ಬಗ್ಗೆ ವಿಚಾರಿಸಿದ. ಆಗ ಅವರು ದಶರಥ ಮಹಾರಾಜನ ಮಕ್ಕಳೆಂದೂ ಯಜ್ಞವನ್ನು ನೋಡುವ ಕುತೂಹಲದಿಂದ ತಮ್ಮ ಜೊತೆಯಲ್ಲಿ ಬಂದವರೆಂದೂ ಪರಿಚಯಿಸಿದರು. ಸೂರ್ಯವಂಶೋತ್ಪನ್ನರಾದ ಅವರಿಗೆ ಶಿವಧನುಸ್ಸನ್ನು ತೋರಿಸಿದರೆ ಹರ್ಷಗೊಳ್ಳುತ್ತಾರೆನ್ನಲು ತಂದೆ ಹಾಗೆಯೇ ಮಾಡಿದ. ಆಗ ರಘುವರನು ಭಕ್ತಿಯಿಂದ ಆ ಧನುಸ್ಸನ್ನೆತ್ತಿ ಅದರ ತಿರುವಿಗೆ ದಾರವನ್ನು ಏರಿಸಲು ಪ್ರಯತ್ನಿಸಿದಾಗ ಆ ಬಿಲ್ಲು ಮುರಿದುಬಿತ್ತು. ಅವನು ಅತಿ ಬಲಾನ್ವಿತನೆಂದು ಬಗೆದ ಜನಕಮಹಾರಾಜನು ವಿಶ್ವಾಮಿತ್ರರ ಅನುಮತಿ ಪಡೆದು ದಶರಥ ಮಹಾರಾಜರಿಗೆ ಹೇಳಿ ಕಳಿಸಲು, ಅವರು ಸಂತೋಷದಿಂದ ಬಂಧುಬಾಂಧವ ಪುರೋಹಿತರೊಡನೆ ಬರಲು, ತಂದೆಯು ನನ್ನನ್ನು ರಘುವರನಿಗಿತ್ತು ಸಂತೋಷದಿಂದ ಮದುವೆಯನ್ನು ನೆರವೇರಿಸಿದ. ಹಾಗೆಯೇ ಸುಕುಮಾರನಾದ ಲಕ್ಷ್ಮಣನನ್ನು ನೋಡಿ ಜನಕಮಹಾರಾಜನು ತನ್ನ ಸ್ವಂತ ಮಗಳಾದ ಊರ್ಮಿಳೆಯನ್ನು ಆತನಿಗಿತ್ತು ವಿವಾಹಗೈದ. ರಘುವರನು ನನ್ನ ಕೈಹಿಡಿದಾಗಿನಿಂದ ಆತನ ಚರಣಸೇವೆಯನ್ನು ಭಕ್ತಿಯಿಂದ ಮಾಡುತ್ತ ಬಂದಿದ್ದೇನೆ" ಎಂದು ಸೀತೆ ವಿವರಿಸಿದಳು.

ಧರಣಿಜೆಯ ಮಾತುಗಳನ್ನು ಕೇಳಿ ಸಂತಸಗೊಂಡ ಅನಸೂಯೆಯು, "ತಾಯೆ ಕೇಳು, ಈ ಜಗತ್ತಿನಲ್ಲಿ ಹೆಣ್ಣಿಗೆ ನೇಮನಿಷ್ಠೆಗಳೆಲ್ಲ ಪತಿಸೇವೆಯೇ ಆಗಿದೆ. ಪಾತಿವ್ರತ್ಯದಿಂದ ಘನಸುಖವು ಕೈಸಾರುತ್ತದೆ. ಸಾಧ್ವಿಯರ ಪಾವನ ಚರಿತೆಗಳನ್ನು ಹೇಳುತ್ತೇನೆ, ಸಾವಧಾನದಿಂದ ಕೇಳು: ಹಿಂದೆ ಗುಣವಂತನಾದ ಒಬ್ಬ ಬ್ರಾಹ್ಮಣನೊಬ್ಬನ ಪತಿವ್ರತೆಯಾದ ಹೆಂಡತಿಯು ಭಕ್ತಿಯಿಂದ ಪತಿಸೇವೆಯನ್ನು ಮಾಡುತ್ತಿದ್ದಳು. ಆದರೆ ಕಾಲಕ್ರಮದಲ್ಲಿ ಆ ಬ್ರಾಹ್ಮಣನು ಲಂಪಟನಾಗಿ ಪಶುವಿನಂತೆ ಕ್ರೂರಿಯಾಗಿ ಕೊನೆಗೆ ರೋಗಿಷ್ಠನಾದ. ಬಲಿಷ್ಠವಾಗಿದ್ದ ಅವನ ಅಂಗಾಂಗಗಳು ಉಡುಗಿಹೋಗಿ ವಿಕಾರಿಯಾದ. ಆದರೆ ಅವನ ಹೆಂಡತಿಯು ಅವನ ಬಗೆಗಿನ ನಿಷ್ಠೆಯನ್ನು ಬಿಡದೆ ಅವನ ಸೇವೆ ಮಾಡುತ್ತಿದ್ದಳು. ಬೆಳಿಗ್ಗೆ ಎದ್ದವಳೆ ತನ್ನ ಗಂಡನ ಕೈಕಾಲು ಮುಖಗಳನ್ನು ತೊಳೆದು ಮನೆಯಲ್ಲಿ ಕೂರಿಸಿ, ತಾನು ಬೀದಿಗೆ ಹೋಗಿ ಮನೆಮನೆಗಳಲ್ಲಿ ಭಿಕ್ಷೆ ಬೇಡಿ

ಮನೆಗೆ ಬಂದು ಅಡುಗೆಯನ್ನು ಮಾಡಿ ಸಂತೋಷದಿಂದ ಗಂಡನಿಗೆ ಉಣಬಡಿಸಿ ಮಿಕ್ಕುದನ್ನು ತಾನು ಊಟಮಾಡಿ ಹಗಲಿರುಳೂ ಅವನ ಬಳಿಯೇ ಇದ್ದು ಸೇವೆ ಮಾಡುತ್ತಿದ್ದಳು. ದಿನದಿನಕ್ಕೂ ಈ ಪರಿಯಲ್ಲಿ ಗಂಡನ ಇಷ್ಟಕ್ಕನುಗುಣವಾಗಿ ನಡೆದುಕೊಳ್ಳುತ್ತಿರಲು ಅವನಿಗೆ ವಾಯುಬಾಧೆಯಿಂದ ಕೈಕಾಲುಗಳು ಉಡುಗಿಹೋಗಿ ಕಾರ್ಪಣ್ಯವುಂಟಾಗಲು, ಮನೆಯಲ್ಲಿ ಅಂತಹವನೊಬ್ಬನನ್ನೇ ಬಿಟ್ಟು ಹೋಗಲಾರದೆ, ಆದರೆ ತಿಂದುಣ್ಣಲು ಏನೂ ಇಲ್ಲದಿರಲು ಆ ಸಾಧ್ವಿ ಸಂಕಟಪಡುತ್ತ ಗಂಡನನ್ನು ಹೆಗಲಲ್ಲಿ ಹೊತ್ತು ಮನೆಮನೆಗೆ ಹೋಗುತ್ತಿದ್ದಳು. ಹೀಗೇ ಕೆಲವು ಕಾಲ ಸರಿಯಿತು; ಆ ಪತಿವ್ರತೆಯು ಹೇಗೋ ಗಂಡನ ಸೇವೆ ಮಾಡುತ್ತಿದ್ದಳು. ಹೀಗಿರಲು ಒಂದು ದಿನ ಬೀದಿಯ ಅಂಗಡಿಯೊಂದರಲ್ಲಿ ಬಿಟ್ಟು ಆ ಗರತಿ ಬೇಡುವುದಕ್ಕೆಂದು ಹೋದಳು. ಇತ್ತ ಒಬ್ಬ ರೂಪುಯೌವನದ ವೇಶ್ಯೆಯೊಬ್ಬಳು ವಿಟರನ್ನು ಹುಡುಕುತ್ತ ಆ ದಾರಿಯಲ್ಲಿ ಬಂದಳು. ಅವಳಾದರೋ ಮನ್ಮಥನ ಅಲಗಿನಂತೆ ಬೆಡಗನ್ನುಳ್ಳವಳು; ಅವಳನ್ನು ನೋಡಿ ಅಂಗಡಿಯಲ್ಲಿದ್ದ ರೋಗಾವಿಷ್ಟ ಗಂಡನು ಮದನವಶನಾಗಿ ಅವಳನ್ನು ಬಯಸಿ ಅವಳನ್ನೇ ನೆನೆಸಿಕೊಳ್ಳುತ್ತ ಹೃದಯದ ಅನುತಾಪದಿಂದ ಬಳಲಿದ. ಅಷ್ಟು ಹೊತ್ತಿಗೆ ಹೆಂಡತಿ ಬಂದಳು. ಅವನು ತನ್ನ ಇಚ್ಛೆಯನ್ನು ಹೆಂಡತಿಗೆ ಹೇಳಲು ಆ ಸಾಧ್ವಿಯು ಆ ವೇಶ್ಯೆ ಎಲ್ಲಿರುವಳೆಂದು ತಿಳಿದು ಅಲ್ಲಿಗೆ ಹೋಗಿ, 'ಸುಂದರಿಯೇ, ನೀನು ಬೀದಿಯಲ್ಲಿ ಹೋಗುತ್ತಿರುವಾಗ ನಿನ್ನನ್ನು ನೋಡಿದ ಕೈಕಾಲುಗಳು ಸ್ವಾಧೀನವಿಲ್ಲದ ನನ್ನ ಗಂಡನು ನೋಡಿ ಮದನವೇದನೆಗೊಳಗಾಗಿದ್ದಾನೆ. ಅವನು ಬರಲಾರ, ಅಲ್ಲದೆ ನಿನಗೆ ಶುಲ್ಕವನ್ನೂ ಕೊಡಲು ಶಕ್ತಿಯಿಲ್ಲ; ಅವನಿಗೆ ಒಲಿದು ನನ್ನನ್ನು ಕಾಪಾಡು' ಎಂದು ಅವಳನ್ನು ಬೇಡಿಕೊಂಡಳು. ಈ ಜಗತ್ತಿನಲ್ಲಿ ಹಣವಿಲ್ಲದಿದ್ದರೆ ನಾರಿಯರು ಒಲಿಯಲಾರರು, ಆದರೆ ಈ ರೀತಿ ರೋಗಿಷ್ಟ ಗಂಡನ ಪರವಾಗಿ ಬೇಡಿಕೊಳ್ಳುವ ಈ ನಾರಿಯು ಮಹಾ ಪತಿವ್ರತೆಯೇ ಸರಿ ಎಂದು ತಿಳಿದು, ಆ ವೇಶ್ಯೆಯು ಅವಳ ಗಂಡನೊಡನೆ ಕೂಡಲು ಒಪ್ಪಿ ಸಂಕೇತಸ್ಥಾನವನ್ನು ತಿಳಿಸಿ ಬೀಳ್ಕೊಟ್ಟಳು. ಅಂತೂ ಕಷ್ಟಪಟ್ಟು ಆ ಸುಂದರಿಯನ್ನು ಒಪ್ಪಿಸಿದ ಸತಿಯು ಹೋಗಿ ಗಂಡನಿಗೆ ಈ ವಿಷಯವನ್ನು ತಿಳಿಸಿದಾಗ ಅವನು ಸಂತೋಷದಿಂದ ಉಬ್ಬಿಹೋಗಿ ಸೂರ್ಯನು ಮುಳುಗುವುದನ್ನೇ ಎದುರು ನೋಡುತ್ತಿದ್ದ. ಎಲ್ಲೆಡೆ ಕತ್ತಲೆಯಾವರಿಸಲು ತನ್ನನ್ನು ಜತನದಿಂದ ಕರೆದೊಯ್ದು ಆ ವೇಶ್ಯೆಯೊಡನೆ ಕೂಡಿಸು ಎಂದು ಹೆಂಡತಿಗೆ ಹೇಳಿದ. ಆಗ ಆ ಸಾಧ್ವಿಶಿರೋಮಣಿಯು ಗಂಡನನ್ನು ಹೆಗಲಲ್ಲಿ ಹೊತ್ತು ಬರುತ್ತಿರಬೇಕಾದರೆ ಒಂದು ಕಡೆ ಬಗ್ಗಿ ಜೋತಾಡುತ್ತಿದ್ದವನ ಕಾಲು ತಲೆಯನ್ನು ಸೋಕಲು ಅದನ್ನಿವನು ಜೋರಾಗಿ ಪಕ್ಕಕ್ಕೆ ಸರಿಸಿದ; ಇದರಿಂದ ಅವನಿಗೆ ತುಂಬ ನೋವಾಯಿತು; ಅದರಿಂದ ಕೋಪಗೊಂಡ ಅವನು, 'ಶೂಲಹತನಾದ ಜೀವಿಯನ್ನು ಯಾವನು ಹೀಗೆ ಹಿಡಿದೆಳೆದನೋ ಆ ಪಾಪಾಚಾರಿಯು ಬೆಳಗಾಗುವುದರಲ್ಲಿ ಯಮಸದವನ್ನು ಸೇರಲಿ' ಎಂದು ಶಪಿಸಿದ. ಇದರಿಂದ ಆ ಪತಿವ್ರತೆಗೆ ಅತ್ಯಂತ ಕಳವಳವಾಯಿತು. ಈ ವಿಪತ್ತನ್ನು ಹೋಗಲಾಡಿಸಲು ಅವಳು ಬೇಗ ಬೇಗ ಒಂದು ಜಲಾಶಯದ ಬಳಿಗೆ ಹೋಗಿ ಅದರ

ದಡದಲ್ಲಿ ಗಂಡನನ್ನು ಎಚ್ಚರಿಕೆಯಿಂದ ಕುಳ್ಳಿರಿಸಿದಳು. ಆನಂತರ ತಾನು ನೀರಿನಲ್ಲಿಳಿದು ಬೇಗ ಸ್ನಾನವನ್ನು ಮುಗಿಸಿ ಕಣ್ಣುಗಳನ್ನು ಮುಚ್ಚಿಕೊಂಡು ಮನಸ್ಸಿನಲ್ಲಿಯೇ ಗಂಡನನ್ನು ನೆನಪಿಸಿಕೊಳ್ಳುತ್ತ ಬೊಗಸೆಯಲ್ಲಿ ನೀರನ್ನು ತುಂಬಿಕೊಂಡು, ತನ್ನ ಪಾತಿವ್ರತ್ಯದ ಸತ್ವದಿಂದ ಸೂರ್ಯನು ಉದಯಿಸಬಾರದೆಂದು ತರ್ಪಣವಿತ್ತು ಗಂಡನ ಬಳಿ ಬಂದು ಕುಳಿತಳು. ಅವಳ ಪಾತಿವ್ರತ್ಯವನ್ನು ಮೆಚ್ಚಿದ ತ್ರಿಮೂರ್ತಿಗಳು ಭೂಮಿಗೆ ಬಂದು ಕತ್ತಲೆಯಲ್ಲಿ ಕುಳಿತಿದ್ದ ಆ ತರುಣಿಯನ್ನು ಕಂಡು ಶಾಪಕ್ಕೆ ಕಾರಣವೇನು ಎಂದು ವಿಚಾರಿಸಿದರು. ಆಗ ತರುಣಿಯು ನಡೆದ ವಿಷಯವನ್ನು ವಿವರಿಸಿದಳು. ಅದನ್ನು ಕೇಳಿ ಮುಮ್ಮೂರ್ತಿಗಳು ಸಂತೋಷದಿಂದ, 'ಸತಿಶಿಖಾಮಣಿಯೆ, ನಿನ್ನ ಮನದಿಷ್ಟವನ್ನು ಹೇಳು, ಕೇಳಿದ್ದನ್ನು ನೀಡುವೆವು' ಎಂದು ಅಭಯವನ್ನಿತ್ತರು. ಆಗ ಆಕೆಯು ಕೈಮುಗಿದುಕೊಂಡು, 'ಪತಿಯು ರೋಗವಿಲ್ಲದೆ ದೀರ್ಘಾಯುಷಿಯಾಗಲಿ, ದೀರ್ಘಕಾಲ ಅವರ ಸೇವೆಯನ್ನು ಮಾಡುವ ಭಾಗ್ಯವೊಂದನ್ನುಳಿದು ಬೇರೇನನ್ನೂ ಬೇಡಿಕೊಳ್ಳಲಾರೆ' ಎಂದು ಕೇಳಿಕೊಂಡಳು. ಅವಳ ಮಾತುಗಳಿಗೆ ಮೆಚ್ಚಿದ ಹರಿಹರವಿರಿಂಚಿಗಳು ಅವಳ ಗಂಡನಿಗೆ ಆಯುಸ್ಸು, ಆರೋಗ್ಯ, ಐಶ್ವರ್ಯಾದಿಗಳು ಪ್ರಾಪ್ತವಾಗಲೆಂಬ ವರವನ್ನಿತ್ತು ಹರಸಿದರು. ಆಗ ಆ ಸಾಧ್ವೀಶಿರೋಮಣಿಯು ಸೂರ್ಯೋದಯಕ್ಕೆ ಅನುಮತಿಯಿತ್ತಳು. ಹೀಗೆ ಪತಿವ್ರತಾಮಹಿಮೆಯನ್ನು ವಿವರಿಸಲು ಸಾಧ್ಯವೇ? ನೀನು ಹದಿನಾಲ್ಕು ಲೋಕಗಳಿಗೂ ಒಡೆಯನಾದ ರಘುವರನನ್ನು ಹೃತ್ಕಮಲದೊಳಗಿಟ್ಟುಕೊಂಡು ಪ್ರೀತಿಯಿಂದ ಭಕ್ತಿಯಿಂದ ಸೇವೆ ಮಾಡುತ್ತಿದ್ದೀಯೆ. ನಿನ್ನ ಮಹಿಮೆಯನ್ನು ಹೊಗಳಲಾದೀತೇ?" ಹೀಗೆ ನುಡಿದ ಅನಸೂಯೆಯ ಅಮೃತವಾಕ್ಕುಗಳನ್ನು ಕೇಳಿ ಧರಣಿತನುಜೆಯು ಆಕೆಯ ಪಾದಗಳಿಗೆರಗಿ, "ಇಂದು ನಿಮ್ಮ ಉಪದೇಶದ ಕಾರಣದಿಂದ ನನ್ನ ಮನಸ್ಸು ನಿರ್ಮಲವಾಯಿತು. ನೀವು ಹೇಳಿದಂತೆ ನಾನು ಪತಿಸೇವೆ ಮಾಡಿ, ಪ್ರಿಯನನ್ನು ಸಂಪ್ರೀತಗೊಳಿಸಿ ಕೃತಕೃತ್ಯಳಾಗುತ್ತೇನೆ, ಆತನು ಸಾಕ್ಷಾತ್ ಲಕ್ಷ್ಮೀರಮಣನೇ ಎಂದು ಭಾವಿಸಿ ಸೇವಿಸುತ್ತೇನೆ" ಎಂದು ಬಿನ್ನವಿಸಿದಳು. ಅವಳನ್ನು ಸೆಳೆದಪ್ಪಿಕೊಂಡು ಮುದ್ದಿಸಿ "ನೀನು ಲಕ್ಷ್ಮಿ ಕಾಳಿ ಸರಸ್ವತಿಯರ ಸಮಾನೆಯಾದವಳು" ಎಂದು ಹೊಗಳಿದಳು.

ಅಷ್ಟು ಹೊತ್ತಿಗೆ ಸೂರ್ಯನು ಪಶ್ಚಿಮಬೆಟ್ಟದ ಹಿಂದಕ್ಕಿಳಿದ. ಪ್ರಾಣಿಪಕ್ಷಿಗಳು ತಮ್ಮ ನೆಲೆಗಳಿಗೆ ಮರಳಲು ತೊಡಗಿದವು, ಆಗಸವೆಣ್ಣು ನಕ್ಷತ್ರಗಳಿಂದ ಕೂಡಿ ನಗುತ್ತಿದ್ದಾಳೆ, ಅಗ್ನಿಯನ್ನು ಪೂಜಿಸುವ ಕಾಲ ಸಮೀಪಿಸಿತು. ಆಗ ಜಾನಕಿಯು ಅನಸೂಯೆಯು ಕೊಟ್ಟ ವಸ್ತ್ರಗಳಿಂದ ಅವಳಿಗೆ ಸಂತಸವಾಗುವ ರೀತಿಯಲ್ಲಿ ಅಲಂಕರಿಸಿಕೊಂಡು ಅವಳಿಗೆ ಮತ್ತೊಮ್ಮೆ ನಮಸ್ಕರಿಸಿ ಬೀಳ್ಕೊಂಡಳು. ಆನಂತರ ಪತಿಯೆಡೆಗೆ ಬಂದು ಅನಸೂಯೆ ತನಗಿತ್ತ ಒಡವೆ ವಸ್ತುಗಳ ಕೊಡುಗೆಯನ್ನು ತಿಳಿಸಿ ಅವನಿಗೆ ವಂದಿಸಿದಳು. ರಾಘವೇಶ್ವರನು ಸಂಧ್ಯಾಕೃತ್ಯಗಳನ್ನು ಮಾಡಿ ಶಿವಸ್ವರೂಪಿಯಾದ ಅತ್ರಿಮುನಿಗೆರಗಿ ಕುಳಿತುಕೊಂಡು ಅಲ್ಲಿನ ವಿಪ್ರರುಗಳು ಹೇಳಿದ ಹೊಸ ಹೊಸ ಕತೆಗಳನ್ನು ಕೇಳಿ ಆನಂದಮಯನಾದ. ಚಂದ್ರನು ಪಶ್ಚಿಮದಲ್ಲಿ ಜಾರಿ ವಾರುಣಿಯ ಮುಖಕ್ಕೆ ಚುಂಬಿಸುವಷ್ಟು ರಾತ್ರಿಯು ಕಳೆದು ಆಗಸರತ್ನವು ಪೂರ್ವದಲ್ಲಿ ಮೂಡಿಬರುವ ಹೊತ್ತಿಗೆ

ಎಚ್ಚರಗೊಂಡು ಶ್ರೀರಾಮನು ಪೂರ್ವಾಹ್ನಿಕಕ್ರಿಯೆಗಳನ್ನು ಮಾಡಿ ದೇವತೆಗಳನ್ನು ಸಂತಸಗೊಳಿಸಿ, ಮುದದಿಂದ ಅತ್ರಿಮುನಿಗೆ ಅಭಿನಮಿಸಿದ. ಆನಂತರ ಅವರ ಅಪ್ಪಣೆಯನ್ನು ಪಡೆದು ಸೀತೆಲಕ್ಷ್ಮಣರೊಡನೆ ಮೂರು ಲೋಕಗಳನ್ನೂ ಕರುಣದಿಂದ ಕಾಪಾಡಲು ರಾಮಪುರದರಸನು, ಮುನಿಗಳು ಜಯಜಯವೆನ್ನುತ್ತಿರಲು, ದೇವತೆಗಳು ಹೂಮಳೆಯನ್ನು ಸುರಿಸುತ್ತಿರಲು ಆನಂದದಿಂದ ಆ ನಂದನವನವನ್ನು ಹೊಕ್ಕ.

ಮಂಗಳ ಮಹಾಶ್ರೀ

ಇದು ಶ್ರೀರಾಮಚಂದ್ರನ ಪಾದಾರವಿಂದಗಳಿಗೆ ನಮಸ್ಕರಿಸುತ್ತಿರುವ
ಪವನನಂದನನಾದ ಹನುಮಂತನ ವರಪ್ರಸಾದವನ್ನು ಹೊಂದಿದವನೂ,
ಸರಸ್ವತಿಯ ಸಾಹಿತ್ಯ ಸಾಮ್ರಾಜ್ಯವನ್ನೆಲ್ಲ ಒಳಗೊಂಡವನೂ,
ಚತುರ್ವಿಧ ಕವಿತೆಯನ್ನು ಪರಿಶೀಲಿಸಿದವನೂ, ಆತ್ಮನಿಷ್ಠಾಗರಿಷ್ಠನೂ, ಸಂಗೀತಕಲಾವಿದನೂ,
ವಿವಿಧ ವಿದ್ವಜ್ಜನರ ಪ್ರೀತಿಪಾತ್ರನೂ ಆದ ಹಂಪೆಯಾಮಾತ್ಯನ ಮಗ ವೆಂಕ ಎಂಬ
ಹೆಸರಿನವನಿಂದ ರಚಿತವಾದ ಶ್ರೀಮದ್ರಾಮಾಯಣ ಮಹಾಪ್ರಬಂಧದಲ್ಲಿ
ಅಯೋಧ್ಯಾಕಾಂಡವು ಮುಗಿಯಿತು.

ಅರಣ್ಯಕಾಂಡ

೧. ಶ್ರೀರಾಮನು ದಂಡಕಾರಣ್ಯಕ್ಕೆ ಬಂದುದು, ವಿರಾಧ ವಧೆ

'ಕೇಳಲು ಮಂಜುಳವೆನಿಸುವ ಶ್ರೀರಾಮಚಂದ್ರನ ಕತೆಯನ್ನು ಮುಂದುವರಿಸು, ದೇವ' ಎಂದು ಪಾರ್ವತೀದೇವಿಯು ಶಿವನನ್ನು ಕೇಳಿಕೊಂಡಳು. ಆಗ ಹರನು ನಸುನಗುತ್ತ, ಶ್ರವಣಮಾತ್ರದಿಂದಲೇ ಪುಣ್ಯಪರಿಪಾಕವನ್ನೂ ಸಕಲಾಭೀಷ್ಟಗಳನ್ನೂ ನೀಡುವ ಈ ಕತೆಯ ಮುಂದಿನ ಭಾಗವನ್ನು ಕೇಳು: ಈ ಅರಣ್ಯಕಾಂಡವು ಯೋಗಯೋಗಾಂಗಗಳನ್ನೂ, ಸಕಲಮಂತ್ರಾರ್ಥಗಳನ್ನೂ ನಿಗಮಾಚಾರಗಳನ್ನೂ ನವಸಾಂಖ್ಯತಂತ್ರಗಳನ್ನೂ ಒಳಗೊಂಡುದು; ಗುರುಪದಾಬ್ಜವನ್ನು ಹೊಂದಲು ಸುಲಭೋಪಾಯವಾದ ಈ ಭಾಗದ ಕತೆಯನ್ನು ಕೇಳು. ಅತಿಪುಣ್ಯಕರವಾದ ಅತ್ರಿಮುನಿಯ ಆಶ್ರಮದಿಂದ ಮುನಿಸಮೂಹದೊಡನೆ ರಘುಪತಿಯು ದಿವ್ಯಕಾನನವಾದ ದಂಡಕಾರಣ್ಯವನ್ನು ಹೊಕ್ಕು ವಿವಿಧ ಪುಣ್ಯಾಶ್ರಮಜೀವಿಗಳನ್ನೂ, ಸುತ್ತುಮುತ್ತಲೂ ಶಾಂತಿಯನ್ನು ತುಂಬಿದ ಹಸಿರು ತುಂಬಿದ ಮರಗಿಡಗಳನ್ನೂ, ನಾನಾ ಮೃಗಗಳನ್ನೂ ನೋಡುತ್ತ ಸಂಭ್ರಮದಿಂದ ಬಂದ. ಒಂದೆಸೆಯಲ್ಲಿ ವೇದಸಂಹಿತೆಗಳನ್ನು ಕ್ರಮವಾಗಿ ಉಚ್ಚರಿಸುವ, ಮತ್ತೊಂದೆಸೆಯಲ್ಲಿ ಪದಲಕ್ಷಣಗಳ ಬಗ್ಗೆ ವಿಚಾರಮಾಡುವ, ಮಗುದೊಂದೆಸೆ ಉಪನಿಷತ್ತುಗಳ ಪಾರಾಯಣ ಮಾಡುವ ಹಾಗೂ ವೇದಾಂತಚಿಂತನೆಗಳ ಚರ್ಚೆ; ಒಂದೆಡೆಯಲ್ಲಿ ಜೈಮಿನಿಯ ನಯ ಹಾಗೂ ಯೋಗಸಾಂಖ್ಯಗಳ ಚರ್ಚೆ, ಮತ್ತೊಂದೆಡೆಯಲ್ಲಿ ಆಗಮತಂತ್ರಮಂತ್ರಾಭ್ಯಾಸವು ನಡೆದಿದ್ದ ತಪೋವನರಾಜಿಯು ಕಂಗೊಳಿಸಿತು. ಆನಂದಮಯವಾದ ಆ ಪಾರ್ವರ ನಾಡನ್ನು ಆಶ್ಚರ್ಯದಿಂದ ನೋಡುತ್ತ ಶ್ರೀರಾಮ ಲಕ್ಷ್ಮಣ ಹಾಗೂ ಅವರ ಜೊತೆಯಲ್ಲಿ ಮುನಿನಿವಹವನ್ನು ಕಂಡು ಅಲ್ಲಿನ ವಿಪ್ರಕುಲವು ಸಂತಸಗೊಂಡಿತು. ನಾಡೊಡೆಯನು ಬಂದ, ನಮ್ಮ ಪುಣ್ಯದ ಬಾಗಿಲು ತೆರೆಯಿತು ಎಂದು ವಿಪ್ರಸಂಕುಲವೆಲ್ಲ ಮನುಷ್ಯರೂಪದಲ್ಲಿದ್ದ ಹರಿಯನ್ನು ಕಾಣಲೆಂದು ಆತುರದಿಂದ ಬಂದರು. ಬಂದವರೇ ಅವನಿಗೆ ಸಂಭ್ರಮದಿಂದ ಉಪಚಾರಗಳನ್ನು ಮಾಡಿ ತಮ್ಮ ಎಲೆವನೆಯ ಸಾಲುಗಳನ್ನು ತೋರಿಸುತ್ತ ಹೀಗೆ ವಿಜ್ಞಾಪಿಸಿಕೊಂಡರು: "ಗುಂಪಾಗಿ ಬರುವ ದಾನವರ ಹಿಂಸೆಯಿಂದ ನಾವು ಕಳವಳಗೊಂಡು ಚಿಂತಿಸುತ್ತಿದ್ದೆವು; ನಮ್ಮ ಪೋಷಕ ಭೂಮಂಡಲಾಧಿಪನಾದ ನೀನು ದಯವಿಟ್ಟು

ಬಂದು ಮುನಿಸಂದೋಹಕ್ಕೆ ಸುಖವನ್ನುಂಟುಮಾಡು. ನಗರದಲ್ಲಿರಲಿ ಹಳ್ಳಿಯಲ್ಲಿರಲಿ, ಬೆಟ್ಟದ ಬುಡದಲ್ಲಿರಲಿ ಕಾಡಿನ ಮಧ್ಯೆಯಿರಲಿ, ಪ್ರತಿನಿತ್ಯವೂ ನಮ್ಮ ಸತ್ಕರ್ಮಾದಿಗಳು ಮಹಾರಾಜರ ಪ್ರೀತಿಯಿಂದ ನಡೆಯುತ್ತವೆ. ನಮ್ಮ ಬಗ್ಗೆ ಅನುಕಂಪೆಯಿಂದ ಕೂಡಿ ಬಂದು ನಮ್ಮ ಕಷ್ಟಸುಖಗಳನ್ನು ತಿಳಿದು ನಮ್ಮನ್ನು ಪಾಲಿಸುವ ರಘುಕುಲೋತ್ತಮನಾದ ನೀನು ನಮ್ಮ ರಕ್ಷಣಗೆ ಬದ್ಧನಾಗಿರುವೆ. ಸೀತಾಲಕ್ಷ್ಮಣಸಮೇತನಾದ ನಿನ್ನ ಸುಂದರ ಮೂರ್ತಿಯನ್ನು ನಮ್ಮ ಹೃದಯಕಮಲಗಳಲ್ಲಿ ಬಲು ದಿನಗಳಿಂದ ನಿಶ್ಚಲವಾಗಿರಿಸಿಕೊಂಡು ಏಕಾಂತಭಕ್ತಿಯಿಂದ ವಿವಿಧೋಪಚಾರಗಳನ್ನು ಮಾಡುತ್ತ ಬಂದ ಸಂಚಿತತಪವು ಈಗ ಫಲರೂಪವಾಗಿ ಕಣ್ಣೆದುರಿಗೆ ನಿಂತಿದೆ; ಇಲ್ಲದಿದ್ದರೆ ಶ್ರುತಿಸಮುದಾಯಕ್ಕೆ ಸಿಲುಕದ ಅಮಲ ನಿತ್ಯಾನಂದ ಪರಬ್ರಹ್ಮನು ಸಾಮಾನ್ಯಜನರಿಗೆ ಕಾಣಿಸುವುದೆಂದರೇನು?" ಎಂದು ಅರ್ಘ್ಯಪಾದ್ಯ ಆಚಮನಫಲಾಹಾರಗಳನ್ನಿತ್ತು ತಮ್ಮ ಮನಸ್ಸು ಚಿತ್ತ ಅಹಂಕಾರಗಳನ್ನೆಲ್ಲ ಉಲ್ಲಾಸದಿಂದ ಸಮರ್ಪಿಸಿದ ಋಷಿಗಳು ಚಿನ್ಮಯಾನಂದವನ್ನು ಅನುಭವಿಸಿದರು. ಅಷ್ಟರಲ್ಲಿ ವನಜಾಪ್ತನು ಪಡುಗಡಲಲ್ಲಿ ಇಳಿದು ಮೂಡಲಗಿರಿಯನ್ನು ಏರುವವರೆಗೂ ರಾಘವನು ಅವರೆಲ್ಲರೊಡನೆ ಸತ್ಕಥಾಲಾಪದಿಂದ ಇಡೀ ರಾತ್ರಿಯನ್ನು ಕಳೆದ.

ಕಮಲಮಿತ್ರನು ಉದಯಿಸುವುದರಲ್ಲಿ ಎಚ್ಚರಗೊಂಡು ಸ್ನಾನ ಆಹ್ನಿಕಗಳನ್ನು ಮುಗಿಸಿ ಋಷಿಗಳ ಜೊತೆಗೂಡಿ ಹೊರಟ ರಘುತಿಲಕನು ಆ ಘೋರಕಾನನವನ್ನೆಲ್ಲ ನೋಡುತ್ತ ಶಿಷ್ಟಜನರ ರಕ್ಷಣೆ ಮಾಡುವುದಕ್ಕೆಂದು ಸುತ್ತಿದ. ನರಿ ಕಾಡುಕೋಣ ಭೇರುಂಡ ಶರಭ ಗರ್ಜಿಸುವ ಸಿಂಹ ಜಿಂಕೆ ಮದ್ದಾನೆಗಳ ಹಿಂಡುಗಳನ್ನು ನೋಡುತ್ತ ರಘುನಾಥನು ಕಾಡಿನಲ್ಲೆಲ್ಲ ಅಲೆದ. ಬೆಟ್ಟದ ಕೋಡಿನಂತಿರುವ ತಲೆ, ಮಹಾಶಬ್ದ, ತೆರೆದ ಬಾಯಿ, ವಿಕಟವಾದ ವಿಷದಿಂದ ಕೂಡಿರುವ ದೇಹ, ಬೀಭತ್ಸಕರವಾದ ದೇಹದ ಸುತ್ತ ರಕ್ತವು ತೊಟ್ಟಿಕ್ಕುವ ಹುಲಿಯ ಚರ್ಮವನ್ನು ಹೊದ್ದು, ಕಿಡಿಗಳನ್ನುದುರಿಸುವ ಕಣ್ಣುಗಳಿಂದ ಕೂಡಿ, ಭೀಕರವಾಗಿ ಅಟ್ಟಹಾಸಗೈಯುತ್ತ ಭಯಂಕರವಾಗಿ ಕಾಣಿಸುವ ರಕ್ಕಸನೊಬ್ಬನು ದೊಡ್ಡ ಶೂಲವೊಂದನ್ನು ತನ್ನ ಹೆಗಲಿನಲ್ಲಿ ಹೊತ್ತು ಯಮನೇ ಬರುವ ಹಾಗೆ ಎದುರಿನಲ್ಲಿ ನಡೆದುಬರುತ್ತಿದ್ದ. ಹತ್ತು ಆನೆಗಳನ್ನೂ, ಹತ್ತು ಸಿಂಹಗಳನ್ನೂ, ಅರುವತ್ತು ಜಿಂಕೆಗಳನ್ನೂ, ಎಂಬತ್ತು ನರಿಗಳನ್ನೂ ತನ್ನ ಶೂಲದಲ್ಲಿ ನೇತುಹಾಕಿಕೊಂಡು ಅವುಗಳಿಂದ ಸುರಿಯುವ ರಕ್ತವು ದೇಹವನ್ನೆಲ್ಲ ಕೆಂಪಾಗಿಸಲು, ನೋಡಿದವರು ನಡುಗುವ ಬಗೆಯಲ್ಲಿ ಘೋರಸ್ವರದಿಂದ ಕೂಡಿದ್ದ ವಿರಾಧನೆಂಬ ಆ ರಕ್ಕಸನು ಲಕ್ಷ್ಮಣ ಹಾಗೂ ಮುನಿಸಮೂಹದಿಂದೊಡಗೂಡಿದ ರಾಘವನನ್ನು ನೋಡಿ ಕೋಪಿಸಿಕೊಂಡ. ಪ್ರಳಯಕಾಲದ ಬಿರುಗಾಳಿಯ ಸದ್ದನ್ನೂ ಮೀರಿಸುವಂತೆ, ಸಮುದ್ರಗಳು ಅಲ್ಲೋಲಕಲ್ಲೋಲವಾಗುವಂತೆ, ಧರಣಿಯೇ ನಡುಗುವಂತೆ ಗರ್ಜನೆ ಮಾಡುತ್ತ, ಮುನಿಗಳು ಭಯದಿಂದ ತಮ್ಮಲ್ಲಿಯೇ ಆಪದ್ಬಾಂಧವನನ್ನು ಜಪಿಸುವಂತೆ ಕಿರಿಚುತ್ತ, ಅಟ್ಟಹಾಸಗೈದು ಮೂದಲಿಸುತ್ತ ರಾಮನನ್ನು ಕುರಿತು, "ಎಲವೋ ಹುಡುಗನೇ, ಜಟೆಯನ್ನು ಕಟ್ಟಿಕೊಂಡು, ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದ ನೀನು ಪ್ರಳಯಾಂತಕನಾದ ನಾನಿರುವ ಈ ಕಾಡಿಗೆ ಯಾಕೆ ಬಂದೆ?" ಎಂದ. ಆನಂತರ, "ಭೀಮಬಲನಾಗಿ ದೇವಾಸುರರ ದರ್ಪವನ್ನಡಗಿಸುತ್ತ ಮಹಾಋಷಿಗಳ ಮಾಂಸವನ್ನು ಭಕ್ಷಿಸುತ್ತ ಆರಾಮವಾಗಿ ಈ ಕಾಡಿನಲ್ಲಿರುವ ಕಲಿ ವಿರಾಧನ ಬಗ್ಗೆ ಯಾರೂ ನಿನಗೆ

ಹೇಳಲಿಲ್ಲವೇ? ಈ ತಾಮಸಿಗಳಾದ ಮುನಿಜನರ ಬೋಧನೆಯಿಂದ ಭ್ರಮೆಗೊಂಡು ಇಲ್ಲಿಗೆ ಬಂದು ನಿಂತಿರುವೆಯಲ್ಲವೇ? ನಿಮ್ಮಿಬ್ಬರನ್ನೂ ಹಿಡಿದು ರಕ್ತಪಾನ ಮಾಡುತ್ತೇನೆ" ಎಂದು ಆ ಅಸುರನು ಘೋರ್ಗರೆದ. "ಇದೇನು ನೀವು ಕೈಯಲ್ಲಿ ಧರಿಸಿರುವ ಬಿಲ್ಲುಬಾಣಗಳು? ಒಪ್ಪವಾಗಿ ಕಟ್ಟಿಕೊಂಡಿರುವ ಜಟೆ, ಉಟ್ಟ ವಲ್ಕಲದ ಅಲಂಕಾರವಿದೇನು? ಪಕ್ಕದಲ್ಲಿರುವ ಈ ಹುಡುಗಿ ಬೇರೆ! ಇದು ಯಾರ ಆಶ್ರಮ, ಮುನಿಗಳು ಯಾರೂ ಇದನ್ನು ನಿಮಗೆ ಹೇಳಲಿಲ್ಲವೇ? ಕರುಣೆಯುಳ್ಳವರಂತೆ ಯತಿವೇಷವನ್ನು ಧರಿಸಿಕೊಂಡ ವಾಮಾಚಾರಿಗಳಾದ ನಿಮ್ಮ ದರ್ಶನ ನನಗಾಯಿತು! ಈಗ ನಿಮ್ಮಿಬ್ಬರನ್ನೂ ತರಿದುಹಾಕಿ, ಈ ನಿನ್ನ ಹುಡುಗಿಯನ್ನು ಹೊತ್ತೊಯ್ಯುತ್ತೇನೆ" ಎಂದು ವಿರಾಧನು ಗೊಳ್ಳೆಂದು ಅಟ್ಟಹಾಸಗೈದ. ಹೀಗೆ ಅತ್ಯಂತ ಕಠೋರವಾದ ನುಡಿಗಳನ್ನಾಡಿ ರಾಮಲಕ್ಷ್ಮಣರನ್ನು ಅವಹೇಳನ ಮಾಡುತ್ತ, ಮುಂದಾಗುವುದನ್ನು ತಿಳಿಯದ ಅವನು, ಕತ್ತಲೆ(ರಾಹು)ಯು ಚಂದ್ರನನ್ನು ಹಿಡಿಯುವ ಹಾಗೆ ಸೀತೆಯನ್ನು ಹಿಡಿದು ತನ್ನ ಕಂಕುಳಲ್ಲಿ ಇರುಕಿಸಿಕೊಂಡು ಪಕ್ಕಕ್ಕೆ ಹೋಗಿ ನೋಡಿ ನಗುತ್ತ, "ನೀವಿನ್ನು ಹಿಂತಿರುಗಿ ಹೋಗಿರೋ, ಮಹಾ ಬಲಿಷ್ಠರೆಂದು ತಿಳಿದು ಇಲ್ಲಿಯೇ ನಿಂತಿದ್ದರೆ ನಿಮ್ಮನ್ನು ನುಂಗದೆ ಬಿಡುತ್ತೇನೇಯೇ? ಎಲೈ ನರಕೀಟಗಳೇ, ಬೇಗ ತೊಲಗಿ" ಎಂದು ಆ ರಾಕ್ಷಸನು ತೊಡೆತಟ್ಟುತ್ತ ಜರೆದ. ಮಂಜನ್ನು ಅಗ್ನಿಯು ಹಿಡಿದ ಹಾಗೆ ರಕ್ಕಸನು ಹಿಡಿದುಕೊಂಡಿರುವ ಸೀತೆಯ ಮುಖಬಿಂಬವನ್ನು ನೋಡಿದ ರಾಮನು ಚಿಂತೆಯಿಂದ ಕೂಡಿ ಲಕ್ಷ್ಮಣನೊಡನೆ, "ಸೀತಾದೇವಿಯು ಆ ರಾಕ್ಷಸನ ಕಂಕುಳಲ್ಲಿ ನಡುಗುತ್ತಿರುವುದನ್ನು ನೋಡು, ಧರ್ಮಾನುಸರಣೆಗಾಗಿ ನಾವು ಕಾಡಿಗೆ ಬಂದುದರಿಂದ ಈ ರೀತಿಯಾಯಿತು; ಪಾತಕದ ರಾಶಿಯನ್ನೇ ಮಾಡಿದ ಅಶ್ವಪತಿಕುಮಾರಿಗೆ ಇದರಿಂದ ಸಂತೋಷವಾಗುತ್ತದೆ. ಕಾಲಬಲವನ್ನು ಹೇಳುವುದೇನು? ತಾಯ್ತಂದೆಯರನ್ನು ಬಿಟ್ಟು ತಪಸ್ಸು ಮಾಡಲು ನಿಶ್ಚಯಿಸಿಕೊಂಡು ಕಂದಮೂಲಗಳನ್ನೇ ಮೃಷ್ಟಾನ್ನವೆಂದು ತಿನ್ನುತ್ತ, ಯಾವುದೇ ಕೊರತೆಯಿಲ್ಲವೆಂಬಂತೆ ಇದೇ ಧರ್ಮಜೀವನವೆಂದು ಭಾವಿಸಿ ಹಗಲಿರುಳೂ ನಮ್ಮನ್ನು ಸಂತೋಷದಲ್ಲಿಡಲು ಹೆಣಗುತ್ತಿರುವ ಸುಕುಮಾರಿ ಅತ್ತಿಗೆಯನ್ನು ನೋಡು, ಈ ಮದಾಂಧನು ಅವಳನ್ನು ಹಿಡಿದಿರಲು ಇನ್ನು ಆಕೆಯು ತಂದೆತಾಯ್ಗಳನ್ನು ಬಿಟ್ಟ ಹಾಗೇ ಎಂದು ಕಾಣುತ್ತದೆ" ಎಂದು ದೈನ್ಯದಿಂದ ಹೇಳಿದ. ಕಂಬನಿಗಳನ್ನು ಸುರಿಸುತ್ತ ತಲೆ ಬಾಗಿ ಭೂಮಿಯೆಡೆ ನೋಡುತ್ತ ಅಣ್ಣನು ಅಳುವ ಪರಿಯನ್ನು ಕಂಡ ಸೌಮಿತ್ರಿಯು ಅತಿ ಕೋಪದಿಂದ ಹಾವಿನಂತೆ ಬುಸುಗುಡುತ್ತ ಶೌರ್ಯದಿಂದ ಕೂಡಿ ಪ್ರೀತಿಯಿಂದ ಅಣ್ಣನಿಗೆ ಹೀಗೆಂದ: "ಇಡೀ ಜಗತ್ತನ್ನು ಸೃಷ್ಟಿಸಿ ಅದನ್ನು ರಕ್ಷಿಸಿ ನಾಶಮಾಡುವ ಸಾಹಸಭರಿತ ಪರಮಪುರುಷನಾದ ನೀನು ಅನಾಥನ ಹಾಗೆ ಮರುಗುತ್ತ ಕಣ್ಣೀರು ಸುರಿಸುವುದನ್ನು ನೋಡಿದರೆ ಜಗತ್ತೇ ಆಶ್ಚರ್ಯಗೊಳ್ಳುತ್ತದೆ, ದೇವದೇವೇಶನೇ, ನನ್ನ ಪ್ರತಿಜ್ಞೆಯನ್ನು ಕೇಳು: ಒಂದೇ ಬಾಣದಿಂದ ಈ ರಾಕ್ಷಸಾಧಮನ ರಕ್ತವನ್ನು ಹೀರಿ ಅವನ ಪ್ರಾಣವನ್ನು ಒಗೆಯುತ್ತೇನೆ; ಆ ಕ್ಷಣದಲ್ಲಿಯೇ ಕೈಕೇಯಿಯನ್ನೂ ಭರತನನ್ನೂ ತರಿದುಹಾಕಿ ಭೂಮಿಯನ್ನು ಅವರ ರಕ್ತದಿಂದ ತೃಪ್ತಿಗೊಳ್ಳಿಸುತ್ತೇನೆ. ಈ ದೈತ್ಯನು ಅಜ್ಞಾನದಿಂದ ಕೂಡಿ ಮರುಳತನದಿಂದ ಯಮನ ಸೆರಗನ್ನು ಹಿಡಿದು ಎಳೆಯುವಂತೆ ಈ ಕ್ಷುದ್ರಜೀವಿಯು ಎಲ್ಲರೆದುರಿನಲ್ಲಿ ನನ್ನ ಪರಾಕ್ರಮವನ್ನು ಕೆಣಕಿದ್ದಾನೆ" ಎಂದು ಮೊರೆದ.

ಹೀಗೆ ಕೋಪದಿಂದ ಘುಡಿಘುಡಿಸುತ್ತ ಆರ್ಭಟಿಸುವ ಲಕ್ಷ್ಮಣನ ಕಡೆ ನೋಡುತ್ತ ಪ್ರಳಯಕಾಲದ ಮೋಡದ ರಾಶಿಯಂತೆ ಆ ರಕ್ಕಸನು ಉದ್ದಂಡವೇತಂಡನಾದ ರಾಮನನ್ನು ಈ ರೀತಿ ಪ್ರಶ್ನಿಸಿದ: "ಭಯವನ್ನು ಕಾಣದೆ ಮಡದಿಯ ಜೊತೆಯಲ್ಲಿ ಸಂತೋಷದಿಂದ ಇಲ್ಲಿಗೆ ಬಂದಿರುವೆಯಲ್ಲ, ನಿನ್ನ ಸಾಹಸವು ಮೆಚ್ಚಿಕೊಳ್ಳುವಂತಹುದೇ! ನಿನ್ನ ವೃತ್ತಾಂತವನ್ನೆಲ್ಲ ಸ್ವಲ್ಪ ಹೇಳು ನೋಡೋಣ!" ರಾಕ್ಷಸನು ಹೀಗೆನ್ನಲು ಜನನಾಥನು ತನ್ನ ವಂಶವೃತ್ತಾಂತವನ್ನೆಲ್ಲ ವಿವರವಾಗಿ ಹೇಳಿ, ಆ ರಾಕ್ಷಸನ ವೃತ್ತಾಂತವೇನೆಂದು ವಿಚಾರಿಸಿದ. ಆಗ ವಿರಾಧನು ಗಹಗಹಿಸಿ ನಗುತ್ತ ರಾಮನಿಗೆ ಹೀಗೆ ಹೇಳಿದ: "ಮನುಜೇಂದ್ರನೇ ಕೇಳು, ಶತಹೃದಯೆ ನನ್ನ ತಾಯಿ, ನನ್ನ ಹುಟ್ಟಿಗೆ ಕಾರಣನಾದವನು ಜಯ, ವಿರಾಧ ಎಂಬುದು ನನ್ನ ಹೆಸರು. ಯಾವುದೇ ಶಸ್ತ್ರಾಸ್ತ್ರಗಳಿಂದ ನನಗೆ ಸಾವು ಬಾರದಿರುವಂತೆ ಬ್ರಹ್ಮನು ನನಗೆ ವರವನ್ನಿತ್ತಿದ್ದಾನೆ. ಬ್ರಹ್ಮವಿಷ್ಣುಮಹೇಶ್ವರರೂ ಯುದ್ಧದಲ್ಲಿ ನನ್ನನ್ನು ಎದುರಿಸಲಾರರು, ಆದ್ದರಿಂದ ನಿನ್ನ ಹೆಂಡತಿಯನ್ನು ಬಿಟ್ಟು ನೀವು ಹಿಂತಿರುಗಿ ಹೋಗಿ ಬೇರೆ ಯಾವುದಾದರೂ ಜಾಗದಲ್ಲಿ ಹೊಟ್ಟೆ ಹೊರೆದುಕೊಳ್ಳಿರಿ." ಆ ದುರುಳ ದಾನವನ ನುಡಿಗಳನ್ನು ಕೇಳಿ ಮದ್ದಾನೆಗೆ ಸಿಂಹರೂಪಿಯಾದ ರಾಮನು ಕೋಪದಿಂದ ದೇವೇಂದ್ರನೇ ಭಯಗೊಳ್ಳುವಂತೆ ಸಿಂಹನಾದಗೈಯುತ್ತ ಆ ರಾಕ್ಷಸನನ್ನು ಧಿಕ್ಕರಿಸಿ ಗಂಭೀರಧ್ವನಿಯಲ್ಲಿ, "ನಿನಗೆ ನರಮಾಂಸಭಕ್ಷಣೆಯ ಮದ ಏರಿ ಈ ರೀತಿ ಗರ್ವದ ಮಾತುಗಳನ್ನಾಡುತ್ತಿರುವೆ; ಎಲೌ ಪಾಪಿಷ್ಠನೇ, ನೀನು ಬದುಕಿ ಉಳಿಯಬಲ್ಲೆಯ, ಯುದ್ಧದಲ್ಲಿ ಕೈಗೆ ಕೈಯನ್ನಿತ್ತು ಹೋರಾಡುವೆಯಾ?" ಎನ್ನುತ್ತ ತನ್ನ ಕೋದಂಡಕ್ಕೆ ಹೆದೆಯೇರಿಸಿ, ಅದರಲ್ಲಿ ಧನಂಜಯ ಮುಂತಾದ ಏಳು ದಿವ್ಯಶರಗಳನ್ನು ಒಟ್ಟಿಗೇ ಹೂಡಿ ಕಿವಿಯವರೆಗೂ ಹಗ್ಗವನ್ನೆಳೆದು ಬಿಟ್ಟಾಗ ಅವು ಆ ಕ್ಷಣವೇ ಒಟ್ಟಿಗೇ ಸಾಗಿ ಬೆಟ್ಟವನ್ನೇ ಸೀಳುವಂತೆ ರಾಕ್ಷಸನ ಎದೆಯನ್ನು ಬಗೆದು ಅವನ ಬಿಸಿರಕ್ತವನ್ನು ಸುರಿಸಿ ಆಚೆ ಹೋದವು. ಅದರಿಂದ ಕಡುಗೋಪಗೊಂಡ ದಾನವನು ಸೀತೆಯನ್ನು ಕಂಕುಳಿನಿಂದ ನೆಲದ ಮೇಲಿಳಿಸಿ, ವರದಾನಬಲದಿಂದ ವಿಜೃಂಭಿಸುತ್ತಿದ್ದ ತನ್ನ ಶೂಲವನ್ನು ಕೈಯಲ್ಲಿ ಹಿಡಿದು, ಹಲ್ಲುಕಡಿಯುತ್ತ ಕಾಲಮೇಘದ ಹಾಗೆ ಗುಡುಗುತ್ತ ಬಿರುಗಾಳಿಯಂತೆ ಉಸಿರುಬಿಡುತ್ತ ಅಟ್ಟಹಾಸ ಮಾಡುತ್ತ ಬಾಯಿ ತೆರೆದುಕೊಂಡು ಮುಂದೆ ನುಗ್ಗಿದ. ಆಗ ಇಡೀ ನೆಲವೇ ನಡುಗಿತು, ಕೈಯಲ್ಲಿ ಶೂಲವನ್ನು ಹಿಡಿದು ತಿರುಗಿಸುತ್ತ ಅವನು ಬರಲು ಅದರಿಂದ ಹೊಮ್ಮಿದ ಉರಿಯಿಂದ ಲೋಕವೆಲ್ಲ ಕಂಗೆಟ್ಟಿತು; ಆಗ ಕಲಿಗಳ ಅಗ್ರೇಸರನಾದ ರಘುನಾಥನು ಸೌಮಿತ್ರಿಯನ್ನು ಕುರಿತು ನಸುನಗುತ್ತ, "ಈ ಘೋರರಾಕ್ಷಸನು ಮನುಷ್ಯರಾದ ನಮ್ಮನ್ನು ಗೆಲ್ಲುವೆನೆಂಬ ಭರವಸೆಯಿಂದ ಮುಂದೆ ಸಂಭವಿಸುವುದನ್ನು ನಿರೀಕ್ಷಿಸದೆ ಮದಾಂಧತೆಯಿಂದ ಕೂಡಿ ಸ್ವಚ್ಛಂದದಿಂದ ಬರುತ್ತಿದ್ದಾನೆ, ನಿನ್ನ ಬಾಣವನ್ನು ತೆಗೆದುಕೋ" ಎಂದು ನುಡಿದು ಕೋಪದಿಂದ ಕೆಂಗಿಡಿಗಳನ್ನು ಹೊಮ್ಮಿಸುತ್ತಿದ್ದ ಅಸ್ತ್ರವನ್ನು ಹಿಡಿದು ಆ ಕ್ಷಣವೇ ರಾಕ್ಷಸನ ಕೈಯಲ್ಲಿ ಬೆಂಕಿಯುಗುಳುತ್ತಿದ್ದ ಭಾರಿಯಾದ ಆ ಶೂಲವನ್ನು ಕತ್ತರಿಸಿ ನೆಲದಲ್ಲಿ ಕೆಡವಿದ. ಲಕ್ಷ್ಮಣನು, ಬೆಟ್ಟವನ್ನು ಮೋಡ ಮುಸುಕುವ ರೀತಿಯಲ್ಲಿ, ನಾಲ್ಕೂ ದೆಸೆಗಳಲ್ಲಿ ಹೊಳೆಯುವ ಕೆಂಬಾಣಗಳನ್ನು ಸುರಿಸಿದರೂ ಬ್ರಹ್ಮನ ವರದ ಬಲದಿಂದಾಗಿ ದಾನವನು ಹೆದರದೆ ಬೊಬ್ಬಿರಿದ. ವಿರಾಧನು, "ನನ್ನ ಕೈಯಲ್ಲಿದ್ದ

ಶೂಲವನ್ನು ಕಡಿದೆವೆಂದು ನರಕೀಟಗಳಾದ ನೀವು ನಗುತ್ತಿರುವಿರಲ್ಲವೇ? ಇದರಿಂದ ಇನ್ನೂ ಸಾಹಸಕ್ಕೆ ಕೈಹಾಕಲು ಯೋಚಿಸುತ್ತಿರುವಿರಲ್ಲವೇ? ನಿಮ್ಮ ಶೌರ್ಯವು ಹೇಗೆ ಕೊನೆಗೊಳ್ಳುವುದೋ ನೋಡೋಣ; ಮುಂದಿನ ಯುದ್ಧಕ್ಕೆ ಸನ್ನದ್ಧರಾಗಿ" ಎಂದು ಕಣ್ಣೆದುರಿನ ಯಮನಂತೆ ಬಾಯಿ ತೆರೆದು ಎರಡೂ ಕೈಗಳಿಂದ ರಾಮಲಕ್ಷ್ಮಣರನ್ನು ಹಿಡಿದು ತನ್ನ ಹೆಗಲ ಮೇಲಿರಿಸಿಕೊಂಡು ಅಟ್ಟಹಾಸದಿಂದ ಕಾಡಿನ ಕಡೆಗೆ ತಿರುಗಿದ.

ಆ ರಾಕ್ಷಸನ ಪರಾಕ್ರಮಕ್ಕೆ ನರಾಧಿಪನು ಮೆಚ್ಚಿ ಸುಮಿತ್ರಾನಂದನನೊಡನೆ ಹೀಗೆಂದ: "ಈ ರಾಕ್ಷಸನು ನಮ್ಮನ್ನು ಕಾಡಿನಲ್ಲಿ ಕರೆದೊಯ್ಯುತ್ತಿದ್ದಾನೆ; ಇದರಿಂದ ನಮಗೆ ಕಾಡಿನ ದಾರಿ ತಿಳಿಯುತ್ತದೆ. ಧೈರ್ಯದಿಂದ ಈ ದಾನವಾಧಮನನ್ನು ಕಾಡಿಗೆ ಬಲಿಗೊಟ್ಟು ಹುಟ್ಟಡಗಿಸಬೇಕು." ಈ ರೀತಿ ಅಣ್ಣತಮ್ಮದಿರು ಆಲೋಚಿಸುತ್ತಿರಲು ಇತ್ತ ಸೀತೆಯು ಕಣ್ಣು ತೆರೆದಳು. ರಾಜಕುಮಾರರಿಬ್ಬರೂ ರಕ್ಕಸನ ಬಿಗಿಹಿಡಿದಲ್ಲಿ ಸಿಲುಕಿಕೊಂಡಿದ್ದಾರೆ, ಅವರನ್ನು ಬಿಡಿಸಿಕೊಂಡು ಬರುವವರಾರು ಎಂದು ಆರ್ತಳಾಗಿ ಗೋಳಿಟ್ಟಳು. ಅದನ್ನು ಕೇಳಿದ ರಾಮಲಕ್ಷ್ಮಣರು ತಮ್ಮ ಕತ್ತಿಗಳನ್ನು ಹಿರಿದು ರಾಕ್ಷಸನ ತೋಳುಗಳನ್ನು ಎರಡೂ ಕಡೆಯಲ್ಲಿ ಕತ್ತರಿಸಿ ನೆಲಕ್ಕೆ ದುಮುಕಿ ಅವನಿಂದ ತಪ್ಪಿಸಿಕೊಂಡು, ಬೊಬ್ಬಿರಿಯುತ್ತ ಮತ್ತೆ ಬಾಣಪ್ರಯೋಗಿಸಲು ತೊಡಗಿದರು. ತನ್ನ ಭುಜಗಳೆರಡೂ ತುಂಡಾಗಿ ಬೀಳಲು ರಾಕ್ಷಸನಾದರೂ ಅಣ್ಣತಮ್ಮಂದಿರ ಬಾಣಗಳ ಹೊಡೆತಕ್ಕೆ ಸಿಕ್ಕಿ ಕೆಳಕ್ಕುರುಳಿದ. ಆಗ ಗಂಡುಗಲಿಗಳು ತಮ್ಮ ಕೈಕಾಲುಗಳಿಂದ ವಿರಾಧನನ್ನು ನೆಲದಲ್ಲಿ ಉರುಳಿಸುತ್ತಿರಲು ರಕ್ಕಸನ ಪ್ರಾಣವು ಬೆಂಡಾಗಿರುವುದನ್ನು ಕಂಡು ರಾಘವನು, "ಬ್ರಹ್ಮನ ವರದ ದೃಢಶಕ್ತಿಯಿಂದ ಸಾಯದೆ ಕೆಳಗೆ ಬಿದ್ದಿರುವ ಈ ರಕ್ಕಸನ ದೇಹವನ್ನು ಕಲ್ಲುಮಣ್ಣುಗಳಿಂದ ತುಂಬಿ ಗುಂಡಿಯಲ್ಲಿ ಬಚ್ಚಿಡಬೇಕು" ಎಂದು ಹೇಳಿದ. ಆ ಮಾತುಗಳನ್ನು ಕೇಳಿದ ವಿರಾಧನಿಗೆ ತನ್ನ ಜನ್ಮಾಂತರಗಳ ಸ್ಮರಣೆಯುಂಟಾಯಿತು. "ಜಗದೇಕನಾಥ, ಪಾವನಕ್ಕೆ ಪಾವನನಾದವನೂ, ಪರಕ್ಕೆ ಪರನದವನೂ, ಜೀವರುಗಳನ್ನು ಸೃಷ್ಟಿಸಿ ಪೊರೆದು ಲಯಗೊಳಿಸುವ ನೀನು ಸರ್ವಜೀವದಲ್ಲಿಯೂ ತುಂಬಿಕೊಂಡಿದ್ದೀಯೆ. ಕಪಟವೇಷಧಾರಿಯಾಗಿ ಮನುಷ್ಯನ ರೂಪವನ್ನು ತಾಳಿ, ನಿನ್ನ ಭಜಕರ ಇಷ್ಟಗಳನ್ನು ನೆರವೇರಿಸಲೋಸುಗ ಅವತರಿಸಿರುವ ಪರತತ್ವವೇ ನೀನು, ಸೀತಾದೇವಿಯು ಮೂಲಪ್ರಕೃತಿ, ಲಕ್ಷ್ಮಣನು ಆದಿಶೇಷ ಎಂದು ಈಗ ಅರಿತಿದ್ದೇನೆ. ನಿನ್ನ ದರ್ಶನದಿಂದ ನನಗೀಗ ಅತಿಶಯಜ್ಞಾನವುಂಟಾಗಿ ಕೃತಕೃತ್ಯನಾದೆ. ಅದರಿಂದಾಗಿಯೇ, ಶ್ರೀರಾಮ ನನ್ನ ಪೂರ್ವಕತೆಯನ್ನು ಹೇಳುತ್ತೇನೆ, ಕೃಪೆಯಿಟ್ಟು ಕೇಳು" ಎಂದು ಭಕ್ತಿಯಿಂದ ರಾಮನೆಡೆಗೆ ತಿರುಗಿ ಹೇಳಿದ.

"ಗಂಧರ್ವರು ಅತಿಶಯ ಗೌರವದಿಂದ ಕಾಣುವ ತುಂಬುರ ಎಂಬ ಹೆಸರಿನಿಂದ ನಾನು ನಾದಬ್ರಹ್ಮನೆನಿಸಿಕೊಂಡು ಗಾನಾಸಕ್ತನಾಗಿ ಸುಖದಿಂದಿದ್ದೆ. ಒಂದು ದಿನ ನಾನು ಸ್ವ ಇಚ್ಛೆಯಿಂದ ಕುಬೇರನ ಉದ್ಯಾನವನವಾದ ಚೈತ್ರರಥವನ್ನು ನೋಡಲೆಂದು ಹೋಗಿದ್ದೆ. ಅಲ್ಲಿ ದಿವ್ಯವಾದ ಸರೋವರದ ತೀರದಲ್ಲಿ ವೃಂದಾರಕಕಾಮಿನಿಯಾದ ರಂಭೆಯು ಮನಸೋಚ್ಛೆಯಾಗಿ ನೀರಾಟವಾಡುತ್ತಿದ್ದಳು. ನಾನು ಅವಳ ಮುಂದೆ ಹೋದಾಗ ಆನೆಗೆ ಮದವು ದಶಮಾವಸ್ಥೆಗೇರಿದ ರೀತಿಯಲ್ಲಿ ಅವಳಿಗೆ ತೀವ್ರ ಕಾಮೋದ್ರೇಕವಾಯಿತು. ಆಗ ಅವಳು ಹಿಂದುಮುಂದನ್ನು



ದಂಡಕಾರಣ್ಯದಲ್ಲಿ ರಾಮಸೀತಾಲಕ್ಷ್ಮಣರು

ನೋಡನೆ ಬಂದು ನನ್ನನ್ನು ಅಪ್ಪಿಕೊಂಡು ಸುರತಸುಖದಲ್ಲಿದ್ದಳು. ಆ ಕಾಮಭರದಲ್ಲಿ ನಾನು ದೇಹಭಾವವನ್ನು ಮರೆತು ಅವಳ ಜೊತೆಗೂಡಿದ್ದೆ. ಅಷ್ಟರಲ್ಲಿ ಕುಬೇರನು ವನವಿಹಾರಕ್ಕೆಂದು ಬಂದವನು ನನ್ನನ್ನು ಕಂಡು ಕಡುಗೋಪದಿಂದ 'ರಾಕ್ಷಸನಾಗಿ ಹುಟ್ಟು' ಎಂದು ಶಾಪವನ್ನಿತ್ತ. ಆಗ ನಾನು ಭಯದಿಂದ ನಡುಗುತ್ತ, 'ದೇವಾ, ಈ ಶಾಪವು ಎಂದಿಗೆ ಹೋಗುತ್ತದೆ, ದಯವಿಟ್ಟು ಹೇಳು' ಎಂದು ದೈನ್ಯದಿಂದ ಬೇಡಿಕೊಂಡೆ. ಆಗ ಪೌಲಸ್ತ್ಯನು ನಸುನಗುತ್ತ ಹೀಗೆಂದ: 'ಭೂಭಾರವನ್ನು ಇಳಿಸಲೆಂದು ಲಕ್ಷ್ಮೀಪತಿಯು ದಶರಥನ ಮಗ ರಾಮನಾಗಿ ಅವತರಿಸುತ್ತಾನೆ, ಲಕ್ಷ್ಮಿಯೇ ಸೀತೆಯಾಗಿ ಜನಿಸುತ್ತಾಳೆ, ಆದಿಶೇಷನು ಲಕ್ಷ್ಮಣನಾಗಿ ಹುಟ್ಟುತ್ತಾನೆ. ಅವರು ಮೂವರೂ ಮುನಿಸೇವ್ಯರಾಗಿ ಕಾಡಿಗೆ ಬಂದಾಗ ನೀನು ಅಹಿತಕರವಾದದ್ದನ್ನು ಮಾಡಲು ರಾಮಲಕ್ಷ್ಮಣರು ನಿನ್ನ ಭುಜಗಳನ್ನು ಕತ್ತರಿಸುತ್ತಾರೆ. ಆ ಪರಬ್ರಹ್ಮಪ್ರಸಾದದಿಂದ ನಿನ್ನ ರಾಕ್ಷಸತನವು ಹರಿದು ಪೂರ್ವಾಕೃತಿಯನ್ನು ಧರಿಸಿ ಪರಮಪುರುಷನನ್ನು ಸ್ತುತಿಸಿ ಕೃತಾರ್ಥನಾಗಿ ಬರುವೆ, ಹೆದರಬೇಡ.' ಹೀಗೆ ನಾನು ಶಾಪವನ್ನು ಹೊತ್ತು ರಾಕ್ಷಸರೂಪದಿಂದ, ನನ್ನನ್ನು ಕೊಲ್ಲುವುದು ಸುರಾಸುರರಿಂದ ಸಾಧ್ಯವಿಲ್ಲ ಎಂಬ ವರದ ಬಲದಿಂದಾಗಿ, ಕಾಡಿನಲ್ಲಿನ ತಾಪಸರಿಗೆ ಹಿಂಸೆಯನ್ನೀಯುತ್ತ ಕ್ರೂರಕರ್ಮಗಳನ್ನು ಮಾಡುತ್ತ ಪಾಪಗಳನ್ನು ಗಳಿಸಿದೆ. ಶ್ರೀಪತಿಯೇ, ನಿನ್ನ ಕರುಣೆಯಿಂದ ನನಗೀಗ ಶಾಪವಿಮುಕ್ತಿಯಾಗಿದೆ, ಈ ನನ್ನ ದೇಹವನ್ನು ಗುಂಡಿಯಲ್ಲಿಟ್ಟು ರಕ್ಷಿಸಿದರೆ ನನಗೆ ಸದ್ಗತಿಯುಂಟಾಗುತ್ತದೆ" ಎಂದು ವಿರಾಧನು ತನ್ನ ಕತೆಯನ್ನು ನಿರೂಪಿಸಿದ.

ರಘುನಂದನನಿಗೆ ಈ ಕತೆಯನ್ನು ಕೇಳಿ ವಿಸ್ಮಯವುಂಟಾಯಿತಾದರೂ, ಆ ಕ್ರೂರ ರಕ್ಕಸನ ದೇಹವನ್ನು ಕಾಪಿಡಲು ಗುಂಡಿಯೊಂದನ್ನು ತೋಡುವಂತೆ ನಸುನಗುತ್ತ ಲಕ್ಷ್ಮಣನಿಗೆ ಸೂಚಿಸಿ, ತಾನು ರಾಕ್ಷಸನ ಪಾದಾಂಗುಷ್ಠದಿಂದ ಕಂಠದವರೆಗೂ ಮೆಟ್ಟಿ ಕೈಯಲ್ಲಿ ಬಾಣವನ್ನು ಹಿಡಿದು ನಿಂತ. ಅಣ್ಣನ ಆಜ್ಞೆಯಂತೆ ಲಕ್ಷ್ಮಣನು ಗುದ್ದಲಿಯೊಂದನ್ನು ತಂದು ಗುಂಡಿಯನ್ನು ತೋಡಿ ಅಣ್ಣನಿಗೆ ಅರುಹಲು, ರಾಮನು ರಾಕ್ಷಸನನ್ನು ಬಿಲ್ಲಿನಿಂದ ಹಿಡಿದು ಎಳೆದುಕೊಂಡು ಹೋಗಿ ಗುಂಡಿಯಲ್ಲಿ ನೂಕಿ ಕತ್ತಿಯಿಂದ ಹೊಡೆದ. ಆದರೆ ಬ್ರಹ್ಮನು ಕೊಟ್ಟ ವರದ ಬಲದಿಂದಾಗಿ ಕತ್ತಿಯಿಂದ ಎಷ್ಟೇ ಹೊಡೆದರೂ ಅಸುರನ ಪ್ರಾಣ ಮಾತ್ರ ಹೋಗಲಿಲ್ಲ. ಆಗ ಅಣ್ಣತಮ್ಮಂದಿರೂ ಅಲ್ಲಿದ್ದ ಉಳಿದವರೂ ಬೇಗ ಬೇಗ ಗುಂಡಿಯಲ್ಲಿ ಕಲ್ಲುಮಣ್ಣುಗಳನ್ನು ತುಂಬಿ ಆ ದೇಹವನ್ನು ಮುಚ್ಚಿದರು. ಸಿಡಿಲಂತೆ ಗರ್ಜಿಸುತ್ತಿದ್ದ ಕಡುಗಲಿಯನ್ನು ಹೀಗೆ ಕುಳಿಯಲ್ಲಿ ಬೈತಿಟ್ಟು, ಮುನಿಜನರಿಗೆ ಅಭಯವನ್ನು ಕೊಟ್ಟು, ಸೀತೆಯನ್ನು ಅಪ್ಪಿಕೊಂಡು ಸಮಾಧಾನ ಮಾಡಿ, ಭೂಸುರರ ಮಧ್ಯೆ ರಾಮ ನಿರಾಳವಾಗಿದ್ದ. ಆಗ ಒಂದು ಅದ್ಭುತವು ಸಂಭವಿಸಿತು: ಗುಂಡಿಯಲ್ಲಿ ಹೂಳಿದ್ದ ರಕ್ಕಸನ ದೇಹದಿಂದ ಒಂದು ಅದ್ಭುತ ತೇಜಸ್ಸು ಹೊಮ್ಮಿ ಆಕಾಶದಲ್ಲಿ ಬೇರೆಯಾಗಿ ನಿಂತಿತು. ಇದನ್ನು ಕಂಡು ಎಲ್ಲರೂ ಅಚ್ಚರಿಗೊಂಡರು. ಮಾರನೆಯ ಬೆಳಿಗ್ಗೆ ದಿವ್ಯಾಭರಣವಸ್ತ್ರಗಳನ್ನು ಧರಿಸಿ ಮನ್ಮಥನನ್ನು ಹೋಲುವ ಚೆಲುವಿನಿಂದ ಕೂಡಿದ ತುಂಬುರನು ದಿವ್ಯರಥದೊಳಗೆ ಬಂದು ಜನರ ಕಣ್ಣಿಗೆ ಬಿದ್ದ; ಆಗ ದೇವದುಂದುಭಿಗಳು ಮೊಳಗಿದವು, ಅಪ್ಸರೆಯರು ತಮ್ಮ ಗಾನನರ್ತನಗಳಿಂದ ಎಲ್ಲರನ್ನೂ ಆನಂದಗೊಳಿಸಿದರು. ಆನಂತರ ಆ ಗಾಂಧರ್ವನು ರಘುವರನನ್ನು ಭಕ್ತಿಯಿಂದ ನುತಿಗೈದ:

"ಕೈರವನೇತ್ರನೇ, ಹರಿನೀಲನಿಭಗಾತ್ರನೇ, ಶುಭಚರಿತ್ರನೇ, ಪರಾತ್ಪರನೆ ನಿನಗೆ ಶರಣು. ಎಲ್ಲ ಪ್ರಾಣಿಗಳನ್ನು ಪ್ರಾರಬ್ಧವೆಂಬ ಪಾಶದಿಂದ ಬಂಧಿಸಿ, ಸುಖ ಅಸುಖಗಳನ್ನು ಉಣಿಸಿ, ಕುಣಿಸಿ ದಣಿಸಿ, ಮೋಹಚಪಲತೆಗಳಲ್ಲಿ ಸಿಲುಕಿ ತೊಳಲುವಂತೆ ಮಾಡುವ ಕಪಟನಾಟಕಸೂತ್ರಧಾರ ಶ್ರೀರಘುವರ, ನಿನಗೆ ಶರಣು. ಸಕಲ ಇಂದ್ರಿಯಗಳಲ್ಲಿಯೂ ಸೇರಿ ಸುಖಾಸ್ಪದವೆನ್ನಿಸಿ ಬಂಧುರ ಆನಂದವನ್ನು ಪಡೆದೂ ಒಳಹೊರಗೆ ಸೇರಿದ್ದರೂ ಅಂಟಿಯೂ ಅಂಟದಂತೆ ಸೇರಿಕೊಂಡು ಸರ್ವಸುಖಭೋಕ್ತೃವೆನ್ನಿಸಿ, ಬತ್ತಿಯ ರೂಪದಲ್ಲಿ ನಿಂತು ಎಣ್ಣೆಯನ್ನು ಹೀರುವ ಜ್ಯೋತಿಯಂತೆ ಇರುವ ನಿನ್ನ ಪದದ್ವಂದ್ವಗಳಿಗೆ ಎರಗುತ್ತೇನೆ, ದಯವಿಟ್ಟು ರಕ್ಷಿಸು" ಎಂದು ಅಮಿತಭಕ್ತಿಯಿಂದ ಹೊಗಳುವ ತುಂಬುರನ ಮನೋನೈರ್ಮಲ್ಯವನ್ನು ಮೆಚ್ಚಿ, "ಬೇಕಾದುದನ್ನು ಬೇಡಿಕೋ, ಈಡೇರಿಸುತ್ತೇನೆ" ಎಂದು ಶ್ರೀಕಾಂತನು ಅವನಿಗೆ ವರವನ್ನು ದಯಪಾಲಿಸಿದ. ಆಗ ತುಂಬುರನು, "ಜಗದ್ರಕ್ಷಕನೇ, ನನ್ನ ನಾಲಗೆಯ ಮೇಲೆ ಸತತವೂ ನಿನ್ನ ನಾಮವು ನೆಲೆಸಲಿ, ಕೈಗಳು ನಿನ್ನ ಪರಿಚರ್ಯೆ ಮಾಡುತ್ತಿರಲಿ, ನನ್ನ ತಲೆಯು ಸದಾ ನಿನ್ನ ಮುಂದೆ ಬಾಗಿರಲಿ. ವಲ್ಕಲವನ್ನುಟ್ಟು ಜಟೆಯನ್ನು ಹೊಂದಿ, ಕೈಗಳಲ್ಲಿ ಬಿಲ್ಲುಬಾಣಗಳನ್ನು ಹಿಡಿದು, ಎಡಬಲಗಳಲ್ಲಿ ಸೀತೆ ಲಕ್ಷ್ಮಣರು ಪಾದ ಸೇವೆಯನ್ನುಮಾಡುತ್ತಿರಲು, ಸುತ್ತ ಮುನಿನಿಕರವು ನೆರೆದಿರಲು, ಮಧ್ಯದಲ್ಲಿ ನಿಂತ ನಿಂತ ಮಂಗಳಮೂರ್ತಿಯು ಸದಾ ನನ್ನ ಮಾನಸದಲ್ಲಿರುವಂತೆ ದಯಪಾಲಿಸು" ಎಂದು ಬೇಡಿಕೊಂಡ. ಅವನ ಸ್ತುತಿಗೆ ಸಂತಸಗೊಂಡು ಶ್ರೀರಾಮಪುರದರಸನು, 'ನನ್ನ ಬಗ್ಗೆ ಅತಿಶಯವಾದ ಭಕ್ತಿಯನ್ನು ಹೊಂದಿ, ನನ್ನ ಸನ್ಮೂರ್ತಿಯನ್ನು ಸದಾ ನಿನ್ನ ಅಂತರಂಗದಲ್ಲಿರಿಸಿಕೊಂಡು ಸುಖವಾಗಿರು' ಎಂದು ವರವನ್ನು ದಯಪಾಲಿಸಿದ. ಆಗಲೂ ತುಂಬುರನ್ನು ಕೆಲ ಕಾಲ ರಾಮಸ್ತವನ ಮಾಡಿ ತನ್ನ ಲೋಕಕ್ಕೆ ತೆರಳಿದ. ಇತ್ತ ಮುನಿಜನರೆಲ್ಲರೂ ಅಮಿತ ಭಕ್ತಿಯಿಂದ ಶ್ರೀರಾಮಚಂದ್ರನನ್ನು ಹೊಗಳುತ್ತ ಪೂಜಿಸಿದರು.

೨. ಶರಭಂಗಮುನಿಗೆ ಮೋಕ್ಷವನ್ನಿತ್ತು, ಅಗಸ್ತ್ಯನ ಶಿಷ್ಯನಾದ ಸುತೀಕ್ಷ್ಣನ ಆಶ್ರಮಕ್ಕೆ ಬಂದದು

ಭಯಂಕರವಾದ ರಾಕ್ಷಸಾಕಾರವನ್ನು ಬಿಟ್ಟು ಸುಂದರವಾದ ದೇಹವನ್ನು ಹೊಂದಿ ಆಗಸದಲ್ಲಿ ನಿಂತುಕೊಂಡು ಶಂಬರನು ಶ್ರೀರಾಮನನ್ನು ಸ್ತುತಿಸಿದ ಬಳಿಕ ಮುಂದೆ ಹೋಗಬೇಕಾದ ದಾರಿಯನ್ನು ವಿವರಿಸಿದ: "ಐದೂವರೆ ಯೋಜನಗಳಷ್ಟು ದೂರದಲ್ಲಿ ದೇವೇಂದ್ರನ ಅರಮನೆಯಂತೆ ಕಂಗೊಳಿಸುವ ಶರಭಂಗ ಮುನಿಯ ಆಶ್ರಮವಿದೆ: ಅಲ್ಲಿಗೆ ಹೋದರೆ ನೀವು ಸುಖದಿಂದಿರಬಹುದು" ಎಂದು ಹೇಳಿ ಅವರಿಂದ ಬೀಳ್ಕೊಂಡ. ಭೀಕರಯುದ್ಧದಲ್ಲಿ ರಕ್ಕಸನನ್ನು ನಾಶಪಡಿಸಿದ ರಘುನಾಥನು ಸೀತೆಯನ್ನು ಆನಂದದಿಂದ ಅಪ್ಪಿಕೊಂಡು ಸಮಾಧಾನಪಡಿಸಿ, ಅಲ್ಲಿದ್ದ ಮುನಿಗಳಿಗೆ, "ಕ್ರೂರವಾದ ಕಾಡುಪ್ರಾಣಿಗಳಿರುವ ಪ್ರದೇಶವನ್ನು ಬಿಟ್ಟು ತುಂಬುರ ಹೇಳಿದ ಶರಭಂಗನ ಆಶ್ರಮಕ್ಕೆ ನಾವು ಹೋಗುತ್ತೇವೆ" ಎಂದು ತನ್ನ ತೀರ್ಮಾನವನ್ನು ತಿಳಿಸಿದ. ಆಗ ಮುನಿಜನರೆಲ್ಲರೂ ತಾವೂ ಅವರೊಡನೆ

ಬರುವುದಾಗಿ ಹೇಳಿ ಹೊರಟರು. ಸೂರ್ಯ ಅಗ್ನಿಗಳಂತೆ ಹೊಳೆಯುವ ರಥದಲ್ಲಿ ದಿವ್ಯಾಂಬರಭೂಷಣಗಳನ್ನು ಧರಿಸಿದ ದೇವೇಂದ್ರನು ವಿಬುಧಗಣಗಳಿಂದ ಕೂಡಿ ಕಣ್ಸೆಳೆದ. ಶುಭಾಕಾರದ ರಥಗಳು ಎರಡೂ ಪಕ್ಕಗಳಲ್ಲಿ ನಿಂತಿರಲು, ಅವುಗಳ ಕಾಂತಿಯು ಭೂತಳವನ್ನು ಆವರಿಸಿರಲು, ರಘುವೀರನು ಪ್ರಭಾಮಂಡಲವನ್ನು ಕಂಡ. ಬೀಸುತ್ತಿರುವ ಚಾಮರಗಳು, ಬೆಳ್ಗೊಡೆ, ಅಕ್ಕಪಕ್ಕದಲ್ಲಿ ಹಾಡಿ ಹೊಗಳುತ್ತಿರುವ ತುಂಬುರರೇ ಮುಂತಾದವರಿಂದ ಸುತ್ತುವರಿದಿದ್ದ ಸೂರ್ಯಮಂಡಲವು ಕಾಣಿಸಿ ಅವನಿಗೆ ಅಚ್ಚರಿಯೆನಿಸಿತು. ಪ್ರಭೆಯು ದಟ್ಟವಾಗಿ ಅಂತರಿಕ್ಷದಲ್ಲಿರಲು ಋಷಿಸಮೂಹವೆಲ್ಲ ಸ್ತುತಿಸುತ್ತಿರಲು, ಶರಭಂಗನು ಸಂಭ್ರಮದಿಂದ ಸಲ್ಲಾಪವನ್ನು ನಡೆಸುತ್ತಿದ್ದ. ಈ ಆಶ್ಚರ್ಯವನ್ನು ಕಂಡ ಶ್ರೀರಾಮನು ಲಕ್ಷ್ಮಣನನ್ನು ಕುರಿತು, "ಬೆಳಕಿನ ರಾಸಿಯೇ ಭೂಮಿಗಿಳಿದು ಬಂದಂತೆ ಸೂರ್ಯನ ತೇಜಸ್ಸನ್ನು ಹೊಂದಿ ರಾರಾಜಿಸುವ ಶಕ್ರನನ್ನು ನೋಡು. ಹಿಂದೆ ನಾವು ಪುರಾಣಕತೆಗಳಲ್ಲಿ ಕೇಳಿದಂತಹ ಶ್ರೇಷ್ಠ ಕುದುರೆಗಳನ್ನು ಕಟ್ಟಿದ ರಥವು ಇಲ್ಲಿದೆ; ಅವನ ಬಳಿ ಅಪರಿಮಿತ ಸಂಖ್ಯೆಯ ಧನುರ್ಧಾರಿಗಳಿದ್ದಾರೆ; ದಿವ್ಯಾಭರಣಗಳನ್ನು ಧರಿಸಿ ಇಪ್ಪತ್ತೈದು ವರ್ಷದ ಯೌವನದಿಂದ ಕೂಡಿ ಶೋಭಿಸುವ ಇವರು ದೇವತಾಕಾರನೆಂದು ನನಗೆ ತೋರುತ್ತಿದೆ. ನೀನು ಸೀತೆಯೊಡನೆ ಅರುಗಿನಲ್ಲಿ ಸ್ವಲ್ಪ ಕಾಲ ನಿಂತುಕೊಂಡಿರು; ನಾನು ಹೋಗಿ ವಿಚಾರವನ್ನೆಲ್ಲ ವಿವರವಾಗಿ ತಿಳಿದುಕೊಂಡು ಬಂದು ನಿಮಗೆ ಹೇಳುತ್ತೇನೆ" ಎಂದು ರಘುನಾಥನು ಶರಭಂಗನ ಆಶ್ರಮವನ್ನು ಹೊಕ್ಕ.

ಅಲ್ಲಿದ್ದ ಋಷಿಮುನಿಗಳ ಜೊತೆಯಲ್ಲಿ ದೇವೇಂದ್ರನು ಮಾತಾಡುತ್ತಿರುವುದನ್ನು ಕಂಡು, 'ದೇವತೆಗಳ ಸ್ವಭಾವವು ನರರಿಗೆ ತಿಳಿಯಲಾಗದು' ಎಂದುಕೊಂಡು ಕೊಂಚ ಹೊತ್ತು ಪಕ್ಕಕ್ಕೆ ಸರಿದು ಆನಂತರ ಮುನಿಯನ್ನು ವಿಚಾರಿಸಬೇಕೆಂದುಕೊಂಡನು. ಅಷ್ಟರಲ್ಲಿ ಶರಭಂಗನೊಡನೆ ಸುರನಾಥನು ವಿನಯದಿಂದ, "ಸ್ವಾಮಿ, ತಮ್ಮ ದರ್ಶನಕ್ಕಾಗಿ ರಘುನಾಯಕನು ತಾನಾಗಿ ತಾನು ಇಲ್ಲಿಗೆ ಬರುತ್ತಾನೆ. ನಿಷ್ಕಾಮದಿಂದ ಮಹಾ ಕಾರ್ಯಗಳನ್ನು ಎಸಗಿದವರು ಆತನನ್ನು ನೋಡಬಲ್ಲರೇ ಹೊರತು ಭೂಮಿಯಲ್ಲಿನ ಸಾಮಾನ್ಯರಿಗೆ ಅಸಾಧ್ಯ. ತಮ್ಮ ಚರಣಬಲದಿಂದ ಶ್ರೀರಾಮನ ಪಾದಕಮಲಗಳನ್ನು ಕಂಡು ಸುಖಿಯಾಗುವೆನಾದರೂ, ಹರಿಯ ಕಟ್ಟಳೆಯನ್ನು ಮೀರುವುದು ಜಗತ್ತಿನಲ್ಲಿ ಯಾರಿಗೆ ತಾನೇ ಆದೀತು? ತಾವು ಶ್ರೀಹರಿಯನ್ನು ಸತ್ಕರಿಸಿ ಕುಶಲವನ್ನು ವಿಚಾರಿಸಿ ಬರುವವರೆಗೂ ನಾನು ದೇವತೆಗಳೊಡನೆ ಕಾಣದಂತೆ ನಿಂತುಕೊಂಡಿರುತ್ತೇನೆ" ಎಂದು ಹೇಳಿ ಹೋದ. ಹೀಗೆ ದೇವೇಂದ್ರನು ಹೋದ ಬಳಿಕ ರಾಮನು ಜಾನಕಿಸೌಮಿತ್ರಿಯರನ್ನು ಕರೆದು, ಸಾತ್ವಿಕತೆಯಿಂದ ಕೂಡಿ ಅಗ್ನಿಹೋತ್ರದ ಘೋಷದಿಂದ ಶೋಭಿಸುತ್ತಿದ್ದ ಶರಭಂಗನ ಆಶ್ರಮದ ಕಡೆಗೆ ಹೊರಟ. ಶಂಭುವಿನಂತೆ ರಾರಾಜಿಸುತ್ತಿದ್ದ ಮುನಿಯ ಬಳಿ ಹೋಗಿ ಮೂವರೂ ನಮಸ್ಕರಿಸಿ ಪರಮ ಭಕ್ತಿಯಿಂದ ಸ್ತುತಿಸಿದರು. ಅವರನ್ನು ಹಿಡಿದೆತ್ತಿದ ಮುನಿಶ್ರೇಷ್ಠನು, "ಭೂಲೋಕವನ್ನು ಕಾಪಾಡುವ ಕಾರಣದಿಂದ ಮನುಷ್ಯನ ಅವತಾರವನ್ನು ತಾಳಿರುವೆಯೇ ವಿನಾ ಮಾನವನ ಮಿತಿಯೊಳಗೆ ಸಿಲುಕುತ್ತೀಯೇನು! ಪರಮಾತ್ಮನೇ, ನೀನು ಸಕಲಜೀವರ ಸೂತ್ರ ಎಂಬುದನ್ನು ನಾನು ಬಲ್ಲೆ. ಇಷ್ಟು ದಿನ ನಾನು ಮಾಡಿದ

ಶ್ರದ್ಧಾಪೂರ್ಣ ತಪಸ್ಸಿಗೆ ನೀನು ಕರುಣೆಯಿಂದ ಒಳಿತನ್ನು ಮಾಡಲು ಬಂದಿರುವೆಯಲ್ಲದೆ, ಅಜ್ಞಾನದಿಂದ ಕೂಡಿ ದಾನ ಅಧ್ಯಯನ ತಪಸ್ಸುಗಳನ್ನು ಮಾಡಿ ನಿನ್ನನ್ನು ಒಲಿಸಿಕೊಳ್ಳಲು ಸಾಧ್ಯವೇ? ಪರಮಪುರುಷನೇ, ನೀನು ನನ್ನ ಆಶ್ರಮಕ್ಕೆ ಬಂದುದು ಎಷ್ಟು ಜನ್ಮಗಳ ಸುಕೃತದ ಫಲವೋ" ಎಂದು ಶ್ರೀರಾಮನ ಇಂದ್ರಾರ್ಚಿತ ಚರಣವನ್ನು ತೊಳೆದು ಪೂಜಿಸಿ ಸುಖಾಸನವನ್ನಿತ್ತು ಹಣ್ಣುಗೆಣಸುಗಳನ್ನು ನೀಡಿ ಭಯಭಕ್ತಿಯಿಂದ ಉಪಚರಿಸಿದ.

ಪ್ರೀತಿಯಿಂದ ಅರ್ಪಿಸಿದ ಮುನಿಯ ಪೂಜೆಯನ್ನು ಸ್ವೀಕರಿಸಿದ ರಘುವರನು ಅನುಕಂಪದಿಂದ, "ಎಲೈ ಮುನಿವರೇಣ್ಯನೇ, ಈ ತಪೋವನಕ್ಕೆ ಈಗ ತಾನೇ ಬಂದಿದ್ದವರು ಯಾರು?" ಎಂದು ವಿಚಾರಿಸಿದ. ಆಗ ಶರಭಂಗಮುನಿಯು, "ಹೇಳುತ್ತೇನೆ ಕೇಳು, ನಾನು ಈ ನನ್ನ ಜೀರ್ಣಗೊಂಡ ದೇಹವನ್ನು ಬಿಟ್ಟು ಸ್ವರ್ಗಕ್ಕೆ ಹೋಗಬೇಕೆಂದು ನಿಶ್ಚೈಸಿದ್ದೆ. ಅದನ್ನು ತಿಳಿದ ದೇವೇಂದ್ರನು ತನ್ನ ಸೈನ್ಯಬಲದೊಡನೆ ನನ್ನನ್ನು ಕರೆದೊಯ್ಯಲು ಬಂದಿದ್ದ. ಅಷ್ಟರಲ್ಲಿ ಶ್ರೀಹರಿಯ ದಯೆಯಿಂದ ಮನುಷ್ಯನಾಗಿ ಹುಟ್ಟಿ ದಂಡಕಾರಣ್ಯದ ಋಷಿಗಳನ್ನು ಕಾಪಾಡಲೆಂದು ನೀನು ಬಂದಿರುವ ವಿಷಯವನ್ನು ಸಮಾಧಿಯಿಂದ ತಿಳಿದು ನಿನ್ನ ಚರಣಗಳನ್ನು ದರ್ಶಿಸಬೇಕೆಂದು ನಾನಿಲ್ಲೇ ಉಳಿಯಲು, ಇಂದ್ರನು ತನ್ನ ಬಲದೊಡನೆ ತನ್ನ ನೆಲೆಗೆ ನಡೆದ. ನನ್ನ ಆಶ್ರಮದಲ್ಲಿ ಪರಮೇಷ್ಠಿಯ ಇರವು ಆನಂದಕರ, ಕರುಣಾಳುಗಳ ದೇವನೇ ನಿನ್ನನ್ನು ಮೊರೆವೊಕ್ಕೆ, ಕಾಪಾಡು. ಹುಟ್ಟಿದಂದಿನಿಂದ ನಾನು ಗಳಿಸಿರುವ ಪುಣ್ಯರಾಶಿಯನ್ನು ನಿನ್ನ ಅಡಿದಾವರೆಗಳಲ್ಲಿ ಸಮರ್ಪಿಸಿದ್ದೇನೆ, ಅದನ್ನು ಕರುಣೆಯಿಂದ ಸ್ವೀಕರಿಸಿ ನನ್ನನ್ನು ಸದ್ಗತಿಗೆ ಅರ್ಹನನ್ನಾಗಿಸು. ನಾನು ಈ ಸವೆದುಹೋದ ದೇಹವನ್ನು ತೊರೆದು ತೇಜೋಮಯವೂ ಆನಂದಭರಿತವೂ ಆದ ಶರೀರವನ್ನು ಹೊಂದಿ ನಿನ್ನ ದಯದಿಂದ ಒಂದು ಕ್ಷಣ ಶೋಭಿಸುತ್ತೇನೆ, ನೋಡು" ಎಂದು ಸ್ತುತಿಗೈದ. ಪಂಚೋಪಚಾರಗಳಿಂದ ಸತ್ಕರಿಸಿದ ಅಗ್ನಿಯನ್ನು ಹೊಕ್ಕು, ಪೊರೆಯನ್ನು ಕಳಚಿಕೊಂಡ ಹಾವಿನ ರೀತಿಯಲ್ಲಿ, ತನ್ನ ಕೃಶವಾದ ಮೃಣ್ಮಯದೇಹವನ್ನು ಬಿಟ್ಟು ಹೊರಬಂದು ಉಜ್ವಲತಮವಾದ ದೇಹದಿಂದ ಕೂಡಿ ಮಾಲೆ ಆಭರಣ ದಿವ್ಯವಸ್ತ್ರಗಳನ್ನು ಧರಿಸಿ ದಿವ್ಯರಥದಲ್ಲಿ ಕುಳಿತು ಆಕಾಶದಲ್ಲಿ ನಿಂತು ರಘುನಾಯಕನಿಗೆ ಅತುಳವಾದ ಭಕ್ತಿಯಿಂದ ಬಲವಂದು ನಮಸ್ಕರಿಸಿ ಮತ್ತೆ ಮುನಿವರನು ಸ್ತುತಿಸಿದ: "ಭಾವನಾತೀತ, ಚಿತ್‌ಸ್ವರೂಪ, ಜೀವಾಧಾರ, ಪಾವನಾಕಾರ, ಸಕಲಸೂತ್ರಧಾರ, ರಘುವೀರ, ದೇವದೇವೇಶ ನಿನ್ನಡಿಯ ಡಿಂಗರಿಗನು ನಾನು ಎಂದು ಕೃಪೆದೋರಿ ಸಲಹು. ಚೀರಕೃಷ್ಣಾಜಿನಾಂಬರ, ಚಿದಂಬರ, ಜಟಾಧಾರಿ, ಶರಚಾಪಕರ, ಧರಣಿಜಾವರ, ಸಮಿತ್ರಾತನಯಸಂಸೇವಿತ, ಚಾರುತರಮೂರ್ತಿ, ನನ್ನ ಅಂತರಂಗದಲ್ಲಿ ಶುಭಾಕಾರದ ನಿನ್ನ ಮೂರ್ತಿಯು ಎಡೆಬಿಡದೆ ಕಾಣುತ್ತಿರುವಂತೆ ದಯೆಗೈದು ಕಾಪಾಡು, ದೀನಾರ್ತಿಹರ, ರಘುವೀರ, ಕಾರುಣಿಕನೇ." ಆನಂತರ, "ಅಗಸ್ತ್ಯನ ಶಿಷ್ಯನಾದ ಸುತೀಕ್ಷ್ಣ ಎಂಬ ಹೆಸರಿನ ಯೋಗಮಯನೂ ಅತಿಶಾಂತನೂ ಆದ ಮುನಿಯೊಬ್ಬನಿದ್ದಾನೆ. ನೀವು ಅವನ ಆಶ್ರಮಕ್ಕೆ ಹೋದರೆ ಸಕಲರಿಗೆ ಹಿತವನ್ನು ಬಯಸುವ ಅವನಿಂದ ಒಳಿತಾಗುತ್ತದೆ" ಎಂದು ಹೇಳಿ, ಸೀತಾಲಕ್ಷ್ಮಣಸಹಿತ ಶ್ರೀರಾಮನು ತನ್ನ ಹೃತ್ಕಮಲದಲ್ಲಿ ಸದಾ ನೆಲಸಿರಲೆಂದು ಬೇಡಿಕೊಂಡು ಶರಭಂಗಮುನಿಯು ಬ್ರಹ್ಮನ ಪಾದಗಳನ್ನು ಸೇರಿದ. ಆ ಅದ್ಭುತವನ್ನು ಏನೆಂದು ವರ್ಣಿಸುವುದು! ತನ್ನ

ಸೂಕ್ಷ್ಮಮತಿಯಿಂದ ಮುನಿಪೋತ್ತಮನು ಬರುವುದನ್ನು ನೋಡಿದ ಬ್ರಹ್ಮದೇವನು ಅವನನ್ನು ಸಂತಸದಿಂದ ತಬ್ಬಿಕೊಂಡು ಕ್ರಮವಾದ ಪರಿಚರಣೆಯಿಂದ ಸಂತಸಗೊಳಿಸಿದ.

ಇತ್ತ ಶ್ರೀರಾಮಚಂದ್ರನ ಬಳಿಗೆ ಬ್ರಹ್ಮಪೀಠವನ್ನು ಅತಿಕ್ರಮಗೈದು ವಾನಪ್ರಸ್ಥದಲ್ಲಿರುವ ಬ್ರಾಹ್ಮಣರಾದ ವೈಖಾನಸರು, ಮಹರ್ಷಿಗಳಾದ ವಾಲಖಿಲ್ಯರು ಪ್ರಜಾಪತಿಗಳಲ್ಲಿ ಒಬ್ಬರಾದ ಮರೀಚಿಗಳು ಮುಂತಾದ ಋಷಿಗಳು ಬಂದರು. ಅವರಲ್ಲಿ ಕೆಲವರು ಕೇವಲ ಎಲೆಗಳನ್ನು ತಿಂದು ಬದುಕುತ್ತಿದ್ದವರು, ಕೆಲವರು ಗೆಡ್ಡೆಗಳನ್ನು ಮಾತ್ರ ತಿನ್ನುವವರು, ಮತ್ತೂ ಕೆಲವರು ಚಂದ್ರನ ವೃದ್ಧಿ ಕ್ಷಯಗಳಿಗನುಗುಣವಾಗಿ ಆಹಾರ ಸೇವಿಸುವ ವ್ರತಧಾರಿಗಳು, ಇನ್ನೂ ಕೆಲವರು ನಿರಾಹಾರಿಗಳಾದ ತಪೋಜೀವನಿಕರು, ಕೆಲವರು ಗಗನಾವಾಸರು, ಕೆಲವರು ಚಿಂದಿಯುಟ್ಟವರು, ಕೆಲವರು ಗುಹೆಗಳಲ್ಲಿ ವಾಸಿಸುವವರು – ಎಲ್ಲರೂ ಅಂಬುದಳಾಕ್ಷ ರಾಮನನ್ನು ನೋಡುವ ಬಯಕೆಯಿಂದ ಬಂದರು. ಆ ವಿಮಲಮತಿಗಳೆಲ್ಲ ಕತ್ತಲನ್ನು ಓಡಿಸುವವನ ಬಳಿಗೆ ಬಂದು ಆಶೀರ್ವಚನಗಳನ್ನಾಡಿ, "ದೇವತೆಗಳಿಗೆ ಇಂದ್ರನು ಹೇಗೋ ರಘುವಂಶಸಂಭೂತನೂ ಯಶೋನಿಲಯನೂ ಆದ ಸೂರ್ಯವಂಶದ ಪರಂಪರೆಯ ಮಹಾರಾಜನು ಭೂಮಂಡಲವನ್ನು ಪೊರೆಯುವವನು. ನಮ್ಮ ಮನಸ್ಸಿನಲ್ಲಿರುವ ವಿಷಯವನ್ನು ಕೇಳು: ಉಪವಾಸವ್ರತಿಗಳೂ ಎಲೆಗಳನ್ನುಣ್ಣುವವರೂ ಆಗಿ ಕಠಿಣ ತಪಸ್ಸಿನಲ್ಲಿ ತೊಡಗಿರುವ ಮುನಿಗಳೂ ತಮ್ಮ ತಪಃಫಲದ ಆರನೆಯ ಒಂದು ಪಾಲನ್ನು ಭೂಮಿಯೊಡೆಯನಿಗಿತ್ತು ಧರ್ಮವನ್ನು ಹೆಚ್ಚಿಸಿ ಸುಖವನ್ನುಂಟುಮಾಡುವ ಸುಬ್ರಾಹ್ಮಣ್ಯಕುಲವು ಯಾವುದೇ ಸ್ಥಿತಿಯಲ್ಲಿದ್ದರೂ ಅವರನ್ನು ಮಹಾರಾಜರು ತನ್ನ ಮಕ್ಕಳೆಂದು ತಿಳಿದು ಸಲಹುತ್ತಾರೆ. ಮನುವಂಶದ ಅರಸುಗಳು ಮೂರು ಲೋಕಗಳ ನಾಯಕರು; ಅವರು ಸಮುದ್ರಪರ್ಯಂತವಾದ ಭೂಮಂಡಲವನ್ನು ರಕ್ಷಿಸಿ ಧರ್ಮಫಲವನ್ನು ಗಳಿಸಿ ಬೇರಾವ ಫಲವನ್ನೂ ನಿರೀಕ್ಷಿಸದೆ ಬ್ರಹ್ಮಗೋತ್ರದವರನ್ನು ಸಲಹುತ್ತಾರೆ. ಜನನಾಥನೇ, ಅನಾಥರಿಗೆ ನೀನಲ್ಲದೇ ಬೇರೆ ಗತಿ ಯಾರಿದ್ದಾರೆ? ಮುನಿಜನರ ಕಷ್ಟಸುಖಗಳನ್ನು ವಿಚಾರಿಸಿ ಮುನಿಗಳನ್ನು ಕಾಪಾಡಬೇಕು. ನಾವು ಮಾಡುವ ತಪಸ್ಸಿಗೆ ರಾಕ್ಷಸರು ಅಡ್ಡಿಪಡಿಸುತ್ತಾರೆ; ಮುನಿಗಳನ್ನು ಹಿಡಿದು ಹಿಂಸೆಗೈದು ಕೊಂದು ತಿನ್ನುತ್ತಾರೆ; ಅವರು ಬಿಸುಟಿರುವ ತಲೆ ಮತ್ತಿತರ ಅಂಗಾಂಗಳನ್ನೂ, ಎಸೆದಿರುವ ದೇಹಗಳನ್ನೂ, ಚೆಲ್ಲಿರುವ ಮೂಳೆ ಮಾಂಸಗಳನ್ನೂ ಸಹಿಸಲಾಗದು. ಅಂತಹ ಅನಾಥರನ್ನು ಪೊರೆಯಲು ನೀನಲ್ಲದೆ ಬೇರಾರು ದಿಕ್ಕು? ನಮ್ಮ ಕಷ್ಟಗಳನ್ನು ದಯವಿಟ್ಟು ನಿವಾರಿಸು. ಮಂದಾಕಿನಿಯಿಂದ ಹಿಡಿದು ಪಂಪಾನದಿ ಕಾವೇರಿ ಮೊದಲಾದ ನದಿಗಳಲ್ಲಿ ಹರಿಯುವ ನೀರಿಗೆ ನಾನಾ ಪ್ರಾಣಿಗಳ ಹಸಿಮಾಂಸವನ್ನು ಸುರಿದು ಕಲುಷಿತಗೊಳಿಸುವುದನ್ನು ದಯವಿಟ್ಟು ನಿಲ್ಲುವಂತೆ ಮಾಡು. ದೀನರಿಗೂ ಶರಣಾಗುವವರಿಗೂ ನೀನೇ ಗತಿ. ನಾವೆಲ್ಲ ನಿನ್ನನ್ನು ಮೊರೆವೊಕ್ಕಿದ್ದೇವೆ. ನಮ್ಮ ಭಯವನ್ನು ಹೋಗಲಾಡಿಸು" ಎಂದು ಆರ್ತರಾಗಿ ಬೇಡಿಕೊಂಡರು.

ಹೀಗೆ ಪಾಪಿ ರಕ್ಕಸರ ಉರುಬೆಗಳನ್ನು ಕೇಳಿದ ಶ್ರೀರಾಮಚಂದ್ರನು ಅವರನ್ನೆಲ್ಲ ಸಂತೈಸಿ ಮುನಿಜನರಿಗೆ ಅಭಯವನ್ನೀಯುವ ಮಾತುಗಳನ್ನಾಡಿ, "ತಪೋಧನರೇ, ನಿಮ್ಮ

ವ್ರತಗಳಿಗೊದಗುವ ವಿಘ್ನಗಳನ್ನು ಹೋಗಲಾಡಿಸಿ ನಿಮ್ಮನ್ನು ಕಾಪಾಡಿ ಧರ್ಮವನ್ನು ಪಾಲಿಸಲೆಂದೇ ಮಹಾರಾಜರು ನನಗೆ ಅಪ್ಪಣೆಯಿತ್ತು ಕಳಿಸಿಕೊಟ್ಟಿದ್ದಾರೆ. ನೀವು ಹೇಳಿದ ರೀತಿಯಲ್ಲಿಯೇ ನಿಮ್ಮ ಸೇವೆಯನ್ನು ಮಾಡುತ್ತ, ತೊಂದರೆ ಕೊಡುವ ರಾಕ್ಷಸರನ್ನೆಲ್ಲ ಸವರಿ ದೇವತೆಗಳನ್ನು ತೃಪ್ತಿಗೊಳಿಸುತ್ತೇನೆ. ನಾವು ನೀಡಿರುವ ಅಭಯವನ್ನು ಮಿಕ್ಕ ತಪಸ್ವಿಗಳಿಗೂ ತಿಳಿಸಿ ನಿಮ್ಮ ನಿಮ್ಮ ಪಾವನ ತಪಗಳನ್ನು ಮುಂದುವರಿಸುತ್ತ ನೆಮ್ಮದಿಯಿಂದಿರಿ" ಎಂದು ಸಮಾಧಾನಗೊಳಿಸಿದ. ಈ ಮಾತುಗಳನ್ನು ಕೇಳಿದ ಆ ಮುನಿವರೇಣ್ಯರಿಗೆ ಮೋಡಗಟ್ಟಿ ಮಳೆಸುರಿದರೆ ಸಸ್ಯಸಂಕುಲವು ಹರ್ಷಗೊಳ್ಳುವಂತೆ ಸಂತಸ ತುಂಬಿತು. "ಇಂದಿರೇಶ, ಮುಕುಂದ, ವೇದವೇದ್ಯಾನಂದ, ಮುದದಿಂದ ಬ್ರಾಹ್ಮಣಕುಲವನ್ನು ಪೊರೆಯಲೆಂದೇ ನೀನು ಅವತಾರ ಮಾಡಿರುವುದನ್ನು ಹಿರಿಯರು ನಮಗೆ ತಿಳಿಸಿದ್ದಾರೆ. ನಿನ್ನ ಹೆಸರಿನ ಎರಡಕ್ಷರಗಳನ್ನುಚ್ಚರಿಸಿದರೆ ಸಾಕು ವಿಪತ್ತುಗಳೆಲ್ಲ ಹರಿದು ಸಂಪತ್ತು ಸುರಿಯುತ್ತದೆ; ನೀನು ಇಲ್ಲಿಯೇ ಇರುವುದರಿಂದ ಇನ್ನು ಮುಂದೆ ನಮಗೆ ಆಪತ್ತು ಎಂಬುದು ಇರುವುದೇ? ದುಷ್ಕೃತ್ಯಗಳೆಲ್ಲ ದೂರ ಸರಿದಂತೇಯೇ ಸರಿ. ನಮಗೆ ಈಗ ಸಂಪೂರ್ಣ ನೆಮ್ಮದಿಯ ಭಾವ ಮೂಡಿದೆ" ಎಂದು ಋಷಿಗಳೆಲ್ಲ ಪರಮ ಹರುಷದಿಂದ ಸ್ತುತಿಸಿದರು. ಆ ಮುನಿತತಿಯ ಜೊತೆಯಲ್ಲಿ ಸೀತಾಲಕ್ಷ್ಮಣರೊಡಗೂಡಿ ವನವನ್ನೆಲ್ಲ ಸುತ್ತು ಹಾಕಿ, ಅಲ್ಲಲ್ಲಿ ಇದ್ದ ತಾಪಸರ ಮನೆಗಳನ್ನು ಕಂಡು, ಅವರನ್ನೆಲ್ಲ ಮತ್ತೆ ಮತ್ತೆ ಸಮಾಧಾನ ಪಡಿಸುತ್ತ **ರಾಮಪುರದರಸನು** ಸುತೀಕ್ಷ್ಣ ಎಂಬ ಹೆಸರಿನ ಮುನಿಯ ಆಶ್ರಮದತ್ತ ನಡೆಯಲು, ಆ ಮುನಿವರರು ಆಶೀರ್ವಾದಪೂರ್ವಕವಾಗಿ ಮಂತ್ರಾಕ್ಷತೆಗಳನ್ನು ಹಾಕಿದರು.

೩. ಅಗಸ್ತ್ಯನ ಉಪದೇಶದಂತೆ ಸುತೀಕ್ಷ್ಣಮುನಿಯು ರಾಮಧ್ಯಾನವನ್ನು ಮಾಡುತ್ತಿದ್ದ ರೀತಿ

ಹಿಮವಂತನ ಆಣುಗಿಯೇ ಕೇಳು, ಶರಭಂಗಮುನಿಯು ಬ್ರಹ್ಮಸಮ್ಮುಖವನ್ನೈದಲು ಶ್ರೀರಾಮನು ಸಕಲ ಮುನಿಸಮೂಹದೊಡನೆ ಅಗಸ್ತ್ಯ ಮಹರ್ಷಿಯನ್ನು ಕಾಣುವ ಕೌತುಕದಿಂದ ಕಮಲಮುಖಿಯಾದ ಸೀತೆ ಮತ್ತು ಲಕ್ಷ್ಮಣರ ಜೊತೆಯಲ್ಲಿ ಕೊನೆಯೇ ಇಲ್ಲದಂತಹ ಅರಣ್ಯದಲ್ಲಿನ ಬೆಟ್ಟಗುಡ್ಡಗಳನ್ನು ನದನದಿಗಳನ್ನು ದಾಟುತ್ತ, ಅಲ್ಲಲ್ಲಿ ನೋಡುತ್ತಲೋ ಸುಧಾರಿಸಿಕೊಳ್ಳುತ್ತಲೋ ನಿಲ್ಲುತ್ತ ಬಂದ. ಈ ಕಾಡು ಇಣುಕಲೂ ಸಾಧ್ಯವಾಗದ ದಟ್ಟವಾದ ಕತ್ತಲಮನೆಯೆಂದು ಭಾವಿಸಿ ಆಕಾಶಮಾರ್ಗದಲ್ಲಿಯೇ ಸಾಗಿದ ಸೂರ್ಯಚಂದ್ರರು ಪಶ್ಚಿಮ ಸಮುದ್ರವನ್ನು ಸೇರಿದರು. ಇದು ಕ್ರೂರ ದಾನವರ ನೆಲೆವನೆ. ಇಲ್ಲಿ ಬರಬೇಡ ಎಂದು ವಿಪಿನದೇವತೆಯೇ ಕೂಗುತ್ತಿದ್ದಾಳೆಯೋ ಎಂಬ ರೀತಿಯಲ್ಲಿ ಪಕ್ಷಿಗಳ ಮೊರೆತ ಕೇಳಿಸಿತು. ನಾಲ್ಕು ದಿಕ್ಕುಗಳಿಂದಲೂ ಕಾಡುಪ್ರಾಣಿಗಳ ಗರ್ಜನೆ ಕೇಳಿಬರುತ್ತಿತ್ತು. ಇದರಿಂದ ಮುನಿನಿಕರವು ಭಯಗೊಳ್ಳಲು ಅವರಿಗೆ ಧೈರ್ಯ ಹೇಳಿ ಮುಂದುವರಿಯುತ್ತಿರಲು ಒಂದು ಗೋಪ್ಯ ಸ್ಥಳದಲ್ಲಿ ಒಂದು ಎಲೆವನೆ ಮಿರುಗುತ್ತಿತ್ತು; ಅಲ್ಲಿ ಕೆಲವು ವಟುಗಳು ಸುಳಿದಾಡುತ್ತಿದ್ದರು. ಅದನ್ನು ಕಂಡು ಇದೇ ಆಶ್ರಮ ಎಂದು

ಭಾವಿಸಿ ಸುತೀಕ್ಷ್ಣನಿರುವ ಜಾಗವನ್ನು ಬಂದು ಸೇರಿದರು. ಪದ್ಮಾಸನದಲ್ಲಿ ಕುಳಿತು ಮೂಗಿನ ತುದಿಯಲ್ಲಿ ತದೇಕವಾಗಿ ದೃಷ್ಟಿಯನ್ನು ನೆಟ್ಟು ತನ್ನ ಹೃದಯಮಂದಿರದಲ್ಲಿ ಸೀತಾಲಕ್ಷ್ಮಣಸಮೇತನಾದ ಶ್ರೀರಾಮಚಂದ್ರನನ್ನಿರಿಸಿಕೊಂಡು, ಜಟಾಮಂಡಲವನ್ನು ಹೊಂದಿ ಅಲೆಗಳಿಲ್ಲದ ಸಾಗರದಂತೆ ಚಲನೆಯಿಲ್ಲದೆ ಒಂದೆಡೆಯೇ ಕುಳಿತಿದ್ದ ಮುನಿಯನ್ನು ಕಂಡು ರಘುವರನು ಅಚ್ಚರಿಗೊಂಡ. ನಿಶ್ಚಲವಾಗಿ ಕುಳಿತಿದ್ದುದರಿಂದ ಇಂದ್ರಿಯಗಳು ದೂರ ತೊಲಗಿ ಚಿದಾನಂದ ಸಾಗರದಲ್ಲಿ ಮುಳುಗೇಳುತ್ತ ಈ ಜಗತ್ತನ್ನು ಮರೆತು ಅಲುಗಾಡದಿದ್ದ ಅವನಿಗೆ ಅಕ್ಕಪಕ್ಕದಲ್ಲಿದ್ದವರು ತಿಳಿಸಲು ಎಚ್ಚೆತ್ತು ತನ್ನ ಹೃದಯದಲ್ಲಿದ್ದ ಮೂರ್ತಿಯು ನೆಲದ ಮೇಲೆ ನಿಂತಿರುವುದನ್ನು ಕಂಡು ಆನಂದದಿಂದ ಪುಳಕಗೊಂಡ. ಪರಬ್ರಹ್ಮನನ್ನು ಕಂಡ ಹರುಷರಸವು ಉಕ್ಕೇರಿ ಮುಂದುಗಡೆಯೇ ಇದ್ದ ಸುಖರಾಶಿಯನ್ನು ನೋಡಿದ ಮುನಿಪತಿಯು ಭಾವಭರಿತನಾಗಿ ಸ್ತುತಿಸಿದ. ಹರಬ್ರಹ್ಮರೇ ಮೊದಲಾದವರು ಕಾಣದ ದಿವ್ಯಚರಣಗಳು ತನ್ನ ತಪಃಫಲವಾಗಿ ಕೈಸಾರಿತೆಂದು ಭಕ್ತಿಭರದಿಂದ ರಾಮನ ಕಾಲುಗಳಿಗೆರಗಿದ. ಕುಲ ಬಲ ಆಶ್ರಮ ದೇಹ ಮೋಹ ಪಾಶಗಳಿಂದ ಬಿಗಿದ ನಿನ್ನ ಮಾಯಾಶಕ್ತಿಯು ಬಂಧುಜನರು ಸತಿಸುತರು ಎಂಬ ಆಳಸಮುದ್ರದ ನಡುವೆ ಬೀಳಿಸಿದ ಪರಿಯನ್ನೇನೆಂದು ಹೇಳುವುದು? ಜಲಜಾಕ್ಷ, ಮೂಲೋಕದರಸ, ನನ್ನ ಮೇಲೆ ಕರುಣೆಯಿಟ್ಟು ಉದ್ಧರಿಸಬೇಕು ಎಂದು ಕಣ್ಣುಗಳನ್ನು ಮುಚ್ಚಿಕೊಂಡು ಆನಂದಕರಮೂರ್ತಿಯನ್ನು ಮುನಿಶ್ರೇಷ್ಠನು ಪ್ರಾರ್ಥಿಸಿದ. "ಮೂರು ಗುಣಗಳನ್ನು ಸೃಷ್ಟಿಸಿ ಅವುಗಳಲ್ಲಿ ಸೇರದೆ, ಮೂರು ಮೂರ್ತಿಗಳ ರೂಪಧಾರಣೆ ಮಾಡಿ ಅವರಿಗೆ ಅಧಿಕಾರವಿತ್ತೂ ಅವರಲ್ಲಿ ಸೇರದೆ, ಮೂಲೋಕಗಳ ಒಳಹೊರಗೆ ಬೇರೆಲ್ಲ ಆಕಾರಗಳನ್ನು ಹೊಂದಿ, ನಾನಾ ಮಡಕೆಗಳ ನೀರಿನಲ್ಲಿ ಕಾಣುವ ರವಿಬಿಂಬಗಳಂತೆ, ಬೇರೆ ಬೇರೆಯಾಗಿ ಕಾಣಿಸಿಕೊಂಡ ಚಿನ್ಮಯ ಚಿದಾನಂದನೇ ನಿನಗೆ ವಂದಿಸುತ್ತೇನೆ. ಎಲ್ಲ ಜೀವಿಗಳಲ್ಲಿ ಸೇರಿಯೂ ಭಕ್ತರ ಹೃದಯಗಳಲ್ಲಿ ಮಾಯೆ ಸೇರದಂತೆ ನಿನ್ನ ನೆಲೆಯೆನ್ನಿಸಿ, ನಿನ್ನ ಧ್ಯಾನದಿಂದ ವಿಮುಖರಾದವರಲ್ಲಿ ಗರ್ವಾಂಧಕಾರವನ್ನು ತುಂಬಿ ನಿನ್ನ ಸನ್ನಾಮವನ್ನು ಸದಾ ನೆನೆಸುವ ಲೋಗರಿಗೆ ಕಲ್ಪವೃಕ್ಷದಂತೆ ಬಯಸಿದುದನ್ನು ನೀಡುವ ಉದಾರಿ ನೀನು. ರೂಪೇ ಇಲ್ಲದ ವಸ್ತುವು ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದು, ಮರಕತದ ದೇಹಕಾಂತಿಯಿಂದ ಕೂಡಿ, ಜಟಾಧಾರಿಯಾಗಿ ವಲ್ಕಲವನ್ನುಟ್ಟು ನಸುನಗೆಯಿಂದ ಕೂಡಿ, ಸೇರೆಗಣ್ಣಿನ ಕೋಮಲೆಯಾದ ಜಾನಕಿ ಹಾಗೂ ನಿತ್ಯಸೇವಕ ಲಕ್ಷ್ಮಣನ ಜೊತೆಗೂಡಿ ಹೊಸಜವ್ವನಿಗನಂತೆ ಮನುಷ್ಯಾಕಾರವನ್ನು ಪಡೆದು ಶೋಭಿಸುತ್ತಿರುವೆಯಲ್ಲ, ಇದೇನಾಶ್ಚರ್ಯ! ದೇಶಕಾಲಗಳಿಂದ ಕೂಡಿದ ಸುರೇಶಹರಬ್ರಹ್ಮರಿಂದಲೂ ನಿಗಮಗಳಿಂದಲೂ ದೂರನಾಗಿ, ಸಕಲ ಪಾಶಗಳಿಂದ ನಿರ್ಮುಕ್ತನಾಗಿ ವೇದಮಂದಿರನೆನಿಸಿ ಮನಸ್ಸು ಮಾತುಗಳಿಗೆ ಕಾಣಿಸದೆ ಎಲ್ಲವನ್ನೂ ಸೃಷ್ಟಿಸಿ ಪೊರೆಯುತ್ತಿರುವವನೇ, ನೀನು ಶರಣರನ್ನು ಕಾಪಾಡಲೆಂದು ದಯದಿಂದ ಮನುಜರೂಪವನ್ನಾಂತು ಕಂಗೊಳಿಸುತ್ತಿರುವೆಯಲ್ಲದೆ ಸಾಮಾನ್ಯರಿಗೆ ನೀನು ಗೋಚರಿಸದೆ ಇರುವೆ. ನಿನ್ನನ್ನು ಭಜಿಸುವವರಿಗೆ ವಿವೇಕವನ್ನು ನೀಡಿ ಅವರನ್ನು ಮಾಯೆಯು ಹೊದ್ದದಂತೆ ಮಾಡುತ್ತೀಯೆ, ನಿನಗೆ ವಿಮುಖರಾಗಿರುವವರಿಗೆ ದಟ್ಟವಾದ ಹೃತ್ಕತ್ತಲೆಯನ್ನು

ಂಟುಮಾಡುವೆ, ನಾನು ಎಂದೆಂದಿಗೂ ರಾಮನಾಮದಾಸನೆಂದು ಬಗೆದು ನಿನ್ನ ಮೂರ್ತಿಯು ಸದಾ ನನ್ನ ಚಿತ್ತದಲ್ಲಿ ನೆಲಸುವಂತೆ ಮಾಡು." ಹೀಗೆ ನಾನಾ ಪರಿಯಲ್ಲಿ ಭಕ್ತಿಭಾವದಿಂದ ಹಾಡುತ್ತ ಹೊಗಳುತ್ತ ತನ್ನ ಗುರು ಅಗಸ್ತ್ಯರು ಹೇಳಿದ್ದ ರೀತಿಯಲ್ಲಿ ಅರ್ಚನೆಮಾಡಿ ತನ್ನ ಕೈಗಳಿಂದ ಶ್ರೀರಾಮನ ಪಾದಗಳನ್ನು ತೊಳೆದು ಆ ನೀರನ್ನು ಸೇವಿಸಿ ಶಾಶ್ವತಪದವನ್ನು ಹೊಂದಿದ ಮುನಿಯು ಹರ್ಷದಿಂದ ಮಾಡಿದ ಉಪಚಾರಗಳನ್ನು ಸ್ವೀಕರಿಸಿದ ಶ್ರೀಹರಿಯು ಸಂತಸದಿಂದ ಸ್ವಲ್ಪಕಾಲ ಆ ಆಶ್ರಮದಲ್ಲಿದ್ದು ತನ್ನ ಭಕ್ತರಿಗೆ ನಿರತಿಶಯ ಸುಖವನ್ನು ನೀಡಿದ.

ಆಗ ಪಾರ್ವತಿಯು ಹರನನ್ನು ಕುರಿತು, "ದೇವರೇ, ಸುತೀಕ್ಷ್ಣಮುನಿಯು ತನ್ನ ಗುರುಗಳಾದ ಅಗಸ್ತ್ಯರು ಹೇಳಿದ ರೀತಿಯಿಂದ ಶ್ರೀರಾಮನನ್ನು ಅರ್ಚಿಸಿದ ಎಂದು ಹೇಳಿದಿರಲ್ಲ. ಆ ಅರ್ಚನಾವಿಧಿ ಯಾವುದು? ದಯವಿಟ್ಟು ವಿಸ್ತರಿಸಿ ಹೇಳಬೇಕು" ಎಂದು ಪ್ರಾರ್ಥಿಸಿಕೊಂಡಳು. ಆಗ ನಾಗಾಭರಣನು ಆ ಪೂಜಾವಿಧಿಯನ್ನು ಕುರಿತು ಹೇಳತೊಡಗಿದ: "ನಾನಾ ಬಗೆಗಳಿಂದ ವೇದಗಳು ಹೇಳುವುದನ್ನು ಮುನಿವರರುಗಳು ಅನೇಕ ವಿಧವಾದ ಭಕ್ತಿಯಿಂದ ಸದಾ ಅರ್ಚನೆಗೈಯುತ್ತಾರೆ; ಅದಕ್ಕೆ ಕೊನೆಯೆಂಬುದೇ ಇಲ್ಲ. ನಾನೀಗ ಮೇದಿನಿಯ ಹಿತಕ್ಕಾಗಿ ಆ ಪೂಜಾವಿಧಾನವನ್ನು ಸ್ವಲ್ಪದರಲ್ಲಿ ಹೇಳುತ್ತೇನೆ; ಅದನ್ನು ಅನುಷ್ಠಾನಗೈದರೆ ಕೃತಕೃತ್ಯತೆಯುಂಟಾಗುತ್ತದೆ. ಬೆಳಿಗ್ಗೆ ಏಳುವಾಗ ಶ್ರೀರಾಮನನ್ನು ನೆನೆಯುತ್ತ ತನ್ನ ಕೈಕಾಲುಗಳನ್ನು ತೊಳೆದುಕೊಂಡು ಕಗ್ಗಲಿಯ ಕೊನೆಯಿಂದ ಹಲ್ಲುಗಳನ್ನು ಶುಚಿಗೊಳಿಸಿ ಮೃಲ್ಲೇಪನದಿಂದ ಸ್ನಾನ ಮಾಡಿ, ಯಥಾವಿಧಿಯಿಂದ ಸ್ನಾನಸಂಧ್ಯಾವಂದನೆಗಳನ್ನು ಮುಗಿಸಿ, ಸಂಭ್ರಮದಿಂದ ಹೂಗಳನ್ನು ತಿರಿದು ತಂದು, ಮನೆಯನ್ನು ಸೇರಿ ಪಾದಗಳನ್ನು ತೊಳೆದುಕೊಂಡು, ದೇವರಮನೆಯನ್ನು ಹೊಗಬೇಕು. ಅಲ್ಲಿ ಹುಲಿಯ ಚರ್ಮದ ಪೀಠವನ್ನು ರಚಿಸಿ ಅದರ ಮೇಲೆ ಕುಳಿತು, ಮೂಲೋಕದೇವನನ್ನು ಸ್ಮರಿಸಿಕೊಂಡು ಕೈಗಳನ್ನು ಮುಗಿದು ಮನಸ್ಸಿನಲ್ಲಿಯೇ ಧ್ಯಾನ ಮಾಡಬೇಕು. ಅಯೋಧ್ಯಾನಗರದಲ್ಲಿ ಹರಿಚಂದನ ಮಾಣಿಕ್ಯಮಯವಾದ ಪಟ್ಟವಣೆಯಲ್ಲಿ ಅಷ್ಟದಳಕಮಲ ಮೂರ್ತಿಯನ್ನು ಮನಸ್ಸಿನ ಮಧ್ಯದಲ್ಲಿ ಇರಿಸಿಕೊಳ್ಳಬೇಕು. ಚಾರುವಿಮಲನಾದ ಮರಕತಮಣಿಶ್ಯಾಮನ ಎಡಪಕ್ಕದಲ್ಲಿ ಸೃಷ್ಟ್ಯಂತಕಾರಣಳಾದ ಸೀತಾಮಾತೆಯನ್ನೂ, ಸುಮಿತ್ರಾತನಯ ಭರತ ಶತ್ರುಘ್ನ ಹನುಮಂತರನ್ನು ಕ್ರಮವಾಗಿ ಎಡಬಲಗಳಲ್ಲಿ ಭಾವಿಸಿ ಧ್ಯಾನ ಮಾಡಬೇಕು. ದೇವತೆಗಳ ಆಗಮನ ಮತ್ತು ರಾಕ್ಷಸರ ನಿರ್ಗಮನಗಲ್ಲಿಗಾಗಿ ಘಂಟಾನಾದವನ್ನು ಮಾಡಿ, ಚಿನ್ಮಯನೂ ಸಮಸ್ತಪೂಜಾದ್ರವ್ಯಗಳಲ್ಲಿ ಪ್ರಾಣಸ್ವರೂಪನಾಗಿರುವ ರಾಮಚಂದ್ರನಿಗೆ ಎರಗಿ, ಮನಃಪೂರ್ವಕವಾಗಿ ದ್ವಾರದೇವತೆಗಳನ್ನು ಪೂಜಿಸಿ, ಗಣಪತಿ ಸೂರ್ಯ ಶಿವ ಪರಾಶಕ್ತಿ ಭೈರವರಿಗೆ ಸುಗಂಧ ಮತ್ತು ಹೂಗಳಿಂದ ಪೂಜೆಯನ್ನು ಸಮರ್ಪಿಸಬೇಕು. ರಮೆಯಾದ ದ್ವಾರವಟ್ಟಕ್ಕೆ ನಮಸ್ಕರಿಸಿ ಹೊಸಿಲನ್ನು ಪೂಜಿಸಿ, ಎಡಬಲಗಳಿಗೆ ನಮಸ್ಕರಿಸಿ, ಪೂರ್ವದಲ್ಲಿ ಬ್ರಹ್ಮ ಗಂಗೆಯಮುನೆಯರನ್ನೂ, ದಕ್ಷಿಣದಲ್ಲಿ ಸುಭದ್ರೆಯೆನಿಸಿದ ಭದ್ರೆಗೋದಾವರಿಕೃಷ್ಣೆಯರನ್ನೂ, ಪಶ್ಚಿಮದಲ್ಲಿ ಚಂಡಾ ಮುಂತಾದ ನದಿಗಳನ್ನೂ, ಉತ್ತರದಲ್ಲಿ ವಾಣಿ ಮುಂತಾದ ಪ್ರಬಲ ನದಿಗಳನ್ನೂ ಸ್ಮರಿಸಿ ಭಕ್ತಿಯಿಂದ ಪೂಜಿಸಬೇಕು. ಆನಂತರ ಶುಭಕರವಾದ ಶಂಖಪದ್ಮ ಮುಂತಾದ ನಿಧಿಗಳನ್ನು ಚತುರ್ದ್ವಾರಗಳಲ್ಲಿ ಪೂಜೆ ಮಾಡಿ, ಗುಹ ಗಣಪತಿಯರನ್ನು ಅರ್ಚಿಸಿ, ಗಂಧ ಮಾಲ್ಯ ಮುಂತಾದುವನ್ನೂ ಅಕ್ಷತೆ ವಸನ

ಭೂಷಣಗಳನ್ನೂ ತುಲಸೀ ಮುಂತಾದ ವಸ್ತುಗಳನ್ನೂ ಮುಂದಿಟ್ಟು ಭಕ್ತಿಯಿಂದ ನೆನೆದು, ಗುರು ಮಂತ್ರ ದೇವತೆಗಳನ್ನು ಒಂದೇ ಎಂದು ಭಾವಿಸುತ್ತ, ತಾನು ವಿನಯಪೂರ್ವಕವಾಗಿ ಪೂಜಿಸುವೆನೆಂದು ತಿಳಿದು ಮುಂದುಗಡೆ ಆರು ಮೂಲೆಗಳ ಮಂಡಲವನ್ನು ರಚಿಸಿ ಅದರಲ್ಲಿ ಕಲಶವನ್ನಿಟ್ಟು ಹೂಗಳಿಂದ ಪೂಜಿಸಬೇಕು. ಮಂಡಲದ ಆರು ಕೋನಗಳಲ್ಲಿ ಎಲ್ಲ ನದಿಗಳೂ ಸಮುದ್ರವೂ ಕಾಣಿಸುತ್ತವೆ, ಮಧ್ಯೆ ನೀರ ರೂಪವನ್ನುಳ್ಳ(ತೋಯಾತ್ಮ) ವನಿಗೆ ಎರಗುತ್ತೇನೆ ಎಂದು ನಮಸ್ಕಾರ ಮಾಡಿ, ಶಂಖ ಹಸುವಿನ ಕೊಂಬುಗಳಲ್ಲಿ ಸಹಸ್ರಾರಮುದ್ರೆಯಿಂದ ನೀರನ್ನು ತುಂಬಿ ಮಂತ್ರಪೂರ್ವಕವಾಗಿ ಉಪಕರಣಗಳಲ್ಲಿನ ಆತ್ಮದೇವತೆಗಳ ಮೇಲೆ ಸಂಪ್ರೋಕ್ಷಣೆ ಮಾಡಬೇಕು. ಕಲಶದ ಮುಂದೆ ಅರ್ಘ್ಯಪಾದ್ಯ ಆಚಮನಗಳನ್ನು ಮಾಡಿ, ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ಚತುಷ್ಟಯದಿಂದ ಗರಿಕೆ ಎಳ್ಳು ಬಿಳಿಸಾಸಿವೆ ಗಂಧ ಅಕ್ಷತೆಗಳನ್ನು ಇಟ್ಟು ಕಳಶದಲ್ಲಿನ ನೀರನ್ನು ಪೂಜಿಸಿ ಭಕ್ತಿಯಿಂದ ಗುರು ಗಣಪತಿ ಕ್ಷೇತ್ರಾಧಿಕಾರಿಗಳನ್ನು ಅರ್ಚಿಸಿ ಕ್ರಮವನ್ನರಿತು ದೇವರನ್ನು ಪೂಜಿಸಬೇಕು. ಆಧಾರಶಕ್ತಿ, ಕೂರ್ಮ, ಶೇಷ, ಕ್ಷೀರೋದಧಿ, ಶ್ವೇತದ್ವೀಪ, ಕಲ್ಪತರು, ಮೂಲಮಣಿಯಿಂದ ಕೂಡಿದ ಬದ್ಧಾಸನ, ಧರ್ಮ–ಅಧರ್ಮ ವೈರಾಗ್ಯ–ಮದ ಆದಿವಿಜ್ಞಾನ–ಅಜ್ಞಾನ ಭೂತಿ–ಅಭೂತಿ ಎಂಬ ಅಷ್ಟದಳಕಮಲವನ್ನು ಧ್ಯಾನಿಸಬೇಕು. ಆನಂದವೆಂಬ ಅಷ್ಟದಳಪದ್ಮ, ಪ್ರಧಾನತತ್ವ ಎಂಬ ಪತ್ರ, ವಿಕೃತಿ ಎಂಬ ಕೇಸರವರ್ಣ, ಮತ್ತು ಪ್ರೀತಿ ಎಂಬ ಬೀಜಗಳಿಂದ ಕೂಡಿ ಸೂರ್ಯಚಂದ್ರರನ್ನು ಪೂಜಿಸಬೇಕು. ಅಕಾರಾದಿ ಮೂರಕ್ಕರ (ಓಂ)ದಲ್ಲಿನ ಜ್ಞಾನಬೀಜವನ್ನು ಗುಣತ್ರಯ (ಸತ್ವ ರಜಸ್ ತಮ)ದಿಂದ ಸ್ಮರಿಸುತ್ತ ಜ್ಞಾನಾತ್ಮ ಪರಮಾತ್ಮ ಅಂತರಾತ್ಮಗಳನ್ನು ಭಕ್ತಿಯಿಂದ ಪೂಜಿಸಬೇಕು. ನಿರ್ಮಲ ನಿರಂಜನ ನಿಷ್ಕಳಂಕ ತತ್ವಗಳನ್ನು ಸ್ಮರಿಸಿ ವಿಮಲ ಉತ್ಕರ್ಷಿಣೀ ಜ್ಞಾನ ಯೋಗ ಕ್ರಿಯಾ ಸತ್ಯ ಎಂಬಿವುಗಳಿಂದ ಈಶಾನನ ಅನುಗ್ರಹಶಕ್ತಿಗಳನ್ನು ನೆನೆದು 'ಸರ್ವಭೂತಾತ್ಮ ಭಗವದ್ವಿಷ್ಣು ಹರಿಯೋಗಪೀಠಾತ್ಮ' ಎಂದು ಬೊಗಸೆಯಲ್ಲಿ ಹೂಗಳನ್ನು ಸಮರ್ಪಿಸಬೇಕು. ಜೀವನ (ನೀರು) ರೂಪಿನಿಂದ ಕಾಣಿಸುವ ಚಿನ್ಮಯನನ್ನು ನೆನೆದು ತನ್ನ ಭಾವನಾಮಯವೆಂಬ ಹಾವುಗೆಗಳನ್ನು ಮುಂದಿಟ್ಟು ಆವಾಹನ ಸಂಸ್ಥಾಪನ ಸಂನಿಧಾವನ ಸಂಬೋಧನ ಸುಮುಖೀಕರಣ ಎಂಬ ಮುದ್ರೆಗಳಿಂದ ಆರಾಧಿಸಿ, ಹೂಹಣ್ಣು ನೀರುಗಳಿಂದ ಶ್ರೀದೇವನಿಗೆ ಅಭಿಷೇಕವನ್ನು ಮಾಡಿ ಶುಭ್ರವಾದ ವಸ್ತ್ರದಿಂದ ದೇವನನ್ನು ಅಲಂಕರಿಸಿ ಭೂಷಣಾದಿಗಳನ್ನಿಟ್ಟು ಮಾಲೆಯಿಂದ ಶೃಂಗರಿಸಬೇಕು. ಎಡಪಕ್ಕದಲ್ಲಿ ಸೀತಾದೇವಿ, ಬಲಪಕ್ಕದಲ್ಲಿ ಲಕ್ಷ್ಮಣ, ಅವನ ಎಡೆಗಡೆ ಕೋದಂಡ, ಬಲಭಾಗದಲ್ಲಿ ಪಕ್ಕಪಕ್ಕದಲ್ಲಿ ಬಾಣಗಳಿರುವಂತೆ ಭಾವಿಸಿಕೊಂಡು ಅವನ ಅನುಜ್ಞೆಯನ್ನು ಪಡೆದು ಆವರಣಗಳನ್ನು ಸ್ಮರಿಸಿಕೊಳ್ಳಬೇಕು. ಪೂರ್ವ ಮುಂತಾದ ಷಟ್ಕೋಣಗಳಲ್ಲಿ ಹೃದಯ ಮುಂತಾದ ಅಂಗಗಳನ್ನು ಭಕ್ತಿಯಿಂದ ಪೂಜಿಸಿ ಶಂಖವನ್ನು ಹಿಡಿದು ಅದರಲ್ಲಿಯೂ ಗಂಧ ಹೂವು ನೀರುಗಳನ್ನು ಹಾಕಿ ಮತ್ತೆ ಅರ್ಘ್ಯವನ್ನು ನೀಡಬೇಕು. ಪರಮಾತ್ಮ ಜ್ಞಾನಾತ್ಮ ಅಂತರಾತ್ಮಗಳನ್ನು ಕ್ರಮವಾಗಿ ನಿವೃತ್ತಿ ವಿದ್ಯಾಪ್ರತಿಷ್ಠೆ ಶಾಂತಿಯರನ್ನು ನೆನೆಯುತ್ತ, ವಾಸುದೇವ ಶ್ರೀ ಸಂಕರ್ಷಣ ಶಾಂತಿ ಪ್ರದ್ಯುಮ್ನ ಅನಿರುದ್ಧ ಮುಂತಾದ ಮುಖ್ಯರನ್ನು ಪೂಜಿಸಿ, ಹನುಮಂತ ಲಕ್ಷ್ಮಣ ಭರತ ಶತ್ರುಘ್ನರನ್ನು ಸ್ಮರಿಸಿಕೊಳ್ಳಬೇಕು. ಇಂದ್ರ ವರುಣ ಜಾಂಬವಂತರ ಪಾದಗಳಿಗೆ ನಮಸ್ಕರಿಸಿ, ಜಯಂತ

ಸಂಗರಜಯ ಸಂರಾಷ್ಟ್ರವರ್ಧನ ಜಗದ್ಧರಿತ ಕೀರ್ತಿಕರನ್ನೂ, ಶ್ರೇಷ್ಠ ತಪಸ್ವಿಗಳಾದ ವಸಿಷ್ಠ ವಾಮದೇವ ಗೌತಮ ಭರದ್ವಾಜ ಕೌಶಿಕ ನಾರದ ಸನಕ ಸನಂದ ಮುಂತಾದ ಹಿರಿಯರನ್ನು ಅರ್ಚಿಸಬೇಕು. ನಳ ನೀಲ ಗಂಧಮಾದನ ಗವಾಕ್ಷ ಗವಯ ಶರಭ ಮೈಂದ ಮುಂತಾದವರನ್ನು ಪೂಜಿಸಿ, ಮಣಿಖಚಿತವಾದ ಕುಂಡಲ ಕಿರೀಟ, ಕೌಸ್ತುಭ, ಹಾರ, ಶ್ರೀವತ್ಸಗಳನ್ನು ನೆನೆಯಬೇಕು. ಶಂಖಚಕ್ರ ಗದೆ ಪದ್ಮ ಮುಸಲ ಮುಂತಾದವುಗಳನ್ನು ಸ್ಮರಿಸಿಕೊಂಡು ಧ್ರುವ ಧರ್ಮ ಸಾಮ ಶೈಲ ಅನಿಲ ಅನಲ ಭಾಸ ಪ್ರಭಾಸಗಳನ್ನು ಮನಃಪೂರ್ವಕವಾಗಿ ಅರ್ಚಿಸಬೇಕು. ವೀರಭದ್ರ ಶಂಭು ಗಿರಿಶ ಏಕಪಾದ ಧ್ರುವ ಅಜ ಅಹಿರ್ಬುಧ್ನ್ಯ ಪಿನಾಕಿ ಭುವನೇಶ ಸ್ಥಾಣು ಕಪಾಲಿಗಳನ್ನು ಪೂಜಿಸಬೇಕು. ಸೂರ್ಯ ಅರುಣ ವೇದಾಂಗ ರವಿ ಭಾನು ಗಭಸ್ತಿ ಮಿತ್ರ ಆದಿತ್ಯರನ್ನು ಧ್ಯಾನಿಸಿ ಇಂದ್ರನೇ ಮೊದಲಾದ ದಿಕ್ಪಾಲಕರನ್ನು ಭಕ್ತಿಯಿಂದ ಪೂಜಿಸಬೇಕು.

ಹೀಗೆ ಪ್ರತಿನಿತ್ಯವೂ ದಶಾವರಣಪೂಜೆಯನ್ನು ತನ್ನ ಅಂತರಂಗದಲ್ಲಿಯೇ ಮಾಡುತ್ತ ಆನಂದಮಯನಾಗಿರುವವನಿಗೆ ಯಾವುದೇ ತೊಂದರೆಗಳುಂಟಾಗದೆ ಇಹಪರಗಳು ಸುಲಭವಾಗಿ ಕೈಸಾರುತ್ತವೆ; ಮನಸ್ಸಿನಲ್ಲಿ ಹೀಗೆ ತಾನೊಬ್ಬನೇ ಏಕಾಂತದಲ್ಲಿ ಕುಳಿತುಕೊಂಡು ರಘುವರನನ್ನು ಜ್ಞಾನವೇ ಮೊದಲಾದ ಹದಿನಾರು ಪೂಜೆಗಳನ್ನು ಮಾಡಿ ಮನಸ್ಸಿನಲ್ಲಿ ಅವನನ್ನು ಧ್ಯಾನಿಸುವುದು ಸಾಧ್ಯವೆನಿಸದಿದ್ದರೆ, ಯಾವುದಾದರೊಂದು ವಿಗ್ರಹವನ್ನು ತನ್ನ ಮುಂದಿಟ್ಟುಕೊಂಡು ಬಾಹ್ಯಪೂಜೆಗಳನ್ನು ಮಾಡಿ ಭಕ್ತಿಯನ್ನು ಹೊಂದಿದರೆ ಪರತರಮುಕ್ತಿಯು ಪ್ರಾಪ್ತವಾಗುತ್ತದೆ, ಇಹಪರಗಳಲ್ಲಿ ಸದಾ ಕಾಲ ಕೊರತೆಯೆನ್ನಿಸದ ಸುಖವು ದೊರೆಯುವುದು ನಿಶ್ಚಿತ. ಇಂತಹ ಪಾವನತರವಾದ ಪೂಜಾವಿಧಾನವನ್ನು ಭಕ್ತಿಯಿಂದ ಬೆಳಗಿನ ಹೊತ್ತು ಪಠಿಸುವವನಿಗೆ ಪೂಜಾಫಲಗಳನ್ನಿತ್ತು ಶ್ರೀರಾಮಪುರದರಸನು ಬಿಡದೆ ಕಾಪಾಡುತ್ತಾನೆ; ಇದನ್ನು ಓದಿ ಕೇಳಿದವನಿಗೆ ಭುಕ್ತಿಮುಕ್ತಿಗಳು ಸುಲಭವಾಗಿ ಲಭಿಸುತ್ತದೆ. ಗಿರಿಜೆಯೇ, ಈ ನಿಗಮಾರ್ಥವನ್ನು ತಿಳಿದು ಸುಖಿಸುವಂಥವಳಾಗು.

೪. ಶ್ರೀರಾಮನು ಅಗಸ್ತ್ಯನ ಆಶ್ರಮಕ್ಕೆ ಬಂದುದು – ಮಾಂಡಕರ್ಣಿ ವಿಚಾರ

ಸೀತೆಯ ಸಹಿತ ಶ್ರೀರಾಮನು ಸುತೀಕ್ಷ್ಣನ ಆಶ್ರಮದಲ್ಲಿ ಇರಲು ದೇವತೆಗಳೆಲ್ಲ ಆನಂದಗೊಂಡರು; ಬೆಳುದಿಂಗಳಂತೆ ಶಾಂತವಾದ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಆ ಮುನಿಯು ಸಮಾಧಿಸ್ಥಿತಿಯಲ್ಲಿರುವುದು ಅಥವಾ ಕಣ್ಣ ಮುಂದೆ ಓಡಾಡುತ್ತಿರುವುದು ಎಂತಹ ಸೌಭಾಗ್ಯ! ಕ್ಷೀರಸಾಗರನು ಭೂಮಿಯಲ್ಲಿ ಮನುಷ್ಯ ರೂಪವಾಂತು ಹೆಂಡತಿ ಮತ್ತು ತಮ್ಮಂದಿರೊಡನೆ ಮುನಿಯ ಆಶ್ರಮಕ್ಕೆ ಬಂದು ಆತನ ಚರಣಕಮಲಗಳಿಗೆರಗಿ. ಆಶ್ರಮದಲ್ಲಿ ಎಲ್ಲ ಕಾಲದಲ್ಲಿಯೂ ಅಪಾರ ತೇಜೋರಾಶಿಯು ತುಂಬಿರುವಂತೆ ಮಾಡುವ ಆ ಮುನಿಯ ತಪಃಪ್ರಭಾವವೂ ಭಕ್ತಿಯೂ ಎಷ್ಟಿರಬಹುದು! ತನ್ನ ಪುಣ್ಯಫಲವನ್ನೆಲ್ಲ ನಿನಗೆ ನೀಡಿದ್ದೇನೆ, ಇಲ್ಲಿ ನೀವು ನಿರ್ಭಯವಾಗಿಯೂ ಆನಂದದಿಂದಲೂ ಸುಖವಾಗಿರಿ

ಎಂದು ಮುನಿವರನು ಹೇಳಿದ. ಹೀಗೆ ಶ್ರೀರಾಮನು ಸಂತೋಷದಿಂದ ಹೆಂಡತಿಯೊಡನೆ ಮನುಷ್ಯನಂತೆ ಇರಬೇಕಾದರೆ, ಒಂದು ದಿನ ಆತನು ಜ್ಞಾನನಿಧಿಯಾದ ಅಗಸ್ತ್ಯನ ಶಿಷ್ಯನ ಬಳಿ ಬಂದು, "ಶರಭಂಗಮುನಿ ಹೇಳಿದ ನಿಮ್ಮ ಚರಿತೆಯನ್ನು ಕೇಳಿ ಬಂದು ಇಷ್ಟು ದಿನಗಳ ಕಾಲ ನಾವಿಲ್ಲಿ ಯಾವ ಯೋಚನೆಯೂ ಇಲ್ಲದೆ ಸುಖವಾಗಿದ್ದೆವು. ನಿಮ್ಮ ಪಾದಸೇವೆ ಮಾಡುವ ಸೌಭಾಗ್ಯವೂ ಲಭ್ಯವಾಯಿತು, ಪಾಪವು ನಾಶವಾಯಿತು, ಇನ್ನು ತಾವು ಕೃಪೆಯಿಟ್ಟು ಅಪ್ಪಣೆಯನ್ನಿತ್ತರೆ ಇತರ ಮುನಿಗಳ ಆಶ್ರಮಗಳಿಗೆ ಹೋಗಿ ಅವರ ತೊಂದರೆಗಳನ್ನು ನಿವಾರಿಸುವ ಕಾರ್ಯಮಾಡಬೇಕಾಗಿದೆ, ಅನೇಕ ಋಷಿಮುನಿಗಳು ಒತ್ತಾಯಿಸುತ್ತಿದ್ದಾರೆ" ಎಂದ. ಆಗ ಸುತೀಕ್ಷ್ಣನು ಸಂತಸದಿಂದ ಮಧುರವಾದ ಮಾತುಗಳಿಂದ, "ಎಲೆ ದೇವ, ಕರುಣೆಯಿಂದ ಭೂಮಿಯನ್ನು ಪೊರೆಯಲೆಂದು ಬಂದಿದ್ದೀಯೆ ಎಂಬುದನ್ನು ನಾನು ಬಲ್ಲೆ. ಯೋಗಸಿದ್ಧಿಯ ಕಾರಣದಿಂದ ನನ್ನನ್ನು ಉದ್ಧರಿಸಲು ದಿವ್ಯಮೂರ್ತಿಯಾದ ನೀನು ಬಂದಿರುವೆ. ನೀನು ಮುಂದೆ ಪ್ರಯಾಣ ಕೈಗೊಳ್ಳುವುದಾದರೆ ನಾನೂ ಜೊತೆಗೂಡುತ್ತೇನೆ, ನನ್ನ ಗುರುಗಳ ಪಾದದ್ವಂದ್ವಗಳನ್ನು ನೋಡಬೇಕೆಂಬ ಆಸೆಯಿದೆ. ದಾರಿಯಲ್ಲಿ ನಿಮಗೆ ಕಾಡುಮೃಗಗಳ ಭೀತಿ ಎಂಬುದಿರುವುದಿಲ್ಲ, ನಾಲ್ಕೂ ದೆಸೆಗಳಿಂದ ಮೃಗಗಳೆಲ್ಲ ಬಂದು ಭಯಗೊಳಿಸುತ್ತವೆ ಅಷ್ಟೆ" ಎನ್ನಲು ಶ್ರೀರಾಮನು, "ಯೋಚಿಸಬೇಡಿ, ಬಾಣ ಬಿಟ್ಟು ಅವುಗಳನ್ನು ಕೊಲ್ಲುತ್ತೇನೆ" ಎಂದು ಆಶ್ವಾಸನೆ ನೀಡಿದ.

ಅಷ್ಟರಲ್ಲಿ ಜಲಜಮಿತ್ರನು ಪಶ್ಚಿಮಕ್ಕೆ ಜಾರಿದ. ಮುನಿಯು ಸಂಧ್ಯಾಸಮಯವಾಯಿತೆಂದು ಹೋಗಿ ವೈದಿಕವಿಧಾನದಿಂದ ಅಗ್ನಿಪೂಜೆಯನ್ನು ಮಾಡಿ ಪ್ರೀತಿಯಿಂದ ಆತಿಥ್ಯ ಮಾಡಿದ, ಮಾರನೆಯ ದಿನ ಸೂರ್ಯೋದಯವಾಯಿತು. ಆಗ ರಘುನಾಥನು ಸ್ನಾನ ಆಹ್ನಿಕಗಳನ್ನು ಮುಗಿಸಿದಾಗ ಸೀತೆಯು ರಾಮಲಕ್ಷ್ಮಣರಿಗೆ ಅವರವರ ಬಿಲ್ಲುಬಾಣಗಳನ್ನಿತ್ತಳು. ಅವುಗಳನ್ನು ಹಿಡಿದು ಋಷಿಗಳೊಡನೆ ಸೀತಾಲಕ್ಷ್ಮಣರ ಸಮೇತ ಹೊರಡಲು ಶ್ರೀರಾಮನನ್ನು ಸುತೀಕ್ಷ್ಣನು ಆಶೀರ್ವಾದ ಮಾಡಿ ಮಂತ್ರಾಕ್ಷತೆಯನ್ನಿತ್ತು ಜೊತೆಯಲ್ಲಿ ತಾನೂ ಹೊರಟ. ಹೀಗೆ ನರನಾಥನು ಭೂಮಿಯನ್ನು ಪಾಲಿಸಲು ಹೋಗುತ್ತಿರಬೇಕಾದರೆ, ಧರಣಿಜೆಯು ತನ್ನ ಮೆಲುನುಡಿಗಳಿಂದ, "ಆಚಾರ್ಯರೇ, ಮೂರು ದುಃಖಗಳನ್ನು ಪರಿಹರಿಸಲು ಮಾನವನಿಗೆ ಕಷ್ಟವೆನಿಸುತ್ತದೆ; ಅವುಗಳೆಂದರೆ ಪರಸ್ತ್ರೀವ್ಯಾಮೋಹ, ಸುಳ್ಳುಮಾತು ಮತ್ತು ದ್ವೇಷರಾಹಿತ್ಯ, ಇವು ಆಸೆಯಿಂದ ಉಂಟಾಗುವಂಥವು, ಒಂದಕ್ಕಿಂತ ಒಂದು ಮಿಗಿಲಾದವು, ಮಾರಕಗಳಾದವು. ಮುನಿಗಳಲ್ಲಿ ಸುಳ್ಳೆಂಬುದು ಇರಲು ಸಾಧ್ಯವಿಲ್ಲ, ಪರನಾರಿಮೋಹವು ಸ್ವಪ್ನದಲ್ಲಿಯೂ ಸುಳಿಯದು ಎಂಬುದನ್ನು ಜಗತ್ತಿನ ಎಲ್ಲರೂ ಬಲ್ಲರು. ಸತ್ಯಶೌಚಾಚಾರ, ಪಿತೃವಾಕ್ಯಪಾಲನೆ, ಗೋದ್ವಿಜಭಕ್ತಿ, ಧರ್ಮಶಾಸ್ತ್ರಗಳ ಪಾಂಡಿತ್ಯ ಎಂಬ ಗುಣಗಳಲ್ಲಿ ಅನವರತವೂ ನಿಮ್ಮಲ್ಲಿ ತುಂಬಿರುತ್ತವೆ. ಹೀಗೆ ಅತ್ಯಧಿಕಧರ್ಮಿಷ್ಠರೆನಿಸುವ ನಿಮ್ಮಲ್ಲಿಯೂ ಪ್ರಾಣಿಗಳನ್ನು ಕೊಲ್ಲಬೇಕೆಂಬ ಅನಿಮಿತ್ತವೈರವಿರುವುದು ಅಚ್ಚರಿಯನ್ನುಂಟು ಮಾಡುತ್ತದೆ. ಹೀಗಿರುವ ಔಚಿತ್ಯವೇನು, ಅಲ್ಲದೆ ಇದರಿಂದ ನಿಮ್ಮ ಆರ್ಯಧರ್ಮಕ್ಕೆ ಊನವೆನಿಸುವುದಿಲ್ಲವೇ? ಮುನಿಗಳಿಗೆ ಪುಣ್ಯಜನರಿಗೆ ತೊಂದರೆ ಕೊಡುವ ಕ್ರೂರಿಗಳನ್ನು ಕೊಲ್ಲುವುದೇನೋ ಕ್ಷತ್ರಿಯರು ನಿರ್ವಹಿಸಬೇಕಾದ ಕೆಲಸ, ಆದರೆ ಕೋಪದಿಂದ ಪ್ರಾಣಿಗಳನ್ನು ಕೊಲ್ಲುವುದು ಅನುಚಿತ. ಕೈಯಲ್ಲಿ ಬಿಲ್ಲುಬಾಣಗಳಿದ್ದರೂ ಬೆಂಕಿಯಲ್ಲಿ

ಉರುವಲು ಸುಟ್ಟುಹೋಗುವುದಿಲ್ಲವೇ? ಹೀಗಾಗಿ ಪ್ರಾಣಿವಧೆಗಾಗಿ ಅರಣ್ಯಕ್ಕೆ ಹೋಗುವುದು ಸರಿಯಲ್ಲ. ಹಿಂದೆ ಒಮ್ಮೆ ಒಬ್ಬ ಮುನಿಯು ನಿಷ್ಠೆಯಿಂದ ನಿಷ್ಕಾಮ ತಪಸ್ಸಿನಲ್ಲಿ ತೊಡಗಿರಲು ಇಂದ್ರನು ಬೆದರಿ ಸೇವಕನ ರೂಪಿನಲ್ಲಿ ಬಂದು ಕೆಲವು ದಿನಗಳ ಕಾಲ ಮುನಿಯ ಸೇವೆ ಮಾಡುತ್ತ ಅವನ ಆಶ್ರಮದಲ್ಲಿಯೇ ಇದ್ದು, ಯತಿವರನ ಬದಿಯಲ್ಲಿ ಕತ್ತಿಯೊಂದನ್ನಿಟ್ಟು ಹೊರಟುಹೋದನಂತೆ; ಅದನ್ನು ಜತನ ಮಾಡಲೆಂದು ಮುನಿಯು ಸದಾ ಆ ಕತ್ತಿಯನ್ನು ಹಿಡಿದುಕೊಂಡೇ ಓಡಾಡುತ್ತಿದ್ದನಂತೆ; ಕತ್ತಿಯನ್ನು ಹಿಡಿದುಕೊಂಡೇ ತನ್ನ ವಿಪ್ರಕರ್ಮಗಳನ್ನೆಲ್ಲ ಮಾಡುತ್ತಿದ್ದನಂತೆ. ಹೀಗಿರಲು ಒಂದು ದಿನ ಒಬ್ಬ ವ್ಯಕ್ತಿಯು ತನ್ನ ಹತ್ತಿರ ಬರಲು ಅವನನ್ನು ತಕ್ಷಣವೇ ತನ್ನ ಕತ್ತಿಯಿಂದ ತರಿದಿಟ್ಟನಂತೆ. ಸಹವಾಸದೋಷದಿಂದ ನರಕಭಾಜನವಾಗುವ ಸ್ವಭಾವ ಬಾರದಿರದು, ಅನರ್ಥವುಂಟಾಗದಿರದು. ಹೀಗಾಗಿ ದಂಡಕಾರಣ್ಯದಲ್ಲಿ ರಕ್ಕಸರನ್ನು ವಧಿಸುವ ಉದ್ದೇಶ ನಿಷ್ಫಲವಾಗಿ ಕಾಣಿಸುತ್ತದೆ. ರಾಜಧರ್ಮವನ್ನು ಬಿಟ್ಟು ರಮಣೀಯಕರವಾದ ತಪಸ್ಸಿನಲ್ಲಿ ತೊಡಗಿರುವ ಶಾಂತಮನಸ್ಕರಿಗೆ ಅಕಾರಣವಾಗಿ ಜೀವರಾಜಿಯನ್ನು ಕೊಲ್ಲುವುದು ದೋಷಕರವಾದುದು. ಜಗತ್ತು ಮೆಚ್ಚುವಂತೆ ಪ್ರಾಣಿಗಳಿಗೆ ಹಿತಕರವೆನಿಸುವ ಕಾರ್ಯಗಳನ್ನು ಮಾಡುತ್ತ ಸತ್ಕೀರ್ತಿಯನ್ನು ಪಡೆಯುವುದೇ ಧರ್ಮ; ಸರ್ವಜ್ಞಮೂರ್ತಿಗಳೂ ಮಹಾ ತಪಸ್ವಿಗಳೂ ಆದ ತಮಗೆ ತಿಳಿಯದಂತಹುದು ಏನು ತಾನೇ ನನಗೆ ಗೊತ್ತಿದೆ? ಅಹಿಂಸೆಯೇ ಪರಮಧರ್ಮ, ಕೊಲ್ಲುವುದು ಪಾಪಕರ ಎಂದು ಹೇಳುವರಲ್ಲವೇ? ಕೆಲವು ದಿನಗಳಿಂದ ತಮ್ಮ ಸಾನ್ನಿಧ್ಯದಲ್ಲಿದ್ದುದರಿಂದ ನನಗೆ ತಿಳಿದುದನ್ನು ನಿಮ್ಮ ಮುಂದೆ ಬಿನ್ನಹಗೈದಿದ್ದೇನೆ. ಇವಳದು ಹುರುಳಿಲ್ಲದ ಪ್ರಶ್ನೆ ಎಂದು ಕೋಪಿಸಿಕೊಳ್ಳದೆ ಕೃಪೆಯಿಟ್ಟು ನನ್ನ ತಪ್ಪುಗಳನ್ನು ಒಪ್ಪುಗೊಳ್ಳಬೇಕು" ಎಂದು ಹೇಳಿ ಧರಣಿಜೆ ಸುಮ್ಮನಾದಳು.

ಸೀತೆಯ ಈ ಮಾತುಗಳನ್ನು ಕೇಳಿದ ರಘುನಾಯಕನು ಮುಗುಳ್ನಗುತ್ತ, "ಧರಣಿಸುತೆಯೇ, ನೀನು ಹೇಳಿದ ಮಾತು ಸತ್ಯವಾದರೂ, ಸತತವೂ ಅಗ್ನಿಹೋತ್ರ ಜಪತಪ ನಿತ್ಯನೇಮಗಳನ್ನು ಮಾಡುವ ವಿಪ್ರರನ್ನು ಕೊಂದು ತಿಂದು ಧರ್ಮವನ್ನು ಕೆಡಿಸುವ ದುರುಳ ರಕ್ಕಸರ ಬಾಧೆಗೆ ಸಿಕ್ಕಿಕೊಂಡು ಸಂಕಟದಲ್ಲಿರಲಾರದೆ ನಮ್ಮ ಮೊರೆ ಹೊಗಲು ನಮ್ಮ ಅಂತಃಕರಣ ಕರಗಿ ಆ ಮುನಿಗಳಿಗೆ ನಿರ್ಭಯದಿಂದಿರಲು ಹೇಳಿದೆ. ಸಮುದ್ರವು ಮೇರೆ ಮೀರಿದರೂ, ಸೂರ್ಯಚಂದ್ರರು ತಮ್ಮ ಗತಿಯನ್ನು ಬದಲಿಸಿದರೂ, ಹರನು ಕೊಟ್ಟ ವರಕ್ಕೆ ಊನವುಂಟಾದರೂ, ಮೇರುಗಿರಿಯು ತನ್ನ ಜಾಗವನ್ನು ಬದಲಿಸಿದರೂ, ರಾಮನು ತನ್ನ ಮಾತಿಗೆ ತಪ್ಪುತ್ತಾನೆಯೇ? ಧರ್ಮನ್ನೆತ್ತುವ ಕಾರಣದಿಂದಲೇ ದೊರೆಗಳು ಆಯುಧಗಳನ್ನು ಹಿಡಿಯುವುದು, ನರಭಕ್ಷಕರನ್ನೂ ಕೊಲೆಪಾತಕಿಗಳನ್ನೂ ಕೊಲ್ಲುವುದು: ಯಾಕೆಂದರೆ ದುಷ್ಟಹರಣ ಶಿಷ್ಟಪಾಲನ ಅವರ ಕರ್ತವ್ಯವಲ್ಲವೇ? ಲಕ್ಷ್ಮಣನನ್ನಾದರೂ ನಾನು ತೊರೆಯಬಹುದು, ಆದರೆ ನಿನ್ನನ್ನು ಬಿಡಲು ನಾನೆಂದಿಗೂ ಬಯಸುವವನಲ್ಲ. ನಾನೆಂದಾದರೂ ಎರಡನ್ನಾಡಿಯೇನೇ? ಈ ಜಗತ್ತಿನಲ್ಲಿ ಸುಳ್ಳಿಗಿಂತಲೂ ದೊಡ್ಡ ಪಾಪ, ಸತ್ಯಕ್ಕೆ ಸಾಟಿ ಯಾವುದಿದೆ? ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದು, ಅಸುರರನ್ನು ಸದೆಬಡಿದು, ಅವರ ರಕ್ಕಸರೂಪವನ್ನು ಕಡಿದು, ಮುನಿಗಳ ಹೃತ್ತಾಪವನ್ನು ನೀಗಿಸಿ ಆನಂದವನ್ನು ನೀಡುವುದು ನನ್ನ ಕರ್ತವ್ಯ, ನಾನದನ್ನು ಮಾಡಿಯೇ ತೀರುತ್ತೇನೆ" ಎಂದುತ್ತರಿಸಿದ.

ರಘುನಂದನನ್ನು ಆಡಿದ ಮಾತುಗಳನ್ನು ಆಲಿಸಿದ ವಿಪ್ರವೃಂದವು ಹರುಷಗೊಂಡು ಅವನಿಗೆ ಜಯಕಾರವನ್ನು ಮಾಡಿತು. ಸೀತೆಯನ್ನು ಮುಂದಿರಿಸಿಕೊಂಡು ರಾಮನು ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದು ಮುಂದುವರಿಯುತ್ತ ದಾರಿಯಲ್ಲಿನ ಮುನಿಗಳ ಆಶ್ರಮಗಳನ್ನು ಬಂಧುರಸ್ನೇಹದಿಂದ ನೋಡುತ್ತ, ಅಲ್ಲಲ್ಲಿ ನಾಲ್ಕು ಆರು ಎಂಟು ಹತ್ತು ತಿಂಗಳುಗಳ ಕಾಲ ಇದ್ದು ಮುಂದುವರಿಯುತ್ತಿದ್ದ. ಹಾಗೆ ಇರುವಾಗ ಕಾಡುಪ್ರದೇಶಗಳಲ್ಲಿ ಸಂಚಾರ ಮಾಡಿ ಮುನಿಗಳಿಗೆ ತೊಂದರೆಯೀಯುತ್ತಿದ್ದವರನ್ನು ತರಿದು ಅವರು ಸುಖವಾಗಿರುವಂತೆ ಮಾಡಿ, ಅಲ್ಲಲ್ಲಿ ತಿರುಗಾಡುತ್ತ ಹತ್ತು ವರ್ಷಗಳನ್ನು ಸಂತೋಷದಿಂದ ಕಳೆದರು. ಹಾಗೆಯೇ ಮುನಿವೃಂದದೊಡನೆ ಸುತ್ತಾಡುತ್ತ ಅವರು ಮತ್ತೆ ಸುತೀಕ್ಷ್ಣನ ಆಶ್ರಮಕ್ಕೆ ಬಂದು ಕೆಲಕಾಲ ತಂಗಿದರು.

ಹಾಗೆ ಇರಲಾಗಿ ಒಂದು ದಿನ ಯಮಿತಿಲಕನಿಗೆ ನಮಸ್ಕಾರ ಮಾಡಿದ ರಘೂತ್ತಮನು, "ಮಹೋದಯರೇ, ಅಲ್ಲಿಲ್ಲಿ ಓಡಾಡುತ್ತ ತಮ್ಮೊಡನೆ ಸಾಕಷ್ಟು ದೀರ್ಘ ಕಾಲ ಸುಖವಾಗಿದ್ದೆ. ನನಗೀಗ ಅಗಸ್ತ್ಯ ಮಹರ್ಷಿಗಳನ್ನು ಕಾಣುವ ಹಂಬಲ ಬಹಳವಾಗಿದೆ. ತಾವು ಅಪ್ಪಣೆಯಿತ್ತರೆ ಹೊರಡುತ್ತೇನೆ" ಎಂದು ಕೇಳಿದ. ಸುತೀಕ್ಷ್ಣನು ಆನಂದದಿಂದ ಅಪ್ಪಿಕೊಂಡು ಆನಂತರ ನಸುನಗುತ್ತ, "ನಮ್ಮ ಪುಣ್ಯಪರಿಪಾಕದಿಂದ ನೀನು ನಮ್ಮ ಮೇಲೆ ಕೃಪೆಯಿಟ್ಟು ಬಂದೆ, ಇಲ್ಲದಿದ್ದರೆ ಕಾಣಲು ಸಾಧ್ಯವಿತ್ತೇ? ಬ್ರಹ್ಮನೇ ಮುಂತಾದವರು ನಿರಂತರವಾಗಿ ನಿನ್ನನ್ನು ಧ್ಯಾನಿಸುತ್ತಿದ್ದರೂ ನೀನು ಅವರಿಗೆ ಅಗೋಚರನಾಗಿದ್ದೀಯೆ. ನೀನು ಭಕ್ತರಿಗೆ ಸುಲಭ ಎಂಬುದನ್ನು ನಿಜಗೈದು ಮುನಿಜನರನ್ನು ಕಾಪಾಡಿದೆ. ನೀನು ಅಗಸ್ತ್ಯರ ಆಶ್ರಮಕ್ಕೆ ಹೋಗುವುದಾದರೆ ನಾನೂ ಜೊತೆಯಲ್ಲಿ ಬರುತ್ತೇನೆ, ಅನುಮತಿ ಕೊಡಬೇಕು" ಎಂದು ಬೇಡಿಕೊಂಡನು. ರಘುನಾಥನು ಆ ಮಾತಿಗೆ ತಕ್ಷಣವೇ ಒಪ್ಪಿಗೆಯನ್ನಿತ್ತ. ಆನಂತರ ಸುತೀಕ್ಷ್ಣ ಮುನಿಯೊಡನೆ ರಾಮಸೀತಾಲಕ್ಷ್ಮಣರು ಅಗಸ್ತ್ಯಾಶ್ರಮದ ಹಾದಿವಿಡಿದು ಅನೇಕ ಮುನಿನಿಲಯಗಳನ್ನು ಕಳೆದು ಮುಂದೆ ಸಾಗಿದರು. ಹೀಗೆ ಹೋಗುತ್ತಿರಬೇಕಾದರೆ ಒಂದು ಕಡೆ ಅವರಿಗೆ ಆಶ್ಚರ್ಯಕರ ದೃಶ್ಯವೊಂದು ಕಣ್ಣಿಗೆ ಬಿತ್ತು. ನಯನಮನೋಹರವಾದ ಹಾಗೂ ಶ್ರವಣಾನಂದಕರವಾದ ನೃತ್ಯಗೀತಗಳ ಧ್ವನಿಯು ಕೇಳಿಸಿತು. ಕಾಡಿನಲ್ಲಿ ಈ ಬಗೆಯ ಗಾಯನವನ್ನು ಕೇಳಿ ಶ್ರೀರಾಮನಿಗೆ ಆಶ್ಚರ್ಯವಾಯಿತು. ಇದೆಂತಹ ಆಶ್ಚರ್ಯ ಎಂದು ಆ ಕುರಿತು ವಿವರವನ್ನು ತಿಳಿಸಲು ಶ್ರೀರಾಮನು ಮುನಿಗಳನ್ನು ಕೇಳಿಕೊಂಡ. ಆಗ ಸುತೀಕ್ಷ್ಣನು, "ರಘುವರನೇ ಆ ವಿಷಯವನ್ನು ಹೇಳುತ್ತೇನೆ, ಕೇಳು. ಹಿಂದೆ ಮಾಂಡಕರ್ಣಿ ಎಂಬ ವಿಪ್ರನೊಬ್ಬನು ಕಠೋರ ತಪಸ್ಸನ್ನು ಕೈಗೊಂಡು ಪಂಚಾಸ್ಸರೋವರ ಎಂಬ ಕೊಳವೊಂದನ್ನು ನಿರ್ಮಿಸಿದನೆಂದು ಹೇಳುತ್ತಾರೆ. ಈ ಜಾಗದಲ್ಲಿ ಮಾಂಡಕರ್ಣಿಯು ಹತ್ತು ಸಾವಿರ ವರ್ಷಗಳ ಕಾಲ ಎಡೆಬಿಡದೆ ತಪೋನಿರತನಾಗಿರಲು ದೇವತೆಗಳೆಲ್ಲ ಏನಾಗುವುದೋ ಎಂಬ ಭೀತಿಯಿಂದ ನಡುಗಿ ಶಚೀನಾಥನನ್ನು ಮೊರೆವೊಕ್ಕರು. ದೇವೇಂದ್ರನು ತನ್ನಲ್ಲಿಯೇ ಆಲೋಚನೆ ಮಾಡಿ ತನ್ನ ಮುಂದಿದ್ದ ಐವರು ಅಪ್ಸರೆಯರನ್ನು ಒಪ್ಪಿಸಿ ಕಳಿಸಿದ. ಆ ಮಧ್ಯದಲ್ಲಿ ಇಲ್ಲೊಂದು ತಟಾಕವನ್ನು ನಿರ್ಮಿಸಿ, ಪಕ್ಕದಲ್ಲಿಯೇ ದಿವ್ಯ ಭವನವೊಂದನ್ನು ನಿರ್ಮಿಸಿದ. ಇದರಿಂದ ಮಾಂಡಕರ್ಣಿಯು ಸಂತಸಗೊಂಡು ಆ ಐವರು ಅಪ್ಸರೆಯರೊಡನೆ ಇದ್ದಾನೆ. ಅಲ್ಲಿ ಕಾಣುವುದೇ ಪಂಚಾಪ್ಸರೆ ಎಂಬ ಹೆಸರಿನ

ಸರೋವರ, ಅಲ್ಲಿ ಆ ಮುನಿಯು ದೇವತೆಗಳೊಡನೆ ಇದ್ದಾನೆ. ಅದರಿಂದಾಗಿಯೇ ಈ ಕಾಡುಪ್ರದೇಶದ ನಡುವೆ ಸಂತಸಕರ ಧ್ವನಿ ಕೇಳುತ್ತಿರುವುದು" ಎಂದು ತಿಳಿಸಿದ.

ಮುನಿವರ್ಯನು ಹೇಳಿದ ವಿಷಯವನ್ನು ಕೇಳಿ ರಘುರಾಮನು ಸಂತೋಷವನ್ನು ತಾಳಿ ಮುಂದೆ ಸಾಗುತ್ತಿರಲು ಸ್ವಲ್ಪ ದೂರದಲ್ಲಿಯೇ ಆನಂದನಿಲಯವೆಂಬಂತೆ ಮಾಂಡಕರ್ಣಿಯ ಆಶ್ರಮವು ಕಾಣಿಸಿತು. ಅದನ್ನು ನೋಡಿ ರಾಮನು ಲಕ್ಷ್ಮಣನಿಗೆ, "ಬೇಡಿದವರಿಗೆ ಇಷ್ಟಗಳನ್ನೀಯುವ ಮಾಂಡಕರ್ಣಿಯು ಅಗಸ್ತ್ಯ ಮಹರ್ಷಿಯ ತಮ್ಮ. ಅಗಸ್ತ್ಯರಾದರೋ ಯೋಗವೇ ಮನುಷ್ಯಾಕಾರದಿಂದಿದೆಯೋ ಎಂಬಂತೆ ಕಾಣುವ ಕರುಣಾಮಯಿ. ವಾತಾಪಿ ಇಲ್ವಲ ಎಂಬ ದೈತ್ಯ ಅಣ್ಣತಮ್ಮಂದಿರು ವಿಪ್ರರನ್ನು ಸದೆಬಡಿದು ಅವರ ಮಾಂಸವನ್ನೇ ತಿನ್ನುತ್ತಿದ್ದುದನ್ನು ದೇವೇಂದ್ರನು ಕಂಡು ಅಗಸ್ತ್ಯರಿಗೆ ತಿಳಿಸಲು ಆ ಋಷಿಯು ಒಂದು ದಿನ ಭೂಮಿಗೆ ಬಂದ. ಇವನನ್ನು ನೋಡಿದ ಇಲ್ವಲನು ವಿಪ್ರವೇಷವನ್ನು ತಾಳಿದ; ವಾತಾಪಿಯು ಕುರಿಯ ವೇಷವನ್ನು ಧರಿಸಿದ. ಈ ಕಪಟ ಬ್ರಾಹ್ಮಣನು ಅಗಸ್ತ್ಯರ ಬಳಿ ಬಂದು, 'ಈ ದಿನ ನಮ್ಮ ಮನೆಯಲ್ಲಿ ತಾವು ಆತಿಥ್ಯವನ್ನು ಸ್ವೀಕರಿಸಬೇಕು' ಎಂದು ವಿನಯದಿಂದ ಪ್ರಾರ್ಥಿಸಿಕೊಂಡ. ಅದರಂತೆ ಅಗಸ್ತ್ಯನು ತಮ್ಮ ಮನೆಗೆ ಬಂದಾಗ ಅವರಿಗೆ ಕುರಿಯ ಮಾಂಸದ ಅಡುಗೆಯನ್ನು ಬಡಿಸಿ, ಊಟವಾದ ಬಳಿಕ ತಾಂಬೂಲವನ್ನಿತ್ತು ಉಪಚರಿಸಿದ. ಆನಂತರ ದೂರದಲ್ಲಿ ನಿಂತುಕೊಂಡು ಎಂದಿನಂತೆಯೇ 'ವಾತಾಪಿ ಬಾ' ಎಂದು ಕೂಗಿದ. ಅದರ ಇಂಗಿತವನ್ನು ತಿಳಿದ ಮುನಿಯು 'ಮರುಳೆ, ಋಷಿಯ ಹೊಟ್ಟೆಯನ್ನು ಸೇರಿದ ಮನುಷ್ಯನು ಹೇಗೆ ತಾನೆ ಹೊರಬರುತ್ತಾನೆ? ಆ ರಾಕ್ಷಸನಾಗಲೇ ಯಮನ ಪಟ್ಟಣವನ್ನು ಸೇರಿದ್ದಾನೆ' ಎನ್ನಲು ಇಲ್ವಲನು ಕೋಪಗೊಂಡು ನಿನ್ನನ್ನು ಕೊಂದುಬಿಡುತ್ತೇನೆಂದು ಭಯಂಕರವಾಗಿ ಬರಲು ಆ ರಾಕ್ಷಸನು ತನ್ನ ಕೋಪದ ಬೆಂಕಿಯಿಂದಲೇ ಕ್ಷಣಮಾತ್ರದಲ್ಲಿ ಸುಟ್ಟು ಬೂದಿಯಾದ. ಹೀಗೆ ಗೋವಿಪ್ರರನ್ನು ಕೊಲ್ಲುತ್ತಿದ್ದ ವಾತಾಪಿ ಇಲ್ವಲರನ್ನು ನಿಮಿಷಮಾತ್ರದಲ್ಲಿ ಕೊಂದು ಸಕಲ ದೇವತೆಗಳ ಅಭೀಷ್ಟವನ್ನು ನೆರವೇರಿಸಿದ ಆ ಮಹಾಮುನಿಯ ತಮ್ಮನಾದ ಮಾಂಡಕರ್ಣಿಯ ಎಲೆವನೆಯಲ್ಲಿ ಈ ಪ್ರಾಜ್ಞರೊಡನೆ ಈ ರಾತ್ರಿಯಿದ್ದು ಆನಂತರ ಸೂರ್ಯೋದಯವಾದ ಬಳಿಕ ಹೊರಟು ಅಗಸ್ತ್ಯಮಹರ್ಷಿಗಳ ಪಾವನ ಚರಣಗಳನ್ನು ಕಾಣೋಣ" ಎಂದು ಹೇಳಲು ಜೊತೆಯಲ್ಲಿದ್ದ ಮುನಿಗಳೆಲ್ಲ ಸಂತಸಗೊಂಡರು.

ತನ್ನೊಡನಿದ್ದ ವಿದ್ವತ್ ಸಮಾಜದೊಡನೆ ಶ್ರೀರಾಮಚಂದ್ರನು ಮಾಂಡಕರ್ಣಿಯ ಆಶ್ರಮವನ್ನು ಹೊಕ್ಕು ಮುನಿಗೆ ನಮಸ್ಕರಿಸಿದ. ಅವರಿತ್ತ ನಾನಾ ಬಗೆಯ ಹಣ್ಣುಹಂಪಲುಗಳ ಆತಿಥ್ಯವನ್ನು ಸ್ವೀಕರಿಸಿ ಆ ರಾತ್ರಿಯನ್ನು ಸುಖವಾಗಿ ಕಳೆದರು. ತರಣಿಯುದಯವಾಗಲು ತಪೋಧನರ ಪಾದಕಮಲಗಳಿಗೆರಗಿ ಅವರ ಆಶೀರ್ವಾದವನ್ನು ಪಡೆದು ಎಲ್ಲರೂ ಮಾಂಡಕರ್ಣಿಯ ಅಣ್ಣನ ಆಶ್ರಮದೆಡೆಗೆ ಹೊರಟರು. ಹೋಗುತ್ತ ಅಕ್ಕಪಕ್ಕದಲ್ಲಿರುವ ಮರಗಳ ಗುಂಪುಗಳನ್ನೂ, ಮದ್ದಾನೆಗಳು ಮುರಿದಿಟ್ಟ ಮರದ ಕೊಂಬೆಗಳನ್ನೂ, ನಾದಗೈಯುವ ಕೋಗಿಲೆ ಗಿಳಿಗಳನ್ನೂ, ಭೋರ್ಗರೆಯುವ ದುಂಬಿಗಳನ್ನೂ, ತಮ್ಮ ವೈರವನ್ನು ಮರೆತು ಓಡಾಡುವ ಶಾರ್ದೂಲ ನರಿ ಕಾಡುಹಂದಿಗಳೇ ಮುಂತಾದ ಕಾಡುಮೃಗಗಳನ್ನೂ ನೋಡುತ್ತ ಮುಂದೆ ಸಾಗಿದರು. ಹೀಗೆ ಹೋಗುತ್ತಿರುವಾಗ

ಒಮ್ಮೆ ರಘುವರನು ಲಕ್ಷ್ಮಣನ ಕಡೆ ನೋಡಿ, "ಶೀಲ ಎಂಬ ಆನೆಯು ಆಕಾಶವನ್ನು ಎಟುಕಿಸಿಕೊಳ್ಳುತ್ತಿದೆಯೋ ಎಂಬಂತೆ ಕಾಣುವ ಹೊಗೆಯು ಅದೋ ದಕ್ಷಿಣದಿಕ್ಕಿನಲ್ಲಿ ಕಾಣುತ್ತಿದೆ, ಒಣಹಾಕಿರುವ ನಾರುಮಡಿಗಳು ತಪಸ್ವಿಗಳ ತಾಣವಿದು ಎಂಬುದನ್ನು ಸಾರುತ್ತಿವೆ. ಲೋಕಪಾಲನೆಯ ಉದ್ದೇಶದಿಂದ ಮೃತ್ಯುವನ್ನೂ ಗೆದ್ದು ಆಶ್ಚರ್ಯಕರವಾದ ರೂಪವನ್ನು ಹೊಂದಿರುವ ಅಗಸ್ತ್ಯಾಶ್ರಮವು ಪ್ರಾಯಶಃ ಇದೇ ಎನಿಸುತ್ತದೆ. ಆ ಮಹಾಮುನಿಯು ಇಲ್ಲಿ ನೆಲಸಿದಂದಿನಿಂದ ಒಬ್ಬ ದಾನವನೂ ಇಲ್ಲಿ ಸುಳಿಯಲಾರ; ಇಲ್ಲಿ ವಿಪ್ರರ ಬಾಧೆ ಅಡಗಿಹೋಗಿದೆ. ಹಿಂದೆ ವಿಂಧ್ಯಪರ್ವತವು ಬೆಳೆಯುತ್ತ ಸೂರ್ಯಚಂದ್ರರ ಪಥವನ್ನೂ ತಪ್ಪಿಸುತ್ತಿರಲು ಶಂಕರನ ಆಜ್ಞೆಯಿಂದ ಅಗಸ್ತ್ಯಮುನಿಗಳು ಬಂದು ತನ್ನ ಸೇವಕನಿಗೆ ಹೇಳುವ ರೀತಿಯಲ್ಲಿ ಆ ಶೈಲವನ್ನು ಠೀವಿಯಿಂದ ಮೆಟ್ಟಿ ದೇವತೆಗಳ ಹಿತಕ್ಕೆಂದು ದಕ್ಷಿಣದಿಕ್ಕಿಗೆ ಬಂದು ನೆಲಸಿದ್ದಾರೆ. ತಮ್ಮ ಯೋಗಬಲದಿಂದಾಗಿ ಚಿರಕಾಲದ ಆಯುಸ್ಸನ್ನು ಈ ಮಹರ್ಷಿಯು ಗಳಿಸಿದ್ದಾರೆ; ಹಾಗಾಗಿ ಮುನಿಕುಲವೆಲ್ಲ ಭೋಗಮೋಕ್ಷಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ನಿರಾಹಾರ ಚಾಂದ್ರಾಯಣವ್ರತಗಳನ್ನು ಅನುಸರಿಸುತ್ತ ಈ ಕಾಡಿನ ನಡುವೆ ತಪಸ್ಸನ್ನೆಸಗುತ್ತಿದ್ದಾರೆ, ನೋಡು. ದೇವತೆಗಳೂ ಗಂಧರ್ವರೂ ಉರಗರೂ ಬ್ರಾಹ್ಮಣರೂ ಇದನ್ನು ಪಾವನಸ್ಥಳವೆಂದು ಬಗೆದು ಇಲ್ಲಿಗೆ ಬಂದು ಮುನಿರಾಜರಾದ ಅಗಸ್ತ್ಯರ ಪ್ರಭಾವದಿಂದ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಂಡು ಆನಂದದಿಂದ ಹೋಗುತ್ತಾರೆ. ನಾವು ಹೋಗಿ ನಮಸ್ಕರಿಸಿದರೆ ನಮ್ಮ ಅಭೀಷ್ಟಗಳನ್ನು ನೋಡಿದಷ್ಟರಿಂದಲೇ ನೆರವೇರಿಸುತ್ತಾರೆ. ಅಗಸ್ತ್ಯರು ಅಂತಹ ಯೋಗಿವರೇಣ್ಯರು, ಸಕಲಭೂತಶರಣ್ಯರು, ತಾಪಸಾಗ್ರಗಣ್ಯರು. ಈ ಮಾಮುನಿಯ ಆಶ್ರಮದಲ್ಲಿ ಆಶ್ರಯ ಪಡೆದು ನಮ್ಮ ಮನೋರಥಗಳನ್ನು ನೆರವೇರಿಸಿಕೊಳ್ಳೋಣ. ಈಗ ಆ ಮಹಿಮನ ಬಳಿ ಹೋಗಿ ಬರಬಹುದೇ ಎಂದು ಕೇಳಿ ಅವರ ಅನುಜ್ಞೆಯನ್ನು ಪಡೆದುಕೊಂಡು ಬಾ" ಎಂದು **ರಾಮಪುರದರಸನು** ಆಜ್ಞಾಪಿಸಲು ಲಕ್ಷ್ಮಣನು ಸುತೀಕ್ಷ್ಣರೊಡನೆ ಹೋಗಿ ಸರ್ವಭೂತಾವಾಸವೆನಿಸುವ ಪಾವನಮೂರ್ತಿಯಾದ ಅಗಸ್ತ್ಯರನ್ನು ಕಂಡರು.

೫. ಇಂದ್ರನು ಕೊಟ್ಟಿದ್ದ ಬಿಲ್ಲುಬಾಣಗಳನ್ನು ಅಗಸ್ತ್ಯನು ಶ್ರೀರಾಮನಿಗೆ ಕೊಟ್ಟುದು

ಹಿಮಶೈಲಜಾತೆಯೇ, ಶ್ರೀರಾಮನು ಸೀತೆ ಲಕ್ಷ್ಮಣ ಹಾಗೂ ಯತಿಸಮೂಹದೊಡನೆ ಅಗಸ್ತ್ಯಾಶ್ರಮವನ್ನು ಕಂಡು ಅಚ್ಚರಿಗೊಂಡು ಅದೇನು ಬ್ರಹ್ಮನಿಲಯವೋ, ವಿಷ್ಣುವಿನಾಲಯವೋ, ಹರನ ಕೈಲಾಸವೋ, ಅಮರಲೋಕವೋ, ಕುಬೇರನ ನಿಲಯವೋ, ನಿರ್ವಾಣಮಂಟಪವೋ ಎಂಬಂತಿದ್ದ ಅದನ್ನು ವರ್ಣಿಸಲಸಾಧ್ಯ. ಜಡೆಗಳನ್ನುಳ್ಳ ದ್ವಿಜಸಮಾಜವು ಒಂದೆಡೆ ಅಷ್ಟಾಂಗಯೋಗಾಭ್ಯಾಸದಲ್ಲಿಯೂ, ಮತ್ತೊಂದೆಡೆ ರಾಜಮಂತ್ರದ ಆರಾಧನೆ, ಮಗುದೊಂದೆಡೆ ಶ್ರೀಹರಿಯ ಕಥಾಶ್ರವಣದಲ್ಲಿಯೂ, ಇನ್ನೂ ಒಂದೆಡೆ ವೇದಪಠಣ–ವ್ಯಾಖ್ಯಾನದಲ್ಲಿಯೂ ಆಶ್ರಮದಲ್ಲಿ ತುಂಬಿದ್ದು, ಅದೊಂದು ತೇಜೋಲೋಕದಂತೆ ಕಂಗೊಳಿಸಿತು. ಕೃಚ್ಛ್ರ ಚಾಂದ್ರಾಯಣಗಳಲ್ಲಿಯೂ

ನಿರಾಹಾರದಲ್ಲಿಯೂ ಚಿಗುರಿನ ಭಕ್ಷಣೆಯಲ್ಲಿಯೂ ಹಸಿವನ್ನು ನಿವಾರಿಸಿಕೊಂಡು ಸುಖಲೋಕವನ್ನು ಹೊಂದುವ ಭರವಸೆಯಿಂದ ಕೆಲವರು, ಮೋಹಾನುಕಾರಿಗಳಾಗಿ ಸುಮ್ಮನೆ ಬಳಲುವವರು ನನ್ನನ್ನು ಈ ಬ್ರಹ್ಮಸೃಷ್ಟಿಯಲ್ಲಿ ನೋಡಲಿ ಎಂಬಂತೆ ಕೆಲವರು, ಸತ್ಯಲೋಕವನ್ನು ಎಟುಕಿಸಿಕೊಳ್ಳುತ್ತಿರುವರೋ ಎಂಬಂತೆ ಬಾಹುಗಳನ್ನು ಚಾಚಿ ನಿಂತಿರುವ ಮತ್ತೂ ಕೆಲವರು ಕಂಗೊಳಿಸುತ್ತಿದ್ದರು. ಅವರ ನಡುವೆ ಒಬ್ಬನು ನಿಲಿಂಪರ ನಿಲಯವನ್ನು ಸೇರಲೆಂದು ಭೂಲೋಕದಲ್ಲಿದ್ದುಕೊಂಡೇ 'ನಾನು ಸ್ವರ್ಗಲೋಕದ ಸಿರಿಯನ್ನು ನೋಡುತ್ತೇನೆ' ಎಂಬಂತೆ ಕಾಲ್ಬೆರಳಿನ ಮೇಲೆ ಭಾರವನ್ನು ಬಿಟ್ಟು ತಪಸ್ಸಿನಲ್ಲಿ ತೊಡಗಿದ್ದನು. ಬೇರಾವುದನ್ನೂ ನೆನೆಸಿಕೊಳ್ಳದೆ ಬಿಡುಗಣ್ಣರ ಅರಮನೆಯನ್ನು ನೋಡಲು ನಾನಾ ಯಾಗಕಾರ್ಯಗಳನ್ನು ಮಾಡುತ್ತ ಮೇಲೆ ಹೋಗಿ ಕೆಳಗೆ ಬಿದ್ದು ಭೂಮಿ-ಆಕಾಶಗಳಲ್ಲಿ ಯಾವುದರಲ್ಲೂ ನೆಲೆಸದಾದೆ ಎಂಬ ಯೋಚನೆಯಿಂದ ಕೈಯ ನಡುವೆ ಕಾಣುವ ರೂಪುಗಳನ್ನು ನೋಡುತ್ತ ತಣ್ಣನೆ ನೀರಿನಲ್ಲೊಬ್ಬ ತಪೋನಿರತನಾಗಿ ನಿಂತಿದ್ದ. ಮಣ್ಣು ಬೆಂಕಿ ಗಾಳಿ ನೀರು ಆಕಾಶಗಳೆಲ್ಲ ಸೇರಿಸಿ ಆಕಾರವನ್ನು ನೀಡುವುದು ಬ್ರಹ್ಮಚಾತುರ್ಯ, ಇದನ್ನು ತಿಳಿಯದೆ ಮೂಢಜನರು ಚತುರ್ಮುಖನನ್ನು ಲೋಕಪೂಜ್ಯನೆಂದು ಕೊಂಡಾಡುತ್ತಾರೆ. ಇವುಗಳಲ್ಲಿ ಒಂದಂಶದಿಂದಲೇ ದೇಹವನ್ನು ನಿರ್ಮಿಸುತ್ತೇನೆ ಎಂಬಂತೆ ಬಿರುಬಿಸಿಲಿನಲ್ಲಿ ಬೆಂಕಿಯ ನಡುವೆ ಒಬ್ಬ ಮುನಿವರನು ತಪಸ್ಸಿನಲ್ಲಿ ತೊಡಗಿ ಬೆಳಗಿನಲ್ಲಿನ ಬೆಳಗಿನಂತೆ ಕಾಣುತ್ತಿದ್ದ. ನೀರಿನಲ್ಲಿದ್ದರೇನು, ಬೆಂಕಿಯ ನಡುವಿನಲ್ಲಿದ್ದರೇನು ಭೂಮಿಯಲ್ಲಿದ್ದರೆ ಊರ್ಧ್ವಲೋಕವು ದೊರೆಯುವುದೇ? ಸರಿದಾರಿಯನ್ನರಿಯದೆ ಕಷ್ಟಪಡುವ ಮೂಢರಿಗೇನು ಹೇಳಬಹುದು ಎಂಬಂತೆ ಒಬ್ಬನು ದೇಹವನ್ನು ತೀರ ಹಗುರವನ್ನಾಗಿಸಿ ಅಂತರಿಕ್ಷದಲ್ಲಿ ಆಶ್ಚರ್ಯಕರವಾಗಿ ನಿಂತು, ತನಗೆ ಯಾವ ಫಲವೂ ಅಶಕ್ಯವಲ್ಲ ಎಂಬಂತೆ ಆಕಾಶದ ನೆರಳಿನಂತೆ ಕಾಣುತ್ತಿದ್ದ. ಕಣ್ಣುಗಳಿಂದ ಸಪ್ತಲೋಕವನ್ನು ನೋಡಲಾಗದು, ಅದೊಂದು ಅದ್ಭುತ ಎಂದು ಯುಕ್ತಿಯನ್ನು ಅರಿಯದ ಜನರು ಅಚ್ಚರಿಗೊಳ್ಳುತ್ತಾರೆ, ನನ್ನ ಕಾಲುಗಳಿಂದಲೇ ಸತ್ಯಲೋಕವನ್ನು ಎಳೆದು ತರುತ್ತೇನೆ, ಅಷ್ಟೇ ಅಲ್ಲ, ಮತ್ತೊಂದು ಲೋಕವನ್ನು ಚಾತುರ್ಯದಿಂದ ನನ್ನ ಕಣ್ಣುಗಳಿಂದ ನೋಡುತ್ತೇನೆ ಎಂಬಂತೆ ತಲೆಕೆಳಗಾಗಿ ನಿಂತು ತಪಸ್ಸು ಮಾಡುತ್ತಿದ್ದವನು ಮತ್ತೊಂದೆಡೆ ಕಾಣಿಸಿದ. 'ಆಹಾರದ ಬಲದಿಂದ ಇಂದ್ರಿಯಗಳು ಪರವಶವಾಗಿ ದುರ್ವ್ಯಸನದಿಂದ ಕೂಡುತ್ತವೆ, ಆದ್ದರಿಂದ ನಾನು ಅಮೃತವನ್ನುಂಡು ಸುಖವಾಗಿರುತ್ತೇನೆ' ಎಂಬ ಇಚ್ಛೆಯಿಂದ ಒಬ್ಬನು ಬೆಟ್ಟದ ತುದಿಯನ್ನೇರಿ ಚಂದ್ರನನ್ನು ಒಲಿಸಿಕೊಂಡು ಅವನಿಂದ ಬರುವ ತನಿರಸವನ್ನು ಕುಡಿದು ತೃಪ್ತಿಯಿಂದ ಕಾಯಕ್ಲೇಶದ ಬವಣೆಯಿಲ್ಲದೆ ಅಚಲಿತನಾಗಿ ನಿಂತಿದ್ದ ನಿರ್ಮಲಿನವಾದ ಒಬ್ಬ ಒಂದೆಡೆಯಲ್ಲಿ ತಪಸ್ಸನ್ನು ಮಾಡುತ್ತಿದ್ದನು. ಎಲ್ಲವನ್ನೂ ಸೃಷ್ಟಿಸಿದ ಶಕ್ತಿಯನ್ನು ಕಾಣುವುದು ಅಸಾಧ್ಯ ಎನುತ್ತಾರೆ, ಆದರೆ ನಾನು ಅಣು ಮಹತ್ತು ಮುಂತಾದ ತತ್ತ್ವಗಳನ್ನು ತಿಳಿದು ಅವುಗಳ ಸ್ವರೂಪವನ್ನು ನಿಶ್ಚಯವಾಗಿ ತಿಳಿಸುತ್ತೇನೆ ಎಂಬಂತೆ ಒಬ್ಬನು ಒಂಟಿ ಕಾಲಿನ ಮೇಲೆ ನಿಂತು ಕಣ್ಣಿಗೆ ಕಾಣುವ ವಸ್ತುವನ್ನು ನೋಡುತ್ತ ಇದಕ್ಕೆ ಹೊರತಾದ ಬೇರೊಂದಿಲ್ಲ ಎಂದು ಹೇಳುವಂತೆ ಮತ್ತೊಬ್ಬನಿದ್ದ.

ಹೀಗೆ, ಮರುತನನ್ನು ನಿಗ್ರಹಿಸಿ, ಮನಸ್ಸಿನಲ್ಲಿ ಅಗ್ನಿಯನ್ನು ಸಿಲುಕಿಸಿ ಕತ್ತಲನ್ನು

ಹೊಡೆದೋಡಿಸಿ, ನಿರುಪಮ ಆನಂದವನ್ನು ಹೊಂದಿ ಅಲ್ಲಲ್ಲಿ ತಪಸ್ಸಿನಲ್ಲಿ ತೊಡಗಿರುವ ಮುನಿಗಳನ್ನು ನೋಡುತ್ತ ಬರುತ್ತಿರಲು ಒಂದು ಕಡೆ, ಹೂಹಣ್ಣು ಮುಂತಾದ ಪರಿಕರಗಳೊಂದಿಗೆ ಆಗಮಾಚಾರದಲ್ಲಿ ತಂತ್ರಗಳನ್ನು ಸೇರಿಸಿ ಪೂಜಾವಿಧಿಯನ್ನು ಮಾಡುತ್ತಿದ್ದ ಬ್ರಾಹ್ಮಣರು ಕಾಣಿಸಿದರು. ಆಸನಗಳನ್ನು ಹಾಕಿಕೊಂಡು ವೈಷ್ಣವೀಮಾತೃಕಾನ್ಯಾಸತತ್ವವನ್ನೂ ಮೂರ್ತಿಪಂಜರನ್ಯಾಸಗಳನ್ನೂ ಬೇಸರವಿಲ್ಲದೆ ಅನುದಿನವೂ ಮಾಡುತ್ತ ಕುಂಭಕದಿಂದ ವಾಯುವನ್ನು ಸ್ಥಗಿತಗೊಳಿಸಿ ಮನಸ್ಸಿನಲ್ಲಿ ದಿವ್ಯಮೂರ್ತಿಯನ್ನಿರಿಸಿಕೊಂಡು ಷಡಕ್ಷರವೇ ಮೊದಲಾದ ಮಂತ್ರಗಳನ್ನು ಅನುದಿನವೂ ಜಪಿಸುವ ನಿರ್ಮಲ ಭೂಸುರಸಮಾಜವು ಒಂದೆಡೆಯಲ್ಲಿ ರಾಘವನಿಗೆ ಕಾಣಿಸಿತು.

ಗರಿಕೆ ಮೂಲಿಕೆ ಕಗ್ಗಲಿಗಳ ಭಾರವನ್ನು ತಲೆಯ ಮೇಲೆ ಹೊತ್ತು, ಇವನ್ನು ಸಂಗ್ರಹಿಸುವ ವೇಳೆಯಲ್ಲಿ ಆದ ತೊಂದರೆಗಳನ್ನು ಹೇಳಿಕೊಳ್ಳುತ್ತ, ನಾನಾ ಕಾರಣಗಳಿಂದ ನಗುತ್ತ, ನೆರವು ನೀಡುತ್ತ ನಡೆಯುವ ಹುಡುಗರು ಒಂದೆಡೆಯಾದರೆ, ದರ್ಭೆ ಚಿಗುರುಗಳನ್ನು ಸ್ರುಕ್ಕು ಸ್ರುವಗಳೊಡನೆ ಹಿಡಿದುಕೊಂಡು ಬರುವ ದೇವಕನ್ನಿಕೆಯರನ್ನು ಎದುರುನೋಡುವ ಜ್ಯೋತಿಷಿಗಳಂತೆ ಮತ್ತೆ ಕೆಲವರು ಮತ್ತೊಂದೆಡೆಯಲ್ಲಿದ್ದರು. ಜ್ಯೋತಿಷ್ಟೋಮ ವಾಜಪೇಯ ಮುಂತಾದ ಯಾಗಗಳನ್ನು ಮಾಡಲು ಅದರಿಂದಾಗಿ ಶೃಂಗಾರರಸಭರಿತ ರೂಪದಿಂದ ದೇವಾಂಗನೆಯರು ಬರಲು ಅವರಿಗಾಗಿ ದರ್ಭೆ ಜಿಂಕೆಯ ಚರ್ಮ ಕಂಬಳಿ ಮುಂತಾದ ಆಸನಗಳನ್ನು ಸಿದ್ಧಪಡಿಸುತ್ತ, ಅವರಿಗೆ ಉಣಬಡಿಸಲೆಂದು ಪುರೋಡಾಶಾ ಸೋಮಾವಶೇಷಗಳನ್ನು ಜತೆಗೊಳಿಸುತ್ತ ಮತ್ತೂ ಕೆಲವರು ಮಗುದೊಂದೆಡೆಯಲ್ಲಿ ಕಾಣುತ್ತಿದ್ದರು. ಕಮಲದಳನೇತ್ರೆಯಾದ ರಂಭೆಯು ಬಂದು ಸಂಪ್ರೀತಳಾಗಿ ನಮಸ್ಕಾರಗೈದು, 'ತಮ್ಮ ಸೇವೆಗಾಗಿ ಬಂದಿದ್ದೇನೆ' ಎನ್ನಲು ದರ್ಭೆಯನ್ನು ಉಂಗುರದಂತೆ ಸುರುಳಿ ಸುತ್ತಿ ಹುಲಿಯ ಚರ್ಮವನ್ನು ಹೊದ್ದು, ಜೀವವು ಅಲೆದಾಡುವ ವೈಧೃತಿ ವ್ಯತೀಪಾತ ವಧ್ಯಾಷ್ಟಮಿ ನವಮಿ ಪೈತೃಕಗಳೆಂದು ಹೆಸರುಗಳನ್ನಿಟ್ಟುಕೊಂಡು ಕುಳಿತಿರುವ ವಿಪ್ರರನ್ನು ನೋಡಿ ನಗುವ ಅಪ್ಸರೆಯರು ಮತ್ತೊಂದೆಡೆ ಕಾಣಿಸಿದರು. ಯಜ್ಞಗಳನ್ನು ಮತ್ತೆ ಮತ್ತೆ ಮಾಡುವ ಯಾಯಜೂಕರ ಮನರಂಜನೆಗಾಗಿ ಬರುವ ದೇವತಾಯುವತಿಯರ ಕುಡಿನೋಟಗಳನ್ನು ಬೀರುತ್ತ ಕಮಲಗಳಿಂದ ನಮಗೆ ತಮ್ಮ ಸನ್ನಿಧಿಯಲ್ಲಿ ಪೂಜೋಪಕರಣಗಳು ದೊರೆತವು ಎಂದು ಒಟ್ಟಾಗುವ ಪಂಡಿತರನ್ನು ನೋಡಿ ಮೃಗನೇತ್ರೆಯರು ನಗುತ್ತ ಬಂದು ರುದ್ರಾಯತ ಎನ್ನುತ್ತ ಅಭಿಷೇಕ ಮಾಡುತ್ತಿದ್ದರು. 'ಕುಶವನ್ನು ಮರೆತೆ, ಕುಂಡಲಗಳನ್ನು ಅಲ್ಲಿಯೇ ಇಟ್ಟಿದ್ದೇನೆ, ಕೃಷ್ಣಾಜಿನವನ್ನು ಅಲ್ಲೇ ಬಿಟ್ಟೆ, ಜಪಸರವನ್ನು ತರುವುದನ್ನು ಮರೆತೆ'ನೆಂದು ನೆನೆಸಿಕೊಂಡು 'ಬೇಗ ತರುತ್ತೇನೆ' ಎನ್ನುತ್ತ ಹಿಂದಿರುಗಿ ಬರುವ ವಿಪ್ರರನ್ನೂ, ಹೊಸ ಬಗಲ ಚೀಲ ಹಾಗೂ ಪುಸ್ತಕಗಳನ್ನು ತರಲು ಬಯಸುವ ಭೂದೇವರನ್ನೂ ನೋಡಿ ದೇವತಾಂಗನೆಯರು ನಸುನಗುವಿನಿಂದ ಕೂಡಿ ತಮ್ಮತಮ್ಮಲ್ಲಿಯೆ ಹಾಸ್ಯದ ಮಾತುಗಳನ್ನಾಡಿಕೊಳ್ಳುತ್ತ ನಲಿಯುತ್ತಿದ್ದರು.

ಬಲಿಯನ್ನೂ, ಅತಿಥಿಗಳನ್ನೂ, ಪೂಜೆಮಾಡಬಯಸುವ ಬ್ರಾಹ್ಮಣರನ್ನೂ, ಪಿತೃದೇವತಾಪೂಜೆ ಭೂತಪೂಜೆ ಮಾನುಷಪೂಜೆ ಬ್ರಹ್ಮಪೂಜೆ ಮುಂತಾದ ಯಜ್ಞಗಳನ್ನು

ಮಾಡುವವರನ್ನೂ, ಉಪನಿಷತ್ತುಗಳನ್ನು ಪಾರಾಯಣ ಮಾಡುವವರನ್ನೂ, ಒಲೆಪಿನಿಂದ ಸಂಹಿತೆಯ ಪದಕ್ರಮಗಳಿಂದಲೂ, ವೇದಗಳ ಆರು ಅಂಗಗಳನ್ನು ಹೇಳುವ ಬ್ರಾಹ್ಮಣರ ಗುಂಪು ಬ್ರಹ್ಮಲೋಕಕ್ಕೂ ಮಿಗಿಲು ಎಂಬಂತೆ ತೋರುತ್ತಿತ್ತು. ಚಮರೀಮೃಗಗಳು ಬಂದು ಅತಿಭಕ್ತಿಯಿಂದ ತಮ್ಮ ಬಾಲದಿಂದಲೇ ಗುಡಿಸಿದವು, ಆಶ್ರಮದಲ್ಲಿನ ಆನೆಗಳು ನೀರನ್ನು ಪ್ರೋಕ್ಷಿಸಿದವು, ಇರುವೆಗಳು ಕಾಡಿನಲ್ಲಿನ ಬೀಜಗಳನ್ನು ತಂದು ಚೆಂದವಾದ ರಂಗವಲ್ಲಿಯನ್ನು ರಚಿಸಿದವು, ಕರಡಿಗಳು ಪ್ರೀತಿಯಿಂದ ಜೇನುತುಪ್ಪ ಹಣ್ಣುಗಳನ್ನು ತಂದು ಕೊಡುತ್ತಿದ್ದವು, ಕೋತಿಗಳು ಹೂಗಳ ರಾಶಿ, ದರ್ಭೆ ನಾರುಬಟ್ಟೆಗಳು, ನಿರ್ಮಲವಾದ ನೀರು ಹಣ್ಣುಗಳನ್ನು ತಂದು ಮುನಿಜನರಿಗೆ ಕೊಡುತಿದ್ದವು. ಇದರಿಂದ ಮುದಗೊಂಡು ಅಗ್ನಿಯನ್ನು ಪೂಜಿಸಿ, ಹಸಿವುಬಾಯಾರಿಕೆಗಳನ್ನು ಹತ್ತಿಕ್ಕಿಕೊಂಡು ನೆಮ್ಮದಿಯಿಂದಿರುವ ಬ್ರಾಹಣರನ್ನು ನೋಡುತ್ತ ಬಂದ ಒಂದು ಕೋಡಗವು ಹಲ್ಲುಕಿರಿದು ತಾಪಸರನ್ನು ನಗಿಸುತ್ತದೆ. ಕಣ್ಣುಗಳನ್ನು ಅರ್ಧ ಮುಚ್ಚಿ ತೆರೆದು ಎತ್ತರದ ಮರದ ಮೇಲಕ್ಕೆ ಹೋಗಿ ಅಲ್ಲಿಂದ ಕೆಳಕ್ಕೆ ಧುಮುಕಿ ಅಂಗೋಪಾಂಗಗಳ ಚೇಷ್ಟೆ ಮಾಡುತ್ತ ಅಡಿಗಡಿಗೆ ಕುಣಿದಾಡುತ್ತ ಅರಚುತ್ತ, ಮುಂದುಗಡೆಯ ಯಜ್ಞಕುಂಡದಲ್ಲಿ ಕೆಂಪಗೆ ಹೊಳೆಯುವ ಕೆಂಡವನ್ನು ಹಣ್ಣು ಎಂದು ಭಾವಿಸಿ ಹಿಡಿದುಕೊಂಡು ಕೈಗಳನ್ನು ಒದರಿಕೊಂಡು ಹಿಂದೆ ಹೋಗಿ ಹಲ್ಲುಕಿರಿದು ನಗಿಸುವ ಕೋತಿಮರಿಗಳು ಅಲ್ಲಿ ಸೇರಿದ್ದವು.

ಹೀಗೆ ನವರಸಭರಿತ ಅಗಸ್ತ್ಯಾಶ್ರಮದ ಮುಂದೆ ನಿಂತು ರಘುಕುಲತಿಲಕನು ಸುತೀಕ್ಷ್ಣಮುನಿಯೊಡನೆ ಲಕ್ಷ್ಮಣನನ್ನು ಕಳಿಸಿಕೊಟ್ಟ. ಅವರು ಬಂದು ಮುನಿಗಳ ಪಾದಗಳಿಗೆರಗಿ ವಿಷಯಗಳನ್ನು ತಿಳಿಸಲು, ಯೋಚಿಸುತ್ತಿದ್ದ ವಸ್ತುವು ಸಿಕ್ಕಿದ ಹಾಗೆ ಸಂತೋಷಿಸುತ್ತ ಮುನಿಯು ಶ್ರೀರಾಮನನ್ನು ಕರೆತರಲು ಅಪ್ಪಣೆಯಿತ್ತ. ಅದರಂತೆಯೇ ಸೌಮಿತ್ರಿಯು ಬಂದು ಹೇಳಲು ರಘುಜನು ಸೀತೆಯೊಡನೆ ಆಶ್ರಮದ ಒಳಹೊಕ್ಕು ಬರಲು. ಜನಸಮುದಾಯದ ನಡುವೆ ಕುಳಿತು ಸಾಕ್ಷಾತ್ ಬ್ರಹ್ಮದೇವನಂತೆ ಶ್ರೀರಾಮಚರಿತೆಯನ್ನು ಮನನವಾಗುವಂತೆ ವಿಸ್ತರಿಸಿ ಹೇಳುತ್ತ ರಾಮನಾಮಾಮೃತದಿಂದ ಉಂಟಾಗುವ ಆನಂದವನ್ನು ಸವಿಯುತ್ತಿರುವ ಅಗಸ್ತ್ಯ ಋಷಿಯನ್ನು ಕಂಡ. ಹುಣ್ಣಿಮೆಯ ಚಂದ್ರನಂತೆ ಸಕಳಕಳಾಭರಿತಳಾದ ಸೀತೆಯನ್ನು ತನ್ನ ಎಡದಲ್ಲಿಯೂ, ಸೌಮಿತ್ರಿಯನ್ನು ಬಲದಲ್ಲಿಯೂ ಹೊಂದಿ ಇಂದ್ರನೀಲವನ್ನು ಹೋಲುವ ಮೈಬಣ್ಣದ ರಾಮಚಂದ್ರನು ಬರಲು ಆ ಕುಂಭಸಂಭವನು ತನ್ನೊಡನಿದ್ದ ವಿಪ್ರಸಮೂಹದೊಡನೆ ಮೇಲೆದ್ದು ಹರುಷಭರಿತ ಮನಸ್ಸಿನಿಂದ ಕೂಡಿ ಸ್ತುತಿಸುತ್ತ ಆತನನ್ನು ಬಿಗಿದಪ್ಪಿಕೊಂಡು ಪ್ರೀತಿಯಿಂದ ಕರೆದೊಯ್ದು ಕುಳ್ಳಿರಿಸಿದ. ಅಗ್ನಿಹೋತ್ರವನ್ನು ನೆರವೇರಿಸಿ ಅರ್ಘ್ಯಪಾದ್ಯಾದಿಗಳನ್ನಿತ್ತು ಹಿತಕರವಾದ ಕಂದಮೂಲಫಲಗಳನ್ನಿತ್ತು ಆತಿಥ್ಯವನ್ನು ಮಾಡಿ ಉಪಚರಿಸಿ, "ಭೂದೇವನೇ, ನನ್ನ ಭಾಗ್ಯದಿಂದ ಅತಿಥಿಯಾಗಿ ಬಂದು ಧನ್ಯನಾಗಿಸಿದ್ದೀಯೆ" ಎಂದು ಹೊಗಳಿ ಕುಶಲವನ್ನು ವಿಚಾರಿಸಿ, ಆ ಬಳಿಕ ರಾಮನಿಗೆ, "ರಾಕ್ಷಸಸಂಹಾರ ಮಾಡಲೆಂದೇ ಆ ಮಯನು ನಿರ್ಮಿಸಿ ಹರಿಹರಶಿವರು ಪ್ರೀತಿಯಿಂದ ನೀಡಿದ ಮಿತಿಯಿಲ್ಲದಷ್ಟು ಬಾಣಗಳನ್ನಿಡುವ ಬತ್ತಳಿಕೆ ಮತ್ತು ದಿವ್ಯವಾದ ಬಾಣಗಳನ್ನು ಹಾಗೂ ರಾಜೀವಾಕ್ಷನಾದ ಶ್ರೀರಾಮನಿಗೆ ನೀಡಬೇಕೆಂದು ನನ್ನ ಬಳಿ ದೇವೇಂದ್ರನು ಇಟ್ಟಿದ್ದ ಬಿಲ್ಲುಬಾಣಕತ್ತಿಗಳನ್ನು ದಯವಿಟ್ಟು ಸ್ವೀಕರಿಸಬೇಕು"

ಎಂದು ಅವುಗಳನ್ನು ಅರ್ಪಿಸಿದ. ಅವುಗಳನ್ನು ರಘುನಾಥನು ಸ್ವೀಕರಿಸಿದ ಬಳಿಕ ಮುನಿಪನು, "ಶರಣರನ್ನು ಪೊರೆಯುವ ಉದ್ದೇಶದಿಂದ ಸೀತೆಲಕ್ಷ್ಮಣರ ಜೊತೆಗೂಡಿ ಬಂದು ಅನುಗ್ರಹ ಮಾಡಿ ದಾರಿಯಲ್ಲಿ ನಾನಾ ಕಷ್ಟಗಳನ್ನು ಎದುರಿಸಿದೆ; ಹಾಗೆಯೇ ಸುಕುಮಾರಿಯಾದ ಸೀತೆಯು ಕಲ್ಲುಮುಳ್ಳುಗಳಿಂದ ತುಂಬಿದ ದಾರಿಯಲ್ಲಿ ನಡೆನಡೆದು ತುಂಬ ಆಯಾಸಗೊಂಡಿದ್ದರೂ ಸಂತಸವನ್ನು ತುಳುಕಿಸುತ್ತಿದ್ದಾಳೆ. ಸಿರಿಯುಳ್ಳ ಪುರುಷರ ಎಳೆಮಿಂಚಿನಂತಹ ಹೆಂಡತಿಯರು ಕಾಡಿನ ದಾರಿಯಲ್ಲಿ ಸ್ವಲ್ಪ ಹೊತ್ತು ನಡೆದು ಬರುವಾಗ ಎಳ್ಳಷ್ಟು ಕಷ್ಟ ತೋರಿದರೂ ಎಳಬಿಸಿಲಿನಂತೆ ಬಳಲಿಬಿಡುತ್ತಾರೆ. ಈ ಲೋಕದಲ್ಲಿನ ಅಂತಹ ಗುಣಗಳು ಜನಕಜೆಯಲ್ಲಿ ಸುಳ್ಳಾಗಿವೆ. ಆದರೂ ನೀಳದಾರಿಯನ್ನು ನಡೆದು ಬಂದು ನೀವೆಲ್ಲ ಬಳಲಿದ್ದೀರಿ. ಕಮಲಮಿತ್ರನು ಆಗಲೇ ಪಡುಗಡಲನ್ನು ಸೇರಿದ್ದಾನೆ; ನೀವು ಸಂಧ್ಯಾಹ್ನಿಕಗಳನ್ನು ಮುಗಿಸಿ ಸುಖವಾಗಿ ನಿದ್ದೆ ಮಾಡಿ" ಎಂದು ಹೇಳಿದ. ಆಗ ಶ್ರೀರಾಮನು ಅಗ್ನಿಯನ್ನು ಪೂಜಿಸಿ ಮುನಿವಂದನೆ ಮಾಡಿ ಲಕ್ಷ್ಮಣಸೀತೆಯರೊಡನೆ ಒಂದು ಜಾಗಕ್ಕೆ ಹೋಗಿ, ವಿಶ್ರಮಿಸಲೆಂದೇ ಮೂಲಪ್ರಕೃತಿಯು ಕತ್ತಲೆಯಲ್ಲಿ ಮೂರು ಲೋಕಗಳನ್ನೂ ತನ್ನಲ್ಲಿ ಇಂಬಿಟ್ಟುಕೊಂಡಿದ್ದ ರಾತ್ರಿಯನ್ನು ನೆಮ್ಮದಿಯ ನಿದ್ದೆಯಿಂದ ಕಳೆದ.

ಮಾರನೆಯ ದಿನ ಬೆಳಕು ಹರಿಯಿತು. ಶ್ರೀರಾಮನು ಜಾನಕಿಸೌಮಿತ್ರಿಯರೊಡನೆ ನಿದ್ದೆ ತಿಳಿದೆದ್ದು ಸಂಧ್ಯಾಕೃತ್ಯಗಳನ್ನು ಪೂರೈಸಿ ಯತಿಶಿರೋಮಣಿಗೆ ನಮಿಸಿ ಸಂತಸದಿಂದ ಕುಳಿತ. ಆಗ ಅವನನ್ನು ನೋಡುತ್ತ ನಸುನಗೆಯಿಂದ ಕೂಡಿ ಮುನಿವರನು ಮನಸ್ಸಿನಲ್ಲಿದ್ದ ಆನಂದದಿಂದ ತತ್ತ್ವಾರ್ಥಗಳ ನಿಜಭಾವವನ್ನು ಅವನ ಪಾದಗಳಿಗೆ ಅರ್ಪಿಸುವ ರೀತಿಯಲ್ಲಿ, "ಧಾರಿಣಿಗೆ ಭಾರವೆನಿಸಿರುವ ದಶಶಿರನನ್ನು ತರಿದಿಡಲೆಂದು ಹರವಿರಿಂಚರೇ ಮೊದಲಾದ ದೇವತೆಗಳು ಕ್ಷೀರವಾರಿಧಿಶಯನನನ್ನು ಪ್ರಾರ್ಥನೆ ಮಾಡಿದಾಗ ಅವರಿಗೆ ಅಭಯವನ್ನಿತ್ತ ಬಗೆಯನ್ನು ಬ್ರಹ್ಮದೇವನಿಂದ ತಿಳಿದ ನಾನು, ನೀನು ಬರುವುದನ್ನೇ ಎದುರು ನೋಡುತ್ತ ಶುಭಕಥಾಲಾಪದಿಂದಲೂ ತಪದಿಂದಲೂ ನಿರಂತರವಾಗಿ ನಿನ್ನ ಸನ್ಮೂರ್ತಿಯನ್ನೇ ಧ್ಯಾನಿಸುತ್ತಿದ್ದೆ. ಸೃಷ್ಟಿಗಿಂತಲೂ ಹಿಂದಿನವನಾದವನು ನೀನೊಬ್ಬನೇ; ಜಗತ್ತಿನ ಇಷ್ಟಾಶಕ್ತಿಯಾದ ಮಾಯೆಯೂ ನಿನ್ನ ಆಶ್ರಯದಲ್ಲಿರುತ್ತ ನಿಕ್ಷೇಪ ಆವರಣ ಎಂಬ ಎರಡು ಹೆಸರುಗಳಿಂದ ಕಾರ್ಯನಿರ್ವಹಿಸುತ್ತದೆ; ಮೂಲಪ್ರಕೃತಿ, ಮಾಯೆ, ಸಂಸೃತಿಬಂಧ, ಅವಿದ್ಯೆ ಎಂಬ ನಾನಾ ಹೆಸರುಗಳಿಂದ ನಿನ್ನ ಮಾಯೆಯನ್ನು ಕರೆಯುತ್ತಾರೆ. ಮಹಾತತ್ತ್ವವು ವಿವರಣೆಗೆ ನಿಲುಕದ್ದು, ಅಹಂಕಾರತ್ರಿವಿಧದ ರೂಪದಲ್ಲಿ ಅದು ನಾನಾ ಬಗೆಯಲ್ಲಿ ಕಾರ್ಯತತ್ಪರವಾಗಿರಲು, ತಾಮಸದ ಗುಣದಿಂದ ಭೂಮಿ ಆಕಾಶ ಪಾತಾಳಗಳೆಂಬ ಲೋಕಗಳು ಇಲ್ಲದಂತೆ ಅಮಲತರವಾದ ಸದ್ಬ್ರಹ್ಮವು ತಾನೊಂದೇ ಶೋಭಿಸುತ್ತದೆ. ವಿವರಣಾತೀತವಾದ ಮಹಾತತ್ತ್ವವನ್ನು ಹೊತ್ತಿರುವುದು ಅಹಂಕಾರ, ಅದರಿಂದ ಸಾತ್ವಿಕ ರಾಜಸ ತಾಮಸಗಳೆಂಬ ಗುಣಗಳು ಜನಿಸುತ್ತವೆ, ತಾಮಸದಲ್ಲಿ ಸೂಕ್ಷ್ಮರೂಪದಿಂದ ತನ್ಮಾತ್ರೆಗಳು (ಪಂಚೇಂದ್ರಿಯಗಳಿಗೆ ಕಾರಣವಾದ ರೂಪ ಗಂಧ ರಸ ಸ್ಪರ್ಶ ಶಬ್ದಗಳು) ಇದ್ದು ಅದರಿಂದಾಗಿ ಸರ್ವಬೀಜಾತ್ಮಕವಾದ ಇಂದ್ರಿಯಗಳು ಉಂಟಾಗುತ್ತವೆ. ಸ್ಥೂಲವಾದ ಭೂತರಾಶಿಯಿಂದಲೂ ವಿರಾಟ್‌ಪುರುಷರೂಪಿನಿಂದಲೂ ಕಾಲಕರ್ಮಕ್ರಮದಿಂದ ಸಕಲ ಭೂತಜಾಲವು ಉದಯಿಸುತ್ತದೆ; ಸಾತ್ವಿಕದಲ್ಲಿ ಬ್ರಹ್ಮನೂ, ತಾಮಸದಲ್ಲಿ ರುದ್ರನೂ,



ಅಗಸ್ತ್ಯನು ರಾಮಲಕ್ಷ್ಮಣರಿಗೆ ಇಂದ್ರ ನೀಡಿದ್ದ ಬಿಲ್ಲುಬಾಣ ಕತ್ತಿಗಳನ್ನು ನೀಡುತ್ತಿರುವುದು

ರಾರಾಜಿಸಲು ವಿಧಿಯುದಿಸುವ ಜ್ವಾಲೆ ತೋರುತ್ತದೆ, ಜಾಗ್ರತ್ಸ್ವಪ್ನಸುಷುಪ್ತಿಗಳಿಗೆ ನೆಲೆಯಾದದ್ದು ಬುದ್ಧಿ, ಅವುಗಳಲ್ಲಿ ರಘುವರೇಣ್ಯನೇ, ನೀನು ಸಾತ್ವಿಕನೆನಿಸಿ ತೋರುತ್ತೀಯೆ. ನಿರುಪಮ ನಿಜಾನಂದ ನಿರ್ಗುಣ ನಿರಾವರಣ ಪರಿಪೂರ್ಣನಾದ ನಿನಗೆ ಸೃಷ್ಟಿ ಮಾಡುವ ಇಚ್ಛೆಯು ಹುಟ್ಟಲು ವ್ಯಾಪಕವಾದ ಮಾಯೆಯಿಂದಾಗಿ ನೀನು ಗುಣದಿಂದ ಕೂಡಿರುವಂತೆ ತೋರುತ್ತೀಯೆ; ನಿನ್ನ ಮಾಯೆಯು ಎರಡು ರೂಪಗಳಲ್ಲಿ ಕಾಣಿಸುತ್ತದೆ – ವಿದ್ಯೆ ಹಾಗೂ ಅವಿದ್ಯೆ; ಅವು ಎಲ್ಲ ಪ್ರಾಣಿಗಳಿಗೆ ನಿರ್ವಾಣವನ್ನು ಕರುಣಿಸುತ್ತವೆ. ಹೀಗೆ ನಿನ್ನ ಮಾಯಾವೈಚಿತ್ರ್ಯವನ್ನು ಏನೆಂದು ಹೇಳುವುದು! ವೇದಾಂತದ ಅರ್ಥವನ್ನು ಗುರುವಿನಿಂದ ಅರಿತು, ಅವಿದ್ಯೆಯನ್ನು ನಿವಾರಿಸಿಕೊಂಡು, ಪರಬ್ರಹ್ಮಸ್ವರೂಪನಾದ ನಿನ್ನನ್ನು ಭಕ್ತಿಯಿಂದ ಮನಸ್ಸಿನಲ್ಲಿರಿಸಿಕೊಂಡು, ನಿನ್ನ ಮಹಾಮಂತ್ರವನ್ನು ಜಪಿಸುತ್ತಿದ್ದರೆ ವಿದ್ಯೆ ಉಂಟಾಗುತ್ತದೆ. ಅಂಥವನ ಭವಬಂಧನಗಳು ಹರಿದು ಅವನು ಸುಖದ ಸುಗ್ಗಿಯಲ್ಲಿರುತ್ತಾನೆ. ಹೀಗಾಗಿ ನಾನು ಜಲಜಾಕ್ಷಭಕ್ತಿಯೇ ಮುಕ್ತಿಯೆಂದು ತಿಳಿದು ನಿನ್ನ ಚರಣಸೇವೆ ಮಾಡುತ್ತೇನೆ. ಹೆಚ್ಚೇನು, ನಿನ್ನ ಪಾದಭಕ್ತಿಯೇ ಸುಖಕಾರಣ, ಅದಕ್ಕೆ ಬೀಜ ಸತ್ಸಂಗ ತಾನೇ? ಮನಸ್ಸಿನಲ್ಲಿ ಉಂಟಾಗುವ ಪ್ರವೃತ್ತಿಗಳನ್ನು ಗೆದ್ದು ಪ್ರಶಾಂತಬುದ್ಧಿಯಿಂದ ಯಮವೇ ಮೊದಲಾದ ಅಖಿಲಸಂಪತ್ತಿನಿಂದ ಅಮಿತವಾದ ಸಂತೃಪ್ತಿಯನ್ನು ಹೊಂದಿ ಸದಾ ನಿನ್ನ ನಾಮಸಂಕೀರ್ತನವನ್ನು ಮಾಡುವವರು ಸಾಧುಗಳೆನಿಸಿಕೊಳ್ಳುತ್ತಾರೆ. ನಾನಾ ಬಗೆಯ ತಪಸ್ಸಿನಿಂದ ಅಗಣಿತವಾದ ಶರೀರಗಳನ್ನು ತಳೆದು ಸಾಧನೆ ಮಾಡಿದರೆ ಒಂದು ಜನ್ಮದಲ್ಲಿಯೇ ಸಾಧುಗಳಿಗೆ ನಿನ್ನ ಕರುಣೆ ದೊರೆಯುತ್ತದೆ; ಸತ್ಸಂಗದಿಂದ ಶಮೆದಮೆಗಳುಂಟಾಗುತ್ತವೆ; ಪರಮ ವೈರಾಗ್ಯದಿಂದ ನಿನ್ನ ಮಂತ್ರದಲ್ಲಿಯೇ ಚಿತ್ತವು ನೆಲೆಗೊಳ್ಳುತ್ತದೆ, ಅದರಿಂದ ಭಕ್ತಿ ಉಂಟಾಗಿ ಮುಕ್ತಿಯು ನಿನ್ನ ಅಂಗೈನೆಲ್ಲಿಯಾಗುತ್ತದೆ. ಹೀಗೆ ಅನಂತಾನಂತ ಜನ್ಮಗಳಲ್ಲಿ ನಿನ್ನನ್ನು ಮನಃಪೂರ್ವಕವಾಗಿ ನೆನೆಯುತ್ತ ತಪಸ್ಸನ್ನು ಮಾಡಿದುದಕ್ಕೆ ಶ್ರೀಕಾಂತನಾದ ರಾಮಪುರದರಸನ ರೂಪದಲ್ಲಿ ಬಂದು ನನ್ನನ್ನು ಉದ್ಧರಿಸಿದೆ. ನನ್ನ ಧ್ಯಾನದ ಉದ್ದೇಶವು ನೆರವೇರಿತು, ನನ್ನ ಪೂರ್ವಕೃತವೆಲ್ಲವೂ ನಾಶವಾಯಿತು, ಆನಂದಸಾಗರದ ಸಾನ್ನಿಧ್ಯ ದೊರೆಯಿತು" ಎಂದು ಆ ಮುನಿವರನು ರಘುವೀರನನ್ನು ಸ್ತುತಿಸಿದ.

೬. ಅಗಸ್ತ್ಯಾಶ್ರಮವನ್ನು ಬಿಟ್ಟು ಪಂಚವಟಿಗೆ ಬಂದು ಜಟಾಯುವಿನೊಡನೆ ಸಂಭಾಷಿಸಿದುದು

ಹಿಮಗಿರಿತನೂಜೆ ಕೇಳು, ಮುನಿಯು ಸಂಸ್ತುತಿಯನ್ನು ಮಾಡಲು ಸಂಪ್ರೀತಿಗೊಂಡು 'ನಿನ್ನ ಅಭೀಷ್ಟವನ್ನು ಈಡೇರಿಸುವೆ'ನೆಂದು ರಘುವರನು ಆಶ್ವಾಸನೆ ನೀಡಲು ಯಮಿತಿಲಕನು ಅಡಿದಾವರೆಗಳಿಗೆರಗಿ ಈ ರೀತಿ ವಿಜ್ಞಾಪನೆ ಮಾಡಿಕೊಂಡನು: "ಕಮಲಾಮನೋಹರನೇ, ಸತಿ ಸೀತೆಯೊಡನೆಯೂ ತಮ್ಮ ಲಕ್ಷ್ಮಣನೊಡನೆಯೂ ಇರುವ ತರಣಿತೇಜಸ್ಸಿನ ಈ ನಿನ್ನ ಮೂರ್ತಿಯು ನನ್ನ ಮನಸ್ಸನ್ನು ಎಂದಿಗೂ ಅಗಲದೆ ಇರುವಂತೆ ಮಾಡು." ಹೀಗೆಂದು ಕೇಳಿಕೊಳ್ಳಲು ಅವನ ಮನಸ್ಸಿನ ಇಷ್ಟವನ್ನು ನೆರವೇರಿಸಿ, ಲೋಕಾಚಾರಗಳಂತೆ

ನಡೆದುಕೊಳ್ಳುತ್ತ ಎಲ್ಲರನ್ನೂ ಸಂಮೋಹನಗೊಳಿಸುತ್ತ ರಘೂತ್ತಮನು ಆ ಮುನಿಯೊಡನೆ ವಿನಯದಿಂದ, ಜನರಿಲ್ಲದ ದಟ್ಟ ಕಾಡು ಯಾವುದೆಂದು ಹೇಳಿದರೆ ತಾವು ಅಲ್ಲಿಗೆ ಹೋಗಿ ವನವಾಸದ ಮುಂದಿನ ದಿನಗಳನ್ನು ಸುಖವಾಗಿ ಕಳೆಯುತ್ತೇವೆಂದು ಹೇಳಿದ. ಆಗ ಅಗಸ್ತ್ಯನು ನಸುನಗುತ್ತ, "ಈ ಜಗತ್ತಿಗೇ ಆಲಯವಾಗಿರುವ ನಿನಗೆ ಮನೆಯನ್ನು ತೋರುವುದು ಯಾರಿಂದಲಾದರೂ ಸಾಧ್ಯವೇ? ಆದರೆ ಎಲ್ಲ ಮನುಷ್ಯರಂತೆಯೇ ನೀನೂ ಕೇಳುವುದು ಮನುಷ್ಯರೂಪಿನ ನಿನಗೆ ತಕ್ಕುದಾಗಿಯೇ ಇದೆ. ಇಲ್ಲಿಂದ ಎರಡು ಯೋಜನ ದೂರದಲ್ಲಿ ಗೋದಾವರೀನದಿಯ ತೀರದಲ್ಲಿ ಪಂಚವಟಿ ಎಂಬ ತುಂಬ ಸುಂದರವಾದ ತಾವು ಇದೆ, ಅದು ನಿಮ್ಮ ವಸತಿಗೆ ಸೂಕ್ತವಾದುದು. ಅಲ್ಲಿ ಸ್ವಲ್ಪ ಕಾಲವಿದ್ದು ಬೇಕಾದರೆ ಮುಂದೆ ಹೋಗಬಹುದು" ಎಂದು ಹೇಳಲು ರಾಮನು ಅಲ್ಲಿಗೆ ಹೊರಡಲು ಸಿದ್ಧನಾದ. ಅಲ್ಲಿಗೆ ಹೋಗುವ ದಾರಿಯನ್ನು ತೋರಲು ಮುನಿಯು ಕೆಲವು ವಟುಗಳನ್ನು ನಿಯೋಜಿಸಲು, ರಾಮನು ಸೀತಾಲಕ್ಷ್ಮಣಸಮೇತನಾಗಿ ಆ ದಿಕ್ಕಿಗೆ ನಡೆದ.

ಬೆಳಗಿನ ಹೊತ್ತು ಬೇಗನೇ ಆಶ್ರಮವನ್ನು ಬಿಟ್ಟು, ಸಸ್ಯನಿಬಿಡವಾದ ಕಾಡನ್ನು ನೋಡಿ ಹರ್ಷಗೊಳ್ಳುತ್ತ ಮುಂದೆ ಹೋಗಲು ಬಿಸಿಲು ನಿಧಾನವಾಗಿ ಹೆಚ್ಚುತ್ತ ಮರಗಳ ನೆರಳು ಕೂಡ ಸೆಕೆಯನ್ನು ಹೋಗಲಾಡಿಸದಂತಾಯಿತು. ಆ ಸಮಯದಲ್ಲಿಯೇ ಬೇಸಿಗೆಯ ಕಾಲವೂ ಶುರುವಾಯಿತು. ವನದ ರೋಮರಾಜಿಯಿಂದ ಕೂಡಿ ಕಾಡೆಂಬ ಕನ್ಯೆಯು ಚೈತ್ರವೆಂಬ ಮನದನ್ನನನ್ನು ಬಯಸುವ ಅನುತಾಪದಂತೆ ಬಿಸಿಲ ಬೇಗೆಯು ತೀವ್ರವಾಗಿ ಹೆಚ್ಚುತ್ತಿದೆಯೋ ಎಂಬಂತೆ – ಬೆವರುವ ಮನುಷ್ಯರು ನೆರಳನ್ನು ಹುಡುಕಿಕೊಂಡು ಬಾಯಾರಿಕೆಯಿಂದ ನೀರನ್ನರಸಿ ಹೋಗುವ ಹಾಗೆ – ಬೇಸಿಗೆ ಹೆಚ್ಚಾಯಿತು. ಇನ್ನೇನು ಮಾಡುವುದು? ದೇವೇಂದ್ರನು ಕರ್ಪೂರರಸ ಮುಂತಾದ ಪರಿಮಳವನ್ನು ಪೂಸಿಕೊಂಡ ರಂಭೆಯನ್ನು ಆಲಂಗಿಸಿದ, ಅಗ್ನಿಯು ಪುಂಡರೀಕ ಸರೋವರದಲ್ಲಿರಲು ಬಯಸಿದ, ಸೂರ್ಯತನಯನಾದ ಯಮನು ಜನನಿಬಿಡತೆಯನ್ನು ಬಯಸದೆ ಏಕಾಂತಕ್ಕೆ ತೆರಳಿದ, ವರುಣನು ಸಮುದ್ರರಾಜನ ಆಶ್ರಯವನ್ನು ಸೇರಿದ, ಮರುತ ಕುಬೇರ ಮುಂತಾದವರು ಶಿವನನ್ನು ಸೇರಿಕೊಳ್ಳಲು ಹಿಮಶೈಲದ ತಪ್ಪಲಿಗೆ ಹೋದರು. ದೆಸೆವೆಣ್ಣುಗಳು ಆ ಬಿಸಿಲ ಬೇಗೆಗೆ ಅಳುಕಿ ಬಳುಕುತ್ತ ಬಸವಳಿದು ಬಾಯಾರಿ ಶಿವನ ಅನುಗ್ರಹದಿಂದ ಬಿಸಿಲ ತೊರೆಯನ್ನು ಕಂಡು ಅದನ್ನೇ ಕುಡಿದರು, ಆದರೂ ನೀರಡಿಕೆ ತೀರದಿರಲು ಬಳಲಿ ತೊಳಲಿ ಬಿಸುಸುಯ್ಯಲು ಕೆಂಡಗಳೆ ಉದುರಿದವು; ಅವುಗಳ ಸಂಪರ್ಕದಿಂದ ಬೀಸುವ ನಸುಗಾಳಿಯೂ ನೆಲನನ್ನು ಬಿಸುಪಾಗಿಸುತ್ತಿದೆಯೋ ಎಂಬಂತೆ ಬೇಸಿಗೆಯ ಬಿಸಿ ಬಿಸಿಲ ಮೊನಚು ಚುಚ್ಚುವಂತಾಯಿತು. ಮೊರೆಯುತ್ತ ಮೇಲೆ ಮೇಲೆ ಸಾಗಿ ಬರುವ ಮಂದೇಹರೆಂಬ ರಾಕ್ಷಸರ ಉಪಟಳವನ್ನು ಸೈರಿಸಿಕೊಳ್ಳಲಾರದೆ ಹೋದ ಸೂರ್ಯನು ಕಡುಗೋಪದಿಂದ ಕುದಿಯುತ್ತ ಒರೆಯಿಂದ ಕಿರಣಗಳೆಂಬ ಕತ್ತಿಯನ್ನು ತೆಗೆದು ಶತ್ರುಗಳ ಕುಲವನ್ನು ತರಿಯಬೇಕೆಂದು ಬಿರುಸಿನಿಂದ ಹೊಡೆಯಲು ಆ ಕತ್ತಿಯ ಅಲಗಿನಿಂದ ಹೊರಟ ಕೆಂಡಗಳು ಸಾರಿ ಬರುತ್ತಿವೆಯೋ ಎಂಬಂತೆ ಗಿರಿಶಿಖರಗಳು ಚಿಟಿಚಿಟಿಲ್ ಚಿಟಿಲ್ ಎಂದು ಆ ಬೇಸಿಗೆಯಲ್ಲಿ ಒಡೆದು ಬಿರುಕು ಬಿಟ್ಟವು. ಸಮುದ್ರದ ನೀರು ಬತ್ತುತ್ತ, ನೆಲವು ಕಾವೇರುತ್ತ ಬರಲು, ನೀರಿಗಾಗಿ ದಿಕ್ಕುದಿಕ್ಕುಗಳು ಬಾಯ್ಬಿಡುತ್ತಿರಲು, ಹರಿಹರರು ನಿಟ್ಟುಸಿರು

ಬಿಡುವಂತೆ ಬೇಸಿಗೆಯ ಉರಿಯು ಹೆಚ್ಚಾದಂತೆ ಅಲ್ಲಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡು ಅದರ ಉಪಟಳದಿಂದ ತೊಳಲಾಡುವ ಕಾಡುಕೋಣಗಳು ಆನೆಗಳು ಹುಲಿಗಳು ಮುಂತಾದ ಪ್ರಾಣಿಗಳ ತಲೆ ಬಿಮ್ಮೆಂದು ಆ ಬೇಸಿಗೆಯಲ್ಲಿ ಕಂಗಟ್ಟು ಕಿರಿಚುತ್ತಿದ್ದವು. ದೂರದಲ್ಲಿ ಕಾಣುವ ಮರೀಚಿಕೆಗಳನ್ನೇ ಕೊಳದ ನೀರೆಂದು ಭ್ರಮಿಸಿ ಆನೆಗಳು ಕಲಕಿ ತಮ್ಮ ಸೊಂಡಿಲಿನಿಂದ ಮೊಗೆದುಕೊಂಡು ಪಕ್ಕಕ್ಕೆ ಸರಿದು ಕೆಂಡವನ್ನು ಕುಡಿದಂತೆ ಸೊಂಡಿಲನ್ನು ಬಾಯಲ್ಲಿ ಇಟ್ಟುಕೊಂಡು ಘೀಳಿಡುತ್ತ ಕೂಗುತ್ತವೆ. ನೆರಳನ್ನು ಬಯಸಿ ಬರುವ ಆನೆಯ ಹಿಂಡಿನ ಕುಂಭಗಳು ಕಾದು ಚಿಲ್ಲಿಚಿಲ್ಲಿಲ್ ಎಂದು ಬಿರಿದು ಹೊರಬೀಳುವ ಮುತ್ತುಗಳನ್ನು ನೀರಿನ ಹನಿಗಳೆಂದು ಬಗೆದ ಕೋಗಿಲೆಯೊಂದು ಅವುಗಳನ್ನು ತನ್ನ ಕೊಕ್ಕಿನಿಂದ ಹಿಡಿಯಲು ಕೊಕ್ಕು ಚುರ್ರೆಂದು ಹಿಂದೆ ನಿಲ್ಲುತ್ತದೆ! ಮದ್ದಾನೆಗಳು ಆಕಾಶದ ಬೇಗೆಯಿಂದ ಬಳಲಿ ಮರದ ನೆರಳಿಗೆ ಬರಲು ಅವುಗಳ ನೆರಳಿನಲ್ಲಿ ಸಿಂಹಗಳು ಬಾಯ್ಬಿಡುತ್ತ ನಿಲ್ಲುತ್ತವೆ! ಹಾವೊಂದು ತನ್ನ ಹೆಡೆಗಳನ್ನೇ ಕೊಡೆಯಾಗಿ ಹಿಡಿದು ಮೊಟ್ಟೆಗಳನ್ನಿಟ್ಟು ತನ್ನ ನೀಳ ಉಸಿರಿನ ಗಾಳಿಯಿಂದಲೇ ಅವುಗಳಿಗೆ ತಂಪನ್ನುಂಟುಮಾಡುತ್ತ ತಾನು ಬಿಸಿಲಲ್ಲಿ ಬೇಯುತ್ತದೆ! ಮತ್ತೊಂದೆಡೆ ಹಾವಿನ ಹೆಡೆ ಬಿಸಿಯಲ್ಲಿ ಅಲ್ಲಿದ್ದ ರತ್ನದ ಉಪಟಳವನ್ನು ತಡೆಯಲಾರದೆ ಅಡಿಗಡಿಗೆ ತಲೆಯನ್ನು ಕೊಡಹುತ್ತ ನವಿಲೊಂದರ ಗರಿಗಳ ಮರೆಯಲ್ಲಿ ಮಿಡುಕಾಡುವ ಹಾವುಗಳ ಅದ್ಭುತವೆನಿಸುವ ಆಟವು ಆಶ್ಚರ್ಯವನ್ನುಂಟುಮಾಡುತ್ತಿತ್ತು! ಮೇಲ್ಗಡೆಯ ಬಿಸಿಲು ಕೆಳಗಿನ ಭೂಮಿಯ ಕಾವು – ಇವುಗಳಿಂದಾಗಿ ಸಾರಂಗಗಳು ತಮ್ಮ ಮರಿಗಳ ಗುಂಪನ್ನು ಕರೆತಂದು ತಮ್ಮ ಹಣೆಯಿಂದಲೇ ಅವಕ್ಕೆ ಮರೆಯೊಡ್ಡಿ, ನಾಲಗೆಗಳನ್ನು ಚಾಚಿ ಅವುಗಳ ತುದಿಯಲ್ಲಿ ಜಿನುಗುವ ಕಣಗಳಿಂದಲೇ ಎಳೆಗರುಗಳನ್ನು ಉಪಚರಿಸುತ್ತವೆ! ಎಳೆಯ ಬಾಳೆಕಂದುಗಳಂತೆ ಮರುಗುತ್ತ ಕಂದಿ ಕುಂದಿ ಬಳಲಿ ತಾಳಲಾರದೆ ನಡುಗಿ ಮಿಡುಕುವ ಜಿಂಕೆಗಳ ತಂಡಗಳು ಅಲ್ಲಿ ಕಾಣಿಸಿದವು. ರೆಕ್ಕೆಗಳು ಸುಟ್ಟು ಹಾರಲಾರದೆ ನಿಂತುಕೊಂಡ ಪಕ್ಷಿಗಳು, ಚಿರಚಿರನೆ ಹೊಗೆ ತುಂಬಿ ಮೈಕೂದಲು ಉರಿಯುವ ಕರಡಿಗಳು, ಬಿಸಿಲಿಂದ ದಂತಾಗ್ರವು ಒಡೆದು ಚಿಟಿಚಿಟಿಲೆಂದು ಮುತ್ತುಗಳು ಉದುರುವ ಆನೆಗಳು, ಹೆಡೆಯಲ್ಲಿನ ಮಣಿಗಳ ಕಾವಿನಿಂದ ಹೊರಳಾಡುವ ಹಾವುಗಳು, ಉರಿಯನ್ನು ತಾಳಲಾರದೆ ತರಹರಿಸುವ ಸಿಂಹಗಳು ಆ ಕಾಡಿನಲ್ಲಿ ಬೇಸಗೆಯ ಅಟ್ಟಹಾಸವನ್ನು ಬಿಂಬಿಸುತ್ತಿದ್ದವು.

ಏಲಕ್ಕಿ ಲವಂಗ ಕರ್ಪೂರಗಳನ್ನು ಬೆರೆಸಿದ ವೀಳೆಯವನ್ನು ಮೆದ್ದ ತುಟಿಗಳಿಂದ ಕೂಡಿ, ಚಂದನಸಹಿತವಾದ ವಕ್ಷಸ್ಥಳದಲ್ಲಿ ಚಂದನವನ್ನು ಲೇಪಿಸಿಕೊಂಡು, ಗುಂಗುರು ಕೂದಲಲ್ಲಿ ಕಂಪುಸೂಸುವ ಹೂಗಳನ್ನು ಮುಡಿದು, ಬೀಸಣಿಗೆಯ ಆಕಾಂಕ್ಷೆಯಿಂದ ತಣ್ಣಗಿನ ನೆಲವನ್ನು ಅಪ್ಪಿಕೊಂಡ ಲಲನಾಸಮುದಾಯವು ಆ ಕಾಲದಲ್ಲಿಯೂ ಅಲ್ಲಲ್ಲಿ ಯುವಜನರ ಚಿತ್ತಕ್ಕೆ ಮುದವನ್ನುಂಟುಮಾಡುತ್ತಿತ್ತು. ಮಿತ್ರ ಎನ್ನುವ ಹೆಸರಿನ ಇವನು (ಸೂರ್ಯ) ತನ್ನ ಏಳಿಗೆಯಿಂದ ತಾಪಕ್ಕೆ ಈಡುಮಾಡಿ ಮೋಸದಿಂದ ನನ್ನನ್ನು ಶೋಷಣೆ ಮಾಡುವ (ಒಣಗಿಸುವ) ಈ ಪರಿಯು ಕಾಲಗುಣವಲ್ಲವೇ, ಇದರಲ್ಲಿ ಸ್ನೇಹವೇನಿದೆ ಎಂದು ಕಮಲಗಳು – ತಮ್ಮನ್ನು ಒಡಲ ವ್ಯಾಧಿಯು ಬಾಧಿಸುತ್ತದೆ ಎಂದು – ಸುಂದರಿ ಯುವತಿಯರ ಮುಖಚಂದ್ರಗಳನ್ನು ಆಶ್ರಯಿಸಿದವು. ಗಾಳಿಯು

ತನ್ನ ಹಗೆ ಎಂಬುದನ್ನು ತಿಳಿದ ತಂಪು ಲಲನೆಯರ ಉಬ್ಬಿದ ಮೊಲೆಗಳಲ್ಲಿಯೂ, ಕರ್ಪೂರದಿಂದ ಕೂಡಿದ ವೀಳೆಯ ಬಳ್ಳಿಗಳಲ್ಲಿಯೂ, ಮರಗಳ ನೆರಳಿನಲ್ಲಿಯೂ, ತಂಪಾದ ಜಲಾಶಯಗಳಲ್ಲಿಯೂ ಸೇರಿ ಲೋಕಕ್ಕೆ ಕಾಣಿಸದ ರೀತಿಯಲ್ಲಿ ಅಡಗಿತ್ತು - ಎಂದ ಮೇಲೆ ಆ ಕಾಲದ ಬೇಸಿಗೆಯ ಶೌರ್ಯಭರಿತವಾದ ಹೊಡೆತವನ್ನು ಏನೆಂದು ಬಣ್ಣಿಸುವುದು? ಚಂದ್ರಕಾಂತಶಿಲೆಗಳ ಸ್ಪರ್ಶವನ್ನೂ, ಬೀಸಣಿಗೆಗಳಿಂದ ಹೊಮ್ಮುವ ತಂಗಾಳಿಯನ್ನೂ, ನೆರಳಿನ ಶೈತ್ಯವನ್ನು ಹೊಂದಿದ ತಣ್ಣನೆಯ ಬಾಳೆಯ ಮರಗಳು - ಸೌಧಾಗ್ರಗಳಲ್ಲಿರುವ ಸುದತಿಯರು ಬಯಸುತ್ತ ಬರಲು ಮನ್ಮಥನ ಕಡಿಮೆಯಾಗದ ಅಪ್ರತಿಮ ಶೌರ್ಯವು ಬಂಧುವಿಯೋಗಿಗಳನ್ನು ಕಾಡಲು ಇಚ್ಛಿಸುವುದೋ ಎಂಬಂತೆ - ಬಿಸಿಲು ತಲೆದೋರಿತು. ಪ್ರಳಯರುದ್ರನ ಕೆಂಗಣ್ಣಿನ ಉರಿ ಮತ್ತು ಅಗ್ನಿಹೋತ್ರದ ಬೆಂಕಿಯ ಜ್ವಾಲೆಯಿಂದ, ಬ್ರಹ್ಮಾಂಡಗಳು ಚಿಲ್ಲಿಚಿಲ್ಲಿಲೆಂದು ಒಡೆದುಹೋಗುತ್ತವೆ ಎಂಬಂತಿರುವ ಸೂರ್ಯಕಿರಣಗಳ ಉಪಟಳದಿಂದ, ಕುಲಶೈಲಗಳ ಶಿಖರಗಳ ಬಂಡೆಗಳು ಸಿಡಿದು ಪ್ರಾಣಿಪಕ್ಷಿಗಳು ಒರಲುತ್ತಿರಲು, ಅದನ್ನು ಕಂಡು ಆಕಾಶವು ಭೀತಿಯಿಂದ ನಿಂತು ಪ್ರತಿಧ್ವನಿಸುವಂತೆ ಮೊರೆಯಿತು. ಆನೆಗಳ ಹಿಂಡು ತಮ್ಮ ಬಲಿಷ್ಠ ಸೊಂಡಿಲುಗಳಿಂದ ತನ್ನ ಕಿರಣಗಳಿಗೆ ಆಘಾತವನ್ನುಂಟುಮಾಡುತ್ತವೆ ಎಂದು ತನ್ನ ತೀಕ್ಷ್ಣ ಕಿರಣಗಳೆಂಬ ಕತ್ತಿಯಿಂದ ಅವುಗಳ ಮಸ್ತಕಗಳಿಗೆ ಹೊಡೆಯಲು ಅವುಗಳ ದಂತಮೂಲದಿಂದ ಉದುರುವ ಮುತ್ತುಗಳು, ಸೂರ್ಯನು ಆಕಾಶದಲ್ಲಿನ ನಕ್ಷತ್ರಮಾಲಿಕೆಯನ್ನು ಕಿತ್ತು ತನ್ನ ನಲ್ಲೆಯಾದ ಭೂಮಿಯ ಕಡೆ ಎಸೆಯುವನೋ ಎನ್ನುವಂತೆ ತೋರುತ್ತಿತ್ತು.

ಈ ರೀತಿಯಲ್ಲಿ ತೀಕ್ಷ್ಣವಾಗಿದ್ದ ಕಡುಬೇಸಿಗೆಯಲ್ಲಿ ಸೀತಾಕಾಂತನು ಅಲ್ಲಲ್ಲಿ ಮರಗಳ ನೆರಳಿನಲ್ಲಿ ದಣಿವಾರಿಸಿಕೊಳ್ಳುತ್ತ ಬರುತ್ತಿರಲು ಆನೆಗೆ ಉಪಟಳವನ್ನು ನೀಡಿದ ಸೂರ್ಯನ ಶೌರ್ಯವನ್ನು ಕ್ಷೀಣಗೊಳಿಸುವ ಕಾಳಮೇಘನು ಸಾಲುಗಟ್ಟಿ ಬರುತ್ತಿದ್ದಾನೆಯೋ ಎಂಬಂತೆ ಮಂದರಗಳಂತಹ ಮಹಾ ಶರೀರಗಳಿಂದ ಕೂಡಿ ಕತ್ತಲೆಯ ಸಂತೆಯಂತೆ ಕಿರಾತರು ರಭಸದಿಂದ ಬಂದು ಆ ಕಾಲದಲ್ಲಿ ಕಾಣಿಸಿಕೊಂಡರು. ಉಟ್ಟ ಚಲ್ಲಣ, ಬಿಗಿದ ಮದವಾರುಗಳು, ಹಣೆಯ ಮೇಲಿನ ವಿಭೂತಿಯ ಮೇಲೆ ಸೊಗಸುವ ಕಾಡಿಗೆ, ತಲೆಯಲ್ಲಿ ಮೆರೆಯುವ ಪಾಗುಗಳಲ್ಲಿ ಸಿಕ್ಕಿಸಿರುವ ನಾನಾ ಬಗೆಯ ಚಿಗುರೆಲೆಗಳು, ಹೊಳೆಯುವ ಹಸುರು ಬಣ್ಣದ ಅಂಗಿಗಳು, ಗುಲಗಂಜಿಯ ದಂಡೆಗಳು, ನಿಗುರಿರುವ ಮೀಸೆ, ಕೆಂಗಣ್ಣುಗಳ ಕರ್ಕಶವಾದ ಬಿಸುಪು, ಕೈಯಲ್ಲಿ ಬಿಗಿಹಿಡಿದ ನಾಯಿಗಳು ಇವುಗಳಿಂದ ಕೂಡಿದ ಬೇಡರ ಪಡೆ ಎದುರಾಯಿತು. ಬುಡುವಲೆ, ಕಡುವಲೆ, ಕಣ್ಣಿವಲೆ, ತೊಡರುವಲೆ, ಬೀಸುವಲೆ, ಸೊಕ್ಕು ಚಿಗುರಿಕ್ಕುಗಳನ್ನು ಬಿಗಿದಿರುವ ಗಾಳ ಮುಂತಾದ ಹಲವಾರು ಬಗೆಯ ಸಾಧನಗಳನ್ನು ಜೋಡಿಸಿಕೊಂಡು ರಭಸದಿಂದ ಘುಡುಘುಡಿಸುತ್ತ ನೋಡುವವರ ಕಣ್ಗುಡ್ಡೆಗಳು ಸಿಡಿದು ಹೋಗುವ ಹಾಗೆ ಕಬ್ಬಿಣದ ಬೊಂಬೆಗಳಂತಹ ಬೇಡರ ಪಡೆ ಬಂದಿತು. ಮುಂದೆ ಒಂದು ದೊಡ್ಡ ಆನೆಯ ಹಿಂಡಿನ ಘೀಳಿಡುವ ಮಹಾ ಶಬ್ದ, ಕಾಡುಕೋಣಗಳ ಗುಂಪಿನ ಕೂಗುವ ಸದ್ದು ಮತ್ತೆ ಮತ್ತೆ ಕೇಳಿಬರುತ್ತಿರಲು, ಹುಲಿಸಿಂಹಗಳ ಕಡುಗರ್ಜನೆ, ನರಿಗಳ ಊಳಿಡುವಿಕೆ, ಗಿಡುಗ ಹದ್ದುಗಳ ಕೂಗು - ಇವುಗಳಿಂದ ಕೂಡಿ ಅದು ಭೈರವನ ಮಂದಿರವೋ ಎಂಬಂತೆ ತೋರುತ್ತಿತ್ತು. ಇಂದ್ರನ ವಜ್ರಾಯುಧದ ಹೊಳಪು, ಸಿಂಹಗಳ

ಹರಿತವಾದ ಉಗುರುಗಳು ಸೀಳಿದ ಮದ್ದಾನೆಗಳ ಕುಂಭಗಳಿಂದ ಬೀಳುವ ಮುತ್ತುಗಳ ಕಾಂತಿ ಒಂದೆಡೆ ಕಂಗೊಳಿಸಿದರೆ, ಕೊಬ್ಬಿದ ಶಬರರ ಆರ್ಭಟೆಗೆ ಹೆದರಿ ಅಡಗಿಕೊಂಡ ಶಾರ್ದೂಲಗಳಿಂದ ಕೂಡಿದ ಕಾಡು ಮತ್ತೊಂದೆಡೆ ಕಾಣಿಸಿತು. ಮತ್ತೊಂದೆಡೆಯಲ್ಲಿ ಗಂಡುಡುಗೆಯನ್ನುಟ್ಟು ಹಾಡುತ್ತ ಬರುವ ಕಿರಾತಕನ್ನಿಕೆಯರ ತುರುಬುಗಳಲ್ಲಿನ ಹೂಗಳ ಸುಗಂಧವು ಹರಡಿರುವ ಶೃಂಗಾರಕಾನನವು ಕಣ್ಗೆಸೆಯಿತು. ಕಳಿತು ಕೆಳಕ್ಕೆ ಉದುರಿ ಒಡೆದ ತಾಳೆಯ ಹಣ್ಣುಗಳ ರಸವನ್ನು ಕುಡಿದು ಮದವೇರಿ ಮುಂದುಗಡೆ ಕಾಣಿಸುವ ಬಿಳಿಯ ಕಲ್ಲುಗಳನ್ನೇ ಹೆಣ್ಣುಗಳೆಂದು ಭಾವಿಸಿ ಅಪ್ಪಿಕೊಳ್ಳುತ್ತ, ಅತ್ತಿತ್ತ ನೋಡಿ ಸ್ಫಟಿಕಶಿಲೆಗಳಲ್ಲಿ ಕಾಣಿಸುವ ತಮ್ಮ ಬಿಂಬಗಳನ್ನೇ ನೋಡಿ ಪ್ರತಿಭಟಿಸುತ್ತ ಹಲ್ಲುಕಿರಿಯುತ್ತ ಚೀರುವ ಹುಬ್ಬುಗಂಟಿಕ್ಕಿಕೊಂಡ ನಾನಾ ಬಗೆಯ ಕೋಡಗಗಳು ಕಾಣಿಸಿದವು.

ತಲೆಗೆ ದೊಡ್ಡ ಬಳ್ಳಿಗಳನ್ನು ಸುತ್ತಿಕೊಂಡು ಕತ್ತಲೆಯಂತೆ ಮುತ್ತಿ ಬರುವ ಬೇಡಪಡೆಯನ್ನು ಕಂಡು ಹೆದರಿ ಮುಂದುವರಿಯಲಾರದೆ ನಿಂತು ತತ್ತರಗೊಳ್ಳುತ್ತ ಬಾಯ್ಬಿಡುತ್ತ ನೆಲದ ಮೇಲೆ ಕುತ್ತಿಗೆಯನ್ನು ಇಟ್ಟುಕೊಂಡು ಮೊರೆಯುವ ಜಿಂಕೆಗಳು ಎಲ್ಲೆಲ್ಲೂ ಕಾಣಿಸುತ್ತಿದ್ದವು. ಹಾವುಗಳನ್ನು ಹಿಡಿದು ಬಳೆಯಂತೆ ಗುಂಡಗೆ ಸುತ್ತಿ ತಮ್ಮ ಸೊಂಡಿಲುಗಳಿಂದ ಹಿಡಿದಿರುವ ಆನೆಗಳನ್ನು ಹಿಡಿದು ಮೇಲೆ ಹಾರಿದ ಶರಭಗಳು ಒಂದೆಡೆಯಾದರೆ, ಆ ಶರಭಗಳನ್ನು ಹಿಡಿದು ಆಕಾಶದಲ್ಲಿ ಹಾರಿಹೋಗುವ ಭೇರುಂಡಗಳ ತಿಂಥಿಣಿಯು ಮತ್ತೊಂದೆಡೆಯಲ್ಲಿ ಕಾಣಿಸಿದವು. ಕಾಡುಕೋಣಗಳು ಮದಿಸಿ ಮೈಮುರಿಯುತ್ತ ಕೊಂಬುಗೊರಸುಗಳಿಂದ ಕೂಡಿ ಮೇಲೆ ಹಾಯಲು ಅವುಗಳ ಖಣಿಖಟಿಲೆಂದು ಶಬ್ದಮಾಡುವ ಕಾಲ್ತುಳಿತಕ್ಕೆ ನೆಲವೇ ನಡುಗಲು, ಅವುಗಳ ಹಿಂದೆ ಕಾಡುಹಂದಿಗಳು ಆ ಕಡೆ ಈ ಕಡೆ ಚಲಿಸದ ಹಾಗೆ ಸುತ್ತಿಕೊಂಡು ವೃಷಣಗಳನ್ನು ಬಲವಾಗಿ ಕೀಳುತ್ತಿರಲು ಹಲ್ಲುಕಿರಿದು ಅರಚುವ ನರಿಗಳು ಒಂದೆಡೆ ಕಾಣಿಸಿದವು. ಸಿಡಿಲಿನ ಶಬ್ದವನ್ನೂ ಮೀರಿಸುವಂತೆ ಸಿಂಹಗಳು ಘುಡುಘುಡಿಸುತ್ತ ಮದ್ದಾನೆಗಳ ಕುಂಭಸ್ಥಳಗಳನ್ನು ಹಿಡಿದು ಗುದ್ದಲು ಅವುಗಳಿಂದ ಕೆಂಡದುಂಡಗಳಂತೆ ಸುರಿಯುವ ರಕ್ತದ ಹನಿಗಳಂತಹ ಮುತ್ತುಗಳು ನೆಲಕ್ಕೆ ಉದುರುತ್ತಿದ್ದರೆ, ಆ ಸಿಂಹಗಳನ್ನು ಭಂಗಿಸಲೆಂದು ಅಪ್ಪಳಿಸಲೆಂದು ಬರುವ ಶರಭಗಳನ್ನು ನೋಡಿ ಚೀರುವುದನ್ನು ಕಂಡು ನಡುಗುತ್ತ ನೆಲದ ಮೇಲೆ ಬಿದ್ದುಕೊಳ್ಳುವ ಶಾರ್ದೂಲದ ಹಿಂಡುಗಳು ಒಂದೆಡೆ ಕಾಣುತ್ತಿದ್ದವು. ಒಬ್ಬ ಬೇಡನು ಮರದ ಬಿಲ್ಲುಗಳಿಗೆ ಹರಿತವಾದ ಬಾಣಗಳನ್ನು ಹೂಡಿ ಬಿಟ್ಟು ಆನೆಗಳನ್ನು ಕೆಡಹುತ್ತಿರಲು, ತನ್ನ ಬಾಲವನ್ನು ಒದರಿ ಕೂರ್ಗಣೆಯನ್ನೂ ಹಿಂದಿಕ್ಕುವಂತೆ ಗಾಳಿಯ ವೇಗದಲ್ಲಿ ಹೋಗಿ ಹುಲಿ ಜಿಂಕೆ ಕಾಡುಕೋಣ ಕರಡಿ ಕಾಡುಹಂದಿಗಳನ್ನು ಹಿಡಿಯಲೆಂದು ಭೀಕರವಾಗಿ ಬೊಗಳುತ್ತ ಬಲವಾಗಿ ಓಡುತ್ತ ಹೋಗುವ ಬೇಟೆಯ ನಾಯಿಗಳ ದಂಡು ಒಂದೆಡೆಯಿದ್ದಿತು. ಜಿಂಕೆ ತೋಳ ನರಿ ಮೊಲ ಬೆಕ್ಕು ಕಪಿ ಆನೆ ಎತ್ತು ಭೇರುಂಡ ಕಾಡುಕೋಣ ಹುಲಿ ಸಾರಂಗ ಸಿಂಹ ಕರಡಿ ಶರಭ ಎಂಬ ಅಗಣಿತವಾದ ಪ್ರಾಣಿಗಳು ತೋರಿಬರಲು; ಗರುಡ ಗೀಜಗ ಹಂಸೆ ಕ್ರೌಂಚ ಪಾರಿವಾಳ ಕೋಗಿಲೆ ಕಬ್ಬಕ್ಕಿ ಶಕುನಿ ತಿತ್ತಿರಿ ರಣಹದ್ದು ಕೋಳಿ ಕೊಕ್ಕರೆ ಹೆಬ್ಬಕ್ಕಿ ನವಿಲು ಮುಂತಾದ ಪಕ್ಷಿಗಳೂ ಆ ಕಾಡಿನಲ್ಲಿ ಕಾಣಿಸಿದವು. ಒಂದೆಡೆ ಹಾವಿನ ಬುಸುಗುಡುವಿಕೆ, ಮತ್ತೊಂದೆಡೆ ಸಿಂಹದ ಗರ್ಜಿಸುವಿಕೆ,

ಮಗುದೊಂದೆಡೆ ಆನೆಯ ತಾರಕದ ಘೀಳಿಡುಪಿಕೆ, ಇನ್ನೂ ಒಂದೆಡೆ ಕೊಂಬೆಯಿಂದ ಕೊಂಬೆಗೆ ಹಾರುವ ಮಂಗದ ಚೀತ್ಕರಿಸುಪಿಕೆ, ಮತ್ತೂ ಒಂದೆಡೆ ಹಾಲಕ್ಕಿಯ ಕೂಗುಪಿಕೆ – ಇವುಗಳ ಸೊಗಸು ಭೀಕರತೆಗಳಿಂದ ಕೂಡಿ ವನವು ಅಚ್ಚರಿಯನ್ನುಂಟುಮಾಡುತ್ತಿದ್ದಿತು.

ಹೀಗಿದ್ದ ಹರಹಾದ ಆ ಕಾಡನ್ನು ನೋಡುತ್ತ ಬೇಡರ ಪಡೆಯು ಸಡಗರದಿಂದ ಮುಂಗಾರಿನ ಮೋಡಗಳ ರಾಶಿಯಂತೆ ಮೊರೆಯಲು ಎಂಟೂ ದಿಕ್ಕುಗಳು ತಲ್ಲಣಗೊಂಡವು; ಮೃಗಪಕ್ಷಿಗಳು ಹೆದರಿ ದಿಕ್ಕಾಪಾಲಾಗಿ ಓಡಿಹೋದವು; ಅವುಗಳನ್ನು ನೋಡುತ್ತ ಬೊಗಳುತ್ತ ಓಡುವ ಬೇಟೆ ನಾಯಿಗಳ ಗುಂಪು ಭೀಕರವಾಗಿತ್ತು. "ಇದೇ ಸಿಂಹವು ಓಡಿಹೋದ ಹಾದಿ, ನೋಡು, ಇದೇ ಮದ್ದಾನೆಗಳು ಓಡಾಡಿರುವ ಜಾಗ, ಹುಲಿಗಳು ಓಡಿ ನಿಂತ ಹೆಜ್ಜೆಯ ಗುರುತು ಇಲ್ಲಿದೆ ನೋಡು, ಈ ಕಡೆಯ ದಾರಿಯಲ್ಲಿ ಚಮರೀಮೃಗಗಳ ಹೆಜ್ಜೆ ಗುರುತಿದೆ, ಇದು ಕಿರುಬಗಳ ಜಾಗ, ಇಲ್ಲಿ ನೋಡು ಕಾಡುಹಂದಿಯು ಮಲಗಿದ್ದ ನೆಲ" ಎಂದು ಹುಡುಕಾಡುತ್ತ ಶಬರಪಡೆಯು ಮುಂದೆ ಸಾಗಿತು. ಒಬ್ಬನು ಮರವೊಂದರ ಮೇಲೆ ಹತ್ತಿ ನೋಡುತ್ತಿದ್ದರೆ, ಮತ್ತೊಬ್ಬ ಜಿಂಕೆಗಳ ಹೆಜ್ಜೆಗುರುತುಗಳನ್ನು ನೋಡಿ ಮೆಳೆಗಳಲ್ಲಿ ನುಸುಳಿದ; ಮಗುದೊಬ್ಬ ಆನೆಯು ಮುರಿದ ಬೇಲದ ಮರವನ್ನು ನೋಡಿ ಅದರ ಗುರುತನ್ನು ಹಿಡಿದು ಸಾಗಿದ; ಮತ್ತೂ ಒಬ್ಬ ಬೇಗ ಬೇಗ ಮುಂದೆ ಹೋಗಿ ಮರದ ತುದಿಯನ್ನು ಸೇರಿ ನಾಯಿಗಳನ್ನು ಕೂಗಿ ಹತ್ತಿರದಲ್ಲಿಯೇ ಓಡುತ್ತಿದ್ದ ಜಿಂಕೆಯನ್ನು ಬೆಂಬತ್ತಲು ಹೇಳಿದ; ಅದು ಓಡಲು ಹಕ್ಕಿಗಳು ದಿಕ್ಕಾಪಾಲಾಗಿ ಹಾರಿ ಹೋದವು. ಓಡುವ ಆನೆಗಳು, ನರಳುವ ಕರಡಿಗಳು, ನಡುಗುವ ಜಿಂಕೆಗಳು, ಮರೆಗೆ ಹೋಗುವ ಮೊಲಗಳು, ಹಾರುವ ಹಕ್ಕಿಗಳು, ನೆಲದ ಮೇಲೆ ಮಲಗುವ ಕತ್ತಿಮೃಗಗಳು, ನಿಲ್ಲದೆ ಓಡುವ ಸಿಂಹಗಳು, ಓಡಿ ಪೊದೆಯಲ್ಲಿ ಸೇರಿಕೊಳ್ಳುವ ಹಂದಿಗಳು – ಇವುಗಳ ತಲೆ ಬಿರಿಯುವ ಹಾಗೆ ಬೊಬ್ಬಿರಿಯುತ್ತ ಬೇಡರ ಕೂಗು ದಿಕ್ಕುಗಳನ್ನು ತಲುಪಿತು. "ಲೋ, ಹೋಗು, ಬಿಲ್ಲಿಗೆ ಬಾಣವನ್ನು ಹೂಡು, ನಾಯಿಗಳನ್ನು ಬಿಡು, ಬೊಬ್ಬಿಡುವ ಆನೆಗಳಿಗೆ ಹೊಡೆದು ಕೆಡಹು, ಹುಲ್ಲೆಗಳನ್ನು ಹಿಡಿದುಕೋ, ಮೊಲಗಳನ್ನು ಬಿಡಬೇಡ, ಜಿಂಕೆಯನ್ನು ಹೊಂಬಾಲಿಸು, ಹುಲಿಯನ್ನು ಕಡಿದು ಹಾಕು, ಕತ್ತಿಮೃಗಗಳನ್ನು ಹಿಡಿದುಕೊ, ಚಮರಿಮೃಗಗಳನ್ನು ಭಲ್ಲೆಯಿಂದ ತಿವಿ, ಚಿಕ್ಕ ಪೊದರುಗಳಲ್ಲಿ ಅಡಗಿಕೊಳ್ಳುವ ನರಿಯನ್ನು ಬಿಡಬೇಡ" ಎನ್ನುತ್ತ ಅಲ್ಲಲ್ಲಿ ಕೂಗುವ ಆರ್ಭಟೆಯು ಆ ಕಾನನದಲ್ಲಿ ತುಂಬಿಕೊಂಡಿತು. ನೀಳಕೂದಲ ಚಮರಿಮೃಗಗಳೊಡನೆ, ಆನೆಗಳ ಹಿಂಡಿಗೆ, ಜಿಂಕೆಗಳ ಸಮೂಹಕ್ಕೆ, ಓಡುವ ಹುಲಿಗೆ ಹೊಡೆಯಲು ಕಣ್ಣುಸನ್ನೆ, ಮೊಳಕೈ ತಿವಿತಗಳಿಂದ ಸೂಚಿಸಿ ಆ ಬೇಡರು ಪ್ರಾಣಿಗಳನ್ನು ಬೇಟೆಯಾಡಿ ಹೊಡೆದುರುಳಿಸುತ್ತಿದ್ದರು. ಚಿಟಕಿಹಾಕಿ, ಮೈದಡವಿ, ಹಗ್ಗವನ್ನು ಬಿಚ್ಚಿ ಭೀಕರವಾದ ಹುಲಿಯ ಕಡೆ ತೋರಿಸಿ ಛೂಬಿಡಲು, ತುಟಿಗಳನ್ನು ಸವರಿಕೊಂಡು ಬೆಟ್ಟಗಳನ್ನೇ ಬೆದರಿಸುವ ಇಚ್ಛೆಯಿಂದ ಕಿವಿಯ ನಿಮಿರಿಸಿಕೊಂಡು ತಟತಟನೆ ಬಾಲವನ್ನು ಕೊಡಹಿ ನಿಟ್ಟುಸಿರು ಬಿಡುತ್ತ ನೆಗೆಯುತ್ತ ಓಡಿ ಕೋಪದ ಆರ್ಭಟೆಯಿಂದ ಬೆಂಬತ್ತಿ ಹಿಡಿಯುವ ಬೇಟೆನಾಯಿಗಳ ಗುಂಪು ಕಾಣುತ್ತಿದ್ದವು. ಮುಂಗಾಲುಗಳಿಂದ ನೆಲವನ್ನು ಕೆರೆಯುತ್ತ, ಕಡುಗೋಪದಿಂದ ಹಿಂದುಗಡೆಯಲ್ಲಿ ಬಾಲಗಳನ್ನಾಡಿಸುತ್ತ ಕಿವಿಗಳನ್ನು ನೆಟ್ಟಗಾಗಿಸಿಕೊಂಡು ಕೂಗಿಡುತ್ತ ದಿಕ್ಕುದಿಕ್ಕುಗಳಿಗೆ ಓಡುತ್ತ ಸಿಂಹವನ್ನು ಬೆಂಬತ್ತಿ, ಹುಲಿಯ

ತಲೆಯ ಮೇಲೆ ಬಿದ್ದು, ಕಾಡುಹಂದಿಯ ಮೇಲೆ ನೆಗೆದು, ಮೊಲಗಳನ್ನು ಮುರಿದೆಸೆದು, ಹುಲ್ಲೆಗಳ ಕಾಲನ್ನು ಹಿಡಿದುಕೊಂಡು ಕೆಡಹುವ ನಾಯಿಗಳು ಬೇಡರ ಪಡೆಯೊಡನೆ ಇದ್ದವು. ಕಿವಿಗಳನ್ನು ನಿಮಿರಿಸಿ ಶಬ್ದವನ್ನಾಲಿಸುತ್ತ, ಕಣ್ಣುಗಳನ್ನು ಅಗಲವಾಗಿ ತೆರೆದು ನೋಡುತ್ತ, ಕೂಗುವ ದನಿಯನ್ನು ಕೇಳುತ್ತ, ಹಲ್ಲುಕಡಿಯುತ್ತ, ದೇಹವನ್ನು ತೂಗಿ ರೋಮಗಳನ್ನು ನೆಟ್ಟಗೆ ಮಾಡಿಕೊಂಡು, ಎಲ್ಲ ಕಡೆ ಗಮನಹರಿಸುತ್ತ, ಬಾಯನ್ನು ಚಪ್ಪರಿಸುತ್ತ ಕಡುಗೋಪದಿಂದ ಮುಂದೆ ಓಡಿ ಬರುವ ನಾಯಿಗಳನ್ನು ಕೊಡವಿ ಕೆಡವುತ್ತಿರುವ ಕಾಡುಹಂದಿಯ ತಲೆ ಬಿರಿಯುವಂತೆ ಒಂದು ಕಡೆ ಶಬರನೊಬ್ಬನು ಬಾಣ ಬಿಟ್ಟರೆ; ಮತ್ತೊಂದೆಡೆ, "ಹೋಗಬೇಡ ನಿಲ್ಲು, ಹಿಂದೆ ಬಾ" ಎಂದು ಕೂಗುವ ದನಿ ಕೇಳಿ ಹಿಂದಕ್ಕೆ ಬಂದು ಕಾಲುಗಳನ್ನು ತೂಗುತ್ತ ದಾಡೆಗಳನ್ನು ಕಡಿಯುತ್ತ, ಕಣ್ಣುಗಳಲ್ಲಿ ಕೆಂಡಗಳನ್ನುದುರಿಸುತ್ತ, ಮಹಾವೇಗದಿಂದ ಯಮನ ಕೋಣವು ಮೇಲೆ ಬೀಳುವಂತೆ ಬರುವ ಹಂದಿಯನ್ನು ಕೂರ್ಗಣೆಯಿಂದ ಹೊಡೆದು ಬೀಳಿಸಿದ ಬೇಟೆಗಾರನೊಬ್ಬನ ಕೈಚಳಕವನ್ನು ಏನೆಂದು ಹೇಳುವುದು! ಕಣ್ಣುಗಳು ಕೆಂಡದಂತಿರಲು, ಮತ್ತೆ ಮತ್ತೆ ಆಕಳಿಸುತ್ತ ಮುಂಗಾಲುಗಳನ್ನು ಚಾಚಿ, ಹಿಂದಿನ ಕಾಲುಗಳನ್ನು ಹಿಂದುಗಡೆ ನೀಡಿಕೊಂಡು, ನಾಲಗೆಯಿಂದ ಜೊಲ್ಲನ್ನು ಸುರಿಸುತ್ತ, ಘೋರವಾದ ಕೋರೆದಾಡೆಗಳಿಂದ ಕೂಡಿದ ಹುಲಿಯೊಂದು ಒಂದು ಮೆಳೆಯ ನಡುವೆ ಕಾಣಿಸಿದ ದೃಶ್ಯವನ್ನು ಏನೆಂದು ಹೇಳುವುದು!

ಬೊಗಳುತ್ತ ಬರುವ ನಾಯಿಗಳ ಆರ್ಭಟೆಗೆ ಕೋಪದಿಂದ ಘರಿಘರಿಯೆಂದು ಹಲ್ಲುಮಸೆಯುತ್ತ, ಮೆಳೆಯಿಂದ ಹೊರಬಿದ್ದು ಘರ್ಜಿಸುತ್ತ ನೆಲದಲ್ಲಿ ಬಿದ್ದು ಹಿಂಬಾಲಿಸುವ ಬಾಲವನ್ನು ತಲೆಯ ಮೇಲೆ ಸುರುಳಿಯಾಗಿಸಿಕೊಂಡು ಬರುವ ಹುಲಿಯನ್ನು ಎದುರು ನೋಡುತ್ತ ನಿಟ್ಟಿಸುತ್ತ ಬೇಡನು ತನ್ನ ಕತ್ತಿಯನ್ನು ಸೆಳೆದು ಸರ್ರೆಂದು ಹೊಡೆಯಲು, ಅದನ್ನು ನೋಡಿದ ಬೇಡಿತಿ ಹರ್ಷಗೊಂಡು, ಜಯಲಕ್ಷ್ಮಿಯೇ ಭುಜಬಲವನ್ನು ಅಪ್ಪಿಕೊಳ್ಳುವಂತೆ, ಅವನನ್ನು ಅಪ್ಪಿಕೊಂಡಳು. ಕೊರಳನ್ನು ಬಾಗಿಸಿಕೊಂಡು, ಕಿವಿಗಳನ್ನು ಅತ್ತಿತ್ತ ಅಲುಗಿಸದೆ, ಬಾಲವು ನೆಲದಲ್ಲಿರಲು ನಿಧಾನವಾಗಿ ಕಾಲುಗಳನ್ನೆಳೆದೆಳೆದು ಇಡುತ್ತ, ಉಸಿರನ್ನು ಜೋರಾಗಿ ಬಿಡದೆ ಹುಲಿಯೊಂದು ಮುಂದುಗಡೆಯ ಮೆಳೆಯ ಒತ್ತಿನಲ್ಲಿಯೇ ಮೇಯುತ್ತಿರುವ ಜಿಂಕೆಯ ಮೇಲೆ ಕವ್ವನೆ ಹಾರಿ ಹಿಡಿದು ಕೊಡವಿ ಹಿಂದುಗಡೆ ಬೀಸಿ ಅದರ ರಕ್ತವನ್ನು ಹೀರುವಷ್ಟರಲ್ಲಿ ಶಬರನೊಬ್ಬನು ಕಂಡು ಬಾಣ ಬಿಟ್ಟು ಅದನ್ನು ಕೆಡವಿ ಕೇಕೆ ಹಾಕಿದ. ಎದುರಿನಲ್ಲಿಯೇ ನಿಂತು ಗರ್ಜಿಸುವ ಹುಲಿಯನ್ನು ಕಂಡು ಬಾಳೆಯ ಮರದಂತೆ ನಡುಗುತ್ತ ಕಂಗೆಟ್ಟು ಬಾಯ್ಬಿಟ್ಟು ಅಳುವ ಒಬ್ಬ ಹುಡುಗಿಯನ್ನು ಕಂಡು ಬಿಗಿದಪ್ಪಿ ಸಂತೈಸಿದ ಒಬ್ಬ ಬೇಡನು ತನ್ನ ಕತ್ತಿಯನ್ನು ಜಳಪಿಸುತ್ತ ಪೊದರಿನಿಂದ ಹೊರಬಂದು ಏಳೆಂಟು ಹೆಜ್ಜೆಗಳ ದೂರದಲ್ಲಿ ನಡುದಾರಿಯಲ್ಲಿ ಅರೆನಿಮಿಷದಲ್ಲಿ ಹೆಬ್ಬುಲಿಯನ್ನು ಹೊಡೆದು ಕೆಡಹಿದ. ಮುನಿಸಿನಿಂದ ಮುಖವನ್ನು ತಿರುಗಿಸಿಕೊಂಡು ಅನುನಯಕ್ಕೆ ಬಾಗದೆ ಬಳಲಿಸುವ ಬೇಡಿತಿಯೊಬ್ಬಳು ಕತ್ತೆಕಿರುಬವೊಂದರ ಗರ್ಜನೆಗೆ ಅಂಜಿಕೊಂಡು ಬಂದು ಅಪ್ಪಿಕೊಳ್ಳಲು ತನ್ನ ಮನೋರಥವು ನೆರವೇರಿತೆಂದು ಬೇಡನು ಮನಸ್ಸಿನಲ್ಲಿ ಸಂತಸವನ್ನು ತಾಳಿ ಆನೆಯೊಂದನ್ನು ತನ್ನ ಬಾಣವೊಂದರಿಂದ ಹೊಡೆದು ಕೆಡವಿದ. ಹಿಂಗಾಲು ಮುಂಗಾಲುಗಳನ್ನು ಹೊಂದಿಸಿಕೊಂಡು ಕೊಂಕಿದ ಕೊರಳನ್ನು

ನಡುಗಿಸುತ್ತಿದ್ದ ಹುಲಿಯೊಂದನ್ನು ಗುರಿಯಿಟ್ಟು ನೋಡಿ ಬೇಗನೆ ತನ್ನ ಬಿಲ್ಲಿಗೆ ಬಾಣವನ್ನು ಹೂಡಿ ಬೀಳಿಸಿ, ತನ್ನ ಸುಂದರವಾದ ಕುಡಿನೋಟವೆಂಬ ಕೂರ್ಗಣೆಯಿಂದ ತನ್ನನ್ನು ಹೊಡೆದು ಬೀಳಿಸಿದ ಶಬರಿಯನ್ನು ಕಂಡು ಬಿಲ್ಲನ್ನು ಬಿಸಾಕಿ ಬಂದು ಅಪ್ಪಿಕೊಂಡ. ಮೆಳೆಯಿಂದ ಹೊರಬಿದ್ದು ಗರ್ಜಿಸುತ್ತ ಹೋಗುವ ಹುಲಿಯನ್ನು ಕಂಡು ಕಡುಗೋಪದಿಂದ ಬೇಡನು ತನ್ನ ಎಡಗೈಗೆ ಚಳಕದಿಂದ ಕಂಬಳಿಯನ್ನು ಸುತ್ತಿಕೊಂಡು ಬಲಗೈಯಲ್ಲಿ ಕೊಡಲಿಯನ್ನು ಹಿಡಿದುಕೊಂಡು ಮೊಳಕಾಲನ್ನೂರಿ ಮಂಡಿಯನ್ನು ಬಲವಾಗಿ ಒತ್ತಿ, ತನ್ನ ಮೇಲಕ್ಕೆ ಸರಿಯಾಗಿ ಹಾರಿ ಬರುವ ಹುಲಿಯ ತಲೆಯನ್ನು ಕೆತ್ತಿಹಾಕಿದ; ಅದನ್ನು ಕಂಡ ಅವನ ಮನದನ್ನಳು ಭಳಿರೇ ಎಂದು ಉದ್ಗರಿಸಿದಳು. ತರುಣಿಯ ತೊಡೆಯಂತಿರುವ ಆನೆಯ ಸೊಂಡಿಲನ್ನು ಅರ್ಧಚಂದ್ರ ಬಾಣದಿಂದ ಹೊಡೆಯಲು ಅದರ ತಲೆ ಬಿರಿದು ಉದುರುವ ಕೆಂಪು ಮಣಿಗಳಿಂದ ನೆಲವು, ಸಂಜೆಯ ಕೆಂಬಣ್ಣದ ನಕ್ಷತ್ರಗಳಿಂದ ಕೂಡಿದ ಪಶ್ಚಿಮದಿಕ್ಕಿನಂತೆ, ಕಂಗೊಳಿಸಿತು. ಆಟವಾಡಲೆಂದು ಬಂದ ಆನೆಯೊಂದು ಸರೋವರದಳಿನ ಕಮಲದಂಟುಗಳನ್ನು ಹಿಡಿದುಕೊಂಡಿರಲು ಒಬ್ಬ ಭಿಲ್ಲನು ಬಿಲ್ಲನ್ನೆತ್ತಿ ಹರಿತವಾದ ಬಾಣವೊಂದನ್ನು ಬಿಡಲು, ಅದು ದಡಕ್ಕೆ ಬರಲಾರದೆ ಸಿಕ್ಕಿಹಾಕಿಕೊಂಡು ನಿಲ್ಲಲು ಅದರ ಕುಂಭದಲ್ಲಿ ನಾಟಿಕೊಂಡಿದ್ದ ಕೆಂಗರಿಯು ರೆಕ್ಕೆಗಳನ್ನು ಪಡೆದ ನೀಲಗಿರಿಯ ಮರಿಯಂತೆ ಕಾಣಿಸಿತು. ಮೇಲೆ ಹಾರಿ ಬಿದ್ದ ಹುಲ್ಲೆಯೊಂದನ್ನು ಒಬ್ಬ ಬೇಡನು ಬಾಣದಿಂದ ಹೊಡೆಯಲು ಅದು ಹಿಂದಿರುಗಿ ಬಂದು ಅವನ ತಲೆಯ ಮೇಲೆ ಕುಪ್ಪಳಿಸಿ ಕೆಡವಿತು.

ಹುಲ್ಲುಹಸಲೆಯಲ್ಲಿ ಮೇಯುತ್ತಿದ್ದ ಜಿಂಕೆಗಳ ಕಣ್ಣ ಆಕರ್ಷಣೆಯನ್ನು ಕಂಡು ಇದು ತನ್ನ ಕಣ್ಣ ಸೌಂದರ್ಯವನ್ನು ಪಡೆದಿದೆಯುಲ್ಲ ಎಂಬ ಕೋಪದಿಂದ ಬೇಡಿತಿಯೊಬ್ಬಳು ಬಾಣಬಿಟ್ಟು ಅದನ್ನು ಕೆಡವಿದಳು. ಅದು ಬಿದ್ದುದು ಬಾಣದ ಹೊಡೆತದಿಂದಲೋ ತರುಣಿಯ ಕುಡಿನೋಟದ ಬಾಣದಿಂದಲೋ ಎಂಬ ಗೊಂದಲವುಂಟಾಯಿತು! ನಾನಾ ಬಗೆಯ ಪ್ರಣಯದಾಟಗಳನ್ನಾಡುತ್ತ ಕೂಡುವ ಗಂಡುಹೆಣ್ಣು ಹುಲ್ಲೆಗಳನ್ನು ಕಂಡು ಮದನಕೋಪದಿಂದ ಬಾಣ ಬಿಡಲು ಅದು ನಡುಗುತ್ತ ಬಂದು ಹಸುರುಮೆಳೆಯ ಹಿಂದಿದ್ದ ಹೆಣ್ಣಿನ ಕಾಲ ಬಳಿ ಬಿತ್ತು; ಮನ್ಮಥಸಂಗರವನ್ನು ಗೆಲ್ಲಲು ಯಾರಿಂದಲಾದರೂ ಸಾಧ್ಯವೇ? ಮತ್ತೊಂದು ಕಡೆಯಲ್ಲಿ, ಸೋರ್ಮುಡಿಗೆ ಕಾಡಿನ ಹೂಗೊಂಚಲನ್ನು ಮುಡಿಸಿ, ಮುಖಕ್ಕೆ ಕಸ್ತೂರಿ ತಿಲಕವನ್ನಿಟ್ಟು, ಚಿಗುರುಗಳನ್ನು ಕಿವಿಯ ಮೇಲೆ ಹೊಂದಿಸಿ, ಮದ್ದಾನೆಯ ಕುಂಭದಿಂದ ಉದುರಿದ್ದ ರತ್ನಗಳ ಹಾರವನ್ನು ಕೊರಳಲ್ಲಿ ಹಾಕಿ, ಜೇನನ್ನು ತಿನ್ನಲು ಕೊಟ್ಟು, ಬೇಡನೊಬ್ಬ ಸಂತೋಷದಿಂದ ತನ್ನ ನಲ್ಲೆಯನ್ನಪ್ಪಿಕೊಂಡು ಸಮಾಧಾನಪಡಿಸುತ್ತಿದ್ದ. ಮತ್ತೊಂದೆಡೆಯಲ್ಲಿ, ದಂತದ ಓಲೆಗಳು, ಒಪ್ಪವಾದ ಹಲ್ಲುಗಳು, ನೀಳಮುಡಿ, ಆನೆಯ ದಂತಾಗ್ರದ ಮುತ್ತುಗಳ ಏಕಾವಳಿ, ಕರ್ಪೂರವನ್ನು ತೊಡೆದ ನುಣುಪಾದ ಹಣೆ, ಕಿವಿಗಳನ್ನು ಅಲಂಕರಿಸಿರುವ ನೈದಿಲೆಹೂಗಳು, ಗುಲಗಂಜಿ ಒಡವೆಗಳು, ಹುಲ್ಲಕಂಕಣಗಳಿಂದ ಶೋಭಿಸುವ ಬೇಡಿತಿಯೊಬ್ಬಳು ಬನದ ದಾದಿಯಂತೆ ಶೋಭಿಸಿದಳು. ಕಿವಿಗಳಲ್ಲಿ ಬೆಳಗುವ ದಂತದ ಓಲೆಗಳು, ಎದೆಗಳ ಬಳಿ ಓಲಾಡುವ ದಂಡೆಗಳು, ಅಡಿಗಡಿಗೆ ಮುಣಮುಣ ಎಂದು ಉಲಿಯುವ ಬಳೆಗಳ ರಭಸಗಳಿಂದ

ಕೂಡಿ, ಆಗಾಗ ಕೆನ್ನೆಗಳಲ್ಲಿ ಇಳಿಯುವ ಬೆವರ ಹನಿಗಳನ್ನು ತೆಗೆಯುತ್ತ, ಸುವ್ವಿ ಸುವ್ವಿ ಎಂದು ಹಾಡುತ್ತ ಒನಕೆಯಿಂದ ಕಾಳನ್ನು ಕುಟ್ಟುವ ಬೇಡಿತಿ ಇನ್ನೊಂದು ಕಡೆ ರಾಜಿಸಿದಳು. ಚಿಗುರ ಉಡುಗೆಯುಟ್ಟು, ತುರುಬಿನಲ್ಲಿ ಮಲ್ಲಿಗೆಯನ್ನಿಟ್ಟು, ಹೊಳೆಯುವ ಗುಲಗಂಜಿಯ ಒಡವೆಯನ್ನು ಧರಿಸಿ, ಕಸ್ತೂರಿ ತಿಲಕವನ್ನಿಟ್ಟು, ತೋರಮೊಲೆಗಳೆಡೆಯಲ್ಲಿ ಮುತ್ತುಗಳ ಹಾರವನ್ನು ಇಳಿಬಿಟ್ಟು, ಸುರುಳಿಗುರುಳಿನಬಲೆಯರು ಸಂಧ್ಯಾರಾಗವನ್ನು ತಳೆದು, ಆಕಾಶಲಕ್ಷ್ಮಿಯು ನಕ್ಷತ್ರಗಳನ್ನು ಮುಡಿದಳೋ ಎಂಬಂತೆ ಶಬರವನಿತೆಯರು ವಿಲಾಸಕರವಾಗಿ ಕಂಗೊಳಿಸಿದರು.

ಸಿಂಹವನ್ನು ಹೊಡೆದು, ಮದ್ದಾನೆಯನ್ನು ಬಡಿದು, ಜಿಂಕೆಯನ್ನು ಕಡಿದು, ಕಾಡುಕೋಣವನ್ನು ತಿವಿದು ತುಂಡುಮಾಡಿ, ನರಿ ಹಂದಿ ಮೊಲ ಕಸ್ತೂರಿಮೃಗಗಳನ್ನು ಹಿಡಿದು, ಬಲೆಗಳಲ್ಲಿ ಹಕ್ಕಿಗಳನ್ನು ಹಿಡಿದು ಪಂಜರಗಳಲ್ಲಿಕ್ಕಿ, ಸಿಕ್ಕಿದ ನರಿಗಳನ್ನು ಕೆಡಹಿ ಕಾಲುಹಿಡಿದೆಳೆಯುತ್ತ ಬಲೆಗಳನ್ನು ಬೀಸುತ್ತ ಬೇಡಪಡೆ ನಡೆದು ಬಂತು. ಒಂದೆಡೆ ಕಿಡಿಯುಗುಳುವ ಕಡುಗೋಪ, ತಮ್ಮ ಉಗುರುಗಳಿಂದ ಮದಸಿಂಧುರದ ಕುಂಭವನ್ನು ಸೀಳಿ ಭೋರೆಂದು ಸುರಿಯುವ ರಕ್ತದ ಮಧುರರಸವನ್ನು ಹೀರಿ ಗರ್ಜಿಸುತ್ತ ಎದುರಿನಲ್ಲಿ ಕಾಣುವ ಮಹಾಪರಾಕ್ರಮದ ಸಿಂಹವನ್ನು ಬಾಣಬಿಟ್ಟು ಎರಡು ಭಾಗ ಮಾಡಿ ಹೊಡೆದುರುಳಿಸಿದ ಬೇಡನೊಬ್ಬನು ತನ್ನ ಪರಾಕ್ರಮವನ್ನು ತೋರಿಸಲು ಅದರ ಮಾಂಸ ಕರುಳುಗಳನ್ನು ಕಿತ್ತಿಟ್ಟ. ತನ್ನ ಮೇಲೆ ಹವ್ವನೆ ಹಾರಿ ಬೀಳುವ ಹುಲಿಯನ್ನು ಬೆಂಬತ್ತಿ ತನ್ನ ಕೆಂಗರಿಗೋಲಿನಿಂದ ಹೊಡೆದು ಅದರ ರಕ್ತಮಾಂಸಗಳನ್ನು ನೆಲಕ್ಕೆ ಸುರಿಸಿ ಅದರ ತಲೆಯನ್ನು ಕೆಡವುತ್ತ, ಮತ್ತೊಂದು ಹುಲಿಯನ್ನು ಅಟ್ಟಿಸಿಕೊಂಡು ಹೋಗುವ ಪುಳಿಂದನೊಬ್ಬನು ಆ ವನದಲ್ಲಿ ಕಾಣಿಸಿದ. ಮುರಿದ ಮೂಳೆಗಳು, ಸುರಿಯುವ ರಕ್ತಧಾರೆ, ಕತ್ತರಿಸಿದ ಕಾಲುಗಳು, ಜೋತಾಡುವ ತೋಳಗಳು, ಹೊರಬೀಳುವ ಕರುಳುಗಳು, ಉರುಳುವ ಮಾಂಸಖಂಡಗಳಿಂದ ಕಡೆಗಾಲದ ರೀತಿಯಲ್ಲಿ ಒಬ್ಬರನ್ನೊಬ್ಬರು ಸೋಕದೆ ಗರ್ಜಿಸುವ ಮೂದಲಿಕೆ ಸನ್ನೆಗಳು ಕಡೆಗಣ್ಣ ನೋಟಗಳ ಬೇಡಪಡೆ ಆ ವಿಪಿನಾಂತರಂಗದಲ್ಲಿ ಕಾಣಿಸಿತು. ಮುದುರಿಕೊಳ್ಳುವ ಜಿಂಕೆಗಳು, ನಡುಗುವ ಹೆಣ್ಣಾನೆಗಳು, ಓಡುವ ಚಮರೀಮೃಗಗಳು, ಕಣೆಗಳನ್ನು ಎಸೆಯುವ ಮುಳ್ಳುಹಂದಿಗಳು, ನಡುಗುವ ಹುಲಿತೋಳಹಂದಿಗಳ ತಂಡಗಳನ್ನು ಸದೆಬಡಿದು, ಅವುಗಳ ದೇಹಗಳನ್ನು ದಾರಿಯಲ್ಲಿ ರಾಶಿ ಹಾಕಿ, ಮಾಂಸ ಮಿದುಳು ರಕ್ತಗಳನ್ನು ಚೆಲ್ಲಿ, ಕರುಳುಗಳನ್ನು ಕಿತ್ತಿಟ್ಟ ಆ ಬೇಡಪಡೆಯು ಮೂಜಗದ ಜಂತುಗಳು ನಡುಗುವಂತೆ ಮಾಡಿಬಿಟ್ಟಿತು.

ಹೀಗೆ ಭೀಕರ ಬೇಟೆಯನ್ನು ನೋಡುತ್ತ ಬರಲು ಮುಂದೆ ನದಿ ಝರಿ ಹಳ್ಳಗಳ ಜುಳುಜುಳು ನಾದ, ಮೃಗಸಂಕುಲದ ಘೋರತರ ಶಬ್ದ, ರಭಸದಿಂದ ಬರುವ ಬೇಟೆಗಾರರ ಕೂಗುಕೇಕೆಗಳಿಂದ, ನರಿಕರಿಹಂದಿಗಳಿಂದ ಕೂಡಿ, ಯಜ್ಞಶಿಖಿ ದಾವಶಿಖಿಗಳಿಂದ ಕೂಡಿದ ಆ ಕಾಡನ್ನು ಇಡಿಯಾಗಿ ಕಲ್ಪಿಸಿಕೊಳ್ಳುವುದೇ ಅಸಾಧ್ಯವೆಂಬತ್ತಿತ್ತು. ಮೋಡಗಳ ರಾಶಿಯ ವಿಲಾಸದಿಂದ ಕೂಡಿದ ಮಳೆಗಾಲದ ರೀತಿಯಲ್ಲಿ ಅನಿರುದ್ಧ ಬಲರಾಮ, ಜೋರುಮಳೆಯಿಂದ ವಸುದೇವಮಂದಿರದಂತೆ, ಪುಂಡರೀಕದಿಂದ (ತಾವರೆ, ಪೂರ್ವದ

ದಿಗ್ಗಜ) ಆನೆಯ ಮದಧಾರೆಯಂತೆ, ನವಿಲಿನ ಕೇಕಿಯಿಂದ ಗುಹನ ಹಾಗೆ, ನಕುಲ (ಮುಂಗುಸಿ) ಸಂಹನನ ಅರ್ಜುನ (ಮತ್ತಿಮರ) ವೃಕೋದರ (ತೋಳ) ಮುಂತಾದವುಗಳ ಗುಂಪಿನಿಂದಾಗಿ ಹಸ್ತಿನಾವತಿಯಂತೆ ಆ ಕಾಡು ಕಂಗೊಳಿಸಿತು. ಕುಜಾತದಿಂದ (ಕೀಳು ಜಾತಿ ಮತ್ತು ಮರಗಳು) ತುಂಬಿದ್ದರೂ ದ್ವಿಜರನ್ನು (ಬ್ರಾಹ್ಮಣ ಮತ್ತು ಹಕ್ಕಿ) ಪೋಷಿಸುವ, ಕೇಸರ (ಸಿಂಹ, ಹೂವಿನ ಪರಾಗತಂತು) ಗಳಿಂದ ಕೂಡಿದ್ದರೂ ಗಜ(ಆನೆ ಮತ್ತು ದೊಡ್ಡದು?) ವನ್ನು ಕಾಪಾಡುವ, ಪತಿತಾಂಶು (ಕೆಳಗೆ ಸುರಿಯುವ ಕಿರಣ ಮತ್ತು ಎಲೆ) ಅರ್ಕ (ಸೂರ್ಯ ಮತ್ತು ಎಕ್ಕದ ಗಿಡ)ಗಳ ಏಳಿಗೆಯಿಂದ, ಸೋಮ (ಚಂದ್ರ ಮತ್ತು ಸೋಮರಸ) ಮುಂತಾದವುಗಳ ವೃದ್ಧಿಯಲ್ಲದೆ, ಕಿತವ (ಮೋಸಗಾರ ಮತ್ತು ದತ್ತೂರ) ಖಡ್ಗಿ (ಕತ್ತಿಮೃಗ ಮತ್ತು ಕತ್ತಿ ಹಿಡಿದವನು)ಗಳಿಂದ ಕೂಡಿ, ಜಗತ್ತಿಗೆ ಹಿತಕರವೆನಿಸಿ ಸುಜನರ ಹಾಗೆ ಎಲ್ಲ ಗುಣಗಳನ್ನೂ ಹೊಂದಿ ಆ ಕಾಡು ಶೃಂಗಾರ ಹಾಗೂ ಬೀಭತ್ಸರಸಗಳಂತೆ ಕಂಗೊಳಿಸಿತು. ಹಾವಿನ ಮಣಿ ಚಂದ್ರ ಕೆಂಡಗಣ್ಣು (ಅನಂತಮಣಿಸೋಮಶಿಖಿನೇತ್ರ) ಗಳ ಒಕ್ಕೂಟದಿಂದ ಹರನಂತೆಯೂ, ಅರಿಶಂಖಪದ್ಮಗಳಿಂದ ಹರಿಯಂತೆಯೂ, ವಿದ್ವಾಂಸರ ಉಲ್ಲಾಸದಿಂದ ಬ್ರಹ್ಮನಂತೆಯೂ, ಆನೆ ಹಸು ಕುದುರೆ ಮುತ್ತುಗಳ ಸಮೃದ್ಧಿಯಿಂದ ಸಮುದ್ರದಂತೆಯೂ, ರಾಮಧರಣೀಶನ ಎದುರಿನಲ್ಲಿ ಆ ಕಾನನವು ಇನಿದಾದ ಶಬ್ದದಿಂದ ಕಂಗೊಳಿಸಿತು. ನವನೀರದಶ್ಯಾಮನು ಆ ಕಾನನವನ್ನು ಸೀತಾಲಕ್ಷ್ಮಣರೊಡನೆ ನೋಡುತ್ತ, ನಾನಾ ಮರಗಿಡಪೊದೆಗಳನ್ನು ದಾಟಿಕೊಂಡು ಸರಿಯಾದ ದಾರಿಯನ್ನು ಹಿಡಿದು ವೇಗವಾಗಿ ಪಂಚವಟಿಯನ್ನು ತಲುಪಿ ಜಟಾಯು (ಆಲದ ಮರದ ತುದಿಯ ಗರುಡಾಧಿನಾಥ)ನನ್ನು ಕಂಡು ಮುನಿನಿವಹದೊಡನೆ ರಾಮಪುರದರಸನು ಸಂತಸದಿಂದಿದ್ದ.

೭. ಜಟಾಯುವಿನ ಸಲಹೆಯಂತೆ ಪಂಚವಟಿಯ ಆಶ್ರಮದಲ್ಲಿ ವಾಸ

ಹೈಮಾದ್ರಿತನುಸಂಭವೆಯೇ, ಆ ಆಲದ ಮರದಲ್ಲಿದ್ದ ಭೀಮವಿಕ್ರಮನೂ ಮಹಾಕಾಯನೂ ತಾಮಸದ ಕಲಿಯೂ ಆದ ಜಟಾಯುವನ್ನು ಕಂಡು ಮೊದಲು ಇವನು ರಾಕ್ಷಸನೇನೋ ಎಂಬ ಅನುಮಾನ ರಾಮಚಂದ್ರನಿಗುಂಟಾಯಿತು. ತುಂಬ ವಿನಯದಿಂದ, "ಈ ಮಹಾರಣ್ಯದಲ್ಲಿರುವ ನೀನು ಯಾರು, ನಿನ್ನ ಹೆಸರೇನು? ಎಂದು ಕೇಳಿದ. ಆಗ ಜಟಾಯುವು ನಸುನಗುತ್ತ, "ಸೌಮ್ಯಮುಖಿಯೇ, ನನ್ನನ್ನು ನಿನ್ನ ತಂದೆಯ ವಯಸ್ಸಿನ ಹಿರಿಯನೆಂದು ತಿಳಿ" ಎಂದ. ಆ ಮಾತನ್ನು ಕೇಳಿ ಸಂತಸಗೊಂಡ ರಘುವೀರನು ತಂದೆಗೂ ಇಮ್ಮಡಿ ಎಂದು ಭಾವಿಸಿ ಸತ್ಕರಿಸಿ ಹೆಸರನ್ನು ಕೇಳಲು ಆ ಪಕ್ಷಿಶ್ರೇಷ್ಠನು ತನ್ನ ಕುತೂಹಲಭರಿತವಾದ ಕತೆಯನ್ನು ಹೇಳಿದ: ಹಿಂದೆ ಕರ್ದಮನು ಹುಟ್ಟಿದ, ಆನಂತರ ವೇದವಿದರಾದ ಮರೀಚಿ, ಅತ್ರಿ ಪುಲಹ, ದಕ್ಷ, ಪುಲಸ್ತ್ಯ, ಕಾಶ್ಯಪ, ಆಂಗೀರಸ, ವಿವಸ್ವನ್, ಮೃಚೇತ ಎಂಬ ಭೂಕುಲೋತ್ತಮರು ಉದಿಸಿದರು; ಅವರಲ್ಲಿ ದಕ್ಷ ಎಂಬುವವನಿಗೆ ಅರುವತ್ತು ಮಂದಿ ಹೆಣ್ಣುಮಕ್ಕಳು ಹುಟ್ಟಲು, ಅವರಲ್ಲಿ ದಿತಿ ಅದಿತಿ ದನು ಕಾಳಿ ತಾಮ್ರೆ ಕ್ರೋಧವಶೆ ಮನು ಅನಲೆ ಎಂಬ ಎಂಟು ಮಂದಿಯನ್ನು ಕಾಶ್ಯಪನು

ವರಿಸಿದ. ತನ್ನಂತೆಯೇ ಪರಮ ತೇಜೋವಂತರಾದ ಪುತ್ರರನ್ನು ಪಡೆಯುವಂತೆ ಅವರಿಗೆ ಹೇಳಿದ. ಆಗ ಅದಿತಿಯು ಸಂತೋಷದಿಂದ ವಸು ರುದ್ರ ಮುಂತಾದ ಪುತ್ರರನ್ನೂ ಮೂವತ್ತುಮೂರು ಕೋಟಿ ದೇವತೆಗಳನ್ನೂ ಹೆತ್ತಳು; ದಿತಿಯು ದೈತ್ಯರನ್ನು ಹಡೆದಳು; ಆನಂತರ ದಿತಿಯು ಕಿನ್ನರರನ್ನು ಹೆತ್ತಳು; ಕಾಳಿಯು ನರಕ ಕಾಳಕರನ್ನು ಪಡೆದಳು; ಧೃತರಾಷ್ಟ್ರಿಯು ಶ್ಯೇನಿ, ಕ್ರೌಂಚಿಗಳನ್ನು ಹೆತ್ತಳು; ಭಾಸಿಯು ಶುಕಿಗೆ ಜನ್ಮವಿತ್ತಳು; ತಾಮ್ರೆಯು ಕ್ರೌಂಚಿಯನ್ನೂ, ಆನಂತರ ಭಾಸಿಯು ಭಾಸಗಳನ್ನೂ ಪಡೆದಳು; ಶ್ಯೇನಿಯು ಶ್ಯೇನ ಗೃಧ್ರಗಳನ್ನೂ, ಧೃತರಾಷ್ಟ್ರಿ ಕಲಹಂಸಗಳನ್ನೂ, ಚಕ್ರವಾಕಗಳನ್ನೂ, ಮಾನಿನಿಯು ಶುಕಿ ನತೆಯನ್ನೂ, ವಿನತೆಯನ್ನೂ ಪಡೆದರು. ಆ ವಿನತೆಯು ಮೃಗಿ ಮೃಗಮಂದೆ ಹರಿಭೆ ಪ್ರದಾನ ಮಾತಂಗಿ ಶ್ವೇತೆ ಸುರಭಿ ರೋಹಿಣಿ ಸುರಸೆ ಕದ್ರು ಎಂಬ ಹೆಸರಿನ ಹತ್ತು ಜನರನ್ನು ಹೆತ್ತಳು. ಮೃಗಿಯು ಮೃಗಗಳನ್ನು ಹೆತ್ತರೆ, ಮೃಗಮಂದೆಯು ನಾನಾ ಬಗೆಯ ಚಮರೀಮೃಗಗಳನ್ನೂ ಕರಡಿಗಳನ್ನೂ ಹೆತ್ತಳು; ಇರೆ ಎನ್ನುವವಳು ಆನೆಗಳನ್ನೂ, ಹರಿ ಎನ್ನುವವಲ್ಲಿಂದ ಸಿಂಹ, ಕಪಿಗಳು, ವಾನರಗಳು ಒಗೆದುವು; ಸುಗುಣೆಯು ಶಾರ್ದೂಲ ಹುಲಿಗಳನ್ನು ಹಡೆದರೆ, ಮಾತಂಗಿಯು ಆನೆಗಳನ್ನೂ, ಶ್ವೇತೆಯು ಅಷ್ಟದಿಗ್ಗಜಗಳನ್ನೂ ಹೆತ್ತಳು. ಸುರಭಿಗೆ ಇಬ್ಬರು ಮಕ್ಕಳು; ರೋಹಿಣಿಯು ಗೋಕುಲವನ್ನು ಪಡೆದಳು; ಗಂಧರ್ವಿಯು ಕುದುರೆಗಳನ್ನೂ, ಸುರಸೆ ನಾಗಗಳನ್ನೂ ಪಡೆದರು. ಕದ್ರುವು ಪನ್ನಗ ಮುಂತಾದುಗಳನ್ನು ಹೆತ್ತರೆ, ಮನುವು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಎಂಬ ಮಾನವವರ್ಗವನ್ನು ಪಡೆದಳು; ಅನಲೆಯು ಅಪರಿಮಿತ ವೈವಿಧ್ಯದ ಸಸ್ಯರಾಶಿಯನ್ನು ಪಡೆದಳು. ಕದ್ರುವು ಭೂಮಿಯನ್ನು ಹೊರುವ ಸಾವಿರ ಹೆಡೆಗಳ ಸರ್ಪವನ್ನು ಪಡೆದರೆ, ವಿನತೆಯು ಗರುಡ ಅರುಣರನ್ನು ಹಡೆದಳು. "ಅರುಣಳಿಗೆ ಸಂಪಾತಿ ಮತ್ತು ನಾನು ಮಕ್ಕಳಾದೆವು. ಮಂಗಳನಾಮ ರಾಮನೇ, ನಿನ್ನ ತಂದೆಯೊಡನೆ ನಾನು ಬಹುಕಾಲ ಸ್ನೇಹದಿಂದಿದ್ದೆ. ನಾನು ಈ ಕಾಡಿನಲ್ಲಿ ಸೀತೆಯನ್ನು ಕಾಯುವ ಊಳಿಗವನ್ನು ಮಾಡುತ್ತೇನೆ; ನನ್ನ ಮಾತು ಸತ್ಯ" ಎಂದ.

ಹೀಗೆ ಜಟಾಯುವು ತನ್ನ ವಂಶದ ಕತೆಯನ್ನೆಲ್ಲ ವಿಸ್ತಾರವಾಗಿ ನಿರೂಪಿಸಲು ರಾಮನು ಸಂಭ್ರಮದಿಂದ ಅವನನ್ನು ಉಪಚರಿಸಿ ಪಂಚವಟಿಯ ಹತ್ತಿರ ಹೋಗಿ ಒಂದು ಸುಂದರವಾದ ಜಾಗದ ಬಳಿ ಲಕ್ಷ್ಮಣನಿಗೆ, "ಅಗಸ್ತ್ಯಮಹರ್ಷಿಗಳು ಸೂಚಿಸಿದ ಈ ತಾಣ ತುಂಬ ಮನೋಹರವಾಗಿದೆ. ಕಾಡಿನ ಮಧ್ಯೆ, ಹೂವುಗಳು ದರ್ಭೆ ನಿರ್ಮಲವಾದ ನೀರು ದೊರೆಯುವ ಪ್ರಶಸ್ತವಾದ ಜಾಗವೊಂದರಲ್ಲಿ ಪರ್ಣಕುಟಿಯೊಂದನ್ನು ರಚಿಸು" ಎಂದು ಆಜ್ಞಾಪಿಸಿದ. ಆಗ ಸೌಮಿತ್ರಿಯು, "ನೀನು ಏನು ಹೇಳುವೆಯೋ ಅದನ್ನು ನೆರವೇರಿಸುವುದು ನನ್ನ ಕರ್ತವ್ಯ. ಯಾವ ಜಾಗವು ಪ್ರಶಸ್ತವೆಂದು ನನಗೆ ಹೇಗೆ ತಿಳಿಯಬೇಕು? ನಿನಗೆ ರಮ್ಯವೆನಿಸುವ ಜಾಗವನ್ನು ಸೂಚಿಸಿದರೆ ನಾನು ಅಲ್ಲಿ ಎಲೆವನೆಯನ್ನು ನಿರ್ಮಿಸುತ್ತೇನೆ" ಎಂದು ವಿನಯದಿಂದ ಬಿನ್ನವಿಸಿಕೊಂಡ. ಆಗ ರಾಮನು ನಸುನಗುತ್ತ ಸರಿಯಾದ ಜಾಗದ ಆಯ್ಕೆ ಮಾಡಲು ಲಕ್ಷ್ಮಣನ ಕೈಹಿಡಿದುಕೊಂಡು ಹೊರಟ. ಕೋಗಿಲೆಗಳ ಕೂಜನ, ದುಂಬಿಗಳ ಝೇಂಕಾರ, ಗಿಳಿಗಳ ಒಳ್ನುಡಿಗಳು, ಚಕೋರಗಳ ನಿನಾದ, ಪಂಡಿತವಕ್ಕಿಗಳ ಆರ್ಭಟೆ, ಹಂಸಗಳ ಮೆಲುನಡೆಗಳಿರುವ, ಅಶೋಕ ಮಾವು ಮತ್ತು

ಮಲ್ಲಿಗೆ-ಉತ್ಪಲಗಳಿರುವ ಸರೋವರಗಳಿಂದ ಕೂಡಿದ ಒಂದು ಜಾಗವು ತುಂಬ ಮನೋಹರವಾಗಿತ್ತು. ಕಂಪು ಬರುವ ಹೂಗಳ ಸಾನ್ನಿಧ್ಯ, ಶ್ರೇಷ್ಠವಾದ ದರ್ಭೆ ಸಮಿತ್ತು ಹೂಹಣ್ಣು ಶುದ್ಧನೀರು ಹತ್ತಿರದಲ್ಲಿಯೇ ಸಿಕ್ಕುತ್ತಿತ್ತು; ಮೃಗಪಕ್ಷಿಗಳ ದಂಡೇ ಅಲ್ಲಿದ್ದು ಪರಮ ರಮಣೀಯವಾದ ಗೋದಾವರೀನದಿಯ ದಡದಲ್ಲಿ ಆ ಜಾಗವಿದ್ದು ಸುಖಕರವಾಗಿತ್ತು. ಅಲ್ಲಿಯೇ ಎಲೆವನೆಯನ್ನು ನಿರ್ಮಿಸೆಂದು ಸೂಚಿಸಲು ಲಕ್ಷ್ಮಣನು ಸಂಭ್ರಮದಿಂದ ಆ ಕೆಲಸವನ್ನು ಕೈಗೊಂಡ. ಗಟ್ಟಿಯಾದವೂ ಎತ್ತರವಾದವೂ ಆದ ಕಂಬಗಳನ್ನು ನೆಟ್ಟು, ಅವುಗಳ ಅಕ್ಕಪಕ್ಕಗಳಲ್ಲಿ ಬಲವಾದ ಬಿದಿರುಬೊಂಬುಗಳನ್ನು ಇಟ್ಟು, ಮುಂದುಗಡೆಯಲ್ಲಿ ಬನ್ನಿಮರದ ಎರಡು ಕಂಬಗಳನ್ನಿರಿಸಿ, ಅವುಗಳನ್ನೆಲ್ಲ ಬಳ್ಳಿಜೊಂಡುಗಳಿಂದ ಬಲವಾಗಿ ಕಟ್ಟಿ, ನೆಲವನ್ನು ಸಮತಟ್ಟು ಮಾಡಿ, ಮೇಲೆ ಹೊದ್ದಿಸಿ, ಅನಂತರ ಸ್ನಾನ ಮಾಡಿ ಕಮಲಕುಮುದಪುಷ್ಪಗಳನ್ನು ಹಿಡಿದುಕೊಂಡು ಬಂದು ಪರ್ಣಕುಟಿಗೆ ಬಲಿಕರ್ಮಗಳನ್ನು ನೆರವೇರಿಸಿ ಅಣ್ಣನಿಗೆ ನಿವೇದಿಸಿಕೊಂಡ. ಶ್ರೀರಾಮನು ಲಕ್ಷ್ಮಣ ನಿರ್ಮಿಸಿದ ಎಲೆವನೆಗೆ ಹೋಗಿ ಸುತ್ತಲೂ ನೋಡಿ ತುಂಬ ಹರ್ಷಗೊಂಡು, "ಲಕ್ಷ್ಮಣ, ಶೌರ್ಯಭಕ್ತಿಶಕ್ತಿಗಳೆಲ್ಲ ಒಂದು ಕಡೆ ಸೇರಿ ನಿನ್ನ ಆಕಾರವನ್ನು ಪಡೆದಿವೆ, ನೀನು ಮನುಷ್ಯರೂಪದ ಧರ್ಮವೇ ಆಗಿದ್ದೀಯೆ. ನಿನಗೆ ನಾನೇನು ತಾನೇ ಕೊಡಬಲ್ಲೆ" ಎಂದು ಅಕ್ಕರೆಯಿಂದ ಅಪ್ಪಿಕೊಂಡು ತಮ್ಮನ ಬೆನ್ನು ತಟ್ಟಿದ. ಮುಂದೆ ರಾಮಸೀತಾಲಕ್ಷ್ಮಣರು ಆ ಪರ್ಣಕುಟಿಯಲ್ಲಿ, ಋಷಿಗಣವು ನಿರೂಪಿಸುವ ಸ್ವಾರಸ್ಯಕರ ಕತೆಗಳನ್ನು ಕೇಳುತ್ತ ಹಾಯಾಗಿದ್ದರು.

ಹೀಗಿರಲು ಒಂದು ದಿನ ಸುಮಿತ್ರಾತನಯನು ಅಣ್ಣನ ಚರಣಗಳಿಗೆ ಭಕ್ತಿಯಿಂದೆರಗಿ ಕರಗಳನ್ನು ಮುಗಿದು ವಿನಯದಿಂದ, "ಮನಸ್ಸಿನ ಕೋಟಲೆಯಿಂದ ಹುಟ್ಟುಸಾವುಗಳ ಭೀತಿ ಹೆಚ್ಚಿದೆ, ಇದರಿಂದ ಪಾರಾಗುವ ಉಪಾಯವನ್ನು ದಯವಿಟ್ಟು ತಿಳಿಸಿಕೊಡಬೇಕು" ಎಂದು ಬಿನ್ನಹ ಮಾಡಿಕೊಂಡ. ಆಗ ರಾಮನು, "ವತ್ಸ, ನೀನು ಧನ್ಯ, ಋಷಿಗಣದ ಮಧ್ಯದಲ್ಲಿ ನಿನಗೆ ಈ ಪ್ರಶ್ನೆ ಉದ್ಭವಿಸಿದೆ" ಎಂದು ಹೇಳಿ ಜನನಮರಣಗಳ ಬಾಧೆಯಿಂದ ಮುಕ್ತನಾಗುವ ಪರಿಯನ್ನು ನಿರೂಪಿಸತೊಡಗಿದ: "ಪ್ರಕೃತಿಯ ವಿಕಾರಗಳು ನೀರು ನೆಲ ಬೆಂಕಿ ಗಾಳಿ ಆಕಾಶಗಳು ಮತ್ತು ಸತ್ವ ರಜಸ್ಸು ಮತ್ತು ತಮಸ್ಸು ಎಂಬ ಗುಣಗಳು ಸೇರಿ ಎಂಟು; ತ್ರಿಗುಣಗಳ ಒಗ್ಗೂಡುವಿಕೆಯಿಂದ ಅಧ್ಯಾತ್ಮಿಕ ಅಧಿದೈವಿಕ ಮತ್ತು ಅಧಿಭೌತಿಕ ಎಂಬ ದುಃಖತ್ರಯಗಳುಂಟಾಗುತ್ತವೆ; ಇಷ್ಟಾನಿಷ್ಟವಿಪತ್ತಿ, ಉತ್ಸಾಹ, ಚಿತ್ತವೃತ್ತಿನಿರೋಧ, ಸಂಶಯ ಮತ್ತು ಪ್ರತ್ಯಕ್ಷ ಎಂಬ ಪಂಚ ಅಭಿಬುದ್ಧಿಗಳು, ಕರ್ಮಯೋಗಿಗಳ ಕಿವಿ ಕಣ್ಣು ಚರ್ಮ ನಾಲಗೆ ಮೂಗುಗಳೆಂಬ ಐದು ಜ್ಞಾನೇಂದ್ರಿಯಗಳು; ಕರ್ಮೇಂದ್ರಿಯಗಳಾದ ಕೈ, ಕಾಲು, ನಾಲಗೆ, ಜನನೇಂದ್ರಿಯ ಮತ್ತು ಗುದಗಳು: ಪ್ರಾಣ, ವ್ಯಾನ, ಸಮಾನ ಉದಾನ ಅಪಾನಗಳೆಂಬ ಪಂಚಪ್ರಾಣಗಳು – ಹೀಗೆ ಹದಿನೈದು; ಒಟ್ಟು ಇಪ್ಪತ್ತೆಂಟು ಶಕ್ತಿಗಳು; ಅಂಭಸ್ಸು, ಸಲಿಲ. ಓಘ, ವೃಷ್ಟಿ, ಪಾರ, ಸುಪಾರ, ಪಾರಾಪಾರ, ಅನುತ್ತಮಾಂಭ, ಉತ್ತಮಾಂಭ ಎಂಬ ಒಂಬತ್ತು ತುಷ್ಟಿಗಳು; ಅಣಿಮ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ ಮತ್ತು ವಶಿತ್ವ ಎಂಬ ಅಷ್ಟಧಾಸಿದ್ಧಿಗಳನ್ನೂ; ದಶಮೂಲಕಾರ್ಥಗಳನ್ನೂ, ಬ್ರಾಹ್ಮ, ಪ್ರಜಾಪತೀಯ, ಸೌಮ್ಯ, ಐಂದ್ರ, ಗಾಂಧರ್ವ, ಕೌಬೇರ, ರಾಕ್ಷಸ, ಪೈಶಾಚ, ಮಾನುಷ, ಸ್ಥಾವರ, ಪಾಶವ, ಮಾರ್ಗ, ಸಾರ್ಪ ಮತ್ತು ಶಾಕುನಿಕ ಎಂಬ ಹದಿನಾಲ್ಕು ಬಗೆಯ

ಭೂತಸರ್ಗ(ಸೃಷ್ಟಿ)ಗಳನ್ನೂ; ಸುಖ ದುಃಖ ಮೋಹಗಳೆಂಬ ಬಂಧತ್ರಯಗಳನ್ನೂ; ಮೂರುವಿಧವಾದ ಮೋಕ್ಷಸ್ವರೂಪವನ್ನೂ; ಪ್ರಮಾಣತ್ರಯಗಳನ್ನೂ ತಿಳಿದರೆ ಎಂದಿಗೂ ದುಃಖವುಂಟಾಗದು, ಎಂದೆಂದಿಗೂ ಸುಖವುಂಟಾಗುತ್ತದೆ" ಎನ್ನಲು ಲಕ್ಷ್ಮಣನು, "ದೇವಾ, ನೀನು ಹೇಳಿದ ಈ ತತ್ವಗಳ ಅರ್ಥ-ಭಾವನೆಗಳನ್ನು ಹೇಗೆ ಅರಿಯುವುದು? ಯಾವ ವಿಧದಿಂದ ನಾನು ತತ್ವನಿಷ್ಠೆಯನ್ನು ಹೊಂದಬಹುದು?" ಎಂದು ಕೇಳಿದ. ಅದರಂತೆ ರಘುರಾಮನು ಮುಕ್ತಿಸೋಪಾನಗಳ ಸ್ವರೂಪವನ್ನು ವಿವರಿಸತೊಡಗಿದ:

"ಆರಂಭ ಮಧ್ಯ ಕೊನೆಗಳಿರದ, ರುಚಿ ವಾಸನೆ ಸ್ಪರ್ಶ ಮುಂತಾದುವನ್ನು ಪಡೆಯದ, ಅವ್ಯಕ್ತವೂ ಅವಿನಾಶಿಯಾದುದೂ ಆದ ಬ್ರಹ್ಮವು ಆದಿಯಾದ ಪ್ರಧಾನಕ್ಷೇತ್ರ; ಅದರಿಂದ ಉಂಟಾದುದನ್ನು ಉಪಯೋಗಿಸುವುದು ಮುಖ್ಯ, ಅದರಿಂದ ಬುದ್ಧಿ, ಅದರಿಂದ ಅಹಂಕಾರ, ಅದರಿಂದ ಶಬ್ದ ರೂಪ ರಸ ಗಂಧ ಸ್ಪರ್ಶ ಎಂಬ ಪಂಚ ತನ್ಮಾತ್ರೆಗಳು, ಅವುಗಳ ಭೇದದಿಂದ ಪ್ರಕೃತಿಯು ಎಂಟುವಿಧವಾದುದು (ಪಂಚಭೂತಗಳೂ ಮತ್ತು ತ್ರಿಗುಣಗಳು) ಎಂದು ಅವ್ಯಕ್ತವಾದುದನ್ನು ವರ್ಣಿಸುತ್ತಾರೆ. 'ಇದು ಮರವೇ ಹೊರತು ಮನುಷ್ಯನೂ ಅಲ್ಲ ಆನೆಯೂ ಅಲ್ಲ' ಎಂದು ಅರಿಯುವುದೇ ಅಧ್ಯವಸಾಯ, ಅದೇ ಬುದ್ಧಿ; ಅದು ಎಂಟು ವಿಧವಾದುದು – ಧರ್ಮ ವಿಜ್ಞಾನ ವೈರಾಗ್ಯ ಐಶ್ವರ್ಯ ಎಂಬ ನಾಲ್ಕು ಸಾತ್ವಿಕವಾದವು, ಅಧರ್ಮ ಅಜ್ಞಾನ ದಾರಿದ್ರ್ಯ ಅವೈರಾಗ್ಯ ಎಂಬಿವು ತಾಮಸವಾದವು; ಅವುಗಳಿಗೆ ಪರ್ಯಾಯವಾದವೆಂದರೆ ಮತಿ ಮಹತ್ ಬ್ರಹ್ಮ ಧೃತಿ ಸುಜ್ಞಾನ ಸ್ಮೃತಿ ಮಾನ ಸೌಖ್ಯಗಳು. 'ಕೇಳುತ್ತೇನೆ, ಹಿಡಿಯುತ್ತೇನೆ, ವಾಸನೆಯನ್ನನುಭವಿಸುತ್ತೇನೆ, ಮಾಡುತ್ತೇನೆ, ನಿದ್ರಿಸುತ್ತೇನೆ, ನನ್ನಿಂದಲೇ ಶತ್ರುವು ನಾಶವಾದ, ರಾಜನು ಸುಖಿಯಾದ' ಎಂಬ ಭಾವನೆಯೇ ಹಮ್ಮು, ಅದೇ ಅಹಂಕಾರ; ಅದು ಅನುಮಾನಸಹಿತ (ಸಾನುಮಾನ) ಮತ್ತು ಅನುಮಾನರಹಿತ (ನಿರನುಮಾನ) ಎಂದು ಎರಡು ವಿಧ; ತನ್ಮಾತ್ರೆಗಳು ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ, ರಸತನ್ಮಾತ್ರ, ಗಂಧತನ್ಮಾತ್ರಗಳೆಂದು ಐದು ವಿಧ; ಅವಕ್ಕೆ ಕ್ರಮವಾಗಿ ಶಾಂತ ಘೋರ ಮೂಢಭೋಗ್ಯ ಮಣಿಪ್ರಕೃತಿ ಮತ್ತು ಮಹಾಭೂತ ಎಂಬುದು ಪರ್ಯಾಯ ಹೆಸರುಗಳು. ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಭೂತಗಳು ಐದು, ಅವುಗಳಿಗೆ ಮನಸ್ಸು ಸೇರಿದರೆ ಹದಿನಾರು ವಿಕಾರಗಳೆನಿಸುತ್ತವೆ; ಅವುಗಳನ್ನು ಇಂದ್ರಿಯ ಕರಣ ಮುಂತಾದ ಪರ್ಯಾಯ ಹೆಸರುಗಳಿಂದಲೂ ಜ್ಞಾನಿಗಳು ಕರೆಯುತ್ತಾರೆ. ಆಕಾಶ ಮರುತ್ತು ಅಗ್ನಿ ಜಲ ನೆಲ ಎಂಬಿವುಗಳು ಪಂಚಭೂತಗಳು; ಅವುಗಳಲ್ಲಿ ಆಕಾಶವು ಮಿಕ್ಕ ನಾಲ್ಕನ್ನು ಅವಕಾಶದಿಂದ ಉಪಚರಿಸುತ್ತದೆ; ಮಿಕ್ಕ ನಾಲ್ಕನ್ನು ಎಲ್ಲೆಡೆ ಸುತ್ತುವರಿದು ಆತ್ಮತೆಯಿಂದ ಉಪಚರಿಸುವುದು ವಾಯು; ಸುಡುವ ಮತ್ತು ಕಾಂತಿ ಭಾವಗಳಿಂದ ಮಿಕ್ಕ ನಾಲ್ಕನ್ನೂ ಉಪಚರಿಸುವುದು ಅಗ್ನಿ; ಜಲವು ಮಿಕ್ಕ ನಾಲ್ಕನ್ನೂ ಸಂಗ್ರಹಭಾವದಿಂದ ಉಪಚರಿಸುತ್ತದೆ; ನೆಲವು ಮಿಕ್ಕ ನಾಲ್ಕನ್ನು ಹೊರುವ ಮೂಲಕ ಉಪಚರಿಸುತ್ತದೆ. ಆಕಾಶದ ಗುಣ ಧ್ವನಿ ಮಾತ್ರ; ಶಬ್ದ ಮತ್ತು ಸ್ಪರ್ಶಗಳು ಮರುತನ ಗುಣಗಳು; ರೂಪ ಸ್ಪರ್ಶ ಮತ್ತು ಶಬ್ದಗಳು ಅಗ್ನಿಯ ಗುಣಗಳು; ನೀರಿಗೆ ಶಬ್ದ ಸ್ಪರ್ಶ ರೂಪ ರಸಗಳು ಗುಣಗಳು; ಭೂಮಿಗೆ ರೂಪ ಸ್ಪರ್ಶ ಶಬ್ದ ರಸ ಗಂಧ ಈ ಐದೂ ಗುಣಗಳು. ಇವುಗಳ ಪರ್ಯಾಯನಾಮಗಳು ಅನುಭವಗಳೆನ್ನಿಸಿಕೊಂಡರೆ, ಘನಶಾಂತ

ಘೋರವಿಗ್ರಹ ಮೂಢತಮಗಳೆಂಬ ವಿಶೇಷರೂಪಗಳು ವಿಕಾರಗಳೆನ್ನಿಸಿಕೊಳ್ಳುತ್ತವೆ. ಚೇತನವು ಸರ್ವಗತವಾದುದು, ಅದು ನಿತ್ಯವೂ ನಿರ್ಗುಣವೂ ಸೂಕ್ಷ್ಮವೂ ಭೋಕ್ತೃವೂ ಆದುದು; ಕರ್ತೃ ಕ್ಷೇತ್ರ ವಿದ್ದೃಷ್ಟ ಅಜ ನೀತಿಜ್ಞ ನಿರ್ಮಲ ಅನಾದಿಯಾದುದು ಪುರುಷ; ಕಾರ್ಯದಿಂದಲೂ ಪ್ರೀತಿಯ ಪುರೋವರ್ತಮಾನನಾದುದರಿಂದಲೂ ಚಲಿಸದ ಪೂರ್ಣನಾದುದರಿಂದಲೂ ಇವನಿಗೆ ಪುರುಷ ಎಂಬ ಹೆಸರು ಬಂದಿದೆ. ಚೇತನವು ಸುಖ ದುಃಖ ಮೋಹಗಳನ್ನು ಪಡೆಯುವುದರಿಂದಲೂ, ಆದಿಯಿಲ್ಲದ್ದರಿಂದಲೂ, ಸರ್ವಗತವಾದುದರಿಂದಲೂ ಚೇತನಾತ್ಮಕ ಪುರುಷನು ನಿತ್ಯನಾಗಿದ್ದಾನೆ; ಮೂರೂ ಗುಣಗಳನ್ನು ತನ್ನಲ್ಲಿ ಇಟ್ಟುಕೊಂಡಿರುವುದರಿಂದಾಗಿ ನಿರ್ಗುಣನೂ ಆಗಿದ್ದಾನೆ; ಇಂದ್ರಿಯಗ್ರಹಣನಲ್ಲದ್ದರಿಂದ ಈತನು ಸೂಕ್ಷ್ಮ; ಸುಖವನ್ನು ಅರಿಯುವವನಾದ್ದರಿಂದ ಭೋಕ್ತೃ; ಅಕಲಂಕನಾದುದರಿಂದ ಕರ್ತೃ; ಕ್ಷೇತ್ರವನ್ನು ತಿಳಿದವನಾದ್ದರಿಂದ ಕ್ಷೇತ್ರವಿದನಾಗಿದ್ದಾನೆ. ಈತನು ಅಕ್ಷರವಿಕಾರಗಳನ್ನು ಹೊಂದುವುದಿಲ್ಲವಾದ್ದರಿಂದ ದ್ರಷ್ಟ; ಇವನಿಗೆ ಶುಭ ಅಶುಭಗಳ ಲೇಪವಿಲ್ಲದ್ದರಿಂದ ಅಮಲ; ಇವನಿಗೆ ಕೊನೆಯಿಲ್ಲದಿರುವುದರಿಂದ ಅಜ; ಯಾವುದನ್ನೂ ಸೃಷ್ಟಿಸುವುದಿಲ್ಲವಾದ್ದರಿಂದ ಅಪ್ರಸವಧರ್ಮಿ; ಈತನನ್ನು ಪುಮಾನ್, ಆತ್ಮಪೂರುಷ, ಬಹುಳ, ಅನಂತಜೀವನ, ಕವಿ, ಯಕ್ಷ, ಬ್ರಹ್ಮ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಪುರುಷನು ಈ ಕೃತ್ಯ ಕರ್ತೃತ್ವಗಳನ್ನು ಹೊಂದಿದರೆ ಶುಭ ಅಶುಭಗಳೆರಡನ್ನೂ ಸಾತ್ವಿಕ ಮತ್ತು ಸಾಕ್ಷಿಗಳನ್ನೂ ಉಂಟುಮಾಡುತ್ತಾನೆ; ಅದರಿಂದಾಗಿ ಮೂರು ಗುಣಗಳನ್ನೂ ಅಹಂಕಾರವನ್ನೂ ಕರ್ತೃತ್ವವನ್ನೂ ಹೊಂದುತ್ತಾನೆ. ಧರ್ಮಪರವಾಗಿರುವುದು ಅದರ ಸ್ವರೂಪ; ಯಮ ನಿಯಮಸೇವನೆ, ಪ್ರಸಂಖ್ಯಾನಪರತೆ, ಪರತರ ಐಶ್ವರ್ಯ ವೈರಾಗ್ಯಗಳೇ ಸಾತ್ವಿಕದ ಸ್ವಭಾವವೆನಿಸುತ್ತದೆ. ರಾಗ ಕ್ರೋಧ ಲೋಭ ರೌದ್ರತೆ, ಪಾರುಷ್ಯ ಭೋಗ ವಿಕೃತಿಗಳು ಅವಗುಣಗಳು; ರಾಜಸವೃತ್ತಿಯೆಂದರೆ ಉನ್ಮಾದ ಮದ ವಿಷಾದ ಮುಂತಾದ ನಾಸ್ತಿಕ್ಯನಿದ್ರೆಗಳು; ನಿದ್ರೆ ರೋಗ ಸ್ತ್ರೀವ್ಯಸನ ಆಲಸ್ಯ ನಿದ್ರೆ ಅಶುಚಿಗಳಿಂದ ಕೂಡಿರುವುದೇ ತಾಮಸವೃತ್ತಿ.

ಈ ಗುಣತ್ರಯಗಳು ಅಹಂಕಾರಕ್ಕೆ ಇರುವಂತಹವೇ ಹೊರತು ಪುರುಷನಿಗಲ್ಲ; ಮೂಲಪ್ರಕೃತಿಗೆ ಐದು ಗುಣಕರ್ಮಗಳ ಮೇಲೆ ಅಹಂಕಾರವಶತೆಯಿಂದ ಬಾಲಿಶವಾಗಿ 'ನಾನು ಮಾಡಿದೆ' ಎಂದು ಆತ್ಮನು ತಿಳಿಯುವುದಿಲ್ಲ; ಮೇಲೆ ಇರುವ ಪರಮಾತ್ಮನು ಗುಣರಹಿತನೂ ಅವ್ಯಯನೂ ಆದವನು, ಎಲ್ಲಕ್ಕೂ ಮೂಲವಾಗಿರುವ ಅವನು ಏನನ್ನೂ ಮಾಡನು, ಕರ್ತೃಕರ್ಮಕ್ರಿಯೆಗಳನ್ನು ಅನುಸರಿಸನು, ಕೆಟ್ಟ ಸಹವಾಸದಿಂದ ಆತ್ಮನು ದುಷ್ಟನಾಗುತ್ತಾನೆ. ಮಾಡುವುದು ಮಾಡಿದುದು ಮಾಡುವ ಇಚ್ಛೆ ಹೊಂದಿರುವುದು – ಈ ಪರಿಯನ್ನು ಪ್ರಕೃತಿಯು ಮಾಡಿದುದು ಎಂದು ಅರಿತರೆ ಆಗ ನಿಜವಾದ ಮಾಡುವಿಕೆಯನ್ನು ತಿಳಿದವನು ಸಿದ್ಧತಾಪುರುಷ, ಅಪರಿಮಿತ ಎಂದು ತಿಳಿಯುವುದು: ಹೊತ್ತವರೆಲ್ಲ ಹೆರಲೇಬೇಕು; ಒಬ್ಬನು ಕೃಶವಾದರೆ ಎಲ್ಲರೂ ಕೃಶವಾಗಬೇಕು. ಆದ್ದರಿಂದ ಪುರುಷರು ನಾನಾ ಬಗೆಯಾಗಿ ಕಾಣಿಸಿಕೊಳ್ಳುತ್ತಾರೆ. ಮೂರು ಗುಣಗಳ ಸ್ವರೂಪವನ್ನು ಹೇಳುತ್ತೇನೆ: ಸಹನೆ ಉದಾರತೆ ಪ್ರಸಾದ ಸಂಪ್ರೀತಿಗಳು ಸಾತ್ವಿಕಗುಣಗಳು. ಶೋಕ ತಾಪ ರೋಷ ಅಭಿಮಾನ ಸ್ತಂಭ ಸ್ವೇದ ರಜೋಗುಣಗಳು; ಮಹಾನಿದ್ರೆ ಆಲಸ್ಯ ದೈನ್ಯ ಪ್ರಮಾದ

ಲಕ್ಷಣಗಳು ತಾಮಸಗುಣಗಳು; ಸತ್ವವು ಸುಜ್ಞಾನವನ್ನು ತೋರಿಸುತ್ತದೆ.

ಸಂಚರ ಪ್ರತಿಸಂಚರಗಳೆಂಬ ಎರಡರ ಬಗ್ಗೆ ತಿಳಿದುಕೋ: ಜಗತ್ತಿನ ಉತ್ಪತ್ತಿಯೇ ಸಂಚರ, ವಿನಾಶವೇ ಪ್ರತಿಸಂಚರ. ಈಗ ಉತ್ಪತ್ತಿ ಲಯಗಳ ಬಗ್ಗೆ ಹೇಳುತ್ತೇನೆ: ಮಹಾತತ್ವವು ಅವ್ಯಕ್ತವಾಗಿ ಇರುತ್ತದೆ, ಅದರಿಂದಲೇ ಗುಣಗಳಿಂದ ಕೂಡಿದ ಅಹಂಕಾರವು ಉದಯಿಸುತ್ತದೆ, ಅದರಿಂದ ಹುಟ್ಟುವುದು ಹನ್ನೊಂದು ಇಂದ್ರಿಯ ಮತ್ತು ಪಂಚಭೂತಗಳಿಂದ ಕೂಡಿದ ಲೋಕವುಂಟಾಗುತ್ತದೆ. ತತ್ವದ ಆದಿಯಲ್ಲಿ ಭೂತಗಳು ತನ್ಮಾತ್ರೆಗಳಿಂದ, ಇಂದ್ರಿಯಗಳು ಪ್ರೀತಿಯಿಂದ, ಅಹಂಕಾರವು ಹಮ್ಮಿನಿಂದ ಕೂಡಿ ಬುದ್ಧಿಮೂಲವಾದ ಪ್ರಕೃತಿಯುಂಟಾದರೆ ಪ್ರತಿಸಂಚರವಾಗುತ್ತದೆ; ಈ ರೀತಿಯಲ್ಲಿ ಸಂಚರ ಪ್ರತಿಸಂಚರಗಳನ್ನು ಅರಿತೂ ಆತುರದಿಂದಾಗಿ ಬಂಧಮುಕ್ತವುಂಟಾಗುತ್ತದೆ.

ಈಗ ಅಧ್ಯಾತ್ಮ ಅಧಿಭೌತ ಅಧಿದೈವಗಳ ಬಗ್ಗೆ ಹೇಳುತ್ತೇನೆ: ಬುದ್ಧಿಯು ಅಧ್ಯಾತ್ಮ, ಬೋಧ್ಧವ್ಯವು ಅಧಿಭೂತ, ಅದನ್ನು ಹೊಂದಿದ ಬ್ರಹ್ಮವೇ ಅಧಿದೈವ; ದರ್ಪವು ಅಧ್ಯಾತ್ಮ, ಉದ್ಧತ ಅಹಂಕಾರವು ಅಧಿಭೂತ, ರುದ್ರನು ಅಧಿದೈವ; ಸಿದ್ಧಿಯು ಮನೋ ಅಧ್ಯಾತ್ಮ, ಸಂಕಲ್ಪವಿಕಲ್ಪಗಳ ಬುದ್ಧಿಯು ಅಧಿಭೂತ, ಚಂದ್ರನು ಅಧಿದೈವ; ಶುದ್ಧಶ್ರೋತ್ರವು ಅಧ್ಯಾತ್ಮ, ಶ್ರೋತವ್ಯವು ಅಧಿಭೂತ, ಸುರವರ್ತ್ಮನು ಅಧಿದೈವ; ತ್ವಕ್ಕು ಅಧ್ಯಾತ್ಮ, ಸ್ಪರ್ಶಯುತವು ಅಧಿಭೂತ, ಎಕ್ಕತುಳ (ಶಕ್ತಿ?) ಅಧಿದೈವ; ಕಣ್ಣು ಅಧ್ಯಾತ್ಮ, ದ್ರಷ್ಟವ್ಯ ಅಧಿಭೂತ, ದಿವಾಕರ ಅಧಿದೈವ; ಜಿಹ್ವೆ ಅಧ್ಯಾತ್ಮ, ರಸಯಿತವ್ಯವು ಅಧಿಭೂತ, ಪ್ರಚೇತವು ಅಧಿದೈವ; ಘ್ರಾಣವು ಅಧ್ಯಾತ್ಮ, ಘ್ರಾತವ್ಯವು ಅಧಿಭೂತ, ಅಶ್ವಿನಿಗಳು ಅಧಿದೈವ; ವಾಕ್ ಅಧ್ಯಾತ್ಮ, ವಕ್ತವ್ಯವು ಅಧಿಭೂತ, ಅದರ ಆಗುಹೋಗುಗಳಿಗೆ ಅಗ್ನಿಯು ಅಧಿದೈವ; ಪಾಣಿ(ಕೈ)ಗಳು ಅಧ್ಯಾತ್ಮ, ದಾತವ್ಯ (ಕೊಡಲ್ಪಡುವುದು) ಅಧಿಭೂತ, ಇಂದ್ರತತ್ವವು ಅಧಿದೈವ; ಪಾದವು ಅಧ್ಯಾತ್ಮ, ಗಂತವ್ಯ (ಹೋಗಬೇಕಾದ ಗುರಿ) ಅದಿಭೂತ, ಶ್ರೀಗುರುವು ಅಧಿದೈವ; ಗುದವು ಅಧ್ಯಾತ್ಮ, ಉತ್ಸೃಷ್ಟವು (ತ್ಯಜಿಸಲ್ಪಟ್ಟದ್ದು) ಅಧಿಭೂತ, ಮೃತ್ಯುತತ್ವ ಅಧಿದೈವ; ಗುಹ್ಯವು ಅಧ್ಯಾತ್ಮ, ಆನಂದವು ಅಧಿಭೂತ, ಪ್ರಜಾಧಿಪನು ಅಧಿದ್ಯೆವ. ಈ ಬಗೆಯ ಕರಣ (ಇಂದ್ರಿಯ) ಗಳ ಸ್ವರೂಪವನ್ನು ತಿಳಿದವನು ಎಂದಿಗೂ ಗುಣಲೇಪವಿಲ್ಲದೆ, ಎಲ್ಲ ಪಾಪಗಳನ್ನು ನಿವಾರಿಸಿಕೊಂಡು, ಸರ್ವಸಾಕ್ಷಿಕನೆನ್ನಿಸಿ ಹೊಳೆಯುತ್ತಾನೆ.

ಅಭಿಬುದ್ಧಿ ಅಭಿಮಾನ ಇಚ್ಛಾ ಕ್ರಿಯೆ ಕರ್ತವ್ಯತೆಗಳ ಬಗ್ಗೆ ಈಗ ವಿವರಿಸುತ್ತೇನೆ: 'ಇದು ಮಾಡಬೇಕಾದದ್ದು' ಎಂದು ತಿಳಿಯುವುದು ಅಧ್ಯವಸಾಯ, ಅದು ಮತಿಯ ಕೆಲಸ; 'ಮಾಡುತ್ತೇನೆ' ಎಂಬುದೆ ಗರ್ವ; 'ಇದು ನನ್ನದು ನನ್ನದಲ್ಲ' ಎಂಬ ಸಂದೇಹವೇ ಮಾನಸವ್ಯಾಪಾರ; ಶಬ್ದವೇ ಮುಂತಾದ ಬುದ್ಧೀಂದ್ರಿಯಗಳ ವ್ಯಾಪಾರವುಂಟಾಗಿ ವಚನ ಆದಾನ ಆನಂದ ಕ್ರಿಯೆಗಳು ಎಂಬುದನ್ನು ಅರಿತು ಜ್ಞಾನೇಂದ್ರಿಯಗಳು ಕರ್ಮೇಂದ್ರಿಯಗಳು ಮನಸ್ಸು ಬುದ್ಧಿ ಅಹಂಕಾರಗಳನ್ನು ತಿಳಿಯಬೇಕು. ಧೃತಿ ಶ್ರದ್ಧೆ ಸುಖ ವಿವಿದಿಷ ಅವಿವಿದಿಷ ಎಂಬಿವು ಐದು ಬಗೆಯ ಅತಿಶಯಗಳು; ಅರಿತುಕೊಂಡು, ಅದನ್ನು ಮತಿಯಿಂದ ದೃಢಪಡಿಸಿಕೊಂಡು, ಕೊನೆಮುಟ್ಟುವಂತೆ ಮಾಡಿ ಮುಗಿಸುವುದೇ ಧೃತಿ; ಯಜನ ಯಾಜನ ದಾನ ಪ್ರತಿಗ್ರಹ ಹೋಮ ಅನಸೂಯೆ ಬ್ರಹ್ಮಚರ್ಯ ತಪೋವಿದ್ಯೆಯೇ ಮುಂತಾದ

ಅಭ್ಯಾಸಗಳನ್ನು ಸುಖ ಎನ್ನುತ್ತಾರೆ; ಏನನ್ನೂ ತಿಳಿಯದ ಅವಿವೇಕವನ್ನು ಅವಿವಿದಿಷ ಎನ್ನುತ್ತಾರೆ; ಜ್ಞಾನಿಗಳ ಸದ್ಬೀಜ ವಿವಿದಿಷ ಎನಿಸಿಕೊಳ್ಳುತ್ತದೆ; ವಾಯುಪಂಚಕಗಳನ್ನು ಮುಕ್ತಿಪರವೂ ಯೋಗ್ಯವೂ ಆನಂದಕರವೂ ಆದ ಪಂಚಕರ್ಮಯೋನಿಗಳೆಂದು ಭಾವಿಸಬೇಕು. ಪ್ರಾಣ ವ್ಯಾನ ಉದಾನ ಸಮಾನ ಅಪಾನ ಎಂದು ಬೇರೆ ಬೇರೆ ಚೇಷ್ಟೆಗಳಲ್ಲಿ ಮರುತವು ತೊಡಗುತ್ತದೆ. ಐದು ಕರ್ಮಾತ್ಮಾನಗಳು ಎನ್ನುತ್ತಾರೆ, ಅವು ವೈಕಾರಿಕ ತೈಜಸ ಭೂತಾದಿವೈಧುರ್ಯ ಸಾನುಮಾನ ಮತ್ತು ನಿರನುಮಾನಗಳು. ಇವುಗಳ ಕಾರ್ಯಸ್ವರೂಪವನ್ನು ಹೇಳುತ್ತೇನೆ: ವೈಕಾರವು ಶುಭ, ತೈಜಸವು ಮೋದ (ಸಂತೋಷ), ಭೂತಾದಿಮೂಢವನ್ನು ಸಾನುಮಾನವು ಸಂಪಾದಿಸುತ್ತದೆ, ನಿರನುಮಾನವು ಮೂಢಶುಭಕಾರ್ಯವನ್ನು ಮಾಡುತ್ತದೆ.

ತಿಳಿಯದೆ ಅಷ್ಟಪ್ರಕೃತಿಗಳಲ್ಲಿ ಅಭಿಮಾನವನ್ನು ತಳೆದು ಅಣಿಮಾದಿ ಸಿದ್ಧಿಗಳನ್ನು ಪಡೆದು ಮೆರೆವುದೇ ಮೋಹ, ನಾನು ಮುಕ್ತನಾಗಿದ್ದೇನೆಂಬುದೇ ಮಹಾಮೋಹ. ಅಣಿಮಾ ಮುಂತಾದ ಹತ್ತು ಬಗೆಯ ವಿಷಯಗಳನ್ನು ನಂಬಿ ತುರೀಯ ದುಃಖವು ತಾಮಿಸ್ರ ಎಂಬ ಹೆಸರಿನದು, ಮಹಾ ಕತ್ತಲೆಯಿಂದ ಕೂಡಿದುದು. ಹೀಗೆ ಅರುವತ್ತೆರಡು ಭೇದಗಳಾದವು: ಶಕ್ತಿಗಳು ಇಪತ್ತೆಂಟು, ಹನ್ನೊಂದು ಇಂದ್ರಿಯಗಳು, ಸಪ್ತದಶಬುದ್ಧಿ ಎನ್ನುತ್ತಾರೆ. ಅವುಗಳನ್ನೀಗ ವಿವರಿಸುತ್ತೇನೆ. ನಾಲಗೆಗೆ ಜಡತೆ, ಕಿವಿಗೆ ಕಿವುಡು, ಚರ್ಮದಲ್ಲಿ ತೊನ್ನು, ಕಣ್ಣಿಗೆ ಕುರುಡು, ಮೂಗಿಗೆ ಅಘ್ರಾಣತೆ, ನುಡಿಗೆ ಮೂಕತೆ, ನಡೆಗೆ ಕುಂಟು, ಕೈಗಳಿಗೆ (ಕೌಣಿತ್ವ) ರಾಕ್ಷಸತ್ವ, ಪಂಚೇಂದ್ರಿಯಗಳಿಗೆ ಉದಾವರ್ತತ್ವ, ಜನನೇಂದ್ರಿಯಕ್ಕೆ ನಪುಂಸಕತ್ವ, ಮನಸ್ಸಿಗೆ ಹುಚ್ಚು, ಇವುಗಳು ಹನ್ನೊಂದು ಇಂದ್ರಿಯಗಳ ವಧಾರೂಪಗಳು ಎಂದು ಜ್ಞಾನಿಗಳು ಕರೆಯುತ್ತಾರೆ; ಅಂಭೋಗಸಲಿಲ, ಮೇಘವೃಷ್ಟಿ, ಕೇಣನಿಲ್ಲದಪಾರ, ಅಪಾರಂಪರವೂಣಯಾಂಬ ಉತ್ತಮಾಂಬ ಎಂಬ ಐದು ವಿಧ.

ಇನ್ನು ಬಾಹ್ಯಸಿದ್ಧಿಗಳ ವಿಚಾರ: ತಾರ, ಸುತಾರ, ತಾರತಾರ, ಪ್ರಮೋದ, ಪ್ರಮುದಿತ, ಪ್ರಮೋದಮಾನ, ರಮ್ಯಕ, ಸದಾಪ್ರಮುದಿತ ಎಂಬ ಶಕ್ತಿಗಳ ವಿವರವನ್ನೀಗ ಹೇಳುತ್ತೇನೆ. ವೀರಸಿದ್ಧಿಗಳು ಎಂಟುವಿಧ. ಇದೇ ರೀತಿಯಲ್ಲಿ ಶಕ್ತಿಯೂ ಎಂಟು ವಿಧಗಳಲ್ಲಿ ಕಾಣುತ್ತವೆ, ಹೀಗೆ ಬೇರೆ ಬೇರೆ ಇಪ್ಪತ್ತೆಂಟು ಸಿದ್ಧಿಗಳ ಕ್ರಮವನ್ನು ತಿಳಿದು ಅಮಲಭಾವವನ್ನು ಪಡೆಯಬೇಕು. ಅಸ್ತಿತ್ವ, ಏಕತ್ವ, ಅನ್ಯತ್ವ, ಅರ್ಥವತ್ವ, ಪಾರಾರ್ಥ್ಯ. ಯೋಗ, ವಿಯೋಗ, ಕರ್ತೃತೆ, ಪುರುಷ ದೇಹಕ್ಕೆ ಶೇಷವೃತ್ತಿಗಳು. ತಿಳಿದವರು ಇವನ್ನು ದಶಮೂಲಿಕಾರ್ಥಗಳೆಂದೂ, ಇವುಗಳನ್ನು ಪಡೆದ ಐವತ್ತು ಪ್ರತ್ಯಯ, ತುಷ್ಟಿಗಳು ಇಪ್ಪತ್ತೆಂಟು – ಇವುಗಳನ್ನು ಕೂಡಿದರೆ ಅರುವತ್ತು ತಂತ್ರಗಳಾಗುತ್ತವೆ. ಭೂತಪಂಚಕಗಳನ್ನೂ ತನ್ಮಾತ್ರೆಗಳಿಂದ ಮಾಡಿ, ಹಾಗೆ ಹುಟ್ಟಿದವು ನಿರಾಹಾರ ಎಂದು ತಿಳಿದು, ಅವುಗಳಿಗೆ ಅತಿಶಯವಾದ ಅನುಗ್ರಹವನ್ನು ಮಾಡುವುದು ಅಕ್ಷರವಾದ ಭೂತಸರ್ಗ; ಭೂತಸರ್ಗವು ದೈವ, ತಿರ್ಯಗ್ಜಂತು ಸಂಬಂಧಿ, ಮಾನುಷ ಎಂದು ಮೂರು ಬಗೆ. ದೈವ ಸರ್ಗವು ಬ್ರಾಹ್ಮ, ಪ್ರಾಜಾಪತ್ಯ, ಸಾಮ್ಯ, ಐಂದ್ರ, ಗಾಂಧರ್ವ, ಯಕ್ಷ, ರಾಕ್ಷಸ, ಪೈಶಾಚ ಎಂದು ಎಂಟು ವಿಧ; ತಿರ್ಯಗ್ಜಂತುಸಂಬಂಧಿಯಾದುದು ಪಶು ಪಕ್ಷಿ ಮೃಗ ಸರ್ಪ ಸ್ಥಾವರ

ಎಂಬ ಐದು ಬಗೆ; ಬ್ರಾಹ್ಮಣನಿಂದ ಅಂತ್ಯಜಾತಿಯವರೆಗಿನ ಮಾನುಷವು ಒಂದೇ ಬಗೆ. ಜ್ಞಾನಿಗಳು ಈ ಹದಿನಾಲ್ಕನ್ನೂ ಸೇರಿಸಿ ಯಾತಸರ್ಗ ಎಂಬ ಸುಂದರ ಹೆಸರಿನಿಂದ ಕರೆಯುತ್ತಾರೆ.

ಜ್ಞಾನವಿರೋಧಿಯಾದ ಅಜ್ಞಾನದಿಂದ ಸಂಸಾರರೂಪವಾದ ಬಂಧವಾಗುವುದು. ಈ ಬಂಧವು ನೈಮಿತ್ತಿಕ, ಪ್ರಾಕೃತಿಕ, ವೈಕಾರಿಕ, ದಾಕ್ಷಿಣಿಕ ಎಂದು ನಾಲ್ಕು ವಿಧ. ಈ ಪರಿಯನ್ನೆಲ್ಲ ತಿಳಿದು ಮೂರು ಪ್ರಮಾಣಗಳೆಂದು ಅರಿತು ದೇಹಮನಸ್ಸುಗಳಿಂದ ಉಂಟಾದರೆ ಅಧ್ಯಾತ್ಮವೆಂಬ, ಮನುಷ್ಯಪಶುಪಕ್ಷಿಸರ್ಪಖಗಮೃಗಸ್ಥವರಗಳ ದೆಸೆಯಿಂದ ತಿಳಿದರೆ ಅಧಿಭೌತಿಕವೆಂಬ, ವಾತಪಿತ್ತ ಅಧಿಕಾರಗಳು ಅಧಿದೈವವೆಂಬ ಮೂರು ಬಗೆಯ ದುಃಖಗಳನ್ನು ಪಡೆಯುವರು. ಮೋಕ್ಷವೆಂದರೇನು, ಏನನ್ನು ಮಾಡಿ ನಾನು ಕೃತಾರ್ಥನಾದೇನು ಎಂದು ಚಿಂತಿಸುವುದು ಊಹೆ. ಇದರಿಂದ ಪ್ರಧಾನ, ಪುರುಷ, ಬುದ್ಧಿ ಅಹಂಕಾರ ಮುಂತಾದವುಗಳ ಜ್ಞಾನವು ಹುಟ್ಟುತ್ತದೆ, ಇದೇ ಶಬ್ದ ಎಂಬ ಎರಡನೆಯ ಸಿದ್ಧಿ. ವೇದಾದಿ ಶಾಸ್ತ್ರಗಳ ಅಧ್ಯಯನದಿಂದ ಪಂಚವಿಂಶತಿ ತತ್ವಗಳ ಜ್ಞಾನವುಂಟಾಗತ್ತದೆ. ಅದರಿಂದ ಮೋಕ್ಷ, ಇದು ಮೂರನೆಯ ಸಿದ್ಧಿ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ದುಃಖತ್ರಯದ ನಾಶಕ್ಕಾಗಿ ಶಿಷ್ಯನು ಗುರುವಿನ ಬಳಿಗೆ ಹೋಗಿ ಉಪದೇಶವನ್ನು ಪಡೆದು ಮೋಕ್ಷವನ್ನೈದುತ್ತಾನೆ, ಇದು ನಾಲ್ಕನೆಯ ಸಿದ್ಧಿ. ದುಃಖತ್ರಯ ವಿಘಾತಗಳಿಂದ ಮೂರು ಸಿದ್ಧಿಗಳಾದವೆಂದು ತಿಳಿಯಬೇಕು. ಹಿಂದೆ ಹೇಳಿದ ಊಹಾದಿಗಳು ಸೇರಿ ಆರು ಸಿದ್ಧಿಗಳಾದವು. ಸ್ನೇಹಿತನ ನೆರವಿನಿಂದ ಜ್ಞಾನವನ್ನು ಪಡೆದು ಮೋಕ್ಷವನ್ನೈದುವುದು ಏಳನೆಯ ಸಿದ್ಧಿ. ಜ್ಞಾನಿಗಳಿಗೆ ಬೇಕಾದ ಆಹಾರ ವಸ್ತ್ರಾದಿಗಳನ್ನು ದಾನಮಾಡಿ ಅವರಿಂದ ಜ್ಞಾನವನ್ನು ಪಡೆದು ಮೋಕ್ಷವನ್ನೈದುವುದು ಎಂಟನೆಯ ಸಿದ್ಧಿ. ಹೀಗೆ ಎಂಟು ಬಗೆಯಾದ ಮೋಕ್ಷಸಿದ್ಧಿಗಳುಂಟು. ಈ ಸಾಂಖ್ಯತತ್ವಗಳನ್ನು ಗುರುವಿನಿಂದ ತಿಳಿದರೆ ಭ್ರಾಂತಿ ಹಾರಿಹೋಗುತ್ತದೆ, ದೇಹದ ಒಳಹೊರಗುಗಳು ತತ್ವರೂಪದ ಆನಂದದಿಂದ ನಿರ್ಮಲವಾಗುತ್ತದೆ, ಇದಕ್ಕೆ ಮಿಗಿಲಾದುದು ಯಾವುದೂ ಇಲ್ಲವೆಂದು ನಳಿನಾಕ್ಷನಾದ ರಾಮಪುರದರಸನು ಜ್ಞಾನಾಮೃತದ ಕಡಲಿನಲ್ಲಿ ಓಲಾಡುತ್ತಿರುವನು, ಇದೇ ತತ್ವ ಎಂದು ತಿಳಿದು ನಿತ್ಯಸುಖಿಯಾಗಬೇಕು.

೮. ಪಂಚವಟಿಯಲ್ಲಿ ಹೇಮಂತ ಋತು ಬಂದುದು; ಶೂರ್ಪನಖಿಯ ಪ್ರವೇಶ

ಅಗಜೆಯೇ ಕೇಳು, ನಂದನವನದಂತೆ ಸರ್ವಸುಖಕ್ಕೂ ಆನಂದಕ್ಕೂ ಆಕರವೆನಿಸಿದ್ದ ಪಂಚವಟಿಯಲ್ಲಿ ಮುನಿಗಳು ಹೇಳುತ್ತಿದ್ದ ಸತ್ಕಥಾಶ್ರವಣದಿಂದ ಶ್ರೀರಾಮನು ಕೆಲ ಕಾಲ ಆನಂದದಿಂದಿದ್ದ. ಅಷ್ಟರಲ್ಲಿ ಹೆಂಗೆಳೆಯರನ್ನು ಸಂಮೋಹಿಸುವ ಗುಳಿಗೆಯೋ, ಹೆಣ್ಣು ಕೋಗಿಲೆ (ಪಿಕಾಂಗನಾ) ಮತ್ತು ಹಾವು(ಪನ್ನಗ)ಗಳನ್ನು ಅಡ್ಡಗಟ್ಟುವ ಸಿದ್ಧನೋ ಎಂಬ ರೀತಿಯಲ್ಲಿ ಹಿಮಂತ ಋತುವು ತಲೆದೋರಿತು. ದಟ್ಟವಾದ ಮೋಡದ ರಾಶಿಯನ್ನು

ಓಡಿಸಿ, ಸೂರ್ಯನ ಪ್ರತಾಪವನ್ನು ಕಡಿಮೆಗೊಳಿಸಿ, ನೈದಿಲೆಯ ಮನಸ್ಸನ್ನು ಕೊರಗಿಸುತ್ತ, ಮತ್ಸರದಿಂದ ಶತ್ರು ಚಕ್ರಗಳ ಮುಖವನ್ನು ಬಾಧಿಸುತ್ತಲೇ ವಿನಯದಿಂದ ನಗಿಸುತ್ತ,, ಕುಮುದಿನಿಯ ಮನದಿಷ್ಟವನ್ನು ಕೊಡುವ ಚಂದ್ರನ ಕಾಂತಿಯನ್ನು ಹೆಚ್ಚಿಸುತ್ತ, ಕಾಮನ ಮೋಹನದ ಬಲೆಯನ್ನು ಹರಡುವ ಋತುರಾಜನ ಹಾಗೆ ಮಾಗಿ ಮೈದೋರಿತು. ಅಗ್ನಿಯ ಜೊತೆ ಗೆಳೆತನವನ್ನು ಮಾಡಬಯಸುವ ಸೂರ್ಯ, ಹೆಣ್ಣುಗಳ ಮುಖಗಳಲ್ಲಿ ಕಮಲಗಳನ್ನು ಬೈತಿಡುವ ವಿಷ್ಣು, ಮರಿಗಳನ್ನು ಕಾಪಾಡುವ ಬ್ರಹ್ಮ, ಚರ್ಮವನ್ನು ಹೊದ್ದ ತನ್ನ ದೇಹದ ಅರ್ಧವನ್ನು ಹೆಂಡತಿಗೆ ನೀಡುವ ಶಿವ – ಈ ರೀತಿ ನಾನಾ ಬಗೆಯ ಉಪಾಯಗಳನ್ನು ಮಾಡುತ್ತ ಚಳಿಯ ರೋಗ ಅಂಟದ ಹಾಗೆ ಮುಂಚೆಯೇ ತಿಳಿದು ಆತ್ಮರಕ್ಷಣೆ ಮಾಡಿಕೊಂಡು ಮಾಗಿಯನ್ನು ಗೆಲ್ಲಲು ಜನ ಉದ್ಯುಕ್ತರಾದರು. ಹಿಮದ ಮಹಾಪ್ರತಾಪದಿಂದಾಗಿ ಸೂರ್ಯನು ಮರವನ್ನೇರಿದರೆ, ಬೆಂಕಿಯು ನೀರನ್ನು ಸೇರಿತು, ಹಕ್ಕಿಗಳು ತಮ್ಮ ಗೂಡುಗಳಲ್ಲಿ ಬೆಚ್ಚಗೆ ಇರಲು, ಚಕೋರಗಳ ಗುಂಪು ಸೂರ್ಯಕಿರಣಗಳನ್ನೇ ನುಂಗುತ್ತಿದ್ದವು, ಕಮಲಗಳು ಅಲ್ಲಲ್ಲಿ ಕೊರಗುತ್ತಿರಲು ಕನ್ನೈದಿಲೆಗಳು ಅವುಗಳನ್ನು ನೋಡಿ ಪರಿಹಾಸ ಮಾಡುತ್ತಿದ್ದವು. ಹಿಮಭೂಪಾಲನ ಉಪಟಳಕ್ಕೆ ಹೆದರಿ ಶಿವನು ಚಂದ್ರಬಿಂಬವನ್ನು ಆಕಾಶಕ್ಕೆ ಕಳಿಸಿ, ಜಡೆಯಲ್ಲಿರುವ ಗಂಗೆಯನ್ನು ಸಮುದ್ರಕ್ಕೆ ಕಳಿಸಿ, ಹುಲಿಯ ಚರ್ಮದ ಅಂಬರವನ್ನೇ ಹೊದ್ದು, ತಮ್ಮ ಮೂರನೆಯ ಕಣ್ಣಿನ ಕೆಂಡಗಳನ್ನು ಕೆದರಿ ಅವುಗಳನ್ನು ಅಪ್ಪಿಕೊಂಡ; ಸರ್ಪವು ಆಲದ ಪೊಟರೆಯನ್ನು ಬಿಡದಿರಲು, ಗರುಡನು ತನ್ನ ರೆಕ್ಕೆಗಳನ್ನೇ ಬಟ್ಟೆಯನ್ನಾಗಿ ಹೊದ್ದು ತನ್ನ ಯಜಮಾನನನ್ನು ಸಮುದ್ರಕ್ಕೆ ಹೋಗುವಂತೆ ಮಾಡಿದ. ಸೂರ್ಯನ ತಾಪವನ್ನು ತಂಪಾಗಿ ಮಾಡಿ, ಅಗ್ನಿಯ ವಿಕ್ರಮವನ್ನು ಶಾಂತಿಗೊಳಿಸಿ, ಆತುರದಿಂದ ಕೆಂಡಗಣ್ಣನ ಮೂನೆಯ ಕಣ್ಣಿನ ಬಿಸುಪನ್ನು ಕೂಡಿಟ್ಟುಕೊಂಡು ಜನರ ಶರೀರಗಳನ್ನು ಹೊಕ್ಕು ಬಂಧಿಸಲು ಹಿಮಾಧಿಪನು ಸಿದ್ಧನಾದನೋ ಎಂಬಂತೆ ಹಾರುವ ಹಿಮಧೂಮವು ಮನುಷ್ಯರ ಮನಸ್ಸಿನಲ್ಲಿ ಅದೆಷ್ಟು ಸಂತಸವನ್ನು ತರುತ್ತದೆಯೋ! ಲಲನೆಯರ ತೋರಮೊಲೆಗಳ ತುದಿಗಳಲ್ಲಿ, ಸಮುದ್ರದ ಅಂತರಾಳಗಳಲ್ಲಿ, ಪ್ರಾಣಿಗಳ ಹೊಟ್ಟೆಯಲ್ಲಿ ಅಗ್ನಿಯು ಸೇರಿಹೋಗಲು, ತನ್ನ ಶತ್ರುವನ್ನು ಕೋಪದಿಂದ ಹುಡುಕುತ್ತ ನಾಲ್ಕೂ ದಿಕ್ಕುಗಳನ್ನು ಮುಚ್ಚಿ ಹಿಮರಾಜನು ವಿಜೃಂಭಿಸಿದ; ಆಗ ನೆಲದ ಮೇಲಿನ ಪ್ರಾಣಿಗಳೆಲ್ಲ ನಡುನಡುಗಿ ಹಲ್ಲಕಡಿಯುತ್ತ ಚಳಿಯ ಉಪಟಳವನ್ನು ನಿವಾರಿಸಲು ಲಲನೆಯರ ಮರೆವೊಕ್ಕವು. ಮಿತ್ರ ಎಂಬ ಹೆಸರನ್ನು ಪಡೆದ ಸೂರ್ಯನ ಉರುಬೆಯನ್ನು ತಗ್ಗಿಸಿ ನೈದಿಲೆಯ ಏಳಿಗೆಯನ್ನುಂಟುಮಾಡಿ ಶತ್ರುಗಳನ್ನು ನಿಲ್ಲಿಸಿ ರಾಜ(ಚಂದ್ರ)ಸೇವೆ ಮಾಡುವ ಜಂತುಗಳನ್ನು ಹೆಚ್ಚಿಸಿದ. ಸಾರಥಿಯ ಏಳಿಗೆಯನ್ನು ಪೂರ್ವದಲ್ಲಿ ನಿರೀಕ್ಷಿಸುತ್ತ, ಗಾಳಿ ಸುಳಿಯುವುದನ್ನು ನೋಡುತ್ತ ಅರ್ಧಪೌರುಷದವನಾಗಿರುವ ಹರನನ್ನು ಕಂಡು, ಮೆಲ್ಲಗೆ ಬಂದು ಹಣೆಯಲ್ಲಿನ ಕಣ್ಣನ್ನು ಮುಟ್ಟಿ ನಸುನಗುತ್ತ ಭಯವಿಲ್ಲದೆ ತನ್ನ ಬಾಣಗಳನ್ನು ಬಿಟ್ಟು ಮೂರುಲೋಕಗಳನ್ನೂ ಗೆಲ್ಲಬರುವ ಮದನನ ಉಪಟಳದಿಂದ ಲೋಕವೆಲ್ಲ ನಡುಗುವಂತಾಯಿತು. ಹಿಮಂತರಾಜನು ಧರಣಿ ಎಂಬ ಅಂಗನಾಮಣಿಯ ಮೇಲೆ ಮಂಜಿನ ಮುತ್ತುಗಳ ಸೇಸೆಯನ್ನು ಸುರಿಯುವ ರೀತಿಯಲ್ಲಿ ಇಬ್ಬನಿಮಣಿಗಳನ್ನು ತಳೆದ

ಹುಲ್ಲಿನ ದಳಗಳು ರಾರಾಜಿಸುತ್ತಿರಲು, ಸರಸಸಲ್ಲಾಪದಿಂದ ಪಾರಿವಾಳ ಪ್ರಣಯಿಗಳು ಗರಿಗೆದರಿ ಗಳಗಳ ಧ್ವನಿ ಮಾಡುತ್ತ ಆಗಸದಲ್ಲಿ ಹಾರಾಡುತ್ತ ಉಲ್ಲಾಸಮಯವಾಗಿ ಕೂಡುತ್ತಿದ್ದವು.

ಈ ರೀತಿಯಲ್ಲಿ ಹಿಮಂತ ಋತುವು ವ್ಯಾಪಿಸಿಕೊಳ್ಳಲು, ಶ್ರೀರಾಮನು ಮುನಿಮಂಡಲದ ಜೊತೆ ಅನುದಿನವೂ ಗೋದಾವರೀಸ್ನಾನವನ್ನು ಮಾಡಿ, ತನ್ನ ಹೆಂಡತಿಯ ಜೊತೆ ಸೇರಿ ಸೂಕ್ತವಾದ ಕರ್ಮಗಳನ್ನು ಮಾಡುತ್ತ ಉಪಾಸನೆ ಮಾಡುತ್ತಿದ್ದರೆ, ಲಕ್ಷ್ಮಣನು ಹಣ್ಣು ಹೂ ದರ್ಭೆ ನೀರು ಮುಂತಾದವುಗಳನ್ನು ತಂದು ಅಣ್ಣ-ಅತ್ತಿಗೆಯರ ಸೇವೆ ಮಾಡುತ್ತಿದ್ದ. ಹೀಗಿರಲು ಒಂದು ದಿನ ಲಕ್ಷ್ಮಣನನ್ನು ನೋಡಿ ರಘುನಾಥನು ಭರತನನ್ನು ನೆನಸಿಕೊಂಡು ಅನುರಾಗದಿಂದ, "ತಂದೆಯು ಕರುಣೆಯಿಂದ ಕೊಟ್ಟ ರಾಜ್ಯಭೋಗವನ್ನು ಬಿಟ್ಟು, ಪರಮವೈರಾಗ್ಯವನ್ನು ತಳೆದು, ಸ್ವಸುಖವನ್ನು ತ್ಯಾಗಮಾಡಿ ಭರತನು ಅಯೋಧ್ಯಾಪಟ್ಟಣವನ್ನು ಬಿಟ್ಟು ನಂದಿಗ್ರಾಮದಲ್ಲಿ ನಮ್ಮನ್ನೇ ನೆನೆಸಿಕೊಳ್ಳುತ್ತ ಬಾಳುತ್ತಿದ್ದಾನೆ. ಹೆಂಡತಿಯನ್ನು ಬಿಟ್ಟು, ಎಲ್ಲ ಭೋಗಗನ್ನೂ ತೊರೆದು, ನಾರುಬಟ್ಟೆಯನ್ನುಟ್ಟು, ಚಳಿಮಳೆಗಾಳಿಬಿಸಿಲುಗಳನ್ನು ಲೆಕ್ಕಿಸದೆ, ಹಣ್ಣುಗಳನ್ನು ಮಾತ್ರ ತಿನ್ನುವ ನೇಮದಿಂದ ನಮಗಾಗಿ ದಂಡನೆಮಾಡಿಕೊಳ್ಳುತ್ತಿರುವ ಸುಕುಮಾರ ಭರತನು ಈ ಚಳಿಗಾಲದಲ್ಲಿ ಕಾಡಿನಲ್ಲಿ ಹೇಗಿದ್ದಾನೆಯೋ? ನಮ್ಮನ್ನು ಪ್ರೀತಿಯಿಂದ ನೆನೆಸಿಕೊಳ್ಳುತ್ತ, ತಂದೆಯಿತ್ತ ಅಪಾರ ಭೋಗಗಳನ್ನು ತಾಯಿಯ ಆಸೆಗೆ ವಿರುದ್ಧವಾಗಿ ತೊರೆದು ವೈರಾಗ್ಯದಿಂದ ತನ್ನ ಸುಖವನ್ನು ಲೆಕ್ಕಿಸದೆ ಇದ್ದಾನೆ. ಈ ಬಗೆಯ ತರುಣನನ್ನು ದಿನದಿನವೂ ನೆನಪಿಸಿಕೊಳ್ಳಬೇಕಾದರೂ, ಈ ಜಗತ್ತಿನಲ್ಲಿ ಅವನಿಗೆ ಸರಿದೊರೆಯಾದ ದೊರೆ ಯಾರಿದ್ದಾರು? ತಾಯಿಯು ಮಗನ ಬಗೆಗಿನ ಗಾಢ ಪ್ರೇಮದಿಂದ ಅವನ ಸುಖಕ್ಕಾಗಿ ಸಂಪಾದಿಸಿದ ಯಾವುದೇ ವೈಭವವನ್ನು ಲೆಕ್ಕಿಸದೆ, ತನ್ನ ತಾಯಿಯನ್ನು ಮನಸ್ಸಿನಿಂದ ಹೊರಹಾಕಿ ಎಲ್ಲರೂ ಎಲ್ಲ ಕಾಲಕ್ಕೂ ಹೊಗಳುವ ನಡತೆಯನ್ನು ಅನುಸರಿಸುತ್ತಿರುವ ಭರತನು ಅದೆಷ್ಟು ಧನ್ಯ!" ಎಂದು ಸಂಕಟದಿಂದ ಹೇಳಿದ. ಅವನ ದುಃಖವನ್ನು ಕಂಡು ಲಕ್ಷ್ಮಣನು, "ದೇವಾ, ಕೈಕೇಯಿಯ ಗುಣಗಳನ್ನು ನೆನೆಸಿಕೊಂಡರೇನು ಪ್ರಯೋಜನ? ಅಮೃತದಂತಹ ಸವಿನುಡಿಯನ್ನಾಡುತ್ತ ಸಾಧುಜನವು ಮೆಚ್ಚುವ ನಡತೆಯಿಂದ ಕೂಡಿ ಜಗತ್ತನ್ನೇ ಸಂತಸಗೊಳಿಸುತ್ತಿದ್ದ ಮನ್ಮಥಸಮರೂಪನಾದ ಮಹಾರಾಜನನ್ನು ನನ್ನ ಮನಸ್ಸು ನೆನೆಸಿಕೊಳ್ಳುತ್ತಿದೆ. ಪರಮ ಧಾರ್ಮಿಕಶಿಖಾಮಣಿಯಾದ ಭರತ, ಅವನ ಸೇವೆ ಮಾಡುತ್ತಿರುವ ಶತ್ರುಘ್ನ – ಇಬ್ಬರೂ ರತ್ನಪೀಠದಲ್ಲಿ ಶೋಭಿಸುವ ನಿನ್ನ ಮೂರ್ತಿಯನ್ನು ಪೂಜಿಸುವ ಪರಿಯನ್ನು ನೋಡಬೇಕೆಂಬ ಹಂಬಲ ನನ್ನದು, ಇದು ಯಾವಾಗ ನೆರವೇರುತ್ತದೆಯೋ" ಎಂದು ನುಡಿದ. ಹೀಗೆ ಶ್ರೀರಾಮಲಕ್ಷ್ಮಣರು ಮತ್ತೆ ಮತ್ತೆ ಭರತನನ್ನು ನೆನೆಸಿಕೊಳ್ಳುತ್ತ, ಅವನ ಗುಣಗಾನ ಮಾಡುತ್ತಿದ್ದರು.

ಹೀಗಿರಲು, ಒಂದು ದಿನ ಆ ಮಹಾರಣ್ಯದಲ್ಲಿ ಮಂದಾಕಿನೀ ನದಿಯ ತೀರದಲ್ಲಿ ರಾವಣನ ತಂಗಿಯು ಸ್ವೇಚ್ಛೆಯಿಂದ ತಿರುಗಾಡುತ್ತ ಬಂದಳು. ಆಶ್ರಮದಲ್ಲಿ ಹೆಂಡತಿ ಮತ್ತು ತಮ್ಮನ ಸೇವೆಯನ್ನು ಪಡೆಯುತ್ತ ಸೋಮ ನಳಕೂಬರ ಜಯಂತ ಮುಂತಾದವರೊಡನೆ ಕುಳಿತಿದ್ದ ರಾಮನು ಕಣ್ಣಿಗೆ ಬಿದ್ದ. ನಗೆಮುಖ, ಸುಂದರ ದಂತಪಂಕ್ತಿ, ತಾವರೆಯ ಎಸಳಿನಂತಹ ವಿಶಾಲವಾದ ಕಣ್ಣುಗಳು, ಹೊಸಜವ್ವನದ ಕಾಂತಿ ನೀಳವಾದ ತೋಳುಗಳು,

ಮದಗಜದಂತೆ ನಡಿಗೆ, ಸಿಂಹದರಂತೆ ಸಪೂರವಾದ ಹೊಟ್ಟೆ, ಜಟಾಮಂಡಲಗಳಿಂದ ಕೂಡಿದ ಸುಕುಮಾರ ರೂಪಿನ ಸಾಕ್ಷಾತ್ ಮದನಮೋಹನನಂತೆ ಲಕ್ಷಣವಂತನೂ ಸುಗುಣವಂತನೂ ಆದ ರಾಮನನ್ನು ದೂರದಿಂದ ನೋಡಿದ ಅವಳಿಗೆ ಆಶ್ಚರ್ಯವಾಯಿತು. ಆ ಕ್ಷಣವೇ ಅವಳ ಹೃದಯದಲ್ಲಿ ಮನ್ಮಥನ ಬಾಣಗಳು ಆಳವಾಗಿ ನಾಟಿಕೊಂಡವು; ಅವಳು ಮನ್ಮಥಬಾಧೆಯಿಂದ ಮೈಮರೆತು ನೆಲಕ್ಕುರುಳಿದಳು. ಕೊಂಚ ಹೊತ್ತಿನಲ್ಲಿಯೇ ಮೈತಿಳಿದೆದ್ದು ಸುತ್ತಮುತ್ತಲೂ ನೋಡಿ ಉನ್ಮತ್ತಳಾಗಿ ಕಾತರದಿಂದ ಕಳವಳಿಸುತ್ತ ತಲೆತಗ್ಗಿಸಿಕೊಂಡು ಏನೇನೋ ಆಲೋಚನೆಗಳನ್ನು ಮಾಡುತ್ತ ಬಂದಳು. ಅಷ್ಟರಲ್ಲಿ ಒಂದಷ್ಟು ಧೈರ್ಯವನ್ನು ತಂದುಕೊಂಡು ಆ ದುರ್ಬುದ್ಧಿಯವಳು ಮತ್ತೊಂದನ್ನು ಯೋಚಿಸಿದಳು: ಗೋದಾವರೀ ತೀರದ ಆ ಕಾಡಿನೆಡೆಯಲ್ಲಿದ್ದ ಆ ಮಹಾಪುರುಷನ ಚೆಲುವಿಗೆ ಮನಸೋತು ಹೇಗಾದರೂ ಈತನನ್ನು ಕೂಡಿದಲ್ಲದೆ ಇರೆನು ಎಂದು ನಿಶ್ಚೈಸಿಕೊಂಡಳು. ಆ ಕ್ಷಣವೇ ತನ್ನ ಭಯಂಕರವಾದ ರಾಕ್ಷಸರೂಪವನ್ನು ಬಿಟ್ಟು ನೋಡಿದವರು ವಿಸ್ಮಿತರಾಗುವಂತಹ ಮನುಷ್ಯಾಕಾರವನ್ನು ತಾಳಿದಳು. ನೋಟದಲ್ಲಿ ಮದಾಲಸೆಯ ಹುಬ್ಬುಗಳ ಕುಣಿಸಾಟ, ಎಳೆಗೆಂಪು ಮೈಬಣ್ಣ, ಚಂದ್ರನಂತಹ ಮುಖ, ಮೋಹಕ ನಡಿಗೆ, ಬಾಳೆಯ ಕಂಬದಂತಹ ತೊಡೆಗಳು, ಸಮ್ಮೋಹಕವಾದ ಕುಡಿನೋಟ, ಊರ್ವಶಿಯ ಪ್ರಣಯಲಾಲಸೆ, ಮೇನಕೆಯ ವಶೀಕರಣದ ಒಯ್ಯಾರ, ಅಪ್ಸರೆಯರ ಕುಶಲರೂಪವನ್ನು ಅರೆನಿಮಿಷದಲ್ಲಿ ಪಡೆದಳು. ಸುಂದರವಾದ ಹಲ್ಲುಸಾಲು, ತಾವರೆಗಣ್ಣು, ಕನ್ನಡಿಯಂತಹ ಕೆನ್ನೆಗಳು, ಚಂದ್ರನ ಬಣ್ಣದ ಹಣೆ, ಹುಬ್ಬಿನ ಬೆಡಗು, ಸುಕಟಾಕ್ಷಗಳ ಕಣ್ಣು, ಸುಭಗವಾದ ಕಿವಿಗಳು, ಬಳ್ಳಿಯಂತೆ ಬಳುಕುವ ತೋಳುಗಳು, ಸುರುಳಿಗುರುಳು, ಹೊನ್ನ ಕಲಶದಂತಹ ಕುಚಯುಗ, ಬಡನಡು, ಸಿಂಹದ ಸೊಂಟ, ತೋರ ಜಘನಗಳು, ಮದಗಜಗಮನ – ಇವುಗಳಿಂದ ಕೂಡಿ ಚೆಲುವೆಯ ರೂಪವನ್ನಾಂತಳು. ಅವಳನ್ನು ನೋಡಿದರೆ ಮದನಮೋಹನಕಣಿಯೋ, ಮನ್ಮಥನ ಚೂಪು ಬಾಣಗಳೋ, ಚಂದ್ರನ ಮನಃಪ್ರಿಯೆಯಾದ ರೋಹಿಣಿಯೋ, ಭೂಲೋಕವನ್ನು ನೋಡಲೆಂದು ಬಂದ ಶಚೀದೇವಿಯೋ ಎಂಬಂತೆ – ಆ ಹೆಣ್ಣಿನ ರೂಪವು ಅದೃಷ್ಟದಿಂದ ಪಡೆದಿರಬೇಕು – ಎನ್ನಿಸುವಂತಿತ್ತು. ಹೀಗೆ ಸೌಂದರ್ಯದಿಂದ ಕೂಡಿದ ಶೂರ್ಪನಖಿಯು ಶ್ರೀರಾಮಪುರದರಸನನ್ನು ವಶವರ್ತಿಯನ್ನಾಗಿಸಿಕೊಳ್ಳುವೆನೆಂಬ ಆತ್ಮವಿಶ್ವಾಸದಿಂದ ಪರಿಪರಿಯ ಮಾಯಾವಿದ್ಯೆಗಳನ್ನು ಆಲೋಚಿಸಿದಳು.

೯. ಶೂರ್ಪನಖಿಯ ಉಪಟಳದಿಂದ ಬೇಸತ್ತ ಲಕ್ಷ್ಮಣನು ಅವಳ ಕಿವಿಮೂಗುಗಳನ್ನು ಕತ್ತರಿಸಿದುದು

ಹೆಣ್ಣುಗಳ ಶಿರೋರತ್ನವೇ ಕೇಳು, ಅರೆನಿಮಿಷ ಕಣ್ಣುಗಳನ್ನು ಮುಚ್ಚಿಕೊಂಡು ಧ್ಯಾನಿಸಿದಾಗ ಶೃಂಗಾರಮೂಲವಾದ ಮದನನು ವಸಂತ ಚಂದಿರ ಮಂದಮಾರುತ ಶೃಂಗಾರಮಯವಾದ ಗಿಳಿ ಕೋಗಿಲೆ ಹಂಸ ನವಿಲು ದುಂಬಿವಿಂಡು ಸೇರಿ ಕ್ಷಣಾರ್ಧದಲ್ಲಿ ಇಡೀ ಲೋಕವನ್ನು ಮೋಹಿಸುವಂತೆ ಸುಂದರಿಯು ತನ್ನ ಮಾಯಾವಿಲಾಸದಿಂದ

ಮಾಡಿಬಿಟ್ಟಳು. ಕೋಗಿಲೆಗಳು ಅದ್ಭುತವಾಗಿ ಇಂಚರದಿಂದ ಕೂಜಿಸಲು, ಅದನ್ನು ಅನುಸರಿಸಿ ಅರಗಿಳಿಗಳು ಸೇರಿ ಮನ್ಮಥನ ಆಗಮನವನ್ನು ಸಾರುತ್ತಿರಲು, ಚದುರಿನಿಂದ ಹಂಸಗಳು ನಡೆಯುತ್ತಿರಲು, ದುಂಬಿಗಳು ಅದಕ್ಕನುಗುಣವಾಗಿ ಶ್ರುತಿಯನ್ನು ಹೆಚ್ಚಿಸಿ ಝೇಂಕರಿಸುತ್ತಿರಲು, ಕಾಮನ ಆಜ್ಞೆಯಿಂದ ಎಲ್ಲ ಜೀವಜಾತಗಳೂ ಒಂದಾಗಿ ಬರುತ್ತಿದ್ದವೆಂದ ಮೇಲೆ ಜನರ ವಿಷಯವನ್ನೇನು ಹೇಳುವುದು? ಸುಂದರಿ ಶೂರ್ಪನಖಿಯ ಮೆಲುನಡೆಯನ್ನು ನೋಡಿ ಅರಗಿಳಿಗಳು ನಾಚಿಕೊಂಡವು, ಅವಳ ನುಣ್ದೊಡೆಗಳನ್ನು ನೋಡಿ ಬಾಳೆಯ ಗಿಡಗಳು ತಲೆತಬಗ್ಗಿಸಿ ಬಳುಕಾಡಿದುವು, ಅವಳ ದೇಹದ ಕಂಪಿನ ಮಕರಂದದಿಂದ ಆನಂದಗೊಂಡ ಭೃಂಗಗಳು ಗುಂಪಾಗಿ ಗುಂಯ್‌ಗುಡತೊಡಗಿದುವು, ಅವಳ ಕುಡಿನೋಟದ ಕಾಂತಿಗೆ ದಿಕ್ಕುದೆಸೆಗಳೆಲ್ಲ ಬೆಳಕಿನಿಂದ ಕೂಡಿದವು, ಹೀಗೆ ಮನ್ಮಥನ ಮದದಾನೆಯೆಂಬಂತೆ ಆ ಖಳಯುವತಿಯು ಜಗನ್ಮೋಹಿನಿಯಂತೆ ಮಾಯೆಯನ್ನು ಹೊದ್ದು ನಡೆದಳು. ತನ್ನ ಕಡೆಗಣ್ಣ ನೋಟದ ಪ್ರಭಾವದಿಂದ ಸಂಭ್ರಮಿತವಾದಂತೆ ಎಲ್ಲ ಪ್ರಾಣಿಗಳು ಅವಳನ್ನು ಹಿಂಬಾಲಿಸಿದವು, ತಮ್ಮ ವಿವೇಚನೆಯನ್ನು ಬಿಟ್ಟು ಅವಳಿಂದ ಮರುಳುಗೊಂಡು ಮರಳದೆ ಇದ್ದವು, ಅವಳ ದೇಹಪರಿಮಳವನ್ನು ಹೀರಲು ಬಂದ ದುಂಬಿಗಳ ಗಾನಕ್ಕನುಗುಣವಾಗಿ ನವಿಲುಗಳು ನೃತ್ಯಗೈಯುತ್ತಿದ್ದವು – ಹೀಗೆ ಅವಳ ಜಗನ್ಮೋಹನ ರೂಪದ ಪರಿಯನ್ನೇನೆಂದು ಬಣ್ಣಿಸುವುದು! ಹಲವು ಮಾತುಗಳಿಂದೇನು ಪ್ರಯೋಜನ, ಶೃಂಗಾರವೇ ಹೆಣ್ಣಿನ ಆಕಾರವನ್ನು ತಳೆದು ಬಂದಂತೆ ಭೂಮಂಡಲದ ಪ್ರಾಣಿಗಳನ್ನೆಲ್ಲ ಮೋಹಪರವಶಗೊಳಿಸುತ್ತ, ಮುನಿತಿಲಕರೆಲ್ಲ ಆಶ್ಚರ್ಯಗೊಂಡು ಕಳೆಗುಂದಿ ನೋಡುವಂತೆ ಮಾಡುತ್ತ, ರಾಮನ ಆಶ್ರಮದ ಕಡೆ ಒಯ್ಯಾರದಿಂದ ಬರುತ್ತಿದ್ದಳು. ತಿಲಕವನ್ನು ಅರಳಿಸುತ್ತ, ಕುರಕವನ್ನು ಚಿಗುರಿಸುತ್ತ, ತಾವರೆಗಳಿಗೆ ಮುತ್ತನಿಕ್ಕುತ್ತ, ಅಶೋಕವನ್ನು ಸಿಂಗರಿಸುತ್ತ, ಮರಗಳಲ್ಲಿ ಹಣ್ಣುಗಳನ್ನು ತುಂಬಿಸುತ್ತ, ಎಳೆಯ ಬಳ್ಳಿಗಳು ಸಮೃದ್ಧವಾಗಿ ಕುಡಿಯಿಡುವಂತೆಯೂ, ದುಂಬಿಗಳು ಹಾಡುವಂತೆಯೂ, ಮಲ್ಲಿಗೆಯು ಸುವಾಸನೆಯನ್ನು ಬೀರುವಂತೆಯೂ, ಗಿಳಿಗಳು ಮಾತನಾಡುವಂತೆಯೂ ಮಾಡುತ್ತ, ಜಿತೇಂದ್ರಿಯರ ಧೃಢತೆಯನ್ನು ಕುಗ್ಗಿಸಿ ಕಳವಳಗೊಳಿಸುತ್ತ ಶೂರ್ಪನಖಿಯು ಮೋಹಕ ನಡಿಗೆಯಿಂದ ಬರುತ್ತಿದ್ದಳು. ಹೂಬಾಣಗಳು ಹಸ್ತಲಾಘವ ಮಾಡುತ್ತಿದ್ದವು, ಮುದ್ದು ಹಂಸಗಳು ಒಲೆಪಿನಿಂದ ಎಚ್ಚರಿಸುತ್ತಿದ್ದವು, ಅರಗಿಳಿಗಳು ಹೊಗಳುತ್ತಿದ್ದವು, ಮಧುರಕಂಠದಿಂದ ದುಂಬಿಗಳು ಜಯಕಾರ ಮಾಡುತ್ತಿದ್ದವು, ಮಲಯಮಾರುತ, ಚಂದ್ರ, ವಸಂತರು ಈ ವೈಯಾರಿಯ ಕೀರ್ತಿಯನ್ನು ಉದ್ಘೋಷಿಸುತ್ತಿರಲು ಆ ಸುಂದರಿ ಶೂರ್ಪನಖಿಯು ಕಲ್ಲುಮರಗಳನ್ನೂ ಮರುಳುಗೊಳಿಸುವ ರೀತಿಯಲ್ಲಿ ಆಶ್ರಮದ ಕಡೆ ಬಂದಳು.

ಹೀಗೆ, ಈಕೆ ಶಿವನ ತಪಸ್ಸಿಗೆ ಅಡ್ಡಿಯನ್ನುಂಟುಮಾಡಲು ಬಂದ ಚೆಲುವಿನ ಸುರಕನ್ನಿಕೆಯರ ಸಾಮ್ರಾಜ್ಞಿಯೋ ಎಂಬಂತೆ, ಎಣೆಯಿಲ್ಲದ ಆನಂದವು ನಿಷ್ಕಾಮಿಯೂ ನಿರ್ಮಾಯನೂ ಆದವನನ್ನು ಮಾಯೆಯಿಂದ ಮೋಹಿಸಲು ನಾನಾ ಪರಿಯ ಮೋಹಕ ವೇಷವನ್ನು ಧರಿಸಿ ಸರಸವಾದ ಮಾತುಗಳನ್ನಾಡುತ್ತ ರಘುರಾಜೇಂದ್ರನು ಇರುವೆಡೆಗೆ ಅರಗಿಳಿಯ ನುಡಿಗಳಿಂದ ಸೆಳೆಯಲು ಬಂದಳು. ಇವಳನ್ನು ನೋಡಿದ ಜಾನಕಿದೇವಿಯ

ಮನಸ್ಸು ಧಸಕ್ಕೆಂದಿತು, ಆ ಅಸುರೆಯ ಲಾವಣ್ಯಕ್ಕೂ ಬೆಡಗಿಗೂ ಬೆರಗುಗೊಂಡು ಅಳುಕಿದಳು. ಇವಳ ಗಾಡಿಕಾತಿಗೆ ಯಾರು ತಾನೇ ಸೋಲುವುದಿಲ್ಲ, ಎಲ್ಲಾದರೂ ಬೆಂಕಿಗೆ ಬೆಣ್ಣೆ ಕರಗದಿದ್ದೀತೇ? ರಘುನಾಥನಿಗೆ ನಾನು ಬೇಡ ಅನ್ನಿಸಿಬಿಟ್ಟರೆ ಮುಂದೆ ನನ್ನ ಗತಿಯೇನು ಎಂದು ತಲ್ಲಣಿಸಿದಳು!

ಶ್ರೀರಾಮನ ಬಳಿ ಬಂದ ರಕ್ಕಸಸುಂದರಿಯು ಅವನನ್ನು ಕುರಿತು, "ಈ ಕಾಡಿಗೆ ನೀನು ಎಲ್ಲಿಂದ ಬಂದೆ? ಯಾವ ದೇಶದ ಒಡೆಯ ನೀನು? ಇಲ್ಲಿಗೆ ಬರಲು ಕಾರಣವಾದರೂ ಏನು? ಈ ಬರವಿನಿಂದ ಈ ಪ್ರದೇಶಕ್ಕೆ ನಿನ್ನ ಸಿರಿಮೊಗವನ್ನು ಕಾಣುವ ಸೌಭಾಗ್ಯವುಂಟಾಯಿತು! ನಿನ್ನನ್ನು ನೋಡಿದರೆ ಚಕ್ರವರ್ತಿಯ ಲಕ್ಷಣಗಳು ಎದ್ದು ಕಾಣುತ್ತಿವೆ, ಕೈಯಲ್ಲಿ ಬಿಲ್ಲುಬಾಣಗಳು ಕಂಗೊಳಿಸುತ್ತಿವೆ; ಇಂತಹ ನಿನಗೆ ಈ ಮುನಿವೇಷವು ಪ್ರಾಪ್ತವಾದ ಬಗೆಯಾದರೂ ಯಾವುದು? ನವಮೋಹನಾಕಾರನೇ, ದಯವಿಟ್ಟು ಈ ವಿಚಾರಗಳನ್ನೆಲ್ಲ ನನಗೆ ಹೇಳು. ಸತ್ಯಲೋಕದವರು ಮನುಷ್ಯಾಕೃತಿಯನ್ನು ತಾಳಿ ನೆಲಕ್ಕೆ ಬಂದಿರುವೆಯೋ, ದೇವೇಂದ್ರನು ಮಗನೊಡನೆ ಈ ಭೂಲೋಕವನ್ನು ನೋಡಲೆಂದು ಬಂದಿರುವನೋ, ಅಥವಾ ಸೂರ್ಯಚಂದ್ರರು ಸೌಮ್ಯ ರೂಪವನ್ನು ಧರಿಸಿ ಭೂಮಿಗೆ ಇಳಿದು ಬಂದಿರುವರೋ, ಇಲ್ಲವೇ ರಾಜಕುಲದಲ್ಲಿ ಹುಟ್ಟಿ ಶತ್ರುನಿಗ್ರಹದ ಕಾರಣದಿಂದ ಜಗನ್ಮೋಹನಾಕಾರವನ್ನು ಹೊತ್ತು ಬಂದಿರುವೆಯೋ? ಇದು ಮಹಾ ಭಯಂಕರರಾದ ಖರದೂಷಣ ಮುಂತಾದ ರಾಕ್ಷಸರ ಗುಂಪು ಇರುವ ತಾಣ; ಈ ದಟ್ಟವಾದ ಕಾಡಿನಲ್ಲಿ ದೇವದಾನವರುಗಳು ಓಡಾಡುವಾಗ ದಿಕ್ಕುತಪ್ಪುತ್ತಾರೆ, ಅಂಥದ್ದರಲ್ಲಿ ನೀನು ಬಂದುದಾದರೂ ಹೇಗೆ? ಎಂತಹ ಬಲಯುತರಾದರೂ ಈ ಅರಣ್ಯವನ್ನು ಹೊಕ್ಕು ಹೊರಹೋಗುವವರುಂಟೇ?" ಎಂದು ವಯ್ಯಾರ ಮಾಡುತ್ತ ಕೇಳಿದಳು. ಕೊನೆಗೆ, "ನಿನ್ನ ಬರವು ಅದ್ಭುತವಾಗಿದೆ, ಮುನಿವೇಷ ಹೊತ್ತ ನಿನ್ನ ಜೊತೆ ಈ ಹೆಣ್ಣು ಬೇರೆ ಇದ್ದಾಳೆ. ಇದಕ್ಕೇನು ಕಾರಣ? ನಿನ್ನ ಚೆಲುವನ್ನು ನೋಡಿ ಬಲುತರವಾದ ಅಪೇಕ್ಷೆಯಿಂದ, ಮನ್ಮಥನ ಹಲವು ವಿಧವಾದ ಬಾಣಗಳಿಗೆ ಈಡಾಗಿ ಮೊರೆವೊಕ್ಕಿದ್ದೇನೆ. ರಸಿಕರ ದೊರೆಯೇ, ನನ್ನನ್ನು ಹೆಂಡತಿಯಾಗಿ ಸ್ವೀಕರಿಸಿ ಈ ನನ್ನ ಸ್ಮರತಾಪವನ್ನು ಸುಲಭವಾಗಿಸು. ಪ್ರೀತಿಯಿಂದ ನಿಮ್ಮ ಕುಲ ನೆಲಗಳನ್ನು ತಿಳಿಸಿ ನನ್ನನ್ನು ಧನ್ಯಳನ್ನಾಗಿಸು" ಎಂದು ದೀನಳಾಗಿ ಬೇಡಿಕೊಂಡಳು.

ಈ ಮಾತುಗಳನ್ನು ಕೇಳಿದ ರಾಘವನು ನಸುನಗುತ್ತ ಅವಳ ಮುಖವನ್ನೇ ನೋಡುತ್ತ, "ಇಂದ್ರನ ಗೆಳೆಯ ಸೂರ್ಯವಂಶರತ್ನ ದಶರಥನ ಮಗನಾದ ನಾನು ಶ್ರೀರಾಮಚಂದ್ರ ಎಂಬ ಹೆಸರಿನವನು, ಅಗೋ ಅಲ್ಲಿ ನಿಂತಿರುವನಲ್ಲ, ಅವನು ನನ್ನ ತಮ್ಮ ಲಕ್ಷ್ಮಣ ಎಂಬ ಹೆಸರಿನವನು, ಇಲ್ಲಿರುವವಳು ನನ್ನ ಹೆಂಡತಿ, ಜನಕನ ಮಗಳಾದ ಜಾನಕಿ. ಪರಮ ಧರ್ಮಿಷ್ಠನಾದ ತಂದೆಯ ಅಪ್ಪಣೆಯಂತೆ ನಾವು ಕಾಡಿಗೆ ಬಂದಿದ್ದೇವೆ. ಕ್ಷತ್ರಿಯರಾದ ನಾವು ಎಂದಿಗೂ ಸುಳ್ಳು ನುಡಿಯುವವರಲ್ಲ; ನನ್ನ ಮಾತುಗಳು ಸತ್ಯ. ತಂದೆಯ ಆಜ್ಞೆಯನ್ನು ಈಡೇರಿಸಲು ಲಕ್ಷ್ಮಣ ಸೀತೆಯರ ಜೊತೆಯಲ್ಲಿ ಕಾಡಿಗೆ ಬಂದ ನಾವು ಸ್ವಲ್ಪ ಕಾಲ ಚಿತ್ರಕೂಟದಲ್ಲಿದ್ದೆವು. ಅಲ್ಲಿ ಮಹಾಮುನಿಗಳಾದ ಅಗಸ್ತ್ಯರು ಸೂಚಿಸಿದಂತೆ ಗೋದಾವರೀ ನದೀ ತಟದಲ್ಲಿ ವಾಸಿಸುತ್ತಿದ್ದೇವೆ. ಅದು ಸರಿ, ಅತಿ ಕೋಮಲಾಂಗಿಯೂ

ಸೌಂದರ್ಯವತಿಯೂ ಕಲಹಂಸಗತಿ ಚತುರಮತಿ ರತಿ ಸುಕುಮಾರಿಯಾದ ನೀನು ಈ ಅತಿಶಯವಾದ ರೂಪನ್ನು ಪಡೆದು ಕ್ರೂರಮೃಗಗಳ ತವರಾದ ಈ ಅರಣ್ಯದಲ್ಲೇಕೆ ಸಂಚರಿಸುತ್ತಿರುವೆ? ಹಸಿವು ನೀರಡಿಕೆ ಬಿಸಿಲುಗಳ ಉಪಟಳಗಳನ್ನು ಸಹಿಸಿಕೊಂಡು ನಸುನಗುತ್ತ ಬಂದಿದ್ದೀಯೆ, ನಿನ್ನ ವೃತ್ತಾಂತವನ್ನು ಒಂದಿಷ್ಟೂ ಮರೆಮಾಚದೆ ವಿವರವಾಗಿ ತಿಳಿಸು, ಸುಳ್ಳು ಹೇಳದೆ ಇದ್ದುದನ್ನು ಇದ್ದಂತೆ ಹೇಳು" ಎಂದು ನುಡಿದ. ಕುಸುಮಶರನ ಉರುಬೆಯಿಂದ ಕಂಗೆಟ್ಟಿದ್ದ ಆ ಕಾಂತೆಯು ಕಾತರದಿಂದಾಗಿ ಏನೇನನ್ನೋ ಕಲ್ಪಿಸಿ ಹೇಳುವುದನ್ನು ಬಿಟ್ಟು ತನ್ನ ನಿಜವೃತ್ತಾಂತವನ್ನು ತಿಳಿಸಲು ಸನ್ನದ್ಧಳಾದಳು: "ಹರಸಖಾನುಜನೂ ಬ್ರಹ್ಮರ್ಷಿಯ ಮಗನೂ ದೇವೇಂದ್ರ ಮುಂತಾದವರನ್ನು ಗೆದ್ದವನೂ ಅಪಾರ ಸಂಪತ್ತು ವೀರ್ಯಗಳನ್ನು ಹೊಂದಿದವನೂ ಆದವನು ದಶಶಿರ; ಅವನ ತಮ್ಮಂದಿರು ಅಗಾಧ ನಿದ್ರಾಮುದ್ರಿತನಾದ ಕುಂಭಕರ್ಣ ಮತ್ತು ಪರಮಧಾರ್ಮಿಕನಾದ ವಿಭೀಷಣರು; ಅಲ್ಲದೆ ಖರದೂಷಣರು ಎಂಬ ಮಲತಮ್ಮರೂ ರಾವಣನಿಗಿದ್ದಾರೆ, ಅವರೂ ಹರಿಯಕ್ಷವಿಕ್ರಮರು, ಅವರ ತಂಗಿ ನಾನು; ನನ್ನನ್ನು ಅರಗಿಳಿಯಂತೆ ಈ ಅರಿವಿದೂಷಣರು ಪರಮಪ್ರೀತಿಯಿಂದ ಸಲಹಿದರು, ನನ್ನ ಇಚ್ಛೆಗನುಸಾರವಾಗಿ ಇರಲು ಅವಕಾಶವಿತ್ತರು. ಹೀಗಾಗಿ ನಾನು ಈ ಜನಸ್ಥಾನವಾದ ಕಾಡಿನಲ್ಲಿ ಮನಬಂದಂತೆ ಓಡಾಡುತ್ತೇನೆ, ಅಂಗಜಪ್ರೇರಣೆಯಿಂದ ಈಗ ನಾನು ಅಸುರರಲ್ಲಿ ನನಗೆ ಇಷ್ಟವಾಗುವ ಯಾರನ್ನೂ ಕಾಣದೆ ಒಲಿಸಿಕೊಳ್ಳಲು ಪುರುಷರನ್ನು ಹುಡುಕುತ್ತಿದ್ದೇನೆ. ಎಷ್ಟೋ ಕಾಲದ ಬಳಿಕ ನನ್ನ ಮನೋರಥದ ಬಳ್ಳಿಯು ಹಬ್ಬಿ ಸತ್ಫಲವನ್ನು ನೀಡಿದಂತೆ, ನನ್ನ ಪುಣ್ಯದ ಬಲದಿಂದ, ಚೆಲುವರಲ್ಲಿ ಚೆಲುವನಾದ, ನಿಪುಣರಲ್ಲಿ ನಿಪುಣನಾದ ನೀನು ಕಾಣಿಸಿದೆ. ನನ್ನನ್ನು ಪ್ರೀತಿಯಿಂದ ಕೈಹಿಡಿದು ವೈಭವಯುತವಾದ ಗಿರಿತಪ್ಪಲುಗಳಲ್ಲಿನ ಶೃಂಗಾರಮಯವಾದ ಕಾಡುಗಳಲ್ಲಿ ಅಲೆಯುತ್ತ ಸುಖವಾಗಿ ಪ್ರಣಯನಿರತನಾಗಬಹುದು, ಸುರಲೋಕಸುಖಕ್ಕಿಂತ ಮಿಗಿಲಾದ ಪ್ರೀತಿಯಿಂದ ಕ್ರೀಡಿಸಬಹುದು. ನನ್ನ ಅರಸ, ನಿನಗೆ ಬೇಕಾದ್ದನ್ನು ಒಲುಮೆಯಿಂದ ಕೊಡುತ್ತೇನೆ, ನಿನಗೆ ಇಷ್ಟವಾದ ರೀತಿಯಲ್ಲಿ ಭೋಗವನ್ನು ನೀಡುತ್ತೇನೆ, ತ್ರಿಭುವನೋನ್ನತಶೌರ್ಯ ಸಾಹಸಿಕರ ನೆರವಿನಿಂದ ಮೂರು ಲೋಕಗಳನ್ನೂ ನಿನ್ನ ಕೈವಶಮಾಡುತ್ತೇನೆ; ಈ ಮನುಜಹುಳವು ನಿನಗೆ ತಕ್ಕವಳಲ್ಲ, ಅವಳನ್ನು ಬಿಟ್ಟು ನನ್ನನ್ನು ವರಿಸು, ನಿನ್ನ ಮನದಿಚ್ಛೆಯಂತೆ ನಾನು ಅಲಂಕರಿಸಿಕೊಂಡು ನೀನು ಹೇಳಿದಂತೆ ಮಾನಸೋಲ್ಲಾಸಕರವಾಗಿ ನಡೆದುಕೊಳ್ಳುತ್ತೇನೆ."

ಹೀಗೆ ದಾನವಿಯು ನಾನಾ ಬಗೆಯಲ್ಲಿ ಸರಸಭರಿತ ಮೃದುನುಡಿಗಳಿಂದಲೂ ದೈನ್ಯದಿಂದಲೂ ಕರುಣೆ ಹುಟ್ಟುವಂತೆ ಕೇಳಿಕೊಂಡದ್ದಲ್ಲದೆ, ಕಾಮನ ಉರುಬೆಯು ಹೃದಯದಲ್ಲಿ ತುಂಬಿಕೊಂಡು ಅವಳು ನಿಜವನ್ನೇ ಹೇಳುವಂತೆ ಮಾಡಿತ್ತು. ಅವಳ ವಿಷಯವನ್ನು ತಿಳಿದ ರಾಮನು ನಗೆಯನ್ನು ಸೂಸುತ್ತ ನಯವಾದ ರೀತಿಯಲ್ಲಿ, "ಶೃಂಗಾರತರ ಸುಪ್ರಸನ್ನ ಸುಂದರಿಯೆ, ಪುರುಷರಲ್ಲಿ ನಿನಗೆ ಎಣೆಯಾದವರು ಯಾರಿದ್ದಾರೆ? ನಿನ್ನ ಮನಸ್ಸಿನ ಒಲವನ್ನು ಅರಿತು ವಿಭ್ರಮವಿಲಾಸಗಳಿಂದ ಸ್ವಚ್ಛಂದವಾಗಿ ನದೀನದಪರ್ವತಗಳೇ ಮುಂತಾದ ರಮ್ಯಸ್ಥಳಗಳಲ್ಲಿ ನಾನಾ ಬಗೆಯಲ್ಲಿ ಪ್ರಣಯದಾಟವನ್ನಾಡುತ್ತ ನಿನ್ನನ್ನು ರಂಜಿಸಬಲ್ಲ ಶೃಂಗಾರಭಾವಜ್ಞನಾದ ಚೆಲುವನು

ಸಿಕ್ಕಿದರೆ ನಿನ್ನ ಕಾಮತೀವ್ರತೆಯು ತಗ್ಗುತ್ತದೆಯೇ ಹೊರತು ಉಳಿದವರಿಂದ ನಿನ್ನನ್ನು ತೃಪ್ತಿಗೊಳಿಸಲು ಸಾಧ್ಯವೇ? ಸವತಿಯರಿದ್ದರಂತೂ ಹೆಣ್ಣುಗಳಿಗೆ ಸುಖಲೇಶವೂ ದೊರೆಯಲಾರದು; ಶೃಂಗಾರವನ್ನು ಬಯಸಿ ಹೋದರೆ ಅಂತಹ ಕಡೆ ವಿಕಾರಬೀಭತ್ಸಗಳು ದೊರಕುತ್ತವೆ, ಅಷ್ಟೆ. ನಾನು ಹೆಂಡತಿಯಿರುವವನು, ಅದರಿಂದ ನಿನ್ನ ಪ್ರಣಯಕ್ಕೆ ಊನ ಬರುವುದು ನಿಶ್ಚಿತ. ನಾನು ನಿನಗೆ ಅನುರೂಪನಾದ ಪುರುಷನನ್ನು ಸೂಚಿಸುತ್ತೇನೆ, ನಿನ್ನ ಬೇಟದಾಟಗಳೆಲ್ಲ ಅಲ್ಲಿ ಸಾರ್ಥಕವಾಗುತ್ತವೆ. ಜವ್ವನಿಗನೂ ನನಗಿಂತ ಚಿಕ್ಕವನೂ ರೂಪಯುತನೂ ಮೋಹನಮೂರ್ತಿಯೂ ಆದ ಒಬ್ಬನಿದ್ದಾನೆ, ಅವನು ನಿನ್ನ ಚಿತ್ತದ ತಾಪಗಳನ್ನೆಲ್ಲ ಹೋಗಲಾಡಿಸಬಲ್ಲ" ಎಂದು ನಗೆಚಾಟಿಕೆಯ ಮಾತುಗಳನ್ನಾಡಿ, ಲಕ್ಷ್ಮಣನ ಕಡೆ ಕೈತೋರಿಸಿದ.

ರಘುರಾಮನ ಮಾತುಗಳನ್ನು ನಿಜವೆಂದೇ ಭಾವಿಸಿದ ರಕ್ಕಸಸುಂದರಿಯು ಸೌಮಿತ್ರಿಯ ಹತ್ತಿರ ಬಂದಳು. "ನೀನು ಕಾಮಸಮಾನ, ನನಗೆ ಗಂಡನಾಗಿ ನನ್ನ ಕಾಮಬಾಧೆಯನ್ನು ಹೋಗಲಾಡಿಸು, ಚಂದ್ರ ವಸಂತ ಮುಂತಾದ ಭ್ರಾಮಕಗಳನ್ನು ಮೀರಿ ಸ್ವರ್ಗಸುಖಕ್ಕೆ ಇಮ್ಮಡಿಯಾದ ಭೋಗಗಳನ್ನು ನೀನೂ ಅನುಭವಿಸುತ್ತ ಸಂತೋಷದಿಂದಿರು. ಯವ್ವನದ ಸಮಯವು ಹೋಗಿ ಇಳಿವಯಸ್ಸು ಬಂದ ಮೇಲೆ ಏನು ಸುಖ ಕಾಣಬಲ್ಲೆ?" ಎಂದು ಆ ಅಸುರ ಕಾಮುಕಿಯು ಬೆಡಗುಬಿನ್ನಾಣಗಳಿಂದ ಆಡಿದ ಮಾತುಗಳನ್ನು ಕೇಳಿದ ಸುಮಿತ್ರಾನಂದನನು ನಗುತ್ತ, "ನಿನ್ನಂಥ ಸುಂದರಿಯು ಅತಿಶಯವಾದ ಯೌವನ ಸಂಪತ್ಸಮೃದ್ಧಿಗಳಿಂದ ಕೂಡಿದ ಪುರುಷನೊಡನೆ ಕೂಡಿದರೆ ನಿನ್ನ ಮನೋರಥವು ನೆರವೇರುತ್ತದೆ. ಯಾರೋ ಬೇರೊಬ್ಬನಿಗೆ ಸೇವಕನಾಗಿ ದುಡಿಯುವ ಪರತಂತ್ರ ವ್ಯಕ್ತಿಯ ಸಂಗವನ್ನು ಬಯಸಿ ಕಾಮಿನಿಯರು ಏನು ತಾನೇ ಸುಖವನ್ನು ಹೊಂದಬಲ್ಲರು? ಅಲ್ಲದೆ ದಾಸನ ಹೆಂಡತಿಯು ದಾಸೀಜನರ ಜೊತೆ ಒಡನಾಡಬೇಕು. ರಘುಕುಲಶ್ರೇಷ್ಠ ರಾಮನು ನನ್ನ ಯಜಮಾನ, ನಾನು ಅವನ ದಾಸ, ಇದನ್ನು ತಿಳಿದುಕೋ" ಎಂದು ನುಡಿದ. ಅವನ ಮಾತುಗಳನ್ನು ಕೇಳಿದ ಶೂರ್ಪನಖಿಯು ಕಾಮವಶಳಾಗಿ ಮುಂಗಾಣದೆ ಲಕ್ಷ್ಮಣನ ಮಾತುಗಳ ಇಂಗಿತವನ್ನರಿಯದೆ ಮತ್ತೆ ರಾಮನ ಬಳಿ ಬಂದು, "ಚಂದ್ರನಂತಹ ಮುಖದವನೇ, ಚತುರತೆಯ ಸದನನೇ, ಕೋಮಲಗಾತ್ರನೇ, ಅರಳಿದ ತಾವರೆಯೆಸಳಿನ ಕಣ್ಣುಗಳವನೇ, ಮಹಾಪ್ರಾಜ್ಞನಾದ ನೀನು ಮನ್ಮಥಸಾರ ಎಂದು ಭಾವಿಸಿ ನಿನ್ನನ್ನು ಮೋಹಿಸಿ ಬಂದೆ; ಆದರೆ ನನ್ನ ಮನಸ್ಸಿನ ಆಳವಾದ ಪ್ರೇಮವನ್ನು ಅರ್ಥಮಾಡಿಕೊಳ್ಳದೆ ನುಣ್ಣನೆಯ ಮಾತುಗಳಿಂದ ವಂಚಿಸುವುದು ಯಾವ ನಿಪುಣತೆ? ಅಯ್ಯಾ, ನೀನು ಈ ಹೆಂಗಸನ್ನೇ ನಚ್ಚಿಕೊಂಡು ನನ್ನನ್ನು ಮತ್ತೆ ಉಪೇಕ್ಷೆ ಮಾಡಿದರೆ ಅರೆನಿಮಿಷದಲ್ಲಿ ಲಕ್ಷ್ಮಣ ಸೀತೆಯರನ್ನು ತಿಂದುಬಿಡುತ್ತೇನೆ. ಆನಂತರ ನಿನ್ನನ್ನು ಸೇರಿ ಕಾಡುಮೇಡುಗಳಲ್ಲಿ ವಿಹರಿಸಿ ಸೌಖ್ಯತಾಣಗಳಲ್ಲಿ ಕಾಮಕಲೆಯಿಂದ ನಿನ್ನನ್ನು ಗೆಲ್ಲುತ್ತೇನೆ" ಎಂದು ಗರ್ಜಿಸಿದಳು. ಮೊದಲು ತೀಕ್ಷ್ಣವಾಗಿದ್ದ ಕಾಮಾಗ್ನಿಗೆ ಹಾಸ್ಯವು ಸೇರಿಕೊಂಡು ಆ ಬಳಿಕ ಕ್ರೋಧವು ಆವರಿಸಿ ಅರೆಕ್ಷಣದಲ್ಲಿ ಅವಳ ಕೂದಲು ಕೆದರಿ ಕಣ್ಣುಗಳಲ್ಲಿ ಕಿಡಿಗಳು ಉದುರತೊಡಗಿದವು. ನಡುಗುವ ಮೈ ಬಡಬಡಿಸುವ

ಬಾಯ್ಗಳಿಂದ ಕೂಡಿದ ಆ ರಕ್ಕಸಿಯು ಬಾಯ್ದೆರೆದುಕೊಂಡು ಬರುವ ಕದಬದವನ್ನು ನೋಡಿದ ಶ್ರೀರಾಮನು ಸೌಮಿತ್ರಿಗೆ ಸಮಯಾನುಸಾರಿಯಾದ ಒಂದು ಮಾತನ್ನು ಹೇಳಿದ: 'ಅಸಮಾನಭಾಷಣಮನರ್ಥಕ ಹೇತು' (ಸಮಾನರಲ್ಲದವರ ಜೊತೆಗಿನ ಮಾತು ಅನರ್ಥಕರವಾದದ್ದು) ಎಂದು ಹೇಳುವ ಪಂಡಿತರ ಮಾತು ನಿಜವಾಯಿತು. ಈ ಅಸುರೆಯನ್ನು ಬೇಗ ವಿರೂಪಗೊಳಿಸಿ ನಿಗ್ರಹಿಸದಿದ್ದರೆ ಅನಾಹುತವಾಗಿಬಿಡುತ್ತದೆ; ಅದರಿಂದ ಸೀತೆ ಭಯಗೊಳ್ಳುತ್ತಾಳೆ" ಎಂದು ಕೋಪಗೊಂಡು ಆಜ್ಞೆಯನ್ನಿತ್ತ. ಅಣ್ಣನ ಆಣತಿಯಂತೆ ಲಕ್ಷ್ಮಣನು ಸುಡುಕೋಪದಿಂದ ಅಸುರೆಯ ಮುಂದಲೆಯನ್ನು ಹಿಡಿದು ಜೋರಾಗಿ ಎಳೆದ; ಕಿಡಿಕಾರುತ್ತಿದ್ದ ಕತ್ತಿಯಿಂದ ಅವಳ ಮೂಗನ್ನು ಕೊಯ್ದು, ಅಷ್ಟಕ್ಕೇ ಬಿಡದೆ ಅವಳ ಎರಡೂ ಕಿವಿಗಳನ್ನು ಕತ್ತರಿಸಿ, ಕಾಲಿಂದ ಒದ್ದು ಓಡಿಸಿದ. ಆಗ ರಕ್ಕಸಿಯು ಘೋರವಾಗಿ ಶಬ್ದಮಾಡುತ್ತ ಅಳುತ್ತ ಆರ್ಭಟಿಸುತ್ತ ಅಲ್ಲೆಲ್ಲಿಯೂ ನಿಲ್ಲದೆ ನೆಲದ ಮೇಲೆ ರಕ್ತವನ್ನು ಸುರಿಸುತ್ತ ಓಡಿಹೋದಳು. 'ಕಾಮುಕತೆಯಿಂದ ಕಳವಳಿಸುವವರಿಗೆ ಜಗತ್ತಿನಲ್ಲಿ ಹೆಸರು ಉಳಿಯುತ್ತದೆಯೇ?' ಎಂಬ ಗಾದೆಮಾತನ್ನು ಜಗತ್ತಿಗೆ ಅರುಹುವ ಹಾಗೆ ಕಿವಿಮೂಗುಗಳನ್ನು ತರಿದು ಶೂರ್ಪನಖಿಯನ್ನು ಓಡಿಸಿ ಲಕ್ಷ್ಮಣನು ಸುಖವಾಗಿ ಶ್ರೀರಾಮಪುರದರಸನ ಪಾದಗಳ ಸೇವೆಯಲ್ಲಿ ನಿರತನಾಗಿ ಬೆಳಗುತ್ತಿದ್ದ.

೧೦. ಶ್ರೀರಾಮನಿಂದ ಹದಿನಾಲ್ಕು ಸಾವಿರ ರಕ್ಕಸರ ವಧೆ; ಕೋಪದಿಂದ ಖರ ರಾಮನ ಮೇಲೆ ಬಂದುದು

ಪರ್ವತರಾಜಪುತ್ರಿಯೇ ಕೇಳು, ಶೂರ್ಪನಖಿಯು ಜೋರಾಗಿ ಪ್ರಳಯಕಾಲದ ಮೇಘದಂತೆ ಗುಡುಗುಡಿಸುತ್ತ, ದಾರುಣಸ್ವರದಿಂದ ಕೂಗುತ್ತ, ದಾರಿಯುದ್ದಕ್ಕೂ ರಕ್ತವನ್ನು ಸುರಿಸುತ್ತ ಬರಲು ಕಾಡಿನ ಮಧ್ಯದ ಖಗಮೃಗಗಳು ಬೆದರಿದವು, ಸಿಂಹಶಾರ್ದೂಲಗಳು ಜೋರಾಗಿ ಚೀರಿದವು, ಮುನಿಜನರೆಲ್ಲ ತಲ್ಲಣದಿಂದ ನಡುಗಿದರು. ಕತ್ತರಿಸಿ ಬೇರ್ಪಡಿಸಿದ್ದ ಮೂಗು ಕಿವಿಗಳನ್ನು ಕೈಯಲ್ಲಿ ಹಿಡಿದುಕೊಂಡು ಮೃತ್ಯುದೇವತೆಯಂತೆ ಶೂರ್ಪನಖಿಯು ಖರನಿದ್ದ ಕಾಡಿಗೆ ಬಂದು ಅವನ ಮುಂದೆ ದೊಡ್ಡ ವಜ್ರಾಯುಧವು ಬೀಳುವ ಹಾಗೆ ಬಿದ್ದಳು. ಬಿರುನುಡಿಗಳಿಂದ ಬೈಯುತ್ತ, ಕೋಪದಿಂದ ಕಣ್ಣುಗಳು ಬೆಂಕಿಯುಗುಳುತ್ತಿರಲು, ಅರಣ್ಯದ ಪ್ರಾಣಿಗಳೆಲ್ಲ ಕಳವಳದಿಂದ ನಡುಗುವಂತೆ, ಸುರಿಯುವ ರಕ್ತಧಾರೆಯೊಡನೆ ನೆಲದಲ್ಲಿ ಹೊರಳಾಡಿದಳು. ಹೀಗೆ ಅಮಿತ ಶೋಕಸಾಗರದಿಂದ ಕೂಡಿರುವ ತನ್ನ ತಂಗಿಯನ್ನು ನೋಡಿದ ಖರನಿಗೆ ಕೋಪ ಉಕ್ಕಿ ಮೃದುನುಡಿಗಳಿಂದ ಸಮಾಧಾನಪಡಿಸಲೆತ್ನಿಸಿದ. "ಹೀಗೆಲ್ಲ ಯಾರಿಂದಾಯಿತು, ಹೇಳು, ವಿಷವನ್ನು ಕುಡಿದವನಾರು, ಕಾಲಪಾಶವನ್ನು ಹೂವೆಂದು ಭಾವಿಸಿದವನಾರು, ಆ ದುಷ್ಟನ ಹೆಸರೇನು? ಯಾವ ದುರ್ಬುದ್ಧಿಯಿಂದ ಅವನು ಕಾಳಿಂಗಸರ್ಪವನ್ನು ಕೈಯಲ್ಲಿ ಹಿಡಿದ? ಆ ಬಲಾಢ್ಯನ ಹೆಸರೇನು, ಈ ಎರಡು ಬಗೆಯ ಬಲಿಯನ್ನಿತ್ತವರಾರು? ಯಾವ ಕಾರಣದಿಂದ ಈ ವಿಕಾರವುಂಟಾಯಿತು? ಇದಕ್ಕೆ ಕಾರಣನಾದವನು ದೇವತೆಯೋ ಯಕ್ಷನೋ ಗಂಧರ್ವನೋ ಯಾರಾದರೂ ಸರಿಯೆ



ಲಕ್ಷ್ಮಣನಿಂದ ಶೂರ್ಪನಖಿಯ ಕಿವಿಮೂಗುಗಳ ಛೇದನೆ

ಅವನನ್ನು ತರಿದು ಶಾಕಿನಿಗೆ ಔತಣಮಾಡಿಸುತ್ತೇನೆ, ಹೇಳು, ಹೇಳು. ಯಮನನ್ನು ಕೆಣಕಿ ಬದುಕಿದವನುಂಟೇ, ಹಾಲಾಹಲವನ್ನು ಕುಡಿದು ಜೀವಿಸಿದವನುಂಟೇ, ಮೃತ್ಯುವನ್ನು ಅಪ್ಪಿ ಬಾಳಿದವನುಂಟೇ, ಕಾಳ್ಗಿಚ್ಚನ್ನು ಹೊಕ್ಕು ಉಳಿದವನುಂಟೇ, ಪ್ರಳಯಕಾಲದ ಈ ಭೈರವನಿಗೆ ಕೆಡುಕು ಮಾಡಿದ ಆ ಹುಡುಗುಬುದ್ಧಿಯವನಾವನು? ತಡಮಾಡಬೇಡ, ಹೇಳು" ಎಂದು ಕ್ರೋಧದಿಂದ ಕೇಳಿದ. ಇನ್ನೂ ಮುಂದುವರಿದು, "ಮೂರು ಲೋಕಗಳಲ್ಲಿ ದೇವೇಂದ್ರನ ಹೊರತು ಬೇರಾವನಾದರೂ ನಮಗೆ ಕೇಡನ್ನು ಬಯಸುವವನಿದ್ದಾನೆಯೇ? ನನ್ನ ಬಾಣಗಳು ಮುಂದೆ ನಿಂತವನ ಬಿಸಿರಕ್ತವನ್ನು ಹೀರಿ ತೃಪ್ತಿಪಡೆಯುತ್ತವೆ, ಆನಂತರ ಭೂಮಿಯಲ್ಲಿರುವ ಎಲ್ಲ ಪಿಶಾಚಗಳು ಕ್ರೂರಮೃಗಗಳು ಅವನ ಕರುಳು ಮಾಂಸಖಂಡಗಳನ್ನು ತಿಂದು ಸುರಿಯುವ ರಕ್ತವನ್ನು ಕುಡಿದು, ಸಂತೋಷದಿಂದ ಹಾಡಿ ಹೊಗಳಲಿ. ಇನ್ನು ತಡವೇಕೆ, ನಿನಗೆ ಹೀಗೆ ಮಾಡಿದ ದುಷ್ಟನು ಯಾರೆಂದು ಹೇಳು" ಎಂದು ಹಲ್ಲುಗಳನ್ನು ಕಡಿಯುತ್ತ ಕೋಪೋದ್ರೇಕದಿಂದ ನುಡಿದ ಖರನನ್ನು ನೋಡಿದ. ಶೂರ್ಪನಖಿಗೆ ತನ್ನ ಮನದಿಷ್ಟವು ನೆರವೇರುವುದೆಂಬ ಭರವಸೆಯುಂಟಾಯಿತು.

ಆಗ ಅವಳು, "ಕೇಳಣ್ಣ, ಸುಕುಮಾರ ಬಾಲಕರೂ ರೂಪವಂತರೂ ಮಹಾಪರಾಕ್ರಮಿಗಳೂ ವಿಶಾಲಾಕ್ಷರೂ ಕೃಷ್ಣಾಜಿನ ನಾರುಮಡಿಯುಟ್ಟು ಕಂದಮೂಲಗಳನ್ನು ತಿನ್ನುವವರೂ ಸಂಯಮಿಗಳೂ ಶಾಂತರೂ ಸೂರ್ಯಚಂದ್ರರುಗಳಂತೆ ಇರುವ ದೇವೇಂದ್ರಸಖನಾದ ದಶರಥ ಮಹಾರಾಜನ ಮಕ್ಕಳೂ ಆದ ಅಣ್ಣತಮ್ಮಂದಿರ ಜೊತೆಗೆ ಸೀತೆ ಎಂಬ ಹೆಸರಿನ ಶಶಿವದನೆಯೂ ಪಂಚವಟಿಯಲ್ಲಿದ್ದಾರೆ. ಕಾಡನ್ನು ನೋಡುತ್ತ ನಾನು ಒಂದು ದಿನ ಅವರ ಆಶ್ರಮದ ಬಳಿ ಹೋದೆ. ಈ ವಿಲಾಸವಿಭ್ರಮಗಳಿಂದ ಕೂಡಿದ ವ್ಯಕ್ತಿಗಳಾರು ಎಂದು ಕುತೂಹಲವುಂಟಾಗಿ ಅವರನ್ನು ಮಾತನಾಡಿಸಲೆಂದು ಹೋದೆ. ಆಗ ಅಣ್ಣನ ಆಜ್ಞೆಯಂತೆ ತಮ್ಮನು ಬಂದು ನನ್ನ ಕಿವಿಮೂಗುಗಳನ್ನು ಕತ್ತರಿಸಿಬಿಟ್ಟ, ಅವರ ಬಿಸಿರಕ್ತ ಮಾಂಸಖಂಡಗಳನ್ನು ತಿಂದರಷ್ಟೇ ನನ್ನ ಹೊಟ್ಟೆಯ ಉರಿ ಶಾಂತವಾಗುವುದು" ಎಂದು ಅಳುತ್ತಳುತ್ತ ವಿವರಿಸಿದಳು. ತಂಗಿಯ ಮಾತುಗಳನ್ನು ಕೇಳಿದ ಖರನು ಮೊರೆಯುತ್ತ, 'ನರಕೀಟಕ್ಕೆ ಇಷ್ಟು ಕೊಬ್ಬು ಬಂದುದು ನಮ್ಮ ಕುಲಕ್ಕೆ ಪರಮಹರ್ಷವನ್ನುಂಟು ಮಾಡುವುದು ನಿಶ್ಚಿತ' ಎಂದು ಸಂತೋಷಗೊಂಡು, ಕೋಪದಿಂದ ಸಿಂಹವಿಕ್ರಮರಾದ, ತನ್ನ ಮನಸ್ಸಿಗೆ ಅನುಗುಣವಾಗಿ ನಡೆಯುವ, ಧುರವಿಜಯದೋರ್ದಂಡರಾದ, ಪತಿಕಾರ್ಯನಿರತರಾದ ಹದಿನಾಲ್ಕು ಮಂದಿ ಶೂರ ಬಂಟರನ್ನು ಕರೆದು, "ಬೇಗ ಹೋಗಿ ಆ ನರರನ್ನು ತರಿದು ಆ ಹೆಣ್ಣನ್ನು ಎಳೆದುಕೊಂಡು ಬನ್ನಿ" ಎಂದು ಆಜ್ಞಾಪಿಸಿ ಕಳಿಸಿಕೊಟ್ಟ.

ಅವರೆಲ್ಲ ಪರಮಶೂರರು, ಕದನಕರ್ಕಶರು; ಶೂರ್ಪನಖಿಯ ಜೊತೆಗೊಂಡ ಅವರು ಭೋರ್ಗರೆಯುತ್ತ ತಕ್ಷಣವೇ ಹೊರಟರು. ಅವರ ಆರ್ಭಟೆಯಿಂದ ಸಮುದ್ರಗಳು ಕುದಿಯತೊಡಗಿದವು, ಅವರ ಪದಾಘಾತದಿಂದ ಬೆಟ್ಟಗಳು ನಡುಗಿದವು, ಅವರ ಕೂಗು ಬೊಬ್ಬಿಡುವಿಕೆಗಳಿಗೆ ಖಗಮೃಗಗಳು ಬೆದರಿದವು. ದುರುಳ ದಾನವಿಯು ಸರಸರನೆ ಅವರನ್ನು ಕರೆತಂದು ರಾಮಾಶ್ರಮವನ್ನು ತೋರಿಸಲು, ಎಲೆವನೆಯಲ್ಲಿ ಎಡದಲ್ಲಿ ಸೀತೆ,

ಸ್ವಲ್ಪ ಮುಂದೆ ಸೇವಾನಿತರನಾದ ಲಕ್ಷ್ಮಣನಿರಲು, ದೇವೆಂದ್ರನಂತೆ ಬಿಲ್ಲುಬಾಣಗಳನ್ನು ಹಿಡಿದು ದಿವ್ಯತೇಜಸ್ಸಿನಿಂದ ಮೆರೆಯುತ್ತಿದ್ದ ನರಪುಂಗವನಾದ ರಾಮನನ್ನು ಕಂಡು ಆ ಘೋರರಕ್ಕಸರು ವಿಸ್ಮಿತರಾದರು. ಅಷ್ಟರಲ್ಲಿ ಭೋರ್ಗರೆಯುತ್ತ ಬಂದ ಖಳರ ಮುಂದೆ ಬರುತ್ತಿದ್ದ ಶೂರ್ಪನಖಿಯನ್ನು ರಾಮನು ನೋಡಿ, "ನಮ್ಮ ಮೇಲೆ ಏರಿಬರುತ್ತಿರುವ ಈ ತಾಮಸೀಜನರನ್ನು ನಾನು ತರಿದಿಕ್ಕುವವರೆಗೂ ನೀನು ಅತ್ತಿಗೆಯನ್ನು ಒಂದೆಡೆ ಸುರಕ್ಷಿತವಾಗಿಟ್ಟು ಕಾಯ್ದುಕೊಂಡಿರು" ಎಂದು ಹೇಳಿದ. 'ಹಸಾದ'ವೆನ್ನುತ್ತ ಕೈಮುಗಿದ ಸೌಮಿತ್ರಿಯು ಅಣ್ಣನ ಮಾತನ್ನು ಪಾಲಿಸಲು ಹೊರಟ.

ಹೀಗೆ ಲಕ್ಷ್ಮಣನನ್ನು ನೇಮಿಸಿದ ರಘುವರನು ತನ್ನ ದಿವ್ಯವಾದ ಬಿಲ್ಲನ್ನು ಹಿಡಿದು, ಶತ್ರುವೃಂದವನ್ನು ಅರಿದು ತರಿಯುವ ಬಾಣಗಳನ್ನು ಕೈಯಲ್ಲಿ ಹಿಡಿದು ತಿರುಗಿಸುತ್ತ ನಸುನಗುತ್ತ, "ಈ ಮಹಾರಣ್ಯವು ದುಸ್ತರವಾದುದಾದರೂ ಮುನಿಸಂಕುಲದ ಅಭಿಮತದಂತೆ ನಾವಿಲ್ಲಿ ಹಾಯಾಗಿ ವಾಸವಾಗಿದ್ದೇವೆ. ಯಾರ ಹಂಗೂ ಇನಿತೂ ಇಲ್ಲ. ತಾಪಸಕುಲದ ಮೇಲೆ ದಾಳಿಮಾಡುವುದು ದುರ್ನೀತಿ, ನಿಮಗೆ ಸುಖವಾಗಿರಬೇಕೆಂಬ ಆಸೆಯೇನಾದರೂ ಇದ್ದರೆ ಹಿಂತಿರುಗಿ ಹೊರಟುಹೋಗಿ; ಈ ದುಷ್ಟೆ ಮೂಕೊರತಿಗೆ ಸಹಾಯ ಮಾಡಲೇನಾದರೂ ಬಂದಿದ್ದರೆ ನಿಮ್ಮ ಹೆಣಗಳು ಬೀಳುವುದು ಖಚಿತ. ಈಗಲೇ ಹೋಗಿ ಪ್ರಾಣವನ್ನುಳಿಸಿಕೊಳ್ಳಿ" ಎಂದು ಹೇಳಿದ. ಆಗ ಆ ರಕ್ಕಸರು ಹಲ್ಲು ಕಡಿದು ಬೊಬ್ಬಿರಿಯುತ್ತ,

"ದೇವತೆಗಳಿಗೆ ತಲ್ಲಣವುಂಟುಮಾಡುವ ಖರಾಸುರನಿಗೆ ಯಾರಾದರೂ ಕೆಟ್ಟುದನ್ನು ಮಾಡಿದರೆ ಬದುಕಿ ಉಳಿಯುವುದುಂಟೇ? ನಮ್ಮಿಂದ ನೀನು ಹೇಗೆ ತಾನೇ ತಪ್ಪಿಸಿಕೊಂಡು ಹೋಗುವೆ? ರಣದಲ್ಲಿ ನಮ್ಮನ್ನು ನೋಯಿಸುವವರು ದೇವದಾನವರಲ್ಲಿ ಯಾವನೂ ಇಲ್ಲ, ತಗೋ" ಎಂದು ಆರ್ಭಟಿಸುತ್ತ ಶೂಲಗಳನ್ನು ಹಿಡಿದು ತಿವಿಯಲೆಂದು ಆಶ್ರಮದ ಒಳಗೆ ನಡೆತಂದರು. ಕಿಡಿಗಳನ್ನುಗುಳುತ್ತ ಯಮಪಾಶದಂತಿದ್ದ ಶೂಲಗಳಿಂದ ದಾಳಿ ಮಾಡಲು ರಘುವೀರನು ಆ ಹದಿನಾಲ್ಕೂ ಜನ ದೈತ್ಯರ ಶೂಲಗಳನ್ನು ತನ್ನ ಬಾಣಗಳಿಂದಲೇ ಮುರಿದು ಹಾಕಿದ. ಆಗ ಆ ರಕ್ಕಸರ ಗುಂಪು ಬಂಡೆಗಳನ್ನು ಹಿಡಿದು ಮೇಲೇರಿ ಬಂದರು; ಆಗ ದನುಜಜಾಲವನ್ನು ತರಿದಿಡುವ ನಿಶ್ಚಯದಿಂದ ರಾಮನು ತನ್ನ ವಜ್ರಸಮಾನವಾದ ಬಾಣಗಳನ್ನು ತೆಗೆದು ಬಿಟ್ಟ. ಕೋಪದಿಂದ ಬಿಟ್ಟ ಬಾಣಗಳು ದಳ್ಳುರಿಯನ್ನುಗುಳುತ್ತ ಬಂದು ತಾಕಲು ರಾಕ್ಷಸರು ಗರಿ ಸುಟ್ಟ ದೀಪದ ಹುಳುಗಳಂತೆ ಉಪಾಯಕಾಣದೆ ಓಡಲು, ಶ್ರೀರಾಮನು ಅವರ ಪ್ರಾಣಗಳನ್ನು ಆಪೋಶನ ತೆಗೆದುಕೊಂಡುಬಿಟ್ಟ. ಇದನ್ನು ಮೇಲಿಂದ ಕಂಡ ದೇವೇಂದ್ರ ಹೂಮಳೆಯನ್ನು ಸುರಿಸಿದ, ಮುನಿಗಳು ಸಂತಸದಿಂದ ಕುಣಿದಾಡಿದರು. ರಾಮನು ಯಾವಾಗ ಬಿಲ್ಲಿಗೆ ಬಾಣವನ್ನು ಹೂಡುತ್ತಾನೆ, ಯಾವಾಗ ಬಿಡುತ್ತಾನೆ ಎಂಬುದನ್ನು ತಿಳಿಯಲಾರದೆ ವೇಗದಿಂದ ಬಾಣಗಳನ್ನು ಬಿಟ್ಟ ರಕ್ಕಸವಡೆ ನೆಲದಲ್ಲಿ ಬಿದ್ದುದನ್ನು ಕಂಡ ದೇವತೆಗಳು ಕಡುವಿಸ್ಮಯದಿಂದ ನಿಶ್ಚಲರಾಗಿ ನಿಂತುಬಿಟ್ಟರು. ಅದೇ ಹೊತ್ತಿಗೆ, ತನ್ನೊಡನೆ ಬಂದ ಮಹಾಶೂರರೆಲ್ಲ ಸತ್ತು ಬಿದ್ದುದನ್ನು ನೋಡಿದ ಶೂರ್ಪನಖಿಯು ಗೋಳೋ ಎಂದು ಅಳುತ್ತ ತನ್ನ ಅಣ್ಣನ ಬಳಿಗೆ ಓಡಿಹೋದಳು.

ದುಃಖಭಾರದಿಂದ ಕೂಡಿ ಶೋಕದ ಉರುಬೆಯಿಂದ ಓಡಿ ಬಂದ ತನ್ನ ತಂಗಿಯು ಮೂರ್ಛೆಗೊಂಡವಳಂತೆ ನೆಲದ ಮೇಲೆ ಬೀಳಲು, ಅವಳ ಬಳ ಬಂದ ಖರನು, "ಇದೇನು, ಎಂಥವರನ್ನೂ ಕೆಡೆದುರುಳಿಸುವ ಶೂಲಗಳನ್ನು ಹೊತ್ತ ಭಟರುಗಳನ್ನು ಬಿಟ್ಟು ಒಬ್ಬಳೇ ಹೀಗೆ ಅಳುತ್ತ ಬಂದ ಕಾರಣವೇನು? ನನ್ನ ಮನಸ್ಸಿಗನುಗುಣವಾಗಿ ನಡೆಯುವ ಹದಿನಾಲ್ಕು ಮಂದಿ ದೈತ್ಯರುಗಳೆಲ್ಲ ಏನಾದರು?" ಎಂದು ಬೆಸಗೊಂಡ. ಆಗ ಶೂರ್ಪನಖಿಯು, "ನನ್ನ ಕಿವಿಮೂಗುಗಳನ್ನು ತರಿದವನನ್ನು ಕೊಲ್ಲಲು ಕೋಪದಿಂದ ಯಮದೂತರಂತಹ ನಿನ್ನ ಕಿಂಕರರನ್ನು ನನ್ನೊಡನೆ ಕಳಿಸಿದೆ, ನಿಜ. ಆದರೆ ಅವರೆಲ್ಲ ಯುದ್ಧದಲ್ಲಿ ಅರೆನಿಮಿಷದಲ್ಲಿಯೇ ರಾಮನ ಮುಂದೆ ನಿಲ್ಲಲಾರದೆ ನೆಲಕ್ಕುರುಳಿದರು. ನಾನು ಕಂಗೆಟ್ಟು ಜೀವಭಯದಿಂದ ಬೇಗ ಅಲ್ಲಿಂದ ಜಾರಿಕೊಂಡು ಬಂದೆ. ರಾಮನು ನಿಮಗೆ ಸೋಲುತ್ತಾನೆಯೇ? ಕದನದಲ್ಲಿ ಅವನು ಶಿವ ಬ್ರಹ್ಮರನ್ನಾದರೂ ಗಣಿಸುತ್ತಾನೆಯೇ? ರಘುವೀರನು ಭುವನೈಕವೀರನಾಗಿ ದಾನವಹರಣ ಮಾಡಲು ಬಂದ ಮನುಷ್ಯನೇ ಸರಿ. ಜಗತ್ತಿನ ಮಹಾ ಉದ್ಧತಪರಾಕ್ರಮಿಯಾದ, ಮೂರು ಲೋಕಗಳಲ್ಲಿಯೂ ಏಕೈಕ ಶೂರಾಗ್ರಗಣ್ಯನಾದ ದಶಕಂಧರನ ತಂಗಿಯು ಈ ರೀತಿ ವಿರೂಪಕ್ಕೊಳಗಾಗಿರುವುದನ್ನು ಸುಮ್ಮನೆ ನೋಡುತ್ತ, ನನ್ನಂತೆ ನೀನೂ ಅಳುತ್ತ ಉಪಚರಿಸುತ್ತ ನಿಂತಿದ್ದೀಯಲ್ಲ, ನೀನೂ ನನ್ನ ಹಾಗೆಯೇ ರಣಹೇಡಿಯೇ ಸರಿ. ಬೇಗ ಓಡಿ ಹೋಗಿ ನಿನ್ನ ಜೀವನ್ನು ಉಳಿಸಿಕೋ. ಈ ಜನಸ್ಥಾನವನ್ನು ಬಿಟ್ಟು ಹೋಗದಿದ್ದರೆ ರಘುನಾಥನು ನಿನ್ನನ್ನೂ ಕಾಗೆಗೂಗೆಗಳಿಗೆ ಆಹುತಿ ಕೊಡದೆ ಬಿಡುತ್ತಾನೆಯೇ? ಮನುಷ್ಯನಿಗೆ ಹೆದರಿಕೊಂಡು ನಡುಗುತ್ತಿರುವ ನೀನು ಜಗತ್ತಿನಲ್ಲಿ ಹೇಗಿರುತ್ತೀಯೆ? ನಡುಗುವ ತನುವೆಂಬ ಅಲೆಗಳು, ಮಿಡುಕುವ ವಿಷಾದಗಳೆಂಬ ಮೊಸಳೆಗಳು, ಚಿಂತೆಯೆಂಬ ಬಡಬಾಗ್ನಿಗಳ ಶೋಕಸಮುದ್ರದಲ್ಲಿ ಮುಳುಗಿ ಮುಂಗಾಣದ ನೀನು ತಂಗಿಯನ್ನು ನೋಡಲಾರದೆ ಹೆಣದ ರೀತಿಯಲ್ಲಿ ಬದುಕಿದ್ದರೆ ಫಲವೇನು? ಕುಲದ ಕೀರ್ತಿಯನ್ನು ಹಾಳುಗೆಡವಿ ಸೇವಕನಾಗಿ ಬದುಕುವುದು ಹೇಗೆಂದು ಯೋಚಿಸುತ್ತಿರುವೆಯಲ್ಲ" ಎಂದು ಖರನನ್ನು ಪರಿಪರಿಯಾಗಿ ಬೈದು ಶೂರ್ಪನಖಿಯು ಶೋಕಾರ್ತೆಯಾಗಿ ಹಲುಬುತ್ತ ನೆಲದ ಮೇಲೆ ಬಿದ್ದುಕೊಂಡಿದ್ದಳು.

ಇದರಿಂದ ಖರನ ಕೋಪವು ಭುಗಿಲೆದ್ದಿತು, ಶೂರ್ಪನಖಿಯ ಮೈದಡವಿ, "ದುಶ್ಚರಿತ್ರನಾದ ಆ ನರಪಶುವನ್ನು ಕೊಂದು ಅವನ ತಮ್ಮ ಲಕ್ಷ್ಮಣನನ್ನು ಕೆಡವದೆ ಬಿಡುವುದಿಲ್ಲ. ಅವರ ರಕ್ತವನ್ನು ಗೆಲವಿನಿಂದ ಕುಡಿದು ನಿನ್ನ ಶೋಕಾಗ್ನಿಯನ್ನು ಶಾಂತಮಾಡಿಕೋ" ಎಂದು ಆಶ್ವಾಸನೆಯಿತ್ತ ಖರಾಸುರನ ಕೋಪಯುತ ಮಾತುಗಳು ಒದ್ದೆ ಬಟ್ಟೆ ಬಿಸಿಲಿಗೆ ಒಣಗುತ್ತದೆ ಎಂಬ ಗಾದೆಯ ಮಾತಿನಂತೆ ಅವಳ ತಾಪವನ್ನು ಕೊಂಚ ತಗ್ಗಿಸಿತು. ಹೀಗಾಗಿ, "ನಿನ್ನ ಪರಾಕ್ರಮಕ್ಕೆ ಎಣೆಯೆಲ್ಲಿ, ಶಿವನ ಉಗ್ರ ಶೂಲವನ್ನು ಹಿಡಿದಿರುವ ಶೂರನಾದ ನಿನಗೆ ಸಮಾನರಾರು!" ಎಂದು ಉಬ್ಬಿಸಿದಳು. ತನಗೆ ಸಂತೋಷವಾಗುವಂತಹ ತಂಗಿಯ ಮಾತುಗಳನ್ನು ಕೇಳಿದ ಖರನು ತನ್ನ ಸೇನಾಧಿಪತಿಯಾದ ದೂಷಣನನ್ನು ಕರೆದು, "ಶಾರ್ದೂಲಸಮಾನ ಪರಾಕ್ರಮಿಗಳಾದ ನಮ್ಮ ಯೋಧರನ್ನು ಮನುಷ್ಯಕ್ರಿಮಿಯೊಂದು ಯುದ್ಧದಲ್ಲಿ ಕೊಂದಿತಲ್ಲವೇ? ಕುರಿಯು

ಕೋಪಗೊಂಡು ಹುಲಿಯನ್ನು ತಿನ್ನುವಂತೆ ಒಬ್ಬ ಮನುಷ್ಯನು ಹದಿನಾಲ್ಕು ಮಂದಿ ಅಸುರರನ್ನು ಒಂದೇ ನಿಮಿಷದಲ್ಲಿ ಕೊಂದನಲ್ಲವೇ? ಕಾಲನ ಕೀಳಾಟವು ಹೇಗಿದೆ ನೋಡು. ಬೇಗ ಯುದ್ಧರಥವನ್ನು ಸಿದ್ಧಮಾಡು, ಹದಿನಾಲ್ಕು ಸಾವಿರ ಯೋಧರನ್ನೂ ಆಯುಧಗಳನ್ನೂ ಸಿದ್ಧಗೊಳಿಸು" ಎಂದು ಆಜ್ಞಾಪಿಸಿದ. ಎಲ್ಲವನ್ನು ತ್ವರಿತವಾಗಿ ಸಿದ್ಧಪಡಿಸಿ ಸೇನಾಪತಿಯು ಒಡೆಯನಿಗೆ ಬಿನ್ನವಿಸಿಕೊಂಡ. ಉಗ್ರಕೋಪದಿಂದ ಕೂಡಿ ಖರನು ರಥವನ್ನೇರಿ ದೊಡ್ಡ ಬಾಣಗಳನ್ನು ಹಿಡಿದು ನಡೆದರೆ ಭೂಮಿ ನಡುಗಿತು, ಅಂಬುಧಿ ತುಳುಕಿತು. ಮೃತ್ಯುವಿನ ಆಕಾರದಂತಹ ರಕ್ಕಸನ ಉಪಟಳವನ್ನು ಯಾರು ಸಹಿಸಬಲ್ಲರು? ಋಷಿಗಳು ತಲ್ಲಣಗೊಂಡರು, ದೇವತೆಯರ ಸೈನ್ಯ ಗಾಬರಿಗೊಂಡಿತು. ದಟ್ಟ ಕತ್ತಲೆ ಆವರಿಸಿ ಸೂರ್ಯನನ್ನು ಮುತ್ತಿತು, ಜನರು ಪರಸ್ಪರ ಮುಖವನ್ನು ನೋಡಲಾರದಾದರು, ಮೃಗಗಳೆಲ್ಲ ಕೆಟ್ಟ ಸ್ವರದಲ್ಲಿ ಕೂಗತೊಡಗಿದವು, ಮೋಡವು ಬೆಂಕಿಯುಗುಳಿತು, ರಥದ ಚಿನ್ನದ ಕಳಸದ ತುದಿಗಳಲ್ಲಿ ಹದ್ದುಗಳು ಕುಳತವು – ಹೀಗೆ ಹೊರಡುವ ಸಮಯದಲ್ಲಿ ಎಂತೆಂತಹುದೋ ಅಪಶಕುನಗಳುಂಟಾದವು.

ದುಶ್ಶಕುನಗಳನ್ನು ಕಂಡು ಖರನು ನಗುತ್ತ, "ಹೆಂಡ ಕುಡಿದು ಅಮಲಿನಲ್ಲಿರುವವನಿಗೆ ಒಳ್ಳೆಯದು ಕೆಟ್ಟದ್ದು, ಲಾಭ ಲೋಭ ಎಂಬವುಗಳ ಪರಿವೆಯೆಲ್ಲಿ? ಈ ಶಕುನಗಳೆಲ್ಲ ಪುಕ್ಕಲುಮನಸ್ಸಿನವರನ್ನು ಹೆದರಿಸಬಹುದೇ ಹೊರತು ನನ್ನನ್ನಲ್ಲ; ಇದಾವುದನ್ನೂ ನಾನು ಗಣಿಸದೆ ನಕ್ಷತ್ರಗಳನ್ನು ಕೆಡಹುತ್ತೇನೆ, ಯಮಪುರಿಯನ್ನು ನಾಶಮಾಡುತ್ತೇನೆ ಎಂದ ಮೇಲೆ ಈ ಮಾನವನನ್ನು ಬಡಿದಲ್ಲದೆ ಇರುವೆನೇ? ದೇವೇಂದ್ರನು ಐರಾವತವನ್ನೇರಿ ಬಂದು ಯುದ್ಧದಲ್ಲಿ ನನ್ನ ಇದಿರು ನಿಲ್ಲಬಲ್ಲನೇ? ವಿಜಯಲಕ್ಷ್ಮಿಯನ್ನು ದಾಸಿಯಾಗಿ ಮಾಡಿಕೊಂಡಲ್ಲದೆ ಎಂದಾದರೂ ನಾನು ವಾಪಸ್ಸು ಬರುವೆನೇ? ಮನುಷ್ಯನ ಶೌರ್ಯ ಎಷ್ಟಿದ್ದೀತು? ಈ ಅಪಶಕುನಗಳಿಗೆ ಹೆದರುವೆನೇನು? ಲೋಕವನ್ನು ನಾಶಗೊಳಿಸಿ ಹಾರುವರ ರೀತಿ ಎಂತಹುದೆಂಬುನ್ನು ಅರೆನಿಮಿಷದಲ್ಲಿ ತೋರಿಸುತ್ತೇನೆ" ಎಂದು ಬಿರುನುಡಿಗಳನ್ನಾಡುತ್ತಿದ್ದರೆ ರಕ್ಕಸರೆಲ್ಲ ಸಂತೋಷದಿಂದ ಹಿಗ್ಗಿ ಪ್ರಳಯರುದ್ರನ ಕಿಂಕರರಂತೆ ಅವನ ಹಿಂದೆ ಸಡಗರದಿಂದ ಜೋರಾಗಿ ನಡೆಯತೊಡಗಿದರು. ರಕ್ಕಸ ಪಡೆಯ ಅಟ್ಟಹಾಸವನ್ನು ಕಂಡು ಸುರರು ಭೂಸುರರು ನೋಡಿ ನಡುಗುತ್ತ ಜಗದೀಶನು ನಮ್ಮನ್ನೆಂತು ರಕ್ಷಿಸುವನೋ ಎಂದು ಮಿಡುಕಾಡಿದರು. ಕಾಡು ಈದಂತೆ ರಕ್ಕಸರ ಪಡೆ ಮುಂದೆ ಸಾಗಲು, ಖರನೊಡನೆ ದುರ್ಜಯ ಕಾಲಕಾರ್ಮುಕ ಯಜ್ಞಗೆಡುಕ ವಿಹಗ ಕರವೀರಾಕ್ಷ ಪೃಥುಲಗ್ರೀವ ಸರ್ಪಾಸ್ಯ ರುಧಿರಾಶನ ಮಹಾಮಾಲಿ ಮೇಘಮಾಲಿ ಮುಂತಾದವರು ಮುಂದೆ ಸಾಗಿದರು. ಆಕಾಶಕ್ಕೆ ಹಾರುವ ಸ್ಥೂಲಾಕ್ಷ, ಶತ್ರುಸೈನ್ಯವನ್ನು ನುಂಗುವ ಮಹಾಕಪಾಲ, ದೇವತಾಗಣದ ಅಹಂಕಾರವನ್ನು ಮುರಿಯುವ ತ್ರಿಶಿರಸ್ಸು, ಪ್ರಮಾಥಿ ಮುಂತಾದ ಯೋಧಾಗ್ರರು ಖರನ ಜೊತೆಯಲ್ಲಿ ಸಾಗಿ ಬರಲು ಸೂರ್ಯಚಂದ್ರಬಿಂಬಗಳನ್ನು ಕಬಳಿಸುವ ರಾಹು ಕೇತು ಮುಂತಾದ ಗ್ರಹಗಳ ಮಾಲೆಯಂತೆ ಕಾಣುತ್ತಿದ್ದರು. ಸೈನ್ಯವು ನಗೆಮಾತುಗಳು, ಮೂದಲಿಕೆ, ಕೋಪ, ವಾದಗಳಿಂದ ಜಗತ್ತನ್ನು ಭೀತಿಗೊಳಿಸುತ್ತ ಬರಲು ಮೃಗಗಳು ದಿಕ್ಕಾಪಾಲಾಗಿ ಓಡಿಹೋದವು, ಜಡವಸ್ತುಗಳೂ ನಡುಗಿದವು, ದೇವರ್ಷಿಸಂದೋಹವು ಚಿಂತೆಯಿಂದ ಆಪದ್ಬಾಂಧವನನ್ನು ಧ್ಯಾನಿಸತೊಡಗಿದರು. ಭೀಮಬಲರಾದ ಖರ ದೂಷಣ ತ್ರಿಶಿರರು

ವೀರಾವೇಶದಿಂದ ರಕ್ಕಸಗಣದ ಜೊತೆಯಲ್ಲಿ ಕಲ್ಪಾಂತಭೈರವನ ಬಳಗದಂತೆ ಬೊಬ್ಬಿಡುತ್ತ ಆ ದಟ್ಟ ಕಾಡಿನಲ್ಲಿ ರಾಮಪುರದರಸನ ಎಲೆವನೆಯ ಕಡೆಗೆ ಬಂದರು.

೧೧. ಶ್ರೀರಾಮನು ದೂಷಣ ತ್ರಿಶಿರರನ್ನೂ ಅವರ ಸೈನ್ಯವನ್ನೂ ಕೊಂದುದು

ಶೈಲೇಂದ್ರಜಾತೆಯೇ, ಮುಂದಾದುದನ್ನು ಕೇಳು: ಇಡೀ ಭೂಮಿಯನ್ನಾವರಿಸುವಂತೆ ಖರನ ಸೈನ್ಯವು ರಾಮನ ಆಶ್ರಮವನ್ನು ಸಮೀಪಿಸುತ್ತಿರಲು ಶ್ರೀರಾಮನಿಗೆ ಪ್ರಕೃತಿಯಲಾಗುತ್ತಿದ್ದ ಉತ್ಪಾತಗಳನ್ನು ಕಂಡು, ಇದೇನು ಪ್ರಳಯಕಾಲದಂತೆ ಜಗತ್ತನ್ನು ಭಯರಸವು ತುಂಬುತ್ತಿದೆಯಲ್ಲ ಎಂದು ಆಶ್ಚರ್ಯವಾಯಿತು. ಲಕ್ಷ್ಮಣನನ್ನು ಕರೆದು ಮುಂದೆ ನಡೆಯುತ್ತಿರುವ ಅಶುಭಗಳನ್ನು ಕುರಿತು ಹೀಗೆ ಹೇಳಿದ: "ಹಕ್ಕಿಗಳೆಲ್ಲ ಘೋರಶಬ್ದ ಮಾಡುತ್ತ ಕೂಗುತ್ತಿವೆ, ಮೇಲೆ ಶಕುನದ ಪಕ್ಷಿಗಳು ತೂಗಾಡುತ್ತಿವೆ, ಮುಂದೆ ಭಯಂಕರವಾದುದು ನಡೆಯುವುದನ್ನು ಮುನ್ಸೂಚಿಸುತ್ತಿದೆ, ಸಾಗರವು ಭೋರ್ಗರೆಯುವ ರೀತಿಯಲ್ಲಿ ದಿಕ್ಕುಗಳಲ್ಲಿ ಭೀಕರವಾದ ಶಬ್ದ ಕೇಳಿಸುತ್ತಿದೆ, ಅನಿರೀಕ್ಷಿತವಾಗಿ ಕಾಣಬರುತ್ತಿರುವ ಈ ದಾರುಣತೆಗೆ ಏನು ಮಾಡುವುದು? ಪ್ರಳಯಕಾಲದ ಗುಡುಗಿನಂತೆ ಭೇರಿ ತಮ್ಮಟೆಗಳ ಶಬ್ದ, ಸಿಂಹನಾದ ನೆಲ ಬಿರಿಯುವ ಹಾಗೆ ಕೇಳಿಬರುತ್ತಿದೆ. ರಾಕ್ಷಸಗಣವು ನಮ್ಮ ಮೇಲೆ ಏರಿ ಬರುತ್ತಿರುವುದು ನಿಶ್ಚಿತ. ಆದ್ದರಿಂದ ಮುಂಚೆಯೇ ನಳಿನಾಕ್ಷಿ ಸೀತೆಯನ್ನು ಕರೆದೊಯ್ದು ರಹಸ್ಯವಾದ ಜಾಗವೊಂದರಲ್ಲಿ ಇರಿಸಿ, ಅವಳನ್ನು ಕಾದುಕೊಂಡಿರು. ಕ್ರೂರಿ ರಕ್ಕಸರ ಜೊತೆಗಿನ ಭೀಕರ ಯುದ್ಧದ ನಿಸ್ವನ ಕೇಳಿಸುತ್ತಿದೆ. ಜಯಲಕ್ಷ್ಮಿಯನ್ನು ಇಚ್ಛೆಪಟ್ಟವನು ಮುಂದಿನ ಕಾರ್ಯವನ್ನು ಆಲೋಚಿಸಬೇಕು. ಈ ದುರ್ಗಮ ಪ್ರದೇಶವನ್ನು ಪೂರ್ತಿ ಆಕ್ರಮಿಸುವುದು ಸುಲಭವಲ್ಲ, ಹೀಗಾಗಿ ಪರ್ವತ ಪ್ರದೇಶದಲ್ಲಿ ಮರೆಯಾದ ಒಂದು ಗುಹೆಯನ್ನು ನೋಡಿ ಸೀತೆಯನ್ನು ನೆಲೆಗೊಳಿಸಲು ಕರೆದುಕೊಂಡು ಹೋಗು" ಎಂದು ಸೂಚಿಸಿದ. ಆ ಕ್ಷಣವೇ ಸೌಮಿತ್ರಿಯು ಧರಣಿಜಾತೆಯನ್ನು ಜೊತೆಯಲ್ಲಿ ಕರೆದುಕೊಂಡು ಬೆಟ್ಟದ ತುದಿಯ ಗುಹೆಯಲ್ಲಿರಿಸಿ ಕಾವಲು ನಿಂತ.

ಇತ್ತ ರಘುರಾಮನು ಕವಚವನ್ನು ಧರಿಸಿಕೊಂಡು, ಬಿಲ್ಲುಬಾಣಗಳನ್ನು ಹಿಡಿದು ತಿರುಪುತ್ತ ಹೊಗೆಯಿಲ್ಲದ ಉರಿಯ ಹಾಗೆ ಒಪ್ಪಿರಲು, ಅವನನ್ನು ಕಂಡು ಹಿಂದೆ ದಾನವರುಗಳನ್ನು ಕೊಂದು ಗೋಬ್ರಾಹ್ಮಣರನ್ನು ಪೊರೆದ ಹಾಗೆಯೇ ರಾಘವನು ಪೌಲಸ್ತ್ಯವಂಶದವರನ್ನು ಸದೆಬಡಿಯಲೆಂದು ದೇವತೆಗಳೂ ಸಿದ್ಧಚಾರಣಮುನಿಗಳೂ ಹಾರೈಸಿದರು. ಏರಿಬರುತ್ತಿರುವ ದಾನವಸೈನ್ಯವು ಅತಿಕ್ರೂರ ರಕ್ಕಸರದು, ಅವರು ಸಾಮಾನ್ಯರಲ್ಲದ ಧುರವಿಜಯರು, ಅವರೆದುರು ನಿಂತು ಏಕಾಂಗಿ ರಾಮನು ಹೇಗೆ ಯುದ್ಧ ಮಾಡುತ್ತಾನೆಯೋ ಎಂಬ ಕೌತುಕದಿಂದ ದೇವತೆಗಳು ಪರಿಪರಿಯ ವಾಹನಗಳನ್ನೇರಿ ಅಂಬರದಲ್ಲಿ ನೋಡುತ್ತ ನಿಂತರು. ಬಿಲ್ಲುಬಾಣಗಳನ್ನು ಹಿಡಿದು ಕಲ್ಪದ ಕೊನೆಯ ರುದ್ರನ ಅವತಾರವನ್ನು ತಾಳಿದಂತೆ ರಾಮನಿರಲು ಅವನನ್ನು ಕಂಡು ದೇವತಾನಿಚಯವು

ತಲ್ಲಣಗೊಂಡಿತು. ಹೊಡೆಯುವ ರಣಭೇರಿಗಳು, ಬಡಿಯುವ ತಮ್ಮಟೆಗಳು, ಜಳಪಿಸುವ ಕತ್ತಿಗಳು, ಮಾಡುವ ಸಿಂಹನಾದಗಳಿಂದ ಕೂಡಿ, ಆಗಾಗ ಬಿಲ್ಲುಗಳನ್ನು ಠೇಂಕರಿಸುತ್ತ ಜಗತ್ರಯವನ್ನು ಬೆದರಿಸುತ್ತ, ಆನೆರಥಕುದುರೆಕಾಲಾಳುಗಳಿಂದ ಕೂಡಿದ ಸೈನ್ಯವು ಭೂಮಿಯನ್ನು ಸೀಳಿಕೊಂಡು ಮೇಲೆ ಬಂದಿತೋ ಎಂಬಂತೆ ಭೋರ್ಗರೆಯುತ್ತ ರಾಮನ ಆಶ್ರಮದ ಬಳಿಗೆ ಬಂದಿತು. ಜಗತ್ತನ್ನು ನಡುಗಿಸುತ್ತ ಬರುವ ರಕ್ಕಸಬಲದ ದ್ವೇಷತೀವ್ರತೆಯನ್ನು ಅರಿತುಕೊಂಡ ರಣಪಂಡಿತನಾದ ರಾಮನ ಕೋಪ ವೆಗ್ಗಳಿಸಿತು. ಬಿಲ್ಲಿಗೆ ಬಾಣವನ್ನು ಹೂಡಿ ದಾನವರ ಕುಲವನ್ನೆಲ್ಲ ಸೀಳಿಹಾಕುವೆನೆಂದು ಕಾಲಾಗ್ನಿಯಂತೆ ಕೋಪದಿಂದ ಉರಿಯುತ್ತ, ದಕ್ಷನನ್ನು ನಾಶಮಾಡಿದ ರುದ್ರನಿಗೂ ನಾಲ್ಕು ಮಡಿಯಾದ ರೌದ್ರದಿಂದ ಕೂಡಿ, ಕಾಯುತ್ತಿದ್ದ.

ತೊಟ್ಟ ಕವಚಾದಿಗಳ ಕಾಂತಿಯು ಥಳಥಳಿಸಲು, ಬಿಲ್ಲುಬಾಣಗಳ ಹೊಳಪು ಮಿಂಚಿನಂತಿರಲು, ಆನೆ ರಥಗಳ ಘೀತ್ಕಾರ ಚೀತ್ಕಾರಗಳು ಗುಡುಗಿನಂತೆ ಕೇಳಿಸುತ್ತಿರಲು, ಪ್ರಳಯಕಾಲದ ಮೋಡಗಳ ರಾಶಿಯು ಸೂರ್ಯನನ್ನು ಕವಿಯುವಂತೆ ಆವರಿಸಿಕೊಂಡು ಬರುತ್ತಿರುವ ದೈತ್ಯಸೇನೆಯನ್ನೊಡಗೊಂಡು ಬಂದ ಖರಾಸುರನು ಯುದ್ಧಸನ್ನದ್ಧನಾಗಿ ಪ್ರಳಯಾಗ್ನಿಯಂತೆ ನಿಂತಿದ್ದ ರಘುವೀರನನ್ನು ಕಂಡ. ಕ್ರೋಧಶಿಖಿಯು ವ್ಯಾಪಿಸಿಕೊಂಡು ಎದುರಿಗಿದ್ದುದನ್ನೆಲ್ಲ ಸುಟ್ಟು ಬೂದಿ ಮಾಡುವಂತೆ ಅಗಾಧ ಬಾಣಗಳನ್ನಿಟ್ಟುಕೊಂಡು ಬೊಬ್ಬಿರಿಯುತ್ತ, ಬೆಟ್ಟಗಳನ್ನೆಲ್ಲ ಮುಸುಕುವ ಹಾಗೆ ಬಾಣಗಳನ್ನು ಬಿಡುತ್ತ, ಗದೆ ಮುಸುಂಡಿ ಈಟಿ ಶೂಲ ಕತ್ತಿ ಕೊಡಲಿ ಒನಕೆ ಮುಂತಾದ ಆಯುಧಗಳಿಂದ ಶ್ರೀರಾಮಚಂದ್ರನನ್ನು ಸುತ್ತುವರಿದು ದೈತ್ಯಸೇನೆಯು ನಾನಾ ಬಗೆಯ ಆಯುಧಗಳ ಮಳೆ ಸುರಿಸುತ್ತ ಮುಂಬರಿದು ಬಂತು. ಹೀಗೆ ಅಸಂಖ್ಯ ರಕ್ಕಸರು ಪ್ರಯೋಗಿಸಿದ ಆಯುಧಗಳನ್ನೆಲ್ಲ, ಮಿಕ್ಕೆಲ್ಲ ಕಾಂತಿಯು ಸೂರ್ಯನ ಕಿರಣಗಳಲ್ಲಿ ಸೇರಿಹೋಗುವ ಹಾಗೆ, ರಘುವರನ ಬಾಣಗಳು ಅಡಗಿಸಿಕೊಂಡು, ದೈತ್ಯರ ಅಸ್ತ್ರಗಳನ್ನೆಲ್ಲ ವಜ್ರಾಯುಧದಂತೆ ನುಂಗಿ, ಅನೇಕ ರಾಕ್ಷಸರ ರಕ್ತವನ್ನು ಉಂಡು, ಮತ್ತೂ ಅನೇಕರ ಸರ್ವಾಂಗವನ್ನು ಛಿದ್ರಗೊಳಿಸಿದವು. ಆದರೂ ಬೆದರದ ರಕ್ಕಸವಡೆಯು ತೀಕ್ಷ್ಣವಾದ ಅಸ್ತ್ರಗಳನ್ನು ಪ್ರಯೋಗಿಸುತ್ತ ಕ್ರೋಧದಿಂದ ಬೊಬ್ಬಿರಿದು ಮುತ್ತುತ್ತಲೇ ಇದ್ದುದನ್ನೂ, ಅಸ್ತ್ರಗಳನ್ನು ಬಿಡುತ್ತಲೇ ಇರುವ ರಕ್ಕಸರನ್ನೂ ಕಂಡು ರಾಮಚಂದ್ರನು ಕೋಪಗೊಂಡು ಯಮದಂಡದಂತಹ ಬಾಣಗಳನ್ನು ಬಿಡಲು ಅವು ಭರದಿಂದ ಸಾಗಿ ದೈತ್ಯರ ಕೈ ಮೂಗು ಕಿವಿಗಳನ್ನು ಕತ್ತರಿಸಿಕೊಂಡು ಮುಂದೆ ಹೋಗಿ ಅನೇಕರ ಹೃದಯಗಳನ್ನು ಹೊಕ್ಕು ಸೀಳಿಹಾಕಿದವು. ರಾಮನು ಬಿಟ್ಟ ಬಾಣಗಳು ಎಲ್ಲೆಡೆ ತುಂಬಿಕೊಂಡು, ಅವನು ಬಾಣಗಳನ್ನು ತೊಡುವ ಬಿಡುವ ಕೈಚಳಕವು ಕಾಣದಂತಾಗಲು, ರಾಕ್ಷಸಸೈನ್ಯವು ತತ್ತರಿಸಿತು. ಆನೆಗಳ ಸೊಂಡಿಲುಗಳು, ಕುದುರೆಗಳ ತಲೆಗಳು, ರಕ್ಕಸರ ರುಂಡಗಳು, ತೇರುಗಳ ಕಳಶಗಳು, ಯೋಧರು ಪ್ರಯೋಗಿಸಿದ ಬಾಣಶೂಲಗಳು ನೆಲದ ಮೇಲೆಲ್ಲ ಬಿದ್ದು ಭೂದೇವಿಯು ಪರಿಪರಿಯಾದ ಆಭರಣಗಳನ್ನು ತೊಟ್ಟು ನಲಿಯುತ್ತಿರುವಳೋ ಎಂಬಂತೆ ಕಾಣಿಸಿತು. ಆ ಜಾಗದಲ್ಲಿ ಸುರಿದ ರಕ್ತದ ಕೆಸರಿನಲ್ಲಿ ಬೊಬ್ಬಿರಿಯುತ್ತ ಪುಟನೆಗೆದು ಬರುವ ರಾಕ್ಷಸರ ಕತ್ತರಿಸಿದ ರುಂಡಗಳು ಜಾರಿ ಜಾರಿ ಬೀಳುತ್ತಿದ್ದವು.

ರಾಮನ ಬಾಣಾಘಾತವನ್ನೂ ಲೆಕ್ಕಿಸದೆ ರಕ್ಕಸನಿಚಯವು ರಘುವೀರನ ಮೇಲೆ

ಅಂಬಿನ ಮಳೆಯನ್ನೇ ಸುರಿಸಿತು, ಮರಗಳನ್ನೂ ಬಂಡೆಗಳನ್ನೂ ಕಿತ್ತು ಎಸೆಯತೊಡಗಿತು. ಆದರೆ ರಘುನಾಥನು ಅವುಗಳಾವುದನ್ನೂ ಲೆಕ್ಕಿಸದೆ ದಿವ್ಯಮಂತ್ರಾಸ್ತ್ರಗಳನ್ನು ಎಸೆದ. ಆ ಅಸ್ತ್ರಗಳ ಉಪಟಳವನ್ನು ತಾಳುವುದು ದೈತ್ಯರಿಗೆ ಕಷ್ಟವಾಯಿತು; ಹೀಗಾಗಿ ಉಳಿದ ರಕ್ಕಸವಡೆಯು ಖರನನ್ನು ಮೊರೆವೊಗಲೆಂದು ಹಿಂದಕ್ಕೆ ಓಡಿತು; ಅದನ್ನು ಕಂಡ ದೂಷಣನು ತನ್ನ ಸೈನಿಕರಿಗೆ ಅಭಯವನ್ನಿತ್ತ. ಅವರೊಡನೆ ನಾನಾ ಮಹಾಸ್ತ್ರಗಳನ್ನು ಜೋಡಿಸಿಕೊಂಡು ಅಸದಳವಾದ ಆರ್ಭಟೆಯಿಂದ ಮತ್ತು ಕಡುಗೋಪದಿಂದ – ಮೋಡಗಳ ರಾಶಿಯು ಸೂರ್ಯನನ್ನು ಕವಿಯುವಂತೆ – ರಾಮನನ್ನು ಸುತ್ತುವರಿದು ಎಸೆಯತೊಡಗಿದ. ಕ್ರೂರಿಯಾದ ದೂಷಣನ ನೇತೃತ್ವದ ರಕ್ಕಸಬಲವು ಮೋಡದಂತೆ ಸುತ್ತುವರಿದರೂ ಸೂರ್ಯನು ತನ್ನ ಕಿರಣಗಳಿಂದ ಅದನ್ನು ಛಿದ್ರಗೊಳಿಸುವಂತೆ ಸಂಹರಿಸಬಲ್ಲ ಸಾಹಸಿ ರಘುಜನು ಬಾಣದ ತುದಿಯನ್ನು ಬಿಲ್ಲಿಗೆ ಹೂಡಿ ಗಂಧರ್ವಾಸ್ತ್ರವನ್ನು ಮಂತ್ರಪೂತಗೊಳಿಸಿ ಬಿಡಲು ಆ ಮಹಾಸ್ತ್ರವು ಉಳಿದೆಲ್ಲ ರಾಕ್ಷಸರನ್ನೂ ತರಿದುಕೊಂಡು ಹೋಯಿತು. ಹೀಗೆ ರಾಮನ ಬಾಣಗಳು ರಾಕ್ಷಸಸೈನ್ಯದ ಒಳಹೊಕ್ಕು ತಿವಿಯುತ್ತ ಕೊಚ್ಚುತ್ತ ಚುಚ್ಚುತ್ತ ಉರಿಯು ಹೆಚ್ಚಿ ತಲೆಗಳನ್ನು ಕತ್ತರಿಸಿ ಕೆಡಹುತ್ತ ಅಂಬರವನ್ನೇರಿ ಹಾರದಂತೆ ಕಾಣಿಸಲು, ಅದೇನು ಶಿವನ ಕಂಠಾಭರಣವಾಗಲು ಹೋಗುತ್ತಿದೆಯೋ ಎಂಬಂತೆ ತೋರಿತು. ಅದನ್ನು ನೋಡಿದ ದೈತ್ಯನಿವಹ ಭಯದಿಂದ ತತ್ತರಿಸುತ್ತ ಯಾವ ಕಡೆ ಓಡಬೇಕೆಂದು ತಿಳಿಯದೆ ಗಲಿಬಿಲಿಗೊಂಡಿತು.

ಈ ಪರಿಯಲ್ಲಿ ತನ್ನ ಬಲವು ಅವಸ್ಥೆಗೊಳಗಾದುದನ್ನು ಕಂಡ ದೂಷಣನು ಜಗತ್ತಿನ ಅತ್ಯುನ್ನತ ಪರಾಕ್ರಮಿಗಳಾದ ಮತ್ತು ನಂಬಿಕಸ್ಥರಾದ ಸಾವಿರ ಅಸುರರನ್ನು ಆತುರದಿಂದ ಕರೆದು ಅವರನ್ನು ಹುರಿದುಂಬಿಸಿ ರಾಮನ ಮೇಲೆ ಛೂಬಿಟ್ಟ. ಅವರು ಪರ್ವತಗಳನ್ನೇ ಹಿಡಿದುಕೊಂಡು ಪ್ರಳಯರುದ್ರನ ವಿವಿಧ ರೂಪಗಳಂತೆ ರಘುವೀರನನ್ನು ಮುತ್ತಿ ಶಸ್ತ್ರಾಸ್ತ್ರಗಳನ್ನೆಸೆದರು. ಹೀಗೆ ಕಲ್ಲುಗಳ ಮಳೆಯನ್ನು ಸುರಿಸಲು ರಾಮನ ಕೋಪದಾವಾನಲವು ಭುಗಿಲೆದ್ದು ಬೆಂಕಿಯನ್ನುಗುಳುವ ಅಸ್ತ್ರಗಳನ್ನು ಬಿಟ್ಟು ಕಲ್ಲುಬಂಡೆಗಳನ್ನು ತುಂಡುಮಾಡುತ್ತ ಗರಗರನೆ ತಿರುಗುತ್ತ ರಕ್ಕಸರ ಕೊರಳುಗಳನ್ನು ಅರಿದು, ರಕ್ತವನ್ನು ಹೀರಿ, ಅಷ್ಟಕ್ಕೇ ನಿಲ್ಲದೆ ಮುಂದುವರಿಯುತ್ತ ಐದು ಸಾವಿರ ಮಂದಿಯನ್ನು ಕೊಂದಿಕ್ಕಿತು. ಇದರಿಂದ ದೂಷಣನ ಕೋಪ ಉಕ್ಕಿತು, ಒಂದಾದ ಮೇಲೊಂದರಂತೆ ರಾಮನ ಮೇಲೆ ಹಲವಾರು ಬಾಣಗಳನ್ನು ಬಿಟ್ಟ; ಆದರೆ ತನ್ನ ಹತ್ತಿರ ಬರುವ ಕಣೆಗಳನ್ನು ಮಾರ್ಗಮಧ್ಯದಲ್ಲಿಯೇ ರಘುವರನು ತುಂಡರಿಸಿದ; ಅಲ್ಲದೆ ನಾಲ್ಕು ಬಾಣಗಳಿಂದ ಕುದುರೆಗಳನ್ನೂ, ಐದರಿಂದ ಸಾರಥಿಯನ್ನೂ, ಎಂಟರಿಂದ ಕವಚವನ್ನೂ, ರಥವನ್ನು ಒಂಬತ್ತರಿಂದಲೂ ಕಡಿದಿಕ್ಕಲು ದೂಷಣನು ನೆಲದ ಮೇಲೆ ಬಿದ್ದ. ಮತ್ತಷ್ಟು ಕ್ರೋಧೋನ್ಮತ್ತನಾದ ಅವನು ಮೇಲೆದ್ದು ಬೆಟ್ಟದಂತಹ ಗದೆಯನ್ನು ಹಿಡಿದು ರಾಘವನನ್ನು ಇಕ್ಕಲು ವೇಗದಿಂದ ಬರುವುದನ್ನು ಕಂಡು ಎರಡು ಬಾಣಗಳನ್ನು ಬಿಟ್ಟು ಅವನ ಗದೆಯನ್ನು ಹಿಡಿದ ತೋಳುಗಳನ್ನೇ ಕತ್ತರಿಸಿಬಿಟ್ಟ. ಇದನ್ನು ಕಣ್ಣಾರೆ ಕಂಡ ದೈತ್ಯಪಡೆ ನಡುಗಿಹೋಯಿತು. ಹೀಗೆ ವಜ್ರಾಯುಧದ ಹೊಡೆತಕ್ಕೆ ರೆಕ್ಕೆಗಳು ಕತ್ತರಿಸಿ ಬೆಟ್ಟಗಳು ಕೆಳಕ್ಕೆ ಬೀಳುವಂತೆ ದೂಷಣನು ಉರುಳಲು ಪ್ರಮತಿ ಸ್ಥೂಲಾಕ್ಷ ಮಹಚ್ಛೀರ್ಷರು ಕೊಡಲಿ ಈಟಿ ಶೂಲಗಳನ್ನು ಹಿಡಿದು ಆವೇಶದಿಂದ ಮುನ್ನುಗ್ಗಲು ಅದನ್ನು ಕಂಡ ರಾಘವನು ತನ್ನ ಕೂರ್ಗಣೆಗಳಿಂದ ಅವರು ಮೂವರನ್ನೂ ತರಿದು ನೆಲಕ್ಕುರುಳಿಸಿದ.

ದೂಷಣಸಮೇತ ದೈತ್ಯಪಡೆಯು ನಾಶಗೊಳ್ಳಲು, ಒಬ್ಬ ಯಃಕಶ್ಚಿತ್ ಮನುಷ್ಯನಿಂದ ತನ್ನ ಪಡೆಗೆ ಹೀಗಾಯಿತಲ್ಲ ಎಂದು ಖರನ ಕೋಪ ನೆತ್ತಿಗೇರಿತು. ಆರ್ಭಟಿಸುತ್ತ ಕಾಲಭೈರವನನ್ನು ಹಿಡಿಯಲು ಪ್ರಯತ್ನಿಸುವ ಕ್ರಿಮಿಯಂತೆ ರಾಮನ ಮೇಲೆ ಏರಿ ಬರಲು ಸುರರು ಕಿನ್ನರರು ಹೆದರಿ ನಡುಗಿದರು, ಅಸುರನ ಕೋಪಶಿಖಿಯಿಂದ ಸಮುದ್ರಗಳು ಕುದಿಯತೊಡಗಿದವು. ಆಗ ಮೇಘಮಾಲಿ ಮಹಾಮಾಲಿ ಸರ್ಪಾಸ್ಯ ಪರುಷ ಕಾಲಕಾರ್ಮುಕ ಪೂಗದಲ್ಲಣ ಯಜ್ಞಶತ್ರು ವಿಹಂಗಮ ಕರವೀರನೇತ್ರ ಮುಂತಾದವರು ಸಮುದ್ರದ ಭೋರ್ಗರೆತದಂತೆ ಕೂಗುತ್ತ ಬತ್ತೀಸಶಸ್ತ್ರಗಳಿಂದ ರಾಘವೇಶನ ಮೇಲೆ ದಾಳಿಗೈದರು. ತನ್ನ ಕಡೆ ಬರುತ್ತಿರುವ ದೈತ್ಯದೊಂಬಿಯನ್ನು ಕಂಡು ಕ್ರೂರಾಸ್ತ್ರಗಳನ್ನು ಹಿಡಿದು ಪ್ರತಿದಾಳಿ ಮಾಡಿದಾಗ ರಕ್ಕಸರು ನೂರು ಸಾವಿರಗಳ ಲೆಕ್ಕದಲ್ಲಿ ಮಡಿದುರುಳಿದರು. ಕಡಿದ ಕಾಲಾಳುಗಳನ್ನೂ, ಮಡಿದ ಮೇಲಾಳುಗಳನ್ನೂ, ಕೆಡೆದ ಆನೆಕುದುರೆಗಳನ್ನೂ, ಕುಣಿದಾಡುವ ಅಟ್ಟೆಗಳನ್ನೂ ತಿಂದು, ಸುರಿಯುವ ರಕ್ತಧಾರೆಯನ್ನೂ ಕುಡಿದು ತಿಂದು ಬೇತಾಳಗಳು ಸಂತಸದಿಂದ ತೊಡೆಗಳನ್ನು ತಟ್ಟಿಕೊಂಡು ಕುಣಿದಾಡಿದವು. ಹೀಗೆ ರಾಘವನು ಏಕಾಂಗಿಯಾಗಿ ಹದಿನಾಲ್ಕು ಸಾವಿರ ಸೈನಿಕರಿದ್ದ ಅಸುರಪಡೆಯನ್ನು ಅನಾಯಾಸದಿಂದ ತರಿದಿಟ್ಟುದನ್ನು ಕಂಡು ಅಮರಗಣ ಮೂಗಿನ ಮೇಲೆ ಬೆರಳಿಟ್ಟುಕೊಂಡಿತು.

ತಮ್ಮ ಸೈನ್ಯವೆಲ್ಲ ದೂಳೀಪಟವಾದುದನ್ನು ಕಂಡ ಖರತ್ರಿಶಿರರು ಕಡುಗೋಪದಿಂದ ಹಲ್ಲುಕಡಿಯುತ್ತ ರಾಮನ ಮೇಲೆ ಏರಿಹೋಗಲು ಆಲೋಚಿಸಿದರೂ, ತ್ರಿಶಿರನು ಖರನೊಡನೆ ಹೀಗೆಂದ: "ಈ ಮನುಷ್ಯಕೀಟವನ್ನು ಗೆಲ್ಲುವುದು ಯಾವ ಮಹಾ ಕೆಲಸ. ನನ್ನನ್ನು ನೇಮಿಸಿ ಕಳಿಸು ಒಂದೇ ಕ್ಷಣದಲ್ಲಿ ರಾಮನನ್ನು ಬಗಿದಿರಿದು ಅವನ ತಲೆಯನ್ನು ತಂದು ನಿನ್ನ ಕಾಲುಗಳ ಮೇಲೆ ಕೆಡವುತ್ತೇನೆ." ಹೀಗೆ ಖರನಿಂದ ಆಜ್ಞೆ ಪಡೆದ ತ್ರಿಶಿರನು ಮುಂಗಾರ ಮಿಂಚು ಛಟೀರೆಂದು ಹೊಳೆಯುವ ರೀತಿಯಲ್ಲಿ ರಥವು ಮಿಂಚುತ್ತಿರಲು, ಕೆಂಡದ ಕಡಲ ಜೋಡಿಯಂತೆ ಕುದುರೆ ಕಟ್ಟಿದ ರಥಗಳಲ್ಲಿ ಅವರಿಬ್ಬರೂ ಆಕಾಶಕ್ಕೆ ಹಾರಿ ಭೂಮಿಯ ಮೇಲೆ ಸಿಡಿಲು ಅಪ್ಪಳಿಸುವ ರೀತಿಯಲ್ಲಿ ಆ ಅಸುರೇಶನು ಕಣ್ಣುಗಳಿಂದ ಕೆಂಡಗಳನ್ನುಗುಳುತ್ತ ಬಿಲ್ಲಿಗೆ ಹರಿತವಾದ ಬಾಣಗಳನ್ನು ಹೂಡಿ ಹೆದೆಯನ್ನು ಜೋರಾಗಿ ಸೆಳೆದು ಬಿಟ್ಟ; ಬಿಟ್ಟ ಬಾಣಗಳು ಎಷ್ಟು ಎಂದು ಅರಿಯಲಾಗದಂತೆ ದಾನವನು ಕಣೆಗಳನ್ನು ಬಿಡುತ್ತಿದ್ದರೆ ಮೂಜಗವೂ ಕಂಪಿಸುವಂತಾಯಿತು. ಅವನ ಯುದ್ಧಪರಿಯನ್ನು ಅರಿತ ಸಗರಕುಲದೀಪಕನು ಬಿಲ್ಲುಬಾಣಗಳನ್ನು ಹಿಡಿದುಕೊಂಡು ಅವನ ರಥ ಸಾರಥಿ ಕುದುರೆ ಕತ್ತಿ ಬಾಣಗಳನ್ನು ಚಕಚಕನೆ ನುಚ್ಚುನೂರು ಮಾಡಿಬಿಟ್ಟ.[೧]

---

೧. (ಇಲ್ಲಿಗೆ ಅರಣ್ಯಕಾಂಡದ ಹನ್ನೊಂದನೆಯ ಸಂಧಿಯ ಮೂವತ್ತನೇ ಪದ್ಯ ಮುಗಿಯಿತು. ಮದ್ರಾಸಿನ ಓಲೆಗರಿಯ ಪ್ರತಿಯಲ್ಲಿ ಈ ಕಾಂಡದ ಇಷ್ಟೇ ಪದ್ಯಗಳಿವೆಯಂತೆ; ಮೈಸೂರಿನ ಕಾಗದದ ಪ್ರತಿಯಲ್ಲಿನ ಪದ್ಯಗಳು ಇಷ್ಟೇ ಇದ್ದರೂ, ಕಥಾಪೂರಣಕ್ಕೆಂದು ಪ್ರತಿಕಾರನು, ತೊರವೆ ರಾಮಾಯಣದ ಭಾಮಿನಿ ಷಟ್ಪದಿಯ ಪದ್ಯಗಳನ್ನು ಸೇರಿಸಿರುವನಂತೆ. ಪ್ರಧಾನ ವೆಂಕಪ್ಪಯ್ಯನು ಬಹುತೇಕ ವಾಲ್ಮೀಕಿ ರಾಮಾಯಣದ ಕಥಾಸರಣಿಯನ್ನು ಅನುಸರಿಸಿರುವುದರಿಂದ, ಈ ಕಾಂಡದ ಮುಂದಿನ ಭಾಗವನ್ನು ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದಗಳನ್ನು ಆಧರಿಸಿ, ಅನುಸರಿಸಿ ನಿರೂಪಿಸಿದೆ)

ತ್ರಿಶಿರನು ಮೂರು ಬಾಣಗಳನ್ನು ಶ್ರೀರಾಮನ ಹಣೆಗೆ ಹೊಡೆದ. ಶ್ರೀರಾಮನ ಸಿಟ್ಟು ಭುಗಿಲೆದ್ದಿತು. ಸಿಟ್ಟನಿಂದ "ಅಬ್ಬಾ! ಈ ರಾಕ್ಷಸನು ಬಲುಗಟ್ಟಿಗ! ಇವನಿಗೆ ಇಷ್ಟು ಬಲವಿದೆಯಲ್ಲ! ಈತನ ಬಲಿಷ್ಠ ಬಾಣಗಳು ನನ್ನ ಹಣೆಗೆ ಹೂಗಳಂತೆ ಬಂದು ಬಡಿದವು. "ಎಲೈ, ನನ್ನ ಬಿಲ್ಲಿನ ಹೆದೆಯಿಂದ ಹಾರಿಬರುವ ಬಾಣಗಳು ಎಷ್ಟು ಸವಿಯೆಂಬುದನ್ನು ನೋಡು!" ಎನ್ನುತ್ತ ವಿಷಸರ್ಪಗಳುಂತಿದ್ದ ಹದಿನಾಲ್ಕು ಬಾಣಗಳನ್ನು ಬಿಟ್ಟು ತ್ರಿಶಿರನ ಎದೆಯಲ್ಲಿ ನೆಟ್ಟ. ಅವುಗಳಲ್ಲಿ ನಾಲ್ಕು ಬಾಣಗಳು ತ್ರಿಶಿರನ ನಾಲ್ಕು ಕುದುರೆಗಳನ್ನು ಕೊಂದು ಉರುಳಿಸಿದರೆ, ಎಂಟು ಅಂಬುಗಳು ಸಾರಥಿಯನ್ನು ಅವನ ಸ್ಥಾನದಿಂದ ಹೊಡೆದು ಕೆಡವಿತು. ಆನಂತರ ಶ್ರೀ ರಾಮನು ಒಂದು ಶರವನ್ನು ತೆಗೆದು ತ್ರಿಶಿರನ ಧ್ವಜವನ್ನು ಬೀಳಿಸಿದ. ಅಷ್ಟರಲ್ಲಿ ನುಚ್ಚುನುರಿಯಾದ ರಥದಿಂದ ತ್ರಿಶಿರನು ಮೇಲಕ್ಕೆ ನೆಗೆಯುತ್ತಿರಲು, ರಾಮನು ಅವನ ಎದೆಗೆ ಗುರಿಯಿಟ್ಟು ತನ್ನೆಲ್ಲ ಶಕ್ತಿ ಮೀರಿ ಒಂದು ಬಾಣದಿಂದ ಹೊಡೆದ. ರಾಕ್ಷಸನು ದಿಕ್ಕುತೋಚದೆ ನಿಶ್ಚೇಷ್ಟನಾದ; ಅದ್ವಿತೀಯ ಪರಾಕ್ರಮಿಯಾದ ಶ್ರೀರಾಮನು ಮೂರು ಕೂರಂಬುಗಳಿಂದ ಅವನ ಮೂರು ತಲೆಗಳನ್ನು ಕಡಿದು ಕೆಡಹಲು ಅವುಗಳ ಹಿಂದೆ ಆ ನಿಶಾಚರನೂ ರಕ್ತವನ್ನು ಸುರಿಸುತ್ತ ನೆಲದ ಮೇಲೆ ದೊಪ್ಪನೆ ಬಿದ್ದ. ಅದನ್ನು ನೋಡಿದ ಖರನ ಪಡೆಯ ಗಾಯಗೊಂಡು ರಾಕ್ಷಸರು, ಹುಲಿಗೆ ಹೆದರಿದ ಜಿಂಕೆಗಳಂತೆ ಹಿಂದಿರುಗಿ ನೋಡದೆ ಓಡಿಹೋದರು. ಅದನ್ನು ನೋಡಿ ಖರನು ಕ್ರುದ್ಧನಾದ. ಓಡುತ್ತಿದ್ದ ರಾಕ್ಷಸರನ್ನು ನಿಲ್ಲ ಹೇಳಿ, ರಾಹುವು ಚಂದ್ರನ ಕಡೆಗೆ ಧಾವಿಸುವಂತೆ, ಶ್ರೀರಾಮಪುರದರಸನ ಕಡೆಗೆ ಧಾವಿಸಿದ.

೧೨. ರಾಮನು ಖರನ ಗದೆಯನ್ನು ಮುರಿದು, ಆ ಬಳಿಕ ಅವನನ್ನು ಕೊಂದುದು

ದೂಷಣನೊಡನೆ ತ್ರಿಶಿರನೂ ಹತನಾದುದನ್ನು ಕಂಡು ಶ್ರೀರಾಮನ ಪರಾಕ್ರಮವೇನೆಂಬುದು ಖರನಿಗೆ ಅರಿವಾಯಿತು; ಅವನಿಗೂ ಹೆದರಿಕೆಯಾಯಿತು. ಮಹಾ ಬಲಿಷ್ಠವಾದ ರಾಕ್ಷಸಸೈನ್ಯವನ್ನೂ ತ್ರಿಶಿರ ಮತ್ತು ದೂಷಣರನ್ನೂ ಶ್ರೀರಾಮನೊಬ್ಬನೇ ಕೊಂದುಹಾಕಿದುದನ್ನು ಅವನು ಗಮನಿಸಿದ. ಈ ಹೊತ್ತಿಗೆ ಸೇನೆಯ ಬಹುಭಾಗ ನಾಶವಾಗಿತ್ತು; ಅದನ್ನು ನೋಡಿ ಆ ರಾಕ್ಷಸನಿಗೆ ವಿಷಾದವಾಯಿತಾದರೂ, ಕೆರಳಿದ ವಿಷಸರ್ಪಗಳಿಂತೆ ಕೆನ್ನೆತ್ತರನ್ನು ಕುಡಿಯಲು ಹಾತೊರೆಯುವ ಕೂರಂಬುಗಳನ್ನು ಶ್ರೀರಾಮನ ಮೇಲೆ ಪ್ರಯೋಗಿಸಿದ. ಮಹಾರಥವನ್ನೇರಿದ್ದ ಖರನು ಸಕಲ ದಿಕ್ಕುಗಳನ್ನು ಬಾಣಗಳಿಂದ ತುಂಬಿಬಿಟ್ಟ. ಅದನ್ನು ಕಂಡು ಶ್ರೀರಾಮನು ತನ್ನ ಮಹತ್ತರವಾದ ಧನುಸ್ಸನ್ನು ಜೇವಡೆಯುತ್ತ ಕಿಡಿಯುಗುಳುವ ಕೂರಂಬುಗಳಿಂದ ಇಡೀ ಆಕಾಶವನ್ನು ಮುಚ್ಚಿದ, ಮಹಾಮೇಘವು ಮಳೆ ಸುರಿಸುವಂತೆ ಶರಜಾಲವನ್ನು ಹರಡಿದ. ಅವರಿಬ್ಬರೂ ಒಬ್ಬರನ್ನೊಬ್ಬರು ಮುಗಿಸಬೇಕೆಂದು ಹೊಡೆದಾಡುತ್ತಿರಲು, ಬಾಣಸಮೂಹದಲ್ಲಿ ಸೂರ್ಯನು ಮರೆಯಾದ. ಆಗ ಖರನು ಅಂಕುಶಗಳಿಂದ ಸಲಗವನ್ನು ತಿವಿಯುವಂತೆ,

ನಾಲೀಕ, ವಿಕರ್ಣಿ ಮುಂತಾದ ಬಾಣಗಳನ್ನು ಶ್ರೀರಾಮನ ಮೇಲೆ ಬಿಟ್ಟ, ತನ್ನ ಕಡೆಯ ಸೈನ್ಯವನ್ನೆಲ್ಲ ಸಂಹರಿಸಿದ್ದರೂ ದೃಢವಾಗಿ ನಿಂತಿದ್ದ ಶ್ರೀರಾಮನು ಬಳಲಿರುವಂತೆ ಖರನಿಗೆ ತೋರಿತು. ಇದೇ ಸುಸಮಯವೆಂದು ಬಗೆದು ಖರನು ತೇಜೋಮಯವಾದ ತನ್ನ ರಥವನ್ನೋಡಿಸುತ್ತ, ಶಲಭವು ಬೆಂಕಿಯ ಬಳಿಗೆ ಬರುವಂತೆ, ಶ್ರೀರಾಮನ ಕಡೆಗೆ ನುಗ್ಗಿ ಬಂದ. ಬಂದವನೇ ತನ್ನ ಕೈಚಳಕದಿಂದ ಶ್ರೀರಾಮನ ಬಾಣಸಮೇತವಾದ ಬಿಲ್ಲನ್ನು ಕತ್ತರಿಸಿದ; ಆನಂತರ ಕ್ರುದ್ಧನಾದ ಇಂದ್ರನ ವಜ್ರಾಯುಧಕ್ಕೆ ಸಮವಾದ ಏಳು ಬಾಣಗಳನ್ನು ಶ್ರೀರಾಮನ ಕವಚಕ್ಕೆ ಹೊಡೆಯಲು, ಅದು ಕಳಚಿ ಕೆಳಗೆ ಬಿದ್ದಿತು. ಆಗಲೂ ಶ್ರೀರಾಮನು ಆದಿತ್ಯನಂತೆ ಬೆಳಗಿದ್ದುದನ್ನು ನೋಡಿ ಖರನು ಅಸದೃಶ ತೇಜಸ್ವಿಯಾದ ರಾಘವನನನ್ನು ಶರಜಾಲಗಳಿಂದ ಮುತ್ತಿ ಸಿಂಹನಾದ ಮಾಡಿದ. ರಾಘವನ ಮೈಯೆಲ್ಲ ಬಾಣಗಳ ಹೊಡೆತದಿಂದ ಗಾಯಗೊಂಡಿತು. ಶ್ರೀರಾಮನ ಕೋಪ ಉಕ್ಕೇರಿ ಹೊಗೆಯಿಲ್ಲದ ಅಗ್ನಿಜ್ವಾಲೆಯಂತೆ ಕಂಗೊಳಿಸುತ್ತ ಶತ್ರುವನ್ನು ಸಂಹರಿಸಬೇಕೆಂದು ನಿರ್ಧರಿಸಿ ಇನ್ನೊಂದು ಮಹಾಧನುಸ್ಸಿಗೆ ಹೆದೆಯೇರಿಸಿದ. ಅದು ಅಗಸ್ತ್ಯಮಹರ್ಷಿಗಳು ಕೊಟ್ಟಿದ್ದ ವೈಷ್ಣವ ಬಿಲ್ಲು. ಅದನ್ನು ಹಿಡಿದು ಖರನ ಮೇಲೆ ಏರಿಹೋಗಿ ಚಿನ್ನದ ಗರಿಗಳಿರುವ ಬಾಣಗಳನ್ನು ಹೊಡೆದು ಖರನ ಧ್ವಜವನ್ನು ಕತ್ತರಿಸಲು, ಸುಂದರವಾದ ಆ ಸುವರ್ಣಧ್ವಜವು ಭೂಮಿಗೆ ಬಿತ್ತು. ಆಗ ರಣಮಲ್ಲನಾದ ಖರನು ಕೆರಳಿ, ತೋಮರಗಳಿಂದ ಗಜರಾಜನನ್ನು ಹೊಡೆಯುವಂತೆ, ನಾಲ್ಕು ಬಾಣಗಳಿಂದ ಶ್ರೀರಾಮನನ್ನು ಹೊಡೆದಾಗ ಆತನು ವಿಪರೀತ ಗಾಯಗೊಂಡು ರಕ್ತದಲ್ಲಿ ತೊಯ್ದು ಹೋದ. ಅವನ ಕ್ರೋಧ ಹೆಚ್ಚಿ ಅಗ್ರಗಣ್ಯವಾದ ತನ್ನ ಮಹಾಧನುಸ್ಸಿಗೆ ಆರು ಬಾಣಗಳನ್ನು ಹೂಡಿ ಪ್ರಯೋಗಿಸಿದ. ಒಂದು ಬಾಣವನ್ನು ಖರನ ಶಿರಸ್ಸಿಗೆ ಹೊಡೆದು, ಎರಡರಿಂದ ಅವನ ತೋಳುಗಳನ್ನು ಕತ್ತರಿಸಿದ; ಅರ್ಧಚಂದ್ರಾಕೃತಿಯ ಮೂರು ಬಾಣಗಳನ್ನು ಎದೆಗೆ ಹೊಡೆದ. ಅನಂತರ ಆ ತೇಜಸ್ವಿಯು ಖರನನ್ನು ಸಂಹರಿಸಬೇಕೆಂದು ನಿಶ್ಚಯಿಸಿ, ಸೂರ್ಯನಂತೆ ಹೊಳೆಯುವ ಹದಿಮೂರು ಬಾಣಗಳನ್ನು ಬತ್ತಳಿಕೆಯಿಂದ ತೆಗೆದ; ಅವುಗಳಲ್ಲೊಂದರಿಂದ ಖರನ ರಥದ ನೊಗಕ್ಕೆ ಹೊಡೆದು ಮುರಿದ, ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನು ಕೊಂದ, ಆರನೆಯ ಬಾಣದಿಂದ ಖರನ ಸಾರಥಿಯ ಶಿರಸ್ಸನ್ನು ಕತ್ತರಿಸಿಬಿಟ್ಟ; ಮೂರು ಬಾಣಗಳಿಂದ ರಥದ ಮೂಕಿಯನ್ನು ಮುರಿದು, ಎರಡರಿಂದ ಆಚ್ಚನ್ನು ನುಚ್ಚುಮಾಡಿ, ಹನ್ನೆರಡನೆಯ ಬಾಣದಿಂದ ಶರಸಹಿತವಾದ ಖರಧನುಸ್ಸನ್ನು ಕತ್ತರಿಸಿ ಹಾಕಿದ. ಆನಂತರ ದೇವೇಂದ್ರನಿಭನಾದ ರಾಘವನು ನಗುನಗುತ್ತಲೇ ವಜ್ರಸಮವಾದ ಹದಿಮೂರನೆಯ ಶರವನ್ನು ಹೊಡೆದು ಖರನ ದೇಹವನ್ನು ಕೆತ್ತಿದ. ಖರನು ಥಟ್ಟನೆ ನೆಲಕ್ಕೆ ನೆಗೆದು ಗದಾಧಾರಿಯಾಗಿ ನಿಂತ.

ಖರನು ಗದೆಯನ್ನು ಹಿಡಿದು ನಿಂತಿರುವುದನ್ನು ನೋಡಿ. ಶ್ರೀರಾಮನು ಮೃದುವಾಗಿ ನಕ್ಕು, "ದಂಡಕಾರಣ್ಯದಲ್ಲಿ ತಪಸ್ಸನ್ನಾಚರಿಸುತ್ತ ಧರ್ಮನಿಷ್ಠರಾಗಿರುವ ಮಹಾತ್ಮರನ್ನು ಕೊಂದು ನೀನು ಯಾವ ಭಾಗ್ಯವನ್ನು ಪಡೆಯಬೇಕಾಗಿದೆ? ಪಾಪಕರ್ಮಗಳನ್ನೆಸಗುವ ಉಗ್ರಗಾಮಿಗಳು ಐಶ್ವರ್ಯವನ್ನು ಪಡೆದರೂ ಹೆಚ್ಚು ಕಾಲದವರೆಗೆ ಉಳಿಯದೆ ಬೇರು ಕತ್ತರಿಸಿದ ಮರಗಳಂತೆ ಉರುಳಿ ಬೀಳುತ್ತಾರೆ. ಮಾಡಿದ ಪಾಪಕರ್ಮಕ್ಕೆ ಕಾಲಬಂದಾಗ

ಘೋರವಾದ ಫಲವು ಒದಗಿಯೇ ತೀರುವುದು. ಎಲೈ ನಿಶಾಚರ, ಜನರಿಗೆ ಘೋರವಾದ ಕೇಡನ್ನು ಚಿಂತಿಸುತ್ತ ದುಷ್ಕೃತ್ಯವನ್ನು ಮಾಡುವವರ ಪ್ರಾಣವನ್ನು ಹಿಂಡುವುದಕ್ಕಾಗಿ ನಾನು ಬಂದಿದ್ದೇನೆ. ಈಗ ನಾನು ಪ್ರಯೋಗಿಸುವ ಕಾಂಚನಭೂಷಿತಾಸ್ತ್ರಗಳು, ಹಾವುಗಳು ಹುತ್ತವನ್ನು ಹೊಗುವಂತೆ ನಿನ್ನ ದೇಹವನ್ನು ಕೊರೆದು ನುಗ್ಗಿಹೋಗುತ್ತವೆ. ದಂಡಕಾರಣ್ಯದಲ್ಲಿ ಧರ್ಮನಿರತರಾದ ಋಷಿಗಳನ್ನು ತಿಂದು ತೇಗಿದೆಯಲ್ಲವೆ? ಯುದ್ಧದಲ್ಲೀಗ ಹತನಾಗಿ ನೀನೂ ನಿನ್ನ ಸೇನೆಯೊಡನೆ ಅವರನ್ನು ಹಿಂಬಾಲಿಸಿ ಹೋಗಬಹುದು! ಈಗ ನೀನು ಇಚ್ಛೆ ಬಂದಂತೆ ಯುದ್ಧಮಾಡು, ತೋರಿದ ಪ್ರಯತ್ನವನ್ನೆಲ್ಲ ಮಾಡಿಬಿಡು! ತಾಳೆಯ ಹಣ್ಣನ್ನು ಉದುರಿಸುವಂತೆ, ನಿನ್ನ ತಲೆಯನ್ನು ಕೆಳಗೆ ಉರುಳಿಸುತ್ತೇನೆ?" ಎಂದು ಹೇಳಿದ. ಆ ಮಾತನ್ನು ಕೇಳಿ ಖರನು ಕೆರಳಿದ, ಕಣ್ಣು ಕೆಂಪಡರಿತು, ಸಿಟ್ಟು ನೆತ್ತಿಗೇರಿತು. ಅವನು ಶ್ರೀರಾಮನನ್ನು ಗೇಲಿಮಾಡುತ್ತ, "ಎಲೈ ದಶರಥನ ಮಗನೆ, ಸಾಮಾನ್ಯರಾದ ಕೆಲವು ಮಂದಿ ರಾಕ್ಷಸರನ್ನು ಕೊಂದೆಯೆಂದು ನಿನ್ನನ್ನು ನೀನೇ ಹೊಗಳಿಕೊಳ್ಳುತ್ತೀಯಾ? ಪುರುಷಶ್ರೇಷ್ಠರು ತಮ್ಮ ಪೌರುಷಕ್ಕಾಗಿ ತಾವೇ ಅಹಂಕಾರಪಡವುದಿಲ್ಲ. ಮರಣಸಂಶಯ ಒದಗಿರುವಾಗ ಯಾರು ತಾನೇ ತನ್ನನ್ನು ಹೊಗಳಿಕೊಳ್ಳುತ್ತಾನೆ? ದರ್ಭೆಗೆ ಹೊತ್ತಿಕೊಂಡ ಬೆಂಕಿ ಚಿನ್ನದಂತೆ ಹೊಳೆದರೂ ಮರುಕ್ಷಣದಲ್ಲಿ ಆರಿಹೋಗುತ್ತದೆ. ಗದಾಧಾರಿಯಾಗಿ ನಿಂತಿರುವ ನನ್ನನ್ನು ನೀನು ಗಮನಿಸಿ ನೋಡುತ್ತಿಲ್ಲ. ವಿವಿಧ ಧಾತುಗಳಿಂದ ಕೂಡಿರುವ ಪರ್ವತದಂತೆ ನಿಂತಿದ್ದೇನೆ; ಗದಾಪಾಣಿಯಾಗಿರುವ ಮತ್ಯುಪಾಶವನ್ನು ಹಿಡಿದಿರುವ ನಾನು ನಿನ್ನೊಬ್ಬನದೇ ಅಲ್ಲ, ಮೂರು ಲೋಕಗಳ ಪ್ರಾಣವನ್ನೂ ಹಿಂಡಿ ತೆಗೆಯಬಲ್ಲೆ. ನೀನು ಹದಿನಾಲ್ಕು ಸಾವಿರ ಮಂದಿ ರಾಕ್ಷಸರನ್ನು ಕೊಂದೆಯಲ್ಲವೆ? ಸೂರ್ಯನು ಮುಳುಗುವ ಮುಂಚೆ ನಿನ್ನನ್ನು ಕೊಂದು ಅವರ ಹೆಂಡಿರುಮಕ್ಕಳ ಕಣ್ಣೀರನ್ನು ಒರಸುತ್ತೇನೆ" ಎಂದು ಹೇಳಿ ಸಿಡಿದೆದ್ದ ಖರನು ಉರಿಯುವ ಸಿಡಿಲಂತೆ ಬೆಳಗುತ್ತ ಚಿನ್ನದ ಪಟ್ಟಿಗಳಿಂದ ಅಲಂಕೃತವಾದ ಗದೆಯನ್ನು ಶ್ರೀರಾಮನ ಮೇಲೆ ಬೀಸಿ ಒಗೆದ. ಆ ಮಹಾಗದೆಯು ಬೆಳಗುತ್ತ, ಮರಗಳನ್ನೂ ಪೊದೆಗಳನ್ನೂ ಸುಟ್ಟು ಬೂದಿಮಾಡುತ್ತ ಶ್ರೀರಾಮನೆ ಕಡೆಗೆ ಎರಗಿತು. ಮೃತ್ಯುಪಾಶದಂತೆ ಪ್ರಜ್ವಲಿಸುತ್ತ ಸಿಡಿದು ಬರುತ್ತಿದ್ದ ಆ ಗದೆಯನ್ನು ಶ್ರೀರಾಮನು ಬಾಣಗಳಿಂದ ಹೊಡೆದು ಆಕಾಶಮಾರ್ಗದಲ್ಲಿಯೇ ತುಂಡುತುಂಡುಮಾಡಿಬಿಟ್ಟ. ಅದನ್ನು ಕಂಡ ಖರನು ದಿಗ್ಭ್ರಮೆಗೊಂಡ. ಶ್ರೀರಾಮನು ಅವನನ್ನು ಕುರಿತು ಮುಗುಳ್ನಗೆಯಿಂದ, "ಎಲೈ ರಾಕ್ಷಸಾಧಮ, ನಿನ್ನ ಬಲಸರ್ವಸ್ವವನ್ನೂ ತೋರಿಸಿದ್ದಾಯಿತು! ಮಾತಾಡುವುದರಲ್ಲಿ ಪ್ರವೀಣನಾದ ನಿನ್ನ ಆತ್ಮವಿಶ್ವಾಸವನ್ನು ಅದು ತುಂಡರಿಸಿತು. ನನ್ನಿಂದ ಹತರಾದ ರಾಕ್ಷಸರ ಹೆಂಡಿರುಮಕ್ಕಳ ಕಣ್ಣೀರನ್ನು ಒರಸುತ್ತೇನೆಂದು ಹೇಳಿದೆಯಲ್ಲ, ಅದು ಹುಸಿಯಾಯಿತು! ನನ್ನ ಬಾಣಗಳು ನಿನ್ನ ಕತ್ತನ್ನು ಕತ್ತರಿಸಲು, ನೊರೆನೊರೆಯಾಗಿ ಒಸರುವ ನೆತ್ತರನ್ನು ಭೂದೇವಿಯು ಕುಡಿಯುತ್ತಾಳೆ, ನಿನ್ನ ಸರ್ವಾಂಗಗಳೂ ಧೂಳಿಯಿಂದ ಮುಸುಕಿರಲು ಕೈಗಳೆರಡನ್ನೂ ಚಾಚಿಕೊಂಡು ನೆಲದ ಮೇಲೆ ಮಲಗುತ್ತೀಯೆ. ನನ್ನ ಬಾಣಗಳಿಂದ ಈ ಜನಸ್ಥಾನದಲ್ಲಿರುವ ರಾಕ್ಷಸರ ಬೀಡು ನಿರ್ಮೂಲವಾಗಲು, ಮುನಿಗಳು ನಿರ್ಭಯದಿಂದ ಅರಣ್ಯದಲ್ಲಿ ಎಲ್ಲಿ ಬೇಕಾದರೂ ಸಂಚರಿಸಿಕೊಂಡಿರುತ್ತಾರೆ. ಅನ್ಯರನ್ನು ಹೆದರಿಸುತ್ತಿದ್ದ ರಾಕ್ಷಸರು ತಾವೇ ಹೆದರುತ್ತ ಪಲಾಯನಮಾಡುತ್ತಾರೆ. ನೀನು ಘಾತಕ, ನೀಚ, ಕ್ಷುದ್ರ,

ಬ್ರಾಹ್ಮಣರಿಗೆ ಕಂಟಕಪ್ರಾಯನಾಗಿದ್ದೀಯೆ; ಮುನಿಗಳು ನಿನಗೆ ಹೆದಹೆದರುತ್ತ ಅಗ್ನಿಯಲ್ಲಿ ಹವಿಸ್ಸನ್ನು ಹಾಕಬೇಕಾಗಿತ್ತಲ್ಲವೆ?" ಎಂದು ಹೇಳಿದ. ಅನಂತರ ಬರಿಗೈಯನಾಗಿದ್ದ ಖರನು ಹುಬ್ಬುಗಂಟಿಕ್ಕಿ ಯುದ್ಧ ಸಾಧನವಾವುದೆಂದು ಸುತ್ತಲೂ ನೋಡಲು ಒಂದು ದೊಡ್ಡ ಸಾಲವೃಕ್ಷವು ಕಾಣಿಸಿತು. ಮಹಾಬಲಾಢ್ಯನಾದ ಆ ರಾಕ್ಷಸನು ಅವುಡುಗಚ್ಚಿ ಎರಡು ಕೈಗಳಿಂದಲೂ ಅದನ್ನು ಕಿತ್ತು ಸಿಂಹನಾದಗೈದು, "ಎಲೈ ರಾಮ, ನೀನು ಸತ್ತೆ!" ಎಂದು ಕೂಗಿ ಆ ಮರವನ್ನು ಶ್ರೀರಾಮನ ಮೇಲೆ ಬೀಸಿದ. ಪ್ರತಾಪಶಾಲಿಯಾದ ಶ್ರೀರಾಮನು ಬಾಣಜಾಲಗಳಿಂದ ಆ ವೃಕ್ಷವನ್ನು ಕಡಿದು ಕೆಡವಿದ. ಇನ್ನು ಖರನನ್ನು ಉಳಿಸಬಾರದೆಂದು ಕೋಪಾವಿಷ್ಟನಾದ. ಮೈ ಬೆವರಿತು; ಕಣ್ಣು ಕೆಂಪಾಯಿತು. ಶರಜಾಲಗಳಿಂದ ಖರನನ್ನು ಛಿನ್ನಭಿನ್ನವಾಗಿ ಮಾಡಿದ. ಪ್ರಸ್ರವಣಪರ್ವತದಿಂದ ಜಲಧಾರೆಗಳು ಹರಿಯುವಂತೆ, ಖರನ ದೇಹದಲ್ಲಾದ ಬಾಣವ್ರಣಗಳಿಂದ ನೊರೆನೊರೆಯಾಗಿ ನೆತ್ತರು ಹರಿಯಿತು. ಯುದ್ಧದಲ್ಲಿ ಶ್ರೀರಾಮನ ಬಾಣಗಳ ಹೊಡೆತದಿಂದ ಖರನು ಕಂಗೆಟ್ಟ. ಗಂಧದಂತೆ ತನ್ನ ಮೈಗೆ ಬಳಿದಿದ್ದ ರಕ್ತವನ್ನು ಕಂಡು ಅವನ ಮದವೇರಿತು; ಕೂಡಲೆ ಶ್ರೀರಾಮನ ಮೇಲೆ ವೇಗದಿಂದ ನುಗ್ಗಿ ಬಂದ. ರಕ್ತದಲ್ಲಿ ತೊಯ್ದು ದಿಙ್ಮೂಢನಾಗಿ ನುಗ್ಗಿಬಂದ ಖರನನ್ನು ಕಂಡು, ಅವನನ್ನು ವಧಿಸುವುದಕ್ಕಾಗಿ ಮತ್ತೊಂದು ಬ್ರಹ್ಮಾಸ್ತ್ರವೋ ಎಂಬಂತಿದ್ದ – ದೇವೇಂದ್ರನು ಅಗಸ್ತ್ಯಮುನಿಗಳ ಮೂಲಕ ಕೊಟ್ಟಿದ್ದ – ಬಾಣವನ್ನು ಬಿಲ್ಲಿಗೆ ಹೂಡಿ ಧನುಸ್ಸನ್ನು ಜಗ್ಗಿ ಆ ಮಹಾಸ್ತ್ರವನ್ನು ಪ್ರಯೋಗಿಸಿದ. ಅದು ಸಿಡಿಲಿನಂತೆ ಮೊರೆಯುತ್ತ ಖರನ ಎದೆಗೆ ಬಡಿಯಿತು; ಖರನು ನೆಲದ ಮೇಲೆ ಸುಟ್ಟುಬಿದ್ದ. ವೃತ್ರಾಸುರನನ್ನು ವಜ್ರಾಯುಧದಿಂದಲೂ, ನಮುಚಿಯನ್ನು ನೊರೆಯಿಂದಲೂ, ಬಲಾಸುರನನ್ನು ಸಿಡಿಲಿನಿಂದಲೂ ಇಂದ್ರನು ಕೊಂದಂತೆ ಶ್ರೀರಾಮನು ಆ ಶರದಿಂದ ಖರನನ್ನು ವಧಿಸಿದ. ಖರನು ಸತ್ತು ಬಿದ್ದುದನ್ನು ಕಂಡ ಮುನಿಗಳೂ ರಾಜರ್ಷಿಗಳೂ ಸಂತುಷ್ಟರಾಗಿ ಶ್ರೀರಾಮನನ್ನು ಸ್ತುತಿಸುತ್ತ, "ಹೇ ಮಹಾಭಾಗ, ಇದಕ್ಕೋಸ್ಕರವೇ ಪಾಕಶಾಸನನೆನಿಸಿದ ದೇವೇಂದ್ರನು ಶರಭಂಗಮುನಿಗಳ ಪುಣ್ಯಾಶ್ರಮಕ್ಕೆ ಬಂದಿದ್ದ. ಆತನ ಸೂಚನೆಯಂತೆ ಮಹರ್ಷಿಗಳು ಉಪಾಯದಿಂದ ನಿನ್ನನ್ನು ಈ ಸ್ಥಳಕ್ಕೆ ಬರಮಾಡಿಕೊಂಡರು. ಕ್ರೂರರೂ ಪಾಪಿಗಳೂ ಆದ ಈ ರಾಕ್ಷಸರ ಸಂಹಾರವಾಗಲೆಂಬುದೇ ಅವರ ಉದ್ದೇಶ. ದಶರಥತನಯ, ನಮ್ಮ ಕಾರ್ಯವನ್ನು ನೆರವೇರಿಸಿಕೊಟ್ಟದ್ದೀಯೆ. ಇನ್ನುಮೇಲೆ ಮಹರ್ಷಿಗಳು ದಂಡಕಾರಣ್ಯದಲ್ಲಿ ಸುಖವಾಗಿ ಧರ್ಮವನ್ನಾಚರಿಸಿಕೊಂಡಿರುತ್ತಾರೆ" ಎಂದರು. ಈ ಸಮಯದಲ್ಲಿ ದೇವತೆಗಳು ಚಾರಣರೊಡನೆ ಹರ್ಷದಿಂದ ದುಂದುಭಿಗಳನ್ನು ಬಡಿಯುತ್ತ ಶ್ರೀರಾಮನ ಮೇಲೆ ಹೂವಿನ ಮಳೆಯನ್ನು ಸುರಿಸಿದರು. "ಆಹಾ! ಮೂರು ಗಳಿಗೆಯಲ್ಲಿ ಶ್ರೀರಾಮನು ಹದಿನಾಲ್ಕುಸಾವಿರ ರಾಕ್ಷಸರನ್ನು ಸಂಹರಿಸಿ, ಭೀಮಬಲರಾದ ಖರದೂಷಣರೇ ಮೊದಲಾದವರೆಲ್ಲರನ್ನೂ ತನ್ನ ಹರಿತವಾದ ಬಾಣಗಳಿಂದ ಕೊಂದುಹಾಕಿದನಲ್ಲ, ಅಬ್ಬಬ್ಬಾ! ಇವನ ಶೌರ್ಯವೇ! ಇವನ ಸಾಮರ್ಥ್ಯವೇ!" ಎಂದು ಕೊಂಡಾಡುತ್ತ ಅವರು ಹೋದರು.

ಅಷ್ಟರಲ್ಲಿ ವೀರನಾದ ಲಕ್ಷ್ಮಣನು ಪರ್ವತದ ಗುಹೆಯಿಂದ ಹೊರಗೆ ಬಂದು ಶ್ರೀರಾಮನ ಪರಾಕ್ರಮವನ್ನು ಕಂಡು ಸಂತುಷ್ಟನಾಗಿ ಸೀತಾದೇವಿಯೊಡನೆ ಆಶ್ರಮವನ್ನು ಪ್ರವೇಶಿಸಿದ. ವಿಜಯಶಾಲಿಯಾದ ಶ್ರೀರಾಮನನ್ನು ಮಹರ್ಷಿಗಳು ಸ್ತುತಿಸುತ್ತಿದ್ದರು.

ಶ್ರೀರಾಮನು ಆಶ್ರಮವನ್ನು ಪ್ರವೇಶಿಸಲು, ಲಕ್ಷ್ಮಣನು ಅಣ್ಣನನ್ನು ಆದರದಿಂದ ಗೌರವಿಸಿದ. ಈ ರೀತಿಯಲ್ಲಿ ಶತ್ರುಗಳನ್ನು ಧ್ವಂಸಮಾಡಿ ಮಹರ್ಷಿಗಳಿಗೆ ಸಂತಸವನ್ನುಂಟುಮಾಡಿದ ತನ್ನ ಪತಿಯನ್ನು ವೈದೇಹಿಯು ಹರ್ಷದಿಂದ ಹಿಗ್ಗುತ್ತ ಆಲಿಂಗಿಸಿಕೊಂಡಳು. ರಾಕ್ಷಸರೆಲ್ಲರೂ ಹತರಾದುದನ್ನು ಕಂಡು ಬಹಳ ಸಂತೋಷಪಟ್ಟಳು. ಶ್ರೀರಾಮನು ಕ್ಷೇಮವಾಗಿದ್ದುದನ್ನು ನೋಡಿ ಆ ಜನಕನಂದಿನಿಯು ನಲಿದಳು. ಸಂಪ್ರೀತರಾದ ಮಹರ್ಷಿಗಳು ರಾಕ್ಷಸಸೇನೆಯನ್ನು ಮರ್ದಿಸಿದ ಶ್ರೀರಾಮನನ್ನು ಕೊಂಡಾಡುತ್ತಿದ್ದರು. ಚಂದ್ರಮುಖಿಯಾದ ಜನಕಾತ್ಮಜೆಯು ಮತ್ತೆ ಮತ್ತೆ ತನ್ನ ಪತಿಯಾದ ರಾಮಪುರದರಸನನ್ನು ಅಪ್ಪಿಕೊಂಡು ಹಿರಿಹಿರಿ ಹಿಗ್ಗಿದಳು.

೧೩. ಅಕಂಪನನು ರಾವಣನಿಗೆ ಖರವಧೆಯನ್ನು ತಿಳಿಸುವುದು; ಸೀತಾಪಹರಣದ ಉದ್ದೇಶ; ಮಾರೀಚನ ಬುದ್ಧಿವಾದ

ಇತ್ತ ಖರನ ಪಕ್ಷದಲ್ಲಿದ್ದ ಅಕಂಪನನೆಂಬ ರಾಕ್ಷಸನೊಬ್ಬನು ಜನಸ್ಥಾನದಿಂದ ಹೊರಟು ಅತಿವೇಗದಿಂದ ಲಂಕೆಗೆ ಹೋದ. ಅಲ್ಲಿ ರಾವಣನನ್ನು ಸಂದರ್ಶಿಸಿ "ಮಹಾರಾಜ, ಜನಸ್ಥಾನದಲ್ಲಿದ್ದ ಬಹುಮಂದಿ ರಾಕ್ಷಸರು ಯುದ್ಧದಲ್ಲಿ ಹತರಾದರು. ಖರನೂ ಹತನಾದ. ನಾನು ಹೇಗೋ ತಪ್ಪಿಸಿಕೊಂಡು ಬಂದೆ" ಎಂದ. ಅದನ್ನು ಕೇಳಿ ದಶಕಂಠನು ಸಿಟ್ಟಿನಿಂದ ಸಿಡಿದೆದ್ದ; ಅವನ ಕಣ್ಣುಗಳು ಕೆಂಪಡರಿದವು. ಸುಟ್ಟುಬಿಡುವನೋ ಎಂಬಂತೆ ದುರದುರನೆ ನೋಡುತ್ತ "ಎಲೈ ಅಕಂಪನ, ರಮ್ಯವಾದ ನನ್ನ ಜನಸ್ಥಾನವನ್ನು ನಾಶಮಾಡಿದವನಾರು? ಯಾವನ ಆಯುಸ್ಸು ಮುಗಿದುಬಂದಿದೆ? ಸಮಸ್ತಲೋಕಗಳಲ್ಲಿಯೂ ನನ್ನಿಂದ ಹತನಾಗದೆ ತಪ್ಪಿಸಿಕೊಳ್ಳಬಲ್ಲವನಾರು? ನನಗೆ ವಿರೋಧವನ್ನು ಮಾಡಿ ಇಂದ್ರನಾದರೂ ಸುಖದಿಂದ ಉಳಿಯಲಾರ, ಅದು ಕುಬೇರನಿಗೂ ಶಕ್ಯವಿಲ್ಲ, ಯಮನಿಗೂ ಶಕ್ಯವಿಲ್ಲ, ವಿಷ್ಣುವಾದರೂ ಕ್ಷೇಮದಿಂದ ಉಳಿಯಲಾರ, ಯಮನಿಗೆ ನಾನು ಯಮರಾಜ!" ಎಂದು ಅಬ್ಬರಿಸಿದ. ಆ ರೀತಿಯಲ್ಲಿ ರೇಗಿದ ರಾವಣನನ್ನು ನೋಡಿ ಅಕಂಪನನು ಕೈಮುಗಿದುಕೊಂಡು ಅಂಜುತ್ತ, "ದಶರಥರಾಜನ ಮಗನಾದ ರಾಮನೆಂಬ ತರುಣನೊಬ್ಬನಿದ್ದಾನೆ. ಅವನ ಬಲಪರಾಕ್ರಮಗಳಿಗೆ ಎಣೆಯಿಲ್ಲ. ಅವನು ಖರದೂಷಣರನ್ನು ಕೊಂದು ಜನಸ್ಥಾನವನ್ನು ನಾಶಮಾಡಿದ್ದಾನೆ" ಎಂದ. ಅಕಂಪನನ ಮಾತನ್ನು ಕೇಳಿ ರಾಕ್ಷಸರಾಜನು ನಾಗರಾಜನಂತೆ ಬುಸುಗುಟ್ಟುತ್ತ, "ಅವನು ದೇವತೆಗಳನ್ನೂ ದೇವೇಂದ್ರನನ್ನೂ ಕಟ್ಟಿಕೊಂಡು ಜನಸ್ಥಾನಕ್ಕೆ ಬಂದಿರುವನೋ ಹೇಗೆ?" ಎಂದು ಕೇಳಿದ. ಅದನ್ನು ಕೇಳಿ ಅಕಂಪನನು ಶ್ರೀರಾಮನ ಬಲಪರಾಕ್ರಮಗಳನ್ನು ವರ್ಣಿಸಿದ: "ಮಹಾರಾಜ, ರಾಮನೆಂದರೆ ಮಹಾತೇಜಸ್ವಿ, ಧನುರ್ಧಾರಿಗಳಲ್ಲಿ ಅಗ್ರಗಣ್ಯ. ದಿವ್ಯಾಸ್ತ್ರಗಳು ಅವನ ವಶದಲ್ಲಿವೆ. ಸಂಗ್ರಾಮದಲ್ಲಿ ದೇವೇಂದ್ರನಿಗೆ ಎಣೆಯಾಗಿದ್ದಾನೆ. ಆತನಿಗೆ ಅನುರೂಪನಾದ ಲಕ್ಷ್ಮಣನೆಂಬ ತಮ್ಮನೊಬ್ಬನಿದ್ದಾನೆ. ಆತನೂ ಮಹಾಶೂರ. ರಾಮನಿಗೆ ಲಕ್ಷ್ಮಣನು ಜೊತೆಯಾಗಿರುವುದು, ಅಗ್ನಿಗೆ ಮಾರುತನ ಸಹಾಯ ದೊರಕಿದಂತಾಗಿದೆ. ರಾಮನು ಪ್ರತಾಪಶಾಲಿಯಾದ ರಾಜಾಧಿರಾಜನಾಗಿದ್ದಾನೆ. ಅವನೊಬ್ಬನೇ ಜನಸ್ಥಾನವನ್ನು ನಾಶಮಾಡಿದ. ರಾಮನು

ಹೊಡೆಯುತ್ತಿದ್ದ ಶರಗಳು ಐದು ಹೆಡೆಯ ಸರ್ಪಗಳಂತೆ ಬಂದು ನಮ್ಮ ರಾಕ್ಷಸರನ್ನು ತಿಂದುಹಾಕಿದವು. ರಾಕ್ಷಸರು ಭಯಪಟ್ಟು ಯಾವ ಯಾವ ಮಾರ್ಗದಲ್ಲಿ ಓಡಿದರೂ ರಾಮನೇ ಎದುರು ಬಂದು ನಿಂತಂತೆ ಅವರಿಗೆ ತೋರುತ್ತಿತ್ತು! ಹೀಗೆ ರಾಕ್ಷಸೇಂದ್ರ, ಅವನು ನಿನ್ನ ಜನಸ್ಥಾನವನ್ನು ನಾಶಗೊಳಿಸಿದ" ಎಂದ. ಅಕಂಪನನ ಮಾತನ್ನು ಕೇಳಿ ರಾವಣನು ರಾಮಲಕ್ಷ್ಮಣರನ್ನು ಸಂಹರಿಸುವುದಕ್ಕಾಗಿ ಜನಸ್ಥಾನಕ್ಕೆ ಹೊರಡುವೆನೆಂದ. ಆಗ ಅಕಂಪನನು ಹೇಳಿದ್ದೆಂದರೆ: "ಮಹಾರಾಜ, ರಾಮನ ಬಲಪೌರುಷಗಳು ದಿಟವಾಗಿಯೂ ಎಂತಹವೆಂಬುದನ್ನು ಕೇಳು: ರಾಮನನ್ನು ಪೌರುಷದಿಂದ ಗೆಲ್ಲುವುದು ಸಾಧ್ಯವಾಗತಕ್ಕದ್ದಲ್ಲ; ಆ ಕೀರ್ತಿಶಾಲಿಯು ತುಂಬಿಹರಿಯುವ ನದಿಯ ಪ್ರವಾಹದ ವೇಗವನ್ನು ಶರಗಳಿಂದ ಅಡ್ಡಗಟ್ಟಬಲ್ಲ; ಗ್ರಹನಕ್ಷತ್ರತಾರೆಗಳಿಂದ ಸಂಕುಲವಾದ ನಭಸ್ಸನ್ನು ಭೇದಿಸಿ ತಲೆಕೆಳಗು ಮಾಡಬಲ್ಲ; ಭೂಮಿಯೇ ಮುಳುಗಿಹೋಗುತ್ತಿದ್ದರೆ ಎತ್ತಿ ನಿಲ್ಲಿಸಬಲ್ಲ; ಸಮುದ್ರದ ಮೇರೆಯನ್ನು ಒದೆದು ಸಮುದ್ರ ಜಲದಿಂದ ಲೋಕವೆಲ್ಲವೂ ಕೊಚ್ಚಿಹೋಗುನಂತೆ ಮಾಡುವ ಸಾಮರ್ಥ್ಯ ರಾಮನಿಗಿದೆ. ತನ್ನ ಶರಜಾಲಗಳಿಂದ ಸಮುದ್ರದ ವೇಗವನ್ನು ತಡೆದಾನು; ವಾಯುವನ್ನು ಸುಟ್ಟುಹಾಕಿಯಾನು. ಆ ಪುರುಷಶ್ರೇಷ್ಠನು ತನ್ನ ಪರಾಕ್ರಮದಿಂದ ಸಮಸ್ತಲೋಕಗಳನ್ನೂ ಧ್ವಂಸಮಾಡಿ, ಪುನಃ ಪ್ರಜೆಗಳನ್ನು ಸೃಷ್ಟಿಸಬಲ್ಲ. ರಾಕ್ಷಸೇಂದ್ರ, ರಾಮನನ್ನು ಯುದ್ಧದಲ್ಲಿ ಗೆಲ್ಲಲು ನಿನಗೆ ಸಾಧ್ಯವಿಲ್ಲ. ಆದರೆ, ಮಹಾರಾಜ, ಅವನನ್ನು ವಧಿಸಲು ಒಂದು ಉಪಾಯ ಉಂಟು. ಸಾವಧಾನವಾಗಿ ಕೇಳು: ರಾಮನಿಗೆ ಸೀತೆಯೆಂಬ ಚೆಲುವೆಯಾದ ಮಡದಿ ಇದ್ದಾಳೆ. ಅವಳು ಈ ಜಗತ್ತಿನಲ್ಲಿಯೇ ಅಧಿಕ ಸುಂದರಿ, ತರುಣಿ. ರಾವಣ, ನೀನು ರಾಮನ ಆ ಭಾರ್ಯೆಯನ್ನು ವಂಚಿಸಿ ಅಪಹರಿಸು. ಆಗ ರಾಮನು ಅವಳ ವಿರಹದಿಂದ ಖಿನ್ನನಾಗಿ ಮಹಾರಣ್ಯದಲ್ಲಿ ಅಲೆಯುತ್ತ ಪ್ರಾಣಬಿಡುತ್ತಾನೆ" ಎಂದು ಹೇಳಿದ.

ರಾಕ್ಷಸಾಧೀಶನಾದ ರಾವಣನಿಗೆ ಅವನ ಮಾತು ರುಚಿಸಿತು! ಆ ಪರಾಕ್ರಮಿಯು ಸ್ವಲ್ಪ ಹೊತ್ತು ಚಿಂತಿಸಿ ಅಕಂಪನನನ್ನು ಕುರಿತು "ಅದೇ ಸರಿ, ನಾಳೆ ಪ್ರಾತಃಕಾಲ ನಾನೊಬ್ಬನೇ ಸಾರಥಿಯೊಡನೆ ರಥದಲ್ಲಿ ಹೋಗಿ ಸೀತೆಯನ್ನು ಅಪಹರಿಸುತ್ತೇನೆ. ಸಂತೋಷದಿಂದ ಅವಳನ್ನು ಈ ನಗರಕ್ಕೆ ತರುತ್ತೇನೆ!" ಎಂದು ನುಡಿದ. ಅನಂತರ ರಾವಣನು ಹೇಸರಗತ್ತೆಗಳನ್ನು ಹೂಡಿದ, ತೇಜೋಮಯವಾದ ರಥವನ್ನೇರಿ ಸಕಲದಿಕ್ಕುಗಳನ್ನೂ ಬೆಳಗುತ್ತ ಆಕಾಶಮಾರ್ಗದಲ್ಲಿ ಪ್ರಯಾಣಮಾಡಿದ. ಮೇಘಪಂಕ್ತಿಯು ವೇಗದಿಂದೆ ಓಡುವಾಗ ಅದರ ಹಿನ್ನೆಲೆಯಲ್ಲಿ ವಿರಾಜಿಸುವ ಚಂದ್ರನಂತೆ, ಆಕಾಶದಲ್ಲಿ ಹೋಗುತ್ತಿದ್ದ ಆ ರಥವು ಕಾಣಿಸುತ್ತಿದ್ದಿತು. ರಾವಣನು ಮಾರೀಚನ ಆಶ್ರಮಕ್ಕೆ ಬಂದು ಆ ತಾಟಕಾಪುತ್ರನನ್ನು ಸಂದರ್ಶಿಸಿದ. ಮಾರೀಚ ಆ ರಾಕ್ಷಸೇಂದ್ರನಿಗೆ ಪೀಠಪಾದ್ಯಾದಿಗಳನ್ನು ತಾನೇ ಕೊಟ್ಟು, ಮನುಷ್ಯಲೋಕದಲ್ಲಿ ದೊರೆಯಲಾರದ ಭಕ್ಷ್ಯಭೋಜ್ಯಗಳನಿತ್ತು ಸತ್ಕರಿಸಿದ. ತರುವಾಯ "ಮಹಾರಾಜ, ಪ್ರಜೆಗಳೆಲ್ಲರೂ ಕುಶಲವಷ್ಟೆ? ನೀನು ಅವಸರಪಡುತ್ತ ಇಷ್ಟು ಶೀಘ್ರವಾಗಿ ಬಂದುದು ನನಗೆ ಅರ್ಥವಾಗದು" ಎಂದ. ಆಗ ಚತುರ ಮಾತುಗಾರನಾದ ರಾವಣನು, "ಅಯ್ಯಾ ಮಾರೀಚ, ನಾನು ಗಡಿನಾಡಿನಲ್ಲಿಟ್ಟಿದ್ದ ಕಾವಲುಸೇನೆಯನ್ನು ರಾಮ

ಎಂಬುವವನು ಬಹು ಸುಲಭವಾಗಿ ಸಂಹರಿಸಿಬಿಟ್ಟದ್ದಾನೆ. ಅವಧ್ಯವಾಗಿದ್ದ ಜನಸ್ಥಾನವು ಯುದ್ಧದಲ್ಲಿ ಸರ್ವನಾಶಹೊಂದಿತು. ಅದಕ್ಕೆ ಪ್ರತಿಯಾಗಿ ರಾಮನ ಹೆಂಡತಿಯನ್ನು ಅಪಹರಿಸಬೇಕೆಂದಿದ್ದೇನೆ. ಈ ಕಾರ್ಯದಲ್ಲಿ ನನಗೆ ಸಹಾಯಮಾಡು" ಎಂದ. ಅದನ್ನು ಕೇಳಿ ಮಾರೀಚ "ಯಾವನು ನಿನಗೆ ಸೀತೆಯ ನಿಷಯವನ್ನು ಹೇಳಿದ? ಹೇಳಿದವನು ಮಿತ್ರನಂತೆ ನಟಿಸುವ ಶತ್ರುವಾಗಿರಬೇಕು. ಸಮಸ್ತರಾಕ್ಷಸವಂಶದ ಕಳಶವನ್ನು ಯಾವನು ಉರುಳಿಸಬೇಕೆಂದಿದ್ದಾನೆ? ಈ ವಿಷಯದಲ್ಲಿ ನಿನಗೆ ಪ್ರೋತ್ಸಾಹಕೊಟ್ಟವನು ಶತ್ರುವೇ ಸರಿ, ಸಂದೇಹವಿಲ್ಲ. ರಾವಣ, ರಣರಂಗದಲ್ಲಿ ರಾಘವನೆಂಬ ಮದ್ದಾನೆಯತ್ತ ಕಣ್ಣೆತ್ತಿ ನೋಡುವುದು ಕೂಡ ನಿನಗೆ ಹಿತಕರವಲ್ಲ. ಪರಿಶುದ್ಧವಾದ ರಘುವಂಶದಲ್ಲಿ ಜನಿಸಿರುವುದೇ ಆ ಮದ್ದಾನೆಗೆ ಉದಾತ್ತಭಾವವನ್ನು ತಂದುಕೊಟ್ಟಿರುವ ಸೊಂಡಿಲು; ಪ್ರತಾಪವೇ ಮದೋದಕ; ಲಂಬಿಸಿರುವ ಭುಜಗಳೇ ಕೋರೆಯ ಹಲ್ಲುಗಳು. ರಾಮನೆಂದರೆ ರಣಮಲ್ಲರಾದ ರಾಕ್ಷಸರೆಂಬ ಮೃಗಗಳನ್ನು ಸಂಹರಿಸುವ ನರಸಿಂಹ! ಆ ಸಿಂಹಕ್ಕೆ ರಣರಂಗದ ಮಧ್ಯದಲ್ಲಿ ಯುದ್ಧೋತ್ಸಾಹದಿಂದ ನಿಲ್ಲುವುದೇ ನಿಬಿಡ ರೋಮಗುಚ್ಛವುಳ್ಳ ನಿಮಿರಿದ ಬಾಲ! ಶರಗಳೇ ಹೋರಾಟಕ್ಕೆ ಬೇಕಾದ ವಿವಿಧಾಂಗಗಳು. ರಾವಣ, ಮಲಗಿರುವ ಆ ಸಿಂಹವನ್ನು ಎಬ್ಬಿಸುವುದು ತರವಲ್ಲ. ಕ್ಷಮಿಸು, ಲಂಕೇಶ್ವರ, ಪ್ರಸನ್ನನಾಗು. ಸುಖವಾಗಿ ಲಂಕೆಗೆ ಹೋಗು! ನಿನ್ನ ಮಡದಿಯರಲ್ಲಿ ನಲಿಯುತ್ತ ವಿನೋದದಿಂದಿರು. ರಾಮನು ಪತ್ನೀಸಮೇತನಾಗಿ ಅರಣ್ಯದಲ್ಲಿ ತನ್ನ ಪಾಡಿಗೆ ಸಂತೋಷದಿಂದಿರಲಿ" ಎಂದು ಹೇಳಿದ. ಹೀಗೆ ಮಾರೀಚ ಹೇಳಲಾಗಿ ರಾವಣನು ಲಂಕಾನಗರಕ್ಕೆ ಹಿಂದಿರುಗಿ ತನ್ನ ಅರಮನೆಯನ್ನು ಪ್ರವೇಶಿಸಿದ.

೧೪. ಶೂರ್ಪನಖಿಯ ರಾವಣನಿಂದನೆ; ರಾಮಲಕ್ಷ್ಮಣ ರೂಪವರ್ಣನೆ; ಸೀತಾಪಹರಣ ಸೂಚನೆ

ಇತ್ತ, ಭೀಮಪರಾಕ್ರಮಿಗಳಾದ ಹದಿನಾಲ್ಕುಸಾವಿರ ಮಂದಿ ರಾಕ್ಷಸರೂ ಖರದೂಷಣತ್ರಿಶಿರರೂ ಯುದ್ಧದಲ್ಲಿ ಶ್ರೀರಾಮನಿಂದ ಹತರಾದುದನ್ನು ಶೂರ್ಪನಖಿಯು ಕಂಡಳು. ಮೋಡವು ಗುಡುಗುವಂತೆ 'ಹೋ' ಎಂದು ಕೂಗಿಕೊಂಡಳು. ಇತರರಿಗೆ ದುಷ್ಕರವಾದ ಅದ್ಭುತಕಾರ್ಯವನ್ನು ಶ್ರೀರಾಮನು ಮಾಡಿದುದನ್ನು ಕಂಡು ಅವಳಿಗೆ ಬಹಳ ಹೆದರಿಕೆಯಾಗಿ, ನೇರವಾಗಿ ರಾವಣಪಾಲಿತವಾದ ಲಂಕೆಗೆ ಹೋದಳು. ದೇವತೆಗಳೊಡನೆ ಒಡ್ಡೋಲಗದಲ್ಲಿ ಒಪ್ಪುತ್ತಿರುವ ದೇವೇಂದ್ರನಂತೆ, ಅರಮನೆಯ ಉಪ್ಪರಿಗೆಯಲ್ಲಿ ಸಚಿವರೊಡನೆ ಮಂಡಿಸಿದ್ದ ತೇಜಸ್ವಿಯಾದ ರಾವಣನನ್ನು ಶೂರ್ಪನಖಿಯು ನೋಡಿದಳು. ರಾವಣನು ಸೂರ್ಯನಂತೆ ಬೆಳಗುತ್ತಿದ್ದ ಚಿನ್ನದ ಸಿಂಹಾಸನದಲ್ಲಿ ಕುಳಿತ್ತಿದ್ದನು; ಚಿನ್ನದ ಇಟ್ಟಿಗೆಗಳಿಂದ ರಚಿತವಾದ ವೇದಿಕೆಯ ಮಧ್ಯದಲ್ಲಿ, ಅಜ್ಯವನ್ನು ಸ್ವೀಕರಿಸಿ ಪ್ರಜ್ವಲಿಸುವ ಅಗ್ನಿಯಂತೆ ವಿರಾಜಿಸುತ್ತಿದ್ದನು. ರಾವಣನು ದೇವಾಸುರ ಸಂಗ್ರಾಮಗಳಲ್ಲಿ ವಜ್ರಾಯುಧದಿಂದಲೂ ಸಿಡಿಲಿನಿಂದಲೂ ಗಾಯಗೊಂಡ ಸಾಹಸಿ! ಇಪ್ಪತ್ತು ಭುಜಗಳಿಂದಲೂ

ದಶಕಂಠಗಳಿಂದಲೂ ಕೂಡಿ ವಿಶಾಲವಕ್ಷನಾದ ಆ ವೀರನು ಸಮಸ್ತ ರಾಜಲಕ್ಷಣಗಳಿಂದ ಭೂಷಿತನಾಗಿದ್ದ. ದೇವತೆಗಳೊಡನೆ ನಡೆದ ಮಹಾಸಂಗ್ರಾಮಗಳಲ್ಲಿ ನೂರಾರು ಸಲ ವಿಷ್ಣುಚಕ್ರದ ಹೊಡೆತಗಳನ್ನೂ ವಿವಿಧಾಯುಧಗಳ ಪ್ರಹಾರಗಳನ್ನೂ ತಿಂದು ತಾಳಿಕೊಂಡ ಧೀರನವನು. ಭೋಗವತೀನಗರಕ್ಕೆ ದಾಳಿಯಿಟ್ಟು ವಾಸುಕಿಯನ್ನು ಸೋಲಿಸಿದವನು; ತಕ್ಷಕನನ್ನು ಸೋಲಿಸಿ ಅವನ ಪ್ರಿಯಪತ್ನಿಯನ್ನು ಅಪಹರಿಸಿದ್ದವನು; ಕೈಲಾಸಕ್ಕೆ ಹೋಗಿ ಕುಬೇರನನ್ನು ಪರಾಭವಗೊಳಿಸಿ ಕಾಮಗಾಮಿಯಾದ ಪುಷ್ಪಕವಿಮಾನವನ್ನು ಕಸಿದು ತಂದಿದ್ದವನು. ಆತನೇ ಚೈತ್ರರಥವೆಂಬ ಕುಬೇರನ ಉದ್ಯಾನವನವನ್ನೂ ಅಲ್ಲಿದ್ದ ಕಮಲಸರೋವರವನ್ನೂ ನಂದನವನ ಮೊದಲಾದ ದೇವೋದ್ಯಾನಗಳನ್ನೂ ಸಿಟ್ಟಿನಿಂದ ನಾಶಗೊಳಿಸಿದ್ದ. ಯಾವನು ಹತ್ತುಸಾವಿರ ವರ್ಷಗಳವರೆಗೆ ಘೋರಾರಣ್ಯದಲ್ಲಿ ತಪಸ್ಸು ಮಾಡಿ ತನ್ನ ಶಿರಸ್ಸುಗಳನ್ನು ಬ್ರಹ್ಮದೇವನಿಗೆ ಕಾಣಿಕೆಯಾಗಿ ಅರ್ಪಿಸಿದ್ದನೋ ಆ ಧೀರನೇ ಈ ರಾವಣ. ಯಜ್ಞ ಕಾಲದಲ್ಲಿ ಬ್ರಾಹ್ಮಣರು ಮಂತ್ರಪೂರ್ವಕವಾಗಿ ಯಜ್ಞ ಶಾಲೆಗಳಲ್ಲಿ ತಯಾರಿಸಿದ ಪವಿತ್ರವಾದ ಸೋಮರಸವನ್ನು ಅಪಹರಿಸುತ್ತಿದ್ದ ಬಲಶಾಲಿಯವನು. ಯಜ್ಞಗಳು ಮುಗಿಯುವ ಸಮಯದಲ್ಲಿ ಬಂದು ಅವುಗಳನ್ನು ಕೆಡಿಸುತ್ತಿದ್ದ ಕ್ರೂರಕರ್ಮಿ; ಬ್ರಹ್ಮಹತ್ಯೆಯನ್ನು ಮಾಡುತ್ತಿದ್ದ ದುರಾಚಾರಿ; ನಿರ್ದಯನಾದ ಉಗ್ರಸ್ವಭಾವದವನು; ಜನರಿಗೆ ಕೇಡುಮಾಡುವುದರಲ್ಲಿ ನಿರತನಾಗಿ ಸಕಲಪ್ರಾಣಿಗಳನ್ನೂ ಗೋಳಾಡಿಸಿದವನು; ಸರ್ವಲೋಕಗಳನ್ನೂ ಅಂಜಿಸಿದವನು. ಅಂಥ ಬಲಾಢ್ಯನೂ ಸಂಗ್ರಾಮಶೂರನೂ ಆದ ಅಣ್ಣನ ಬಳಿ ಭಯದಿಂದ ಕಂಗೆಟ್ಟ ಶೂರ್ಪನಖಿಯು ಹೋಗಿ ಮಾತನಾಡಿದಳು. ಮೊದಲು ನಿರ್ಭಯವಾಗಿ ಅಲೆಯುತ್ತಿದ್ದ ಶೂರ್ಪನಖಿಯು ಮಹಾತ್ಮನಾದ ಲಕ್ಷ್ಮಣನಿಂದ ವಿರೂಪಿತಳಾಗಿ, ಭಯದಿಂದಲೂ ಚಿತ್ತವೈಕಲ್ಯದಿಂದಲೂ ದಿಗ್ಭ್ರಾಂತಳಾಗಿದ್ದಳು.

ಹೊಳೆಯುವ ವಿಶಾಲನೇತ್ರಗಳಿದ್ದ ರಾವಣನಿಗೆ ತನ್ನ ವಿರೂಪವನ್ನು ತೋರಿಸುತ್ತ ಶೂರ್ಪನಖಿಯು ಸಭೆಯಲ್ಲಿ ಮಂತ್ರಿಗಳೆದುರಿಗೆ ಕಠೋರವಾದ ಮಾತನ್ನಾಡಲು ತೊಡಗಿದಳು: "ಏ ರಾವಣ, ನೀನು ಕಾಮಭೋಗಗಳಲ್ಲಿ ಮುಳುಗಿ ಮೈಮರೆತ್ತಿದ್ದೀಯೆ. ಅಂಕೆಯಿಲ್ಲದೆ ಮನಸ್ಸು ಬಂದಂತೆ ನಡೆಯುತ್ತಿದ್ದೀಯೆ. ಘೋರವಾದ ಅಪಾಯವೊಂದು ಈಗ ಎದುರಾಗಿದೆ. ಯಾವ ಭೂಪಾಲನು ಗೂಢಚಾರರನ್ನು ನೇಮಿಸಿಕೊಂಡಿಲ್ಲವೋ, ಯಾವನು ಉಚಿತಕಾಲದಲ್ಲಿ ಪ್ರಜೆಗಳಿಗೆ ದರ್ಶನವೀಯುವುದಿಲ್ಲವೋ, ಯಾವನು ಕಂಡವರ ಮಾತಿಗೆ ಕಟ್ಟುಬಿದ್ದು ಪರಾಧೀನನಾಗಿ ವರ್ತಿಸುವನೋ ಅವನನ್ನು ಪ್ರಜೆಗಳು ದೂರವಿಡುತ್ತಾರೆ, ನದಿಯ ಕೆಸರನ್ನು ಆನೆಗಳು ವರ್ಜಿಸುವಂತೆ ವರ್ಜಿಸುತ್ತಾರೆ. ಗಂಧರ್ವದಾನವರೊಡನೆ ವಿರೋಧವನ್ನು ಬೆಳಸಿದ್ದರೂ ನೀನು ಗೂಢಚಾರರನ್ನು ನೇಮಿಸಿಕೊಳ್ಳದೆ ವಿಷಯಲಂಪಟನಾಗಿದ್ದೀಯೆ! ರಾವಣ, ನೀನು ಹೇಗೆ ತಾನೆ ರಾಜನೆನಿಸಿಕೊಳ್ಳುತ್ತೀಯೆ? ಹಿಂದೆ ಬೇಕಾದಷ್ಟು ಜಯವನ್ನು ಗಳಿಸಿದ್ದೀಯೆ. ಆದರೆ ಯಾರಿಗೆ ಗೂಢಚಾರ ವರ್ಗ, ಭಂಡಾರ, ರಾಜನೀತಿ – ಇವು ಸ್ವಾಧೀನವಾಗಿಲ್ಲವೋ ಅಂಥ ರಾಜರು ವಿದ್ಯೆಯಿಲ್ಲದ ಕನಿಷ್ಠರಿಗೆ ಸಮಾನರು. ದೂರದಲ್ಲಿರುವ ಸಕಲವಿಷಯಗಳನ್ನೂ ರಾಜರು ಗೂಢಚಾರರ ಮೂಲಕ ನೋಡಿ ತಿಳಿದುಕೊಳ್ಳುತ್ತಾರೆ. ಆದ್ದರಿಂದಲೇ ರಾಜರನ್ನು

ದೀರ್ಘಚಕ್ಷುಗಳೆಂದು ಹೇಳುತ್ತಾರೆ. ನೀನು ಗೂಢಚಾರರನ್ನೇ ನೇಮಿಸಿಕೊಂಡಿಲ್ಲವೆಂದು ತಿಳಿದಿದ್ದೇನೆ. ತಿಳಿಗೇಡಿಗಳಾದ ಮಂತ್ರಿಗಳ ಪರಿವಾರವನ್ನು ಕಟ್ಟಿಕೊಂಡಿದ್ದೀಯೆ. ಜನಸ್ಥಾನದಲ್ಲಿದ್ದ ನಿನ್ನ ಬಂಧುಗಳು ಹತರಾದರೂ ನಿನಗೆ ಗೊತ್ತಿಲ್ಲವಲ್ಲ. ಕ್ರೂರಕರ್ಮಗಳನ್ನೆಸಗಬಲ್ಲ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನೂ ಖರದೂಷಣರನ್ನೂ ಒಬ್ಬನೇ ಒಬ್ಬ ರಾಮನು ಕೊಂದುಹಾಕಿದ್ದಾನೆ. ರಾಕ್ಷಸರಿಗೆ ಅಂಜಬೇಕಾಗಿಲ್ಲವೆಂದು ಆತನು ಋಷಿಗಳಿಗೆ ಅಭಯವನ್ನು ಕೊಟ್ಟಿದ್ದಾನೆ. ದಂಡಕಾರಣ್ಯವನ್ನು ನಿರ್ಭಯವನ್ನಾಗಿ ಮಾಡಿ ಅದರ ಯೋಗಕ್ಷೇಮಗಳನ್ನು ವಹಿಸಿಕೊಂಡಿದ್ದಾನೆ! ರಾಮನು ಬಹುಸುಲಭವಾಗಿ ಜನಸ್ಥಾನದ ಮೇಲೆ ಆಕ್ರಮಣ ನಡೆಸಿದ್ದಾನೆ! ರಾವಣ, ನೀನು ಸುಖಲೋಲುಪನಾಗಿ ಮೈಮರೆತಿದ್ದೀಯೆ. ಸ್ವತಂತ್ರಬುದ್ಧಿಯಿಲ್ಲದೆ ಅವರಿವರನ್ನು ಅವಲಂಬಿಸಿದ್ದೀಯೆ. ನಿನ್ನ ರಾಷ್ಟ್ರದಲ್ಲಿ ನಡೆದ ಭಯಂಕರವಾರ್ತೆಯ ಅರಿವೇ ನಿನಗಿಲ್ಲ. ಯೋಗ್ಯಕಾಲದಲ್ಲಿ ತನ್ನ ಕರ್ತವ್ಯವನ್ನು ಯಾವನು ಮಾಡುವುದಿಲ್ಲವೋ, ಭಯಕಾಲದಲ್ಲಿ ಅತಂಕಪಡುವುದಿಲ್ಲವೊ, ಅಂಥ ರಾಜನು ಬಹುಬೇಗನೆ ರಾಜ್ಯಭ್ರಷ್ಟನಾಗುತ್ತಾನೆ; ಹುಲ್ಲುಕಡ್ಡಿಗೆ ಸಮನಾಗುತ್ತಾನೆ. ಸ್ಥಾನಭ್ರಷ್ಟರಾದ ರಾಜರಿಂದ ಜನರಿಗೆ ಯಾವ ಉಪಯೋಗವೂ ಇಲ್ಲ. ಉಟ್ಟು ಹರಿದ ಬಟ್ಟೆ, ಮುಡಿದು ಬಾಡಿದ ಹೂಮಾಲೆ – ಇವು ಹೇಗೆ ಕೆಲಸಕ್ಕೆ ಬಾರದವೋ ಹಾಗೆ ರಾಜ್ಯವನ್ನು ಕಳೆದುಕೊಂಡವನು ಸಮರ್ಥನಾದರೂ ನಿರರ್ಥಕ. ಯಾವನು ರಾಜನೀತಿಯೆಂಬ ಕಣ್ಣನ್ನು ತೆರೆದು ಸದಾ ಎಚ್ಚರದಲ್ಲಿರುವನೋ, ಯಾವನ ಕ್ರೋಧವಾಗಲಿ ಅನುಗ್ರಹವಾಗಲಿ ಸ್ಫುಟವಾದ ಫಲವನ್ನು ಕೊಡುತ್ತದೆಯೋ ಅಂಥ ರಾಜನನ್ನು ಪ್ರಜೆಗಳು ಆದರಿಸುತ್ತಾರೆ. ರಾವಣ, ಈ ರಾಜಗುಣಗಳೊಂದೂ ನಿನ್ನಲ್ಲಿಲ್ಲ. ರಾಕ್ಷಸರ ಕಗ್ಗೊಲೆಯು ನಡೆದಿದ್ದರೂ ಗೂಢಚಾರರಿಂದ ನೀನು ತಿಳಿದುಕೊಳ್ಳಲಿಲ್ಲ; ಪರರಿಗೆ ಅವಮಾನಮಾಡತಕ್ಕವನೂ ವಿಷಯಸುಖದಲ್ಲಿ ನಿರತನೂ ದೇಶಕಾಲಗಳ ವಿಭಾಗದ ಗುಟ್ಟನ್ನು ಅರಿಯದವನೂ ಗುಣದೋಷಗಳನ್ನು ನಿರ್ಣಯಿಸುವ ಬುದ್ಧಿ ಸಾಮರ್ಥ್ಯವಿಲ್ಲದವನೂ ಆದ ನೀನು ಶೀಘ್ರದಲ್ಲಿ ರಾಜ್ಯವನ್ನು ಕಳೆದುಕೊಂಡು ವಿಪತ್ತಿನಲ್ಲಿ ಸಿಕ್ಕಿಕೊಳ್ಳುತ್ತೀಯೆ" ಎಂದು ಹೇಳಿದಳು. ಹೀಗೆ ಶೂರ್ಪನಖಿಯು ರಾವಣನಲ್ಲಿದ್ದ ದೋಷಗಳನ್ನು ಬಿಡಿಸಿ ಹೇಳಲು, ಆ ರಾಕ್ಷಸೇಂದ್ರನು ಅವುಗಳನ್ನು ತನ್ನ ಮನಸ್ಸಿನಲ್ಲಿ ವಿಮರ್ಶಿಸಿ ನೋಡಿಕೊಂಡನು. ಧನ ದರ್ಪ ಪರಾಕ್ರಮಗಳಿಂದ ಮೆರೆಯುತ್ತಿದ್ದ ರಾವಣನು ಈಗ ಏನುಮಾಡಬೇಕೆಂಬ ಚಿಂತೆಗೊಳಗಾದ.

ಈ ರೀತಿಯಲ್ಲಿ ಕೋಪಗೊಂಡ ಶೂರ್ಪನಖಿಯು ಮಂತ್ರಿಗಳೆದುರಿಗೆ ಕಠೋರವಾದ ಮಾತನ್ನಾಡಿದಳು. ಆಗ ರಾವಣನು ಸಿಟ್ಟಿನಿಂದ "ರಾಮನೆಂದರೆ, ಯಾವನವನು? ಅವನ ಶೌರ್ಯವೆಂತಹುದು? ನೋಡಲು ಹೇಗಿದ್ದಾನೆ? ಅವನ ಪರಾಕ್ರಮನೇನು? ದುರ್ಗಮವಾದ ದಂಡಕಾರಣ್ಯಕ್ಕೇಕೆ ಬಂದನಂತೆ? ರಾಮನು ಯುದ್ಧದಲ್ಲಿ ಅಷ್ಟು ಮಂದಿ ರಾಕ್ಷಸರನ್ನೂ ಖರದೂಷಣತ್ರಿಶಿರರನ್ನೂ ಸಂಹರಿಸಿದನಲ್ಲ, ಅವನ ಆಯುಧ ಯಾವ ಬಗೆಯದು?" ಎಂದು ಶೂರ್ಪನಖಿಯನ್ನು ಕೇಳಿದ. ಆ ರಾಕ್ಷಸಿಯು ಕೋಪದಿಂದ ದಿಙ್ಮೂಢಳಾಗಿದ್ದರೂ ಶ್ರೀರಾಮನ ವಿಷಯದಲ್ಲಿ ಇದ್ದುದನ್ನು ಇದ್ದಂತೆ ಹೇಳಿದಳು: "ರಾವಣ, ರಾಮನು ದಶರಥರಾಜನ ಪುತ್ರ; ಆಜಾನುಬಾಹು; ವಿಶಾಲನೇತ್ರ; ನಾರುಬಟ್ಟೆ

ಕೃಷ್ಣಾಜಿನಗಳೇ ಅವನ ವಸ್ತ್ರ; ಮನ್ಮಥನಂಥ ಸುಂದರಾಕೃತಿ! ಚಿನ್ನದ ಕಟ್ಟು ಇರುವ ಕಾಮನಬಿಲ್ಲಿನಂತಹ ಬಿಲ್ಲು ಅವನ ಆಯುಧ! ಅವನು ಆ ಬಿಲ್ಲಿಗೆ ಹೂಡಿ ಬಿಡುವ ಪ್ರಜ್ವಲಿಸುವ ಕೂರಂಬುಗಳು ಘೋರವಿಷಪೂರ್ಣವಾದ ಸರ್ಪಗಳಂತೆ ನುಗ್ಗಿಬರುತ್ತವೆ. ಇಂದ್ರನು ಪೈರಿನಮೇಲೆ ಆಲಿಕಲ್ಲುಗಳ ಮಳೆಯನ್ನು ಸುರಿಸುವಂತೆ ರಾಮನು ಸೇನೆಯ ಮೇಲೆ ಬಾಣದ ಮಳೆಯನ್ನು ಸುರಿಸುತ್ತಿದ್ದ. ಪದಾತಿಯಾಗಿದ್ದ ರಾಮನೊಬ್ಬನೇ ಭೀಮಕಾಯರಾದ ಹದಿನಾಲ್ಕುಸಾವಿರ ರಾಕ್ಷಸರನ್ನೂ ಖರದೂಷಣರನ್ನೂ ಸುಮಾರು ಮೂರು ಗಳಿಗೆಯಲ್ಲಿ ತನ್ನ ಅಸ್ತ್ರಗಳಿಂದ ಕೊಂದು ಹಾಕಿದ. ಋಷಿಗಳಿಗೆ ಅಭಯವನ್ನಿತ್ತು ದಂಡಕಾರಣ್ಯಕ್ಕೆ ರಕ್ಷಣೆಯನ್ನೊದಗಿಸಿದ; ಆದರೆ ನನ್ನೊಬ್ಬಳನ್ನು ಕೊಲ್ಲದೆ ಬಿಟ್ಟ. ಪ್ರಾಜ್ಞನಾದ ರಾಮನು ಸ್ತ್ರೀಹತ್ಯೆಗೆ ಅಂಜಿ ನನ್ನನ್ನು ವಿಕಾರಗೊಳಿಸಿದ್ದಾನೆ. ಅತನಿಗೆ ಮಹಾತೇಜಸ್ವಿಯಾದ ತಮ್ಮನೊಬ್ಬನಿದ್ದಾನೆ. ಶೌರ್ಯಾದಿಗುಣಗಳಿಂದ ಅವನ ಪರಾಕ್ರಮ ರಾಮನಿಗೆ ಸಮಾನವಾದದ್ದು; ಅವನ ಹೆಸರು ಲಕ್ಷ್ಮಣ. ಆ ವೀರನು ರಾಮನಲ್ಲಿ ಅನುರಕ್ತನೂ ಅವನ ಭಕ್ತನೂ ಆಗಿದ್ದಾನೆ. ಲಕ್ಷ್ಮಣನಿಗೆ ತಾಳ್ಮೆ ಇಲ್ಲ. ಶತ್ರುಗಳನ್ನು ಗೆಲ್ಲುವನೇ ಹೊರತು ಎಂದಿಗೂ ಸೋಲತಕ್ಕವನಲ್ಲ. ಅವನು ಪರಾಕ್ರಮಿ, ಬುದ್ಧಿವಂತ, ಬಲಶಾಲಿ. ಲಕ್ಷ್ಮಣನು ರಾಮನ ಬಲಗೈಯಾಗಿದ್ದಾನೆ, ಹೊರಗೆ ಸುಳಿದಾಡುವ ಪ್ರಾಣವಾಗಿದ್ದಾನೆ. ಅಣ್ಣ, ರಾಮನಿಗೆ ಪ್ರೀತಿಪಾತ್ರಳಾದ ಒಬ್ಬ ಧರ್ಮಪತ್ನಿ ಇದ್ದಾಳೆ. ಆ ವಿಶಾಲಾಕ್ಷಿಯ ಮುಖವು ಪೂರ್ಣಚಂದ್ರನಂತಿದೆ; ಯಾವಾಗಲೂ ತನ್ನ ಗಂಡನಿಗೆ ಪ್ರಿಯವಾದುದನ್ನೇ ಆಚರಿಸುತ್ತ ಅವನ ಹಿತದಲ್ಲಿ ನಿರತಳಾಗಿದ್ದಾಳೆ. ಅವಳದ್ದು ಅಪರಂಜಿ ಮೈಬಣ್ಣದ ಮನೋಹರವಾದ ಆಕೃತಿ, ವನದ ಅಧಿದೇವತೆಯೋ ಇನ್ನೊಬ್ಬ ಲಕ್ಷ್ಮೀದೇವಿಯೋ ಎಂಬಂತೆ ವಿರಾಜಿಸುತ್ತಾಳೆ. ಅವಳ ಹೆಸರು ಸೀತೆ; ವಿದೇಹರಾಜನ ಮಗಳು. ಅಷ್ಟು ಸುಂದರಾಂಗಿಯಾದ ಸ್ತ್ರೀಯನ್ನು ಈ ಜಗತ್ತಿನಲ್ಲಿಯೇ ನಾನು ನೋಡಿಲ್ಲ! ಈ ಪ್ರಪಂಚದಲ್ಲಿಯೇ ಎಣೆಯಿಲ್ಲದ ರೂಪವತಿ, ಸುಶೀಲೆ. ಅಣ್ಣ, ಸೀತೆಯು ನಿನಗೆ ಅನುರೂಪಳಾದ ಮಡದಿಯಾಗಬಲ್ಲಳು; ನೀನು ಅವಳಿಗೆ ಅನುರೂಪನಾದ ಪತಿಯಾಗುವೆ! ಆ ನಿತಂಬಿನಿಯನ್ನು ತಂದು ನಿನ್ನ ಹೆಂಡತಿಯಾಗಿ ಮಾಡಬೇಕೆಂದು ನನ್ನ ಉದ್ದೇಶವಿತ್ತು! ಆದ್ದರಿಂದ ಆ ಸುಂದರಿಯನ್ನು ತರಲು ನಾನು ಪ್ರಯತ್ನಿಸಿದೆ. ಎಲೈ ಪರಾಕ್ರಮಿಯೇ, ಆಗ ಕ್ರೂರನಾದ ಲಕ್ಷ್ಮಣನು ನನ್ನನ್ನು ಹೀಗೆ ವಿರೂಪಗೊಳಿಸಿಬಿಟ್ಟ. ಪೂರ್ಣೇಂದುಮುಖಿಯಾದ ವೈದೇಹಿಯನ್ನು ಒಮ್ಮೆ ನೋಡಿದರೆ, ಅಣ್ಣ, ನೀನು ನಿಶ್ಚಯವಾಗಿಯೂ ಕಾಮವಶನಾಗುತ್ತೀಯೆ! ಆ ಪರ್ಣಶಾಲೆಯಲ್ಲಿರುವ ಘಾತುಕನಾದ ರಾಮನನ್ನು ವಧಿಸಿ, ಮೃತರಾದ ಖರಾದಿ ರಾಕ್ಷಸರಿಗೆ ಆತ್ಮಶಾಂತಿಯನ್ನುಂಟುಮಾಡು! ವೀರನಾದ ಲಕ್ಷ್ಮಣನನ್ನೂ ಹರಿತವಾದ ಬಾಣಗಳಿಂದ ಸಂಹರಿಸು! ಸೀತೆಯ ರಕ್ಷಕರೀರ್ವರೂ ಹತರಾದ ಮೇಲೆ, ಅವಳನ್ನು ನೀನು ಸುಖವಾಗಿ ಅನುಭವಿಸಿಕೊಂಡಿರಬಹುದು! ರಾವಣ, ನನ್ನ ಮಾತು ನಿನಗೆ ರುಚಿಸುವುದೇ? ರುಚಿಸುವುದಾದರೆ ನನ್ನ ಮಾತನ್ನು ನಡೆಸು. ನಿನ್ನ ಅಸಾಧಾರಣವಾದ ಸಾಮರ್ಥ್ಯವನ್ನು ವಿಮರ್ಶಿಸಿ ನೋಡು. ಆ ಅಬಲೆಯನ್ನು ಕದ್ದುಕೊಂಡು ಬಾ; ಪರಮಸುಂದರಿಯಾದ ಸೀತೆಯು ನಿನ್ನ ಹೆಂಡತಿಯಾಗಲಿ! ಜನಸ್ಥಾನದಲ್ಲಿದ್ದ ರಾಕ್ಷಸರೆಲ್ಲರನ್ನೂ ರಾಮನು ತನ್ನ ಕುಟಿಲಾಸ್ತ್ರಗಳಿಂದ ಕೊಂದನೆಂಬುದನ್ನು ಕೇಳಿದೆಯಲ್ಲವೆ? ಖರದೂಷಣರೂ

ಹತರಾದರೆಂಬುದೂ ತಿಳಿಯಿತಲ್ಲವೆ? ಇನ್ನು ಮುಂದಿನ ಕರ್ತವ್ಯವೇನೆಂಬುದನ್ನು ವಿಚಾರಿಸಿ ನೋಡು?" ಎಂದು ಹೇಳಿದಳು.

೧೩೫. ಸೀತೆಯನ್ನು ಅಪಹರಿಸಲು ನಿಶ್ಚಯಿಸಿ ಪುನಃ ಮಾರೀಚನ ಆಶ್ರಮಕ್ಕೆ ಹೋದ ರಾವಣನಿಗೆ ಅವನ ಹಿತವಚನ

ಶೂರ್ಪನಖಿಯ ಮಾತನ್ನು ಕೇಳಿ ರಾವಣನಿಗೆ ರೋಮಾಂಚನವಾಯಿತು. ಮಂತ್ರಿಗಳಿಗೆ ಅನುಮತಿಯನ್ನಿತ್ತು ಕಳಿಸಿ ಮುಂದಿನ ಕಾರ್ಯವನ್ನು ನಿರ್ಧರಿಸಿದವನಂತೆ ಹೊರಟನು. ಬಲಾತ್ಕಾರದ ಸೀತಾಪಹರಣವನ್ನು ಕುರಿತ ಸಾಧಕ-ಬಾಧಕಗಳನ್ನು ಅವನ ಮನಸ್ಸು ಲೆಕ್ಕಾಚಾರ ಹಾಕುತ್ತಿತ್ತು. ವಂಚನೆಯಿಂದ ಅಪಹರಿಸಿದಲ್ಲಿ ಸಂಭವಿಸುವ ಗುಣದೋಷಗಳನ್ನೂ ಪರಿಣಾಮಗಳನ್ನೂ ಅವನು ಮನಸ್ಸಿನಲ್ಲಿಯೇ ವಿಮರ್ಶೆಮಾಡಿದ. ಕಡೆಗೆ ಹೀಗೆಯೇ ಮಾಡಬೇಕೆಂದು ನಿರ್ಧಾರಮಾಡಿ ಬುದ್ಧಿಯನ್ನು ಸ್ಥಿರಪಡಿಸಿಕೊಂಡು ರಮ್ಯವಾದ ತನ್ನ ವಾಹನಶಾಲೆಗೆ ಹೋದ. ಅಲ್ಲಿ ರಹಸ್ಯವಾಗಿ ಸೂತನನ್ನು ಕರೆದು ರಥವನ್ನು ಸಜ್ಜುಗೊಳಿಸಬೇಕೆಂದು ಆಜ್ಞಾಪಿಸಿದ. ಸಾರಥಿಯು ಲಗುಬಗೆಯಿಂದ ಒಂದು ಕ್ಷಣದಲ್ಲಿ ರಥವನ್ನು ಸಿದ್ಧಪಡಿಸಿ ರಾವಣನೆದುರಿಗೆ ತಂದು ನಿಲ್ಲಿಸಿದ. ಅದು ರತ್ನಖಚಿತವೂ ಬೇಕಾದ ವೇಗದಲ್ಲಿ ಹೋಗಬಲ್ಲುದೂ ಆದ ಚಿನ್ನದ ರಥ. ಪಿಶಾಚಗಳಂತೆ ಮುಖಗಳಿರುವ ಕನಕಭೂಷಿತಗಳಾದ ಹೇಸರಗತ್ತೆಗಳನ್ನು ಅದಕ್ಕೆ ಹೂಡಲಾಗಿತ್ತು. ಕುಬೇರನ ತಮ್ಮನಾದ ಆ ರಾವಣನು ಮೇಘದಂತೆ ಗಂಭೀರ ಧ್ವನಿಯುಳ್ಳ ಅ ರಥವನ್ನೇರಿ ಸಮುದ್ರದ ಕಡೆಗೆ ಪ್ರಯಾಣಮಾಡಿದ. ರಾಜಚಿಹ್ನಗಳಾದ ಬಿಳಿಯ ಛತ್ರ ಚಾಮರವನ್ನು ಹಿಡಿಸಿಕೊಂಡ ದಶಾನನನು ಮಿರುಗುವ ವೈಡೂರ್ಯದಂತೆ ಶ್ಯಾಮಲಾಂಗನಾಗಿ ಚಿನ್ನದ ಕುಂಡಲಗಳಿಂದ ಅಲಂಕೃತನಾಗಿದ್ದನು. ಇಪ್ಪತ್ತು ಭುಜಗಳಿಂದ ವಿರಾಜಿಸುತ್ತಿದ್ದ ರಾವಣನು ಉತ್ತಮ ವಸ್ತ್ರಗಳನ್ನು ಧರಿಸಿದ್ದ. ದೇವಶತ್ರುವೂ ಋಷಿಘಾತುಕನೂ ಆದ ಆ ದಶಕಂಠನು ಹತ್ತು ಶಿಖರಗಳಿರುವ ಪರ್ವತರಾಜನಂತೆ ಒಪ್ಪುತ್ತಿದ್ದ. ಇಚ್ಛಿಸಿದ ಕಡೆಗೆ ಹೋಗಬಲ್ಲ ಆ ರಥವನ್ನೇರಿದ ರಾಕ್ಷಸೇಂದ್ರನು ಮಿಂಚಿನಿಂದೊಡಗೂಡಿ ಬಲಾಕಾಪಕ್ಷಿಸಹಿತವಾದ ಮೇಘದಂತೆ ಆಕಾಶಮಾರ್ಗದಲ್ಲಿ ಶೋಭಿಸುತ್ತಿದ್ದ. ಆ ವೀರನು ವಿವಿಧ ಪರ್ವತಗಳಿಂದಲೂ ಹೂ-ಹಣ್ಣುಗಳಿಂದ ತುಂಬಿದ ಸಾವಿರಾರು ಮರಗಳಿಂದಲೂ ಒಪ್ಪುವ ಸಮುದ್ರತೀರವನ್ನು ನೋಡುತ್ತ ಹೋದ. ತೀರಗಳಲ್ಲಿ ತಂಪಾದ ಸಿಹಿನೀರಿನಿಂದ ಕೂಡಿದ ಸರೋವರಗಳೂ ಯಜ್ಞವೇದಿಕೆಗಲ್ಲಿರುವ ವಿಶಾಲವಾದ ಆಶ್ರಮಗಳೂ ವಿರಾಜಿಸುತ್ತಿದ್ದವು. ಬಾಳೆಯ ತೋಟ ತೆಂಗಿನ ಮರಗಳು ಹೂವರಳಿದ ಸಾಲ ತಾಲ ತಮಾಲಗಳು ಸಮುದ್ರತೀರದಲ್ಲಿ ರಂಜಿಸುತ್ತಿದ್ದವು. ಕಟ್ಟುನಿಟ್ಟಾದ ಆಹಾರನಿಯಮವನ್ನು ಪಾಲಿಸುತ್ತಿದ್ದ ಮಹರ್ಷಿಗಳು ಅಲ್ಲಿದ್ದರು; ನಾಗ, ಸುಪರ್ಣ, ಗಂಧರ್ವ, ಕಿನ್ನರರು ಅಲ್ಲಿ ನೆರೆದಿದ್ದರು. ಸೂರ್ಯಚಂದ್ರರ ಕಿರಣಗಳನ್ನು ಮಾತ್ರವೇ ಭಕ್ಷಿಸುತ್ತಿದ್ದ ಜಿತೇಂದ್ರಿಯರೂ, ಸಿದ್ಧಚಾರಣರೂ, ವೈಖಾನಸರೂ, ಧೂಮ್ರವರ್ಣದ ವಾಲಖಿಲ್ಯರೂ ಜೀವಿಸುತ್ತಿದ್ದ ಆ

ಪ್ರದೇಶವು ರಮ್ಯವಾಗಿತ್ತು. ಕ್ರೀಡಾವಿನೋದಗಳಲ್ಲಿ ನಿಪುಣೆಯರೂ ದಿವ್ಯಸುಂದರಿಯರೂ ಆದ ಅಪ್ಸರಸ್ತ್ರೀಯರು ದಿವ್ಯಾಭರಣಗಳನ್ನು ತೊಟ್ಟು ದಿವ್ಯಮಾಲ್ಯಗಳನ್ನು ಮುಡಿದು ವಿಹರಿಸುತ್ತಿದ್ದರು; ರೂಪಸಂಪನ್ನೆಯರಾದ ದೇವಸ್ತ್ರೀಯರು ಸಂಚರಿಸುತ್ತಿದ್ದರು. ಅಮೃತಪಾಯಿಗಳಾದ ದೇವತೆಗಳೂ ದಾನವರೂ ತಿರುಗಾಡುತ್ತಿದ್ದರು. ಆ ಸಮುದ್ರತೀರವು ಹಂಸ, ಕ್ರೌಂಚ, ನೀರುಹಕ್ಕಿ ಮುಂತಾದುವುಗಳಿಂದ ಕೂಡಿ ರಮಣೀಯವಾಗಿತ್ತು. ಸಾರಸಗಳು ಇಂಪಾಗಿ ಕೂಗುತ್ತಿದ್ದವು. ವೈಡೂರ್ಯಮಯವಾದ ರಮ್ಯಶಿಲಾತಲವು ಸಮುದ್ರಚ್ಛಾಯೆಯ ಪ್ರತಿಫಲನದಿಂದ ಮನೋಹರವಾಗಿತ್ತು. ಅಲ್ಲಿ ನೆರೆದಿದ್ದ ಶುಭ್ರವರ್ಣದ ವಿಶಾಲವಿಮಾನಗಳು ದಿವ್ಯಮಾಲ್ಯಗಳಿಂದ ಶೋಭಿಸುತ್ತಿದ್ದವು. ಅವುಗಳಲ್ಲಿ ಇಂಪಾದ ವಾದ್ಯಘೋಷವೂ ಸಂಗೀತವೂ ನಡೆಯುತ್ತಿತ್ತು.

ರಾವಣನು ಪ್ರಯಾಣಮಾಡುತ್ತ ಬೇಕಾದ ವೇಗದಲ್ಲಿ ಹೋಗುವ ಆ ವಿಮಾನದಲ್ಲಿ ಕುಳಿತು ಗಂಧರ್ವರನ್ನೂ ಅಪ್ಸರೆಯರನ್ನೂ ನೋಡುತ್ತ ಸಾಗಿದ. ಸುಗಂಧಿಯಾದ ರಸವನ್ನು ಸುರಿಸುವ ಧೂಪದ ಮರಗಳೂ ಶ್ರೀಗಂಧದ ಮರಗಳೂ, ಅಗರು, ತಕ್ಕೋಲ, ಜಾಜೀಕಾಯಿ ಮೊದಲಾದ ಸುಗಂಧವೃಕ್ಷಗಳ ವನಗಳನ್ನೂ, ಹೊಂಗೆಯ ಹೂಗಳನ್ನೂ ಮೆಣಸಿನ ಬಳ್ಳಿಯ ಪೊದೆಗಳನ್ನೂ, ತೀರದಲ್ಲಿ ಚೆಲ್ಲಿದ ಮುತ್ತಿನ ರಾಶಿಗಳನ್ನೂ ನೋಡುತ್ತ ಹೋದ. ಸಮುದ್ರತೀರದಲ್ಲಿ ಒಂದೆಡೆ ಶಂಖಗಳ ರಾಶಿ, ಇನ್ನೊಂದೆಡೆ ಹವಳಗಳ ರಾಶಿ, ಮತ್ತೊಂದೆಡೆ ಚಿನ್ನ ಬೆಳ್ಳಿಗಳ ಅದುರುಗಳಿರುವ ಬಂಡೆಗಳ ರಾಶಿಗಳು ಕಾಣುತ್ತಿದ್ದವು. ಸುಂದರವಾದ ನೀರಿನ ಬುಗ್ಗೆಗಳೂ, ತಿಳಿನೀರಿನ ಕೊಳಗಳೂ ಕಂಡವು. ದಾರಿಯಲ್ಲಿ ಧನಧಾನ್ಯಗಳಿಂದ ತುಂಬಿಯೂ, ಚೆಲುವೆಯರಾದ ಹೆಣ್ಣುಗಳಿಂದ ಕೂಡಿಯೂ, ಆನೆ ಕುದುರೆ, ರಥಗಳಿಂದ ಸಮೃದ್ಧವಾಗಿಯೂ ಇರುವ ಅನೇಕ ಪಟ್ಟಣಗಳನ್ನು ನೋಡುತ್ತ ರಾವಣನು ಸಾಗಿದ. ಸಮುದ್ರತೀರವು ಸಮತಳವಾಗಿತ್ತು. ಮೆಲುವಾಗಿ ಗಾಳಿ ಬೀಸುತ್ತಿತ್ತು. ಸ್ವರ್ಗಲೋಕದಂತಿದ್ದ ಆ ಸುಂದರಪ್ರದೇಶವನ್ನು ನೋಡುತ್ತ ಹೋಗುವಾಗ ಮೋಡದಂತೆ ಹರಡಿದ್ದ ಒಂದು ಆಲದಮರವು ಅವನ ಕಣ್ಣಿಗೆ ಬಿತ್ತು. ಅನೇಕ ಋಷಿಗಳು ಆ ಮರವನ್ನು ಆಶ್ರಯಿಸಿದ್ದರು. ಆ ಮರದ ಬಿಳಲುಗಳು ಸುತ್ತಲೂ ನೂರು ಯೋಜನಗಳಷ್ಟು ವಿಸ್ತಾರವಾಗಿ ವ್ಯಾಪಿಸಿದ್ದವು. ಮಹರ್ಷಿಗಳು ಆ ವೃಕ್ಷದ ಆಶ್ರಯದಲ್ಲಿ ತಪಸ್ಸುಮಾಡುತ್ತಿದ್ದರು. ಸುಭದ್ರ ಎಂಬ ಹೆಸರಿನ ಆ ಆಲದಮರವನ್ನು ನೋಡುತ್ತ ಹೋದ ರಾವಣನು ಸಮುದ್ರದ ಆಚೆಯ ದಡವನ್ನು ಸೇರಿ ಜನಸಮ್ಮರ್ದವಿಲ್ಲದ ಒಂದಾನೊಂದು ಪುಣ್ಯಾರಣ್ಯದ ಮಧ್ಯದಲ್ಲಿದ್ದ ಒಂದು ಆಶ್ರಮವನ್ನು ಕಂಡ. ಅದರಲ್ಲಿ ಕೃಷ್ಣಾಜಿನಧಾರಿಯಾಗಿ ಜಟೆಯನ್ನು ಬಿಟ್ಟು ವಲ್ಕಲವನ್ನುಟ್ಟು ಆಹಾರನಿಯಮದಿಂದಿದ್ದ ಮಾರೀಚನೆಂಬ ರಾಕ್ಷಸನಿದ್ದ; ರಾವಣನು ಆತನಿದ್ದಲ್ಲಿಗೆ ಹೋದ. ಆಗ ಮಹಾರಾಜನು ಬಂದನೆಂದಣಿಸಿ ಮಾರೀಚ ಮನುಷ್ಯದುರ್ಲಭವಾದ ಸರ್ವಸತ್ಕಾರಗಳಿಂದ ಯಥೇಷ್ಟವಾಗಿ ರಾವಣನನ್ನು ಆದರಿಸಿದ. ಆತನು ಊಟ ಪಾನಕಗಳಿಂದ ರಾವಣನನ್ನು ಸತ್ಕರಿಸಿ ಅರ್ಥಗರ್ಭಿತವಾದ ಮಾತಿನಿಂದ "ರಾವಣ, ಲಂಕೆಯಲ್ಲಿ ಎಲ್ಲರಿಗೂ ಕುಶಲವಷ್ಟೆ? ಪುನಃ ನೀನು ಇಷ್ಟು ಬೇಗನೆ ಇಲ್ಲಿಗೆ ಬಂದ ಉದ್ದೇಶವೇನು?" ಎಂದು ಕೇಳಿದ. ಆಗ ತೇಜಸ್ವಿಯೂ ಚತುರ ಮಾತುಗಾರನೂ

ಆದ ರಾವಣನು ಹೀಗೆ ಹೇಳತೊಡಗಿದ:

"ಅಯ್ಯಾ ಮಾರೀಚ, ನಾನು ಹೇಳುವುದನ್ನು ಕೇಳು. ಈಗ ನಾನು ಬಹಳ ಪೇಚಿನಲ್ಲಿ ಸಿಕ್ಕಿದ್ದೇನೆ. ಈ ಸಮಯದಲ್ಲಿ ನನಗೆ ನೀನೇ ಗತಿ. ನಿನಗೆ ಜನಸ್ಥಾನದ ವಿಷಯ ಗೊತ್ತಿದೆ. ಅಲ್ಲಿ ನನ್ನ ತಮ್ಮಂದಿರಾದ ಖರದೂಷಣರೂ ತಂಗಿಯಾದ ಶೂರ್ಪನಖಿಯೂ ನೆಲೆಸಿದ್ದನ್ನು ನೀನು ಬಲ್ಲೆ. ನರಮಾಂಸಾಹಾರಿಯೂ ಮಹಾತೇಜಸ್ವಿಯೂ ಆದ ದೂಷಣನೂ ಯುದ್ಧಾವಕಾಶವನ್ನು ಪಡೆದ ಇನ್ನೂ ಬಹುಮಂದಿ ರಾಕ್ಷಸರೂ ಅಲ್ಲಿ ನೆಲಸಿದ್ದರು. ಆ ಮಹಾರಣ್ಯದಲ್ಲಿ ಧರ್ಮಚಾರಿಗಳಾದ ಮುನಿಗಳನ್ನು ನನ್ನ ಆಜ್ಞೆಯಂತೆ ಪೀಡಿಸುತ್ತ ಅಲ್ಲಿಯೇ ವಾಸವಾಗಿದ್ದರೆಂಬುದನ್ನು ನೀನು ಬಲ್ಲೆಯಷ್ಟೆ. ಭೀಕರಕಾರ್ಯಗಳನ್ನೆಸಗುತ್ತಿದ್ದ ಆ ಹದಿನಾಲ್ಕುಸಾವಿರ ಮಂದಿ ಶೂರರಾದ ರಾಕ್ಷಸರು ಖರನ ಇಷ್ಟದಂತೆ ನಡೆಯುತ್ತ ಕೆಚ್ಚಿನಿಂದ ಹೋರಾಡತಕ್ಕವರಾಗಿದ್ದರು. ಜನಸ್ಥಾನದಲ್ಲಿದ್ದ ಅವರೆಲ್ಲರೂ ಬಲಾಢ್ಯರು. ಅವರು ಸರ್ವಸನ್ನಾಹದಿಂದ ಹೋಗಿ ರಾಮನೆಂಬುವವನೊಡನೆ ಯುದ್ಧ ಮಾಡಬೇಕಾಯಿತು. ಖರನೇ ಮೊದಲಾದ ಸಕಲರಾಕ್ಷಸರೂ ವಿವಿಧಾಯುಧಗಳಿಂದ ಸಜ್ಜಾಗಿ ಹೋದರು. ಅವರಲ್ಲಿ ತಪ್ಪಿದ್ದರೆ ರಾಮನು ಕಠೋರವಾಕ್ಯಗಳಿಂದ ಅವರನ್ನು ದೂಷಿಸಬಹುದಾಗಿತ್ತು. ಆದರೆ ಅವನು ಹಾಗೆ ಮಾಡದೆ ಇದ್ದಕ್ಕಿದ್ದಂತೆ ಕುಪಿತನಾಗಿ ಧನುಸ್ಸಿಗೆ ಬಾಣಗಳನ್ನು ಜೋಡಿಸಿಯೇಬಿಟ್ಟ. ಕೇವಲ ಪದಾತಿಯಾಗಿ ನಿಂತಿದ್ದ ಆ ಮನುಷ್ಯನು ಉಗ್ರವೀರ್ಯರಾದ ಹದಿನಾಲ್ಕುಸಾವಿರ ರಾಕ್ಷಸರನ್ನು ತೀಕ್ಷ್ಣಾಸ್ತ್ರಗಳಿಂದ ಸಂಹರಿಸಿದ್ದಾನೆ. ಯುದ್ಧದಲ್ಲಿ ಖರನು ಹತನಾದ; ದೂಷಣನು ಸತ್ತುಬಿದ್ದ; ತ್ರಿಶಿರನೂ ಮೃತನಾದ. ದಂಡಕಾರಣ್ಯದಲ್ಲಿ ಭಯವೇ ಇಲ್ಲದಂತೆ ಮಾಡಿಬಿಟ್ಟನಲ್ಲ! ಅವನೊಬ್ಬ ಲಂಪಟಿಗ, ಲೋಭಿ, ಧರ್ಮವನ್ನು ಬಿಟ್ಟವನು, ಅಧರ್ಮಿ; ಪ್ರಾಣಿಗಳಿಗೆ ಕೆಡುಕುಮಾಡುವುದೇ ಅವನ ನಿತ್ಯೋದ್ಯೋಗವಾಗಿದೆ. ನನ್ನ ತಂಗಿಯ ಕಿವಿಮೂಗುಗಳನ್ನು ಕೊಯ್ದು ವಿರೂಪಗೊಳಿಸಿದ್ದಾನೆ, ಅಂಥ ದ್ವೇಷಕ್ಕೆ ಕಾರಣವಾದರೂ ಏನಿತ್ತು? ಕೇವಲ ತನಗೆ ಬಲವಿದೆಯೆಂದು ಕೊಬ್ಬಿನಿಂದ ಈ ದುಷ್ಟ ಕೃತ್ಯನನ್ನು ಎಸಗಿದ್ದಾನೆ. ಆತನಿಗೆ ದೇವಕನ್ಯೆಯಂತೆ ಸುಂದರಿಯಾದ ಸೀತೆಯೆಂಬ ಹೆಂಡತಿ ಇದ್ದಾಳಂತೆ. ಸಾಹಸಪಟ್ಟು ಅವಳನ್ನು ಜನಸ್ಥಾನದಿಂದ ತಂದುಬಿಡಬೇಕೆಂದಿದ್ದೇನೆ; ಅದಕ್ಕೆ ನಿನ್ನ ಸಹಾಯ ಬೇಕು. ಎಲೈ ಪರಾಕ್ರಮಿ, ನೀನೂ ನನ್ನ ತಮ್ಮಂದಿರೂ ನನಗೆ ಸಹಾಯಕರಾಗಿ ಬಳಿಯಲ್ಲಿದ್ದರೆ, ದೇವತೆಗಳೆಲ್ಲರೂ ಒಂದಾಗಿ ಬಂದರೂ ನಾನು ಲಕ್ಷಿಸುವುದಿಲ್ಲ. ಮಾರೀಚ, ನೀನು ಮಹಾಶೂರನೂ ಮಾಯಾವಿಶಾರದನೂ ಆಗಿದ್ದೀಯೆ. ಆದ್ದರಿಂದ, ನಾನು ನಿನ್ನ ಬಳಿಗೆ ಬರಬೇಕಾಯಿತು. ಈಗ ನೀನು ಮಾಡಬೇಕಾದ ಸಹಾಯವಿಷ್ಟೆ: ನೀನು ಒಂದು ಚಿನ್ನದ ಜಿಂಕೆಯ ರೂಪವನ್ನು ಧರಿಸು; ಮೈಮೇಲೆ ಬೆಳ್ಳಿಯ ಚುಕ್ಕೆಗಳಿರಲಿ. ಹೀಗೆ ವಿಚಿತ್ರವಾದ ಮೃಗದ ವೇಷದಿಂದ ರಾಮನ ಆಶ್ರಮ ಪರಿಸರದಲ್ಲಿ ಸೀತೆಯ ಎದುರಿಗೆ ಸಂಚರಿಸುತ್ತಿರು. ನಿಸ್ಸಂಶಯವಾಗಿ ಸೀತೆಗೆ ಆಸೆಯಾಗಿ ಆ ಮೃಗವನ್ನು ಹಿಡಿದುಕೊಡೆಂದು ತನ್ನ ಗಂಡನಿಗೂ ಲಕ್ಷ್ಮಣನಿಗೂ ದುಂಬಾಲು ಬೀಳುವಳು. ಅವರಿಬ್ಬರೂ ಅದಕ್ಕೋಸ್ಕರ ಹೊರಟುಹೋಗಲು, ಅವರಿಲ್ಲದ ಆಶ್ರಮಕ್ಕೆ ನಾನು ಹೋಗಿ ಯಾವ ಅಡ್ಡಿಯೂ ಇಲ್ಲದೆ ರಾಹುವು ಚಂದ್ರಪ್ರಭೆಯನ್ನು ಆಕ್ರಮಿಸುವಂತೆ

ಸೀತೆಯನ್ನು ಅಪಹರಿಸಿ ತರುತ್ತೇನೆ. ಅನಂತರ ರಾಮನು ಹೆಂಡತಿಯ ವಿರಹದಿಂದ ನೊಂದು ಕಂದಿ ಕುಂದಿ ಕೃಶನಾಗುವನು. ಸರಿಯಾಗಿ ಸೇಡು ತೀರಿಸಿಕೊಂಡೆನೆಂಬ ನೆಮ್ಮದಿ ಆಗ ನನ್ನ ಮನಸ್ಸಿಗೆ ಉಂಟಾಗುತ್ತದೆ. ಆಮೇಲೆ ನಿಶ್ಚಿಂತೆಯಿಂದ ಅವನನ್ನು ಸಂಹರಿಸುತ್ತೇನೆ" ಎಂದು ತನ್ನ ಆಲೋಚನೆಯನ್ನು ಹೇಳಿದ.

ಶ್ರೀರಾಮನ ಸುದ್ದಿಯನ್ನು ಕೇಳಿದೊಡನೆಯೇ ಮಾರೀಚನ ಬಾಯಿ ಒಣಗಿತು, ಅವನು ಭಯದಿಂದ ತಲ್ಲಣಿಸಿದ; ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡ. ಶ್ರೀರಾಮನ ಪರಾಕ್ರಮವೆಂತಹದೆಂಬುದು ಮಾರೀಚನಿಗೆ ಹಿಂದೆಯೇ ಪರಿಚಿತವಾಗಿತ್ತು. ಅದನ್ನು ನೆನೆಸಿಕೊಂಡು ಅವನು ಹೆದರಿದ. ಮನಸ್ಸು ವಿಷಣ್ಣವಾಯಿತು. ಅವನು ಕೈಮುಗಿದುಕೊಂಡು ರಾವಣನಿಗೂ ತನಗೂ ಹಿತಕರವಾದ ಯಥಾರ್ಥವಾದ ಕೆಲವು ಮಾತನ್ನಾಡಿದ: "ರಾಕ್ಷಸೇಂದ್ರ, ಪ್ರಿಯವಾದ ಮಾತನ್ನು ಆಡತಕ್ಕವರು ಯಾವಾಗಲೂ ಸುಲಭವಾಗಿ ದೊರೆಯುತ್ತಾರೆ; ಆದರೆ ಅಪ್ರಿಯವಾದರೂ ಹಿತಕರವಾದ ಮಾತನ್ನು ಆಡತಕ್ಕವರು ದುರ್ಲಭ. ಆ ಮಾತನ್ನು ಕೇಳತಕ್ಕವರೂ ದುರ್ಲಭ. ರಾಮನು ಎಂಥ ಮಹಾವೀರನೆಂಬುದೂ, ಎಷ್ಟು ಉದಾತ್ತ ಗುಣಶಾಲಿಯೆಂಬುದೂ ನಿನಗೆ ಖಂಡಿತ ಗೊತ್ತಿಲ್ಲ; ನೀನು ಗುಪ್ತಚಾರರನ್ನು ನೇಮಿಸಿ ಇದನ್ನು ತಿಳಿದುಕೊಂಡಿಲ್ಲ. ರಾಮನು ಸಾಕ್ಷಾತ್ ಮಹೇಂದ್ರನಿಗೂ ವರುಣನಿಗೂ ಸಮಾನನಾದವನು ಎಂಬುದನ್ನು ನೀನು ಅರಿಯೆ. ಅಯ್ಯಾ ರಾವಣ, ನೀನು ಹೇಳುವಂತೆ ಮಾಡಿದರೆ, ಈ ಭೂಲೋಕದಲ್ಲಿರುವ ರಾಕ್ಷಸರಿಗೆ ಸುಖವಾದೀತೆ? ರಾಮನು ಕ್ರುದ್ಧನಾದರೆ ಈ ಲೋಕದಲ್ಲಿರುವ ರಾಕ್ಷಸಕುಲವನ್ನೇ ಅಳಿಸದೆ ಬಿಡುತ್ತಾನೆಯೇ? ಜನಕಪುತ್ರಿಯು ನಿನ್ನ ಜೀವಕ್ಕೆ ಸಂಚಕಾರವನ್ನು ತರುವುದಕ್ಕಾಗಿ ಜನಿಸಿರಬಹುದೆ? ಸೀತಾನಿಮಿತ್ತವಾಗಿ ನಮಗೆ ದೊಡ್ಡ ಸಂಕಷ್ಟವು ಕಾದಿರಬಹುದಲ್ಲವೇ? ನಿನ್ನಂಥ ಕಾಮಲಂಪಟನಾದ ನಿರಂಕುಶಪ್ರಭುವನ್ನು ಪಡೆದ ಲಂಕಾಪುರಿಗೆ ಕೊನೆಗಾಲ ಬಂದಿರಬಹುದೆ? ನೀನು ಮತ್ತು ನಿನ್ನ ರಾಕ್ಷಸರೊಡನೆ ಲಂಕೆಯು ನಾಶಹೊಂದದೆ ಇದ್ದೀತೆ? ರಾವಣ, ರಾಮನನ್ನು ತಂದೆಯು ಬಿಟ್ಟಿಲ್ಲ, ಅವನು ಮರ್ಯಾದೆ ಇಲ್ಲದವನಲ್ಲ, ಲೋಭಿಯೂ ಅಲ್ಲ, ದುಶ್ಶೀಲನೂ ಅಲ್ಲ, ಅವನು ಕ್ಷತ್ರಿಯಾಧಮನೂ ಅಲ್ಲ. ರಾವಣ, ಅವನ ತಂದೆಯಾದ ದಶರಥನು ಕಾರಣಾಂತರದಿಂದ ಕೈಕೇಯಿಯ ವಂಚನೆಗೆ ಒಳಗಾದ. ಆಗ ತಂದೆಯನ್ನು ಸತ್ಯವಾದಿಯೆಂದು ಸ್ಥಾಪಿಸುವುದಾಗಿ ಪ್ರತಿಜ್ಞೆ ಮಾಡಿ, ಆ ಧರ್ಮಾತ್ಮನು ಕಾಡಿಗೆ ಬಂದಿದ್ದಾನೆ. ಕೈಕೇಯಿಗೆ ಸಂತೋಷವಾಗಲೆಂದೂ ತಂದೆಯಾದ ದಶರಥನಿಗೆ ಹಿತವಾಗಲೆಂದೂ ರಾಜ್ಯವನ್ನೂ ರಾಜಭೋಗಗಳನ್ನೂ ತೊರೆದು ದಂಡಕಾರಣ್ಯವನ್ನು ಸೇರಿದ್ದಾನೆ. ನೀನು ಆತನ ವಿಷಯವನ್ನು ತಪ್ಪಾಗಿ ಕೇಳಿದ್ದೀಯೆ, ಅದೆಲ್ಲವೂ ಸುಳ್ಳು. ರಾಮನೆಂದರೆ ಶರೀರಧಾರಿಯಾದ ಸಾಕ್ಷಾತ್ ಧರ್ಮಪುರುಷ; ಸತ್ಯಸಂಧನಾದ ಸತ್ಪುರುಷ. ದೇವತೆಗಳಿಗೆ ಇಂದ್ರನಿರುವಂತೆ ರಾಮನು ಸಕಲರಿಗೂ ಹಿತಕಾರಿಯಾದ ಪ್ರಭುವಾಗಬಲ್ಲ. ಅವನ ಪತ್ನಿಯಾದ ವೈದೇಹಿ ತನ್ನ ಪಾತಿವ್ರತ್ಯದ ತೇಜಸ್ಸಿನಿಂದಲೇ ಸುರಕ್ಷಿತಳಾಗಿದ್ದಾಳೆ. ಅವಳನ್ನು ಬಲಾತ್ಕಾರದಿಂದ ಅಪಹರಿಸಲು ಬಯಸುವೆಯಾ? ಸೂರ್ಯನಿಂದ ಅವನ ಬಿಸಿಲನ್ನು ಅಗಲಿಸಿ ತರುವೆಯಾ? ರಾವಣ, ರಾಮನೆಂದರೆ ಹಿಡಿಯಲು ಸಾಧ್ಯವಾಗದ ಬೆಂಕಿ, ಪ್ರಜ್ವಲಿಸುವ ಆ ಅಗ್ನಿಯಲ್ಲಿ ಥಟ್ಟನೆ ಹೋಗಿ ಬೀಳಬೇಡ! ಬಾಣಗಳೆಂಬ

ಜ್ವಾಲೆಯನ್ನು ಕಕ್ಕುತ್ತ ರಾಮನು ಕ್ರುದ್ಧನಾಗಿ ನಿಂತರೆ, ಅವನ ಬಿಲ್ಲು ಯಮಪಾಶದಂತೆ ಕ್ರೂರವಾಗುತ್ತದೆ. ನೀನು ರಾಜ್ಯವನ್ನೂ ಸುಖವನ್ನೂ ಪ್ರಿಯನಾದ ಪ್ರಾಣವನ್ನೂ ಪರಿತ್ಯಜಿಸಿ ಆ ಯಮನನ್ನು ಎದುರುಹಾಕಿಕೊಳ್ಳಬೇಡ! ರಾಮನ ಕೋದಂಡ ಬಲದ ರಕ್ಷಣೆಯಲ್ಲಿರುವ ಜನಕಾತ್ಮಜೆಯನ್ನು ಕದ್ದು ತರಲು ನಿನ್ನಿಂದಾಗದು. ರಾಮನು ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಆಕೆಯನ್ನು ಪ್ರೀತಿಸುತ್ತಾನೆ; ಆಕೆಯೂ ಆತನನ್ನೇ ನಂಬಿರುವ ಪತಿವ್ರತೆ. ಆ ತೇಜಸ್ವಿಯ ಕಾಂತೆಯಾದ ಮೈಥಿಲಿಯನ್ನು ನೀನು ಬಲಾತ್ಕರಿಸುವುದು ಅಶಕ್ಯವಾದ ಮಾತು. ಸೀತೆಯು ಧಗಧಗ ಉರಿಯುವ ಬೆಂಕಿಯ ಜ್ವಾಲೆಯಿದ್ದಂತೆ. ರಾವಣ, ವ್ಯರ್ಥವಾಗಿ ಇಂಥ ಉದ್ಯೋಗಕ್ಕೆ ಕೈ ಹಾಕಿದರೆ ನಿನಗಾಗುವ ಲಾಭವೇನು? ಯುದ್ಧಪ್ರಸಂಗ ಒದಗಿ ನೀನು ಅವನ ಕಣ್ಣಿಗೆ ಬಿದ್ದರೆ ಅಲ್ಲಿಗೆ ನಿನ್ನ ಆಯುಸ್ಸು ಮುಗಿದಂತೆಯೇ! ವಿಭೀಷಣನೇ ಮೊದಲಾದ ಧರ್ಮಿಷ್ಠರಾದ ಸಚಿವರನ್ನು ಕರೆಯಿಸಿ ಮಂತ್ರಾಲೋಚನೆಮಾಡಿ ಒಂದು ನಿಶ್ಚಯಕ್ಕೆ ಬಾ. ಈ ಉದ್ದೇಶದ ಗುಣದೋಷಗಳನ್ನೂ ಬಲಾಬಲಗಳನ್ನೂ ವಿಮರ್ಶಿಸಿ ನೋಡು. ನಿನ್ನ ಸಾಮರ್ಥ್ಯವೆಷ್ಟು, ರಾಮನ ಸಾಮರ್ಥ್ಯವೆಷ್ಟು ಎಂಬುದನ್ನು ಸರಿಯಾಗಿ ಪರ್ಯಾಲೋಚಿಸಿ, ಯಾವುದು ಹಿತ ಯಾವುದು ಅಹಿತ ಎಂಬುದನ್ನು ನಿರ್ಣಯಿಸು. ಅನಂತರ ನಿನಗೆ ಯುಕ್ತವೆಂದು ತೋರಿದ್ದನ್ನು ಮಾಡು" ಎಂದು ಮಾರೀಚ ಹಿತವಚನಗಳನ್ನಾಡಿದ.

೧೬. ಮಾರೀಚ ತನ್ನ ಅನುಭವವನ್ನು ಹೇಳಿ ರಾಮಾಸ್ತ್ರ ಮಹಿಮೆಯನ್ನು ವರ್ಣಿಸುವುದು

ಆನಂತರ ಮಾರೀಚ ತನ್ನ ಹಿಂದಿನ ಅನುಭವವನ್ನು ಹೀಗೆ ವಿವರಿಸಿದ: "ರಾವಣ, ಹಿಂದೆ ನಾನು ವೀರ್ಯದ ಕಿಚ್ಚಿನಿಂದ ಸುತ್ತುತಿದ್ದೆ; ನನಗೆ ಸಾವಿರ ಆನೆಗಳ ಬಲವಿತ್ತು; ನನ್ನ ದೇಹವು ಪರ್ವತಾಕಾರವಾಗಿತ್ತು. ಕಾಲಮೇಘದಂತೆ ಗಗನಮಾರ್ಗದಲ್ಲಿ ಸಂಚರಿಸುತ್ತ, ಸುವರ್ಣಕುಂಡಲಗಳನ್ನೂ ಕಿರೀಟವನ್ನೂ ಧರಿಸಿ, ಗದೆಯನ್ನು ಹಿಡಿದು ಜನರಿಗೆ ಭಯವನ್ನುಂಟುಮಾಡುತ್ತಿದ್ದೆ. ಋಷಿಗಳ ಮಾಂಸವನ್ನು ತಿನ್ನುತ್ತ ದಂಡಕಾರಣ್ಯದಲ್ಲಿ ಅಲೆಯುತ್ತಿದ್ದೆ. ಅಲ್ಲಿ ಧರ್ಮಾತ್ಮನಾದ ವಿಶ್ವಾಮಿತ್ರ ಮಹರ್ಷಿಯು ನನಗೆ ಅಂಜಿ ದಶರಥಭೂಪಾಲನ ಬಳಿಗೆ ತಾನೇ ಹೋಗಿ 'ರಾಜನೇ, ಮಾರೀಚನಿಂದ ನನಗೆ ಬಹಳ ಅಂಜಿಕೆಯಾಗಿದೆ, ನಿನ್ನ ಮಗನಾದ ರಾಮನು ಬಂದು ಸಾವಧಾನದಿಂದಿದ್ದು ಪರ್ವಕಾಲದಲ್ಲಿ ನನ್ನ ಯಜ್ಞವನ್ನು ರಕ್ಷಿಸಲಿ' ಎಂದು ಕೇಳಿಕೊಂಡನು. ಆಗ ದಶರಾಥರಾಜನು 'ಮುನಿಗಳೆ, ನನ್ನ ರಾಮನು ಇನ್ನೂ ಹನ್ನೆರಡು ವರ್ಷದ ಹುಡುಗ. ಅಸ್ತ್ರವಿದ್ಯೆಯಲ್ಲಿ ಚೆನ್ನಾಗಿ ಪರಿಚಯವಿಲ್ಲ. ಅವನ ಬದಲಿಗೆ ನಾನೇ ಚತುರಂಗಬಲ ಸಮೇತನಾಗಿ ಬಂದು ನಿಮ್ಮ ಇಷ್ಟದಂತೆ ಶತ್ರುಗಳನ್ನು ಸಂಹರಿಸುತ್ತೇನೆ' ಎಂದ. ಆಗ ಆ ಮುನಿಯು 'ರಾಜೇಂದ್ರ, ರಾಮನನ್ನು ಬಿಟ್ಟು ಇನ್ನು ಯಾರ ಬಲವೂ ಆ ರಾಕ್ಷಸನನ್ನು ಅಡಗಿಸುವುದಕ್ಕೆ ಸಾಲದು. ನೀನು ಯುದ್ಧಮಾಡಿ ದೇವತೆಗಳನ್ನೂ ಸಹ ರಕ್ಷಿಸಿದ ಪರಾಕ್ರಮಿಯೇನೋ ಹೌದು.

ನಿನ್ನದು ಎಷ್ಟು ದೊಡ್ಡ ಸೇನೆಯೇ ಆಗಿದ್ದರೂ ಅದು ಇಲ್ಲಿಯೇ ಇರಲಿ! ರಾಮನು ಹುಡುಗನಾದರೂ ಮಹಾತೇಜಸ್ವಿ; ಅವನು ಮಾರೀಚನನ್ನು ನಿಗ್ರಹಿಸುವುದಕ್ಕೆ ಸಮರ್ಥ. ನಾನು ರಾಮನನ್ನು ಕರೆದುಕೊಂಡು ಹೋಗುತ್ತೇನೆ. ರಾಜ, ನಿನಗೆ ಶುಭವಾಗಲಿ!' ಎಂದು ನುಡಿದ. ಅಮೇಲೆ ವಿಶ್ವಾಮಿತ್ರನು ಆ ರಾಜಪುತ್ರನನ್ನು ಕರೆದುಕೊಂಡು ಸಂತೋಷದಿಂದ ತನ್ನ ಆಶ್ರಮಕ್ಕೆ ಬಂದ. ಅನಂತರ ವಿಶ್ವಾಮಿತ್ರನು ದಂಡಕಾರಣ್ಯದಲ್ಲಿ ಯಜ್ಞದೀಕ್ಷಿತನಾಗಲು, ರಾಮನು ತನ್ನ ಧನುಸ್ಸನ್ನು ವಿವಿಧ ರೀತಿಯಲ್ಲಿ ಜೇವಡೆಯುತ್ತ ಅವನಿಗೆ ಬೆಂಗಾವಲಾಗಿ ನಿಂತ. ಆಗ ರಾಮನ ಮುಖದಲ್ಲಿ ಇನ್ನೂ ಯೌವನದ ಗುರುತುಗಳೇ ಹುಟ್ಟಿರಲಿಲ್ಲ; ಆದರೂ ಒಂದು ಬಗೆಯ ತೇಜೋವಿಶೇಷವು ಅವನಲ್ಲಿತ್ತು. ಅವನು ಧನುರ್ಧಾರಿಯಾಗಿ ಶಿಖೆಯನ್ನು ಕಟ್ಟ ಕೊರಳಿಗೆ ಚಿನ್ನದ ಸರವನ್ನು ಹಾಕಿಕೊಂಡಿದ್ದ. ಆತನ ಹೊಳೆಯುವ ತೇಜಸ್ಸಿನಿಂದ ದಂಡಕಾರಣ್ಯಕ್ಕೆ ವಿಶಿಷ್ಟ ಬಗೆಯ ಶೋಭೆಯುಂಟಾಗಿತ್ತು. ರಾಮನು ನನಗೆ ಆಗ ತಾನೇ ಉದಿಸಿದ ಬಾಲಚಂದ್ರನಂತೆ ಕಾಣಿಸಿದ. ನಾನಾದರೋ ಬಲಶಾಲಿ; ವರವನ್ನು ಗಳಿಸಿದವನು. ನಾನು ಮಿಂಚಿನಿಂದ ಕೂಡಿದ ಮೋಡದಂತೆ ದರ್ಪದಿಂದ ವಿಶ್ವಾಮಿತ್ರನ ಆಶ್ರಮದ ಕಡೆಗೆ ನುಗ್ಗಿಹೋದೆ. ಶಸ್ತ್ರಧಾರಿಯಾಗಿ ಥಟ್ಟನೆ ನುಗ್ಗಿಹೋದ ನನ್ನನ್ನು ಕಂಡೊಡನೆ ರಾಮನು ನಿಶ್ಶಂಕೆಯಿಂದ ಧನುಸ್ಸಿಗೆ ಹೆದೆಯೇರಿಸಿದ. ರಾಘವನು ಇನ್ನೂ ಹುಡುಗನೆಂದು ತಿಳಿದ ನಾನು ಅವನನ್ನು ಲಕ್ಷಿಸದೆ ಅವಿವೇಕದಿಂದ ವಿಶ್ವಾಮಿತ್ರಮುನಿಯ ಯಜ್ಞವೇದಿಯ ಕಡೆಗೆ ತ್ವರೆಯಿಂದ ಧಾವಿಸಿದೆ. ಅಷ್ಟರಲ್ಲಿ ಶತ್ರುಸಂಹಾರಕವಾದ ಒಂದು ಕೂರಂಬನ್ನು ರಾಮನು ನನ್ನ ಮೇಲೆ ಪ್ರಯೋಗಿಸಿದ. ರಾವಣ, ಅದು ಬಂದು ಮೇಲೆ ಬಿದ್ದೊಡನೆ ನಾನು ನೂರು ಯೋಜನ ದೂರದಲ್ಲಿದ್ದ ಸಮುದ್ರಕ್ಕೆ ಹೋಗಿ ಬಿದ್ದೆ! ಅಯ್ಯಾ ರಾವಣ, ಆ ವೀರನಿಗೆ ಆಗ ನನ್ನನ್ನು ಕೊಲ್ಲುವುದು ಇಷ್ಟವಿರಲಿಲ್ಲವೆಂದು ತೋರುತ್ತದೆ, ಆದ್ದರಿಂದ ನನ್ನನ್ನು ಸಾಯದಂತೆ ಉಳಿಸಿದ! ರಾಮನ ಶರವೇಗದಿಂದ ನಾನು ಎಚ್ಚರದಪ್ಪಿ ತತ್ತರಿಸಿ ಹೋದೆ. ಬಹಳ ಹೊತ್ತು ಸಮುದ್ರದ ನೀರಲ್ಲಿ ಬಿದ್ದಿದ್ದ ನನಗೆ ಎಚ್ಚರ ಹುಟ್ಟಲು ನೆಟ್ಟಗೆ ಲಂಕಾಪುರಿಗೆ ಬಂದೆ! ಹಾಗಾಗಿ ನಾನು ಸಾಯದೆ ಉಳಿದೆ, ನನ್ನ ಜೊತೆಗೆ ಬಂದಿದ್ದ ರಾಕ್ಷಸರೆಲ್ಲರೂ ಹತರಾದರು. ಇನ್ನೂ ಅಸ್ತ್ರವಿದ್ಯೆಯಲ್ಲಿ ಪಳಗದಿದ್ದ ಹುಡುಗನಾದ ರಾಮನು ಬಹು ಸುಲಭವಾಗಿ ಇಂಥ ಕಾರ್ಯವನ್ನು ನಡೆಸಿದ್ದ. ಆದ್ದರಿಂದ, ರಾವಣ, ನಾನು ಬೇಡವೆಂದು ಸಾರಿ ಸಾರಿ ಹೇಳಿದರೂ ರಾಮನೊಡನೆ ವಿರೋಧವನ್ನು ಬೆಳೆಸಿದರೆ, ಬಹು ಬೇಗನೆ ನೀನು ಘೋರವಾದ ವಿಪತ್ತಿಗೆ ಈಡಾಗುವೆ. ರಾಕ್ಷಸರು ಈಗ ನಾನಾ ವಿಧವಾದ ಕ್ರೀಡೆಗಳಲ್ಲಿಯೂ ಭೋಗಗಳಲ್ಲಿಯೂ ನಿರತರಾಗಿ ಸುಖದಿಂದಿದ್ದಾರೆ; ವಿನೋದಗೋಷ್ಠಿಗಳನ್ನು ನೋಡುತ್ತ ವಿಹರಿಸುತ್ತಿದ್ದಾರೆ. ಅವರೆಲ್ಲರಿಗೂ ದುಃಖವನ್ನೂ ಅನರ್ಥವನ್ನೂ ನೀನು ತಂದೊಡ್ಡುತ್ತೀಯೆ. ವಿಶಾಲಭವನಗಳಿಂದಲೂ ಅರಮನೆಗಳಿಂದಲೂ ಕೂಡಿ ನಾನಾರತ್ನಗಳಿಂದ ಶೋಭಿತವಾದ ಲಂಕಾನಗರಿಯು ಸೀತೆಗೋಸ್ಕರ ಹಾಳುಬೀಳುವುದನ್ನು ನೀನು ನೋಡಬೇಕಾದೀತು; ನಿನ್ನ ತಪ್ಪಿಗೆ ಅವರೆಲ್ಲರೂ ಬಲಿಯಾಗಿ ನೆಲದ ಮೇಲೆ ಉರುಳುವುದನ್ನು ನೀನೇ ಕಾಣಬೇಕಾದೀತು. ಇದರಲ್ಲಿ ಸಂದೇಹವಿಲ್ಲ. ಮಹಾರಾಜ, ಪರಸ್ತ್ರೀಯರನ್ನು ಮುಟ್ಟುವುದಕ್ಕಿಂತ ದೊಡ್ಡ ಪಾಪಕೃತ್ಯ ಇನ್ನೊಂದಿಲ್ಲ. ಸೌಮ್ಯರಾದ ನಿನ್ನ ಹೆಂಡತಿಯರನ್ನೂ ಮಿತ್ರರನ್ನೂ

ಕೂಡಿಕೊಂಡು ಬಹುಕಾಲದವರೆಗೆ ರಾಜಭೋಗವನ್ನನುಭವಿಸಲು ಇಚ್ಛೆಯಿರುವುದಾದರೆ, ರಾವಣ, ರಾಮನಿಗೆ ಅಪ್ರಿಯವಾದ ಯಾವ ಕಾರ್ಯವನ್ನೂ ಮಾಡಬೇಡ. ಆದರೂ ನೀನು ಸೀತೆಯನ್ನು ಬಲಾತ್ಕರಿಸಲು ಪ್ರಯತ್ನಿಸುವೆಯಾದರೆ, ರಾಮನ ಬಾಣಕ್ಕೆ ಬಲಿಯಾಗಿ ಪ್ರಾಣವನ್ನು ತೆರಬೇಕಾಗುವುದು. ನಿನ್ನ ಸೇನೆಯೆಲ್ಲವೂ ಲಯವಾಗಿ ಬಂಧುಬಾಂಧವರೊಡನೆ ನೀನು ಯಮಲೋಕನವನ್ನು ಸೇರುತ್ತೀಯೆ" ಎಂದ.

ಮಾರೀಚ ಮತ್ತೆ ಹೇಳಿದ: "ರಾವಣ, ಆ ಯುದ್ಧದಲ್ಲಿ ನಾನು ಈ ಪ್ರಕಾರ ಹೇಗೋ ಬದುಕಿ ಬಂದೆ. ಈಚೆಗೆ ನಡೆದ ಇನ್ನೊಂದು ವೃತ್ತಾಂತವನ್ನು ಹೇಳುತ್ತೇನೆ, ಮಧ್ಯದಲ್ಲಿ ಮಾತನಾಡದೆ ಕೇಳು. ನನಗೆ ರಾಮನಿಂದ ಹಾಗೆ ಪ್ರಾಣಸಂಕಟ ಒದಗಿದರೂ ನಾನು ಎದೆಗೆಡಲಿಲ್ಲ. ಒಮ್ಮೆ ಮೃಗರೂಪವನ್ನು ಧರಿಸಿದ ಇಬ್ಬರು ರಾಕ್ಷಸರೊಡನೆ ನಾನು ದಂಡಕಾರಣ್ಯಕ್ಕೆ ಹೋದೆ. ಮಹಾಬಲಾಢ್ಯನಾದ ನಾನು ಮಹಾಶರೀರವುಳ್ಳ ಮೃಗದ ರೂಪವನ್ನು ತಾಳಿದೆ. ಪ್ರಜ್ವಲಿಸುವ ನಾಲಿಗೆಯೂ ಮೊನಚಾದ ಕೋರೆಯ ಹಲ್ಲುಗಳೂ ನನಗಿದ್ದವು; ಮಾಂಸವನ್ನು ಮೆಲ್ಲುತ್ತ ದಂಡಕಾರಣ್ಯದಲ್ಲಿ ಅಲೆಯುತ್ತಿದ್ದೆ. ಋಷಿಗಳ ಅಗ್ನಿಶಾಲೆಗಳು, ತೀರ್ಥಸ್ಥಳಗಳು, ಚೈತ್ಯವೃಕ್ಷಗಳು ಮೊದಲಾದ ಕಡೆಗಳಲ್ಲಿ ಘೋರಾಕಾರವನ್ನು ಧರಿಸಿ ನುಗ್ಗಿ ಅಲ್ಲಿದ್ದ ತಾಪಸರ ಮೇಲೆ ದಾಳಿ ಮಾಡುತ್ತಿದ್ದೆ. ಧರ್ಮಚಾರಿಗಳಾದ ತಪಸ್ವಿಗಳನ್ನು ಕೊಂದು ಅವರ ರಕ್ತವನ್ನು ಕುಡಿದು ಮಾಂಸವನ್ನು ಭಕ್ಷಿಸುತ್ತ ತಿರುಗಾಡುತ್ತಿದ್ದೆ; ಋಷಿಗಳ ಮಾಂಸವನ್ನು ತಿಂದು ರಕ್ತವನ್ನು ಕುಡಿದು ಮದವೇರಿ, ವನಚಾರಿಗಳನ್ನು ಕ್ರೌರ್ಯದಿಂದ ಹೆದರಿಸುತ್ತ ದಂಡಕಾರಣ್ಯದಲ್ಲಿ ಸುತ್ತುತ್ತಿದ್ದೆ. ಆಗ ತಪಸ್ವಿಯೂ ಧರ್ಮನಿಷ್ಠನೂ ಆದ ರಾಮ, ಭಾಗ್ಯಶಾಲಿನಿಯಾದ ವೈದೇಹಿ, ಮಹಾಶೂರನಾದ ಲಕ್ಷ್ಮಣ – ಇವರು ನನಗೆ ಕಾಣಿಸಿದರು. ರಾಮನು ಆಹಾರನಿಯಮವನ್ನು ಪಾಲಿಸುತ್ತಿದ್ದ ತಾಪಸಿಯಾಗಿ ಸಕಲಪ್ರಾಣಿಗಳ ಹಿತವನ್ನೂ ಕೋರುತ್ತ ವನವಾಸಿಯಾಗಿದ್ದ. ಅಲ್ಲದೆ, ಅವನು ಮಹಾಬಲಾಢ್ಯ. ನಾನು ಅದೆಲ್ಲವನ್ನೂ ಲೆಕ್ಕಿಸದೆ ಇವನು ತಾಪಸನಾದ್ದರಿಂದ ದುರ್ಬಲನಾಗಿರಬಹುದೆಂದು ಊಹಿಸಿದೆ; ಹಳೆಯ ವೈರವು ನನ್ನ ಸ್ಮರಣೆಗೆ ಬಂದಿತು. ಚೂಪಾದ ಕೊಂಬುಗಳಿದ್ದ ಮೃಗಾಕೃತಿಯನ್ನು ಧರಿಸಿದ್ದ ನಾನು ಅತಿಕೋಪದಿಂದ ಆತನ ಮೇಲೆ ಆ ಇಬ್ಬರು ರಾಕ್ಷಸರೊಡನೆ ನುಗ್ಗಿದೆ. ಹಿಂದೆ ರಾಮನು ನನಗೆ ಕೊಟ್ಟ ಪೆಟ್ಟು ನೆನಪಿನಲ್ಲಿತ್ತು, ಆದರೂ ಅವನನ್ನು ಕೊಲ್ಲಬೇಕೆಂದು ಬುದ್ಧಿಗೆಟ್ಟು ನುಗ್ಗಿ ಹೋದೆ. ಆಗ ರಾಮನು ತನ್ನ ಮಹಾಧನುಸ್ಸನ್ನು ಜಗ್ಗಿ ಶತ್ರುಧ್ವಂಸಕಗಳಾದ ಮೂರು ಕೂರಂಬುಗಳನ್ನು ನಮ್ಮ ಮೇಲೆ ಬಿಟ್ಟ. ಅವು ರಕ್ತಪಿಪಾಸುಗಳಾದ ಘೋರ ಬಾಣಗಳು. ಆ ಮೂರು ಕೊಂಕು ಬಾಣಗಳೂ ಗರುಡನ ರೆಕ್ಕೆಯ ಗಾಳಿಯಂತೆ ಗುಂಯ್ ಎನ್ನುತ್ತ ಸಿಡಿಲಿನಂತೆ ಎರಗಿದವು. ನನಗೆ ರಾಮನ ಪರಾಕ್ರಮ ಗೊತ್ತಿತ್ತು. ಅವನಿಂದ ಎಂಥ ಭಯವು ಸಂಭವಿಸುವುದೆಂದು ತಿಳಿದಿತ್ತು. ಆದ್ದರಿಂದ ಕುಯುಕ್ತಿಯನ್ನು ಬಲ್ಲ ನಾನು ಅಷ್ಟರಲ್ಲಿ ತಪ್ಪಿಸಿಕೊಂಡು ಓಡಿಹೋದೆ! ಆದರೆ ಆ ಇಬ್ಬರು ರಾಕ್ಷಸರು ಸತ್ತುಹೋದರು. ರಾಮನ ಶರವೇಗಕ್ಕೆ ಸಿಕ್ಕದೆ ನಾನು ಹೇಗೋ ಬದುಕಿ ಉಳಿದೆ. ಅನಂತರ ನಾನು ಹಿಂದಿನ ದುಷ್ಕೃತ್ಯಗಳನ್ನೆಲ್ಲ ಬಿಟ್ಟು ಇಲ್ಲಿಗೆ ಬಂದೆ. ಉಚಿತವಾದ ಆಚಾರವನ್ನಿಟ್ಟುಕೊಂಡು ನಿಯತಮನಸ್ಕನಾಗಿ ತಪೋನಿಷ್ಠನಾಗಿದ್ದೇನೆ. ರಾವಣ, ಏನು ಹೇಳಲಿ! ಈಗಲೂ ನನಗೆ

ಮರಮರಗಳಲ್ಲಿಯೂ ರಾಮನೇ ಕಾಣಿಸುತ್ತಾನೆ! ನಾರುಮಡಿ ಕೃಷ್ಣಾಜಿನಗಳನ್ನುಟ್ಟು ಧನುರ್ಧಾರಿಯಾದ ರಾಮನು ಪಾಶವನ್ನು ಹಿಡಿದ ಯಮನೋ ಎಂಬಂತೆ ಕಾಣಿಸುತ್ತಾನೆ! ಸುತ್ತಲೂ ಸಾವಿರಾರು ಮಂದಿ ರಾಮರನ್ನು ಹೆದರಿಕೆಯಿಂದ ನಡುಗುತ್ತ ನೋಡುತ್ತಿದ್ದೇನೆ! ಈ ಅರಣ್ಯವೆಲ್ಲವೂ ರಾಮಮಯವಾಗಿರುವಂತೆ ಕಾಣುತ್ತದೆ! ರಾವಣ, ನಾನು ರಾಮನ ತೇಜಃಪ್ರಭಾವವನ್ನು ಚೆನ್ನಾಗಿ ಬಲ್ಲೆ. ಅವನೊಡನೆ ಯುದ್ಧ ನಿನಗೆ ಯೋಗ್ಯವಲ್ಲ, ರಾಘವನೆಂದರೆ ಯಾರೆಂದು ತಿಳಿದೆ? ಬಲಿಚಕ್ರವರ್ತಿ, ನಮುಚಿಯಂತಹ ಮಹಾವೀರರನ್ನು ಅವನು ವಧಿಸಬಲ್ಲ. ಬೇಕಾದರೆ ರಣರಂಗದಲ್ಲಿ ರಾಮನೊಡನೆ ಯುದ್ಧಮಾಡಿ ನೋಡು, ಇಲ್ಲವಾದರೆ ತಾಳ್ಮೆಯಿಂದ ಖರಾದಿಗಳ ವಧೆಯನ್ನು ಸಹಿಸಿಕೊಂಡಿರು. ಅಯ್ಯಾ ರಾವಣ, ಶೂರ್ಪನಖಿಯು ಏನೋ ಹೇಳಿದಳೆಂಬ ನೆವದಿಂದ ಜನಸ್ಥಾನದಲ್ಲಿದ್ದ ಖರನು ಉದ್ದಂಡನಾಗಿ ರಾಮನ ಮೇಲೆ ಏರಿಹೋದನಲ್ಲವೆ? ಆಗ ಯಾವ ತಪ್ಪನ್ನೂ ಮಾಡದೆ ಇದ್ದ ರಾಮನು ಖರನನ್ನು ಕೊಂದುಹಾಕಿದ. ಇದರಲ್ಲಿ ರಾಮನ ಅಪರಾಧವೇನು? ನೀನೇ ಸತ್ಯವನ್ನು ವಿಮರ್ಶಿಸಿ ಹೇಳು. ನನ್ನ ಬಂಧುಗಳಾದ ನಿಮ್ಮೆಲ್ಲರಿಗೂ ಶ್ರೇಯಸ್ಸನ್ನು ಬಯಸಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಬುದ್ಧಿವಾದವನ್ನು ನೀನು ಅಂಗೀಕರಿಸದಿದ್ದರೆ ರಾಮನ ಕರ್ಕಶಾಸ್ತ್ರಗಳಿಗೆ ನೀನು ಬಲಿಯಾಗುವೆ. ರಣರಂಗದಲ್ಲಿ ನಿನ್ನ ಬಂಧುಗಳೆಲ್ಲರೊಡನೆ ಪ್ರಾಣವನ್ನು ನೀಗುತ್ತೀಯೆ" ಎಂದು ಹೇಳಿದ.

೧೭. ಸೀತಾಪಹರಣವು ಅನರ್ಥಕಾರಿಯೆಂದು ತಿಳಿಸುವುದು; ರಾವಣನ ಬೆದರಿಕೆ; ಕೊನೆಗೆ ಮಾರೀಚನ ಒಪ್ಪಿಗೆ

ಈ ರೀತಿಯಲ್ಲಿ ಮಾರೀಚ ನ್ಯಾಯವೂ ಯುಕ್ತಿಯುಕ್ತವೂ ಆದ ಮಾತನ್ನಾಡಿದ. ಸಾಯುವವನಿಗೆ ಔಷಧವು ಬೇಡವೆನಿಸುವಂತೆ ರಾವಣನಿಗೆ ಆ ಮಾತು ಹಿಡಿಸಲಿಲ್ಲ; ಪಥ್ಯವೂ ಹಿತಕರವೂ ಆದ ಉಪದೇಶವನ್ನು ನೀಡಿದ ಮಾರೀಚನಿಗೆ ಆ ರಾಕ್ಷಸನು ಕಠೋರನಾದ ಮಾತನ್ನು ಹೇಳಿದ: "ನನ್ನೊಡನೆ ಅಯುಕ್ತವಾದ ಮಾತನ್ನಾಡುತ್ತಿದ್ದೀಯೆ. ಬೆಂಗಾಡು ನೆಲದಲ್ಲಿ ಬೀಜವನ್ನು ಹಾಕಿದಂತೆ ನಿನ್ನ ಉಪದೇಶ ವ್ಯರ್ಥವೇ ಸರಿ. ರಾಮನೊಡನೆ ಜಗಳಕ್ಕೆ ನಿಂತಿರುವ ನನ್ನನ್ನು ಉಪಾಯದಿಂದ ತಪ್ಪಿಸಲು ನಿನಗೆ ಶಕ್ಯವಿಲ್ಲ. ಆತನು ದುಷ್ಟ, ಮೂರ್ಖ; ಅಲ್ಲ, ಮನುಷ್ಯನೊಬ್ಬ ಹೆಂಗಸಿನ ಅವಿವೇಕದ ಮಾತನ್ನು ಕೇಳಿ ರಾಜಗೃಹವನ್ನೂ ತಂದೆತಾಯಿಗಳನ್ನೂ ಸ್ನೇಹಿತರನ್ನೂ ಬಿಟ್ಟು ಧಡಾರನೆ ಕಾಡಿಗೆ ಹೊರಟು ಬಂದಿದ್ದಾನಲ್ಲ, ಅವನು ಮೂರ್ಖನಲ್ಲದೆ ಮತ್ತೇನು? ಅವನು ಯುದ್ಧದಲ್ಲಿ ನಮ್ಮ ಖರನನ್ನು ಸಂಹರಿಸಿದ್ದಾನೆ. ಆದ್ದರಿಂದ ನಿನ್ನನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿ, ರಾಮನಿಗೆ ಪ್ರಾಣಪ್ರಿಯಳೆನಿಸಿದ ಸೀತೆಯನ್ನು ನಾನು ಅಪಹರಿಸಲೇಬೇಕು: ಈ ರೀತಿಯಲ್ಲಿ ನಾನು ಮನಸ್ಸಿನಲ್ಲಿ ನಿಶ್ಚಯಿಸಿದ್ದೇನೆ. ಎಲೈ ಮಾರೀಚ, ಮಹಾರಾಜನು ಜನರಿಂದ ಗೌರವವನ್ನು ನಿರೀಕ್ಷಿಸುತ್ತಾನೆ. ಆತನಿಗೆ ಸಲ್ಲಬೇಕಾದ ವಿಧೇಯತೆಯನ್ನು ತೋರದೆ ಮುಖಭಂಗವಾಗುವಂತೆ ನುಡಿದರೆ ರಾಜನು ಎಂದಿಗೂ ಮೆಚ್ಚಲಾರ. ರಾಜರ

ತೇಜಸ್ಸು ಅಪಾರವಾದದ್ದು. ಪ್ರಭಾವಶಾಲಿಗಳಾದ ಭೂಪಾಲರಲ್ಲಿ ಅಗ್ನಿಯ ಉಷ್ಣ, ಇಂದ್ರನ ಪರಾಕ್ರಮ, ಚಂದ್ರನ ಶಾಂತತೆ, ಯಮನ ದಂಡಾಧಿಕಾರ, ವರುಣನ ಪ್ರಸನ್ನತೆಗಳು ರೂಪುಗೊಂಡಿರುತ್ತವೆ. ಆದ್ದರಿಂದ ಪೃಥಿವೀಪತಿಗಳನ್ನು ಸರ್ವಕಾಲದಲ್ಲಿಯೂ ಗೌರವಿಸತಕ್ಕದ್ದು, ಪೂಜಿಸತಕ್ಕದ್ದು. ನೀನು ಈ ರಾಜಧರ್ಮವನ್ನರಿಯದ ಅವಿವೇಕಿ. ಒಂದು ಕಾರ್ಯಕ್ಕಾಗಿ ನಿನ್ನ ಬಳಿಗೆ ಬಂದರೆ, ಇಂಥ ಕಠೋರವಾದ ಮಾತನ್ನು ನನಗೆ ಹೇಳುವೆಯಾ? ನಾನು ಹೇಳುವುದಿಷ್ಟು: ನೀನು ಅಸಾಧಾರಣ ಪರಾಕ್ರಮಿ. ಈಗ ನಾನು ಒಂದು ದೊಡ್ಡ ಕಾರ್ಯವನ್ನು ಸಾಧಿಸಬೇಕೆಂದು ಸಂಕಲ್ಪಿಸಿದ್ದೇನೆ. ಇದಕ್ಕೆ ನೀನು ನೆರವಾಗಬೇಕು. ನೀನು ನೀಡಬೇಕಾದ ನೆರವು ಯಾವುದೆಂಬುದನ್ನು ಕೇಳು: ನೀನು ಮೈಮೇಲೆ ಬೆಳ್ಳಿಯ ಚುಕ್ಕೆಗಳಿರುವ ಚಿನ್ನದ ಜಿಂಕೆಯ ರೂಪವನ್ನು ಧರಿಸಿ ಆ ರಾಮನ ಆಶ್ರಮದ ಸಮೀಪದಲ್ಲಿ ಸೀತೆಯ ಎದುರಿಗೆ ತಿರುಗಾಡು. ಸೀತೆಯ ಮನಸ್ಸನ್ನು ಆಕರ್ಷಿಸಿ, ಸ್ವೇಚ್ಛೆಯಾಗಿ ಅತ್ತಿತ್ತ ಅಲೆಯುತ್ತ ಹೋಗು. ನೀನು ಹೊನ್ನ ಜಿಂಕೆಯಾಗಿರುವುದನ್ನು ಕಂಡು ಅವಳಿಗೆ ಕುತೂಹಲವುಂಟಾಗುತ್ತದೆ; ಆ ಮೃಗವನ್ನು ತನಗೆ ತಂದುಕೊಡೆಂದು ಸೀತೆಯು ಕೂಡಲೆ ರಾಮನಿಗೆ ಹೇಳುವಳು. ಆಗ ರಾಮನು ನಿನ್ನನ್ನು ಹಿಡಿಯುವುದಕ್ಕಾಗಿ ಆಶ್ರಮದಿಂದ ಹೊರಟು ಬರುವನು. ನೀನು ಅವನನ್ನು ಬಹುದೂರದವರೆಗೆ ಸೆಳೆದುಕೊಂಡು ಹೋಗಿ ರಾಮನು ಕೂಗುವಂತೆ 'ಹಾ ಸೀತೆ ಹಾ ಲಕ್ಷ್ಮಣ!' ಎಂದು ಗಟ್ಟಿಯಾಗಿ ಕೂಗಿಬಿಡು. ಅದನ್ನು ಕೇಳಿ ಲಕ್ಷ್ಮಣನೂ ಸಂಭ್ರಾಂತನಾಗಿ ರಾಮನಲ್ಲಿರುವ ಸ್ನೇಹದಿಂದಲೂ ಸೀತೆಯ ಒತ್ತಾಯದಿಂದಲೂ ರಾಮನನ್ನು ಹುಡುಕಿಕೊಂಡು ಹೋಗುವನು. ಹೀಗೆ ರಾಮಲಕ್ಷ್ಮಣರಿಬ್ಬರೂ ತೊಲಗಿ ಹೋದಮೇಲೆ, ಇಂದ್ರನು ಶಚಿಯನ್ನು ತಂದಂತೆ ನಾನು ಸೀತೆಯನ್ನು ಸುಖವಾಗಿ ಅಪಹರಿಸಿಕೊಂಡು ಬರುತ್ತೇನೆ. ಮಾರೀಚ, ಈ ರೀತಿಯಲ್ಲಿ ಇದೊಂದು ಕೆಲಸವನ್ನು ಮಾಡಿಕೊಟ್ಟು ನಿನಗೆ ಇಷ್ಟ ಬಂದಲ್ಲಿಗೆ ಹೋಗು. ಈ ಒಳ್ಳೆಯ ನಡತೆಗೆ ಮೆಚ್ಚಿ ಅರ್ಧರಾಜ್ಯವನ್ನು ನಿನಗೆ ಬಹುಮಾನವಾಗಿ ಕೊಡುತ್ತೇನೆ. ಯುದ್ಧವನ್ನೇ ಮಾಡದೆ ರಾಮನನ್ನು ವಂಚಿಸಿ ಸೀತೆಯನ್ನು ಅಪಹರಿಸಿ ನನ್ನ ಸಂಕಲ್ಪವನ್ನು ಸಾಧಿಸಿಕೊಂಡು ನಿನ್ನೊಡನೆ ಲಂಕೆಗೆ ಹಿಂದಿರುಗುತ್ತೇನೆ. ಎಲೈ ಮಾರೀಚ, ನನ್ನ ಮಾತನ್ನು ನಡೆಸದಿದ್ದರೆ, ಇಗೋ, ಈಗಲೇ ನಿನ್ನನ್ನು ಕೊಂದುಹಾಕುತ್ತೇನೆ! ನನ್ನ ಬಲಾತ್ಕಾರಕ್ಕಾದರೂ ಮಣಿದು ನೀನು ಈ ಕೆಲಸವನ್ನು ಮಾಡಲೇಬೇಕು. ಇದೆಲ್ಲವನ್ನೂ ಚೆನ್ನಾಗಿ ವಿಚಾರಮಾಡಿ ಯಾವುದು ಹಿತಕರವೋ ಅದರಂತೆ ನಡೆದುಕೊ" ಎಂದು ಹೇಳಿದ.

ರಾವಣನು ಮಾರೀಚನ ಇಚ್ಛೆಗೆ ವಿರುದ್ಧವಾಗಿ ರಾಜದರ್ಪದಿಂದ ಹೀಗೆ ಆಸೆ ತೋರಿಸಿದರೂ ಮಾರೀಚ ಅಳುಕದೆ ಆ ರಾವಣನನ್ನು ಕುರಿತು, "ರಾವಣ, ಯಾವ ಪಾಪಿಯು ನಿನಗೆ ಈ ದುರ್ಬೋಧನೆಯನ್ನು ಮಾಡಿದ? ನಿನ್ನ ಮಕ್ಕಳು, ನಿನ್ನ ರಾಷ್ಟ್ರ, ನಿನ್ನ ಮಂತ್ರಿಗಳು – ಎಲ್ಲರಿಗೂ ವಿನಾಶವನ್ನು ತಂದಿಡುವ ಮಾರ್ಗವಿದು. ಇದು ನಿನ್ನ ಶತ್ರುಗಳಾದ ಕೆಲವು ರಾಕ್ಷಸರ ಕೈವಾಡವೆಂಬುದು ಸ್ಪಷ್ಟ. ಅವರು ಸ್ವತಃ ಕೈಲಾಗದವರಾದ್ದರಿಂದ, ಬಲಾಢ್ಯನಾದ ವೀರನೊಬ್ಬನ ಆಕ್ರಮಣಕ್ಕೆ ನೀನು ತುತ್ತಾಗಲೆಂದು ಬಯಸಿದ್ದಾರೆ. ನಿನಗೆ ಕೇಡನ್ನು ಚಿಂತಿಸುವ ಯಾವ ನೀಚ ಈ ದುರ್ನೀತಿಯನ್ನು

ಬೋಧಿಸಿದ್ದಾನು! ನಿನ್ನ ಕೃತ್ಯದಿಂದಲೇ ನೀನು ನಾಶವಾಗಬೇಕೆಂದು ಅವನು ಉದ್ದೇಶಿಸಿದ್ದಾನೆ. ತಪ್ಪುದಾರಿಯನ್ನು ತುಳಿದಿರುವ ನಿನ್ನನ್ನು ನಿನ್ನ ಮಂತ್ರಿಗಳು ಸರ್ವ ಪ್ರಯತ್ನದಿಂದಲೂ ತಡೆಯಬೇಕಾಗಿತ್ತು. ಹಾಗೆ ತಡೆಯದಿರುವ ಮಂತ್ರಿಗಳು ವಧಾರ್ಹರು. ಹೇ ವೀರಾಗ್ರೇಸರ, ಧರ್ಮಾರ್ಥಕಾಮಗಳೂ ಕೀರ್ತಿಯೂ ಮಂತ್ರಿಗಳಿಗೆ ತಮ್ಮ ಪ್ರಭುವಿನ ಸದ್ಗುಣದಿಂದಲೇ ದೊರೆಯುತ್ತವೆ. ಹಾಗಿಲ್ಲದೆ ಪ್ರಭುವಾದವನು ಗುಣಹೀನನಾಗಿ ದುರ್ಮಾರ್ಗಕ್ಕೆ ಇಳಿದರೆ ಧರ್ಮ, ಅರ್ಥ ಮೊದಲಾದ ಯಾವುದೂ ಮಂತ್ರಿಗಳಿಗೆ ಸಿದ್ಧಿಸುವುದಿಲ್ಲ. ಮಂತ್ರಿಗಳು ಉಗ್ರವಾದಿಗಳಾಗಿ ತೀಕ್ಷ್ಣಮಾರ್ಗವನ್ನು ಬೆಂಬಲಿಸುವವರಾದರೆ ತಮ್ಮ ಪ್ರಭುವಿನೊಡನೆ ತಾವೂ ನಾಶಹೊಂದುತ್ತಾರೆ. ರಾವಣ, ಜನವಿರೋಧಿಯೂ ಕಠೋರನೂ ಆದ ರಾಜನ ಆಳ್ವಿಕೆಯಲ್ಲಿ ಪ್ರಜೆಗಳು ಏಳಿಗೆ ಹೊಂದುವುದಿಲ್ಲ. ನೀನು ಕರ್ಕಶನೂ ದುರ್ಬುದ್ಧಿಯುಳ್ಳವನೂ ಆದ ಪ್ರಭುವಾಗಿದ್ದೀಯೆ; ಇಂದ್ರಿಯಗಳನ್ನು ನೀನು ಗೆದ್ದಿಲ್ಲ. ನನಗಂತೂ ಕಾಕತಾಳೀಯವಾಗಿ ಈ ಘೋರ ವಿಪತ್ತು ಒದಗಿಬಿಟ್ಟಿತು. ಆದರೆ ನೀನು ಸೇನಾಸಮೇಶನಾಗಿ ನಾಶವಾಗುವೆಯಲ್ಲಾ ಎಂದು ನನಗೆ ದುಃಖವಾಗುತ್ತಿದೆ. ರಾಮನು ನನ್ನನ್ನು ನೋಯಿಸಿ ಸ್ವಲ್ಪಕಾಲದಲ್ಲಿಯೇ ನಿನ್ನನ್ನೂ ಸಂಹರಿಸುವನು. ನನ್ನ ಶತ್ರುವಿನಿಂದಲೇ ನಾನು ಸಾಯುವೆನೆಂದು ಸಮಾಧಾನಪಟ್ಟುಕೊಳ್ಳುತ್ತೇನೆ. ರಾವಣ, ನನ್ನೊಡನೆ ಹೋಗಿ ಸೀತೆಯನ್ನು ಅವಳ ಆಶ್ರಮದಿಂದ ಅಪಹರಿಸಿ ತರುವೆಯಲ್ಲವೆ? ಹಾಗೆ ಮಾಡಿದರೆ, ನೀನೂ ಉಳಿಯುವುದಿಲ್ಲ, ನಾನೂ ಉಳಿಯುವುದಿಲ್ಲ. ಈ ಲಂಕೆ, ಈ ರಾಕ್ಷಸರು – ಯಾರಿಗೂ ಉಳಿಗಾಲವಿಲ್ಲ. ರಾಕ್ಷಸೇಂದ್ರ, ನಿನಗೆ ನಾನು ಹಿತೈಷಿಯಾಗಿ ಈ ಕೃತ್ಯವು ಬೇಡವೆಂದು ಸಾರಿ ಸಾರಿ ಹೇಳಿದರೂ ನನ್ನ ಮಾತನ್ನು ನೀನು ತಾಳ್ಮೆಯಿಂದ ಗ್ರಹಿಸುತ್ತಿಲ್ಲ. ಆಯುಸ್ಸು ಮುಗಿದು ಪರಲೋಕಕ್ಕೆ ಹೊರಟವರಿಗೆ ಸ್ನೇಹಿತರ ಹಿತೋಪದೇಶವು ಹಿಡಿಸುವುದಿಲ್ಲ!" ಎಂದ. ಹೀಗೆ ಮಾರೀಚ ಕಠೋರವಚನವನ್ನು ಆಡಿದರೂ ಕಡೆಯಲ್ಲಿ ರಾಕ್ಷಸ ರಾಜನಿಗೆ ಹೆದರಿ "ಹಾಗಾದರೆ ಹೋಗೋಣ! ದುರಾತ್ಮನಾದ ನೀನು ಹೀಗೆ ಹಟ ತೊಟ್ಟಿರುವಾಗ ನನ್ನಿಂದ ಏನಾದೀತು? ಇದೋ ಹೊರಟಿದ್ದೇನೆ. ನಿನಗೆ ಶುಭವಾಗಲಿ" ಎಂದು ದೈನ್ಯದಿಂದ ಹೇಳಿದ. ಆ ನುಡಿಯನ್ನು ಕೇಳಿ ರಾವಣನು ಹರ್ಷದಿಂದ ಉಬ್ಬಿದ. ಅವನು ಮಾರೀಚನನ್ನು ಬಿಗಿದಪ್ಪಿಕೊಂಡು "ಭಲಾ! ಇದೀಗ ಗಂಡಸುತನದ ಮಾತು! ನನ್ನ ಅಭಿಪ್ರಾಯಕ್ಕೆ ತಕ್ಕಂತಹ ಮಾತು! ಈಗ ನೀನು ನಿಜವಾದ ಮಾರೀಚನಾದೆ! ಇಷ್ಟುಹೊತ್ತು ಬೇರೊಬ್ಬ ರಾಕ್ಷಸನಾಗಿದ್ದೆ. ರತ್ನಭೂಷಿತನಾದ ಈ ರಥವು ಪಿಶಾಚಮುಖಿಗಳಾದ ಹೇಸರಗತ್ತೆಗಳನ್ನು ಹೂಡಿ ಸಜ್ಜಾಗಿದೆ. ನನ್ನೊಡನೆ ಬೇಗನೆ ಈ ರಥವನ್ನೇರು. ಸೀತೆಗೆ ಆಸೆಯನ್ನು ಹುಟ್ಟಿಸಿ ಎಲ್ಲಿಗೆ ಬೇಕಾದರೂ ಹೊರಟುಹೋಗು. ಆಶ್ರಮವು ಬರಿದಾದೊಡನೆ ನಾನು ಬಲವಂತದಿಂದ ಸೀತೆಯನ್ನು ತಂದು ಬಿಡುತ್ತೇನೆ" ಎಂದ ಅನಂತರ ರಾವಣಮಾರೀಚರಿಬ್ಬರೂ ವಿಮಾನದಂತಿದ್ದ ಆ ರಥವನ್ನೇರಿ ಮಾರೀಚಾಶ್ರಮದಿಂದ ಹೊರಟು ವೇಗದಿಂದ ಪ್ರಯಾಣ ಮಾಡಿದರು. ದಾರಿಯಲ್ಲಿ ಪಟ್ಟಣ, ಬೆಟ್ಟ, ನದಿ, ವಿವಿಧ ರಾಜ್ಯಗಳು – ಇವೆಲ್ಲವನ್ನೂ ನೋಡುತ್ತ ಹೋದರು.

ಹೀಗೆ ರಾಕ್ಷಸಾಧಿಪತಿಯಾದದ ರಾವಣನು ಮಾರೀಚನೊಡನೆ ದಂಡಕಾರಣ್ಯಕ್ಕೆ

ಬಂದು ರಾಘವನ ಆಶ್ರಮವನ್ನು ಕಂಡನು. ಆಮೇಲೆ ರಾವಣನು ಸುವರ್ಣಮಯವಾದ ರಥದಿಂದಿಳಿದು ಮಾರೀಚನ ಕೈಹಿಡಿದುಕೊಂಡು "ಅಯ್ಯಾ ಮಿತ್ರ, ಸುತ್ತಲೂ ಬಾಳೆಯ ತೋಟವಿರುವ ಆಶ್ರಮವೇ ರಾಮನದು. ನಾವು ಯಾವುದಕ್ಕಾಗಿ ಇಲ್ಲಿಗೆ ಬಂದೆವೊ ಆ ಕಾರ್ಯವನ್ನು ಬೇಗನೆ ನಿರ್ವಹಿಸು" ಎಂದ. ಆಗ ಮಾರೀಚ ರಾವಣನು ಹೇಳಿದಂತೆ ಅತ್ಯದ್ಭುತವಾದ ಚಿನ್ನದ ಜಿಂಕೆಯ ರೂಪವನ್ನು ತಾಳಿದ; ಆ ಜಿಂಕೆಗೆ ಇಂದ್ರನೀಲಮಣಿಯಂಥ ಕೊಂಬುಗಳಿದ್ದವು, ಮುಖದಲ್ಲಿ ಬೆಳ್ಳಗೂ ಕರ್‍ರಗೂ ಇರುವ ಸುಂದರ ಗೆರೆಗಳಿದ್ದವು. ಮುಖದ ಒಂದು ಮಗ್ಗುಲು ಕೆಂಪು ಕಮಲದಂತೆಯೂ ಇನ್ನೊಂದು ಮಗ್ಗುಲು ನೀಲೋತ್ಪಲದಂತೆಯೂ ಇದ್ದವು. ಕಿವಿಗಳು ಇಂದ್ರನೀಲಮಣಿಯಂತೆ ಕಪ್ಪಾಗಿ ನೈದಿಲೆಯ ದಳಗಳಂತಿದ್ದವು. ಕತ್ತು ಸ್ವಲ್ಪ ನೀಳವಾಗಿ ಮೇಲಕ್ಕೆ ಚಾಚಿಕೊಂಡಿತ್ತು. ತುಟಿಯು ಇಂದ್ರನೀಲಮಣಿಯಂತೆ ಹೊಳೆಯುತ್ತಿದ್ದಿತು. ಆ ಜಿಂಕೆಯ ಹೊಟ್ಟೆಯು ಮಲ್ಲಿಗೆ–ಚಂದ್ರ–ವಜ್ರಗಳಂತೆ ಮಿನುಗುತ್ತಿತ್ತು. ಅದರ ಪಕ್ಕೆಗಳು ಹಿಪ್ಪೆಯ ಹೂವಿನಂತೆ ಮನೋಜ್ಞವಾಗಿದ್ದವು, ಆ ಮೃಗದ ಇತರ ದೇಹಭಾಗವು ಕಮಲದ ಕೇಸರಗಳ ಬಣ್ಣವಾಗಿತ್ತು. ಅದರ ಕಾಲ್ಗೊರಸುಗಳು ವೈಡೂರ್ಯಮಣಿಯಂತೆ ಹೊಳೆಯುತ್ತಿದ್ದವು. ಮೊಳಕಾಲು ತೆಳ್ಳಗಿದ್ದಿತಲ್ಲದೆ ಅವಯವಗಳೆಲ್ಲವೂ ಮಾಟವಾಗಿ ಮುದ್ದಾಗಿದ್ದವು. ಕಾಮನಬಿಲ್ಲಿನಂತೆ ವಿವಿಧ ಬಣ್ಣಗಳಿಂದ ವಿರಾಜಿಸುತ್ತಿದ್ದ ಬಾಲವನ್ನು ಜಿಂಕೆಯು ಮೇಲಕ್ಕೆ ಎತ್ತಿಕೊಂಡಿತ್ತು. ವಿವಿಧ ರತ್ನರಾಶಿಗಳಿಂದ ಚಿತ್ರಿತವಾದಂತೆ ಕಾಣುತ್ತಿದ್ದ ಆ ಮೃಗವು ನುಣಪಾದ ಮೈಯುಳ್ಳದ್ದಾಗಿ ಮನೋಹರವಾಗಿತ್ತು. ಈ ರೀತಿಯಲ್ಲಿ ಆ ರಾಕ್ಷಸನು ಒಂದು ಕ್ಷಣದಲ್ಲಿ ಬಹಳ ಮುದ್ದಾದ ಮೃಗವಾಗಿಬಿಟ್ಟನು.

ಈ ರೀತಿ ಮಾರೀಚನು ಅಚ್ಚರಿ ಹುಟ್ಟಿಸುವ ಮನೋಹರವಾದ ಜಿಂಕೆಯ ರೂಪವನ್ನು ಧರಿಸಿ ಆ ವನವನ್ನೂ ಶ್ರೀರಾಮನ ಆಶ್ರಮಪ್ರದೇಶವನ್ನೂ ಬೆಳಗಿಸುತ್ತ ತಿರುಗಾಡಿದ. ಅವನು ವೈದೇಹಿಯನ್ನು ಮೋಸಗೊಳಿಸುವುದಕ್ಕಾಗಿ ವಿವಿಧವರ್ಣದ ರೂಪವನ್ನು ತಳೆದಿದ್ದ. ಆಶ್ರಮದ ಸುತ್ತಲೂ ಇದ್ದ ಹುಲ್ಲುಗಾವಲಿನಲ್ಲಿ ಹುಲ್ಲು ಮೇಯುವಂತೆ ನಟಸುತ್ತ ಸಂಚರಿಸಿದ. ಆ ಮೃಗದ ಮೈಯು ಬೆಳ್ಳಿಯಂತಿರುವ ನೂರಾರು ಬಿಳಿಯ ಚುಕ್ಕೆಗಳಿಂದ ಕೂಡಿ ಅಂದವಾಗಿತ್ತು. ಅದು ಗಿಡಗಳ ಚಿಗುರೆಲೆಗಳನ್ನು ಕಿತ್ತು ತಿನ್ನುತ್ತ ಅಲೆಯುತ್ತಿತ್ತು. ಆ ಜಿಂಕೆಯು ಬಾಳೆಯ ತೋಟಕ್ಕೆ ಹೋಗಿ, ಅಲ್ಲಿಂದ ಬೆಟ್ಟದಾವರೆ ಗಿಡಗಳ ಮಧ್ಯದಲ್ಲಿ ಸುತ್ತಿ, ಪರ್ಣಶಾಲೆಯ ಸಮೀಪದಲ್ಲಿ ಸೀತೆಯು ಕಾಣಬಹುದಾದ ಸ್ಥಳಕ್ಕೆ ಮೆಲ್ಲಗೆ ಬಂದು ಓಡಾಡಲಾರಂಭಿಸಿತು. ಒಂದು ಸಲ ಹೊರಟು ಹೋಗುವುದು, ಮತ್ತೆ ಬರುವುದು, ಒಂದು ಕ್ಷಣ ತ್ವರೆಯಿಂದ ಓಡುತ್ತ ಹೋಗುವುದು, ಪುನಃ ಹಿಂದಿರುಗುವುದು, ಅಲ್ಲಿಯೇ ಆಟವಾಡುವುದು, ನೆಲದ ಮೇಲೆ ಮಲಗುವುದು, ಆಶ್ರಮದ ಬಾಗಿಲಿಗೆ ಹೋಗಿ ಮತ್ತೆ ಬಂದು ಇತರ ಮೃಗಗಳ ಗುಂಪಿನಲ್ಲಿ ಸೇರುವುದು, ಆ ಮೃಗಗಳೊಡನೆ ಅಲೆದು ಪುನಃ ಅವುಗಳೊಡನೆ ಆಶ್ರಮದ ಬಾಗಿಲಿಗೆ ಬರುವುದು – ಈ ರೀತಿಯಲ್ಲಿ ಮಾರೀಚ ಮಾಯಾಮೃಗವಾಗಿ, ತನ್ನನ್ನು ಸೀತೆಯು ನೋಡಲೆಂದು ಆಟವಾಡಿದ. ಚಿತ್ರಗತಿಯಿಂದ ಮಂಡಲಾಕಾರವಾಗಿ ಸುತ್ತಿದ. ವನದಲ್ಲಿದ್ದ ಇತರ ಮೃಗಗಳು ಆ ಜಿಂಕೆಯನ್ನು ಕಂಡು

ಸಮೀಪಕ್ಕೆ ಬಂದು ಮೂಸಿ ನೋಡಿ ಕೂಡಲೇ ದಶದಿಕ್ಕುಗಳಿಗೆ ಓಡಿಹೋಗುತ್ತಿದ್ದವು. ಆ ರಾಕ್ಷಸನಿಗೆ ಮೃಗಗಳನ್ನು ಕೊಂದು ತಿನ್ನಬೇಕೆಂದು ಅಭಿಲಾಷೆಯಿದ್ದರೂ, ತನ್ನ ರಾಕ್ಷಸತ್ವವನ್ನು ಮರೆಮಾಚುವುದಕ್ಕಾಗಿ ಮೃಗಗಳ ಸ್ಪರ್ಶವಾದರೂ ಸುಮ್ಮನಿದ್ದನು. ಆ ಸಮಯದಲ್ಲಿ ಎಲ್ಲೆಡೆಯೂ ಶುಭವನ್ನೇ ನೋಡಲು ಬಯಸುವ ವೈದೇಹಿಯು ಹೂಗಳನ್ನು ಬಿಡಿಸುವುದರಲ್ಲಿ ನಿರತಳಾಗಿದ್ದಳು. ಆ ಮದಿರೇಕ್ಷಣೆಯು ಬೆಟ್ಟದಾವರೆ, ಅಶೋಕ, ಕಣಿಗಿಲೆ, ಮಲ್ಲಿಗೆ, ದಾಸವಾಳ ಮುಂತಾದ ಮರಗಿಡಗಳಲ್ಲಿ ಹೂಗಳನ್ನು ಬಿಡಿಸುತ್ತ ಪ್ರಸನ್ನಮುಖಿಯಾಗಿ ಉಲ್ಲಾಸದಿಂದ ಸಂಚರಿಸುತ್ತ ಬಂದಳು. ಆ ಸುಕುಮಾರಿಗೆ ಇದ್ದಕ್ಕಿದ್ದಂತೆ ರತ್ನಮಯವಾದ ಆ ಮೃಗವು ಕಣ್ಣಿಗೆ ಬಿತ್ತು. ಮುತ್ತಿನ ಮಣಿಗಳಿಂದ ಸಿಂಗರಿಸಲ್ಪಟ್ಟ, ಸುಂದರವಾದ ಹಲ್ಲು ತುಟಗಳುಳ್ಳ, ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿದಂತೆ ಮಿರುಗುವ ಮೈಯಿದ್ದ ಆ ಮೃಗವನ್ನು ಸೀತೆಯು ಅಚ್ಚರಿಯಿಂದ ಕಣ್ಣರಳಿಸಿ ಆಸೆಯಿಂದ ನೋಡಿದಳು. ಶ್ರೀರಾಮನ ಕಾಂತೆಯು ತನ್ನನ್ನು ನೋಡುವುದನ್ನು ಆ ಮಾಯಾಮೃಗವು ಗಮನಿಸಿತು. ಕೂಡಲೇ ಅದು ವನವನ್ನು ಬೆಳಗುವುದೋ ಎಂಬಂತೆ ಚಿತ್ರಗತಿಯಿಂದ ಸುಳಿದಾಡಲಾರಂಭಿಸಿತು. ನಾನಾರತ್ನಮಯವಾದಂತಿದ್ದ ಆ ಬಗೆಯ ಮೃಗವನ್ನು ಸೀತೆಯು ಹಿಂದೆ ನೋಡಿರಲಿಲ್ಲ. ಮಾಯಾಮೃಗವನ್ನು ಕಂಡು ಜಾನಕಿಯು ವಿಸ್ಮಿತಳಾದಳು.

೧೮. ರಾಮನು ಜಿಂಕೆಯನ್ನು ಬೆನ್ನಟ್ಟಿ ಮಾಯಾಮೃಗವನ್ನು ಕೊಂದುದು

ಹೂಗಳನ್ನು ಬಿಡಿಸುತ್ತಿದ್ದ ಸೀತೆಯು, ಒಂದು ಮಗ್ಗುಲಲ್ಲಿ ಚಿನ್ನದ ಬಣ್ಣ–ಇನ್ನೊಂದರಲ್ಲಿ ಬೆಳ್ಳಿಯ ಬಣ್ಣಗಳಿಂದ ಕೂಡಿದ್ದ ಮನೋಹರವಾದ ಆ ಜಿಂಕೆಯನ್ನು ಕಂಡಳು. ಸುವರ್ಣವರ್ಣೆಯಾದ ಆ ಚೆಲುವೆಯು ತನ್ನ ಪತಿಯನ್ನೂ ಆಯುಧಪಾಣಿಯಾಗಿದ್ದ ಲಕ್ಷ್ಮಣನನ್ನೂ ಕೂಗಿ ಕರೆದಳು. ಆಗ ನರಶ್ರೇಷ್ಠರಾದ ರಾಮಲಕ್ಷ್ಮಣರು ಬಂದು ಅತ್ತಿತ್ತ ನೋಡುತ್ತಿರುವಾಗ ಆ ಮೃಗವು ಗೋಚರಿಸಿತು. ಲಕ್ಷ್ಮಣನು ಜಿಂಕೆಯನ್ನು ನೋಡಿ ಸಂದೇಹಪಡುತ್ತ ಶ್ರೀರಾಮನ ಕಡೆಗೆ ತಿರುಗಿ, "ಅಣ್ಣ, ಈ ಮೃಗವು ಮಾರೀಚನೆಂಬ ಆ ರಾಕ್ಷಸನೇ ಇರಬೇಕೆಂದು ತೋರುತ್ತದೆ. ಈ ಪಾಪಿಯು ಕಾಮರೂಪಿ. ಕಾಡಿನಲ್ಲಿ ಸಂತೋಷದಿಂದ ಬೇಟೆಯಾಡುವ ಎಷ್ಟೋ ಮಂದಿ ರಾಜರನ್ನು ಈತನು ಮೃಗವೇಷವನ್ನು ಧರಿಸಿ ಕಪಟದಿಂದ ಕೊಂದಿದ್ದಾನೆ. ಈ ರಾಕ್ಷಸನು ವಿವಿಧ ಮಾಯೆಗಳನ್ನು ಬಲ್ಲನು. ರತ್ನಮಯವಾದ ಈ ಬಗೆಯ ವಿಚಿತ್ರಮೃಗವು ಜಗತ್ತಿನಲ್ಲಿ ಎಲ್ಲಾದರೂ ಇರುವುದುಂಟೆ? ಶ್ರೀರಾಮ, ಇದು ಮಾಯೆಯೇ ಸರಿ" ಎಂದು ಹೇಳಿದ. ಆದರೆ ಮೃಗಚರ್ಮದ ಸೊಗಸಿಗೆ ಸೀತೆಯು ಮನಸೋತಿದ್ದಳು. ಸೌಮಿತ್ರಿಯ ಮಾತಿಗೆ ಅಡ್ಡ ಬಂದ ಅವಳು ನಲಿಯುತ್ತ ನಸುನಗೆಯಿಂದ ಶ್ರೀರಾಮನನ್ನು ಕುರಿತು, "ಆರ್ಯಪುತ್ರ, ಈ ಜಿಂಕೆಯು ಬಹಳ ಚೆನ್ನಾಗಿದೆ, ನನ್ನ ಮನಸ್ಸನ್ನು ಸೂರೆಗೊಳ್ಳುತ್ತಿದೆ. ಇದನ್ನು ಹಿಡಿದು ಕೊಡು. ನಾವು ಇದರೊಡನೆ ಆಟವಾಡಬಹುದು. ನಮ್ಮ ಆಶ್ರಮದ ಬಳಿ ಚೆನ್ನಾಗಿ ಕಾಣುವ ಎಷ್ಟೋ

ಮೃಗಗಳಿವೆ – ಚಮರ, ಕರಡಿ, ಜಿಂಕೆಗಳು ಗುಂಪುಗುಂಪಾಗಿ ಸಂಚರಿಸುತ್ತವೆ. ಕಪಿಗಳೂ ಕಿನ್ನರಮೃಗಗಳೂ ಇವೆ. ನೋಡಲು ಅಂದವಾದ ಶ್ರೇಷ್ಠಮೃಗಗಳಿದ್ದರೂ ಇಂಥ ಮೃಗವನ್ನು ನಾನು ನೋಡಿಯೇ ಇಲ್ಲ. ಇದರ ದೇಹವು ಎಷ್ಟು ಮೋಹಕವಾಗಿದೆ, ಮೈಮೇಲೆ ರತ್ನದ ಕಣಗಳು ಹರಡಿದಂತಿವೆ, ತನ್ನ ಕಾಂತಿಯಿಂದ ಚಂದ್ರನಂತೆ ವನವನ್ನೇ ಬೆಳಗಿಸುತ್ತಿದೆ! ನನ್ನ ಹೃದಯವನ್ನು ಸೆಳೆಯುತ್ತಿದೆ. ಈ ಜಿಂಕೆಯು ಬದುಕಿರುವಂತೆಯೇ ನನಗೆ ಸಿಕ್ಕಿದರೆ, ಇದೊಂದು ಅಚ್ಚರಿಯ ಮೃಗವೆನಿಸುತ್ತದೆ. ಸರ್ವರಿಗೂ ವಿಸ್ಮಯವನ್ನುಂಟುಮಾಡುತ್ತದೆ. ನಾವು ವನವಾಸವನ್ನು ಮುಗಿಸಿ ಪುನಃ ರಾಜ್ಯಕ್ಕೆ ಹಿಂದಿರುಗಿ ಹೋದ ಮೇಲೆ, ನಮ್ಮ ಅಂತಃಪುರದಲ್ಲಿ ಈ ಮೃಗವು ಒಂದು ಅಲಂಕಾರವಾಗಿರುವುದು. ನಾಥ, ನನ್ನ ಮೈದುನನಾದ ಭರತನಿಗೂ ನನ್ನ ಅತ್ತೆಯರಿಗೂ ಈ ಮೃಗದ ರೂಪವು ಎಷ್ಟು ವಿಸ್ಮಯವನ್ನುಂಟು ಮಾಡುವುದೋ! ಇದು ಬದುಕಿರುವಂತೆಯೇ ನಿನಗೆ ಸಿಗದೆ ಕೊಲ್ಲಬೇಕಾಗಿ ಬಂದರೆ ಪುರುಷೋತ್ತಮ, ಮನೋಹರವಾದ ಇದರ ಚರ್ಮವಾದರೂ ನನಗೆ ದೊರೆಯುತ್ತದೆ. ಹುಲ್ಲಿನ ಚಾಪೆಯಮೇಲೆ ಈ ಚರ್ಮವನ್ನು ಹಾಸಿ ಅದರಲ್ಲಿ ನಿನ್ನೊಡನೆ ಕುಳಿತುಕೊಳ್ಳಬೇಕೆಂದು ನನಗೆ ಆಸೆ. ನಾನು ಹೀಗೆ ಹಟ ಮಾಡುವುದು ಸ್ತ್ರೀಯರಿಗೆ ಯೋಗ್ಯವಲ್ಲ, ಆದರೂ ಈ ಪ್ರಾಣಿಯ ಸುಂದರಾಕೃತಿಯು ನನ್ನ ಕೌತುಕವನ್ನು ಕೆರಳಿಸಿದೆ ನನ್ನಲ್ಲಿ ವಿಸ್ಮಯವನ್ನು ಹುಟ್ಟಿಸಿದೆ" ಎಂದು ಹೇಳಿದಳು.

ಹೀಗೆ ಸೀತೆಯ ಮಾತನ್ನು ಕೇಳಿದ್ದರಿಂದಲೂ ಅದ್ಭುತವಾದ ಆ ಮೃಗವನ್ನು ತಾನೇ ನೋಡಿದ್ದರಿಂದಲೂ ರಾಘವನ ಮನಸ್ಸಿನಲ್ಲಿಯೂ ಕುತೂಹಲ ಹುಟ್ಟಿತು. ಮೃಗದ ರೂಪವು ಆಸೆ ಹುಟ್ಟಿಸಿತು; ಸೀತೆಯೂ ಪ್ರೇರಿಸಿದಳು. ಆಗ ಶ್ರೀರಾಮನು ಹರ್ಷದಿಂದ ತಮ್ಮನಾದ ಲಕ್ಷ್ಮಣನನ್ನು ನೋಡಿ ಹೀಗೆಂದ: "ಲಕ್ಷ್ಮಣ, ವೈದೇಹಿಗೆ ಈ ಜಿಂಕೆಯಲ್ಲಿ ಎಷ್ಟು ಆಸೆಯಿದೆ ಎಂಬುದನ್ನು ನೋಡಿದೆಯಾ! ಈ ಬಗೆಯ ಶ್ರೇಷ್ಠರೂಪದ ಮೃಗವು ಇನ್ನೆಲ್ಲಿಯೂ ಇರಲಾರದು. ನಂದನವನದಲ್ಲಿಯೂ ಇಲ್ಲ, ಚೈತ್ರರಥೋದ್ಯಾನದಲ್ಲಿಯೂ ಇಲ್ಲ. ಇಂತಹ ಇನ್ನೊಂದು ಮೃಗವು ಈ ಭೂಮಿಯಲ್ಲಿ ಎಲ್ಲಿದೆ, ಲಕ್ಷ್ಮಣ? ಇದರ ರೋಮಗಳು ಅಡ್ಡಡ್ಡಲಾಗಿಯೂ ಉದ್ದವಾಗಿಯೂ ಎಷ್ಟು ಮನೋಜ್ಞವಾಗಿವೆ! ಚಿನ್ನದ ಚುಕ್ಕೆಗಳಿಂದ ಚಿತ್ರವರ್ಣವಾಗಿ ರಾಜಿಸುತ್ತಿವೆ. ಆ ಜಿಂಕೆಯು ಆಕಳಿಸುವಾಗ ಬೆಂಕಿಯ ಜ್ವಾಲೆಯಂತೆ ಬೆಳಗುವ ಅದರ ನಾಲಿಗೆಯನ್ನು ನೋಡು! ಮುಗಿಲಿನಿಂದ ಹೊರಡುವ ಮಿಂಚಿನಂತೆ, ಬಾಯಿಂದ ಹೊಳೆಯುತ್ತ ಹೊರಬರುವುದು. ಇಂದ್ರನೀಲಮಣಿಯಿಂದ ಮಾಡಿದ ಬಟ್ಟಲಿನಂತೆ ಇದರ ಮುಖವು ಮಾಟವಾಗಿದೆ. ಶಂಖದಂತೆಯೂ ಮುತ್ತಿನಂತೆಯೂ ಅದರ ಬೆಳ್ಳನೆಯ ಹೊಟ್ಟೆಯಿದೆ. ಇಂತಹ ಮೋಹಕವಾದ ಮೃಗವು ಯಾರ ಮನಸ್ಸನ್ನು ತಾನೇ ಸೆಳೆಯದಿದ್ದೀತು? ಲಕ್ಷ್ಮಣ, ರಾಜರು ಧನುರ್ಧಾರಿಗಳಾಗಿ ಅರಣ್ಯಕ್ಕೆ ಬಂದು ಮಾಂಸಕ್ಕಾಗಿಯೂ ವಿನೋದಕ್ಕಾಗಿಯೂ ಮೃಗಗಳನ್ನು ಕೊಲ್ಲುತ್ತಾರೆ. ಮಹಾರಣ್ಯದಲ್ಲಿ ಉದ್ಯಮವನ್ನು ಮಾಡಿ ಬೆಲೆಬಾಳುವ ವಸ್ತುಗಳನ್ನೂ ರತ್ನ ಚಿನ್ನಗಳಿರುವ ಗೈರಿಕಾದಿ ವಿವಿಧ ಧಾತುಗಳನ್ನೂ ಸಂಗ್ರಹಿಸುತ್ತಾರೆ. ಎಲ್ಲ ಅಮೂಲ್ಯವಸ್ತುವೂ ಜನರ ಸಂಪತ್ತನ್ನು ಬೆಳೆಸಲು ಉಪಯುಕ್ತವಾಗುತ್ತದೆ. ಯಾವ ಅರ್ಥಾಪೇಕ್ಷಿಯು ವಸ್ತುವಿನ ಪ್ರಯೋಜನವನ್ನು ಕಂಡು

ಅದನ್ನು ಸಂಪಾದಿಸಲು ಮುಂದುವರಿಯುವನೋ ಆ ವಸ್ತುವೇ ಅರ್ಥವೆನಿಸಿಕೊಳ್ಳುತ್ತದೆ. ಇದೊಂದು ಸಂಗ್ರಹಿಸಬೇಕಾದ ಮೃಗರತ್ನ; ಇದರ ಅಮೂಲ್ಯವಾದ ಹೊಂಬಣ್ಣದ ಚರ್ಮದ ಮೇಲೆ ವೈದೇಹಿಯು ನನ್ನೊಡನೆ ಕುಳಿತುಕೊಳ್ಳುವಳು! ಲಕ್ಷ್ಮಣ, ಒಂದುವೇಳೆ ನೀನು ಹೇಳುವಂತೆ ಇದು ರಾಕ್ಷಸನ ಮಾಯೆಯೇ ಆಗಿದ್ದರೆ ಈ ರಾಕ್ಷಸನನ್ನು ನಾವು ಸಂಹರಿಸಲೇಬೇಕು. ಮಾರೀಚ ಹಿಂದೆ ಕಾಡಿನಲ್ಲಿ ಅಲೆಯುತ್ತಿದ್ದು, ಅನೇಕ ಮುನಿಶ್ರೇಷ್ಠರನ್ನು ಹಿಂಸೆಪಡಿಸಿದ್ದಾನೆ; ಬೇಟೆಗೆ ಬಂದ ಧನುರ್ವಿದ್ಯಾವಿಶಾರದರಾದ ಬಹುಮಂದಿ ನರೇಂದ್ರರ ಮೇಲೆ ಗಪ್ಪನೆ ಬಿದ್ದು ಕೊಂದಿದ್ದಾನೆ. ಆದ್ದರಿಂದ ಈ ಮೃಗವನ್ನು ಕೊಲ್ಲಲೇಬೇಕು. ಇಲ್ಲಿ ಹಿಂದೆ ವಾತಾಪಿಯು ತಪಸ್ವಿಗಳನ್ನು ಅವಮಾನಪಡಿಸುತ್ತ, ಅವರ ಹೊಟ್ಟೆಯನ್ನು ಸೇರಿ ದ್ವಿಜರನ್ನು ಕೊಲ್ಲುತ್ತಿದ್ದನು. ಅಗಸ್ತ್ಯರು ಅವನನ್ನು ತಮ್ಮ ಹೊಟ್ಟೆಯಲ್ಲಿಯೇ ಕೊಂದರು. ಆದ್ದರಿಂದ, ಲಕ್ಷ್ಮಣ, ವಾತಾಪಿಯಂತೆ ಈ ರಾಕ್ಷಸನೂ ಇನ್ನು ಬದುಕಿರಬಾರದು. ನನ್ನಂತೆ ಧರ್ಮನಿಷ್ಠರೂ ಜಿತೇಂದ್ರಿಯರೂ ಆದವರನ್ನು ಅಲಕ್ಷಿಸಿ ಈತನು ಎಲ್ಲೆ ಮೀರಿ ನಡೆಯುತ್ತಿದ್ದಾನೆ. ಈಗ ನನ್ನ ಹತ್ತಿರಕ್ಕೆ ಬಂದ ಈತನು ಹತನಾಗಲಿ. ಲಕ್ಷ್ಮಣ, ನೀನು ಎಚ್ಚರಿಕೆಯಿಂದ ಮೈಥಿಲಿಯನ್ನು ರಕ್ಷಿಸುತ್ತಿರು. ನಮ್ಮ ಕರ್ತವ್ಯವೆಲ್ಲವೂ ಮುಖ್ಯವಾಗಿ ಇವಳ ರಕ್ಷಣೆಗಾಗಿಯೇ. ನಾನು ಈ ಮೃಗವನ್ನು ಕೊಲ್ಲುತ್ತೇನೆ, ಅಥವಾ ಜೀವಸಹಿತವಾಗಿ ಹಿಡಿದು ತರುತ್ತೇನೆ. ಸೌಮಿತ್ರಿ, ಈ ಮೃಗವನ್ನು ಹಿಡಿದು ತರಲು ಕೂಡಲೇ ಹೊರಡುತ್ತೇನೆ. ನೋಡು ಲಕ್ಷ್ಮಣ, ವೈದೇಹಿಯು ಈ ಮೃಗದ ಚರ್ಮದಲ್ಲಿ ಎಷ್ಟು ಆಸೆಯನ್ನಿಟ್ಟುಕೊಂಡಿದ್ದಾಳೆ! ಸರ್ವೋತ್ತಮವಾದ ಚರ್ಮವಿರುವುದರಿಂದಲೇ ಈ ಮೃಗವು ಇಂದು ಉಳಿಯುವುದಿಲ್ಲ. ನೀನು ಆಶ್ರಮದಲ್ಲಿ ಬಹಳ ಎಚ್ಚರಿಕೆಯಿಂದ ಸೀತೆಯೊಂದಿಗೆ ಇರು. ಜೀವಂತ ಸಿಕ್ಕದಿದ್ದರೆ ಒಂದು ಬಾಣವನ್ನು ಬಿಟ್ಟು ಈ ಜಿಂಕೆಯನ್ನು ಕೊಂದು ಇದರ ಚರ್ಮವನ್ನು ತೆಗೆದುಕೊಂಡು ಬೇಗನೆ ಬಂದುಬಿಡುತ್ತೇನೆ. ಕಾರ್ಯದಕ್ಷನಾದ ಜಟಾಯುವು ನಿನಗೆ ನೆರವಾಗಿರುತ್ತಾನೆ. ಅವನು ಬಲಶಾಲಿ; ಬುದ್ಧಿವಂತ. ಲಕ್ಷ್ಮಣ, ಪ್ರತಿನಿಮಿಷದಲ್ಲಿ ಎಲ್ಲಿಂದ ಯಾವ ಭಯ ಸಂಭವಿಸುವುಯೋ ಎಂದು ಸಂದೇಹಿಸುತ್ತ, ಮೈಥಿಲಿಯನ್ನು ಜೋಪಾನವಾಗಿ ನೋಡಿಕೊಳ್ಳುತ್ತಿರು" ಎಂದು ರಘುನಂದನನು ತಮ್ಮನಿಗೆ ಸೂಚನೆಯನ್ನಿತ್ತು, ಸುವರ್ಣಮಯವಾದ ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು, ಬೆನ್ನಿಗೆ ಎರಡು ಬತ್ತಳಿಕೆಗಳನ್ನು ಬಿಗಿದುಕಟ್ಟಿ ಮೂರು ಕಡೆ ಬಾಗಿದ್ದ ಮತ್ತು ತನಗೆ ಅಲಂಕಾರಪ್ರಾಯವಾದ ಕೋದಂಡವನ್ನು ಹಿಡಿದು ಹೊರಟ.

ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ರಾಜೇಂದ್ರನಾದ ಶ್ರೀರಾಮನನ್ನು ನೋಡಿ, ವಂಚಿಸುವುದಕ್ಕಾಗಿ ಬಂದಿದ್ದ ಮಾರೀಚನಿಗೆ ಭಯವಾಗಿ ಕೂಡಲೇ ಮರೆಯಾದ: ಮತ್ತೆ ರಾವಣನ ಭಯದಿಂದ ಶ್ರೀರಾಮನಿಗೆ ಕಾಣಿಸಿಕೊಂಡ. ಕತ್ತಿಯನ್ನು ಬಿಗಿದು ಕಟ್ಟಿದ್ದ ಶ್ರೀರಾಮನು ಬಿಲ್ಲು ಹಿಡಿದು ಮೃಗವನ್ನು ಅಟ್ಟಿಸಿಕೊಂಡು ಓಡುತ್ತ ಹೋದ. ಒಂದೊಂದು ಸಲ ಮೃಗವು ಸಮೀಪದಲ್ಲಿಯೇ ಎದುರಿಗೆ ತನ್ನ ಸುಂದರ ರೂಪದಿಂದ ವಿರಾಜಿಸುವುದು ಶ್ರೀರಾಮನಿಗೆ ಕಾಣಿಸುತ್ತಿತ್ತು. ಶ್ರೀರಾಮನು ಧಾವಿಸುತ್ತ ಬರುವುದನ್ನು ನೋಡುತ್ತ ನೋಡುತ್ತ, ಆ ಮೃಗವು ಬಾಣದ ಏಟಿಗೆ ಹೆದರಿ ಆ ಮಹಾರಣ್ಯದಲ್ಲಿ

ಓಡಿಹೋಗಿ ಮರೆಯಾಗುತ್ತಿತ್ತು. ಮತ್ತೆ ಕಾಣಿಸಿಕೊಂಡು ಶ್ರೀರಾಮನಿಗೆ ಆಸೆಯನ್ನು ಹುಟ್ಟಿಸುತ್ತಿತ್ತು. ಕೆಲವು ವನಪ್ರದೇಶಗಳಲ್ಲಿ ಆ ಮಾಯಾಮೃಗವು ಹೆದರಿ ಕಂಗಾಲಾಗಿ ನೆಗೆದು ಕುಪ್ಪಳಿಸಿ ಆಕಾಶದಲ್ಲಿ ಹಾರಿಹೋಗುತ್ತಿದೆಯೋ ಎಂಬಂತೆ ಕಾಣಿಸುತ್ತಲೂ, ಮರುಕ್ಷಣದಲ್ಲಿ ಮರೆಯಾಗುತ್ತಲೂ ಇದ್ದಿತು. ಶರತ್ಕಾಲದ ಚಂದ್ರಮಂಡಲವು ಮೇಘಖಂಡಗಳಲ್ಲಿ ಒಂದು ಕ್ಷಣ ಕಂಡು ಮತ್ತೆ ಕಣ್ಮರೆಯಾಗುವಂತೆ, ಆ ಮೃಗವು ಶ್ರೀರಾಮನಿಗೆ ಒಂದು ಕ್ಷಣ ಹತ್ತಿರದಲ್ಲಿ ಗೋಚರಿಸಿ ಮರುಕ್ಷಣ ದೂರಕ್ಕೆ ಓಡುತ್ತಿತ್ತು. ಹೀಗೆ ದೃಷ್ಟಿಗೆ ಬೀಳುತ್ತ ಮಾಯವಾಗುತ್ತ ಆ ಜಿಂಕೆಯು ರಾಘವನನ್ನು ಬಹುದೂರದವರೆಗೆ ಸೆಳೆದೊಯ್ದಿತು. ಅಂದರೆ ಜಿಂಕೆಯ ರೂಪವನ್ನು ಧರಿಸಿದ ಆ ಮಾರೀಚ ಶ್ರೀರಾಮನನ್ನು ಆಶ್ರಮದಿಂದ ಬಹಳ ದೂರ ಕರೆದೊಯ್ದು. ಕಾಕುತ್ಸ್ಥನಿಗೆ ಕೋಪ ಬಂದಿತು. ಅವನು ಕುತೂಹಲದಿಂದ ಮರುಳಾಗಿ ಮಾರೀಚನ ಮೋಸಕ್ಕೆ ಒಳಗಾಗಿದ್ದನು. ಅಮೇಲೆ ಶ್ರೀರಾಮನು ಒಂದು ಹುಲ್ಲುಗಾವಲಿನ ಮರದ ನೆರಳಲ್ಲಿ ಮುಂದೇನು ಮಾಡಬೇಕೆಂದು ತೋರದೆ ನಿಂತುಕೊಂಡ. ಅಷ್ಟರಲ್ಲಿ ಕಾಡಿನಲ್ಲಿದ್ದ ಜಿಂಕೆಗಳ ಪರಿವಾರದೊಡನೆ ಆ ಮಾಯಾಮೃಗವು ನಿಂತಿದ್ದಿತು. ಮತ್ತೆ ಆ ಮೃಗವು ಶ್ರೀರಾಮನನ್ನು ಮರುಳುಮಾಡಿತು. ತನ್ನನ್ನು ಹಿಡಿಯಬೇಕೆಂದು ಶ್ರೀರಾಮನು ಬರುತ್ತಿರುವುದನ್ನು ಕಂಡು, ಮತ್ತೆ ಆ ಮೃಗವು ಓಡಿಹೋಯಿತು. ಆಗ ಶ್ರೀರಾಮನು ಆ ಮೃಗವನ್ನು ಕೊಲ್ಲಬೇಕೆಂದು ನಿರ್ಧರಿಸಿದ; ಕ್ರುದ್ಧನಾಗಿ ಸೂರ್ಯರಶ್ಮಿಯಂತೆ ಮಿರುಗುವ ಶರವೊಂದನ್ನು ಹಿರಿದು, ದೃಢವಾದ ತನ್ನ ಬಿಲ್ಲಿಗೆ ಹೂಡಿ ಸೆಳೆದು ಆ ಮೃಗಕ್ಕೆ ಗುರಿಯಿಟ್ಟು ಹೊಡೆದ. ಬ್ರಹ್ಮದತ್ತವಾದ ದಿವ್ಯಾಸ್ತ್ರವು ಸರ್ಪದಂತೆ ಭುಗಿಲೆದ್ದು, ಸಿಡಿಲಿನಂತೆ ಮೊರೆಯುತ್ತ ಎರಗಿ, ಮೃಗವೇಷಧಾರಿಯಾದ ಮಾರೀಚನ ಎದೆಯನ್ನು ಸೀಳಿತು. ಬಾಣದ ಹೊಡೆತದ ರಭಸಕ್ಕೆ ಮಾರೀಚ ಭಯಂಕರವಾಗಿ ಅರಚುತ್ತ ತಾಳೆಯ ಮರದಷ್ಟು ಎತ್ತರ ಹಾರಿ ಕೆಳಕ್ಕೆ ಬಿದ್ದ! ಸಾವು ಸಮೀಪಿಸಿತು. ಕೃತ್ರಿಮವಾದ ಮಾಯಾಶರೀರವು ತೊಲಗಿತು. ಆಗಲೂ ರಾವಣನು ಹೇಳಿದ್ದ ಮಾತು ಸ್ಮರಣೆಗೆ ಬಂದಿತು. "ಯಾವ ಯುಕ್ತಿಯನ್ನು ಮಾಡಿದರೆ ಸೀತೆಯು ಲಕ್ಷ್ಮಣನನ್ನು ಇಲ್ಲಿಗೆ ಕಳುಹಿಸಹುದು. ಶೂನ್ಯವಾದ ಆಶ್ರಮದಲ್ಲಿರುವ ಸೀತೆಯನ್ನು ರಾವಣನು ಅಪಹರಿಸಬಹುದು' ಎಂಬುದನ್ನು ಆ ರಾಕ್ಷಸನು ಚಿಂತಿಸಿದ. ಇದೇ ಕಾಲೋಚಿತವೆಂದು ನಿರ್ಧರಿಸಿದ ಮಾರೀಚ ಶ್ರೀರಾಮನ ಧ್ವನಿಯನ್ನು ಹೋಲುವ ಧ್ವನಿಯಿಂದ 'ಹಾ ಸೀತೆ! ಹಾ ಲಕ್ಷ್ಮಣಾ' ಎಂದು ಕೂಗಿದ. ಅಸಾಧಾರಣವಾದ ರಾಮಬಾಣದಿಂದ ಮಾರೀಚನ ಮರ್ಮಸ್ಥಳವು ಜರ್ಜರಿತವಾಗಿತ್ತು. ಅವನ ಮೃಗರೂಪವು ಹೋಗಿ ರಾಕ್ಷಸರೂಪವು ಬಂದಿತ್ತು. ಆತನು ಪ್ರಾಣಬಿಡುವಾಗ ಮಹತ್ತರವಾದ ತನ್ನ ರಾಕ್ಷಸಶರೀರವನ್ನು ಪಡೆದ. ವಿಚಿತ್ರವಾದ ಕೇಯೂರಗಳನ್ನು ಧರಿಸಿ ಸರ್ವಾಭರಣಗಳಿಂದ ಅಲಂಕೃತನಾಗಿ ಚಿನ್ನದ ಹಾರವನ್ನು ಹಾಕಿಕೊಂಡಿದ್ದ ಮಹಾದಂಷ್ಟ್ರನಾದ ರಾಕ್ಷಸನಾದ. ಆ ಜಿಂಕೆಯು ಘೋರಾಕಾರದ ರಾಕ್ಷಸನಾಗಿ ರಕ್ತದಲ್ಲಿ ನೆನೆದು ನೆಲದ ಮೇಲೆ ಹೊರಳುತ್ತಿರುವುದನ್ನು ನೋಡಿದೊಡನೆ, ಶ್ರೀರಾಮನಿಗೆ ಸೀತೆಯ ಚಿಂತೆಯುಂಟಾಯಿತು. ಲಕ್ಷ್ಮಣನು ಹೇಳಿದ ಮಾತು ನೆನಪಿಗೆ ಬಂದಿತು. ಆಹಾ! ಇದು ಮಾರೀಚನ ಮಾಯೆಯೇ ಹೌದು. ಲಕ್ಷ್ಮಣನು ಹೇಳಿದಂತೆಯೇ ಆಯಿತು. ಈಗ ನಾನು

ಸಂಹರಿಸಿದ್ದು ಮಾರೀಚನನ್ನೇ. ಈ ರಾಕ್ಷಸನು ಸಾಯುವಾಗ 'ಹಾ ಸೀತೆ! ಲಕ್ಷ್ಮಣ!' ಎಂದು ಗಟ್ಟಿಯಾಗಿ ಕೂಗಿ ಪ್ರಾಣಬಿಟ್ಟನಲ್ಲ! ಇದನ್ನು ಕೇಳಿ ಸೀತೆಯು ಏನಾಗುವಳೋ? ವೀರನಾದ ಲಕ್ಷ್ಮಣನು ಯಾವ ಅವಸ್ಥೆಯನ್ನು ಪಡೆಯುವನೋ ಎಂದು ಧರ್ಮಾತ್ಮನಾದ ಶ್ರೀರಾಮನು ಚಿಂತೆಗೊಳಗಾದ. ಮೈ ಜುಮ್ಮೆಂದಿತು; ಯಾವ ಕೇಡು ಕಾದಿದೆಯೋ ಎಂಬ ತೀವ್ರವಾದ ಭಯವು ಆವರಿಸಿತು.

೧೯. ರಾವಣನು ತ್ರಿದಂಡಿಯ ವೇಷದಲ್ಲಿ ರಾಮನ ಆಶ್ರಮಕ್ಕೆ ಬಂದುದು

ಇತ್ತ ಪರ್ಣಶಾಲೆಯಲ್ಲಿದ್ದ ಸೀತೆಗೆ 'ಹಾ ಸೀತೇ! ಹಾ ಲಕ್ಷ್ಮಣಾ!' ಎಂಬ ಆರ್ತಸ್ವರವು ಕೇಳಿಸಿತು. ಆ ಧ್ವನಿಯು ರಾಮನ ಧ್ವನಿಯಂತೆಯೇ ಇದ್ದುದನ್ನು ಕೇಳಿ, ಅವಳು ಲಕ್ಷ್ಮಣನನ್ನು ಕುರಿತು "ಲಕ್ಷ್ಮಣ ಹೊರಡು. ಶ್ರೀರಾಮನಿಗೆ ಏನಾಯಿತೆಂಬುದನ್ನು ತಿಳಿ. ನನ್ನ ಮನಸ್ಸು, ನನ್ನ ಜೀವ ತಳಮಳಿಸುತ್ತಿವೆ. ನಾನು ಕೇಳಿದ್ದು ನಿಜವಾಗಿಯೂ ಮಹಾಸಂಕಟದಲ್ಲಿ ಸಿಕ್ಕಿಕೊಂಡ ಶ್ರೀರಾಮನ ಆರ್ತಶಬ್ದ. ಬಹುಮಂದಿ ರಾಕ್ಷಸರ ಕೈಗೆ ಸಿಕ್ಕಿದ್ದಾನೆಯೋ ಏನೋ!" ಎಂದು ಹೇಳಿದಳು. ಆದರೆ ಲಕ್ಷ್ಮಣನು ಅಣ್ಣನ ಆಜ್ಞೆಯಂತೆ ಅಲ್ಲಿಂದ ಚಲಿಸಲಿಲ್ಲ. ಆಗ ಜಾನಕಿಯು ಕೋಪಗೊಂಡು, "ಲಕ್ಷ್ಮಣ, ನೀನು ಅಣ್ಣನಿಗೆ ಮಿತ್ರನಂತೆ ನಟಿಸುವ ಶತ್ರು. ನಿನ್ನ ಅಣ್ಣನು ಇಂಥ ಸಂಕಟದಲ್ಲಿ ಸಿಕ್ಕಿರುವಾಗಲೂ ಅವನಿಗೆ ನೆರವಾಗುವುದು ನಿನಗೆ ಬೇಕಿಲ್ಲ. ಶ್ರೀರಾಮನು ಸಾಯಲೆಂಬುದೇ ನಿನ್ನ ಇಚ್ಛೆ! ನನಗೋಸ್ಕರ ನೀನು ಹೀಗೆ ಮಾಡುತ್ತಿದ್ದೀಯೆ! ನನ್ನ ಮೇಲಿನ ಆಸೆಯಿಂದಲೇ ನೀನು ಶ್ರೀರಾಮನಿಗೆ ನೆರವಾಗಿ ಹೋಗಲು ಹಿಂಜರಿಯುತ್ತಿರಬೇಕು! ಅವನಿಗೆ ಕಷ್ಟಬಂದರೇ ನಿನಗೆ ಪ್ರಿಯವೆಂದು ತೋರುತ್ತದೆ." ಎಂದು ಕಣ್ಣೀರು ಸುರಿಸುತ್ತ ಶೋಕದಿಂದ ಹಲುಬಿದಳು. ಹೆಣ್ಣು ಜಿಂಕೆಯಂತೆ ಹೆದರಿ ಕಂಗಾಲಾದ ಸೀತೆಯನ್ನು ನೋಡಿ ಲಕ್ಷ್ಮಣನು ಹೀಗೆಂದ: "ಅಮ್ಮ, ಬರಿಯ ರಾಕ್ಷಸರು ಮಾತ್ರವಲ್ಲ, ಪನ್ನಗ, ಅಸುರ, ಗಂಧರ್ವ, ದೇವ, ಮಾನುಷ, ರಾಕ್ಷಸರೆಲ್ಲರೂ ಒಟ್ಟಾಗಿ ಬಂದರೂ ರಾಘವನನ್ನು ಗೆಲ್ಲಲು ಸಾಧ್ಯವಿಲ್ಲ. ನೀನು ಹಾಗೆಲ್ಲ ಮಾತಾಡಬಾರದು. ಶ್ರೀರಾಮನಿಲ್ಲದಿರುವಾಗ ಈ ವನದಲ್ಲಿ ನಿನ್ನೊಬ್ಬಳನ್ನೇ ಬಿಟ್ಟು ಹೋಗಲು ನನಗೆ ಮನಸ್ಸು ಬಾರದು. ಮೂರು ಲೋಕದವರೆಲ್ಲರೂ ಒಟ್ಟಾಗಿ ದೇವೇಂದ್ರರೊಡನೆ ಬಂದರೂ ಶ್ರೀರಾಮನ ಬಲವು ಗೆಲ್ಲಲಸಾಧ್ಯವಾಗಿರುವುದು. ಈ ಕಳವಳವನ್ನು ತ್ಯಜಿಸು. ಅಣ್ಣನು ಆ ಮೃಗವನ್ನು ಸಂಹರಿಸಿ ಬೇಗನೆ ಬರುವನು. ಅದು ಶ್ರೀರಾಮನ ಧ್ವನಿಯಲ್ಲ, ಯಾವನೋ ರಾಕ್ಷಸನು ಮಾಯೆಯಿಂದ ಅದೇ ಧ್ವನಿಯಲ್ಲಿ ಕೂಗಿದ್ದಾನೆ. ಮೃಗರೂಪದಲ್ಲಿ ಬಂದ ಆ ರಾಕ್ಷಸನ ಮಾಯೆಯೇ ಸರಿ. ವೈದೇಹಿ. ಮಹಾತ್ಮನಾದ ಶ್ರೀರಾಮನು ನಿನ್ನ ರಕ್ಷಣೆಯನ್ನು ನನಗೆ ವಹಿಸಿಕೊಟ್ಟಿದ್ದಾನೆ. ಆದ್ದರಿಂದ ನಿನ್ನನ್ನು ತ್ಯಜಿಸಿ ಹೋಗುವುದು ನನ್ನಿಂದಾಗದು. ದೇವಿ. ಈಗ ನಾವು ಈ ರಾಕ್ಷಸರೊಡನೆ ವೈರವನ್ನು ಬೆಳೆಸಿಕೊಂಡಿದ್ದೇವೆ. ಖರನ ವಧೆ, ಜನಸ್ಥಾನದ ಸಂಹಾರಪ್ರಸಂಗ ಇದಕ್ಕೆ ಕಾರಣ. ಈ ಘೋರಾರಣ್ಯದಲ್ಲಿ ರಾಕ್ಷಸರು ವಿವಿಧ ರೀತಿಯ ಶಬ್ದಗಳನ್ನು ಮಾಡುತ್ತಾರೆ.

ಪ್ರಾಣಿಹಿಂಸೆಯು ಅವರಿಗೊಂದು ಆಟವಾಗಿದೆ. ದೇವಿ, ನೀನು ಚಿಂತಿಸಬೇಡ" ಎಂದು ಹೇಳಿದ. ಅದನ್ನು ಕೇಳಿ ಸೀತೆಯ ಕೋಪ ಹೆಚ್ಚಿತು, ಕಣ್ಣುಗಳು ಕೆಂಪಾದವು. ಸತ್ಯವನ್ನೇ ನುಡಿದ ಲಕ್ಷ್ಮಣನಿಗೆ ಮತ್ತೆ ಕಠೋರ ವಾಕ್ಯಗಳನ್ನಾಡಿದಳು: "ಎಲಾ ಅಯೋಗ್ಯ, ಕರುಣೆಯ ಲೇಶವೂ ಇಲ್ಲದ ಘಾತುಕಿ ನೀನು! ಕುಲಗೇಡಿ. ಶ್ರೀರಾಮನಿಗೆ ಬಂದ ಘೋರವಾದ ವಿಪತ್ತು ನಿನಗೆ ಪ್ರಿಯವಾಗಿದೆಯೆಂದು ತೋರುತ್ತದೆ. ಶ್ರೀರಾಮನಿಗೆ ಕಷ್ಟಬಂದಿದೆ ಎಂಬುದನ್ನು ತಿಳಿದೇ ಈ ಮಾತುಗಳನ್ನಾಡುತ್ತಿದ್ದೀಯೆ. ನೀನು ಸವತಿಯ ಮಗನಾದ ದಾಯಾದಿಯಲ್ಲವೆ? ನಿನ್ನಂಥ ಘಾತುಕರೂ ಮೋಸಗಾರರೂ ಆದವರಲ್ಲಿ ಕೆಟ್ಟ ಉದ್ದೇಶವಿದ್ದರೆ ಆಶ್ಚರ್ಯವೇನಲ್ಲ! ಕಾಡಿನಲ್ಲಿ ಅಸಹಾಯನಾದ ಶ್ರೀರಾಮನನ್ನು ನೀನು ಒಂಟಿಯಾಗಿ ಹಿಂಬಾಲಿಸಿ ನನಗೋಸ್ಕರ ಕಪಟತನದಿಂದ ಬಂದಿದ್ದೀಯೆ. ಅಥವಾ ಭರತನೇ ನಿನ್ನನ್ನು ಕಳಿಸಿದ್ದಾನೋ ಏನೋ. ಆದರೆ ಲಕ್ಷ್ಮಣ, ನಿನ್ನ ಉದ್ದೇಶವು ನಡೆಯದು! ಭರತನದೂ ನಡೆಯದು ಲಕ್ಷ್ಮಣ, ನಿನ್ನೆದುರಿಗೇ ನಾನು ಪ್ರಾಣವನ್ನು ಬಿಡುತ್ತೇನೆ; ಇದು ನಿಶ್ಚಯ. ಶ್ರೀರಾಮನನ್ನಗಲಿ ಒಂದು ಕ್ಷಣವೂ ನಾನು ಈ ಭೂಮಿಯಲ್ಲಿ ಬದುಕಿರಲಾರೆ" ಎಂದು ಹೇಳಿದಳು. ಸೀತೆಯು ಆಡಿದ ಮೈನವಿರೇಳಿಸುವ ಈ ಕಠೋರವಾಕ್ಯಗಳನ್ನು ಜಿತೇಂದ್ರಿಯನಾದ ಲಕ್ಷ್ಮಣನು ಕೇಳಿದ. ಆತನು ಕೈ ಮುಗಿದುಕೊಂಡು ಸೀತಾದೇವಿಯನ್ನು ಕುರಿತು, "ದೇವಿ, ಇದಕ್ಕೆ ನಾನು ಉತ್ತರ ಹೇಳಲಾರೆ. ನೀನು ನನಗೆ ಪ್ರತ್ಯಕ್ಷ ದೇವತೆಯಾಗಿದ್ದೀಯೆ. ಹೆಂಗಸರು ಚಂಚಲಚಿತ್ತರಾಗಿ ವಿನಯಾದಿ ಸದ್ಗುಣಗಳನ್ನು ಗಾಳಿಗೆ ತೂರುತ್ತಾರೆ. ಜನಕರಾಜತನಯೆ, ಇಂಥ ಮಾತನ್ನು ನಾನು ಸಹಿಸಲಾರೆ. ನೀನಾಡಿದ ಮಾತಿನಿಂದ ಕಾಯಿಸಿದ ಕಬ್ಬಿಣದ ಸರಳನ್ನು ನನ್ನ ಕಿವಿಗಳೆರಡರಲ್ಲಿಯೂ ತೂರಿಸಿದಂತಾಯಿತು! ನಾನು ನ್ಯಾಯವಾದ ಮಾತನ್ನಾಡಿದರೂ ಎಷ್ಟು ಅನ್ಯಾಯವಾಗಿ ಎಂತಹ ಕಠೋರವಾದ ಮಾತನ್ನು ಹೇಳಿದೆ! ಥೂ, ಹಾಳಾಗಿಹೋಗು! ನನ್ನನ್ನು ಹೀಗೆ ಶಂಕಿಸುವೆಯಾ? ಶ್ರೀರಾಮನಿರುವಲ್ಲಿಗೆ ಹೋಗುತ್ತೇನೆ. ದೇವಿ, ನಿನಗೆ ಶುಭವಾಗಲಿ! ಸಮಸ್ತ ವನದೇವತೆಗಳೂ ನಿನ್ನನ್ನು ಕಾಪಾಡಲಿ! ಈಗ ನನಗಾಗುವ ಕೆಟ್ಟ ಶಕುನಗಳನ್ನು ಗಮನಿಸಿದರೆ ಪುನಃ ನಾನು ಶ್ರೀರಾಮನೊಡನೆ ಬಂದು ನಿನ್ನನ್ನು ಕಾಣುವೆನೇ ಎಂಬ ಸಂದೇಹವಾಗುತ್ತಿದೆ" ಎಂದ. ಜಾನಕಿಯು ಅಳುತ್ತಿದ್ದಳು. ಅವಳು ಕಣ್ಣೀರು ಸುರಿಸುತ್ತ ಮತ್ತೆ ಕಠೋರವಾಗಿ, "ಶ್ರೀರಾಮನಿಲ್ಲದಿದ್ದರೆ ನಾನು ಗೋದಾವರೀನದಿಯಲ್ಲಿ ಧುಮುಕುತ್ತೇನೆ; ನೇಣುಹಾಕಿಕೊಳ್ಳುತ್ತೇನೆ; ಕೊರಕಲು ಹಳ್ಳದಲ್ಲಾದರೂ ಬಿದ್ದು ದೇಹವನ್ನು ಬಿಡುತ್ತೇನೆ; ಘೋರ ವಿಷವನ್ನಾದರೂ ಕುಡಿಯುತ್ತೇನೆ, ಇಲ್ಲವೇ, ಬೆಂಕಿಗೆ ಬೀಳುತ್ತೇನೆ!" ಎಂದು ದುಃಖಾವೇಶದಿಂದ ಕೂಗಿದಳು. ಕಣ್ಣೀರು ಹರಿಸುತ್ತ ಶೋಕೋದ್ರೇಕದಿಂದ ಎರಡು ಕೈಗಳಿಂದಲೂ ಹೊಟ್ಟೆಯನ್ನು ಬಡಿದುಕೊಂಡಳು. ಹೀಗೆ ದುಃಖಾರ್ತಳಾಗಿ ಅಳುತ್ತಿದ್ದ ಸೀತೆಯನ್ನು ನೋಡಿ ಸೌಮಿತ್ರಿಗೆ ಬಹಳ ಖೇದವಾಯಿತು. ಅವನು ಮತ್ತೆ ಅವಳನ್ನು ಸಂತೈಸಲು ಪ್ರಯತ್ನಿಸಿದರೂ, ಸೀತೆಯು ಮೈದುನನೊಡನೆ ಒಂದು ಮಾತನ್ನೂ ಆಡಲಿಲ್ಲ. ಅನಂತರ ಲಕ್ಷ್ಮಣನ ಕೈಮುಗಿದುಕೊಂಡು ಸ್ವಲ್ಪ ಬಗ್ಗಿ ಸೀತೆಗೆ ಅಭಿವಾದನೆ ಮಾಡಿದ ಆ ಧೀರನು ಮನಸ್ಸನ್ನು ಗಟ್ಟಿಮಾಡಿಕೊಂಡು ಶ್ರೀರಾಮನ ಬಳಿಗೆ ಹೊರಟನು. ಅವನು ಹೋಗುವಾಗ ತಿರುತಿರುಗಿ ಮೈಥಿಲಿಯನ್ನು ನೋಡುತ್ತ ನೋಡುತ್ತ ಮುಂದೆ

ಹೋದ. ಸೀತೆಯ ಪರುಷವಚನಗಳಿಂದ ಲಕ್ಷ್ಮಣನು ಕೋಪ-ವಿಷಾದಗಳಿಂದ ಕೂಡಿ ಶ್ರೀರಾಮನನ್ನು ನೋಡಲೇಬೇಕೆಂದು ಉದ್ದೇಶಿಸಿ ಬೇಗಬೇಗನೆ ಹೋದ.

ಅದಕ್ಕಾಗಿ ಕಾದಿದ್ದ ದಶಕಂಠನಿಗೆ ಸರಿಯಾದ ಅವಕಾಶ ಸಿಕ್ಕಿತು. ಕೂಡಲೇ ಅವನು ಪರಿವ್ರಾಜಕವೇಷನನ್ನು ಧರಿಸಿ ವೈದೇಹಿಯಿದ್ದಲ್ಲಿಗೆ ಬಂದ. ನಯವಾದ ಕಾಷಾಯವಸ್ತ್ರವನ್ನುಟ್ಟು ತಲೆಯಲ್ಲಿ ಶಿಖೆಯನ್ನು ಧರಿಸಿ, ಛತ್ರಿಯನ್ನು ಹಿಡಿದು ಪಾದುಕೆಗಳನ್ನು ಮೆಟ್ಟಿದ್ದ; ಎಡ ಹೆಗಲಿಗೆ ದಂಡಕಮಂಡಲುಗಳನ್ನು ಅಳವಡಿಸಿಕೊಂಡಿದ್ದ. ಅರಣ್ಯದಲ್ಲಿ ರಾಮಲಕ್ಷ್ಮಣರಿಬ್ಬರೂ ಇಲ್ಲದಾಗ ಸೀತೆಯು ಸೂರ್ಯಚಂದ್ರರಿಬ್ಬರೂ ಇಲ್ಲದ ಸಂಧ್ಯೆಯಂತಾಗಿದ್ದಳು. ಕಾರ್ಗತ್ತಲೆಯು ಸಂಧ್ಯೆಯನ್ನು ಸಮೀಪಿಸುವಂತೆ, ತ್ರಿದಂಡಿ ಸನ್ಯಾಸಿಯಂತೆ ತಲೆಯಲ್ಲಿ ಶಿಖೆಯನ್ನು ಹೊತ್ತ ಬಲಾಢ್ಯನಾದ ರಾವಣನು ಸೀತೆಯ ಬಳಿಗೆ ಬಂದ. ಚಂದ್ರಮನಿಲ್ಲದಾಗ ರೋಹಿಣಿಯನ್ನು ಪಾಪಗ್ರಹವು ವೀಕ್ಷಿಸುವಂತೆ, ಶ್ರೀರಾಮನ ಪತ್ನಿಯಾದ ಆ ಬಾಲೆಯನ್ನು ದಾರುಣಸ್ವಭಾವದ ರಾವಣನು ಕಣ್ಣಿಟ್ಟು ನೋಡಿದ. ಉಗ್ರ ತೇಜೋವಂತನೂ ಕ್ರೂರಕರ್ಮನೂ ಆದ ರಾವಣನನ್ನು ನೋಡಿ ಜನಸ್ಥಾನದಲ್ಲಿ ಬೆಳೆದಿದ್ದ ಮರಗಳು ಅಲ್ಲಾಡಲಿಲ್ಲ, ಗಾಳಿ ಬೀಸಲಿಲ್ಲ, ವೇಗವಾಗಿ ಹರಿಯುತ್ತಿದ್ದ ಗೋದಾನರೀನದಿಯು ಕೆಂಗಣ್ಣಿನಿಂದ ನೋಡುತ್ತಿದ್ದ ರಾವಣನನ್ನು ಕಂಡು ಹೆದರಿ ಮೆಲ್ಲಗೆ ಹರಿಯತೊಡಗಿದಳು! ಶ್ರೀರಾಮನಿಗೆ ಅಪಕಾರಮಾಡಲು ಅವಕಾಶಕ್ಕಾಗಿ ಹವಣಿಸುತ್ತಿದ್ದ ರಾವಣನು ಭಿಕ್ಷುರೂಪದಿಂದ ತನ್ನ ಪತಿಗಾಗಿ ಹಂಬಲಿಸುತ್ತಿದ್ದ ವೈದೇಹಿಯ ಬಳಿಗೆ ಆ ದುಷ್ಟನು ಚಿತ್ರಾನಕ್ಷತ್ರದ ಬಳಿಗೆ ಶನಿಯು ಬಂದಂತೆ ಬಂದ! ಮೇಲೆ ಹುಲ್ಲು ಮುಚ್ಚಿದ ಹಾಳುಬಾವಿಯಂತಿದ್ದ ಆ ಪಾಪಿಯು, ಕೀರ್ತಿಶಾಲಿನಿಯೂ ಶುಭಾಂಗಿಯೂ ಹೊಳೆಯುವ ದಂತಪಂಕ್ತಿಯುಳ್ಳವಳೂ ಚೆಂದುಟಿಯವಳೂ ಪೂರ್ಣಚಂದ್ರಾನನೆಯೂ ಪದ್ಮದಳಾಯತಾಕ್ಷಿಯೂ ಆಗಿ ಹಳದಿಯ ಬಣ್ಣದ ರೇಷ್ಮೆಯ ಸೀರೆಯನ್ನುಟ್ಟಿದ್ದ ವೈದೇಹಿಯನ್ನು ನೋಡಿ ಆನಂದದಿಂದ ಹಿಗ್ಗುತ್ತ ಮುಂದೆ ಬಂದ! ಸೀತೆಯು ಶೋಕದಲ್ಲಿ ಮುಳುಗಿ ಕಣ್ಣೀರು ಹರಿಸುತ್ತ ಪರ್ಣಶಾಲೆಯಲ್ಲಿ ಕುಳಿತಿದ್ದಳು.

ಕಾಮಪೀಡಿತನಾದ ರಾವಣನು 'ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ಯತಯಃ ಶುದ್ಧಸತ್ತ್ವಾಃ' ಎಂದು ವೇದವಾಕ್ಯವನ್ನು ಘೋಷಿಸುತ್ತ ಬಂದ. ಆ ರಾಕ್ಷಸರಾಜನು ಯಾರೂ ಇಲ್ಲದ ಆ ಸ್ಥಳಕ್ಕೆ ಬಂದು ಮೆಲುನುಡಿಯಿಂದ ಮಾತನಾಡಲಾರಂಭಿಸಿದ. ಕೈಯಲ್ಲಿ ಕಮಲವೊಂದಿಲ್ಲದ ಸಾಕ್ಷಾತ್ ಲಕ್ಷ್ಮಿಯಂತೆ ಲಾವಣ್ಯವತಿಯಾಗಿ, ಲೋಕದಲ್ಲಿ ಅತ್ಯುತ್ತಮವಾದ ಸ್ತ್ರೀರತ್ನವೆನಿಸಿದ ಸೀತಾದೇವಿಯನ್ನು ಹೊಗಳುತ್ತ ರಾವಣನು ಹೀಗೆಂದ: "ಎಲೌ ಬಂಗಾರದ ಮೈಬಣ್ಣದವಳೆ, ನೀನು ಯಾರು? ಹಳದಿಯ ರೇಷ್ಮೆಯ ಸೀರೆಯನ್ನುಟ್ಟವಳೆ, ನೀನು ಯಾರು? ತಾವರೆ ಹೂಗಳ ಚೆಲುವಾದ ಮಾಲೆಯನ್ನು ಧರಿಸಿದ ತಾವರೆಯ ಬಳ್ಳಿಯಂತಿರುವ ನೀನು ಯಾರು? ಗೌರಿಯೋ ಸಂಪದಭಿಮಾನಿದೇವತೆಯೋ ಕೀರ್ತಿದೇವತೆಯೋ ಅಥವಾ ಸೌಭಾಗ್ಯದಾಯಿನಿಯಾದ ಲಕ್ಷ್ಮಿಯ ಅಣಿಮಾದಿ ಅಷ್ಟಸಿದ್ಧಿಗಳಲ್ಲೊಬ್ಬಳೋ? ಹೇ ವಿಲಾಸಿನಿ, ನಿನ್ನ ಹುಸಿನಗೆಯ ಸೊಗಸೇನು, ಹಲ್ಲಿನ ಸೊಗಸೇನು, ಕಣ್ಣಿನ ಸೊಗಸೇನು! ಹೊಳೆಯು ದಂಡೆಯನ್ನು

ಕೊರೆದು ಸೆಳೆದೊಯ್ಯುವಂತೆ ನೀನು ನನ್ನ ಮನಸ್ಸನ್ನು ಸೆಳೆಯುತ್ತಿದ್ದೀಯೆ. ಕೈಯಲ್ಲಿ ಹಿಡಿಯುವಷ್ಟು ನಿನ್ನ ನಡು ಕೃಶವಾಗಿದೆ. ಈ ಜಗತ್ತಿನಲ್ಲಿ ಗಂಧರ್ವ ಯಕ್ಷಕಿನ್ನರರಲ್ಲಾಗಲಿ ದೇವತಾಸ್ತ್ರೀಯರಲ್ಲಾಗಲೀ ಮನುಷ್ಯರಲ್ಲಾಗಲಿ ನಿನ್ನಂಥ ಸುಂದರಿಯನ್ನು ನಾನು ಕಂಡಿಲ್ಲ. ಲೋಕದಲ್ಲಿ ಸರ್ವಶ್ರೇಷ್ಠವಾದ ಈ ರೂಪ, ಈ ಕೋಮಲತೆ, ಈ ವಯಸ್ಸು, ಈ ಕಾಡಿನಲ್ಲಿ ವಾಸ – ಇವು ನನ್ನ ಮನಸ್ಸನ್ನು ಹುಚ್ಚೆಬ್ಬಿಸುತ್ತಿವೆ. ನೀನು ಇಲ್ಲಿಂದ ಹೊರಟು ಹೋಗು, ಶುಭವಾಗಲಿ! ನೀನು ಇಲ್ಲಿ ವಾಸವಾಗಿರುವುದು ಸರಿಯಲ್ಲ. ಕಾಮರೂಪಿಗಳಾದ ರಾಕ್ಷಸರು ವಾಸವಾಗಿರುವ ಸ್ಥಳವಿದು! ಸಂಪದ್ಭರಿತವಾದ ದಿವ್ಯಭವನಗಳ ಮಹಡಿಗಳಲ್ಲಿಯೂ, ಸುಗಂಧವನ್ನು ಬೀರುವ ರಮಣೀಯವಾದ ನಗರೋದ್ಯಾನಗಳಲ್ಲಿಯೂ ತಿರುಗಾಡಿಕೊಂಡು ಇರಬೇಕಾದವಳು ನೀನು. ಕಲ್ಯಾಣಿ, ನೀನು ಉಪಯೋಗಿಸುವ ಎಲ್ಲವೂ ಶ್ರೇಷ್ಠವಾಗಿರಬೇಕು. ನಿನಗೆ ಪ್ರಶಸ್ತನಾದ ಪತಿಯಿರಬೇಕೆಂದು ತಿಳಿಯುತ್ತೇನೆ. ನೀನು ಯಾವಳೋ ದೇವತಾಸ್ತ್ರೀಯೆಂದು ನನಗೆ ತೋರುತ್ತದೆ. ಗಂಧರ್ವರು, ದೇವತೆಗಳು, ಕಿನ್ನರರು ಇತ್ತ ಸುಳಿಯುವುದಿಲ್ಲ, ಇದು ರಾಕ್ಷಸರಿರುವ ಸ್ಥಳ. ನೀನು ಇಲ್ಲಿಗೆ ಹೇಗೆ ಬಂದಿರಬಹುದು? ಇಲ್ಲಿ ಕಪಿ, ಸಿಂಹ, ಚಿರತೆ, ಹುಲಿ ಮುಂತಾದ ಕಾಡುಮೃಗಗಳಿವೆ; ಕರಡಿಗಳೂ ಪಟ್ಟೆ ಹುಲಿಗಳೂ ಇವೆ; ಮಾಂಸಾಹಾರಿಗಳಾದ ಹದ್ದುಗಳಿವೆ. ನಿನಗೆ ಅವುಗಳಿಂದ ಹೆದರಿಕೆಯಾಗುವುದಿಲ್ಲವೆ? ಭಯಂಕರವಾದ ಮದ್ದಾನೆಗಳು ಇಲ್ಲಿ ರಭಸದಿಂದ ಸಂಚರಿಸುತ್ತವೆ. ಸುಂದರಿ, ಈ ಅರಣ್ಯದಲ್ಲಿ ಒಂಟಿಯಾಗಿರುವೆಯಲ್ಲ, ನಿನಗೆ ಭಯವಾಗುವುದಿಲ್ಲವೆ? ನೀನು ಯಾರು? ಯಾರ ಕಡೆಯವಳು? ಎಲ್ಲಿಂದ ಬಂದಿದ್ದೀಯೆ ? ರಾಕ್ಷಸರಿರುವ ಈ ಘೋರಾರಣ್ಯದಲ್ಲಿ ಒಂಟಿಯಾಗಿ ಏಕೆ ತಿರುಗುತ್ತಿದ್ದೀಯೆ?" ಎಂದು ಕೇಳಿದ. ದುರಾತ್ಮನಾದ ರಾವಣನು ವೈದೇಹಿಯನ್ನು ಹೀಗೆ ಹೊಗಳಿ ಮಾತಾಡಲು, ಅವನು ಬ್ರಾಹ್ಮವೇಷದಲ್ಲಿರುವುದನ್ನು ಸೀತೆಯು ಗಮನಿಸಿದಳು. ಆದ್ದರಿಂದ ಅತಿಥಿಸತ್ಕಾರಗಳನ್ನಿತ್ತು ಅವನನ್ನು ಆದರಿಸಿದಳು. ಮೈಥಿಲಿಯು ಆತನಿಗೆ ಪೀಠವನ್ನಿತ್ತು ಕಾಲು ತೊಳೆಯಲು ನೀರನ್ನು ತಂದುಕೊಟ್ಟು ಉಪಚರಿಸಿದಳು. ಸೌಮ್ಯನಾಗಿ ಕಾಣುತ್ತಿದ್ದ ಅವನನ್ನು ನೋಡಿ "ಅಡುಗೆಯು ಸಿದ್ಧವಾಗಿದೆ?" ಎಂದು ಮಾತ್ರ ಹೇಳಿದಳು. ಕಮಂಡಲು ಕಾಷಾಯಗಳನ್ನು ಧರಿಸಿ ಬ್ರಾಹ್ಮಣವೇಷದಲ್ಲಿ ರಾವಣನು ಬಂದುದರಿಂದ, ಅವನು ಬ್ರಾಹ್ಮಣಸನ್ಯಾಸಿಯೆಂದು ಮೈಥಿಲಿಯು ತಿಳಿದಳು. ಕಮಂಡಲು, ವೇದಘೋಷ ಮುಂತಾದ ಉಪಾಯಗಳನ್ನು ರಾವಣನು ಆಶ್ರಯಿಸಿದ್ದರಿಂದ ಸೀತೆಯು ಅವನನ್ನು ಬ್ರಾಹ್ಮಣನೆಂದು ತಿಳಿದು ಅವನನ್ನು ಸ್ವಾಗತಿಸಿದಳು: "ಹೇ ಬ್ರಾಹ್ಮಣ, ಈ ಆಸನದಲ್ಲಿ ಕುಳಿತುಕೊ. ಇದು ಪಾದ್ಯ, ಸ್ವೀಕರಿಸು. ಉತ್ತಮವಾದ ಕಂದಮೂಲಾದಿ ವನ್ಯಾಹಾರವನ್ನು ನಿನಗೋಸ್ಕರ ಇಲ್ಲಿ ಇಟ್ಟಿದ್ದೇನೆ, ಸಾವಧಾನವಾಗಿ ಊಟಮಾಡು" ಎಂದು ಹೇಳಿದಳು. ಹೀಗೆ ಮೈಥಿಲಿಯು ಸರಿಯಾಗಿ ಮಾತನಾಡುತ್ತ ಸತ್ಕರಿಸುತ್ತಿರಲು, ರಾವಣನು ಅವಳನ್ನು ಅಪಹರಿಸಬೇಕೆಂದು ನಿರ್ಧರಿಸಿಕೊಳ್ಳುತ್ತಿದ್ದನು! ತನ್ನ ವಧೆಗೆ ತಾನೇ ಸಿದ್ಧವಾಗುತ್ತಿದ್ದ! ಸೀತೆಯಾದರೋ ಬೇಟೆಗೆ ಹೋಗಿದ್ದ ತನ್ನ ಪತಿಯು ಲಕ್ಷ್ಮಣನೊಡನೆ ಬಂದಾನೆ ಎಂದು ಚಡಪಡಿಸುತ್ತ ಬರವನ್ನು ಕಾಯುತ್ತ ಅವರು ಹೋದ ದಿಕ್ಕನ್ನು ತಿರುತಿರುಗಿ ನೋಡುತ್ತಿದ್ದಳು. ಅವಳಿಗೆ ಕಂಡದ್ದು ವಿಶಾಲವಾದ ಗೊಂಡಾರಣ್ಯ, ರಾಮಲಕ್ಷ್ಮಣರು ಮಾತ್ರ ಕಾಣಲಿಲ್ಲ.

೨೦. ಸೀತೆ ರಾವಣನಿಗೆ ತನ್ನ ವೃತ್ತಾಂತವನ್ನು ಹೇಳಿದುದು; ರಾವಣನ ಪ್ರಣಯಯಾಚನೆ

ವೈದೇಹಿಯನ್ನು ಅಪಹರಿಸಲು ಹೊಂಚು ಹಾಕಿ ಸಂನ್ಯಾಸಿಯ ವೇಷದಲ್ಲಿ ಬಂದಿದ್ದ ರಾವಣನು ಅವಳ ವೃತ್ತಾಂತವನ್ನು ಕೇಳಿದ. ಆಗ ಸೀತಾದೇವಿಯು ಸ್ವಲ್ಪ ಹಿಂದೆ ಮುಂದೆ ನೋಡಿ, 'ಎಷ್ಟಾದರೂ ಇವನು ಬ್ರಾಹ್ಮಣ, ಅತಿಥಿಯಾಗಿ ಬಂದಿದ್ದಾನೆ, ಹೇಳದಿದ್ದರೆ ನನ್ನನ್ನು ಶಪಿಸಿಬಿಟ್ಟಾನು' ಎಂದು ಆಲೋಚಿಸಿ ಹೀಗೆಂದಳು: "ಜನಕರಾಜನೆಂಬ ಮಹಾತ್ಮನು ಮಿಥಿಲೆಗೆ ಅಧಿಪತಿಯಾಗಿದ್ದಾನೆ; ನಾನು ಅವನ ಮಗಳು, ನನ್ನ ಹೆಸರು ಸೀತೆ. ಅಯ್ಯಾ ಬ್ರಾಹ್ಮಣ, ನಿನಗೆ ಒಳ್ಳೆಯದಾಗಲಿ! ನಾನು ಶ್ರೀರಾಮನ ಪ್ರಿಯಪತ್ನಿ. ಶ್ರೀರಾಮನ ಪತ್ನಿಯಾಗಿ ನಾನು ಇಕ್ಷ್ವಾಕು ರಾಜರ ಅರಮನೆಯಲ್ಲಿ ಹನ್ನೆರಡು ವರ್ಷಗಳ ಕಾಲ ಸುಖವಾಗಿ ಇದ್ದೆ. ಸಕಲ ಇಷ್ಟಾರ್ಥಗಳನ್ನೂ ಭೋಗಗಳನ್ನು ಅನುಭವಿಸುತ್ತಲಿದ್ದೆ. ಹೀಗಿರಲು ಹದಿಮೂರನೆಯ ವರ್ಷದಲ್ಲಿ ದಶರಥ ಮಹಾರಾಜನು ತನ್ನ ಮಂತ್ರಿಗಳೊಡನೆ ಸಮಾಲೋಚಿಸಿ, ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಲು ಉದ್ಯುಕ್ತನಾದ. ರಘುನಂದನನ ಪಟ್ಟಾಭಿಷೇಕಕ್ಕಾಗಿ ಸಾಮಗ್ರಿಗಳು ಸಿದ್ಧವಾಗುತ್ತಿದ್ದವು. ಆಗ ಕೈಕೇಯಿಯೆಂಬ ನನ್ನ ಅತ್ತೆಯೊಬ್ಬಳು ತನ್ನ ಪತಿಯೊಡನೆ ವರವನ್ನು ಸಲ್ಲಿಸಬೇಕೆಂದು ನನ್ನ ಮಾವನೊಡನೆ ಹಟಹಿಡಿದಳು. ನನ್ನ ಸುಕೃತ ಹಾಗಿತ್ತು. ನನ್ನ ಪತಿಯು ಅರಣ್ಯಕ್ಕೆ ಹೋಗಬೇಕೆಂದೂ, ತನ್ನ ಮಗನಾದ ಭರತನಿಗೆ ಪಟ್ಟಾಭಿಷೇಕವಾಗಬೇಕೆಂದೂ ಎರಡು ವರಗಳನ್ನು ಅವಳು ತನ್ನ ಪತಿಯಲ್ಲಿ ಕೇಳಿಕೊಂಡಳು. ಆ ರಾಜಶ್ರೇಷ್ಠನಾದರೋ ಸತ್ಯಸಂಧ. 'ಶ್ರೀರಾಮನಿಗೆ ಪಟ್ಟಾಭಿಷೇಕಮಾಡಿದರೆ, ನಾನು ಊಟಮಾಡುವುದಿಲ್ಲ, ಮಲಗುವುದಿಲ್ಲ, ನೀರನ್ನೂ ಕುಡಿಯುವುದಿಲ್ಲ. ನನ್ನ ಬದುಕು ಇಲ್ಲಿಗೆ ಮುಗಿಯಿತು' ಎಂದು ಕೈಕೇಯಿಯು ಹಟಹಿಡಿದಳು. ಅವಳಿಗೆ ಬೇಕೆನಿಸಿದ ಇತರ ಯಾವ ಇಷ್ಟಾರ್ಥಗಳನ್ನಾದರೂ ಸಲ್ಲಿಸುವುದಾಗಿ ಮಾವನು ಬೇಡಿಕೊಂಡರೂ ಕೈಕೇಯಿಯು ಒಪ್ಪಲಿಲ್ಲ. ನನ್ನ ಪತಿಯು ಮಹಾತೇಜಸ್ವಿ, ಇಪ್ಪತ್ತೈದು ವರ್ಷ ವಯಸ್ಸಿನ ತರುಣ, ನನಗಾಗ ಹದಿನೆಂಟು ವರ್ಷಗಳು. ಶ್ರೀರಾಮನೆಂಬ ಅವನು ಗುಣವಂತ, ಸತ್ಯಸಂಧ, ಪರಿಶುದ್ಧಚಿತ್ತ. ಆತನು ವಿಶಾಲಾಕ್ಷ, ಆಜಾನುಬಾಹು, ಸಕಲಜೀವಿಗಳಿಗೂ ಹಿತವನ್ನು ಕೋರತಕ್ಕವನು. ಅವನ ತಂದೆಯಾದ ದಶರಥಮಹಾರಾಜನು ಮಹಾತೇಜಸ್ವಿಯಾದರೂ ಕಾಮಾರ್ತನಾಗಿದ್ದು, ಕೈಕೇಯಿಗೆ ಸಂತೋಷವಾಗಲೆಂದು ಅವನು ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲಿಲ್ಲ. ಶ್ರೀರಾಮನು ಅಭಿಷೇಕದ ಕಾರ್ಯಾರ್ಥವಾಗಿ ತಂದೆಯ ಬಳಿಗೆ ಹೋದಾಗ, ಕೈಕೇಯಿಯು ದೃಢನಿರ್ಧಾರದ ಒಂದು ಮಾತನ್ನು ಹೇಳಿದಳು. ಏನೆಂದರೆ, 'ರಾಘವ, ನಿನ್ನ ತಂದೆಯ ಆಜ್ಞೆಯಾಗಿದೆ. ಭರತನಿಗೆ ಈ ಕೋಸಲರಾಜ್ಯವನ್ನು ನಿಷ್ಕಂಟಕವಾಗಿ ಒಪ್ಪಿಸಿಬಿಡಬೇಕು, ನೀನು ಹದಿನಾಲ್ಕುವರ್ಷ ಕಾಡಿನಲ್ಲಿ ಇರಬೇಕು. ಆದ್ದರಿಂದ, ರಾಘವನೇ ನೀನು ಕಾಡಿಗೆ ಹೊರಟುಹೋಗು. ನಿನ್ನ ತಂದೆಯನ್ನು ಸುಳ್ಳಿನ ಬಂಧನದಿಂದ ಬಿಡಿಸು' ಎಂದು ಹೇಳಿದಳು. ಶ್ರೀರಾಮನು ನಿರ್ಭೀತಿಯಿಂದ 'ಹಾಗೆಯೇ ಆಗಲಿ' ಎಂದು ಕೈಕೇಯಿಗೆ ಹೇಳಿದ ಮತ್ತು ಹಾಗೆಯೇ ಮಾಡಿದ. ನನ್ನ ಗಂಡನು ಹಿಡಿದ ಕಾರ್ಯದಲ್ಲಿ



ರಾವಣನಿಂದ ಸೀತೆಯ ಪ್ರಣಯಯಾಚನೆ

ದೃಢನಿಷ್ಠೆಯುಳ್ಳವನು. ಅವನಿಗೆ ಲಕ್ಷ್ಮಣನೆಂಬ ವೀರನಾದ ತಮ್ಮನೊಬ್ಬನಿದ್ದಾನೆ. ಅವನು ಇನ್ನೊಬ್ಬ ಚಿಕ್ಕಮ್ಮನ ಮಗ. ಆ ಪುರುಷಶ್ರೇಷ್ಠನು ಶ್ರೀರಾಮನಿಗೆ ಸಹಾಯಕನಾಗಿದ್ದಾನೆ; ರಣರಂಗದಲ್ಲಿ ಶತ್ರುಗಳನ್ನು ಧ್ವಂಸಮಾಡಬಲ್ಲ ಆ ಸೋದರನು ಧರ್ಮನಿಷ್ಠ, ದೃಢವ್ರತ. ಕಾಡಿಗೆ ಹೊರಟು ಬಂದ ಶ್ರೀರಾಮನನ್ನು ಹಿಂಬಾಲಿಸಿ ಲಕ್ಷ್ಮಣನೂ ಧನುರ್ಧಾರಿಯಾಗಿ ನನ್ನಂತೆ ಬಂದಿದ್ದಾನೆ. ನನ್ನ ಪತಿಯು ಜಟೆಯನ್ನು ಬೆಳೆಸಿ ತಾಪಸನಾಗಿ ನನ್ನನ್ನೂ ತಮ್ಮನನ್ನೂ ಕರೆದುಕೊಂಡು ಈ ದಂಡಕಾರಣ್ಯಕ್ಕೆ ಬಂದಿದ್ದಾನೆ. ಅವನು ಜಿತೇಂದ್ರಿಯನಾಗಿ ಯಾವಾಗಲೂ ಧರ್ಮಮಾರ್ಗದಲ್ಲಿಯೇ ನಡೆಯುತ್ತಾನೆ. ಹೀಗೆ ಕೈಕೇಯಿಯಿಂದ ನಾವು ಮೂವರು ರಾಜ್ಯದಿಂದ ಹೊರಗೆ ಬರಬೇಕಾಯಿತು. ಬ್ರಾಹ್ಮಣೋತ್ತಮ, ಈ ದಟ್ಟವಾದ ಅರಣ್ಯವನ್ನು ನಮ್ಮ ತೇಜೋಬಲದಿಂದ ಸುತ್ತುತ್ತಿದ್ದೇವೆ. ಸ್ವಲ್ಪ ಹೊತ್ತು ವಿಶ್ರಮಿಸು. ನನ್ನ ಪತಿಯು ಯಥೇಚ್ಛವಾಗಿ ವನ್ಯಾಹಾರವನ್ನು ತೆಗೆದುಕೊಂಡು ಬರುವನು; ಜಿಂಕೆ, ಉಡು, ಹಂದಿ ಮುಂತಾದ ಭಕ್ಷಣಯೋಗ್ಯವಾದ ಮೃಗಗಳನ್ನು ಕೊಂದು ತರುವನು. ಎಲೈ ಬ್ರಾಹ್ಮಣನೆ, ನಿನ್ನ ಹೆಸರೇನು? ಗೋತ್ರ ಯಾವುದು? ವಂಶ ಯಾವುದು? ದಿಟವಾಗಿ ಹೇಳು, ದಂಡಕಾರಣ್ಯದಲ್ಲಿ ಏಕಾಕಿಯಾಗಿ ಏಕೆ ಸಂಚರಿಸುತ್ತಿದ್ದೀಯೆ?" ಎಂದಳು. ಹೀಗೆ ಶ್ರೀರಾಮನ ಪತ್ನಿಯಾದ ಸೀತಾದೇವಿಯು ಕೇಳಲು ರಾವಣನಾದ ರಾವಣನು ಕರ್ಣಕಠೋರನಾದ ಉತ್ತರವನ್ನು ಕೊಟ್ಟನು: "ಸೀತೆ, ದೇವಾಸುರಮನುಷ್ಯಲೋಕಗಳು ಯಾರಿಗೆ ಹೆದರಿ ನಡುಗುತ್ತವೋ ಅಂಥ ರಾವಣನಾದ ರಾವಣನೇ ನಾನು. ಸುಂದರಿ, ಸುವರ್ಣವರ್ಣೆಯಾಗಿರುವ ನಿನ್ನನ್ನು ಕಂಡ ಮೇಲೆ ನನ್ನ ಹೆಂಡತಿಯರಲ್ಲಿ ನನಗೆ ಸಂತುಷ್ಟಿಯೇ ದೊರೆಯದಾಗಿದೆ! ಬಹುಮಂದಿ ಉತ್ತಮಸ್ತ್ರೀಯರನ್ನು ಬೇರೆ ಬೇರೆ ಸ್ಥಳಗಳಿಂದ ನಾನು ಸಂಗ್ರಹಿಸಿ ತಂದಿದ್ದೇನೆ. ಅವರೆಲ್ಲರ ಮೇಲೆ ನೀನು ಪ್ರಧಾನ ರಾಣಿಯಾಗಿರು. ಸಮುದ್ರಮಧ್ಯದಲ್ಲಿ ಲಂಕೆಯೆಂಬ ಒಂದು ಮಹಾನಗರವಿದೆ; ಅದು ನನ್ನದು. ಸಾಗರವು ಸುತ್ತುವರಿದಿರುವ ಆ ನಗರವು ಒಂದು ಪರ್ವತದ ಶಿಖರದ ಮೇಲಿದೆ. ಸೀತೆ, ಅಲ್ಲಿ ನೀನು ನನ್ನೊಡನೆ ಉದ್ಯಾನವನಗಳಲ್ಲಿ ವಿಹರಿಸಬಹುದು. ರಮಣೀಮಣಿ, ನೀನು ನನ್ನ ಹೆಂಡತಿಯಾದರೆ ಹತ್ತುಸಾವಿರ ದಾಸಿಯರು ನಿನ್ನ ಸೇವೆ ಮಾಡುತ್ತಾರೆ!" ಎಂದು ಹೇಳಿದ. ರಾವಣನು ಹೀಗೆಂದೊಡನೆ ಜಾನಕಿಯು ಕುಪಿತಳಾಗಿ ಆ ರಾಕ್ಷಸನನ್ನು ಲೆಕ್ಕಿಸದೆ ತಿರುಗಿ ಹೇಳಿದಳು: "ನನ್ನ ಪತಿಯು ಮಹಾಪರ್ವತದಂತೆ ಅಲ್ಲಾಡಿಸಲು ಅಶಕ್ಯನೂ ಮಹಾಸಾಗರದಂತೆ ದುರ್ಧರ್ಷನೂ ಆಗಿದ್ದಾನೆ. ದೇವೇಂದ್ರಸಮಾನನೂ ಸಮಸ್ತ ಶುಭಲಕ್ಷಣಸಂಪನ್ನನೂ ಸತ್ಯಸಂಧನೂ ಮಹಾಪುರುಷನೂ ಆಜಾನುಬಾಹುವೂ ವಿಶಾಲವಕ್ಷನೂ ಸಿಂಹಗಂಭೀರಗಾಮಿಯೂ ವೀರಾಗ್ರಣಿಯೂ ಪುರುಷೋತ್ತಮನೂ ಆದ ಶ್ರೀರಾಮನನ್ನು ನಾನು ನಂಬಿದ್ದೇನೆ. ಎಲಾ ರಾಕ್ಷಸ, ನೀನು ಒಂದು ಗುಳ್ಳೇನರಿ! ಸಿಂಹಪತ್ನಿಯಾದ ಈ ಸಿಂಹಿಯನ್ನು ನೀನು ಬಯಸುವೆಯಾ? ನೀನು ನನ್ನನ್ನು ಮುಟ್ಟಲೂ ಸಾಧ್ಯವಿಲ್ಲ. ಎಲಾ ಬುದ್ಧಿಗೇಡಿ, ರಾಘವನ ಪ್ರಿಯಪತ್ನಿಯನ್ನು ಬಯಸುವೆಯಾ? ಮಂದರಪರ್ವತವನ್ನು ಕೈಯಿಂದ ಹೊರಲು ಬಯಸಿದ್ದೀಯೆ. ಕಾಲಕೂಟ ವಿಷವನ್ನು ಕುಡಿದು ಕ್ಷೇಮವಾಗಿ ಹೋಗಬಹುದೆಂದು ತಿಳಿದಿದ್ದೀಯೆ. ರಾಘವನ ಪ್ರಿಯಪತ್ನಿಯನ್ನು ಬಯಸುವ ನೀನು ಕಣ್ಣನ್ನು ಸೂಜಿಯಿಂದ ತಿವಿದುಕೊಳ್ಳುತ್ತಿದ್ದೀಯೆ! ಕಾಡಿನಲ್ಲಿರುವ

ಸಿಂಹ–ನರಿಗಳಿಗೆ, ಸಮುದ್ರ–ಹಳ್ಳಗಳಿಗೆ, ಅಮೃತ–ಗಂಜಿಗಳಿಗೆ ಎಷ್ಟು ವ್ಯತ್ಯಾಸವಿದೆಯೋ ಶ್ರೀರಾಮನಿಗೂ ನಿನಗೂ ಅಷ್ಟು ವ್ಯತ್ಯಾಸವಿದೆ. ಅಪರಂಜಿ–ಸೀಸಗಳಿಗೆ, ಶ್ರೀಗಂಧ ಕೆಸರುಗಳಿಗೆ, ಆನೆ–ಬೆಕ್ಕುಗಳಿಗೆ ಎಷ್ಟು ಅಂತರವಿದೆಯೋ ಆ ದಶರಥಪುತ್ರನಿಗೂ ನಿನಗೂ ಅಷ್ಟು ಭೇದವಿದೆ. ಎಲಾ ರಾವಣ, ನೀನು ನನ್ನನ್ನು ಕದ್ದೊಯ್ದರೂ ನಾನು ನಿನಗೆ ದಕ್ಕಲಾರೆ, ನೊಣವು ವಜ್ರವನ್ನು ನುಂಗಿದಂತಾದೀತು" ಎಂದು ಅಬ್ಬರಿಸಿದಳು. ಶುದ್ಧಚಿತ್ತಳಾದ ಸೀತೆಯು ಹೀಗೆ ಗಡುಸಾದ ಉತ್ತರವನ್ನು ಕೊಟ್ಟರೂ, ಬಿರುಗಾಳಿಗೆ ಸಿಕ್ಕಿದ ಬಾಳೆಯ ಗಿಡದಂತೆ ಭಯದಿಂದ ತಲ್ಲಣಿಸಿ ಗಡಗಡನೆ ನಡುಗುತ್ತಿದ್ದಳು. ಸೀತೆಯು ದಿಕ್ಕುಗೆಟ್ಟು ನಡುಗುತ್ತಿರುವುದನ್ನು ಕಂಡು, ಮೃತ್ಯುವಿನಂತೆ ಉಗ್ರನಾದ ರಾವಣನು ತನ್ನ ಕುಲಬಲಗಳನ್ನೂ ತನ್ನ ಕ್ರೂರಕರ್ಮಗಳನ್ನೂ ಬಿಡಿಸಿ ಹೇಳಲಾರಂಭಿಸಿದ. ಸೀತೆಯು ಮತ್ತಷ್ಟು ಹೆದರಲೆಂಬುದೇ ಅವನ ಉದ್ದೇಶವಾಗಿತ್ತು.

೨೧. ರಾವಣನು ಸೀತೆಯನ್ನು ಬಲವಂತವಾಗಿ ಎಳೆದೊಯ್ದದ್ದು

ಸೀತೆಯಾಡಿದ ಕಟುನುಡಿಗಳನ್ನು ಕೇಳಿ ರಾವಣನು ಕೋಪಗೊಂಡು ಹುಬ್ಬುಗಂಟಿಕ್ಕಿ, "ಸುಂದರಿ, ನಾನು ಕುಬೇರನ ತಮ್ಮ, ಅವನ ಮಲತಾಯಿಯ ಮಗನಾದ ರಾವಣ, ದಶಕಂಠನೆಂಬ ಪ್ರತಾಪಶಾಲಿ. ದೇವಗಂಧರ್ವಾದಿ ಸಕಲಪ್ರಜೆಗಳೂ ನನ್ನನ್ನು ಕಂಡರೆ ಕಂಗೆಟ್ಟು, ದಿಕ್ಕುದಿಕ್ಕಿಗೆ ಓಡಿಹೋಗುವರು! ಒಂದು ಸಲ ಕಾರಣಾಂತರದಿಂದ ನನ್ನ ಅಣ್ಣನಾದ ಕುಬೇರನೊಡನೆ ಯುದ್ಧವಾಯಿತು, ನಾನು ಕೋಪಗೊಂಡು ಅವನನ್ನು ಸೋಲಿಸಿಬಿಟ್ಟೆ; ಭಯದಿಂದ ತಲ್ಲಣಿಸಿ ತನ್ನ ವಾಸಸ್ಥಾನವನ್ನು ಬಿಟ್ಟು ಕುಬೇರನು ಕೈಲಾಸಪರ್ವತಕ್ಕೆ ಓಡಿಹೋಗಿ ಅಲ್ಲಿ ನೆಲೆಸಿದ್ದಾನೆ! ಅವನ ಹತ್ತಿರ ಬಯಸಿದಷ್ಟು ವೇಗದಿಂದ ಹೋಗುವ ಪುಷ್ಪಕವೆಂಬ ದಿವ್ಯವಿಮಾನವಿತ್ತು. ನನ್ನ ಪರಾಕ್ರಮದಿಂದ, ಭದ್ರೆ, ಅದನ್ನು ಕಿತ್ತುಕೊಂಡು ನಾನೀಗ ಗಗನಮಾರ್ಗದಲ್ಲಿ ಸಂಚರಿಸುತ್ತಿದ್ದೇನೆ. ಸಂಪದ್ಭರಿತವಾದ ನನ್ನ ಲಂಕಾನಗರಿಯು ಸಮುದ್ರದ ಆಚೆಯ ದಡದಲ್ಲಿ, ಘೋರ ರಾಕ್ಷಸರಿಂದ ತುಂಬಿ, ಇಂದ್ರನ ಅಮರಾವತಿಯಂತೆ ವೈಭವಪೂರ್ಣವಾಗಿದೆ. ಆ ನಗರದ ಸುತ್ತಲೂ ಶುಭ್ರವಾದ ಬೆಳ್ಳನೆಯ ಪ್ರಾಕಾರ ಉಂಟು, ದಿವ್ಯಭವನಗಳ ಪಡಸಾಲೆಗಳೆಲ್ಲವೂ ಸುವರ್ಣಮಯವಾಗಿ ರಮಣೀಯವಾಗಿವೆ, ವೈಡೂರ್ಯದ ತೋರಣಗಳು ವಿರಾಜಿಸುತ್ತವೆ. ನನ್ನ ಲಂಕೆಯ ಉದ್ಯಾನವನಗಳಲ್ಲಿರುವ ಮರಗಳು ಎಲ್ಲ ಸಮಯದಲ್ಲಿಯೂ ಫಲಗಳನ್ನು ನೀಡುತ್ತವೆ. ರಾಜಕುಮಾರಿ, ಲಂಕೆಯಲ್ಲಿ ನೀನು ನನ್ನೊಡನಿದ್ದರೆ ಭೋಗನಿರತಳಾಗಿ ಮನುಷ್ಯಸ್ತ್ರೀಯರನ್ನೇ ಮರೆತುಬಿಡುವೆ. ದಶರಥರಾಜನು ತನ್ನ ಪ್ರಿಯಪುತ್ರನಾದ ಭರತನನ್ನು ರಾಜ್ಯದಲ್ಲಿ ಸ್ಥಾಪಿಸಿ ಈತನನ್ನು ಹೊರಗಟ್ಟಿದ್ದಾನೆ. ಇವನು ಹಿರಿಯ ಮಗನಾದರೂ ಕೈಲಾಗದ ಹೇಡಿಯೆಂದು ತಿಳಿದೇ ಕಾಡಿಗೆ ಓಡಿಸಿದ್ದಾನೆ! ರಾಜ್ಯವನ್ನು ಕಳೆದುಕೊಂಡು ಬುದ್ಧಿಗೆಟ್ಟಿರುವ ರಾಮನಿಂದ ಆಗಬೇಕಾದ್ದೇನು? ಹೇ ವಿಶಾಲಾಕ್ಷಿ, ಕೈಲಾಗದೆ ತಪಸ್ಸುಮಾಡಲು ಬಂದಿರುವ ಈ ದರಿದ್ರನನ್ನು ಕಟ್ಟಿಕೊಂಡು ಏನು ಮಾಡುತ್ತೀಯೆ? ಸಮಸ್ತ ರಾಕ್ಷಸರಿಗೂ ಅಧೀಶ್ವರನಾದವನು

ತಾನಾಗಿ ನಿನ್ನ ಬಳಿಗೆ ಬಂದಿದ್ದಾನೆ, ಇವನನ್ನು ವರಿಸು! ಕಾಮಸಂತಪ್ತನಾದ ಈತನನ್ನು ನಿರಾಕರಿಸುವುದು ನಿನಗೆ ತರವಲ್ಲ. ಸುಂದರಿ, ಹೆದರುವೆಯೇಕೆ? ಅಲ್ಪಮನುಷ್ಯನಾದ ಆ ರಾಮನು ಯುದ್ಧದಲ್ಲಿ ನನ್ನ ಒಂದು ಬೆರಳಿಗೆ ಸಮನಲ್ಲ. ನಿನ್ನ ಭಾಗ್ಯದಿಂದ ನಾನು ಬಂದಿದ್ದೇನೆ, ನನ್ನನ್ನು ವರಿಸು" ಎಂದು ಹೇಳಿದ. ಕ್ರುದ್ಧಳಾದ ವೈದೇಹಿಯು, "ಎಲೈ ರಾವಣ, ಇಂದ್ರನ ಭಾರ್ಯೆಯಾದ ಶಚೀದೇವಿಯನ್ನು ಅಪಹರಿಸಿದರೂ ಬದುಕಲು ಸಾಧ್ಯವಾದೀತು, ಆದರೆ ಶ್ರೀರಾಮನ ಭಾರ್ಯೆಯಾದ ನನ್ನನ್ನು ಆಸಹರಿಸಿದರೆ ಮಾತ್ರ ನಿನ್ನ ಜೀವ ಉಳಿಯದು. ರಾಕ್ಷಸ, ನನ್ನನ್ನು ಬಲಾತ್ಕರಿಸಿದರೆ, ನೀನು ಅಮೃತವನ್ನೇ ಕುಡಿದಿದ್ದರೂ ನಿನಗೆ ಉಳಿಗಾಲವಿಲ್ಲ" ಎಂದು ಚೀರಿದಳು.

ದಶಕಂಠನು ಸೀತೆಯ ನುಡಿಯನ್ನು ಕೇಳಿ ಕೋಪಾವೇಶದಿಂದ ಕೈಬಡಿದ, ಮರುಕ್ಷಣದಲ್ಲಿ ಬೃಹದಾಕಾರವನ್ನು ತಾಳಿದ. ಮೈಥಿಲಿಯನ್ನು ಕುರಿತು, "ಉನ್ಮತ್ತಳಾದ ನೀನು ನನ್ನ ವೀರ್ಯಪರಾಕ್ರಮಗಳನ್ನು ಕಿವಿಗೊಟ್ಟು ಆಲಿಸಲಿಲ್ಲವೆಂದು ತೋರುತ್ತದೆ. ಗಗನತಳದಲ್ಲಿ ನಿಂತು ಈ ಭೂಮಿಯನ್ನು ನಾನು ಮೇಲೆತ್ತಬಲ್ಲೆ! ಸಮುದ್ರವನ್ನೇ ಹೀರಬಲ್ಲೆ, ರಣರಂಗದಲ್ಲಿ ಮೃತ್ಯುವನ್ನೇ ಎಸೆಯಬಲ್ಲೆ. ಸೂರ್ಯನನ್ನು ಹಿಡಿದು ನಿಲ್ಲಿಸಿಯೇನು! ಏ ಹುಚ್ಚಿ, ಇಷ್ಟಬಂದ ರೂಪವನ್ನು ಧರಿಸಬಲ್ಲ ನಾನು ನಿನ್ನ ಇಷ್ಟಾರ್ಥವನ್ನು ಸಲ್ಲಿಸತಕ್ಕ ಪತಿಯೆಂದು ಭಾವಿಸು" ಎಂದು ಹೇಳಿದ. ಹಾಗೆ ಹೇಳುವಾಗ ಕ್ರುದ್ಧನಾದ ರಾವಣನ ಕೆಂಗಣ್ಣುಗಳು ಬೆಂಕಿಯಂತಾದವು. ಸೌಮ್ಯವಾದ ಭಿಕ್ಷುರೂಪವನ್ನು ಕಳಚಿದ ರಾವಣನು ಕಾಲಯಮನಂತಿದ್ದ ನಿಜರೂಪವನ್ನು ಧರಿಸಿದ. ಸಿಟ್ಟಿನಿಂದ ಕಿಡಿಕಿಡಿಯಾದ ಆ ತೇಜಸ್ವಿಯು ರಕ್ತನೇತ್ರನೂ ಸುವರ್ಣಾಭರಣಭೂಷಿತನೂ ನೀಲಮೇಘದಂತೆ ಕೃಷ್ಣದೇಹನೂ ಆಗಿ ಗೋಚರಿಸಿದ. ಆ ನಿಶಾಚರನು ಸನ್ಯಾಸಿ ವೇಷನನ್ನು ತೊರೆದು, ಹತ್ತು ತಲೆ, ಇಪ್ಪತ್ತು ಕೈಗಳುಳ್ಳ ಬೃಹದಾಕಾರವನ್ನು ತಳೆದು ನಿಂತನು. ರಕ್ತಾಂಬರಧಾರಿಯಾದ ರಾವಣನು ಮೈಥಿಲಿಯನ್ನು ನೋಡುತ್ತ ನಿಂತರೆ, ಕಪ್ಪುಕೂದಲಿನ ಚೆಲುವೆಯಾದ ಸೀತೆಯು ಹಳದಿ ಬಣ್ಣದ ರೇಷ್ಮೆಯ ಸೀರೆಯನ್ನುಟ್ಟು ಚಿನ್ನದ ಒಡವೆಗಳನ್ನು ತೊಟ್ಟು ಸೂರ್ಯಪ್ರಭೆಯಂತೆ ವಿರಾಜಿಸುತ್ತಿದಳು. ರಾವಣನು ಅವಳನ್ನು ಕುರಿತು, "ಸುಂದರಿ, ಲೋಕತ್ರಯವಿಖ್ಯಾತನಾದ ಗಂಡನು ಬೇಕೆಂದಿದ್ದರೆ ನನ್ನನ್ನು ವರಿಸು. ನಿನಗೆ ನಾನೇ ಪ್ರಶಸ್ತನಾದ ಪತಿಯೆಂದು ತಿಳಿ. ಭದ್ರೆ, ನಿನಗೆ ಸಂತೋಷವಾಗದ ಕಾರ್ಯವನ್ನು ನಾನೆಂದಿಗೂ ಮಾಡುವುದಿಲ್ಲ. ಆಸೆ ಕೈಗೂಡದೆ ರಾಜ್ಯಭ್ರಷ್ಟನಾಗಿ ಅಲ್ಪಜೀವಿಯಾಗಿರುವ ರಾಮನನ್ನು ಯಾವ ಗುಣಗಳಿವೆಯೆಂದು ಪ್ರೀತಿಸುತ್ತಿದ್ದೀಯೆ! ಅಯ್ಯೋ ಮೂಢಾತ್ಮಳೇ, ಒಬ್ಬ ಹೆಂಗಸು ಹೇಳಿಬಿಟ್ಟಳೆಂದು ರಾಜ್ಯವನ್ನೂ ಬಂಧುಬಳಗವನ್ನೂ ಪರಿತ್ಯಜಿಸಿ ಆ ರಾಮನು ಕಾಡಿಗೆ ಬಂದಿದ್ದಾನಲ್ಲ! ವನ್ಯಜಂತುಗಳು ಅಲೆಯುವ ಅರಣ್ಯದಲ್ಲಿ ಆ ಬುದ್ಧಿ ಗೇಡಿಯು ವಾಸವಾಗಿದ್ದಾನಲ್ಲ!" ಎಂದ. ಹೀಗೆ ಹೇಳುತ್ತಲೇ ಮುಂದೆ ಬಂದು, ಆಕಾಶದಲ್ಲಿ ಬುಧನು ರೋಹಿಣಿಯನ್ನು ತುಡುಕುವಂತೆ, ಪದ್ಮನೇತ್ರೆಯಾದ ಸೀತೆಯ ಕೇಶಪಾಶವನ್ನು ಎಡಗೈಯಿಂದ ಹಿಡಿದು, ಬಲಗೈಯಿಂದ ಅವಳ ತೊಡೆಗಳ ಹಿಂಭಾಗವನ್ನು ಹಿಡಿದುಕೊಂಡ. ಬೆಟ್ಟದಂತೆ ಬೆಳೆದಿದ್ದ ಮಹಾಭುಜನಾದ ರಾವಣನು

ತೀಕ್ಷ್ಣವಾದ ಹಲ್ಲುಗಳನ್ನು ಕಿಸಿದು ಮೃತ್ಯುವಿನಂತೆ ಗೋಚರಿಸಿದ. ವನದೇವತೆಗಳು ಅವನನ್ನು ನೋಡಿ ತಲ್ಲಣಿಸಿ ದಿಕ್ಕುದಿಕ್ಕಿಗೆ ಓಡಿಹೋದರು. ಅಷ್ಟರಲ್ಲಿ ಹೇಸರಗತ್ತೆಗಳನ್ನು ಹೂಡಿದ್ದ ರಾವಣನ ಮಾಯಾಮಯವಾದ ಸುವರ್ಣ ರಥವು ಕಿರ್ರೆಂದು ಧ್ವನಿಗೈಯುತ್ತ ಬಂದು ಕಾಣಿಸಿಕೊಂಡಿತು. ರಾವಣನು ವೈದೇಹಿಯನ್ನು ಕೆಟ್ಟಮಾತುಗಳಿಂದ ಗದರಿಸುತ್ತ, ಗರ್ಜಿಸುತ್ತ, ಅವಳ ಹಿಂಭಾಗವನ್ನು ಹಿಡಿದು ಹೊತ್ತು ರಥದೊಳಗೆ ಹೇರಿದ. ಆ ಯಶಸ್ವಿನಿಯು 'ಹೋ' ಎಂದು ಅರಚುತ್ತಿದ್ದಳು; ದುಃಖಾರ್ತಳಾಗಿ "ರಾಮಾ! ರಾಮಾ!" ಎಂದು ಗಟ್ಟಿಯಾಗಿ ಕೂಗುತ್ತಿದ್ದಳು. ಶ್ರೀರಾಮನು ಕಾಡಿನಲ್ಲಿ ದೂರ ಹೋಗಿದ್ದನು. ನಿಷ್ಕಾಮಳಾದ ಸೀತೆಯು ಹೆಣ್ಣು ಸರ್ಪದಂತೆ ಹೊರಳಾಡುತ್ತಿರಲು, ಕಾಮಾರ್ತನಾದ ರಾವಣನು ಅವಳನ್ನು ಹೊತ್ತು ಗಗನಮಾರ್ಗವನ್ನಡರಿದ.

ರಾವಣನು ಸೀತೆಯನ್ನು ಆಕಾಶ ಮಾರ್ಗದಲ್ಲಿ ಅಪಹರಿಸಿಕೊಂಡು ಹೋಗುತ್ತಿರಲು ಅವಳು ಶೋಕವಿಹ್ವಲಳಾಗಿ ಹುಚ್ಚುಹಿಡಿದವಳಂತೆ ಪ್ರಜ್ಞೆ ತಪ್ಪಿದವಳಂತೆ ವಿಧವಿಧವಾಗಿ ಹಲುಬಿ ಕೂಗಿಕೊಂಡಳು: "ಹಾ ಲಕ್ಷ್ಮಣ! ಮಹಾಬಾಹು ಅಣ್ಣನ ಅಭಿಮತದಂತೆ ನಡೆದುಕೊಂಡೆ ನೀನು! ಈ ರಾಕ್ಷಸನು ದುಷ್ಟಬುದ್ಧಿಯಿಂದ ನನ್ನನ್ನು ಎಳೆದೊಯ್ಯುತ್ತಿದ್ದಾನೆ, ನಿನಗೆ ತಿಳಿಯದೆ? ರಾಘವ, ಧರ್ಮರಕ್ಷಣೆಗಾಗಿ ಧನ, ಸುಖ, ಜೀವಿತಗಳನ್ನೇ ಮುಡಿಪಾಗಿ ಒಪ್ಪಿಸಿದವನು ನೀನು. ಇಷ್ಟು ಅಧರ್ಮದಿಂದ ಇವನು ನನ್ನನ್ನು ಎಳೆದೊಯ್ಯುವುದು ನಿನಗೆ ಕಾಣಿಸದೆ? ವೀರಾಗ್ರಣಿ, ನೀನು ದುಷ್ಟರನ್ನು ದಂಡಿಸಿ ತಿದ್ದತಕ್ಕವನಲ್ಲವೇ? ಇಂಥ ಪಾಪಿಯಾದ ರಾವಣನನ್ನು ಹೇಗೆ ತಾನೇ ಶಿಕ್ಷಿಸದೆ ಇದ್ದೀಯ? ಕೆಟ್ಟ ಜನರ ಕೆಟ್ಟ ಕೆಲಸಕ್ಕೆ ತಕ್ಕ ಫಲವು ಕೂಡಲೇ ದೊರೆಯುವುದಿಲ್ಲ! ಫಲ ದೊರೆಯಲು ಕಾಲವೂ ಒದಗಿ ಬರಬೇಕು. ಎಲೈ ರಾಕ್ಷಸ, ನಿನಗೆ ಕೇಡುಗಾಲ ಬಂದು ನಿನ್ನ ಬುದ್ಧಿಗೆ ಬಡಿದದ್ದರಿಂದ ಈ ದುಷ್ಕೃತ್ಯವನ್ನು ಮಾಡಿದ್ದೀಯೆ. ಶ್ರೀರಾಮನಿಂದ ನಿನಗೆ ಪ್ರಾಣಾಂತಕವಾದ ಘೋರ ವಿಪತ್ತು ಬರಲಿ! ಅಯ್ಯೋ! ಈಗ ಕೈಕೇಯಿ ತನ್ನ ಇಷ್ಟಾರ್ಥವು ಸಂದಿತೆಂದು ಬಂಧುಬಳಗದೊಡನೆ ನಲಿದಾಳು! ಧರ್ಮವನ್ನೇ ಗುರಿಯಾಗಿ ಇಟ್ಟುಕೊಂಡು ಕೀರ್ತಿಶಾಲಿಯಾದವನು ಶ್ರೀರಾಮ. ಅವನ ಧರ್ಮಪತ್ನಿಯಾದ ನನ್ನನ್ನು ಇವನು ಎಳೆದೊಯ್ಯುವಂತಾಯಿತಲ್ಲ! ಜನಸ್ಥಾನದಲ್ಲಿರುವ ಹೂಬಿಟ್ಟ ಕರ್ಣಿಕಾರ ವೃಕ್ಷಗಳೇ, ನಿಮ್ಮನ್ನು ಬೇಡಿಕೊಳ್ಳುತ್ತೇನೆ: ರಾವಣನು ಸೀತೆಯನ್ನು ಒಯ್ಯುತ್ತಿದ್ದಾನೆಂದು ಶ್ರೀರಾಮನಿಗೆ ಬೇಗ ಹೇಳಿರಿ! ಹೂಮಾಲೆಗಳಿಂದ ರಂಜಿಸುವ ಸುಂದರ ಶಿಖರಶಾಲಿಯಾದ ಪ್ರಸ್ರವಣಗಿರಿಯನ್ನು ವಂದಿಸುತ್ತೇನೆ. ಗಿರಿರಾಜನೇ, ರಾವಣನು ಸೀತೆಯನ್ನು ಒಯ್ಯುತ್ತಿದ್ದಾನೆಂದು ಶ್ರೀರಾಮನಿಗೆ ಬೇಗ ಹೇಳು! ಹಂಸಕಾರಂಡವಪಕ್ಷಿಗಳಿಂದ ತುಂಬಿದ ಗೋದಾವರೀನದಿಯೇ, ನಿನಗೆ ಕೈಮುಗಿಯುತ್ತೇನೆ. ರಾವಣನು ಸೀತೆಯನ್ನು ಅಸಹರಿಸುತ್ತಿದ್ದಾನೆಂದು ಶ್ರೀರಾಮನಿಗೆ ಬೇಗ ಹೇಳು! ಈ ವನದ ವಿವಿಧ ವೃಕ್ಷಗಳಲ್ಲಿ ನೆಲೆಸಿದ ದೇವತೆಗಳೆಲ್ಲರಿಗೂ ನಮಸ್ಕರಿಸುತ್ತೇನೆ. ರಾವಣನು ಸೀತೆಯನ್ನು ಒಯ್ದನೆಂದು ನೀವು ನನ್ನ ಪತಿಗೆ ಹೇಳಿರಿ. ಇಲ್ಲಿರುವ ಸಮಸ್ತಪ್ರಾಣಿಗಳಿಗೆ, ಮೃಗಪಕ್ಷಿಗಳಿಗೆ ಶರಣಾಗಿದ್ದೇನೆ. ನನ್ನ ಪತಿಯು ತನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ; ನನ್ನನ್ನು ರಾವಣನು ಅಪಹರಿಸಿದನೆಂದು ನನ್ನ


ಪತಿಗೆ ಹೇಳಿರಿ! ಪರಾಧೀನಳಾದ ಸೀತೆಯನ್ನು ಬಲಾತ್ಕಾರದಿಂದ ಅಪಹರಿಸಿದನೆಂದು ಹೇಳಿರಿ! ನಾನು ಲೋಕಾಂತರದಲ್ಲಿದ್ದರೂ ನನ್ನ ಸುದ್ದಿ ತಿಳಿದರೆ ಮಹಾಬಲನಾದ ಆ ವೀರಾಗ್ರಣಿಯು ನನ್ನನ್ನು ಬಿಡಿಸಿಕೊಂಡು ಬರುವನು. ಯಮನು ನನ್ನನ್ನು ಎಳೆದೊಯ್ದರೂ ಶ್ರೀರಾಮನು ತನ್ನ ಪರಾಕ್ರಮದಿಂದ ನನ್ನನ್ನು ಬಿಡಿಸಿ ತರುವನು" ಎಂದು ಹಂಬಲಿಸಿದಳು. ಅತಿದುಃಖದಿಂದ ಕರುಣಾಪೂರ್ಣವಾದ ಮಾತುಗಳನ್ನು ಹೇಳಿ ಹಲುಬಿದಳು. ರಾವಣನ ವಶದಲ್ಲಿದ್ದ ಸೀತೆಗೆ ಅಷ್ಟರಲ್ಲಿ ಮರದ ಮೇಲೆ ಕುಳಿತಿದ್ದ ಒಂದು ಗೃಧ್ರವು ಕಾಣಿಸಿತು. ಆ ಸುಂದರಿಯು ಕಣ್ಣರಳಿಸಿ ಅದನ್ನೇ ದಿಟ್ಟಿಸಿ ನೋಡಿ ದುಃಖದಿಂದ ಬಿಕ್ಕುತ್ತ "ಅಪ್ಪಾ ಜಟಾಯು, ನನ್ನ ಕಡೆಗೆ ನೋಡು! ಅನಾಥೆಯಾದ ನನ್ನನ್ನು ಈ ರಾಕ್ಷಸನು ಒಯ್ಯುತ್ತಿದ್ದಾನೆ; ಈ ಪಾಪಿಯು ನಿಷ್ಕರುಣೆಯಿಂದ ಅಪಹರಿಸುತ್ತಿದ್ದಾನೆ. ಈ ಕ್ರೂರಾತ್ಮನನ್ನು ತಡೆಯಲು ನಿನ್ನಿಂದಾಗಲಾರದು. ಈ ದುಷ್ಟನು ಬಲಾಢ್ಯ; ವಿಜಯಶಾಲಿ; ಆಯುಧಗಳನ್ನು ಹಿಡಿದಿದ್ದಾನೆ. ಜಟಾಯು, ನನ್ನನ್ನು ಕದ್ದೊಯ್ದ ಸುದ್ದಿಯನ್ನು ಶ್ರೀರಾಮನಿಗೆ ತಿಳಿಸು. ಈ ವೃತ್ತಾಂತವೆಲ್ಲವನ್ನೂ ಲಕ್ಷ್ಮಣನಿಗೂ ತಿಳಿಸು" ಎಂದು ಕೂಗಿ ಹೇಳಿದಳು.

೨೨. ರಾವಣನಿಗೆ ಜಟಾಯುವಿನ ಬುದ್ಧಿವಾದ; ರಾವಣನು ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಿದುದು

ನಿದ್ದೆಯ ಜೋಮಿನಲ್ಲಿದ್ದ ಜಟಾಯುವಿಗೆ ಸೀತೆಯ ಆಕ್ರಂದನ ಶಬ್ದ ಕೇಳಿಸಿತು. ತಟಕ್ಕನೆ ಅವನು ಕಣ್ಣೆತ್ತಿ ನೋಡಲು, ರಾವಣನೂ ವೈದೇಹಿಯೂ ಗೋಚರಿಸಿದರು. ಪರ್ವತ ಶಿಖರದಂತಿದ್ದ ಆ ಪಕ್ಷಿಶ್ರೇಷ್ಠನ ಕೊಕ್ಕು ಚೂಪಾಗಿತ್ತು. ಆತನು ಮರದಲ್ಲಿ ಕುಳಿತೇ ರಾವಣನನ್ನುದ್ದೇಶಿಸಿ ಹಿತವಚನವನ್ನು ಹೇಳಿದ. "ರಾವಣ, ನೀನು ಸನಾತನಧರ್ಮದಲ್ಲಿ ನಿಷ್ಠೆಯಿಂದ ಇದ್ದವನು; ಸತ್ಯವನ್ನು ನಂಬಿದವನು. ಹೀಗಿರಲು, ತಮ್ಮ, ಈಗ ನೀನು ಈ ಕೆಟ್ಟ ಕೆಲಸವನ್ನು ಮಾಡುವುದು ಸರಿಯಲ್ಲ. ದಶರಥಪುತ್ರನಾದ ಶ್ರೀರಾಮನು ಸಕಲಜನರಿಗೂ ಅಧಿಪತಿ; ದೇವೇಂದ್ರನಿಗೂ ವರುಣನಿಗೂ ಸಮಾನನಾದವನು. ಪ್ರಜೆಗಳ ಹಿತದಲ್ಲಿ ನಿರತನಾಗಿರುವ ಆ ಲೋಕನಾಥನ ಧರ್ಮಪತ್ನಿ ಈಕೆ; ಸೀತೆಯೆಂದು ಈಕೆಯ ಹೆಸರು. ಧರ್ಮನಿಷ್ಠನಾದ ರಾಜನು ಪರಸ್ತ್ರೀಯರನ್ನು ಮುಟ್ಟಬಹುದೆ? ಅದರಲ್ಲಿಯೂ ವಿಶೇಷವಾಗಿ ಇನ್ನೊಬ್ಬ ರಾಜನ ಪತ್ನಿಯನ್ನು ಬಲಾಢ್ಯನಾದ ನೀನು ರಕ್ಷಿಸಬೇಕು. ಪರಸ್ತ್ರೀಯರನ್ನು ಕೆಣಕುವ ಈ ಕೆಟ್ಟಬುದ್ಧಿಯನ್ನು ತೊರೆದುಬಿಡು. ರಾವಣ, ಪುಲಸ್ತ್ಯನ ಶ್ರೇಷ್ಠಕುಲದಲ್ಲಿ ಜನಿಸಿದವನು ನೀನು. ಎಲೈ ರಾಕ್ಷಸೇಂದ್ರ, ಇಂಥ ಪಾಪಬುದ್ಧಿಯೂ ಚಾಪಲ್ಯವೂ ನಿನಗೆ ಹೇಗೆ ಅಂಟಿತು? ಧರ್ಮಾತ್ಮನೂ ಬಲಾಢ್ಯನೂ ಆದ ಶ್ರೀರಾಮನು ನಿನ್ನ ರಾಷ್ಟ್ರದಲ್ಲಾಗಲಿ ನಿನ್ನ ನಗರದಲ್ಲಾಗಲಿ ಯಾವ ಅಪರಾಧವನ್ನೂ ಮಾಡಿಲ್ಲ. ಹೀಗಿರುವಾಗ ನೀನು ಅವನಿಗೆ ಅಪರಾಧವೆಸಗಲು ಕಾರಣವಾದರೂ ಏನು? ಜನಸ್ಥಾನದಲ್ಲಿದ್ದ ಖರನು ಶೂರ್ಪನಖಿಗೋಸ್ಕರ ಉದ್ದಂಡನಾಗಿ ಎಲ್ಲೆಮೀರಿ ಹೋದಾಗ ಶ್ರೀರಾಮನು ಅವನನ್ನು ಸಂಹರಿಸಿದ್ದುಂಟು. ಈ ವಿಷಯದಲ್ಲಿ ಶ್ರೀರಾಮನ ತಪ್ಪೇನಿದೆಯೆಂಬುದನ್ನು ನೀನೇ ದಿಟವಾಗಿ

ಹೇಳು. ಆ ಲೋಕನಾಥನ ಭಾರ್ಯೆಯನ್ನು ಅಪಹರಿಸಿಕೊಂಡು ಹೋಗುತ್ತಿರುವೆಯಲ್ಲ! ರಾವಣ, ವೈದೇಹಿಯನ್ನು ಕೂಡಲೇ ಬಿಟ್ಟುಬಿಡು! ಶ್ರೀರಾಮನ ಘೋರನೇತ್ರವು ಬೆಂಕಿಯಾಗಿ ನಿನ್ನನ್ನು ಸುಟ್ಟು ಬೂದಿಮಾಡೀತು! ಇಂದ್ರನ ವಜ್ರಾಯುಧವು ವೃತ್ರನನ್ನು ಕೊಂದಂತೆ ನಿನ್ನನ್ನು ಕೊಂದು ಎಸೆದೀತು. ರಾವಣ, ನಾನು ಹುಟ್ಟಿ ಅರುವತ್ತು ಸಾವಿರ ವರ್ಷಗಳಾದವು. ಪಿತೃಪಿತಾಮಹ ಪರಂಪರೆಯಿಂದ ಬಂದ ಪಕ್ಷಿರಾಜ್ಯವನ್ನು ಕ್ರಮವರಿತು ಪಾಲಿಸಿದ್ದೇನೆ. ನಾನು ವೃದ್ಧ; ನೀನು ಯುವಕ. ಧನುರ್ಬಾಣಗಳನ್ನು ಧರಿಸಿದ್ದೀಯೆ. ಕವಚವನ್ನು ತೊಟ್ಟದ್ದೀಯೆ, ರಥವಿದೆ, ಆದರೂ ನೀನು ವೈದೇಹಿಯೊಡನೆ ಕ್ಷೇಮದಿಂದ ಮುಂದಕ್ಕೆ ಅಡಿಯಿಡಲಾರೆ. ನನ್ನ ಕಣ್ಣೆದುರಿನಲ್ಲಿ ವೈದೇಹಿಯನ್ನು ಬಲಾತ್ಕಾರದಿಂದ ಒಯ್ಯಲು ನಿನಗೆ ಸಾಧ್ಯವಿಲ್ಲ. ನೀನು ಶೂರನಾದರೆ ಶ್ರೀರಾಮನೊಡನೆ ಯುದ್ಧ ಮಾಡು; ಅವನು ಬರುವವರೆಗೆ ಕ್ಷಣ ಕಾಲ ನಿಲ್ಲು! ಹಿಂದೆ ಖರನು ಸತ್ತಂತೆ ನೀನೂ ಸತ್ತು ನೆಲದ ಮೇಲೆ ಉರುಳುತ್ತೀಯೆ. ಶ್ರೀರಾಮನು ದೈತ್ಯ ದಾನವರನ್ನು ಎಷ್ಟೋ ಸಲ ಯುದ್ಧದಲ್ಲಿ ಕೊಂದಿದ್ದಾನೆ. ನಾರುಬಟ್ಟೆಯುಟ್ಟ ವ್ರತನೇ ನಿನ್ನನ್ನು ಶೀಘ್ರದಲ್ಲಿ ಕೊಂದು ಹಾಕುವನು. ಆ ರಾಜಕುಮಾರರು ಬಹುದೂರ ಹೋಗಿಬಿಟ್ಟದ್ದಾರೆ. ನಾನು ಏನುಮಾಡಲಿ? ಎಲಾ ನೀಚ, ಬಹು ಬೇಗನೆ ನೀನು ನಾಶವಾಗುತ್ತೀಯಿ. ಆ ರಾಜಪುತ್ರರಿಗೆ ನೀನು ನಿಶ್ಚಯವಾಗಿಯೂ ಹೆದರಿದ್ದೀಯೆ. ನಾನು ಬದುಕಿರುವವರೆಗೆ, ಶುಭಾಂಗಿಯಾದ ಸೀತಾದೇವಿಯನ್ನು ನೀನು ಒಯ್ಯಲಾರೆ! ಈ ಪದ್ಮನೇತ್ರೆಯು ಶ್ರೀರಾಮನ ಪ್ರೀತಿಪಾತ್ರಳಾದ ರಾಣಿ. ಮಹಾತ್ಮನಾದ ಶ್ರೀರಾಮನಿಗೂ ದಶರಥನಿಗೂ ಪ್ರಿಯವಾದ ಕಾರ್ಯವನ್ನು ನಾನು ಮಾಡಲೇಬೇಕು. ಪ್ರಾಣವನ್ನಾದರೂ ಒಪ್ಪಿಸಿ ಅವರ ಕಾರ್ಯವನ್ನು ನಡೆಸಬೇಕು. ಎಲೈ ರಾವಣ, ನಿಲ್ಲು ನಿಲ್ಲು! ಸ್ವಲ್ಪ ಇತ್ತ ನೋಡು. ನನಗೆ ಶಕ್ತಿಯಿದ್ದಷ್ಟು ಯುದ್ಧದ ಆತಿಥ್ಯವನ್ನು ಅರ್ಪಿಸುತ್ತೇನೆ! ತೊಟ್ಟಿನಿಂದ ಹಣ್ಣನ್ನು ಉದುರಿಸುವಂತೆ, ರಥದಿಂದ ನಿನ್ನನ್ನು ಉರುಳಿಸುತ್ತೇನೆ" ಎಂದ.

ಈ ಪ್ರಕಾರ ನ್ಯಾಯವಾಗಿ ನುಡಿದ ಜಟಾಯುವಿನ ಮಾತನ್ನು ಕೇಳಿ ರಾವಣನು ಕ್ರುದ್ಧನಾದ. ಅವನ ಇಪ್ಪತ್ತು ಕಣ್ಣುಗಳೂ ಬೆಂಕಿಯನ್ನುಗುಳಿದವು. ಸುವರ್ಣಕುಂಡಲಮಂಡಿತನಾದ ರಾಕ್ಷಸೇಂದ್ರನ ಸಹನೆ ತಪ್ಪಿತು; ಸಿಟ್ಟಿನಿಂದ ಆ ಪಕ್ಷೀಂದ್ರನ ಮೇಲೆ ಆಕ್ರಮಣ ಮಾಡಿದ. ಗಗನತಳದಲ್ಲಿ ಬಿರುಗಾಳಿಯು ಬೀಸಿ ಬಂದ ಎರಡು ಮಹಾ ಮೇಘಗಳಿಂತಿದ್ದ ರಾವಣ–ಜಟಾಯುಗಳಿಗೆ ಆ ವನಮಧ್ಯದಲ್ಲಿ ಭೀಕರವಾದ ಕಾಳಗವು ಆರಂಭವಾಯಿತು. ಅವರೀರ್ವರ ಕಾಳಗವು ರೆಕ್ಕೆಗಳಿಂದೊಡಗೂಡಿ ಹೂಗಳಿಂದ ರಂಜಿಸುವ ಎರಡು ಮಹಾಪರ್ವತಗಳಿಗೆ ನಡೆಯುವ ಕಾಳಗವೋ ಎಂಬಂತೆ ಅಚ್ಚರಿಯನ್ನುಂಟುಮಾಡಿತು. ಬಲಾಢ್ಯನಾದ ರಾವಣನು ಹರಿತವಾದ ಕೋಲುಬಾಣ ಕೊಕ್ಕೆಯ ಬಾಣಗಳನ್ನು ಜಟಾಯುವಿನ ಮೇಲೆ ಸುರಿದ. ಆ ಗೃಧ್ರರಾಜನು ತನ್ನ ಕಾಲುಗಳಲ್ಲಿದ್ದ ಹರಿತವಾದ ಉಗುರುಗಳಿಂದ ರಾವಣನ ದೇಹವನ್ನು ಪರಚಿ ಬಹಳ ಗಾಯಗಳನ್ನು ಮಾಡಿದ. ಆಗ ದಶಕಂಠನು ಕ್ರೋಧದಿಂದ ಜಟಾಯುವು ಶತ್ರುವೆಂದೂ ಅವನನ್ನು ಕೊಲ್ಲಬೇಕೆಂದೂ ನಿರ್ಧರಿಸಿ, ಕಿವಿಯವರೆಗೆ ಬಿಲ್ಲಿನ ಹೆದೆಯನ್ನು ಸೆಳೆದು ಮೃತ್ಯುದಂಡದಂತಿದ್ದ ಹತ್ತು ಬಾಣಗಳನ್ನು ಜಟಾಯುವಿನ ಮೇಲೆ ಬಿಟ್ಟು ಅವನ ದೇಹವನ್ನು



ರಾವಣ–ಜಟಾಯು ಕಾಳಗ

ಕೊರೆದ. ಜಟಾಯುವು ರಾವಣನ ರಥದಲ್ಲಿ ಕಣ್ಣೀರು ಸುರಿಸುತ್ತಿದ್ದ ಜಾನಕಿಯನ್ನು ನೋಡಿ, ಆ ಕೂರಂಬುಗಳ ಯಾತನೆಯನ್ನು ಸಹಿಸಿಕೊಂಡು ಅವುಗಳನ್ನು ಲೆಕ್ಕಿಸದೆ, ಮತ್ತೆ ರಾವಣನನ್ನು ಆಕ್ರಮಿಸಿದ. ಆ ತೇಜಸ್ವಿಯು ಮುತ್ತಿನ ಮಣಿಗಳಿಂದ ಅಲಂಕೃತವಾಗಿದ್ದ

ರಾವಣನ ಧನುಸ್ಸನ್ನೂ ಹೂಡಿದ್ದ ಬಾಣವನ್ನೂ ಕಾಲುಗಳಿಂದ ಒದೆದು ಮುರಿದೆಸೆದ. ರಾವಣನು ರೋಷಾವಿಷ್ಟನಾಗಿ ಮತ್ತೊಂದು ಧನುಸ್ಸನ್ನು ಹಿಡಿದು ನೂರುಗಟ್ಟಲೆ, ಸಾವಿರಗಟ್ಟಲೆ ಶರಗಳನ್ನು ಹೂಡಿ ಜಟಾಯುವಿನ ಮೇಲೆ ಬಾಣಗಳ ಮಳೆಗರೆದ. ಸುತ್ತಲೂ ರಾವಣನ ಬಾಣಗಳು ಮುಚ್ಚಿಹೋಗಿರಲು, ಮಧ್ಯದಲ್ಲಿದ್ದ ಜಟಾಯುವು ಗೂಡಿನಲ್ಲಿರುವ ಒಂದು ಹಕ್ಕಿಯಂತೆ ಕಾಣಿಸಿದ. ಆಗ ಆ ಮಹಾತೇಜಸ್ವಿಯು ತನ್ನ ಸುತ್ತಲೂ ಹರಡಿದ ಬಾಣಜಾಲವನ್ನು ರೆಕ್ಕೆಗಳಿಂದ ಕೊಡವಿ ಬಯಲೆಬ್ಬಿಸಿ, ರಾವಣನ ಮಹಾಧನುಸ್ಸನ್ನು ತನ್ನ ಉಗುರುಗಳಿಂದ ಮತ್ತೆ ಮುರಿದ. ಮಹಾಶೂರನಾದ ಆ ಪಕ್ಷಿರಾಜನು ಬೆಂಕಿಯಂತೆ ಕಳಕಳಿಸುತ್ತಿದ್ದ ರಾವಣನ ಕವಚವನ್ನು ತನ್ನ ರೆಕ್ಕೆಗಳಿಂದ ಅಪ್ಪಳಿಸಿ ಕಳಚಿ ಹಾರಿಸಿದ. ರಥಕ್ಕೆ ಹೂಡಿದ್ದ ಹೇಸರಗತ್ತೆಗಳು ಚಿನ್ನದ ಎದೆಕಟ್ಟುಗಳಿಂದ ಅಲಂಕೃತವಾಗಿದ್ದವು. ಪಿಶಾಚಮುಖಿಗಳೂ ವೇಗಶಾಲಿಗಳೂ ಆಗಿದ್ದ ಆ ಕತ್ತೆಗಳನ್ನು ಬಲಾಢ್ಯನಾದ ಜಟಾಯುವು ಕೊಂದುಹಾಕಿದ. ಮೂಕಿಯಿಂದ ಅಲಂಕೃತವಾಗಿ ಇಷ್ಟವಿದ್ದಷ್ಟು ವೇಗವಾಗಿ ಹೋಗುವ, ಬೆಂಕಿಯಂತೆ ಜ್ವಲಿಸುವ, ರತ್ನಸುವರ್ಣಗಳಿಂದ ಅಲಂಕೃತವಾದ ರಾವಣನ ಮಹಾರಥವನ್ನು ಜಟಾಯುವು ಭಗ್ನಗೊಳಿಸಿದ; ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಶ್ವೇತಚ್ಛತ್ರ ಚಾಮರಗಳನ್ನು ತನ್ನ ರೆಕ್ಕೆಗಳ ವೇಗದಿಂದ ಹೊಡೆದುರುಳಿಸಿದ. ಅವುಗಳನ್ನು ಹಿಡಿದಿದ್ದ ರಾಕ್ಷಸರೂ ಛತ್ರಚಾಮರಗಳೊಡನೆ ಉರುಳಿ ಬಿದ್ದರು. ಮಹಾಬಲಶಾಲಿಯಾದ ಆ ಪಕ್ಷಿರಾಜನು ರಾವಣನ ಸಾರಥಿಯ ಶಿರಸ್ಸನ್ನು ತನ್ನ ಕೊಕ್ಕಿನಿಂದ ಕುಕ್ಕಿ ಕತ್ತರಿಸಿದ.

ಈ ಪ್ರಕಾರದಲ್ಲಿ ರಾವಣನ ಬಿಲ್ಲು ಮುರಿಯಿತು, ರಥವು ಭಗ್ನವಾಯಿತು, ಕತ್ತೆಗಳು ಸತ್ತವು, ಸಾರಥಿಯು ಹತನಾದ. ಕೂಡಲೆ ರಾವಣನು ಸೀತೆಯನ್ನು ಸೊಂಟದಲ್ಲಿ ಅವುಚಿ ಹಿಡಿದು ಭೂಮಿಗೆ ಧುಮುಕಿದ. ವಾಹನವು ಭಗ್ನವಾದ್ದರಿಂದ ರಾವಣನು ನೆಲಕ್ಕೆ ಇಳಿಯುವಂತಾದುದನ್ನು ಕಂಡು ವನದೇವತೆಗಳೇ ಮೊದಲಾದವರು 'ಭಲಾ, ಭಲಾ!' ಎಂದು ಜಟಾಯುವನ್ನು ಮನಸ್ಸಿನಲ್ಲಿಯೇ ಹೊಗಳಿದರು. ಆದರೆ ಪಕ್ಷಿರಾಜನು ಮುಪ್ಪಿನಿಂದ ಬಳಲಿಹೋಗಿದ್ದನು. ಅವನು ಆಯಾಸಪಡುತ್ತಿದ್ದುದನ್ನು ಕಂಡು ರಾವಣನು ಹರ್ಷದಿಂದ ಮೈಥಿಲಿಯನ್ನು ಎತ್ತಿಕೊಂಡು ಪುನಃ ಆಕಾಶಕ್ಕೆ ನೆಗೆದು ಜಾನಕಿಯನ್ನು ಕಂಕುಳಲ್ಲಿ ಅವುಚಿಕೊಂಡು ಹರ್ಷದಿಂದ ಧಾವಿಸುತ್ತಿದ್ದ ರಾವಣನನ್ನು ಕಂಡು, ಕೂಡಲೇ ಗೃಧ್ರರಾಜನು ಆಕಾಶಕ್ಕೆ ಹಾರಿ ಅಡ್ಡಗಟ್ಟಿದ. ಮಹಾತೇಜಸ್ವಿಯಾದ ಜಟಾಯುವು ರಾವಣನನ್ನು ತಡೆದು ನಿಲ್ಲಿಸಿ "ಎಲಾ ರಾವಣ, ಶ್ರೀರಾಮನ ಭಾರ್ಯೆಯನ್ನು ಅಪಹರಿಸುವೆಯಾ? ಬುದ್ಧಿಹೀನ, ಅವನ ಬಾಣಗಳು ಸಿಡಿಲಿನಂತೆ ಬಂದು ಹೊಡೆದಾವು. ರಾಕ್ಷಸರೆಲ್ಲರೂ ಸತ್ತುಹೋಗಲೆಂದು ಪ್ರಯತ್ನಮಾಡುತ್ತಿದ್ದೀಯೆ. ನಿನ್ನ ಮಿತ್ರರು, ಬಂಧುಗಳು, ಅಮಾತ್ಯರು, ಸೇನೆ, ಪರಿವಾರ – ಇವರೆಲ್ಲರನ್ನೂ ಜೊತೆಗೆ ಸೇರಿಸಿಕೊಂಡು ಬಾಯಾರಿಕೆಯಿಂದ ಬಳಲಿದವನು ನೀರನ್ನು ಕುಡಿಯುವಂತೆ ಧಾರಾಳವಾಗಿ ವಿಷವನ್ನು ಕುಡಿಯುತ್ತಿದ್ದೀಯೆ, ಅವರಿಗೂ ಕುಡಿಸುತ್ತಿದ್ದೀಯೆ! ಅವಿವೇಕಿಗಳು ತಮ್ಮ ದುಷ್ಕೃತ್ಯದ ಪರಿಣಾಮವನ್ನರಿಯದೆ ಹಾಳಾಗಿ ಹೋಗುತ್ತಾರೆ. ಯಮಪಾಶವು ನಿನ್ನನ್ನು ಬಿಗಿದುಕಟ್ಟಿದೆ. ಎಲ್ಲಿ ಹೋದರೆ ತಪ್ಪಿಸಿಕೊಂಡೀಯೆ? ಎಲಾ ರಾವಣ, ಅವರ ಆಶ್ರಮಕ್ಕೆ ನುಗ್ಗಿ ನೀನು

ಮಾಡಿದ ಈ ದುರಾಕ್ರಮಣವನ್ನು ವೀರಾಗ್ರಣಿಗಳಾದ ಶ್ರೀರಾಮಲಕ್ಷ್ಮಣರು ಎಂದೆಂದಿಗೂ ಕ್ಷಮಿಸುವುದಿಲ್ಲ. ಹೇಡಿಯಾದ ನೀನು ಲೋಕನಿಂದ್ಯವಾದ ಕೆಟ್ಟ ಕೆಲಸ ಮಾಡುತ್ತಿದ್ದೀಯೆ. ಇದು ಕಳ್ಳರು ಮಾಡುವ ಕೆಲಸ, ವೀರರು ಆಚರಿಸತಕ್ಕದ್ದಲ್ಲ. ರಾವಣ, ನೀನು ವೀರನಾದರೆ ಒಂದು ಗಳಿಗೆ ನಿಂತು ರಾಮನೊಡನೆ ಯುದ್ಧಮಾಡು! ನಿನ್ನ ಸೋದರನಾದ ಖರನು ಸತ್ತಂತೆ ನೀನೂ ಸತ್ತು ಉರುಳುವೆ. ಇದು ನಿನ್ನ ವಿನಾಶಕ್ಕಾಗಿಯೇ; ಯಾವ ಕರ್ಮಕ್ಕೆ ಪಾಪವು ಗಂಟುಬೀಳುವುದೋ ಆ ದುಷ್ಕರ್ಮವನ್ನು ಲೋಕೇಶ್ವರನಾದ ಭಗವಾನ್ ಬ್ರಹ್ಮದೇವನೂ ಮಾಡಲಾರ" ಎಂದು ಹೇಳಿದ. ಹೀಗೆ ಹೇಳಿ ಆ ಪರಾಕ್ರಮಿಯು ರಾವಣನ ಬೆನ್ನಟ್ಟಿ ಹೋಗಿ ತನ್ನ ಹರಿತವಾದ ಉಗುರುಗಳಿಂದ ದಶಕಂಠನ ಬೆನ್ನನ್ನು ಪರಚಿ ಪರಚಿ ಗಾಯಗೊಳಿಸಿದ. ಹಿಡಿತ ತಪ್ಪಿದ ಪುಂಡಾನೆಯನ್ನು ಮಾವುತನು ಅಂಕುಶದಿಂದ ಇರಿಯುವಂತೆ ಜಟಾಯುವು ರಾವಣನ ಬೆನ್ನನ್ನು ಕೊಕ್ಕಿನಿಂದ ಕುಕ್ಕಿ ಉಗುರುಗಳಿಂದ ತರಿದ. ತಲೆಗೂದಲುಗಳನ್ನು ಕಿತ್ತ! ಆ ಗೃಧ್ರರಾಜನಿಗೆ ನಖ ಮುಖ ರೆಕ್ಕೆಗಳೇ ಆಯುಧಗಳಾದವು!

ಹೀಗೆ ಜಟಾಯುವು ಪುನಃ ಪುನಃ ಹಿಂಸೆಯನ್ನು ಕೊಡುತ್ತಿರಲು, ರಾವಣನು ಕೋಪೋದ್ದೀಪಿತನಾದ, ಅವನ ತುಟಿಗಳು ಅಲುಗಿದವು. ಆತನು ಸೀತೆಯನ್ನು ಎಡಕಂಕುಳಲ್ಲಿ ಒತ್ತಿಹಿಡಿದು ಬಲಗೈಯಿಂದ ಜಟಾಯುವನ್ನು ಗುದ್ದಿದ. ಆಗ ಪಕ್ಷಿರಾಜನು ರಾವಣನ ಮೇಲೆ ಎರಗಿ ಕೊಕ್ಕಿನಿಂದ ಅವನ ಹತ್ತು ಎಡದೋಳುಗಳನ್ನು ಕಚ್ಚಿ ಕತ್ತರಿಸಿದ. ಆದರೆ ಹೊಸದಾಗಿ ಹತ್ತು ತೋಳುಗಳು ಥಟ್ಟನೆ ಹುಟ್ಟಿಬಂದವು! ವಿಷಜ್ವಾಲೆಯನ್ನುಗುಳುವ ಸರ್ಪಗಳು ಹುತ್ತದಿಂದ ಹೊರಬರುವಂತೆ ಜಿಗಿದು ಬಂದವು. ದಶಕಂಠನು ಸಿಟ್ಟಿನಿಂದ ಸೀತೆಯನ್ನು ನೆಲಕ್ಕಿಳಿಸಿ, ಜಟಾಯುವನ್ನು ಮುಷ್ಟಿಗಳಿಂದ ಗುದ್ದಿ ಗುದ್ದಿ ಕಾಲುಗಳಿಂದ ಒದ್ದ. ಅಸಾಧಾರಣ ಪರಾಕ್ರಮಿಗಳಾದ ರಾಕ್ಷಸೇಂದ್ರನಿಗೂ ಪಕ್ಷೀಂದ್ರನಿಗೂ ಸ್ವಲ್ಪ ಹೊತ್ತು ಯುದ್ಧವು ನಡೆಯಿತು. ಜಟಾಯುವು ಶ್ರೀರಾಮನಿಗೋಸ್ಕರ ಹೆಣಗಾಡುತ್ತಿದ್ದ. ರಾವಣನು ಕತ್ತಿಯನ್ನು ಹಿರಿದು ಜಟಾಯುವಿನ ಎರಡು ರೆಕ್ಕೆಗಳನ್ನೂ ಕತ್ತರಿಸಿ ರೆಕ್ಕೆಗಳ ಬುಡವನ್ನು ಕೆತ್ತಿ ಎರಡು ಕಾಲುಗಳನ್ನೂ ಕಡಿದ. ಹೀಗೆ ಘೋರಕರ್ಮಿಯಾದ ರಾಕ್ಷಸನು ರೆಕ್ಕೆಗಳನ್ನು ಕತ್ತರಿಸಲು, ಜಟಾಯುವು ದೊಪ್ಪನೆ ನೆಲದ ಮೇಲೆ ಬಿದ್ದ; ಪ್ರಾಣಹೋಗುವ ಸ್ಥಿತಿಯಲ್ಲಿ ಗಾಯಗೊಂಡು ಉರುಳಿದ. ಜಟಾಯುವು ರಕ್ತಸಿಕ್ತನಾಗಿ ಬಿದ್ದುದನ್ನು ಕಂಡು ವೈದೇಹಿಯು ತನ್ನ ಆಪ್ತಬಂಧುವೇ ಗಾಯಗೊಂಡನೆಂದು ದುಃಖಾರ್ತಳಾಗಿ ಅವನ ಬಳಿಗೆ ಓಡಿಬಂದಳು. ಆ ಗೃಧ್ರರಾಜನು ನೀಲಮೇಘದಂತೆ ನೀಲವಿಶಾಲದೇಹನಾಗಿ ನೆಲದಮೇಲೆ ಬಿದ್ದಿದ್ದನು. ಬಿಳುಪಾದ ಎದೆಯ ಭಾಗ ಕಾಣಿಸುತ್ತಿತ್ತು. ಆ ವೀರನು ಉರಿದು ಶಾಂತವಾದ ಕಾಳ್ಗಿಚ್ಚಿನಂತೆ ರಕ್ತಸಿಕ್ತನಾಗಿ ಮಲಗಿದುದನ್ನು ರಾವಣನು ನೋಡುತ್ತಿದ್ದನು. ರಾವಣನ ತೀವ್ರವೇಗದ ಹೊಡೆತಕ್ಕೆ ಸಿಕ್ಕಿ ಆ ಪಕ್ಷಿರಾಜನು ಭೂಮಿಯಲ್ಲಿ ಬಿದ್ದಿದ್ದ. ಇಂದುಮುಖಿಯಾದ ಜಾನಕಿಯು ಆತನನ್ನು ಆಲಿಂಗಿಸಿಕೊಂಡು ಅಳತೊಡಗಿದಳು.

೨೩. ಕದ್ದೊಯ್ಯುವಾಗ ಸೀತೆಯು ಋಷ್ಯಮೂಕದಲ್ಲಿ ಆಭರಣಗಳ ಗಂಟನ್ನೆಸೆಯುವುದು; ರಾವಣನ ಲಂಕಾಪ್ರವೇಶ

ಶ್ರೀರಾಮನ ಪರ್ಣಶಾಲೆಗೆ ಸ್ವಲ್ಪದೂರದಲ್ಲಿ ಈ ಹೊಡೆದಾಟವು ನಡೆದಿತ್ತು. ಜಟಾಯುವು ನೆಲದ ಮೇಲೆ ಬಿದ್ದು ಮರಣಾವಸ್ಥೆಯಲ್ಲಿ ಹೊರಳಾಡುವುದನ್ನು ರಾವಣನು ನೋಡಿದ. ಅವನಿಂದ ಹತನಾಗಿ ಬಿದ್ದ ಜಟಾಯುವನ್ನು ಕಂಡು ಚಂದ್ರಮುಖಿಯಾದ ಸೀತೆಯು ಮತ್ತಷ್ಟು ಶೋಕಾರ್ತಳಾದಳು. ಅವನನ್ನು ಆಲಿಂಗಿಸಿಕೊಂಡು ಗೋಳಾಡಿದಳು: "ಹಾ! ಜನರಿಗೆ ಸುಖದುಃಖಗಳು ಬಂದಾಗ ಅವುಗಳನ್ನು ಸೂಚಿಸುವ ನಿಮಿತ್ತಗಳು ಕಂಡುಬರುತ್ತವೆ. ಶ್ರೀರಾಮ, ನಿನಗೆ ಬಂದಿರುವ ಮಹಾಕಷ್ಟದ ಚಿಹ್ನೆಗಳು ಕಾಣುಸುತ್ತಿಲ್ಲವೇ? ಈ ಪಕ್ಷಿರಾಜನು ಕೃಪೆಮಾಡಿ ನನ್ನನ್ನು ಕಾಪಾಡಲು ಮುಂದೆ ಬಂದ. ನನ್ನ ದುರ್ಭಾಗ್ಯದಿಂದ ಗಾಯಗೊಂಡು ಭೂಮಿಯಲ್ಲಿ ಮಲಗಿದ. ಶ್ರೀರಾಮ, ಲಕ್ಷ್ಮಣ, ನನ್ನನ್ನು ಕಾಪಾಡಿ!" ಎಂದು ಕೂಗಿದಳು. ಹತ್ತಿರದಲ್ಲಿ ಕೇಳಿಸಿಕೊಳ್ಳುವವರು ಇದ್ದಾರೋ ಎಂಬಂತೆ ಕರೆದಳು! ಅವಳು ಮುಡಿದಿದ್ದ ಹೂಗಳು ತೊಟ್ಟದ್ದ ಒಡವೆಗಳೂ ಅಸ್ತವ್ಯಸ್ತವಾಗಿದ್ದವು. ದಿಕ್ಕಿಲ್ಲದ ಅನಾಥೆಯಂತೆ ಅಳುತ್ತಿದ್ದಳು. ರಾವಣನು ಮತ್ತೆ ಅವಳ ಕಡೆಗೆ ನುಗ್ಗಿದ. ಸೀತೆಯು ಅಲ್ಲಿದ್ದ ಮರಗಳನ್ನು ಬಳ್ಳಿಯಂತೆ ಬಳಸಿ ಅಪ್ಪಿಕೊಂಡು 'ರಾಮಾ! ರಾಮಾ!' ಎಂದು ಕೂಗಿಕೊಳ್ಳುತ್ತಿದ್ದಳು. ರಾವಣನು "ಬಿಡು! ಬಿಟ್ಟುಬಿಡು" ಎನ್ನುತ್ತ ಅವಳನ್ನು ಹಿಂಬಾಲಿಸಿ ಹೋಗುತ್ತಿದ್ದನು. ಕೊನೆಗೆ ಯಮಸಮಾನನಾದ ರಾವಣನು ಸೀತೆಯ ತಲೆಗೂದಲನ್ನು ಹಿಡಿದೆಳೆದ. ಅಲ್ಲಿಗೆ ರಾವಣನ ಆಯುಸ್ಸು ಮುಗಿಯಿತು! ಜಗತ್ತೆಲ್ಲವೂ ಏರುಪೇರಾಯಿತು! ಕಾಳ್ಗತ್ತಲೆ ಮುಸುಕಿದಂತಾಯಿತು! ಆ ಸ್ಥಳದಲ್ಲಿ ಗಾಳಿ ಬೀಸಲಿಲ್ಲ, ಸೂರ್ಯನು ಮಂಕಾದ! ಬ್ರಹ್ಮದೇವನು ದೀನಳಾದ ಸೀತೆಯ ಮುಡಿಗೆ ರಾವಣನು ಕೈಮಾಡಿದನೆಂಬುದನ್ನು ದಿವ್ಯದೃಷ್ಟಿಯಿಂದ ತಿಳಿದು 'ನಮ್ಮ ಕಾರ್ಯ ಸಿದ್ಧಿಸಿತು' ಎಂದು ಉದ್ಗರಿಸಿದ! ಸೀತೆಯ ಮೇಲೆ ರಾವಣನು ಕೈಮಾಡಿದುದನ್ನು ಜ್ಞಾನದೃಷ್ಟಿಯಿಂದ ತಿಳಿದು, ದಂಡಕಾರಣ್ಯವಾಸಿಗಳಾದ ಮಹರ್ಷಿಗಳು ದುಃಖಿತರಾದರು; ದೈವಗತಿಯಿಂದ ರಾವಣನ ಮರಣವು ಸನ್ನಿಹಿತವಾಯಿತೆಂದು ಸಂತುಷ್ಟರೂ ಆದರು!

"ರಾಮ! ರಾಮ! ಲಕ್ಷ್ಮಣ!" ಎಂದು ಅಳುತ್ತಿದ್ದ ಜಾನಕಿಯನ್ನು ಎತ್ತಿಕೊಂಡು ರಾವಣನು ಆಕಾಶವನ್ನಡರಿದ. ಬಂಗಾರದ ಮೈಬಣ್ಣದವಳಾಗಿ ಹಳದಿಯ ರೇಷ್ಮೆಸೀರೆಯನ್ನುಟ್ಟದ್ದ ಸೀತೆಯು ರಾವಣನ ಪಾರ್ಶ್ವದಲ್ಲಿ, ಸುದಾಮ ಪರ್ವತದ ಮೇಲೆ ಮಿಂಚುವ ಮಿಂಚಿನಂತೆ ಹೊಳೆಯುತ್ತಿದಳು. ಅವಳ ಹಳದಿಯ ಸೀರೆಯು ಹಾರಾಡುತ್ತಿರಲು ಬೆಂಕಿಬಿದ್ದ ಬೆಟ್ಟದಂತೆ ರಾವಣನು ಕಾಣುತ್ತಿದ್ದನು. ಸರ್ವಮಂಗಳೆಯಾದ ಸೀತೆಯು ಧರಿಸಿದ್ದ ಕಂಪು ಬೀರುವ ಕೆಂಪನೆಯ ತಾವರೆಯ ದಳಗಳು ರಾವಣನ ಮೈಮೇಲೆ ತೂರಾಡಿದವು. ಚಿನ್ನದಂತೆ ಹೊಳೆಯುವ ದುಕೂಲವು ಗಗನದಲ್ಲಿ ಹಾರಾಡುತ್ತ, ಬಿಸಿಲಿನಿಂದಾಗಿ ಕೆಂಪುಮೋಡದಂತೆ ಬೆಳಗುತ್ತಿತ್ತು. ಶ್ರೀರಾಮನಿಲ್ಲದುದರಿಂದ ಸೀತೆಯ ನಿರ್ಮಲವದನವು ಕಳೆಗೆಟ್ಟಿತ್ತು; ದಂಟನ್ನು ಕಿತ್ತೆಸೆದ ಕಮಲದಂತೆ ಕಾಣುತ್ತಿತ್ತು. ಸುಂದರವಾದ ಹಣೆಯಿದ್ದು ತಾವರೆಯ

ಕರ್ಣಿಕೆಯ ಬಣ್ಣವನ್ನು ತಳೆದಿದ್ದ ಅವಳ ನುಣ್ಣನೆಯ ಮುಖವು – ಹರಡಿದ್ದ ಕೇಶರಾಶಿಯ ನಡುವೆ – ಕಪ್ಪು ಮೋಡದ ಮಧ್ಯದಲ್ಲುದಿಸಿದ ಚಂದ್ರನಂತೆ ತೋರುತ್ತಿತ್ತು. ಭಯದಿಂದ ನಡುಗುತ್ತಿದ್ದ ಜಾನಕಿಯ ಮಂಗಳವದನವು ಶ್ರೀರಾಮನಿಲ್ಲದುದರಿಂದ ಹಗಲಿನ ಚಂದ್ರನಂತಾಗಿ ಮೊದಲಿನಂತೆ ಶೋಭಿಸಲಿಲ್ಲ. ಕಪ್ಪುಮಿಶ್ರ ದೇಹದ ರಾಕ್ಷಸರಾಜನು ಚಿನ್ನದ ಮೈಬಣ್ಣದ ಮೈಥಿಲಿಯನ್ನು ಕಂಕುಳಲ್ಲಿ ಹಿಡಿದಿರಲು ಕರಿಯ ಆನೆಗೆ ಚಿನ್ನದ ಪಟ್ಟಿಯನ್ನು ಹಾಕಿದಂತಿತ್ತು. ಸ್ವಚ್ಛ ವರ್ಣಳಾಗಿ ಚಿನ್ನದ ಒಡವೆಗಳನ್ನು ಧರಿಸಿದ್ದ ಜಾನಕಿಯು ರಾವಣನ ಮಗ್ಗುಲಲ್ಲಿ ಮೋಡದ ಬಳಿಯಲ್ಲಿ ಮಿನುಗುವ ಮಿಂಚಿನಂತೆ ಕಾಣಿಸಿದಳು. ವೈದೇಹಿ ತೊಟ್ಟಿದ್ದ ಒಡವೆಗಳು ಘಲ್ ಘಲ್ ಎಂದು ಧ್ವನಿಗೈಯುತ್ತಿರಲು, ಮಿಂಚಿನೊಡನೆ ಗುಡುಗುವ ನೀಲಮೇಘದಂತೆ ರಾವಣನು ಗೋಚರಿಸಿದ. ಆ ರಾಕ್ಷಸನು ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ, ಅವಳು ತಲೆಯಲ್ಲಿ ಮುಡಿದಿದ್ದ ಹೂವು ಮಳೆಯಂತೆ ಭೂತಳದ ಮೇಲೆ ತೂರಿತು. ಸುತ್ತಲೂ ತೂರಿದ ಹೂಗಳ ರಾಶಿಯು ದಶಗ್ರೀವನ ಗಮನವೇಗದಿಂದ ಸೆಳೆಯಲ್ಪಟ್ಟು, ಅವನ ಹಿಂದೆ ಹಾರಿಹೋಗುತ್ತಿತ್ತು. ಹಾಗೆ ಹಾರಿಹೋಗುವ ಹೂವಿನ ಧಾರೆಯು ಉನ್ನತವಾದ ಮೇರುಪರ್ವತವನ್ನು ಹಿಂಬಾಲಿಸಿ ಬರುವ ವಿಮಲ ತಾರಾಪುಂಜದಂತೆ ಕಂಗೊಳಿಸಿತು. ವೈದೇಹಿಯ ಪಾದದಿಂದ ರತ್ನಭೂಷಿತವಾದ ಕಾಲಂದಿಗೆಯು ಕುಲುಕುಲು ಎಂದು ಇಂಪಾಗಿ ದನಿಗೈಯುತ್ತ ಮಿಂಚಿನ ಗೊಂಚಲಿನಂತೆ ಬಿದ್ದಿತು. ಮರದ ಚಿಗುರೆಲೆಯಂತೆ ಅರುಣವರ್ಣಳಾಗಿದ್ದ ವೈದೇಹಿಯಿಂದ ರಾವಣನಿಗೆ ಒಂದು ಶೋಭೆಯುಂಬಾಯಿತು; ಕಪ್ಪಗಿದ್ದ ಆ ರಾವಣನು ನಡುವಿಗೆ ಚಿನ್ನದ ಸರಪಳಿ ಕಟ್ಟಿದ ಆನೆಯಂತೆ ಗೋಚರಿಸಿದ.

ತನ್ನ ದೇಹಕಾಂತಿಯಿಂದ ದೊಡ್ಡ ಉಲ್ಕೆಯಂತೆ ಬೆಳುಗುತ್ತಿದ್ದ ಸೀತೆಯನ್ನು ರಾವಣನು ಆಕಾಶಮಾರ್ಗದಲ್ಲಿ ಒಯ್ಯುತ್ತಿದ್ದನು. ಅಗ್ನಿಯಂತೆ ಹೊಳೆಯುತ್ತಿದ್ದ ಸೀತೆಯ ಆಭರಣಗಳು ಝಣ ಝಣ ಎಂದು ಶಬ್ದಮಾಡುತ್ತ ಪುಣ್ಯವು ಮುಗಿದು ಭೂಮಿಗೆ ಬೀಳುವ ತಾರೆಗಳಂತೆ ಕಂಡವು; ಚಂದ್ರನಂತೆ ಚಂದವಾದ ಮುತ್ತಿನ ಸರವು ಜಾನಕಿಯ ಸ್ತನಮಧ್ಯದಿಂದ ಜಾರಿ ಬೀಳುವಾಗ ಗಗನದಿಂದಿಳಿಯುವ ಗಂಗೆಯೋ ಎಂಬಂತೆ ಕಂಗೊಳಿಸಿತು. ಆ ಸಮಯದಲ್ಲಿ ಭಯಂಕರ ಬಿರುಗಾಳಿ ಬೀಸಿತು. ಮರಗಳಲ್ಲಿ ಹಕ್ಕಿಗಳ ಹಿಂಡು ಕೂಗುತ್ತಿರಲು, ತುದಿಯಲ್ಲಾಡುತ್ತಿದ್ದ ಆ ಮರಗಳು 'ಸೀತೆ, ಹೆದರಬೇಡ!' ಎಂದು ಅಭಯವಚನವನ್ನು ನೀಡುವಂತೆ ಗೋಚರಿಸಿದವು. ತಾವರೆಯ ಕೊಳಗಳಲ್ಲಿ ತಾವರೆಗಳು ಬಾಡಿದವು; ಮೀನುಗಳೇ ಮೊದಲಾದ ಜಲಚರಗಳು ಹೆದರಿದವು: ಗೆಳತಿಯಾದ ಮೈಥಿಲಿಯು ಉಸಿರುಕಟ್ಟಿ ಎಚ್ಚರದಪ್ಪಿದಂತಿದ್ದುದನ್ನು ಕಂಡು ಆ ಕೊಳಗಳು ಅನುಕಂಪೆಯಿಂದ ಶೋಕಿಸುವಂತೆ ತೋರಿದವು. ಸಿಂಹಹುಲಿ ಮುಂತಾದ ಮೃಗಗಳೂ ಪಕ್ಷಿಗಳೂ ಸುತ್ತಲೂ ನೆಗೆಯುತ್ತ ಹಾರುತ್ತ ಬಂದು, ರಾವಣನ ಮೇಲಿನ ರೋಷದಿಂದ ಸೀತೆಯ ನೆರಳನ್ನು ಹಿಡಿದು ಹಿಂಬಾಲಿಸಿ ಓಡಿದವು. ರಾವಣನು ಸೀತೆಯನ್ನು ಅಪಹರಿಸುವನೆಂದು ಪರ್ವತಗಳು ಜಲಪಾತದ ರೂಪದಿಂದ ಕಣ್ಣೀರು ಹರಿಸುತ್ತ ಶಿಖರಗಳೆಂಬ ಕೈಗಳನ್ನೆತ್ತಿ ಗೋಳಾಡುತ್ತವೆಯೋ ಎಂಬಂತೆ ತೋರಿತು. ವೈದೇಹಿಯ

ಅಪಹರಣವನ್ನು ಕಂಡು ಸೂರ್ಯನು ದೈನ್ಯದಿಂದ ನಿಸ್ತೇಜನಾಗಿ ಕೇವಲ ಬಿಳಿಯ ಮಂಡಲವಾಗಿ ಗೋಚರಿಸಿದ. 'ಅಯ್ಯೋ, ಶ್ರೀರಾಮನ ಪತ್ನಿಯಾದ ಜಾನಕಿಯನ್ನು ರಾವಣನು ಅಪಹರಿಸುತ್ತಾನೆಂದರೆ ಲೋಕದಲ್ಲಿ ಧರ್ಮವೆಂಬುದು ಇಲ್ಲ; ಸತ್ಯವು ಎಲ್ಲಿದೆ? ಋಜುತ್ವ ದಯೆಗಳಿಗೆ ಅವಕಾಶವಿಲ್ಲ' ಎಂದು ಸಕಲರೂ ಗೋಳಾಡಿದರು. ಮೃಗಗಳೂ ಅವುಗಳ ಮರಿಗಳೂ ಹೆದರಿ ದೈನ್ಯದಿಂದ ದುಃಖಿಸಿದವು. ಅವು ಮೇಲಕ್ಕೆ ನೋಡಿ ನೋಡಿ ಕಣ್ಣೀರು ಸುರಿಸಿದವು. ಕಷ್ಟಕ್ಕೆ ಸಿಕ್ಕಿ ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದ ಸೀತೆಯನ್ನು ಕಂಡು ವನದೇವತೆಗಳು ಗಡಗಡನೆ ನಡುಗಿದರು. 'ಲಕ್ಷ್ಮಣಾ! ರಾಮಾ!' ಎಂದು ಮಧುರಕಂಠದಿಂದ ಆಕ್ರಂದಿಸುತ್ತ, ವೈದೇಹಿಯು ಭೂಮಿಯ ಕಡೆಗೆ ಮತ್ತೆ ಮತ್ತೆ ನೋಡುತ್ತಿದ್ದಳು. ಅವಳ ಕೇಶರಾಶಿಯು ಬಿಚ್ಚಿ ಹರಡಿತ್ತು, ತಿಲಕವು ಅಳಿಸಿತ್ತು. ದೃಢಚಿತ್ತಳಾದ ಆ ಪತಿವ್ರತೆಯನ್ನು ದಶಗ್ರೀವನು ಬಲಾತ್ಕಾರದಿಂದ ಒಯ್ಯುತ್ತಿದ್ದನು. ಶ್ರೀರಾಮಲಕ್ಷ್ಮಣರನ್ನು ಕಾಣದೆ ಸೀತೆಯ ಮುಖವು ಬಣ್ಣಗೆಟ್ಟಿತು; ಅವಳು ಅತ್ಯಂತ ಭಯದಿಂದ ಕಂಗೆಟ್ಟಳು.

ತನ್ನನ್ನು ರಾವಣನು ಆಕಾಶಮಾರ್ಗದಲ್ಲಿ ಎತ್ತಿಕೊಂಡು ಹೋಗುವಾಗ ಜಾನಕಿಯು ಶೋಕಾರ್ತಳಾಗಿ ಭಯದಿಂದ ನಡುಗುತ್ತಿದ್ದಳು. ರೋಷದಿಂದಲೂ ರೋದನದಿಂದಲೂ ಅವಳ ಕಣ್ಣುಗಳು ಕೆಂಪಾಗಿದ್ದವು. ಮನಸ್ಸು ಕರಗುವಂತೆ ಗೊಳೋ ಎಂದು ಅಳುತ್ತ ಅವಳು, "ಎಲಾ. ನೀಚ ರಾವಣ, ನಾನು ಒಂಟಿಯಾಗಿರುವೆನೆಂದರಿತು ನನ್ನನ್ನು ಕದ್ದುಕೊಂಡು ಓಡಿಹೋಗುತ್ತಿರುವೆಯಲ್ಲ, ಈ ಹೇಡಿ ಕೆಲಸದಿಂದ ನಿನಗೆ ನಾಚಿಕೆಯಾಗುವುದಿಲ್ಲವೆ? ದುರಾತ್ಮ, ಹೇಡಿಯಾದ ನೀನು ನನ್ನನ್ನು ಅಪಹರಿಸಲು ಹೊಂಚುಹಾಕಿದ್ದೆ; ಅದಕ್ಕಾಗಿ ನೀನೇ ಮಾಯಾಮೃಗವನ್ನು ಕಳಿಸಿ ಮೋಸದಿಂದ ನನ್ನ ಪತಿಯನ್ನು ದೂರದವರೆಗೆ ಒಯ್ದಿರಬೇಕು. ನನ್ನನ್ನು ಉಳಿಸಲು ಬಂದ ವೃದ್ಧ ಗೃಧ್ರರಾಜನನ್ನೂ ಹೊಡೆದುರುಳಿಸಿದ್ದೀಯೆ. ಈತನು ನನ್ನ ಮಾವನ ಮಿತ್ರ. ನಿನ್ನ ಪರಾಕ್ರಮ ಅಸದೃಶವಾಗಿದೆಯಲ್ಲವೇ! ಥೂ ಅಧಮ! ರಣರಂಗದಲ್ಲಿ ನಿನ್ನ ಹೆಸರನ್ನು ಘೋಷಿಸಿ ಹೊಡೆದಾಡಿ ನನ್ನನ್ನು ನೀನು ಗೆದ್ದು ತರಲಿಲ್ಲ. ಇಂಥ ನೀಚಕೃತ್ಯವನ್ನು ಮಾಡಿದರೂ ನಿನಗೆ ನಾಚಿಕೆಯಿಲ್ಲವೆ? ಪರಸ್ತ್ರೀಯನ್ನು ಅದರಲ್ಲಿಯೂ ರಕ್ಷಕರಿಲ್ಲದೆ ಏಕಾಕಿನಿಯಾದವಳನ್ನು ಕದಿಯಬಹುದೆ? ಶೂರನೆಂದು ತಿಳಿದುಕೊಂಡಿರುವ ನೀನು ಎಷ್ಟು ಕ್ರೂರವಾದ, ಎಂಥ ಧರ್ಮವಿರುದ್ಧವಾದ ಕಾರ್ಯವನ್ನು ಮಾಡಿದೆ! ನಿನ್ನ ಶೌರ್ಯಕ್ಕೆ ಧಿಕ್ಕಾರ! ನಿನ್ನ ಕುಲಕ್ಕೆ ಕೆಟ್ಟ ಹೆಸರು ತಂದ ನಿನ್ನ ನಡೆತೆಗೆ ಬೆಂಕಿಹಾಕಲಿ! ಹೀಗೆ ವೇಗದಿಂದ ಓಡಿ ಹೋದರೆ ಏನು ಮಾಡಲು ಸಾಧ್ಯ? ಒಂದು ಅರೆಗಳಿಗೆಯಾದರೂ ತಡೆದರೆ, ಆ ರಾಜಪುತ್ರರ ಕಣ್ಣಿಗೆ ಬಿದ್ದರೆ. ಸಾಕು, ಸೇನಾಸಮೇತನಾಗಿದ್ದರೂ ನೀನು ಅರೆಗಳಿಗೆ ಬದುಕಲಾರೆ. ಅವರೀರ್ವರ ಬಾಣದ ಹೊಡೆತವನ್ನು ತಡೆದುಕೊಳ್ಳಲು ನಿನಗೆ ಎಂದಿಗೂ ಸಾಧ್ಯವಿಲ್ಲ. ಕಾಳ್ಗಿಚ್ಚಿನ ಜ್ವಾಲೆಯ ಸ್ಪರ್ಶವನ್ನು ಹಕ್ಕಿಯು ತಡೆದುಕೊಂಡೀತೇ? ರಾವಣ, ನನ್ನನ್ನು ಬೇಗನೆ ಬಿಟ್ಟುಬಿಡು. ಇದೇ ನಿನಗೆ ಒಳ್ಳೆಯದೆಂದು ತಿಳಿ. ಬಿಡದಿದ್ದರೆ ನನ್ನ ಪತಿಯು ಕುಪಿತನಾಗಿ ತನ್ನ ತಮ್ಮನೊಡನೆ ಬಂದು ನಿನ್ನನ್ನು ತರಿದು ಹಾಕುವನು. ದೇವತೆಯಂತಿರುವ ನನ್ನ ಪತಿಯನ್ನು ಕಾಣದೆ

ಶತ್ರುವಿನ ಬಳಿಯಲ್ಲಿ ಎಂದಿಗೂ ನಾನು ಪ್ರಾಣಸಹಿತ ಉಳಿಯುವುದಿಲ್ಲ ನಿನಗೆ ಮುಂದಿನ ಶ್ರೇಯಸ್ಸೂ ಬೇಡವಾಗಿದೆ; ಈಗಿನ ಹಿತವೂ ಬೇಡವಾಗಿದೆ. ಮೃತ್ಯುಪಾಶವು ಬಂದು ನಿನ್ನ ಕುತ್ತಿಗೆಗೆ ಸುತ್ತಿರುವುದು ನನಗೆ ಕಾಣುತ್ತಿದೆ! ಇಂಥ ವಿಪತ್ತಿನ ಕಾಲ ನಿನಗೆ ಬಂದಿದ್ದರೂ ನಿರ್ಭಯನಾಗಿರುವೆಯಲ್ಲ! ಮಹಾತ್ಮನಾದ ಶ್ರೀರಾಮನನ್ನು ವಂಚಿಸಿ ನೀನು ಬದುಕಲಾರೆ. ವಿಷವನ್ನು ಕುಡಿದವನು ಬದುಕುವನೇ? ಕ್ರೂರಾತ್ಮ ರಾವಣ, ದುರ್ನಿವಾರವಾದ ಯಮಪಾಶವು ನಿನ್ನನ್ನು ಬಿಗಿದಿದೆ. ಮಹಾತ್ಮನಾದ ನನ್ನ ಪತಿಯೊಡನೆ ವೈರವನ್ನು ಬೆಳೆಸಿದ ಮೇಲೆ, ಎಲ್ಲಿಗೆ ಹೋದರೆ ತಾನೇ ನಿನಗೆ ಕ್ಷೇಮವಾದೀತು? ಆತನು ತನ್ನ ತಮ್ಮನ ಸಹಾಯವನ್ನೂ ಬಯಸದೆ ಒಬ್ಬನೇ ಒಂದು ನಿಮಿಷದಲ್ಲಿ ಹದಿನಾಲ್ಕು ಸಾವಿರ ಮಂದಿ ರಾಕ್ಷಸರನ್ನು ಧ್ವಂಸ ಮಾಡಿದ್ದಾನೆ. ವೀರಾಗ್ರಣಿಯಾದ ರಾಘವನು ಸರ್ವಾಸ್ತ್ರಕುಶಲ; ಅತ್ಯಂತ ಬಲಶಾಲಿ. ಅವನ ಪ್ರಿಯಪತ್ನಿಯನ್ನು ಅಪಹರಿಸಿದ ನಿನ್ನನ್ನು ಕೂರಂಬುಗಳಿಂದ ಕೊಲ್ಲದೆ ಬಿಡುವನೇ?" ಈ ರೀತಿಯಲ್ಲಿ ವೈದೇಹಿಯು ಎಷ್ಟೋ ಪರುಷವಚನಗಳನ್ನಾಡಿದಳು. ಭಯಶೋಕಗಳಲ್ಲಿ ಮುಳುಗಿ ಎದೆ ಕರಗುವಂತೆ ಅತ್ತಳು. ಆ ವನಿತೆಯು ಶೋಕಾರ್ತಳಾಗಿ ಬಹುಬಗೆಯಿಂದ ಹಲುಬುತ್ತ, ಎದೆ ಮಿಡಿಯುವಂತೆ ಅಳುತ್ತ, ಮನಕರಗುವಂತೆ ಮಿಸುಕುತ್ತ ವಿವಶಳಾದಳು.

ರಾವಣನು ವೈದೇಹಿಯನ್ನು ಒಯ್ಯುತ್ತಿರುವಾಗ, ಅವಳಿಗೆ ತನ್ನನ್ನು ಉಳಿಸಬಲ್ಲ ಯಾವ ರಕ್ಷಕನೂ ಗೋಚರಿಸಲಿಲ್ಲ. ಕೆಳಗೆ ಋಷ್ಯಮೂಕಗಿರಿಯ ಶಿಖರದಲ್ಲಿ ಐವರು ವಾನರಶ್ರೇಷ್ಠರು ಕುಳಿತಿದ್ದುದು ಅವಳಿಗೆ ಕಾಣಿಸಿತು. ಆಗ ಸೀತೆಯು ಅವರನ್ನು ಕಣ್ಣರಳಿಸಿ ನೋಡುತ್ತ, ಚಿನ್ನದಂತೆ ಮಿನುಗುತ್ತಿದ್ದ ತನ್ನ ಉತ್ತರೀಯವನ್ನೂ ಉತ್ತಮವಾದ ಆಭರಣಗಳನ್ನೂ ಬಟ್ಟೆಯಲ್ಲಿ ಸುತ್ತಿ ಆ ವಾನರರ ಮಧ್ಯದಲ್ಲಿ ಎಸೆದಳು. ಒಂದು ವೇಳೆ ದೈವಗತಿಯಿಂದ ಅವರು ಶ್ರೀರಾಮನಿಗೆ ತನ್ನ ವೃತ್ತಾಂತವನ್ನು ಹೇಳಬಹುದೆಂಬುದು ಮೈಥಿಲಿಯ ಉದ್ದೇಶವಾಗಿತ್ತು. ಚಿತ್ತಕ್ಷೋಭದಿಂದ ತ್ವರೆಪಡುತ್ತಿದ್ದ ರಾವಣನಿಗೆ ಅದು ಗೊತ್ತಾಗಲಿಲ್ಲ. ಮಂಗಳನೇತ್ರರಾದ ಆ ವಾನರೋತ್ತಮರು, 'ರಾಮ! ರಾಮ!' ಎಂದು ಅರಚುತ್ತಿದ್ದ ವೈದೇಹಿಯನ್ನು ಎವೆಯಿಕ್ಕದೆ ಕಣ್ಣಿಟ್ಟು ನೋಡಿದರು. ರಾವಣನು ಪಂಪಾಸರೋವರವನ್ನು ದಾಟ ಲಂಕಾಭಿಮುಖನಾಗಿ ಹೋಗುತ್ತಿದ್ದ; ವೈದೇಹಿಯು ತನ್ನ ವಶಳಾದಳೆಂದು ಅವನು ಹರ್ಷದಿಂದ ಉಬ್ಬಿದ್ದ. ತನ್ನ ಮೃತ್ಯುವನ್ನು ಒಯ್ಯುವಂತೆ, ಅಳುತ್ತಿದ್ದ ಸೀತೆಯನ್ನು ದನುಜೇಂದ್ರನು ತನ್ನೊಡನೆ ಒಯ್ದ. ಘೋರವಿಷಪೂರ್ಣವಾದ ಹರಿತವಾದ ಹಲ್ಲುಗಳಿರುವ ಸರ್ಪಿಣಿಯನ್ನು ತೊಡೆಯ ಮೇಲೆ ಇರಿಸಿಕೊಳ್ಳುವಂತೆ ಸೀತೆಯನ್ನು ಅವಚಿ ಹಿಡಿದು, ರಾವಣನು ವನಗಳು, ಹೊಳೆಗಳು, ಬೆಟ್ಟಗಳು ಮತ್ತು ಕೊಳಗಳನ್ನು ದಾಟುತ್ತ ಆಕಾಶಮಾರ್ಗದಲ್ಲಿ ಹೋದ. ಬಿಲ್ಲಿನಿಂದ ಚಿಮ್ಮಿಹೋದ ಬಾಣವೋ ಎಂಬಂತೆ ಮಹಾವೇಗದಲ್ಲಿ ಅವನು ಹೋಗುತ್ತಿದ್ದ. ಮುಂದೆ ತಿಮಿಗಳಿಗೂ ಮೊಸಳೆಗಳಿಗೂ ಆವಾಸಸ್ಥಾನವಾದ ಸಮುದ್ರವು ಕಾಣಿಸಿತು. ವಿವಿಧ ನದಿಗಳು ಬಂದು ಸೇರುವ ವಿಶಾಲವಾದ ಆ ಸಮುದ್ರವನ್ನು ರಾವಣನು ದಾಟಿಹೋದ.

ಹೀಗೆ ರಾವಣನು ವೈದೇಹಿಯನ್ನು ಅಪಹರಿಸಿಕೊಂಡು ಹೋಗುವಾಗ,

ಸಮುದ್ರರಾಜನಿಗೆ ಭಯವಾಯಿತು. ಅಲೆಗಳು ಅಡಗಿದವು, ಮೀನುಗಳೂ ಮಹಾಸರ್ಪಗಳೂ ಸಂಚರಿಸದೆ ಅವಿತುಕೊಂಡವು, ಅಂತರಿಕ್ಷದಲ್ಲಿದ್ದ ಸಿದ್ಧರೂ ಚಾರಣರೂ 'ಇಲ್ಲಿಗೆ ದಶಕಂಠನ ಅವತಾರ ಮುಗಿಯಿತು!' ಎಂದು ಉದ್ಗರಿಸಿದರು. ಹೊರಳಾಡುತ್ತಿದ್ದ ಸೀತೆಯನ್ನು ರಾವಣನು ಕಂಕುಳಲ್ಲಿ ಹಿಡಿದು, ಸಾಕ್ಷಾತ್ ಮೃತ್ಯುದೇವತೆಯನ್ನು ಮನೆಗೆ ತರುವಂತೆ ಲಂಕಾನಗರವನ್ನು ಪ್ರವೇಶಿಸಿದ. ವಿಶಾಲವಾದ ಬೀದಿಗಳಿಂದ ರಮಣೀಯವಾದ ಲಂಕೆಯನ್ನು ಪ್ರವೇಶಿಸಿ, ಜನನಿಬಿಡವಾದ ಅನೇಕ ಕಕ್ಷಗಳಿರುವ ತನ್ನ ಅಂತಃಪುರವನ್ನು ಹೊಕ್ಕು ಅಲ್ಲಿ ಒಂದು ಕಡೆಯಲ್ಲಿ ಸೀತೆಯನ್ನಿರಿಸಿದ. ಅವಳು ಶೋಕದಲ್ಲಿ ಮುಳುಗಿ ದಿಕ್ಕುಗಾಣದೆ ಎಚ್ಚರದಪ್ಪುತ್ತಿದ್ದಳು. ರಾಕ್ಷಸಭವನದಲ್ಲಿ ಆ ಸುಂದರಿಯು ಮಯನಿರ್ಮಿತವಾದ ರಾಕ್ಷಸ ಮಾಯೆಯೋ ಎಂಬಂತೆ ಕಂಗೊಳಿಸಿದಳು. ಆಮೇಲೆ ರಾವಣನು ಘೋರಾಕೃತಿಯ ಪಿಶಾಚಿಗಳಂತಿದ್ದ ಕೆಲವು ರಾಕ್ಷಸಿಯರನ್ನು ಕರೆದು ಹೀಗೆ ಆಜ್ಞಾಪಿಸಿದ: "ಎಲೈ ರಾಕ್ಷಸಿಯರೆ, ಈ ಸೀತೆಗೆ ನೀವು ಕಾವಲಾಗಿ ರಕ್ಷಿಸುತ್ತಿರಬೇಕು. ನನ್ನ ಅನುಮತಿಯಿಲ್ಲದೆ ಇನ್ನೊಬ್ಬ ಪುರುಷನಾಗಲಿ ಸ್ತ್ರೀಯಾಗಲಿ ಇವಳನ್ನು ನೋಡಕೂಡದು. ಸೀತೆಯು ಮುತ್ತು ರತ್ನ, ಒಡವೆ, ವಸ್ತ್ರ – ಯಾವುದನ್ನು ಎಷ್ಟು ಕೇಳಿದರೂ ತಂದು ಕೊಡಿರಿ. ಅದಕ್ಕೆ ನನ್ನ ಒಪ್ಪಿಗೆಯುಂಟು. ತಿಳಿದೋ ತಿಳಿಯದೆಯೋ ಯಾವಳೂ ಸೀತೆಗೆ ಅಪ್ರಿಯವಾದ ಒಂದು ಮಾತನ್ನೂ ಆಡತಕ್ಕದ್ದಲ್ಲ. ಹಾಗೆ ಯಾವಳಾದರೂ ಮಾತನಾಡಿದರೆ, ಅವಳು ತನ್ನ ಪ್ರಾಣದ ಆಸೆಯನ್ನು ತೊರೆದಿರಬೇಕು!" ಎಂದು ಆಜ್ಞಾಪಿಸಿದ. ರಾಕ್ಷಸೇಂದ್ರನು ಈ ರೀತಿಯಲ್ಲಿ ಆಜ್ಞೆಯನ್ನಿತ್ತು ಅಂತಃಪುರದಿಂದ ಹೊರಟನು.

ಮುಂದಿನ ಕೃತ್ಯವೇನೆಂದು ಅವನು ಚಿಂತಿಸಿ, ಪರಾಕ್ರಮಿಗಳೂ ಮಾಂಸಾಹಾರಿಗಳೂ ಆದ ಎಂಟು ಮಂದಿ ರಾಕ್ಷಸರನ್ನು ಕಂಡನು. ತನಗೆ ವರಬಲವಿದೆಯೆಂದು ಉನ್ಮತ್ತನಾದ ರಾವಣನು ಆ ರಾಕ್ಷಸರ ಬಲಪರಾಕ್ರಮಗಳನ್ನು ಹೊಗಳಿ ಹೀಗೆಂದ: "ಎಲೈ ರಾಕ್ಷಸರೆ, ನೀವು ವಿವಿಧಾಯುಧಗಳನ್ನು ಧರಿಸಿ ಕೂಡಲೆ ಜನಸ್ಥಾನಕ್ಕೆ ಹೋಗತಕ್ಕದ್ದು. ಜನಸ್ಥಾನವು ಈಗ ಹತಸ್ಥಾನವಾಗಿದೆ. ಹಿಂದೆ ಖರನಿದ್ದ ಸ್ಥಳವದು; ಅಲ್ಲಿದ್ದ ರಾಕ್ಷಸರು ಹತರಾಗಿದ್ದಾರೆ. ಆ ನಿರ್ಜನಪ್ರದೇಶದಲ್ಲಿ ನೀವು ವಾಸವಾಗಿರತಕ್ಕದ್ದು. ಅಂಜಿಕೆಯನ್ನು ದೂರವಿಟ್ಟು ನಿಮ್ಮ ಪೌರುಷವನ್ನು ನೆಚ್ಚಿಕೊಂಡಿರಬೇಕು. ನಾನು ಜನಸ್ಥಾನದಲ್ಲಿರಿಸಿದ್ದ ಮಹಾಸೇನೆಯೂ ಖರದೂಷಣರೂ ಯುದ್ಧದಲ್ಲಿ ಹತರಾಗಿದ್ದಾರೆ. ರಾಮನೆಂಬವನು ಅಸ್ತ್ರಗಳಿಂದ ಅವರನ್ನು ಕೊಂದಿದ್ದಾನೆ. ಆ ಕೃತ್ಯದಿಂದ ನನ್ನ ಸಹನೆ ತಪ್ಪಿದೆ. ನನ್ನ ಸ್ಥಿರವಾದ ತಾಳ್ಮೆಯನ್ನು ಮೀರಿ ರೋಷ ಉಕ್ಕುತ್ತಿದೆ. ರಾಮನಿಗೂ ನನಗೂ ಉಲ್ಬಣವಾದ ವೈರವು ಬೆಳೆಯಿತು. ವೈರಕ್ಕೆ ತಕ್ಕಂತೆ ಆ ಶತ್ರುವಿನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಉದ್ದೇಶಿಸಿದ್ದೆ. ಆ ವೈರಿಯನ್ನು ಕಾಳಗದಲ್ಲಿ ಕೊಂದಲ್ಲದೆ ನನಗೆ ನಿದ್ರೆ ಬರದು. ದರಿದ್ರನಿಗೆ ಐಶ್ವರ್ಯವು ಲಭಿಸಿದಾಗ ಸಂತೋಷ; ಹಾಗೆಯೇ ಖರದೂಷಣರನ್ನು ಕೊಂದಿರುವ ರಾಮನನ್ನು ವಧಿಸಿದಾಗಲೇ ನನಗೆ ನೆಮ್ಮದಿ. ಆದ್ದರಿಂದ ನೀವು ಜನಸ್ಥಾನದಲ್ಲಿ ವಾಸವಾಗಿದ್ದು, ರಾಮನು ಈಗ ಏನುಮಾಡುತ್ತಿದ್ದಾನೆಂದು ಸರಿಯಾಗಿ ತಿಳಿದು, ನನಗೆ ಸುದ್ದಿಯನ್ನು ಮುಟ್ಟಿಸುತ್ತಿರಬೇಕು. ನೀವೆಲ್ಲರೂ ಬಲು ಎಚ್ಚರಿಕೆಯಿಂದ ಆ ಪ್ರಾಂತದಲ್ಲಿ ಸಂಚರಿಸಬೇಕು;

ಮತ್ತು ರಾಮನನ್ನು ಕೊಲ್ಲವುದಕ್ಕಾಗಿ ಸದಾ ಹವಣಿಸುತ್ತಿರಬೇಕು. ಎಲೈ ರಾಕ್ಷಸರೆ, ನೀವು ಎಷ್ಟು ಪರಾಕ್ರಮಿಗಳೆಂಬುದು ನನಗೆ ಗೊತ್ತಿದೆ. ಎಷ್ಟೋ ಸಲ ರಣರಂಗದಲ್ಲಿ ನಿಮ್ಮ ಸಾಹಸವನ್ನು ಕಂಡಿದ್ದೇನೆ. ಆದ್ದರಿಂದಲೇ ಜನಸ್ಥಾನಕ್ಕೆ ಹೋಗಲು ನಿಮ್ಮನ್ನು ನಿಯೋಜಿಸುತ್ತಿದ್ದೇನೆ" ಎಂದು ಹೇಳಿದರು. ರಾವಣನು ತಮ್ಮ ವಿಷಯದಲ್ಲಿ ದೊಡ್ಡ ಮಾತನ್ನಾಡಿದನೆಂದು ಆ ರಾಕ್ಷಸರಿಗೆ ಸಂತೋಷವಾಯಿತು. ಆ ಎಂಟು ಮಂದಿ ರಾಕ್ಷಸರೂ ರಾವಣನಿಗೆ ನಮಸ್ಕರಿಸಿ ಆಯುಧಗಳೊಡನೆ ಲಂಕೆಯಿಂದ ಹೊರಟರು; ಯಾರಿಗೂ ಕಾಣಿಸಿಕೊಳ್ಳದಂತೆ ಜನಸ್ಥಾನಕ್ಕೆ ಹೋದರು. ಮಿಥಿಲೇಶ್ವರನ ಪುತ್ರಿಯಾದ ಸೀತೆಯು ಕೈಸೇರಿದಳೆಂದು ರಾವಣನು ಹರ್ಷದಿಂದ ಉಬ್ಬಿದ.

೨೪. ಸೀತೆಯನ್ನು ಒಲಿಸಿಕೊಳ್ಳುವ ರಾವಣನ ಪ್ರಯತ್ನ; ಸೀತೆಯ ಪ್ರಲಾಪ

ಈ ರೀತಿಯಲ್ಲಿ ರಾವಣನು ಬಲಾಢ್ಯರಾದ ಎಂಟು ಮಂದಿ ರಾಕ್ಷಸರನ್ನು ಜನಸ್ಥಾನಕ್ಕೆ ಕಳಿಸಿ, ತಾನು ಕೃತಕೃತ್ಯನಾದೆನೆಂದು ಬುದ್ಧಿದೌರ್ಬಲ್ಯದಿಂದ ತಿಳಿದುಕೊಂಡ. ಮತ್ತೆ ವೈದೇಹಿಯ ಬಗ್ಗೆಯೇ ಚಿಂತಿಸುತ್ತ ಕಾಮಪೀಡಿತನಾಗಿ, ಅವಳನ್ನು ನೋಡಬೇಕೆಂದು ಅವಳಿದ್ದ ರಮ್ಯವಾದ ಅಂತಃಪುರಕ್ಕೆ ಧಾವಿಸಿದ ರಾವಣನು ಆ ಗೃಹವನ್ನು ಪ್ರವೇಶಿಸಿ ರಾಕ್ಷಸಿಯರ ಮಧ್ಯದಲ್ಲಿ ಕೋಕಾರ್ತಳಾಗಿದ್ದ ಸೀತಾದೇವಿಯನ್ನು ಕಂಡ. ದೈನ್ಯದಿಂದ ಕುಳಿತಿದ್ದ ಅವಳ ಮುಖದ ಮೇಲೆ ಕಣ್ಣೀರು ಹರಿಯುತ್ತಿತ್ತು. ಹೊರಲಾರದ ಶೋಕದ ಹೊರೆ ಅವಳನ್ನು ನುಗ್ಗುಮಾಡಿತ್ತು; ಅವಳು ಬಿರುಗಾಳಿಯ ರಭಸಕ್ಕೆ ಹೊಯ್ದಾಡಿ ಕಡಲಲ್ಲಿ ಮುಳುಗುತ್ತಿರುವ ನಾವೆಯಂತಿದ್ದಳು. ಹಿಂಡಿನಿಂದ ತಪ್ಪಿಸಿಕೊಂಡ ಹರಿಣಿಯನ್ನು ನಾಯಿಗಳು ಮುತ್ತಿಕೊಂಡಂತೆ, ಜಾನಕಿಯನ್ನು ರಾಕ್ಷಸಿಯರು ಮುತ್ತಿಕೊಂಡಿದ್ದರು. ಆಕೆ ತಲೆತಗ್ಗಿಸಿ ದುಃಖಿಸುತ್ತ ಕುಳಿತಿರಲು, ರಾವಣನು ಬಂದ. ಪರಾಧೀನೆಯಾಗಿ ದೈನ್ಯದಿಂದ ದುಃಖಿಸುತ್ತಲಿದ್ದ ವೈದೇಹಿಯನ್ನು ಒತ್ತಾಯದಿಂದ ರಾವಣನು ಕರೆದೊಯ್ದು, ದೇವಭವನದಂತಿದ್ದ ತನ್ನ ಅರಮನೆಯನ್ನು ತೋರಿಸಿದ. ಉತ್ತಮ ಗೃಹಗಳಿಂದಲೂ ವಿಶಾಲವಾದ ಭವ್ಯಭವನಗಳಿಂದಲೂ ನಿಬಿಡವಾದ ಅರಮನೆಯ ವಿವಿಧ ಭಾಗಗಳನ್ನು ತೋರಿಸಿದ. ಸಾವಿರಾರು ಸ್ತ್ರೀಯರು ಅಲ್ಲಿ ಸುತ್ತಾಡುತ್ತಿದ್ದರು; ನಾನಾ ಬಗೆಯ ಪಕ್ಷಿಗಳನ್ನು ಅಲ್ಲಿ ಸಾಕಿದ್ದರು; ಆ ಎಲ್ಲ ಭವನಗಳು ರತ್ನಗಳಿಂದ ಅಲಂಕೃತವಾಗಿದ್ದವು; ದಂತ, ಚಿನ್ನ, ಸ್ಫಟಿಕ, ಬೆಳ್ಳಿ, ವಜ್ರ, ವೈಡೂರ್ಯಾದಿಗಳಿಂದಾದ ಮನೋಹರವಾದ ಕಂಬಗಳಿಂದ ಅವು ನಿರ್ಮಿತವಾಗಿದ್ದವು. ಅವುಗಳಲ್ಲಿ ದಿವ್ಯದುಂದುಭಿಗಳು ಮೊಳಗುತ್ತಿದ್ದವು. ಅಲ್ಲಿನ ಅಪರಂಜಿಯ ತೋರಣಗಳು ಮನೋಜ್ಞವಾಗಿದ್ದವು. ಅವೆಲ್ಲವನ್ನೂ ತೋರಿಸುವುದಕ್ಕಾಗಿ ರಾವಣನು ಸೀತೆಯನ್ನು ಬಲಾತ್ಕಾರವಾಗಿ ಕರೆದುಕೊಂಡು ಕಾಂಚನಮಯವಾದ ವಿಚಿತ್ರ ಸೋಪಾನವನ್ನು ಹತ್ತಿಹೋದ. ಅಲ್ಲಿ ಆನೆಯ ದಂತಗಳಿಂದಲೂ ಬೆಳ್ಳಿಯಿಂದಲೂ ಮಾಡಿದ್ದ ಸುಂದರವಾದ ಗವಾಕ್ಷಗಳಿದ್ದವು. ಬಂಗಾರದಿಂದ ಅಲಂಕರಿಸಿದ ಕಿಟಕಿಗಳಿದ್ದವು.

ವಿಸ್ತಾರವಾದ ಉಪ್ಪರಿಗೆಯ ಸಾಲುಗಳಿದ್ದವು; ಸುಣ್ಣವನ್ನು ತೊಡೆದು ನಾನಾ ರತ್ನಗಳಿಂದ ಅಲಂಕರಿಸಿದ್ದ ವಿವಿಧ ಸ್ಥಳಗಳಿದ್ದವು. ರಾವಣನು ತನ್ನ ಅರಮನೆಯ ಆ ವೈಭವವೆಲ್ಲವನ್ನೂ ಮೈಥಿಲಿಗೆ ಪ್ರದರ್ಶಿಸಿದ. ಸ್ವಚ್ಛವಾದ ನೀರಿನ ಕೊಳಗಳನ್ನೂ ತಾವರೆಗಳಿರುವ ಪುಷ್ಕರಣಿಗಳನ್ನೂ ಸೀತೆಗೆ ತೋರಿಸಿದ. ಅವಳಾದರೋ ಶೋಕಪರಾಯಣಳಾಗಿದ್ದಳು.

ಈ ರೀತಿಯಲ್ಲಿ ತನ್ನ ದಿವ್ಯಭವನದ ಎಲ್ಲ ವೈಭವವನ್ನೂ ತೋರಿಸಿ ಅವಳೊಡನೆ ಮಾತನಾಡಲುಪಕ್ರಮಿಸಿದ. ಸೀತಾದೇವಿಯನ್ನು ಮರುಳುಗೊಳಿಸಬೇಕೆಂಬುದು ಆ ದುರಾತ್ಮನ ಉದ್ದೇಶವಾಗಿತ್ತು. ಅವನು ಹೀಗೆಂದ: "ಸೀತೆ, ನನ್ನ ಬಳಿ ಹತ್ತು ಕೋಟಿ ರಾಕ್ಷಸರ ಸೇನಾಬಲವಿದೆ. ಅಲ್ಲದೆ ಇಪ್ಪತ್ತೆರಡು ಕೋಟಿ ರಾಕ್ಷಸರ ಪ್ರಜಾಬಲವಿದೆ. ಅವರೆಲ್ಲರೂ ಭೀಮ ಪರಾಕ್ರಮಿಗಳು. ಈ ಮೂವತ್ತೆರಡು ಕೋಟಿ ರಾಕ್ಷಸರಿಗೆ ನಾನು ಪ್ರಭುವಾಗಿದ್ದೇನೆ. ಈ ಸಂಖ್ಯೆಯಲ್ಲಿ ಮುಪ್ಪಿನ ಮುದುಕರೂ ಬಾಲಕರೂ ಸೇರಿಲ್ಲ. ನನ್ನೊಬ್ಬನಿಗೇ ಒಂದು ಸಾವಿರ ಪರಿಚಾರಕರಿದ್ದಾರೆ. ಈ ನನ್ನ ರಾಜಪರಿಕರವೆಲ್ಲವೂ, ಹೇ ವಿಶಾಲಾಕ್ಷಿ, ನಿನಗೆ ಅಧೀನವಾಗಿದೆ. ನನ್ನ ಪ್ರಾಣವೂ ಸಹ ನಿನ್ನ ಕೈಯಲ್ಲಿದೆ. ನನಗೆ ನೀನು ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯಳಾಗಿದ್ದೀಯೆ. ನನ್ನ ಅಂತಃಪುರದಲ್ಲಿ ನಾನು ಪರಿಗ್ರಹಿಸಿರುವ ಸಾವಿರಾರು ಸ್ತ್ರೀಯರಿದ್ದಾರೆ; ಅವರೆಲ್ಲರಿಗೂ, ಸೀತೆ, ನೀನು ಒಡೆಯಳಾಗು! ಪ್ರಿಯೆ, ನನ್ನ ಪತ್ನಿಯಾಗು! ಇದೇ ನಿನಗೆ ಒಳ್ಳೆಯದು. ಅನ್ಯಥಾ ಚಿಂತಿಸುವೆಯೇಕೆ? ನನ್ನ ಮಾತನ್ನು ಕೇಳು; ನನ್ನವಳಾಗು. ಮನ್ಮಥಾಗ್ನಿಯಲ್ಲಿ ಬೆಂದುಹೋಗುತ್ತಿರುವ ನನ್ನ ಮೇಲೆ ದಯೆದೋರು. ಈ ಲಂಕಾದ್ವೀಪದ ಸುತ್ತಲೂ ಸಮುದ್ರವಿದೆ; ಭೂಪ್ರದೇಶದಿಂದ ನೂರು ಯೋಜನ ದೂರದಲ್ಲಿದೆ. ಇಂದ್ರನೊಡನೆ ದೇವಾಸುರರೇ ಒಟ್ಟುಗೂಡಿ ಬಂದರೂ ಲಂಕೆಯು ಅವರಿಗೆ ಜಗ್ಗದು. ದೇವ ಯಕ್ಷ ಗಂಧರ್ವರಲ್ಲಾಗಲಿ, ಋಷಿಗಳಲ್ಲಾಗಲಿ, ನನಗೆ ಸಾಟಿಯಾದ ಇನ್ನೊಬ್ಬ ಪರಾಕ್ರಮಿಯನ್ನು ಮೂರು ಲೋಕಗಳೆಲ್ಲಿಯೂ ಕಾಣೆ. ಸೀತೆ, ಮನುಷ್ಯ ಮಾತ್ರನಾದ ರಾಮನಿಂದ ನಿನಗೆ ಆಗಬೇಕಾದದ್ದೇನು? ಅವನೊಬ್ಬ ರಾಜ್ಯಭ್ರಷ್ಟನಾದ ದರಿದ್ರ! ಬರಿಯ ಕಾಲ್ನಡಿಗೆಯಲ್ಲಿ ಅಲೆಯುವ ತಾಪಸ; ಅವನ ಶೌರ್ಯವೂ ಅತ್ಯಲ್ಪ! ಆದ್ದರಿಂದ, ಸೀತೆ, ನನ್ನನ್ನು ವರಿಸು. ನಾನೇ ನಿನಗೆ ಯೋಗ್ಯನಾದ ಪತಿ. ಸುಂದರಿ, ಯೌವನವು ಶಾಶ್ವತವಲ್ಲ! ಈ ಕಾಲದಲ್ಲಿ ನನ್ನೊಡನೆ ಆನಂದವನ್ನನುಭವಿಸು. ಮನೋಹರೆ, ಪುನಃ ರಾಮನ ದರ್ಶನವಾದೀತೆಂದು ಎಂದಿಗೂ ಭಾವಿಸಬೇಡ. ಇಲ್ಲಿಗೆ ಬರುವ ಶಕ್ತಿ ಅವನಿಗೆಲ್ಲಿಯದು? ಕಮಲನೇತ್ರೇ, ಅವನ ಊಹೆಗೂ ನಿಲುಕದಂಥ ಸ್ಥಳವಿದು. ಆಕಾಶದಲ್ಲಿ ಮಹಾವೇಗದಿಂದ ಬೀಸುವ ವಾಯುವನ್ನು ಹಗ್ಗದಿಂದ ಕಟ್ಟಿಹಾಕಲಾದೀತೆ? ಉರಿಯುವ ಬೆಂಕಿಯ ಜಗಜಗಿಸುವ ಜ್ವಾಲೆಯನ್ನು ಕೈಯಲ್ಲಿ ಹಿಡಿಯಲಾದೀತೆ? ಅದು ಹೇಗೆ ಅಸಾಧ್ಯವೋ ಹಾಗೆ, ನನ್ನ ಬಾಹುಬಲದಿಂದ ರಕ್ಷಿತಳಾದ ನಿನ್ನನ್ನು ಪರಾಕ್ರಮದಿಂದ ಬಿಡಿಸಿಕೊಂಡು ಹೋಗುವುದು ಅಸಾಧ್ಯ. ಸುಂದರಿ, ಈ ಮೂರು ಲೋಕಗಳಲ್ಲಿಯೂ ಅಂತಹ ವೀರನೊಬ್ಬನನ್ನೂ ನಾನು ಕಾಣೆ. ಲಂಕಾನಗರದಲ್ಲಿದ್ದು ಈ ವಿಶಾಲವಾದ ರಾಜ್ಯಕ್ಕೆ ಒಡತಿಯಾಗಿ ನೀನೇ ಇದನ್ನು ಪಾಲಿಸು. ನಾನು ನಿನ್ನ ಸೇವಕನಾಗಿರುತ್ತೇನೆ! ನನ್ನಂತೆ ಸಕಲ ದೇವತೆಗಳೂ ನಿನ್ನ

ದಾಸರಾಗುವರು. ಈ ಚರಾಚರವಾದ ಜಗತ್ತೇ ನಿನ್ನ ಕೈಕೆಳಗಿರುವುದು. ಮೈಥಿಲೀ, ನನ್ನ ಪಟ್ಟದ ರಾಣಿಯಾಗು; ನಿನ್ನ ಪಟ್ಟಾಭಿಷೇಕವನ್ನು ನೋಡಿ ನಾನು ನಲಿಯುವಂತೆ ಮಾಡು. ನೀನು ಮಾಡಿದ ಪಾಪಶೇಷವಾವುದೋ ಇದ್ದಿತೆಂದು ತೋರುತ್ತದೆ, ಅದು ವನವಾಸದಿಂದ ತೀರಿಹೋಯಿತು. ಇನ್ನು ಮೇಲೆ ನಿನ್ನ ಮಹತ್ತರವಾದ ಪುಣ್ಯದ ಫಲವನ್ನು ಇಲ್ಲಿ ಅನುಭವಿಸು! ನನ್ನ ಅಣ್ಣನಾದ ವೈಶ್ರವಣನ ಪುಷ್ಪಕವಿಮಾನವು ನನ್ನ ವಶದಲ್ಲಿದೆ; ಅದು ಸೂರ್ಯನಂತೆ ವಿರಾಜಿಸುತ್ತದೆ. ರಮಣೀಯವಾದ ಆ ವಿಮಾನವು ಮನೋವೇಗವುಳ್ಳದ್ದು – ವಿಕ್ರಮದಿಂದ ಅದನ್ನು ಗೆದ್ದು ತಂದಿದ್ದೇನೆ. ಧರಣಿಜಾತೆ, ಅದರಲ್ಲಿ ನನ್ನೊಡನೆ ಕುಳಿತು ಸುಖವಾಗಿ ವಿಹರಿಸುತ್ತಿರು. ತಾವರೆಯಂತಿರುವ ನಿನ್ನ ಮುಖವು ಸ್ವಚ್ಛವಾಗಿ ನೋಡಲು ಎಷ್ಟು ಚೆನ್ನಾಗಿದೆ. ದುಃಖಿಸುವುದರಿಂದ ಮುಖವು ಕಂದಿದೆ, ಮೊದಲಿನಷ್ಟು ಕಾಂತಿಯುಕ್ತವಾಗಿಲ್ಲ!" ಎಂದ. ರಾವಣನು ಹೀಗೆ ಹೇಳುತ್ತಿರುವಾಗ ಆ ಸಾಧ್ವಿಯು ತನ್ನ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ಗಳಗಳನೆ ಅತ್ತಳು. ಜಾನಕಿಯು ಮನಸ್ಸಿನಲ್ಲಿ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದಳು. ರೋಗದಿಂದ ನರಳುವವಳಂತೆ ದೀನಳಾಗಿದ್ದಳು; ಚಿಂತಿಸಿ ಚಿಂತಿಸಿ ಕಾಂತಿಗೆಟ್ಟಿದ್ದಳು. ಪಾಪಿಯಾದ ರಾವಣನು ಅವಳನ್ನು ನೋಡಿ ಮತ್ತೆ, "ವೈದೇಹಿ, ಇದಕ್ಕಾಗಿ ನಾಚಬೇಡ. ಧರ್ಮಲೋಪವಾಗುವುದೆಂದೂ ಚಿಂತಿಸಬೇಡ. ನಿನ್ನನ್ನು ವರಿಸತಕ್ಕವನು ವಿಶ್ರವಸ್ಸೆಂಬ ಯತಿಯ ಮಗ, ಬ್ರಹ್ಮದೇವನ ವಂಶದಲ್ಲಿ ಜನಿಸಿದವನು. ನಿನ್ನ ಮೃದುವಾದ ಪಾದಗಳಿಗೆ ನನ್ನ ತಲೆಯನ್ನು ಮುಟ್ಟಿಸಿ ನಮಸ್ಕರಿಸುತ್ತೇನೆ! ನನ್ನನ್ನು ಅನುಗ್ರಹಿಸು! ಬಹಳವಾಗಿ ನೊಂದು ನಾನು ಈ ಬಗೆಯ ದೈನ್ಯದ ಮಾತುಗಳನ್ನು ಆಡಿದ್ದೇನೆ. ರಾವಣನು ಇನ್ನೊಬ್ಬ ಸ್ತ್ರೀಗೆ ಎಂದಿಗೂ ತಲೆಬಾಗತಕ್ಕವನಲ್ಲ" ಎಂದು ನುಡಿದ. ಈ ರೀತಿಯಲ್ಲಿ ರಾವಣನು ಜಾನಕಿಗೆ ಹೇಳಿ, ಅವಳು ತನ್ನವಳಾದಳೆಂದು ತಿಳಿದುಕೊಂಡ.

ರಾವಣನು ಹಾಗೆ ಹೇಳಲು ಶೋಕಾವಿಷ್ಟಳಾದ ವೈದೇಹಿಯು ನಡುವೆ ಹುಲ್ಲುಕಡ್ಡಿಯನ್ನಿಟ್ಟು, ನಿರ್ಭಯದಿಂದ ರಾವಣನಿಗೆ ಉತ್ತರಕೊಟ್ಟಳು: "ದಶರಥ ಮಹಾರಾಜನು ಧರ್ಮವನ್ನು ಸೇತುವೆಯಂತೆ ನೆಲೆಗೆ ನಿಲ್ಲಿಸಿದ ಸೀಮಾಪುರುಷ. ಪರ್ವತದಂತೆ ಸ್ಥಿರಸ್ವಭಾವದವನು, ಸತ್ಯಸಂಧನೆಂದು ವಿಖ್ಯಾತನಾಗಿದ್ದಾನೆ. ರಘುವಂಶತಿಲಕನಾದ ಶ್ರೀರಾಮನು ಆತನ ಪುತ್ರ; ಧರ್ಮಾತ್ಮನೆಂದು ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾಗಿದ್ದಾನೆ. ಆಜಾನುಬಾಹುವೂ ವಿಶಾಲಾಕ್ಷನೂ ಆದ ಶ್ರೀರಾಮನೇ ನನ್ನ ದೇವತೆ, ನನ್ನ ಪತಿ. ಆತನು ಇಕ್ಷ್ವಾಕುವಂಶದಲ್ಲಿ ಜನಿಸಿದವನು. ಸಿಂಹದಂತಹ ಭುಜಕಟ್ಟುಳ್ಳ ಮಹಾತೇಜಸ್ವಿ, ಅವನು ತನ್ನ ತಮ್ಮನಾದ ಲಕ್ಷ್ಮಣನೊಡನೆ ಬಂದು ನಿನ್ನ ಪ್ರಾಣವನ್ನು ಹೀರುತ್ತಾನೆ! ಅವನೆದುರಿಗೆ ನೀನು ನನ್ನನ್ನು ಅತಿಕ್ರಮಿಸಿ ನಡೆದಿದ್ದರೆ, ಇಷ್ಟರಲ್ಲಿ ನೀನು ಯುದ್ಧದಲ್ಲಿ ಸತ್ತುಬಿದ್ದಿರುತ್ತಿದ್ದೆ. ಜನಸ್ಥಾನದಲ್ಲಿ ಖರನಿಗಾದ ಗತಿಯೇ ನಿನಗಾಗುತ್ತಿತ್ತು. ನಿನ್ನ ವಶದಲ್ಲಿರುವ ರಾಕ್ಷಸರು ಘೋರರೂಪಿಗಳೆಂದೂ ಬಲಾಢ್ಯರೆಂದೂ ಹೇಳಿಕೊಂಡೆಯಲ್ಲ. ರಾಘವನೆದುರಿಗೆ ಅವರ ಕೊಬ್ಬು ನಡೆಯದು. ಗರುಡನೆದುರಿಗಿನ ಹಾವುಗಳಂತೆ ಅವರು ನಿರ್ವಿಷರಾಗುವರು. ಆತನು ಚಿನ್ನದ ಹಿಡಿಗಳುಳ್ಳ ಧನುಸ್ಸಿನ ಹೆದೆಯಿಂದ ಬಾಣಗಳನ್ನು ಚಿಮ್ಮಿದನೆಂದರೆ, ಅವು ನಿನ್ನ ಜೀವವನ್ನು ಹಿಸಿದುಹಾಕುವುವು: ಗಂಗಾನದಿಯಲ್ಲಿ ನುಗ್ಗಿ ಬರುವ ಅಲೆಗಳು

ದಡವನ್ನು ಕೊರೆಯುವಂತೆ ಕೊರೆಯುವುವು. ರಾವಣ, ದೈತ್ಯರಿಗೂ ದೇವತೆಗಳಿಗೂ ನೀನು ಅವಧ್ಯನಾಗಿರಬಹುದು, ಆದರೆ ಶ್ರೀರಾಮನೊಡನೆ ಮಹಾವೈರವನ್ನು ಬೆಳೆಸಿದ ಮೇಲೆ ನೀನು ಜೀವಸಹಿತ ಉಳಿಯುವುದಿಲ್ಲ. ವೀರಾಗ್ರಣಿಯಾದ ರಾಘವನು ಉಳಿದಿರುವ ನಿನ್ನ ಆಯುಸ್ಸನ್ನು ಮುಗಿಸಿಬಿಡುವನು. ನೀನು ಬಲಿಗಂಬಕ್ಕೆ ಬಿಗಿದ ಪಶುವಾಗಿದ್ದೀಯೆ. ಶ್ರೀರಾಮನು ನಿನ್ನನ್ನು ಕೆಂಗಣ್ಣಿನಿಂದ ನೋಡಿದರೆ ಸಾಕು, ಎಲೈ ರಾಕ್ಷಸ, ಪರಮೇಶ್ವರನಿಂದ ಮನ್ಮಥನು ಸುಟ್ಟುಹೋದಂತೆ, ನೀನು ಸುಟ್ಟು ಬೂದಿಯಾಗುತ್ತೀಯೆ! ಆ ವೀರಶ್ರೇಷ್ಠನು ಸೀತೆಯನ್ನು ಬಿಡಿಸಿಕೊಂಡು ಹೋಗಬಲ್ಲ, ನಿನ್ನ ಆಯುಸ್ಸು ಮುಗಿಯಿತು! ಅದಕ್ಕೆ ತಕ್ಕಂತೆ ನಿನ್ನ ಬುದ್ಧಿ ವಿಪರೀತವಾಯಿತು! ನಿನ್ನ ತಪ್ಪಿನಿಂದ ಲಂಕೆ ವಿಧವೆಯಾಗುವಳು; ಲಂಕೆಗೆ ಉಳಿಗಾಲವಿಲ್ಲ. ಪತಿಸಾನ್ನಿಧ್ಯದಿಂದ ನನ್ನನ್ನು ಬಲಾತ್ಕಾರವಾಗಿ ಅಗಲಿಸಿದೆಯಲ್ಲ, ಈ ಪಾಪಕೃತ್ಯವು ನಿನಗೆ ಪರಿಣಾಮದಲ್ಲಿ ಸುಖಕರವಾಗದು. ನನ್ನ ಪತಿಯು ನನ್ನ ಮೈದುನನೊಡನೆ ದಂಡಕಾರಣ್ಯದಲ್ಲಿದ್ದಾನೆ. ಮಹಾತೇಜಸ್ವಿಯಾದ ಆ ವೀರನು ಶೂನ್ಯಾರಣ್ಯದಲ್ಲಿಯೂ ನಿರ್ಭಯದಿಂದ ತನ್ನ ಪರಾಕ್ರಮವನ್ನು ಅವಲಂಬಿಸಿಕೊಂಡಿದ್ದಾನೆ, ಆತನು ರಣರಂಗದಲ್ಲಿ ಶರವೃಷ್ಟಿಯನ್ನು ಸುರಿಸಿ, ನಿನ್ನ ದರ್ಪವನ್ನೂ ಬಲಪರಾಕ್ರಮವನ್ನೂ ಕೊಬ್ಬನ್ನೂ ಮೈಯಿಂದ ಕರಗಿಸುವನು! ಎಲೈ ನೀಚರಾಕ್ಷಸ, ನನ್ನನ್ನು ಬಲಾತ್ಕರಿಸುತ್ತಿರುವ ನಿನಗೆ ಅಂಥ ಸರ್ವನಾಶದ ಕಾಲ ಬಂದಿದೆ. ನೀನು, ನಿನ್ನ ರಾಕ್ಷಸರು, ನಿನ್ನ ಅಂತಃಪುರದವರು – ಇವರೆಲ್ಲರಿಗೂ ಕೊನೆಗಾಲ ಬಂದಿದೆ. ಯಜ್ಞಶಾಲೆಯಲ್ಲಿ ಸ್ರುಕ್ ಮುಂತಾದ ಯಜ್ಞ ಪಾತ್ರೆಗಳಿಂದ ಅಲಂಕೃತವಾಗಿ, ದ್ವಿಜರ ವೇದಮಂತ್ರಗಳಿಂದ ಪರಿಶುದ್ಧವಾಗಿರುವ ಯಜ್ಞವೇದಿಯನ್ನು ಚಂಡಾಲನು ಮುಟ್ಟಲು ಯೋಗ್ಯವೇ, ಶಕ್ಯವೇ? ಹಾಗೆಯೇ ಧರ್ಮಪರಾಯಣನಾದ ಶ್ರೀರಾಮನ ಧರ್ಮಪತ್ನಿಯೂ ಪತಿವ್ರತೆಯೂ ಆದ ನನ್ನನ್ನು ನೀನು ಮುಟ್ಟುವುದಕ್ಕೆ ಅರ್ಹನಲ್ಲ. ತಾವರೆಗಳ ವನದಲ್ಲಿ ಸದಾ ರಾಜಹಂಸದೊಡನೆ ವಿಹರಿಸುವ ರಾಜಹಂಸಿಯು, ಹುಲ್ಲಿನ ಪೊದೆಯಲ್ಲಿರುವ ನೀರುಕಾಗೆಯನ್ನು ಕಣ್ಣಿಂದಾದರೂ ನೋಡೀತೇ? ಈ ಶರೀರ ಜಡವಾದದ್ದು. ಇದನ್ನು ಸೆರೆಮನೆಯಲ್ಲಿ ಬಂಧಿಸು, ತಿನ್ನುವುದಾದರೆ ತಿಂದುಬಿಡು. ಈ ದೇಹನನ್ನು ಪೋಷಿಸಬೇಕೆಂದೂ, ಪ್ರಾಣವನ್ನು ರಕ್ಷಿಸಿಕೊಳ್ಳಬೇಕೆಂದೂ ನನಗೆ ಇಚ್ಛೆಯಿಲ್ಲ. ಲೋಕದಲ್ಲಿ ಕೆಟ್ಟ ಹೆಸರನ್ನು ತಂದುಕೊಳ್ಳಲು ಮಾತ್ರ ನನಗೆ ಸಾಧ್ಯವಿಲ್ಲ" ಎಂದು ವೈದೇಹಿಯು ಕಟುವಾಗಿ ಹೇಳಿ ಸುಮ್ಮನಾದಳು. ಪುನಃ ರಾವಣನೊಡನೆ. ಮಾತಾಡಲಿಲ್ಲ.

ಮೈ ನವಿರೇಳಿಸುವಂಥ ಸೀತೆಯ ಕಠೋರವಾಕ್ಯವನ್ನು ಕೇಳಿ ರಾವಣನು ಹೆದರಿಸುವ ರೀತಿಯಿಂದ ಹೀಗೆಂದ: "ಎಲೌ ಕೋಮಲೆ, ನನ್ನ ಮಾತನ್ನು ಗಮನವಿಟ್ಟು ಕೇಳು: ಹನ್ನೆರಡು ತಿಂಗಳು ನಿನಗೆ ಅವಧಿಯನ್ನು ಕೊಟ್ಟಿದ್ದೇನೆ. ಸುಂದರಿ, ಅಷ್ಟರಲ್ಲಿ ನೀನು ನನ್ನ ವಶಳಾಗದಿದ್ದರೆ, ನನ್ನ ಅಡಿಗೆಯವರು ಬೆಳಗಿನ ತಿಂಡಿಗಾಗಿ ನಿನ್ನನ್ನು ತುಂಡುತುಂಡಾಗಿ ಕಡಿಯುತ್ತಾರೆ!" ರಾವಣನು ಕ್ರೋಧದಿಂದ ಹೀಗೆ ಕಟುವಾಗಿ ನುಡಿದು ಸಮೀಪದಲ್ಲಿದ್ದ ರಾಕ್ಷಸಿಯರನ್ನು ಕರೆದು, "ಎಲೈ ರಾಕ್ಷಸಿಯರೇ, ಈಕೆಯ ದರ್ಪವನ್ನು ನೀವು ಶೀಘ್ರದಲ್ಲಿ ಅಡಗಿಸಿರಿ. ವಿಕಾರಾಕೃತಿಯವರೂ ಭಯಂಕರಸ್ವರೂಪರೂ ಆಗಿ

ಇವಳೆದುರಿಗೆ ಮಾಂಸವನ್ನು ಮೆದ್ದು ನೆತ್ತರನ್ನು ಕುಡಿದು ಇವಳ ಸೊಕ್ಕನ್ನು ಅಡಗಿಸಿರಿ!" ಎಂದು ಆಜ್ಞೆಯಿತ್ತನು. ರಾವಣನು ಅಜ್ಞೆಯಿತ್ತೊಡನೆ ಘೋರಾಕೃತಿಯ ರಾಕ್ಷಸಿಯರು ಅವನಿಗೆ ಕೈ ಮುಗಿದು ಮೈಥಿಲಿಯನ್ನು ಸುತ್ತುಗಟ್ಟಿದರು. ದೈತ್ಯೇಶ್ವರನಾದ ರಾವಣನು ಭೀಕರಾಕಾರನಾಗಿ ಭೂಮಿಯನ್ನು ಒಡೆಯುವನೋ ಎಂಬಂತೆ ನೆಲವನ್ನು ನಡುಗಿಸುತ್ತ ಹೆಜ್ಜೆಯಿಟ್ಟು, "ಇವಳನ್ನು ಅಶೋಕವನದ ಮಧ್ಯಕ್ಕೆ ಎಳೆದೊಯ್ಯಿರಿ. ಅಲ್ಲಿ ಇವಳನ್ನು ಗುಪ್ತವಾಗಿಟ್ಟು ಸುತ್ತುಗಟ್ಟಿ ಇವಳಿಗೆ ನೀವು ಕಾವಲಾಗಿರತಕ್ಕದ್ದು. ಅಲ್ಲಿ ಭಯಂಕರವಾಗಿ ಹೆದರಿಸುತ್ತಲೂ ಒಳ್ಳೆಯ ಮಾತುಗಳನ್ನು ನುಡಿಯುತ್ತಲೂ ಇವಳನ್ನು ದಾರಿಗೆ ತನ್ನಿರಿ. ಕಾಡಾನೆಯನ್ನು ವಶಕ್ಕೆ ತರುವಂತೆ ನಯಭಯಗಳಿಂದ ಈ ಸೀತೆಯನ್ನು ಸ್ವಾಧೀನಕ್ಕೆ ತನ್ನಿರಿ" ಎಂದು ಆಜ್ಞಾಪಿಸಿದ.

ಅದರಂತೆ ಆ ರಾಕ್ಷಸಿಯರು ಮೈಥಿಲಿಯನ್ನು ಕರೆದುಕೊಂಡು ಅಶೋಕವನಕ್ಕೆ ಹೊರಟುಹೋದರು. ಅಶೋಕವನವಾದರೋ ಸರ್ವಕಾಲದಲ್ಲಿಯೂ ಫಲಪುಷ್ಪಗಳನ್ನು ಕೊಡುವ ವಿವಿಧ ವೃಕ್ಷಗಳಿಂದ ರಮಣೀಯವಾಗಿತ್ತು, ಮದಿಸಿದ ಹಕ್ಕಿಗಳಿಂದ ತುಂಬಿತ್ತು. ಆದರೆ ಶೋಕಾರ್ತಳಾದ ಜಾನಕಿಯು ರಾಕ್ಷಸಿಯರಿಗೆ ಅಧೀನಳಾಗಿ, ಹೆಣ್ಣು ಹುಲಿಗಳ ಕೈಗೆ ಸಿಕ್ಕಿದ ಹರಿಣಿಯಂತಾದಳು; ಮಹಾದುಃಖಕ್ಕೆ ಪಕ್ಕಾದಳು; ಹಗ್ಗದಿಂದ ಕಟ್ಟಿದ ಜಿಂಕೆಯಂತೆ ಹೆಜ್ಜೆ ಹೆಜ್ಜೆಗೆ ಹೆದರಿದಳು. ಅಶೋಕವನದ ಸೊಬಗಿನಿಂದ ಅವಳ ಮನಸ್ಸಿಗೆ ಸಂತೋಷವಾಗಲಿಲ್ಲ. ಆ ರಾಕ್ಷಸಿಯರು ವಿಕಾರವಾದ ಕಣ್ಣುಗಳಿಂದ ಸೀತೆಯನ್ನು ವಿಧವಿಧವಾಗಿ ಹೆದರಿಸುತ್ತಿದ್ದರು. ಸೀತೆಯು ತನ್ನ ದಯಿತನೂ ದೇವತೆಯೂ ಆದ ಶ್ರೀರಾಮಚಂದ್ರನನ್ನೇ ನೆನೆಸಿಕೊಳ್ಳುತ್ತ ಆಗಾಗ ಎಚ್ಚರ ತಪ್ಪುತ್ತಿದ್ದಳು; ಭಯಶೋಕಗಳಿಂದ ಬಸವಳಿದ ಅವಳ ಮನಸ್ಸಿಗೆ ನೆಮ್ಮದಿಯ ಲೇಶವೂ ಇಲ್ಲವಾಯಿತು.

೨೫. ಶ್ರೀರಾಮನು ಮಾರೀಚನನ್ನು ಕೊಂದು ಹಿಂದಿರುಗುವುದು; ಲಕ್ಷ್ಮಣನು ನಡೆದುದನ್ನು ವಿವರಿಸುವುದು

ಇತ್ತ ಶ್ರೀರಾಮನು ಜಿಂಕೆಯ ವೇಷದಲ್ಲಿ ಬಂದ ಕಾಮರೂಪಿಯಾದ ಮಾರೀಚನನ್ನು ವಧಿಸಿ, ಬೇಗಬೇಗನೆ ತನ್ನ ಆಶ್ರಮದ ಕಡೆಗೆ ಹಿಂದಿರುಗಿ ಬರುತ್ತಿದ್ದನು. ಮೈಥಿಲಿಯನ್ನು ಮೊದಲು ನೋಡಬೇಕೆಂದು ತ್ವರೆಯಿಂದ ಬರುತ್ತಿರಲು, ಅವನ ಹಿಂದುಗಡೆ ನರಿಯೊಂದು ಕೆಟ್ಟ ದನಿಯಿಂದ ಊಳಿಟ್ಟಿತು. ರೋಮಾಂಚಗೊಳಿಸುವ ಆ ದಾರುಣ ಶಬ್ದವನ್ನು ಕೇಳಿ ಶ್ರೀರಾಮನು ತಲ್ಲಣಿಸಿದ; ನರಿಯ ಕೂಗಿನಿಂದ ಶಂಕೆಯು ಹೆಚ್ಚಿ ಅವನು ಚಿಂತೆಗೊಳಗಾದ: "ಅಕಟಾ, ಈ ನರಿಯು ಕೂಗುವುದನ್ನು ಕೇಳಿದರೆ, ಯಾವುದೋ ಅಶುಭವು ಕಾದಿದೆಯೆಂದು ಅನ್ನಿಸುತ್ತದೆ. ವೈದೇಹಿಯು ಕುಶಲದಿಂದ ಇರಬಹುದೆ? ರಾಕ್ಷಸರು ಅವಳನ್ನು ತಿನ್ನದೆ ಇರಬಹುದೆ? ಮೃಗರೂಪಿಯಾದ ಮಾರೀಚನು ನನ್ನ ಸ್ವರವು ಹೇಗಿದೆಯೆಂಬುದನ್ನು ತಿಳಿದು ಅದನ್ನೇ ಅನುಸರಿಸಿ, 'ಹಾ ಸೀತೇ, ಹಾ ಲಕ್ಷ್ಮಣಾ' ಎಂದು ಕೂಗಿದ್ದಾನೆ. ಲಕ್ಷ್ಮಣನಿಗೆ ಆ ಶಬ್ದವು ಕೇಳಿಸಿದರೆ ಅವನು ಮೈಥಿಲಿಯನ್ನು ಅಲ್ಲಿಯೇ

ಬಿಟ್ಟು, ನನ್ನನ್ನು ಹುಡುಕಿಕೊಂಡು ಬಂದು ಬಿಡುವನು. ಕೂಡಲೇ ಹೋಗಬೇಕೆಂದು ಸೀತೆಯೂ ಲಕ್ಷ್ಮಣನನ್ನು ಬಲವಂತ ಮಾಡುವಳು. ರಾಕ್ಷಸರೆಲ್ಲರೂ ಒಟ್ಟುಗೂಡಿ ಸೀತೆಯನ್ನು ವಧಿಸಬೇಕೆಂದು ಸಂಚುಮಾಡಿರಬೇಕು. ಆದ್ದರಿಂದಲೇ ಮಾರೀಚನು ಚಿನ್ನದ ಜಿಂಕೆಯಾಗಿ ಬಂದು ನನ್ನನ್ನು ಆಶ್ರಮದಿಂದ ಇಷ್ಟುದೂರ ಕರೆತಂದ. ಬಹುದೂರ ನನ್ನನ್ನು ಕರೆದೊಯ್ದು, ಅಲ್ಲಿ ನಾನು ಶರದಿಂದ ಹೊಡೆದಾಗ ರಾಕ್ಷಸನಾಗಿ ಕಾಣಿಸಿಕೊಂಡ. ಆಗಲೂ 'ಹಾ ಲಕ್ಷ್ಮಣಾ! ನಾನು ಸತ್ತೆ!' ಎಂದು ಕೂಗಿದನಲ್ಲವೆ? ನಾನು ಸೀತಾಲಕ್ಷ್ಮಣರಿಬ್ಬರನ್ನೇ ವನದಲ್ಲಿ ಬಿಟ್ಟು ಇತ್ತ ಬಂದುಬಿಟ್ಟೆನಲ್ಲ. ಅವರು ಕ್ಷೇಮವಾಗಿ ಇರಬಹುದೇ? ಬಹಳ ಘೋರವಾದ ಕೆಟ್ಟ ಶಕುನಗಳಾಗುತ್ತಿವೆಯಲ್ಲ!" ಎಂದು ಶ್ರೀರಾಮನು ಚಿಂತಾಕುಲನಾದ. ಮುಖ್ಯವಾಗಿ ನರಿಯ ಕೆಟ್ಟ ಕೂಗು, ರಾಕ್ಷಸನು ಮೃಗರೂಪದಿಂದ ಬಂದು ತನ್ನನ್ನು ದೂರದವರೆಗೆ ಕರೆದೊಯ್ದುದು – ಆತನ ಕಳವಳಕ್ಕೆ ಕಾರಣವಾಗಿದ್ದವು. ರಾಘವನು ಹೀಗೆ ವಿಧವಿಧವಾಗಿ ಶಂಕಿಸುತ್ತಲೇ ಜನಸ್ಥಾನದಲ್ಲಿದ್ದ ಪರ್ಣಶಾಲೆಯ ಕಡೆಗೆ ಬರುತ್ತಿದ್ದ. ಆ ಮಹಾತ್ಮನು ದೀನಮನಸ್ಕನಾಗಿ ತಳಮಳಿಸುತ್ತ ಬರುತ್ತಿರಲು, ಮೃಗಪಕ್ಷಿಗಳು ಅಪ್ರದಕ್ಷಿಣವಾಗಿ ಅವನನ್ನು ಬಳಸುತ್ತ ವಿಕಾರವಾಗಿ ಕೂಗಿಕೊಂಡವು. ರಾಘವನು ಆ ದುರ್ನಿಮಿತ್ತಗಳನ್ನು ನೋಡಿ ಮತ್ತಷ್ಟು ತ್ವರೆಯಿಂದ ತನ್ನ ಆಶ್ರಮದ ಕಡೆಗೆ ಧಾವಿಸುತ್ತ ಬಂದ.

ಹೀಗೆ ಆತನು ತನ್ನ ಕಾಂತೆಯಾದ ಸೀತಾದೇವಿಯನ್ನೂ ಬಲಾಢ್ಯನಾದ ಲಕ್ಷ್ಮಣನನ್ನೂ ಕುರಿತು ಚಿಂತಿಸುತ್ತಲೇ ಜನಸ್ಥಾನದ ಕಡೆಗೆ ಬರುತ್ತಿರಲು, ದೂರದಲ್ಲಿ ಲಕ್ಷ್ಮಣನು ದೈನ್ಯದಿಂದ ಕಳೆಗುಂದಿ ಬರುತ್ತಿರುವುದು ಕಾಣಿಸಿತು! ಸ್ವಲ್ಪ ಹೊತ್ತಿನಲ್ಲಿ ಲಕ್ಷ್ಮಣನು ಶ್ರೀರಾಮನ ಸಮೀಪಕ್ಕೆ ಬಂದುಬಿಟ್ಟನು. ವಿಷಣ್ಣನಾದ ಲಕ್ಷ್ಮಣನು ವಿಷಣ್ಣನಾಗಿದ್ದ ಶ್ರೀರಾಮನ ಸಮೀಪಕ್ಕೆ ಬಂದ. ಶೋಕಾರ್ತನಾದ ಲಕ್ಷ್ಮಣನು ಶೋಕಾರ್ತನಾಗಿದ್ದ ಅಣ್ಣನ ಬಳಿಗೆ ಬಂದ. ರಾಕ್ಷಸರ ಹಾವಳಿಗೆ ಒಳಗಾದ ನಿರ್ಜನವಾದ ಅರಣ್ಯದಲ್ಲಿ ಸೀತೆಯೊಬ್ಬಳನ್ನೇ ಬಿಟ್ಟು ಬಂದುದಕ್ಕೆ ಅಣ್ಣನು ತಮ್ಮನನ್ನು ಆಕ್ಷೇಪಿಸಿದ. ರಘುನಂದನನು ಲಕ್ಷ್ಮಣನ ಎಡಗೈಯನ್ನು ದೈನ್ಯದಿಂದ ಹಿಡಿದುಕೊಂಡು ಮೃದುವಾಗಿಯೇ, "ಅಯ್ಯೋ! ಲಕ್ಷ್ಮಣ, ನೀನು ತಪ್ಪು ಮಾಡಿದೆ! ಸೀತೆಯೊಬ್ಬಳನ್ನೇ ಬಿಟ್ಟು ಬಂದೆಯಲ್ಲ! ಇದರಿಂದ ಒಳ್ಳೆಯದಾದೀತೇ? ಈ ವನದಲ್ಲಿ ಅಲೆಯುವ ರಾಕ್ಷಸರು ಜಾನಕಿಯನ್ನು ಕೊಂದಿರಬಹುದು; ಇಲ್ಲವೇ ತಿಂದಿರಬಹುದು, ಸಂದೇಹವೇ ಇಲ್ಲ. ಆಗುವ ದುಶ್ಶಕುನಗಳನ್ನು ನೋಡಿದರೆ ಹಾಗೆನಿಸುತ್ತದೆ. ಸೀತೆಯು ಪೂರ್ಣಕ್ಷೇಮದಲ್ಲಿರುವುದನ್ನು ನಾವು ನೋಡುವೆವೇ ಲಕ್ಷ್ಮಣ? ಜನಕಮಹಾರಾಜನ ಮಗಳು ಬದುಕಿರುವುದನ್ನು ಕಾಣುವೆವೆ, ಲಕ್ಷ್ಮಣ? ಆ ನರಿ, ಈ ಮೃಗ, ಈ ಪಕ್ಷಿಗಳು – ಮೂಡುದಿಕ್ಕಿಗೆ ಎದುರಾಗಿ ನಿಂತು ವಿಕಾರವಾಗಿ ಕೂಗಿಕೊಳ್ಳುತ್ತಿವೆಯಲ್ಲ! ನಮ್ಮ ಆ ರಾಜಕುಮಾರಿಯು ಕ್ಷೇಮದಿಂದಿರಬಹುದೆ? ಈ ರಾಕ್ಷಸನು ಮೃಗರೂಪದಿಂದ ನನಗೆ ಆಸೆ ಹುಟ್ಟಿಸಿ ಬಹುದೂರ ಕರೆದೊಯ್ದು; ನನಗೆ ಬಹಳ ಶ್ರಮವಾಯಿತು. ಕಡೆಗೆ ನಾನು ಅವನನ್ನು ಕೊಂದೆ; ಸಾಯುವಾಗ ಅವನು ರಾಕ್ಷಸನಾಗಿ ಕಾಣಿಸಿದ. ನನ್ನ ಮನಸ್ಸು ವಿಷಣ್ಣವಾಗಿದೆ; ಶಾಂತಿಯ ಲೇಶವೂ ಇಲ್ಲ; ಎಡಗಣ್ಣು ಅದುರುತ್ತಿದೆ. ಲಕ್ಷ್ಮಣ, ನಿಸ್ಸಂಶಯವಾಗಿ ಸೀತೆ ಇದ್ದಂತಿಲ್ಲ; ಯಾರೋ ಅಪಹರಿಸಿರಬೇಕು ಅಥವಾ ಕೊಂದಿರಬೇಕು" ಎಂದು ಗೋಳಾಡಿದ.

ಲಕ್ಷ್ಮಣನು ಏನನ್ನೂ ಹೇಳಲಾರದೆ ಶೂನ್ಯಮನಸ್ಕನಾಗಿ ದೈನ್ಯದಿಂದ ನಿಂತಿದ್ದ. ವೈದೇಹಿಯನ್ನು ಒಂಟಿಯಾಗಿ ಬಿಟ್ಟು ಬಂದಿದ್ದ ಅವನನ್ನು ನೋಡಿ ಶ್ರೀರಾಮನು ಮತ್ತೆ ಹಲುಬಿದ: "ವತ್ಸ, ದಂಡಕಾರಣ್ಯಕ್ಕೆ ಹೊರಟಾಗಲೂ ವೈದೇಹಿ ನನ್ನನ್ನು ಹಿಂಬಾಲಿಸಿ ಬಂದಳು. ಅವಳೀಗ ಎಲ್ಲಿ? ನೀನು ಅವಳನ್ನು ಅಲ್ಲಿಯೇ ಬಿಟ್ಟು ಬರಬಹುದೇ? ನಾನು ರಾಜ್ಯಭ್ರಷ್ಟನಾಗಿ ದೈನ್ಯದಿಂದ ದಂಡಕಾರಣ್ಯದಲ್ಲಿ ಅತ್ತಿತ್ತ ಅಲೆಯುವಾಗ ನನ್ನ ಕಷ್ಟಕ್ಕೆ ನೆರವಾಗಿ ಸಹಭಾಗಿನಿಯಾಗಿದ್ದ ವೈದೇಹಿ ಎಲ್ಲಿ? ಲಕ್ಷ್ಮಣ, ಯಾರನ್ನು ಅಗಲಿ ಅರೆಗಳಿಗೆಯೂ ನಾನು ಬದುಕಿರಲಾರೆನೋ, ದೇವಕನ್ಯೆಯಂತಿರುವ ಆ ನನ್ನ ಪ್ರಾಣಕಾಂತೆ ಎಲ್ಲಿ? ಕನಕಾಂಗಿಯಾದ ಜಾನಕಿಯು ನನ್ನೊಡನಿಲ್ಲದಿದ್ದರೆ, ದೇವೇಂದ್ರ ಪದವಿಯು ಬಂದರೂ ನನಗೆ ಬೇಡ; ಭೂಲೋಕದ ಚಕ್ರವರ್ತಿಪದವಿಯೂ ಬೇಡ. ನನ್ನ ಪ್ರಾಣಕ್ಕಿಂತಲೂ ಹೆಚ್ಚಿಗೆ ಪ್ರಿಯಳಾದ ವೈದೇಹಿಯು ಬದುಕಿರುವಳೇ? ಹದಿನಾಲ್ಕು ವರ್ಷಗಳವರೆಗೆ ವನವಾಸ ಮಾಡುವೆನೆಂಬ ನನ್ನ ಪ್ರತಿಜ್ಞೆ ಸುಳ್ಳಾಗದೆ ಇದ್ದೀತೆ? ಸೌಮಿತ್ರಿ, ಸೀತಾವಿಯೋಗದಿಂದ ನಾನು ಸತ್ತು, ನೀನು ಅಯೋಧ್ಯೆಗೆ ಹೋಗಲು, ಕೈಕೇಯಿಯು ತನ್ನ ಇಷ್ಟ ಕೈಗೂಡಿತೆಂದು ಸಂತೋಷಿಸಬಹುದಲ್ಲವೆ? ಮಗನಿಗೆ ರಾಜ್ಯವು ದಕ್ಕಿತೆಂದು ಕೃತಕೃತ್ಯಳಾಗಿ ನಲಿಯುವ ಕೈಕೇಯಿಯ ಸೇವೆಯನ್ನು, ಮಗನನ್ನು ಕಳೆದುಕೊಂಡು ಅನಾಥೆಯಾದ ನನ್ನ ತಾಯಿ, ಮಾಡಬೇಕಾಗಿ ಬಂದೀತಲ್ಲವೆ? ವೈದೇಹಿಯು ಬದುಕಿರುವುದು ದಿಟವಾದರೆ ಮಾತ್ರ ನಾನು ಆಶ್ರಮದೊಳಗೆ ಕಾಲಿಡುತ್ತೇನೆ, ಹಾಗಿಲ್ಲದೆ ಆ ಸುಶೀಲೆಯು ಮೃತಳಾಗಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ. ಲಕ್ಷ್ಮಣ, ನಾನು ಆಶ್ರಮದ ಬಳಿಗೆ ಹೋದಾಗ, ನಗುಮುಖದ ಸೀತೆಯು ಬಂದು ಮಾತನಾಡಿಸದಿದ್ದರೆ ನಾನು ಸತ್ತುಹೋಗುತ್ತೇನೆ. ನೀನು ಅಜಾಗರೂಕನಾಗಿದ್ದಾಗ, ರಾಕ್ಷಸರೇನಾದರೂ ಬಂದು ಆ ತಪಸ್ವಿನಿಯನ್ನು ತಿಂದುಬಿಟ್ಟರೋ ಹೇಗೆ? ಸುಕುಮಾರಿಯಾದ ಆ ಹುಡುಗಿ ಕಷ್ಟವನ್ನು ಕಂಡವಳಲ್ಲ. ಸ್ವಲ್ಪ ಕಾಲ ನನ್ನ ವಿರಹವಾದರೂ ಖಿನ್ನಳಾಗಿ ದುಃಖಿಸುತ್ತಿದ್ದಳು. ಮಹಾ ದುರಾತ್ಮನೂ ವಂಚಕನೂ ಆದ ಆ ರಾಕ್ಷಸನು 'ಲಕ್ಷ್ಮಣಾ' ಎಂದು ಗಟ್ಟಿಯಾಗಿ ಕೂಗಿದ್ದರಿಂದ ನಿನಗೂ ಅಂಜಿಕೆಯಾಗಿರಬೇಕು. ನನ್ನ ಧ್ವನಿಯಂತೆಯೇ ಇದ್ದ ಆ ಧ್ವನಿಯು ವೈದೇಹಿಗೂ ಕೇಳಿಸಿರಬೇಕೆಂದು ಊಹಿಸುತ್ತೇನೆ. ಅವಳು ಬೆಚ್ಚಿಬಿದ್ದು ನಿನ್ನನ್ನು ಇಲ್ಲಿಗೆ ಕಳಿಸಿರಬೇಕು. ನೀನು ನನ್ನನ್ನು ನೋಡಬೇಕೆಂದು ತ್ವರೆಯಿಂದ ಬಂದಿದ್ದೀಯೆ. ಒಟ್ಟಿನಲ್ಲಿ ನೀನು ಸೀತೆಯನ್ನು ಬಿಟ್ಟು ಬಂದುದು ತಪ್ಪಾಯಿತು. ಘಾತಕರಾದ ರಾಕ್ಷಸರಿಗೆ ಸೇಡು ತೀರಿಸಿಕೊಳ್ಳಲು ಅವಕಾಶ ಸಿಕ್ಕಿತು. ಖರನನ್ನು ಸಂಹರಿಸಿದ್ದರಿಂದ ನರಮಾಂಸಾಹಾರಿಗಳಾದ ರಾಕ್ಷಸರಿಗೆ ವ್ಯಥೆಯಾಗಿದೆ. ಭಯಂಕರ ಸ್ವಭಾವದ ಆ ರಾಕ್ಷಸರು ಸೀತೆಯನ್ನು ಕೊಲ್ಲುವರೆಂಬುದರಲ್ಲಿ ಸಂದೇಹವಿಲ್ಲ. ಅಯ್ಯೋ! ಲಕ್ಷ್ಮಣ ಮಹಾವ್ಯಸನದಲ್ಲಿ ನಾನು ಮುಳುಗಿಹೋದೆ. ಈಗ ಏನು ಮಾಡಲಿ!" ಎಂದು ರಾಘವನು ಸೀತೆಯ ವಿಷಯವಾಗಿ ಚಿಂತಿಸುತ್ತಲೇ, ಲಕ್ಷ್ಮಣನೊಡನೆ ತ್ವರೆಯಿಂದ ಜನಸ್ಥಾನದಲ್ಲಿದ್ದ ಆಶ್ರಮದ ಬಳಿಗೆ ಧಾವಿಸಿದ.

ಹಸಿವು, ಬಳಲಿಕೆ, ಬಾಯಾರಿಕೆಗಳಿಂದ ಶ್ರೀರಾಮನು ನೊಂದು ಕಂದಿದ್ದ. ಮುಖವು ಬಾಡಿತ್ತು, ನಿಟ್ಟುಸಿರು ಬಿಡುತ್ತಿದ್ದ. ಮೊದಲೇ ದುಃಖಿತನಾಗಿದ್ದ ಲಕ್ಷ್ಮಣನನ್ನು

ಸೀತೆಯನ್ನಗಲಿ ಬಂದುದಕ್ಕಾಗಿ ಆಕ್ಷೇಪಿಸುತ್ತ ಶ್ರೀರಾಮನು ತ್ವರೆಯಿಂದ ಆಶ್ರಮದ ಸಮೀಪಕ್ಕೆ ಹೋದ. ಆಶ್ರಮಪ್ರದೇಶವು ಶೂನ್ಯವಾಗಿತ್ತು. ಆಮೇಲೆ ಆ ವೀರನು ತನ್ನ ಆಶ್ರಮವನ್ನು ಪ್ರವೇಶಿಸಿ ನೋಡಲು ಅದೂ ಬರಿದಾಗಿತ್ತು. ಇಬ್ಬರೂ ಸೀತೆಯು ತಿರುಗಾಡುತ್ತಿದ್ದ ಕೆಲವು ಸ್ಥಳಗಳನ್ನು ಹುಡುಕಿದರು. ಸೀತೆಯು ಇದ್ದಿರಬಹುದಾದ ಸ್ಥಳ ಇದು, ಅದು ಎಂದು ಎಲ್ಲೆಲ್ಲಿಯೂ ಹುಡುಕಿದರು. ಸೀತೆಗೆ ಏನಾಗಿರಬಹುದೋ ಎಂಬ ತಲ್ಲಣದಿಂದ ರೋಮಾಂಚನವಾಯಿತು. ಶ್ರೀರಾಮನು ವ್ಯಥೆಯಲ್ಲಿ ಮುಳುಗಿದ. ಶ್ರೀರಾಮನು ಆಶ್ರಮದಿಂದ ಬಂದಿದ್ದೆ ತಡ, ಲಕ್ಷ್ಮಣನನ್ನು ಕುರಿತು ದುಃಖದಿಂದ "ಲಕ್ಷ್ಮಣ, ಮೈಥಿಲಿಯನ್ನು ಬಿಟ್ಟು ನೀನು ಬಂದದ್ದೇಕೆ? ನಿನ್ನನ್ನು ನಂಬಿಯೇ ಅಲ್ಲವೆ ನಾನು ಅವಳನ್ನು ಅರಣ್ಯದಲ್ಲಿ ಬಿಟ್ಟು ಬಂದೆ? ನೀನು ಸೀತೆಯನ್ನು ಬಿಟ್ಟು ಏಕಾಕಿಯಾಗಿ ಬಂದುದನ್ನು ನೋಡಿದೊಡನೆ, ಸತ್ಯವಾಗಿಯೂ ನನ್ನ ಎದೆ ರುಲ್ಲೆಂದಿತು. ಏನೋ ದೊಡ್ಡ ಅಪಾಯವು ಸಂಭವಿಸಿದೆಯೆಂದು ಶಂಕೆಯಾಯಿತು. ಲಕ್ಷ್ಮಣ, ನೀನು ಸೀತಾರಹಿತನಾಗಿ ಬರುತ್ತಿರುವುದನ್ನು ದೂರದಲ್ಲಿ ನೋಡಿದಾಗಲೇ ನನ್ನ ಎಡಗಣ್ಣು ಎಡದೋಳು ಹಾರಿದವು; ಎದೆಯು ಡವಡವ ಹೊಡೆದುಕೊಂಡಿತು" ಎಂದು ಹೇಳಿದ. ಶುಭಲಕ್ಷಣನಾದ ಲಕ್ಷ್ಮಣನಿಗೆ ಮತ್ತಷ್ಟು ದುಃಖ ಒತ್ತರಿಸಿತು. ಅವನು ಶೋಕಾರ್ತನಾದ ಶ್ರೀರಾಮನಿಗೆ ಹೀಗೆಂದ: "ಅಣ್ಣಾ, ನಾನಾಗಿ ಆಕೆಯನ್ನು ಬಿಟ್ಟುಬರಲಿಲ್ಲ. ಆಕೆಯೇ ಉಗ್ರವಾಕ್ಯಗಳನ್ನಾಡಿ ನಾನು ಹೋಗಬೇಕೆಂದು ಹಟ ಹಿಡಿದಳು. ನೀನು ಕೂಗಿಕೊಂಡಂತೆಯೇ 'ಹಾ ಸೀತೇ ಲಕ್ಷ್ಮಣಾ ಕಾಪಾಡು' ಎಂಬ ದೀನಧ್ವನಿಯು ಮೈಥಿಲಿಯ ಕಿವಿಗೆ ಕೇಳಿಸಿತು. ಕೂಡಲೇ ಅವಳು ಭಯದಿಂದ ತಲ್ಲಣಿಸಿ ನಿನ್ನಲ್ಲಿರುವ ಪ್ರೇಮದಿಂದ 'ಲಕ್ಷ್ಮಣ ಹೋಗು ಹೋಗು' ಎಂದು ಕಣ್ಣೀರು ಸುರಿಸುತ್ತ ನನಗೆ ಹೇಳಿದಳು. ನಾನು ಹೋಗಬೇಕೆಂದು ಅವಳು ಮತ್ತೆ ಮತ್ತೆ ಒತ್ತಾಯಮಾಡಿದಳು. ನನಗೆ ದೃಢವಿಶ್ವಾಸವಿದ್ದುದರಿಂದ 'ದೇವಿ, ಶ್ರೀರಾಮನಿಗೆ ಭಯವನ್ನು ತರುವ ರಾಕ್ಷಸನನ್ನು ನಾನು ಕಂಡಿಲ್ಲ. ನೀನು ನೆಮ್ಮದಿಯಿಂದಿರು. ಯಾವನೋ ಮಾಯಾವಿ ಹೀಗೆ ಕೂಗಿದ್ದಾನೆ. ಅಣ್ಣನ ಬಾಯಿಂದ ಇಂಥ ಹೇಡಿಮಾತು ಎಂದಿಗಾದರೂ ಬಂದೀತೆ? ದೇವತೆಗಳನ್ನೇ ರಕ್ಷಿಸಬಲ್ಲ ವೀರನು 'ಕಾಪಾಡು' ಎಂದಾನೆ? ಏನೋ ಒಂದು ಉದ್ದೇಶದಿಂದ ಯಾವನೋ ರಾಕ್ಷಸನು ನನ್ನ ಅಣ್ಣನ ಕಂಠಸ್ವರವನ್ನೇ ಅನುಕರಿಸಿ 'ಕಾಪಾಡು' ಎಂದು ಕೂಗಿಕೊಂಡಿದ್ದಾನೆ. ಈ ಮಾತಿನ ಸ್ವರವೂ ಖಚಿತವಾಗಿ ಅಣ್ಣನ ಸ್ವರದಂತಿಲ್ಲ. ದೇವಿ ಇದಕ್ಕಾಗಿ ನೀನು ಚಿಂತಿಸಬೇಡ. ಏನೂ ತಿಳಿಯದ ಸಾಮಾನ್ಯ ಹೆಂಗಸರಂತೆ ದುಃಖಿಸಬೇಡ. ಈ ತಳಮಳ ಬೇಡ, ನಿಶ್ಚಿಂತಳಾಗಿ ಸಮಾಧಾನದಿಂದಿರು. ಯುದ್ಧದಲ್ಲಿ ರಾಘವನನ್ನು ಸೋಲಿಸಬಲ್ಲ ಗಂಡಸು ಮೂರು ಲೋಕದಲ್ಲಿಯೂ ಇಲ್ಲ. ಅಂತಹ ವೀರನು ಹಿಂದೆ ಹುಟ್ಟಲಿಲ್ಲ, ಮುಂದೆ ಹುಟ್ಟಲಾರ. ಇಂದ್ರಾದಿ ದೇವತೆಗಳೇ ಬಂದರೂ ಶ್ರೀರಾಮನನ್ನು ಜಯಿಸಲು ಸಾಧ್ಯವಿಲ್ಲ' ಎಂದು ಹೇಳಿದೆನು. ಅಣ್ಣ, ಈ ರೀತಿ ನಾನು ಹೇಳಿದರೂ ವೈದೇಹಿಯು ಕೇಳಲಿಲ್ಲ. ಅವಳಿಗೆ ವಿವೇಕ ತಪ್ಪಿತು. ಕಣ್ಣೀರು ಸುರಿಸುತ್ತ ಅವಾಚ್ಯವಾದ ಕ್ರೂರವಾದ ಮಾತುಗಳನ್ನು ಹೇಳಿದಳು: 'ಲಕ್ಷ್ಮಣ, ನನ್ನಲ್ಲಿ ನೀನು ಅತ್ಯಂತ ಪಾಪಬುದ್ಧಿಯಿಂದ ಕೂಡಿದ್ದೀಯೆ; ನಿನ್ನ ಅಣ್ಣನು ವಿನಾಶ ಹೊಂದಿದ ಮೇಲೆ

ನನ್ನನ್ನು ಪಡೆಯಬೇಕೆಂದಿದ್ದೀಯೆ. ಆದರೆ ನಾನು ನಿನಗೆ ದೊರೆಯಲಾರೆ. ಭರತನೊಡನೆ ಒಳಸಂಚು ನಡೆಸಿ, ನೀನು ಶ್ರೀರಾಮನನ್ನು ಹಿಂಬಾಲಿಸಿ ಬರುತ್ತಿದ್ದೀಯೆ! ಇಷ್ಟು ಸ್ಪಷ್ಟವಾಗಿ ಆತನು ಆರ್ತಸ್ವರದಿಂದ ಕೂಗಿಕೊಂಡರೂ ಅವನ ಬಳಿಗೆ ಹೋಗದಿದ್ದೀಯೆ. ಗೂಢಚಾರಿಯಾದ ಶತ್ರು ನೀನು! ನನಗೋಸ್ಕರ ಹಿಂಬಾಲಿಸಿದ್ದೀಯೆ. ಶ್ರೀರಾಮನಿಗೆ ವಿಪತ್ತು ಬರಲೆಂದು ಸಮಯವನ್ನು ಕಾಯುತ್ತಿದ್ದೀಯೆ. ಆದ್ದರಿಂದಲೇ ಹೋಗಲು ಹಿಂಜರಿಯುತ್ತೀಯೆ' ಎಂದು ಹೇಳಿದಳು. ಅಣ್ಣ, ವೈದೇಹಿಯು ಹೀಗೆ ಹೇಳಿದ್ದರಿಂದ ನನಗೆ ಬಹಳ ವ್ಯಥೆಯಾಯಿತು. ಕಣ್ಣು ಕೆಂಪಡರಿತು. ಕ್ರೋಧದಿಂದ ನನ್ನ ತುಟಿಯು ಅದುರಲಾರಂಭಿಸಿತು. ಆಗ ನಾನು ಆಶ್ರಮದಿಂದ ಇತ್ತ ಹೊರಟುಬಂದೆನು" ಎಂದು ಲಕ್ಷ್ಮಣನು ಹೇಳಿದ. ಆಗ. ಶ್ರೀರಾಮನು ವ್ಯಸನದಿಂದ ಕಂಗೆಟ್ಟು "ತಮ್ಮ, ಅವಳನ್ನು ತ್ಯಜಿಸಿ ನೀನು ಬರಬಾರದಾಗಿತ್ತು. ರಾಕ್ಷಸರನ್ನು ನಿಗ್ರಹಿಸುವುದಕ್ಕೆ ನಾನು ಸಮರ್ಥನೆಂದು ನಿನಗೆ ಗೊತ್ತಿದ್ದರೂ ಮೈಥಿಲಿಯ ಸಿಟ್ಟಿನ ಮಾತನ್ನು ಕೇಳಿ ಹೊರಟುಬಂದಿದ್ದೀಯೆ. ಸೀತೆಯನ್ನು ನೀನು ಬಿಟ್ಟುಬಂದುದು ನನಗೆ ಒಪ್ಪಿಗೆಯಾಗಲಿಲ್ಲ. ಅವಳು ಕೋಪಗೊಂಡು ಕ್ರೂರವಾದ ಮಾತನ್ನಾಡಿದಳೆಂದು ನೀನು ಬಂದುಬಿಡಬಹುದೇ? ಅವಳ ಮಾತಿನಿಂದ ನೀನು ರೇಗಿ ದುಡುಕಿದುದು ಸರ್ವಥಾ ಸರಿಯಲ್ಲ. ನೀನು ಕ್ರೋಧವಶನಾಗಿ ನನ್ನ ಆಜ್ಞೆಯನ್ನು ನಡೆಸದೇ ಹೋದೆ. ಮೃಗರೂಪದಿಂದ ಬಂದು ನನ್ನನ್ನು ಆಶ್ರಮದಿಂದ ಸೆಳೆದೊಯ್ದ ಆ ರಾಕ್ಷಸನು ಅಲ್ಲಿ ಸತ್ತುಬಿದ್ದಿದ್ದಾನೆ. ಒಂದೇ ಬಾಣದಿಂದ ಅವನನ್ನು ಕೊಂದಿದ್ದೇನೆ. ಧನುಸ್ಸನ್ನೆಳೆದು ಸುಲಭವಾಗಿ ಒಂದು ಬಾಣವನ್ನು ನಾನು ಹೊಡೆದದ್ದರಿಂದ ಅವನ ಮೃಗರೂಪವು ಮಾಯವಾಯಿತು, ಆರ್ತಸ್ವರದಿಂದ ಕಿರಿಚುತ್ತ ಕೇಯೂರಧಾರಿಯಾದ ರಾಕ್ಷಸನಾಗಿ ಅವನು ಬಿದ್ದನು. ನನ್ನ ಬಾಣದ ಹೊಡೆತವು ಬಿದ್ದೊಡನೆ, ನನ್ನ ಕಂಠದ ದನಿಯನ್ನು ಅನುಸರಿಸಿ ಬಹುದೂರ ಕೇಳುವಂತೆ ಅವನು ಆರ್ತಸ್ವರದಿಂದ ಕೂಗಿದ. ಗಾಬರಿಗೊಳಿಸುವ ಆ ಕೂಗನ್ನು ಕೇಳಿ ನೀನು ಮೈಥಿಲಿಯನ್ನು ಬಿಟ್ಟು ಇಲ್ಲಿಗೆ ಬಂದಿದ್ದೀಯೆ" ಎಂದ.

೨೬. ಶ್ರೀರಾಮನು ಸೀತಾವಿರಹದಿಂದ ಉನ್ಮಾದವಶನಾಗುವುದು

ಶ್ರೀರಾಮನು ಆಶ್ರಮದ ಕಡೆಗೆ ಬರುತ್ತಿರುವಾಗಲೇ ಅವನ ಎಡಗಣ್ಣಿನ ಕೆಳರೆಪ್ಪೆಯು ಮತ್ತೆ ಮತ್ತೆ ಅದುರಿತು; ಅವನು ಆಗಾಗ ಎಡವಿದ; ಮೈಯಲ್ಲಿ ನಡುಕವು ತಲೆದೋರಿತು. ಹೀಗೆ ಮೇಲೆ ಮೇಲೆ ಅಪಶಕುನಗಳಾಗುವುದನ್ನು ಕಂಡು. 'ಸೀತೆಯು ಕ್ಷೇಮದಿಂದಿರಬಹುದೆ?' ಎಂಬ ಸೊಲ್ಲು ಅವನ ಬಾಯಿಂದ ಹೊರಡುತ್ತಿತ್ತು. ಸೀತೆಯನ್ನು ನೋಡುವ ತವಕದಿಂದ ಬೇಗಬೇಗನೆ ನಡೆಯುತ್ತ ಆಶ್ರಮದ ಬಳಿಗೆ ಬಂದ. ಆಶ್ರಮವು ಶೂನ್ಯವಾಗಿತ್ತು. ಮನಸ್ಸಿನ ತಳಮಳ ಹೆಚ್ಚಿತು. ರಘುನಂದನನು ಕಳವಳದಿಂದ ಹಾರುವನೋ ಎಂಬಂತೆ ಮೈಕೈಗಳನ್ನು ಚಾಲಿಸುತ್ತ, ಗರಗರನೆ ಸುತ್ತುತ್ತ, ಪರ್ಣಶಾಲೆಯ ಮೂಲೆಮೂಲೆಗಳನ್ನು ಹುಡುಕಿ ನೋಡಿದ. ಪರ್ಣಶಾಲೆಯಲ್ಲಿ

ಸೀತೆಯಿಲ್ಲವೆಂಬುದು ತಿಳಿಯಿತು. ಚಳಿಗಾಲದಲ್ಲಿ ಕಾಂತಿಹೀನವಾಗಿ ಹಾಳುಬಿದ್ದ ತಾವರೆಯ ಕೊಳದಂತೆ ಪರ್ಣಶಾಲೆಯಿತ್ತು. ಆಶ್ರಮ ಪ್ರದೇಶದಲ್ಲಿದ್ದ ಮರಗಳಲ್ಲಿ ದುಂಬಿಗಳು ಗುಂಯ್ ಎಂದು ಶಬ್ದ ಮಾಡುತ್ತಿರಲು ಆ ಪ್ರದೇಶವು ಅಳುತ್ತಿದೆಯೋ ಎಂಬಂತೆ ತೋರಿತು. ಸೀತೆಯು ಕಿತ್ತು ತಂದಿದ್ದ ಹೂಗಳು ಬಾಡಿದ್ದವು. ಮೃಗಗಳೂ ಹಕ್ಕಿಗಳೂ ಶಬ್ದಮಾಡದೆ ತೆಪ್ಪಗಿದ್ದವು. ವನದೇವತೆಗಳು ಹೆದರಿ ಹೊರಟುಹೋದದ್ದರಿಂದ ಆ ಪ್ರದೇಶವು ಕಾಂತಿಗುಂದಿ ಹಾಳುಸುರಿಯುತ್ತಿದ್ದಿತು. ಆಶ್ರಮದಲ್ಲಿ ಕೃಷ್ಣಾಜಿನ, ದರ್ಭೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಆಸನ, ಚಾಪೆ ಮುಂತಾದ ಉಪಕರಣಗಳು ಅತ್ತಿತ್ತ ಚದರಿ ಹೋಗಿದ್ದವು. ಬಿಕೋ ಎನ್ನುತ್ತಿದ್ದ ಆಶ್ರಮವನ್ನು ನೋಡಿ ಶ್ರೀರಾಮನಿಗೆ ದುಃಖ ಉಕ್ಕಿತು, ಬಿಕ್ಕಿ ಬಿಕ್ಕಿ ಅತ್ತ. "ಸೀತೆಯನ್ನು ಯಾರಾದರೂ ಅಪಹರಿಸಿಕೊಂಡು ಹೋದರೆ? ಅವಳು ಎಲ್ಲಾದರೂ ಅಡಗಿಕೊಂಡಿರಬಹುದೆ? ರಾಕ್ಷಸರು ತಿಂದುಹಾಕಿರಬಹುದೆ? ವಿನೋದಕ್ಕಾಗಿ ಅವಿತುಕೊಂಡಿರಬಹುದೆ? ಅಥವಾ ಒಬ್ಬಳೇ ಇರಲು ಹೆದರಿ ನನ್ನನ್ನು ಹುಡುಕುತ್ತ ಕಾಡಿನೊಳಗೆ ಬಂದುಬಿಟ್ಟಳೋ? ಹೂಗಳನ್ನೋ ಹಣ್ಣುಗಳನ್ನೋ ಕೀಳಲು ಹೋಗಿರುವಳೋ? ಸ್ನಾನಕ್ಕಾಗಿ ತಾವರೆಯ ಕೊಳಕ್ಕೆ ಹೋದಳೋ? ನೀರಿಗಾಗಿ ನದಿಗೆ ಹೋದಳೋ?" ಎಂದು ವಿಲಪಿಸುತ್ತ ಎಷ್ಟು ಅರಸಿದರೂ ಸೀತೆಯು ಕಾಣಲಿಲ್ಲ. ಅತ್ತೂ ಅತ್ತೂ ಶ್ರೀರಾಮನ ಕಣ್ಣುಗಳು ಕೆಂಪಾದವು; ಅವನು ಹುಚ್ಚನಂತಾದ. ಅನಂತರ ಮರದಿಂದ ಮರಕ್ಕೆ, ಬೆಟ್ಟದಿಂದ ಬೆಟ್ಟಕ್ಕೆ, ಹೊಳೆಯಿಂದ ಹೊಳೆಗೆ, ಓಡುತ್ತ ಸುತ್ತುತ್ತ ಹುಡುಕಿ ಸಾಕಾಯಿತು. ಶ್ರೀರಾಮನು ಶೋಕವೆಂಬ ಕೆಸರಿನ ಕಡಲಿನಲ್ಲಿ ಮುಳುಗಿಹೋಗಿ ಕಂಡ ಕಂಡ ಮರವನ್ನೂ ಮೃಗವನ್ನೂ ಕರೆದು ಹುಚ್ಚನಂತೆ ಮಾತಾಡಿದ: "ಓ ಕದಂಬವೃಕ್ಷನೆ! ನನ್ನ ಪ್ರಿಯೆಯನ್ನು ಕಂಡೆಯಾ? ನಿನ್ನ ಹೂಗಳಲ್ಲಿ ಅವಳಿಗೆ ಬಹಳ ಪ್ರೀತಿಯಿತ್ತು. ನಿನಗೆ ಗೊತ್ತಿದ್ದರೆ ಸೀತೆ ಎಲ್ಲಿದ್ದಾಳೆಂದು ಹೇಳು. ಎಲೈ ಬಿಲ್ವವೃಕ್ಷನೆ! ನೀನು ಸೀತೆಯನ್ನು ಕಂಡಿದ್ದರೆ ಹೇಳು. ಎಳೆಯ ಚಿಗುರಿನಂತೆ ಅವಳ ಮೈಬಣ್ಣವಿದೆ; ಹಳದಿಯ ರೇಷ್ಮೆಸೀರೆಯನ್ನುಟ್ಟಿದ್ದಳು; ನಿನ್ನ ಹಣ್ಣುಗಳಂತೆ ಅವಳ ಸ್ತನಗಳಿದ್ದವು. ಎಲೈ ಕರವೀರ, ನನ್ನ ಕಾಂತೆಯನ್ನು ಕಂಡೆಯಾ? ಅವಳಿಗೆ ಕರವೀರದ ಹೂಗಳನ್ನು ಕಂಡರೆ ಬಹಳೆ ಪ್ರೀತಿ. ಅವಳು ಜನಕಮಹಾರಾಜನ ಮಗಳು, ಸ್ವಲ್ಪ ಹೆದರುವ ಸ್ವಭಾವದವಳು. ಆ ಸೀತೆ ಬದುಕಿರುವಳೋ ಇಲ್ಲವೋ ಹೇಳು. ಆಹಾ! ಈ ಮತ್ತಿಯ ಮರಕ್ಕೆ ಮೈಥಿಲಿಯ ವಿಷಯ ಗೊತ್ತಿರಬೇಕು! ಏಕೆಂದರೆ ಈ ವೃಕ್ಷವು ಚಿಗುರೆಲೆ ಹೂಗಳಿಂದ ನಲಿಯುತ್ತಿದೆ. ಎಲೈ ಮರವೆ, ನನ್ನ ಸೀತೆಯ ತೊಡೆಗಳು ನಿನ್ನಂತೆ ಚೆಲುವಾಗಿದ್ದವು. ಓಹೋ! ಈ ಮರದ ಸುತ್ತಲೂ ದುಂಬಿಗಳು ಹಾಡುತ್ತಿವೆ ಈ ತಿಲಕವೃಕ್ಷಕ್ಕೆ ಸೀತೆಯ ವೃತ್ತಾಂತ ತಿಳಿದಿರಬಹುದು. ಓ ಮರವೆ! ನನ್ನ ಸೀತೆಗೆ ನಿನ್ನ ಹೂಗಳನ್ನು ಕಂಡರೆ ಬಹಳ ಆಸೆ. ಅಯ್ಯಾ ಆಶೋಕವೃಕ್ಷ! ಶೋಕವನ್ನು ಪರಿಹರಿಸುತ್ತೀಯೆಂದು ಹೆಸರು ಗಳಿಸಿದ್ದೀಯೆ. ನಾನು ಶೋಕದಿಂದ ದಿಕ್ಕುಗಾಣದೆ ಹೋಗಿದ್ದೇನೆ. ನನ್ನ ಪ್ರಿಯೆಯನ್ನು ತೋರಿಸಿ ನಿನ್ನಂತೆ ನನ್ನನ್ನೂ ಅಶೋಕನನ್ನಾಗಿ ಮಾಡು. ಓ ತಾಳೆಯಮರವೆ! ಮಾಗಿದ ತಾಳೆಯ ಹಣ್ಣುಗಳಂತೆ ಸ್ತನಗಳಿರುವ ಒಬ್ಬ ಸುಂದರಿಯನ್ನು ನೋಡಿದೆಯಾ? ನನ್ನಲ್ಲಿ ಮರುಕವಿದ್ದರೆ ಅವಳು

ಎಲ್ಲಿರುವಳೆಂದು ಹೇಳು. ಅಪ್ಪಾ, ನೇರಳೆಯ ಮರವೆ! ಬಂಗಾರದ ಮೈಬಣ್ಣವಿರುವ ನನ್ನ ಸೀತೆಯನ್ನು ಕಂಡೆಯಾ? ಗೊತ್ತಿದ್ದರೆ ನಿರ್ಭಯವಾಗಿ ಹೇಳು. ಓ, ಕಣಗಿಲೆಯ ಗಿಡವೆ! ಅಂದವಾದ ಹೂಗಳಿಂದ ಈ ದಿನ ಎಷ್ಟು ಚೆನ್ನಾಗಿ ಕಾಣುತ್ತಿದ್ದೀಯೆ! ನನ್ನ ಪ್ರಿಯೆಗೆ ಕಣಗಿಲೆ ಹೂಗಳಲ್ಲಿ ಬಹಳ ಅಭಿರುಚಿ, ನೀನು ಅವಳನ್ನು ನೋಡಿದೆಯಾ? ನೋಡಿದ್ದರೆ ಹೇಳು" ಎಂದು ಹಲುಬಿದ. ಹೀಗೆಯೇ ಮಾವು, ಈಚಲು, ಸಾಲ, ಹಲಸು, ಗೋರಂಟಿ, ದಾಳಿಂಬ, ಬಂಧೂಕ, ಬಕುಳ, ಪುನ್ನಾಗ, ಸಂಪಗೆ, ಕೇದಗೆ ಮುಂತಾದ ಗಿಡಮರಗಳನ್ನು ಕಂಡು ಸೀತೆಯ ವಿಷಯವನ್ನು ಕೇಳುತ್ತ ಶ್ರೀರಾಮನು ಹುಚ್ಚನಂತೆ ಅಲೆದಾಡಿದ. ಕಾಡಿನಲ್ಲಿ ಮೃಗಗಳನ್ನು ಕಂಡಾಗ ಅವುಗಳನ್ನೂ ಕೇಳಿದ: "ಎಲೈ ಹರಿಣವೇ, ಹರಿಣನೇತ್ರೆಯಾದ ಮೈಥಿಲಿಯನ್ನು ಬಲ್ಲೆಯಾ? ಅವಳು ನಿನ್ನಂತೆಯೇ ಚಂಚಲಾಕ್ಷಿ. ಹೆಣ್ಣು ಜಿಂಕೆಗಳೊಡನೆ ಆಡಲು ಹೋಗಿರಬಹುದೆ? ಓ ಗಜರಾಜ! ನಿನ್ನ ಸೊಂಡಿಲಂತೆ ಅವಳ ತೊಡೆಯಿದ್ದಿತು. ನೀನು ಅವಳನ್ನು ಕಂಡಿರಬಹುದೆಂದು ತಿಳಿದಿದ್ದೇನೆ. ನನ್ನ ಸೀತೆ ಎಲ್ಲಿದ್ದಾಳೆ ಹೇಳು. ಅಯ್ಯಾ ಹುಲಿರಾಯ! ಚಂದ್ರಮುಖಿಯಾದ ನನ್ನ ಕಾಂತೆಯ ಸುದ್ದಿಯೇನಾದರೂ ನಿನಗೆ ಗೊತ್ತೆ? ಮರೆಮಾಚದೆ ಹೇಳು, ಹೆದರಬೇಡ?" ಎಂದ. ಮತ್ತೆ ಭ್ರಾಂತಿಯಿಂದ ಹಲುಬಿದ: "ಆ! ಪ್ರಿಯೆ! ನಿನ್ನನ್ನು ನೋಡಿಬಿಟ್ಟೆ! ಏಕೆ ದೂರ ಓಡುವೆ? ಎಲೆ ಕಮಲೇಕ್ಷಣೆ! ಮರಗಳ ಹಿಂದೆ ಬಚ್ಚಿಟ್ಟುಕೊಳ್ಳುತ್ತೀಯಾ? ನನ್ನೊಡನೆ ಏಕೆ ಮಾತನಾಡೆ? ಏ ಚೆಲುವೆ! ನಿಲ್ಲು ನಿಲ್ಲು! ನನ್ನಲ್ಲಿ ನಿನಗೆ ಮರುಕ ಬೇಡವೆ? ನೀನು ಇಷ್ಟೊಂದು ಹಾಸ್ಯಮಾಡುತ್ತಿರಲಿಲ್ಲ, ಸೀತೆ! ನನ್ನನ್ನೇಕೆ ಉಪೇಕ್ಷಿಸುತ್ತೀಯೆ? ನೀನು ಓಡುವುದನ್ನು ನೋಡಿಬಿಟ್ಟೆ! ನನ್ನಲ್ಲಿ ಸ್ನೇಹವಿದ್ದರೆ ಅಲ್ಲಿಯೇ ನಿಲ್ಲು. ಅಯ್ಯೋ! ಅವಳು, ಸೀತೆಯಲ್ಲ. ಅವಳನ್ನು ಯಾರೋ ಕೊಂದುಹಾಕಿರಬೇಕು. ಅವಳು ನಕ್ಕರೆ ಎಷ್ಟು ಚೆನ್ನಾಗಿ ಕಾಣುತ್ತಿದ್ದಳು! ಈ ಸಂಕಟದಲ್ಲಿ ನಾನು ತೊಳಲುತ್ತಿದ್ದರೂ ನನ್ನನ್ನು ಉಪೇಕ್ಷಿಸುವಳೇ? ಇಲ್ಲ, ಮಾಂಸಾಹಾರಿಗಳಾದ ರಾಕ್ಷಸರು ಆ ಹುಡುಗಿಯನ್ನು ತಿಂದುದೇ ಹೌದು. ನಾನಿಲ್ಲದಾಗ ನನ್ನ ಇನಿಯಳನ್ನು ರಾಕ್ಷಸರು ಹಸಿದು ಹಿಸಿದು ತಿಂದಿರಬೇಕು. ಶುಭ್ರವಾದ ಅವಳ ಹಲ್ಲುಗಳೋ! ಅವಳ ತುಟಿಯೋ! ಅಂದವಾದ ಆ ಮೂಗೋ! ಹೊಳೆಯುವ ಕರ್ಣಕುಂಡಲಗಳೋ! ಪೂರ್ಣಚಂದ್ರನಂತಿರುವ ಆ ಮುಖವು ಎಷ್ಟು ಚೆಲುವಾಗಿತ್ತು! ರಾಕ್ಷಸರು ತಿನ್ನುವಾಗ, ಅಯ್ಯೋ, ಅದು ಕಾಂತಿಗುಂದಿ ಎಷ್ಟು ಸೊರಗಿತೋ ಏನೋ! ಅವಳ ಕೊರಳು ಎಷ್ಟು ಚೆನ್ನಾಗಿತ್ತು! ಸಂಪಿಗೆ ಹೂವಿನ ಬಣ್ಣ, ಮೇಲೆ ಮುಕ್ತಾಹಾರದ ಅಲಂಕಾರ! ನನ್ನ ಕಾಂತೆ ಗೋಳಾಡುತ್ತಿರುವಾಗ ಆ ಕೋಮಲವಾದ ಕೊರಳನ್ನು, ಅಯ್ಯೋ, ರಾಕ್ಷಸರು ಮುರಿದು ತಿಂದುಬಿಟ್ಟದ್ದಾರೆ. ಚಿಗುರಿನಂತೆ ಕೋಮಲವಾದ ಕೈಗಳನ್ನು ಆ ಸಮಯದಲ್ಲಿ ಹೇಗೆ ಹೇಗೆ ಕೊಡವಿದಳೋ! ಹವ್ವನೆ ಹೆದರಿ ಕೈಗಳು ಎಷ್ಟು ನಡುಗಿದವೋ! ಕೈಬಳೆ ಅಂಗದಗಳ ಸಹಿತ ಆ ರಾಕ್ಷಸರು ತೋಳುಗಳನ್ನು ತಿಂದಿದ್ದಾರೆ. ಆ ಬಾಲೆಯನ್ನು ರಾಕ್ಷಸರು ತಿನ್ನಲೆಂದೇ ನಾನು ಬಿಟ್ಟುಹೋದೆನೆ! ಬಂಧುಗಳಿದ್ದರೂ ಅಬಲೆಯಾದ ಹೆಂಗಸನ್ನು ದಾರಿಹೋಕರು ನಡುದಾರಿಯಲ್ಲಿ ಬಿಟ್ಟು ಹೋದಂತಾಯಿತು. ಹಾ ಮಹಾಬಾಹು! ಲಕ್ಷ್ಮಣಾ! ನಿನಗೆ ಎಲ್ಲಾದರೂ ಸೀತೆ ಕಾಣಿಸುವಳೆ? ಹಾ ಪ್ರಿಯೇ! ಸೀತೆ! ಎಲ್ಲಿ ಹೋದೆ?" ಎಂದು ಮತ್ತೆ

ಮತ್ತೆ ಗೋಳಾಡಿದ.

ಹೀಗೆ ಶ್ರೀರಾಮನು ಗೋಳಿಡುತ್ತ ವನದಿಂದ ವನಕ್ಕೆ ಧಾವಿಸುತ್ತಿದ್ದ. ಕೆಲವು ಕಡೆ ಭ್ರಾಂತಿಯಿಂದ ಸೀತೆಯನ್ನು ಕಂಡಂತಾಗಿ ಓಡುತ್ತಿದ್ದ. ಸೀತೆಯನ್ನು ಹೋಲುವ ಲತಾದಿಗಳನ್ನು ನೋಡಿ ಸೀತೆಯೆಂದು ಮರುಳಾಗುತ್ತಿದ್ದ. ಅವನು ತನ್ನ ಕಾಂತೆಯನ್ನು ಅರಸುತ್ತ ಹುಚ್ಚನಂತಾದ. ಒಂದೆಡೆಯೂ ನಿಲ್ಲದೆ ವನ, ನದಿ, ಬೆಟ್ಟ, ಬೆಟ್ಟದಲ್ಲಿ ಹರಿಯುವ ಹಳ್ಳ, ದುರ್ಗಮವಾದ ಅರಣ್ಯ – ಇವುಗಳಲ್ಲಿ ಅಲೆದ. ಈ ರೀತಿಯಲ್ಲಿ ಶ್ರೀರಾಮನು ಎಡಬಲದ ಸಕಲ ವನಪ್ರದೇಶಗಳನ್ನೂ ಹುಡುಕಿದ. ಎಲ್ಲಿಯೂ ಅವನ ಆಸೆ ಫಲಿಸಲಿಲ್ಲ. ಆದರೂ ತನ್ನ ಕಾಂತೆಯನ್ನು ಹುಡುಕುವುದಕ್ಕಾಗಿ ಆಯಾಸವನ್ನು ಗಣಿಸದೆ ಪ್ರಯತ್ನ ಮಾಡುತ್ತಿದ್ದ. ಆಶ್ರಮಪ್ರದೇಶವೂ ಪರ್ಣಶಾಲೆಯೂ ಸೀತಾರಹಿತವಾಗಿ ಶೂನ್ಯವಾಗಿರುವುದನ್ನೂ, ಪರ್ಣಶಾಲೆಯಲ್ಲಿ ಕುಳಿತುಕೊಳ್ಳುವ ಚಾಪೆ ಮುಂತಾದ ಉಪಕರಣಗಳು ಚಲ್ಲಾಪಿಲ್ಲಿಯಾಗಿರುವುದನ್ನೂ ಕಂಡು, ಶ್ರೀರಾಮನು ಜಾನಕಿಗಾಗಿ ಎಲ್ಲೆಡೆಯೂ ಚೆನ್ನಾಗಿ ಹುಡುಕಿ ನೋಡಿದ; ಎಲ್ಲಿಯೂ ಅವಳ ಸುಳಿವು ಕಾಣಲಿಲ್ಲ. ಅಗ ಶ್ರೀರಾಮನು ದುಃಖದಿಂದ 'ಸೀತೇ' ಎಂದು ಕೂಗಿ ಸುಂದರವಾದ ತನ್ನ ಬಾಹುಗಳನ್ನು ನೀಡಿ ಗೋಳಾಡಲಾರಂಭಿಸಿದ: "ಲಕ್ಷ್ಮಣ, ವೈದೇಹಿ ಎಲ್ಲಿರಬಹುದು? ಇಲ್ಲಿಂದ ಎಲ್ಲಿಗೆ ಹೋಗಿರಬಹುದು? ಯಾರಾದರೂ ಅಪಹರಿಸಿಕೊಂಡು ಹೋಗಿರಬಹುದೆ? ಲಕ್ಷ್ಮಣ, ಯಾರಾದರೂ ನನ್ನ ಕಾಂತೆಯನ್ನು ತಿಂದುಬಿಟ್ಟರಬಹುದೆ? ಹಾ ನಲ್ಲೆ, ಎಲ್ಲಾದರೂ ಮರದ ಹಿಂದೆ ಮರೆಯಾಗಿ ನಿಂತು ಹಾಸ್ಯಮಾಡಬೇಕೆಂದಿರುವೆಯಾ? ನಿನ್ನ ಹಾಸ್ಯ ಸಾಕು, ಬೇಗನೆ ಬಂದುಬಿಡು. ದುಃಖದಿಂದ ನೊಂದುಹೋಗಿದ್ದೇನೆ. ಸೀತೆ ಇಲ್ಲಿ ನೋಡು, ಈ ಜಿಂಕೆಯ ಮರಿಗಳು ನೀನಿಲ್ಲವೆಂದು ಕಣ್ಣೀರು ಸುರಿಸುತ್ತಿವೆ. ಸ್ನೇಹದಿಂದಿದ್ದ ಈ ಮರಿಗಳೊಡನೆ ಆಡುತ್ತಿದ್ದೆಯಲ್ಲ! ಲಕ್ಷ್ಮಣ, ಸೀತೆಯಿಲ್ಲದ ಮೇಲೆ ನಾನು ಬದುಕಲಾರೆ. ಸೀತಾಪಹರಣದಿಂದ ಜನಿಸಿದ ಮಹತ್ತರವಾದ ಈ ಶೋಕದಿಂದ ನಾನು ಸಾಯುತ್ತೇನೆ. ನನ್ನ ತಂದೆಯಾದ ಮಹಾರಾಜನು ಪರಲೋಕದಲ್ಲಿ ನನ್ನನ್ನು ನೋಡಿಯೇ ನೋಡುವನು. ಆಗ 'ಎಲೈ ರಾಮ, ನಾನು ನೇಮಿಸಿದಂತೆ ಪ್ರತಿಜ್ಞೆ ಮಾಡಿ ನೀನು ಕಾಡಿಗೆ ಹೋಗಿದ್ದೆಯಲ್ಲ. ಗೊತ್ತುಮಾಡಿದ ಕಾಲಾವಧಿಯು ಮುಗಿಯದೆ ನನ್ನ ಸಮೀಪಕ್ಕೆ ಬಂದೆಯಾ ನೀನು? ಮನಸ್ಸಿಗೆ ತೋರಿದಂತೆ ನಡೆಯತಕ್ಕವನು; ಅನಾರ್ಯ; ಅಸತ್ಯವಾದಿ; ನಿನಗೆ ಧಿಕ್ಕಾರ!' ಎಂಬುದಾಗಿ ನನ್ನ ತಂದೆ ಪರಲೋಕದಲ್ಲಿ ನನಗೆ ಹೇಳಿಯೇ ಹೇಳುವನು. ಓ ಸೀತೇ, ನನ್ನ ಕಾಂತೇ, ಎಲ್ಲಿ ಹೋದೆ? ನಿನ್ನನ್ನೇ ನಂಬಿದ್ದ ನಾನು ದಿಕ್ಕುತೋರದವನಾಗಿದ್ದೇನೆ, ಶೋಕಸಂತಪ್ತನಾಗಿದ್ದೇನೆ, ದೀನನಾಗಿದ್ದೇನೆ. ನನ್ನ ಆಸೆಯೆಲ್ಲ ಮಣ್ಣು ಪಾಲಾಯಿತು. ನನ್ನನ್ನು ಶೋಚನೀಯ ಸ್ಥಿತಿಯಲ್ಲಿ ಬಿಟ್ಟು ಹೋಗುವೆಯಾ? ಮೋಸಗಾರನನ್ನು ಕೀರ್ತಿದೇವತೆಯು ಬಿಟ್ಟುಹೋಗುವಂತೆ ಹೋಗುವೆಯಾ? ಸುಂದರಿ, ಎಲ್ಲಿಗೆ ಹೋಗುವೆ? ನನ್ನ ಕೈ ಬಿಡಬೇಡ. ನನ್ನನ್ನು ತ್ಯಜಿಸಿದರೆ ನಿಶ್ಚಯವಾಗಿಯೂ ನಾನು ಪ್ರಾಣವನ್ನು ಬಿಡುತ್ತೇನೆ" ಎಂದು ಸೀತಾದರ್ಶನಕ್ಕಾಗಿ ಹಾತೊರೆಯುತ್ತ ಶ್ರೀರಾಮನು ಗೋಳಾಡಿದ.

ಎಷ್ಟು ಅಲೆದರೂ ರಾಘವನಿಗೆ ಜಾನಕಿಯು ಗೋಚರಿಸಲಿಲ್ಲ. ಜಾನಕಿಯನ್ನು ಕಾಣದೆ

ಅವನು ಶೋಕದಲ್ಲಿ ಮುಳುಗಿದ. ಗಜರಾಜನು ಅಗಾಧವಾದ ಕೆಸರಿನಲ್ಲಿ ಸಿಕ್ಕಿಕೊಂಡಂತೆ ಪರಿತಪಿಸಿದ. ಆಗ ಲಕ್ಷ್ಮಣನು ಶ್ರೀರಾಮನ ಮನಸ್ಸಿಗೆ ಸಮಾಧಾನವಾಗಲೆಂದು ಉಚಿತವಾದ ರೀತಿಯಲ್ಲಿ ಹೀಗೆಂದ: "ಅಣ್ಣ, ನೀನು ವಿವೇಕಶಾಲಿ, ಹೀಗೆ ವಿಷಾದಪಡಬಾರದು. ಸೀತಾದೇವಿಯನ್ನು ನಾವಿಬ್ಬರೂ ಶ್ರಮವಹಿಸಿ ಹುಡುಕೋಣ, ಈ ಬೆಟ್ಟದ ವನದಲ್ಲಿ ಗುಹೆಗಳಂತೆ ದಟ್ಟವಾದ ಲತಾಗೃಹಗಳಿವೆ. ಸೀತಾದೇವಿಗೆ ವನದಲ್ಲಿ ಸಂಚರಿಸುವುದೆಂದರೆ ಬಹಳ ಪ್ರೀತಿ. ವನವನ್ನು ಕಂಡರೆ ಹರ್ಷದಿಂದ ಹಿಗ್ಗುತ್ತಾಳೆ. ಅವಳು ಈ ವನದೊಳಗೆ ಹೋಗಿರಬಹುದು, ಹೂಗಳು ಅರಳಿರುವ ತಾವರೆಯ ಕೊಳಕ್ಕೆ ಹೋಗಿರಬಹುದು, ಸೆಕೆಯನ್ನು ತಡೆಯಲಾರದೆ ಸ್ನಾನಕ್ಕಾಗಿ ನದಿಗೆ ಹೋಗಿದ್ದರೂ ಹೋಗಿರಬಹುದು. ಅಲ್ಲಿರುವ ಮೀನುಗಳನ್ನೂ, ವೇತಸ ಹುಲ್ಲುಗಳನ್ನೂ ನೋಡಿ ಸಂತೋಷಿಸುತ್ತಿರುವ ಸಂಭವವೂ ಉಂಟು. ಹಾಸ್ಯಕ್ಕಾಗಿ ಎಲ್ಲಾದರೂ ಅಡಗಿಕೊಂಡಿರುವಳೋ ಏನೋ! ಬೇಕೆಂದು ನಮ್ಮನ್ನು ಹೆದರಿಸುವುದಕ್ಕಾಗಿ ಕಾಡಿನಲ್ಲಿ ಅವಿತುಕೊಂಡಿದ್ದರೂ ಇರಬಹುದು. ನಾವು ಏನು ಮಾಡುತ್ತೇವೆಂದು ತಿಳಿಯುವ ಕುತೂಹಲದಿಂದ. ಹಾಗೆ ಮಾಡಿರಬಹುದು. ಪುರುಷೋತ್ತಮ ಶ್ರೀರಾಮ, ಸೀತಾದೇವಿಯನ್ನು ಅರಸಲು ತೀವ್ರವಾಗಿ ಪ್ರಯತ್ನಿಸೋಣ; ಈ ಅರಣ್ಯವನ್ನೆಲ್ಲ ಶೋಧಿಸೋಣ. ನಿನಗೆ ಯೋಗ್ಯವೆನಿಸಿದಂತೆ ಮಾಡೋಣ. ಅಣ್ಣ, ದುಃಖಿಸಬೇಡ" ಎಂದು ಸಂತೈಸಿದ. ಲಕ್ಷ್ಮಣನು ಸ್ನೇಹಪೂರ್ಣವಾಗಿ ಈ ಪ್ರಕಾರ ನುಡಿಯಲು, ಶ್ರೀರಾಮನ ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸಿತು.

ಅವನು ಲಕ್ಷ್ಮಣನೊಡನೆ ಮತ್ತೆ ಸೀತಾನ್ವೇಷಣೆಯಲ್ಲಿ ತೊಡಗಿದ. ಕಾಡು, ಬೆಟ್ಟ, ಹೊಳೆ ಕೊಳ – ಮುಂತಾದವುಗಳನ್ನೆಲ್ಲ ಆ ದಶರಥಾತ್ಮಜರು ಸಮಗ್ರವಾಗಿ ಅರಸಿದರು. ಸಮೀಪದಲ್ಲಿದ್ದ ಪರ್ವತದ ತಪ್ಪಲುಗಳನ್ನೂ ಗುಹೆಗಳನ್ನೂ ಶಿಖರಗಳನ್ನೂ ಶೋಧಿಸಿದರು. ಎಲ್ಲಿಯೂ ಸೀತೆ ಕಾಣಲಿಲ್ಲ. ಆ ಪರ್ವತವನ್ನೆಲ್ಲ ಸುತ್ತಿದ ಮೇಲೆ ಶ್ರೀರಾಮನು, "ಸೌಮಿತ್ರಿ, ಇಲ್ಲಿಯೂ ವೈದೇಹಿ ಕಾಣಿಸುವುದಿಲ್ಲ" ಎಂದ; ಲಕ್ಷ್ಮಣನಿಗೆ ದುಃಖ ಉಕ್ಕಿಬಂತು. ಅವನು. "ಅಣ್ಣ, ಮಹಾಪ್ರಾಜ್ಞನಾದ ನಿನಗೆ ನಾನೇನು ಹೇಳಬಲ್ಲೆ? ದಂಡಕಾರಣ್ಯವನ್ನೇ ಶೋಧಿಸೋಣ. ಮಹಾವಿಷ್ಣುವು ಬಲಿಚಕ್ರವರ್ತಿಯನ್ನೇ ಬಂಧಿಸಿ ಭೂದೇವಿಯನ್ನು ಪಡೆಯಲಿಲ್ಲವೆ? ಹಾಗೆ ನೀನು ನಿನ್ನ ಸಾಹಸದಿಂದ ಜನಕಪುತ್ರಿಯನ್ನು ಪಡೆಯುವೆ" ಎಂದ. ಲಕ್ಷ್ಮಣನು ಸ್ನೇಹದಿಂದ ಕರಗಿ ಆ ಮಾತನ್ನಾಡಿದ. ಶೋಕದಿಂದ ಶ್ರೀರಾಮನ ಚೈತನ್ಯ ಉಡುಗಿತ್ತು. ಅವನು ದೈನ್ಯದಿಂದ, "ಲಕ್ಷ್ಮಣ, ನೀನು ಮಹಾಪ್ರಾಜ್ಞನಲ್ಲವೇ? ವನವನ್ನು ಸಂಪೂರ್ಣವಾಗಿ ಹುಡುಕಿದೆವು, ತಾವರೆಯ ಕೊಳಗಳಲ್ಲಿ ಹುಡುಕಿದೆವು. ಈ ಬೆಟ್ಟದಲ್ಲಿರುವ ಗವಿಗಳನ್ನೂ ಗಿರಿನದಿಗಳನ್ನೂ ಅರಸಿದೆವು. ಎಲ್ಲಿಯೂ ಪ್ರಾಣಕಾಂತೆಯಾದ ವೈದೇಹಿ ದೊರೆಯಲಿಲ್ಲ" ಎಂದು ಗೋಳಾಡಿದ. ಸೀತಾಪಹರಣದಿಂದಾದ ದುಃಖವು ಅವನನ್ನು ಕಿತ್ತು ತಿನ್ನುತ್ತಿತ್ತು. ಅವನು ದೀನನಾಗಿ ಶೋಕದಲ್ಲಿ ಮುಳುಗಿದ; ಚೈತನ್ಯಗುಂದಿ ಪರವಶನಾದ. ಶ್ರೀರಾಮನ ಸರ್ವಾಂಗಗಳೂ ಸ್ವಾಧೀನ ತಪ್ಪಿ ಕುಸಿದವು; ಬುದ್ಧಿಗೆ ಮಬ್ಬು ಕವಿಯಿತು; ಶಕ್ತಿಯುಡುಗಿತು; ಚಿಂತೆ ಮುಸುಕಿತು. ಶ್ರೀರಾಮನು ದೈನ್ಯದಿಂದ ದೀರ್ಘವಾಗಿ ಬಿಸುಸುಯ್ದು ಹಾಗೆಯೇ ಕುಳಿತುಬಿಟ್ಟ. ಉಸ್ಸೆಂದು ಮತ್ತೆ ಮತ್ತೆ ಬಿಸುಸುಯ್ದ. ಅವನ

ಕಣ್ಣಲ್ಲಿ ನೀರುತುಂಬಿತು, ಗಂಟಲು ಬಿಗಿಯಿತು. ಆ ರಾಜೀವನೇತ್ರನು ಗದ್ಗದ ಧ್ವನಿಯಿಂದ "ಹಾ ಪ್ರಿಯೇ!" ಎಂದು ಕೂಗಿಕೊಂಡನು. ಆಗ ಭ್ರಾತೃವತ್ಸಲನಾದ ಲಕ್ಷ್ಮಣನು ಅಣ್ಣನನ್ನು ಬಹುವಿಧದಲ್ಲಿ ಸಂತೈಸತೊಡಗಿದ. ಆ ಧರ್ಮಜ್ಞನು ಕೈಮುಗಿದುಕೊಂಡು ಶ್ರೀರಾಮನನ್ನು ಅಷ್ಟು ಹತಾಶನಾಗಬಾರದೆಂದು ವಿನಯದಿಂದ ಬೇಡಿಕೊಂಡನು. ಆದರೆ ಲಕ್ಷ್ಮಣನ ಸಾಂತ್ವನವಾಕ್ಯಗಳನ್ನು ಶ್ರೀರಾಮನು ಗಮನಿಸಲಿಲ್ಲ. ತನ್ನ ಪ್ರಿಯಳಾದ ಸೀತೆಯು ಕಾಣದಾದಳೆಂದು ಅವನು ಮತ್ತೆ ಮತ್ತೆ ಗೋಳಾಡಿದ.

೨೭. ಲಕ್ಷ್ಮಣನೆದುರಿಗೆ ಶ್ರೀರಾಮನ ವಿಲಾಪ

ಧರ್ಮಾತ್ಮನಾದ ಶ್ರೀರಾಮನು ಸೀತಾವಿರಹದಿಂದ ದುಃಖದಲ್ಲಿ ಮುಳುಗಿಹೋದ. ಆಜಾನುಬಾಹುವಾದ ಆ ಕಮಲನೇತ್ರನು ಗೋಳಾಡತೊಡಗಿದ. ವಿರಹತಾಪದಿಂದ ವಿಷಣ್ಣನಾದ ರಾಘವನು ಸೀತೆಯಿಲ್ಲದಿದ್ದರೂ ಎದುರಿಗೆ ಸೀತೆಯನ್ನು ಕಂಡಂತೆ ವರ್ಣಿಸಲಸದಳವನಾದ ರೀತಿಯಲ್ಲಿ ಹಲುಬಲಾರಂಭಿಸಿದ: "ಓ ಪ್ರಿಯೇ, ಅಶೋಕವೃಕ್ಷದ ಹಿಂದೆ ಕೊಂಬೆಗಳ ಹಿಂದೆ ಬಚ್ಚಿಟ್ಟುಕೊಳ್ಳುವೆಯಾ! ಹೂಗಳು ನಿನಗೆ ಅಷ್ಟು ಪ್ರಿಯವಾದುವಲ್ಲವೇ? ನನ್ನ ದುಃಖ ಹೆಚ್ಚುವುದಿಲ್ಲವೇ? ಬಾಳೆಯಗಿಡದ ಹಿಂದೆ ಅಡಗಿದರೇನಾಯಿತು? ಬಾಳೆಯ ದಿಂಡಿನಂತಿರುವ ನಿನ್ನ ತೊಡೆಗಳೆರಡೂ ಕಾಣುತ್ತಿವೆ! ಸೀತೆ ನೀನು ಅವಿತುಕೊಳ್ಳಲಾರೆ! ಭದ್ರೆ, ನಗುನಗುತ್ತ ಕಣಗಿಲೆ ಗಿಡಗಳ ಹಿಂದೆ ನಿಂತಿರುವೆಯಾ? ನಿನ್ನ ತಮಾಷೆ ಸಾಕು. ನನಗೆ ಸಂಕಟವಾಗುತ್ತಿದೆ. ಓ ಕಾಂತೇ, ಬಹಳ ಬಳಲಿಹೋಗಿದ್ದೇನೆ. ಈಗ ನನಗೆ ಹಾಸ್ಯ ಬೇಕಾಗಿದೆಯೆ? ದೇವಿ, ಈ ಬಗೆಯ ಹಾಸ್ಯ ನನಗೆ ರುಚಿಸುವುದಿಲ್ಲ; ಆಶ್ರಮದಲ್ಲಿರುವಾಗ ಇಷ್ಟು ಹಾಸ್ಯ ಒಳ್ಳೆಯದಲ್ಲ. ಪ್ರಿಯೇ, ನಿನ್ನದು ಬಹಳ ಹಾಸ್ಯಸ್ವಭಾವವೆಂಬುದು ನನಗೆ ಗೊತ್ತು. ವಿಶಾಲಾಕ್ಷಿ, ಬೇಗ ಬಂದುಬಿಡು! ನೀನಿಲ್ಲದೆ ನಮ್ಮ ಪರ್ಣಶಾಲೆ ಬಿಮ್ಮನಿಸುತ್ತಿದೆ! ಅಯ್ಯೋ! ಲಕ್ಷ್ಮಣ, ಸೀತೆಯನ್ನು ರಾಕ್ಷಸರು ತಿಂದುಹಾಕಿರುವುದು ನಿಶ್ಚಯ. ಅಥವಾ ಅವಳನ್ನು ರಾಕ್ಷಸರು ಎಲ್ಲಿಗೋ ಅಪಹರಿಸಿಕೊಂಡು ಹೋಗಿದ್ದಾರೆ; ಇಲ್ಲದ್ದಿದರೆ ನಾನು ಇಷ್ಟು ಗೋಳಾಡುತ್ತಿದ್ದರೂ ಬರದೆ ಇರುತ್ತಿದ್ದಳೇ? ಲಕ್ಷ್ಮಣ ಅಲ್ಲಿ ನೋಡು, ಜಿಂಕೆಗಳು ಕಣ್ಣೀರು ಸುರಿಸುತ್ತಿವೆ. ರಾಕ್ಷಸರು ವೈದೇಹಿಯನ್ನು ತಿಂದುಬಿಟ್ಟಿದ್ದಾರೆಂದು ಅವು ಹೇಳುವಂತೆ ಕಾಣಿಸುತ್ತಿಲ್ಲವೆ? ಹಾ! ನನ್ನ ಆರಾಧ್ಯದೇವತೆ! ಎಲ್ಲಿ ಹೋದೆ? ಹಾ! ಸಾಧ್ವಿ, ಮನೋಹರೆ. ಆಹಾ! ಕೈಕೇಯೀದೇವಿಯ ಅಪೇಕ್ಷೆ ಇಂದಿಗೆ ಕೈಗೂಡುವುದು! ನಾನು ಬರುವಾಗ ಸೀತೆಯೊಡನೆ ಹೊರಟುಬಂದೆ. ಈಗ ಸೀತೆಯಿಲ್ಲದೆ ಹೇಗೆ ಅಯೋಧ್ಯೆಗೆ ಹೋಗಲಿ? ಶೂನ್ಯವಾದ ಅಂತಃಪುರವನ್ನು ಹೇಗೆತಾನೆ ಪ್ರವೇಶಿಸಲಿ? 'ಇವನೊಬ್ಬ ಕೈಲಾಗದವನು, ನಿರ್ದಯ' ಎಂದು ಜನರು ನನ್ನನ್ನು ನೋಡಿ ಅಣಕಿಕೊಳ್ಳುವರು. ಸೀತೆಯನ್ನು ಕಳೆದುಕೊಂಡದ್ದರಿಂದ ನಾನು ಕೈಲಾಗದವನೆಂಬುದು ಸ್ಪಷ್ಟವಾಯಿತು. ವನವಾಸವು ಕಳೆದ ಮೇಲೆ ಮಿಥಿಲಾಧಿಪತಿಯಾದ ಜನಕಮಹಾರಾಜನನ್ನು ಹೇಗೆ ನೋಡಲಿ? ಆತನು ಕುಶಲಪ್ರಶ್ನೆಯನ್ನು ಕೇಳುವಾಗ ತಲೆಯೆತ್ತಿ ಹೇಗೆ ತಾನೇ

ಅವನನ್ನು ನೋಡಲಿ? ಸೀತೆಯಿಲ್ಲದೆ ನಾನು ಒಂಟಿಯಾಗಿರುವುದನ್ನು ಜನಕರಾಜನು ಕಂಡ ಕೂಡಲೇ, ಅಯ್ಯೋ, ತನ್ನ ಮಗಳಲ್ಲಿರುವ ವಾತ್ಸಲ್ಯದಿಂದ ನೊಂದು ಕಂಗೆಟ್ಟು ಆತನು ಮೂರ್ಛೆಹೋಗುವುದೇ ನಿಶ್ಚಯ. ಅಥವಾ ನಾನು ಅಯೋಧ್ಯೆಗೆ ಹೋಗುವುದೇ ಇಲ್ಲ. ಹೇಗೂ ಭರತನು ಅದನ್ನು ಪಾಲಿಸಿಕೊಂಡಿದ್ದಾನೆ. ಸೀತೆಯಿಲ್ಲದಿದ್ದರೆ ಸ್ವರ್ಗವೂ ನನಗೆ ಶೂನ್ಯವಾಗಿ ತೋರುವುದು. ಲಕ್ಷ್ಮಣ, ನನ್ನನ್ನು ಇಲ್ಲಿಯೇ ಕಾಡುಪಾಲಾಗಿ ಬಿಟ್ಟು ನೀನು ಅಯೋಧ್ಯೆಗೆ ಹೊರಟುಹೋಗು! ನಾನು ಸೀತಾವಿಯುಕ್ತನಾದಮೇಲೆ ಹೇಗಿದ್ದರೂ ಬದುಕುವುದಿಲ್ಲ. ಲಕ್ಷ್ಮಣ, ಭರತನನ್ನು ಗಾಢವಾಗಿ ಅಪ್ಪಿಕೊಂಡು, ಈ ಮಾತನ್ನು ನಾನು ಹೇಳಿದ್ದೇನೆಂದು, 'ಭರತ, ರಾಮನು ನಿನಗೆ ಅನುಜ್ಞೆಯನ್ನಿತ್ತಿದ್ದಾನೆ, ಇನ್ನು ಮೇಲೆ ನೀನು ರಾಜ್ಯವನ್ನು ಪಾಲಿಸು' ಎಂದು ಹೇಳು, ಅಪ್ಪಾ ಲಕ್ಷ್ಮಣ, ತಾಯಂದಿರಾದ ಕೈಕೇಯಿ, ಸುಮಿತ್ರೆ, ಕೌಸಲ್ಯೆ ಇವರಿಗೆ ಕ್ರಮವರಿತು ನನ್ನ ನಮಸ್ಕಾರಗಳನ್ನು ತಿಳಿಸು. ಅವರು ಹೇಳಿದಂತೆ ನಡೆಯುತ್ತ ಅವರ ಯೋಗಕ್ಷೇಮಗಳನ್ನು ನೋಡಿಕೊ; ಇದು ನನ್ನ ಆಜ್ಞೆಯೆಂದು ತಿಳಿ. ಸೀತೆಯು ನಾಶವಾದ ವೃತ್ತಾಂತವನ್ನು, ಲಕ್ಷ್ಮಣ, ನನ್ನ ಅಮ್ಮನಿಗೆ ವಿಸ್ತಾರವಾಗಿ ಬಿಡಿಸಿ ಹೇಳು" ಎಂದು ಗೋಳಾಡಿದ.

ಹೀಗೆ ರಾಘವನು ಸೀತಾವಿಯುಕ್ತನಾಗಿ ಅತ್ಯಂತ ದೈನ್ಯದಿಂದ ಅರಣ್ಯದಲ್ಲಿ ಶೋಕಿಸುತ್ತಿದ್ದ. ಅವನ ಸ್ಥಿತಿಯನ್ನು ಕಂಡು ಲಕ್ಷ್ಮಣನಿಗೆ ಭಯವಾಯಿತು, ಮುಖವು ಬಾಡಿತು, ಮನಸ್ಸನ್ನು ವ್ಯಥೆಯು ಆವರಿಸಿತು. ಲಕ್ಷ್ಮಣನು ತಲ್ಲಣಗೊಂಡು ಚಿಂತಾಕ್ರಾಂತನಾದ. ರಾಜಕುಮಾರನಾದ ಶ್ರೀರಾಮನಿಗೆ ಕಾಂತಾವಿಯೋಗದಿಂದ ಶೋಕ ಉಲ್ಬಣಿಸಿತು. ವ್ಯಥೆಯಲ್ಲಿ ಮುಳುಗಿದ ಲಕ್ಷ್ಮಣನಿಗೆ ಶ್ರೀರಾಮನು ವ್ಯಸನದಿಂದ ಮತ್ತೆ ಹೇಳಲಾರಂಭಿಸಿದ; ಕಣ್ಣೀರು ಮಿಡಿಯುತ್ತ ಬಿಸುಸುಯ್ದು ಅವನು ಹೀಗೆಂದ: "ಲಕ್ಷ್ಮಣ, ಈ ಜಗತ್ತಿನಲ್ಲಿ ನನ್ನಂತಹ ದುಷ್ಕರ್ಮಿಯು ಇನ್ನೊಬ್ಬನಿಲ್ಲ; ಒಂದಾದ ಮೇಲೆ ಒಂದರಂತೆ ಶೋಕಪ್ರಸಂಗವು ನನ್ನಮೇಲೆ ಹೇಗೆ ಬಂದೆರಗುತ್ತಿದೆ ನೋಡು! ಹೃದಯವನ್ನು ಭೇದಿಸುವ, ಮನಸ್ಸನ್ನು ಕತ್ತರಿಸುವ ಶೋಕಪರಂಪರೆಗಳು. ಪೂರ್ವಜನ್ಮದಲ್ಲಿ ನಾನು ಎಷ್ಟು ಪಾಪಕೃತ್ಯಗಳನ್ನು ಮಾಡಿರುವೆನೋ! ಉದ್ದೇಶಪೂರ್ವಕವಾಗಿ ಮತ್ತೆ ಮತ್ತೆ ಪಾಪಕೃತ್ಯಗಳನ್ನು ಆಚರಿಸಿರಬೇಕು. ಅವುಗಳು ಈಗ ಫಲವನ್ನು ನೀಡಲಾರಂಭಿಸಿವೆ. ಆದ್ದರಿಂದ ಒಂದರ ಹಿಂದೆ ಇನ್ನೊಂದು ದುಃಖವನ್ನು ಅನುಭವಿಸುತ್ತಿದ್ದೇನೆ. ಮೊದಲು ರಾಜ್ಯವು ತಪ್ಪಿತು, ಬಂಧುಗಳನ್ನು ಅಗಲಿದೆ, ತಂದೆಯ ಮರಣವಾಯಿತು, ತಾಯಿಯನ್ನು ಬಿಟ್ಟು ಬಂದೆ. ಲಕ್ಷ್ಮಣ ಇವುಗಳನ್ನು ಚಿಂತಿಸಿದರೆ ನನ್ನ ಶೋಕವು ಉಕ್ಕಿಹರಿಯುವುದು. ಅರಣ್ಯಕ್ಕೆ ಬಂದ ಮೇಲೆ ಆ ದುಃಖವೆಲ್ಲವೂ ನನ್ನ ದೇಹದಲ್ಲಿ ಅಡಗಿ ಶಾಂತವಾಗಿತ್ತು. ಈಗ ಸೀತಾವಿಯೋಗದಿಂದ ಅದೆಲ್ಲವೂ ಭುಗಿಲ್ ಎಂದು ಮತ್ತೆ ಮೇಲೆದ್ದಿವೆ. ಒಣ ಕಟ್ಟಿಗೆಗಳನ್ನು ಹಾಕಿದರೆ ಬೆಂಕಿ ಧಗ್ಗನೆ ಹತ್ತಿಕೊಳ್ಳುವಂತಾಯಿತು. ನನ್ನ ಸೀತೆಯನ್ನು ರಾಕ್ಷಸನು ಬಲಾತ್ಕಾರದಿಂದ ಆಕಾಶಮಾರ್ಗದಲ್ಲಿ ಕೊಂಡೊಯ್ದಿದ್ದಾನೆ. ಭೀರುಸ್ವಭಾವದ ಆ ದೇವಿಯು ಹೆದರಿ ಅದೆಷ್ಟು ಅತ್ತಳೋ! ಎಷ್ಟು ಕೂಗಿಕೊಂಡಳೋ! ಮನೋಹರವಾದ ಕೆಂಪುಬಣ್ಣದ ಹರಿಚಂದನದಿಂದ ಚೆಲುವಾಗಿದ್ದ ಅವಳ ವರ್ತುಲಸ್ತನಗಳು ರಾಕ್ಷಸನು

ಅವಳನ್ನು ಕಚ್ಚಿದಾಗ ರಕ್ತದಿಂದ ತೊಯ್ದು ಹೋಗಿರಬೇಕು. ಅಯ್ಯೋ! ನನಗೆ ಇನ್ನೂ ಸಾವು ಬರಲಿಲ್ಲ. ಅವಳು ಎಷ್ಟು ಮಧುರವಾಗಿ, ಸ್ಪಷ್ಟವಾಗಿ, ಮೃದುವಾಗಿ ಮಾತನಾಡುತ್ತಿದ್ದಳು; ಮುಖದ ಮೇಲೆ ಗುಂಗುರುಗುಂಗುರಾದ ಮುಂಗುರುಳು ಹೇಗೆ ಸುಳಿದಾಡುತ್ತಿತ್ತು! ರಾಕ್ಷಸರ ಕೈಗೆ ಸಿಕ್ಕಿದಾಗ ಆ ಮುಖವು ಹೇಗಾಗಿರಬಹುದು? ರಾಹುವಿನ ಬಾಯಿಗೆ ಸಿಕ್ಕಿದ ಚಂದ್ರನಂತಾಗಿರಬಹುದು. ಸಾಧ್ವಿಯಾದ ನನ್ನ ಕಾಂತೆಯ ಕೊರಳಲ್ಲಿ ಸದಾ ಮುತ್ತಿನ ಸರವು ಶೋಭಿಸುತ್ತಿತ್ತು. ನಾನಿಲ್ಲದಾಗ ರಾಕ್ಷಸರು ಬಂದು ಆ ಕೊರಳನ್ನು ಕಚ್ಚಿ ರಕ್ತವನ್ನು ಹೀರಿಬಿಟ್ಟದ್ದಾರೆ. ಅಥವಾ ನಿರ್ಜನವಾದ ವನದಲ್ಲಿ ಅವಳನ್ನು ದರದರನೆ ಎಳೆದು ಕೊಂಡುಹೋಗಿರುವುದೇ ಹೌದು. ಅಗ ದಿಕ್ಕಿಲ್ಲದೆ ಎಷ್ಟು ದೈನ್ಯದಿಂದ ಅವಳು ಮರಕುಟಿಗನಂತೆ ಕೂಗಿಕೊಂಡಳೊ! ನಾನು ಸಹಾಯಕ್ಕೆ ಬಂದೇನೆಂದು ಕಣ್ಣರಳಿಸಿ ಎಷ್ಟು ನೋಡಿದಳೋ! ಇದೇ ಬಂಡೆಯ ಮೇಲೆ ನನ್ನೊಡನೆ ಮೋಹಕವಾಗಿ ನಸುನಗುತ್ತ ಆ ಸುಶೀಲೆ ಕುಳಿತಿರುತ್ತಿದ್ದಳು. ಲಕ್ಷ್ಮಣ, ಸೀತೆ ಇಲ್ಲಿ ಕುಳಿತು ವಿನೋದವಾಗಿ ನಿನ್ನೊಂದಿಗೆ ಹರಟುತ್ತಿದ್ದಳಲ್ಲವೆ? ಶ್ರೇಷ್ಠವಾದ ಈ ಗೋದಾವರೀ ನದಿಯಲ್ಲಿ ನನ್ನ ಕಾಂತೆಗೆ ಬಹಳ ಪ್ರೀತಿ. ಸೀತೆ ಅಲ್ಲಿಗೇನಾದರೂ ಹೋಗಿರಬಹುದೇ ಎಂದು ಅನುಮಾನ; ಆದರೆ ನನ್ನನ್ನು ಬಿಟ್ಟು ಒಬ್ಬಂಟಿಯಾಗಿ ಅವಳು ಎಂದೂ ಅಲ್ಲಿಗೆ ಹೋಗುತ್ತಿರಲಿಲ್ಲ. ಆ ಕಮಲಮುಖಿಗೆ, ಕಮಲನಯನೆಗೆ ಕಮಲಗಳ ಮೇಲೆ ತುಂಬ ಪ್ರೇಮ! ಅವಳು ಕಮಲಗಳನ್ನು ತರಲು ತಾವರೆಯ ಕೊಳಕ್ಕೆ ಹೋಗಿರಬಹುದೇ? ಉಹ್ಞೂ, ಹೋಗಿರಲಾರಳು, ನಾನಿಲ್ಲದೆ ಅವಳು ಕಮಲಗಳನ್ನು ತರಲು ಹೋಗುತ್ತಲೇ ಇರಲಿಲ್ಲ. ಆ ವನದಲ್ಲಿ ಕಾಣುವ ಮರಗಳು ಚೆನ್ನಾಗಿ ಅರಳಿರುವುದೇನೋ ದಿಟ. ನಾನಾಬಗೆಯ ಹಕ್ಕಿಗಳು ಹಾರಾಡುತ್ತಿವೆ; ಸೀತೆ ಅಲ್ಲಿಗೆ ಹೋಗಿರಬಹುದೇ, ಇರಲಾರದು! ಅವಳು ಭಯಶೀಲೆ, ಒಂಟಿಯಾಗಿ ಹೋಗಲು ಬಹಳ ಅಂಜುವವಳು. ಹೇ ಸೂರ್ಯದೇವ! ಲೋಕದ ಕೃತ್ಯಾಕೃತ್ಯಗಳೆಲ್ಲವೂ ನಿನಗೆ ತಿಳಿಯುತ್ತವೆ. ಜನರಾಡುವ ಸತ್ಯ–ಸುಳ್ಳುಗಳೆಲ್ಲವೂ ನಿನಗೆ ಗೋಚರ, ಕರ್ಮಸಾಕ್ಷಿ ನೀನು. ನನ್ನ ಪ್ರಿಯಳು ಎಲ್ಲಿ ಹೋಗಿದ್ದಾಳೆ, ಹೇಳು. ಯಾರಾದರೂ ಅವಳನ್ನು ಅಪಹರಿಸಿದರೆ? ಶೋಕಾರ್ತನಾಗಿದ್ದೇನೆ. ನೀನಾದರೂ ಹೇಳು. ಓ ಮಾರುತ! ಮೂರುಲೋಕಗಳಲ್ಲಿಯೂ ನಿನಗೆ ಗೊತ್ತಾಗದ ವಿಷಯವಿಲ್ಲ. ಸತ್ಕುಲಪ್ರಸೂತೆಯಾದ ನನ್ನ ಕುಲವಧು ಎಲ್ಲಿರುವಳು, ಹೇಳು. ಅಪಹೃತಳಾಗಿರುವಳೇ? ಮೃತಳಾದಳೇ? ದಾರಿಹಿಡಿದು ಬರುತ್ತಿರುವಳೇ?"

ಈ ರೀತಿಯಲ್ಲಿ ಶ್ರೀರಾಮನು ಶೋಕವಶನಾಗಿ ಪ್ರಜ್ಞೆಯಿಲ್ಲದೆ ಹಲುಬುತ್ತಿದ್ದ. ಆಗ ಧೈರ್ಯಶಾಲಿಯೂ ನ್ಯಾಯಮಾರ್ಗನಿರತನೂ ಆದ ಸೌಮಿತ್ರಿಯು ಕಾಲೋಚಿತವಾದ ಸಮಾಧಾನದ ಮಾತುಗಳನ್ನು ಹೇಳಿದ: "ಅಣ್ಣ, ದುಃಖಿಸಬೇಡ, ಮನಸ್ಸಿಗೆ ಧೈರ್ಯವನ್ನು ತಂದುಕೊ. ಸೀತಾದೇವಿಯನ್ನು ಹುಡುಕುವ ಉತ್ಸಾಹ ಹೆಚ್ಚಲಿ. ಉತ್ಸಾಹಶಕ್ತಿಯುಳ್ಳ, ಪುರುಷರು ದುಷ್ಕರಕಾರ್ಯಗಳನ್ನೂ ಸಾಧಿಸದೆ ಇರುವುದಿಲ್ಲ" ಎಂದ. ಹೀಗೆ ಪೌರುಷದಲ್ಲಿ ಅತಿಶಯವಾದ ನಿಷ್ಠೆಯುಳ್ಳ ಸೌಮಿತ್ರಿಯು ಸಂತೈಸುವ ಮಾತನ್ನು ಹೇಳುತ್ತಿದ್ದರೂ ರಘುವಂಶತಿಲಕನು ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ದುಃಖಾರ್ತನಾಗಿ ಮನಃಸ್ಥೈರ್ಯವನ್ನು ಕಳೆದುಕೊಂಡು ಮಹತ್ತರವಾದ ಶೋಕದಲ್ಲಿ ಮುಳುಗಿದ.

೨೮. ದಾರಿಯಲ್ಲಿನ ಗುರುತುಗಳಿಂದ ಸೀತೆಯು ಅಪಹೃತಳಾಗಿರುವುದನ್ನು ನಿಶ್ಚೈಸುವುದು; ರಾಮನ ವೀರಾವೇಶ

ಅನಂತರ ಶ್ರೀರಾಮನು ಲಕ್ಷ್ಮಣನನ್ನು ನೋಡಿ ದೈನ್ಯದಿಂದ, "ಲಕ್ಷ್ಮಣ, ಗೋದಾವರೀನದಿಗೆ ಹೋಗಿ ಇನ್ನೊಮ್ಮೆ ನೋಡಿ ಬಾ! ಬೇಗನೆ ಹೋಗಿ ಬಾ. ತಾವರೆಗಳನ್ನು ತರುವುದಕ್ಕಾಗಿ ಸೀತೆ ಅಲ್ಲಿಗೆ ಹೋಗಿರಬಹುದೇನೋ!" ಎಂದ. ಲಕ್ಷ್ಮಣನು ಮತ್ತೆ ಗೋದಾವರೀ ನದಿಗೆ ಹೊರಟ. ಅವನು ತ್ವರೆಯಿಂದ ಬೇಗಬೇಗನೆ ಹೆಜ್ಜೆಯಿಡುತ್ತ ಹೋಗಿ, ನದಿಗೆ ಇಳಿಯಬಹುದಾದ ಸ್ಥಳವೆಲ್ಲವನ್ನೂ ಹುಡುಕಿ ಬಂದು ಶ್ರೀರಾಮನಿಗೆ, "ಅಣ್ಣಾ, ನದಿಗೆ ಮೆಟ್ಟಿಲುಗಳಿರುವ ಪ್ರದೇಶವೆಲ್ಲವನ್ನೂ ಹುಡುಕಿದೆ; ಕೂಗಿ ಕರೆದರೂ ಉತ್ತರವಿಲ್ಲ. ವೈದೇಹಿಯು ಎಲ್ಲಿಗೆ ಹೋಗಿರಬಹುದು? ಅವಳು ಕಾಣಿಸಿದರೆ ಮಾತ್ರ ನಮ್ಮ ಶ್ರಮ ಸಾರ್ಥಕವಾಗುವುದು. ಶ್ರೀರಾಮ, ಆಕೆ ಎಲ್ಲಿರಬಹುದೆಂಬುದು ನನ್ನ ಊಹೆಗೆ ನಿಲುಕದು" ಎಂದು ಹೇಳಿದ. ಲಕ್ಷ್ಮಣನ ಮಾತನ್ನು ಕೇಳಿ ಶ್ರೀರಾಮನ ವ್ಯಥೆ ಹೆಚ್ಚಿತು. ಅವನು ಕಂಗೆಟ್ಟು ಪುನಃ ಗೋದಾವರೀನದಿಯ ಕಡೆಗೆ ತಾನೇ ಹೊರಟು ನದಿಯನ್ನು ಸಮೀಪಿಸಿ, "ಓ ಗೋದಾವರೀನದಿಯೆ, ಸೀತೆ ಎಲ್ಲಿದ್ದಾಳೆ?" ಎಂದು ಕೇಳಿದ. ಆಗ ವಧಾರ್ಹನಾದ ರಾವಣನು ಸೀತಾದೇವಿಯನ್ನು ಅಪಹರಿಸಿದ್ದಾನೆಂಬುದು ಗೊತ್ತಿದ್ದರೂ, ವನದೇವತೆಗಳೇ ಮೊದಲಾದ ದೇವಯೋನಿಗಳು ಆ ವಿಷಯವನ್ನು ಶ್ರೀರಾಮನಿಗೆ ಹೇಳಲಿಲ್ಲ; ಗೋದಾವರೀನದಿಯೂ ಹೇಳಲಿಲ್ಲ. ಆ ದೇವತೆಗಳು, "ಎಲೌ ಗೋದಾವರಿ, ಶ್ರೀರಾಮನಿಗೆ ಆತನ ಪ್ರಿಯಾವೃತ್ತಾಂತವನ್ನು ಹೇಳು!" ಎಂದರು. ಶೋಕಾರ್ತನಾದ ಶ್ರೀರಾಮನು ಹೇಳಿದರೂ ಗೋದಾವರಿಯು ಸೀತೆಯ ಸುದ್ದಿಯನ್ನು ಹೇಳಲಿಲ್ಲ! ರಾವಣನ ಘೋರಾಕೃತಿಯನ್ನೂ ಆ ದುರಾತ್ಮನ ಕ್ರೂರಕೃತ್ಯಗಳನ್ನೂ ನೆನೆಸಿಕೊಂಡು ಗೋದಾವರಿಯು ತಲ್ಲಣಿಸಿದಳು! ಆತನ ಭಯದಿಂದ ಆ ನದೀದೇವತೆಯು ವೈದೇಹಿಯ ವಾರ್ತೆಯನ್ನು ಹೊರಗೆಡವಲಿಲ್ಲ! ಆ ನದಿಯ ಮೌನದಿಂದ ಶ್ರೀರಾಮನಿಗೆ ನಿರಾಸೆಯಾಯಿತು. ಸೀತಾದರ್ಶನಕ್ಕಾಗಿ ಹಾತೊರೆಯುತ್ತಿದ್ದ ಆತನು, "ವತ್ಸ, ಈ ಗೋದಾವರಿಯು ಯಾವ ಉತ್ತರವನ್ನೂ ಹೇಳುವುದಿಲ್ಲ. ಜನಕಮಹಾರಾಜನನ್ನು ಕಂಡಾಗ ನಾನು ಏನು ಹೇಳಲಿ, ಲಕ್ಷ್ಮಣ? ನನ್ನ ತಾಯಿಗೆ ಏನು ಹೇಳಲಿ? ವೈದೇಹಿಯಿಲ್ಲವೆಂಬ ಕೆಟ್ಟಸುದ್ದಿಯನ್ನು ಹೇಗೆ ತಿಳಿಸಲಿ? ರಾಜ್ಯಭ್ರಷ್ಟನಾಗಿ ನಾನು ಕಾಡಿಗೆ ಬಂದೆ; ವನ್ಯಾಹಾರದಿಂದ ಹೊಟ್ಟೆಹೊರೆದುಕೊಂಡಿದ್ದೆ. ವೈದೇಹಿಯು ನನ್ನ ಶೋಕವೆಲ್ಲವನ್ನೂ ಹೋಗಲಾಡಿಸಿದ್ದಳು. ಅವಳು ಎಲ್ಲಿ ಹೋದಳೋ! ಇಲ್ಲಿ ಬಂಧುಗಳಿಲ್ಲ, ಮಿತ್ರರಿಲ್ಲ. ಈಗ ಆ ರಾಜಪುತ್ರಿಯೂ ಕಾಣದಾದಳು. ಇನ್ನುಮೇಲೆ ನನಗೆ ನಿದ್ರೆಯಿಲ್ಲದೆ ರಾತ್ರಿಗಳು ದೀರ್ಘವಾಗಿ ಪರಿಣಮಿಸುತ್ತವೆ! ಸೀತೆಯು ದೊರಕುವುದಾದರೆ ಮಂದಾಕಿನೀ ನದಿ, ಜನಸ್ಥಾನ, ಪ್ರಸ್ರವಣಗಿರಿ – ಇವೆಲ್ಲವನ್ನೂ ಹುಡುಕುತ್ತ ಸುತ್ತುತ್ತೇನೆ. ಲಕ್ಷ್ಮಣ, ಬಲಶಾಲಿಗಳಾದ ಈ ಮೃಗಗಳು ನನ್ನನ್ನು ಮತ್ತೆಮತ್ತೆ ನೋಡುತ್ತಿವೆ. ಇವುಗಳ ಇಂಗಿತಗಳನ್ನು ಗಮನಿಸಿದರೆ ನನಗೆ ಏನನ್ನೋ ಹೇಳಬೇಕೆಂದಿರುವಂತೆ ಕಾಣುತ್ತದೆ" ಎಂದ. ಕಣ್ಣೀರು ಉಕ್ಕಿ ಮಾತು ತೊದಲುತ್ತಿರಲು, ಶ್ರೀರಾಮನು ಆ ಮೃಗಗಳನ್ನು ನೋಡುತ್ತ, "ಮೃಗಗಳೆ, ಸೀತೆ ಎಲ್ಲಿ?" ಎಂದು ಕೇಳಿದ.

ಕೂಡಲೇ ಆ ಮೃಗಗಳು ದಕ್ಷಿಣದಿಕ್ಕಿಗೆ ಹೊರಟವು. ಮೈಥಿಲಿಯನ್ನು ಯಾವ ದಿಕ್ಕಿಗೆ ಹೊತ್ತೊಯ್ದನೋ ಆ ದಕ್ಷಿಣದಿಕ್ಕಿಗೆ ಎದುರಾಗಿ, ಆಕಾಶವನ್ನು ತೋರಿಸುತ್ತ ಓಡಿದವು; ಓಡುವಾಗ ಮುಖವನ್ನು ತಿರುಗಿಸಿ ಶ್ರೀರಾಮನನ್ನು ನೋಡುತ್ತಿದ್ದವು. ಆ ಮೃಗಗಳು ಆಕಾಶಮಾರ್ಗವನ್ನೂ ಭೂಮಿಯನ್ನೂ ನೋಡುತ್ತ ಹೋದುದರಿಂದ, ಆ ದಿಕ್ಕಿನಲ್ಲಿ ಪುನಃ ಸೀತೆಯನ್ನು ಹುಡುಕುವ ಕಾರ್ಯವನ್ನು ಕೈಗೊಳ್ಳಬೇಕಾಗಿ ಅವು ಇಚ್ಛೆಸುತ್ತವೆಯೆಂದು ಲಕ್ಷ್ಮಣನು ಊಹಿಸಿದ. ಮೃಗಗಳ ಭಾಷಾಸರ್ವಸ್ವವೆನಿಸಿದ ಇಂಗಿತವನ್ನು ಲಕ್ಷ್ಮಣನು ಗೃಹಿಸಿದ. ವಿಷಣ್ಣನಾಗಿದ್ದ ಆ ಮೇಧಾವಿಯು "ಅಣ್ಣ, 'ಸೀತೆ ಎಲ್ಲಿ?' ಎಂದು ನೀನು ಕೇಳಿದೊಡನೆ ಈ ಮೃಗಗಳು ಥಟ್ಟನೆ ಇಲ್ಲಿಂದ ಹೊರಟವು. ಇವು ಸ್ಪಷ್ಟವಾಗಿ ನೆಲವನ್ನೂ ದಕ್ಷಿಣದಿಕ್ಕನ್ನೂ ತೋರಿಸುತ್ತಿವೆ. ಆದ್ದರಿಂದ, ಪ್ರಭು, ನಾವು ದಕ್ಷಿಣದಿಕ್ಕಿಗೆ ಹೋಗೋಣ, ಯಾವುದಾದರೂ ಗುರುತು ಸಿಕ್ಕೀತು. ದೇವಿಯಾದರೂ ಕಾಣಸಬಹುದು" ಎಂದ. 'ಆಗಲಿ' ಎಂದು. ನುಡಿದು ಸೀತಾಪ್ರಿಯನು ಲಕ್ಷ್ಮಣನೊಡನೆ ದಕ್ಷಿಣದಿಕ್ಕಿಗೆ ಹೊರಟನು.

ಅಣ್ಣ ತಮ್ಮಂದಿರಿಬ್ಬರೂ ಸೀತಾವಿಷಯವಾಗಿ ಸಂಭಾಷಿಸುತ್ತ ಹೋಗುವಾಗ, ನೆಲದ ಮೇಲೆ ದಾರಿಯುದ್ದಕ್ಕೂ ಹರಿದು ಬಿದ್ದ ಹೂಗಳನ್ನು ನೋಡಿದರು. ಹೂಗಳನ್ನು ಗಮನಿಸಿ ನೋಡಿ ಶ್ರೀ ರಾಮನು ದುಃಖಿತನಾದ. ತನ್ನಂತೆಯೇ ದುಃಖಿತನಾದ ಲಕ್ಷ್ಮಣನನ್ನು ನೋಡಿ ಆ ವೀರನು "ತಮ್ಮ, ನಾನು ಗುರುತಿಸಬಲ್ಲ ಇವೇ ಆ ಹೂಗಳು! ವೈದೇಹಿಯು ಮುಡಿದಿದ್ದ ಹೂಗಳು. ನಾನೇ ಇವನ್ನು ಕಿತ್ತು ತಂದು ಮುಡಿಸಿದ್ದೆ! ಸೂರ್ಯನೂ ವಾಯುವೂ ಕೀರ್ತಿಶಾಲಿನಿಯಾದ ಭೂದೇವಿಯೂ ನನಗೋಸ್ಕರ ಈ ಹೂಗಳನ್ನು ರಕ್ಷಿಸಿದ್ದಾರೆಂದು ತೋರುತ್ತದೆ. ನನಗೆ ಪ್ರಿಯವಾಗಲೆಂದು ಹೀಗೆ ಮಾಡಿದ್ದಾರೆ" ಎಂದು ನುಡಿದ. ಅನಂತರ ಆ ಪುರುಷಶ್ರೇಷ್ಠನು ಗಿರಿನದಿಗಳಿಂದ ಕೂಡಿದ ಪ್ರಸ್ರವಣಪರ್ವತವನ್ನು ನೋಡಿ, "ಎಲೈ ಪರ್ವತರಾಜ, ಸರ್ವಾಂಗಸುಂದರಿಯಾದ ಒಬ್ಬ ಯುವತಿಯನ್ನು ನೋಡಿದೆಯಾ? ಅವಳು ನನ್ನಿಂದ ದೂರಳಾಗಿ ಈ ಅರಣ್ಯದಲ್ಲಿ ಒಂಟಿಯಾಗಿದ್ದಳು" ಎಂದು ಕೇಳಿದ. ಬೆಟ್ಟದಿಂದ ಪ್ರತಿಧ್ವನಿ ಮಾತ್ರ ಬಂದಿತು. ಆಗ ಶ್ರೀರಾಮನು ಕ್ರುದ್ಧನಾಗಿ, ಸಿಂಹವು ಕ್ಷುದ್ರಮೃಗವನ್ನು ಕಂಡಂತೆ ಪರ್ವತದ ಮೇಲೆ ರೇಗಿ, "ಎಲೈ ಪರ್ವತವೇ, ಸುವರ್ಣವರ್ಣೆಯೂ ಚಿನ್ನದ ಪುತ್ಥಳಿಯೂ ಆದ ನನ್ನ ಸೀತೆಯನ್ನು ತೋರಿಸು! ಇಲ್ಲದಿದ್ದರೆ ನಿನ್ನ ಎಲ್ಲ ಕೋಡುಗಳನ್ನೂ ಧ್ವಂಸ ಮಾಡುತ್ತೇನೆ!" ಎಂದ. ಪ್ರಸ್ರವಣಗಿರಿಯು ರಾಘವನಿಗೆ ಸೀತೆಯನ್ನು ತೋರಿಸುವುದೋ ಎಂಬಂತೆ ಪ್ರತಿಧ್ವನಿಯ ಮೂಲಕ ಸೂಚಿಸಿದಂತೆ ಕಂಡರೂ ಸೀತೆಯನ್ನು ತೋರಿಸಲಿಲ್ಲ! ಆಗ ಶ್ರೀರಾಮನು ಕಲ್ಲು ಬಂಡೆಗಳಿಂದ ಕೂಡಿದ ಪರ್ವತವನ್ನು ನೋಡಿ, "ಎಲೈ, ನನ್ನ ಬಾಣಾಗ್ನಿಯಿಂದ ಸುಟ್ಟು ಬೂದಿಯಾಗುವೆ. ನಿನ್ನಲ್ಲಿರುವ ಹುಲ್ಲು, ಮೊಳಕೆ, ಚಿಗುರುಗಳೊಂದೂ ಉಳಿಯುವುದಿಲ್ಲ. ಆಗ ಯಾರೂ ನಿನ್ನನ್ನು ಆಶ್ರಯಿಸುವುದಿಲ್ಲ. ಚಂದ್ರಾನನೆಯಾದ ನನ್ನ ಸೀತೆಯ ಸುದ್ದಿಯನ್ನು ಹೇಳದಿದ್ದರೆ ಈ ನದಿಯನ್ನೂ ಒಣಗಿಸಿಬಿಡುತ್ತೇನೆ" ಎಂದು ಗರ್ಜಿಸಿದ. ಕ್ರುದ್ಧನಾದ ಶ್ರೀರಾಮನು ಆ ಗಿರಿನದಿಗಳನ್ನು ಸುಡುವನೋ ಎಂಬಂತೆ ಉರಿಗಣ್ಣಿನಿಂದ ನೋಡಿದ. ಅಷ್ಟರಲ್ಲಿ ನೆಲದಮೇಲೆ ರಾಕ್ಷಸನ ದೊಡ್ಡ ಹೆಜ್ಜೆಯ ಗುರುತು ಕಾಣಿಸಿತು;

ಹಾಗೆಯೇ ಮೈಥಿಲಿಯ ಪಾದಚಿಹ್ನೆಗಳೂ ಕಂಡವು. ರಾವಣನು ಜಟಾಯುವನ್ನು ಕಡಿದುರುಳಿಸಿದಾಗ ಮೈಥಿಲಿಯು ತಲ್ಲಣಿಸಿ, ಶ್ರೀರಾಮನ ದರ್ಶನವಾದೀತೆಂದು ಆಶ್ರಮದ ಕಡೆಗೆ ಓಡುತ್ತಿದ್ದಾಗ ರಾವಣನು ಅವಳನ್ನು ಹಿಡಿಯಲು ಅಟ್ಟಿಸಿಕೊಂಡು ಬರಲು ಉಂಟಾದ ಸೀತೆ ಮತ್ತು ರಾವಣನ ಹೆಜ್ಜೆಯ ಗುರುತುಗಳೇ ಅವು. ಅಲ್ಲದೆ ಅಲ್ಲಿ ಒಂದು ಧನುಸ್ಸೂ ಬತ್ತಳಿಕೆಯೂ ಮುರಿದು ಬಿದ್ದಿದ್ದವು; ರಥವು ಚೂರುಚೂರಾಗಿತ್ತು. ಅವುಗಳನ್ನು ನೋಡಿ ಶ್ರೀರಾಮನು ಸಂಭ್ರಾಂತನಾಗಿ ತನ್ನ ಪ್ರೀತಿಯ ತಮ್ಮನಾದ ಲಕ್ಷ್ಮಣನಿಗೆ ಹೀಗೆ ಹೇಳಿದ: "ಲಕ್ಷ್ಮಣಾ, ಇಲ್ಲಿ ನೋಡು! ವೈದೇಹಿಯು ತೊಟ್ಟಿದ್ದ ಆಭರಣಗಳ ಚಿನ್ನದ ಚೂರುಗಳಿವು. ಅವಳು ಮುಡಿದಿದ್ದ ನಾನಾ ಬಗೆಯ ಹೂವುಗಳಿವು. ಸೌಮಿತ್ರಿ, ಕಾಯಿಸಿದ ಚಿನ್ನದ ಹನಿಗಳಂತೆ ರಕ್ತದ ಹನಿಗಳು ವಿವಿಧಾಕಾರವಾಗಿ ನೆಲದ ಮೇಲೆ ಹರಡಿರುವುದನ್ನು ನೋಡು. ಕಾಮರೂಪಿಗಳಾದ ರಾಕ್ಷಸರು ವೈದೇಹಿಯನ್ನು ಹರಿಹರಿದು ತಮ್ಮಲ್ಲಿ ಹಂಚಿಕೊಂಡಿರಬಹುದು; ಹಿಸಿದು ತಿಂದಿರಬಹುದು! ರಾಕ್ಷಸರಿಬ್ಬರಿಗೆ ವೈದೇಹಿಗೋಸ್ಕರ ಜಗಳವುಂಟಾಗಿ ಘೋರಯುದ್ಧವೇ ಇಲ್ಲಿ ನಡೆದಿರಬೇಕು. ವತ್ಸ, ಮುರಿದು ಬಿದ್ದಿರುವ ಮಹತ್ತರವಾದ ಈ ಬಿಲ್ಲು ಯಾರದಿರಬಹುದು? ಮುತ್ತಿನ ಮಣಿಗಳಿಂದಲೂ ಚಿನ್ನದಿಂದಲೂ ಭೂಷಿತವಾದ ಈ ಬಿಲ್ಲು ನೆಲದ ಮೇಲೆ ಬಿದ್ದಿರುವುದಲ್ಲ! ಇದೇನು, ರಾಕ್ಷಸರ ಧನುಸ್ಸೇ, ದೇವತೆಗಳದೇ? ಲಕ್ಷ್ಮಣ, ಇಲ್ಲಿ ಬಿದ್ದಿರುವ ಬಂಗಾರದ ಕವಚ ಯಾರದಿರಬಹುದು? ಇದು ವೈಡೂರ್ಯಮಣಿಗಳಿಂದ ಅಲಂಕೃತವಾಗಿ ಬಾಲಸೂರ್ಯನಂತೆ ಬೆಳಗುತ್ತಿದೆ. ದಿವ್ಯಮಾಲೆಗಳಿಂದ ಶೋಭಿಸುವ ಶತಶಲಾಕೆಗಳ ಈ ಬೆಳ್ಗೊಡೆ ಯಾರದು? ಈ ಛತ್ರದ ದಂಡವು ಮುರಿದು ಚೂರಾಗಿ ನೆಲದಲ್ಲಿ ಬಿದ್ದಿದೆಯಲ್ಲ! ಲಕ್ಷ್ಮಣ, ಇಲ್ಲಿ ನೋಡು, ಚಿನ್ನದ ಎದೆಕಟ್ಟುಗಳಿರುವ ಪಿಶಾಚಮುಖದ ಹೇಸರಗತ್ತೆಗಳು ಯುದ್ಧದಲ್ಲಿ ಸತ್ತುಬಿದ್ದಿವೆ. ಭೀಕರಾಕೃತಿಯ ಮಹಾಶರೀರದ ಈ ಕತ್ತೆಗಳು ಯಾರವು? ರಣರಂಗದಲ್ಲಿ ನಾಯಕನನ್ನು ಸೂಚಿಸುವ ಧ್ವಜದಿಂದ ವಿರಾಜಿಸುವ ಅಗ್ನಿಸಂಕಾಶವಾದ ಈ ರಥವು ಯಾರದಿರಬಹುದು? ಹೀಗೆ ಹೊಡೆದುರುಳಿರುವ ರಥ ಯಾರದು? ರಥದ ಅಚ್ಚಿನಂತಿರುವ ಬಾಣಗಳು ಪೆಟ್ಟಿನಿಂದ ಅಲಗು ಮುರಿದು ಚದುರಿಬಿದ್ದಿವೆ. ಇವು ಯಾವ ಘೋರಕರ್ಮಿಯ ಬಾಣಗಳಾಗಿರಬಹುದು? ಲಕ್ಷ್ಮಣ, ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳು ಚೂರುಚೂರಾಗಿರುವುದನ್ನು ನೋಡು. ಚಾಟಿಯನ್ನೂ ಲಗಾಮನ್ನೂ ಕೈಯಲ್ಲಿ ಹಿಡಿದು ಸತ್ತುಬಿದ್ದಿರುವ ಈ ಸಾರಥಿ ಯಾರ ಕಡೆಯವನು? ವತ್ಸ ಲಕ್ಷ್ಮಣ, ಇಬ್ಬರು ಚಾಮರ ಬೀಸುವವರು ಯುದ್ಧದಲ್ಲಿ ಸತ್ತು ಮಲಗಿರುವರಲ್ಲ, ಇವರು ಯಾರ ಪಕ್ಷದವರು? ಇವರು ಕವಚವನ್ನೂ ಮಣಿಕುಂಡಲಗಳನ್ನೂ ಧರಿಸಿದ್ದಾರೆ. ಇದು ಯಾವನೋ ಒಬ್ಬ ರಾಕ್ಷಸನ ಹೆಜ್ಜೆಯ ಗುರುತೇ ಸರಿ. ಕ್ರೂರಹೃದಯರಾದ ರಾಕ್ಷಸರೊಡನೆ, ತಮ್ಮ, ನನ್ನ ವೈರವು ನೂರ್ಮಡಿಯಾಗಿ ಬೆಳೆಯಿತು! ರಾಕ್ಷಸರಿಗೆ ಇದು ಪ್ರಾಣವನ್ನು ತೆರಬೇಕಾದ ಮಹಾವೈರ! ಅನಾಥೆಯಾದ ಸೀತೆಯನ್ನು ರಾಕ್ಷಸರು ಕದ್ದೊಯ್ದರೋ, ಕೊಂದು ಹಾಕಿದರೋ ತಿಂದು ಹಾಕಿದರೋ! ಈ ಗೊಂಡಾರಣ್ಯದಲ್ಲಿ ಸೀತೆಯನ್ನು ಅಪಹರಿಸುವಾಗ ಧರ್ಮವೂ ಅವಳನ್ನು ರಕ್ಷಿಸದೆ ಹೋಯಿತು. ಇರಲಿ. ಲಕ್ಷ್ಮಣ, ವೈದೇಹಿಯು ಭಕ್ಷಿತಳೇ ಆದರೂ ಅಪಹೃತಳೇ ಆದರೂ, ಈ ಜಗತ್ತಿನಲ್ಲಿ ನನಗೆ

ಅಹಿತವನ್ನು ಮಾಡಲು ಯಾರಿಗೆ ಸಾಮರ್ಥ್ಯವುಂಟು? ನಾನು ನಿರ್ವೀರ್ಯನೆಂದು ದೇವತೆಗಳು ಭಾವಿಸಿರುವ ಹಾಗಿದೆ. ಲಕ್ಷ್ಮಣ, ಗುಣವು ನನ್ನನ್ನು ಸೇರಿ ದೋಷವಾಗಿ ಪರಿಣಮಿಸಿತು, ನೋಡು! ತೇಜೋಮಯವಾದ ಸೂರ್ಯನು ಚಂದ್ರನ ಕಾಂತಿಯನ್ನು ಬದಿಗೊತ್ತಿ ಉದಯಿಸುವಂತೆ ನನ್ನ ಸಕಲ ಶಾಂತಗುಣಗಳನ್ನೂ ಬದಿಗೊತ್ತಿ ನನ್ನ ತೇಜಸ್ಸು ಏನೆಂಬುದನ್ನು ತೋರಿಸುತ್ತೇನೆ. ಯಕ್ಷಗಂಧರ್ವರೂ ಪಿಶಾಚರಾಕ್ಷಸರೂ ಕಿನ್ನರ ಮನುಷ್ಯರೂ ಇನ್ನು ಸುಖವೇನೆಂಬುದನ್ನು ಕಾಣುವುದಿಲ್ಲ! ನನ್ನ ಮಂತ್ರಾಸ್ತ್ರಗಳೂ ಬಾಣಪರಂಪರೆಗಳೂ ಗಗನದಲ್ಲಿ ಕಿಕ್ಕಿರಿದು ತರುಬುವುದನ್ನು ನೋಡುತ್ತಿರು. ಲಕ್ಷ್ಮಣ, ಮೂರು ಲೋಕಗಳಲ್ಲಿ ಸಂಚರಿಸುವ ಸಕಲಜೀವಿಗಳಿಗೆ ಅಲ್ಲಾಡಲೂ ಸ್ಥಳವಿಲ್ಲದಂತೆ ಯುದ್ಧಮಾಡುತ್ತೇನೆ! ಗ್ರಹಗಣಗಳು ಮಿಸುಕಾಡದಂತೆ, ಚಂದ್ರನು ಹೂತುಹೋಗುವಂತೆ, ಅಗ್ನಿವಾಯುಗಳು ಅಸ್ತವ್ಯಸ್ತವಾಗುವಂತೆ, ಸೂರ್ಯಮಂಡಲವು ಮಾಸಿಹೋಗುವಂತೆ ಮಾಡುತ್ತೇನೆ. ಶೈಲಶಿಖರಗಳು ಪುಡಿಪುಡಿಯಾಗುವಂತೆ, ಜಲಾಶಯಗಳು ಬತ್ತಿಹೋಗುವಂತೆ ಮರಗಿಡಬಳ್ಳಿಗಳು ನಿರ್ಮೂಲವಾಗುವಂತೆ, ಸಮುದ್ರವು ಬರಿದಾಗುವಂತೆ ನನ್ನ ವಿಕ್ರಮವನ್ನು ಮೆರೆಸುತ್ತೇನೆ! ಮೂರುಲೋಕಗಳನ್ನೂ ನಿರ್ನಾಮಗೊಳಿಸುತ್ತೇನೆ! ದೇವತೆಗಳು ಸೀತೆಯನ್ನು ಕ್ಷೇಮವಾಗಿ ತಂದೊಪ್ಪಿಸದಿದ್ದರೆ, ಲಕ್ಷ್ಮಣ, ನನ್ನ ಪರಾಕ್ರಮನೇನೆಂಬುದನ್ನು ಈ ಕ್ಷಣದಲ್ಲಿ ಅವರು ಕಾಣುತ್ತಾರೆ. ಯಾವ ಭೂತಗಳೂ ಆಕಾಶಕ್ಕೆ ನೆಗೆದೂ ತಪ್ಪಿಸಿಕೊಳ್ಳಲಾರವು. ನನ್ನ ಧನುಸ್ಸಿನ ಹೆದೆಯಿಂದ ಚಿಮ್ಮಿಹೋದ ಬಾಣಜಾಲಗಳಿಂದ ಆಕಾಶವು ಮುಚ್ಚಿ ಹೋಗುವುದು. ನನ್ನ ನಾರಾಚಗಳಿಂದ ಸಮಸ್ತ ಮೃಗಪಕ್ಷಿಗಳೂ ನಾಶವಾಗಿ ಹೋಗುತ್ತವೆ. ಲಕ್ಷ್ಮಣ, ಈ ಜಗತ್ತು ಸಕಲಮರ್ಯಾದೆಗಳನ್ನೂ ಮೀರಿ ಅಲ್ಲೋಲಕಲ್ಲೋಲವಾಗುವುದನ್ನು ನೋಡುತ್ತಿರು. ನನ್ನ ಮೈಥಿಲಿಗೋಸ್ಕರ ಈಗ ಕಿವಿಯವರೆಗೂ ಸೆಳೆದು ಬಿಡುವ ತಡೆಯಲಸಾಧ್ಯವಾದ ಶರಗಳಿಂದ, ಈ ಲೋಕದಲ್ಲಿ ಪಿಶಾಚಗಳನ್ನೂ ರಾಕ್ಷಸರನ್ನೂ ಹೇಳ ಹೆಸರಿಲ್ಲದಂತೆ ಮಾಡಿಬಿಡುತ್ತೇನೆ! ರೋಷಾವಿಷ್ಟನಾದ ನನ್ನ ಬಾಣಗಳ ಬಲುಮೆ ಏನೆಂಬುದು ಇಂದು ದೇವತೆಗಳಿಗೆ ತಿಳಿದೀತು! ಕ್ರೋಧದಿಂದ ಹೊರಚಿಮ್ಮುವ ದೂರಗಾಮಿಗಳಾದ ನನ್ನ ಬಾಣಗಳ ಹರಿತತೆ ಅವರಿಗೆ ಗೊತ್ತಾದೀತು! ರೋಷದಿಂದ ನಾನು ಲೋಕತ್ರಯವನ್ನೂ ಧೂಳೆಬ್ಬಿಸಲು, ಯಾರು ಉಳಿದಾರು? ದೇವದೈತ್ಯರಲ್ಲಿ, ನಿಶಾಚರರಾಕ್ಷಸರಲ್ಲಿ ಯಾರೂ ಉಳಿಯುವುದಿಲ್ಲ. ದೇವ ದಾನವ ಯಕ್ಷ ರಾಕ್ಷಸರ ಲೋಕಗಳೆಲ್ಲವೂ ನನ್ನ ಬಾಣಪರಂಪರೆಯ ಹೊಡೆತದಿಂದ ತುಂಡು ತುಂಡಾಗಿ ಉರುಳಿ ಬೀಳುವುವು. ಸಮಸ್ತಲೋಕಗಳನ್ನೂ ಅಸ್ತ್ರಜಾಲಗಳಿಂದ ತಲ್ಲಣಗೊಳಿಸುತ್ತೇನೆ. ಸೌಮಿತ್ರಿ, ದೇವಾದಿಗಳು ಸೀತೆಯನ್ನು ಕರೆತಂದು ಸಮರ್ಪಿಸಲು ಸಮರ್ಥರು. ಅವಳು ಹೃತಳಾಗಿರಲಿ ಮೃತಳಾಗಿರಲಿ, ನನ್ನ ಕಾಂತೆಯನ್ನು ಮೊದಲಿದ್ದಂತೆ ಕ್ಷೇಮವಾಗಿ ಅವರು ತಂದೊಪ್ಪಿಸದಿದ್ದರೆ ಈ ಜಗತ್ತನ್ನೇ ನಾಶಮಾಡುತ್ತೇನೆ, ಚರಾಚರಾತ್ಮಕನಾದ ಲೋಕತ್ರಯವನ್ನೂ ಧ್ವಂಸಮಾಡುತ್ತೇನೆ. ಸೀತೆಯ ದರ್ಶನವಾಗುವವರೆಗೂ ಅಸ್ತ್ರಗಳಿಂದ ಜಗತ್ತಿಗೆ ಕಿಚ್ಚುಹಚ್ಚಿ ಉರಿಸುತ್ತೇನೆ!" ಎಂದು ವೀರವಾಣಿಯಿಂದ ಅಬ್ಬರಿಸಿದ. ರೋಷದಿಂದ ಶ್ರೀರಾಮನ ಕಣ್ಣುಗಳು ಕೆಡಿಗೆದರಿದವು. ತುಟಿಗಳು ಅದುರಿದುವು. ಅವನು ತನ್ನ ನಾರುಮಡಿ ಮತ್ತು ಕೃಷ್ಣಾಜಿನಗಳನ್ನು ಬಿಗಿಪಡಿಸಿ ಜಟೆಯನ್ನು ಬಿಗಿದು

ಕಟ್ಟಿದ. ಕೋಪೋದ್ರಿಕ್ತನಾದ ಶ್ರೀರಾಮನ ಆಕೃತಿಯು ತ್ರಿಪುರಸಂಹಾರಕ್ಕೆ ಉದ್ಯುಕ್ತನಾದ ಪರಮೇಶ್ವರನ ಆಕಾರದಂತೆ ಪ್ರಜ್ವಲಿಸಿತು. ಅವನು ಲಕ್ಷ್ಮಣನ ಕೈಯಿಂದ ಧನುಸ್ಸನ್ನು ಸೆಳೆದುಕೊಂಡು, ಕಾಲಕೂಟದಂತೆ ಘೋರವಾಗಿ ಉರಿಯುವ ಶರವೊಂದನ್ನು ಅದಕ್ಕೆ ಅಳವಡಿಸಿದ. ಆ ವೀರಾಗ್ರಣಿಯು ಪ್ರಳಯಕಾಲಾಗ್ನಿಯಂತೆ ಸಿಡಿದೆದ್ದು, "ಲಕ್ಷ್ಮಣ, ಈ ಜಗತ್ತಿನಲ್ಲಿ ಮುಪ್ಪು, ಮರಣಗಳು ಕಾಲಧರ್ಮ, ಅವುಗಳನ್ನು ಯಾರೂ ತಡೆದು ನಿಲ್ಲಿಸಲಾರರು. ಹಾಗೆಯೇ ಕೋಪೋದ್ದೀಪಿತನಾದ ನನ್ನನ್ನು ಯಾರಿಗೂ ತಡೆಯಲು ಸಾಧ್ಯವಿಲ್ಲ, ಇದು ನಿಸ್ಸಂಶಯ! ಸುಂದರವಾದ ದಂತಪಂಕ್ತಿಯುಳ್ಳವಳೂ ದೋಷರಹಿತಳೂ ಆದ ಮೈಥಿಲಿಯನ್ನು ಮೊದಲಿದ್ದಂತೆ ಕ್ಷೇಮವಾಗಿ ತಂದೊಪ್ಪಿಸದಿದ್ದದ್ದರೆ ದೇವಗಂಧರ್ವ ಮನುಷ್ಯ ಪನ್ನಗರಿಂದಲೂ ಪರ್ವತಪಂಕ್ತಿಗಳಿಂದಲೂ ಕೂಡಿದ ಈ ಪ್ರಪಂಚವನ್ನು ತಲೆಕೆಳಗುಮಾಡುತ್ತೇನೆ" ಎಂದು ಆರ್ಭಟಿಸಿದ.

ಹೀಗೆ ಶ್ರೀರಾಮನು ಸೀತಾಪಹರಣದಿಂದ ದುಃಖಿತನಾಗಿ ಸಂತಪಿಸುತ್ತ ಪ್ರಳಯಾಗ್ನಿಯಂತೆ ಕೆರಳಿ, ಲೋಕಗಳೆಲ್ಲವನ್ನೂ ಧ್ವಂಸ ಮಾಡಲು ಉದ್ಯುಕ್ತನಾದ. ಹೆದೆಯೇರಿದ ಕೋದಂಡವನ್ನು ಮತ್ತೆ ಮತ್ತೆ ನೋಡುತ್ತ, ನಿಡಿದಾಗಿ ಉಸಿರೆಳೆಯುತ್ತ, ಕಾಲಾಗ್ನಿರುದ್ರನಂತೆ ಸಮಸ್ತ ಜಗತ್ತನ್ನೂ ಸುಟ್ಟು ಬೂದಿಮಾಡಲುದ್ದೇಶಿಸಿದ. ಆ ಪರಿಯಲ್ಲಿ ರಾಘವನು ಕೋಪೋದ್ದೀಪಿತನಾದುದನ್ನು ಲಕ್ಷ್ಮಣನು ಎಂದೂ ಕಂಡಿರಲಿಲ್ಲ. ಆತನ ಕೆಂಡಗೋಪವನ್ನು ಕಂಡು ಲಕ್ಷ್ಮಣನ ಬಾಯಿ ಒಣಗಿತು! ಅವನು ಕೈಮುಗಿದುಕೊಂಡು, "ಶ್ರೀರಾಮ ನೀನು ಇದುವರೆಗೆ ಮೃದುವಚನದವನಾಗಿ ಇಂದ್ರಿಯಗಳನ್ನು ನಿಗ್ರಹಿಸಿದ್ದೀಯೆ, ಸಕಲಪ್ರಾಣಿಗಳ ಕಲ್ಯಾಣಕ್ಕಾಗಿ ಶ್ರಮಪಟ್ಟಿದ್ದೀಯೆ. ಈಗ ಕ್ರೋಧಕ್ಕೆ ವಶನಾಗಿ ನಿನ್ನ ಸಹಜಗುಣವನ್ನು ಮೀರಿಹೋಗುವುದು ತರವಲ್ಲ. ಚಂದ್ರಮನಲ್ಲಿ ಕಾಂತಿಯೂ ಭಾಸ್ಕರನಲ್ಲಿ ಪ್ರಕಾಶವೂ ವಾಯುವಿನಲ್ಲಿ ನಿರಂತರ ಸಂಚಾರವೂ ಭೂಮಿಯಲ್ಲಿ ತಾಳ್ಮೆಯೂ ಸಹಜವಾಗಿವೆ. ಹಾಗೆ ನಿನ್ನಲ್ಲಿ ಲೋಕೋತ್ತರವಾದ ಕೀರ್ತಿ ಸ್ಥಿರವಾಗಿ ನಿಂತಿದೆ. ಯಾವನೋ ಒಬ್ಬನ ಅಪರಾಧಕ್ಕಾಗಿ ಸಕಲಜೀವಿಗಳನ್ನೂ ಕೊಲ್ಲುವುದು ಯುಕ್ತವಲ್ಲ. ಮುರಿದು ಬಿದ್ದಿರುವ ಈ ಯುದ್ಧೋಪಯೋಗಿ ರಥವು ಯಾರದೆಂದು ಮಾತ್ರ ತಿಳಿಯದು. ಆಯುಧಗಳಿಂದಲೂ ಇತರ ಯುದ್ಧಸಾಮಗ್ರಿಗಳಿಂದಲೂ ಯುಕ್ತವಾದ ಈ ರಥವನ್ನು ಯಾವನು ಯಾತಕ್ಕಾಗಿ ಛಿದ್ರಗೊಳಿಸಿರುವನೋ ಗೊತ್ತಾಗುವುದಿಲ್ಲ. ಈ ಪ್ರದೇಶಗಳಲ್ಲಿ ಗೊರಸುಗಳ ಮತ್ತು ರಥದ ಅಚ್ಚಿನ ಗುರುತುಗಳಿವೆ, ರಕ್ತದ ಹನಿಗಳ ಕಲೆಯಿದೆ. ರಾಜಪುತ್ರ, ಇಲ್ಲಿ ಘೋರವಾದ ಕಾಳಗವು ನಡೆದಿದೆ. ಒಂದೇ ರಥ ಒಬ್ಬನದೇ ಪಾದಚಿಹ್ನೆ ಇರುವುದರಿಂದ ಒಬ್ಬ ಪುರುಷನ ತುಳಿದಾಟವಿದು; ಇಬ್ಬರದಲ್ಲ. ಏಕೆಂದರೆ, ಇಲ್ಲಿ ದೊಡ್ಡ ಸೈನ್ಯದ ಹೆಜ್ಜೆಗಳ ಸುಳಿವು ಕಾಣಿಸುವುದಿಲ್ಲ. ಆದ್ದರಿಂದ, ಅಣ್ಣ, ಒಬ್ಬನಿಗೋಸ್ಕರ ಸಕಲಜೀವಿಗಳನ್ನೂ ನೀನು ಕೊಲ್ಲುವುದು ಯುಕ್ತವಾಗದು. ಭೂಪಾಲರು ಮೃದುಸ್ವಭಾವದವರೂ ಶಾಂತರೂ ಆಗಿದ್ದು ಅಪರಾಧಕ್ಕೆ ತಕ್ಕ ದಂಡನೆಯನ್ನು ವಿಧಿಸಬೇಕಲ್ಲವೆ? ಸಕಲಪ್ರಾಣಿಗಳಿಗೂ ನೀನು ಅಭಯದಾತನಾಗಿದ್ದೀಯೆ; ಪರಮಗತಿಯಾಗಿದ್ದೀಯೆ. ಶ್ರೀರಾಮ. ನಿನಗೆ ಪತ್ನೀವಿರಹವಾದುದು ಸರಿಯೆಂದು ಯಾವನು ತಾನೇ ಭಾವಿಸಿಯಾನು? ನದೀ. ಸಮುದ್ರ, ಪರ್ವತಗಳಾಗಲಿ ದೇವ, ಗಂಧರ್ವ ದಾನವರಾಗಲಿ ನಿನಗೆ ಕೇಡನ್ನು

ಬಯಸಲಾರರು, ಅಲ್ಲದೆ ಕೇಡುಮಾಡಲು ಶಕ್ತರೂ ಅಲ್ಲ. ಯಜ್ಞದೀಕ್ಷಿಕನಾದ ಯಜಮಾನನಿಗೆ ಯಾವ ಸಜ್ಜನರು ತಾನೇ ಕೇಡನ್ನು ಚಿಂತಿಸಿಯಾರು? ಆದ್ದರಿಂದ, ಪ್ರಭು, ಯಾವನು ಸೀತಾದೇವಿಯನ್ನು ಅಪಹರಿಸಿರುವನೋ ಅವನನ್ನು ಕಂಡುಹಿಡಿಯಬೇಕು. ಧನುರ್ಧಾರಿಯಾಗಿ ನನ್ನೊಡನೆ ಅಪರಾಧಿಯನ್ನು ಹುಡುಕು. ಈ ವನದಲ್ಲಿರುವ ಮಹರ್ಷಿಗಳೂ ಈ ಕಾರ್ಯದಲ್ಲಿ ನೆರವಾಗುತ್ತಾರೆ. ಸಮುದ್ರ, ಪರ್ವತ ವನಗಳಲ್ಲಿ ನಾವು ಅರಸೋಣ. ಎಲ್ಲಾ ಬಗೆಯ ಭೀಕರವಾದ ಗುಹೆಗಳನ್ನೂ ನದಿಗಳನ್ನೂ ತಾವರೆಯ ಕೊಳಗಳನ್ನೂ ಹುಡುಕೋಣ. ಕೊನೆಗೆ ದೇವಲೋಕ ಗಂಧರ್ವಲೋಕಗಳಿಗೂ ಹೋಗಿ ಶೋಧಿಸೋಣ. ಸಮಾಧಾನದಿಂದ ಈ ಕಾರ್ಯವನ್ನು ಸಾಧಿಸಬೇಕು. ನಿನ್ನ ಪತ್ನಿಯನ್ನು ಅಪಹರಿಸಿದವನು ಸಿಕ್ಕುವವರೆಗೂ ನಾವು ಪ್ರಯತ್ನಿಸಬೇಕು. ಕಡೆಯಲ್ಲಿ, ಕೋಸಲೇಶ್ವರ, ದೇವತೆಗಳು ಸಾಮೋಪಾಯಕ್ಕೆ ಮಣಿದು ನಿನ್ನ ಪತ್ನಿಯನ್ನು ತಂದೊಪ್ಪಿಸದಿದ್ದರೆ ಆಗ ಯೋಗ್ಯವಾದ ಮುಂದಿನ ಮಾರ್ಗವನ್ನು ನೀನು ಕೈಗೊಳ್ಳಬಹುದು. ನಿನ್ನ ಒಳ್ಳೆಯ ನಡತೆಗೆ, ಒಳ್ಳೆಯ ಮಾತಿಗೆ, ವಿನಯಕ್ಕೆ, ನೀತಿಗೆ ಸೀತಾದೇವಿಯು ಸಿಕ್ಕದೇ ಹೋದರೆ, ಹೇ ಸ್ವಾಮಿ, ಇಂದ್ರನ ವಜ್ರಾಯುಧಕ್ಕೆ ಸಮಾನವಾದ ನಿನ್ನ ಬಾಣಗಳಿಂದ ನಿನ್ನ ಶತ್ರುಗಳನ್ನು ನಿರ್ನಾಮಗೊಳಿಸು!" ಎಂದು ಹೇಳಿದ.

೨೯ ಜಟಾಯುದರ್ಶನ; ರಾವಣವೃತ್ತಾಂತ; ಶ್ರೀರಾಮನ ದುಃಖ

ಶ್ರೀರಾಮನು ಶೋಕಸಂತಪ್ತನಾಗಿ ದಿಕ್ಕಿಲ್ಲದವನಂತೆ ಗೋಳಿಡುತ್ತ ಸೀತಾವಿರಹದುಃಖದಿಂದ ಬಳಲಿ ಮುಂದೇನು ಮಾಡಬೇಕೆಂದು ತೋರದವನಾಗಿ ಕಡೆಗೆ ಸಂಕ್ರುದ್ಧನಾಗಲು ಸೌಮಿತ್ರಿಯು ಶ್ರೀರಾಮನಿಗೆ ಸ್ವಲ್ಪ ಹೊತ್ತು ಸಮಾಧಾನ ಹೇಳಿ, ಆತನ ಕಾಲುಗಳೆರಡನ್ನೂ ಹಿಡಿದುಕೊಂಡು ಹೀಗೆ ತಿಳಿಸಿದ: "ಹೇ, ಶ್ರೀರಾಮ, ದಶರಥಮಹಾರಾಜನು ಮಹತ್ತರನಾದ ವ್ರತಗಳನ್ನೂ ಪುತ್ರಕಾಮೇಷ್ಟಿ ಮಹಾಯಾಗವನ್ನೂ ಆಚರಿಸಿ ನಿನ್ನನ್ನು ಪಡೆದಿದ್ದಾನೆ. ದೇವತೆಗಳಿಗೆ ಅಮೃತವು ಲಭಿಸಿದಂತೆ, ಮಹಾರಾಜನಿಗೆ ನೀನು ಮಗನಾಗಿ ಹುಟ್ಟಿದೆ. ಮಹಾರಾಜನು ನಿನ್ನ ಸದ್ಗುಣಗಳಿಗೆ ವಶನಾಗಿ ಮುಗ್ಧನಾಗಿದ್ದ. ಭರತನಿಂದ ನಾವು ಕೇಳಿದಂತೆ, ಆ ಮಹೀಪಾಲನು ನಿನ್ನ ವಿಯೋಗದುಃಖವನ್ನು ಸಹಿಸಲಾರದೆ ಸ್ವರ್ಗಸ್ಥನಾದ. ಹೇ ಪುರುಷೋತ್ತಮ, ಗಾಳಿಯ ಸ್ಪರ್ಶದಂತೆ ಕಷ್ಟವು ಬಂದು ತಾಗುತ್ತದೆ, ಹೋಗುತ್ತದೆ. ಸಮಾಧಾನವನ್ನು ತಂದುಕೋ; ಕಷ್ಟಗಳು ಯಾರಿಗೆ ಬರುವುದಿಲ್ಲ? ಈಗ ಒದಗಿರುವ ಈ ದುಃಖವನ್ನು ನೀನೇ ತಡೆದುಕೊಳ್ಳದಿದ್ದರೆ ಪಾಮರನಾದವನು ತಡೆದುಕೊಂಡಾನೆಯೇ? ನೀನು ದುಃಖಾರ್ತನಾಗಿ ತೇಜೋಬಲದಿಂದ ಲೋಕಗಳೆಲ್ಲವನ್ನೂ ಸುಟ್ಟು ಬೂದಿಮಾಡಲು ಉದ್ಯುಕ್ತನಾದರೆ, ಪುರುಷಶ್ರೇಷ್ಠ, ವಿಪತ್ತಿಗೆ ಸಿಕ್ಕುವ ಪ್ರಜೆಗಳು ಯಾರ ಮೊರೆಹೊಗಬೇಕು? ಲೋಕಸ್ವಭಾವವೇ ಹೀಗಿದೆ; ನಹುಷಪುತ್ರನಾದ ಯಯಾತಿಯು ದೇವೇಂದ್ರನೊಡನೆ ಸ್ವರ್ಗಲೋಕವನ್ನೇರಿದ; ಆದರೆ ಅವಿವೇಕದಿಂದ ಪುನಃ ಭೂಮಿಗೆ ಉರುಳಿದ. ನಮ್ಮ ತಂದೆಯ ಪುರೋಹಿತರಾದ ವಸಿಷ್ಠ

ಮಹರ್ಷಿಗಳಿಗೆ ನೂರುಮಂದಿ ಪುತ್ರರು ಜನಿಸಿದರು, ಹಾಗೆಯೇ ಒಂದು ದಿನ ಎಲ್ಲರೂ ಹತರಾದರು. ಸಕಲರಿಗೂ ತಾಯಿಯೆನಿಸಿರುವ ಭೂದೇವಿಗೆ ಕೂಡ ಭೂಕಂಪವಾಗುವುದು ಕಂಡುಬರುತ್ತದೆ. ಮಹಾಬಲರಾದ ಸೂರ್ಯಚಂದ್ರರಿಗೂ ಗ್ರಹಣವು ಸಂಭವಿಸುತ್ತದೆ; ಅವರು ಧರ್ಮಪ್ರವರ್ತಕರಾಗಿ ಜಗತ್ತಿನ ಕಣ್ಣುಗಳಾಗಿದ್ದಾರೆ. ಲೋಕವೆಲ್ಲವೂ ಅವರಿಗೆ ಅಧೀನವಾಗಿದೆ. ನಳನೇ ಮೊದಲಾದ ಮಹಾಪುರುಷರೂ ದೇವತೆಗಳೂ ದೈವದಿಂದ ತಪ್ಪಿಸಿಕೊಳ್ಳಲಾರದೆ ಹೋದರು. ಸಕಲರಿಗೂ ದೇಹವಿದೆಯಲ್ಲವೇ? ದೇವೇಂದ್ರನೇ ಮೊದಲಾದ ದೇವತೆಗಳಿಗೂ ಸಹ ಧರ್ಮಾಧರ್ಮನಿಮಿತ್ತವಾಗಿ ಸುಖದುಃಖಗಳು ಬರುತ್ತವೆಯೆಂದು ಕೇಳಿದ್ದೇವೆ. ಅಣ್ಣ, ನೀನು ಹೀಗೆ ವ್ಯಥೆಪಡುವುದು ಯುಕ್ತವಲ್ಲ. ವೈದೇಹಿಯು ಅಪಹೃತಳಾದರೂ ಒಂದು ವೇಳೆ ಮೃತಳಾದರೂ ನೀನು ಶೋಕಿಸುವುದು ತರವಲ್ಲ. ವೀರಾಗ್ರಣಿಯಾದ ನೀನು ಸಾಮಾನ್ಯ ಮನುಷ್ಯನಂತೆ ದುಃಖಿಸುವುದು ಯುಕ್ತವಲ್ಲ. ಶ್ರೀರಾಮ, ನಿನ್ನಂತಹವರು ಎಂದಿಗೂ ಶೋಕಿಸುವುದಿಲ್ಲ. ಎಂತಹ ವಿಪತ್ತುಗಳೇ ಒದಗಿದರೂ ಜ್ಞಾನಿಗಳ ವಿಚಾರಧಾರೆಯಲ್ಲಿ ನಿರಾಸೆಯು ಸುಳಿಯುವುದಿಲ್ಲ. ಪುರುಷಶ್ರೇಷ್ಠ, ಯಥಾರ್ಥವಾಗಿ ವಿಮರ್ಶಿಸಿ ನೋಡು. ವಿವೇಚನಾಶಕ್ತಿಯುಳ್ಳ ಮಹಾಪ್ರಾಜ್ಞರು ಯುಕ್ತಾಯುಕ್ತಗಳನ್ನು ವಿವೇಚಿಸಿ ತಿಳಿಯಬಲ್ಲರು. ಕರ್ಮಫಲಗಳಾದ ಸುಖದುಃಖಗಳು ಯಾವಾಗ ಬರುತ್ತವೆಂದು ಮೊದಲೇ ತಿಳಿದಿರುವುದಿಲ್ಲ. ಈ ಕರ್ಮಗಳು ಶಾಶ್ವತವಲ್ಲ, ಕರ್ಮಗಳನ್ನು ಹಿಂದೆ ಆಚರಿಸದೆ ಅವುಗಳ ಫಲವು ಎಂದಿಗೂ ಪ್ರಾಪ್ತವಾಗುವುದಿಲ್ಲ. ಅಣ್ಣ, ಹಿಂದೆ ಈ ವಿಷಯವನ್ನು ನೀನೇ ಎಷ್ಟೋ ಸಲ ನನಗೆ ಹೇಳಿದ್ದೀಯೆ. ನಿನಗೆ ಹಿತೋಪದೇಶ ಮಾಡುವ ಸಾಮರ್ಥ್ಯ ಯಾರಿಗುಂಟು? ಸಾಕ್ಷಾತ್ ಬೃಹಸ್ಪತಿಗೂ ಇಲ್ಲ. ಮಹಾಮೇಧಾವಿಯಾದ ನಿನ್ನ ಪ್ರಜ್ಞಾಶಕ್ತಿಯು ದೇವತೆಗಳಿಗೂ ದುರ್ಲಭ. ನಿನ್ನ ಬುದ್ಧಿಯು ಶೋಕದಲ್ಲಿ ಮುಳುಗಿಹೋಗಿದೆ. ಅದನ್ನು ಮೇಲೆ ತೆಗೆದು ಆ ಬುದ್ಧಿಯನ್ನು ಬೆಳಗಿಸಲು ನಾನು ಯತ್ನಿಸುತ್ತಿದ್ದೇನೆ. ಇಕ್ಷ್ವಾಕುವಂಶೀಯರಲ್ಲಿ ಪರಮಶ್ರೇಷ್ಠನಾದವನು ನೀನು. ನಿನ್ನ ಪರಾಕ್ರಮವು ದೇವಲೋಕ ಮನುಷ್ಯಲೋಕಗಳನ್ನೂ ವ್ಯಾಪಿಸುವಂತಹುದು. ಸಮಯವರಿತು ಶತ್ರುನಾಶಕ್ಕಾಗಿ ಪ್ರಯತ್ನಿಸು. ಸಕಲಜೀವಿಗಳನ್ನೂ ನಾಶಮಾಡುವುದರಿಂದ ನಿನಗೇನು ಪ್ರಯೋಜನ? ಸೀತಾದೇವಿಯನ್ನು ಹೊತ್ತೊಯ್ದ ಪಾಪಿಯನ್ನು ಗೊತ್ತುಮಾಡಿ ಆ ಶತ್ರುವನ್ನು ಸಂಹರಿಸುವುದು ಯೋಗ್ಯವಾದುದು" ಎಂದು ನಿವೇದಿಸಿದ.

ಲಕ್ಷ್ಮಣನು ಈ ರೀತಿ ಸಾರವತ್ತಾದ ಹಿತವಚನವನ್ನಾಡಲು, ರಾಘವನು ಅಗ್ರಜನಾದರೂ ಸಾರಗ್ರಾಹಿಯಾದ್ದರಿಂದ ಅದೆಲ್ಲವೂ ಸರಿಯೆಂದು ಗ್ರಹಿಸಿದ. ಆ ವೀರಾಗ್ರಣಿಯು ತನ್ನ ಕೋಪೋದ್ರೇಕವನ್ನು ಸ್ತಿಮಿತಕ್ಕೆ ತಂದುಕೊಂಡು, ಕೋದಂಡವನ್ನೂರಿ ನಿಂತು, "ವತ್ಸ ಲಕ್ಷ್ಮಣ ಈಗ ಏನು ಮಾಡೋಣ? ಎಲ್ಲಿಗೆ ಹೋಗೋಣ? ಯಾವ ಉಪಾಯವನ್ನವಲಂಬಿಸಿದರೆ ಸೀತೆಯನ್ನು ಕಾಣಲು ಸಾಧ್ಯವಾದೀತು ಎಂಬುದನ್ನಾಲೋಚಿಸು" ಎಂದು ಹೇಳಿದ. ವ್ಯಥಿತನಾದ ಶ್ರೀರಾಮನನ್ನು ನೋಡಿ ಲಕ್ಷ್ಮಣನು, "ಅಣ್ಣ, ಈ ಜನಸ್ಥಾನವನ್ನೇ ಸರಿಯಾಗಿ ಅನ್ವೇಷಿಸಬೇಕು.

ಇಲ್ಲಿ ರಾಕ್ಷಸರು ಬಹು ಸಂಖ್ಯೆಯಲ್ಲಿ ಹರಡಿದ್ದಾರೆ; ನಾನಾ ಬಗೆಯ ಮರಬಳ್ಳಿಗಳು ತುಂಬಿವೆ; ದುರ್ಗಮವಾದ ಗಿರಿಪ್ರದೇಶಗಳೂ ಬಂಡೆಗಳೂ ಕಂದಕಗಳೂ ಇವೆ; ವಿವಿಧ ಮೃಗಗಳಿಂದ ತುಂಬಿದ ಘೋರ ಗುಹೆಗಳಿವೆ; ಕಿನ್ನರರೂ ಗಂಧರ್ವರೂ ವಾಸಿಸುವ ಸ್ಥಳಗಳಿವೆ. ಇವೆಲ್ಲದರಲ್ಲಿಯೂ ಸೀತೆಗಾಗಿ ಹುಡುಕೋಣ. ನಿನ್ನಂತಹ ಬುದ್ಧಿಶಾಲಿಗಳೂ ಮಹಾತ್ಮರೂ ಆದ ಪುರುಷಶ್ರೇಷ್ಠರು ಆಪತ್ತು ಬಂದಾಗ ಎದೆಗುಂದುವುದಿಲ್ಲ, ಬಿರುಗಾಳಿ ಬೀಸಿದರೂ ಬೆಟ್ಟಗಳು ಕದಲುವುದಿಲ್ಲ ಅಲ್ಲವೇ?" ಎಂದ. ಆಮೇಲೆ ಶ್ರೀರಾಮನು ಲಕ್ಷ್ಮಣಸಮೇತನಾಗಿ ಪುನಃ ಸೀತೆಯನ್ನರಸುತ್ತ ಅರಣ್ಯದಲ್ಲಿ ಸುತ್ತಾಡಿದ. ಶ್ರೀರಾಮನು ಹರಿತವಾದ ಘೋರಾಸ್ತ್ರವನ್ನು ಬಿಲ್ಲಿಗೆ ಹೂಡಿಯೇ ಇದ್ದನು.

ಆ ಸಮಯದಲ್ಲಿ ಮಹಾತ್ಮನೂ ಪಕ್ಷಿಶ್ರೇಷ್ಠನೂ ಆದ ಜಟಾಯುವು ಭೂಮಿಯಲ್ಲಿ ಬಿದ್ದಿರುವುದು ಕಾಣಿಸಿತು. ರಕ್ತದಲ್ಲಿ ನೆನೆದು ಗಿರಿಶೃಂಗದಂತೆ ಮಹಾಕಾಯನಾಗಿದ್ದ ಜಟಾಯುವನ್ನು ನೋಡಿ ಶ್ರೀರಾಮನು, "ಲಕ್ಷ್ಮಣ, ನಿಸ್ಸಂದೇಹವಾಗಿ ಈತನೇ ಸೀತೆಯನ್ನು ತಿಂದುಹಾಕಿದ್ದಾನೆ! ರಾಕ್ಷಸನು ಗೃಧ್ರ ರೂಪವನ್ನು ಧರಿಸಿ ಕಾಡಿನಲ್ಲಿ ಅಲೆಯುತ್ತಿದ್ದಾನೆಂಬುದು ಸ್ಪಷ್ಟವಾಗಿದೆ. ಆ ವಿಶಾಲಾಕ್ಷಿಯನ್ನು ತಿಂದುಹಾಕಿ ಸುಖವಾಗಿ ಮಲಗಿದ್ದಾನೆ! ಇವನನ್ನು ಘೋರಾಸ್ತ್ರಗಳಿಂದ ಕೊಂದೆಸೆಯುತ್ತೇನೆ" ಎಂದು ಹೇಳುತ್ತ ದಢಾರನೆ ಮುಂದೆ ನುಗ್ಗಿದ. ಕೋಪಾವಿಷ್ಟನಾದ ಶ್ರೀರಾಮನು ಧನುಸ್ಸಿಗೆ ಹರಿತವಾದ ಬಾಣವನ್ನು ಹೂಡಿ ನುಗ್ಗಿದಾಗ, ಭೂಮಿಯು ಸಮುದ್ರಪರ್ಯಂತವಾಗಿ ನಡುಗಿದಂತಾಯಿತು! ಅಷ್ಟರಲ್ಲಿ ನೊರೆನೊರೆಯಾಗಿ ರಕ್ತವನ್ನುಗುಳುತ್ತಿದ್ದ ಜಟಾಯುವು ದೈನ್ಯದಿಂದ, "ಚಿರಂಜೀವ ರಾಘವ, ಯಾವ ದೇವಿಯನ್ನು ಈ ಮಹಾರಣ್ಯದಲ್ಲಿ ದಿವ್ಯಮೂಲಿಕೆಯನ್ನರಸುವಂತೆ ಅರಸುತ್ತಿರುವೆಯೋ ಆ ಸೀತಾದೇವಿ ಮತ್ತು ನನ್ನ ಪ್ರಾಣ – ಇವೆರಡನ್ನೂ ರಾವಣನು ಅಪಹರಿಸಿದ! ನೀನೂ ಲಕ್ಷ್ಮಣನೂ ಇಲ್ಲದ ವೇಳೆಯಲ್ಲಿ ಬಲಾಢ್ಯನಾದ ರಾವಣನು ಆ ದೇವಿಯನ್ನು ಅಪಹರಿಸಿ ಒಯ್ಯುವುದನ್ನು ನಾನು ಕಂಡೆ. ಸೀತೆಯ ರಕ್ಷಣೆಗಾಗಿ ನಾನು ಧಾವಿಸಿದೆ. ರಾವಣನಿಗೂ ನನಗೂ ಹೊಡೆದಾಟ ನಡೆಯಿತು. ಅವನ ರಥಚ್ಛತ್ರಗಳನ್ನು ನೆಲದ ಮೇಲೆ ಹೊಡೆದುರುಳಿಸಿದೆ. ನಾನು ಮುರಿದು ಹಾಕಿದ ರಾವಣನ ಬಿಲ್ಲು ಅದು; ಅವು ಆತನ ಬಾಣಗಳು. ಶ್ರೀರಾಮ, ಅಲ್ಲಿ ಕಾಣುವ ಯುದ್ಧೋಪಯೋಗಿಯಾದ ರಥವನ್ನು ನಾನು ಭಗ್ನಗೊಳಿಸಿದೆ. ಅದು ರಾವಣನ ರಥ. ಅಲ್ಲಿ ನೆಲದಮೇಲೆ ಬಿದ್ದಿರುವವನು ಅವನ ಸಾರಥಿ, ರೆಕ್ಕೆಗಳಿಂದ ಬಡಿದು ಅವನನ್ನು ಕೊಂದಿದ್ದೇನೆ. ಹೀಗೆ ಯುದ್ಧ ಮಾಡಿ ನಾನು ಬಳಲಿದೆ. ಆಗ ರಾವಣನು ನನ್ನ ರೆಕ್ಕೆಗಳನ್ನು ಕತ್ತಿಯಿಂದ ಕತ್ತರಿಸಿ ಸೀತಾದೇವಿಯನ್ನೆತ್ತಿಕೊಂಡು ಆಕಾಶಮಾರ್ಗದಲ್ಲಿ ಹಾರಿಹೋದ. ರಾಮ, ಆ ರಾಕ್ಷಸನು ನನ್ನನ್ನು ಮೊದಲೇ ಕೊಂದಿದ್ದಾನೆ. ಪುನಃ ನೀನು ಕೊಲ್ಲಬೇಕಾಗಿಲ್ಲ!" ಎಂದ. ಜಟಾಯುವಿನ ಮಾತನ್ನು ಕೇಳಿ ಶ್ರೀರಾಮನಿಗೆ ಕಣ್ಣೀರು ಉಕ್ಕಿತು; ಅವನ ದುಃಖವು ಇಮ್ಮಡಿಸಿತು. ಸೀತಾವೃತ್ತಾಂತವನ್ನು ತಿಳಿಸುವ ಜಟಾಯುವಿನ ಹೇಳಿಕೆ ಶ್ರೀರಾಮನಿಗೆ ಪ್ರಿಯವೆನಿಸಿತು. ಅವನು ತನ್ನ ಮಹಾಧನುಸ್ಸನ್ನು ಕೆಳಗಿಟ್ಟು ಗೃಧ್ರರಾಜನನ್ನು ಆಲಿಂಗಿಸಿಕೊಂಡ; ಚೈತನ್ಯಗುಂದಿ ನೆಲದಲ್ಲಿ ಕುಸಿದ.



ರಾಮಲಕ್ಷ್ಮಣರಿಗೆ ಜಟಾಯು ದೊರೆತುದುದು

ಕಣ್ಣೀರು ಹರಿಯಿತು. ಲಕ್ಷ್ಮಣನೂ ದುಃಖಿಸಿದ. ನಿರ್ಜನವೂ ದುರ್ಗಮವೂ ಆದ ವನಪ್ರದೇಶದಲ್ಲಿ ಏಕಾಕಿಯಾಗಿ ಮೇಲುಸಿರೆಳೆಯುತ್ತಿದ್ದ ಜಟಾಯುವನ್ನು ನೋಡಿ ಶ್ರೀರಾಮನಿಗೆ ಬಹಳ ವ್ಯಥೆಯಾಯಿತು. ಅವನು ಸೌಮಿತ್ರಿಯ ಕಡೆಗೆ ತಿರುಗಿ "ಲಕ್ಷ್ಮಣ, ರಾಜ್ಯಭ್ರಷ್ಟನಾದೆ, ವನವಾಸವು ಪ್ರಾಪ್ತವಾಯಿತು, ಸೀತೆ ಅಪಹೃತಳಾದಳು, ಈ ಪಕ್ಷಿರಾಜನು ಹತನಾದ! ನನ್ನ ದೌರ್ಭಾಗ್ಯವನ್ನು ನೋಡು! ಈ ದುರದೃಷ್ಟಪರಂಪರೆ ಬೆಂಕಿಯನ್ನೂ ಸುಟ್ಟು ಬೂದಿ ಮಾಡೀತು! ಈಗ ನಾನು ತುಂಬಿದ ಮಹಾಸಾಗರದಲ್ಲಿ ಧುಮುಕಿದರೆ ಆ ನದೀಪತಿಯೂ ನನ್ನ ದೌರ್ಭಾಗ್ಯದಿಂದ ನೀರಿಲ್ಲದೆ ಒಣಗಿಹೋದಾನು! ಚರಾಚರಪ್ರಪಂಚದಲ್ಲಿ ನನಗಿಂತಲೂ ಹೆಚ್ಚಿನ ದುರ್ದೈವಿ ಇನ್ನೊಬ್ಬನಿಲ್ಲ. ವ್ಯಸನವೆಂಬ ದೊಡ್ಡ ತೊಡಕಿನ ಬಲೆಯಲ್ಲಿ ನಾನು ಸಿಕ್ಕಿಹೋದೆ. ಈ ಗೃಧ್ರರಾಜನು ನಮ್ಮ ತಂದೆಯ ಮಿತ್ರ; ವಯಸ್ಸಾದವನು. ಇವನು ನನ್ನ ದುರದೃಷ್ಟದಿಂದ ಹತನಾಗಿ ನೆಲದಮೇಲೆ ಮಲಗಿರುವನಲ್ಲ!" ಎಂದು ಬಹುಪರಿಯಲ್ಲಿ ಗೋಳಾಡಿದ. ಜಟಾಯುವನ್ನು ತನ್ನ ತಂದೆಯಂತೆ ಪಿತೃವಾತ್ಸಲ್ಯದಿಂದ ಲಕ್ಷ್ಮಣನೊಡನೆ ಮುಟ್ಟಿಮುಟ್ಟಿ ತಡವಿ ಸಂತೈಸಿದ. ಆ ಗೃಧ್ರರಾಜನ ರೆಕ್ಕೆಗಳು ಹರಿದಿದ್ದವು; ಅವನು ರಕ್ತದಲ್ಲಿ ನೆನೆದಿದ್ದ. ಶ್ರೀರಾಮನು ಆ ಜಟಾಯುವನ್ನು ಅಪ್ಪಿಕೊಂಡು! "ಅಪ್ಪಾ ಜಟಾಯು, ನನ್ನ ಪ್ರಾಣಕಾಂತೆಯಾದ ಮೈಥಿಲಿ ಎಲ್ಲಿ?" ಎಂದು ಹೇಳುತ್ತ ನೆಲದ ಮೇಲೆ ಕುಸಿದುಬಿದ್ದ.

೩೦. ಜಟಾಯುವು ಸೀತಾವೃತ್ತಾಂತವನ್ನು ಹೇಳುತ್ತ ಪ್ರಾಣಬಿಡುವುದು, ಜಟಾಯುವಿನ ಸಂಸ್ಕಾರ

ಕ್ರೂರಿಯಾದ ರಾವಣನು ಹೊಡೆದುರುಳಿಸಿದ್ದ ಜಟಾಯವನ್ನು ನೋಡಿ ಶ್ರೀರಾಮನು ಸ್ನೇಹಸಂಪನ್ನನಾದ ಸೌಮಿತ್ರಿಯನ್ನು ಕರೆದು "ಲಕ್ಷ್ಮಣ, ನನಗೆ ಉಪಕಾರಮಾಡಲು ಪ್ರಯತ್ನಿಸಿದ ಈ ಪಕ್ಷಿರಾಜನು ಯುದ್ಧದಲ್ಲಿ ರಾಕ್ಷಸನ ಹಿಂಸೆಗೆ ಬಲಿಯಾಗಿದ್ದಾನೆ. ಹೋಗಲಾರದ ಪ್ರಾಣವನ್ನು ಬಿಡುವುದರಲ್ಲಿದ್ದಾನೆ. ಅತಿಯಾಗಿ ಬಳಲಿದ್ದಾನೆ; ದೇಹದಲ್ಲಿ ಇನ್ನೂ ಪ್ರಾಣವಿದೆ. ಧ್ವನಿಯು ಉಡುಗಿದೆ; ವಿಹ್ವಲನಾಗಿ ನೋಡುತ್ತಿದ್ದಾನೆ" ಎಂದು ಹೇಳಿ, ಜಟಾಯುವಿನ ಕಡೆ ತಿರುಗಿ, "ಅಪ್ಪಾ ಜಟಾಯು, ನಿನಗೆ ಮಾತಾಡುವ ಶಕ್ತಿ ಇದೆಯೇ? ಇದ್ದರೆ ಸೀತೆಯ ವಿಷಯವನ್ನು ಹೇಳು; ನಿನಗೆ ಮರಣ ಬಂದ ಪ್ರಕಾರವನ್ನು ಹೇಳು. ನಿನಗೆ ಸದ್ಗತಿಯಾಗಲಿ. ರಾವಣನು ಸೀತೆಯನ್ನು ಏಕೆ ಅಸಹರಿಸಿದನಂತೆ? ಅವನಿಗೆ ನಾನು ಮಾಡಿದ್ದೇನು? ನನ್ನ ಯಾವ ಅಪರಾಧವನ್ನು ಕಂಡು ರಾವಣನು ನನ್ನ ಪ್ರಿಯೆಯನ್ನು ಅಪಹರಿಸಿದ? ಚಂದ್ರಸಂಕಾಶವಾದ ಸೀತೆಯ ಮನೋಹರ ಮುಖವು ಆ ಸಮಯದಲ್ಲಿ ಹೇಗಿತ್ತು? ಪಕ್ಷಿರಾಜ, ಸೀತೆಯು ಆಗ ಏನು ಹೇಳುತ್ತಿದ್ದಳು? ಆ ರಾಕ್ಷಸನ ಪರಾಕ್ರಮ ಎಂತಹುದು? ಅವನ ಆಕೃತಿ ಹೇಗಿದೆ? ಆತನ ಉದ್ಯೋಗವೇನು? ಅಪ್ಪಾ ಜಟಾಯು, ಅವನ ವಾಸಸ್ಥಳ ಎಲ್ಲಿದೆ? ಹೇಳು" ಎಂದ. ಹೀಗೆ ಅನಾಥನಂತೆ ವಿಲಪಿಸುತ್ತಿದ್ದ ಶ್ರೀರಾಮನನ್ನು ಮುಖವೆತ್ತಿ ನೋಡಿ ಧರ್ಮಾತ್ಮನಾದ ಜಟಾಯುವು

ಈ ಪ್ರಕಾರ ನುಡಿದ: "ರಾಕ್ಷಸರಾಜನಾದ ರಾವಣನು ಅವಳನ್ನು ಅಪಹರಿಸಿದ್ದಾನೆ. ಆ ದುರಾತ್ಮನು ಮಾಯೆಯಿಂದ ಬಿರುಗಾಳಿಯನ್ನೂ ಮೋಡದ ರಾಶಿಯನ್ನೂ ಸೃಷ್ಟಿಸಿ ಸೀತಾದೇವಿಯನ್ನು ಅಪಹರಿಸಿಕೊಂಡು ಹೋದ. ವತ್ಸ ರಾಮ, ಯುದ್ಧ ಮಾಡಿ ಬಳಲಿದ ನನ್ನ ರೆಕ್ಕೆಗಳನ್ನು ಕತ್ತರಿಸಿ ಆ ರಾಕ್ಷಸನು ವೈದೇಹಿಯನ್ನೆತ್ತಿಕೊಂಡು ದಕ್ಷಿಣ ದಿಕ್ಕಿಗೆ ಹೋದ. ಅಬ್ಬಾ! ನನ್ನ ಪ್ರಾಣವು ಮರಣಯಾತನೆಗೆ ಸಿಕ್ಕಿ ತೊಳಲುತ್ತಿದೆ. ಕಣ್ಣು ಮಂಜಾಗಿ ಸುತ್ತುತ್ತಿದೆ, ಲಾವಂಚದಿಂದ ಅಲಂಕೃತವಾದ ಚಿನ್ನದ ಮರಗಳು ಕಾಣಿಸುತ್ತಿವೆ, ರಾಘವ, ಯಾವ ಮುಹೂರ್ತದಲ್ಲಿ ರಾವಣನು ಸೀತೆಯನ್ನ ಅಪಹರಿಸಿದನೋ, ಆಗ ನಷ್ಟವಾದ ವಸ್ತು ಬೇಗನೆ ಹಿಂದಿರುಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ರಾವಣನಿಗೆ ಅದು ತಿಳಿಯಲಿಲ್ಲ. ನಿನ್ನ ಕಾಂತೆಯಾದ ಜಾನಕಿಯನ್ನು ಅಪಹರಿಸಿದ ರಾವಣನು ಶೀಘ್ರದಲ್ಲಿ ಸಾಯುವನು; ಗಾಳವನ್ನು ನುಂಗಿದ ಮೀನಿನಂತೆ ನಾಶವಾಗುವನು. ಜನಕಪುತ್ರಿಯ ವಿಷಯವಾಗಿ ವ್ಯಥೆಪಡಬೇಡ. ಆ ರಾಕ್ಷಸನನ್ನು ರಣರಂಗದಲ್ಲಿ ನೀನು ಸಂಹರಿಸಿ, ಶೀಘ್ರದಲ್ಲಿಯೇ ಜಾನಕಿಯೊಡನೆ ವಿಹರಿಸುವೆ" ಎಂದ. ಹೀಗೆ ಮರಣಕಾಲದಲ್ಲಿಯೂ ಜಟಾಯುವು ಸರಿಯಾಗಿ ಮಾತನಾಡುತ್ತಿರಲು, ಅವನ ಬಾಯಿಂದ ಗರಣೆಗರಣೆಯಾಗಿ ರಕ್ತ ಸುರಿಯಿತು. ಆ ಪಕ್ಷಿರಾಜನು, "ರಾವಣನು ವಿಶ್ರವಸ್ಸಿನ ಔರಸಪುತ್ರ; ಕುಬೇರನ ತಮ್ಮ" ಎಂದು ಹೇಳಿ ಕಡೆಯುಸಿರೆಳೆದು ಪ್ರಾಣಬಿಟ್ಟ. ಶ್ರೀರಾಮನು ಕೈಮುಗಿದುಕೊಂಡು, "ಅಪ್ಪಾ ಜಟಾಯು, ಹೇಳು ಹೇಳು!" ಎನ್ನುತ್ತಿರುವಾಗಲೇ ಜಟಾಯುವಿನ ಪ್ರಾಣಪಕ್ಷಿಯು ದೇಹವನ್ನು ಬಿಟ್ಟು ಗಗನವನ್ನಡರಿತು. ಜಟಾಯುವಿನ ತಲೆ ನೆಲದ ಮೇಲೆ ಒರಗಿತು. ಕಾಲುಗಳು ಚಾಚಿಕೊಂಡವು, ದೇಹವು ಸೆಟೆದು ಭೂಮಿಯಲ್ಲುರುಳಿತು. ಮೃತನಾಗಿ ಬಿದ್ದ ಪರ್ವತಾಕಾರದ ಜಟಾಯುವನ್ನು ನೋಡಿ ಶ್ರೀರಾಮನು ಬಹುವಿಧದಲ್ಲಿ ಹಲುಬುತ್ತ ಅತ್ತ. ಕಡೆಗೆ ದೈನ್ಯದಿಂದ ಸೌಮಿತ್ರಿಯನ್ನು ನೋಡಿ ಶ್ರೀರಾಮನು, "ಲಕ್ಷ್ಮಣ, ರಾಕ್ಷಸರು ನೆಲೆಸಿರುವ ಈ ದಂಡಕಾರಣ್ಯದಲ್ಲಿಯೂ ಸಹ ಈ ಪಕ್ಷಿರಾಜನು ಬಹುವರ್ಷಗಳಿಂದ ಸುಖವಾಗಿದ್ದನು. ಈಗ ಈ ಪ್ರಕಾರದಲ್ಲಿ ಗಾಯಗೊಂಡು ಹತನಾದ. ಚಿರಕಾಲದವರೆಗೆ ಬದುಕಿ ಬಾಳಿ ವೃದ್ಧನಾಗಿದ್ದಾನೆ. ಇಂತಹವನೂ ಈ ದಿನ ಹತನಾಗಿ ಮಲಗಿದನಲ್ಲ! ಕಾಲವನ್ನು ಮೀರುವುದು ಯಾರಿಗೂ ಶಕ್ಯವಲ್ಲ. ಲಕ್ಷ್ಮಣ, ಗೃಧ್ರರಾಜನು ನನಗೆ ಉಪಕಾರಮಾಡಲು ಹೋಗಿ ಸಾವಿಗೆ ಒಳಗಾದುದನ್ನು ನೋಡು. ಸೀತೆಯನ್ನು ಬಿಡಿಸಲು ಹೋಗಿ ಪ್ರಬಲನಾದ ರಾವಣನಿಂದ ಹತನಾದ. ಪರಂಪರೆಯಿಂದ ಬಂದ ಗೃಧ್ರರಾಜ್ಯವನ್ನು ತ್ಯಜಿಸಿ, ಈ ಪಕ್ಷಿರಾಜನು ನನಗೋಸ್ಕರ ಪ್ರಾಣವನ್ನು ತೊರೆದಿದ್ದಾನೆ. ಧರ್ಮನಿಷ್ಠರಾದ ಸಾಧುಗಳು ಎಲ್ಲಾ ಕಡೆಯಲ್ಲಿಯೂ ಕಂಡುಬರುತ್ತಾರೆ. ಸೌಮಿತ್ರಿ, ತಿರ್ಯಗ್ಜಂತುಗಳಲ್ಲಿಯೂ ಶೂರರೂ ಶರಣಾಗತರಕ್ಷಕರೂ ಇದ್ದಾರೆ ನೋಡು. ವತ್ಸ, ಈಗ ನನಗೆ ಸೀತಾಪಹರಣದಿಂದಾದ ದುಃಖವೂ ಅಷ್ಟಾಗಿ ಕಾಣುವುದಿಲ್ಲ. ಈ ಪಕ್ಷಿಯು ನನಗೋಸ್ಕರ ಪ್ರಾಣವನ್ನು ಒಪ್ಪಿಸಿತಲ್ಲ ಎಂಬ ದುಃಖವು ನನ್ನನ್ನು ಅತಿಯಾಗಿ ಪೀಡಿಸುತ್ತಿದೆ. ಕೀರ್ತಿಶಾಲಿಯಾದ ದಶರಥಮಹಾರಾಜನು ನನಗೆ ಹೇಗೆ ಪೂಜ್ಯನೋ ಹಾಗೆಯೇ ಈ ಪಕ್ಷಿರಾಜನು ನನಗೆ ಪೂಜ್ಯ. ಒಣಕಟ್ಟಿಗೆಗಳನ್ನು ತೆಗೆದುಕೊಂಡು ಬಾ; ಬೆಂಕಿಯನ್ನು ಉತ್ಪಾದಿಸುತ್ತೇನೆ: ನನಗೋಸ್ಕರ ಪ್ರಾಣಬಿಟ್ಟ ಪಕ್ಷಿರಾಜನಿಗೆ ಅಗ್ನಿಸಂಸ್ಕಾರವನ್ನು ಮಾಡುತ್ತೇನೆ. ಪಕ್ಷಿಗಳಿಗೆ

ಅಧಿಪತಿಯಾದ ಜಟಾಯುವನ್ನು ಚಿತೆಯ ಮೇಲಿಡುತ್ತೇನೆ; ಕ್ರೂರನಾದ ರಾಕ್ಷಸನಿಂದ ಹತನಾದ ಈತನಿಗೆ ದಹನಸಂಸ್ಕಾರವನ್ನು ಮಾಡುತ್ತೇನೆ" ಎಂದ.

ಅದರಂತೆಯೇ, ಲಕ್ಷ್ಮಣನು ಚಿತೆಯನ್ನು ಸಿದ್ಧಪಡಿಸಲು ಶ್ರೀರಾಮನು "ಪಕ್ಷಿರಾಜನೇ, ಜಟಾಯು, ಪಂಚಮಹಾಯಜ್ಞಗಳನ್ನು ಆಚರಿಸುವ ಗೃಹಸ್ಥರಿಗೂ ಆಹಿತಾಗ್ನಿಗಳಾದ ವಾನಪ್ರಸ್ಥರಿಗೂ ಯಾವ ಸದ್ಗತಿಯು ದೊರಕುವುದೋ, ಯುದ್ಧದಲ್ಲಿ ಹಿಂದೆಗೆಯದ ವೀರರಿಗೂ ಭೂದಾನಮಾಡುವವರಿಗೂ ಯಾವ ಸದ್ಗತಿಯು ದೊರಕುವುದೋ, ಅದು ನಿನಗೆ ದೊರಕಲಿ. ನಾನು ನಿನಗೆ ಅನುಜ್ಞೆ ಕೊಟ್ಟದ್ದೇನೆ. ನಿನಗೆ ಪುಣ್ಯಲೋಕವು ಪ್ರಾಪ್ತವಾಗಲಿ. ಗೃಧ್ರರಾಜ, ನನ್ನಿಂದ ಸಂಸ್ಕಾರವನ್ನು ಪಡೆದು ನೀನು ಪುಣ್ಯಲೋಕವನ್ನು ಸೇರು" ಎಂದು ಹೇಳಿ, ಆ ಚಿತೆಯಲ್ಲಿ ಜಟಾಯುವಿನ ಕಳೇವರವನ್ನಿಟ್ಟ ಧರ್ಮಾತ್ಮನಾದ ಶ್ರೀರಾಮನು ತನ್ನ ಬಂಧುವಿಗೆ ದಹನಸಂಸ್ಕಾರ ಮಾಡುವಂತೆ ದುಃಖಿಸುತ್ತ, ಚಿತೆಗೆ ಅಗ್ನಿಸ್ಪರ್ಶಮಾಡಿ ದಹಿಸಿದ. ಆಮೇಲೆ ಲಕ್ಷ್ಮಣನೊಡನೆ ವನದೊಳಗೆ ಹೋಗಿ ದೊಡ್ಡ ದೊಡ್ಡ ಜಿಂಕೆಗಳನ್ನು ಕೊಂದು ತಂದು ಜಟಾಯುವಿಗೆ ಪಿಂಡವನ್ನರ್ಪಿಸುವುದಕ್ಕಾಗಿ ದರ್ಭೆಗಳನ್ನು ಹರಡಿದ, ಜಿಂಕೆಗಳ ಮಾಂಸದಿಂದ ಪಿಂಡಗಳನ್ನು ನಿರ್ಮಿಸಿದ. ಶ್ರೀರಾಮನು ಹಚ್ಚನೆಯ ಹುಲ್ಲುಗಾವಲಿನಲ್ಲಿ ಆ ಪಕ್ಷಿಗೆ ಪಿಂಡಗಳನ್ನರ್ಪಿಸಿದ. ಮೃತನಾದವನಿಗೆ ಸದ್ಗತಿಯಾಗಲೆಂದು ಯಾವ ಪಿತೃಮೇಧಮಂತ್ರಗಳನ್ನು ದ್ವಿಜರು ಹೇಳುತ್ತಾರೆಯೋ ಆ ಮಂತ್ರಗಳನ್ನು ಶ್ರೀರಾಮನು ಜಪಿಸಿದ. ಅನಂತರ ರಾಮಲಕ್ಷ್ಮಣರಿಬ್ಬರೂ ಗೋದಾವರೀ ನದಿಗೆ ಹೋದರು. ಅಲ್ಲಿ ಅವರಿಬ್ಬರೂ ಸ್ನಾನಮಾಡಿ ಶಾಸ್ತ್ರೋಕ್ತವಾದ ವಿಧಿಯಂತೆ ಜಟಾಯುವಿಗೆ ಜಲತರ್ಪಣವನ್ನಿತ್ತರು. ಜಟಾಯುವು ಯಶಸ್ಕರವೂ ಅನ್ಯದುಷ್ಕರವೂ ಆದ ಕಾರ್ಯವನ್ನು ರಣರಂಗದಲ್ಲಿ ಮಾಡಿ ಮಡಿದ; ಆಮೇಲೆ ಮಹರ್ಷಿಸದೃಶನಾದ ಶ್ರೀರಾಮನಿಂದ ಉತ್ತರಕ್ರಿಯೆಯನ್ನು ಪಡೆದು ಶುಭಕರವಾದ ಪುಣ್ಯಲೋಕವನ್ನು ಸೇರಿದ. ಶ್ರೀರಾಮಲಕ್ಷ್ಮಣರು ಆ ಪಕ್ಷಿರಾಜನಿಗೆ ಉದಕಕ್ರಿಯೆಯನ್ನು ನಡೆಸಿ ಮುಂದೆ ಹೊರಟರು. ಜಟಾಯು ಮಾಡಿದ ಉಪಕಾರದ ಸ್ಮರಣೆಯು ಅವರ ಹೃದಯದಲ್ಲಿ ಸ್ಥಿರವಾಗಿ ನಿಂತಿತು. ಅನಂತರ ದೇವತೆಗಳಿಗೆ ಅಧೀಶ್ವರರಾದ ಮಹೇಂದ್ರೋಪೇಂದ್ರರಂತಿದ್ದ ಆ ರಾಜಪುತ್ರರು ಸೀತಾದೇವಿಯನ್ನು ಅರಸುವುದಕ್ಕಾಗಿ ವನದಲ್ಲಿ ಪ್ರಯಾಣಮಾಡಿದರು.

೩೧. ಅಯೋಮುಖಿ ಎಂಬ ರಾಕ್ಷಸಿಯ ಪ್ರಸಂಗ; ಕಬಂಧನು ರಾಮಲಕ್ಷ್ಮಣರನ್ನು ಕಟ್ಟಿಹಾಕುವುದು

ಶ್ರೀರಾಮಲಕ್ಷ್ಮಣರು ಜಟಾಯುವಿಗೆ ಉದಕಕ್ರಿಯೆಯನ್ನು ಮಾಡಿ ಸೀತೆಯನ್ನು ಅನ್ವೇಷಿಸುತ್ತ ದಕ್ಷಿಣದಿಕ್ಕಿಗೆ ಹೋಗುವಾಗ ಸ್ವಲ್ಪ ಪಶ್ಚಿಮದ ಕಡೆಗೆ ವಾಲಿದರು. ಅವರು ಬಿಲ್ಲು, ಬಾಣ, ಕತ್ತಿಗಳನ್ನು ಧರಿಸಿ ಜನಸಂಚಾರಶೂನ್ಯವಾದ ದಾರಿಯನ್ನು ಹಿಡಿದು ಹೋಗುತ್ತಿದ್ದರು. ಆ ಕಾಡುದಾರಿಯು ಪೊದೆಮರಬಳ್ಳಿಗಳಿಂದ ನಿಬಿಡವಾಗಿ ದುರ್ಗಮವೂ ಭಯಾನಕವೂ ಆಗಿತ್ತು. ಬಲಾಢ್ಯರಾದ ಆ ವೀರರು ದಟ್ಟವಾದ ಆ ಗೊಂಡಾರಣ್ಯದಲ್ಲಿ

ಬೇಗಬೇಗನೆ ನಡೆಯುತ್ತ ದಕ್ಷಿಣದಿಕ್ಕನ್ನು ಹಿಡಿದು ಹೋಗುತ್ತಿದ್ದರು. ರಘುಕುಲೋತ್ಪನ್ನರಾದ ಆ ಓಜಸ್ವಿಗಳು ಜನಸ್ಥಾನದಿಂದ ಮೂರು ಹರದಾರಿಗಳಷ್ಟು ದೂರವನ್ನು ನಡೆದು ಗಂಭೀರವಾದ ಕ್ರೌಂಚಾರಣ್ಯವನ್ನು ಪ್ರವೇಶಿಸಿದರು. ಆ ಅರಣ್ಯವು ನಾನಾ ವರ್ಣದ ಮೇಘಸಮೂಹದಂತೆ ಮರಗಳಿಂದ ತುಂಬಿ ವಿವಿಧವರ್ಣದ ಸುಂದರ ಹೂಗಳಿಂದಲೂ ಮೃಗಪಕ್ಷಿಗಳಿಂದಲೂ ಕೂಡಿ ನಲಿಯುವಂತಿತ್ತು. ಸೀತಾಪಹರಣದಿಂದ ಖಿನ್ನರಾದ ಆ ರಾಜಪುತ್ರರು ವೈದೇಹಿಗಾಗಿ ಆ ವನವನ್ನು ಶೋಧಿಸುತ್ತ, ಅಲ್ಲಲ್ಲಿ ವಿಶ್ರಮಿಸಿಕೊಳ್ಳುತ್ತ ನಡೆದರು. ಆ ಸೋದರರು ಕ್ರೌಂಚಾರಣ್ಯವನ್ನು ದಾಟ ಮತಂಗಾಶ್ರಮದ ಪೂರ್ವದಿಕ್ಕಿನಲ್ಲಿ ದಕ್ಷಿಣದ ಕಡೆಗೆ ಮೂರು ಹರದಾರಿ ನಡೆದು ಮಧ್ಯದಲ್ಲಿ ಇನ್ನೊಂದು ವನವನ್ನು ಕಂಡರು. ಭೀಕರವಾದ ವನ್ಯಮೃಗಗಳಿಂದಲೂ ಪಕ್ಷಿಗಳಿಂದಲೂ ಸರ್ಪ ಮುಂತಾದ ನಾನಾ ಜಂತುಗಳಿಂದಲೂ ತುಂಬಿ ಮರಗಳಿಂದ ದಟ್ಟವಾಗಿದ್ದ ಆ ಕಾಡು ಭಯಂಕರವಾಗಿತ್ತು. ಅಲ್ಲಿದ್ದ ಒಂದು ಬೆಟ್ಟದಲ್ಲಿ ಆ ದಶರಥಕುಮಾರರಿಗೆ ಒಂದು ದರಿಯು ಗೋಚರಿಸಿತು. ಆ ದರಿಯು ಪಾತಾಳಕ್ಕೆ ಹೋಗಿದೆಯೋ ಎಂಬಂತೆ ಬಹಳ ಆಳವಾಗಿದ್ದು ಕತ್ತಲಿಂದ ತುಂಬಿತ್ತು. ಪುರುಷಶ್ರೇಷ್ಠರಾದ ಶ್ರೀರಾಮಲಕ್ಷ್ಮಣರು ಅದರ ಬಳಿಗೆ ಹೋದರು. ಅದರ ಸಮೀಪದಲ್ಲಿ ಅವರಿಗೆ ಒಬ್ಬ ರಾಕ್ಷಸಿಯು ಕಾಣಿಸಿದಳು! ಮಹಾಶರೀರದ ಆ ರಾಕ್ಷಸಿಯ ಮುಖವು ವಿಕಾರವಾಗಿತ್ತು. ಜಿಗುಪ್ಸೆಯನ್ನು ಹುಟ್ಟಿಸುವ ಅವಳ ಘೋರಾಕೃತಿಯನ್ನು ನೋಡಿದರೆ ಸಾಮಾನ್ಯಜನರು ಹೆದರಿ ತತ್ತರಿಸಿ ಹೋಗುತ್ತಿದ್ದರು. ಜೋಲು ಹೊಟ್ಟೆಯ ಆ ಕರಾಳಿಗೆ ಚೂಪಾದ ಕೋರೆಯ ಹಲ್ಲುಗಳಿದ್ದವು. ಅವಳ ಚರ್ಮವು ದೊರಗುದೊರಗಾಗಿದ್ದಿತು. ಸೊಟ್ಟಸೊಟ್ಟಾದ ಬೊಜ್ಜು ದೇಹದ ಆ ರಾಕ್ಷಸಿಯು ಕೂದಲನ್ನು ಕೆದರಿಕೊಂಡು ಕ್ರೂರಮೃಗಗಳನ್ನು ತಿನ್ನುತ್ತ ಕುಳಿತಿರುವುದನ್ನು ರಾಮಲಕ್ಷ್ಮಣರು ನೋಡಿದರು. ಲಕ್ಷ್ಮಣನು ಶ್ರೀರಾಮನ ಮುಂದುಗಡೆ ಹೋಗುತ್ತಿದ್ದ. ಆ ರಾಕ್ಷಸಿಯು ನೇರವಾಗಿ ಅವರೆಡೆಗೆ ಬಂದು ಲಕ್ಷ್ಮಣನನ್ನು ನೋಡಿ "ಬಾ! ನಾವಿಬ್ಬರೂ ಆನಂದದಿಂದ ವಿಹರಿಸೋಣ!" ಎಂದು ಹೇಳುತ್ತ ಅವನನ್ನು ಹಿಡಿದುಕೊಂಡಳು. ಅವಳು ಲಕ್ಷ್ಮಣನನ್ನು ಅಪ್ಪಿಕೊಂಡು "ನಾನು ಅಯೋಮುಖಿ ಎಂಬವಳು. ನಾನು ದೊರಕಿದ್ದು ನಿನಗೆ ದೊಡ್ಡ ಲಾಭ! ನಿನ್ನಲ್ಲಿ ನನಗೆ ಪ್ರೀತಿಯುಂಟಾಗಿದೆ! ನಾಥ, ಗಿರಿಶೃಂಗಗಳಲ್ಲಿಯೂ ನದಿಗಳ ಮರಳುದಿಣ್ಣೆಗಳಲ್ಲಿಯೂ ನನ್ನೊಡನೆ ವಿಹರಿಸು! ವೀರಾಗ್ರೇಸರ, ನಿನ್ನ ಆಯುಸ್ಸನ್ನೆಲ್ಲ ನನ್ನೊಂದಿಗೆ ರಮಿಸುತ್ತ ಕಳೆಯಬಹುದು!" ಎಂದಳು. ಆಗ ಲಕ್ಷ್ಮಣನು ಕ್ರುದ್ಧನಾಗಿ ಕತ್ತಿಯನ್ನು ಸೆಳೆದು ಆ ರಾಕ್ಷಸಿಯ ಕಿವಿ ಮೂಗು ಮೊಲೆಗಳನ್ನು ಕೊಯ್ದು ಹಾಕಿದ. ಕಿವಿ ಮೂಗುಗಳನ್ನು ಕೊಯ್ದೊಡನೆ ಅಯೋಮುಖಿಯು ಅಪಸ್ವರದಿಂದ ಅರಚುತ್ತ ಬಂದ ದಾರಿಹಿಡಿದು ಕಾಡಿನೊಳಗೆ ಓಡಿಹೋದಳು.

ಅನಂತರ ಶತ್ರುಸಂಹಾರಕರಾದ ರಾಮಲಕ್ಷ್ಮಣರು ತಮ್ಮ ತೇಜೋಬಲದಿಂದ ಯಾವುದನ್ನೂ ಲೆಕ್ಕಿಸದೆ ಆ ಕಾಡಿನಲ್ಲಿ ಮುಂದೆ ಹೋಗುತ್ತಿದ್ದರು. ಆಗ ಮಹಾತೇಜಸ್ವಿಯೂ ಧೀರನೂ ಶೀಲವಂತನೂ ಸಚ್ಚಾರಿತ್ರನೂ ಆದ ಲಕ್ಷ್ಮಣನು ಅಣ್ಣನಿಗೆ ಕೈಮುಗಿದು, "ಅಣ್ಣ ನನ್ನ ಎಡದೋಳು ಸ್ಪಷ್ಟವಾಗಿ ಅದುರುತ್ತಿದೆ. ಮನಸ್ಸು ಕಳವಳಿಸುತ್ತಿದೆ. ಇನ್ನೂ ಕೆಲವು ಕೆಟ್ಟ ಶಕುನಗಳು ತೋರುತ್ತಿವೆ. ಆದ್ದರಿಂದ, ಅಣ್ಣ, ಸಿದ್ಧನಾಗಿರು. ನನ್ನ ಹಿತವಾಕ್ಯವನ್ನು

ನಡೆಸು. ನನಗಾಗುವ ಅಪಶಕುನಗಳು ಸದ್ಯದಲ್ಲಿಯೇ ಯಾವುದೋ ಭಯವು ಸನ್ನಿಹಿತವಾಗಿದೆಯೆಂದು ಸೂಚಿಸುತ್ತವೆ. ಈ ವಂಚುಲಕ ಪಕ್ಷಿಯು ಭಯಂಕರವಾಗಿ ಕೂಗುತ್ತಿದೆ. ಮುಂದೆ ನಡೆಯುವ ಯುದ್ಧದಲ್ಲಿ ನಮಗೆ ವಿಜಯವಾಗುವುದೆಂದು ಅದು ಸೂಚಿಸುವಂತಿದೆ" ಎಂದು ನಿವೇದಿಸಿದ. ಆಮೇಲೆ ಅವರಿಬ್ಬರೂ ನಿರ್ಭೀತಿಯಿಂದ ಆ ವನದಲ್ಲಿ ಸೀತಾದೇವಿಯನ್ನು ಹುಡುಕತೊಡಗಿದರು. ಆಗ ಅರಣ್ಯವೇ ಮುರಿದುಬೀಳುವುದೋ ಎಂಬಂತೆ ದೊಡ್ಡ ಗರ್ಜನೆಯೊಂದು ಕೇಳಿಸಿತು. ಅಂತರಿಕ್ಷವು ಗಾಳಿಯಿಂದ ಸುಯ್ಯನೆ ತುಂಬಿಹೋದಂತಾಯಿತು. ಅರಣ್ಯದಲ್ಲಿ ಸಿಡಿದೆದ್ದ ಶಬ್ದವು ಜೀವಲೋಕವನ್ನು ವ್ಯಾಪಿಸಿದಂತಾಯಿತು. ಆಗ ಶ್ರೀರಾಮನು ಆ ಶಬ್ದದ ಮೂಲವೇನೆಂದು ಅರಿಯುವುದಕ್ಕಾಗಿ ತಮ್ಮನೊಡನೆ ವನದಲ್ಲಿ ಹೋಗುತ್ತಿರುವಾಗ, ಬಹುದೊಡ್ಡ ದೇಹ, ವಿಶಾಲ ವಕ್ಷಸ್ಥಲವುಳ್ಳ ಒಬ್ಬ ರಾಕ್ಷಸನು ಗೋಚರಿಸಿದ. ಅವರೀರ್ವರೂ ಎದುರಿಗೆ ನಿಂತಿದ್ದ ಅವನ ಕಡೆಗೆ ಹೋದರು. ಆ ರಾಕ್ಷಸನು ಮಹಾಕಾಯನಾಗಿದ್ದನಲ್ಲದೆ ಅವನ ಬಾಯಿ ಹೊಟ್ಟೆಯಲ್ಲಿತ್ತು. ತಲೆ ಮತ್ತು ಕುತ್ತಿಗೆಗಳೆರಡೂ ಇರಲಿಲ್ಲ! ಅವನೊಬ್ಬ ತಲೆಯಿಲ್ಲದ ಕಬಂಧನಾಗಿದ್ದನು. ಅವನು ಪರ್ವತದಂತೆ ಎತ್ತರವಾಗಿದ್ದನಲ್ಲದೆ ಅವನ ರೋಮಗಳು ಚೂಪಾಗಿ ನಿಮಿರಿ ನಿಂತಿದ್ದವು. ನೀಲಮೇಘದಂತೆ ಕರ್‍ರಗೆ ರೌದ್ರಾಕಾರನಾಗಿ, ಗುಡುಗಿನಂತೆ ಗಟ್ಟಿಯಾಗಿ ಗರ್ಜಿಸುತ್ತಿದ್ದನು. ತಲೆ ಹೊಟ್ಟೆಯಲ್ಲಿದ್ದುದರಿಂದ ಎದೆಯ ಬಳಿ ಹಣೆಯಲ್ಲಿ ಒಂದು ಕಣ್ಣು ಅಗ್ನಿಜ್ವಾಲೆಯಂತೆ ಕಂಗೊಳಿಸುತ್ತಿತ್ತು. ಬಹು ದೊಡ್ಡದೂ ನೀಳವೂ ಆದ ಕಂದುಬಣ್ಣದ ಆ ಕಣ್ಣಿಗೆ ವಿಶಾಲವಾದ ರೆಪ್ಪೆಯಿತ್ತು. ಭೀಕರವಾದ ಆ ಕಣ್ಣಿಗೆ ಹರಿತವಾದ ದೃಷ್ಟಿಯಿತ್ತು. ಆ ರಾಕ್ಷಸನು ಕೋರೆದಾಡೆಗಳಿರುವ ಅಗಲವಾದ ಬಾಯನ್ನು ನಾಲಿಗೆಯಿಂದ ನೆಕ್ಕಿ ನೇವರಿಸುತ್ತಿದ್ದ. ಕರಡಿ, ಸಿಂಹ, ಜಿಂಕೆ, ಆನೆ ಮುಂತಾದ ಮಹಾಮೃಗಗಳನ್ನು ಹಿಡಿದು ಆತನು ತಿನ್ನುತ್ತಿದ್ದ. ಸುಮಾರು ಒಂದು ಯೋಜನ ಉದ್ದವಿದ್ದ ಘೋರಾಕಾರದ ಎರಡು ತೋಳುಗಳನ್ನು ವಿಕಾರವಾಗಿ ನೀಡುತ್ತ ಬಾಗಿಸುತ್ತ ಇದ್ದ; ಕರಡಿ ಪಕ್ಷಿ ಜಿಂಕೆ ಮುಂತಾದ ವಿವಿಧ ಪ್ರಾಣಿಗಳನ್ನು ಎರಡು ಕೈಗಳಿಂದ ತನ್ನೆಡೆಗೆ ಎಳೆಯುತ್ತ ತಳ್ಳುತ್ತ ಇದ್ದ. ಆ ರಾಕ್ಷಸನು ಅಣ್ಣ ತಮ್ಮಂದಿರಾದ ರಾಮಲಕ್ಷ್ಮಣರ ದಾರಿಯನ್ನಡ್ಡಗಟ್ಟಿ ಎದುರಿಗೆ ನಿಂತಿದ್ದ. ರಾಮಲಕ್ಷ್ಮಣರು ಒಂದು ಹರದಾರಿಯಷ್ಟು ನಡೆದುಹೋದ ಮೇಲೆ ಈ ರೀತಿಯಲ್ಲಿದ್ದ ರಾಕ್ಷಸನು ಗೋಚರಿಸಿದ. ಅತ್ಯಂತ ಕ್ರೂರಿಯೂ ಭೀಮಕಾಯನೂ ಆದ ಆ ರಾಕ್ಷಸನು ತೋಳುಗಳಿಂದ ಕಾಡುಪ್ರಾಣಿಗಳನ್ನು ಬಾಚಿಕೊಳ್ಳುತ್ತಿದ್ದ. ಆ ಘೋರರೂಪಿಯು ಶಿರಸ್ಸಿಲ್ಲದ ಕಬಂಧಾಕಾರನಾದ್ದರಿಂದ ಕಬಂಧನೆಂದು ಹೆಸರುಪಡೆದಿದ್ದ.

ದೀರ್ಘಬಾಹುವಾದ ಕಬಂಧನು ನೀಳವಾದ ತನ್ನ ಕೈಗಳನ್ನು ಚಾಚಿ ರಾಮಲಕ್ಷ್ಮಣರನ್ನು ಬಲವಾಗಿ ಅಮುಕಿ ಹಿಡಿದ. ಕತ್ತಿಧಾರಿಗಳೂ ಧನುಷ್ಪಾಣಿಗಳೂ ಪ್ರಖರ ತೇಜೋವಂತರೂ ಆದ ಆ ಸೋದರರು ಮಹಾಬಲಾಢ್ಯರಾದರೂ ಕಬಂಧನ ಎಳೆತಕ್ಕೆ ಸಿಕ್ಕಿ ಅವನ ವಶರಾದರು. ಆ ಸಮಯದಲ್ಲಿ ಶೂರನಾದ ಶ್ರೀರಾಮನು ಧೈರ್ಯನ್ನವಲಂಬಿಸಿ ಸ್ವಲ್ಪವೂ ವ್ಯಥೆಪಡದೆ ಇದ್ದ. ಆದರೆ ಲಕ್ಷ್ಮಣನು ಶ್ರೀರಾಮನ ಆಶ್ರಯವೂ ತಪ್ಪಿತೆಂದು ಧೈರ್ಯಗೆಟ್ಟು ಬಹಳ ವಿಷಣ್ಣನಾದ. ಅವನು ರಾಘವನನ್ನು ಕುರಿತು "ಅಣ್ಣ, ನಾನು ರಾಕ್ಷಸನ ವಶವಾಗಿರುವುದನ್ನು ನೋಡು! ನಾನು ಪರಾಧೀನನಾದೆ! ನೀನು ನನ್ನೊಬ್ಬನನ್ನೇ

ಬಿಟ್ಟು ಓಡಿ ತಪ್ಪಿಸಿಕೋ. ನನ್ನನ್ನು ಭೂತಬಲಿಯಾಗಿ ಕೊಟ್ಟು ಸುಖವೆನಿಸಿದ ಕಡೆಗೆ ಪಲಾಯನಮಾಡು. ಶೀಘ್ರದಲ್ಲಿ ಅತ್ತಿಗೆಯು ನಿನಗೆ ದೊರೆಯುವಳೆಂದು ನನ್ನ ನಂಬಿಕೆ. ಶ್ರೀರಾಮ, ವಂಶಪರಂಪರೆಯಿಂದ ಬಂದ ರಾಜ್ಯದಲ್ಲಿ ನೀನು ನೆಲೆಸಿದಾಗ ನನ್ನನ್ನು ಸ್ಮರಿಸಿಕೊಳ್ಳುತ್ತಿರು!" ಎಂದು ಹಲುಬಿದ. ಆಗ ಶ್ರೀರಾಮನು, "ವೀರಾಗ್ರಣಿ ಲಕ್ಷ್ಮಣ, ಅಂಜಬೇಡ. ನಿನ್ನಂತಹ ಶೂರನು ಹೀಗೆ ವ್ಯಥೆಪಡಬಾರದು" ಎಂದು ಹೇಳಿದ. ಅಷ್ಟರಲ್ಲಿ ಕಬಂಧನೆಂಬ ಆ ದಾನವನು ರಾಮಲಕ್ಷ್ಮಣರನ್ನುದ್ದೇಶಿಸಿ ಗುಡುಗಿನಂತೆ ಗಂಭೀರವಾದ ಸ್ವರದಿಂದ "ಎಲೈ, ಯಾರು ನೀವು? ಗೂಳಿಯ ಹೆಗಲಂತೆ ಹೆಗಲುಳ್ಳ ನೀವು ಕತ್ತಿಯನ್ನೂ ಬಿಲ್ಲನ್ನೂ ಹಿಡಿದಿದ್ದೀರಿ. ಭಯಂಕರವಾದ ಈ ಅರಣ್ಯಕ್ಕೆ ಬಂದು ನನ್ನ ಸುದೈವದಿಂದ ಕಣ್ಣಿಗೆ ಬಿದ್ದಿರಿ! ಎಲೈ, ಮಾತಾಡಿರಿ! ನೀವು ಇಲ್ಲಿ ಮಾಡಬೇಕಾದ್ದೇನಿದೆ? ಏಕೆ ಬಂದಿದ್ದೀರಿ? ಇಲ್ಲಿ ನಾನು ಹಸಿದು ನಿಂತಿರುವಾಗ ನನ್ನ ಭಾಗ್ಯದಿಂದ ಬಂದಿದ್ದೀರಿ! ಬಾಣ ಬಿಲ್ಲು ಕತ್ತಿಗಳನ್ನು ಹಿಡಿದಿದ್ದರೂ ನೀವು ನನಗೆ ಹರಿತವಾದ ಕೊಂಬುಗಳಿರುವ ಎರಡು ಗೂಳಿಗಳಿದ್ದಂತೆಯೆ ಸರಿ. ನನ್ನ ಬಾಯಿಗೆ ತುತ್ತಾದಿರಿ! ನೀವು ಬದುಕುವುದು ಅಶಕ್ಯ" ಎಂದ. ದುರಾತ್ಮನಾದ ಕಬಂಧನ ನುಡಿಯನ್ನು ಕೇಳಿ ಶ್ರೀರಾಮನ ಮುಖವು ಕಾಂತಿಗುಂದಿತು. ಅವನು ಲಕ್ಷ್ಮಣನಿಗೆ "ಲಕ್ಷ್ಮಣ, ನಿನ್ನ ಊಹೆ ಸತ್ಯವಾಯಿತು. ಕಷ್ಟದ ಮೇಲೆ ಕಷ್ಟವನ್ನನುಭವಿಸುತ್ತಿರುವ ನಮಗೆ ಸೀತೆಯೂ ದೊರಕದೆ, ಈಗ ದಾರುಣವಾದ ಪ್ರಾಣಸಂಕಟವೂ ಎದುರಾಯಿತು. ಸಕಲಪ್ರಾಣಿಗಳಲ್ಲಿಯೂ ದುರ್ನಿವಾರವಾಗಿ ಮೆರೆಯುವ ಕಾಲದ ಮಹಿಮೆಯನ್ನು ನೋಡು! ನೀನೂ ನಾನೂ ವ್ಯಸನಪರಂಪರೆಗಳಿಂದ ಕಂಗೆಟ್ಟು ಹೋದೆವು. ಲಕ್ಷ್ಮಣ, ದೈವಕ್ಕೆ ಭಾರವಾದದ್ದು, ಅಸಾಧ್ಯವಾದದ್ದು ಎಂಬುದೇ ಇಲ್ಲ. ರಣರಂಗದಲ್ಲಿ ಶೂರರೂ ಬಲಾಢ್ಯರೂ ಅಸ್ತ್ರವಿದ್ಯಾಕೋವಿದರೂ ಆಗಿದ್ದರೂ ಕೆಟ್ಟ ಕಾಲ ಬಂದಾಗ ನಾಶಹೊಂದುತ್ತಾರೆ. ಮರಳಿನ ಸೇತುವೆಗಳಂತೆ ಉಸಿದು ಹೋಗುತ್ತಾರೆ" ಎಂದು ಹೇಳಿದ. ಹೀಗೆ ಹೇಳುತ್ತಿರುವಾಗಲೇ ಸತ್ಯಸಂಧನೂ ವಿಖ್ಯಾತಕೀರ್ತಿಯೂ ಪ್ರತಾಪಶಾಲಿಯೂ ಆದ ಶ್ರೀರಾಮನು ಪ್ರಚಂಡನಾದ ಸೌಮಿತ್ರಿಯನ್ನು ನೋಡುತ್ತಿದ್ದನು. ಸೌಮಿತ್ರಿಯ ಪೌರುಷವು ಉಬ್ಬುತ್ತಿರುವುದನ್ನು ಕಂಡು, ತಾನು ಮುಂದೆ ಮಾಡಬೇಕಾದ್ದೇನೆಂಬುದನ್ನು ದೃಢವಾಗಿ ನಿಶ್ಚಯಿಸಿಕೊಂಡನು.

ಕಬಂಧನು ತನ್ನ ಬಾಹುಪಾಶದಲ್ಲಿ ಸಿಕ್ಕಿಬಿದ್ದ ರಾಮಲಕ್ಷ್ಮಣರನ್ನು ನೋಡಿ, "ಎಲೈ ಕ್ಷತ್ರಿಯೋತ್ತಮರೆ, ಹಸಿದಿರುವ ನನ್ನನ್ನು ನೋಡುತ್ತ ನಿಂತರೆ ಏನಾದೀತು? ಬುದ್ಧಿಗೆಟ್ಟಿರುವ ನಿಮ್ಮನ್ನು ದೈವವು ನನ್ನ ಆಹಾರಕ್ಕಾಗಿ ಕಳಿಸಿಕೊಟ್ಟಿದೆ!" ಎಂದ. ವಿಪತ್ತಿಗೆ ಒಳಗಾಗಿದ್ದ ಲಕ್ಷ್ಮಣನು ಆ ಮಾತನ್ನು ಕೇಳಿ ಪರಾಕ್ರಮವನ್ನು ಮೆರೆಸಲೇಬೇಕೆಂದು ನಿಶ್ಚಯಿಸಿ, ಶ್ರೀರಾಮನಿಗೆ ಕಾಲೋಚಿತವಾದ ಹಿತನುಡಿಗಳನ್ನಾಡಿದ: "ರಾಘವ, ಈ ರಾಕ್ಷಸಾಧಮನು ನಮ್ಮಿಬ್ಬರನ್ನೂ ನಿಶ್ಚಯವಾಗಿ ಶೀಘ್ರದಲ್ಲಿಯೇ ನುಂಗುತ್ತಾನೆ. ಆದ್ದರಿಂದ ಈತನ ದರ್ಪವಾದ ತೋಳುಗಳನ್ನು ಕತ್ತಿಗಳಿಂದ ಕತ್ತರಿಸೋಣ. ಮಹಾಕಾಯನಾದ ಈ ರಾಕ್ಷಸನು ಭೀಕರನಾಗಿದ್ದಾನೆ. ಮುಖ್ಯವಾಗಿ ಇವನ ಬಲವೆಲ್ಲವೂ ತೋಳುಗಳಲ್ಲಿದೆ. ಲೋಕವನ್ನು ಗೆದ್ದು ಪೀಡಿಸಿ, ಈಗ ನಮ್ಮನ್ನು ಕೊಲ್ಲಲು ಸಂಕಲ್ಪಿಸಿದ್ದಾನೆ. ಇವನ ಬಾಹುಗಳನ್ನು ಕತ್ತರಿಸಿದರೆ ಸಾಕು, ಕೊಲ್ಲುವುದು ಬೇಡ. ಯಾಗಶಾಲೆಗೆ ಕರೆತಂದ ಪಶುಗಳಂತೆ ಪ್ರತೀಕಾರ ಮಾಡಲು ಅಸಮರ್ಥರಾದವರನ್ನು ವಧಿಸುವುದು ಭೂಪಾಲರಿಗೆ ಯೋಗ್ಯವಲ್ಲ" ಎಂದ.

ಹೀಗೆ ಅವರಿಬ್ಬರೂ ಮಾತನಾಡಿಕೊಳ್ಳುವುದನ್ನು ಕೇಳಿ ಆ ರಾಕ್ಷಸನು ಕೋಪಗೊಂಡು ಭೀಷಣವಾದ ಬಾಯನ್ನು ತೆರೆದು ರಾಮಲಕ್ಷ್ಮಣರನ್ನು ನುಂಗಲು ಪ್ರಯತ್ನಿಸಿದ. ಆಗ ದೇಶಕಾಲಜ್ಞರಾದ ರಾಮಲಕ್ಷ್ಮಣರು ಉತ್ಸಾಹದಿಂದ ಚಕಚಕನೆ ಕತ್ತಿಗಳಿಂದ ಕಬಂಧನ ತೋಳುಗಳನ್ನು ಹೆಗಲಿನ ಬಳಿ ಕತ್ತರಿಸಿದರು. ಕಬಂಧನ ಬಲಗಡೆಗಿದ್ದ ಶ್ರೀರಾಮನು ಅವನ ಬಲದೋಳನ್ನೂ ವೀರನಾದ ಲಕ್ಷ್ಮಣನು ಎಡದೋಳನ್ನೂ ವೇಗವಾಗಿ ಕತ್ತರಿಸಿ ಕೆಡಹಿದರು. ದೀರ್ಘಬಾಹುವಾದ ಕಬಂಧನ ಎರಡು ಬಾಹುಗಳೂ ತುಂಡರಿಸಿ ಬೀಳಲು ಮೇಘವು ಗುಡುಗುವಂತೆ, ಭೂಮ್ಯಾಕಾಶಗಳೂ ದಶದಿಕ್ಕುಗಳೂ ಮೊಳಗುವಂತೆ, ಅವನು ಅರಚುತ್ತ ನೆಲದ ಮೇಲೆ ಕುಸಿದುಬಿದ್ದ. ಆ ದಾನವನು ರಕ್ತದ ಹೊಳೆಯಲ್ಲಿ ನೆನೆದು ಹೋದ. ಕತ್ತರಿಸಿಬಿದ್ದ ತನ್ನ ತೋಳುಗಳನ್ನು ನೋಡಿ ಕಬಂಧನು ದೈನ್ಯದಿಂದ, "ಎಲೈ ವೀರರೇ, ನೀವು ಯಾರು?" ಎಂದು ಕೇಳಿದ. ಆಗ ಶುಭಲಕ್ಷಣನಾದ ಲಕ್ಷ್ಮಣನು ಕಬಂಧನಿಗೆ ಶ್ರೀರಾಮನನ್ನು ತೋರಿಸಿ "ಅಯ್ಯಾ, ಇವನು ಇಕ್ಷ್ವಾಕುವಂಶದಲ್ಲಿ ಜನಿಸಿದ ರಾಜಪುತ್ರ; ಶ್ರೀರಾಮನೆಂದು ಹೆಸರು. ನಾನು ಇವನ ತಮ್ಮ ಲಕ್ಷ್ಮಣ. ಚಿಕ್ಕತಾಯಿಯ ಪ್ರೇರಣೆಯಿಂದ ಶ್ರೀರಾಮನಿಗೆ ರಾಜ್ಯಭ್ರಷ್ಟತೆಯೂ ವನವಾಸವೂ ಪ್ರಾಪ್ತವಾದವು. ಇವನು ನನ್ನನ್ನೂ ತನ್ನ ಪತ್ನಿಯನ್ನೂ ಜೊತೆಗೂಡಿ ಮಹತ್ತರವಾದ ಈ ವನದಲ್ಲಿ ಸಂಚರಿಸುತ್ತಿದ್ದಾನೆ. ಒಂದು ಸಲ ವನದ ಆಶ್ರಮದಲ್ಲಿ ನಾವಿಬ್ಬರೂ ಇಲ್ಲದಾಗ ದೇವತಾಸದೃಶನಾದ ಈತನ ಪತ್ನಿಯನ್ನು ರಾಕ್ಷಸನೊಬ್ಬನು ಕದ್ದೊಯ್ದ. ಆಕೆಯನ್ನು ಹುಡುಕುತ್ತ ನಾವು ಇಲ್ಲಿಗೆ ಬಂದೆವು. ನೀನು ಯಾರು? ಏಕೆ ಹೀಗೆ ಕಬಂಧಾಕಾರದಲ್ಲಿದ್ದೀಯೆ? ಎದೆಯ ಬಳಿ ನಿನ್ನ ಮುಖವು ಹೊಳೆಯುತ್ತಿದೆಯಲ್ಲ! ಮೊಳಕಾಲುಗಳು ಮುರಿದು ಗುಜ್ಜಾರಿಯಾಗಿವೆ! ಈ ಕಾಡಿನಲ್ಲಿ ಹೊರಳುತ್ತ ಅಲೆಯುವುದೇಕೆ?" ಎಂದು ಕೇಳಿದ. ಲಕ್ಷ್ಮಣನ ಮಾತನ್ನು ಕೇಳಿ ಕಬಂಧನಿಗೆ ಆನಂದವಾಯಿತು! ಅವನಿಗೆ ದೇವೇಂದ್ರನ ವಚನವು ನೆನಪಿಗೆ ಬಂದಿತು. ಕಬಂಧನು "ಪುರುಷಶ್ರೇಷ್ಠರೇ, ನಿಮಗೆ ಸ್ವಾಗತ! ನಿಮ್ಮನ್ನು ನೋಡುವುದು ನನ್ನ ಭಾಗ್ಯದಿಂದ. ನನ್ನ ಹೆಗಲುಗಳನ್ನು ಕಡಿದು ಬಂಧನದಂತಿದ್ದ ಬಾಹುಗಳನ್ನು ಕಳಚಿದಿರಿ. ಹೇ ಪುರುಷೋತ್ತಮ ಶ್ರೀರಾಮ, ನನ್ನ ಅವಿವೇಕದಿಂದ ಈ ಕುರೂಪವು ನನಗೆ ಹೇಗೆ ಗಂಟುಬಿದ್ದಿತು ಎಂಬುದನ್ನು ಯಥಾರ್ಥವಾಗಿ ವಿವರಿಸುತ್ತೇನೆ ಕೇಳು" ಎಂದು ಹೇಳಿದ.

೩೨. ಕಬಂಧನ ವೃತ್ತಾಂತ; ತನ್ನ ದೇಹದಹನಕ್ಕಾಗಿ ಅವನು ಪ್ರಾರ್ಥಿಸುವುದು; ಸುಗ್ರೀವನ ವಿಷಯ ತಿಳಿಯುವುದು

ಕಬಂಧನು ತನ್ನ ಕತೆಯನ್ನು ಹೇಳಿದ: "ಮಹಾಬಾಹು ಶ್ರೀರಾಮ. ಪೂರ್ವದಲ್ಲಿ ನನಗೆ ಬಲಪರಾಕ್ರಮಗಳಿಂದ ಕೂಡಿದ ದಿವ್ಯರೂಪವಿತ್ತು. ನನ್ನ ಸೌಂದರ್ಯವು ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾಗಿತ್ತು. ಅದರ ವೈಭವ ಎಷ್ಟೆಂದು ಈಗ ಊಹಿಸಲು ಶಕ್ಯವಿಲ್ಲ; ಸೂರ್ಯ ಚಂದ್ರ ದೇವೇಂದ್ರರ ದೇಹದಂತೆ ನನ್ನ ದೇಹವು ಕಾಂತಿಯುಕ್ತವಾಗಿತ್ತು. ಹಾಗಿದ್ದ ನಾನು ಅತ್ಯಂತ ಭಯಂಕರವಾದ ಈ ರೂಪವನ್ನು

ಧರಿಸಿ, ಶ್ರೀರಾಮ, ವನದಲ್ಲಿದ್ದ ಋಷಿಗಳನ್ನು ಹೆದರಿಸುತ್ತಿದ್ದೆ. ಒಂದು ಸಲ ಸ್ಥೂಲಶಿರನೆಂಬ ಮಹರ್ಷಿಯು ನನ್ನ ಚೇಷ್ಟೆಯಿಂದ ಕ್ರುದ್ಧನಾದ. ಆತನು ಕಾಡಿನಲ್ಲಿರುವ ಸಮಿತ್ತು ದರ್ಭೆ ಮುಂತಾದುವುಗಳನ್ನು ಸಂಗ್ರಹಿಸುತ್ತಿರುವಾಗ ನಾನು ಈ ಘೋರರೂಪದಿಂದ ಹೋಗಿ ಅಂಜಿಸಿದೆ. ಆ ಋಷಿಯು ನನ್ನನ್ನು ನೋಡಿ ಭೀಕರವಾದ ಶಾಪವನ್ನು ಕೊಡಲುದ್ದೇಶಿಸಿ, 'ಎಲೈ ನೀಚ, ಲೋಕನಿಂದಿತವಾದ ಈ ಕರಾಳರೂಪವೇ ನಿನಗೆ ಶಾಶ್ವತವಾಗಲಿ!' ಎಂದು ಶಪಿಸಿದರು. ಆಗ ನಾನು 'ಸ್ವಾಮಿ, ನನ್ನ ತಪ್ಪಿನಿಂದ ನನಗೆ ಈ ಶಾಪ ಬಂದಿತು. ಇದಕ್ಕೆ ಒಂದು ಅವಧಿಯಿರುವಂತೆ ಅನುಗ್ರಹಿಸಬೇಕು' ಎಂಬುದಾಗಿ ಕ್ರುದ್ಧನಾದ ಆ ಋಷಿಯನ್ನು ಬೇಡಿಕೊಂಡೆ. ಅದನ್ನು ಕೇಳಿ ಆ ಮಹರ್ಷಿಯು 'ಶ್ರೀರಾಮಲಕ್ಷ್ಮಣರು ನಿನ್ನ ತೋಳುಗಳನ್ನು ಕತ್ತರಿಸಿ ನಿರ್ಜನವಾದ ವನದಲ್ಲಿ ನಿನ್ನನ್ನು ಯಾವಾಗ ಸುಡುವರೋ, ಆಗ ನಿನ್ನ ಮೊದಲಿನ ಉತ್ತಮರೂಪವನ್ನು ಪಡೆಯುವೆ' ಎಂದು ನುಡಿದ. ಲಕ್ಷ್ಮಣ, ನಾನು ದನು ಎಂಬುವನ ಪುತ್ರ, ನನಗೆ ಉತ್ತಮವಾದ ರೂಪಸಂಪತ್ತು ಇದ್ದಿತೆಂದು ಹೇಳಿದೆನಲ್ಲ. ಇಂದ್ರನ ಕೋಪದಿಂದ ರಣಾಂಗಣದಲ್ಲಿ ನನಗೆ ಈ ಕಬಂಧರೂಪವು ಬಂದಿತು; ನಾನು ಉಗ್ರವಾದ ತಪಸ್ಸನ್ನಾಚರಿಸಿ ಬ್ರಹ್ಮನನ್ನು ಸಂತೋಷಹವಡಿಸಿದ್ದೆ. ಆತನು ನನಗೆ ಪ್ರಸನ್ನನಾಗಿ ದೀರ್ಘಾಯುಸ್ಸನ್ನು ಅನುಗ್ರಹಿಸಿದ್ದ. ನನಗೆ ಅದರಿಂದ ದುರಹಂಕಾರ ಬಂದಿತು. 'ನಾನು ದೀರ್ಘಾಯುವನ್ನು ಪಡೆದಿದ್ದೇನೆ. ಇಂದ್ರನು ಏನು ಮಾಡಿಯಾನು' ಎಂಬ ದುರ್ಬುದ್ಧಿ ಹುಟ್ಟಿತು. ಈ ಕೊಬ್ಬಿನಿಂದ ನಾನು ರಣರಂಗದಲ್ಲಿ ಇಂದ್ರನನ್ನು ಎದುರಿಸಿದೆ. ಇಂದ್ರನು ತನ್ನ ಕೈಯಲ್ಲಿದ್ದ ನೂರು ಏಣುಗಳುಳ್ಳ ವಜ್ರಾಯುಧದಿಂದ ನನ್ನನ್ನು ಅಪ್ಪಳಿಸಿ ಹೊಡೆದ. ಆ ಹೊಡೆತಕ್ಕೆ ನನ್ನ ತೊಡೆಗಳೂ ತಲೆಯೂ ದೇಹದ ಮಧ್ಯಭಾಗದಲ್ಲಿ ಹುದುಗಿಹೋದವು. ಆಗ ನಾನು ಪ್ರಾರ್ಥಿಸಿಕೊಂಡರೂ ಇಂದ್ರನು ನನ್ನನ್ನು ಯಮಲೋಕಕ್ಕೆ ಕಳಿಸಲಿಲ್ಲ! 'ಬ್ರಹ್ಮದೇವನ ಮಾತು ಸತ್ಯವಾಗುವುದು. ನೀನು ದೀರ್ಘಾಯುವಾಗಿ ಉಳಿಯುವೆ' ಎಂದು ಹೇಳಿದ. ಆಗ ನಾನು 'ದೇವೇಂದ್ರ, ವಜ್ರಾಯುಧದ ಪ್ರಹಾರದಿಂದ ನನ್ನ ತೊಡೆ, ಶಿರಸ್ಸು, ಬಾಯಿಗಳು ಭಗ್ನವಾದವು. ನಡೆಯಲು ಕಾಲಿಲ್ಲ; ತಿನ್ನಲು ಬಾಯಿಲ್ಲ; ಆಹಾರವಿಲ್ಲದೆ ನಾನು ಬಹುಕಾಲ ಬದುಕುವುದು ಹೇಗೆ?' ಎಂದು ಕೇಳಿದೆ. ಆಗ ಇಂದ್ರನು ನನಗೆ ಒಂದು ಯೋಜನದಷ್ಟು ಉದ್ದವಾದ ಈ ಎರಡು ತೋಳುಗಳನ್ನು ಅನುಗ್ರಹಿಸಿದ. ಹರಿತವಾದ ಕೋರೆಹಲ್ಲುಗಳಿರುವ ಬಾಯನ್ನು ನನ್ನ ಹೊಟ್ಟೆಯಲ್ಲಿಯೇ ಇಟ್ಟ. ಹೀಗೆ ನಾನು ಈ ದೀರ್ಘಬಾಹುಗಳಿಂದ ವನದಲ್ಲಿ ಸಂಚರಿಸುವ ಸಿಂಹ, ಆನೆ, ಜಿಂಕೆ, ಹುಲಿ ಮುಂತಾದ ಪ್ರಾಣಿಗಳನ್ನು ಬರಸೆಳೆದು ತಿನ್ನುತ್ತಿದ್ದೇನೆ. ಶ್ರೀರಾಮನು ಬಂದು, ನಿನ್ನ ತೋಳುಗಳನ್ನು ಯಾವಾಗ ಕತ್ತರಿಸುವನನೋ ಆಗ ನೀನು ಸ್ವರ್ಗವನ್ನು ಸೇರುವೆ' ಎಂದು ಹೇಳಿದ್ದಾನೆ. ಶ್ರೀರಾಮ ರಾಜೋತ್ತಮ, ನಾನು ಈ ವಿಕೃತವಾದ ದೇಹವನ್ನು ಹೊತ್ತು ಅರಣ್ಯದಲ್ಲಿ ಅಲೆಯುತ್ತ ಕಂಡಿದ್ದೆಲ್ಲವನ್ನೂ ಬರಸೆಳೆದು ಹಿಡಿಯಬೇಕೆಂದು ಉದ್ದೇಶಿಸಿದ್ದೆ. ಒಂದಲ್ಲ ಒಂದು ದಿನ ಶ್ರೀರಾಮನು ನನ್ನ ಹಿಡಿತದಲ್ಲಿ ಸಿಕ್ಕುವನೆಂದೇ ನಂಬಿದ್ದೆ. ಆದ್ದರಿಂದಲೇ ವಿಕೃತವಾದ ಈ ದೇಹವನ್ನು ತ್ಯಜಿಸುವುದಕ್ಕಾಗಿ ಶ್ರಮಪಡುತ್ತಿದ್ದೆ. ರಾಘವ, ನಾನು ಹುಡುಕುತ್ತಿದ್ದ ಶ್ರೀರಾಮನೇ ನೀನಾಗಿರುವೆ. ನಿನಗೆ ಶುಭವಾಗಲಿ! ನೀನಲ್ಲದೆ ಇನ್ನೊಬ್ಬನಿಂದ ನನ್ನನ್ನು ಸಂಹರಿಸಲು ಶಕ್ಯವಿಲ್ಲ. ಆ ಮಹರ್ಷಿಯು ಈ ಪ್ರಕಾರ ಹೇಳಿದುದು ಸತ್ಯವೇ

ಆಯಿತು. ಹೇ ಪುರುಷಶ್ರೇಷ್ಠ, ನಿಮಗೆ ನಾನು ಬುದ್ಧಿ ಸಹಾಯವೊಂದನ್ನು ಮಾಡುತ್ತೇನೆ. ನೀವಿಬ್ಬರೂ ನನಗೆ ಅಗ್ನಿ ಸಂಸ್ಕಾರವನ್ನು ಮಾಡಿರಿ; ಆಮೇಲೆ ನಿಮಗೆ ಯೋಗ್ಯವಾದ ಮಿತ್ರನೊಬ್ಬನನ್ನು ತೋರಿಸಿಕೊಡುತ್ತೇನೆ" ಎಂದ. ಹೀಗೆ ದನುಪುತ್ರನಾದ ಕಬಂಧನು ಹೇಳಲು, ಧರ್ಮಾತ್ಮನಾದ ರಾಘವನು ಸಮೀಪದಲ್ಲಿದ್ದ ಲಕ್ಷ್ಮಣನಿಗೂ ಕೇಳುವಂತೆ "ಅಯ್ಯಾ ಕಬಂಧ, ಜನಸ್ಥಾನದಲ್ಲಿ ನಾನು ನನ್ನ ತಮ್ಮನೊಡನೆ ಆಶ್ರಮದಿಂದ ಹೊರಗೆ ಹೋಗಿದ್ದಾಗ, ರಾವಣನೆಂಬ ರಾಕ್ಷಸನು ನನ್ನ ಹೆಂಡತಿಯನ್ನು ಅಪಹರಿಸಿಕೊಂಡು ಹೋಗಿದ್ದಾನೆ. ಆ ಯಶಸ್ವಿನಿಯ ಹೆಸರು ಸೀತೆ. ನನಗೆ ಆ ರಾಕ್ಷಸನ ಹೆಸರು ಮಾತ್ರ ಗೊತ್ತಿದೆ. ಅವನ ಆಕೃತಿಯನ್ನು ನಾನು ನೋಡಿಲ್ಲ. ಆತನ ವಾಸಸ್ಥಾನವಾಗಲಿ ಸಾಮರ್ಥ್ಯವಾಗಲಿ ನಮಗೆ ತಿಳಿಯದು. ಕಬಂಧ, ನಾವು ಶೋಕಾರ್ತರಾಗಿ ದಿಕ್ಕಿಲ್ಲದೆ ಅಲೆಯುತ್ತಿದ್ದೇವೆ. ನಿನಗೆ ಉಪಕಾರಮಾಡಲು ಸಿದ್ಧರಾಗಿರುವ ನಮ್ಮ ವಿಷಯದಲ್ಲಿ, ಹೇ ವೀರ, ನೀನು ದಯೆದೋರುವುದು ಉಚಿತವಲ್ಲವೆ? ಈ ಕಾಡಿನಲ್ಲಿ ಆನೆಗಳು ಮುರಿದೆಸೆದಿರುವ ಒಣಕಟ್ಟಿಗೆಗಳನ್ನು ತಂದು, ದೊಡ್ಡ ಹಳ್ಳವನ್ನಗೆದು, ನೀನು ಹೇಳಿದ ಪ್ರಕಾರ ಅದರಲ್ಲಿ ನಿನಗೆ ಅಗ್ನಿಸಂಸ್ಕಾರಮಾಡುತ್ತೇವೆ. ಸೀತೆಯನ್ನು ಯಾರು ಎಲ್ಲಿಗೆ ಅಪಹರಿಸಿ ಕದ್ದೊಯ್ದಿದ್ದಾರೆ ಎಂಬುದನ್ನು ನೀನು ಹೇಳಬೇಕು. ಸತ್ಯಸ್ಥಿತಿಯು ನಿನಗೆ ತಿಳಿದಿದ್ದರೆ ನಮಗೆ ಇದೊಂದು ಮಹೋಪಕಾರವನ್ನು ಮಾಡು" ಎಂದು ಕೇಳಿಕೊಂಡನು. ಆಗ ಸಂಭಾಷಣೆಯಲ್ಲಿ ಕುಶಲನಾದ ಕಬಂಧನು ವಾಕ್ಯವಿಶಾರದನಾದ ಶ್ರೀರಾಮನನ್ನುದ್ದೇಶಿಸಿ, "ರಾಘವ, ಈಗ ನನಗೆ ದಿವ್ಯಜ್ಞಾನವಿಲ್ಲ. ನನಗೆ ಮೈಥಿಲಿಯ ವಿಷಯ ತಿಳಿಯದು. ನನ್ನನ್ನು ನೀವು ದಹಿಸಿದ ಮೇಲೆ ನನ್ನ ನಿಜರೂಪವನ್ನು ಧರಿಸಿ, ಮೈಥಿಲಿಯ ಸುಳಿವನ್ನು ತಿಳಿಯಬಲ್ಲವನು ಯಾರೆಂದು ಹೇಳುತ್ತೇನೆ! ಪ್ರಭು ನನ್ನನ್ನು ದಹಿಸುವವರೆಗೆ ಅದನ್ನರಿಯುವ ಶಕ್ತಿ ನನಗಿಲ್ಲ. ನಿನ್ನ ಸೀತೆಯನ್ನಪಹರಿಸಿದ ಪರಾಕ್ರಮಿಯಾದ ರಾಕ್ಷಸನು ಯಾರೆಂಬ ಅರಿವು ಈಗ ನನಗಿಲ್ಲ. ರಾಘವ, ಶಾಪದೋಷದಿಂದ ನನ್ನ ದಿವ್ಯಜ್ಞಾನವು ನಷ್ಟವಾಗಿದೆ. ನನ್ನ ಅಪರಾಧದಿಂದಲೇ ನಾನು ಲೋಕನಿಂದಿತವಾದ ಈ ರೂಪವನ್ನು ಪಡೆದೆ. ಆದರೆ ಸೂರ್ಯನ ವಾಹನವು ಬಳಲಿ ಅವನು ಅಸ್ತಂಗತನಾಗುವುದರೊಳಗೆ, ಶ್ರೀರಾಮ, ನನ್ನನ್ನು ಹಳ್ಳಕ್ಕೆಸೆದು ಯಥಾವಿಧಿಯಾಗಿ ಸುಟ್ಟುಬಿಡು. ಹೀಗೆ ನಾನು ಹಳ್ಳದಲ್ಲಿ ಭಸ್ಮವಾದಮೇಲೆ, ರಘುನಂದನ, ಆ ರಾಕ್ಷಸನನ್ನು ತಿಳಿಯಬಲ್ಲ ಪುರುಷನು ಯಾರೆಂದು ಹೇಳುತ್ತೇನೆ. ನೀತಿವಂತನಾದ ಆ ಪುರುಷನೊಡನೆ ನೀನು ಸ್ನೇಹವನ್ನು ಬೆಳೆಸು. ಆ ಪರಾಕ್ರಮಿಯು ಸಂಪ್ರೀತನಾಗಿ ನಿನಗೆ ನೆರವು ನೀಡುವನು. ಈ ಮೂರು ಲೋಕಗಳಲ್ಲಿಯೂ ಅವನಿಗೆ ಪರಿಚಯವಿಲ್ಲದ ಸ್ಥಳವಿಲ್ಲ. ರಾಘವ ಒಂದಾನೊಂದು ಕಾರಣದಿಂದ ಆತನು ಮೂರು ಲೋಕಗಳನ್ನೂ ಸುತ್ತಿದ್ದಾನೆ" ಎಂದು ನುಡಿದ.

ಕಬಂಧನ ನುಡಿಯನ್ನು ಕೇಳಿ ವೀರರಾದ ಆ ರಾಜಪುತ್ರರು ಬೆಟ್ಟದ ಒಂದು ಕೊರಕಲಿಗೆ ಅವನನ್ನು ಸಾಗಿಸಿ ಬೆಂಕಿಯನ್ನು ಉತ್ಪಾದಿಸಿದರು. ಲಕ್ಷ್ಮಣನು ಚಿತೆಯನ್ನು ನಿರ್ಮಿಸಿ ಸುತ್ತಲೂ ಉರಿಯುವ ದೊಡ್ಡ ಕೊಳ್ಳಿಗಳಿಂದ ಅದಕ್ಕೆ ಬೆಂಕಿಯನ್ನು ಹಚ್ಚಿದ. ಬೆಂಕಿಯು ಪ್ರಜ್ವಲಿಸಿತು. ಮೇದಸ್ಸಿನಿಂದ ಕೊಬ್ಬಿದ ಕಬಂಧನ ದೊಡ್ಡ ಕಳೇವರವು ಹೆಪ್ಪುಗಟ್ಟಿದ ತುಪ್ಪದ ರಾಶಿಯಂತಿತ್ತು! ಬೆಂಕಿಯು ಆ ದೇಹವನ್ನು ಮೆಲ್ಲನೆ ಸುಡಲಾರಂಭಿಸಿತು. ಅನಂತರ ಒಬ್ಬ

ಪುರುಷನು ಧೂಮವಿಲ್ಲದ ಅಗ್ನಿಯಂತೆ ಬೆಳಗುತ್ತ ಚಿತೆಯಿಂದ ಹೊರಟನು. ಆತನು ಬಲಾಢ್ಯನಾಗಿದ್ದನಲ್ಲದೆ ಶುಭ್ರವಸ್ತ್ರಗಳನ್ನುಟ್ಟು ದಿವ್ಯಮಾಲೆಗಳನ್ನು ಧರಿಸಿದ್ದ. ಸಂತುಷ್ಟನಾಗಿದ್ದ ಆ ತೇಜಸ್ವಿಯು ಕೂಡಲೆ ಚಿತೆಯನ್ನು ಬಿಟ್ಟು ಗಗನವನ್ನಡರಿದ. ಸಕಲದಿವ್ಯಾಭರಣಗಳನ್ನೂ ಧರಿಸಿದ್ದ ಆ ಪುರುಷನು ಹಂಸಯುಕ್ತವಾದ ಒಂದು ದಿವ್ಯ ವಿಮಾನದಲ್ಲಿ ಕುಳಿತ. ಆ ತೇಜೋವಂತನು ತನ್ನ ದೇಹಕಾಂತಿಯಿಂದ ದಶದಿಕ್ಕುಗಳನ್ನೂ ಬೆಳೆಗಿಸುತ್ತಿದ್ದ; ಅವನೇ ಕಬಂಧ. ಆತನು ಅಂತರಿಕ್ಷದಲ್ಲಿದ್ದು ಶ್ರೀರಾಮನನ್ನು ಸಂಬೋಧಿಸಿ ಹೀಗೆಂದ: "ಶ್ರೀರಾಮ, ನಿನಗೆ ಸೀತಾದೇವಿಯು ಹೇಗೆ ದೊರೆಯುವಳೆಂದು ಯಥಾರ್ಥವಾಗಿ ಹೇಳುತ್ತೇನೆ, ಕೇಳು: ಯಾವ ಕಾರ್ಯವನ್ನು ಸಾಧಿಸುವುದಕ್ಕಾದರೂ ಸಂಧಿ, ವಿಗ್ರಹ ಮೊದಲಾದ ಆರು ಯುಕ್ತಿಗಳುಂಟು. ಸಕಲ ವಿಷಯಗಳೂ ಇವುಗಳ ವಿಚಾರಕ್ಕೆ ಒಳಪಟ್ಟವೆ. ದುರವಸ್ಥೆಗೊಳಗಾದ ಮನುಷ್ಯನು ತನ್ನಂತೆ ದುರವಸ್ಥೆಗೊಳಗಾದವನಿಂದ ಸಹಕಾರವನ್ನು ಪಡೆಯುತ್ತಾನೆ. ಶ್ರೀರಾಮ, ನೀನು ರಾಜ್ಯವನ್ನೂ ಹೆಂಡತಿಯನ್ನೂ ಕಳೆದುಕೊಂಡು ಲಕ್ಷ್ಮಣಸಮೇತನಾಗಿ ದುರವಸ್ಥೆಗೆ ಒಳಗಾಗಿದ್ದೀಯೆ. ಇದರಿಂದಲೇ ನೀನು ಭಾರ್ಯಾಪಹಾರದ ವ್ಯಸನದಲ್ಲಿ ಸಿಕ್ಕಿದ್ದೀಯೆ. ನೀನು ಅರ್ಹರಾದವರಿಗೆ ಶ್ರೇಷ್ಠನಾದ ಮಿತ್ರನಾಗಬಲ್ಲೆ. ಆದ್ದರಿಂದ ನಾನು ಸೂಚಿಸುವವನೊಡನೆ ನೀನು ಮೈತ್ರಿಯನ್ನು ಬೆಳೆಸಬೇಕು, ಹಾಗಲ್ಲದೆ ನಿನ್ನ ಕಾರ್ಯವು ಸಿದ್ಧಿಸುವ ಬಗೆ ನನಗೆ ತೋರುವುದಿಲ್ಲ. ಶ್ರೀರಾಮ, ಅಂತಹವನು ಯಾರೆಂಬುದನ್ನು ಹೇಳುತ್ತೇನೆ ಕೇಳು: ಸುಗ್ರೀವನೆಂಬ ಒಬ್ಬ ವಾನರೋತ್ತಮನಿದ್ದಾನೆ. ಅವನು ಋಕ್ಷರಜಸ್ಸೆಂಬ ವಾನರೋತ್ತಮನ ಪುತ್ರ, ಸೂರ್ಯನ ಔರಸಪುತ್ರ. ಅವನಿಗೆ ಇಂದ್ರಪುತ್ರನಾದ ವಾಲಿಯೆಂಬ ಅಣ್ಣನಿದ್ದಾನೆ. ವಾಲಿಯು ಕಾರಣಾಂತರದಿಂದ ಕ್ರುದ್ಧನಾಗಿ ಸುಗ್ರೀವನನ್ನು ದೇಶದಿಂದ ಹೊರಗೆ ಅಟ್ಟಿದ್ದಾನೆ. ಈಗ ಸುಗ್ರೀವನು ಪಂಪಾಸರೋವರದ ತೀರದಲ್ಲಿ ಶೋಭಿಸುವ ಋಷ್ಯಮೂಕಪರ್ವತದಲ್ಲಿ ನಾಲ್ವರು ವಾನರೋತ್ತಮರೊಡನೆ ವಾಸವಾಗಿದ್ದಾನೆ. ಆ ಸುಗ್ರೀವನು ನಿನಗೆ ಮಿತ್ರನಾಗಿ ಸೀತಾದೇವಿಯನ್ನು ಹುಡುಕುವುದಕ್ಕೆ ಸಹಾಯಮಾಡುವನು. ಆದ್ದರಿಂದ ಮಹಾಬಲನಾದ ಸುಗ್ರೀವನ ಬಳಿಗೆ ಬೇಗನೆ ಹೋಗು. ಆದಷ್ಟು ಬೇಗನೆ ಸುಗ್ರೀವನನ್ನು ನಿನ್ನ ಮಿತ್ರನನ್ನಾಗಿ ಮಾಡಿಕೊ. ಯಾರಿಗೂ ದ್ರೋಹವಾಗದಂತೆ ಅಗ್ನಿಸಾಕ್ಷಿಕವಾಗಿ ಸ್ನೇಹವನ್ನು ಬೆಳೆಸು. ಆ ವೀರನು ನಿನಗೆ ಕೃತಜ್ಞನಾಗಿ ನಡೆದುಕೊಳ್ಳುವನು. ಮನಸ್ಸು ಬಂದಂತೆ ರೂಪವನ್ನು ಧರಿಸುವ ಶಕ್ತಿ ಅವನಿಗುಂಟು. ಅವನಿಗೂ ನಿನ್ನ ನೆರವು ಬೇಕಾಗಿದೆ. ನೀನೂ ಲಕ್ಷ್ಮಣನೂ ಸುಗ್ರೀವನ ಇಷ್ಟಾರ್ಥವನ್ನು ನೆರವೇರಿಸಿಕೊಡಲು ಸಮರ್ಥರಾಗಿದ್ದೀರಿ. ಆ ಕಪಿಶ್ರೇಷ್ಠನು ಈ ಜಗತ್ತಿನಲ್ಲಿರುವ. ಸಮಸ್ತ ಪ್ರದೇಶಗಳನ್ನೂ ಸಮಗ್ರವಾಗಿ ಬಲ್ಲನು. ನರಮಾಂಸಭಕ್ಷಕರಾದ ರಾಕ್ಷಸರ ನಿವಾಸಕ್ಕೂ ಹೋಗಿ ಚಾತುರ್ಯದಿಂದ ಅವರ ಗುಟ್ಟನ್ನು ತಿಳಿಯಬಲ್ಲನು. ರಾಘವ, ಈ ಲೋಕದಲ್ಲಿ ಸುಗ್ರೀವನಿಗೆ ತಿಳಿಯದ ಒಂದು ಸ್ಥಳವೂ ಇಲ್ಲ. ಸಹಸ್ರಕಿರಣನಾದ ಭಾಸ್ಕರನು ಎಲ್ಲಿಯವರಗೆ ಬೆಳಕನ್ನು ಬೀರುವನೋ ಅಲ್ಲಿಯವರೆಗೆ ಅವನು ಹೋಗಿ ನಿನ್ನ ಪತ್ನಿಯನ್ನು ಅರಸಬಲ್ಲ. ನದಿಗಳು, ವಿಶಾಲವಾದ ಪರ್ವತಗಳು, ಮಧ್ಯ ದೇಶಗಳು, ಕಂದಕಗಳು ಮೊದಲಾದವನ್ನು ಹುಡುಕಬಲ್ಲ. ವಾನರರೊಡನೆ

ಸೇರಿ ಸೀತಾದೇವಿಯಿರುವ ಸ್ಥಳವನ್ನು ನಿನಗೋಸ್ಕರ ಕಂಡುಹಿಡಿಯುವನು. ರಾಘವ, ನಿನ್ನ ವಿರಹದಿಂದ ಶೋಕಾತುರಳಾಗಿರುವ ಸೀತಾದೇವಿಯನ್ನು ಅರಸುವುದಕ್ಕಾಗಿ ಮಹಾಕಾಯರಾದ ಕಪಿಗಳನ್ನು ಸುಗ್ರೀವನು ದಿಕ್ಕುದಿಕ್ಕುಗಳಿಗೆ ಕಳಿಸುವನು. ಪತಿವ್ರತೆಯಾದ ಆ ದೇವಿಯು ರಾವಣನ ಯಾವ ಭವನದಲ್ಲಿರುವಳೆಂಬುದನ್ನು ಕಂಡುಹಿಡಿಯುವನು. ಶ್ರೀರಾಮ, ಆ ಸಾಧ್ವಿಯು ಮೇರುಶಿಖರದ ತುದಿಯಲ್ಲಿರಲಿ, ಪಾತಾಳದ ಬುಡದಲ್ಲಿರಲಿ, ಆ ವಾನರೋತ್ತಮನು ಅಲ್ಲಿಗೆ ಹೋಗಿ, ರಾಕ್ಷಸರನ್ನು ಸದೆಬಡಿದು ನಿನ್ನ ಕಾಂತೆಯನ್ನು ತಂದು ನಿನಗೊಪ್ಪಿಸುವನು" ಎಂದು ಹೇಳಿದ.

೩೩. ಕಬಂಧನು ಋಷ್ಯಮೂಕಪರ್ವತಕ್ಕೆ ಹೋಗುವ ಮಾರ್ಗವನ್ನು ಶ್ರೀರಾಮನಿಗೆ ತಿಳಿಸಿ ಸ್ವರ್ಗಕ್ಕೆ ಹೋಗುವುದು.

ಕಾರ್ಯಜ್ಞನಾದ ಕಬಂಧನು ಶ್ರೀರಾಮನಿಗೆ ಸೀತಾನ್ವೇಷಣೆಯ ಉಪಾಯವನ್ನು ತಿಳಿಸಿ ಪುನಃ ಹೀಗೆಂದ: "ಶ್ರೀರಾಮ, ಇತ್ತ ಪಶ್ಚಿಮ ದಿಕ್ಕಿನಲ್ಲಿ ಮರಗಳು ಹೂಗಳು ಅರಳಿ ಮನೋಹರವಾಗಿ ಶೋಭಿಸುತ್ತವೆಯಲ್ಲ, ಇದು ನಿನಗೆ ಶುಭಕರವಾದ ಮಾರ್ಗ. ಇಲ್ಲಿ ನೇರಿಳೆ, ಹಲಸು, ಆಲ, ನಾಗಕೇಸರಿ, ಅರಳಿ, ಕಣಗಿಲೆ, ಮಾವು ಮೊದಲಾದ ಗಿಡಮರಗಳಿವೆ; ಅಲ್ಲದೆ ಬೇವು, ಚಂದನ, ನಾಗಕೇಸರ, ತಿಲಕ, ನಕ್ತಮಾಲ, ಈಚಲು ಮತ್ತು ಕರವೀರಗಳು ಅದರಲ್ಲಿವೆ. ಗೇರು, ಅಶೋಕ, ರಕ್ತಚಂದನ ಮತ್ತು ಮಂದಾರವೃಕ್ಷಗಳಿವೆ. ಹಣ್ಣುಗಳಿರುವ ಮರಗಳನ್ನು ಹತ್ತಿ ಅಥವಾ ಮರಗಳನ್ನು ಉರುಳಿಸಿ ಅಮೃತದಂತೆ ಸಿಹಿಯಾದ ಹಣ್ಣುಗಳನ್ನು ನೀವೀರ್ವರೂ ಸೇವಿಸುತ್ತ ಪ್ರಯಾಣಮಾಡಿರಿ. ಹೂಬಿಟ್ಟ ಮರಗಳಿರುವ ಆ ವನವನ್ನು ದಾಟ ಮುಂದೆ ಹೋಗಿರಿ. ಅನಂತರ ಉತ್ತರ ಕುರುದೇಶದಂತೆಯೂ ನಂದನವನದಂತೆಯೂ ಇರುವ ಇನ್ನೊಂದು ವನವನ್ನು ಸೇರುವಿರಿ. ಅಲ್ಲಿ ನಿಮಗೆ ಮರಗಳಲ್ಲಿ ಬೇಕುಬೇಕಾದ ಹಣ್ಣುಗಳು ದೊರೆಯುತ್ತವೆ; ಜೇನು ಸುರಿಯುತ್ತದೆ! ಕುಬೇರನ ಚೈತ್ರರಥವನದಲ್ಲಿರುವಂತೆ ಸಕಲ ಋತುಗಳೂ ಅಲ್ಲಿ ಏಕಕಾಲದಲ್ಲಿ ನಡೆಯುತ್ತವೆ. ದೊಡ್ಡ ದೊಡ್ಡ ಕೊಂಬೆಗಳಿರುವ ಮರಗಳು ಹಣ್ಣಿನ ಭಾರದಿಂದ ಜಗ್ಗಿರುತ್ತವೆ. ಆ ಮರಗಳು ಮೋಡದಂತೆಯೂ ಪರ್ವತದಂತೆಯೂ ದಟ್ಟವಾಗಿ ವಿಶಾಲೋನ್ನತವಾಗಿವೆ. ಶ್ರೀರಾಮ, ಲಕ್ಷ್ಮಣನು ತನಗೆ ಸೌಕರ್ಯವಾದಂತೆ ಆ ಮರಗಳನ್ನು ಹತ್ತಿಯೋ ಉರುಳಿಸಿಯೋ ಅಮೃತಸದೃಶವಾದ ಹಣ್ಣುಗಳನ್ನು ಕಿತ್ತು ನಿನಗೆ ಕೊಡುವನು! ಹೀಗೆ, ಎಲೈ ವೀರರೇ, ಶೈಲದಿಂದ ಶೈಲಕ್ಕೂ ವನದಿಂದ ವನಕ್ಕೂ ಉತ್ತಮಪ್ರದೇಶಗಳಲ್ಲಿ ಸಂಚರಿಸುತ್ತ ಹೋಗಿರಿ. ಮುಂದೆ ಪಂಪಾ ಎಂಬ ಪುಷ್ಕರಿಣಿಯನ್ನು ಸೇರುವಿರಿ, ಆ ಸರೋವರದಲ್ಲಿ ಜಾರುವ ನೊರಜುಕಲ್ಲುಗಳಿಲ್ಲ, ದಡವು ಕುಸಿದಿಲ್ಲ. ಇಳಿಯುವ ಸ್ಥಳಗಳಲ್ಲಿ ನೀರು ಒಂದೇ ಮಟ್ಟದಲ್ಲಿದೆ, ಪಾಚಿ ಕಟ್ಟಿಲ್ಲ. ಶ್ರೀರಾಮ, ಅದರ ತಳದಲ್ಲಿ ಕಲ್ಲುಹರಳಿದೆಯೇ ಹೊರತು ಕೆಸರಿಲ್ಲ. ಪಂಪಾಸರೋವರದಲ್ಲಿ ತಾವರೆ, ನೈದಿಲೆಗಳು ತುಂಬಿವೆ. ಹಂಸ, ಕಾರಂಡವ, ಕ್ರೌಂಚ, ಕುರರ ಮುಂತಾದ ಹಕ್ಕಿಗಳು

ಮಂಜುಳಸ್ವರದಲ್ಲಿ ಕೂಗುತ್ತವೆ. ಮನುಷ್ಯರನ್ನು ಕಂಡರೂ ಅವು ಹೆದರುವುದಿಲ್ಲ. ಏಕೆಂದರೆ ಇದುವರೆಗೆ ಯಾರೂ ಬೇಟೆಯಾಡಿ ಕೊಂದದ್ದು ಅವುಗಳಿಗೆ ಗೊತ್ತಿಲ್ಲ. ರಾಘವ, ಹೆರೆದುಪ್ಪದಂತಿರುವ ದೊಡ್ಡ ದೊಡ್ಡ ಆ ಹಕ್ಕಿಗಳನ್ನು ನೀವು ತಿನ್ನಬಹುದು. ಲಕ್ಷ್ಮಣನು ರೋಹಿತ, ವಕ್ರತುಂಡ, ನಡಮೀನ ಮೊದಲಾದ ಉತ್ತಮಜಾತಿಯ ಮೀನುಗಳನ್ನು ಬಾಣಗಳಿಂದ ಹೊಡೆದು ತರುವನು. ಅವುಗಳ ಚರ್ಮ, ರೆಕ್ಕೆ ಮುಳ್ಳುಗಳನ್ನು ತೆಗೆದು ಕಬ್ಬಿಣದ ಶೂಲದಲ್ಲಿ ಬೇಯಿಸಿ ಭಕ್ತಿಯಿಂದ ನಿನಗೆ ಕೊಡುವನು. ಆ ಮೀನುಗಳನ್ನು ನೀನು ಯಥೇಷ್ಟವಾಗಿ ತಿನ್ನಬಹುದು. ಪಂಪಾಸರೋವರದ ಪುಷ್ಪರಾಶಿಯ ಮಧ್ಯದಲ್ಲಿರುವ ಶುಭಜಲವು ಪದ್ಮಗಂಧಿಯಾಗಿರುತ್ತದೆ. ರುಚಿಕರವೂ ಶೀತಲವೂ ಆದ ಆ ನೀರು ಆರೋಗ್ಯಕರವಾದದ್ದು. ಅದು ಯಾವಾಗಲೂ ಬೆಳ್ಳಿಯಂತೆಯೂ ಸ್ಫಟಕದಂತೆಯೂ ನಿರ್ಮಲವಾಗಿರುತ್ತದೆ. ಲಕ್ಷ್ಮಣನು ತಾವರೆಯೆಲೆಯ ದೊನ್ನೆಯಲ್ಲಿ ಆ ನೀರನ್ನು ತಂದು ನಿನಗೆ ಕುಡಿಯಲು ಕೊಡುವನು! ಗಿರಿಗುಹೆಗಳಲ್ಲಿ ವಾಸಿಸುವ ಕಾಡುಹಂದಿಗಳು ವನದಲ್ಲಿ ಸಂಚರಿಸುತ್ತ ನೀರು ಕುಡಿಯುವ ಆಸೆಯಿಂದ ಆ ಪುಷ್ಕರಿಣಿಯ ಬಳಿಗೆ ಬರುತ್ತವೆ. ಗೂಳಿಗಳು ಗುಟುರುಹಾಕುವಂತೆ ಅವು ವಟಗುಟ್ಟುತ್ತವೆ. ನೀನು ಸಂಜೆಯ ಹೊತ್ತು ಸಂಚರಿಸುವಾಗ ಪಂಪಾಸರೋವರದ ತಂಪಾದ ನೀರನ್ನು ನೋಡುತ್ತಿದ್ದರೆ, ನಿನ್ನ ಶೋಕವು ಕಡಿಮೆಯಾಗುವುದು. ಅಲ್ಲಿರುವ ತಿಲಕವೃಕ್ಷಗಳೂ ನಕ್ತಮಾಲಗಳೂ ಹೂಗಳಿಂದ ತುಂಬಿರುತ್ತವೆ. ರಾಘವ, ಅಲ್ಲಿ ನೈದಿಲೆಗಳೂ ತಾವರೆಗಳೂ ಅಗಲವಾಗಿ ಅರಳಿರುತ್ತವೆ. ಆ ಹೂಗಳನ್ನು ಯಾವ ಮನುಷ್ಯನೂ ಬಿಡಿಸುವುದಿಲ್ಲ, ಮುಡಿಯುವುದಿಲ್ಲ! ಆ ಹೂಗಳು ಬಾಡುವುದೂ ಇಲ್ಲ, ಉದುರುವುದೂ ಇಲ್ಲ! ಅಲ್ಲಿ ಮತಂಗಮುನಿಯ ಶಿಷ್ಯರೂ ಶಾಂತಚಿತ್ತರೂ ಆದ ಕೆಲವು ಋಷಿಗಳಿದ್ದರು. ಅವರು ತಮ್ಮ ಗುರುವಿಗೋಸ್ಕರ ಕಾಡಿನಲ್ಲಿರುವ ಫಲ, ಮೂಲ, ಸಮಿತ್ತು ಮುಂತಾದವುಗಳನ್ನು ಹೊತ್ತು ತರುತ್ತಿದ್ದರು. ಭಾರವನ್ನು ಹೊತ್ತು ಬಳಲಿದ ಆ ಋಷಿಗಳ ಮೈಯಿಂದ ನೆಲಕ್ಕೆ ಬಿದ್ದ ಬೆವರುಹನಿಗಳು ಅವರ ತಪಃಪ್ರಭಾವದಿಂದ ಹೂಗಳಾದವು. ಋಷಿಗಳ ಬೆವರುಹನಿಗಳಿಂದ ಹುಟ್ಟಿದ ಆ ಹೂಗಳು ಬಾಡಿ ನಾಶವಾಗುವುದಿಲ್ಲ. ಅವರೆಲ್ಲ ಈಗ ತೀರಿಹೋಗಿದ್ದಾರೆ. ಆ ಋಷಿಗಳ ಸೇವೆ ಮಾಡುತ್ತಿದ್ದ ಒಬ್ಬ ಶ್ರಮಣಿಯನ್ನು ಈಗಲೂ ಅಲ್ಲಿ ಕಾಣಬಹುದು; ಅವಳ ಹೆಸರು ಶಬರಿ. ಆವಳು ದೀರ್ಘಾಯುಸ್ಸನ್ನು ಪಡೆದು ಜೀವಿಸಿದ್ದಾಳೆ. ಧರ್ಮನಿಷ್ಠಳಾದ ಆ ಶಬರಿಯು ದೇವತಾಸದೃಶನೂ ಸರ್ವವಂದ್ಯನೂ ಆದ ನಿನ್ನ ದರ್ಶನವನ್ನು ಪಡೆದು ಸ್ವರ್ಗವನ್ನು ಸೇರಬೇಕೆಂದಿದ್ದಾಳೆ. ಪಂಪಾಸರೋವರದ ಪಶ್ಚಿಮ ತೀರಕ್ಕೆ ಹೋದರೆ ಅದ್ಭುತವೂ ಗೋಪ್ಯವೂ ಆದ ಮತಂಗಾಶ್ರಮವನ್ನು ನೋಡುವೆ. ಆ ವನದಲ್ಲಿಯೂ ಸಮೀಪದಲ್ಲಿರುವ ಋಷ್ಯಮೂಕ ಪರ್ವತದಲ್ಲಿಯೂ ಬೇಕಾದಷ್ಟು ಕಾಡಾನೆಗಳಿವೆ. ಆದರೆ ಆಶ್ರಮಕ್ಕೆ ಬಾಧೆಯನ್ನು ಕೊಡಲು ಅವುಗಳಿಗೆ ಸಾಮರ್ಥ್ಯವಿಲ್ಲ: ಮತಂಗಮುನಿಯ ಪ್ರಭಾವವೇ ಅದಕ್ಕೆ ಕಾರಣ. ಆದ್ದರಿಂದ ಆ ವನವು ಮತಂಗವನವೆಂದು ವಿಖ್ಯಾತವಾಗಿದೆ. ನಂದನವನವೇ ಮೊದಲಾದ ಜೀವೋದ್ಯಾನದಂತಿರುವ ಮತಂಗವನದಲ್ಲಿ ನಾನಾ ಬಗೆಯ ಹಕ್ಕಿಗಳು ವಿಹರಿಸುತ್ತವೆ. ರಘುನಂದನ, ಅಲ್ಲಿ ನೀನು ಮನಃಶಾಂತಿಯನ್ನು

ಪಡೆಯುವೆ. ಪಂಪಾಸರೋವರದ ಪೂರ್ವದಿಕ್ಕಿಗೆ ಹೂತುಂಬಿದ ಮರಗಳಿರುವ ಋಷ್ಯಮೂಕಗಿರಿಯಿದೆ. ಅದನ್ನು ಹತ್ತುವುದು ಕಷ್ಟ. ಅಲ್ಲಿ ಶಿಶುನಾಗರೆಂಬ ರಾಕ್ಷಸರು ಬೆಟ್ಟಕ್ಕೆ ಕಾವಲಾಗಿದ್ದಾರೆ. ಪುರಾತನಕಾಲದಲ್ಲಿ ಬ್ರಹ್ಮನು ಅದನ್ನು ಪ್ರಶಸ್ತವಾದ ಪರ್ವತವಾಗಿರಲೆಂದು ಸೃಜಿಸಿದ್ದಾನೆ. ಅದರ ಶಿಖರದಲ್ಲಿ ಮಲಗಿದ ಪುರುಷನಿಗೆ ಸ್ವಪ್ನದಲ್ಲಿ ಧನಲಾಭವಾದರೆ, ಎಚ್ಚರವಾದ ಮೇಲೆ ಸತ್ಯವಾಗಿಯೂ ಆ ಧನವು ಲಭಿಸುತ್ತದೆ. ಧರ್ಮವಿರುದ್ಧವಾಗಿ ನಡೆಯುವ ಪಾಪಿಯು ಆ ಋಷ್ಯಮೂಕಗಿರಿಯನ್ನು ಹತ್ತುವುದಿಲ್ಲ. ಯಾವನಾದರೂ ಪಾಪಿಯು ಹತ್ತಿದರೆ, ಅವನು ಪರ್ವತಶಿಖರದಲ್ಲಿ ಮಲಗಿದಾಗ ರಾಕ್ಷಸರು ಬಂದು ಕೊಂದುಹಾಕುತ್ತಾರೆ. ಮತಂಗಾರಣ್ಯದಲ್ಲಿ ಕ್ರೀಡಿಸುತ್ತಿರುವ ಶಿಶುನಾಗರ ಕೋಲಾಹಲ ಶಬ್ದವು ಪಂಪಾಸರೋವರದವರೆಗೆ ಕೇಳಿಸುತ್ತದೆ. ಮೇಘದಂತೆ ಕಪ್ಪಾಗಿರುವ ಬಲಶಾಲಿಗಳಾದ ಮದ್ದಾನೆಗಳು ಕಾದಾಡಿ ರಕ್ತಧಾರೆಗಳಿಂದ ನೆನೆದು ಅತ್ತಿತ್ತ ಚದರಿಹೋಗುತ್ತವೆ. ಆ ವನ್ಯಜಂತುಗಳು ಸಂಪಾಸರೋವರದಲ್ಲಿ ಸರ್ವದಾ ದೊರೆಯುವ ಶೀತಲವಾದ ತಿಳಿನೀರನ್ನು ಕುಡಿದು ತೃಪ್ತಿಹೊಂದಿ ವನದೊಳಗೆ ಸಾಗುತ್ತವೆ. ಆ ವನದಲ್ಲಿ ಕರಡಿಗಳನ್ನೂ ಹುಲಿಗಳನ್ನೂ ನೀಲಮಣಿಗಳಂತಿರುವ ಜಿಂಕೆಗಳನ್ನೂ ನೋಡಿದರೆ, ರಾಘವ, ನಿನ್ನ ಶೋಕವು ಕಡಿಮೆಯಾಗುವುದು. ಋಷ್ಯಮೂಕಗಿರಿಯಲ್ಲಿ ಒಂದು ದೊಡ್ಡ ಗುಹೆಯಿದೆ. ಒಂದು ಬಂಡೆಯು ಅದನ್ನು ಮುಚ್ಚುವ ಬಾಗಿಲಾಗಿದೆ. ಅದನ್ನು ಪ್ರವೇಶಿಸುವುದು ಬಹಳ ಕಠಿಣ. ಆ ಗುಹೆಯ ಪೂರ್ವದ್ವಾರದಲ್ಲಿ ಶೀತೋದಕದಿಂದ ಕೂಡಿದ ದೊಡ್ಡ ಕೊಳವಿದೆ. ಅದರ ತೀರವು ಫಲಮೂಲಗಳಿಂದಲೂ ನಾನಾಮೃಗಗಳಿಂದಲೂ ರಮಣೀಯವಾಗಿದೆ. ಸುಗ್ರೀವನು ನಾಲ್ವರು ವಾನರರೊಡನೆ ಆ ಗುಹೆಯಲ್ಲಿ ವಾಸಮಾಡುತ್ತಾನೆ. ಕೆಲವು ಸಲ ಆ ಪರ್ವತದ ಶಿಖರದ ಮೇಲೆ ಬಂದು ಕುಳಿತುಕೊಳ್ಳುವುದುಂಟು" ಎಂದು ಕಬಂಧನು ರಾಮಲಕ್ಷ್ಮಣರಿಗೆ ತಿಳಿಸಿ, ಹೂಮಾಲೆಯನ್ನು ಧರಿಸಿದವನಾಗಿ ಸೂರ್ಯನಂತೆ ಬೆಳಗುತ್ತ ಗಗನದಲ್ಲಿ ಕ್ಷಣಕಾಲ ನಿಂತಿದ್ದ. ಶ್ರೀರಾಮಲಕ್ಷ್ಮಣರು ತಮ್ಮ ಸಮೀಪದಲ್ಲಿಯೇ ಗಗನವನ್ನಡರಿ ನಿಂತಿದ್ದ ಮಹಾತ್ಮನಾದ ಕಬಂಧನನ್ನು ಕುರಿತು "ಮಹಾಭಾಗ, ನಾವು ಸುಗ್ರೀವನ ಬಳಿಗೆ ಹೊರಟೆವು. ನೀನು ಪುಣ್ಯಲೋಕಕ್ಕೆ ಪ್ರಯಾಣ ಬೆಳೆಸು" ಎಂದರು. "ನೀವೂ ಪ್ರಯಾಣ ಬೆಳೆಸಿರಿ, ಕಾರ್ಯಸಿದ್ಧಿಯಾಗಲಿ!" ಎಂಬುದಾಗಿ ಸುಪ್ರೀತರಾದ ರಾಮಲಕ್ಷ್ಮಣರಿಗೆ ತಿಳಿಸಿದ ಕಬಂಧನು ಅವರ ಅನುಜ್ಞೆಯನ್ನು ಪಡೆದು, ತನ್ನ ಲೋಕಕ್ಕೆ ಪ್ರಯಾಣಮಾಡಿದ. ಈ ರೀತಿಯಲ್ಲಿ ಕಬಂಧನು ತನ್ನ ನಿಜರೂಪವನ್ನು ಪಡೆದು ಸೂರ್ಯನಂತೆ ಪ್ರಜ್ವಲಿಸುವ ದೇಹವುಳ್ಳವನಾದ. ಅವನು ಆಕಾಶದಲ್ಲಿ ನಿಂತು ಶ್ರೀರಾಮನಿಗೆ ಋಷ್ಯಮೂಕದ ಮಾರ್ಗ ಮೊದಲಾದುದನ್ನು ತಿಳಿಸಿ ಹೋಗುವಾಗ, "ಶ್ರೀರಾಮ ಸುಗ್ರೀವನೊಡನೆ ಸಖ್ಯವನ್ನು ಬೆಳೆಸು!" ಎಂದು ಮತ್ತೊಮ್ಮೆ ಹೇಳಿದ.

೩೪. ಮತಂಗಾಶ್ರಮದತ್ತ ಪಯಣ; ಶಬರಿಯಿಂದ ಸತ್ಕಾರ; ಶಬರಿಯ ಸ್ವರ್ಗಗಮನ

ಆ ರಾಜಕುಮಾರರು ಪಶ್ಚಿಮಾಭಿಮುಖವಾಗಿ ಹೊರಟು ಕಬಂಧನು ತೋರಿಸಿದ ಕಾಡಿನ ಮಾರ್ಗವನ್ನು ಹಿಡಿದು, ಪಂಪಾಸರೋವರದ ಕಡೆಗೆ ಪ್ರಯಾಣಮಾಡಿದರು. ದಾರಿಯಲ್ಲಿದ್ದ ಪರ್ವತಪ್ರದೇಶಗಳಲ್ಲಿ ವಿವಿಧ ವೃಕ್ಷಗಳು ಜೇನುತುಪ್ಪದಂತೆ ಸಿಹಿಯಾದ ಹಣ್ಣುಗಳನ್ನು ಹೊತ್ತು ನಿಂತಿದ್ದವು. ರಾಮಲಕ್ಷ್ಮಣರು ಆ ವೃಕ್ಷಗಳನ್ನು ನೋಡುತ್ತ ಸುಗ್ರೀವನನ್ನು ಕಾಣುವ ತವಕದಿಂದ ಆ ರಾತ್ರಿ ಒಂದು ಜಾಗದಲ್ಲಿ ತಂಗಿದ್ದು, ಮಾರನೆಯ ದಿನ ಪಂಪಾಸರೋವರದ ಪಶ್ಚಿಮ ತೀರವನ್ನು ಸೇರಿದರು. ಅಲ್ಲಿ ರಾಮಲಕ್ಷ್ಮಣರು ಶಬರಿಯ ರಮ್ಯವಾದ ಆಶ್ರಮವನ್ನು ಕಂಡರು. ಮರಗಳಿಂದ ಪರಿವೃತವಾದ ಆಶ್ರಮದ ರಮ್ಯತೆಯನ್ನು ವೀಕ್ಷಿಸುತ್ತ ಅವರು ಶಬರಿಯಿದ್ದಲ್ಲಿಗೆ ಹೋದರು. ಯೋಗಸಿದ್ಧಳಾದ ಶಬರಿಯು ಅವರೀರ್ವರನ್ನು ಕಂಡೊಡನೆ ಕೈಮುಗಿದು ಎದ್ದುನಿಂತು, ಶ್ರೀರಾಮಲಕ್ಷ್ಮಣರ ಪಾದಗಳಿಗೆ ನಮಸ್ಕರಿಸಿದಳು. ಅವರಿಗೆ ಪಾದ್ಯವನ್ನೂ ಆಚಮನೀಯಾದಿಗಳನ್ನೂ ವಿಧಿವತ್ತಾಗಿ ಕೊಟ್ಟು ಸತ್ಕರಿಸಿದಳು. ಶ್ರೀರಾಮನು ವ್ರತನಿಷ್ಠಳಾದ ಶ್ರಮಣಿಯನ್ನು ಕುರಿತು, "ಹೇ ತಪೋಧನೆ, ತಪೋವಿಘ್ನಗಳಾದ ಮನೋವಿಕಾರಗಳೆಲ್ಲವನ್ನೂ ಗೆದ್ದಿರುವೆಯಾ? ನಿನ್ನ ತಪಸ್ಸು ವರ್ಧಿಸುತ್ತಿರುವುದೇ? ಕೋಪವನ್ನು ಜಯಿಸಿರುವೆಯಾ? ಆಹಾರವನ್ನು ನಿಯಂತ್ರಿಸಿರುವೆಯಾ? ವ್ರತಗಳೆಲ್ಲವನ್ನೂ ನಡೆಸಿರುವೆಯಾ? ನಿನ್ನ ಮನಸ್ಸಿನಲ್ಲಿ ಶಾಂತಿ ನೆಲೆಸಿದೆಯೇ? ತಪಸ್ವಿನಿ, ನಿನ್ನ ಗುರುಶುಶ್ರೂಷೆಯು ಸಫಲವಾಯಿತೇ?" ಎಂದು ಕೇಳಿದ. ಈ ರೀತಿಯಲ್ಲಿ ಶ್ರೀರಾಮನು ಪ್ರಶ್ನೆ ಮಾಡಲು ತಪಸ್ಸಿದ್ಧಳೂ ಸಿದ್ಧಸಮ್ಮಾನ್ಯಳೂ ವೃದ್ಧಳೂ ಆದ ಶಬರಿಯು ಶ್ರೀರಾಮನಿಗೆ ಎದುರಾಗಿ ನಿಂತು, "ಶ್ರೀರಾಮ, ಈಗ ನಿನ್ನ ದರ್ಶನವಾದ್ದರಿಂದ ನನ್ನ ತಪಸ್ಸು ಸಿದ್ಧಿಸಿತು! ಈಗ ನನ್ನ ತಪಸ್ಸು ಸಫಲವಾಯಿತು! ನನ್ನ ಗುರುಶುಶ್ರೂಷೆಗೆ ಉತ್ತಮವಾದ ಫಲ ದೊರೆಯಿತು! ನಾನು ಹುಟ್ಟಿದುದು ಇಂದು ಸಾರ್ಥಕವಾಯಿತು! ಇನ್ನು ನನಗೆ ಸದ್ಗತಿಯಾಗುವುದು. ಹೇ ಪುರುಷೋತ್ತಮ, ದೇವೋತ್ತಮನಾದ ನೀನು ನನ್ನಿಂದ ಪೂಜೆಯನ್ನು ಕೈಗೊಂಡರೆ, ಸಕಲವೂ ನನಗೆ ಸಿದ್ಧಿಸಿದಂತೆಯೇ. ರಘುನಂದನ, ಸೌಮ್ಯವಾದ ನಿನ್ನ ನೋಟದಿಂದ ನಾನು ಪರಿಶುದ್ಧಳಾದೆ. ನಿನ್ನ ಅನುಗ್ರಹದಿಂದ ಶಾಶ್ವತವಾದ ಸದ್ಗತಿಯನ್ನು ಪಡೆಯುತ್ತೇನೆ. ನೀನು ಚಿತ್ರಕೂಟಕ್ಕೆ ಬಂದಾಗ, ನಾನು ಶುಶ್ರೂಷಿಸುತ್ತಿದ್ದ ನನ್ನ ಗುರುಗಳು ದಿವ್ಯಪ್ರಕಾಶವನ್ನು ಬೀರುವ ವಿಮಾನವನ್ನೇರಿ ಸ್ವರ್ಗಕ್ಕೆ ಹೊರಟುಹೋದರು. ಧರ್ಮಜ್ಞರೂ, ಮಹಾತ್ಮರೂ ಆದ ಆ ಮಹರ್ಷಿಗಳು ನನಗೆ 'ಎಲೌ ಶಬರಿ, ಸ್ವಲ್ಪ ಕಾಲದ ಮೇಲೆ ಶ್ರೀರಾಮನು ಈ ಪುಣ್ಯಾಶ್ರಮಕ್ಕೆ ಬರುವನು. ಲಕ್ಷ್ಮಣಸಮೇತನಾಗಿ ಬರುವ ಆತನನ್ನು ನೀನು ಅತಿಥಿಯೆಂದು ಸತ್ಕರಿಸಬೇಕು. ಶ್ರೀರಾಮನ ದರ್ಶನವಾದ ಮೇಲೆ ನಿನಗೆ ಶಾಶ್ವತವಾದ ಸದ್ಗತಿಯು ಲಭಿಸುವುದು' ಎಂದು ಹೇಳಿದ್ದರು. ಹೇ ಪುರುಷೋತ್ತಮ, ಪಂಪಾತೀರದಲ್ಲಿ ದೊರೆಯುವ ಫಲಮೂಲಾದಿ ವನ್ಯಾಹಾರವನ್ನು ನಿನಗೋಸ್ಕರ ನಾನು ಸಂಗ್ರಹಿಸಿದ್ದೇನೆ" ಎಂದು ನುಡಿದಳು. ಆಗ ಧರ್ಮಾತ್ಮನಾದ ರಾಘವನು ಜ್ಞಾನನಿಷ್ಠಳಾದ ಶಬರಿಯನ್ನು ನೋಡಿ,

"ಶಬರಿ, ದನುವಂಶೀಯನಾದ ಕಬಂಧನಿಂದ ನಿನ್ನ ಗುರುವೂ ಮಹಾತ್ಮನೂ ಆದ ಮತಂಗಮುನಿಯ ಪ್ರಭಾವವನ್ನು ಕೇಳಿದ್ದೇನೆ. ನಿನಗೆ ಒಪ್ಪಿಗೆಯಾದರೆ ಅವರ ಆಶ್ರಮವನ್ನು ಈಗ ಪ್ರತ್ಯಕ್ಷವಾಗಿ ನೋಡಬೇಕೆಂದಿದ್ದೇನೆ" ಎಂದ. ಶ್ರೀರಾಮನ ಬಾಯಿಂದ ಈ ಮಾತು ಬಂದೊಡನೆ ಶಬರಿಯು ರಾಮಲಕ್ಷ್ಮಣರಿಗೆ ಮಹತ್ತರವಾದ ಆ ವನವನ್ನು ತೋರಿಸಿದಳು. "ರಘುನಂದನ, ಇತ್ತ ನೋಡು! ಶಬರಿಯ ಸತ್ಕಾರ ಸಾಂದ್ರವಾದ ಮೇಘಮಂಡಲದಂತೆ ವಿರಾಜಿಸುವ ಈ ವನವು ಮೃಗಪಕ್ಷಿಗಳಿಂದ ತುಂಬಿಹೋಗಿದೆ. ಇದು ಮತಂಗವನವೆಂದು ವಿಖ್ಯಾತವಾಗಿದೆ. ಈ ಮಹಾವನದಲ್ಲಿ ಆತ್ಮವಿದರಾದ ನನ್ನ ಗುರುಗಳು ಮಂತ್ರಪರಿಶುದ್ಧವಾದ ತಮ್ಮ ದೇಹವನ್ನು ವಿಧಿವತ್ತಾಗಿ ಆತ್ಮಾರ್ಪಣ ಮಾಡಿದರು. ಪಶ್ಚಿಮಾಭಿಮುಖವಾಗಿ ತಗ್ಗಾಗಿರುವ ಈ ವೇದಿಕೆಯಲ್ಲಿ ನನ್ನ ಗುರುಗಳು ಪೂಜೆಮಾಡುತ್ತಿದ್ದರು. ಅವರು ನನ್ನ ಶುಶ್ರೂಷೆಯನ್ನು ಕೈಗೊಂಡು ಬಳಲಿಕೆಯಿಂದ ನಡುಗುತ್ತಿದ್ದ ಕೈಗಳಿಂದ ಇಲ್ಲಿ ಹೂಗಳನ್ನರ್ಪಿಸಿ ಪೂಜಿಸುತ್ತಿದ್ದರು. ರಘೂತ್ತಮ, ದಿವ್ಯಪ್ರಭಾಮಂಡಿತವಾದ ಈ ವೇದಿಕೆಗಳು ಈಗಲೂ ಅವರ ತಪೋಮಹಿಮೆಯಿಂದ ದಿಗ್ದಿಗಂತಗಳನ್ನು ಬೆಳಗಿಸುತ್ತಿವೆ. ನೋಡು! ಉಪವಾಸಾದಿ ವ್ರತಗಳಿಂದ ಬಳಲಿದ ನನ್ನ ಗುರುಗಳಿಗೆ ಸಮುದ್ರಸ್ನಾನಕ್ಕಾಗಿ ತೆರಳುವ ಶಕ್ತಿ ಇರಲಿಲ್ಲ. ಅವರ ಧ್ಯಾನಮಾತ್ರದಿಂದ ಸಪ್ತಸಮುದ್ರಗಳೂ ಇಲ್ಲಿಗೇ ಬಂದು ಸೇರಿರುವುದನ್ನು ನೋಡು. ನನ್ನ ಗುರುಗಳು ಇಲ್ಲಿ ಸ್ನಾನಮಾಡಿ ನಾರುಮಡಿಗಳನ್ನು ಈ ಮರಗಳಲ್ಲಿ ಹರಡಿದ್ದಾರೆ. ರಘುನಂದನ, ಅವು ಈಗಲೂ ಒಣಗಿಲ್ಲ! ದೇವತಾರ್ಚನೆಯನ್ನು ಮಾಡುವಾಗ ನನ್ನ ಗುರುಗಳು ನೈದಿಲೆ ಹೂಗಳನ್ನು ಇಲ್ಲಿ ಮಾಲೆಗಟ್ಟಿದ್ದಾರೆ, ಅವು ಇನ್ನೂ ಬಾಡದೆ ಹೊಚ್ಚ ಹೊಸತಾಗಿವೆ, ನೋಡು! ಶ್ರೀರಾಮ, ಈ ಮತಂಗವನವನ್ನು ನೀನು ಸಮಗ್ರವಾಗಿ ನೋಡಿದೆ. ಕೇಳಬೇಕಾದ್ದನ್ನು ಕೇಳಿದೆ. ಈಗ ನನಗೆ ಅನುಜ್ಞೆಯನ್ನು ಕೊಡು; ಈ ಕಳೇಬರವನ್ನು ತ್ಯಜಿಸಬೇಕೆಂದಿದ್ದೇನೆ. ಇದು ಯಾರ ಆಶ್ರಮವೋ, ನಾನು ಯಾರ ಭಕ್ತಳಾದ ದಾಸಿಯೋ ಅಂತಹ ಜ್ಞಾನಿಗಳಾದ ಮಹರ್ಷಿಗಳ ಸಾನ್ನಿಧ್ಯವನ್ನು ಸೇರಿಕೊಳ್ಳಬೇಕೆಂದಿದ್ದೇನೆ" ಎಂದು ನಿವೇದಿಸಿದಳು. ಧರ್ಮಯುಕ್ತವಾದ ಶಬರಿಯ ನುಡಿಯನ್ನಾಲಿಸಿ, ಶ್ರೀರಾಮನಿಗೂ ಲಕ್ಷ್ಮಣನಿಗೂ ಅತ್ಯಾನಂದವಾಯಿತು. 'ಆಶ್ಚರ್ಯಕರ!' ಎಂಬ ಸೊಲ್ಲು ಅವರ ಬಾಯಿಂದ ಹೊರಟಿತು. ಅನಂತರ ವ್ರತನಿಷ್ಠಳಾದ ಶಬರಿಯನ್ನು ನೋಡಿ ಶ್ರೀರಾಮನು, "ಧರ್ಮಚಾರಿಣಿ, ನನ್ನನ್ನು ಭಕ್ತಿಯಿಂದ ಅರ್ಚಿಸಿದ್ದೀಯೆ. ಇಚ್ಛೆ ಬಂದಲ್ಲಿಗೆ ಸುಖವಾಗಿ ತೆರಳು" ಎಂದ. ಆಗ ನಾರುಬಟ್ಟೆ ಕೃಷ್ಣಾಜಿನಗಳನ್ನುಟ್ಟು ಜಟಾಧಾರಿಣಿಯಾಗಿ ಮುದುಕಿಯಾಗಿದ್ದ ಶಬರಿಗೆ ತನ್ನ ಜೀರ್ಣವಾದ ದೇಹವನ್ನು ಆ ಕ್ಷಣದಲ್ಲಿಯೇ ತೊರೆಯಬೇಕೆಂದು ಇಚ್ಛೆಯಾಯಿತು. ಶ್ರೀರಾಮನ ಅನುಜ್ಞೆಯಾದೊಡನೆ ಅವಳು ಅಗ್ನಿಯಲ್ಲಿ ತನ್ನ ದೇಹವನ್ನರ್ಪಿಸಿದಳು. ಅಗ್ನಿಯಂತೆ ಬೆಳಗುವ ದಿವ್ಯ ದೇಹವನ್ನು ಪಡೆದು ಶಬರಿಯು ಸ್ವರ್ಗವನ್ನು ಸೇರಿದಳು. ದಿವ್ಯವಾದ ಆಭರಣಗಳನ್ನು ತೊಟ್ಟು, ಹೂಮಾಲೆಗಳನ್ನು ಮುಡಿದು, ಚಂದನವನ್ನು ಹಚ್ಚಿಕೊಂಡು, ದಿವ್ಯವಸ್ತ್ರವನ್ನುಟ್ಟ ಶಬರಿಯು ದಿವ್ಯಸುಂದರಿಯಾಗಿ ಕಂಗೊಳಿಸಿದಳು. ಮಿಂಚುವ ಮಿಂಚಿನಂತೆ ಆ ಪ್ರದೇಶವನ್ನು ಝಗ್ ಎಂದು ಬೆಳಗಿಸುತ್ತ ಶಬರಿಯು ಸ್ವರ್ಗವನ್ನೇರಿದಳು. ಪುಣ್ಯಾತ್ಮರಾದ ಆ ಮಹರ್ಷಿಗಳು ವಿಹರಿಸುತ್ತಿದ್ದ ಪುಣ್ಯಲೋಕವನ್ನು ತನ್ನ ತಪೋಬಲದಿಂದ ಸೇರಿದಳು.

೭೫. ಶ್ರೀರಾಮಲಕ್ಷ್ಮಣರು ಪಂಪಾಸರೋವರಕ್ಕೆ ಹೋಗಿ ಅದರ ಸೌಂದರ್ಯವನ್ನು ನೋಡುವುದು

ಶಬರಿಯು ತನ್ನ ತಪೋಬಲದಿಂದ ಸ್ವರ್ಗವನ್ನು ಸೇರಲು, ಧರ್ಮಾತ್ಮನಾದ ರಾಘವನು ಅಲ್ಲಿದ್ದ ಮಹಾತ್ಮರ ತಪಃಪ್ರಭಾವವನ್ನು ತಮ್ಮನೊಡನೆ ಸಮೀಕ್ಷಿಸಿದ. ಆ ಧರ್ಮಾತ್ಮನು ಅದರ ವಿಷಯವಾಗಿ ಆಲೋಚಿಸುತ್ತ, ಹಿತಕಾರಿಯೂ ಏಕಾಗ್ರಚಿತ್ತನೂ ಆಗಿದ್ದ ಲಕ್ಷ್ಮಣನನ್ನು ನೋಡಿ ಹೀಗೆಂದ: "ಸೌಮ್ಯ, ಪುಣ್ಯಾತ್ಮರ ಅತ್ಯದ್ಭುತವಾದ ಈ ಆಶ್ರಮವನ್ನು ನಾವು ನೋಡಿದೆವು. ಜಿಂಕೆಗಳೂ ಹುಲಿಗಳೂ ಇಲ್ಲಿ ಅನ್ಯೋನ್ಯ ವಿಶ್ವಾಸದಿಂದಿವೆ! ನಾನಾ ಬಗೆಯ ಹಕ್ಕಿಗಳು ವಾಸವಾಗಿವೆ. ಸಪ್ತಸಮುದ್ರಗಳೂ ನೆಲೆಸಿರುವ ಈ ತೀರ್ಥಗಳಲ್ಲಿ ನಾವು ಸ್ನಾನಮಾಡಿದ್ದಾಯಿತು. ವಿಧಿವತ್ತಾಗಿ ಪಿತೃಗಳಿಗೆ ತರ್ಪಣವನ್ನರ್ಪಿಸಿದ್ದಾಯಿತು. ನಮ್ಮ ದೋಷವೆಲ್ಲವೂ ತೊರೆದು ಹೋಯಿತು. ಮಂಗಳವು ಆರಂಭವಾಯಿತು. ಲಕ್ಷ್ಮಣ, ನಿಜವಾಗಿಯೂ ಈಗ ನನ್ನ ಮನಸ್ಸಿಗೆ ಉಲ್ಲಾಸವಾಗಿದೆ. ಒಳ್ಳೆಯದಾಗುವುದೆಂಬ ಶುಭಚಿಂತನೆಯು ಹೃದಯದಲ್ಲಿ ಹುಟ್ಟುತ್ತಿದೆ. ಆದ್ದರಿಂದ ರಮಣೀಯವಾದ ಪಂಪಾಸರೋವರದ ಬಳಿಗೆ ಹೋಗೋಣ, ಬಾ. ಸಮೀಪದಲ್ಲಿಯೇ ಋಷ್ಯಮೂಕಗಿರಿಯು ಕಾಣಿಸುತ್ತಿದೆ. ಸೂರ್ಯಪುತ್ರನಾದ ಧರ್ಮಾತ್ಮ ಸುಗ್ರೀವನು ಅಲ್ಲಿ ವಾಸವಾಗಿದ್ದಾನೆ. ಅವನು ವಾಲಿಯ ಭಯದಿಂದ ಕಂಗಾಲಾಗಿ ನಾಲ್ವರು ವಾನರರೊಡನೆ ಅಲ್ಲಿದ್ದಾನಲ್ಲವೆ? ವಾನರೋತ್ತಮನಾದ ಸುಗ್ರೀವನ ಸಂದರ್ಶನಮಾಡಲು ಆತುರಪಡುತ್ತಿದ್ದೇನೆ. ವತ್ಸ, ಸೀತೆಯ ಅನ್ವೇಷಣೆ ಅವನ ಅಧೀನವಾಗಿದೆಯಲ್ಲವೆ?" ಎಂದ. ಹೀಗೆ ಧೈರ್ಯವನ್ನವಲಂಬಿಸಿ ಹೇಳುತ್ತಿದ್ದ ಶ್ರೀರಾಮನನ್ನು ನೋಡಿ ಸೌಮಿತ್ರಿಯು, "ಅಣ್ಣ, ಬೇಗನೇ ಅಲ್ಲಿಗೆ ಹೋಗೋಣ. ಸುಗ್ರೀವನನ್ನು ನೋಡಬೇಕೆಂದು ನನ್ನ ಮನಸ್ಸೂ ಉತ್ಸುಕವಾಗಿದೆ" ಎಂದ. ಅನಂತರ ಪ್ರಜಾಪಾಲನದಕ್ಷನಾದ ಆ ಮಹಾಪುರುಷನು ಮತಂಗಾಶ್ರಮದಿಂದ ಹೊರಟು ಲಕ್ಷ್ಮಣನೊಡನೆ ಪಂಪಾಸರೋವರದ ಕಡೆಗೆ ಬಂದ. ಕುಡಿಯಲು ಯೋಗ್ಯವಾದ ಅಗಾಧ ತಿಳಿನೀರಿನಿಂದ ತುಂಬಿದ್ದ ಪುಣ್ಯಕರವಾದ ಆ ಪುಷ್ಕರಿಣಿಯು ದೂರದಲ್ಲಿ ಕಾಣಿಸಿತು. ತೀರದಲ್ಲಿ ನಾನಾ ಮರಗಳೂ ಬಳ್ಳಿಗಳೂ ಬೆಳೆದಿದ್ದವು. ಪದ್ಮಗಳಿಂದಲೂ ಸೌಗಂಧಿಕಪುಷ್ಪಗಳಿಂದಲೂ ಆ ಸರೋವರವು ಕೆಲವು ಕಡೆ ಕೆಂಪಾಗಿಯೂ, ಕೆಲವು ಕಡೆ ಕುಮುದಮಂಡಲಗಳಿಂದ ಬಿಳುಪಾಗಿಯೂ. ನೀಲೋತ್ಪಲಗಳಿಂದ ಕೆಲವು ಕಡೆ ಕಪ್ಪಾಗಿಯೂ ರಂಜಸುತ್ತಿದ್ದ ಆ ಪುಷ್ಕರಿಣಿಯು, ವಿವಿಧವರ್ಣಗಳಿಂದ ಶೋಭಿಸುವ ಚಿತ್ರಕಂಬಳದಂತೆ ರಮಣೀಯವಾಗಿ ಕಾಣಿಸಿತು. ಶ್ರೀರಾಮನು ದಾರಿಯಲ್ಲಿ ಮತಂಗಸರಸವೆಂಬ ಪುಣ್ಯತೀರ್ಥದಲ್ಲಿ ಸ್ನಾನಮಾಡಿದ. ಆಮೇಲೆ ಮುಂದೆ ಬರುತ್ತಿರಲು ಕೆಂದಾವರೆ, ಉತ್ಪಲ, ಬಿಳಿದಾವರೆ, ಕಲ್ಹಾರ – ಮುಂತಾದ ಪುಷ್ಪಗಳಿಂದ ವಿರಾಜಿಸುವ ಪಂಪಾಸರೋವರವು ಸ್ಪಷ್ಟವಾಗಿ ಗೋಚರಿಸಿತು. ಸುತ್ತಲೂ ಅರಳಿದ ಮಾವಿನ ಮರಗಳಿದ್ದವು. ನವಿಲುಗಳ ಕೇಕಾರವವು ಪ್ರತಿಧ್ವನಿಸುತ್ತಿತ್ತು. ತಿಲಕ, ದಾಳಿಂಬೆ, ಧವ, ಬಿಳಿಯ ಮತ್ತಿ, ಹೂಬಿಟ್ಟ ಕಣಿಗಿಲೆ, ಪುಷ್ಪಿತ ಪುನ್ನಾಗ – ಇತ್ಯಾದಿ ಮರಗಿಡಗಳು ಗೋಚರಿಸುತ್ತಿದ್ದವು. ಮಲ್ಲಿಗೆ ಜಾಜಿಗಳ ಬಳ್ಳಿಪೊದೆಗಳೂ, ಆಲದ ಮರ, ನಿಚುಲ,

ಅಶೋಕ, ಸಪ್ತವರ್ಣ, ಕೇದಗೆ ತಾಳೆ ಮೊದಲಾದ ವೃಕ್ಷಜಾತಿಗಳು ಸುತ್ತಲೂ ಬೆಳೆದಿದ್ದವು. ಹೀಗೆ ಬಳ್ಳಿ, ಹೂವು ಮತ್ತು ಮರಗಳಿಂದ ರಮಣೀಯವಾದ ಪಂಪಾಸರೋವರವು ಒಡವೆಗಳಿಂದ ಅಲಂಕರಿಸಿಕೊಂಡಿರುವ ತರುಣಿಯಂತೆ ಕಾಣಿಸುತ್ತಿತ್ತು.

ಶ್ರೀರಾಮಲಕ್ಷ್ಮಣರು ಶಾಂತಚಿತ್ತರಾಗಿ ಹೂಗಳಿಂದಲೂ ವೃಕ್ಷರಾಶಿಗಳಿಂದಲೂ ಶೋಭಿಸುತ್ತಿದ್ದ ಅರಣ್ಯವನ್ನು ನೋಡುತ್ತ ಹೋದರು. ಕೋಯಸ್ಟಿಕವೆಂಬ ಚಿಕ್ಕಜಾತಿಯ




ಶಬರಿಯಿಂದ ರಾಮಲಕ್ಷ್ಮಣರಿಗೆ ವನ್ಯಾಹಾರದ ಅರ್ಪಣೆ

ಬಿಳಿಯ ಕೊಕ್ಕರೆ, ಬಿಳಿಯ ನವಿಲು, ಮರಕುಟಕ, ಗಿಳಿ – ಮುಂತಾದ ನಾನಾಜಾತಿಯ ಪಕ್ಷಿಗಳ ಕಲಕಲರವದಿಂದ ವನವು ತುಂಬಿತ್ತು. ಶ್ರೀರಾಮನು ವಿವಿಧವೃಕ್ಷಗಳನ್ನೂ ಕೊಳಗಳನ್ನೂ ವೀಕ್ಷಿಸುತ್ತ ಹೋಗಿ, ತಂಪು ನೀರಿನಿಂದ ಕೂಡಿ ನೀರುಹಕ್ಕಿಗಳಿಂದ ಮನೋಹರವಾದ ಪಂಪಾಸರೋವರವನ್ನು ಕಂಡನು. ಅದು ಸಾಲ, ಸಂಪಗೆ ಮೊದಲಾದ ಹೂಬಿಟ್ಟ ಮರಗಳಿಂದಲೂ ದುಂಬಿಗಳಿಂದಲೂ ಕೂಡಿ ರಮಣೀಯವಾಗಿ ಅನುಪಮ ಸೌಂದರ್ಯದಿಂದ ವಿರಾಜಿತವಾಗಿತ್ತು. ನೀರು ಸ್ಫಟಿಕದಂತೆ ನಿರ್ಮಲವಾಗಿದ್ದಿತು, ದಂಡೆಯಲ್ಲಿ ನುಣುಪಾದ ಮರಳು ಹರಡಿದ್ದಿತು. ಶ್ರೀರಾಮನು ಆ ಪಂಪಾಸರೋವರವನ್ನು ನೋಡಿ ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣ ಇದರ ತೀರದಲ್ಲಿ ವಿವಿಧ ಲೋಹಗಳ ಅದುರಿನಿಂದ ಕೂಡಿದ ಋಷ್ಯಮೂಕಗಿರಿಯಿದೆ. ಅದು ಪವಿತ್ರವೂ ಅರಳಿದ ಮರಗಳಿಂದ ಭೂಷಿತವೂ ಆಗಿದೆ. ಅಲ್ಲಿಯೇ ಋಕ್ಷರಜಸ್ಸೆಂಬ ವಾನರೋತ್ತಮನ ಪುತ್ರನೂ ಮಹಾವೀರನೂ ಆದ ಸುಗ್ರೀವನು ವಾಸವಾಗಿದ್ದಾನಲ್ಲವೆ? ಲಕ್ಷ್ಮಣ, ವಾನರೇಂದ್ರನಾದ ಸುಗ್ರೀವನ ಬಳಿಗೆ ಹೋಗಿ ಅವನನ್ನು ಸಂದರ್ಶಿಸು" ಎಂದು ಹೇಳಿದ. ಪುನಃ ಲಕ್ಷ್ಮಣನಿಗೆ "ವತ್ಸ, ಈಗ ನಾನು ರಾಜ್ಯಭ್ರಷ್ಟನಾಗಿ ದೀನಸ್ಥಿತಿಯಲ್ಲಿದ್ದೇನೆ. ಸೀತೆಯಲ್ಲಿ ನನ್ನ ಮನಸ್ಸು ನೆಟ್ಟುಹೋಗಿದೆ. ಸೀತೆಯಿಲ್ಲದೆ ನಾನು ಜೀವಿಸುವುದು ಹೇಗೆ?" ಎಂದು ಕಾಮಸಂತಪ್ತನಾಗಿ ಹೇಳಿದ. ಲಕ್ಷ್ಮಣನು ಏಕಾಗ್ರ ಚಿತ್ತನಾಗಿ ಶ್ರೀರಾಮನ ಪರಿಸ್ಥಿತಿಯನ್ನು ಗಮನಿಸುತ್ತಿದ್ದ. ಶೋಕದಿಂದಲೂ ಆಯಾಸದಿಂದಲೂ ಪರವಶನಾಗಿದ್ದ ಶ್ರೀರಾಮನು ಮನೋಹರವಾದ ಪಂಪಾಸರೋವರಂದಲ್ಲಿ ಸ್ನಾನಕ್ಕಾಗಿ ಇಳಿದ. ಈ ರೀತಿಯಲ್ಲಿ ಬಹುದೂರದವರೆಗೆ ದಾರಿಯನ್ನು ನಡೆದು ಕಬಂಧನಿದ್ದ ವಿಘ್ನಬಹುಳವಾದ ಗೊಂಡಾರಣ್ಯವನ್ನು ದಾಟಿ, ಅಂದವಾದ ವನದಿಂದಲೂ ನಾನಾವಿಧ ಪಕ್ಷಿಗಳಿಂದಲೂ ಕೂಡಿ ಮನೋಜ್ಞವಾದ ಪಂಪಾಸರೋವರವನ್ನು ಶ್ರೀರಾಮಚಂದ್ರನು ಸಮೀಕ್ಷಿಸಿದ.

ಮಂಗಳ ಮಹಾಶ್ರೀ

**ಇದು ಶ್ರೀರಾಮಚಂದ್ರನ ಪಾದಾರವಿಂದಗಳಿಗೆ ನಮಸ್ಕರಿಸುತ್ತಿರುವ ಪವನನಂದನನಾದ
ಹನುಮಂತನ ವರಪ್ರಸಾದವನ್ನು ಹೊಂದಿದವನೂ,
ಸರಸ್ವತಿಯ ಸಾಹಿತ್ಯ ಸಾಮ್ರಾಜ್ಯವನ್ನೆಲ್ಲ ಪಡೆದವನೂ,
ಚತುರ್ವಿಧ ಕವಿತಾವಿಶಾರದನೂ, ಆತ್ಮನಿಷ್ಠಾಗರಿಷ್ಠನೂ, ಸಂಗೀತಕಲಾವಿದನೂ,
ವಿವಿಧ ವಿದ್ವಜ್ಜನರ ಪ್ರೀತಿಪಾತ್ರನೂ ಆದ ಹಂಪೆಯಾಮಾತ್ಯನ ಮಗ ವೆಂಕ ಎಂಬ
ಹೆಸರಿನವನಿಂದ ರಚಿತವಾದ ಶ್ರೀಮದ್ರಾಮಾಯಣ ಮಹಾಪ್ರಬಂಧದಲ್ಲಿ
ಅರಣ್ಯಕಾಂಡವು ಮುಗಿಯಿತು.**



ಕನ್ನಡದಲ್ಲಿಯೇ ಅತ್ಯಂತ ದೊಡ್ಡ ಕಾವ್ಯವಾದ 'ಶ್ರೀರಾಮಕಥಾಮೃತ' ಎಂಬ ಹೆಸರಿನ ಒಂಬತ್ತೂಮುಕ್ಕಾಲು ಸಾವಿರ ವಾರ್ಧಕ ಷಟ್ಪದಿಗಳ ಮಹಾಕಾವ್ಯವು, ಹದಿನೆಂಟನೆಯ ಶತಮಾನದಲ್ಲಿ, ಅಂದರೆ ಎರಡನೆಯ ಕೃಷ್ಣರಾಜ-ನಂಜರಾಜ-ಹೈದರಾಲಿಗಳ ಕಾಲದಲ್ಲಿದ್ದ ಪ್ರಧಾನ ವೆಂಕಪ್ಪಯ್ಯನಿಂದ ರಚಿತವಾದುದು. ಈ ಕಾವ್ಯದ ಸುಮಾರು ಅರವತ್ತು ಭಾಗವಷ್ಟೇ ಮದ್ರಾಸ್ ಸರ್ಕಾರದಿಂದ ಪ್ರಕಟವಾಗಿದ್ದು, ಇತ್ತೀಚಿನವರೆಗೆ ಕಾವ್ಯವು ಪೂರ್ತಿ ಪ್ರಕಟವಾಗಿರಲಿಲ್ಲ. ಆದರೆ ಉಳಿದ ಭಾಗವೂ ಈಚೆಗೆ ಪ್ರಕಟವಾಗಿ, ಈ ಮಹಾಕಾವ್ಯವನ್ನು ಡಾ| ಪಿ.ವಿ. ನಾರಾಯಣ ಅವರು ಆಧುನಿಕ ಕನ್ನಡಕ್ಕೆ ಇಡಿಯಾಗಿ ತಂದಿದ್ದು, ಅದನ್ನು ವಸಂತ ಪ್ರಕಾಶನವು ಎರಡು ಸಂಪುಟಗಳಲ್ಲಿ ತನ್ನ ಹೆಮ್ಮೆಯ ಪ್ರಟಣೆಯಾಗಿ ಹೊರತರುತ್ತಿರುವುದು ರಾಮಾಯಣ ಪ್ರಿಯರಿಗೆ ಸಂತಸ ತರುವಂತಹುದಾಗಿದೆ. ಒಟ್ಟಂದದಲ್ಲಿ, ಈ ಕಾವ್ಯವು ವಾಲ್ಮೀಕಿ ರಾಮಾಯಣವನ್ನು ಅನುಸರಿಸಿದ್ದರೂ, ವೆಂಕಪ್ಪಯ್ಯನು ಒಟ್ಟು ಕಾವ್ಯವನ್ನು ಸಾಂಖ್ಯತತ್ವದ ನೆಲೆಯಲ್ಲಿ ರಚಿಸಿರುವುದು - ಕನ್ನಡಕ್ಕೆ ಹೊಸತಾಗಿರುವುದಲ್ಲದೆ, ಕವಿಯ ವೈಶಿಷ್ಟ್ಯವನ್ನೂ ಹಿರಿಮೆಯನ್ನೂ ಸಾರುತ್ತದೆ. ಇಂತಹ ಮಹತ್ವಪೂರ್ಣ ಮಹಾಕಾವ್ಯದ ಪ್ರಸ್ತುತ ಗದ್ಯಕಥನವು ಕನ್ನಡ ನಾಡಿನ ಓದುಗರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

ವಸಂತ ಪ್ರಕಾಶನ
ನಂ. 360, 10ನೇ 'ಬಿ'ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು - 560 011
ದೂರವಾಣಿ: 40917099 / ಮೊ: 7892106719
email:vasantha_prakashana@yahoo.com
www.vasanthaprakashana.com

ಮಹಾ ಕಾವ್ಯ-ಗದ್ಯರೂಪದಲ್ಲಿ
Epic Poem-Prose Form

ISBN 93-92935-15-3
9 789392 935152 02

ಬೆಲೆ: ₹ 380